ಜಯಂತಿ

ವಿಜ್ಞಾನಿಗೆ:

(ವಿಧಾಯಕ ವೃಷ್ಟಿಯುಂಪ)

ಪಲ್ಲವಿ

ಕಾಣದಿರುವ ಕಲ್ಯಾಣರಕ್ತಿಗಳ ಕಾಣಲು ಹಣುಗುವೆ ನೀ
ಬಾನು-ಭೂಮಿಗಳ ಒಳೆದು ಬಳಜುತಿಹೆ ಧಣು ಧಣು ವಿಜ್ಞಾನಿ !

೧

ಗಾಳಿಯನ್ನು ನುನ್ನೆಯಾಳನಂತೆ ಮಾಡಿದೆಯೊ ಮಾಟಗಾರ—
ಜಾಳು ಉಗಿಯೊಳಗಡಗಿರುವ ಅವಿತಬಲ ಕಂಡ ನೋಟಗಾರ—

ಹರಿವ ನೀರೊಳಗೆ ಹುದುಗಿ ಕುಳಿತ ಹೆಮ್ಮಿಂಚ ಹುಡುಕಿದವನೀ....
ಬಾನು-ಭೂಮಿಗಳ ಒಳೆದು ಬಳಜುತಿಹೆ ಭಲೆ ಭಲೆ ವಿಜ್ಞಾನಿ !

೨

ನಾವಿರ ಗಾವುದವೂರ ಕತೆಯ ಕುಣಿತಲ್ಲಿಯ್ಗೆ ಕೇಳಿಸುವೆ—
ನಾವಿರ ಹಾವಿರ ಯೋಜನದಾಳವ ಎಲ್ಲಿಗೆ ಕೇಳಿಸುವೆ !

ಜೀವ-ಜೀವಗಳ ಸಾವು-ನೆಲೆಯ ತಪನಿಂದ ಕಂಡವನೀ....
ಬಾನು-ಭೂಮಿಗಳ ಒಳೆದು ಬಳಜುತಿಹೆ ಧಣು ಧಣು ವಿಜ್ಞಾನಿ !

೩

ಜನನನರಿಗೆ ಬಾನೊಳು ಪಾರಾಡುವ ತ್ರೈಣಪಿತ್ತ ಧೀರ !—
ಅಣುವಿನೊಳಡಗಿಹ ಅನಂತರಕ್ತಿಯ ತುಡುಕಿ ಹಿಡಿದ ನೀನ !

ತಿಂಗಳ ಬೀಕಕೆ ತೆರಳಲು ಕೆಬ್ಬುತಲಿಯನೆ ನನಸಿನೇಣಿ....
ಬಾನು-ಭೂಮಿಗಳ ಒಳೆದು ಬಳಜುತಿಹೆ ಭಲೆ ಭಲೆ ವಿಜ್ಞಾನಿ !

— ಆನಂದಕಂದ

JAYANTI

● ಈ ಸಂಚಿಕೆಯಲ್ಲಿ ●

ಹಳೆಯ ಗ್ರಂಥಗಳ ಸಂಪಾದನೆ (ಸಂಪಾದಕೀಯ)

ಸಂಪಾದಕರು ೨೧೭

ಜುಲೈ ೪ (ಒಂದು ಸತ್ಯಕತೆ)

ಪಿ. ಸಿ. ವಿ. ಗುಡಿ, ಗೌಹಾತಿ (ಅಸಾಮು).... .... ೨೨೧

ಶಾಲೋಪಟ್ ಬ್ರಾಂಟೆ (ಪರಿಚಯಾತ್ಮಕ ಲೇಖನ)

ಶ್ರೀಮತಿ "ವಸಂತಲಕ್ಷ್ಮಿ" ಮದ್ರಾಸ್ ೨೨೫

ನಮ್ಮ ಮನೆಯ ಮುದ್ದು ಹುಡುಗಿ (ಕವನ)

ಶ್ರೀ. ವಸಂತ ಕುಷ್ಟಗಿ, ಎಂ. ಎ., ಬೀದರ ೨೩೦

ಪ್ರತಿಫಲ (ಪೌರಾಣಿಕ ರೂಪಕ)

ಶ್ರೀಮತಿ ಎ. ಕೆ. ಜಯಲಕ್ಷ್ಮಿ, ಕರಗಡ ೨೩೨

ಕೊಳೆದ ಬಳಿಯ ಸುಂದರಿ (ಕವನ)

ಶ್ರೀ. ಈಶ್ವರ ಸೆಂಡಾಲ, ಹೊಸದಿಲ್ಲಿ ೨೩೬

ಗೆಳೆಯನಿಗೆ ಹಿತೋಕ್ತಿ (ಕವನ)

ಸೌ. ಪಾರ್ವತಿದೇವಿ ಹೆಗಡೆ, ಹುಬ್ಬಳ್ಳಿ ೨೩೭

ಪುಷ್ಯಮಾಸದ ರಾತ್ರಿ (ಸಣ್ಣಕಥೆ)

ಶ್ರೀ. ಕೆ. ಕೆ. ಕುಲಕರ್ಣಿ, ರಾ. ಭಾ. ನಿಪ್ಪಾಡದ,
ಎಸ್. ಟಿ. ಸಿ. ವಿಜಾಪುರ ೨೩೮

ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷೀಯ ಭಾಷಣ ೨೪೨

ಆತಿಥ್ಯ (ಚಿಕ್ಕಕಥೆ)

ಶ್ರೀ. 'ಗಂಗಾತನಯ', ತಾಕುರ್ಲಿ (ಮುಂಬಯಿ) ೨೪೭

ನಿರ್ವಾಸಿತ (ಕವನ)

ಶ್ರೀ. ಅರವಿಂದ ನಾಡಕರ್ಣಿ, ಮುಂಬಯಿ ೨೪೯

ಕರಿಮುರಿ ನಾಯಿ ಕುಯ್‌ಗುಡುತ್ತಿತ್ತು (ಕವನ)

ಶ್ರೀ. "ರಂಜನ" ಭಟ್ಟ, ಮದ್ರಾಸ್ ೨೫೯

ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ

ಶ್ರೀ. ನ. ನಾ. ನರಗುಂದ, ಬಿ. ಎ., ಬಾಗಲಕೋಟೆ ೨೬೦

ಶ್ರೀ. ಎಸ್. ಆರ್. ಪಾಡ್ತಿ, ಕಲ್ಲಕಟ್ಟೆ-ಮುಟ್ಟತ್ತೋಡಿ ೨೬೨

ಸಾದರ ಸ್ವೀಕಾರ (ಕವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೩೩] [ಸಂಚಿಕೆ ೭

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ವರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಹಳೆಯ ಗ್ರಂಥಗಳ ಸಂಪಾದನೆ

ಕನ್ನಡದ ಅಭಿಮಾನದಿಂದಲೊ, ಸಾಹಿತ್ಯವುಸ್ತಕದ ಉದ್ದೇಶವನ್ನು ಇರಿಸಿಕೊಂಡೊ, ಈಗ ಹಳೆಯ ಕನ್ನಡ ಗ್ರಂಥಗಳು ಪೂರ್ತಿಯಾಗಿಯೊ, ಸಂಗ್ರಹಸೊಂಡೋ ಪ್ರಕಟವಾಗುತ್ತಿರುವುವು. ಇದು ಸಮಾಧಾನ ಪಡಬೇಕಾದ ಸಂಗತಿಯೇನೋ ಸರಿಯೆ; ಆದರೆ ಇತ್ತೀಚೆಗೆ ಬೆಳಕಿಗೆ ಬಂದಿರುವ ಕಲವು ಹಳೆಯ ಕಾವ್ಯಗ್ರಂಥಗಳ ಸಂಪಾದನೆಯ ರೀತಿಯನ್ನು ನೋಡಿದರೆ, ಅಸಮಾಧಾನವೂ ಎನಿಸುವಂತಿದೆ.

ಕನ್ನಡದ ಜಾಗೃತಿಯ ಪ್ರಾರಂಭಕಾಲದಲ್ಲಿ ರೆವರಂಡ್ ಕಿಟೆಲ್, ರೈಸ್, ಪಾಠಕ ಮೊದಲಾದ ಮಹನೀಯರು, ಕೇವಲ ಗ್ರಂಥಗಳನ್ನು ಬೆಳಕಿಗೆ ತರುವ ಉದ್ದೇಶದಿಂದ ಕಾರ್ಯಮಾಡಿದ್ದರೂ, ಸಂಪಾದನೆಯ ರೀತಿ ಹೇಗಿರಬೇಕೆಂಬುದನ್ನು ಮಾದರಿಯೆನಿಸುವಂತೆ ಮಾಡಿದ್ದಾರೆ ಆ ಮೇಲೆ ದಿ. ಎಸ್. ಜಿ. ನರಸಿಂಹಾಚಾರ್ಯರೂ ದಿ. ಆಜಿ ರಾಮಾನುಜಯ್ಯಂಗಾರ್ಯರೂ ಕೇವಲ ಗ್ರಂಥಪ್ರಕಾಶನದ ದೃಷ್ಟಿಯಿಂದ, ಹಲವಾರು ಹಳೆಯ ಕೃತಿಗಳನ್ನು ಮುದ್ರಿಸಿದ್ದಾರೆ; ಆದರೂ ಅವರ ಸಂಪಾದನೆಯ, ಕಾರ್ಯದಲ್ಲಿ ಅವರ ಆಳವಾದ ಭಾಷಾಪಾಂಡಿತ್ಯ, ಸಾಹಿತ್ಯಾಭ್ಯಾಸ ಇವು ಒಡನುಡಿ ನಿಂತಿವೆ.

ಮೈಸೂರು ಸರಕಾರದ ಓರಿಯಂಟಲ್ ಲೈಬ್ರರಿಯವರು ಬೇರೆ ಬೇರೆ ಪಂಡಿತರ ಮೂಲಕ ಸಂಪಾದಿಸಿ ಪ್ರಕಟಿಸಿದ ಹಳೆಯ ಕೃತಿಗಳ ಪ್ರಕಟನೆಗಳು ಆ ಆ ಕಾಲದ ದೃಷ್ಟಿಯಿಂದ ಒಳ್ಳೆಯ ಸಂಪಾದನೆಗಳೆಂದೇ ಹೇಳುವಂತಿದೆ. ಅದರಂತೆಯೆ ಮದರಾಸ್ ವಿಶ್ವವಿದ್ಯಾಲಯದ ಕನ್ನಡ ಕೃತಿ ಪ್ರಕಟನೆಯ ಕಾರ್ಯವೂ ತೃಪ್ತಿಯನ್ನು ಉಂಟು ಮಾಡುವಂತಹದಾಗಿದೆ. ವಿದ್ಯಾರ್ಥಿಗಳ ಅಭ್ಯಾಸಕ್ಕೆಂದು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದ ಕನ್ನಡ ಕಾವ್ಯಸಂಗ್ರಹಗಳ ಸಂಪಾದನೆಯ ಕಾರ್ಯವಂತೂ ಒಂದು ಕಾಲದಲ್ಲಿ ಅತ್ಯುತ್ತಮವಾಗಿ ನಡೆಯಿತು. ಅದಕ್ಕೆ ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಆಳವಾದ ಭಾಷಾಪಾಂಡಿತ್ಯ, ಕಾವ್ಯಾಭ್ಯಾಸಗಳ ನಾಯಕತ್ವ ದೊರೆತುದರಿಂದ, ಆ ಕೃತಿಗಳ ಸಂಪಾದನೆಯ ಕಾರ್ಯ, ಮುಕ್ಕಾಲು ಮೂರುವೀಸವಾಲು ನಿರ್ದುಷ್ಟವಾಗಿಯೆ ಬೆಳಕಿಗೆ ಬಂದಿದೆ.

ಕನ್ನಡ ನಾಡಿನ ಪಾಲಿಗೆ ಒಂದಲ್ಲ, ಎರಡು ವಿಶ್ವವಿದ್ಯಾನಿಯಗಳು ಬಂದುದು ಹೆಮ್ಮೆ ಪಡಬೇಕಾದ ಸಂಗತಿಯೆ. ಎರಡೂ ವಿಶ್ವವಿದ್ಯಾನಿಲಯಗಳೂ ಹಳೆಯ ಕನ್ನಡಕೃತಿಗಳನ್ನು ಸಂಶೋಧಿಸಿ ಸಂಪಾದಿಸಿ ಪ್ರಕಟಿಸುವ ಗುರಿಯನ್ನು ಇರಿಸಿಕೊಂಡುದು ಹೆಚ್ಚಿನ ಸಂತೋಷದ ಸಂಗತಿ. ಇದರಂತೆಯೆ ಮೈಸೂರು ಸರಕಾರದ ಸಾಹಿತ್ಯ-ಸಂಸ್ಕೃತಿ ಪ್ರಚಾರ ಶಾಖೆಯವರೂ, ಜನಪ್ರಿಯವೆನಿಸಬಲ್ಲ ಕನ್ನಡಕೃತಿಗಳನ್ನು ಸಂಪಾದಿಸಿ ಪ್ರಕಟಿಸಿ, ಸುಲಭಬೆಲೆಗೆ ದೊರೆಯುವಂತೆ, ಆವಶ್ಯಕವಾದ—ಪ್ರಶಂಸನೀಯವಾದ ಕಾರ್ಯವನ್ನು ಪ್ರಾರಂಭಿಸಿ ಮುಂದುವರೆಸುತ್ತಲಿದ್ದಾರೆ.

ಆದರೆ, ಸ್ವಾತಂತ್ರ್ಯೋತ್ತರ ನಡೆದ ನಮ್ಮ ಗ್ರಂಥ ಸಂಪಾದನೆಯ ಕಾರ್ಯ ತೃಪ್ತಿಕರವಾಗಿಲ್ಲವೆಂಬುದನ್ನು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಪ್ರಕಟವಾದ ಗ್ರಂಥಗಳ ಮೇಲಿರುವ ಸಂಪಾದಕರ ಹೆಸರುಗಳನ್ನು ನೋಡಿದರೆ, ಅವರ ಪಾಂಡಿತ್ಯದ ವಿಷಯದಲ್ಲಿ ಯಾರೂ ಸಂದೇಹಗೊಳ್ಳುವಂತಿಲ್ಲ. ಆದರೆ ಬೆಳಕಿಗೆ ಬಂದಿರುವ ಕೃತಿಗಳನ್ನು ನೋಡಿದರೆ, ಅವುಗಳಲ್ಲಿ ಕಾಣುವ ಸಂಪಾದನೆಯ ಅಸಡ್ಡೆ, ಮುದ್ರಣದೋಷ, ರಬ್ಬಾರ್ಥಸೂಚಿ, ಇವೆಲ್ಲ ಬೇಸರವನ್ನು ಉಂಟುಮಾಡದಿರವು. ಹೀಗಾಗಲು ಕಾರಣವೇನೋ ತಿಳಿಯದು. ಸಂಪಾದಕರ ಕಾವ್ಯಾಭ್ಯಾಸ, ಭಾಷಾಪಾಂಡಿತ್ಯ ಇವುಗಳ ಬಗೆಗೆ ಸಂದೇಹವೂ ಎದ್ದು ನಿಲ್ಲದಿರದು.

ಮೈಸೂರು ಸರಕಾರದ ಸಾಹಿತ್ಯ–ಸಂಸ್ಕೃತಿ ಪ್ರಚಾರ ಶಾಖೆಯವರು ಪ್ರಕಟಿಸಿದ ಪ್ರಮುಖ ಕೃತಿಗಳನ್ನೇ ನಾವೀಗ ನೋಡೋಣ. ನೊದಲನೆಯ್ದುದಾಗಿ, ಜನಸಾಮಾನ್ಯರ ಪ್ರಯೋಜನಕ್ಕಾಗಿ ಪ್ರಕಟವಾಗಿರುವ ಆ ಗ್ರಂಥಗಳಲ್ಲಿ ವಿವರವಾದ ಶಬ್ದಾರ್ಥಸೂಚಿ, ಸಂದರ್ಭ-ಕಥಾ ಸೂಚಿ—ಇವು ಅಗತ್ಯವಾಗಿ ಬೇಕಾಗಿದ್ದುವು. ಅವು ಇಲ್ಲವೇ ಇಲ್ಲ. ಸಂಪಾದನೆಯ ಕಾರ್ಯದಲ್ಲಿ ಛಂದಶುಶುದ್ಧಿ, ಪದಶುದ್ಧಿಗಳ ಕಡೆಗೆ ಲಕ್ಷ್ಯವನ್ನೇ ಕೊಟ್ಟಂತಿಲ್ಲ. ಮುದ್ರಣಕಾಲದ ಮೋಷಪರಂಪರೆಯಂತೂ ಅನೇಕ ಕಡೆಗೆ ಕೃತಿಯ ಅರ್ಥವೇ ಆಗದಂತೆ ಮಾಡಿಬಿಟ್ಟಿದೆ.

ಇನ್ನು ಕುಮಾರವ್ಯಾಸ ಭಾರತದ ಬೃಹದ್ಗ್ರಂಥದ ಕಡೆಗೆ ನೋಡಿದರೆ, ಇದೂ ಅತೃಪ್ತಿಯನ್ನು ಹೆಚ್ಚಿಸುವಂತಹದೇ ಆಗಿದೆ. ಮುನ್ನುಡಿಯಲ್ಲಿ ಮೊದಲಿನ ಸಂಪಾದಕರ ಕಾರ್ಯವನ್ನು ಕೇಳ್ಗಳೆದು ನುಡಿದಿದ್ದರೂ, ಆ ಮೊದಲಿನ—ಗ. ಓರಿಯೆಂಟಲ್ ಲೈಬ್ರರಿಯ—ಪ್ರಕಟನೆಗಳೇ ಹೆಚ್ಚು ಪ್ರಯೋಜನಕಾರಿಯೆನಿಸುವಂತಿವೆ. ಸಂಪಾದನೆ-ಸಂಗ್ರಹಗಳ ಕಾರ್ಯ ಹಲವು ಬಗೆಯ ಕೊರತೆಗಳಿಂದ ಕೂಡಿದೆ. ಕುಮಾರವ್ಯಾಸನ ಶಬ್ದಗಳ ನವಸೃಷ್ಟಿ, ಸಹಜವಾಗಿ ತಿಳಿಯುವಂತಹದಲ್ಲ. ಆದುದರಿಂದ ತಿಳಿಯದ ಪದಗಳನ್ನೆಲ್ಲ ತಿದ್ದುತ್ತ ಹೋದರೆ, ಕುಮಾರವ್ಯಾಸನ ವ್ಯಕ್ತಿತ್ವವೇ ಉಳಿಯಲಾರದು. ಮುದ್ರಣದ ಬಗೆಗೆ ನಡೆದ ಅಸಡ್ಡೆಯಂತೂ ಅನೇಕಕಡೆಗೆ, ಅಪಾರ್ಥವನ್ನೆ ಉಂಟುಮಾಡುತ್ತವೆ.

ಜನಸಾಮಾನ್ಯರ ಮನೆಗೆ ಒಳ್ಳೊಳ್ಳೆಯ ರಸಕೃತಿಗಳನ್ನು ತಲ್ಪಿಸಬೇಕೆಂಬ ಸದುದ್ದೇಶ, ಈ ಬಗೆಯ ಕೊರತೆ ತುಂಬಿದ ಕೃತಿಗಳಿಂದ ಹೇಗೆ ಸಿದ್ಧಿಸಬೇಕು ? ಇನ್ನಾದರೂ ನಮ್ಮ ಸರಕಾರದ ಸಾಹಿತ್ಯ-ಸಂಸ್ಕೃತಿ ಪ್ರಚಾರ ಶಾಖೆಯವರು, ಈ ಬಗೆಯ ತಮ್ಮ ಗ್ರಂಥಪ್ರಕಟನೆಯ ಕಾರ್ಯದ ಕಡೆಗೆ ವಿಶೇಷ ಗಮನಕೊಡಬೇಕೆಂದು ನಮ್ಮ ಬಿನ್ನಹ.

ಹಳೆಯ ಗ್ರಂಥಗಳ ಸಂಪಾದನೆಯ ಕಾರ್ಯವು, ಕೆಲವೊಂದು ಸ್ಥಾನಗಳಲ್ಲಿ ಅಧಿಕಾರಿಗಳಾಗಿ ಕುಳಿತವರ ಕಡೆಗೆ ಅನಿವಾರ್ಯವಾಗಿ ಹೋಗುತ್ತಿರುವುದುಂಟು; ಆದರೆ ಅವರಿಗೆ ಆ ಗ್ರಂಥಸಂಪಾದನೆಯ ಸಾಮರ್ಥ್ಯ ಇರುವುದೇ ಎಂಬುದರ ವಿಚಾರವನ್ನು ಪ್ರಾಮಾಣಿಕವಾಗಿ ಮಾಡುವುದು ಕಡಮೆಯೇನೋ ಎನಿಸುವಂತಿದೆ. ಏಕೆಂದರೆ ಇತ್ತೀಚೆಗೆ ಪ್ರಕಟವಾಗಿರುವ ಕೆಲವು ಹಳೆಯ ಕೃತಿಗಳನ್ನು ನೋಡಿದರೆ, ಅವು ಅನೇಕ ಬಗೆಯ ಕೊರತೆಗಳಿಂದ ಕೂಡಿರುವುದು ಕಾಣುವುದು. ಇಂತಹ ಗ್ರಂಥಗಳ ಸಂಪಾದಕರಾಗಲು, ದೈವಯೋಗದಿಂದ ದೊರೆತ ಅಧಿಕಾರಸ್ಥಾನಬಲವೊಂದೇ ಸಾಲದು; ಇದಕ್ಕೆ ವಿಶಿಷ್ಟರೀತಿಯ ಅಭ್ಯಾಸ ಬಲವು ಬೇಕಾಗುವುದು. ಯಾವುದೇ ಬಗೆಯ ಅಭಿನಿವೇಶದ ಗಾಳಿಸೋಂಕದ ಶುದ್ಧ ಕಲಾದೃಷ್ಟಿ ಬೇಕಾಗುವುದು. ಎಲ್ಲ ಮತ-ಪಂಥದವರ ಕೃತಿಗಳನ್ನೂ ಸಹಾನುಭೂತಿಯಿಂದ ಕಾಣುವ ನಿಜವಾದ ವಿಮರ್ಶಕಶಕ್ತಿ ಬೇಕಾಗುವುದು.

ಹಳಗನ್ನಡ ಕಾವ್ಯಗಳ ಸಂಪಾದಕರ ಬಳಿ ಮೊದಲನೆಯದಾಗಿ ಉಚಿತಾರ್ಥ ಜ್ಞಾನದಿಂದ ಕೂಡಿದ ಶಬ್ದಭಾಂಡಾರ ಬೇಕು. ಆ ಮೇಲೆ, ಛಂದಸ್ಸು, ಅಲಂಕಾರ, ಕವಿಸಮಯ ಮೊದಲಾದ ಕಾವ್ಯಲಕ್ಷಣಶಾಸ್ತ್ರದ ಯಥಾರ್ಥ ಜ್ಞಾನವಿರಬೇಕು. ಕವಿಯ ಕಾಲದ ವ್ಯಾಕರಣ ಪದ್ಧತಿ, ಸೌಂದರ್ಯಾಸೌಂದರ್ಯಗಳ ತಿಳಿವಳಿಕೆ, ಸಾಮಾಜಿಕ ಆಚಾರ-ವಿಚಾರಗಳ ಪರಿಚಯ, ಇವೆಲ್ಲವೂ ಇರಬೇಕು. ಇಲ್ಲದೆ ಹೋದರೆ, ಸಂಪಾದನೆಯ ಹೊಣೆಹೊತ್ತುಕೊಳ್ಳುವುದು ನಗೆ ಬರುವಂತಹ ಮಾತಲ್ಲವೆ? ಶಬ್ದಾರ್ಥಜ್ಞಾನವಿಲ್ಲದವರು ನಮ್ಮ ಸಾಂಪ್ರದಾಯಿಕ ಕಾವ್ಯಗಳನ್ನು ಸಂಪೂರ್ಣವಾಗಿ ಹೇಗೆ ಅರ್ಥಮಾಡಿಕೊಂಡಾರು ? ಅರ್ಥವೇ ಆಗದ ಕಾವ್ಯಗಳನ್ನು ಸಂಪಾದನೆ– ಸಂಗ್ರಹಮಾಡಿ ಪ್ರಕಟಿಸುವುದೆಂದರೆ, ಅವುಗಳಿಂದ ಪ್ರಯೋಜನವಾದರೂ ಏನು ? ಇಂತಹ ಗ್ರಂಥಗಳು ಪಠ್ಯಪುಸ್ತಕದ ಯೋಗ್ಯತೆಯನ್ನು ಪಡೆದರಂತೂ ಕೆಲಸನೇ ಮುಗಿಯಿತು. ಒಬ್ಬನ ಅಜ್ಞಾನ ಅಭಾಸಜ್ಞಾನಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸಿದಂತಾಗುವುದು.

ಮತ-ಧರ್ಮಗಳ ಅಂಧಾಭಿಮಾನಗಳ ಮೂಲಕ, ಸಂಪಾದಕನು ಒಬ್ಬ ಕವಿಗಾಗಲಿ, ಒಂದು ಕೃತಿಗಾಗಲಿ, ಸಲ್ಲದ ಸ್ಥಾನಮಾನ ಕೊಡುವುದನ್ನು ಈ ಹೊಸಕಾಲದ ಹೊಸ ಸೌಂದರ್ಯ ಸೃಷ್ಟಿಯು ಎಂದೂ ಕ್ಷಮಿಸದು. ಆದುದರಿಂದ, ಕನ್ನಡ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಬೇಕೆನ್ನುವ ವ್ಯಕ್ತಿಯಾಗಲಿ, ಸಂಸ್ಥೆಯಾಗಲಿ, ಸಂಪಾದಕನನ್ನು ಆರಿಸುವಾಗ ತುಂಬ ಜಾಗೃತಿ ವಹಿಸಬೇಕು.

ಅಭಿನಂದನೆಗಳ ಸಲುವಳಿ

ನನ್ನ ಷಷ್ಟ್ಯಬ್ದಿ ಪೂರ್ತಿ ಸಮಾರಂಭದ ಕಾಲ್ಲದಲ್ಲಿ, ಸನ್ಮಾನ್ಯ ಧರ್ಮಪೀಠಾಧಿಗಳೂ, ಮಾನ್ಯ ಹಿರಿಯರೂ, ಆಪ್ತಮಿತ್ರರೂ, ಸದ್ಭಾವಹಸ್ತರೂ ನನಗೆ ಶುಭವನ್ನು ಕೋರಿ ಸಂದೇಶ ಕಳುಹಿದ್ದಾರೆ. ಅವರೆಲ್ಲರಿಗೂ ನನ್ನ ಜಯಂತಿಯ ಮೂಲಕ, ನನ್ನ ಪ್ರೇಮಾದರಗಳ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರೆಲ್ಲರ ಹರಕೆ, ನನ್ನ ಉತ್ಸಾಹ-ತೃಪ್ತಿಗಳನ್ನು ಅನವರತ ಸಂರಕ್ಷಿಸಲೆಂದು ನನ್ನ ಹಾರಯಿಕೆ.

— ಬೆಟಗೇರಿ ಕೃಷ್ಣಶರ್ಮ

(ಪುಟದ ಮುಂದುವರಿದಿದೆ)

ಪಾತ್ರಗಳ. ಮೂಲಕ ಲೇಖಕರು ಇದನ್ನು ಸ್ಪಷ್ಟಪಡಿಸಿದ್ದಾರೆ. ಪೋಲೀಸ್ ಖಾತೆಗೆ ಸೇರಬಯಸಿ ಸಾಧ್ಯವಾಗದೆ ಅಧ್ಯಾಪಕ ವೃತ್ತಿಗಿಳಿದವನು ನಾಗರಾಜ. ಮನಸ್ಸಿನಲ್ಲಿ ಕಟ್ಟಿದ ಆಶಾಗೋಪುರ ಕುಸಿದು ಬಿದ್ದಾಗ ತನ್ನ ಸ್ಥಿತಿಯನ್ನು ನೆನೆನು ಆತ ಚಡಪಡಿಸುತ್ತಾನೆ. ಇದನ್ನೆಲ್ಲಾ ಮರೆಸುವುದಕ್ಕಾಗಿ ತತ್ವನಿಷ್ಠೆಯ ಸೋಗು ಹಾಕಿದ್ದಾನೆ. ಆದರೆ ಇದರಿಂದ ಪ್ರಯೋಜನವೇನು ? ಪಕೇಲಿವೃತ್ತಿ ಸಾಗದೆ ಔಷಧ ಕಂಪೆನಿಗೆ ಸೇರಿ ಅಲ್ಲಿಯೂ ನಿರಾಶನಾಗಿ ಪುಸ್ತಕ ವ್ಯಾಪಾರಿಯಾದ ಶೇಷಗಿರಿ, ಅದರಲ್ಲೂ ಸೋತು ಕಡೆಗೆ ಶಿಕ್ಷಕನಾಗುತ್ತಾನೆ. ಶಾಲೆಯ ವಾತಾವರಣವು ಅವನಿಗೆ ಒಗ್ಗುವುದಿಲ್ಲ. ಆದರೂ 'ಶಾಲೆ ಕೊಡುವ ಸಂಬಳಕ್ಕಾಗಿ' ಸಹಿಸುತ್ತಿದ್ದನಂತೆ. ಕೊನೆಗೊಂದು ದಿನ ತೀರಿಕೊಂಡ. ಈ ನೀರಸ ಬಾಳಿನಲ್ಲಿ ಅವನೇನು ಸಾಧಿಸಿದಂತಾಯಿತು ? ಅವನ ಬಗ್ಗೆ ಇತರ ಶಿಕ್ಷಕರು ಒಂದು ಹನಿ ಕಣ್ಣೀರನ್ನಾದರೂ ಸುರಿಸುವುದಿಲ್ಲ.

ಆತ್ಮಸ್ತುತಿಯಲ್ಲಿಯೇ ಮುಳುಗಿದ್ದು ನಿತ್ಯವೂ " ಹುಡುಗರನ್ನು ಹೊಡೆಯುವುದನ್ನು ಬಿಟ್ಟು ಮತ್ತೇನನ್ನೂ ಮಾಡಲಾರದ ' ರಾಮಾನುಜನ ಸ್ವಭಾವ ಒಂದು ಬಗೆಯದಾದರೆ, ಶಾಲಾಪೇದೆಯ ಮುಂದೆ ತನ್ನ ಅಧಿಕಾರ ದರ್ಪವನ್ನು ತೋರಿಸುತ್ತಾ, ತಾನು ಶ್ರೇಷ್ಠ ಮಾತುಗಾರನೆಂದು ತಿಳಿದುಕೊಂಡಿರುವ ರಮಾನಂದನ ರೀತಿ ತುಂಬಾ ನಿಜಿತ್ರ. ಆ ಪೇದೆಗೆ ಒಮ್ಮೆ ಐದು ರೂಪಾಯಿ ಕೈಗಡ ಕೊಟ್ಟು ಅದಕ್ಕೆ ಪ್ರತಿಯಾಗಿ ಅವನಿಂದ ಮೂರುಬಾರಿ ಮನೆಗೆ ಸುಣ್ಣ ಬಳಿಸಿಕೊಂಡರೂ ತಾನು ಆತನಿಗೆ ಮಹದುಪಕಾರ ಮಾಡಿದ್ದೇನೆ ಎಂದು ತಿಳಿಯುತ್ತಾ ತನ್ನ ಔದಾರ್ಯವನ್ನು ಎಲ್ಲರ ಮುಂದೆ ಬಣ್ಣಿಸಿದಷ್ಟೂ ತೃಪ್ತಿಯಿಲ್ಲ ರಮಾನಂದನಿಗೆ. ಸದಾ ಕಾಮುಕ ವಿಚಾರಗಳೇ ತಲೆಯಲ್ಲಿ ಸುಳಿಯುತ್ತಿರುವ ಗೋಪಾಲರಾಯನಂತಹರು ಶಿಕ್ಷಣವೃತ್ತಿಗೇ ಅಯೋಗ್ಯರೆನ್ನಬಹುದು. ' ತಾನು ವಿನೋದ ಸಮ್ರಾಟನೆಂದು ತಿಳಿದಿರುವ ಅವನ ವಿನೋದಗಳೆಲ್ಲಾ ಆಶ್ಲೀಲ ವಿಚಾರಗಳ ಪರಿಧಿಯಲ್ಲೆ ಸುತ್ತತ್ತಿರುತ್ತವೆ. ಅಂತಹ ಸಂದರ್ಭಕ್ಕಾಗಿಯೇ ಆತ ಕಾದುಕೊಂಡಿರುತ್ತಾನೆ. ಕಾಲೇಜಿನಲ್ಲಿ ನಡೆದ ಹೇಯ ಕೆಲಸಗಳನ್ನು ಎಲ್ಲರೊಡನೆ ಹೇಳುವುದೆಂದರೆ ಅಭಿಮಾನದ ಸಂಗತಿ ಈ ನಾಚಿಕೆಗೇಡಿಗೆ. ಹೆಂಗುಸು ಬಟ್ಟೆಯೊಗೆಯುತ್ತಿದ್ದಾಗ, ಆ ಕಡೆಗೆ ಹರಿದ ದೃಷ್ಟಿಯಿಂದ ನೋಡುತ್ತಾ ಕಾಲಿನಲ್ಲಿ ತಾಳಹಾಕುತ್ತಿರುವುದು, ಗೋಪಾಲರಾಯನ ಕಾಮುಕತೆ ಹಾಗೂ ಕುಚೋದ್ಯಕ್ಕೆ ಕೈಗನ್ನಡಿಯಾಗಿದೆ. ಆದರೂ ಊರಲ್ಲಿ ಬಿಟ್ಟುಬಂದ ಮುದಿತಾಯಿಯ ನೆನಪು, ಈತನನ್ನೂ ಚಿಂತೆಗೊಳಪಡಿಸುತ್ತದೆ. ನಾಯಕನಾದರೊ ಶಾಲೆಯಲ್ಲಿ ಒಂದು ಸಣ್ಣ ಅಂಗಡಿ ತೆರೆದು ಅದನ್ನು ಅಭಿವೃದ್ಧಿ ಪಡಿಸಿ ತನ್ನ ಆರ್ಥಿಕ ಕೊರತೆಯನ್ನು ನೀಗಿಸಿಕೊಳ್ಳಬೇಕೆಂಬ ಕನಸು ಕಾಣುತ್ತಾನೆ. ಕೃಷ್ಣಸ್ವಾಮಿ ತನ್ನ ಕಾಲೇಜಿನ ಪ್ರೇಯಸಿ ಲೀಲಳ ಹಗಲುಕನಸು ಕಾಣುತ್ತಿರುತ್ತಾನೆ. ತನ್ನ ತಪ್ಪುಗಳನ್ನು ಕಾಣದ ಈಶ್ವರನ್ ಇತರರ ದೋಷ ಹುಡುಕುವುದರಲ್ಲೇ ಕಾಲ ಕಳೆಯುತ್ತಾನೆ. ಹೀಗೇ ತಮ್ಮದೇ ಆದ ಕಲ್ಪನಾಜಗತ್ತಿನಲ್ಲಿ ವಿಹರಿಸುವ ಅಧ್ಯಾಪಕರಿಂದ ಎಷ್ಟೊಳ್ಳೆಯ ಶಿಕ್ಷಣ ಲಭಿಸಬಹುದು ಮಕ್ಕಳಿಗೆ ?

ಸಂಗೀತದಲ್ಲಿ ನುರಿತವಳಾದ ಮೂಲತಿ ಗಣಿತವನ್ನು ಕಲಿಸಿದರೆ ಹೇಗಾಗಬಹುದು ? ತಾನು ಕಲಿತುದೇನೆಂದು ತನಗೇ ಗೊತ್ತಿಲ್ಲದ ಶಿಕ್ಷಕಿ " ಕಲಿಸಿದ್ದನ್ನು ಮಕ್ಕಳಿಗೆ ತಿಳಿಯಿಸುವ ಶಕ್ತಿಯಿಲ್ಲ. " ಎಂದು ತನ್ನ ತಪ್ಪನ್ನು ಮಕ್ಕಳ ಮೇಲೆ ಹೇರುತ್ತಾಳೆ. " ಕುಣಿಯಲು ಗೊತ್ತಿಲ್ಲದವನು ರಂಗಸ್ಥಳ ಸರಿಯಿಲ್ಲ ಎಂದ ಹಾಗೆ" ಎಂಬ ನಾಣ್ನುಡಿಯನ್ನು ಸತ್ಯ ಮಾಡುತ್ತಾಳೆ ಆಕೆ. ಅಧ್ಯಾಪಕರು ತಮಗೆ ಅಭಿರುಚಿ ಇರುವ ವಿಷಯವನ್ನೇ ಕಲಿಸಬೇಕಲ್ಲದೆ ಇತರ ಪಾಠ ಬೋಧಿಸಹೊರಟರೆ ಒಳಿತಾಗದು ಎಂಬುದನ್ನು ಈ ಪಾತ್ರದ ಮೂಲಕ ಲೇಖಕರು ತೋರಿಸಿಕೊಟ್ಟಿದ್ದಾರೆ. ವೇಷಭೂಷಣ ಹಾಗೂ ಸ್ವಭಾವಗಳಲ್ಲಿ ಇಂದಿನ ಹಲವು ಶಿಕ್ಷಕಿಯರ ಪ್ರತಿನಿಧಿಯಾಗಿ ನಮ್ಮ ನುಮುಂದೆ ಸುಳಿಯುತ್ತಾಳೆ ಮೂಲತಿ. ಇದಿಷ್ಟು ಕತೆಯಲ್ಲಿ ಬರುವ ಪಾತ್ರಗಳ ಗುಣಶೀಲಗಳ ಒಂದು ಹಕ್ಕಿನೋಟ.

ಈ ವಿವಿಧ ವ್ಯಕ್ತಿಗಳ ಒಲವು ಒಂದೆಯಾದರೆ ಪರಿಸ್ಥಿತಿಯ ಪ್ರಭಾವಕ್ಕೆ ಸಿಲುಕಿ ಇವರು ಇನ್ನೊಂದೆಡೆಗೆ ಸೆಳೆಯಲ್ಪಟ್ಟಿದ್ದಾರೆ. ಶಾಲೆಯನ್ನು ಬೆಳೆಯುವ ಸಂಬಳಕ್ಕಾಗಿ ಎಲ್ಲರೂ ಒಂದೆಡೆ ಸೇರಿ ಶಿಕ್ಷಕ ವೃತ್ತಿಗೆ ಅಂಟಿಕೊಂಡಿದ್ದಾರೆ. ಹೀಗೆ ಈ ಏಕಸೂತ್ರದಲ್ಲಿ ಪೋಣಿಸಲ್ಪಟ್ಟಿದ್ದರೂ ಅವರ ಸ್ವಭಾವದಲ್ಲಿ ಮಾತ್ರ ಐಕ್ಯವಿಲ್ಲ. ಮಕ್ಕಳಿಗಿಂತಲೂ ಕಡೆಯಾಗಿ ಒಬ್ಬರನ್ನೊಬ್ಬರು ಟೀಕಿಸುತ್ತಿರುವುದು, ಕುಚೋದ್ಯ ಚೂಡುವುದು, ತಾನು ತಪ್ಪು ಮಾಡಿಯೂ ಮುಖ್ಯ ಅಧ್ಯಾಪಕರಿಗೆ ಎದುರಾಗಿ ಅವರನ್ನೇ ಗದರಿಸುವುದು—ಇತ್ಯಾದಿ ಕಂಡು ಬರುತ್ತದೆ. ಅವರೆಲ್ಲರ ಬಾಳು ಹೇಗೂ ಯಾಂತ್ರಿಕವಾಗಿ ಸಾಗುತ್ತದೆ. ಆದರೆ ಬಾಳಿನಲ್ಲಿ ರಸವಿಲ್ಲ, ರುಚಿಯಿಲ್ಲ. ಇಂತಹ ಬಾಳಿನಿಂದ ಯಾರಿಗೂ ಪ್ರಯೋಜನವಿಲ್ಲ. ಇದು ' ಬದುಕಲ್ಲ—ಸಾವು, ಗೆಲುವಲ್ಲ—ಸೋಲು ' ಎಂದು ಲೇಖಕರ ಪ್ರಶ್ನೆಗೆ ನಾವು ಉತ್ತರಿಸಬಹುದು. ಲೇಖಕರೆಲ್ಲಾದರೂ ಇದೇ ಅಭಿಪ್ರಾಯವಿದ್ದಂತೆ ಕಾಣುತ್ತದೆ.

ಸುಸಜ್ಜಿತವಾದ ರಂಗಭೂಮಿಯ ನಿರ್ಮಾಣದಿಂದ ಪಾತ್ರಗಳ ಅಭಿನಯಕ್ಕೆ ಕಳೆಯೇರುವಂತೆ, ಕತೆಗಾರರು ಕತೆಯ ಪ್ರಾರಂಭದಲ್ಲಿ ದೃಷ್ಟಿಸಿದ ಶಾಲೆ ಮತ್ತು ಅದರ ಪರಿಸರದ ಪ್ರಭಾವಶಾಲಿಯಾದ ವರ್ಣನೆ, ವ್ಯಕ್ತಿಗಳ ಸ್ವಭಾವ ಚಿತ್ರಣಕ್ಕೆ ಹಿನ್ನೆಲೆಯಾಗಿದ್ದು ಅತ್ಯಂತ ಸುಂದರವಾಗಿದೆ. ' ಹಿಂದೆ ಹೆಂಡದಂಗಡಿಯಾಗಿದ್ದ ಮುರುಕು ಮನೆಯೇ ಶಾಲಾಕಟ್ಟಡ; ಶಾಲೆಯ ಸುತ್ತ ಹುಣ್ಣಿಗೆ ಅಂಟಿಕೊಂಡ ನೊಣಗಳಂತೆ ಕೂಲಿಗಾರರ ವಸತಿ, ಬೀದಿ ನಾಯಿಗಳ ಕಾಟ, ಕಳೆಗುಂದಿದ ಮುಖದ ಅಸ್ಥಿಪಂಜರದಂತಹ ಮಕ್ಕಳು '—ಇತ್ಯಾದಿ ವಿಷಯಗಳ ವರ್ಣನೆಯಿಂದಲೇ ಅಲ್ಲಿಯ ಶಿಕ್ಷಣ ಕ್ರಮ, ಶಿಕ್ಷಕರು ಹೇಗಿಬರಹುದೆಂದು ಊಹಿಸಲಾಗಿದೆ.

ಕತೆಯ ಬಹುಭಾಗವೂ ಲೇಖಕರ ಸೂಕ್ಷ್ಮ ನಿರೀಕ್ಷಣೆಗೆ ಸಾಕ್ಷಿಯಾಗಿ ನಿಂತಿದೆ. ಶಾಲೆಬಿಟ್ಟೊಡನೆ ಮನೆಗೋಡುವ ಆತುರದಲ್ಲಿರುವ ಮಕ್ಕಳನ್ನು ಬಿಟ್ಟೆಯ ಕೆಳಗಡೆ ಮುಚ್ಚಿಟ್ಟ ಕೋಳಿಮರಿಗಳಿಗೆ

ಹೋಲಿಸಿದುದರಲ್ಲಿ ತುಂಬಾ ಸಹಜತೆಯಿದೆ. ಹಾಗೆಯೇ ಮಕ್ಕಳ ಬಡಕಲು ದೇಹ, ಮುಖದಲ್ಲಿನ ನಿರ್ಜೀವ ಕಳೆ—ಇವೆಲ್ಲಾ ಇಂದಿನ ಹಳ್ಳಿ ಸಾಲೆಯ ಮಕ್ಕಳ ಸ್ವರೂಪವ ಪಡಿಯಚ್ಚಿನಂತಿದೆ. 'ನೀರು-ಗೊಳೆಯ ದಡಕ್ಕೆ ಇಣಚಿನ ರುಂಡ ಜೋಡಿಸಿದಂತೆ ಕಾಣುವ ರಾಮಾನುಜ, ಗಿಡದ ಮೇಲಿನ ಮಂಗನಂತೆ ಕುಳಿತುಕೊಳ್ಳುವ ರಮಾನಂದ, ಆರು ಫೂಟು ಎತ್ತರದ ದೊಣ್ಣೆಗೆ ರೇಶಿಮೆಯ ಸೀರೆ ಸುತ್ತಿದಂತೆ ಕಾಣುವ ಪಾಲತಿ'—ಈ ವಾಕ್ಯಗಳೆಂದರೆ ರೇಖೆಗಳ ಬದಲು ಶಬ್ದಗಳಲ್ಲೇ ಬರೆದ ವ್ಯಂಗ್ಯಚಿತ್ರವೆನ್ನಬಹುದು. ಇದನ್ನು ಓದುತ್ತಿದ್ದಂತೆಯೇ ಓದುಗರಲ್ಲಿ ನಗುವು ಹರಿಯದಿರದು. ವ್ಯಕ್ತಿಗಳ ಹೃದಯದೊಳಕ್ಕೆ 'ಕ್ಷ' ಕಿರಣ ಬೀರಿ ಚಿತ್ರಿಸಿರುವರೋ ಎಂಬಂತೆ ಪಾತ್ರಗಳ ಸ್ವಭಾವದ ಸ್ಪಷ್ಟ ನಿರೂಪಣೆಯನ್ನು ಕಾಣಬಹುದು.

'ಬತ್ತಿದ ಹೊಸಿನ ಪಕಳೆಗಳಿದುರುವಂತೆ ಅವರ ದಿನಗಳು ಉರುಳುತ್ತವೆ.' 'ಅವರ ಜೀವನದಲ್ಲಿಯ ದಿನಗಳು ಹೆಣ್ಣೆಲೆಗಳಂತೆ ಉದುರುತ್ತವೆ'— ಎಂಬ ವಾಕ್ಯಗಳಲ್ಲಿ ಕವನದ ಭಾವನಾಲಹರಿ ಮಿಡಿಯುವಂತೆ ಭಾಸವಾಗುತ್ತದೆ. ಕತೆಯ ಕೊನೆಯ ವಾಕ್ಯವೂ ಭಾವಪೂರ್ಣವಾಗಿದ್ದು ಅತ್ಯಂತ ಪ್ರಭಾವಶಾಲಿಯಾಗಿದೆ.

ಶಿಕ್ಷಣ ರಂಗದಲ್ಲಿ ಉಧ್ಯಾಪಕನು ಪ್ರಮುಖ ಪಾತ್ರವಹಿಸುತ್ತಾನೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಇಂದು ಶಿಕ್ಷಣದ ಅವನತಿಗೆ ಉಧ್ಯಾಪಕನೊಬ್ಬನೇ ಹೊಣೆಗಾರನಲ್ಲವೆಂಬುದೂ ಅಷ್ಟೇ ಸತ್ಯವಾಗಿದೆ. ಇಂದಿನ ರಾಜಕೀಯ ಪರಿಸ್ಥಿತಿ, ಮಕ್ಕಳ ಮನೆಯ ದೂಷಿತ ವಾತಾವರಣ, ನರನಾಗರಿಕತೆಯ ಬಣ್ಣದ ಬದುಕು—ಇವೆಲ್ಲಾ ಮಕ್ಕಳ ಮೇಲೆ ಪ್ರಭಾವವನ್ನು ಬೀರಿ ಶಿಕ್ಷಣದ ಬೆಳೆವಣಿಗೆ ಮತ್ತು ಶೀಲ ಸಂವರ್ಧನೆಗೆ ಬಾಧಕಗಳಾಗಿ ಪರಿಣಮಿಸಿವೆ ಎಂಬುದನ್ನು ನಾವು ಮನಗಾಣಬೇಕು. ಆದುದರಿಂದ ಲೇಖಕರು ಈ ವಿಷಯಗಳನ್ನು ಸೇರಿಸಿದ್ದರೆ ಕತೆ ಇನ್ನಷ್ಟು ಸೊಗಸಾಗುತ್ತಿತ್ತೆಂದು ನನಗೆನಿಸುತ್ತದೆ. ಅಲ್ಲದೆ ಕತೆಗಾರರು ಸಮಸ್ಯೆಗಳನ್ನು ಮಾತ್ರ ಮುಂದಿಟ್ಟಿದ್ದಾರೆ. ಆದರೆ ಅವುಗಳನ್ನು ಬಗೆಹರಿಸುವ ಉಪಾಯಗಳನ್ನೇನೂ ಸೂಚಿಸಿದಂತೆ ಕಂಡು ಬರುವುದಿಲ್ಲ.

ಹೇಗೂ ಇರಲಿ; ಒಟ್ಟಿನಲ್ಲಿ ಇದೊಂದು ಯಥಾರ್ಥ ಚಿತ್ರಣವೆನ್ನಬಹುದು. ಎಲ್ಲಿಯೂ ಅಶ್ವಾಭಾವಿಕತೆ ಕಂಡುಬರುವುದಿಲ್ಲ. ಕತೆಯಲ್ಲಿ ಸುಳಿಯುವ ವ್ಯಕ್ತಿಗಳು ಇಂದಿನ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ, ಕಂಡುಬರುವ ಪ್ರತಿರೂಪವಾಗಿದ್ದಾರೆಂದು ಧಾರಾಳವಾಗಿ ಹೇಳಬಹುದು. ಈ ರೀತಿಯ ನಟನೆಯಿಂದ ತಮ್ಮನ್ನು ತಾವೇ ವಂಚಿಸಿಕೊಂಡು ಜೀವಚ್ಛವತರಾಗಿ ಬಾಳುವ ಇಂತಹ ವ್ಯಕ್ತಿಗಳಿಂದ ಯಾರಿಗೂ ಪ್ರಯೋಜನವಿಲ್ಲ. ಶಿಕ್ಷಕರ ಜೀವನ ಹಾಗೂ ಶಿಕ್ಷಣ ಕ್ರಮದಲ್ಲಿ ಆಮೂಲಾಗ್ರ ಪರಿವರ್ತನೆ ಯಾಗದ ವಿನಾ ವಿದ್ಯಾಕ್ಷೇತ್ರದಲ್ಲಿ ಪ್ರಗತಿಯಾಗಲಾರದು. ಅತಏವ ದೇಶವು ಉನ್ನತಿಯ ಸೋಪಾನವನ್ನೇರಲು ಸಾಧ್ಯವಿಲ್ಲವೆಂಬುದನ್ನು ಲೇಖಕರು ಪರೋಕ್ಷವಾಗಿ ಸೂಚಿಸಿದ್ದಾರೆನ್ನಬಹುದು. ಎಂತಲೇ ನವ್ಯಕತೆಯಿದು ಸಮಯೋಚಿತವಾಗಿದ್ದು ಸ್ವಾಗತಾರ್ಹವಾಗಿದೆ.

ಇದೀಗ ಪುನರ್‌ಮುದ್ರಣವಾಗಿ ಹೊರಬಂದಿದೆ!

ಯಾರು ಹೊಣೆ?

(ಸರಸ ಕಥೆಗಳು)

ಲೇ: ಬಿ. ಆರ್. ವಾಡಪ್ಪಿ, ಎಂ. ಎ. ಬಿ. ಟಿ.

ಬೆಲೆ: ೧ ರೂಪಾಯಿ

ಈ ಪುಸ್ತಕಗಳಿಗೂ ಬರೆಯಿರಿ:

ತಾರಕಂಬಗಳು (ಲಲಿತ ಪ್ರಬಂಧಗಳು)	೧. ೩೫
ಗಾಳಿಗುಮರೆ (,, ,,)	೧. ೩೫
ಜೀವಸರಂಗ (ಕಥೆಗಳು)	೧. ೩೫
ರಾಯರ ಸೋಲು (ದೃಶ್ಯಸಂಕಲನ)	೧. ೬೨

ಮುಖ್ಯ ಪೂರಾಟಗಾರರು:

ಮನೋಹರ ಗ್ರಂಥ ಭಾಂಡಾರ, ಧಾರವಾಡ

ಸಮಾಜ ಪುಸ್ತಕಾಲಯ, ಧಾರವಾಡ

ನೂತನ ದೃಶ್ಯ ಸಂಕಲನ! ರಸಿಕರಿಗೆ ರಸದೂಟ!!

"ತಿರುವು ಮುರುವು"

ಪುಟ: ಕ್ರಾ. ಅ. ೬೦ ಬೆಲೆ: ೧ ರೂಪಾಯಿ

ಲೇಖಕರು:

ಎನ್. ಎಸ್. ಗದಗಕರ, ಬಿ. ಎ. ಧಾರವಾಡ.

ಮುಖ್ಯ ಪೂರಾಟಗಾರರು:

ಸಮಾಜ ಪುಸ್ತಕಾಲಯ, ಧಾರವಾಡ

ಮನೋಹರ ಗ್ರಂಥ ಭಾಂಡಾರ, ಧಾರವಾಡ

◀ ಜೂಲೈ ೪ ▶

[ಒಂದು ಸತ್ಯಕಥೆ]

ಶ್ರೀ. ಪಿ. ವಿ. ಗುಡಿ, ಗೌಹಾಟಿ (ಆಸಾಮು)

ಆಸಾಮುದಲ್ಲಿ ನಡೆದ ಭಾಷಾವಿಷಯಕ ಗೊಂದಲದ ರುದ್ರವಾರ್ತೆಗಳು ಆ ಕಾಲದ ಪತ್ರಿಕೆಗಳಲ್ಲಿ ಸಾಕಷ್ಟು ಬಂದುವು. ವಿಧ್ವಂಸಕವೃತ್ತಿಯ ಆಸುರೀಲೀಲೆಯ ವಾರ್ತೆಗಳವು. ಆಸಾಮುದ ಜನಜೀವನದಲ್ಲಿ ಹುದುಗಿದ ಮಾನವತೆ ಆಗ ಏನು ಮಾಡಿತೆಂಬುದರ ಚಿತ್ರ ಈ ಕಥೆಯಲ್ಲಿದೆ.

ಪ್ರಮೋದಕುಮಾರ ಚಟರ್ಜಿಯು ದಿಙ್ಮೂಢನಾಗಿ ಕುಳಿತಿದ್ದ. ಅವನಿಗೇನೂ ತೋಚದಾಗಿದ್ದಿತು. ಪ್ರತಿದಿನದ ಅಭ್ಯಾಸದ ಮೂಲಕವಾಗಿಯೇ ಅವನ ಕಾಲುಗಳು ಅವನನ್ನು ಆಫೀಸಿಗೆ ತಂದಿದ್ದುವು. ಬಂದು ತನ್ನ ಕುರ್ಚಿಯ ಮೇಲೆ ಕುಳಿತಿದ್ದ; ಆದರೆ ಮುನ್ನಾದಿನದಿಂದ ಅವನಿಗೆ ಬಂದ ಅನುಭವಗಳು, ಅವನು ಕಂಡು ಕೇಳಿದ ಘಟನೆಗಳು ಅವನನ್ನು ಧೈರ್ಯಗೆಡಿಸಿದ್ದುವು. ೭-೮ ದಿನಗಳಿಂದಲೂ ಆಸಾಮಿನ ಬೇರೆ ಬೇರೆ ಭಾಗಗಳಿಂದ ಬರುತ್ತಿದ್ದ ನಾನಾತರದ ಗಲಭೆಗಳ ಸುದ್ದಿಗಳಿಗೆ ಇಲ್ಲಿಯ ವರೆಗೆ ಅವನು ಅಷ್ಟು ಮಹತ್ತ್ವಕೊಟ್ಟಿರಲಿಲ್ಲ. ಒಂದಿದ್ದರೆ ಹತ್ತುಮಾಡಿ ಹೇಳುವುದು ಮನುಷ್ಯ ಸ್ವಭಾವ—ಎಂದು ಅಲಕ್ಷ್ಯ ಮಾಡಿದ್ದ. ಮೊನ್ನೆ ತನ್ನ ಮನೆಯವರನ್ನೆಲ್ಲ ಕಲಕತ್ತೆಗೆ ಕಳುಹಿದ ತನ್ನ ಮಿತ್ರ ಬ್ಯಾನರ್ಜಿಗೆ ತಾನಾಗ ಚೇಷ್ಟೆ ಮಾಡಿದ್ದ:—'ಮುಗಿಲು ಹರಿದು ಬೀಳುತ್ತಿದೆಯೆಂದು ಹೆದರಿ ಓಡಿಹೋದ ಮೊಲದ ಹಾಗಿದೆ ನಿನ್ನ ಪರಿಸ್ಥಿತಿ....' ಎಂದು. ಅದಕ್ಕೆ ಅವನೆಂದಿದ್ದ. 'ಆಹುದು; ನೀನು ಏನೇ ಅನ್ನು, ಆಮೇಲೆ ಪಶ್ಚಾತ್ತಾಪ ಪಡುವುದಕ್ಕಿಂತ ಮೊದಲೇ ಎಚ್ಚರಿಕೆ ತೆಗೆದುಕೊಳ್ಳುವುದು ಲೇಸು.' ಬ್ಯಾನರ್ಜಿ ಮಾಡಿದ್ದೇ ಯೋಗ್ಯವೆನಿಸಿತೀಗ. ಭಾಷೆಯ ಮೂಲಕ ಪ್ರಾರಂಭವಾದ ಈ ಗೊಂದಲ ಇಷ್ಟು ದೀರ್ಘಕ್ಕೆ ಹೋಗಿ, ಕಾಡುಬೇಗೆಯಂತೆ ಹೀಗೆ ಹಬ್ಬಬಹುದೆಂದು ಅವನು ಎಣಿಸಿರಲಿಲ್ಲ. ಅವನ ಮನಸ್ಸು ಮುನ್ನಾದಿನದ ಸಂಗತಿಗಳ ಕಡೆಗೆ ತಿರುಗಿತು.

ಅಂದು ಅವನ ಮಗಳು— ಕುಮುದಬಾಲೆಯ ಐದನೆಯ ಹುಟ್ಟು ಹಬ್ಬ. ಅವಳಿಗೆ ರಸಗುಲ್ಲವೆಂದರೆ ಬಹಳೇ ಇಷ್ಟ. ದೊಡ್ಡ ಗೊಂಬೆಯ ಮೇಲೆ ತುಂಬ ಆಶೆ. ಅವಳ ಹುಟ್ಟುಹಬ್ಬದ ದಿವಸ ಆ ಗೊಂಬೆಯನ್ನು ತರುವುದು, ಮತ್ತು ಹೆಸರಾಪ Rex ಹೋಟೆಲಿನಿಂದ ರಸಗುಲ್ಲಾ ತರುವುದೆಂದು ನಿಶ್ಚಯಿಸಿಕೊಂಡಿದ್ದ. ಮುಂಜಾನೆಯ ಕಾರ್ಯಕ್ರಮ ತೀರಿಸಿಕೊಂಡು ರಸಗುಲ್ಲಾ ತರುವುದಕ್ಕೆ Rex ಕಡೆಗೆ ಬಂದಾಗ, ಅಲ್ಲಿಯ ನೋಟ ಅವನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿತು. ಅಲ್ಲಿ ೧೦೦-೨೦೦ ಜನರ ಗುಂಪೊಂದು ನಿಂತುಕೊಂಡು ಗಲಾಟೆ ನಡೆಯಿಸಿದ್ದಿತು. ಯಾರೂ ರೆಸ್ಟಾರೆಂಟಿಗೆ ಬರದಂತೆ ದಾರಿಯನ್ನು ಕಟ್ಟಿಕೊಂಡು ನಿಂತಿದ್ದರು. ಅದನ್ನು ನೋಡಿ Rex ರಸಗುಲ್ಲಾದ ಆಶೆ ಬಿಟ್ಟು, ಅವನು ಮೊದಲು ಗೊಂಬೆಯನ್ನು ಕೊಳ್ಳೋಣವೆಂದು ಮಾರ್ಕೆಟಿನ ಕಡೆಗೆ ತಿರುಗಿದ. ಅಲ್ಲಿಯೂ ಅದೇ ಹಾಡು; ಯಾವ ಅಂಗಡಿಗಳೂ ತೆರೆದಿರಲಿಲ್ಲ. ಅಲ್ಲಲ್ಲಿ ಕೆಲವು ಜನರು ನಿಂತುಕೊಂಡು ಗುಜುಗುಜು ಮಾತನಾಡಿಕೊಳ್ಳುತ್ತಿದ್ದರು. ಪೋಲೀಸರ ಓಡಾಟ ಹೆಚ್ಚಾಗಿತ್ತು. ಪ್ರಮೋದಕುಮಾರನಿಗೆ ಬಹಳ ನಿರಾಶೆಯಾಯಿತು. ಇನ್ನು ಕುಮುದಳಿಗೆ ಏನು ಹೇಳಬೇಕು? ಅಂತೂ ಒಂದು ಚಿಕ್ಕ ಅಂಗಡಿಯಿಂದಲೇ ಸಿಕ್ಕಂತಹ ರಸಗುಲ್ಲಾಗಳನ್ನು ಕೊಂಡು ಮನೆಯ ಕಡೆಗೆ ತಿರುಗಿದ. ಮನೆಯ ಹತ್ತಿರ ಬಂದಾಗ ದಿನಪತ್ರಿಕೆ ಪೇಪರು (ವೃತ್ತಪತ್ರ) ಕೊಡುವ ಹುಡುಗ ಭೆಟ್ಟಿಯಾದ. 'ಯಾಕೆ ಇವೊತ್ತು ಪೇಪರ್ ಹೊತ್ತಾಯಿತಲ್ಲ?' ಎಂದು ಪ್ರಮೋದಕುಮಾರ ಕೇಳಿದ. 'ಇವೊತ್ತು ಪೇಪರುಗಳೇ ಇಲ್ಲ. ಬೇಕಾದರೆ ಈ Local Paper ತೆಗೆದುಕೊಳ್ಳಿ. ಪೇಪರುಗಳು ಕಲಕತ್ತೆಯಿಂದ ಬಂದ ಕೂಡಲೆ Air portನ ಹೊರಗೆ ನೆರೆದಿದ್ದ ವಿದ್ಯಾರ್ಥಿಗಳ ದೊಡ್ಡ ಗುಂಪೊಂದು, ಅವುಗಳನ್ನೆಲ್ಲ ಕಿತ್ತುಕೊಂಡು ಬೆಂಕೆ ಹೊತ್ತಿಸಿ ಸುಟ್ಟುಬಿಟ್ಟರು.' ಎಂದು ಹೇಳಿ, ಸೈಕಲ್ಲು ಹತ್ತಿಕೊಂಡು ಆ ಹುಡುಗ ಹೊರಟುಹೋದ.

ಪ್ರಮೋದಕುಮಾರನಿಗೆ ಈಗ ಸ್ವಲ್ಪ ಗಾಬರಿಯೆನಿಸಿತು. ತಾನು ಮಾರ್ಕೆಟಿನಲ್ಲಿ ನೋಡಿದ ಸಂಗತಿಗಳಿಗೂ ಈಗ ಕೇಳಿದ್ದಕ್ಕೂ ಕಾರಣ ತಿಳಿದಂತಾಯಿತು. ಅಂತೂ ಈ ಭಾಷೆಯ ಬೇಗೆ ಈ ಊರಿಗೂ ಬಂದಿತು. ತನ್ನ ಮಿತ್ರ ಬ್ಯಾನರ್ಜಿಯ ನೆನಪಾಗಿ—ಅವನೇ ಜಾಣ; ಅವನನ್ನಾಗ ಅಪಹಾಸ್ಯ ಮಾಡದೆ ತಾನೂ ಅವನನ್ನೇ ಅನುಸರಿಸಿದ್ದರೆ ಚೆನ್ನಾಗುತ್ತಿತ್ತೆಂದು ಅವನಿಗೆ ಎನಿಸಿತು. ಆದರೆ ಈಗ ಏನು ಮಾಡುವುದು?

ಮನೆಯನ್ನು ಸಮೀಪಿಸಿದಾಗ ಕುಮುದಬಾಲೆಯು ಹೊಸ ಫ್ರಾಕ್ ಹಾಕಿಕೊಂಡು, ಅವನ ದಾರಿಯನ್ನೇ ನೋಡುತ್ತ ಹೊರಗೇ ನಿಂತುಕೊಂಡಿದ್ದಳು. ತಂದೆಯನ್ನು ದೂರದಲ್ಲಿ ನೋಡಿದ ಕೂಡಲೆ

'ನನ್ನ ಗೊಂಬೆ ಎಲ್ಲಿದೆ ತಾ' ಎಂದೆನ್ನುತ್ತ ಓಡಿ ಬಂದಳು. ಹೊರಗಿನ ವಾತಾವರಣದಿಂದ ಮೊದಲೇ ಧೈರ್ಯಗುಂದಿದ ಅವನ ಮನಸ್ಸು, ಆ ಚಿಕ್ಕಮಗುವಿನ ಆ ಪ್ರಶ್ನೆಯಿಂದ ಮತ್ತೂ ಚಿಂತಾಗ್ರಸ್ತವಾಯಿತು. ಅದೇ ಹೊತ್ತಿಗೆ ರಸ್ತೆಯ ಮೇಲಿಂದ ಒಂದು Fire Brigade ಮೋಟರು ಗಂಟೆಯನ್ನು ಬಾರಿಸುತ್ತ ಒಳ್ಳೇ ವೇಗದಿಂದ ಹೋಯಿತು. ಪ್ರಮೋದಕುಮಾರ ಆ ಮಗುವನ್ನು ಎತ್ತಿಕೊಂಡು ಅವಸರದಿಂದ ಒಳಗೆ ಬಂದ. 'ಇಂದು ನಿನ್ನ ಹುಟ್ಟಿದ ಹಬ್ಬ. ನಿನ್ನ ಪ್ರೀತಿಯ ರಸಗುಲ್ಲಾ ತಂದಿದ್ದೇನೆ.' ಎಂದು ಸಮಾಧಾನ ಮಾಡುತ್ತ, ಹೊರಗಿನ ದೆಲ್ಲ ಮರೆಯಲು ಪ್ರಯತ್ನಿಸಿದ ಆ ದಿವಸವ ನಿಮಿತ್ತ ರಜೆ ತೆಗೆದು ಕೊಂಡಿದ್ದರಿಂದ, ಅತ ಎಲ್ಲಿಯೂ ಹೊರಗೆ ಹೋಗಲಿಲ್ಲ. ನೂರೆಂಟು ಯೋಚನೆಗಳು ಬಂದು ಅವನ ಮನಸ್ಸು ಅಸ್ವಸ್ಥವಾಯಿತು.

ಇಂದು ಮುಂಜಾನೆಯಿಂದಲೂ ನಿನ್ನೆಯ ಸಂಗತಿಗಳದೇ ನೆನಪು. ಇಂದು ಸಹ ಮುಂಜಾನೆಯ ಪೇಪರುಗಳು ಬಾರದ್ದರಿಂದ, ಬೇರೆ ಸುದ್ದಿಗಳು ತಿಳಿಯಲಿಲ್ಲ. ಆಫೀಸಿಗೆ ಹೋದರೆ ತನ್ನ ಮಿತ್ರರಿಂದ ಹೆಚ್ಚಿಗೆ ಸುದ್ದಿ ಗೊತ್ತಾಗಬಹುದೆಂದು ಸಮಾಧಾನ ತಂದುಕೊಂಡ. ಈ ವಿಷಯಗಳ ಬಗ್ಗೆ ತನ್ನ ಹೆಂಡತಿಗೆ ಏನೂ ಹೇಳಲಿಲ್ಲ. ಇವನ್ನೆಲ್ಲ ತಿಳಿದುಕೊಂಡಾದರೂ ಅವಳೇನು ಮಾಡಬಲ್ಲಳು? ಮತ್ತೆ ಅವಳ ಮನಸ್ಸಿಗೂ ಇದರಿಂದ ತೊಂದರೆ.

ಊಟದ ಶಾಸ್ತ್ರ ಮುಗಿಸಿ ಪ್ರಮೋದಕುಮಾರ ಆಫೀಸಿನ ಕಡೆಗೆ ಹೊರಟ. ರೆಕ್ಸ್ ರೆಸ್ಟಾರೆಂಟಿನ ಮುಂದೆಯೇ ಹಾದು ಹೋಗಬೇಕು; ದೂರದಿಂದಲೇ ನೋಡಿದ. ನಿನ್ನೆಯಂತೆ ಜನರ ಗಲಭೆ ಇರಲಿಲ್ಲ. ಒಳ್ಳೆಯ ಚಿಹ್ನವೆಂದುಕೊಂಡ; ಆದರೆ ಹತ್ತಿರ ಹೋದ ಮೇಲೆ ಗೊತ್ತಾಯಿತು— ಆದರ ಬಾಗಿಲನ್ನೇ ತೆರೆದಿರಲಿಲ್ಲ ಈವೊತ್ತು. ನಾನಾತರದ ಸಾಮಾನುಗಳನ್ನು ಪ್ರದರ್ಶಿಸಲು ಹೊರಗೆ ಇಡುತ್ತಿದ್ದ ದೊಡ್ಡ ದೊಡ್ಡ ಕನ್ನಡಿಯ ಕಪಾಟುಗಳು ಒಂದೂ ಕಾಣಲಿಲ್ಲ. ಎಲ್ಲವನ್ನೂ ಒಳಗಿರಿಸಿ ಭದ್ರವಾಗಿ ಬಾಗಿಲು ಹಾಕಲ್ಪಟ್ಟಿತ್ತು. ಮಾರ್ಕೆಟಿನಲ್ಲಿಯೂ ಇಷ್ಟು ಜನರು ಕಾಣಲಿಲ್ಲ. ಕೆಲವೊಂದು ಅಂಗಡಿಗಳು ಮಾತ್ರ ತೆರೆದಿದ್ದುವು. ಪೋಲಿಸರ ಓಡಾಟ ಮತ್ತೂ ಹೆಚ್ಚಾಗಿತ್ತು. ವಾತಾವರಣ ನಿನ್ನೆಗಿಂತಲೂ ಹೆಚ್ಚು ಪ್ರಕ್ಷುಬ್ಧವಾಗಿತ್ತು.

ಪ್ರಮೋದಕುಮಾರ ಆಫೀಸನ್ನು ತಲುಪಿದಾಗ ಎಲ್ಲರೂ ಬಂದಿದ್ದರು. ಆದರೆ ಕೆಲಸದ ಕಡೆಗೆ ಒಬ್ಬರದೂ ಲಕ್ಷ್ಯವಿರಲಿಲ್ಲ. ತನ್ನಂತೆಯೆ, ಹೊರಗೆ ನಡೆದದ್ದನ್ನು ತಿಳಿದುಕೊಳ್ಳುವುದಕ್ಕೆಂದೇ ಎಲ್ಲರೂ ಬಂದಂತಿತ್ತು. ತಾವು ನಿನ್ನೆಯಿಂದ ಕಂಡದ್ದು ಕೇಳಿದ್ದಕ್ಕೆಲ್ಲ ಮತ್ತಷ್ಟು ಉಪ್ಪುಕಾರ ಹೆಚ್ಚಿ ಮತ್ತೊಬ್ಬರೆದುರಿಗೆ ಹೇಳುವುದೇ ನಡೆದಿತ್ತು. ಪ್ರಮೋದಕುಮಾರನನ್ನು ನೋಡಿದ ಕೂಡಲೆ ಬ್ಯಾನರ್ಜಿ ಬಂದು ಹೇಳಿದ: 'ಈಗ ೭–೮ ದಿವಸಗಳಿಂದಲೂ ನಾವು ಕೇಳುತ್ತಿದ್ದ ವಿಷಯಗಳನ್ನು ಕಣ್ಣಾರೆ ನೋಡುವ ವೇಳೆ ಬಂದಿದೆ. ನಿನ್ನೆಯ ರಾತ್ರಿ ೨–೩ ಮನೆಗಳನ್ನು ಲೂಟ ಮಾಡಿದರಂತೆ; ಒಂದು ಮನೆಗೆ ಬೆಂಕಿ ಹಚ್ಚಿ ವ್ಯಾರಂತೆ.

'ಪೋಲಿಸರು ಇರಲಿಲ್ಲವೆ?' ಎಂದ ಪ್ರಮೋದಕುಮಾರ. 'ಪೋಲಿಸರೇನು ಮಾಡುತ್ತಾರೆ?' ಎಂದ ಬ್ಯಾನರ್ಜಿ. 'ಅವರ ಸಹಾಯವಿಲ್ಲದೆ ಇವುಗಳು ಸಂಭವಿಸುವುದು ಶಕ್ಯವೇ? ಏನಾದರೂ Complain ಮಾಡಲು ಹೋದರೆ— ನೀವು ಆಸಾಮಿ ಭಾಷೆಯಲ್ಲಿಯೇ ಮಾತನಾಡಬೇಕೆಂದು— ಅವರ ಮೇಲೆಯೇ ಹರಿಹಾಯುತ್ತಾರೆ. ಇದು ಹೆಸರಿಗೆ ಮಾತ್ರ Students' agitation; ಆದರೆ ಎಲ್ಲರದೂ ಅಂಗವಿದೆ ಇದರಲ್ಲಿ.'

ಅಷ್ಟರಲ್ಲಿ ಪೋಸ್ಟ್‌ಮನ್ನನು ಅವಸರದಿಂದ ಬಂದ. 'ಹೊರಗೆ ಏನು ಸುದ್ದಿ?' ಎಂದು ಎಲ್ಲರೂ ಅವನ ಸುತ್ತಲೂ ನೆರೆದರು. 'ಕಾಲೇಜಿನ ಹಾಸ್ಟೆಲಿನ ಹತ್ತಿರದ ಮನೆಗೆ ಬೆಂಕಿ ಹಚ್ಚಿದ್ದಾರೆ ಪೋಲಿಸರು ಬಂದು ಹಾಸ್ಟೆಲಿನ ಮೇಲೆ ಗೋಳಿಬಾರು ಮಾಡಿದರು. ಒಬ್ಬ ಹುಡುಗ ಕೂಡಲೇ ಸತ್ತುಹೋದನಂತೆ; ಮತ್ತೆ ಕೆಲವರಿಗೆ ಬಹಳ ಗಾಯವಾಗಿದೆಯಂತೆ.' ಎಂದೆನ್ನುತ್ತ ಕೆಲವು ಪತ್ರಗಳನ್ನು ಕೊಟ್ಟು ಅವನು ಅವಸರದಿಂದ ಹೊರಗೆ ನಡೆದ.

'ಈ ಸರಕಾರಕ್ಕೆ ವಿದ್ಯಾರ್ಥಿಗಳ ಗೊಂದಲ ನಿಲ್ಲಿಸುವುದಕ್ಕೆ ಆಗುವುದಿಲ್ಲ!! ಇಷ್ಟು ನಿಕೋಪಕ್ಕೆ ಹೋಗುವವರೆಗೆ ಬಿಟ್ಟದ್ದೇ ತಪ್ಪು.' ಎಂದು ಶರ್ಮಾ ನುಡಿದ. 'ನಮ್ಮ ಉತ್ತರ ಪ್ರದೇಶದಲ್ಲಿಯೂ ಆಗಿರಲಿಲ್ಲವೇ? ಮೊದಲನೆಯ ಚಿಹ್ನ ಕಂಡಕೂಡಲೆ ಶಾಲೆ–ಕಾಲೇಜು ಬಂದು ಮಾಡಬೇಕು. ಹಾಸ್ಟೆಲನ್ನು ಮುಚ್ಚಿ ಎಲ್ಲ ವಿದ್ಯಾರ್ಥಿಗಳನ್ನು ಅವರವರ ಮನೆಗೆ ಕಳುಹಿ, ಅವರ ಪಾಲಕರಿಗೆ ಎಚ್ಚರ ಕೊಡಬೇಕು— ಮಕ್ಕಳು ಏನಾದರೂ ಮಾಡಿದರೆ ಅದಕ್ಕೆ ಜನಾಬ್ದಾರರು ಪಾಲಕರೆ— ಎಂದು, ಮತ್ತು ಅದಕ್ಕೆ ತಕ್ಕ ಶಿಕ್ಷೆಕೊಡಲಾಗುವುದು ಎಂದು! ಹೀಗೆ ಮಾಡಿದರೆ ಒಂದೇ ದಿವಸದಲ್ಲಿ ಎಲ್ಲವೂ ನಿಂತುಹೋಗುವುದು.'

'ಈ ವಿದ್ಯಾರ್ಥಿಗಳ ಗಲಭೆಗೆ ಇಷ್ಟೊಂದು ಮಹತ್ವ ಕೊಡುವುದೇ?' ಎಂದು ಸದಾಶಿವ ಭಿಡೆ ನುಡಿದ. 'ಹಿಂದಕ್ಕೆ ಕೇಳಿಲ್ಲವೇ— ಮುಂಬಯಿಯಲ್ಲಿ ನಡೆದ ದೊಡ್ಡ ದೊಡ್ಡ ಹಿಂದು – ಮುಸ್ಲಿಮರ ದಂಗೆಯ ಬಗ್ಗೆ? ಪೋಲಿಸ್ ಡಿಪಾರ್ಟಮೆಂಟ್ ಸ್ಟ್ರಾಂಗ್ (Strong) ಇದ್ದರೆ ಒಂದೇ ದಿವಸದಲ್ಲಿ ಇವುಗಳನ್ನು ನಿಲ್ಲಿಸಬಹುದು. ಒಂದೊಂದು ಓಣಿಗೆ ಒಬ್ಬೊಬ್ಬ ಪೋಲಿಸ್ ಸಬ -ಇನಸ್ಪೆಕ್ಟರ್ (Sub-inspecter) ಮತ್ತು ನಾಲ್ಕು ಜನ ಪೋಲಿಸರನ್ನು ನಿಲ್ಲಿಸಿ– ಅಲ್ಲಿ ಏನಾದರೂ ಗೊಂದಲವೆದ್ದರೆ ನಿಮ್ಮನ್ನೇ ಜನಾಬ್ದಾರರನ್ನಾಗಿ ಹಿಡಿಯುತ್ತೇವೆಂದು ಆಜ್ಞೆ ವಿಧಿಸಿದರೆ ಸಾಕು; ಈ ಗೊಂದಲ ತನ್ನಷ್ಟಕ್ಕೆ ತಾನೆಯೆ ನಿಂತು ಹೋಗುತ್ತದೆ.'

'ಹೆಸರಿಗೆ ಇದು ವಿದ್ಯಾರ್ಥಿಗಳದು; ಆದರೆ ಸೂತ್ರಧಾರರು ಬೇರೆಯೇ ಇದ್ದಾರೆ. ಶಾಲೆ-ಕಾಲೇಜುಗಳಲ್ಲಿ ಕೂಡ ವಿದ್ಯಾರ್ಥಿಗಳಿಗೆ ಈ ತರದ ಕೃತ್ಯ ಮಾಡಲಿಕ್ಕೆ ಉತ್ತೇಜನ ಕೊಡುತ್ತಾರೆಂದು ಕೇಳಿದ್ದೇನೆ. ಆದರೆ ಹೇಳುವ ರೀತಿ ಮಾತ್ರ ಬೇರೆ:— ವಿದ್ಯಾರ್ಥಿಗಳೇ ಮುಂದಿನ ನಾಗರಿಕರು. ಅವರಲ್ಲಿ ಅತ್ಯಗಾಧವಾದ ಬಲವಿದೆ. ಆದರೆ ಅವರಿಗೆ ಅದರ ಅರಿವಿರುವುದಿಲ್ಲ. ಆ ಶಕ್ತಿಯ ಅರಿವುಂಟಾದರೆ ಮಾತ್ರ

ಏನು ಬೇಕಾದರೂ ಅಸಾಧ್ಯವಾಗದು. ಈಗ ಜಪಾನಿನ ಉದಾಹರಣೆ ತೆಗೆದುಕೊಳ್ಳಿ; ತಿಕೆ ತನ್ನ ಮುಖ್ಯ ದುಂಡ್ರಪದಕ್ಕೆ ರಾಜೀನಾಮೆ ಕೊಟ್ಟು ಓಡಿಹೋದ. ಪ್ರೆಸಿಡೆಂಟ್ ನಿಜನ್‌ಹಾವರರು ಸಹ ಹೆದರಿ ಜಪಾನಿಗೆ ಭೆಟ್ಟಿಕೊಡುವುದನ್ನು ರದ್ದುಗೊಳಿಸಬೇಕಾಯಿತು. ಇದೆಲ್ಲ ವಿದ್ಯಾರ್ಥಿಗಳ ಬಲದಿಂದಲೇ ಅಲ್ಲವೇ ಆದದ್ದು ?.... ಮುಂ.—ಇನ್ನು ಮೇಲೆ ಇಲ್ಲಿ ನೋಡಿ, ಈ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದ್ದರ ನೆವ ಮಾಡಿ, ಏನೇನೆಲ್ಲ ಅನಾಹುತವಾಗಲಿದೆಯೋ ? ' ಎಂದು ಬ್ಯಾನರ್ಜಿ ನುಡಿದ.

ಅಲ್ಲಿಯೇ ಕುಳಿತಿದ್ದ Senior Clerk ನೊಬ್ಬನ ಕಣ್ಣಲ್ಲಿ ನೀರೂರಿತು. 'ಮನೆಗೆ ಯಾರು ಬೆಂಕೆಹಚ್ಚಿದರೋ, ಯಾರು ಗೊಂದಲ ಹಾಕುತ್ತಾರೋ ? ಭವಿಷ್ಯದ ಬಗ್ಗೆ ಉಜ್ವಲ ಆಶೆಯನ್ನು ಇಟ್ಟುಕೊಂಡು ಕಲಿಯಲು ಬಂದ ಈ ವಿದ್ಯಾರ್ಥಿ ಮಾತ್ರ ಇವಕ್ಕೆಲ್ಲ ಈಗ ಬಲಿಯಾದ. ತನ್ನ ಮಗ ಮೊದಲನೆಯ ವರ್ಗದಲ್ಲಿ ಪಾಸಾಗುತ್ತಾನೆ, ದೊಡ್ಡ ಅಧಿಕಾರ ಸ್ಥಾನ ಪಡೆಯುತ್ತಾನೆಂದು ಆಶೆ ಇಟ್ಟುಕೊಂಡು ಕುಳಿತಿರುವ ಅವನ ತಂದೆ-ತಾಯಿಗಳ ಹೃದಯಕ್ಕೆ ಎಂತಹ ಆಘಾತವಿದು ? ಇದಕ್ಕೆ ಮೂಲಕಾರಣವಾದ ಸ್ವಾರ್ಥ, ಸಂಕುಚಿತದೃಷ್ಟಿ ಎಂದು ದೂರವಾಗುವುದೋ ನಮ್ಮ ಜನರಿಂದ !! ಭಾರತ ಸ್ವತಂತ್ರವಾದಾಗಿನಿಂದ ನಮ್ಮಲ್ಲಿಯ ಈ ವೃತ್ತಿ ಹೆಚ್ಚಾಗತೊಡಗಿದೆ.' ಎಂದು ಉದ್ಗಾರ ತೆಗೆದ. ಕಲಕತ್ತೆಯಲ್ಲಿ ಹಾಸ್ಟೆಲಿನಲ್ಲಿದ್ದ ತನ್ನ ಮಗನ ನೆನಪಾಗಿರಬಹುದು ಅವನಿಗೆ.

ಅದೇ ಹೊತ್ತಿಗೆ ಬ್ಯಾಂಕಿಗೆ ಹೋಗಿದ್ದ ಆಫೀಸ್ ಪ್ಯೂನ್—ಆಫೀಸಿನ ಸಿಪಾಯಿ—ಓಡುತ್ತಲೇ ಬಂದ. 'ಕಾಲೇಜ ಸಾಸ್ಟೆಲಿನ ಮೇಲೆ ಗೋಳಿಬಾರು ಆಯಿತಂತೆ. ನಾನು ಬರುವಾಗ ೫-೬ ನೂರು ಜನರ ಗುಂಪೊಂದು D. C. Court ನ ಎದುರಿಗೆ ನಿಂತಿತ್ತು. ಡೆಪ್ಯುಟಿ ಕಮಿಶನರಿಗೆ Stab ಮಾಡಿದರಂತೆ (ಚೂರಿಯಿಂದ ಇರಿದರಂತೆ). ಅವರನ್ನು ಈಗ ದವಾಖಾನೆಗೆ ಕಳುಹಿದ್ದಾರೆ. ಮತ್ತು ಈಗ ಎಲ್ಲ ಕಡೆಗೂ ಕರ್ಫ್ಯೂ ಹಾಕಿದ್ದಾರೆ. ಈಗಿನಿಂದ ೪೮ ತಾಸುಗಳ ವರೆಗೆ!'

ಹೊಸದಾಗಿ ನೌಕರಿಗೆ ಸೇರಿದ ಮಾಧವನ್ ಸಿಳ್ಳೆ ಇಲ್ಲಿಯವರೆಗೆ ಸುಮ್ಮನೆ ಕುಳಿತಿದ್ದ. ಆಫೀಸಿನ ಸಿಪಾಯಿ ಈ ಸುದ್ದಿ ಹೇಳಿದ ಕೂಡಲೇ ಅವನು ಮುಂದೆ ಬಂದ : ' ಈ ೧೦-೧೫ ದಿವಸಗಳಿಂದಲೂ ಆಸಾಮದ ಎಲ್ಲ ಭಾಗಗಳಲ್ಲಿಯೂ ಇದೇ ರೀತಿಯಾಗಿ ನಡೆದಿದೆ. ಎಲ್ಲಿ ನೋಡಿದರೂ ಮನೆಗಳಿಗೆ ಬೆಂಕಿ ಹಚ್ಚುವುದು, ಲೂಟಿಮಾಡುವುದು, ಜನರನ್ನು ಕೊಲ್ಲುವುದು.... ನಡೆದೇ ಇದೆ. ಆಸಾಮಕ್ಕೆ ಮುಖ್ಯದ್ವಾರದಂತೆ ಇದ್ದ ಮುಖ್ಯಪಟ್ಟಣವಾದ ಈ ಗೌಹಾಟಿಯಲ್ಲಿಯೇ ಈ ರೀತಿ ನಡೆಯುತ್ತಿದೆಯೆಂದ ಬಳಿಕ, ಕೇಂದ್ರಸರಕಾರ ಕಣ್ಣುಮುಚ್ಚಿ ಹೇಗೆ ಸುಮ್ಮನೆ ಕುಳಿತಿದೆ ? ಕೇರಳದಲ್ಲಿ ಇಂತಹದೇನೂ ಇಲ್ಲದೆ President's Rule ಹೇರಲಾಯಿತು. ಇಲ್ಲಿ ನಿಜವಾಗಿ ಅದರ ಆವಶ್ಯಕತೆ ಇದ್ದರೂ, ಕೇಂದ್ರ ಸರಕಾರ ನಿದ್ದೆ ಮಾಡುತ್ತಿದೆ.' ಎಂದು ಆವೇಶದಿಂದ ಮಾತನಾಡಿದ.

೪೮ ತಾಸುಗಳ ಕರ್ಫ್ಯೂ ಎಂದ ಕೂಡಲೆ ಪ್ರಮೋದಕುಮಾರನಿಗೆ ಗಾಬರಿಯಾಯಿತು. ' ಮನೆಗೆ ಹೇಗೆ ಹೋಗುವುದು ? ಮನೆಯಲ್ಲಿಯ ಜನರ ಗತಿ ಏನು? ' ಏನೂ ತಿಳಿಯದಂತಾಗಿ ಬ್ಯಾನರ್ಜಿಯ ಕಡೆಗೆ ನೋಡಿದ. ಆಫೀಸ ಬಂದುಮಾಡಲ್ಪಟ್ಟಿತು. ಬ್ಯಾನರ್ಜಿಯು ತನ್ನ ಗುರುತಿನ ಯಾರಿಗೋ ಟೆಲಿಫೋನ್ ಮಾಡಿದ. ಸಂಜೆಯ ೪ ಗಂಟೆಯ ಸುಮಾರಿಗೆ ಯಾರೋ ಒಬ್ಬ ಮಾರವಾಡಿ-ಸೇಟರ ಕಾರು ಬಂದು, ಅವರನ್ನು ಮನೆಗೆ ತಲುಪಿಸಿತು.

ಪ್ರಮೋದಕುಮಾರ ಮನೆ ತಲುಪಿದಾಗ ಅವನ ತಂದೆಯು, ಕಾಮಾಖ್ಯಾಮಂದಿರದ ಪಂಡ— ನಾರಾಯಣ ಶರ್ಮರೊಂದಿಗೆ ಏನೋ ಮಾತನಾಡುತ್ತ ಕುಳಿತಿದ್ದರು. (ಕಾಮಾಖ್ಯಾ ಮಂದಿರ ಆಸಾಮದಲ್ಲಿಯ ಒಳ್ಳೇ ಪುರಾತನವಾದ ಪ್ರಸಿದ್ಧ ದೇವಾಲಯ. ಗೌಹಾಟಿಯಿಂದ ೧೫ ಮೈಲು ದೂರದಲ್ಲಿರುವ ನೀಲಾಚಲವೆಂಬ ಗುಡ್ಡದ ಮೇಲಿದೆ). ನಾರಾಯಣಶರ್ಮರಿಗೆ ೬೦-೬೫ ವರ್ಷ ವಯಸ್ಸಿರಬಹುದು. ಒಳ್ಳೇ ಸಜ್ಜನರು. ಧಾರ್ಮಿಕ ವೃತ್ತಿಯವರು. ಉಳಿದ ಪಂಡರಂತಿರದೆ,ಮಂದಿರಕ್ಕೆ ಬಂದವರಿಗೆ ದೇವಿಯ ದರ್ಶನ ಮುಂತಾದುವುಗಳಿಗೆ ಸಹಾಯಮಾಡಿ, ಅವರು ಕೊಟ್ಟಷ್ಟು ದಕ್ಷಿಣೆಯಿಂದ ತೃಪ್ತರಾಗುತ್ತಿದ್ದರು. ದೇವಿಯ ಮೇಲೆ ಅವರ ಭಕ್ತಿ ವಿಶ್ವಾಸ ಬಹಳ. ಯಾತ್ರಿಕರಿಗೆ ದೇವಿಯ ದರ್ಶನಕ್ಕೆ ಸಹಾಯ ಮಾಡುವುದೇ ತಮ್ಮ ಕರ್ತವ್ಯ, ಇದೇ ದೇವಿಯ ಸೇವೆ— ಎಂದು ಅವರು ತಿಳಿದಿದ್ದರು. ಕಾಮಾಖ್ಯಾಮಂದಿರದಲ್ಲಿ ೩-೪ ತಿಂಗಳುಗಳ ಹಿಂದೆ ನಡೆದ ಘಟನೆ ಅವರ ಕಣ್ಣೆದುರಿಗೆ ಇನ್ನೂ ಕಟ್ಟಿದಂತಿತ್ತು. ಅದರ ಬಗ್ಗೆಯೇ ಅವರು ಹೇಳುತ್ತಿದ್ದರು : " ನನಗೆ ಆವಾಗಲೇ ಎನಿಸಿತ್ತು- ನಮ್ಮ ನಾಡಿಗೆ ಏನೋ ಆಪತ್ತು ಬಂದಿದೆಯೆಂದು. ನಮ್ಮವರ ಆ ಹೀನವೃತ್ತಿಯನ್ನು ನೆನೆಸಿಕೊಂಡರೆ, ದೇವಿಯು ಕೊಟ್ಟ ಶಿಕ್ಷೆ ಇಲ್ಲಿಗೇ ಮುಗಿಯತೆಂದೆನಿಸುವುದಿಲ್ಲ. ನನ್ನ ಅನುಭವದಿಂದ ಕಂಡ ಸಂಗತಿಗಳನ್ನೇ ಹೇಳುತ್ತಿದ್ದೇನೆ- ಪ್ರತಿಯೊಬ್ಬನೂ ತಾನು ಕೈಕೊಂಡ ಕಾರ್ಯವನ್ನು ಪ್ರಾಮಾಣಿಕತೆಯಿಂದ ಮಾಡುವವರೆಗೆ ಎಲ್ಲರಿಗೂ ಸುಖವಾಗುತ್ತದೆ. ಆದರೆ ಸ್ವಾರ್ಥ-ಸಂಕುಚಿತ ದೃಷ್ಟಿ ತಲೆಯತ್ತಿದ ಕೂಡಲೆ, ಯಾರಿಗೂ ಸುಖವಾಗುವುದಿಲ್ಲ. ಈ ವ್ಯಾಪಾರ-ಧಂದೆಗಳಲ್ಲಿಯ ಜನರ ಮಾತಂತೂ ದೂರನೇ ಉಳಿಯಿತು ಅಲ್ಲಿ ಹಣ ಗಳಿಸುವುದೊಂದೇ ಉದ್ದೇಶ ಕಂಡುಬರುತ್ತದೆ. ಅದಕ್ಕಾಗಿ ಎಂತಹ ಮಾರ್ಗವನ್ನೂ ಅನುಸರಿಸುತ್ತಾರೆ. ಆದರೆ ದೇವಿಯ ಸೇವೆಯಲ್ಲಿಯೇ ಜೀವನವನ್ನು ಸವೆಯಿಸಬೇಕಾದ ನಮ್ಮ ಜನರಲ್ಲಿಯೂ ಸಹ ಈ ಹಣದ ದುರಾಶೆ ಹೊಕ್ಕು, ಅದಕ್ಕಾಗಿ ಎಂತಹ ಹೇಯಕೃತ್ಯಗಳನ್ನು ಮಾಡುವದಕ್ಕೂ ಹೇಸದೆ ಅಣಿಯಾಗುತ್ತಾರೆಂದ ಬಳಿಕ ನಮ್ಮ ದುರ್ದೈವವಲ್ಲವೆ ?

" ನಿಮಗೆ ಗೊತ್ತಿದೆ- ಕಾಮಾಖ್ಯಾಮಂದಿರದಲ್ಲಿ ಪ್ರವೇಶದ್ವಾರ ಯಾವಾಗಲೂ ತೆರೆದಿರುವುದಿಲ್ಲ. ಮಂದಿರವು ಕತ್ತಲೆಯ ಗವಿಯಾದುದರಿಂದ, ಬಹಳ ಗಂಡಲವಾಗಬಾರದೆಂದು ಮೊದಲು ಕೆಲವು ಜನರನ್ನು ಒಳಗೆ ಕಳುಹಿ ಪ್ರವೇಶದ್ವಾರ ಮುಚ್ಚುತ್ತಾರೆ. ಅವರೆಲ್ಲ ದರ್ಶನ ಮಾಡಿಕೊಂಡು ಹಿಂದಿನ ಬಾಗಿಲಿಂದ ಹೊರಗೆ ಹೋದ ಬಳಿಕ

ಪ್ರವೇಶದ್ವಾರ ತೆರೆದು ಮತ್ತೆ ಕೆಲವು ಜನರನ್ನು ಒಳಗೆ ಕಳುಹುತ್ತಾರೆ. ಪ್ರತಿದಿನವೂ ಸಾಕಷ್ಟು ಗದ್ದಲವಿರುವುದರಿಂದ ನಾವೇ (ಪಂಡರು) ಎಲ್ಲರಿಗೂ ತೊಂದರೆಯಾಗದಂತೆ ಯೋಗ್ಯರೀತಿಯಿಂದ ವ್ಯವಸ್ಥೆ ಮಾಡುತ್ತೇವೆ. ಜನರು ಹೊರಗೆ ಹೋಗುವುದಕ್ಕೆ ಮಾತ್ರ ಹಿಂದಿನ ಬಾಗಿಲು ಉಪಯೋಗಿಸಲ್ಪಡುತ್ತದೆ. ಆದರೆ ನಮ್ಮಲ್ಲಿಯ ಕೆಲವರು ಯಾತ್ರಿಕರಿಂದ ಹಣ ತೆಗೆದುಕೊಂಡು, ಅವರನ್ನು ಹಿಂದಿನ ಬಾಗಿಲಿಂದಲೇ (ಉಳಿದವರಿಗಿಂತ ಮೊದಲೇ) ಒಳಗೆ ಕರೆದುಕೊಂಡು ಹೋಗುತ್ತಾರೆ- ಹಣದ ಆಶೆ! ಆದರೆ ಸಾಧಾರಣವಾಗಿ ಎಲ್ಲರೂ ಹೀಗೆ ಮಾಡುತ್ತಾರಾದ್ದರಿಂದ, ನಮಗೆ ಅವರ ವೃತ್ತಿ ಮನಸ್ಸಿಗೆ ಬಾರದಿದ್ದರೂ ಸುಮ್ಮನಿರಬೇಕಾಗುತ್ತದೆ. ಆದರೆ ನಾನು ಹೇಳುತ್ತಿರುವುದು ಅದಕ್ಕೂ ದೀರ್ಘಕ್ಕೆ ಹೋದ ಸಂಗತಿ.

"ಈಗ ೩||-೪ ತಿಂಗಳ ಹಿಂದಿನ ಸಂಗತಿ' ದೇವಿಯ ದರ್ಶನಕ್ಕೆ ಬಂದಿದ್ದ ೩-೪ ಜನರು ಪ್ರವೇಶದ್ವಾರ ಮುಚ್ಚಲ್ಪಟ್ಟಿದ್ದರಿಂದ ಅಲ್ಲಿಯೇ ಪ್ರಾಕಾರದಲ್ಲಿ ಸುತ್ತಾಡುತ್ತಿದ್ದರು. ಆಗ ಹಿಂದಿನ ಬಾಗಿಲಿಂದಲೂ ಕೆಲವು ಜನರು ಪ್ರವೇಶಿಸುತ್ತಿದ್ದುದನ್ನು ನೋಡಿ, ಅವರೂ ಅತ್ತಕಡೆಗೆ, ಬಂದರು— ಅದು ಮತ್ತೊಂದು ಪ್ರವೇಶದ್ವಾರವಿದ್ದಿರಬಹುದೆಂದುಕೊಂಡು; ಆದರೆ ಅಲ್ಲಿಯ ಪಂಡರು ಅವರನ್ನು ಒಳಗೆ ಬಿಡಲಿಲ್ಲ. ನನಗೆನಿಸುವುದೆಂದರೆ ಅವರಿಗೂ ಹಣ ಕೇಳಿರಬಹುದು. ಅಂತೂ ಮಾತಿಗೆ ಮಾತು ಬೆಳೆದು ಜಗಳವೇ ಪ್ರಾರಂಭವಾಯಿತು. ಆಗ ಮತ್ತೆ ಕೆಲವು ಜನ ಪಂಡರು ಮಧ್ಯಸ್ಥರಂತೆ ಬಂದು ಅವರನ್ನು ಮಂದಿರದಲ್ಲಿ ಕರೆದುಕೊಂಡು ಹೋದರು. ಅವರು ಒಳಗೆ ಪ್ರವೇಶಿಸಿದ ಕೂಡಲೆ ಆ ಬಾಗಿಲನ್ನು ಮುಚ್ಚಿ, ೭-೮ ಜನ ಪಂಡರು ಅವರ ಮೇಲೆ ಕೈಮಾಡಿದರಂತೆ; ಅದರಿಂದ ಹೆಚ್ಚು ಗಲಾಟೆ ನಡೆದು, ಒಳಗಿನ ಧ್ವನಿಕೇಳಿ ಹೊರಗಿನಿಂದ ಅನೇಕ ಜನರು ಧಾವಿಸಿ ಬಂದು ಅವರನ್ನು ಬಿಡಿಸಿಕೊಳ್ಳಬೇಕಾಯಿತು. ಅವರಿಗೆ ಗಾಯವಾಗಿ, ದೇವಿಯ ದರ್ಶನಕ್ಕಾಗಿ ಬಂದ ಅವರು ದವಾಖಾನೆಗೆ ಹೋಗಬೇಕಾಯಿತು. ಅವರು ಪೋಲಿಸರಿಗೂ Complaint ಕೊಟ್ಟರಂತೆ. ಆದರೆ ಅವರಿಂದ ಏನೂ ಪ್ರಯೋಜನವಾಗಲಿಲ್ಲ ಅಂತೂ ದೇವಿಯ ಮುಂದಿರದಲ್ಲಿಯೇ, ಅವಳ ಸೇವೆಯಲ್ಲಿಯೇ ನಿಯುಕ್ತರಾದವರಿಂದ ಇಂತಹ ಅತ್ಯಾಚಾರ ನಡೆಯಬೇಕೆಂದರೆ, ನಮ್ಮ ಪಾಪದ ಕೊಡ ತುಂಬಿದಂತೆನಿಸುತ್ತದೆ. ಆಗಲೇ ನನಗೆನಿಸಿತ್ತು— ಏನೋ ಆಪತ್ತು ಕಾದಿದೆಯೆಂದು; ದೇವಿಯು ಈ ಅಪರಾಧಕ್ಕೆ ಶಿಕ್ಷೆವಿಧಿಸದೆ ಬಿಡುವುದಿಲ್ಲವೆಂದು. ಅದಕ್ಕೆ ನೋಡಿ. ಆಸಾಮದಲ್ಲಿ ೨೫-೬ ತಿಂಗಳಿಂದಲೂ ಮಳೆ ಇಲ್ಲವೆಂದರೆ ಯಾರಾದರೂ ನಂಬಬಹುದೇ? ಇದು ದೇವಿಯು ಕ್ಷೋಭಿಸಿದ್ದರ ಪರಿಣಾಮವಲ್ಲದೆ ಮತ್ತೇನು? ಅಷ್ಟೇ ಅಲ್ಲ, ಈ ದೇವಿಯ ಕ್ಷೋಭೆ ಪೂರ್ವಾಪರ ಶಾಪ— ಯಾದವರು ತಮ್ಮ ತಮ್ಮೊಳಗೆ ಹೊಡೆದಾಡಿ ಸತ್ತಂತೆ, ಈಗ ಈ ಜನರು ಹೊಡೆದಾಟ ಪ್ರಾರಂಭಿಸಿದ್ದಾರೆ. ಭಾಷೆಯೇನೋ ನಿಮಿತ್ತ ಮಾತ್ರ. ಇದು, ನಮ್ಮ ಕರ್ತವ್ಯಕರ್ಮ ಮರೆತು, ಸ್ವಾರ್ಥ ಸಂಕುಚಿತ ದೃಷ್ಟಿಗಳ ಮೂಲಕ ನಮ್ಮ ಮೇಲೆ ನಾವೇ ತಂದುಕೊಂಡ ಆಪತ್ತು."

ನಾರಾಯಣಶರ್ಮರು ಸುಮ್ಮನಾದರು. ಅವರ ಮನಸ್ಸು ಯಾವುದೋ ವಿಚಾರದಲ್ಲಿ ಮಗ್ನವಾದಂತೆ ಕಂಡುಬಂದಿತು. ಪ್ರಮೋದಕುಮಾರ ಮತ್ತು ಅವನ ತಂದೆ ಏನೂ ತೋಚದೆ ಸುಮ್ಮನೆ ಕುಳಿತರು. ರಾತ್ರಿಯ ಹತ್ತು ಗಂಟೆಯಾಗಿರಬೇಕು. ಯಾರಿಗೂ ನಿದ್ದೆ ಬರದೆ ಹಾಗೆಯೇ ಕುಳಿತಿದ್ದರು. ಕರ್ಫ್ಯೂದ ಮೂಲಕ ಶರ್ಮರವರು ಅಲ್ಲಿಯೇ ಉಳಿದುಕೊಂಡರು. ಈ ನೊದಲು Fire Brigade ಮೋಟರು ಹೋದ ಧ್ವನಿ (ಗಂಟೆಯದು) ೨-೩ ಸಲ ಕೇಳಿಸಿತ್ತು. ರಸ್ತೆಯ ಮೇಲೆ ಆಗಾಗ, ಪೋಲಿಸರನ್ನು ತುಂಬಿಕೊಂಡು ಹೋಗುತ್ತಿದ್ದ ಮೋಟರ್ ಲಾರಿಗಳನ್ನು ಕಿಡಕಿಗಳಿಂದ ನೋಡುತ್ತಿದ್ದರು. ಅಷ್ಟರಲ್ಲಿ 'ಫಟ್' ಎಂಬ ಸಪ್ಪಳದೊಂದಿಗೆ ಕಿಡಕಿಯ ಕಾಜುಗಳು ಒಡೆದು ಚೂರಾಗಿ ಬಿದ್ದುವು. ಅದೇ ಮೇಳಿಗೆ ಮಾಳಿಗೆಯ ಮೇಲಿನ ತಗಡಿನ ಮೇಲೆಯೂ ೨-೩ ಕಲ್ಲುಗಳು ಬಿದ್ದು, ದೊಡ್ಡ ಸಪ್ಪಳ ಮಾಡಿದುವು. ಮೊದಲೇ ಹೆದರಿದ್ದ ಎಲ್ಲ ಜನರೂ ಇದರಿಂದ ಮತ್ತಷ್ಟು ಹೌಹಾರಿದರು. ಬೆಳಗಾಗುವ ವರೆಗೂ ತಾವೆಲ್ಲ ಜೀವಿಸಿರುವೇವೇ?- ಎಂಬ ಪ್ರಶ್ನೆ ಎಲ್ಲರ ಮುಖದ ಮೇಲೆಯೂ ಒಡೆದು ಕಾಣುತ್ತಿತ್ತು. ಆ ಶಬ್ದದಿಂದ ನಾರಾಯಣಶರ್ಮರು ಒನ್ಮೆಲೇ ಎಚ್ಚೆತ್ತಂತಾದರು. 'ಗಾಬರಿಯಾಗಬೇಡಿರಿ. ದೇವಿಯು ಪಯಿಯೊಂದಿದ್ದರೆ ಎಲ್ಲವೂ ಒಳಿತಾಗುತ್ತದೆ.' ಎಂದು ಹೇಳುತ್ತಿರುವಾಗಲೇ ಹಿತ್ತಿಲು ಬಾಗಿಲನ್ನು ಯಾರೋ ಬಡಿದಂತಾಯಿತು. ಎಲ್ಲರ ಕೈಕಾಲೇ ಹೋದುವು. ಬಾಯಿಂದ ಮಾತುಗಳೇ ಹೊರಡದಂತಾದುವು. ಪುಂಡರ ತಂಡ ಮನೆಯನ್ನು ಸುತ್ತುಗಟ್ಟಿದೆಯೆಂದೇ ಅವರ ಭಾವನೆಯಾಯಿತು. ನಾರಾಯಣಶರ್ಮರೇ ಧೈರ್ಯದಿಂದ ಎದ್ದು ಬಾಗಿಲಿಗೆ ಹೋಗಿ 'ಯಾರವರು?' ಎಂದು ಒದರಿ ಕೇಳಿದರು.

'ನಾನು ಸುನೀಲದಾಸ' ಎಂದು ಉತ್ತರ ಬಂದಿತು. ಅವರ ಧ್ವನಿ ಕೇಳಿ ಎಲ್ಲರಿಗೂ ಧೈರ್ಯ ಬಂದಿತು. ಸುನೀಲದಾಸರು ಅವರ ನೆರೆಮನೆಯವರು; ಒಳ್ಳೆ ದೊಡ್ಡ ಮನುಷ್ಯರು; ಸಜ್ಜನರು. ನಾರಾಯಣಶರ್ಮರು ಅವರನ್ನು ಒಳಗೆ ಕರೆದುಕೊಂಡು ಹೋದರು. ಒಳಗೆ ಬರುತ್ತಲೇ ಅವರು ಪ್ರಮೋದಕುಮಾರ ಮತ್ತು ಅವನ ತಂದೆಯವರನ್ನು ಉದ್ದೇಶಿಸಿ ಹೇಳಿದರು: 'ನೀವೆ ಏನೋ ಕಠಿಣವಿದೆ. ಆದರೆ ನೀವು ಗಾಬರಿಯಾಗುವ ಕಾರಣವಿಲ್ಲ. ಈ ತೊಂದರೆ ಪ್ರಾರಂಭಿಸಿದ್ದು ಭಾಷೆಯ ಮೂಲಕ ನಿಜ; ಆದರೆ ಈಗ ಪ್ರಾರಂಭವಾದ ನಂತರ ಪುಂಡರೇ ಮುಖಂಡರಾಗುತ್ತಾರೆ. ನ್ಯಾಯಾನ್ಯಾಯಗಳ ವಿಚಾರ ಉಳಿಯುವುದಿಲ್ಲ. ಆದ್ದರಿಂದ ನಮ್ಮ ಸುರಕ್ಷಿತತೆಯ ಬಗ್ಗೆ ನಾವು ಎಚ್ಚರದಿಂದಿರುವುದು ಒಳ್ಳೆಯದು. ನೀವು ಇಲ್ಲಿರುವುದಕ್ಕಿಂತ ಈಗ ನಮ್ಮ ಮನೆಗೆ ಬರುವುದು ಯೋಗ್ಯವೆನಿಸುತ್ತದೆ. ನಾಳೆ ಬೆಳಗ್ಗೆ ವಿಮಾನದಿಂದ ಕಲಕತ್ತೆಗೆ ಹೋಗುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.'

ನಾರಾಯಣಶರ್ಮರು 'ಎಲ್ಲವೂ ಕಾಮಾಖ್ಯೆಯ ಇಚ್ಛೆ' ಎಂದರು. ಎಲ್ಲರೂ ಎದ್ದು ದಾಸರವರ ಉಪಕಾರ ಸ್ಮರಿಸುತ್ತ ಅವರ ಮನೆಗೆ ಹೋದರು.

ಶಾರ್ಲೊಟ್ ಬ್ರಾಂಟೆ,

(ಪರಿಚಯಾತ್ಮಕ ಲೇಖನ.)

ಶ್ರೀಮತಿ :- " ವಸಂತಲಕ್ಷ್ಮಿ " ಮದ್ರಾಸ್

ಶಾರ್ಲೋಟ್ ಬ್ರಾಂಟೆಯ ಕರುಣಪೂರ್ಣ ಜೀವನಕಥೆಯು ಸಹೃದಯರ ಎದೆಯನ್ನು ನಡುಗಿಸುವಂತಹದಾಗಿದೆ. ಅಡಸಿದ ದುಃಖಗಳ ಅಡಿಯಲ್ಲಿ ಸಿಕ್ಕಿಕೊಂಡು, ' ಅಯ್ಯೋ ! ' ಎಂದು ಅವಳು ನಿಷ್ಕ್ರಿಯಳಾಗಿ ಬಿದ್ದುಬಿಟ್ಟಿದ್ದರೆ, ಇಂಗ್ಲಿಷ್ ಸಾಹಿತ್ಯಚರಿತ್ರೆಯಲ್ಲಿ ಅವಳ ಹೆಸರು ಮೆರೆಯುತ್ತಿತ್ತೆ ?

ಆಂಗ್ಲಸಾಹಿತ್ಯದ ಅರುಣೋದಯದ ಹೊಂಬೆಳಕಿಗೆ ಕಾರಣರೆನಿಸಿದ ಅನೇಕರಲ್ಲಿ **ಶಾರ್ಲೋಟ್ ಬ್ರಾಂಟೆ** ಎಂಬ ಮಹಿಳಾ ಕಾದಂಬರೀಕಾರಳ ಸ್ಥಾನ ಗಣ್ಯವಾದುದು, ಆಂಗ್ಲಸಾಹಿತ್ಯದಲ್ಲಿ ಮೊತ್ತ ಮೊದಲಿಗೆ ಬಂದ ಕೆಲವು ಖ್ಯಾತ ಕಾದಂಬರಿಗಳಲ್ಲಿ,ಬ್ರಾಂಟೆಯ ಕಾದಂಬರಿಗಳು ಕೆಲವಾಗಿವೆ; ಅವಳ ಕೃತಿಗಳು ಅಗಸದ ಎತ್ತರವನ್ನು ನೆನೆದರೆ, ಅವಳ ಜೀವನದ ದಾರುಣತೆ ಸಾಗರದ ಆಳವನ್ನು ನೆನಪು ಮಾಡಿಕೊಡುವಂತಿದೆ. ಅವಳ ಜೀವನಚರಿತ್ರೆಯನ್ನು ಬರೆದ ಹೊರಟ ಶ್ರೀಮತಿ ಗೆಸ್‌ಕೆಲ್, ಸಾರ್ಥಕವಾಗಿಯೊ ಎನ್ನುವಂತೆ- ತನ್ನ ಚರಿತ್ರನಾಯಿಕೆಯ ಮನೆಯಂಗಳದಲ್ಲಿ ಎದ್ದು ಬೆಳೆದ ಸಾಬುಸಾಲಾದ ಗೋರಿಗಳನ್ನೇ ತುಳಿಯುತ್ತಾಳೆ ! ಶಾರ್ಲೋಟ್ ಬ್ರಾಂಟೆಯ ಜೀವನ ಕಥೆಯನ್ನು ಹೇಳ ಹೊರಟ ಶ್ರೀಮತಿ ಗೆಸ್‌ಕೆಲ್‌ಳಿಗೆ ಮೊದಲು ಕಂಡುದು ಬ್ರಾಂಟೆಯಲ್ಲ ! ಬ್ರಾಂಟೆಯ ಜೀವನವನ್ನೇ ಹಿಂಡಿ ಹಿಸುಕಿದ, ಅವಳ ಜೀವನದಲ್ಲೆಲ್ಲ ಶೂನ್ಯತೆಯ ಬಿರುಗಾಳಿಯನ್ನು ಬೀಸಿ ಅವಳ ಜೀವನದ ಮರಳುಗಾಡಿನಲ್ಲೆಲ್ಲ ಧೂಳಿಬ್ಬಿಸಿದ,ಕರಾಳ-ಮೃತ್ಯುವೇ ಬ್ರಾಂಟೆಯ ಬಾಳಿನ ಪ್ರತೀಕವಾಗಿ ಶ್ರೀಮತಿ ಗೆಸ್ಕೆಲ್‌ಳಿಗೆ ಹೊಳೆದುದರಲ್ಲಿಯೇ ಶಾರ್ಲೋಟ್ ಬ್ರಾಂಟೆಯ ಜೀವನದ ದಾರುಣ-ಮಿಡಿತವನ್ನು ನಾವು ಗುರುತಿಸಬಹುದೇನೋ !

ಶಾರ್ಲೋಟ್ ಬ್ರಾಂಟೆ ಬೆಳೆದುದು ಇಂಗ್ಲಂಡಿನ ಮೂಲೆಯ ಹಳ್ಳಿಯ ಹಾವರ್ತ್‌ನಲ್ಲಿ— ಬಡ ಪಾದ್ರಿಯೊಬ್ಬನ ಮಗಳಾಗಿ ! ಪಾದ್ರಿಯ ಮನೆಯು ಊರ ಹೊರಗೆ ಇತ್ತು. ಮನೆಯ ಹತ್ತಿರವೇ ಊರ ಸ್ಮಶಾನವಿತ್ತು. ಎದುರುಗಡೆಯೇ ವಿಶಾಲವಾದ ಬಂಜರು-ಭೂಮಿ ಕಾಣುತ್ತಿತ್ತು. ಇಂತಹ ವಾತಾವರಣದ ಮಗುವಾಗಿ ಬ್ರಾಂಟೆಯು ಬೆಳೆದಳು. ಅವಳಿಗಿದ್ದುದು ಇಬ್ಬರು ಅಕ್ಕಂದಿರು, ಇಬ್ಬರು ತಂಗಿಯರು ಮತ್ತು ಒಬ್ಬ ತಮ್ಮ.

ಹಾವರ್ತ್ ಹಳ್ಳಿಯಲ್ಲಿಯ ಜನರು ತುಂಬ ಒರಟಾಗಿಯೂ ಅಸಂಸ್ಕೃತರಾಗಿಯೂ ಇದ್ದರು. ಮೇಲಾಗಿ ಪಾದ್ರಿ ಬ್ರಾಂಟೆಗೆ ತುಂಬ ಕಟ್ಟು-ನಿಟ್ಟಿಗೆಗಳಿದ್ದ ಜೀವನವು ಸೇರುತ್ತಿತ್ತು. ಹೀಗಾಗಿ ಶಾರ್ಲೋಟ್ ಆಗಲಿ ಅವಳ ಬಂಧು-ಭಗಿನಿಯರಾಗಲಿ, ಹೆಚ್ಚಾಗಿ ಮನೆಯಲ್ಲಿಯೇ ಉಳಿಯುತ್ತಿದ್ದರು. ಅವಳ ತಾಯಿ, ಶಾರ್ಲೋಟಳು ಚಿಕ್ಕವಳಾಗಿದ್ದಾಗಲೇ ಗತಿಸಿದ್ದಳು. ಅವಳ ಮರಣದನಂತರ ಪಾದ್ರಿ ಬ್ರಾಂಟೆಯು ಒಬ್ಬಂಟಿಗನಾಗಿ, ಯಾರೊಡನೆಯೂ ಹೆಚ್ಚು ಮಾತನಾಡದೆ ಇರುತ್ತಿದ್ದನು. ಆದುದರಿಂದ, ಮಕ್ಕಳು ತಮ್ಮಿಷ್ಟಕ್ಕೆ ತಾವೇ—ತಾಯಿಯ ಮಮತೆಯನ್ನು ಪಡೆಯದೆ. ತಂದೆಯ ಮಾರ್ಗದರ್ಶನವನ್ನು ಪಡೆಯದೆ ಬೆಳೆದರು.

ಶಾರ್ಲೋಟಳ ಅಕ್ಕಂದಿರಾದ ಮೇರಿ ಮತ್ತು ಎಲಿಝಾಬೆತ್‌ರು ಶಾಲೆಗೆ ಹೋಗುವ ದಿನವೂ ಬಂದಿತು; ಆದರೆ ಇಬ್ಬರೂ ಶಾಲೆಗೆಂದು ಹೋದವರು ಪತಾತ್ತನೆ ಸಾವನ್ನು ಕಂಡರು. ಶಾಲೆಗೆ ಹೋದ ಕೆಲ-ದಿನಗಳಲ್ಲಿಯೇ ಅವರಿಬ್ಬರನ್ನೂ ಕ್ಷಯರೋಗ ಆಹುತಿ ತೆಗೆದುಕೊಂಡಿತ್ತು. ಶಾರ್ಲೋಟಳ ಬಾಳಿನಲ್ಲಿ ತಾಯಿಯ ದುರ್ಮರಣ ನಂಜನ್ನು ಬೆರೆಸಿತ್ತಾದರೂ,ಇದೀಗ, ಅಕ್ಕರೆಯ, ಓರಗೆಯ ಆತ್ಮೀಯ ಒಡನಾಡಿಗಳನ್ನು ಅಕಸ್ಮಾತ್ ಕಳೆದುಕೊಂಡ ಎಳೆಯ ಶಾರ್ಲೋಟಳ ಜೀವನದಲ್ಲಿ ಚಳಿಗಾಲ ಪ್ರಾರಂಭವಾಯಿತೆನ್ನಬಹುದು. ತಾಯಿ ಇಲ್ಲದ ತಬ್ಬಲಿಗಳಾದ ತಮ್ಮ-ತಂಗಿಯರಿಗೆ ಶಾರ್ಲೋಟಳೇ ತಾಯಿಯಾಗಬೇಕಾಯಿತು. ಇಂತಹ ಪರಿಸರದಲ್ಲಿ ಶಾರ್ಲೋಟ್ ಶಾಲೆಯನ್ನು ಸೇರುವುದಾದರೂ ಎಂತು ? ಆ ಮಾತಿಗೆ ಹಲವು ವರ್ಷ ಅವಳು ಕಾಯಬೇಕಾಯಿತು. ಶಾರ್ಲೋಟಳ ಚಿಕ್ಕಮ್ಮ ಅವರ ಮನೆಯಲ್ಲಿಯೇ ಇದ್ದುಕೊಂಡು, ತನ್ನ ಅಕ್ಕನ ಮಕ್ಕಳನ್ನು ಜೋಪಾನ ಮಾಡಿ, ಅವರಿಗೆ ಪಾಠಗಳನ್ನು ಹೇಳುತ್ತಿದ್ದಳು. ಆ ಬ್ರಾಂಟೆ ಮಕ್ಕಳ ಎಳೆಯ ದಿನಗಳಲ್ಲಿ ಬದಲಿರುತ್ತಿರಲಿಲ್ಲ. ನಿತ್ಯವೂ ಅದೇ ಹಾಡು: ಮನೆ ಕೆಲಸ, ಹೊಲಿಗೆ, ಓದು – ಬರೆಹ, ಮಾತು-ಕತೆ. ಮನೆಯೆದುರಿನಲ್ಲಿಯೇ ಅಂತವಿಲ್ಲದೆ ಹಾಯಾಗಿ ಹರಡಿದ ಹುಲ್ಲು ಮೈದಾನುಗಳಲ್ಲಿ ಅವರು ಅಂಡಲೆದದ್ದೇ ಅಲೆದದ್ದು; ದಿಕ್ಕಿಲ್ಲದ ಮಕ್ಕಳು ದಿಕ್ಕಿಲ್ಲದೆ ಅಲೆದರು, ದಿಕ್ಕಿಲ್ಲದೆ ಬೆಳೆದರು. ಆಡಲು ಬೇರೆ ಜೊತೆಗಾರರಿಲ್ಲದೆ, ಮನೆಯಲ್ಲಿ ತಾಯಿಯ ಪ್ರೇಮದ ವರವಹಸ್ತವನ್ನು ಕಾಣದೆ (ಎಷ್ಟೆಂದರೂ ಚಿಕ್ಕಮ್ಮ ಚಿಕ್ಕಮ್ಮನೇ !) ನಿಷ್ಠುರನೂ ವ್ಯಗ್ರಚಿತ್ತನೂ ಆದ ತಂದೆಯ ಸಹವಾಸದಲ್ಲಿ ಆ ಬಲಿಯುವ ಮಕ್ಕಳು ಅಂತರ್ಮುಖಿಗಳಾದುದು ಆಶ್ಚರ್ಯವಲ್ಲ ! ಹೊರಗಿನ ಜಗತ್ತಿನಲ್ಲಿ ಕಾಣದ ನನಸನ್ನು ಎಳೆಯರ ಕಲ್ಪನಾ ಸುಯ ಮನಸ್ಸು ಭವ್ಯ ಕನಸಾಗಿ ಮೂರ್ತಿಸಿಸುತ್ತಿತ್ತು ! ಅಂತವಿಲ್ಲದ ಹಸುರು ಹುಲ್ಲುಗಾವಲಿನ ಅಲೆದಾಟ ಅವರ ಭಾವನೆಯ ಹಕ್ಕಿಗೆ ರೆಕ್ಕೆ-ಯನ್ನೊದಗಿಸಿತು; ಆ ಎಳೆಯರ ಬಾಹ್ಯಜಗತ್ತು ಜಡವಾದಷ್ಟು ಅವರ

ಆಂತರ್ಯದ ಪ್ರಪಂಚ ಜೀವಂತವಾಗುತ್ತಿತ್ತು. ಅವರ ಬಾಹ್ಯದ ಸೃಷ್ಟಿ ಎಷ್ಟು ಬದಡಿಲ್ಲದೆ ಕಳೆಯಿಲ್ಲದೆ ಯಾಂತ್ರಿಕವಾಗಿತ್ತೊ, ಅವರ ಅಂತರಂಗದ ಆ ಕಲ್ಪನಾಸೃಷ್ಟಿ ಅಷ್ಟೇ ಭವ್ಯವೂ ವೈವಿಧ್ಯಮಯವೂ ಆಗಿರುತ್ತಿತ್ತು. ಹೀಗಿದ್ದಾಗಲೇ ಅವರ ಕಲ್ಪನೆಯ ವಿಲಾಸಕ್ಕೆ ಹೊಸ ಕಳೆ ಬಂದಿತ್ತು.

ಒಂದು ದಿನ ಶಾರ್ಲೋಟಳ ತಂದೆ ಅವಳ ತಮ್ಮ ಬ್ರೆನ್‌ವೆಲ್‌ನಿಗೆ, ಸೈನಿಕರಂತೆ ಕಾಣುವ ೧೨ ಗೊಂಬೆಗಳನ್ನು ತಂದುಕೊಟ್ಟರು. ಆ ಗೊಂಬೆಗಳನ್ನು ಕಂಡು ಮಕ್ಕಳೆಲ್ಲರೂ ಆನಂದದಿಂದ ಕುಣಿದಾಡಿದರು; ತಮ್ಮ ಗೊಂಬೆಗಳಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟರು. ಶಾರ್ಲೋಟಳು 'ಡ್ಯೂಕ್ ಆಫ್ ವೆಲ್ಲಿಂಗ್ಟನ್' ಎಂಬ ವೀರನ ಕತೆಗಳನ್ನು ಕೇಳಿ ತುಂಬ ಮೆಚ್ಚಿದ್ದಳು. ಆದುದರಿಂದ ತನ್ನ ಗೊಂಬೆಯನ್ನು 'ಡ್ಯೂಕ್ ಆಫ್ ವೆಲಿಂಗ್ಟನ್' ಎಂದು ಕರೆದಳು. ಈ ಎಲ್ಲ ಗೊಂಬೆಸೈನಿಕರು ಆಳುವ ರಾಜ್ಯವೊಂದು ಇವೆ ಎಂದು ಕಲ್ಪಿಸಿದರು; ಅವರು ಯುದ್ಧಗಳನ್ನು ಆಡಿದರೆಂದು ಕಲ್ಪಿಸುತ್ತಿದ್ದರು. ಹಾಗೆಲ್ಲ ಕಲ್ಪಿಸಿ ಕಟ್ಟಿದ ಕತೆಗಳನ್ನು ತಮ್ಮ ಚಿಕ್ಕ ದಿನಚರಿಯಲ್ಲಿ ಎಲ್ಲರೂ ಬರೆದು ಇಡುತ್ತಿದ್ದರು. "Tales of the Islanders." "Angrian Stories," ಮತ್ತು "Grondal Stories" ಮುಂತಾದ ಬರೆಹಗಳು ಈ ಕಾಲಕ್ಕೆ ಹುಟ್ಟಿದುವು. ಬ್ರಾಂಟೆ ಅಕ್ಕ-ತಂಗಿಯಂದಿರು ತಮ್ಮ ಏಕಾಂತದ ಜೀವನದಲ್ಲಿ ಪುಟ್ಟ ಪುಟ್ಟ ನೋಟುಬುಕ್ಕುಗಳಲ್ಲಿ ತೀರ ಸಣ್ಣ ಸಣ್ಣ ಅಕ್ಷರಗಳಲ್ಲಿ ಬರೆದಿಡುತ್ತಿದ್ದರು. ಹಲವು ಸಲ ತಮ್ಮ ಈ ಕಾಲ್ಪನಿಕ ವ್ಯಕ್ತಿಗಳನ್ನೂ, ರಾಜ್ಯಗಳನ್ನೂ ಕುರಿತು ಕವಿತೆಗಳನ್ನು ಬರೆಯುತ್ತಿದ್ದರು. ಸೊಗಸಿಲ್ಲದ, ಸ್ಫೂರ್ತಿಯ ಸಂಸರ್ಕವೂ ಇಲ್ಲದ ಅವರ ಯಾಂತ್ರಿಕವಾದ ದೈನಂದಿನ ಜೀವನದಲ್ಲಿ, ಈ ಕಲ್ಪನಾಸಾಮ್ರಾಜ್ಯವೇ ಒಂದು ನಂದನವಾಗಿತ್ತು; ಅಲ್ಲಿ ಕಾಲವನ್ನು ಕಳೆಯುವುದೇ ಅವರಿಗೆ ಪರಮ ಸುಖವಾಗಿತ್ತು.

ಹಲವು ದಿನಗಳ ನಂತರ ಶಾರ್ಲೋಟ್ ಒಬ್ಬಳೇ 'ರೋ ಹೆಡ್' ಎಂಬ ಹೆಣ್ಣುಮಕ್ಕಳ ಶಾಲೆಗೆ ಹೋದಳು. ಈ ಶಾಲೆಯಲ್ಲಿ ಹಲವಾರು ಹುಡುಗಿಯರು ಅಲ್ಲಿಯೇ ಇದ್ದುಕೊಂಡು ಮಿಸ್ ವೂಲರ್ ಎಂಬವಳಿಂದ ಶಿಕ್ಷಣವನ್ನು ಪಡೆಯುತ್ತಿದ್ದರು. ಶಾರ್ಲೋಟಳು ಈ ಶಾಲೆಯನ್ನು ಸೇರಿದಾಗ, ಉಳಿದ ಹುಡುಗಿಯರಿಗಿಂತ ಆಕೆ ಹಿರಿಯಳು. ಅದಲ್ಲದೆ ವೇಷಭೂಷಣದಲ್ಲಿಯೂ ಅವಳು ತೀರ ವಿಚಿತ್ರವಾಗಿ ಕಾಣುತ್ತಿದ್ದಳು. ಶಾಲೆಯ ಎಲ್ಲ ಹುಡುಗಿಯರೊಡನೆ ಕೂಡಿಕೊಂಡು ಹೋಗುವುದು ಅವಳಿಗೆ ಕಷ್ಟವಾಗಿತ್ತು. ಆದರೂ ಅವಳು ತನ್ನ ಸ್ವಭಾವ ಸಹಜವಾದ ಸ್ನೇಹಶೀಲತೆಯಿಂದ ಎಲ್ಲರ ಪ್ರೀತಿಗೆ ಪಾತ್ರಳಾದಳು. ಆದಲ್ಲದೆ ರಾತ್ರಿ ಎಲ್ಲ ಕಾರ್ಯಕ್ರಮವೂ ಮುಗಿದಮೇಲೆ, ತನ್ನ ಸುತ್ತಲೂ ಚಿಕ್ಕ ಹುಡುಗಿಯರನ್ನು ಕೂಳ್ಳಿರಿಸಿಕೊಂಡು, ಕತೆಗಳನ್ನು ಹೇಳಿ ಅವರನ್ನೆಲ್ಲ ಮುಗ್ಧಗೊಳಿಸುತ್ತಿದ್ದಳು. ಹೀಗಾಗಿ ಅವಳ ಜೀವನವು ಸುಖದಲ್ಲಿಯೇ ಸಾಗಿತ್ತು. 'ಎಲನ್' ಮತ್ತು 'ಮೇರಿ' ಎಂಬ ಹುಡುಗಿಯರೊಡನೆ ಅವಳಿಗೆ ವಿಶೇಷ ಸ್ನೇಹವು ಬೆಳೆಯಿತು; ಈ ಸ್ನೇಹವು ಅವಳು ಸಾಯುವವರೆಗೂ ಬಾಳಿತು.

'ರೋ ಹೆಡ್' ನಲ್ಲಿ ಶಿಕ್ಷಣವನ್ನು ಮುಗಿಸಿದನಂತರ, ಅಲ್ಲಿಯೇ ಶಿಕ್ಷಕಿಯಾಗಿ, ಅವಳು ೧೮೩೫ ರಲ್ಲಿ ತನ್ನ ತಂಗಿಯಾದ ಎಮಿಲಿಯೊಡನೆ ಮರಳಿದಳು. ಆದರೆ ಅಲ್ಲಿಯ ವಾತಾವರಣವು ಈ ಸಲ ಅವಳಿಗೆ ಹಿಡಿಸಲಿಲ್ಲ. ಅವಳಿಗೆ ಆನಾರೋಗ್ಯವಾಯಿತು, ತಂಗಿಯ ಅನಾರೋಗ್ಯವೂ ಹೆಚ್ಚಿತು. ಮನೆಯ ಮತ್ತು ಸಹೋದರಿಯರ ನೆನಪು ಮತ್ತೆ ಮತ್ತೆ ಆಗುತ್ತಿತ್ತು. ಅವಳ ಮನೆಯ ಮುಂದೆ ದಿಕ್ಕುಗಳ ನಿರ್ಬಂಧವಿಲ್ಲದೆ ಪಸರಿಸಿದ ಹಾಳು ಹುಲ್ಲು-ಮೈದಾನಗಳು, ಅಲ್ಲಿಯ ಸ್ವಚ್ಛಂದವಾದ ತಿರುಗಾಟ ಇವುಗಳ ನೆನಪು ಶಾರ್ಲೋಟಳ ಮನಸ್ಸನ್ನು ಹಿಂಡುತ್ತಿದ್ದವು. ಅವಳ ಜೀವದ ಗೆಳತಿಯಾದ ಎಲನ್‌ಳೂ ಈಗ ಅವಳಿಂದ ದೂರವಿದ್ದಂತೆ ತೋರಿತು.

ಆದುದರಿಂದ ಈ ಕೆಲಸವನ್ನು ಬಿಟ್ಟು ಅವಳು ಮನೆಗೆ ಹಿಂತಿರುಗಿದಳು. ಶಿಕ್ಷಕವೃತ್ತಿಯು ತನಗೆ ಸರಿಹೋಗುವುದಿಲ್ಲವೆಂದು ನಿರ್ಧರಿಸಿ, ಅವಳು ಸಿಜವಿಕ್ ಎಂಬವರ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಕೆಲಸವನ್ನು ಸ್ವೀಕರಿಸಿದಳು; ಆದರೆ ಇಲ್ಲಿಯೂ ಅವಳ ಪಾಲಿಗೆ ನಿರಾಶೆಯೇ ಕಾಯ್ದಿತ್ತು. ಚಿಕ್ಕಮಕ್ಕಳನ್ನು ಪ್ರೀತಿಯಿಂದ ಕಂಡು ಅವರಿಗೆ ಸರಿಹೋಗುವ ಹಾಗೆ ನಡೆದುಕೊಳ್ಳುವುದು, ಏಕಾಕಿನಿಯಾದ ಶಾರ್ಲೋಟಳಿಗೆ ಸಾಧ್ಯವಾಗಲಿಲ್ಲ. ಸಿಜವಿಕ್ ದಂಪತಿಗಳಿಗೆ ಶರಣುಹೊಡೆದು ಅವಳು 'ವ್ಹೈಟ್' ದಂಪತಿಗಳ ಮನೆಯಲ್ಲಿ ಅದೇ ಕೆಲಸಕ್ಕಾಗಿ ಹೋದಳು. ಆದರೆ ಅಲ್ಲಿಯೂ ಹೊಂದಿಕೊಂಡು ಹೋಗುವುದು ತುಂಬ ಕಷ್ಟವೆನಿಸಿದ್ದರಿಂದ, ಶಾರ್ಲೋಟಳು ಆ ಕೆಲಸವನ್ನೂ ಬಿಟ್ಟುಕೊಟ್ಟಳು.

ಎಲ್ಲಕಡೆಗೂ ಶಾರ್ಲೋಟಳ ಬಾಳನ್ನು ನಿರಾಶೆಯೇ ಕನಿಯುತು. ಆದರೆ ತನ್ನ ಮನೆಯವರನ್ನು ಮುಂಚೆ ತಲಬೇಕೆಂಬ ಹವ್ಯಾಸ, ಮುನ್ನುಗ್ಗಬೇಕೆಂಬ ಛಲ ಅವಳನ್ನು ಪ್ರಗತಿಪಥದಲ್ಲಿ ಮುನ್ನುಗ್ಗಿಸಿದುವು. ತನ್ನದೇ ಆದ ಶಾಲೆಯೊಂದನ್ನು ಸ್ಥಾಪಿಸಬೇಕೆಂದು ಬಗೆದಳು. ಅದನ್ನು ಸುತ್ತು ಮುತ್ತು ಹಲವಾರು ಶಾಲೆಗಳು ಇರುವಾಗ ತನ್ನ ಶಾಲೆ ಬಾಳಬೇಕಾದರೆ, ಅದರಲ್ಲಿ ಏನಾದರೂ ವಿಶೇಷ ಗುಣಗಳಿರುವುದು ಅಗತ್ಯವೆನಿಸಿ, ಫ್ರೆಂಚ್ ಭಾಷೆಯನ್ನು ತಾನು ಕಲಿಸಬಲ್ಲೆನಾದರೆ ಒಳಿತಾಗಬಹುದೆಂದು, ಬೆಲ್ಜಿಯಂ ದೇಶದ ಬ್ರುಸೆಲ್ಸ್‌ಗೆ—ಫ್ರೆಂಚ್ ಭಾಷೆಯ ಅಧ್ಯಯನಕ್ಕೆ— ಹೋಗಲೆಳಸಿದಳು.

೧೮೪೩ ರಲ್ಲಿ ತನ್ನ ತಂಗಿಯಾದ ಎಮಿಲಿಯೊಡನೆ ಶಾರ್ಲೋಟಳು ಬ್ರುಸೆಲ್ಸಿಗೆ ಬಂದಳು. ಶ್ರೀ. ಹಾಗೂ ಶ್ರೀಮತಿ ಹೆಗೆರ್ ಎಂಬವರು 'ಲಾ ಪೆನ್‌ಶನೆಟ್' ಎಂಬ ಹೆಣ್ಣುಮಕ್ಕಳ ಶಾಲೆಯೊಂದನ್ನು ತೆಗೆದಿದ್ದರು. ಅಲ್ಲಿ ಸುಮಾರು ೧೦೦ ಹುಡುಗಿಯರು ಇದ್ದು, ಶಿಕ್ಷಣವನ್ನು ಪಡೆಯುತ್ತಿದ್ದರು. ಬ್ರುಸೆಲ್ಸ್ ಊರಿನ ಮತ್ತು ಅಲ್ಲಿಯ ಶಾಲೆಯ ವಾತಾವರಣವು ಅವರಿಬ್ಬರಿಗೂ ಎಲ್ಲ ವೃಷ್ಟಿಯಿಂದಲೂ ಹೊಸತಾಗಿತ್ತು. ಬ್ರುಸೆಲ್ಸ್‌ನ ಹುಡುಗಿಯರು ಹಾಗೆ ಶಾರ್ಲೋಟ್ ಮತ್ತು ಅವಳ ತಂಗಿ ನಡವಳಿಕೆಯ ಸಂಪರ್ಕದಲ್ಲಿ ಬಂದಿರಲಿಲ್ಲ. ಅವರ ಹಳ್ಳಿಯ ನಾದರಿಯ ವೇಷಭೂಷಣ, ಅಲ್ಲಿ ಎಲ್ಲರಿಗೂ ಅಪರಿಚಿತವಾದ ಅವರ ಇಂಗ್ಲಿಷ್ ಮಾತುಗಳು— ಇವುಗಳಿಂದ ಅವರು

ಶಾಲೆಯ ವಾತಾವರಣದಲ್ಲಿ ಎದ್ದುಕಾಣಿಸುತ್ತಿದ್ದರು. ಅವರಿಬ್ಬರೂ ತುಂಬ ಗಂಭೀರರಾದುದರಿಂದಲೂ, ಯಾರೊಡನೆಯೂ ಹೆಚ್ಚು ಮಾತನಾಡದುದರಿಂದಲೂ ಅವರಿಬ್ಬರೂ ತಮ್ಮ ಜೀವನವನ್ನು ಮೌನದಲ್ಲಿಯೇ ಹೆಚ್ಚಾಗಿ ಕಳೆಯಬೇಕಾಗುತ್ತಿತ್ತು. ಹೀಗಿದ್ದರೂ ಶಾರ್ಲೋಟಳು ಹಿಂಜರಿಯಲಿಲ್ಲ. ಜ್ಞಾನವನ್ನು ಸಂಪಾದಿಸಬೇಕೆಂಬ ಅವಳ ಲವಲವಿಕೆಯು ತೀರ ಉತ್ಕಟವಾದುದರಿಂದ, ಅವಳು ಹೇಗಾದರೂ, ಹೇಗಿದ್ದರೂ ಅಲ್ಲಿ ಇದ್ದು ಅಧ್ಯಯನ ಮುಂದುವರಿಸಿದಳು. ಶ್ರೀ. ಹಾಗೂ ಶ್ರೀಮತಿ ಹೆಗೆರ್‌ರೂ ಅವಳನ್ನು ತುಂಬ ಗೌರವದಿಂದಲೂ ಆತ್ಮೀಯತೆಯಿಂದಲೂ ಕಾಣುತ್ತಿದ್ದರು. ಅವರ ಸ್ಫೂರ್ತಿ ಮಾರ್ಗದರ್ಶನಗಳಿಂದಾಗಿ ಶಾರ್ಲೋಟಳು ಅಲ್ಲಿ ಒಳ್ಳೆಯ ಹೆಸರನ್ನು ಗಳಿಸಿದಳು.

ಆದರೆ ಶಾರ್ಲೋಟಳ ಆನಂದವು ಬಹಳ ದಿನಗಳ ವರೆಗೆ ಉಳಿಯಲಿಲ್ಲ. ಅವಳ ಚಿಕ್ಕಮ್ಮನಿಗೆ ಅನಾರೋಗ್ಯವಾಗಿದೆಯೆಂದೂ, ತಂದೆಯ ಪ್ರಕೃತಿಯೂ ಕೆಟ್ಟಿದೆಯೆಂದೂ ಇಂಗ್ಲಂಡಿನಿಂದ ಬಂದ ಸುದ್ದಿ ಅವಳನ್ನು ಅಲ್ಲಾಡಿಸಿತು. ಅವಳು ಓಡುತ್ತ ಇಂಗ್ಲಂಡಿಗೆ ಮರಳಬೇಕಾಯಿತು. ಆದರೆ ಅಲ್ಲಿ ಹಲವು ದಿನಗಳ ವಾಸದ ನಂತರ ಇಂಗ್ಲಿಷ್ ಭಾಷೆಯ ಶಿಕ್ಷಕಿಯಾಗಿ ಬ್ರಸೆಲ್ಸಿನ ಶಾಲೆಗೆ ಅವಳು ಮರಳಿ ಬಂದಳು. ಆದರೆ ಈ ಸಲ ಅವಳು ಅಲ್ಲಿ ಅಷ್ಟು ಸುಖಿಯಾಗಿರಲಿಲ್ಲ. ಶ್ರೀಮತಿ ಹೆಗೆರಳು ಅವಳನ್ನು ಮೊದಲಿನಂತೆ ಆತ್ಮೀಯತೆಯಿಂದ ಕಾಣಲಿಲ್ಲ. ಅಲ್ಲಿಯ ಏಕಾಂತ ಜೀವನವೂ ಅವಳಿಗೆ ಹಿಡಿಸದಾದುದರಿಂದ, ಅವಳು ಇಂಗ್ಲಂಡಿಗೆ ಮತ್ತೆ ಮರಳಿದಳು.

ಇಳಳ ರಲ್ಲಿ ಇಂಗ್ಲಂಡಿಗೆ ಬಂದವಳೇ ಶಾಲೆಯನ್ನು ತೆರೆಯುವ ಕೆಲಸವನ್ನು ಕೈಕೊಂಡಳು. ತನ್ನ ಶಾಲೆಯ ವಿಷಯವಾಗಿ ಪತ್ರಿಕೆಗಳಲ್ಲಿ ಜಾಹೀರಾತನ್ನು ಪ್ರಕಟಿಸಿ, ಎಲ್ಲರಿಗೂ ತಮ್ಮ ಮಕ್ಕಳನ್ನು ಕಳುಹಿಸಲು ಕೇಳಿಕೊಂಡಳು. ಆದರೆ ಯಾರೂ ವಿದ್ಯಾರ್ಥಿನಿಯರನ್ನು ಕಳುಹಿಸಲು ಮುಂದೆ ಬರಲೇ ಇಲ್ಲ. ಜೀವನದಲ್ಲಿಯ ಒಂದು ಅತಿ ದೊಡ್ಡ ಆಕಾಂಕ್ಷೆಯು ನಿಷ್ಫಲವಾದುದನ್ನು ಕಂಡು ಶಾರ್ಲೋಟಳಿಗೆ ಆದ ನಿರಾಶೆ ಅಷ್ಟಿಷ್ಟಲ್ಲ. ಎಲ್ಲಿಯೂ ಅವಳಿಗೆ ದಿಕ್ಕೇ ತೋಚಲಿಲ್ಲ. ಶ್ರೀ. ಹೆಗೆರ್ ಅವರಿಂದಾದರೂ ಸಹಾಯ ದೊರೆಯಬಹುದೇನೋ ಎಂದೆನಿಸಿ ಅವರತ್ತ ಮುಖ ಹೊರಳಿಸಿದಳು. ಶ್ರೀ. ಹೆಗೆರರಲ್ಲಿ ಅವಳಿಗೆ ತುಂಬ ಆದರ - ಗೌರವಗಳಿದ್ದುವು. ಪಾಂಡಿತ್ಯವೂ, ಯೋಗ್ಯತೆಯೂ ಉಳ್ಳ ಹೆಗೆರ್‌ರಲ್ಲಿ ಶಾರ್ಲೋಟಳ ಗೌರವವೂ, ಪ್ರೀತಿಯೂ ಹುಟ್ಟಿದುವು. ಅವಳು ತನ್ನ ಜೀವನದ ಈ ಕಾಳರಾತ್ರಿಯಲ್ಲಿ ಶ್ರೀ. ಹೆಗೆರರನ್ನು ನೆನೆದು, ಅವರಿಗೆ ಹೃದಯದ್ರಾವಕವಾದ ಮೂರು ಪತ್ರಗಳನ್ನು ಬರೆದಳು. ಆದರೆ ಅವಳಿಗೆ ಒಂದೂ ಉತ್ತರವೇ ಬಾರದುದರಿಂದ, ಶಾರ್ಲೋಟಳ ನಿರಾಶೆಯು ಹತ್ತು ಪಟ್ಟಾಯಿತು. ಇತ್ತ ಮನೆಯಲ್ಲಿಯೂ ಅವಳಿಗೆ ನಿರಾಶೆಯೇ ಕಂಡಿತು. ಅವಳ ನಚ್ಚಿನ ತಮ್ಮನಾದ ಬ್ರೆನ ವೆಲ್ಲನ ಭವಿಷ್ಯದ ಬಗ್ಗೆ ಅವಳು ರಮಣೀಯವಾದ ಕನಸುಗಳನ್ನು ಕಟ್ಟಿದ್ದಳು; ಆದರೆ ದುರ್ದೈವದಿಂದ ಅವನು ಅಧೋಗತಿಯ ಪಥವನ್ನು ಹಿಡಿದಿದ್ದನ್ನು ಕಂಡಾಗ, ಶಾರ್ಲೋಟಳಿಗೆ ಅವಳ ಕರುಳನ್ನೇ ಹಿಡಿದುಂತಾಯಿತು. ಅವಳ ವಯಸ್ಸಿಗೆ ಸಹಜ ಮತ್ತು ಸ್ವಾಭಾವಿಕವಾದ ಪ್ರೀತಿ-ಪ್ರಣಯಗಳೆಡೆಗೆ ಅವಳ ಮನಸ್ಸು ಹರಿಯಿತು. ಆದರೆ ಅಲ್ಲಿಯೂ ಅವಳಿಗೆ ಉಜ್ವಲ ಭವಿಷ್ಯವು ಕಾಣಲಿಲ್ಲ. ತನ್ನ ಗೆಳತಿಯರಾದ ಎಲನ್ ಮತ್ತು ಮೇರಿ ಇವರಿಗೆ ಪತ್ರಗಳನ್ನು ಬರೆಯುವುದೊಂದೇ ಇಗಳಿಗೆ ಸಂತೋಷವನ್ನು ಕೊಡುತ್ತಿತ್ತು. ಆ ಕಾಲದ ತನ್ನ ಜೀವನದ ಬೇಸರವನ್ನೆಲ್ಲ ಅವಳು ತನ್ನ ಗೆಳತಿಗೆ ಹೀಗೆ ಬರೆದು ತಿಳಿಸಿದಳು : "ನನ್ನ ಜೀವನದಲ್ಲಿ ಯಾವ ರೀತಿಯಿಂದಲೂ ಪ್ರಗತಿಯೇ ಇಲ್ಲ. ಒಂದು ದಿನದಂತೆಯೇ ಮತ್ತೊಂದು ದಿನವೂ ಜಾರುತ್ತದೆ. ರವಿವಾರ ಮತ್ತು ರೊಟ್ಟಿಯನ್ನು ತಯಾರಿಸುವ ದಿನವಾದ ಶನಿವಾರ ಇವುಗಳು ಮಾತ್ರ ಬೇರೆಯಾಗಿರುತ್ತವೆ. ಜೀವನವು ಓಡುತ್ತಿದೆ. ಸದ್ಯವೇ ನನಗೆ ಮೂವತ್ತು ವರುಷಗಳಾಗುತ್ತವೆ. ಆದರೂ ನಾನು ಇದುವರೆಗೆ ಜೀವನದಲ್ಲಿ ಏನನ್ನೂ ಸಾಧಿಸಿಲ್ಲ. ನನ್ನ ಹಿಂದಿನ ಮತ್ತು ಮುಂದಿನ ಜೀವನವನ್ನು ಕುರಿತು ವಿಚಾರ ಮಾಡಿದಾಗ, ನನಗೆ ತುಂಬ ಚಿಂತೆಯಾಗುತ್ತದೆ." ಹತಾಶಳಾಗಿ ಅವಳು ತನ್ನ ದಿನಚರಿಯಲ್ಲಿ ಕವಿತೆಯೊಂದನ್ನು ಬರೆದಳು :

"If life must be so full of care
then call me soon to thee
or give me strength enough to bear
My load of misery."

(ದೇವರೆ, ಜೀವನವು ಇಷ್ಟು ಚಿಂತಾಭರಿತವಾಗಿದ್ದರೆ ನನ್ನನ್ನು ನಿನ್ನ ಬಳಿ ಬೇಗನೆ ಕರೆಯಿಸಿಕೊ, ಇರದಿದ್ದರೆ ನನಗೆ ಕಷ್ಟವನ್ನು ಸಹಿಸಲು ಶಕ್ತಿಯನ್ನು ಕೊಡು.")

ಎಲ್ಲ ಕಡೆಗೂ ವಿಫಲತೆಯನ್ನೇ ಕಂಡಾಗ, ಮುಂದೇನು ಮಾಡಬೇಕೆಂಬ ಚಿಂತೆಯು ಅವಳನ್ನು ಕಾಡುತ್ತಲೇ ಇತ್ತು. ಒಂದು ದಿನ ಎಮಿಲಿಯ ಕವನಗಳ ಹಸ್ತಪ್ರತಿಯೊಂದು ಅವಳಿಗೆ ಸಿಕ್ಕಿತು. ಅದನ್ನು ಕಂಡು ಶಾರ್ಲೋಟಳಿಗೆ ಆನಂದವೂ, ಆಶ್ಚರ್ಯವೂ ಆಯಿತು. ಅವಳ ಬೇಸರ ತುಂಬಿದ ಜೀವನದಲ್ಲಿಯೂ ಅವಳಿಗೆ ಆಸೆ ಕಂಡಿತು. 'ಈ ಕವನಗಳನ್ನು ಏಕೆ ಪುಸ್ತಕರೂಪದಲ್ಲಿ ಪ್ರಸಿದ್ಧಿಸಬಾರದು?' ಎಂಬ ವಿಚಾರವು ಅವಳಿಗೆ ಹೊಳೆಯಿತು. ಕೂಡಲೇ ಸಹೋದರಿಯರೆಲ್ಲ ಸೇರಿ, ತಮ್ಮ ಮೂವರ ಕವನಗಳನ್ನು ಪ್ರಕಾಶಕರಿಗೆ ಕಳುಹಲು ಸಿದ್ಧರಾದರು. ಆ ಕಾಲದಲ್ಲಿ ಮಹಿಳೆಯರು ಲೇಖನಗಳನ್ನು ಬರೆಯುವ ಸಾಹಸಕ್ಕೆ ಹೋಗುತ್ತಿರಲಿಲ್ಲ. ಆದುದರಿಂದ ಹೆಂಗಸರು ಬರೆದ ಪುಸ್ತಕ ಎಂದರೆ ಜನರು ಏನು ತಿಳಿದುಕೊಂಡಾರು– ಎಂದೆಣಿಸಿ, ಆ ಮೂವರೂ ಸಹೋದರಿಯರು ಗಂಡುಸರ ಹೆಸರನ್ನು ಇಟ್ಟುಕೊಂಡರು. ಶಾರ್ಲೋಟಳು 'ಕರ್ರರ್ ಬೆಲ್' (Currer Bell) ಎಂದೂ, ಎಮಿಲಿಯು 'ಎಲಿಸ್ ಬೆಲ್' (Ellis Bell) ಎಂದೂ, ಎನಳು 'ಏಕ್ಟನ್ ಬೆಲ್' (Acton Bell) ಎಂದೂ ಹೆಸರುಗಳನ್ನು ಇಟ್ಟುಕೊಂಡರು. ಅವರ ಕವನಗಳು ಪ್ರಕಾಶಿಸಲ್ಪಟ್ಟವು. ಆದರೆ ಆ ಪುಸ್ತಕದ ಎರಡೇ ಎರಡು ಪ್ರತಿಗಳು ಮಾರಾಟವಾದುವು. ಅಷ್ಟು ಪ್ರಸಿದ್ಧಿಯನ್ನು ಆ ಪುಸ್ತಕವು ಪಡೆಯಿತು. ಬೇರೆ ಬೇರೆ ಪತ್ರಿಕೆಗಳಲ್ಲಿ ಆ ಪುಸ್ತಕದ ಬಗೆಗೆ ಕಟುವಾದ ವಿಮರ್ಶೆಗಳೂ ಬಂದುವು. 'ಎಲಿಸ್-ಬೆಲ್' ರವರ ಕವನಗಳು ಬೆಲೆಯುಳ್ಳವು ಎಂದು ಎಲ್ಲರೂ ಅಭಿಪ್ರಾಯ-

ಪಟ್ಟರು. ಈ ಪ್ರಕಾಶನದ ಮೂಲಕ ಶಾರ್ಲೋಟಳಿಗೆ ನಿರಾಶೆಯಾದರೂ, ಅವಳ ಸುಪ್ತ ಮಹತ್ತ್ವಾಕಾಂಕ್ಷೆಯು ಮತ್ತೆ ಪ್ರಜ್ವಲಿತವಾಯಿತು.

ಶಾರ್ಲೋಟಳು ಗಲಳಲ ರಲ್ಲಿ 'ಜೇನ್ ಆಯರ್' (Jane Eyre) ಎಂಬ ಕಾದಂಬರಿಯನ್ನು ಪ್ರಕಟಿಸಿದಾಗ, ಆಕೆಯ ಗ್ರಹಗತಿಯೇ ಬದಲಾಯಿತು. ರಾತ್ರಿಹೋಗಿ ಬೆಳಗಾಗುವುದರಲ್ಲಿ ಆ ಕಾದಂಬರಿ, ಶಾರ್ಲೋಟಳನ್ನು ಇಂಗ್ಲಂಡಿನಲ್ಲೆಲ್ಲ ಪ್ರಸಿದ್ಧಳನ್ನಾಗಿ ಮಾಡಿತ್ತು. ಆ ಕಾದಂಬರಿಯನ್ನು ಓದಿ ಆನಂದಪಟ್ಟವರೆಲ್ಲ ಆ ಕಾದಂಬರಿಕಾರರ ವಿಷಯವಾಗಿ ತರ್ಕಿಸತೊಡಗಿದರು. ಕಾದಂಬರಿಯನ್ನು ಬರೆದವರು ಹೆಂಗುಸೋ ಗಂಡುಸೋ ಎಂಬುದೂ ಸ್ಪಷ್ಟವಾಗಿರಲಿಲ್ಲ. ಕಾದಂಬರಿಯು ಲೋಕಪ್ರಿಯವಾಗಿ ಅದರಿಂದ ಸ್ವಲ್ಪ ಹಣವು ಶಾರ್ಲೋಟಳಿಗೆ ದೊರೆಯಿತು. 'ಜೇನ್ ಆಯರ್' ಒಂದು ಬಗೆಯಿಂದ ಶಾರ್ಲೋಟಳ ಆತ್ಮಕಥೆ. ಆ ಲೇಖಿಕೆಯಂತೆಯೇ ಮಧ್ಯಮವರ್ಗದಲ್ಲಿ ಹುಟ್ಟಿ ಬೆಳೆದ ಜೇನಳು, ಆ ಕಾಲದ ಇಂಗ್ಲೀಷ್ ಸಾಹಿತ್ಯದಲ್ಲಿಯೇ ಒಂದು ರೀತಿಯ ಹೊಸನಮೂನೆಯ ಕಥಾನಾಯಕಿ. ಅವಳ ಜೀವನದ ಕತೆ ವಾಸ್ತವವಾದ ಕತೆ. ಅಲ್ಲಿ ಅತಿಶಯೋಕ್ತಿಗೆ, ಅದ್ಭುತಕ್ಕೆ ಸ್ಥಾನವಿಲ್ಲ. ಜೇನಳ ಪಾತ್ರವು ಶಾರ್ಲೋಟಳ ಕಟು ಅನುಭವಗಳ ಮೂರ್ತಿಯೇ ಆದುದರಿಂದ—ಜೀವಂತವಾಗಿದೆ, ಜೀವಕಳೆಯಿಂದ ತುಂಬಿದೆ. ಕತೆಯಾವುದೂ ಸರಳವಾದದ್ದು. ಜೇನಳು ದಾದಿ (governese) ಆಗಿ ಬೇರೆ ಬೇರೆ ಕಡೆಗೆ ಕೆಲಸವನ್ನು ಮಾಡುತ್ತಾಳೆ: ರಾಚೆಸ್ಟರ್ ಎಂಬ ಶ್ರೀಮಂತ ಮನುಷ್ಯನ ಮನೆಯಲ್ಲಿ ಕೆಲಸ ಮಾಡುವಾಗ, ಅವನೊಡನೆ ಪ್ರಣಯವು ಬೆಳೆದು ಅವನನ್ನು ಮದುವೆಯಾಗುತ್ತಾಳೆ. ಈ ಕಾದಂಬರಿಯು ಇಂದಿಗೂ ಲೋಕಪ್ರಿಯವಾಗಿದೆ.

ಇದೇ ಸಮಯಕ್ಕೆ ಎಮಿಲಿಯು 'The Wuthering Heights' ಮತ್ತು ಎನಳ 'The Tenant of wildfell Hall' ಎಂಬ ಕಾದಂಬರಿಗಳು ಪ್ರಸಿದ್ಧವಾದುವು. ಈ ಪುಸ್ತಕಗಳನ್ನು ಪ್ರಕಟಿಸಿದ ಪ್ರಕಾಶಕನಿಗೆ, ಇವೆಲ್ಲ ಕಾದಂಬರಿಗಳೂ ಒಬ್ಬನೇ ಲೇಖಕನ ಬರೆಪಣಿಗೆಗಳು ಎಂಬ ಸಂಶಯವು ಪ್ರಕಾಶಕರಿಗೆ ಬಂದಿದೆ ಎಂದು ಶಾರ್ಲೋಟಳಿಗೆ ತಿಳಿದಾಗ, ಶಾರ್ಲೋಟಳು ಲಂಡನ್ನಿಗೆ ಪ್ರಕಾಶಕರನ್ನು ಕಾಣಲು ಹೋದಳು. ಪ್ರಕಾಶಕರಾದ ಸ್ಮಿಥ್ ಎಂಬವರನ್ನು ಕಂಡು ಅವರು 'ಕರ್ರರ್ ಬೆಲ್' ರಿಗೆ ಬರೆದ ಪತ್ರವನ್ನು ತೋರಿಸಿದಾಗ, 'ಇದು ನಿಮಗೆ ಹೇಗೆ ಸಿಕ್ಕಿತು?' ಎಂದು ಅವರು ಆಶ್ಚರ್ಯದಿಂದ ಶಾರ್ಲೋಟಳನ್ನು ಕೇಳಿದಾಗ, ಅವಳು ತನ್ನ ಗುಪ್ತನಾಮದ ನಿಜವಾದ ಸಂಗತಿಯನ್ನು ತಿಳಿಸಿದಳು. ಶಾರ್ಲೋಟಳಿಗೆ ಮೊದಲನೆಯ ಬಾರಿ ಲಂಡನಿನ ಸಮಾಜದ ಪರಿಚಯವು ಆಯಿತು.

ದಿನಗಳು ಜಾರಿದ ಹಾಗೆ ಶಾರ್ಲೋಟಳ ಕೀರ್ತಿಯು ಹಬ್ಬತೊಡಗಿತು. ಅವಳ ಮನಸ್ಸು ಈಗ ಹೆಚ್ಚು ನೆಮ್ಮದಿಯನ್ನು ಪಡೆದಿತ್ತು. ಸಮಾಜದಲ್ಲಿ ಅವಳಿಗೆ ಈಗ ಒಂದು ಗಣ್ಯವಾದ ಸ್ಥಾನವು ದೊರೆಕಿತ್ತು. ಆದರೆ ದುರ್ವಿಧಿಯು ಶಾರ್ಲೋಟಳ ಬೆನ್ನ ಹಿಂದೆ ಅವಳ ಜೀವನದ ಉದ್ದವೂ ಓಡುತ್ತ ಬರುತ್ತಲೇ ಇತ್ತು. ಈಗಲೂ ಅದು ಅವಳನ್ನು ಬಿಡಲಿಲ್ಲ. ಅವಳ ಪ್ರೀತಿಯ ತಮ್ಮನಾದ ಬ್ರೆನ್‌ವೆಲ್‌ನು ನೈತಿಕ ಅಧೋಗತಿಯನ್ನು ಹೊಂದಿ ವಿಪನ್ನಾವಸ್ಥೆಯಲ್ಲಿಯೆ ಮೃತನಾದನು. ಅವನ ಮರಣದಿಂದಾದ ಅಪಾರವಾದ ದುಃಖವನ್ನು ಅವಳು ಹೇಗೋ ನುಂಗಿಕೊಂಡು ಜೀವಂತವಿರುವಾಗಲೇ, ತಂಗಿ ಎಮಿಲಿಯ ಕಾಹಿಲೆಯು ಹೆಚ್ಚಾಗಿ ಅವಳೂ ತೀರಿದಳು. ಇದು ಸಾಲದೋ ಎಂಬಂತೆ ವಿಧಿಯು ಎನಳನ್ನೂ ಎಳೆದುಕೊಂಡು ಹೋಯಿತು.

ಶಾರ್ಲೋಟಳ ಜೀವನವು ಈಗ ಸಂಪೂರ್ಣವಾಗಿ ಭಣಭಣವೆನ್ನುತ್ತಿತ್ತು. ಅವಳ ಹಳ್ಳಿಯ ಮನೆಯಲ್ಲಿ ಭೀಕರವಾದ ಶಾಂತತೆಯು ನೆಲೆಸಿತ್ತು. ವಯೋವೃದ್ಧರಾದ ತಂದೆ ಒಂದು ಮೂಲೆಯಲ್ಲಿ ದಿನಗಳನ್ನು ಎಣಿಸುತ್ತ ವಿರಕ್ತರಾಗಿ ಕುಳಿತರು; ಬೇರೊಂದು ಕೋಣೆಯಲ್ಲಿ ಏಕಾಕಿನಿಯಾದ ಶಾರ್ಲೋಟಳು ಒರಗಿರುತ್ತಿದ್ದಳು. ಮೇಜಿನ ಮೇಲಿನ ಗಡಿಯಾರದ 'ಟಕ್, ಟಕ್' ಎಂಬ ಶಬ್ದವು ಮನೆಯ ಘೋರವಾದ ಶಾಂತತೆಯನ್ನು ಭೇದಿಸಿ ಶಾರ್ಲೋಟಳ ಕಿವಿಯನ್ನು ಮುಟ್ಟಿದಾಗ, ಕಾಲವು ಜಗತ್ತಿನ ಯಾವ ಮುಖವನ್ನೂ ಲೆಕ್ಕಿಸದೆ ನಿರಂತರವಾಗಿ ಓಡುತ್ತಿದೆ— ಎಂದು ಸಾರಿದಂತಿತ್ತು. ಮನೆಯಲ್ಲಿ ಕುಳಿತರೆ, ನಿಂತರೆ, ಹೊರಗೆ ಹುಲ್ಲುಗದ್ದೆಗಳಿಗೆ ಹೋದರೆ, ಅವಳ ಗತಿಸಿದ್ದ ಅಕ್ಕರೆಯ ಒಡನಾಡಿಗಳ ನೆನಪು ಅವಳನ್ನು ಹಣ್ಣಾಗಿಸುತ್ತಿತ್ತು. ತಾಯಿಯಿಲ್ಲದ ಮಕ್ಕಳಾದುದರಿಂದ, ಬಾಲ್ಯದಿಂದಲೂ ಮೂವರೂ ಸಹೋದರಿಯರು ಕೂಡಿಯೇ ಬೆಳೆದು, ಒಬ್ಬರಿಗೊಬ್ಬರು ತುಂಬ ಅನ್ಯೋನ್ಯವಾಗಿದ್ದರು. ಶಾರ್ಲೋಟಳಿಗೆ ಏಕಾಕಿನಿಯಾಗಿ ಹೇಗೆ ಬದುಕಿರಬೇಕು ಎಂಬುದೇ ಈಗ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು.

ಇಂತಹ ಸಮಯದಲ್ಲಿ ಮತ್ತೆ ಸಾಹಿತ್ಯವೇ ಅವಳಿಗೆ ಮಾರ್ಗವನ್ನು ತೋರಿಸಿತು. '(ಪ್ರಾಧ್ಯಾಪಕ)' (The Profetlor) ಎಂಬ ಅವಳ ಮತ್ತೊಂದು ಕಾದಂಬರಿಯು ಅದಾಗಲೇ ಪ್ರಸಿದ್ಧವಾಗಿತ್ತು. ಶಾರ್ಲೋಟಳ ಬ್ರಸೆಲ್ಸ್‌ನಲ್ಲಿಯ ಅನುಭವವೇ ಈ ಕಾದಂಬರಿಯ ಮೂಲವಾಗಿತ್ತು. ಇಂಗ್ಲಂಡಿನಿಂದ ಒಬ್ಬ ತರುಣ ಯುವಕ ಬ್ರಸೆಲ್ಸಿಗೆ ಶಿಕ್ಷಣಕ್ಕಾಗಿ ಹೋಗಿ ಅಲ್ಲಿಯ ಒಂದು ಹೆಣ್ಣುಮಕ್ಕಳ ಸಂಸ್ಥೆಯಲ್ಲಿ ಶಿಕ್ಷಕನಾಗುತ್ತಾನೆ. ಅದೇ ಶಾಲೆಯ ಒಬ್ಬ ವಿದ್ಯಾರ್ಥಿನಿಯೊಡನೆ ಪ್ರಣಯವು ಬೆಳೆದು, ಅವಳನ್ನೇ ಮದುವೆಯಾಗುತ್ತಾನೆ. ಈ ಕಾದಂಬರಿಯು ಮೊದಲನೆಯ ಸಲ ಪ್ರಕಾಶಕರಿಗೆ ಕೊಟ್ಟಾಗ ಅವರು ಅದನ್ನು ನಿರಾಕರಿಸಿದ್ದರು. ಆದರೆ 'ಜೇನ ಆಯರ್'ದ ಖ್ಯಾತಿಯಿಂದ ಶಾರ್ಲೋಟಳಿಗೆ ಈ ಕಾದಂಬರಿಯನ್ನು ಪ್ರಕಟಿಸುವುದು ಸುಲಭವಾಯಿತು.

ಈ ಸಂಗತಿಯು ಮೂಲಕವೂ ಶಾರ್ಲೋಟಳಿಗೆ ಸ್ವಲ್ಪ ಧೈರ್ಯವನ್ನು ಬಂದಂತಾಗಿ ಅವಳು 'ಶರ್ಲಿ' (shirley) ಎಂಬ ಮತ್ತೊಂದು ಕಾದಂಬರಿಯನ್ನು ಬರೆದಳು. ಆದರೆ 'ಜೇನ್ ಆಯರ್'ದ ಕೌಶಲ್ಯವೆ ಈ ಕಾದಂಬರಿಯಲ್ಲಿ ಇಲ್ಲ. 'ಜೇನ್ ಆಯರ್' ಕಾದಂಬರಿಯನ್ನು ಒಂದು ಸಲ ಓದಲು ಆರಂಭಿಸಿದರೆ ಅದು ಮುಗಿಯುವ ವರೆಗೂ

ಕೆಳಗಡುವ ಮನಸ್ಸೇ ಓದುಗನಿಗೆ ಆಗುವುದಿಲ್ಲ. ಅಂತಹ ಆಕರ್ಷಕ ಶಕ್ತಿಯು ಈ ಕಾದಂಬರಿಯಲ್ಲಿಲ್ಲ. ಕಥಾನಾಯಕಿಯಾದ ಶರ್ಲಿಯು ಜೇನಳದೇ ಮತ್ತೊಂದು ಅವತಾರ. ಈ ಕಾದಂಬರಿಯಲ್ಲಿ ಶಾರ್ಲೋಟಳು ತನ್ನ ಸುತ್ತಮುತ್ತ ಕಂಡ ಪಾದ್ರಿಗಳ ಜೀವನವನ್ನು ನಿಡಂಬನಾತ್ಮಕವಾಗಿ ನಿರೂಪಿಸಿದ್ದಾಳೆ. ಬ್ರಸೆಲ್ಸನಲ್ಲಿಯ ಅನುಭವವೂ ಇಲ್ಲಿ ಉಪಯುಕ್ತವಾಯಿತು.

ತನ್ನ ಜೀವನದಲ್ಲಿಯ ಘೋರವಾದ ಮುಖವನ್ನು ಮರೆಯಲು ಸಾಹಿತ್ಯವು ಒಂದು ಮಾರ್ಗವಾಗಿದ್ದರೆ, ಹೊರಗೆ ಹೋಗಿ ತಿರುಗಾಡಿ ಬೇರೆ ಬೇರೆ ಜನರನ್ನು ಕಾಣುವುದು ಮತ್ತೊಂದು ಮಾರ್ಗವಾಗಿತ್ತು. ಶಾರ್ಲೋಟಳ ಊರಿನಲ್ಲಿಯೇ ವಾಸಿಸಿದ 'ಶಟ್ಲ್‌ವರ್ಥ್' (shuttle wort.i) ಎಂಬವರು, ಸಾಹಿತ್ಯದಲ್ಲಿ ಆಸಕ್ತಿಯುಳ್ಳವರಾಗಿ ಎಲ್ಲ ಪ್ರಖ್ಯಾತ ಸಾಹಿತ್ಯಿಕರೊಡನೆ ಶಾರ್ಲೋಟಳ ಪರಿಚಯವನ್ನು ಮಾಡಿ ಕೊಟ್ಟರು. ಇವರ ಮುಖಾಂತರವಾಗಿಯೇ ಅವಳು ಶ್ರೀಮತಿ ಗೆಸ್‌ಕೆಲ್ ಎಂಬ ಮತ್ತೊಬ್ಬ ತನ್ನ ಸಮಕಾಲೀನ ಕಾದಂಬರೀಕಾರಳನ್ನು ಸಂದರ್ಶಿಸಿದಳು. ಶ್ರೀಮತಿ ಗೆಸ್‌ಕೆಲಳ ಸಹೃದಯದ ಸುತ್ತು ಸಹಾನುಭೂತಿಯ ಸಹವಾಸದ ಮೂಲಕ ಶಾರ್ಲೋಟಳಿಗೆ ಎಷ್ಟೋ ಆಂತರಿಕ ಸಮಾಧಾನವು ಸಿಗುತ್ತಿತ್ತು. ಅವಳೇ ಶಾರ್ಲೋಟಳ ಜೀವನ ಚರಿತ್ರೆಯನ್ನು ಅಮೋಘವಾದ ರೀತಿಯಲ್ಲಿ ಬರೆದಿಟ್ಟಿದ್ದಾಳೆ.

ಗಿಜಿಖರಲ್ಲಿ' (Vilette) 'ಎಂಬ ಮತ್ತೊಂದು ಕಾದಂಬರಿಯನ್ನು ಶಾರ್ಲೋಟಳು ಬರೆದಳು. ಇದೊಂದು ಉತ್ತಮವಾದ ಪ್ರಣಯಕತೆ. ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯೇ ಜಗತ್ತಿನಲ್ಲಿಯ ಪರಮ ಸುಖ— ಎಂಬುದೇ ಈ ಕತೆಯ ಸಾರ. ಈ ಪ್ರೀತಿಯು ಕೇವಲ ಪಿಕ್ಕವರಲ್ಲಿಯೇ ಇರದೆ ಎಲ್ಲೆಲ್ಲಿಯೂ ಇದೆ— ಎಂಬುದೇ ಈ ಕತೆಯ ಸಾರ್ವ. ಕಥಾನಾಯಿಕೆಯಾದ ಲೂಸಿಯು ಕುರೂಪಿ ಹೆಣ್ಣು; ಒಬ್ಬ ಶಾಲಾ ಮಾಸ್ತರಿಣಿ. ನಾಯಕನಾದ ಪಾಲನು ವಯಸ್ಕನಾದ ಪ್ರಾಧ್ಯಾಪಕನು. ಪಾಲನದು ಜೀವಂತನಾದ ಪಾತ್ರ. ಅವರಿಬ್ಬರನ್ನೂ ಸೇರಿಯಾಗಿಸಬೇಕೆಂದು ಹಪಹಪಿಸುವ ಮಡಾಮ್ ಬೆಕ್‌ಳ ಪಾತ್ರವೂ ಸೆನ್ಸಾಗಿ ನಿರೂಪಿತವಾಗಿದೆ. ಈ ಕಾದಂಬರಿಯೂ ತುಂಬ ಲೋಕಪ್ರಿಯವಾಗಿತ್ತು.

ಈ ಕಾದಂಬರಿಯ ಪ್ರಕಟನೆಯ ನಂತರ ಶಾರ್ಲೋಟಳಿಗೆ ತನ್ನ ಸಾಹಿತ್ಯಿಕ ಚಟುವಟಿಕೆ ಮುಗಿಯತೆಂಬ ಭಾವನೆಯು ಉಂಟಾಯಿತು. ಅವಳು ಬರೆದ ಕಾದಂಬರಿಗಳೆಲ್ಲವೂ ಅವಳ ಅನುಭವದ ಮೇಲೆ ಆಧರಿಸಿದುವುಗಳು. ಅವಳ ಅನುಭವದ ವ್ಯಾಪ್ತಿಯು ತೀರ ಕಡಮೆ. ಇದುವರಿಂದ ಅವಳಿಗೆ 'ಮುಂದೇನು' ಎಂಬ ಚಿಂತೆಯು ಹುಟ್ಟಿತು. ಸಹೋದರ-ಸಹೋದರಿಯರ ಮರಣದ ನಂತರ ಕಾದಂಬರಿಗಳನ್ನು ಬರೆಯುವುದರಲ್ಲಿ ಅವಳು ತನ್ನ ದುಃಖವನ್ನು ಮರೆಯುತ್ತಿದ್ದಳು. ಈಗ ಅದೂ ಸಾಧ್ಯವಿಲ್ಲವೆಂದು ತೋರಿದಾಗ, ಅವಳ ಬಾಳ್ವೆ ಹೇಳಿಗಾಗಲು.

ಇದೇ ಸಮಯಕ್ಕೆ ನಿಕೋಲಸ್ ಎಂಬ ಪಾದ್ರಿಯು ಶಾರ್ಲೋಟಳ ಹತ್ತಿರ ಪ್ರೇಮಭಿಕ್ಷೆಯನ್ನು ಕೇಳಿದನು. ಅವಳ ತಂದೆಯ ಸಹಾಯಕ ಪಾದ್ರಿಯಾದ ನಿಕೋಲಸನು, ಹಲವಾರು ವರುಷಗಳಲ್ಲಿ ಶಾರ್ಲೋಟಳನ್ನು ಕಂಡು ಅವಳ ವ್ಯಕ್ತಿತ್ವವನ್ನು ಮೆಚ್ಚಿದ್ದನು; ಮದುವೆಯ ಬಗ್ಗೆ ಪ್ರಸ್ತಾಪನೆಯನ್ನೂ ಮಾಡಿದ್ದನು. ಆದರೆ ಶಾರ್ಲೋಟಳು ಆಗ ಮದುವೆಯನ್ನು ಮಾಡಿಕೊಳ್ಳುವ ಮನಃಸ್ಥಿತಿಯಲ್ಲಿರಲಿಲ್ಲ. ಅವಳ ತಂದೆಯಾದರೋ ತನ್ನ ಪ್ರತಿಭಾವಂತ ಮಗಳು ಸರ್ವಸಾಮಾನ್ಯನಾದ ನಿಕೋಲಸನನ್ನು ಮದುವೆಯಾಗಬಾರದೆಂದು ಅಭಿಪ್ರಾಯಪಟ್ಟರು. ಆದರೆ ಶಾರ್ಲೋಟಳ ಪರಿಸ್ಥಿತಿಯು ಈಗ ತೀರ ಭಿನ್ನವಾಗಿತ್ತು. ಅವಳಿಗೆ ಜೀವನವು ಭಣಭಣತೆಯಿಂದಲೂ ಭೀಕರತೆಯಿಂದಲೂ ತುಂಬಿದಂತೆ ಎನಿಸಿತು. ಸ್ನೇಹಕ್ಕಾಗಿ, ಆತ್ಮೀಯತೆಗಾಗಿ ಅವಳು ಹಂಬಲಿಸುತ್ತಿದ್ದಳು. ಉತ್ಕಟವಾದ ಸ್ನೇಹವೇ ತನ್ನ ಜೀವನಕ್ಕೆ ಗುರಿಯನ್ನು ತಂದುಕೊಡಬಲ್ಲದು—ಎಂಬುದನ್ನು ಅರಿತು, ತನ್ನನ್ನೇ ಶಾರ್ಲೋಟಳಿಗೆ ಸಮರ್ಪಿಸಿದ ನಿಕೋಲಸನನ್ನು ಮದುವೆಯಾದಳು.

ಮದುವೆಯಾದನಂತರ ಹಲವು ದಿನಗಳವರೆಗೆ ಅವಳು ತುಂಬ ಸುಖಿಯಾಗಿದ್ದಳು. ಆದರೆ ಈ ಸುಖವೂ ಅವಳ ಪಾಲಿಗೆ ಹೆಚ್ಚು ದಿನ ದೊರಕಲಿಲ್ಲ. ಶೀತಲಗಾಳಿಯಲ್ಲಿ ತಿರುಗಾಡಲು ಹೋದ ನೆಪವಾಗಿ ಅವಳು ಹಾಸಿಗೆ ಹಿಡಿದವಳು ಮೇಲೆ ಏಳಲಿಲ್ಲ. ಇದೇ ಸಮಯಕ್ಕೆ ತನಗೆ ಮಗು ಆಗುವುದಿದೆ ಎಂಬುವನ್ನು ತಿಳಿದು ಸಂತೋಷಪಟ್ಟಳು. ಆದರೆ ಅವಳ ದೇಹವು ಕಷ್ಟಗಳನ್ನು ಅನುಭವಿಸಿ ಜೀರ್ಣವಾಗಿ ಹೋಗಿತ್ತು. ಯಾವ ಕಷ್ಟವನ್ನೂ ತಡೆದುಕೊಳ್ಳದ ನಿತ್ರಾಣದಲ್ಲಿ ಗರ್ಭಾವಸ್ಥೆ ತಿಂಗಳಲ್ಲಿ ಅವಳು ತೀರಿ ಹೋದಳು. ಸಾಯುವ ಮೊದಲು ತನ್ನ ಗಂಡನನ್ನು ಕುರಿತು ಅವಳು ನುಡಿದಳು: "ನಾನು ಸಾಯುವುದಿಲ್ಲ. ದೇವರು ನಮ್ಮನ್ನು ಬೇರ್ಪಡಿಸಲಿಕ್ಕಿಲ್ಲ, ನಾವು ಎಷ್ಟು ಸುಖಿಯಾಗಿದ್ದೇವೆ." ಆದರೆ ಮರಣದ ಮುಂದೆ ಯಾರ ಆಟ ತಾನೇ ನಡೆಯುತ್ತದೆ?

ಹೆಸರುವಾಸಿಯಾದ ಕಾದಂಬರಿಕಾರಳಾದ ಶಾರ್ಲೋಟ್‌ಳ ಜೀವನವು ಇಷ್ಟು ದುರ್ದೈವಿಯಾಗಿತ್ತು. ಇಂಗ್ಲಿಷಿನಲ್ಲಿ ಕಾದಂಬರಿಗಳನ್ನು ಬರೆದ ಅನೇಕ ಮಹಿಳೆಯರಲ್ಲಿ ಶಾರ್ಲೋಟ್ ಬ್ರಾಂಟೆಯ ಹೆಸರು ಗಣ್ಯವಾದುದು. ಜೇನ್ ಆಸ್ಟಿನ್ ಎಂಬವಳು ಅಮೋಘವಾದ ಕಾದಂಬರಿಗಳನ್ನು ಬರೆದರೂ, ಅವಳ ವಾಸ್ತವತೆಗೂ ಶಾರ್ಲೋಟ ಬ್ರಾಂಟೆಯ ಭಾವನಾಮಯ ಜಗತ್ತಿಗೂ ಅದೆಷ್ಟು ಅಂತರ! 'ಜಾರ್ಜ ಇಲಿಯಟ್' ಎಂಬವಳು ಬರೆದ ಕಾದಂಬರಿಗಳಿಗಿಂತ ಶಾರ್ಲೋಟಳ ಕಾದಂಬರೀಗಳೇ ಹೆಚ್ಚು ಲೋಕಪ್ರಿಯವಾಗಿವೆ. ವ್ಹರ್ಜಿನಿಯಾ ವೂಲ್ಫ್ ಕಾದಂಬರಿಗಳನ್ನು ಬರೆದದ್ದು ಆಧುನಿಕ ಕಾಲಘಟ್ಟದಲ್ಲಿ. ಶಾರ್ಲೋಟಳ ರಸವತ್ತಾದ ಕೃತಿಗಳು ಓದುಗರ ಮನಸ್ಸನ್ನು ಸೆಳೆದರೆ, ಅವಳ ಜೀವನವು ಕಾಳರಾತ್ರಿಯಲ್ಲಿಯೂ ಬೆಳಕನ್ನು ಕಂಡು ಮುಂದೆ ಸಾಗಬೇಕೆಂಬ ಸಂದೇಶವನ್ನು ಕೊಟ್ಟಂತಿದೆ.

ನಮ್ಮ ಮನೆಯ ಮುದ್ದು ಹುಡುಗಿ

ಶ್ರೀ. ವಸಂತ ಕುಷ್ಟಗಿ, ಎಂ. ಎ, ಬೀದರ

೧

ನಮ್ಮ ಮನೆಯ ಮುದ್ದು ಹುಡುಗಿ
ನಮಗೆ ದೇವರಿತ್ತ ಹೂವು
ಅರಳಿ ನಿಂತ ಸೂರ್ಯಪಾನ
ಸೂರ್ಯನತ್ತ ಅವಳ ಧ್ಯಾನ.
ಹಗಲು ರಾತ್ರಿ ಒಂದೆ ರೀತಿ
ಸೂಸಿ ಬರುವ ಕಂಪು ಪ್ರೀತಿ.
ನೋಗವು ನಗೆಯ ಬಿರಿದ ಅರಳು
ಮಾಟ ಮಗಳು ಸೀಗೆ ಇವಳು
ನಮ್ಮ ಮನೆಯ ಮುದ್ದು ಹುಡುಗಿ.

೨

ಬೈತಲಲ್ಲಿ ಮುಗಿಲ ಅರಿಲು
ಎಲ್ಲ ಸೇರಿ ಒಂದೆ ಸಾಲು
ಅತ್ತ ಅರ್ಧ ಭಾಗ ಇರುಳು
ಇತ್ತ ಅರ್ಧ ಭಾಗ ಇರುಳು
ಚಿಕ್ಕ ಮಗಳು ಜೋಡು ಹೆರಳು
ನಮ್ಮ ಮನೆಯ ಮುದ್ದು ಹುಡುಗಿ.

೩

ಎಷ್ಟು ಚೆಂದ ದಿಟ್ಟಿ ನಡಿಗೆ
ಪುಟ್ಟ ಹಂಸ ಸಿಲ್ಲು ಹೆಜ್ಜೆ
ಎಷ್ಟು ಅಂದ ಉಟ್ಟಿ ಉಡುಗೆ
ಚೈತ್ರಗೌರಿ ತಾನು ಅಂತೆ
ಇಂದು ಕೂಸು ನಾಳೆ ತಾಯಿ
ನಮ್ಮ ಮನೆಯ ಮುದ್ದು ಹುಡುಗಿ.

೪

ಅವಳ ಆಟ, ಜೊಂಬಿ-ಆಟ
ನಮ್ಮ ಕಣ್ಣಿಗೊಂದು ಜಾತ್ರೆ
ಆದುವೆ ಅವಳ ದಿಟ್ಟಿದ ಯಾತ್ರೆ
ಒಮ್ಮೆ ಮದುವೆ ಒಮ್ಮೆ ಭಜನೆ
ಎಷ್ಟು ಮುಗ್ಧ ಹಿರಿಯ ಭಾವ
ನಮ್ಮ ಮನೆಯ ಮುದ್ದುಹುಡುಗಿ.

೫

ಆವಳ ಮಗುವು ಆಟ-ಬೊಂಬೆ
ಆದರೂನು ಅಳುವುದಂತೆ
ಪೇಪಿಕೊಡಲು ನಗುವುದಂತೆ
ಏನು ಸುಖವೊ ಹಿರಿಯ ನಟನೆ
ನಟನೆಯಲ್ಲ ದಿಟವೆ ದಿಟವೆ
ನಮ್ಮ ಮನೆಯ ಮುದ್ದುಹುಡುಗಿ.

೬

ಹವೆಯು ಕೆಡಲು ನೆಗಡಿಕೆಮ್ಮು
ಚುಚ್ಚುಮದ್ದು ಎಲ್ಲಬೇಕು
ದವನ ಧಾನ್ಯ-ಮನೆಯ ಲೆಕ್ಕ
ಎಲ್ಲದಕ್ಕೂ ತಾನೆ ಅಕ್ಕ
ತೂಗು ಕೈಯ ಲೋಕಮಾತೆ
ನಮ್ಮ ಮನೆಯ ಮುದ್ದು ಹುಡುಗಿ.

೭

ಒಮ್ಮೆ ತಾಯಿ ಒಮ್ಮೆ ಅಪ್ಪ
ಒಮ್ಮೆ ಅಣ್ಣ ಒಮ್ಮೆ ತಮ್ಮ
ನೆರೆಯ ಹುಡುಗ ಬಾರದಿರಲು
ತಾನೆ ಎಲ್ಲ ಏಕಪಾತ್ರೆ.
ದಿನದ ಆಟ ದಿನಕೆ ಇಲ್ಲ
ಹೊಸದು ಜೀವ ಹೊಸದು ಭಾವ
ಇದುವೆ ಜಗದ ಚಲನವಲನ
ನಮ್ಮ ಮನೆಯ ಮುದ್ದುಹುಡುಗಿ

೮

ಮನಸು ಸೋಡು ಹೊಕ್ಕು ಒಳಗೆ
ಮುಗ್ಧ ಸ್ನಿಗ್ಧ ಮಮತೆಕಲಶ
ಮಾತು ಮುತ್ತು ರಸದ ಕಬ್ಬು
ತೊದಲು ಸ್ವಲ್ಪ ಅಡ್ಡಿಯಿಲ್ಲ
ಬೆಳೆವ ಮುಗುಳು ನಗುಪುದಲ್ಲ
ನಮ್ಮ ಮನೆಯ ಮುದ್ದುಹುಡುಗಿ.

೯

ಯಾರು ಯಾರೊ ಮನೆಗೆ ಬರರು
' ಹಲೋ ' ನಮನ, ಯಾರು ನೀವು ?

' ಬನ್ನಿ, ಕೂಡಿ ' ಎಂದು ಹೇಳಿ
' ನೀರು ಬೇಕೆ ' ಎಂದು ಕೇಳಿ
ಮುದ್ದು ಮುದ್ದು ಕತೆಯ ಕಥಿಸಿ
ಜನರನೆಲ್ಲ ಗೆದ್ದುಕೊಂಡು
ಸುನಸುಗಳನು ಮುಡಿದುಕೊಂಡು
ನಲಿದುಬಿಡುವ ಜಾಣೆ ಇವಳು
ನಮ್ಮ ಮನೆಯ ಮುದ್ದು ಹುಡುಗಿ.

೧೦

ಒಪ್ಪಿ ತಪ್ಪಿ ಸೇಸಿಕೊಡಿಸೆ
ಮನೆಗೆ ಹೋಗಿ ಹಂಚಿಕೊಟ್ಟು
ತಿಂದುಬಿಡುವ ಭಾಗ್ಯವಂತೆ–
ಹಿರಿಯ ಕಿರಿಯ ಭೇದವಿಲ್ಲ
ಎಲ್ಲರವಳ ' ದೋಸ್ತ ' ರಂತೆ
ನಮ್ಮ ಮನೆಯ ಮುದ್ದು ಹುಡುಗಿ.

೧೧

ದಾರಿಯಲ್ಲಿ ಹೋಗುತಿರಲು
ಕುಂಟ ಕುರುಡ ಯಾತ ಬರಲಿ,
' ಪಾಪ ' ಎಂದು ಉಸಿರು ಎಳೆದು
' ಪೈಸಾ' ಇರಲು ದಾನ ಮಾಡಿ
' ದಾನಿ ' ಎಂದು ಹೆಸರು ಪಡೆವ
ಕರುಣ ಕಡಲು ಧರ್ಮರೂಪ
ನಮ್ಮ ಮನೆಯ ಮುದ್ದು ಹುಡುಗಿ.

೧೨

ಇವಳ ಮುಗ್ಧಭಾವ ನೋಡಿ
ದಾರಿಜನರು ತಲೆಯ ತೂಗಿ
ಎತ್ತಿ ಇಳಿಸಿ ಮುದ್ದುಮಾಡಿ
ನೆನಪಿಗಾಗಿ ಕೆನ್ನೆ ಮುಟ್ಟಿ,
' ಎಂಥ ಹುಡುಗಿ ಎಂಥ ಹುಡುಗಿ '
ಎಂದುಕೊಂಡು ಸಾಗುತಿಹರು.
ಸಾವಿರಕ್ಕೆಕ್ಕ ಒಂದು ಇವಳು
ನಮ್ಮ ಮನೆಯ ಮುದ್ದುಹುಡುಗಿ.

೧೩

ದೊಡ್ಡ ಕಣ್ಣು ದೊಡ್ಡ ಮನಸು
ಚಿಕ್ಕ ಹುಡುಗಿ ದೇವರಂತೆ
' ದೇನಿ ' ನೀನು ಎಂದರವಳು
ಸಕ್ಕ ಗೋಣು ಹಾಕುವಳು,
ಮಗುವಿನಲ್ಲಿ ದೇವರಿರುವ
ಕಾಣುವಂಥ ಭಾಗ್ಯವೆಮಗೆ
ನಮ್ಮ ಮನೆಯ ಮುದ್ದುಹುಡುಗಿ.

೧೪

ಹಲವು ಆಟ ಹಲವುಲೀಲೆ
ಒಂದು ಎರಡು ಹತ್ತು ಇಲ್ಲ
ನೂರು ನೂರು ಲೆಕ್ಕವಿಲ್ಲ
ಬರೆಯಲೆನಗೆ ಶಕ್ತಿಯಿಲ್ಲ
ಮನುಜ ನಾನು ಬ್ರಹ್ಮನಲ್ಲ
ಅದರವಳು ನನ್ನ ಸ್ಫೂರ್ತಿ
ನಮ್ಮ ಮನೆಯ ಮುದ್ದುಹುಡುಗಿ.

೧೫

ಅವಳ ಹೆಸರು ' ಪುಷ್ಪಲತೆ '
ರೂಢಿ ಹೆಸರು ' ಸಾ—ವಿತ್ರಿ '
ಕರೆವ ಹೆಸರು ' ಗುಬ್ಬಿ ' ಎಂದು
ಅದರವಳು ಗುಬ್ಬಿಯಲ್ಲ.
ಗುಬ್ಬಿಯಷ್ಟು ಕಿರಿಯಳು
ಶಕ್ತಿಯಲ್ಲಿ ಹಿರಿಯಳು.
ಆದಿವಾಯಿ ಚಿಕ್ಕ ವಯಸು
ರೀತಿ ತೋರಿ ಬೆಳೆಯುತಿಹಳು
ನಮ್ಮ ಮನೆಯ ಮುದ್ದು ಹುಡುಗಿ.

೧೬

ಇಂಥ ಹುಡುಗಿಗೆ ಏನು ಕಾಣ್ಕೆ?
ಪೂರ್ಣವಾಗಲಿ ಅವಳ ಪೂಜ್ಯೆ
ಇರಲಿ ಎನ್ನಯ ಶುಭನ ಹರಕೆ
ಬಾಳಿ ಬದುಕಲಿ ನೂರುವರ್ಷ
ನೂರು ಬಾಳಿಗೆ ನೀಡಿ ಹರ್ಷ
ಬಾಳ್ವಾ ತಾಯಿ-
ಸತಿಯಾಗು ಸಾವಿತ್ರಿಯಾಗು
ಗಾಯತ್ರಿಯಾಗು ಸರಸತಿಯೂ ಆಗು
ಸತ್ಯಲೋಕದ ಎಲ್ಲ ಶಕ್ತಿ ನೀನಾಗು !
ಗಂಗೆ ಗೌರಿಯು ನೀನು ಐದೆ ಸಾವಿತ್ರಿ !
ಸಿದ್ಧರಾಮನ ಕೆರೆಯು,
ಸಕಲತೀರ್ಥಗಳ ನೆಲೆಯು, —
ಅಂತೆ ನೀನು;
ಅಂತವಿಲ್ಲದ ಉಡಿಯು
ನಿನ್ನ ಮಡಿಯು;
ಅದೋ ಹಸಿರು
ಚಿರವು ನಿನ್ನ ಹೆಸರು;

★ ಪ್ರ ತಿ ಫ ಲ ★

(ಏದು ದೃಶ್ಯಗಳ ಪೌರಾಣಿಕರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ.

೪ ನೆಯ ದೃಶ್ಯ

(ದೇವಯಾನಿ ದಿವ್ಯಾಭರಣಗಳನ್ನಿಟ್ಟು ದಿವ್ಯದುಕೂಲ ಧರಿಸಿದ್ದಾಳೆ. ಹರ್ಷದರ್ಪಗಳು ಮುಖವಲ್ಲಿ ಲಾಸ್ಯವಾಡುತ್ತಿವೆ. ಆಶ್ರಮದ ಒಂದು ಕೋಣೆ.)

ದೇವ : (ಹೆಮ್ಮೆಯಿಂದ) ಈ ಜಗದಲ್ಲಿ ನನ್ನಂತಹ ಭಾಗ್ಯಶಾಲಿನಿ ಯಾರು? ನನ್ನ ಅಭೀಷ್ಟಗಳೆರಡೂ ಈ ದಿನ ನೆರವೇರಲಿವೆ. ಆ ದಾಸಿ ಈ ದಿನ ಬರುವಳು ರಾಜಕುಮಾರಿಯೆಂದು ಹೆಮ್ಮೆಯಿಂದ ಬೀಗುತ್ತಿದ್ದ ಆ ಗರ್ವಿಷ್ಠೆಗೆ ಆತ್ಮಬಲವ ಹೆಚ್ಚಳವನ್ನು ತೋರುವೆ, ನನ್ನನ್ನು ಅಂದು ಆಡಿ ಹೊಡೆದು ಬಡಿದು ನಲಿದಿದ್ದಳಲ್ಲವೆ? ಅದರ ಸೇಡನ್ನು ಸರಿಯಾಗಿ ತೀರಿಸುವೆ. (ಗಹಗಹಿಸಿ ನಗುವಳು) ಯಾರದು?

("ನಾನು ನಳಿನಾ" ಎಂದು ನಳಿನಾ ತಲೆ ತಗ್ಗಿಸಿಕೊಂಡು ಬರುವಳು.)

ನಳಿನಾ : ಶರ್ಮಿಷ್ಠೆಯನ್ನು ಒಪ್ಪಿಸಿ ಹೋಗಲು ಬಂದಿರುವೆ, ಬಾಗಿಲಲ್ಲಿ ನಿಂತಿರುವಳು. ಒಳಗೆ ಬರಲಪ್ಪಣೆಯೇ?

ದೇವ : ಎಲೈ ದಾಸಾನುದಾಸಿ! ಆ ದಾಸಿಗೆ ನೀನು ದಾಸಿಯೇ? ದುರ್ಮಾರ್ಗೆ! ಇನ್ನೂ ನಿನ್ನ ಅಹಂಕಾರ ಅಡಗಲಿಲ್ಲವೆ? ಅವಳೇ ಬಾಯ್ಬಿಟ್ಟು ಅಪ್ಪಣೆ ಕೇಳಬಾರದೇನು?

ನಳಿನಾ : (ಸಿಟ್ಟಾಗಿ) ತಪ್ಪಾಯಿತು. ಇನ್ನು ನೀನುಂಟು, ನಿನ್ನ ಸೇವಕೆಯುಂಟು (ಬಿರಬಿರನೆ ಹೋಗುವಳು. ಶರ್ಮಿಷ್ಠೆ ತನ್ನಲ್ಲಿ ತಾನೇ ಅಡಗುತ್ತ ನಿಧಾನವಾಗಿ ಬರುವಳು. ಶುಭ್ರಸ್ನಾತಳಾಗಿ ನಾರುಡೆಯುಟ್ಟಿದ್ದಾಳೆ. ಗುಂಗುರುಗೂದಲು ತಲೆತುಂಬಾ ಹರಡಿವೆ.)

ದೇವ : (ನಿಂತು, ದರ್ಪದಿಂದ) ಅಪ್ಪಣೆ ಕೇಳದೆ ಒಳಗೇಕೆ ಬಂದೆ? ಹೊರಗೆ ನಡೆ. ಅಪ್ಪಣೆ ಕೇಳಿ ಅನಂತರ ಬಾ. (ಶರ್ಮಿಷ್ಠೆ ಬೆಚ್ಚಿ ಹೊರಗಡೆಗೆ ಹೋಗುವಳು. ದೇವಯಾನಿ ಗೆಲುವಾಗಿ ಆಸನದಲ್ಲಿ ಕೂಡ್ರುವಳು.)

ಶರ್ಮಿಷ್ಠಾ : ಒಳಗೆ ಬರಬಹುದೇ?

ದೇವ : ಹೂಂ, ಬಾ!

ಶರ್ಮಿ : (ವಿನೀತಳಾಗಿ ಬಂದು ನಮಿಸಿ) ಅಕ್ಕಾ—

ದೇವ : ಅಕ್ಕಾ! ಇನ್ನೊಮ್ಮೆ ಹಾಗೆನ್ನದಿರು.

ಶರ್ಮಿ : ಸರಿ!

ದೇವ : ಎಲಾ ನಿನ್ನ ಗರ್ವವೇ! ನನ್ನ ಸಖ್ಯ ಪಡೆಯುವ ಯೋಗ್ಯತೆ ನಿನಗುಂಟೇ? ಎಲೈ ತೊತ್ತೇ, ಎಷ್ಟು ನಿನ್ನ ಅಹಂಕಾರ?

ಶರ್ಮಿ : ತಪ್ಪಾಯಿತು ಒಡತಿ, ಕ್ಷಮಿಸು!

ದೇವ : ನಿಲ್ಲಿಸು ನಿನ್ನ ಏಕವಚನಪ್ರಯೋಗವನ್ನು. ಇನ್ನೂ ನಿನ್ನ ಸೊಕ್ಕು ಅಡಗಿಲ್ಲವಲ್ಲಾ!

ಶರ್ಮಿ : ಕ್ಷಮಿಸು ಒಡತಿ. ಇಂದಿನಿಂದ ನಾನು ನಿಮ್ಮ ದಾಸಿ, ದಾಸ್ಯದ ಪ್ರತಿಜ್ಞೆ ಮಾಡುವೆ. ಒಡತಿ, ನಿಮಗೆ ಎದುರಾಡೆ. ನಿಮಗೆರಡ ಬಯಸೆ. ನಿಮ್ಮ ಹಿತಕ್ಕಾಗಿ ಸದಾ ಶ್ರಮಿಸುವೆ. ನೀವೇ ನನ್ನ ಗುರು, ನನ್ನ ದೇವ. ನೀವು ಬೈಯ್ದರೂ ಕೋಪಿಸೆ, ಬಡಿದರೂ ಪ್ರತಿಭಟಿಸೆ. ನಿಮ್ಮ ಬೈಗಳೇ ನನಗೆ ಆಶೀರ್ವಾದ. ನಿಮ್ಮ ಬಡಿತವೇ ರಕ್ಷೆ. ನಿಮಗೆ ನಾನು ಮಾಡಿದ ಘೋರ ಅಪಚಾರದ ಅರಿವಾಗಿ ಪಶ್ಚಾತ್ತಾಪದಗ್ಧಳಾಗಿದ್ದೇನೆ. ಅಜೀವ ಪರ್ಯಂತ ನಿಮ್ಮ ದಾಸಿಯಾಗಿದ್ದು ನನ್ನ ಪಾಪವನ್ನು ಕಳೆದುಕೊಳ್ಳುವೆ.

ದೇವ : ಅಬ್ಬಾ ಏನು ನಟನೆ, ಏನು ಚತುರತೆ! ಈ ತೋರಿಕೆಯ ನಯವಿನಯಗಳಿಗೆ ಮರುಳಾಗುವವಳಲ್ಲ ನಾನು. ಸಮಯ ಕಾದು ಸರ್ವನಾಶ ಮಾಡುವ ರಕ್ಕಸಿ ನೀನು. ಪಶ್ಚಾತ್ತಾಪವಂತೆ! ರಾಜದಂಪತಿಗಳು ಪರಿತ್ಯಜಿಸದಿದ್ದರೆ ನೀನು ಬರುತ್ತಿದ್ದೆಯಾ?

ಶರ್ಮಿ : ಪಶ್ಚಾತ್ತಾಪಪಟ್ಟರೂ ದಾಸಿಯಾಗಿ ಇಲ್ಲಿಗೆ ಬರುತ್ತಿದ್ದಿಲ್ಲ, ನಿಜ! ಆದರೆ ಈಗಲೂ ನನ್ನ ಪೂತಾಪಿತೃಗಳು ಈ ದೇಹವನ್ನು ನಿಮ್ಮ ಆಧೀನ ಮಾಡಿದ್ದರೂ, ನನ್ನ ಮನಸ್ಸನ್ನು ನಿಮ್ಮ ವಶ ಮಾಡಲಾರರು. ನಾನಾಗಿಯೇ ಸ್ವೇಚ್ಛೆಯಿಂದ ನನ್ನ ಪಾಪರಾಶಿ ಕಳೆಯಲೆಂದು ಸೇವಾವೃತ್ತಿ ಕೈಗೊಳ್ಳುತಿದ್ದೆ.

ದೇವ : ಎಲೈ ತೊತ್ತೇ! ಎಷ್ಟು ಉಳವಾಗಿದೆ ನಿನ್ನ ಅಹಂಕಾರ! ನಿನ್ನ ಪ್ರತಿಜ್ಞೆ ಮುಗಿಲೆತ್ತರದಲ್ಲಿದೆಯಲ್ಲಾ. ಇನ್ನು ಮುಂದೆ ನಾನುಟ್ಟು ಬಿಟ್ಟ ವಸ್ತ್ರ ಉಡಬೇಕು. ನಾನುಂಡು ಮಿಕ್ಕಿದ್ದನ್ನು ಉಣ್ಣಬೇಕು. ನಾ ಮುಡಿದೆಸೆವ ನೈರ್ಮಾಲ್ಯವನ್ನು ಮುಡಿಯಬೇಕು. ತಿಳಿಯಿತೇ?

ಶರ್ಮಿ : ಮಹಾಪ್ರಸಾದ, ಒಡತಿ! (ಸ್ವಗತ) ನಿಜ,ದೇವಯಾನಿ ಅಂದ ಮಾತು! ಈ ದುರಭಿಮಾನ, ಈ ಅಹಂಕಾರ ನನ್ನೆದೆಯಲ್ಲಿ ಎಷ್ಟು ಆಳವಾಗಿ ಬೇರು ಬಿಟ್ಟಿವೆ! ಅವನ್ನು ಸಮೂಲವಾಗಿ ನಾಶ ಮಾಡಲೇ ಬೇಕು.

ದೇವ : ಎಲೆ ಶರ್ಮಿಷ್ಠೆ! ಆ ದಿನ ಯಯಾತಿ ಮಹಾರಾಜನ ಪಟ್ಟಮಹಿಷಿಯಾಗುವ ಕನಸನ್ನು ಕಂಡಿದ್ದೆಯಲ್ಲವೆ? ಅಯ್ಯೋ, ಮುಂದಭಾಗ್ಯಳೇ—ಯಯಾತಿ ಮಹಾರಾಜನನ್ನು ಈ ದಿನ ಮುದ್ಯಾಹ್ನ, ಶುಭಲಗ್ನದಲ್ಲಿ ನಾನು ವಿವಾಹವಾಗಲಿದ್ದೇನೆ. ತಿಳಿಯಿತೆ?

ಶರ್ಮಿ : ಬಹಳ ಸಂತೋಷ ಒಡತಿ.

ದೇವ : ಸಂತೋಷವಂತೆ! ನೀನು ಸೆಚ್ಚಿದಾತ ಅನ್ಯವಶನಾಗುವನೆಂದು ಎದೆಗೆ ಕಿಚ್ಚಿಕ್ಕಿದಂತಾಗಿಲ್ಲವೇ?

ಶರ್ಮಿ : ಇಲ್ಲ ಒಡತಿ, ಆ ಹಿಂದಿನ ಶರ್ಮಿಷ್ಠೆ ಸತ್ತಳು.

ಈಗಿರುವವಳು ಬೇರೆ. ಆ ದುಷ್ಟ ಹೆಸರಿಗೆ ಬದಲಾಗಿ ಬೇರೆ ಹೆಸರಿನಿಂದ ಕರೆಯಿರಿ—ನನಗೆ ಖಂಡಿತ ಮತ್ಸರವಿಲ್ಲ.

ದೇವ: ಬೇರೆ ಹೆಸರೇ? ಅರಿಷ್ಟೆಯೆಂದು ಕರೆಯಲೇನು? (ವಿಕಟವಾಗಿ ನಕ್ಕು) ವಸಂತೋದ್ಯಾನಕ್ಕೆ ಹೋಗಿ ನನಗಾಗಿ ಒಂದು ಪುಷ್ಪಗುಚ್ಛವನ್ನು ನಿರ್ಮಿಸಿಕೊಂಡು ಬಾ!

ಶರ್ಮಿ: ನಿನ್ನ ಚಿತ್ತ ಒಡತಿ! ಈಗಲೇ ಹೋಗಲೇ ಉದ್ಯಾನವನಕ್ಕೆ?

ದೇವ: (ಸಿಟ್ಟಿನಿಂದ ಅವಳ ತಲೆ ಮೆಟ್ಟಿ) ಈಗಲ್ಲದೆ ಮತ್ತೆಂದು ಹೋಗಬೇಕೆಂದಿರುವೆ? ಅಪ್ಪಣೆಯಾದೊಡನೆ ಪಾಲಿಸಬೇಕು. ಓಡು ಬೇಗ. ನಾನು ಶೃಂಗರಿಸಿಕೊಳ್ಳುವುವರೊಳಗಾಗಿ ಹಿಂದಿರುಗು. (ಶರ್ಮಿಷ್ಠೆ ಓಡುವಳು) ಅಬ್ಬಾ. ಏನು ವಿನಯ, ಏನು ಕಪಟ! ನಾನು ಎಚ್ಚರಿಕೆಯಿಂದಿರಬೇಕು. ಈ ದೈತ್ಯರಾಜಕುಮಾರಿ ನನಗೆ ಎರಡು ಬಗೆಯೊವಳೇ. ಹಲ್ಲು ಕಿತ್ತ ಹಾವಿನಂತೆ ಈಗ ನಿರುಪದ್ರವಿ; ಅದರಿ ಅವಳ ದುಷ್ಟ ಪ್ರವೃತ್ತಿ ಮಾಯವಾದೀತೆ? ಬೋಳಿಸಿದ ಸುಳಿಯಂತೆ ಮತ್ತೆ ತಲೆಯೆತ್ತುತ್ತದೆ. ಓ, ಶಾಲಿನಿ ಬಂದಳಲ್ಲಾ—ಬಾ, ಸಖಿ. (ಶಾಲಿನಿ ಪ್ರವೇಶಿಸುವಳು.)

ಶಾಲಿನಿ: ಸಖಿ, ವಿವಾಹಮಂಗಳಕ್ಕೆ ಅದ್ದೂರಿಯ ಸಿದ್ಧತೆ ನಡೆದಿದೆ. ರಾಣಿಯವರು ಬರಲು ಹೇಳಿ ಕಳುಹಿದ್ದಾರೆ.

ದೇವ: ನಾನೀಗಿನಿಂದಲೇ ಹೋಗಲೊಲ್ಲೆ. ತಂದೆಯವರು ಬಂದು ಯಾವುದಕ್ಕೂ ಹೇಳಲಿ. ಅನಂತರ ಹೋಗೋಣ.

ಶಾಲಿನಿ: ಸಖಿ, ಶರ್ಮಿಷ್ಠೆಯೆಲ್ಲಿ? ವಿವಾಹಮಂಗಳದ ಸಮಯದಲ್ಲಿ ಅವಳೆಲ್ಲಿರಬೇಕು? ರಾಜದಂಪತಿಗಳು ಅವಳ ಮುಖಾವಲೋಕನ ಮಾಡುವಂತಿಲ್ಲವಾಗಿ ಅವಳು ವಿವಾಹಮಂಟಪಕ್ಕೆ ಬರುವಂತಿಲ್ಲ.

ದೇವ: ಹಾಗೋ? ಹಾಗಾದರೆ ಅವಳಿಗೆ ಎಂದಿಗೂ ಮುಗಿಯದ ಕೆಲಸ ಕೊಡುವೆ—ಅಮೃತಸರೋವರದ ನೀರನ್ನು ಹೊತ್ತು ತ ಮೃತ್ಯುಕೂಪವಾದ ಬಾವಿಯನ್ನು ತುಂಬಿಸಲಿ! ಪುಷ್ಪಮಾಲಿಕೆ ತಾರೆಂದು ಈಗ ಕಳುಹಿದ್ದೇನೆ.

ಶಾಲಿನಿ: ಸಖಿ, ಮಹಾರಾಣಿಯವರು ಶರ್ಮಿಷ್ಠೆಗೆ ಕೊಡಬೇಕೆಂದುಕೊಂಡಿದ್ದ ಒಡವೆ ವಸ್ತ್ರಗಳು, ಸುವರ್ಣ ಭಾಂಡಗಳು, ನಾನಿರ ಮಂದಿ ದಾಸಿಯರು—ಎಲ್ಲರನ್ನೂ ನಿನಗೇ ಬಳುವಳಿಯಾಗಿ ಕೊಡುವರಂತೆ. ಹಿಂದೆಂದೂ ಎಲ್ಲೂ ನಡೆದಿರಬಾರದು—ಅಷ್ಟು ಅದ್ದೂರಿಯಿಂದ ಲಗ್ನ ಮಾಡಬೇಕೆಂದು ಮಹಾರಾಜರು ಬಹು ಶ್ರಮಿಸುತ್ತಿರುವರಂತೆ.

ದೇವ: ಈ ಸಂಭ್ರಮ ನನಗಾಗಿ ಅಲ್ಲ, ಸಖಿ! ನನ್ನ ತಂದೆಯು ಸೈನ್ಯ ಸಡೆಯಲಿಕ್ಕಾಗಿ ನನಗೆ ಈ ಅದರೋಪಚಾರ!

ಶಾಲಿನಿ: ಈಚೆಗೆ ನಿನ್ನ ಸ್ವಭಾವವೇ ಬದಲಿಸಿದೆ, ಸಖಿ! ನಿಷ್ಕಾರಣ ಸಂಶಯ ಪಡುತ್ತಿರುವೆ. ಪ್ರತಿಫಲಾಪೇಕ್ಷೆಯಿಲ್ಲದ ಕರ್ಮ ಫಲವದುರ್ಲಭ. ಗುರುಕೃಪೆ, ದೇವ ಕೃಪೆಮೊರಕಲೆಂದು ಕಾರ್ಯಮಾಡುವುದು ತಪ್ಪೇನಲ್ಲವಲ್ಲಾ! ರಾಜದಂಪತಿಗಳಿಗೆ ನಿನ್ನ ಮೇಲೆಯೂ ಬಹುಪ್ರೀತಿಯಿದೆ. 'ಆದೋ, ಶರ್ಮಿಷ್ಠೆ ಓಡೋಡಿ ಬರುತ್ತಿದ್ದಾಳೆ.

ದೇವ: ಇಷ್ಟು ಬೇಗನೆ ಬಂದಳೇ? ಬರಲಿ. (ತೀವ್ರಿಯಿಂದ ಕೂರುವಳು. ಶರ್ಮಿಷ್ಠೆ ಗುಲಾಬಿ ದಂಡೆಯನ್ನು ತಂದು ಸಂಭಯದಿಂದ ಒಪ್ಪಿಸುವಳು. ದೇವಯಾನಿ ಆ ದಂಡೆಯನ್ನತ್ತ ಎಸೆಯುವಳು.) ಎಲೈ ತೊತ್ತೆ, ಎಷ್ಟು ನಿನ್ನ ಉದ್ಧಟತನ? ನಾನು ಸೇವಂತಿಗೆ ದಂಡೆಯನ್ನು ಮುಡಿಯಬೇಕೆಂದಿದ್ದೆ; ಗುಲಾಬಿ ದಂಡೆಯನ್ನೇಕೆ ತಂದೆ?

ಶರ್ಮಿ: (ವೆಚ್ಚಾಗಿ) ತಪ್ಪಾಯಿತು, ಒಡತಿ! ತಿಳಿಯಲಿಲ್ಲ. ಸೇವಂತಿಗೆ ದಂಡೆ ತರಲೇ?

ದೇವ: ನಿನಗೆ ಇದೆಲ್ಲಾ ತಿಳಿಯದು! ಕೈಗೆ ಒದಟಿಯಾಗಿ ಸಿಕ್ಕಿದಾಗ ಹಂಗಿಸಿ ಭಂಗಿಸಲು ಮಾತ್ರ ತಿಳಿಯುವುದೆ? ಯಾವ ಪುಷ್ಪಗಳನ್ನು ಕಟ್ಟಿ ತರಲೆಂದು ನನ್ನನ್ನೇಕೆ ಕೇಳಲಿಲ್ಲ? ನಿನ್ನ ಹೆಮ್ಮೆ ಇನ್ನೂ ಹೋಗಿಲ್ಲ. ಆ ಬೆತ್ತವನ್ನಿತ್ತ ತಾ, ಶಾಲಿನಿ! (ಶಾಲಿನಿ ಅಳುಕುತ್ತಾ ಬೆತ್ತ ಕೊಡುವಳು. ದೇವಯಾನಿ ಬೆತ್ತದಿಂದ ನಾಲ್ಕೇಟು ಹೊಡೆಯುವಳು. ಶರ್ಮಿಷ್ಠೆ ತಲೆತಗ್ಗಿಸಿ ಏಟು ತಿನ್ನುವಳು.) ಇನ್ನು ಮುಂದೆ ತಿಳಿಯುವುದೇನು? ಏಕೆ ಹಾಗೆ ಕಲ್ಲುಕಂಭವಂತೆ ನಿಂತೆ? ಮಾತನಾಡು.

ಶಾಲಿನಿ: ಇದೇನು ವಿಪರೀತ, ದೇವಯಾನಿ? ಉಗುರಲ್ಲಾಗುವ ಕೆಲಸಕ್ಕೆ ಈ ದುಂಡಾವರ್ತಿಯೇಕೆ?

ದೇವ: ಎಲೈ ದಾಸಿ, ನೀನೇ ಹೇಳು—ನಾನು ಮಾಡಿದ್ದು ತಪ್ಪೇನು?

ಶರ್ಮಿ: ಒಡತಿ, ನನ್ನನ್ನು ಎಚ್ಚರಿಸಲು ನಿಮಿತ್ತ ಶಿಕ್ಷೆ ನನಗೆ ರಕ್ಷೆ. ನಿಮ್ಮ ಒಪ್ಪು ತಪ್ಪುಗಳನ್ನು ವಿಮರ್ಶಿಸುವ ಅಧಿಕಾರ ಈ ದಾಸಿಗಿಲ್ಲ. ನಾನು ಮಾಡಿರುವ ಘೋರ ಅಪರಾಧಕ್ಕೆ ನೀವು ಕೊಡುವ ಶಿಕ್ಷೆ ಬಹಳ ಅಲ್ಪ.

ದೇವ: (ಜಿಗುಪ್ಸೆಯಿಂದ ಬೆತ್ತವನ್ನೆಸೆದು) ಸಾಕು, ಸಾಕು ನಿನ್ನ ವೇದಾಂತ. ನನಗೆ ಸೇವಂತಿಗೆ ದಂಡೆ ಬೇಡ. ವಸಂತೋದ್ಯಾನಕ್ಕೆ ಹೋಗಿ, ಅಮೃತಸರೋವರದ ನೀರನ್ನು ಕೊಡದಲ್ಲಿ ಹೊತ್ತು ತಂದು, ನನ್ನನ್ನು ನೂಕಿದ್ದ ಬಾವಿಯನ್ನು ತುಂಬಿಸು. ಶಾಲಿನಿ, ಬಿದ್ದ ರಭಸಕ್ಕೆ ತಲೆಯೊಡೆದು ನಾನು ಸಾಯಬೇಕಾಗಿತ್ತು. ನನ್ನ ಅದೃಷ್ಟ—ವಾರದ ಹಿಂದೆ ಹದಮಳೆ ಬಿದ್ದಾಗ ಬಾವಿಯ ತಳದಲ್ಲಿ ನೀರಿತ್ತು; ಆದ್ದರಿಂದ ಬದುಕಿದೆ. ಎಲೈ ತೊತ್ತೇ—ಮಾತನ್ನಾಲಿಸುತ್ತ ಇನ್ನೂ ಇಲ್ಲೆ. ನಿಂತಿರುವೆಯಲ್ಲಾ! ನಡೆ, ಒಂದು ಕ್ಷಣವೂ ನೀನು ವಿಶ್ರಮಿಸಕೂಡದು, ಯಾರನ್ನೂ ಕಣ್ಣೆತ್ತಿ ನೋಡಕೂಡದು, ಯಾರೊಡನೆಯೂ ಮಾತನಾಡಕೂಡದು, ಹೂಂ, ಓಡು.

ಶರ್ಮಿ: (ನಮ್ರತೆಯಿಂದ) ಅಪ್ಪಣೆ, ಒಡತಿ. (ಓಡುವಳು)

ದೇವ: ಶಾಲಿನಿ,— ನನ್ನ ಮನೋಭೀಷ್ಟಗಳೆಲ್ಲ ಈಡೇರಿವೆ. ಆದರೂ ನನಗೇಕೆ ಶಾಂತಿಯಿಲ್ಲ? ನನ್ನೆದೆಯಲ್ಲಿಯ ಈ ಅಂತಃಕ್ಷೋಭೆ ಏಕೆ ಕಡಿಮೆಯಾಗಲೊಲ್ಲದು? ಶರ್ಮಿಷ್ಠೆಗೆ ಚುಚ್ಚುನುಡಿಯಾಡಿ,

ಅವಳು ಪರಿತಪಿಸುವುದನ್ನು ನೋಡಿ ನಲಿಯಬೇಕೆನ್ನುವೆನು. ಅವರ ಅವಳ ಈ ಹೊಸ ವಿನಯ ವಿಧೇಯತೆ ಕಂದು ಬೆಪ್ಪಾಗಿದ್ದೇನೆ. ನನಗೇನು ಮಾಡಲೂ ತೋರುತ್ತಿಲ್ಲ.

ಶಾಲಿನಿ: ಸಖಿ, ಬೆಂಕಿಯನ್ನು ತುಪ್ಪ ಸುರಿದು ನಂದಿಸಲಾದೀತೆ? ಪ್ರತೀಕಾರ ತೃಷೆ ಎಂದಾದರೂ ತಣಿಯುವುದೆ? ಅದ ಕಾರಣವೇ ಈ ಅಂತಃಕ್ಷೋಭೆ ಶರ್ಮಿಷ್ಠೆಯನ್ನು ನುಗಿಲಿತ್ತರದ ದರ್ಪಸಿಂಹಾಸನದಿಂದ ಕೆಡುಹಿದ್ದಿಯಾ. ಆದರೂ ನಿನಗೆ ತೃಪ್ತಿಯಿಲ್ಲ. ಅವಳನ್ನು ಪಾತಾಳಕ್ಕೆ ಮೆಟ್ಟಿದರೂ ನಿನಗೆ ತೃಪ್ತಿಯಾಗಲಾರದು. ಈ ಅಸುರೀ ಗುಣವನ್ನು ತ್ಯಜಿಸು. ದೈವೀ ಗುಣವಾದ ಕ್ಷಮೆಯನ್ನು ಅವಲಂಬಿಸು. ತೀಕ್ಷ್ಣರೋಷದಿಂದಲೂ, ಪೂರ್ವದ್ವೇಷದಿಂದಲೂ ಅಪಚಾರ ಮಾಡಿದ ಅವಳನ್ನು ಕ್ಷಮಿಸು. ಅವಳನ್ನು ಸಖಿಯೆಂದು ಕಂಡುಕೊ.

ದೇವ: ಏನು? ಸಮಾನಸ್ತಂದಳಾದ ಸಖಿಯಂತೆ ಕಾಣಬೇಕೆ? ಆ ವಿಷಕನ್ಯೆ ನನ್ನ ಸರ್ವಸ್ವಾಪಹಾರ ಮಾಡಿಯಾಳು! ಅವಳನ್ನು ಹದ್ದುಬಸ್ತಿನಲ್ಲಿಟ್ಟರೆ ಸಾತ್ರ ಕ್ಷೇಮ. (ಓಲಗದ ಸದ್ದು ಕೇಳುವುದು)

ಶಾಲಿನಿ: ನಡೆ ಸಖಿ, ಅಹೋ, ಓಲಗದವರು ಇತ್ತ ಬರುತ್ತಿದ್ದಾರೆ. ಅಲಂಕೃತಳಾಗುವೆಯಂತೆ, ನಡೆ. (ಇಬ್ಬರೂ ಹೋಗುವರು. ನಳಿನಿಯ ಪ್ರವೇಶ)

ನಳಿನಿ: ಹಾಯ್, ನನ್ನಂತಹ ದುರ್ದೈವಿ ಬೇರಾರಿದ್ದಾರೆ? ಈ ದಿನ ಶರ್ಮಿಷ್ಠೆಯ ಸ್ವಯಂವರನಾಗಬೇಕಾಗಿತ್ತು. ದಿವ್ಯಾಭರಣ ತೊಟ್ಟು ಅವಳ ಹಿಂದೆ ರಾಜಸಮೂಹದಲ್ಲಿ ಹಂಸಗಮನದಿಂದ ಹೋಗುವ ಕನಸು ಕಂಡಿದ್ದೆ. ನನ್ನ ಕನಸೆಲ್ಲಾ ಭಗ್ನವಾಯಿತು. ಅಯ್ಯೋ, ಈ ದಿನ ನನ್ನನ್ನು ಕೇಳುವವರಿಲ್ಲ. ರಾಜಪುತ್ರಿಯ ಆಪ್ತ ಸಖಿಯೆಂದು ಹೊಟ್ಟೇಕಿಚ್ಚು ಪಡುತ್ತಿದ್ದವರಿಗೆಲ್ಲಾ ಈ ದಿನ ಬಹಳ ಹಿಗ್ಗು. ನನ್ನನ್ನು ಎದುರಿಗೇ ಹಂಗಿಸುವರು, ಬೇಕೆಂದೇ ದೇವಯಾನಿಯನ್ನು ನನ್ನೆದುರು ಹೊಗಳುವರು. ಅಯ್ಯೋ, ಬಳುವಳೆಯ ದಾಸಿಯರಾಗಿ ಆಯ್ಕೆಯಾಗಿರುವ ಆ ಸಾವಿರಮಂದಿ ದಾಸಿಯರೋ ಇಂದ್ರ ಪದವಿಯೇ ದೊರೆಕಿದಂತೆ ಸಂಭ್ರಮದಿಂದಿರುವರು! ಆ ಅಟ್ಟಹಾಸ, ಅಟಾಟೋಪಗಳನ್ನು ಹೇಗೆ ಕೇಳಿ ಸೈರಿಸಲಿ! ರಾಣಿಯವರೂ ನನ್ನ ಮೇಲೆ ಸಿಟ್ಟಾಗಿದ್ದಾರೆ—ನಾನು ಶರ್ಮಿಷ್ಠೆಯ ಕೈ ತಡೆಯಲಿಲ್ಲವೆಂದು! ಶರ್ಮಿಷ್ಠೆಯನ್ನು ನೋಡಬಾರದಂತೆ ನಾನು. ಶಾಲಿನಿಯನ್ನಾದರೂ ಕಂಡು ನನ್ನ ದುಃಖ ತೋಡಿಕೊಳ್ಳೋಣವೆಂದು ಬಂದೆ. ಆ ದೇವಯಾನಿ ಲಗ್ನವಾಗಿ ತೊಲಗಿಹೋದರೆ, ರಾಣಿಯವರಾದರೂ ನನ್ನ ಮೇಲೆ ಪ್ರಸನ್ನರಾದಾರು. ಓಹೋ, ಶಾಲಿನಿಯೂ ದೇವಯಾನಿಯೊಡನೆ ಇದ್ದಾಳೆ. ಆ ದೇವಯಾನಿಯ ಕಣ್ಣಿಗೆ ಬಿದ್ದರೆ ನನ್ನನ್ನು ಹಂಗಿಸಿ ಭಂಗಿಸುವುದು ನಿಶ್ಚಯ. ಯಾರ ಕಣ್ಣಿಗೂ ಬೀಳದಂತೆ ಎಲ್ಲಾದರೂ ಅಡಗುವೆ. (ಹೋಗುವಳು)

[ಓಲಗವಾಗುವುದು. ಕೆಲವು ಕ್ಷಣಗಳನಂತರ ದೇವಯಾನಿ ಬರುವಳು. ದೇವಯಾನಿ ಬಿಳಿಯ ದುಕೂಲವುಟ್ಟಿದ್ದಾಳೆ. ಶುಭ್ರ-ಸ್ನಾತಳಾಗಿದ್ದಾಳೆ. ಜಡೆಹೆಣೆಯದೆ ಕೂದಲು ಇಳಿಬಿದ್ದಿದೆ. ಕೆಂಪು ಕುಪ್ಪಸ ಧರಿಸಿದ್ದಾಳೆ. ಮುತ್ತಿನ ಹಾರಗಳು, ಕರೀಮಣಿ ಕತ್ತಿನಲ್ಲಿವೆ. ಬೈತಲೆಬಟ್ಟು ಇತ್ಯಾದಿ ಸರ್ವಾಭರಣಭೂಷಿತೆಯಾಗಿದ್ದಾಳೆ. ಮದುಮಗಳ ಲಜ್ಜಾಭಾವ ಬೇರೆ. ಮುಲ್ಲಿಗೆಯ ಮಾಲೆ ಕೊರಳಲ್ಲಿದೆ.]

ದೇವ: (ಶಾಲಿನಿಯ ಹೆಗಲ ಮೇಲೆ ಕೈಹಾಕಿ) ಸಖಿ, ಈ ದಿನ ನಾನು ಪರಮಸುಖಿ. ಆನಂದದಿಂದ ನನ್ನೆದೆ ತುಂಬಿ ಹರಿಯುತ್ತಿದೆ. ಅಂತಹ ಪುರುಷಶ್ರೀಷ್ಠನನ್ನು ಪಡೆದ ನಾನೇ ಧನ್ಯೆ. ರಾಜರಾಣಿಯರು ಸ್ವಂತ ಮಗಳಂತೆಯೇ ನನ್ನನ್ನು ಕಂಡುಕೊಂಡರು. ಆದರೂ ಎಲ್ಲೋ ನೋವಿನ ನರವೊಂದು ಮಿಡಿಯುತ್ತಿದೆ. ಶರ್ಮಿಷ್ಠೆಯ ವಿಷಯವಾಗಿ ಚಿಂತಿಸಿದಷ್ಟೂ ತಾಪವೇರುತ್ತದೆ. ನೀನೆಂದಂತೆ ಅವಳನ್ನು ಕ್ಷಮಿಸಿಬಿಡುವೆನು. ಸಾವಿರ ಮಂದಿ ದಾಸಿಯರಿರುವಾಗ ನನಗವಳಿಂದ ಏನಾಗಬೇಕು? ಅವಳ ಗರ್ವಭಂಗವಾಯಿತು; ಇನ್ನು ಅವಳೆಲ್ಲಾದರೂ ಸುಖವಾಗಿರಲಿ.

ಶರ್ಮಿ: (ನಕ್ಕು) ಸಖಿ, ಆಲಸ್ಯ ಮಾಡಿದರೆ ಅಮೃತವೂ ವಿಷವಾಗುತ್ತದೆ. ಈಗ ನಿನ್ನ ಕ್ಷಮೆಯೂ ನಿಷ್ಫಲ. ರಾಜದಂಪತಿಗಳು ಅವಳನ್ನು ತ್ಯಾಗಮಾಡಿದ್ದಾರೆ. ಅವಳು ದಾಸ್ಯದ ಪ್ರತಿಜ್ಞೆ ತೆಗೆದುಕೊಂಡಿದ್ದಾಳೆ. ನಿನ್ನ ಹೊರತು ಅವಳಿಗೆ ಅನ್ಯ ಆಶ್ರಯವೇ ಇಲ್ಲ. ನಿನ್ನ ಬಿಟ್ಟು ಇನ್ನೆಲ್ಲಿ ಹೋದಾಳು? ಅಹೋ, ಯಯಾತಿ ಮಹಾರಾಜರು ಬರುತ್ತಿದ್ದಾರೆ. ನಾನು ಮರೆಯಾಗುವೆನು. ಆದರದಿಂದ ಸ್ವಾಗತಿಸಮ್ಮಾ.

[ಶಾಲಿನಿ ಹೋಗುವಳು. ಯಯಾತಿ ಮಹಾರಾಜ, ರಾಜಯೋಗ್ಯ ಉಡುಪು ಧರಿಸಿಬರುವ. ಕೊರಳಲ್ಲಿ ಮುಲ್ಲಿಗೆಯ ಹಾರ]

ದೇವ: (ಸಂಭ್ರಮದಿಂದ ಸ್ವಾಗತಿಸುತ್ತ) ಆರ್ಯಪುತ್ರರಿಗೆ ಆಶ್ರಮದ ಹಾದಿ ತಿಳಿಯುತೇ? ಆಶ್ರಮ ಮನಸ್ಸಿಗೆ ಬಂದಿತೇ?

ಯಯಾತಿ: ನೀನಿರುವೆಡೆಗೆ ಸ್ವಯ ತಾನಾಗಿ ಕರೆತರುವಾಗ ದಾರಿ ತಿಳಿಯದೇ ಪ್ರಿಯೆ? ಆಶ್ರಮದ ಉದ್ಯಾನ ಸೊಗಸಾಗಿದೆ. ವಸಂತೋದ್ಯಾನದೊಂದಿಗೆ ಸ್ಪರ್ಧೆ ನಡೆಸುತ್ತಿದೆ. (ಆಸನದಲ್ಲಿ ಕೂಡುವನು).

ದೇವ: ಅದೆಲ್ಲವೂ ನಿಮ್ಮ ಮನಸ್ಸಿನ ದೊಡ್ಡತನದಿಂದ. ಇದು ಅಧ್ಯಯನದ ಸ್ಥಳ. ವಸಂತೋದ್ಯಾನ ಆಮೋದ-ಪ್ರಮೋದಗಳಿಗಾಗಿ.

ಯಯಾತಿ: ಪ್ರಿಯೆ, ನನ್ನ ಆಪ್ತಗೆಳೆಯ ವಿದೂಷಕನಿಗೆ ನಿನ್ನನ್ನು ಪೊದಲು ಭೇಟಿಮಾಡಿದ ಸ್ಥಳ ತೋರಲು ವಸಂತೋದ್ಯಾನಕ್ಕೆ ಹೋಗಿದ್ದೆ. ಅಲ್ಲೊಂದು ಅಪೂರ್ವ ದೃಶ್ಯವನ್ನು ಕಂಡೆ. ಬಲ್ಲಿ ಅಸಾಮಾನ್ಯ ಲಾವಣ್ಯವತಿಯೊಬ್ಬಳು ಸರೋವರದಿಂದ ನೀರನ್ನು ತಂದು ತಂದು ಬಾವಿಗೆ ತುಂಬುತ್ತಿದ್ದಳು. ನನ್ನುತ್ತ ನೋಡಲೂ ಇಲ್ಲ. ನಾವಾಗಿ ಮಾತನಾಡಿಸಿದಾಗ ಉತ್ತರವನ್ನೂ ಕೊಡಲಿಲ್ಲ ಅವಳಾರೆಂದು ನಿನಗೆ ಗೊತ್ತೇ?

ದೇವ : (ಹುಬ್ಬುಗಂಟಿಕ್ಕಿ) ಸೊತ್ತು. ಅವಳು ನಳ್ಳ ದಾಸಿ.

ಯಯಾತಿ : ಆಹಾ, ಈ ದೇಶದಲ್ಲಿ ದಾಸಿಯರೂ ಅಷ್ಟು ಕಿಲುನೆಯರಾಗಿರುವರೇ? ಅಂತಹ ಚೆಲುವೆಯರಿಂದ ಸೇವಿಸಲ್ಪಡುವ ನೀನೇ ಧನ್ಯ. ಪ್ರಿಯೆ, ರಾಜಕಾರ್ಯದ ನಿಮಿತ್ತ ನಾನು ನಾಳೆಯೇ ಹೊರಡಬೇಕು. ನಿನ್ನ ಪೂಜ್ಯ ತಂದೆಯವರಿಗೆ ಈ ದಿನವೇ ವಿಷಯ ತಿಳಿಸುವೆನು. ನಾಳೆ ಹೊರಡಲು ನೀನೂ ಸಿದ್ಧಳಾಗಿರುವೆಯಾ?

ದೇವ : ನಿಮ್ಮನುಕೂಲನಿದ್ದಂತಾಗಲಿ.

ಯಯಾತಿ : (ಎದ್ದು ಹೊರಡುತ್ತ) ಎಲ್ಲರಿಗೂ ವಿಷಯ ತಿಳಿಸು, ಪ್ರಿಯೆ, ನಾನಿನ್ನು ಪ್ರಯಾಣಕ್ಕೆ ಸಿದ್ಧ ಮಾಡುವೆನು. (ಹೋಗುವನು. ಶಾಲಿನಿ ಅತ್ತಣಿಂದ ಪ್ರವೇಶಿಸುವಳು).

ದೇವ : (ದುಗುಡದಿಂದ) ಕೇಳಿದೆಯಾ ಸಖಿ ವಿಷಯವನ್ನು! ಶರ್ಯಪುತ್ರರ ದೃಷ್ಟಿ ಶರ್ಮಿಷ್ಠೆಯ ಮೇಲೆ ಬಿದ್ದಿದೆ. ವಸಂತೋದ್ಯಾನಕ್ಕೆ ಹೋಗಿದ್ದರಂತೆ; ಅವಳನ್ನು ಕಂಡ ವಿಷಯ ಹೇಳಿ ಅವಳಾರೆಂದು ಆಸಕ್ತಿಯಿಂದ ವಿಚಾರಿಸಿದರು. ನಾನು ಮಾತನಾಡಬೇಡವೆಂದು ವಿಧಿಸಿದ್ದು ಒಳ್ಳೆಯದೇ ಆಯಿತು. ಅವಳ ಕುಲಗೋತ್ರ ತಿಳಿದಿದ್ದರೆ ಇವರ ಮೆಚ್ಚಿಗೆಯೊಡನೆ ಕರುಣೆಯೂ ಬೆರೆತು ಪ್ರಣಯಾಂಕುರವಾಗುತ್ತಿತ್ತೇನೋ! ನನಗಂತೂ ದಿಕ್ಕೇ ತೋಚದಂತಾಯಿತು. ಸಖಿ ಈಗೇನು ಮಾಡಲಿ ಹೇಳು?

ಶಾಲಿನಿ : (ಹಾಸ್ಯದಿಂದ) ಸಖಿ, ಈಗ ಸ್ವಲ್ಪ ಸಮಯದ ಒಂದೆ ಶರ್ಮಿಷ್ಠೆಯನ್ನು ಕ್ಷಮಿಸಿರುವೆನೆಂದು ಹೇಳಿದೆ. ಈಗ ಯೋಗ್ಯ ಅವಕಾಶ ಸಿಕ್ಕಿದೆ; ಅವಳನ್ನು ದಾಸ್ಯದಿಂದ ಬಿಡುಗಡೆ ಮಾಡಿ ನಿಯು ರಾಣಿಯೆಂದು ನಿನ್ನ ಪತಿಗೆ ಒಪ್ಪಿಸು.

ದೇವ : (ಉದ್ರಿಕ್ತಳಾಗಿ) ಏನೆಂದೆ? ಅಬ್ಬಾ, ಕವಿಯಿಂದ ಳಲಾರೆ ನಿನ್ನ ಮಾತುಗಳನ್ನು ನನ್ನ ಮನಸನ್ನರಿಯದೆ ಘಾಸಿಗೊಳಿಸುತ್ತಿರುವೆ. ಹತ್ತಾರು ಸವತ್ನಿಯರ ನುಗ್ಗೆ ತಾನೂ ಒರ್ವ ರಾಣಿಯಾಗಿರುವುದು ಕ್ಷತ್ರಿಯಕನ್ಯೆಗೆ ಸಾಧ್ಯವಿರಬಹುದು, ಯೋಗ್ಯವಿರಬಹುದು. ಬ್ರಾಹ್ಮಣಕನ್ಯೆಯಾದ ನನ್ನ ಅಭಿಮಾನಕ್ಕೆ ಅದು ಸಾಧ್ಯ. ಪತಿಯ ನಿರ್ವ್ಯಾಜ ಅನ್ಯಭೀಜಾರ ಪ್ರೇಮಬೇಕು. ನನಗೆ. ಪತಿಯನ್ನೇ ಏಕೈಕ ದೈವವೆಂದು ಭಾವಿಸಿ ನಾನು ಹೇಗೆ ಪಾತಿವ್ರತ್ಯ ಕ್ಷೆ ಕೈಗೊಂಡೆನೋ ಹಾಗೆಯೇ ನನ್ನ ಪತಿಯು ಸಹ ಏಕಪತ್ನೀವ್ರತ ಕ್ಷೆ ಕೈಕೊಂಡಿರುವರು. ಪತಿಯ ಪ್ರೇಮ ನನ್ನ ಹೊರತು ಬೇರೆ ಳವರಲ್ಲಿ ಪ್ರವರ್ತಿಸಿದರೆ, ನನ್ನೆದೆ ಒಂದೇ ಒಡೆದು ಹೋಗುವುದು. ರಾಗರವಂತಿರುವ ನನ್ನ ಸಂಸಾರ ಒಂದೇ ಉಸ್ಪು ನೀರಾಗುವುದು. ಯವನು ತಂದುಕೊಂಡು) ಸಖಿ, ಹಾಸ್ಯಕ್ಕೂ ಸಹ ಹಾಗೆ ಮಾತನಾಡಬೇಡ.

ಶಾಲಿನಿ : ಕ್ಷಮಿಸು, ಸಖಿ, ನಿನ್ನ ಮನ ತಿಳಿಯದೆ ಮಾತನಾಡಿದೆ. ಆದರೆ ನಿನ್ನ ಪತಿ ಕ್ಷತ್ರಿಯರಾಜ. ಬಹುಪತ್ನೀತ್ವ ಅವರಿಗೆ ಸಹಜ. ಕೇವಲ ನಿನ್ನ ಪ್ರೇಮಬಂಧನವೊಂದರಿಂದಲೇ ನಿನ್ನ ಪತಿಯ ಮನಸ್ಸು ನಿನ್ನ ಅಂಕೆತದೊಳಗಿರುವುದೇ ಎಂದು ನನ್ನ ಸಂದೇಹ ನಿನ್ನ ಪತಿ ಧರ್ಮಭೀರು. ಆದ್ದರಿಂದ ನಿನ್ನ ಪ್ರೇಮು ಕೆ ಧರ್ಮಬಂಧನದ ರಕ್ಷೆಯೂ ಇರಲಿ! ನಿನ್ನ ಪತಿ ನಿನ್ನ ಪೂಜ್ಯಪಿತರಿಗೆ ವಚನವನ್ನೂ ಕೊಡಲಿ. ಆಗ ನಿನ್ನ ಪ್ರೇಮು ಸುಭದ್ರವಾಗುವುದು.

ದೇವ : ನಿನ್ನ ಸಲಹೆ ಬಹುಸೂಕ್ತ; ಆದರೆ ಈ ಶರ್ಮಿಷ್ಠೆಯನ್ನೇನು ಮಾಡಲಿ? ಇಲ್ಲಿಯೇ ತೊರೆದು ಹೋಗುವಂತಿಲ್ಲ. ಅಲ್ಲಿಗೆ ಕರೆದೊಯ್ಯಲು ನನಗೆ ಅಂಜಿಕೆ. ನಿಷಿದ್ಧವಸ್ತು ನಿನಲ್ಲೇ ವೀರರಿಗೆ ಬಹಳ ಆಕರ್ಷಣೆಯಲ್ಲವೇ? ಇಲ್ಲಿಯ ಬಳುವಳಿಯ ದಾಸಿಯರು ಮನದಲ್ಲೇ ಶರ್ಮಿಷ್ಠೆಯ ಬಗ್ಗೆ ಮರುಗುತ್ತಿರುವುದು ಸಹಜ. ಸಮಯಸಾಧಿಸಿ, ಶರ್ಮಿಷ್ಠೆಯ ಪಕ್ಷವಹಿಸಿ, ಅವರೆನಗೆ ಅಹಿತ ಬಗೆದರೇನು ಗತಿ? ಸಖಿ, ನನಗೇಕೋ ತುಂಬಾ ಭಯವಾಗುತ್ತಿದೆ. ಖಂಡಿತ ನೀನು ನನ್ನೊಡನೆ ಬರಲೇಬೇಕು. (ಅವಳ ಹೆಗಲ ಮೇಲೆ ತಲೆಯಿಟ್ಟು ಬಿಕ್ಕುವಳು.)

ಶಾಲಿನಿ : ಸಖಿ, ಗುರುಗಳಪ್ಪಣೆಯಾದರೆ ನಿನ್ನೊಡನೆ ಖಂಡಿತ ಬರುವೆ. ಅದಕ್ಕೇಕಿಷ್ಟು ಕಳವಳ? ಶರ್ಮಿಷ್ಠೆಯ ಸ್ವಭಾವದಲ್ಲಿ ಅಮ್ಲಜ ಮಾರ್ಪಾಡಾಗಿದೆ. ನಿನ್ನ ಆಣತಿಯಂತೆ ಯಾರನ್ನೂ ಕಣ್ಣೆತ್ತಿ ನೋಡದೆ, ಕಿವಿಗೊಟ್ಟು ಕೇಳದೆ, ಮೌನವಾಗಿ ಅವಳಿದ್ದುದೇ ಅದಕ್ಕೆ ಸಾಕ್ಷಿ. ಅವಳೀಗ ಅನನ್ಯಶರಣಳಾಗಿ ದಾಸ್ಯವ್ರತ ಕೈಗೊಂಡಿದ್ದಾಳೆ. ನಿನ್ನ ಪತಿಯ ಮತ್ತಜ್ಞನಾದ ಪುರೂರವ ಉರ್ವಶಿಗಾಗಿ ಆಶೋಕೋದ್ಯಾನವೆಂಬ ಅಂತಃಪುರೋದ್ಯಾನವನ್ನು ನಿರ್ಮಿಸಿದ್ದನೆಂದು ಕೇಳಿರುವೆ. ಅಲ್ಲಿ ಶರ್ಮಿಷ್ಠೆ ಯಾರ ಕಣ್ಣಿಗೂ ಬೀಳದಂತಿರಲು ವ್ಯವಸ್ಥೆ ಮಾಡೋಣ—ಅವಳ ಚಿಂತೆ ಬಿಡು.

ದೇವ : (ಆನಂದದಿಂದ ಅವಳನ್ನಾಲಿಂಗಿಸಿ) ಸಖಿ, ನನ್ನ ಮನಸ್ಸಿಗೆ ಈಗ ಸಮಾಧಾನವಾಯಿತು. ನಿನ್ನಂತಹ ಪರಮಾಪ್ತಳನ್ನು ಖಂಡಿತ ಬಿಟ್ಟಗಲಲಾರೆ. ತಂದೆಯವರಿಗೆ ಹೇಳಿ ನಿನ್ನನ್ನೂ ಕರೆದೊಯ್ಯುವೆ.

ಶಾಲಿನಿ: ಹಾಗೇ ಮಾಡು ಸಖಿ. ನಿನ್ನ ವಿಶ್ವಾಸದ ಬಂಧಿ ನಾನು.

[ತೆರೆ ಬೀಳುವುದು]

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಷ ರೋಡ್, ಧಾರವಾಡ

ಕೊಳದ ಬಳಿಯ ಸುಂದರಿ

ಡಿ. ಈಶ್ವರ ಪೆರಡಾಲ, ಹೊಸದಿಲ್ಲಿ

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾ ಲಹರಿ !

ತುಂಬಿದ ಕೊಡವನು ಕೆಲದಲ್ಲಿಟ್ಟು.
ಜಲದಲಿ ಕಾಲುಗಳನ್ನಿಳಿಬಿಟ್ಟು.
ಕೊಳದಿಂದೊಂದು ಕಮಲವ ಕಿತ್ತು
ತುಟಿಗಳಿಗೊತ್ತಿ ಮುತ್ತನ್ನಿತ್ತು
ಗುಣುಗುಣಿಸುತ ನಿಟ್ಟುಸಿರನ್ನಿಟ್ಟು.

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇನೊ ಕನಸಿನ ಕಿನ್ನರಿ !

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಕರ ಸಲ್ಲವಗಳಾವರಿಸಿಹ ಕಮಲ–
ಚೆಲು ಜೆಲ್ಲುವ ಅವಳಾ ಮುಖ ಕಮಲ
ಸಸಿಹದಿ ಕಾಣುತೆ ಲಜ್ಜೆಯ ಕೆಂಪು
ನೀರಲು ಬಹುದೆ ಮೊಗದಾ ಚೆಲುವು ?
ತುಟಿಗಳ ಸೋಕುತ ಕಮಲದ ಕಂಪು
ಏರಲು ಬೊರೆಯುತೆ ಅವಳೆದೆ ಯೊಲವು ?

ಕೊಳದ ತಡಿಯ ಕಿರು ಬಂಡೆಯನೇರಿ
ಕುಳಿತಿಹಳೇನೊ ನವ ಪ್ರೇಮಿ !

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ!

ಮುಖ ಕಮಲವ ನಿಜಕಮಲವಿದೆಂದು
ಚೆಂದುಟಿಗಳ ಕೆಂದಾವರೆಯೆಂದು
ಸುತ್ತುತ ಗುಂಜಿಸುತಿವೆ ಅಳಿನಿಂದು
ಎತ್ತಣದೀ ಹೊಸ ಕಮಲವಿದೆಂದು
ಅಚ್ಚರಿ ಹೆಚ್ಚಲು ಹತ್ತಿರ ಬಂದು
ಹುಚ್ಚಾಗುತೆ ಝೇಂಕರಿಸಿರೆ.ಯಿಂದು.

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇನೇ ಬಲುನಯ್ಯಾರಿ ?

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ವಿರಹವ ಕೊರಗಿಗೆ ಕೊನೆಯೆಂದೆನ್ನುತ
ಮರುಕದಿ ಕೇಳ್ವಳೆ ಶತದಲವ ?
ದೂರದ ಪ್ರಿಯತಮ ಬಾರನವೇತಕೆ,
ತಾರನದೇಕೆ ತುಂಬೊಲವ ?
ಬಿರಿಯುತಲಿರೆ ಎದೆ ಯುಮ್ಮಳ ನೀರಿ
ಅರಸುತ ಅಳಲನು ಮರೆಯುವ ದಾರಿ

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇನು ವಿರಹಿಣಿ ನಾರಿ ?

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಬನವಾಸದೊಳಿಹ ಸೀತಾರಾಮರ
ಅನುಚರನಾಗಿಹ ರಾಮಾನುಜನ–
ಧ್ಯಾನದಿ ದಿನಗಳ ಯುಗಗಳ ತೆರದಿ
ಎಣಿಸೆಣಿಸುತೆ ಹದಿನಾಲು ವತ್ಸರವ
ಮನವನು ಶಿಲೆಯಾಗಿಸುತಲಿ– ತಪದಿ
ಕೊನೆಯನು ಕಾಣುವ ದೃಢ ನಿಶ್ಚಯದಿ

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೀ ಊರ್ಮಿಳೆ—ವರನಾರಿ ?

ಮುಂದುವರಿಯುವುದು

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಮನುತೆಯ ಮಾತಾಪಿತರನ್ನುಳಿದು
ಅಮಿತ ವಿಲಾಸದ ಭೋಗವ ತೊರೆದು.
' ಕಾಮನ ದಹಿಸಿದ ಸೋಮಶೇಖರನೆ
ಸ್ವಾಮಿಯು ತನ್ನನೆಲ್ಲೆ'ಂದು
ಕಾನನ ದಗಲಕು ಅರಸುತ ಸಾರಿ
ಮ್ಲಾನವದನೆ ತಾ ಬಳಲಿಕೆ ಮೊರಿ,

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇ ಯೋಗಿನಿ ಗಿರಿಕುವರಿ ?

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಒಲವಿನೊಳ್ ಮುಗುದೆಯ ಮನವನೆ ಕಸಿದು
ತ್ವರೆಯೊಳು ಗುಪಿತ ವಿವಾಹವು ಮುಗಿದು
ನಗರಿಗೆ ಮರಳಿದ ವರನರಪತಿಯ–
ನೊಗ ಚಂದಿರ ನಾ ಚೆಲುವನೆ ನೆನೆದು
ಜನಪನ ಸಾಸಿರ ನುಡಿಗಳು ಹುಸಿಯೆ ?
ಬಿನದನೆ, ದಿಟವೆ ?– ಅರಿಯದೆ ದಾರಿ.

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇ ಮೇನಕೆಯಾ ಕುವರಿ ?

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಸುರಸುಂದರಿಯೊ, ವನಶಂಕರಿಯೊ !
ಮನನನೆ ಕಲಕುವ ಮಾನಿನಿಯೊ ?
ನರ ಅಪ್ಸರೆಯೊ, ನಿಂಚಿನ ಮರಿಯೊ !
ಕಲ್ಪನೆಯಾಳದ ಸೂರುತಿಯೊ ?
ಭಾವುಕ ನೆದೆಗಡಲನು ಸಲಿಸುಧಿಸಿ
ಭಾವತರಂಗದ ಹೊಳೆಯನೆ ಹರಿಸಿ

ಕೊಳದ ತಡಿಯ ಕಿರುಬಂಡೆಯನೇರಿ
ಕುಳಿತಿಹಳೇನೊ ಭಾವನೆಯರಸಿ !

ಕೊಳದ ಬಳಿಯ ಸುಂದರಿ
ಅವಳ ಮನದೊಳೇನೊ ಯೋಚನಾಲಹರಿ !

ಗೆಳೆಯನಿಗೆ ಹಿತೋಕ್ತಿ

ಸೌ. ಪಾರ್ವತಿದೇವಿ ಹೆಗಡೆ, ಹುಬ್ಬಳ್ಳಿ

೧

ಸಾವು ಅಪ್ಪಿಕೊಳ್ಳಲಿಹುದು ಗೆಳೆಯ ಇಗೊ
ಇಂದು – ಇಲ್ಲ – ನಾಳೆ
ಪರಮ ಪದವಿಗಗೀಗೆ ದುಡಿಯದಿರೆ
ಎಲ್ಲ ಬಾಳು ಹಾಳೆ
ಬದುಕಿ ತಿಳಿಯುವದು ಪರಮ ಸತ್ಯವನು
ಮುಕ್ತಿನಿಲಯ ಬಾಳೆ

೨

ಬದುಕಿ ಸಂಕೋಲೆ ಕಳಚಿಕೊಳ್ಳದಿರೆ
ಸತ್ತರೆಲ್ಲಿ ಮುಕ್ತಿ ?
ಬದುಕಿದಾಗಲೇ ಬಯಸು ಪಡೆಯಲದ
ಬದುಕಿಗುಂಟು ಶಕ್ತಿ
ದೇಹಪಂಜರವ ತೊರೆಯೆ, ಮುಕ್ತಿಯೆ,
ಇದುವು ಬರಿ ಕುಯುಕ್ತಿ

೩

ಕರ್ಮಭೂಮಿಯಿದು ಇಲ್ಲಿ ಒಡೆಯನನು
ಪಡೆದವರಲ್ಲಿ ಪಡೆವೆ.
ಬದಕು ಚಿರವೇ ? ಒಂದೆ ದಾರಿಯಿದೆ
ಯಮಪುರಕ್ಕೆ ಕೆಡೆವೆ.
ಸಾವು ನೆಕ್ಕಲಿದೆ ಬದುಕು ಜೇನನ್ನು
ಬರಿದೆ ಏಕೆ ತಡೆವೆ

೪

ಮುಕ್ತಿದಾಯಕವು ಸತ್ಯತೀರ್ಥದಲಿ, ಪಾವನಿರುವ ಸ್ನಾನ
ನಂಬು ತಿಳಿದು ಸನ್ಮರುವ ಆ ಶ್ರದ್ಧೆ
ನಿನಗೆ ಪರಮ ಯಾನ,
ನಿನ್ನ ನಾಲಗೆಯ ಕರ್ಮವಾಗಿರಲಿ
ಅವನ ನಾಮ ಗಾನ

ಪುಷ್ಯ ಮಾಸದ ರಾತ್ರಿ*

[ಸಣ್ಣ ಕಥೆ]

ಶ್ರೀ. ಕೆ. ಕೆ. ಕುಲಕರ್ಣಿ, ರಾ. ಭಾ. ವಿಶಾರದ, ಎಸ್. ಟಿ. ಸಿ. ವಿಜಾಪೂರ

ಬಡ ಒಕ್ಕಲಿಗ ಹೊಲದಲ್ಲಿ ಬೆಳೆವ ಬೆಳೆ, ಅವನ ಮನೆಗೆ ಬಂದು ಬೀಳುವುದೆಂದರೆ, ಆ ಒಕ್ಕಲಿಗ ಧೈರ್ಯಶಾಲಿಯೇ ಆಗಿರಬೇಕು. ಹಲ್ಯಾನಂತಹ ಒಕ್ಕಲಿಗ, ಪೂಗಿಯ ಚಳಿಯಿಂದ ತನ್ನ ಮೈಯನ್ನು ಉಳಿಸಿಕೊಳ್ಳಬೇಕೋ, ಹೊಲದ ಬೆಳೆಯನ್ನು ಕಾಯ್ದುಕೊಳ್ಳಬೇಕೋ ?

ಹಲ್ಯಾ ಬಂದು ಹೆಂಡತಿಗೆ ಅಂದನು— 'ಸಹನಾ, ಬಂದಿದ್ದಾನೆ. ನೀನು ಇಟ್ಟ ರೂಪಾಯಿಗಳನ್ನು ಕೊಡು. ಅವನಿಗೆ ಕೊಡುವೆ. ಹೇಗಾದರೂ ಋಣಮುಕ್ತನಾಗಬೇಕಲ್ಲವೇ ?

ಮುನ್ನಿಯು ಕಸ ಉಡುಗುತ್ತಿದ್ದಳು. ಹಿಂದಿರುಗಿ ಅಂದಳು— 'ಮೂರೇ ರೂಪಾಯಿ ಅವೆ. ಅವನ್ನು ಕೊಟ್ಟುಬಿಟ್ಟರೆ ಕಂಬಳಿಯು ಎಲ್ಲಿಂದ ಬರುವದು ? ಮಾಘ-ಪುಷ್ಯ ಮಾಸಗಳ ರಾತ್ರಿಯ ಥಂಡಿಯನ್ನು ಹೇಗೆ ಸಹಿಸಲಾದೀತು ? ಅವನಿಗೆ ಹೇಳು— ಸದ್ಯಕ್ಕೆ ರೂಪಾಯಿ ಕೊಡಲಾಗುವುದು. ಈಗ ಇಲ್ಲವೆಂದು. '

ಹಲ್ಯಾ ಒಂದು ಕ್ಷಣ ಅನಿಶ್ಚಿತ ಅವಸ್ಥೆಯಲ್ಲಿ ನಿಂತನು. 'ಪುಷ್ಯವು ತಲೆಯ ಮೇಲೆಯೇ ಬಂದಿದೆ. ಕಂಬಳಿಯಿಲ್ಲದೆ ಥಂಡಿಯಲ್ಲಿ ರಾತ್ರಿಯನ್ನು ಕಳೆಯುವುದು ಸಾಧ್ಯವಿಲ್ಲ. ಆದರೆ ಸಹನಾ ಕೇಳುವನೇನು ? ಬೆದರಿಕೆ ಹಾಕುವನು, ಜೈಯುವನು. ಚಳಿಯಲ್ಲಿ ಸತ್ತರೆ ನಿಶ್ಚಿಂತೆಯಾದೀತು ? ಎಂದು ಯೋಚಿಸುತ್ತ ತನ್ನ ಸ್ಥೂಲ ದೇಹವನ್ನು (ಅವನ ಹೆಸರಿಗೆ ತಕ್ಕದಲ್ಲದ) ನಡೆಯಿಸುತ್ತ ತನ್ನ ಹೆಂಡತಿಯ ಸಮೀಪ ಬಂದು ಜೇಷ್ಟೆಯಿಂದ ಅಂದನು— 'ತಾ, ಕೊಡು ಸಾಲದಿಂದ ಮುಕ್ತನಾಗುವೆನು. ಕಂಬಳಿಗಾಗಿ ಬೇರೆ ಉಪಾಯವನ್ನು ಯೋಚಿಸುವೆನು. '

ಮುನ್ನಿಯು ಅವನಿಂದ ದೂರ ಸರಿದು ಕಣ್ಣುಗಳಿಂದ ಅವನನ್ನು ದುರು-ದುರನೆ ನೋಡಿ ಎಂದಳು— 'ಬೇರೆ ಉಪಾಯ ಮಾಡುವುದು ಗೊತ್ತಿದೆ. ಹೇಳು ಏನು ಉಪಾಯ ಮಾಡುವಿ ? ಯಾರಾದರೂ ಕಂಬಳಿ ದಾನ ಕೊಡುವರೆ ? ಮುಂದಿಗೆ ಕೊಡುವುದು ಎಷ್ಟಿದೆಯೋ ಏನೋ ! ಎಷ್ಟು ಕೊಟ್ಟರೂ ಮುಟ್ಟಲಿಕ್ಕಿಲ್ಲ ! ನಾನು ಅನ್ನುವೆನು, ನೀನು ಹೊಲ ಮಾಡುವುದನ್ನು ಏಕೆ ಬಿಡುವದಿಲ್ಲ ? ಸತ್ತು ಕೆಟ್ಟು ದುಡಿದು ಏನಾದರೂ ಉತ್ಪನ್ನ ಬಂದರೆ, ಅವನದನ್ನು ಮುಟ್ಟಲು ಬಂದೀತು. ಮುಂದಿಯ ಸಾಲ ಮುಟ್ಟಿಸಲಿಕ್ಕೇ ನನ್ನ ಜನ್ಮವಾಯಿತು. ಹೊಟ್ಟೆಗಾಗಿ ಸುಮ್ಮನೆ ಕೂಲಿ ಮಾಡುವುದು ಒಳಿತು. ಈ ಒಕ್ಕಲುತನದಿಂದ ಸಾಕಾಗಿ ಹೋಯಿತು. ನಾನೇನೂ ರೂಪಾಯಿ ಕೊಡುವುದಿಲ್ಲ— ಕೊಡುವುದಿಲ್ಲಾ. '

ಹಲ್ಯಾ ಉದಾಸೀನತೆಯಿಂದ ಅಂದನು— 'ಹಾಗಾದರೆ ನಾನು ಪೈಸಿಕೊಳ್ಳಲಾ ? '

ಮುನ್ನಿಯು ತಳಮಳಗೊಂಡು ಅಂದಳು:— 'ಬಯ್ಯುವನೇಕೆ ! ಅವನದೇನು ರಾಜ್ಯವು ?'

ಹೀಗೆ ಅನ್ನುತ್ತ ಗಂಟಿಕ್ಕಿದ್ದ ಅವಳ ಹುಬ್ಬುಗಳು ಸಡಿಲಾದುವು. ಹಲ್ಯಾನ ಮಾತಿನಲ್ಲಿಯ ಸತ್ಯತೆಯು ಒಂದು ಭೀಷಣವಾದ ಜಂತುವಿನಂತೆ ಅವಳನ್ನು ದಿಟ್ಟಿಸುವ ಹಾಗೆ ಅವಳಿಗೆನಿಸಿತು.

ಅವಳು ಹೋಗಿ ಗೂಡಿನಿಂದ ರೂಪಾಯಿ ತೆಗೆದಳು; ತಂದು ಹಲ್ಯಾನ ಕೈಯಲ್ಲಿಟ್ಟು ಅಂದಳು — 'ಈ ಸಾರೆ ನೀನು ಹೊಲವನ್ನು ಬಿಟ್ಟು ಬಿಡು. ಕೂಲಿಯಿಂದ— ಸುಖವಾಗಿ— ಒಂದು ರೊಟ್ಟಿಯಾದರೂ ಉಣ್ಣಲು ದೊರೆತೀತು. ಯಾರ ಅಂಜಿಕೆಯೂ ಉಳಿಯುವುದಿಲ್ಲ. ಬಹಳ ಒಳ್ಳೆಯ ಒಕ್ಕಲುತನ ! ಸುಮ್ಮನೆ ಕೂಲಿಮಾಡಿ ತಗೊಂಡು ಬಾ. ಬಂದದ್ದನ್ನೆಲ್ಲಾ ಅದಕ್ಕೆ ಹಾಕಿದರೂ ಎಲ್ಲವೂ ಧ್ವಂಸವಾಗುವುದು !

ಹಲ್ಯಾ ರೂಪಾಯಿಗಳನ್ನು ತೆಗೆದುಗೊಂಡು ತನ್ನ ಹೃದಯವನ್ನೇ ತೆರವು ಮಾಡಿ ಕೊಡುವುದಕ್ಕಾಗಿ ಹೋಗುವನೇನೋ ಎನ್ನುವಂತೆ ಹೊರಗೆ ಹೋದನು. ಅವನು ಕೂಲಿಯ ಹಣದಲ್ಲಿ ಒಂದೊಂದು ಮುಷ್ಟಿ ಉಳಿಸಿ ಉಳಿಸಿ ಮೂರು ರೂಪಾಯಿಗಳನ್ನು ಮಾಡಿ ಕಂಬಳಿಗಾಗಿ ಇಟ್ಟಿದ್ದನು. ಆ ಹಣವು ಈಗ ಕೈ ಬಿಡುವಂತಾಯಿತು. ಒಂದೊಂದು ಹೆಜ್ಜೆಯೊಂದಿಗೆ ಅವನ ತಲೆಯು ಅವನ ದೈನ್ಯದ ಭಾವದಿಂದ ನೆಟ್ಟಗಾಗುತ್ತಿತ್ತು.

— ೨ —

ಪುಷ್ಯಮಾಸದ ಕತ್ತಲೆಯ ರಾತ್ರಿ. ಆಕಾಶದಲ್ಲಿ ಚಿಕ್ಕೆಗಳು ಕೂಡ ನಡುಗುತ್ತಿರುವಂತೆ ಕಾಣುತ್ತಿದ್ದುವು. ಹಲ್ಯಾ ತನ್ನ ಹೊಲದ

* ಹಿಂದೀ ಕಥಾಪ್ರಪಂಚದ ಸಮ್ರಾಟರೆನಿಸಿದ ದಿ. ಪ್ರೇಮಚಂದರ ಸರ್ವೋತ್ಕೃಷ್ಟ ಕತೆಯೊಂದರ ಅನುವಾದವು.

ದಂಡೆಗೆ ಇದ್ದ ಕಬ್ಬಿನ ಸೊಪ್ಪೆಯ ಚಪ್ಪರದ ಕೆಳಗೆ, ಬಿದಿರಿನ ಹೊರಸಿನ ಮೇಲೆ, ತನ್ನ ಹಳೆಯ ದಪ್ಪವಾದ ಜಾದರವನ್ನು ಹೊದ್ದುಕೊಂಡು ಮಲಗಿ ನಡುಗುತ್ತಿದ್ದನು. ಹೊರಸಿನ ಕೆಳಗೆ ಅವನ ಜೊತೆಗಾರ ನಾಯಿ— 'ಜಬರಾ' ಹೊಟ್ಟೆಗೆ ಮುಖವನ್ನು ಹಚ್ಚಿಕೊಂಡು ಚಳಿಯಿಂದ 'ಕೂಂ ಕೂಂ' ಮಾಡುತ್ತಲಿತ್ತು. ಇಬ್ಬರಲ್ಲಿ ಒಬ್ಬರಿಗೂ ನಿದ್ದೆ ಬಂದಿರಲಿಲ್ಲ.

ಹಲ್ಕೂ ನೊಳಕಾಲುಗಳನ್ನು ಕುತ್ತಿಗೆಯಲ್ಲಿ ತೊಡಗಿಸಿಕೊಂಡು ಎಂದನು :— 'ಏಕೆ ಜಬರಾ, ಥಂಡಿ ಹತ್ತುತ್ತದೆಯೇ? ನಾನು ಹೇಳುತ್ತಿದ್ದೆ— ಸುಮ್ಮನೆ ಮನೆಯಲ್ಲಿ ಹುಲ್ಲಿನ ಮೇಲೆ ಮಲಗಿರು ಎಂದು. ಇಲ್ಲಿ ಏನು ಗಳಿಸಲಿಕ್ಕೆ ಬಂದೆ? ಈಗ ಅನುಭವಿಸು ಚಳಿಯನ್ನು, ನಾನೇನು ಮಾಡಲಿ? ನಾನೇನು ಇಲ್ಲಿ ಹಲವಾ-ಪುರಿ ತಿನ್ನಲಿಕ್ಕೆ ಬರುನೆನೆನೋ— ಎಂದು ನೀನು ನನಗಿಂತ ಮುಂದೆ ಓಡಿ ಓಡಿ ಬಂದೆ. ಈಗ ಅಳು ನಿನ್ನ ಅಜ್ಜಿಯನ್ನು ನೆನಸಿ'

ಜಬರಾ ಬಿದ್ದಲ್ಲಿಯೇ ಬಾಲನ್ನು ಅಲುಗಾಡಿಸಿತು. ಸ್ವಲ್ಪ ದೀರ್ಘವಾಗಿ ಕುಂಯ್‌ಗುಟ್ಟುತ್ತ ಅದು ಒಮ್ಮೆ ಆಕಳಿಸಿ ಸುಮ್ಮನಾಯಿತು. ಅವರ ಶ್ವಾನ ಬುದ್ಧಿಯು ಅದಕ್ಕೆ ಬುದ್ಧಿ ಹೇಳಿತೇನೋ? ತನ್ನ ಒಡೆಯನಿಗೆ ತನ್ನ ಕುಂಯ್‌ಗುಡುವಿಕೆಯಿಂದ ನಿದ್ದೆ ಬರಲಿಕ್ಕಿಲ್ಲ-ನೆಂದು ಅದು ಭಾವಿಸಿತು.

ಹಲ್ಕೂ ತನ್ನ ಕೈ ಚಾಚಿ ಜಬರಾನ ತಣ್ಣಗಾದ ಬೆನ್ನನ್ನು ಸವರುತ್ತ ಎಂದನು—'ನಾಳೆಯಿಂದ ನನ್ನ ಕೂಡ ಬರಬೇಡ. ಇಲ್ಲವಾದರೆ ಥಂಡಿಯಾದೀತು! ಈ ಮುಂಡಿ ಪುಷ್ಯ ಎಲ್ಲಿಂದ ಬರ್ಫನ್ನು ತಗೊಂಡು ಬರುವಳೋ ತಿಳಿಯಲೊಲ್ಲದು. ಏಳುತ್ತೇನೆ— ಪುನಃ ಚಿಲಿಮಿ ತುಂಬುತ್ತೇನೆ. ಏನು ಮಾಡಿದರೆ ರಾತ್ರಿ ಕಳೆದೀತು! ಎಂಟು ಸಾರೆ ಚಿಲಿಮಿ ಸೇದಿದ್ದಾಯಿತು. ಇದೂ ಒಂದು ಒಕ್ಕಲುತನದ ಸೋಜು. ಒಬ್ಬೊಬ್ಬ ಮಹಾರಾಜರು ಹೇಗೆ ಬಿದ್ದಿರುತ್ತಾರೆ— ಅವರ ಹತ್ತರ ಚಳಿ ಹೋಯಿತೆಂದರೆ ಅಲ್ಲಿಯ ಅವರ ಸೆಕೆಗೆ ಅಂಜಿ ಓಡಿ ಬರುತ್ತದೆ. ದೊಡ್ಡ ಗಾದಿ, ದಪ್ಪನ್ನ ಕಂಬಳಿ ಅವರಿಗೆಲ್ಲ ಚಳಿಗಾಲ ಮೋಜೇ ಮೋಜು! ಛಿ, ನಾವು ದುಡಿಯುವುದು— ಇನ್ನೊಬ್ಬರು ಅವರ ಲಾಭ ಹೊಡೆಯುವುದು!'

ಹಲ್ಕೂ ಎದ್ದನು. ಒಲೆಯಲ್ಲಿಯ ಸ್ವಲ್ಪ ಬೆಂಕಿ ತೆಗೆದುಕೊಂಡು ಚಿಲುಮೆಗೆ ಹಾಕಿದನು. ಜಬರಾ ಕೂಡ ಎದ್ದು ಕುಳಿತಿತು.

ಹಲ್ಕೂ ಚಿಲುಮೆ ಸೇದುತ್ತ ನುಡಿದನು:— 'ನೀನೂ ಚಿಲಿಮಿ ಸೇದುವೆಯಾ? ಏನೋ ಸ್ವಲ್ಪ ಮನಸ್ಸಿಗೆ ಆರಾಮ ಆಗುವುದಿಷ್ಟೆ!'

ಜಬರಾ ಅವನ ಮುಖದ ಕಡೆಗೆ ಪ್ರೀತಿ ತುಂಬಿದ ಕಣ್ಣುಗಳಿಂದ ನೋಡಿತು.

ಹಲ್ಕೂ— 'ಇಂದು ಚಳಿಯ ಸುಖ ಉಣ್ಣು. ನಾಳೆಯಿಂದ ನಾನು ಇಲ್ಲಿ ಹುಲ್ಲು ಹಾಸುವೆ. ಅದರಲ್ಲಿ ಸೇರಿಕೊಂಡು ಕೂಡು. ಆಗ ಚಳಿ ಹತ್ತಲಿಕ್ಕಿಲ್ಲ?

ಜಬರಾ ತನ್ನ ಮುಂದಿನ ಕಾಲನ್ನು ಅವನ ಮೊಣಕಾಲಿನ ಮೇಲೆ ಇಟ್ಟಿತು. ಅವನ ಮುಖದ ಹತ್ತಿರ ತನ್ನ ಮುಖವನ್ನು ಒಯ್ದಿತು. ಹಲ್ಕೂನಿಗೆ ಅದರ ಬಿಸಿಯುಸಿರು ತಗಲಿತು.

ಚಿಲಿಮಿ ಸೇದಿ ಹಲ್ಕೂ ಪುನಃ ಅಡ್ಡಾದನು; ಏನೇ ಆದರೂ ಮಲಗಿಕೊಳ್ಳಬೇಕೆಂದು ನಿಶ್ಚಯ ಮಾಡಿದನು. ಆದರೆ ಒಂದು ಕ್ಷಣದಲ್ಲಿ ಅವನ ಹೃದಯದಲ್ಲಿ ನಡುಗು ಉಂಟಾಯಿತು. ಒಮ್ಮೆ ಇತ್ತ ಮುಗ್ಗಲಾಗುತ್ತಿದ್ದನು. ಒಮ್ಮೆ ಅತ್ತ ಮುಗ್ಗಲಾಗುತ್ತಿದ್ದನು. ಆದರೆ ಚಳಿಯು ಯಾವುದೋ ಸಿಶಾಚಿಯಂತೆ ಅವನ ಎದೆಯನ್ನು ತುಳಿಯುತ್ತಿತು.

ಏನು ಮಾಡಿದರೂ ನಿದ್ದೆ ಬರಲಿಲ್ಲ. ಆಗ ಹಲ್ಕೂ ಜಬರಾನನ್ನು ಸಾವಕಾಶವಾಗಿ ಎತ್ತಿಕೊಂಡು; ಅದರ ತಲೆಯನ್ನು ಚಪ್ಪಡಿಸುತ್ತ ಅದನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡ. ನಾಯಿಯ ದೇಹದಿಂದ ಎಂತಹ ದುರ್ಗಂಧವು ಬರುತ್ತಿತ್ತು! ಆದರೆ ಅವನು ಅದನ್ನು ತನ್ನ ತೊಡೆಗೆ ಹಚ್ಚಿ ಗಟ್ಟಿಯಾಗಿ ಮಲಗಿಸಿಕೊಂಡು, ಎಂತಹ ಸುಖವನ್ನು ಅನುಭವಿಸುತ್ತಿದ್ದನು! ಅಂತಹ ಸುಖವು ಅವನಿಗೆ ಅನೇಕ ತಿಂಗಳುಗಳಿಂದ ದೊರೆತಿರಲಿಲ್ಲ. ಜಬರಾಗೆ ಅನಿಸಿರಬೇಕು—ಸ್ವರ್ಗವೇ ಇಲ್ಲಿ ಅದೆ. ಹಲ್ಕೂನ ಪವಿತ್ರ ಹೃದಯದಲ್ಲಿಯಂತೂ ಆ ನಾಯಿಯ ವಿಷಯವಾಗಿ ಸ್ವಲ್ಪ ಕೂಡ ಹೀನ ಭಾವನೆಯಿರಲಿಲ್ಲ. ಅವನು ತನ್ನ ಅಭಿನ್ನ ಮಿತ್ರ ಅಥವಾ ಬಂಧುವನ್ನು ಇಷ್ಟೇ ತತ್ಪರತೆಯಿಂದ ಅಪ್ಪಿಕೊಳ್ಳುತ್ತಿದ್ದನು. ಇಂದಿನ ದುರ್ದಶೆಗೆ ಮುಟ್ಟಿದ ದೈನ್ಯದ ಪರಮೆ ಅವನಿಗಿರಲಿಲ್ಲ. ಇಲ್ಲಿ ಈ ಅಸಾಧಾರಣ ಸ್ನೇಹಿತ್ರಿಯಿಂದ ಅವನ ಆತ್ಮದ ಎಲ್ಲ ದ್ವಾರಗಳು ತೆರೆದಿರುವಂತೆ ಅವನಿಗೆ ಎನಿಸುತ್ತಿತ್ತು. ಅದರ ಒಂದೊಂದು ಅಣುವೂ ಸ್ವಕಾರದಿಂದ ಹೊಳೆಯುತ್ತಿರುವಂತೆ ಕಾಣುತ್ತಿತ್ತು.

ಒಮ್ಮಿಂದೊಮ್ಮೆ ಜಬರಾ ಯಾವುದೋ ಒಂದು ಪ್ರಾಣಿಯ ಸದ್ದನ್ನು ಕೇಳಿತು. ಆ ವಿಶೇಷ ಆಕ್ಟೀಯತೆಯು ಅದರಲ್ಲಿಯೂ ಒಂದು ಹೊಸ ಸ್ಫೂರ್ತಿಯನ್ನು ಹುಟ್ಟಿಸಿತ್ತು. ಅದರಿಂದ ಆ ಚಳಿಯ ಪ್ರಸಂಗವೂ ಅದಕ್ಕೆ ತುಚ್ಛತರವಾಗಿತ್ತು. ಅದು ಒಮ್ಮೆಲೆ ಜಿಗಿದು ಚಪ್ಪರದ ಹೊರಗೆ ಬಂದು ಬೊಗಳ ಹತ್ತಿತು. ಹಲ್ಕೂ ಅವನ್ನು ಅನೇಕ ಸಲ ಕೂಗಿದನು. ಆದರೆ ಅದು ಅವನ ಕಡೆಗೆ ಬರಲಿಲ್ಲ. ನಾಲ್ಕು ನಿಟ್ಟಸಿನಲ್ಲಿ ಬೊಗಳುತ್ತ ಓಡಾಡಹತ್ತಿತು. ಒಂದು ಕ್ಷಣ ಅದು ತಿರುಗಿ ಬರುತ್ತಿತ್ತು; ಕೂಡಲೆ ತಿರುಗಿ ಓಡಿ ಹೋಗುತ್ತಿತ್ತು. ಕರ್ತವ್ಯವು ಅದರ ಹೃದಯದಲ್ಲಿ ಬಯಕೆಯಂತೆ ಕುಣಿಯುತ್ತಿತ್ತು.

— ೩ —

ಒಂದು ತಾಸು ಮತ್ತೆ ಕಳೆಯಿತು. ಹಲ್ಕೂ ಎದ್ದು ಕುಳಿತನು. ಮತ್ತೆ ತನ್ನ ಎರಡೂ ಮೊಣಕಾಲುಗಳನ್ನು ಎದೆಗೆ ಹಚ್ಚಿಕೊಂಡು, ತಲೆಯನ್ನು ಅವುಗಳಲ್ಲಿ ಮುಚ್ಚಿಕೊಂಡನು. ಅದರೂ ಚಳಿಯು ಕಡಿಮೆಯಾಗಲಿಲ್ಲ. ಎಲ್ಲ ರಕ್ತವೂ ಒಂದೆಡೆಗೆ ಒಟ್ಟು ಗೂಡಿದೆಯೆಂದೂ ಧಮನಿಗಳಲ್ಲಿ ರಕ್ತದ ಬದಲು ಹಿಮವು ಹರಿಯುತ್ತಿದೆ.

ಎಂದೂ ಅವನಿಗೆ ಎನಿಸಹತ್ತಿತು. ಅವನು ಬಗ್ಗಿ ಆಕಾಶದ ಕಡೆಗೆ— ನ್ನೂ ಎಷ್ಟು ರಾತ್ರಿ ಇರಬಹುದೆಂದು—ನೋಡಿದನು. ಸಪ್ತರ್ಷಿಯು ನ್ನೂ ಆಕಾಶದಲ್ಲಿ ಅರ್ಧದ ವರೆಗೂ ಏರಿರಲಿಲ್ಲ. ಮೇಲೆ ಬಂದಾಗ ಳಗು ಆಗುವುದು. ಆಗ ಇನ್ನೂ ಪ್ರಹರಕ್ಕಿಂತ ಹೆಚ್ಚು ರಾತ್ರಿ ದ್ದಿತು.

ಹಲ್ಕೂನ ಹೊಲದಿಂದ ಒಂದು ಕೂಗಳತೆಯ ಅಂತರದಲ್ಲಿ ಮಾವರಗಳ ತೋಟವಿದ್ದಿತು, ಆಗ ಪಿಲರ ಋತುವು ಪ್ರಾರಂಭ- ಾಗಿತ್ತು. ತೋಟದಲ್ಲಿ ಒಣ ಎಲೆಗಳ ರಾಸಿಯೇ ಬಿದ್ದಿತ್ತು. ಹಲ್ಕೂ- ಗೆ ಅಲ್ಲಿ ಹೋಗಿ ಎಲೆಗಳನ್ನು ಕೂಡಿಸಿ ಉರಿಹಚ್ಚಿ ಕಾಸಿಕೊಳ್ಳ- ೇಕೆಂದು ಎನಿಸಿತು. 'ರಾತ್ರಿಯಲ್ಲಿ ಎಲೆಯನ್ನು ಗುಂಪುಗೂಡಿಸು- ೃದನ್ನು ನೋಡಿ, ಯಾರಾದರೂ ಭೂತವಿರಬೇಕೆಂದು ತಿಳಿದಾರು! ತೊವುದಾದರೂ ಪ್ರಾಣಿಯು ಅದರೊಳಗೆ ಅಡಗಿ ಕುಳಿತಿದೆಯೋ ನೋ ಯಾರು ಬಲ್ಲರು! ಆದರೆ ಇಲ್ಲಿ ಹೀಗೆಯೇ ಕುಳಿತುಕೊಳ್ಳು- ವದು ಆಗದ ಮಾತು.' ಎಂದುಕೊಂಡನು.

ಅವನು ಪನಿಪದ ತೊಗರಿಯ ಹೊಲವಲ್ಲಿ ಹೋಗಿ ಕೆಲವು ಡಗಳನ್ನು ಕಿತ್ತುಕೊಂಡನು. ಹಾಗು ಅವುಗಳಿಂದ ಒಂದು ಕಸಬರಿಗೆ ನ್ನು ಮಾಡಿಕೊಂಡು, ಕೈಯಲ್ಲಿ ಉರಿಯುತ್ತಿದ್ದ ಕುಳ್ಳನ್ನು ಹಿಡಿದು ೊಂಡು ಆ ತೋಟದ ಕಡೆಗೆ ಹೊರಟನು. ಅವನು ಬಂದದ್ದನ್ನು ೋಡಿ ಜಬರಾ ಅವನ ಹತ್ತಿರ ಬಂದು ಬಾಲ ಅಲುಗಾಡಿಸಹತ್ತಿತು.

ಹಲ್ಕೂ ಎಂದನು:—'ಈಗ ಸುಮ್ಮನೆ ಕೂಡ್ರುವದಾಗುವುದಿಲ್ಲ. ಜಬರಾ, ನಡೆ. ತೋಟದಲ್ಲಿ ಎಲೆಗಳನ್ನು ಒಟ್ಟುಗೂಡಿಸಿ ಕಾಸಿ- ೊಳ್ಳೋಣ. ಬೆಚ್ಚಗಾದ ನಂತರ ಪುನಃ ಮಲಗಿಕೊಳ್ಳೋಣ. ಇನ್ನೂ ತ್ರಿಯು ಬಹಳನಿದೆ.'

ಜಬರಾ 'ಕುಂಯ್ ಕುಂಯ್' ಎನ್ನುತ್ತ ತನ್ನ ಸಮ್ಮತಿಯನ್ನು ಪ್ರಕಟಗೊಳಿಸಿತು, ಹಾಗೆಯೆ ಮುಂದೆ ಮುಂದೆ ತೋಟದ ಕಡೆಗೆ ಡೆಯಿತು.

ತೋಟದಲ್ಲಿ ಬಹಳ ಕತ್ತಲೆಯಿದ್ದಿತು. ಆ ಕತ್ತಲೆಯಲ್ಲಿ ನಿರ್ದಯ ರೂರುತನು ಎಲೆಗಳನ್ನು ಬೆಟ್ಟುತ್ತ ಹೋಗುತ್ತಿದ್ದನು. ಗಿಡಗಳಿಂದ ುಂಜಿನ ಹನಿಗಳು ಟಸ್ ಟಸ್ ಎಂದು ಕೆಳಗೆ ತೊಟಕುತ್ತಿದ್ದುವು.

ಒಮ್ಮಿಂದೊಮ್ಮೆ ಮದರಂಗಿಯ ಹೂವಿನ ಸುವಾಸನೆಯ 'ಗಮ ಗಮ' ಸುಳಿಯಿತು.

ಹಲ್ಕೂ ಎಂದನು— 'ಎಂತಹ ಒಳ್ಳೆಯ ಪರಿಮಳವು ಬರುತ್ತಿದೆ ಜಬರಾ! ನಿನ್ನ ಮೂಗಿನಲ್ಲಿಯೂ ಏನಾದರೂ ಸುವಾಸನೆಯು ಬಂದಿರಬೇಕಲ್ಲವೇ?'

ಜಬರಾಗೆ ಎಲ್ಲಿಯೋ ನೆಲದ ಮೇಲೆ ಬಿದ್ದಿದ್ದ ಒಂದು ಎಲುವು ದೊರೆತಿತ್ತು. ಅದನ್ನು ಜದು ಹೀರುತ್ತಿತು.

ಹಲ್ಕೂ ಬೆಂಕಿಯನ್ನು ನೆಲದ ಮೇಲೆ ಇಟ್ಟು ಎಲೆಗಳನ್ನು ಕೂಡಿಸಹತ್ತಿದನು. ಸ್ವಲ್ಪ ಸಮಯದಲ್ಲಿಯೆ ಎಲೆಗಳ ಒಂದು ರಾಶಿಯೇ ಆಯಿತು. ಕೈಗಳು ನಡುಗುತ್ತಿದ್ದವು. ಬರಿಯವಾದ ಕಾಲುಗಳಿಗೆ ತಂಪು ಏರಿತ್ತು. ಅವನು ಎಲೆಗಳ ಪರ್ವತವನ್ನೇ ತಯಾರಿಸಹತ್ತಿ- ದ್ದನು. ಇದರಿಂದ ಅವನು ಚಳಿಯನ್ನೆ ಭಸ್ಮ ಮಾಡುವವನಿದ್ದನು.

ಸ್ವಲ್ಪ ಹೇಳೆಯಲ್ಲಿ ಉರಿ ಎದ್ದಿತು. ಅದರ ಜ್ವಾಲೆಗಳು ಮೇಲಿನ ಗಿಡಗಳ ಎಲೆಗಳನ್ನು ಮುಟ್ಟಿ ಮುಟ್ಟಿ ಓಡಹತ್ತಿದುವು. ಆ ಆಸ್ಥಿರ ಪ್ರಕಾಶದಲ್ಲಿ ತೋಟದ ದೊಡ್ಡ ದೊಡ್ಡ ಗಿಡಗಳು ಆ ಅಗಾಧ ಅಂಧ- ಕಾರವನ್ನು ತಮ್ಮ ತಲೆಗಳ ಮೇಲೆ ಎತ್ತಿಕೊಂಡಿರುವಂತೆ ಎನಿಸುತ್ತಿತ್ತು. ಕತ್ತಲೆಯು ಆ ಆನಂತ ಸಾಗರದಲ್ಲಿ ಆ ಪ್ರಕಾಶವು ಒಂದು ನೌಕೆಯಂತೆ ಹೊಯ್ದಾಡುತ್ತಿರುವ ಹಾಗೆ ತೋರುತ್ತಿತ್ತು.

ಹಲ್ಕೂ ಕೆಚ್ಚಿನ ಮುಂದೆ ಕುಳಿತು ಬೆಂಕಿಯನ್ನು ಕಾಸಿಕೊಳ್ಳ ಹತ್ತಿದನು. ಒಂದು ಕ್ಷಣದಲ್ಲಿ ಅವನು ತನ್ನ ಧೋತರದ ಚುಂಗನ್ನು ಬಿಚ್ಚಿ ಕಂಕುಳಲ್ಲಿ ಹಿಡಿದುಕೊಂಡು, ತನ್ನ ಎರಡೂ ಕಾಲುಗಳನ್ನು ಚಾಚಿ ಚಳಿಯನ್ನು ಆಹ್ವಾನಿಸುವಂತೆ 'ನಿನ್ನ ಮನಸ್ಸಿಗೆ ಬಂದಂತೆ ಮಾಡು' ಎಂದು ಚಳಿಯ ಅಸೀಮ ಶಕ್ತಿಯ ಮೇಲೆ ವಿಜಯವನ್ನು ದೊರಕಿಸಿ, ವಿಜಯಗರ್ವವನ್ನು ಹೃದಯದಲ್ಲಿ ಅಡಗಿಸದಾದನು.

ಅವನು ಜಬರಾಗೆ ಹೇಳಿದನು—'ಏಕೆ ಜಬರಾ, ಈಗ ಚಳಿ ಹತ್ತುವುದಿಲ್ಲವಷ್ಟೇ?

ಜಬರಾ 'ಕುಂಯ್ ಕುಂಯ್' ಎಂದು 'ಇನ್ನೇನು ಚಳಿ ಹತ್ತುವುದು? ಎನ್ನುವಂತೆ ಕುಂಯ್‌ಗುಟ್ಟಿತು.

'ಮೊದಲೇ ಈ ಉಪಾಯವು ಹೊಳೆಯಲಿಲ್ಲ. ಇಲ್ಲದಿದ್ದರೆ ಇಂಥ ಥಂಡಿಯನ್ನನುಭವಿಸುತ್ತಿದ್ದೆವೇ?

ಜಬರಾನು ಬಾಲವನ್ನು ಅಲುಗಾಡಿಸಿತು.

'ಒಳ್ಳೇದು ನಡೆ ಇನ್ನು. ಈ ಕೆಚ್ಚನ್ನು ಜಿಗಿದು ದಾಟಿ ಆಚೆಗೆ ಹೋಗೋಣ, ನೋಡೋಣ ಯಾರು ಜೆಗಿಯುತ್ತಾರೆ? ಮಗನೆ, ಸುಟ್ಟುಕೊಂಡೆಯೆಂದರೆ ನಾನೇನು ಔಷಧ—ಉಪಚಾರ ಮಾಡ- ಲಿಕ್ಕಿಲ್ಲ.'

ಜಬರಾ ಆ ಅಗ್ನಿಯ ರಾಸಿಯ ಕಡೆಗೆ ಕಾತರ ದೃಷ್ಟಿಯಿಂದ ನೋಡಿತು.

'ಮುನ್ನಿಗೆ ನಾಳೆ ಹೇಳೀಗೀಳೀ ಮತ್ತೆ. ಅವಳು ಜಗಳಕ್ಕೆ ಬಂದಾಳು.' ಎಂದು ನುಡಿಯುತ್ತ ಅವನು ಹಾರಿ ಆ ಕೆಚ್ಚಿನ ಮೇಲಿಂದ ಆಚೆಗೆ ದಾಟಿದನು. ಕಾಲುಗಳಿಗೆ ಮಾತ್ರ ಸ್ವಲ್ಪ ಝಳ ಹತ್ತಿ- ದಂತಾಯಿತು. ಅದೇನೂ ಅಂತಹ ಮಹತ್ವದ್ದಾಗಿರಲಿಲ್ಲ. ಜಬರಾ ಬೆಂಕಿಯ ಸುತ್ತಲೂ ಒಂದು ಸುತ್ತು ಹಾಕಿ ಅವನ ಹತ್ತಿರ ಬಂದು ನಿಂತಿತು, ಹಲ್ಕೂ ಎಂದನು – 'ನಡಿ, ನಡಿ' ಹೀಗೆ ಅಲ್ಲ. ಮೇಲಿ- ನಿಂದ ಜಿಗಿದು ಬರಬೇಕು. ಎನ್ನುತ್ತ ಅವನು ಪುನಃ ಜಿಗಿದು ಕೆಚ್ಚಿನ ಈಚೆಯ ಮಗ್ಗಲು ಬಂದನು.

— ೪ —

ಎಲೆಗಳೆಲ್ಲವೂ ಸುಟ್ಟು ಹೋಗಿದ್ದುವು. ತೋಟದಲ್ಲಿ ಪುನಃ ಕತ್ತಲೆಯು ಆವರಿಸಿತ್ತು. ಬೂದಿಯ ಕೆಳಗೆ ಸ್ವಲ್ಪ ಸ್ವಲ್ಪ ಬೆಂಕಿ ಉಳಿದಿತ್ತು. ಗಾಳಿಬೀಸುವಿಕೆಯಿಂದ ಸ್ವಲ್ಪ ಬೆಂಕಿ ಏಳುತ್ತಿತ್ತು; ಕ್ಷಣ ಮಾತ್ರದಲ್ಲಿಯೆ ಪುನಃ ಕಣ್ಣು ಮುಚ್ಚಿಕೊಳ್ಳುತ್ತಿತ್ತು.

ಹಲ್ಕ್ಯಾ ಪುನಃ ಚಾದರವನ್ನು ಹೊದ್ದುಕೊಂಡನು. ಬೆಚ್ಚಗಿನ ಬೂದಿಯ ಹತ್ತಿರ ಕುಳಿತು ಹಾಡೊಂದನ್ನು ಗುಣುಗುಟ್ಟಹತ್ತಿದನು. ಅವನ ಮುಖದಲ್ಲಿ ಕಾವು ಬಂದಿತ್ತು. ಚಳಿಯು ಹೆಚ್ಚಿದಂತೆ ಅವನನ್ನು ಆಲಸ್ಯವೂ ಹಿಸುಕುತ್ತಿತ್ತು.

ಒಮ್ಮೆಲೆ ಜಬರಾ ಜೋರಿನಿಂದ ಬೊಗಳುತ್ತ ಹೊಲದ ಕಡೆಗೆ ಓಡಿತು. ಹಲ್ಕ್ಯಾನಿಗೆ ಪ್ರಾಣಿಗಳ ಒಂದು ಗುಂಪೇ ತನ್ನ ಹೊಲದಲ್ಲಿ ನುಗ್ಗಿರಬೇಕೆಂದು ಎನಿಸಿತು. ಬಹಳ ಮಾಡಿ ಚಿಗರಿಗಳ ಹಿಂಡೇ ಇರಬೇಕು. ಅವುಗಳ ಜಿಗಿದಾಟ ಮತ್ತು ಓಡಾಟಗಳ ಸಪ್ಪಳವು ಸ್ಪಷ್ಟವಾಗಿ ಕೇಳಬರುತ್ತಿತ್ತು. ಅವು ತನ್ನ ಹೊಲದಲ್ಲಿ ಮೇಯುತ್ತಿರುವಂತೆಯೂ ಅವನಿಗೆ ಎನಿಸಿತು. ಅವು ಬೆಳೆಯನ್ನು ತಿನ್ನುವ ಸಪ್ಪಳವೂ ಚರ್ ಚರ್ ಎಂದು ಕೇಳಬರಹತ್ತಿತು.

ಹಲ್ಕ್ಯಾ ಮನಸ್ಸಿನಲ್ಲಿ ನುಡಿದ : 'ಇಲ್ಲಿ ಜಬರಾ ಇರುವ ವರೆಗೆ ಯಾವ ಪ್ರಾಣಿಯೂ ಹೊಲದಲ್ಲಿ ಕಾಲಿಡಲಾರದು. ಎಳೆದಾಟ, ಬಡಿದಾಟವೇನೋ! ನನಗೆ ಏನೋ ಸಂಶಯ ಬರಹತ್ತಿದೆ! ಎಲ್ಲಿ? ಈಗ ಏನೂ ಕೇಳಬರುವದಿಲ್ಲವಲ್ಲಾ! ನನಗೂ ಹೆದರಿಕೆ ಎನಿಸಹತ್ತಿತು!'

ಅವನು ಜೋರಿನಿಂದ ಕೂಗಿದನು:—'ಜಬರಾ, ಜಬರಾ' ಬೊಗಳುತ್ತಿತ್ತು. ಅವನ ಹತ್ತಿರ ಬರಲೇ ಇಲ್ಲ.

ಪುನಃ ಹೊಲವನ್ನು ಮೇಯುವ ಸಪ್ಪು ಕೇಳಬರಹತ್ತಿತು. ತಾನು ಗಂಡಾಂತರದಲ್ಲಿ ಬೀಳಲು ಅವನು ಇಚ್ಛಿಸಲಿಲ್ಲ. ಅವನಿಗೆ ತನ್ನ ಸ್ಥಳದಿಂದ ಏಳುವುದೆಂದರೆ ಅಸಾಧ್ಯವಾಗಿತ್ತು. ಏನೂ ತೋಚದವನಂತೆ ಕುಳಿತುಬಿಟ್ಟಿದ್ದನು. ಆ ಚಳಿಯಲ್ಲಿ ಹೊಲದಲ್ಲಿ ಹೋಗುವುದು, ಆ ದನಗಳ ಬೆನ್ನು ಹತ್ತುವುದು, ಅವನಿಗೆ ಬೇಡವಾಯಿತು. ಅವನು ತನ್ನ ಸ್ಥಳದಿಂದ ಅಲುಗಾಡಲಿಲ್ಲ ಕೂಡ.

ಅನಂತರ ಅವನು ಜೋರಿನಿಂದ ಕೂಗಿದನು— 'ಹಲು ಲು ಲೂ ಲೂ ಲೂ!

ಜಬರಾ ಪುನಃ ಬೊಗಳಹತ್ತಿತು. ಪ್ರಾಣಿಗಳು ಹೊಲವನ್ನು ಮೇಯುತ್ತಿದ್ದುವು. ಬೆಳೆಬೆಳೆದು ನಿಂತಿತ್ತು. ಎಂತಹ ಬೆಳೆಯದು! ಅದರೆ ಆ ಮುಷ್ಟ ಪ್ರಾಣಿಗಳು ಸರ್ವನಾಶ ಮಾಡುತ್ತಲಿದ್ದುವು.

ಹಲ್ಕ್ಯಾ ಪೂರ್ಣ ಕಲ್ಪನೆಯಿಂದ ಎದ್ದನು. ಎರಡು ಮೂರು ಹೆಜ್ಜೆ ನಡೆದನು. ಆದರೆ ಒಮ್ಮಿಂದೊಮ್ಮೆ ಜೋಲಿಸಂತೆ ಕುಟುಕುವ ತರಹ ಚಳಿಯಿಂದ ಕೂಡಿದ ಹವೆಯು ಸುಳಿಯಲು ಅವನು ಪುನಃ ಆರುತ್ತಿದ್ದ ಕೆಚ್ಚಿನ ಹತ್ತಿರ ಬಂದು ಕುಳಿತನು, ಬೂದಿಯನ್ನು ಕೆದರಿ ತನ್ನ ತಂಪಾದ ದೇಹವನ್ನು ಬೆಚ್ಚಗೆ ಮಾಡಿಕೊಳ್ಳಹತ್ತಿದನು.

ಜಬರಾ ತನ್ನ ಕೊರಳು ಹರಿಯುವಂತೆ ಬೊಗಳುತ್ತಿತ್ತು. ಚಿಗರಿಗಳು ಹೊಲವನ್ನು ನಿರ್ನಾಮ ಮಾಡುತ್ತಿದ್ದುವು. ಆಗ ಹಲ್ಕ್ಯಾ ಬೂದಿಯ ಹತ್ತಿರ ಶಾಂತನಾಗಿ ಕುಳಿತಿದ್ದನು. ಅಕರ್ಮಣ್ಯತೆಯು ಹೆಗ್ಗಣದಂತೆ ಅವನನ್ನು ನಾಲ್ಕೂ ದಿಕ್ಕಿನಿಂದ ಕಟ್ಟಿ ಹಾಕಿತ್ತು.

ಅನಂತರ ಅವನು ಅದೇ ಬೂದಿಯ ಹತ್ತಿರ ಬೆಚ್ಚಗಿನ ನೆಲದ ಮೇಲೆ ಚಾದರವನ್ನು ಸುತ್ತಿಕೊಂಡು ಮಲಗಿಬಿಟ್ಟನು.

ಪ್ರಾತಃಕಾಲ ಅವನಿಗೆ ಎಚ್ಚರವಾಗಲು ನಾಲ್ಕೂ ಕಡೆಗೆ ಬಿಸಿಲು ಬಿದ್ದದ್ದು ಅವನಿಗೆ ಕಂಡು ಬಂದಿತು. ಅದೇ ಕ್ಷಣದಲ್ಲಿ ಮುನಿಯು ಅಸ್ಪುತ್ತಿದ್ದಳು—'ಏನು ಇಂದು ಮಲಗೇ ಬಿಟ್ಟಿರುವೆಯಾ? ನೀನು ಇಲ್ಲಿ ಬಂದು ಆರಾಮು ಮಲಗಿರುವೆ. ಅಲ್ಲಿ ಹೊಲವೆಲ್ಲವೂ ಹಾಳಾಗಿ ಹೋಗಿದೆ!

ಹಲ್ಕ್ಯಾ ಎದ್ದು ಹೇಳಿದನು—'ಏನು ನೀನು ಹೊಲದ ಮೇಲೆ ಹಾಯ್ದು ಬಂದಿರುವೆಯಾ?'

ಮುನ್ನಿ ನುಡಿದಳು—'ಹಾಂ, ಹೊಲವೆಲ್ಲವೂ ಸತ್ಯಾನಾಶವಾಗಿ ಹೋಯಿತು. ಏನಿದು? ಹೀಗೆ ಯಾರಾದರೂ ಮಲಗುತ್ತಾರೆಯೇ? ಇಲ್ಲಿ ಗುಡಿಸಿಲು ಹಾಕಿದರೂ ಏನು ಫಲ!'

ಹಲ್ಕ್ಯಾ ನೆವ ತೆಗೆದು ಹೇಳಿದನು.—'ನಾನು ನಾಯುವನಲ್ಲವೇ ಉಳಿದೆನು ನಿನಗೆ ನಿನ್ನ ಹೊಲವನ್ನೆ ಹತ್ತಿದೆ. ನನ್ನ ಹೊಟ್ಟೆಯಲ್ಲೆ ಇಂಥಾ ನೋವಾಗಿತ್ತು! ಅದು ನನಗೇ ಗೊತ್ತು!'

ಇಬ್ಬರೂ ಅನಂತರ ತಮ್ಮ ಹೊಲದ ಕಡೆಗೆ ಬಂದರು. ನೋಡಿದರು! ಹೊಲವೆಲ್ಲವೂ ಹಾಳು ಸುರಿಯುತ್ತಿದೆ. ಜಬರಾ ಗುಡಿಸಿಲಿನ ಹತ್ತಿರ ಜೀವವಿಲ್ಲದ ಹಾಗೆ ಅಂಗಾತ ಬಿದ್ದಿದೆ.

ಇಬ್ಬರೂ ಹೊಲದ ಪರಿಸ್ಥಿತಿಯನ್ನು ನೋಡುತ್ತಿದ್ದರು. ಮುನ್ನಿಯ ಮುಖದ ಮೇಲೆ ಉದಾಸೀನತೆಯು ತುಂಬಿತ್ತು. ಆದರೆ ಹಲ್ಕ್ಯಾ ಶಾಂತನಾಗಿದ್ದನು.

ಮುನ್ನಿಯು ಚಿಂತೆಯಿಂದ ಅಂದಳು:—'ಇನ್ನು ನೋಲೆ ಕೂಲೀ ಮಾಡಿ ಲಾಸಣೆ ಹಣವನ್ನು ಭರತಿ ಮಾಡಬೇಕಾಗುವುದು!

ಆಗ ಹಲ್ಕ್ಯಾ ಶಾಂತ ಮುಖಮುದ್ರೆಯಿಂದ ಅಂದನು—ಹೌದು, ರಾತ್ರಿಯ ಇಂಥ ಚಳಿಯಲ್ಲಿ ಮಲಗುವ ಪ್ರಸಂಗ ಆಗ ಬರಲಾರದು!

ಕನ್ನಡ ಸಾಹಿತ್ಯ ಸಮ್ಮೇಳನದ

◀ ಅಧ್ಯಕ್ಷೀಯ ಭಾಷಣ ▶

(ಉಡುಪಿಯ ಸಾಹಿತ್ಯಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಶ್ರೀಮಾನ್ ಅ. ನ. ಕೃಷ್ಣರಾಯರು ಮಾಡಿದ ಪ್ರಾರಂಭ ಭಾಷಣದ ಭಾಗವಿದು. ಪೂರ್ಣಭಾಷಣ ೪೬ ಪುಟಗಳಲ್ಲಿ ಅಡಕವಾಗಿದ್ದು, ಆದರಲ್ಲಿಯ ಸಾಹಿತ್ಯಕ್ಕೆ ಸಂಬಂಧಿಸಿದ ಭಾಗವನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ.)

ನಡೆದು ಬಂದ ದಾರಿ

ಕನ್ನಡ ಸಾಹಿತ್ಯ ಕ್ರಿ. ಶ. ಆರನೆಯ ಶತಮಾನದಿಂದ ಇಲ್ಲಿಯ ವರೆಗೆ ನಾನಾ ರೂಪದಲ್ಲಿ ಬೆಳೆದುಬಂದಿದೆ. ಶಾಸನಪದ್ಯಗಳಿಂದ ಆರಂಭವಾದ ಕಾವ್ಯಶ್ರೀ ಹೊಸ ಕಾವ್ಯದವರೆಗೆ ನಡೆದುಬಂದಿದೆ.

ಚಂಪೂಕಾವ್ಯಗಳಿಂದ,ಷಟ್ಪದಿಕಾವ್ಯಗಳು;ಷಟ್ಪದಿಗಳಿಂದ ಸಾಂಗತ್ಯ, ಸಾಂಗತ್ಯದಿಂದ ತ್ರಿಪದಿ; ತ್ರಿಪದಿಯಿಂದ ಗದ್ಯ ಮುನ್ನಡೆದ ಪ್ರತಿಯೊಂದು ಘಟ್ಟದಲ್ಲಿಯೂ ಸಾಹಿತ್ಯದ ಗುಣಗೌರವಕ್ಕೆ ಧಕ್ಕೆಯೊದಗಿತೆಂದು ಲಾಕ್ಷಣಿಕರು ಆಕ್ಷೇಪಿಸಿದರು. ವೈಲಾಸಂ ಅವರಿಗೆ ' ಕನ್ನಡ ಭಾಷೆಯ ಕೊಲೆಗಡುಗ ' ನೆಂಬ ಖ್ಯಾತಿಯೂ ಬಂದಿತು. ಲಾಕ್ಷಣಿಕರು ಹೇಳುವಂತೆ ಒಂದೊಂದು ವೈಲಿಗಲ್ಲು ಮುಟ್ಟಿದಾಗಲೂ ಕನ್ನಡದ ಸತ್ತ್ವ ಕ್ಷೀಣವಾಗುತ್ತ ಬಂದಿದೆಯೇ ಎಂದು ನಾವು ವಿಚಾರಮಾಡಬೇಕು.

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕೆಂಡರ್ ಕೇಳ್ವೊಡೆ ಗೊರವರ
ದುಂಡುಜಿಯೇ ಬೀದಿವರೆಯೆ ಬೀರನ ಕತೆಯೇ ? ॥

ಎಂಬ ಸ್ಥಾನದಲ್ಲಿ ಕನ್ನಡಕಾವ್ಯ ನಿಂತಿದ್ದಾಗ,

ಇರು ಮರುಳೆ ಶಬ್ದವೈಯಾ-
ಕರಣಂಗಂ ಶುಷ್ಕ ತಾರ್ಕಿಕಂಗಂ ಬೆಳ್ಕ-
ಕ್ಕರಿಗಂಗಂ ವಿಷಯನೆಂ ಕಾ-
ವ್ಯರತ್ನಮತಿಚತುರ ಕವಿಕದಂಬಕ ವಿಷಯಂ ॥

ಎಂಬ ಹೊಜಲು ಮುಟ್ಟಿತು.

ಪ್ರಾಚೀನ ಕನ್ನಡ ಕವಿಗಳು ಎಲ್ಲಿ ಸುತ್ತಿ ಸುಳಿದರೂ ಕೊನೆಗೆ ಬಂದು ನಿಂತುದು,

ಪಾಪಮಿದು ಪುಣ್ಯಮಿದು ಹಿತ-
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದರಿಪುಗು-
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್ ॥

ಹನ್ನೆರಡನೆಯ ಶತಮಾನದ ಜೇಳೆಗೆ ' ನಮ್ಮ ಜನ ಬದುಕ ಬೇಕೆಂದು, ಕಾವ್ಯಮುಖದಿಂ ಪೇಳ್ದನಪೇಕ್ಷೆಯಿಂದ ' ಎನ್ನುವಲ್ಲಿಗೆ ನಮ್ಮ ಕಾವ್ಯಧಾರೆ ಹರಿದುಬಂದಿತು.

ನಮ್ಮ ಪ್ರಾಚೀನ ಕಾವ್ಯಪರಂಪರೆ ನಮ್ಮ ದೊಡ್ಡ ಸಂಪತ್ತು. ಅದನ್ನು ಕಡೆಗಾಣಿಸುವುದು ಶ್ರೇಯಸ್ಕರವಲ್ಲ. ಆದರೆ ಸಾಹಿತ್ಯ ಭಾವಿಯು ನೀರಿನಂತೆ, ಚಲನವಲನವಿಲ್ಲದೆ ಒಂದೇ ಎಡೆ ನಿಂತಿರಬೇಕೆಂದು ಅಪೇಕ್ಷಿಸುವುದು ತಪ್ಪು.

ಸಾಹಿತ್ಯ ಕಾಲೋಚಿತವೂ ಹೌದು; ಕಾಲಾತೀತವೂ ಹೌದು. ಸಮಕಾಲೀನ ಜಗತ್ತಿನ ಶಿಶುವಾದ ಕವಿ, ಸಮಕಾಲೀನ ಜಗತ್ತಿನ ಕಷ್ಟಸುಖ, ಓರೆಕೋರೆ, ಆಶೆನಿರಾಶೆಗಳನ್ನು ಅಭಿವ್ಯಕ್ತಿಗೊಳಿಸುತ್ತಾನೆ, ಇಲ್ಲಿಗೇ ಅವನ ಕಾರ್ಯ ಪೂರೈಸುವುದಿಲ್ಲ. ಸಮಕಾಲೀನ ಜಗತ್ತಿನ ಸ್ಥಿತಿಗತಿಗಳನ್ನು ಸುಧಾರಿಸಲು ಅವನು ನೆರವಾಗಿ ' ರಾಮರಾಜ್ಯ ' ದ ರೂಪರೇಖೆಯನ್ನು ಮುಂದಿಡುತ್ತಾನೆ. ಹಿಂದೆ ನಡೆದುದು, ಇಂದು ನಡೆಯುತ್ತಿರುವುದು, ನಾಳೆ ನಡೆಯುವುದನ್ನೂ ಕವಿ ಮುಕ್ಕಣ್ಣನಾಗಿ ನೋಡುತ್ತಾನೆ, ಅದಕ್ಕೇ ಅವನನ್ನು ' **ದ್ರಷ್ಟಾರ** ', ' **ಮನೀಷಿ** ' ಎಂದು ಉಪನಿಷತ್ತು ಕರೆದುದು.

ಈ ದೃಷ್ಟಿಯಿಂದ ನೋಡುವಾಗ ಪ್ರಾಚೀನಕವಿಗಳು ಜೀವನಾನುಭವನ್ನಾಗಲಿ, ರಸಾನುಪ್ರೇಕ್ಷೆಯನ್ನಾಗಲಿ, ಸತ್ಯಾವಿಷ್ಕಾರವನ್ನಾಗಲಿ ಮುಗಿಸಿಲ್ಲವೆಂದು ಧಾರಾಳವಾಗಿ ಹೇಳಬಹುದು. ಲೋಕಾಯತನ ಮತ್ತು ಅದಕ್ಕೆ ಹೊಂದಿಕೊಂಡ ಸಮಸ್ಯೆಗಳು ಬೆಳೆದಂತೆ ಅನುಭವವೂ ಬೆಳೆಯುತ್ತದೆ. ಈ ಅನುಭವದ ಪ್ರತೀಕವೇ ಸಾಹಿತ್ಯ.

ಅನುಭವದಲ್ಲಿಯಲ್ಲದೆ, ದೃಷ್ಟಿವೈಶಾಲ್ಯದಲ್ಲಿಯೂ ಇಂದಿನ ಸಾಹಿತ್ಯ, ಪ್ರಾಚೀನ ಸಾಹಿತ್ಯಕ್ಕಿಂತ ಮುಂದೆ ನಡೆದಿದೆಯೆಂದು ನಾನು ಭಾವಿಸುತ್ತೇನೆ. ಪಂಪ, ರಾಘವಾಂಕ, ಕುಮಾರವ್ಯಾಸರಂಥ ಸೀಮಾಪುರುಷರ ಕೃತಿಗಳಲ್ಲಿಯೂ ಜಾತಿ, ಮತಗಳ ಸೋಂಕು ತಪ್ಪಿಲ್ಲ. ಅನೇಕ ಪ್ರಾಚೀನ ಕವಿಗಳು ಸ್ವಜಾತಿ, ಮತಪ್ರತಿಪಾದನೆಗೆ ಕಾವ್ಯವನ್ನು ಬಳಸಿಕೊಂಡಿದ್ದಾರೆ. ಇಂದಿನ ಸಾಹಿತ್ಯ ಈ ದೋಷದಿಂದ ದೂರವಾಗಿದೆ. ಪಂಪ, ರಾಘವಾಂಕ, ಕುಮಾರವ್ಯಾಸರ ಜಾತಿಯನ್ನು ಅವರ ಕೃತಿಗಳಿಂದ ಸಿದ್ಧಮಾಡಬಹುದು; ಇಂದಿನ ಡಿ. ವಿ. ಜಿ., ಪುಟ್ಟಪ್ಪ, ಬೇಂದ್ರೆ, ಗೋವಿಂದ ಪೈಯವರ ಕೃತಿಗಳಿಂದ ನಾವೇನೂ ಓದುಗ,ಲಾಕ್ಷಣಿಕ ಇವರ ಜಾತಿ-ಮತಗಳನ್ನು ನಿಶ್ಚಯಿಸಲು ಸಾಧ್ಯವೇನೂ

ಕಾಲಧರ್ಮ, ಯಾಗೂ ಕಡಲಾಚೆಯಿಂದ ಬಂದ ವಿಚಾರಧಾರೆಯ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯ ಕೇವಲ ವರ್ಗ-

ಗಳಿಗೆ ವೀಸಲಾಗದೆ ಇಡಿಯ ಜನಪದಕ್ಕೆ ಸಮೀಪಗತವಾಗುತ್ತಿದೆ. ಸಾಹಿತ್ಯ 'ಎಲ್ಲರಿಗೂ ಇಲ್ಲ' ಎನ್ನುವ ತಪ್ಪು ಭಾವನೆ ದೂರವಾಗಿ, ಪ್ರತಿಯೊಬ್ಬ ಮಾನವನೂ ಸಾಹಿತ್ಯದಿಂದ ತನ್ನ ಜೀವನಕ್ಕೆ ಅಗತ್ಯವಾದ ಶಾಂತಿ, ತುಷ್ಟಿ, ಆನಂದ, ಶಕ್ತಿಗಳನ್ನು ದೊರಕಿಸಿಕೊಳ್ಳಬಹುದೆಂಬ ಭಾವನೆ ಬೆಳೆದಿದೆ. ಉದಾತ್ತವಾದ ಈ ಭಾವನೆ ಬೆಳಗುವುದಕ್ಕೆ ಆಧುನಿಕ ಸಾಹಿತಿಗಳು ಹಗಲಿರುಳು ಶ್ರಮಿಸಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಸಾಹಿತ್ಯದ ವ್ಯಾಪ್ತಿ

ನಾವೂ ನಮ್ಮವರಲ್ಲೇ ಅಡಕವಾಗಿದ್ದ ಕನ್ನಡ ಸಾಹಿತ್ಯ ಈಗೀಗ ತನ್ನ ಪ್ರಾಂತ್ಯದ ಗಡಿಯನ್ನು ದಾಟಿ ಹೊರಗೆ ಹೋಗಲು ಯತ್ನಿಸುತ್ತಿದೆ. ಪ್ರಾಂತ್ಯಭಾಷೆಗಳನ್ನು ಅವಲಂಬಿಸಿರುವ ಸಾಹಿತ್ಯ ಕೇವಲ ಪ್ರಾಂತ್ಯಸಾಹಿತ್ಯವಲ್ಲ. ಅವೂ ಭಾರತೀಯತೆಯನ್ನೇ ಪ್ರತಿಪಾದಿಸುತ್ತವೆ. ಭಾರತ ಎನ್ನುವುದು ಭೌಗೋಳಿಕ ಮಿತಿಯಲ್ಲ. ಹಲವು ಪ್ರಾಂತ್ಯ, ಭಾಷೆ, ಸಂಸ್ಕೃತಿಯ ಸಮುಚ್ಚಯವೇ ಭಾರತ. ನಮ್ಮ ಸೇವೆ ಕನ್ನಡ ನಾಡು ನುಡಿಗಳ ಸೇವೆಗೆ ವೀಸಲಾದರೂ, ಅದೂ ಭಾರತದ ಸೇವೆಯೇ! ಬಂಕಿಂಬಾಬು, ರವೀಂದ್ರರು, ಬಂಗಾಳಿಯಲ್ಲಿ ಬರೆದರು; ಭಾರತಿ ತಮಿಳಿನಲ್ಲಿ ಬರೆದರು; ವೀರೇಶಲಿಂಗಂ ಪಂತುಲು, ಗುರುಜಾಡ ಅಪ್ಪಾರಾಯರು ತೆಲುಗಿನಲ್ಲಿ ಬರೆದರು; ಗಾಲೀಬ್, ಹಾಲಿ ಉರ್ದುವಿನಲ್ಲಿ ಬರೆದರು—ಇವೆಲ್ಲವೂ ಭಾರತದ ಸೇವೆಯಲ್ಲವೇ? ವಿವಿಧಭಾಷಾ ಪ್ರಾಂತ್ಯಗಳಲ್ಲಿ ಸಾಕಷ್ಟು ಸೋದರಬಾಷೆಗಳ ಸಾಹಿತ್ಯ ವಿನಿಮಯವಾದರೆ ರಾಷ್ಟ್ರದ ಹಲವು ಸಮಸ್ಯೆಗಳು ಸುಲಭವಾಗಿ ಪರಿಹಾರವಾಗುತ್ತವೆ. ಭಾವುಕನಾದ ಕವಿ ಯಾವ ಭಾಷೆಯನ್ನೇ ಅವಲಂಬಿಸಲಿ, ಸಾಮಾನ್ಯರಿಗಿಂತ ಮೇಲುಮಟ್ಟದಲ್ಲೇ ನಿಂತು ಮಾತನಾಡುತ್ತಾನೆ. ಕವಿಹೃದಯವನ್ನು ಏಕಸೂತ್ರ ಬಂಧಿಸುವಂತೆ ಕವಿವಾಣಿ ವಿವಿಧ ಭಾಷಾನುಯಾಯಿಗಳನ್ನು ಏಕಸೂತ್ರದಲ್ಲಿ ಬಂಧಿಸಬಲ್ಲುದು.

ಈ ಶತಮಾನ ಕೆಲವು ಮಹತ್ವದ ಘಟನೆಗಳನ್ನು ಕಂಡಿದೆ. ಚಿರಂತನ ದಾಸ್ಯಪಂಕದಲ್ಲಿ ಬಿದ್ದು ಕೊಳೆಯುತ್ತಿದ್ದ ಏಷ್ಯಾ, ಆಫ್ರಿಕಾ ರಾಷ್ಟ್ರಗಳ ವಿನೋಚನೆ; ಅಣುಶಕ್ತಿಯ ಮಾರಕ, ತಾರಕ ಪರಿಣಾಮ; ಬಂಡವಾಳಗಾರರ, ಕಾರ್ಮಿಕರ ಹೊಣೆಗಾರಿಕೆ, ಸಾಂಕುಶ ಪ್ರಜಾಪ್ರಭುತ್ವ, ನಿರಂಕುಶ ಸರ್ವಾಧಿಕಾರತ್ವಗಳ ಸ್ಪರ್ಧೆ—ಇವು ಎಲ್ಲ ಬುದ್ಧಿಜೀವಿಗಳ ಲಕ್ಷ್ಯವನ್ನು ಸೆಳೆಯುತ್ತಿವೆ. ಈ ಸಮಸ್ಯೆಗಳ ಮಧ್ಯೆ ಸಿಕ್ಕಿಕೊಂಡಿರುವ 'ಸ್ವಾತಂತ್ರ್ಯ' ಮತ್ತು 'ಸಂಸ್ಕೃತಿ'ಗಳ ಸ್ಥಾನಮಾನಗಳೇನು? ತಪ್ಪುಗಳನ್ನು ಉಳಿಸಿಕೊಳ್ಳುವ ಬಗೆಯೆಂತು ಎಂಬ ಪ್ರಶ್ನೆ ಎಲ್ಲ ಬುದ್ಧಿಜೀವಿಗಳನ್ನೂ ಕಾಡುತ್ತಿದೆ.

'ಸ್ವಾತಂತ್ರ್ಯ' ಶಬ್ದಕೋಶದ ಒಂದು ಪದವಲ್ಲ. ಅದು ಬಂಗಡಿಗಳಲ್ಲಿ ದೊರೆಯುವ ಅಗ್ಗದ ಮಾಲೂ ಅಲ್ಲ. ಸ್ವಾತಂತ್ರ್ಯ ಎಂದು ವಸ್ತುವಲ್ಲ—ಅದೊಂದು ಮನೋಭಾವ. ಈ ಮನೋಭಾವವನ್ನು ಇವಕ್ಕೆ ತಕ್ಕುಕೂಲವಾದ ವಾತಾವರಣವನ್ನು ನಾವು ನಿರಂತರ ಪರಿಶ್ರಮದಿಂದ ನಿತ್ಯ ಸೃಷ್ಟಿಸುತ್ತಿರಬೇಕು.

ಮಾನವನ ಪ್ರಾಣಧಾರಣೆಗೆ ಅನ್ನ ಬೇಕು, ಮಾನರಕ್ಷಣೆಗೆ ಬಟ್ಟೆಬೇಕು. ಆದರೆ ಅನ್ನ ಬಟ್ಟೆಗಳೇ ಜೀವನದ ಆದ್ಯಂತವೇ? ಅನ್ನ ಬಟ್ಟೆಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಿರುವ ರಾಷ್ಟ್ರಗಳಲ್ಲಿ 'ಮಾನವ' ಏನಾಗಿದ್ದಾನೆ? ಅನ್ನಕ್ಕಾಗಿ ವ್ಯಕ್ತಿಸ್ವಾತಂತ್ರ್ಯವನ್ನು ನೀಗಿಕೊಂಡು ಸರ್ವಾಧಿಕಾರಿತ್ವದ ದರ್ಪರಥದ ಗಾಲಿಗಳಿಗೆ ಸಿಕ್ಕಿ ಮಾನವ ನುಚ್ಚು ನೂರಾಗಬೇಕೇ?

ಅನ್ನಾಭಾವ ಮಾನವನ ಚೇತನಗಳನ್ನು ಕುಂಠಿತಗೊಳಿಸುತ್ತದೆ. ಆದರೆವನು 'ಪರವುಟ್ಟ'ನಾಗುವುದರಿಂದ ಮಾನವತೆಯೇ ನಿಶ್ಶೇಷವಾಗುತ್ತದೆ. ಮಾನವನಿಗೆ 'ತನ್ನತನ'ದ ಅರಿವು ಮೂಡಿಕೊಡುವ ಮಹತ್ವದ ಹೊಣೆಗಾರಿಕೆ ಬುದ್ಧಿಜೀವಿಗಳದ್ದಾಗಿರುತ್ತದೆ. ಮಾನವನಲ್ಲಿ ಆತ್ಮ ಸಂಬಿಕೆಯನ್ನು ಮೂಡಿಸುವುದೇ ಸಂಸ್ಕೃತಿ * ಸಮ್ಯಕ್-ಜ್ಞಾನ, ಸಮ್ಯಕ್-ಚಾರಿತ್ರ್ಯ, ಸಮ್ಯಕ್-ಬೋಧಗಳ ಪೂರ್ಣಾವತಾರವೇ ಸಂಸ್ಕೃತಿ. **ಸಂಸ್ಕೃತಿಯು ಬೆಲೆಯನ್ನರಿತವನೇ ಸ್ವಾತಂತ್ರ್ಯದ ಬೆಲೆಯನ್ನರಿಯಬಲ್ಲ.** ಸ್ವಾತಂತ್ರ್ಯ, ಸಂಸ್ಕೃತಿಯ ಅವಿನಾಭಾವವನ್ನು ನಿಜಸ್ವರೂಪವನ್ನು ಲೋಕಕ್ಕೆ ತಿಳಿಸಿಕೊಡುವ ಗುರುತರ ಹೊಣೆಗಾರಿಕೆ ಸಾಹಿತಿಯದು.

---

* The lack of meaning in life is what kills the taste for freedom; that is what most insidiously eats away a man's dignity and ardour in the fight for liberty. Every time a man or woman comes to the conclusion that his or her life is meaningless, freedom loses one of its bases and dictatorship promptly advances to take over. ...We have seen that the greatest danger is the lack of meaning—the feeling of the absurdity of a life without purpose. And culture is the name we give to a whole range of specifically human activities which give meaning to our lives. For culture consists, first and foremost, of passing on guides for living, conveying knowledge and significance, linking up feelings, ideas and acts, safeguarding a tradition in which we feel at home. So in the first place it inables man to see where he stande in the world—in a world of which he approves and whose symbols he comprehends. But security is only half of the matter; personal advanture, novelty, unrest, a touch of rebelliousness, are needed in life as well. And this brings us to the other aspect of culture. For culture does not consist only of trans. mission, when nebessars it can take the form of criticism and disruption, it does not only initiate, in invents."

—Denis de Rougemont.

ಈ ದೃಷ್ಟಿಯಿಂದ ಪ್ರಾಚೀನ ಕನ್ನಡ ಸಾಹಿತ್ಯ ನಮಗೆ ಅತೃಪ್ತಿಯನ್ನುಂಟು ಮಾಡಿದೆ. ಅದೃಶ್ಯಶಕ್ತಿಯನ್ನೇ ಆರಾಧಿಸಿದ ಪ್ರಾಚೀನರು ದೃಶ್ಯಪ್ರಪಂಚ, ವೈಶ್ಯಶಕ್ತಿಯನ್ನು ಮರೆತೇ ಬಿಟ್ಟರು. ಇದರಿಂದ ನಮ್ಮಲ್ಲಿ ನೈಜ್ಞಾನುಸಂಧಾನ ಬೆಳೆಯಲು ಅವಕಾಶವಾಯಿತು. ನಿತ್ಯಜೀವನದ ಸಮಸ್ಯೆಗಳನ್ನು ಧೀರರಂತೆ ನಾವು ಎದುರಿಸುವುದರ ಬದಲು ಆಕಾಶ ನೋಡುತ್ತ ಕುಳಿತೆವು. 'ಸ್ವಸ್ವರೂಪಜ್ಞಾನ' ಸೂರ್ಯನನ್ನು ನಮ್ಮ ದೌರ್ಬಲ್ಯದ ತಣಿಗೆಯಿಂದ ಮುಚ್ಚಿಬಿಟ್ಟೆವು. ವ್ಯಕ್ತಿಯಲ್ಲಿ ಮೂಡಿದ ನೈಜ್ಞಾನುಸಂಧಾನ ಸಾಂಕ್ರಾಮಿಕ ಜಾಡ್ಯದಂತೆ ವ್ಯಾಪಿಸಿ ಇಡಿಯ ರಾಷ್ಟ್ರವನ್ನೇ ಕಬಳಿಸಿತು.

ಇಂಥ ದುರಂತಸ್ಥಿತಿಗೆ ಸಿಕ್ಕಿ ನಾವು 'ನಮ್ಮತನ'ವನ್ನೇ ಮರೆತಿತ್ತಾಗ, ಸ್ವಾಮಿ ವಿವೇಕಾನಂದರು ಹೇಳಿದಂತೆ 'ಸಿಂಹ ತಾನು ಕುರಿಯೆಂದು' ತಿಳಿದಿದ್ದಾಗ ತಮ್ಮ ಅಮರವಾಣಿಯಿಂದ ನಮ್ಮನ್ನು ಎಚ್ಚರಿಸಿದ ರಾಷ್ಟ್ರದ ಭಾಗ್ಯಶಿಲ್ಪಿ ಮಹಾತ್ಮಾ ಗಾಂಧಿಯವರನ್ನು ನಾವು ಸದಾ ಸ್ಮರಿಸಿಕೊಳ್ಳಬೇಕು.

ತನ್ನ ಅಂತರ್ಗತವಾದ ಅಪಾರಶಕ್ತಿಯನ್ನು ವ್ಯಕ್ತಿ ಅರಿಯಬೇಕಲ್ಲದೆ, ಲೋಕಹಿತಕ್ಕಾಗಿ ಅದನ್ನು ಅನುಸಂಧಾನ ಮಾಡಬೇಕು. **ವಿಶ್ವ ಸಿಡಿದೊಡೆಯದಂತೆ ಅದನ್ನು ಕಾಪಾಡಬಲ್ಲುದು ಮಾನವೀಯತೆಯೊಂದೇ-ಕವಿ ಆ ಮಾನವೀಯತೆಯ ಪ್ರವಾದಿ.**

ಆಧುನಿಕ ಸಾಹಿತ್ಯದ ಸ್ಥಿತಿ-ಗತಿ

ಗೀತೆಗಳು ಮತ್ತು ಸಣ್ಣ ಕತೆಗಳಿಂದಲೆ ಕನ್ನಡ ನವೋದಯ, ಆರಂಭವಾಯಿತು. ಸುಮಾರು ಇಪ್ಪತ್ತು ವರ್ಷಕಾಲ ಈ ಸಾಹಿತ್ಯ ಪ್ರಕಾರಗಳು ಕನ್ನಡಿಗರ ಕಣ್ಮನಗಳನ್ನು ಸೆಳೆದುವಲ್ಲದೆ, ಕನ್ನಡಿಗರು ಹೆಮ್ಮೆಪಡುವಂಥ ಕೃತಿಗಳು ಬೆಳಕಿಗೆ ಬಂದುವು. ಎರಡನೆಯ ಮಹಾಯುದ್ಧವಾದನಂತರ ಕಾದಂಬರಿ ಪ್ರಾಶಸ್ತ್ಯಕ್ಕೆ ಬಂದಿತು. ಇಂದು ಕಾದಂಬರಿ ಸಾಹಿತ್ಯಪ್ರಪಂಚದ ಸರ್ವಾಧಿಕಾರಿಯಾಗಿದೆ.

ಈ ಎರಡು ದಶಕಗಳಲ್ಲಿ ಪ್ರಕಟವಾಗಿರುವ ಕಾದಂಬರಿಗಳ ಸಂಖ್ಯೆಯಷ್ಟೇ ಗುಣವೂ ದೊಡ್ಡದಾಗಿದೆ. ಕನ್ನಡನಾಡಿನ ವಿವಿಧ ಭಾಗಗಳ ಜನರ ನಾಗರಿಕತೆ, ಆಚಾರ-ವಿಚಾರಗಳು, ಸಮಸ್ಯೆಗಳು, ಕಾಲಧರ್ಮಾನುಗುಣವಾಗಿ ವ್ಯತ್ಯಾಸ ಹೊಂದುತ್ತಿರುವ ಮೌಲ್ಯಗಳು, ವೈಯಕ್ತಿಕ ಹಾಗೂ ಸಾಂಘಿಕ ಜೀವನದಲ್ಲಿ ಗಂಡು-ಹೆಣ್ಣಿನ ಸ್ಥಾನ, ಅನಕ್ಷರತೆ, ಬಡತನ, ಜಾತೀಯತೆಯ ಕಲ್ಲುಗಾಣಕ್ಕೆ ಸಿಕ್ಕಿ ಪರಿತಪಿಸುತ್ತಿರುವ ವ್ಯಕ್ತಿಗಳ ನಾನ್ಯತ ಚಿತ್ರಗಳು, ಇತ್ಯಾದಿ ವಿಷಯಗಳು ಆಧುನಿಕ ಕಾದಂಬರಿಗಳಲ್ಲಿ ನಿರೂಪಿತವಾಗಿನೆ ಸರ್ವರಿಗೂ ಅರ್ಥವಾಗುವ ಲಲಿತ ಗದ್ಯಶೈಲಿಯ ನಿರ್ಮಾಣಕ್ಕೆ ಆಧುನಿಕ ಕಾದಂಬರಿಗಳು ಅಪಾರಸೇವೆ ಸಲ್ಲಿಸಿವೆ.

ಕಾದಂಬರಿಗಳ ಜನಪ್ರಿಯತೆಯಿಂದ ಉಳಿದ ಸಾಹಿತ್ಯಪ್ರಕಾರಗಳು ಕೃಶವಾಗುತ್ತಿವೆ ಎಂಬ ಮಾತು ಸತ್ಯವಾದರೂ, ಈ ಕಾರಣಕ್ಕೆ ಕಾದಂಬರಿಗಳ ಬೆಳೆಯನ್ನು ಕುಂಠಿತಗೊಳಿಸಬೇಕೆಂಬ ವಾದ ಸರಿಯಲ್ಲ.

ನಮ್ಮ ಜನಗಳ ಇಂಗ್ಲಿಷ್ ಮೋಹ ನಿವಾರಣೆಗೆ ಕನ್ನಡ ಕಾದಂಬರಿಗಳು ಬಹಳ ಶ್ರಮಿಸಿವೆ. ಇಂಗ್ಲಿಷ್ ಕಾದಂಬರಿಗಳ ವ್ಯಾಸಂಗದಿಂದ ದೊರೆಯಬಹುದಾದ ಆನಂದ ಕನ್ನಡಕಾದಂಬರಿಗಳಲ್ಲಿಯೂ ದೊರೆಯುತ್ತವೆ ಎಂಬ ಭಾವನೆ ಜನರಲ್ಲಿ ಬೆಳೆದಿರುವುದು ನಮ್ಮ ಪುಣ್ಯ. ಕನ್ನಡ ಓದುವ ಅಭ್ಯಾಸವೇ ಇಲ್ಲದವರನ್ನು ಕನ್ನಡದ ಕಡೆಗೆ ತಿರುಗಿಸಿದುದೂ ಕಾದಂಬರಿಗಳೇ.

ಒಳ್ಳೆಯ ಕಾದಂಬರಿಗಳ ಜತೆಗೆ ಕೆಟ್ಟ ಕಾದಂಬರಿಗಳು ಬರುವುದು ಸಹಜ. ಕೆಟ್ಟ ಕಾದಂಬರಿಗಳು ಬರುತ್ತಿವೆಯೆಂದು ಕಾದಂಬರಿಗಳೇ ಬೇಡ— ಎನ್ನುವುದು ವಿವೇಕವಲ್ಲ.

ಕಣ್ಣಿಗೆ ಕಾಣುವ ಅಗಾಧ ಪ್ರಮಾಣದಲ್ಲಿ ಕನ್ನಡದಲ್ಲಿ ಕಾದಂಬರಿಗಳು ಮಾರಾಟವಾಗುತ್ತಿಲ್ಲ. ಹೆಸರಾಂತ ಲೇಖಕರ ಕಾದಂಬರಿ ಎರಡು, ಮೂರು ಸಾವಿರ ಪ್ರತಿಗಳು ಮಾರಾಟವಾಗಬೇಕಾದರೆ ಒಂದರಿಂದ ನಾಲ್ಕು ವರ್ಷಗಳಾಗುತ್ತವೆ. ಈ ಪ್ರಮಾಣದಲ್ಲಿಯೂ ವೈಜ್ಞಾನಿಕ, ಜ್ಞಾನಪ್ರಬೋಧಕ ಪ್ರಬೋಧಕ ಗ್ರಂಥಗಳೂ ತತ್ವಶಾಸ್ತ್ರಗ್ರಂಥಗಳೂ, ಸಣ್ಣಕಥೆ, ಪ್ರಬಂಧ, ನಾಟಕ, ಹರಟೆ, ಜೀವನಚರಿತ್ರೆಯ ಗ್ರಂಥಗಳೂ ಮಾರಾಟವಾಗುವುದಿಲ್ಲ. ಅಚ್ಚುಹಾಕಿದ ಒಂದು ಸಾವಿರ ಪ್ರತಿಗಳೂ ಮಾರಾಟವಾಗದಿದ್ದರೆ ಯಾವ ಪ್ರಕಾಶಕ ಧೈರ್ಯದಿಂದ ವೈಜ್ಞಾನಿಕ ವಿಚಾರ ಸಾಹಿತ್ಯವನ್ನು ಪ್ರಕಟಿಸಲು ಸಾಧ್ಯ ? ವಿಚಾರಸಾಹಿತ್ಯಕ್ಕೆರುವ ಪ್ರೋತ್ಸಾಹ ಅನುಲಕ್ಷಿಸಿಯೇ ಕೆಲವು ಲೇಖಕರು ತಾವು ಅಭ್ಯಸಿಸಿದ ವಿಷಯಗಳನ್ನು ಕಾದಂಬರಿಯ ಒಳಗೇ ಅಡಕ ಮಾಡುವ ನೂತನ ತಂತ್ರ ಆರಂಭಿಸಿದ್ದಾರೆ.

ಜನ 'ಕಾದಂಬರಿಯ'ನ್ನು ಓದುವ ಆಸಕ್ತಿ - ಆಸ್ಥೆಗಳಿಂದಲೇ ವೈಜ್ಞಾನಿಕ ವಿಚಾರ ಸಾಹಿತ್ಯವನ್ನು ಓದುವಂತಾಗಬೇಕು. ಈ ನಿಟ್ಟಿನಲ್ಲಿ ವೈಜ್ಞಾನಿಕ, ವಿಚಾರ ಸಾಹಿತ್ಯ ಲೇಖಕರು ವಿಶೇಷ ಕೃಷಿಮಾಡಬೇಕಾಗಿದೆ.

ಎಂಥ ಜಟಿಲ ವೈಜ್ಞಾನಿಕ ವಿಷಯವನ್ನೇ ಆಗಲಿ ಕನ್ನಡದಲ್ಲಿ ಹೇಳಬಹುದೆಂಬುದನ್ನು ದಿವಂಗತ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಬಹಳ ಹಿಂದೆಯೇ ಸಿದ್ಧಪಡಿಸಿಕೊಟ್ಟರು. ಕೆಲವು ವಿಜ್ಞಾನ ಪಂಡಿತರು ಈ ರಂಗದಲ್ಲಿ ದುಡಿದು ಪ್ರಕೃತಿಶಾಸ್ತ್ರ, ಸಮಾಜಶಾಸ್ತ್ರ, ಖಗೋಳಶಾಸ್ತ್ರ, ಮನಃಶಾಸ್ತ್ರಗಳ ಮೇಲೆ ಉದ್ಗ್ರಂಥಗಳನ್ನು ಬರೆದಿದ್ದಾರೆ.

ಸಾಮಾನ್ಯ ಓದುಗನಿಗೆ ಪಥ್ಯವಾಗುವಂತೆ, ರುಚಿಸುವಂತೆ ವೈಜ್ಞಾನಿಕ ವಿಷಯಗಳನ್ನು ಹೇಳುವ ರೀತಿಯನ್ನು ನಮ್ಮ ವೈಜ್ಞಾನಿಕ ಲೇಖಕರು ಇನ್ನೂ ಸಾಧಿಸಬೇಕಾಗಿದೆ. ಇದಕ್ಕೆ ಅವಶ್ಯಕವಾದ ಶೈಲಿ, ಶಬ್ದಸಂಪತ್ತು, ಕಲಾತ್ಮಕ ನಿರೂಪಣೆಗಳನ್ನು ಅವರು ರೂಢಿಸಿಕೊಳ್ಳಬೇಕಾಗಿದೆ. ಜೇಮ್ಸ್, ಜೋಡ್, ರಸೆಲ್, ವೈಟ್‌ಹೆಡ್, ಹಾಲ್ಡೇನ್, ಹಿಲೆಕ್ಸಿಸ್ ಕ್ಯಾರೆಲ್, ಕೆನತ್ ವಾಕರ್, ಹ್ಯಾವಲಾಕ್

ಎಲ್ಲಿಸ್ ಇವರ ಗ್ರಂಥಗಳು ಪಾಂಡಿತ್ಯಪೂರ್ಣವೂ ಅನುಭವಪೂರ್ಣವೂ ಆಗಿರುವಂತೆ ಮನೋಜ್ಞ ಶೈಲಿಸಂಪನ್ನವೂ ಆಗಿರುತ್ತವೆ. ಕನ್ನಡದ ವೈಜ್ಞಾನಿಕ ಶಾಸ್ತ್ರೀಯ ಲೇಖನಗಳಿಗೆ ಇಂಥ ರಸಪುಷ್ಟಿ, ಲಲಿತ ನಿರೂಪಣೆ ಅತ್ಯಗತ್ಯವಾಗಿದೆ.

ನಾಟಕ

ಕನ್ನಡಕ್ಕೂ ನಾಟಕಕ್ಕೂ ಏಕೋ ಏನೋ ಋಣಾನುಬಂಧವೇ ಕೂಡಿಬಂದಂತಿಲ್ಲ. ನೃಪತುಂಗನ ಕವಿರಾಜಮಾರ್ಗದಲ್ಲಿ (ಕ್ರಿ. ಶ. ೮೧೪) ನಾಟಕದ ಬಗ್ಗೆ ಉಲ್ಲೇಖವಿರುವುದಾದರೂ, ನಾವು ಮೊವಲನೆಯ ಕನ್ನಡ ನಾಟಕ ಕಾಣಬೇಕಾದರೆ ಕ್ರಿ. ಶ. ೧೬೦೦ರ ವರೆಗೆ ಕಾಯಬೇಕಾಯಿತು. ಅದೂ ಶ್ರೀಹರ್ಷನ ರತ್ನಾವಳಿ ನಾಟಕಾನುವಾದ, ತರುವಾಯ ಕ್ರಿ. ಶ. ೧೮೮೯ರಲ್ಲಿ ಹೊರಬಿದ್ದ ಬಸವಪ್ಪಶಾಸ್ತ್ರಿಗಳವರ 'ಶಾಕುಂತಲ' ನಾಟಕವೇ ಗಣನೀಯವಾದದ್ದು. ಈ ಶತಮಾನದ ಎರಡನೆಯ, ಮೂರನೆಯ ದಶಕಗಳನ್ನು ಕನ್ನಡ 'ನಾಟಕಗಳ ಸ್ವರ್ಣಯುಗ'ವೆಂದು ಕರೆಯಬಹುದು. ಪ್ರತಿಭಾಸ್ಪಿತರಾದ ಕೈಲಾಸಂ, ಸಂಸ ಇಬ್ಬರೂ ಮೋಲಿಯರ್, ರೆಸಿನ್‌ಗಳಂತೆ ಸುಕುಮಾರ ಅವಿದ್ಧ ನಾಟಕಗಳಿಂದ ಕನ್ನಡ ನಾಟಕಭಂಡಾರ ತುಂಬಿದರು. ದಕ್ಷಿಣ-ಕನ್ನಡ ಜಿಲ್ಲೆಯಲ್ಲಿ ಶಿವರಾಮ ಕಾರಂತರು, ಉತ್ತರ ಕನ್ನಡದಲ್ಲಿ ಶ್ರೀರಂಗರು (ಆದ್ಯ ರಂಗಾಚಾರ್ಯರು) ನಾಟಕಗಳನ್ನು ಬರೆದು ಆಡಿಸಿ ಕನ್ನಡ ನಾಟಕಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದರು.

ಇವರ ತರುವಾಯ 'ನಾಟ್ಯವಿಲಾಸ' ರಂಗಭೂಮಿಯ (Amateur Stage) ಮೇಲೆ ಬಂದ ನಾಟಕಗಳು 'ಫಾರ್ಸುಗಳ' (Farces) ಜಾತ್ಯಕ್ಕೆ ಸೇರಿದವು. ಹೇಗಾವರೂ ಎಂತಾವರೂ ಪ್ರೇಕ್ಷಕರನ್ನು ನಗಿಸಿದರಾಯಿತು ಎನ್ನುವುದೇ ನಮ್ಮ ನಾಟ್ಯಜೀವಿ, ನಾಟ್ಯವಿಲಾಸಿ ರಂಗಭೂಮಿಗಳ ಧ್ಯೇಯವಾಯಿತು.

ಕನ್ನಡ ನಾಡಿನ ಸಾಂಸ್ಕೃತಿಕ ಹೆಚ್ಚಳಕ್ಕನುಗುಣವಾದ ರಂಗಭೂಮಿ ಇನ್ನೂ ಜನ್ಮ ತಳೆಯಬೇಕಾಗಿದೆ. ಇದಕ್ಕೆ ನಾಟಕಕಾರರು ಜಸ್ತಿಭಾರ ಹಾಕಬೇಕು. ಅಭಿಜಾತ, ಜಾನಪದ ವಸ್ತುಗಳೆರಡೂ ಗಂಭೀರವಾದ ರೀತಿಯಲ್ಲಿ ಪ್ರತಿಪಾದಿಸಲ್ಪಡಬೇಕು. ನಾಟಕ ನೋಡುವುದು ಕ್ಷಣಿಕ ವಿಲಾಸಕ್ಕೆ ಎಂಬ ಭಾವನೆ ತೊಲಗಿ, ಅದು ನಿಶ್ಶಿವಿದ್ಯಾಮಂದಿರ, ಕಲಾದೇವಿಯ ದಿವ್ಯಮಂದಿರ ಎಂಬ ಭಾವನೆ ಜನರಲ್ಲಿ ಬೆಳೆಯಬೇಕು.

ಪ್ರಾಚೀನ ಕನ್ನಡಕಾವ್ಯಗಳಲ್ಲಿ ಸೊಗಸಾದ ನಾಟಕಗಳು ಹುದುಗಿವೆ. ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ರನ್ನನ 'ಗದಾಯುದ್ಧ' ಕಾವ್ಯವನ್ನು ನಾಟಕಕ್ಕೆ ರೂಪಾಂತರಗೊಳಿಸಿ ನೇಪ್ಯಂಕ್ತಿ ಹಾಕಿಕೊಟ್ಟಿದ್ದಾರೆ.

ಕಾವ್ಯ ನಾಟಕಗಳಲ್ಲದೆ ನಿತ್ಯಜೀವನದ ಚಿತ್ರಗಳು, ಸಮಸ್ಯೆಗಳನ್ನು ಗಂಭೀರವಾಗಿ ಪ್ರತಿಪಾದಿಸುವ ನಾಟಕಗಳು ನಮಗೆ ಬೇಕು.

ಕನ್ನಡ ಕವಿಗಳು, ವೀರರು, ಧರ್ಮಪ್ರವರ್ತಕರು, ರಾಷ್ಟ್ರನಿರ್ಮಾತೃಗಳು– ಇವರ ಜೀವನ, ನಾಟಕಕ್ಕೆ ಉತ್ತಮ ವಸ್ತುಗಳನ್ನೊದಗಿಸಬಲ್ಲುದು.

ದೇಶಾಭಿಮಾನ, ಧರ್ಮಾಭಿಮಾನ, ಆತ್ಮಾಭಿಮಾನಗಳನ್ನು ಪ್ರಚೋದಿಸುವ ನಾಟಕಗಳ ಆವಶ್ಯಕತೆ ಅತ್ಯಧಿಕವಾಗಿದೆ.

ವಿಮರ್ಶೆ

ಕನ್ನಡದ ಆಚಾರ್ಯರಾದ ಡಿ. ವಿ. ಗುಂಡಪ್ಪನವರು, ಎ. ಆರ್. ಕೃಷ್ಣಶಾಸ್ತ್ರಿಗಳವರು, ಬಿ. ಎಂ. ಶ್ರೀಕಂಠಯ್ಯನವರು ವಿಮರ್ಶೆಯ ರಾಜಮಾರ್ಗವನ್ನು ನಿರ್ದೇಶಿಸಿದರು. ಅವರ ಜಾಡನ್ನೇ ಅನುಸರಿಸಿದ ತೀ. ನಂ. ಶ್ರೀಕಂಠಯ್ಯ, ಡಿ ಎಲ್. ನರಸಿಂಹಾಚಾರ್ಯ, ಜಿ. ಪಿ. ರಾಜರತ್ನಂ, ವಿ. ಸೀತಾರಾಮಯ್ಯ, ಎಸ್, ವಿ. ರಂಗಣ್ಣ ಮತ್ತು ವಿ. ಕೃ. ಗೋಕಾಕ ಉತ್ತಮ ವಿಮರ್ಶೆಗಳನ್ನು ಬರೆದರು. ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಹರಿಹರರಮೇಲೆ ಪ್ರಕಟವಾದ ಪ್ರಶಸ್ತ ಗ್ರಂಥಗಳು, ಬಿ.ಎಂ. ಶ್ರೀ., ಎ.ಆರ್. ಕೃ.,ಪಂಜೆ, ಎಸ್.ವಿ. ರಂಗಣ್ಣ, ಮುಳಿಯ ತಿಮ್ಮಪ್ಪಯ್ಯ, ಮಂಜಯ್ಯ ಹೆಗ್ಗಡೆ ಇವರಿಗೆ ಅರ್ಪಿತವಾದ ಅಭಿನಂದನ ಗ್ರಂಥಗಳು–ಈ ಸಂಪ್ರದಾಯವನ್ನು ಬೆಳಸಿದವು. ಆದರೆ ಈ ಸತ್ಸಂಪ್ರದಾಯ ಎಷ್ಟು ಬೆಳೆಯಬೇಕೋ ಅಷ್ಟು ಬೆಳೆಯಲೇಲ್ಲ. ವೈಯಕ್ತಿಕ ಅಭಿನಾನ, ಜಾತ್ಯಭಿಮಾನ, ಜಿಲ್ಲಾಭಿಮಾನಗಳ ಪ್ರದರ್ಶನಕ್ಕೆ ವಿಮರ್ಶೆ ಒಂದು ಆಯುಧವಾಯಿತು. ರಾಗದ್ವೇಷಗಳ ಮೆರೆದಾಟದಲ್ಲಿ ಕಾವ್ಯಗುಣ ಮೂಲೆಗುಂಪಾಯಿತು.

ಈ ವ್ಯಾಧಿನಿವಾರಣೆಯಾದಲ್ಲದೆ ಕನ್ನಡಸಾಹಿತ್ಯಕ್ಕೆ ಉಳಿಗಾಲವಿಲ್ಲ. ಕವಿಯ ಜಾತಿ, ಕುಲ, ಗೋತ್ರಗಳನ್ನು ಮರೆತು ಅವನ ಕಾವ್ಯವನ್ನು ನಿಷ್ಪಕ್ಷಪಾತದೃಷ್ಟಿಯಿಂದ, ಸಹೃದಯತೆಯಿಂದ, ರಸಿಕತೆಯಿಂದ, ನೋಡುವ ದೃಷ್ಟಿ ನಮ್ಮಲ್ಲಿ ಬೆಳೆಯಬೇಕು. ಕವಿಯ ಪ್ರತಿಭೆಯಷ್ಟೇ ವಿಮರ್ಶಕನಲ್ಲಿಯೂ ಪ್ರತಿಭೆಯಿದ್ದರೆ ಉತ್ತಮ ವಿಮರ್ಶೆ ಬರಲು ಸಾಧ್ಯ.

ಕಿರಿಯ ಲೇಖಕರು

ಕನ್ನಡದಲ್ಲಿ ಕಿರಿಯ ಲೇಖಕರ ಬಳಗ ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಹಿರಿಯರು ಪೊತ್ತಿಸಿ ಬೆಳಗಿಸಿದ ಪಂಜನ್ನು ನಮ್ಮ ಕೈಗಿತ್ತುಹೋಗಿರುವಂತೆ, ನಾವು ಈ ಪಂಜಿಗೆ ನಮ್ಮ ತಪಸ್ಸು, ಸೇವೆ, ತ್ಯಾಗದ ತೈಲವೆರೆದು ಕಿರಿಯರ ಕೈಗಿತ್ತುಹೋಗಬೇಕು. ಸಾಹಿತ್ಯಸೇವೆ ಮಾಡಬೇಕೆಂಬ ಆಕಾಂಕ್ಷೆಯಷ್ಟೇ ಸಾಲದು. ಸೇವೆ ಸಫಲವಾಗುವುದಕ್ಕೆ ಅತ್ಯವಶ್ಯಕವಾದ ಪಾಂಡಿತ್ಯ, ಭಾಷಾಸಿದ್ಧಿ, ಜೀವನಾನುಭವಗಳನ್ನು ದೊರೆಕಿಸಿಕೊಳ್ಳಬೇಕು. ನೂರಾರು, ಸಹಸ್ರಾರು ಕೃತಿಗಳನ್ನು ಓದಿ ಜೀರ್ಣಿಸಿಕೊಳ್ಳಬೇಕು. ಬರೆದುದನ್ನು ಕೆಲಕಾಲ ಮುಚ್ಚಿಟ್ಟು ಆನಂತರ ಹೊರತೆಗೆದು ತಾವೇ ನೋಡಿ ಅದರ ಗುಣದೋಷಗಳನ್ನರಿಯಬೇಕು. ಒಂದು ಕೃತಿಯನ್ನು ಆವಶ್ಯಕವೆನಿಸಿದರೆ ಹತ್ತು ಸಾರಿ ಮತ್ತೆ ಮತ್ತೆ ಬರೆಯಬೇಕು. ತಾವು ಬರೆದುದೆಲ್ಲವೂ ಬೇಗ ಬೇಗ ಮುದ್ರಣವಾಗಿ ಬೀಳ್ಕೆ ಪ್ರಸಿದ್ಧಿ ದೊರೆಯಬೇಕೆಂದು ಕಿರಿಯ ಲೇಖಕರು ಹಾರೈಸುವುದಕ್ಕಿಂತಲೂ, ಬರೆದ ಕೃತಿ ಅಚ್ಚಿಗೆ ಅರ್ಹವಾಗಿವೆಯೇ— ಎಂದು ನಿಚಾರಮಾಡಬೇಕು.

ಬಂಕೆಂ ಬಾಬುಗಳು* ಬಂಗಾಳಿ ಲೇಖಕರಿಗೆ ಸೂಚಿಸಿದ ಸೂತ್ರಗಳನ್ನು ಕನ್ನಡ ಲೇಖಕರೂ ಮನನ ಮಾಡುವುದು ಒಳ್ಳೆಯದು:

೧. ಯಶಸ್ಸಿಗಾಗಿ ಬರೆಯಬೇಡಿ; ಹಾಗೆ ಮಾಡಿದರೆ ಯಶಸ್ಸು ಬರುವುದಿಲ್ಲ. ಲೇಖನವೂ ಚೆನ್ನಾಗುವುದಿಲ್ಲ; ಲೇಖನ ಚೆನ್ನಾಗಿದ್ದರೆ ಯಶಸ್ಸು ತಾನಾಗಿಯೇ ಬರುತ್ತದೆ.

೨. ದುಡ್ಡಿಗಾಗಿ ಬರೆಯಬೇಡಿ; ಆಗ ಜನರಂಜನೆ ಮಾಡಬೇಕಾಗುತ್ತದೆ; ಲೇಖನವು ವಿಕೃತವೂ, ಅನಿಷ್ಟವೂ ಆಗುತ್ತದೆ.

೩. ದೇಶಕ್ಕಾಗಲಿ, ಮನುಷ್ಯಜಾತಿಗಾಗಲಿ, ಮಂಗಳ ಸಾಧನೆಯಾಗುವುದಾದರೆ ಅಥವಾ ಸೌಂದರ್ಯಸೃಷ್ಟಿಯಾಗುವುದಾದರೆ ಮಾತ್ರ ಬರೆಯಿರಿ.

೪. ಅಸತ್ಯ, ಅಧರ್ಮ, ಅಹಿತವಾದುದನ್ನು ಬರೆಯಬೇಡಿ; ಅದು ಮಹಾಪಾಪ.

೫. ಬರೆದದ್ದನ್ನು ಥಟ್ಟನೆ ಮುದ್ರಿಸಬೇಡಿ; ಸ್ವಲ್ಪಕಾಲ ಬಿಟ್ಟು ನೋಡಿದರೆ ಅದರ ದೋಷ ಗೊತ್ತಾಗುತ್ತದೆ.

೬. ತಿಳಿಯದ ವಿಷಯಕ್ಕೆ ಕೈಹಾಕಬೇಡಿ.

೭. ಪಾಂಡಿತ್ಯ ಪ್ರಕಾಶನಕ್ಕೆ ಹೋಗಬೇಡಿ; ನಿಮಗೆ ತಿಳಿಯದ ಭಾಷೆಗಳಿಂದ ಎಂದೂ 'ಉದ್ಧಾರ' ಮಾಡಬೇಡಿ.

೮. ಅಲಂಕಾರಕ್ಕೆ ಪ್ರಯತ್ನಿಸಬೇಡಿ; ಅವಶ್ಯವಾದಾಗ ಅದು ತಾನೇ ಬರುತ್ತದೆ.

೯. ಅಲಂಕಾರವೋ, ಹಾಸ್ಯವೊ ಚೆನ್ನಾಗಿದೆ ಎನ್ನಿಸಿದಾಗ, ನಾಲ್ಕುಜನ ಸ್ನೇಹಿತರಿಗೆ ಮತ್ತೆ ಮತ್ತೆ ಓದಿತೋರಿಸುವುದಕ್ಕೆ ಸಂಕೋಚವಾದರೆ ಕೆತ್ತುಹಾಕಿ.

೧೦. ಸರಳತೆಯೇ ಅಲಂಕಾರಗಳಲ್ಲೆಲ್ಲಾ ಶ್ರೇಷ್ಠವಾದ ಅಲಂಕಾರ.

೧೧. ಯಾರನ್ನೂ ಅನುಕರಣ ಮಾಡಬೇಡಿ; ಅದರಿಂದ ದೋಷಗಳನ್ನೇ ಅನುಕರಣಮಾಡುತ್ತೀರಿ.

೧೨. ಸಪ್ರಮಾಣವಲ್ಲದ್ದನ್ನು ಬರೆಯಬೇಡಿ.

ಕೆರಿಯ ಲೇಖಕರ ಕೃತಿಗಳು ಅಲ್ಪ ಮೌಲ್ಯಕ್ಕೆ ದೊರೆಯುತ್ತದೆಂದು ಪ್ರಕಾಶಕರು ಪೂರ್ವಾಪರ ನಿವೇಚನೆಯಿಲ್ಲದೆ ಸಿಕ್ಕಿದ ಕೃತಿಯನ್ನು ಪ್ರಕಟಿಸುತ್ತಿರುವುದು ಯೋಗ್ಯವಲ್ಲ. ತಮ್ಮ ಕೈಗೆ ಬರುವ ಹಸ್ತ ಪ್ರತಿಗಳನ್ನು ಓದಿನೋಡಿ, ಅವುಗಳ ವ್ಯಾಕರಣ ದೋಷ, ವಾಕ್ಯ ಬೃಂದದೋಷ, ಸಮಾಸ ದೋಷ, ಶಬ್ದೋಚ್ಚಾರಣೆಯ ದೋಷಗಳನ್ನಾದರೂ ಬಲ್ಲವರಿಂದ ತಿದ್ದಿಸಿ ಪ್ರಕಟಿಸಬೇಕು. ಪುಸ್ತಕ ಮಾರುವುದಷ್ಟೇ ತಮ್ಮ ಕರ್ತವ್ಯವೆಂದು ಪ್ರಕಾಶಕರು ಭಾವಿಸಬಾರದು. ಒಳ್ಳೆಯ ಸಾಹಿತ್ಯ ಪ್ರಸಾರದ ಹೊಣೆಗಾರಿಕೆ ಅವರಿಗೂ ಸೇರಿದೆ.

---

* ಬಂಕಿಂಚಂದ್ರ: ಎ. ಆರ್. ಕೃಷ್ಣಶಾಸ್ತ್ರೀ (ಪುಟ ೪೭೦)

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ತುಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ (ಕರ್ನಾಟಕ ಸೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಆತಿಥ್ಯ

(ಚಿಕ್ಕ ಕಥೆ)

ಲೇ. ' ಗಂಗಾತನಯ ' ಠಾಕುರ್ಲಿ (ಮುಂಬಯಿ)

ಹಳೆಯ ಕಾಲದ ಜನರ ಉದಾರ ಮನೋಧರ್ಮ, ಇಂದಿನ ಹೊಸ ಕಾಲದಲ್ಲಿ ಅದ್ಭುತ ಕಥೆಯಂತೆ ಕಾಣಬಹುದು. ಆದರೆ ಅದು ಅದ್ಭುತ ಕಥೆಯಲ್ಲ. ' ದಾನಗುಣವೇ ಮಾನವತೆಯ ಮುಖ್ಯ ಲಕ್ಷಣ ' ಎಂಬ ಸನಾತನ ಸಂಪ್ರದಾಯದಲ್ಲಿ ಅವರಿಗೆ ಸಂಪೂರ್ಣ ಶ್ರದ್ಧೆಯಿದ್ದಿತು. ಈ ಸಮುಗಾರ ಮುದುಕನ ಮನೆತನವೂ ಅಂತಹ ಶ್ರದ್ಧೆಯಿಂದ ತುಂಬಿಕೊಂಡಿತ್ತು.

❋

' ರಸ್ ರಸ್ ' ಸುರಿಯುವ ಮಳೆಯಲ್ಲಿ, ಒಂದು ಕೈಯಲ್ಲಿ ಕೊಡೆಹಿಡಿದುಕೊಂಡು, ಮತ್ತೊಂದು ಕೈಯಲ್ಲಿ ಓದುವ ಪುಸ್ತಕ ಹಿಡಿದುಕೊಂಡು, ' ಛಪ್ ಛಪ್ ' ಎಂದು ಚಪ್ಪಲಿಗಳ ಸದ್ದು ಮಾಡುತ್ತ ೮-೫೬ ರ ಗಾಡಿಯನ್ನು ಠಾಕುರಲಿ ಸ್ಟೇಶನ್ನಿನಿಂದ—ಹಿಡಿಯಲು, ನಡಿಗೆಯ ಓಟದಲ್ಲಿ ಎದುರು ನೋಡುತ್ತ ಗಡಿಬಿಡಿಯಲ್ಲಿ ಹೊರಟಿರಲು, ಮಳೆಯಲ್ಲಿ ನೆನೆದ ಕಲ್ಲಿಗೆ ತಾಗಿ ' ಚಟ್ ' ಎಂದು ಚಪ್ಪಲಿಯ ಬಾರು ಕಿತ್ತುಬಿಟ್ಟಿತು. Full Speed ನಲ್ಲಿ ಓಡುತ್ತಿರುವ ಗಾಡಿಗೆ ಎಮರ್ಜನ್ಸೀ Break ಹಾಕಲು ' ಗರ್ ಗರ್ ' ಸದ್ದು ಮಾಡುತ್ತ, Jerk ಕೊಡುತ್ತ, ಒಮ್ಮೆಲೆ ಗಕ್ಕನೆ ನಿಲ್ಲುವಂತೆ ನಿಂತುಬಿಟ್ಟ. ಮುಂದೆ ಸಾಗುವಹಾಗೇ ಇದ್ದಿಲ್ಲ. ಗಾಡಿಯನ್ನು ಹಿಡಿಯುವ ಆಶೆ ನಿರಾಶೆಯಾಯಿತು. ಅತ್ತಿತ್ತ ರಸ್ತೆಯ ಪಕ್ಕದಲ್ಲಿ ನೋಡಿದೆ: ಒಂದು ಗಿಡದ ಕೆಳಗೆ ಚಿಕ್ಕ ಗುಡಿಸಿಲು ಹಾಕಿಕೊಂಡು ಮಳೆನೀರು ಒಳಗೆ ಬರದಂತೆ ರಕ್ಷಿಸಿಕೊಂಡು ಚಪ್ಪಲಿ ರಿಪೇರಿ ಮಾಡುತ್ತ ಕುಳಿತಿದ್ದ ಮುಗಾರ ಮುದುಕ ಕಾಣಿಸಿದ. ಕಾಲೆಳೆಯುತ್ತ ಅವನಲ್ಲಿಗೆ ಹೋದೆ.

" ಏನಪ್ಪಾ ಎಷ್ಟು ತಕ್ಕೊಳ್ತಿಯೋ ಇವನ್ನು ರಿಪೇರಿಮಾಡಿಕೊಡಲಿಕ್ಕೆ " ಚಪ್ಪಲಿಯನ್ನು ಅವನ ಮುಂದೆ ಬಿಟ್ಟು ಕೇಳಿದೆ.

ಚಪ್ಪಲಿ ಹಿಡಿದೆತ್ತಿ ಮೇಲೆ ಕೆಳಗೆ ನೋಡಿ, " ಒಂದು ರೂಪಾಯಿ ಕೊಡ್ರಿ " ಎಂದ—ಮುದುಕ.

" ಅದು ಹ್ಯಾಂಗೋ ಇಷ್ಟು ಕೆಲಸಮಾಡಲಿಕ್ಕೆ ಒಂದು ರೂಪಾಯಿ ? " ಎಂದು ಕೇಳಿದೆ ಒಮ್ಮೆಲೇ ಬೆರಗಾಗಿ ' ಸಿಂಧೀ ಕ್ಯಾಂಪಿಗೆ ಹೋದರೆ ಇನ್ನೊಂದೆರಡು ರೂಪಾಯಿ ಹೆಚ್ಚಿಗೆ ಕೊಟ್ಟರೆ ಹೊಸ ಚಪ್ಪಲಿ ಬರುತ್ತವಲ್ಲ ' ಎನ್ನುವಷ್ಟರಲ್ಲಿ ನನ್ನ ಜಿಪುಣ ಮನಸ್ಸು.

" ಕೆಲಸ ಮಾಡಿದಾಂಗೈತ್ರಿಯಪ್ಪಾ ! ಈಗ ಮಾಡ್ಸಿದ್ರ ಮುಂದ ಅನಕಾ ನೋಡಾಕಬ್ಯಾಡ್ರಿ ರಿಪೇರಿ ಕೆಲ್ಸ ಬಾಳೈತ್ರಿ. ಇದs ಗಿಡದ್ ತೆಳಗ, ಹಿಂದ ನಮ್ಮಪ್ಪs ಕುಂಡರ್ತಿದ್ದನ್ರಿ, ದಿನಾ ದುಡ್ಡ ದುಡ್ಡು-ಒಲೆ ಬಾಳಾದ್ರ ಒಂದ್ರೂಪಾಯಿ ಗಳಸ್ತಿದ್ದನ್ರಿ; ನಾಕಾಣೆದಾಗ ಎಲ್ಲಾರ್ ಹೊಟ್ಟೇ ತುಂಬ್ಸಿ ಹನ್ನೆಡ್ಡಾಣೆ ಉಳಸ್ತಿದ್ದನ್ರಿ. ಆದ್ರ ಈಗ ಇಪೇ ಜಾಗಾದಾಗ ನಾನು ಕುಂತು, ದಿನಕ್ಕ ನಾಕೈದ್ರೂಪಾಯಿ ಗಳ್ಸಿದ್ರೂ ನಮ್ಗೆಲ್ಲರ್ಗ್ಯಾ ಹೊಟ್ಟಿಗೆ ಸಾಲೂದಿಲ್ರಿ!" ಎಂದು ಬದಲಾದ ಪರಿಸ್ಥಿತಿಯನ್ನು ಅರ್ಥಶಾಸ್ತ್ರಜ್ಞನಂತೆ ಹೇಳಿದ ಅವನ ಮಾತಿಗೆ ನಾನು ಸಮ್ಮತಿಸಾಗಲೇಬೇಕಾಯಿತು.

" ಕುಂಡರ್ರಿ, ಈಗ ಮಾಡಿಕೊಡ್ತೀನಿ....ಹಾಂ, ಹಾಂ. ಇನ್ನೊಬ್ರಾಗೇ " ಎಂದು ಅಲ್ಲಿಯೇ ತನ್ನ ಚಿಕ್ಕ ಗುಡಿಸಿಲಿನಲ್ಲಿ ಒಂದೆಡೆ ಕುಳಿತುಕೊಳ್ಳಲು ಹೇಳಿ, ಚಪ್ಪಲಿ ಕೈಗೆತ್ತಿಕೊಂಡು ಕೊಳೆ ತೊಳೆಯತೊಡಗಿದ.

" ನಮ್ಮ ನಮ್ಮ ಮನಸ್ಸಿಗೆ—ದರ್ಮಕ್ಕ-ತಕ್ಕಾಂಗ ಶಿವ ವ್ಯಾಳ್ಯಾತರ್ತಾನ್ರೀ! ಇದs ಗಿಡಜ್ಜೆಳಗ ನಮ್ಮಪ್ಪ, ಮುದುಕಾದ್ಮ್ಯಾಲೆ ಕುಂತಿರ್ದನ್ರಿ ! ನಾ ಏನಾ ಹಿಡೀಲಾಕ ಹೋಗ್ತಿದ್ದೆ...." ಎಂದು ತನ್ನ ಬಾಳಿನ ವಿಚಾರ ಹೇಳಲು ಪ್ರಾರಂಭಿಸಿದ—ಮುದುಕ.

ನನಗೂ ಆಫೀಸಿಗೆ ಹೋಗುವ ಆಶೆ ನಿರಾಶೆಯಾಗಿತ್ತು; ಮುದುಕರನ್ನು ಕಂಡರೆ ನನಗೆ ಬಹಳ ಸಂತೋಷವೆನಿಸುತ್ತಿತ್ತು. ಅವರಿಂದ ಏನಾದರೂ ಕೇಳಿ ತಿಳಿಯಬೇಕೆಂಬ ಲವಲವಿಕೆ ಬಹಳ. ಕಾರಣ, ಅವನ ಅತಿಥ್ಯವನ್ನು ನಿರಾಕರಿಸದೆ, ಅಲ್ಲಿಯೇ ಸರಿಮಾಡಿಕೊಂಡು ಕುಳಿತು, ಅವನ ಮಾತನ್ನು ಕೇಳಲು ಅಣಿಯಾದೆ. ಕೆಲಸ ಮಾಡುತ್ತಲೇ ಹೇಳತೊಡಗಿದ—ಮುದುಕ :

" ನಮ್ಮಪ್ಪ ಮೀನಾ ಹಿಡಿಯೂದ್ರೊಳಗ ಇಡೀ ಹಳ್ಳಿಗೇ ಪರಿಸಿದ್ದರಿ. ಅವನಟ್ಟು ಮೀನಾ ಯಾರೂ ಹಿಡೀತಿದ್ದಿಲ್ರಿ. ಊರಾಗ ಅವನ್ ಟಬರೂ ಹಾಂಗs ಇತ್ತರಿ. ನೂರ್ಕಂದಿ ಎಂಡರ್ರಿ ನಮ್ಮಪ್ಪಗ. ಮನ್ಯಾಗ ನಮ್ಮಪ್ಪನ ಯವ್ವ—ನಮ್ಮಜ್ಜೀನೂ ಇದ್ದಳ್ರೀ. ಆಗ ನಾನು ಬಾಳ ಸಣ್ಣಾಂವ ಇದ್ದಿನ್ರಿ.... " ಹೇಳುತ್ತ ಚಪ್ಪಲಿ ಕುಟ್ಟತೊಡಗಿದ.

ನಾನೂ 'ಹೂಂ' ಎನ್ನುತ್ತ, ವೇಳೆಯ-ಮಳೆಯ ಪರನೆಯಿಲ್ಲದೇ ಕೇಳುತ್ತ ಕುಳಿತು ಬಿಟ್ಟೆ.

ಮತ್ತೆ ಮುದುಕ ಹಾಗೇ ಮುಂದುವರಿಸಿದ ತನ್ನ ಮಾತನ್ನು!

" ನಾವು ಮನೀಯಿಂದ ಬಡವ್ರು ಆಂತ್ಹೇಳ್ದಿದ್ರೂ ಸಿರಿಮಂತ್ರಿದ್ದಿಲ್ರಿ. ನಮ್ಮಪ್ಪನೂ ಬಾಳ ದುಂದು ಮಾಡೂ ಮನಶ್ಯಾರೀ..... ಹೀಂಗs ಒಂದು ದಿನಾ ರಾತ್ರಿ, ನಮ್ಮಪ್ಪನ ಬೀಗ್ರು ಐವತ್ತು ಮಂದಿ ಮನಿಗೆ ಬಂದರ್ರಿ. ಆಟು ಮಂದೀಗೆ ಊಣ್ಣಾಕ ಹಾಕಾಕ ಮನ್ಯಾಗ ಯಾನೂ ಇದ್ದಿಲ್ರೀ ಹಾಂಗs ಕಳ್ನೂದಂತೂ ಜೀಂವಾ ಹೋದ್ರೂಲಿಗಾಕೆದ್ದಿಲ್ರಿ. ನಮ್ಮಪ್ಪ ಬೀಗರ್ ಜೋಡಿ ಮಾತಾಡ್ಕೋಂತ ಕುಂತಬಿಟ್ಟನ್ರೀ ತಣ್ಣಗ. ಅಂವಗೂ ಒಳಿ ಚಿಂತೀಗೆ ಬಿದ್ದಿತ್ರೀ ಮಾತು. ನಮ್ಮಜ್ಜೀಗೂ ಬಾಳ ಚಿಂತಿ ಬಿದ್ದಾಂಗಾಗೆತ್ರೀ ನಾವೆಲ್ಲಾ ಒಳ್ಯಾಕ ಸುಮ್ಮನ ಕುಂತು ಬಿಟ್ಟದ್ದೇನ್ರಿ ನಮ್ಮಜ್ಜೀನೇ ಚಟಕ್ಕಂತೆದ್ದವಳೇ ಬಡಬಡ ಹೊರಗ್ಬಂದು ನಮ್ಮಪ್ಪನ್ನುದ್ದೂ, " ಅಲ್ಲಽ ಮಗನs, ಕಾಳುಕಡೀ ಮ್ಯಾಗದಾವು ಕೈಗೆ ನಿಲುಕವೊಲ್ಲವು ಒಂದ್ವರಾ ಗಂಡಸ್ಮಗ ಮದತ್ಮಾಡ್ದಾ " ಅಂದಳ್ರಿ.

ನನಗ್ಯಾನೂ ತಿಳೀಲಿಲ್ರೀ ಅವಳ್ಯಾತು! ಮನ್ಯಾಗ ಹೆಚ್ಚಿಗೆ ತಿನ್ನಾಕ ಕಾಳು ಇಲ್ವಾಗ, ನಮ್ಮಜ್ಜಿ ಕಾಳ್ಕಿಲ್ಲಿಗೆ ನಿಲುಕ್ಸೊಲ್ಲೂ ಅಂತ ಹೇಳ್ತಾಳಲ್ಲಂತ ಆಶ್ಚರ್ಯಾಯ್ತ್ರೀ! ಏನಜ್ಜೀಽಽ..... "ಅಂತ ನಮ್ಮಜ್ಜೀಗೆ 'ಸುಳ್ಳಾಕ್ಕೇಳ್ತೀ?' ಅಂತ ಕೇಳಾಂವಿದ್ದಿನ್ರಿ! ಆದ್ರs ಯಾನ್ ತಿಳೀತೋಯಾನೋ ಸುಮಾಕs ಬಾಯ್ಮುಚ್ಕೋಂಡ್ಕುಂತಬಿಟ್ಟನ್ರಿ, ಮಿಕಿ ಮಿಕಿ ನೋಡಿಕೊಂತ.

ಆ ನಡ್ಮನ್ಯಾಗಿನ್ನೂ ಮೂರು ಹೆಂಡ ಒಂದರ್ಯಾಗೊಂದಿಟ್ಕೊಂಡು ತಕ್ಕೋ ನಾ ಇಲ್ಲೇ ಬೀಗಜೋಡಿ ಮಾತಾಡ್ಕೋತs ಕುಂಡರ್ತೀನಿ" ಅಂತ್ಹೇಳಿ ಮತ್ತ ಬೀಗರಜೋಡಿ ಹೋಗಿ ಕುಂತ್ಬಿಟ್ಟನ್ರಿ.

"ಹೂಂ, ಹಾಂಗs ಮಾಡ್ತೀನಿ" ಅಂತ್ಹೇಳಿ ಒಳಗ್ಬಂದು ಮೂರೂ ಹಂಡೇ ಹಿಂದಿನ ಬಾಕಿಲ್ತಿಂದು ಹೊರ್ಯಾಕ ತಗೊಂಡ್ಬ್ಯಾಗಿ, ಶೆಟ್ಟರ ಹಂತ್ಯಾಕ ಒತ್ತೀ ಇಟ್ಟು, ಕಾಳ್ತಂದು ಎಲ್ಲಾರ್ಗೂ ಬೂಟಕ್ಕ ಹಾಕಿದಳ್ರಿ.

ಬೀಗ್ರೆಲ್ಲಾ ಹೋದಮ್ಯಾಗ,

" ಶವನs ಪಾರ್ಮಾಡಿದ್ನೇಳು " ಅಂದಳ್ರಿ— ಅಜ್ಜಿ.

" ಅವೀನಜ್ಜೀ ಆಂಗ್ಯಾಕ್ಮಾಡ್ದೀ " ಅಂತ ನಾ ಕೇಳಿದ್ದಕ್ಕ,....

" ಹುಚ್ಚಪ್ಪಾ! ಬೀಗ್ರುನಮ್ಮನೀಗೆ ಬರೂಪ್ದೆಹ್ಯೋ, ನಾವು ಊಟಕ್ಹಾಕೂದ್ಬೇಡ್ವೋ? ಅಡಿಕೆಗೆ ಓದ್ಮಾನಾ ಅನೀ ಕೊಟ್ರೂ ಬರಾಕಿಲ್ಲ. ನಮ್ಮನೀಗ್ಬಂದಾವರ್ಗೆ ಊಟಕ್ಕ ಹಾಕೂದು ನಮ್ಧರ್ಮ. ನಾವು ಅವರ್ನ ಆಂಗೇ ಕಳ್ಸಿಕೊಟ್ಬಿದ್ರs ಶಿವಾ ಮೆಚ್ತಿದ್ನೇನು? ಶಿವಾ ಮೆಚ್ಚೆದ್ನಂದ್ರೆ, ಒಂದಕ್ಕ ನಾಕ್ಪಂಡೇ ಬಂದಾವು " ಅಂದಳ್ರಿ.

ನಮ್ಮಜ್ಜೀ ಮಾತ್ಕೇಳಿ ನಾ ಮೂಕ್ನಾಂಗ ಸುಮ್ಮಾಕ್ ಕುಂತ್ಬಿಟ್ಟನ್ರಿ! "ಈಗಿನ್ ಹೆಂಗ್ಸರು ಆಂಗ್ಮಾಡತಾರ್ಯಾ? ಒಂದಕ್ಕತ್ತು ಪಟ್ಟು ಕಲಕಲು ಬಾಯ್ಮಾಡಿ, ಇದ್ದ ಮಾನಾ ಕಳೀತಾರ ನಾಕ್ಮಂದ್ಯಾಗ. ಅಂತಽ ಶಿವ ಅವರ್ಕಾಲಕ್ಕ ಅವರ್ಧರ್ಮಕ್ಕ ಮನಸಿಗೆ ತಕ್ಕಾಂಗ ಇಟ್ಟಿದ್ದನ್ರಿ. ಈಗ ಆಂಗೈತ್ಯಾ ನೀವs ಹೇಳ್ರಿ?" ಎಂದು ಕೇಳಿದ ಮುದುಕನ ಮಾತಿಗೆ ನಾನು ನಿರುತ್ತರನಾದೆ.

ಮನೆಯಲ್ಲಿ ಸೋಮಾರಿಯಂತೆ ಕೂಡದೆ ಮಳೆಸುರಿಯುತ್ತಿರುವಾಗಲೂ, ಚಳಿಕೊರೆಯುತ್ತಿರುವಾಗಲೂ, ತಮ್ಮಪ್ಪ ಕೂಡುವಸ್ಥಳದಲ್ಲಿ ಕುಳಿತು ಕೆಲಸ ಮಾಡುತ್ತಿರುವ ಮುದುಕನನ್ನು ದಿಟ್ಟಿಸಿ ನೋಡಿದೆ. ತನ್ನ ಕರ್ಮದಲ್ಲಿ ಅಸಕ್ತನಾದ ಹಣ್ಣು ಹಣ್ಣು ಮುದುಕ, ಕರ್ಮಯೋಗಿಯಂತೆ ಕಂಡ!

ನಿತ್ಯತೃಪ್ತನಾಗಿ ಜೀವನ ಸಾಗಿಸುವ ಮುದುಕನ ಕಣ್ಣಲ್ಲಿ ಹೊಳಪಿತ್ತು. ಮೈಯಲ್ಲಿ ಶಕ್ತಿಯಿತ್ತು. ಚಿಮ್ಮಟದಿಂದ ಹಿಡಿದು ತೊಗಲು ಜಗ್ಗುತ್ತಿದ್ದ.

"ನೋಡ್ರಿ ಹ್ಯಾಂಗಾಗ್ಯಾವs!" ಎಂದು ಆಸಕ್ತಿ-ಅಭಿಮಾನಗಳಿಂದ ಚಪ್ಪಲಿಯನ್ನು ನನ್ನ ಮುಂದಿಟ್ಟ.

ಆ ಮಾತಿಗೆ ಜೇರೆ ಹೇಳದೆ, ಅಭಿಮಾನದಿಂದ ಅವನನ್ನು ನೋಡುತ್ತ, ಅವನ ಕೈಗೆ ರೂಪಾಯಿಯ ನೋಟುಕೊಟ್ಟು ಮನೆಯ ದಾರಿ ಹಿಡಿದೆ.

" ಈಗಿನ್ಹೆಂಗ್ಸರು ಆಂಗ್ಮಾಡತ್ತಾರ್ಯಾ?..... ಅಂತಽ ಶಿವ ಅವರ್ಕಾಲಕ್ಕ ಅವರ್ಧರ್ಮ ಮನಸಿಗೆ ತಕ್ಕಾಂಗ ಇಟ್ಟಿದ್ದನ್ರಿ! ಈಗ ಆಂಗೈತಾ ನೀವs ಹೇಳ್ರಿ?"

ಎಂಬ ಅವನ ಪ್ರಶ್ನೆಗೆ ಉತ್ತರ ಹುಡುಕುತ್ತಲೇ ಇದ್ದೆ. ಬಾರಿ ಬಾರಿಗೂ ಅವನ ಮಾತು ಪ್ರಶ್ನೆ ಕೇಳುತ್ತಿದ್ದುವು.

ನಿರ್ವಾಸಿತ

ಶ್ರೀ. ಅರವಿಂದ ನಾಡಕರ್ಣಿ, ಮುಂಬಯಿ

ಸಿಡಿಮದ್ದಿನ ಮಳೆಹೊಯ್ದು ಗುಡುಗಿದರು ಪುಂಡರಕ್ಕಸರು
ಗೋಡೆ ಮಾಡುಗಳಿಗೆಲ್ಲ ಅಳಸುರಂಗ
ವ್ಯೋಮಕೇರಿತು ಧೂಮತರಂಗ
ಕಟ್ಟಿದ ಕುಟ್ಟಿಮಕೆ ಬಿರುಕು ಮುರುಕು.
ಮರಗಿಡಗಳಡಿ ತುಂಬಿತು ಒರಲುತರಕು.
ನೋಲೆ ಬಿದ್ದಿತು ಕೋಕಿಲ ಕೊರಳೊಡೆದು.
ಏರಿಯಲ್ ಮುರಿದು ರೇಡಿಯೋ ಕಾಯಂ ರದ್ದು.
ಮನೆಮನೆಗಳಂಗಳಕೆ ಜಿಗಿದು ಕಚ್ಚಾಡಿದವು ನಾಯಿ.
ಹುಲು ಮಾಂಸದ ತುಣುಕಿಗಾಗಿ.
ದ್ವಾರನೂಗುವತಿಥಿ ಕೂಡ ಶತ್ರುಸಿಪಾಯಿ.
ಮಠದೇಗುಲ ತೊಡಕೆಂದು ಕೆಡವಿ ಸುಮ್ಮನೆ
ನೋಲೆ ಕಟ್ಟಿದರು ಗುಂಡು ಬಾಂಬುಗಳ ಕಾರ್ಖಾನೆ.
ರಕ್ತ ಕಾಲುವೆ ಹರಿಸಿ ಅಗ್ನಿಬೀಜವ ಬಿತ್ತಿ
ಬಯಲು ಬೆಳಸಿದರಯ್ಯ ಕೊಯಲಿಗಾಗಿ.
ಏದುಳಸಸಿ ಬೆಳೆದು ಬೆಳೆದು ಮಾಗಿದವು ಹಣ್ಣು.
ನೋಡಿ ನೋಡಿ ಕುರುಡಾದವು ಕಣ್ಣು
ಹೆತ್ತಿ ಹೆತ್ತಿ ಕಾಲ್ಗಳಗೊಡೆದವು ಹುಣ್ಣು
ಯಾವನೋ ಗೊಲ್ಲ ಹೆರುವನೊಮ್ಮೆ ಸ್ಮಶಾನಮುಶಲ.
ಆಗ ಕೇಳುವವು ಹೆಣ್ಣು, ರಣಹದ್ದು ನಿತ್ಯಕುಶಲ.
ಯಾವ ಧನ್ವಂತರಿಯ ಕರೆದರೂ
ಬೆಳೆದ ಗರ್ಭ ಕಳೆಯಲಾಗುವದಿಲ್ಲ.
ಇಂಥ ಪರಿಸ್ಥಿತಿಯರಲು ಆದೇಶ ನಾ ತೊಲೆದು ಬಂದೆ
ಅನ್ಯ ಗಣ್ಯಸ್ಥಳಕಾಗಿ ಹಾತೊರೆದು ಬಂದೆ,
ಇಮಾರತುಗಳ ಸಮೂಹದಲಿ ನಿರ್ವಾಸಿತನಾಗಿ.
ಉಣ್ಣೆ ಸಿಲ್ಕುಗಳ ಪೇತೆಯೆದುರು ವಲ್ಕಲಭೂಷಿತನಾಗಿ.
ಅದಕೆಂತ ಹಿಡಿದಿರುವೆ ಪುಣ್ಯ ಸ್ಥಳದ ಯಾತ್ರೆ.
ಅಲೆಯುತಿಹೆ ನೆಲೆಕಾಣಲು ದಿನ ರಾತ್ರೆ.
ಉಳಿಯಲಾ ಚಿತ್ರಕೂಟದಡಿಯಲ್ಲಿ.
ಅನುಜಾನುಜರಪ್ಪುಗೆಯ ಮುಂದಾಕೆನಿ ಹರಿಯುವಲ್ಲಿ.
ಸಿಂಹಮೊಲಗಳು ಕೂಡಿ ಚಿನ್ನಾಟವಾಡುತಿರೆ
ವ್ಯಾಘ್ರಹರಿಣಗಳೆದ್ದು ನೋಡುವಲ್ಲಿ.
ಗರುಡನಾಗಗಳ ಮೇಳ ಕೂಡುವಲ್ಲಿ
ಒಡೆದ ಮೃದಂಗವ ಬಡೆದು ನಾದಹೊಮ್ಮಿಸುತಿರಲು
ಮುರಿವ ತಂತಿಯನೀಣೆ ಶ್ರುತಿಗೊಳಿಸುತಿರಲು
ಲಯದ ಪದಗಳನಿಡಲು ಕುಂಟಿನವಿಲು
ಬಾಳೆ ಪ್ರಜ್ವಲಿಸುತ್ತ ಬೆಳಕಾಗುವಲ್ಲಿ
ತಿಮಿರ ನಗುನಗುತ ಬೆಳದಿಂಗಳಾಗುವಲ್ಲಿ.
ಯುಗವೆ ರಿಂಗಣಹಾಕಿ ಕ್ಷಣವಾಗುವಲ್ಲಿ
ಗಿಡವೆ ಗಮಗಮಿಸುತ್ತ ಹೂವಾಗುವಲ್ಲಿ.
ಚಿತ್ರಕೂಟದಡಿಯಲ್ಲಿ
ಬದುಕುಬೆಳಕು ನಿತ್ಯವಾಡುವಲ್ಲಿ.

ಕರಿಮರಿನಾಯಿ ಕುಂಯ್‌ಗುಡುತ್ತಿತ್ತು*

ಶ್ರೀ "ರಂಜನ" ಭಟ್ಟ, ಮದ್ರಾಸು

ಮಂಗಳಲೋಕವ ಸುತ್ತಿಬಂದಿರುವೆ
ಚಂದ್ರ ಮಂಡಳವ ಹೊಕ್ಕು ಬಂದಿರುವೆ
ರಾಕೆಟ್ಟಿನಲೇ ನನ್ನಯ ಯಾನ
ಬಾನಿನ ನಡುವೆ ಎನ್ನಯ ಪ್ರಾಣ
ಕರಿಮರಿನಾಯಿ ಕುಂಯ್‌ಗುಡುತ್ತಿತ್ತು—
ಇಹಪರ ಕಂಡಿಹೆ
ಆಗಸ ಮುಟ್ಟಿಹೆ
ತಾರೆಯಗೊಂಚಲ ಮೂಸಿರುವೆ
ಜ್ಞಾನಿಯು ನಾನೇ ಧನ್ಯನು ನಾನೆ
ಕರಿಮರಿನಾಯಿ ಕುಂಯ್‌ಗುಡುತ್ತಿತ್ತು.
ನಾಯಿಯೆ ಮರಿ ನಾನಾದರೆ ಏನು ?
ಪರಲೋಕವ ನಾ ಕಂಡುದು ಸುಳ್ಳೆ ?
ಮಂಗಳಗ್ರಹದಲಿ ಬೊಗಳಿದೆನಲ್ಲೆ ?
ಅಯ್ಯೋ ಚಂದ್ರನು ಬೆದರಿದನಲ್ಲೆ ?
ಇಹವೂ ನಾನೇ ಪರವೂ ನಾನೇ
ಮಾನವನಿಂದಲು ನಾನೆ ಮೇಲು—
ಕರಿಮರಿನಾಯಿ ಕುಂಯ್‌ಗುಡುತ್ತಿತ್ತು.
ಓ ಮರಿನಾಯಿಯೇ ಹೇಳುನಿಯಾ ?
ಮಂಗಳಲೋಕವು ಹೇಗಿತ್ತೆ ?
ಚಂದಿರಮಂಡಳ ಬೆಳಗಿತ್ತೆ ?
ಭೂಮಂಡಳ ಮೇಣ್ ತಿರುಗಿತ್ತೆ ?
ಹೇಳೆ ಹೇಳೆ ಕರಿಮರಿನಾಯೇ—
ಓ, ಓ, ಹೇಳುವೆ— ಬೊಗಳುವೆಯೀಗ
ನಾ ಕಂಡುದ ಮೇಣ್ ಕಾಣದುದ
'ಬೊವ್ ಬೊವ್ ಬೊವ್ ಬೊವ್'
ಕರಿಮರಿನಾಯಿ ಬೊಗಳುತಲಿತ್ತು
ಕುಂಯ್ ಕುಂಯ್ ಕುಂಯ್ ಕುಂಯ್
ಕರಿಮರಿನಾಯಿ ಕುಂಯ್‌ಗುಡುತ್ತಿತ್ತು.

* ಇರಳಿನ ಚಂದ್ರಯಾನದ ಕ್ಷಣವೊಂದನ್ನು ಕೋರಿ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಗಿರಿಕಾ' ಎಂಬ ಅನುವಾದಿತ ಕಥೆ ಒಬ್ಬರೇ ಒಬ್ಬರಿಂದಲೂ 'ಸಾವೋ ಬುದುಕೋ ?' ಎಂಬ ಕಥೆಯು ಮೂವರಿಂದಲೂ ವಿಮರ್ಶಿತವಾಗಿವೆ. ಏದೇಕೊ, ಈ ಸಲ ವಿಮರ್ಶಕರ ಸಂಖ್ಯೆ ಸಾಕಷ್ಟಿಲ್ಲ. ಬಹುಶಃ ಶಾಲೆ-ಕಾಲೇಜುಗಳಿಗೆ ಬಿಡುವಾದುದೇ ಇದಕ್ಕೆ ಕಾರಣವಾಗಿರಬಹುದು.

'ಗಿರಿಕಾ' ಕಥೆಯ ವಿಮರ್ಶಕರು :

೧ ಶ್ರೀ. ನ. ನಾ. ನರಗುಂದ ಬಿ. ಎ. ಬಾಗಲಕೋಟೆ.

ಸಾವೋ ಬದುಕೋ ? ಕಥೆಯ ವಿಮರ್ಶಕರು :

೧ ಶ್ರೀ. ದಿವಸ್ಪತಿ, ಹೆಗಡೆ, ಸಿದ್ದಾಪುರ. ೨ ಶ್ರೀ. ಎಸ್. ಆರ್. ಪಾಡಿ, ಮುಟ್ಟತ್ತೋಡಿ ಶ್ರೀ. ಎಸ್. ವ್ಹಿ. ಭಟ್ಟ, ಮೂರಿಕಾಂಬಾ ಹೈಸ್ಕೂಲ್ ಸಿರಸಿ.

ಎಂದಿನಂತೆ ಈ ಸಲವೂ, ಬಂದ ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯನಿತ್ತಿದ್ದಾರೆ:

'ಗಿರಿಕಾ' ಕಥೆಯ ವಿಮರ್ಶೆಗಳಲ್ಲಿ ತಾರತಮ್ಯವನ್ನು ಸೂಚಿಸಲು ಎಡೆಯೆ ಇಲ್ಲ. ಬಂದ ಒಂದು ವಿಮರ್ಶೆ ಒಳ್ಳೆಯದಾಗಿದೆ.

'ಸಾವೋ ಬದುಕೋ ?' ಕಥೆಯ ವಿಮರ್ಶೆಗಳಲ್ಲಿ ಶ್ರೀ. ಎಸ್. ಆರ್. ಪಾಡಿಯವರದು ಉತ್ತಮವಾಗಿದೆ. ಮಿಕ್ಕುವೆರಡು ಚೆನ್ನಾಗಿವೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ 'ಜೂಲೈ ೧೪' ಎಂಬ ಸತ್ಯ ಕಥೆಯನ್ನಾಗಲಿ ' ಪೌಷ್ಯ ಮಾಸದ ರಾತ್ರಿ' ಎಂಬ ಅನುವಾದಿತ ಕಥೆಯನ್ನಾಗಲಿ, ವಿಮರ್ಶಿಸಿದ ಲೇಖನಗಳನ್ನು ಕಳುಹಿಸಬೇಕು.

— ಸಂಪಾದಕರು

"ಗಿರಿಕಾ"

(ಕಥೆಯ ವಿಮರ್ಶೆ)

ಲೇ: ನ. ನಾ. ನರಗುಂದ, ಬಿ. ಎ. ಬಾಗಲಕೋಟೆ.

ಚೀನಿ ದೇಶದ ಅರಸನಾದ ಪಸುರಾಜ ಇಂದ್ರ ಆಶೀರ್ವಾದದ ಫಲವಾಗಿ, ತನ್ನ ಶತ್ರುಗಳನ್ನೆಲ್ಲ ನಿರ್ನಾಮಗೊಳಿಸಿ ನಿಶ್ಚಾಂತಿಗೋಸುಗ ಮೃಗಯಾ ವಿಹಾರಕ್ಕೆ ಹೊರಟು ವನವೊಂದನ್ನು ಸೇರಿದ. ಅಲ್ಲಿಯ ಸೃಷ್ಟಿ ದೇವಿಯ ಸುಂದರ ಸಾನ್ನಿಧ್ಯ ಆತನ ಶ್ರಮವನ್ನಪಹರಿಸಿ ಅವನಲ್ಲಿ ನವಚೈತನ್ಯವನ್ನುಂಟು ಮಾಡಿತು. ಇಂತಹ ಒಂದು ಸುರಮ್ಯ ವಾತಾವರಣದಲ್ಲಿ ಆರ್ತನಾದವೊಂದು ಆತನ ಮನವನ್ನು ಕದಡಿತು. ಆಪತ್ತಿಗೊಳಗಾದವರ ರಕ್ಷಣೆ ಆತನ ಕರ್ತವ್ಯ. ತತ್ ಪ್ರಯುಕ್ತವಾಗಿ ಆ ದನಿ ಬಂದಕಡೆ ಧಾವಿಸಿದ. ಶುಕ್ತಿಮತಿ ಎಂಬ ಯುವತಿ ಕೋಲಾಹಲನೆಂಬ ಕಾಮುಕನ ದುರಾಶೆಗೆ ಈಡಾಗಿದ್ದಾಳೆ. ಅಪರಾಧಿಯನ್ನು ಒಮ್ಮೆಲೆ ದಂಡಿಸಿ, ಆ ನಾರೀಮಣಿಗೆ ಮಗಳೆಂದು ಸಂಬೋಧಿಸಿ ಅಭಯವನ್ನಿತ್ತನು. ಅತ್ಯಾಚಾರಿಯು ಅವಳ ಸಮ್ಮುಖದಲ್ಲಿ ಗತಪ್ರಾಣನಾಗಿರುವಪನ್ನು ನೋಡಿಯೂ ಅವಳಿಗೆ ಇನ್ನೂ

ಜಯಂತ

ಮನಶ್ಯಾಂತಿಯಾಗಿರದ್ದನ್ನು ನೋಡಿ ರಾಜನು ಆಶ್ಚರ್ಯಗೊಂಡು ಅವಳನ್ನು ಈ ವಿಚಾರವಾಗಿ ವಿಚಾರಿಸಿದ. ಆತನ ಪಾರ್ಥಿವ ಶರೀರವು ನಾಶವಾಗಿದ್ದರೂ, ಆತನ ದುರಾಶೆಯ ವಿಷ ತನ್ನ ದೇಹದಲ್ಲಿ ರೂಪುಗೊಳ್ಳುತ್ತಿರುವುದೆಂದು ತಿಳಿಸಿ, ಆ ಮಗುವಿಗೆ ನಿರಪರಾಧಿಯೆಂದು ಬಗೆಯಲಾರಿರಾ ? ಎಲ್ಲರ ಮಕ್ಕಳಂತೆ ಅದನ್ನು ಒಳ್ಳೆಯ ದೃಷ್ಟಿಯಿಂದ ನೋಡಲಾರಿರಾ ಎಂದು ಕೇಳಿದಳು. ರಾಜನು ಕೆಲಹೊತ್ತು ಮೌನ ಧರಿಸಿ, ಕೊನೆಗೆ ನಿಷ್ಠುರತೆಯಿಂದ ' ಶ್ವಾಪದದ ಮಗು ಶ್ವಾಪದವೇ ಆಗಬಲ್ಲದು ' ಎಂದ. ಶುಕ್ತಿಮತಿಯ ಬಿನ್ನಹ ಅರಣ್ಯರೋದನವಾಯಿತು. ಈ ಘಟನೆಯ ನಂತರ ಹದಿನೆಂಟು ವರ್ಷಗಳು ಉರುಳಿದವು. ಅತ್ಯಾಚಾರದ ಅಗ್ನಿಯಲ್ಲಿ ಬೆಂದ ಶುಕ್ತಿಮತಿ ಆತ್ಮಹತ್ಯ ಮಾಡಿಕೊಂಡಿರಬಹುದೆಂದು ಆ ವಸುರಾಜ ಸಂಪೂರ್ಣ ಮರೆತಿದ್ದ. ಸೃಷ್ಟಿದೇವತೆಯೆ ಮೈದಾಳಿ ನಿಂತಂತಹ ಸುಂದರ ವನಪ್ರದೇಶವನ್ನು ಪ್ರವೇಶಿಸಿದ. ಸುತ್ತಾಡಿ ದಾಹ ಪೀಡಿತನಾಗಿ ಸರೋವರವೊಂದನ್ನು ಸಮೀಪಿಸಿದ. ಅಲ್ಲಿ ಅರಸನು ಕಂಡದ್ದೇನು ? ಸುಂದರಾಂಗನೆಯೊರ್ವಳು ಸೃಷ್ಟಿದೇವಿಯ ಮಡಿಲಲ್ಲಿ ತಾನೇ ತಾನಾಗಿ ನಿದ್ರಿಸಿದ್ದಾಳೆ. ಅವಳ ರೂಪರಾಶಿಗೆ ಮಾರುಹೋದ ದೊರೆ, ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅಂತಹ ಸೌಂದರ್ಯವನ್ನು ಈ ಮೊದಲು ನೋಡದಿದ್ದದ್ದರಿಂದ ತನ್ನ ಕಣ್ಣುಗಳನ್ನು ನಂಬದಾದ ಅವಳ ಪರಿಚಯಕ್ಕೆ ಹಾತೊರೆದು ನಿರಾಶನಾದ. ಅವಳು ವೇಣ ತನಯೆ ಇಲ್ಲವೆ ಅಪ್ಸರೆಯ ಸುತೆ ಇರಬೇಕೆಂದು ಊಹಿಸಿದ. ಆದರೆ ಅವಳು ಅವಕ್ಕೊಪ್ಪಲಿಲ್ಲ. ರಾಜಕುಮಾರಿ ಇರಬಹುದು ಅಥವಾ ಲೋಕಾಪವಾದದ ಭೀತಿಯಿಂದ ಹೆಣ್ಣುಮಗಳೊಬ್ಬಳು ಕಠೋರ ಮನಸ್ಸಿನಿಂದ ವನಸಾಮ್ರಾಜ್ಯಕ್ಕೆ ಅರ್ಪಿಸಿದ ಪುಷ್ಪವಿರಬಹುದೆಂದು ಬಗೆದನು. ಅವಕ್ಕೂ ನಕಾರ ಉತ್ತರವೇ ದೊರಕಿತು. ಯಾರೇ ಇರಲಿ ಅವಳನ್ನು ತನ್ನ ಹೃದಯೇಶ್ವರಿಯಾನ್ನಾಗಿ ಮಾಡಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದನು. ತನ್ನ ತಾಯಿ ಶುಕ್ತಿಮತಿಯೆಂದು ಅವಳು ಉಸುರಿದಾಗ ಅತನ ದೇಹ ಕಂಪಿಸಿತು. ಹೃದಯಾಂತರಾಳದಲ್ಲಿ ಹುದುಗಿ ಹೋಗಿದ್ದ ಹದಿನೆಂಟು ವರ್ಷಗಳ ಹಿಂದಿನ ಕತೆ ಸ್ಫುರಣಗಿ ಕಣ್ಣೆದುರಿಗೆ ಬಂದಿತು. ತಾನು ಮಾಡುತ್ತಿರುವನು ತಪ್ಪೆಂದು ಗೋಚರವಾಯಿತು. ಒರ್ವ ತರುಣಿಯ ಮೇಲೆ ದುಷ್ಟನೊಬ್ಬನು ಎಸಗಿದ ಪಾಪದ ದ್ಯೋತಕ ತಾನೆಂದು ಆಕೆ ಹೇಳಿದರೂ ರಾಜ ಹಿಂಜರಿಯಲಿಲ್ಲ. ದೇವನಿಂದ ನಿರ್ಮಿತವಾದ ಎಲ್ಲ ಮಾನವರಂತೆ ನೀನೂ ಅತನ ಸೃಷ್ಟಿಯೆ ಎಂದು ಅವಳನ್ನು ಸಂತೈಸಿದ.

ಮಹಾಭಾರತ ಒಂದು ಸಮುದ್ರ. ಅಲ್ಲಿ ಅನೇಕ ಕತೆ ಉಪಕತೆಗಳಿವೆ. ವಂಗ ಸಾಹಿತಿ ಶ್ರೀ ಸುಬೋಧ ಘೋಷರು ಅಲ್ಲಿಯ ಕತೆಯೊಂದನ್ನು ತೆಗೆದುಕೊಂಡದ್ದನ್ನೇ ಅನುವಾದಿಸಿ ಕನ್ನಡಿಗರಿಗೆ ರಸಸ್ವಾದನೆ ಮಾಡಿಸಿದ್ದಾರೆ ಶ್ರೀ ಮುದೇನೂರ ಸಂಗಣ್ಣ. ಆದರೂ ಸ್ವತಂತ್ರವಾದ ಕತೆಯನ್ನೋದುತ್ತಿರುವಂತೆ ಭಾಸವಾಗುತ್ತಿದೆ. ಕತೆಯಲ್ಲಿ ಬರುವ ಸುಂದರ ಸಂಭಾಷಣೆಗಳು ಓದುಗರಲ್ಲಿ ಉತ್ಸಾಹವನ್ನು ಉಂಟು ಮಾಡುತ್ತವೆ. ಮೊದಲಿನಿಂದ ಕೊನೆಯವರೆಗೆ ಭಾಷೆಯಲ್ಲಿ ಬಿಗುವಿದೆ, ಶಬ್ದ ಪ್ರೌಢಿಮೆಯಿದೆ. ಬರೆಹವು ಸಲಿಲವಾಗಿ ಸಾಗುವ ಝರಿಯಂತಿದೆ. ಅಲ್ಲಲ್ಲಿ ಬರುವ ನಿಸರ್ಗ ವರ್ಣನೆ ಶಬ್ದಚಿತ್ರವಾಗಿ ಪರಿಣಮಿಸುತ್ತದೆ.

ಕಥಾನಾಯಕ ವಸುರಾಜ ಇಂದ್ರನ ಪ್ರೀತಿಗೆ ಪಾತ್ರನಾದವ ವೈಭವಶಾಲಿ, ದುಷ್ಟರನ್ನು ಶಿಕ್ಷಿಸಲು ಸದಾಸಿದ್ಧ. ಇಂದ್ರನಿಂದ ದೊರೆತ ವೇಣುಯಷ್ಟಿ ಶಿಷ್ಟ ರಕ್ಷಣೆಗಾಗಿ ಆತನ ಬಳಿಯಲ್ಲಿಯೆ ಇದ್ದಿತು. ಶುಕ್ತಿಮತಿಯ ಮೇಲೆ ಅತ್ಯಾಚಾರವನ್ನೆಸಗಿದ ಕೋಲಾಹಲವನ್ನು ಸಂಹರಿಸಿದ. ನಿರಾಶ್ರಿತಳಾದ ಶುಕ್ತಿಮತಿಗೆ ಅಭಯ ಹಸ್ತ ನೀಡಿದ. ಅವಳ ಭಾವೀ ಶಿಶುವಿನ ಬಗೆಗೆ ಮಾತ್ರ ಅತನ ತಿರಸ್ಕಾರ ಉಳಿಯಿತು. ಅತ್ಯಾಚಾರದ ಪ್ರತೀಕವಾದ ಆ ಮಗುವನ್ನು 'ಮಗು' ಎಂದು ಕರೆಯಲು ಒಪ್ಪಲಿಲ್ಲ. ಕೋಲಾಹಲನಂತಹ ಮಾನವ ಪಶುವಿನ ದುಷ್ಟ 'ಕೃತಿ'ಯನ್ನು ಪಶುವೆಂದೇ ಭಾವಿಸಿದ. ತನ್ನ ರಾಜ್ಯದಲ್ಲಿ ಬಹುವಲ್ಲಭಾನಾರಿಯರ ಸಂತಾನವಿರಬಹುದು, ಕೌಲಟೇಯರು ಇರಬಹುದು ಆದರೆ ಅವರೆಲ್ಲ ಪುರುಷ ಹಾಗೂ ಸ್ತ್ರೀಯರ ಪರಸ್ಪರ ಪ್ರೇಮ, ಆಸಕ್ತಿಗಳ ದ್ಯೋತಕಗಳೆಂದೂ ಅಲ್ಲಿ ಬಲಾತ್ಕಾರದ ಸುಳಿವಿಲ್ಲವೆಂದೂ ಹೇಳುತ್ತಾನೆ. ಅವರೆ ಹದಿನೆಂಟು ವರ್ಷಗಳ ನಂತರ ರಾಜನು ಅದೇ ಕಾನನವನ್ನು ಮತ್ತೆ ಪ್ರವೇಶಿಸುತ್ತಾನೆ. ಸುಂದರ ಯುವತಿಯೊಬ್ಬಳನ್ನು ನೋಡಿ ಮೋಹಿತನಾಗುತ್ತಾನೆ ಕಾಮಾಂಧನಾದ ಅತನಿಗೆ ಆಕೆಯ ಕುಲ-ಗೋತ್ರಗಳು ಬೇಕಾಗುವುದಿಲ್ಲ. ಶುಕ್ತಿಮತಿಯ ಮಗಳೆಂದು ಆಕೆ ತಿಳಿಯಪಡಿಸಿದಾಗ ಪೆಚ್ಚು ನಡುಕವುಂಟಾಗುತ್ತದೆ. ' ಪಶುವಿನ ಮಗು ಪಶು ಆಗುತ್ತದೆ ' ಎಂದ ತನ್ನ ಮಾತು ಅವನನ್ನೆ ಇರಿಯುತ್ತದೆ. ಬಲಾತ್ಕಾರ ಸಂಸರ್ಗದಿಂದ ಜನಿಸಿದ ಸಂತಾನವನ್ನು ತುಚ್ಛವಾಗಿ ಮಾತಾಡಿದ ಅವನೇ, ಅದನ್ನು ಬಣ್ಣಿಸುತ್ತಾನೆ. " ಬೇಕಾದದ್ದು ಬೆಲ್ಲಕ್ಕಿಂತ ಸವಿ " ಎನ್ನುವಂತೆ ಅವಳ ಜನನದ ಹಿನ್ನೆಲೆಯನ್ನು ಮರೆತುಬಿಡುತ್ತಾನೆ ಅವಳೂ ಎಲ್ಲರಂತೆ ದೇವರ ಸೃಷ್ಟಿ ಎಂದು ಒಪ್ಪುತ್ತಾನೆ. ಇಲ್ಲಿ ಅತನ ನೈತಿಕ ಪತನವಾಗುತ್ತದೆ. ಶುಕ್ತಿಮತಿಯ ಎದುರಿನ ವಸುರಾಜ, ಹಾಗೂ ಗಿರಿಕಾಳ ಎದುರಿನ ವಸುರಾಜ, ಇವರೀರ್ವರಲ್ಲಿ ಮಹದಂತರವಿದೆ. ಅಲ್ಲಿ ಧರ್ಮ, ನೀತಿಗಳ ರಕ್ಷಕನಾಗಿದ್ದರೆ, ಇಲ್ಲಿ, ತನಗೆ ಆ ವಸ್ತು ಬೇಕೆಂಬುದನ್ನು ನಿರ್ಧರಿಸಿ ಧರ್ಮ, ನೀತಿಗಳನ್ನು ತ್ಯಜಿಸುತ್ತಾನೆ. ಸ್ವಾರ್ಥವೆ ಜಯವಾಗಿದ್ದುದನ್ನು ನೋಡುತ್ತೇವೆ.

ಶುಕ್ತಿಮತಿ ಅಕಸ್ಮಾತ್ತಾಗಿ ಕೋಲಾಹಲನ ಕಣ್ಣಿಗೆ ಬಿದ್ದನಳು ಅತನ ಬಗೆಗೆ ಆಕೆಯಲ್ಲಿ ಕೋಪದ ಜ್ವಾಲಾಮುಖಿಯೇ ಇದ್ದರೂ ಅತನಿಂದ ತನ್ನ ದೇಹದಲ್ಲಿ ಬೆಳೆಯುತ್ತಿರುವ ಮಗುವಿನ ಬಗೆಗೆ ಮಾತ್ರ ಅವಳು ಮಮತೆಯ ಮಾತೆ. " ನಿನ್ನ ಪಾತಿವ್ರತ್ಯ ನಾಶಮಾಡಿದ ಒಬ್ಬ ನೀಚನ ಮಗುವಿನ ಬಗೆಗೆ ನಿನಗೆ ಆದರವೇಕೆ " ಎಂದು ರಾಜ ಕೇಳಿದಾಗ ಆಕೆ ಕೊಡುವ ಉತ್ತರ ಅವಳ ಮಾತೃಹೃದಯದ ಪ್ರತೀಕವಾಗಿದೆ. ತನ್ನ ಮಗುವನ್ನು ಸಹೃದಯತೆಯಿಂದ ನೋಡಲು ರಾಜನು ಒಪ್ಪದೆ ಇರಲು, ಅವಳು ಕೇಳುವ ಪ್ರಶ್ನೆಗಳು, ಜಾಣ್ಮೆ ಹಾಗೂ ಧೈರ್ಯಗಳ ದ್ಯೋತಕಗಳಾಗಿವೆ. ಒಳ್ಳೆಯ ಸ್ತ್ರೀ ಹಾಗೂ ಪುರುಷರ

ಒಪ್ಪಿಗೆಯ ಸನ್ಮಿಲನವೂ ಕೋಲಾಹಲನಂತಹ ಪಶುವನ್ನು ನಿರ್ಮಿಸುವುದೆಂದು ಮಾರ್ಮಿಕವಾಗಿ ಹೇಳುತ್ತಾಳೆ. ತನ್ನ ರಕ್ತದಲ್ಲಿ ಪೋಷಣೆಯಾಗುತ್ತಿರುವ ಆ ಮಗುವನ್ನು ತ್ಯಜಿಸಲು ಅವಳು ಒಪ್ಪುವದಿಲ್ಲ. ಇಲ್ಲಿ ಅವಳ ಮಹತ್ತನ್ನು ಕಾಣುತ್ತೇವೆ. ಅನೇಕ ಸ್ತ್ರೀಯರು ಅಪವಾದ ನಿರ್ಮೂಲನೆಗಾಗಿ ತಮ್ಮ ಮಕ್ಕಳನ್ನು ಏನು ಮಾಡಲೂ ಹೇಸುವದಿಲ್ಲ. ಆದರೆ ಶುಕ್ತಿಮತಿ, ಬಲಾತ್ಕಾರದಿಂದ ಕೋಲಾಹಲನ ಪೈಶಾಚಿಕ ಪಿಪಾಸೆಗೆ ಬಲಿಯಾಗಿ ತಾಯಿಯಾಗಿದ್ದರೂ, ಆ ಮಗುವಿನ ಬಗೆಗೆ ಆದರ; ಆದರ ರಕ್ಷಣೆಯೇ ಅವಳ ಬಾಳಿನುಸಿರು.

ಅಂತೇ ಗಿರಿಕಾ ಬೆಳೆದು ದೊಡ್ಡವಳಾದಳು. ಅವಳ ಸೌಂದರ್ಯ ದೇವ— ಅಪ್ಸರೆಯರಿಗಿಂತ ಮಿಗಿಲು. ವಸುರಾಜ ಆಕರ್ಷಿತನಾದ; ಸಾಕಷ್ಟು ಹೊಗಳಿದ. ಆ ಹೊಗಳಿಕೆಗೆ ಆಕೆ ಮಾರುಹೋಗಲಿಲ್ಲ. ತಾನೊಂದು ವನಿತರ ಪ್ರಾಣಿಯೆಂದು ಹೇಳುತ್ತಾಳೆ. ಶುಕ್ತಿಮತಿಯ ಮಗಳೆಂದು ಅವಳು ಹೇಳಿದಾಗ ರಾಜನ ದೇಹ ನಡುಗುತ್ತದೆ. ಅರಿಯದೆ ಮುಳ್ಳನ್ನು ತುಳಿದಂತಾಗುತ್ತದೆ ಆತನ ಸ್ಥಿತಿ. "ಪಶುಮಗು ಪಶು" ಎಂದು ಹೇಳಿದ್ದ. ಆದರೆ ಅವಳು ಇಂದು ದೇವ ಸುಂದರಿಯಾಗಿದ್ದಾಳೆ. ಗಿರಿಕಾ ಆತನಲ್ಲಿ ಬಿರುಗಾಳಿಯನ್ನೆಬ್ಬಿಸುತ್ತಾಳೆ. ರಾಜನ ಧರ್ಮನೀತಿಯ ವಿಚಾರಗಳು ಗಾಳಿಗೋಪುರವಾಗುತ್ತವೆ. ವಸುರಾಜನ ಮನಸನ್ನೆಯಾಗುತ್ತಾಳೆ ಗಿರಿಕಾ.

ಕೋಲಾಹಲ, ಕತೆಯಲ್ಲಿ ಸುಳಿದು ಹೋಗುವುದು ಕ್ಷಣಿಕ; ಆದರೂ ಶುಕ್ತಿಮತಿಯ ಜೀವನದ ತುಂಬೆಲ್ಲ ಕೋಲಾಹಲವನ್ನು ಎಬ್ಬಿಸಿದ್ದಾನೆ. ಕ್ಷಣಿಕಸುಖಕ್ಕಾಗಿ ಕುಸುಮ ಸದೃಶಳಾದ ಶುಕ್ತಿಮತಿಯ ಜೀವನದಲ್ಲಿ ಹಾಲಾಹಲವನ್ನು ಹಿಂಡಿದ. ಆತನ ಹೆಸರು ಅನ್ವರ್ಥಕವಾಗಿದೆ.

ಕತೆ ಪೌರಾಣಿಕವಿದ್ದರೂ ವಾಸ್ತವಿಕಾಂಶಗಳಿಂದ ಕೂಡಿ ಸಾಮಾಜಿಕ ಕತೆಯಂತೆಯೆ ಭಾಸವಾಗುತ್ತದೆ. ನಮ್ಮ ಜೀವನದಲ್ಲಿ ಕೋಲಾಹಲನಂತಹ ಕಾಮುಕರನ್ನು ನೋಡುತ್ತೇವೆ. ಶುಕ್ತಿಮತಿಯಲ್ಲಿಯ ಆದರ್ಶ ತಾಯ್ತನವನ್ನು ಕಾಣುತ್ತೇವೆ ಸಮಾಜದ ಕರಾಳ ದೃಷ್ಟಿಯನ್ನು ಎದುರಿಸಿ, ತನ್ನ ಮಗುವನ್ನು ಅತ್ಯಾಚಾರದ ಪ್ರತೀಕವನ್ನು—ಪಾಲಿಸಿ ಪೋಷಿಸಿದ ಆಕೆ ಧನ್ಯೆ.

ಸಾವೋ? ಬದುಕೋ?

(ನವ್ಯಕತೆಯ ವಿಮರ್ಶೆ)

ಶ್ರೀ. ಎಸ್. ಆರ್. ಪಾಡಿ, ಕಲ್ಲಕಟ್ಟೆ—ಮುಟ್ಟತ್ತೋಡಿ

ತೀವ್ರಗತಿಯಿಂದುರುಳಿ ನುಗ್ಗಿ ಸಾಗುತ್ತಿರುವ ಸಾಗರಿಕ ಪ್ರಪಂಚದಲ್ಲಿಂದು ಮನುಷ್ಯನ ಬದುಕು ಬಣ್ಣದ ಬದುಕಾಗಿದೆ. ಬಾಳುವಾಸೆ ಮಾತ್ರವಲ್ಲದೆ ಹೆಚ್ಚಿನ ಸುಖ-ಸೌಕರ್ಯದ ಹಂಬಲದಿಂದ ಆತ ಹೋರಾಡುತ್ತಾನೆ. ವಿವಿಧ ವೇಷಗಳನ್ನು ಕಟ್ಟಿ ಕುಣಿಯುತ್ತಾನೆ. ಆದರೂ ಬಯಕೆ ಈಡೇರದೆ ಅತೃಪ್ತಿಯೇ ತಾಂಡವವಾಡುತ್ತಿದೆ. ಎಂತಲೇ ಜೀವನವಿಂದು ಕೃತಕವಾಗಿದೆ. ಯಾವ ಕ್ಷೇತ್ರದಲ್ಲೇ ಆಗಲಿ ಇಂತಹ ಅತೃಪ್ತ ಜನರನ್ನಿಂದು ಕಾಣುತ್ತೇವೆ. ವಿದ್ಯಾಕ್ಷೇತ್ರವಾದರೂ ಇದಕ್ಕೆ ಹೊರತಾಗಿಲ್ಲ.

ಮಾನವನ ಬಾಳಬಟ್ಟೆಯಲ್ಲಿ ಕವಿದ ಅಜ್ಞಾನಾಂಧಕಾರವನ್ನು ತೊಲಗಿಸಿ, ಸುಜ್ಞಾನದೀಪಿಕೆಯನ್ನೆತ್ತಿ ತೋರಿಸುವ ಸಾಧನವೇ ವಿದ್ಯೆ. ವ್ಯಕ್ತಿಯ ಸರ್ವತೋಮುಖವಾದ ಏಳಿಗೆಯನ್ನು ಮಾಡಿ, ತನ್ಮೂಲಕ ಇಹಪರಗಳೆರಡರ ಸುಖಸಾಧನೆಗೆ ಹೆದ್ದಾರಿಯಾಗಿರುವ ವಿದ್ಯೆಯನ್ನು ಬೋಧಿಸುವ,—ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವ-ಹಿರಿಯ ಹೊಣೆಹೊತ್ತ- ಅಧ್ಯಾಪಕನಿಂದು ತನ್ನ ಕರ್ತವ್ಯದಿಂದ ವಿಮುಖನಾಗಿ, ಪರಿಸ್ಥಿತಿಯ ಸುಳಿಯಲ್ಲಿ ಸಿಕ್ಕಿ, ಜೀವನ ನಿರ್ವಹಣಕ್ಕಾಗಿ ಮನಸ್ಸಿಲ್ಲದ ಮನಸ್ಸಿನಿಂದ ಹೇಗೋ ದುಡಿಯುತ್ತಾನೆ. ಎಳೆಯ ಮಕ್ಕಳ ಮುಗ್ಧ ಹೃದಯವನ್ನು ಬೇಕಾದಂತೆ ಕಡೆದು ರೂಪಿಸಿ ನವಜನಾಂಗವನ್ನು ನಿರ್ಮಾಣ ಮಾಡಬಲ್ಲ ದಿವ್ಯಶಿಲ್ಪಿಯಾದ ಅಧ್ಯಾಪಕನೇ ಹೀಗಾದರೆ, ಭಾವೀಜನಾಂಗದ ಏಳಿಗೆಯಾದರೂ ಹೇಗಾಗಬೇಕು? ಶಿಕ್ಷಣದ ಮಟ್ಟ ದಿನದಿಂದ ದಿನಕ್ಕೆ ಕೆಳಗಿಳಿಯದೆ ಹೇಗೆ ಉಳಿದೀತು? ಈ ವಿಷಯವನ್ನು ಸೂಚಿಸಲು ಸಹಕಾರಿಯಾಗುವಂತೆ ಹಲವು ಪಾತ್ರಗಳ ಸ್ವಭಾವ ನಿರೂಪಣೆಮಾಡಿ, ದೇಶದಲ್ಲಿಯ ಪ್ರಸ್ತುತ ಶಿಕ್ಷಣ ಹಾಗೂ ಶಿಕ್ಷಕರ ಯಥಾರ್ಥ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದಾರೆ ಲೇಖಕರು, ಈ ನವ್ಯ ಕತೆಯಲ್ಲಿ.

ಇದೇ ಕಳೆದ ಅಕ್ಟೋಬರ ತಿಂಗಳಲ್ಲಿ 'ಕತ್ತಲಲ್ಲಿಯ ಜನ' ಎಂಬ ನವ್ಯ ಕತೆಯನ್ನು ಜಯಂತಿಯ ಮೂಲಕ ವಾಚಕರಿಗಿತ್ತ ಶ್ರೀ. ಆರ್. ಪಿ. ಕುಲಕರ್ಣಿಯವರು, ಈಗ ಅದೇ ಮಾದರಿಯ 'ಸಾವೋ? ಬದುಕೋ?' ಎಂಬ ಮತ್ತೊಂದು ಕತೆಯನ್ನು ಮುಂದಿಟ್ಟಿದ್ದಾರೆ. 'ಕತ್ತಲಲ್ಲಿಯ ಜನ'ದಲ್ಲಿ ಅನಾಗರಿಕ ಸ್ಥಿತಿಯಲ್ಲಿರುವ ಹಳ್ಳಿಯ ಜನರ ಸ್ವಭಾವವನ್ನು ಚಿತ್ರಿಸಿದರೆ, ಇದರಲ್ಲಿ ಇಂದಿನ ಶಿಕ್ಷಕರ ಮುಖಕ್ಕೆ ದರ್ಪಣವನ್ನು ಹಿಡಿದು, ಅವರ ಬಾಳಿನ ಒಂದು ಮುಖದ ಪ್ರತಿಬಿಂಬವನ್ನೇ ತೋರಿಕೊಟ್ಟಿದ್ದಾರೆ. ಅದರಂತೆಯೇ ಇದರಲ್ಲಿಯೂ ಘಟನೆಗೆ ಪ್ರಾಧಾನ್ಯವಿಲ್ಲ. ವ್ಯಕ್ತಿಗಳ ಸ್ವಭಾವ ನಿರೂಪಣೆಯಿಂದಲೇ ಕತೆ ಮುಂದೆ ಸಾಗುತ್ತದೆ. ಪಾತ್ರಸಂಖ್ಯಾವಧಿಯೋ ಒಂದೆರಡಲ್ಲ ಎಂಟು-ಹತ್ತು. ಪ್ರತಿಯೊಂದು ಪಾತ್ರದ ಸ್ವಭಾವವನ್ನೂ ವಿವರವಾಗಿ ವಿಮರ್ಶಿಸುತ್ತಾ ಹೋದರೆ, ವಿಮರ್ಶೆ ಕತೆಗಿಂತಲೂ ದೊಡ್ಡದಾಗಿ ಬಿಡಬಹುದಾದುದರಿಂದ, ಆ ಕಾರ್ಯಕ್ಕೆಳೆಯದೆ ಲೇಖಕರು ನಮ್ಮ ಮುಂದಿಟ್ಟ ಪ್ರಧಾನ ಸಮಸ್ಯೆ ಮತ್ತು ಅದನ್ನು ನಿರೂಪಿಸಲು ಸಹಕಾರಿಯಾದ ಪಾತ್ರಗಳ ಸೂಕ್ಷ್ಮ ಪರಿಚಯವನ್ನು ಮಾತ್ರ ಇಲ್ಲಿ ಮಾಡಿಕೊಳ್ಳಬಹುದು.

ಇಂದಿನ ಶಿಕ್ಷಣಸಂಸ್ಥೆಯಲ್ಲಿರುವ ಮುಖ್ಯ ದೋಷಗಳಲ್ಲಿ ಅಧ್ಯಾಪಕನ ಆಯ್ಕೆ ಸರಿಯಾಗಿಲ್ಲದಿರುವುದೂ ಒಂದು. ಅಧ್ಯಾಪಕನಾಗುವವನಿಗೆ ಆ ಕೆಲಸದಲ್ಲಿ ಅಭಿರುಚಿಯಿರಬೇಕು. ಬೇರೆ ಕೆಲಸ ಯಾವುದೂ ಸಾಗದೆ ಕೊನೆಗೆ ಜೀವನನಿರ್ವಹಣಕ್ಕಾಗಿ ಏನಾದರೂ ಒಂದು ವೃತ್ತಿ ಬೇಕಲ್ಲಾ-ಎಂದು ಅಧ್ಯಾಪಕ ವೃತ್ತಿಗಿಳಿದವನು ಉತ್ತಮ ಅಧ್ಯಾಪಕನೆನಿಸಿಕೊಳ್ಳಲಾರ. ನಾಗರಾಜ ಮತ್ತು ಶೇಷಗಿರಿ—ಈ

(ಮುಂದಿನ ಪುಟ ನೋಡಿರಿ)

ಸಾದರ ಸ್ವೀಕಾರ

೫೪ ಗಾಳಿಪಟ (ಲಲಿತ ಪ್ರಬಂಧಸಂಕಲನ). ಬರೆದವರು 'ರಾ. ಕು.' ಅವರು. ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ ಅರಳಿದ ಕುಸುಮವಿದು. ಕ್ರೌ. ಅ. ೨೬೨ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೩-೫೦; ಸಾಮಾನ್ಯ ಪ್ರತಿಗೆ ೨-೫೦.

೫೫ Karnatak Kashida (ಕಸೂತಿಯ ಬಗೆಗೆ ಸಚಿತ್ರ ಪುಸ್ತಕ) ಬರೆದವರು ಶ್ರೀಮತಿ ಅಹಲ್ಯಾಬಾಯಿ ಕಿರ್ಲೋಸ್ಕರ ಬಿ. ಎ., ಟ್ರುಪ್ ಬಝೂರ್, ಹೈದರಾಬಾದ್. ಕ್ರೌ. ೧೧ ದ ೨೦ ಪುಟಗಳು. (ಕಸೀದೆಯ ಚಿತ್ರಗಳು ಬಣ್ಣಬಣ್ಣಗಳಲ್ಲಿ ಪ್ರಕಟವಾಗಿವೆ). ಬೆಲೆ ೩-೫೫.

೫೬ ಪ್ರಾರ್ಥನೆ (ಗಾಂಧೀ ಸಾಹಿತ್ಯದ ಕಿರುಹೊತ್ತಿಗೆ) ಅನುವಾದಕರು ಶ್ರೀ. ವಿ. ಕೆ. ಹೋಳಕಟ್ಟಿಯವರು. ಪ್ರಕಾಶಕರು: ಶ್ರೀಮಾನ್ ರಾ. ಶ್ರೀ. ಹುಕ್ಕೇರಿಕರ, ಅಧ್ಯಕ್ಷ, ಗಾಂಧೀಸ್ಮಾರಕ ನಿಧಿ, ಕರ್ನಾಟಕ ಶಾಖೆ, ಧಾರವಾಡ. ಫೂ. ಕ್ಯಾ. ೫. ೮೨ ಪುಟಗಳು. ಬೆಲೆ ೦೦-೫೦.

೫೭ ನನ್ನ ಕನಸಿನ ಭಾರತ (ಗಾಂಧೀ ಸಾಹಿತ್ಯದ ಕಿರು ಹೊತ್ತಗೆ). ಅನುವಾದಕರು ಶ್ರೀ. ಗಜೇಂದ್ರಗಡ ಶ್ಯಾಮರಾಯರು. ಪ್ರಕಾಶಕರು ಮೇಲೆ ನಿರ್ದೇಶಿಸಲ್ಪಟ್ಟವರೇ ಫೂ. ಕ್ಯಾ. ೫. ೮೨ ಪುಟಗಳು. ಬೆಲೆ ೦೦-೫೦.

೫೮ ಸ್ವಾತಂತ್ರ್ಯ (ಗಾಂಧೀ ಸಾಹಿತ್ಯದ ಕಿರುಹೊತ್ತಗೆ) ಅನುವಾದಕರು ಶ್ರೀ. ಜಿ. ಆರ್. ಪಾಂಡೇಶ್ವರರು. ಪ್ರಕಾಶಕರು ಮೇಲೆ ಹೇಳಿದವರೆ. ಫೂ. ಕ್ಯಾ. ೫. ೮೦ ಪುಟಗಳು. ಬೆಲೆ ೦೦-೫೦.

೫೯ ವಿಮಾನ ಪರಿಚಾರಿಕೆ (ಲಘುಕಥಾ ಸಂಕಲನ) ಲೇಖಕರು ಶ್ರೀ. 'ಚಿದಂಬರಾನಂದ' (ಶ್ರೀ. ಸಿ. ಎಸ್. ಕುಲಕರ್ಣಿ ಎಂ.ಎ. ಧಾರವಾಡ) ಅವರು. ಪ್ರಕಾಶಕರು ನೀರವ ಪ್ರಕಾಶನ, ಸಾಧನಕೇರಿ, ಧಾರವಾಡ. ಕ್ರೌ. ಅ. ೧೨೦ ಪುಟಗಳು. ಬೆಲೆ ೧-೫೦.

೬೦ ನಡುಗನ್ನಡ (ಭಾಷಾವಿಕಾಸ-ವಿಕೃತಿಗಳ ವಿವೇಚನೆ.) ಬರೆದವರು ಶ್ರೀಮಾನ್ ನರಸಿಂಗರಾವ್ ಮಾನ್ವಿ ಎಂ ಎ. ಹೈದರಾಬಾದ್. ಪ್ರಕಾಶಕರು ಕರ್ನಾಟಕ ಸಾಹಿತ್ಯ ಮಂದಿರ, ಬಾಗಲಿಂಗಂಪಲ್ಲಿ, ಹೈದರಾಬಾದ್. ಡೆ. ೫. ೮೦ ಪುಟಗಳು. ಬೆಲೆ ೩-೦೦.

೬೧ ಪಂಚಾಯತಿ (ಏಕಾಂಕಿಕಾ). ಬರೆದವರು ಶ್ರೀಮಾನ್ ಪು. ಕಾ. ನೇಸರಗಿಯವರು. ಪ್ರಕಾಶಕರು ಶ್ರೀ. ಪುಂ.ಗಂ. ಪಾಟೀಲ, ಬೆಟ್ಟೀಕಟ್ಟಿ, ಗೀತಾ ಪ್ರಕಾಶನ ಮಂದಿರ, ಹಿರೇಬಾಗೇವಾಡಿ, ಪ್ಲಾ ಬೆಳಗಾಂವಿ. ಕ್ರೌ. ಅ. ೧೬ ಪುಟಗಳು. ಬೆಲೆ ?

೬೨ ಉತ್ತರಾಯಣ (ಕವನ ಸಂಕಲನ). ಕವಿ ಶ್ರೀ. 'ಅಂಬಿಕಾತನಯದತ್ತ' ಅವರು. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ.ಅ. ೭೬ ಪುಟಗಳು. ಬೆಲೆ ೧-೫೫.

೬೩ ಭಾರತೀಯ ಸಂಸ್ಕೃತಿಯ ಹಿರಿಮೆ (ಸಂಸ್ಕೃತಿ ಪರಿಚಯಾತ್ಮಕ ಗ್ರಂಥ). ಮೂಲ ಮರಾಠೀ ಲೇಖಕರು ಸಾಹಿತ್ಯಾಚಾರ್ಯ ಬಾಳಶಾಸ್ತ್ರಿ ಹರಿದಾಸ, ನಾಗಪುರ. ಅನುವಾದಕರು ಶ್ರೀ. ಭಾ. ವೆಂ. ದೇಶಪಾಂಡೆ, ಅಥಣಿ. ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ. ಕ್ರೌ.ಅ. ೨೦೪ ಪುಟಗಳು. ಬೆಲೆ ೨-೦೦.

ಇಂದಿನ ಸ್ವಹೀನತಾಭಾವನೆ ತುಂಬಿದ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧದಾಸರು ಈ ಪುಸ್ತಕವನ್ನು ಅವಶ್ಯವಾಗಿ ಓದಿ ಮನನಮಾಡಿಕೊಳ್ಳಬೇಕು.

೬೪ ಆಕಾಂಕ್ಷೆ (ಅನುವಾದಿತ ಸಾಮಾಜಿಕ ಕಾದಂಬರಿ) ಮೂಲ ತೆಲುಗು ಲೇಖಕರು ಶ್ರೀ. ಕುಟುಂಬರಾವ್ ಅವರು. ಅನುವಾದಕರು 'ನವಗಿರಿನಂದ' ಮದ್ರಾಸ್. ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ. ಕ್ರೌ. ಅ. ೧೪೮ ಪುಟಗಳು. ಬೆಲೆ ೧-೫೦.

೬೫ ಅಣ್ಣಿಗೇರಿಯ ಶ್ರೀಸ್ವಯಂಭೂಅಮೃತೇಶ್ವರ (ಐತಿಹಾಸಿಕ ದೇವಸ್ಥಾನದ ಪರಿಚಯ—ಸ್ಥಳಪುರಾಣ ಸಹಿತ) ಲೇಖಕರು ಶ್ರೀ. ಅಮೃತ ಮಹಾದೇವ ಅಣ್ಣಿಗೇರಿ, ಎಂ. ಎ. ಧಾರವಾಡ. ಕ್ರೌ. ಅ. ೮೦ ಪುಟಗಳು ಬೆಲೆ ?

೬೬ ಮೋಟಾರ ನಿಯಮಗಳ ಕೈಪಿಡಿ (ಇಂಟರ್ ನ್ಯಾಶನಲ್ ಅಮೇಚ್ಯುರ್ ಅಥ್ಲೆಟಿಕ್ ಫೆಡರೇಶನ್) ಅನುವಾದಕರು: ಶ್ರೀ. ಕೆ. ಜಿ. ನಾಡಿಗೇರ, ಬಿ. ಎ., ಬಿ. ಟಿ., ಡಿ ಪಿ. ಇ., ಶ್ರೀ. ಬಿ. ಕೆ. ಕೆಲಗೇರಿ, ಡ್ರಿಲ್ ಟೀಚರ್ಸ್ ಕೋರ್ಸ್, ಕಾಂದಿವಲಿ ಮತ್ತು ಶ್ರೀ. ಆರ್. ಎಸ್. ಅರಳಗುಪ್ಪಿ, ಪ್ರಕಾಶಕರು ಮಲ್ಲಸಜ್ಜನ ವ್ಯಾಯಾಮಶಾಲೆ, ಧಾರವಾಡ. ಕ್ರೌ. ಅ. ೧೦೦ ಪುಟಗಳು, ಬೆಲೆ ೧ ರೂಪಾಯಿ.

೬೭ ಶರೀರ ಶಿಕ್ಷಣದ ತತ್ತ್ವದರ್ಶನ (ವ್ಯಾಯಾಮ ಶಿಕ್ಷಣದ ಗ್ರಂಥ). ಲೇಖಕರು ಶ್ರೀ. ಕೆ. ಜಿ. ನಾಡಗೇರ, ಬಿ. ಎ., ಬಿ. ಟಿ., ಡಿ. ಪಿ. ಎಡ್. ಧಾರವಾಡ. ಕ್ರೌ. ಅ. ೯೨ ಪುಟಗಳು. ಬೆಲೆ ೧.೫೦.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ–ಬಂಧನಗಳ ಬಿಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೫೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೯೦ ಪುಟ * ಬೆಲೆ : ೪ ರೂ.

ಕಾರಹುಣ್ಣಿಮೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● **ಬೆಲೆ : ೧.೨೫**

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

ಜಯಂತಿ

ಜಯಂತಿಗೆ ಚಂದಾದಾರರಾಗಿರಿ!

■

ಜಯಂತಿಯಂತಹ ಸದಭಿರುಚಿ-ಸಂಸ್ಕೃತಿ ಪ್ರಚಾರಕ ಮಾಸಪತ್ರಿಕೆಯನ್ನು
ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

* * * * *

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ವಿದ್ಯಾಶಾಖೆಯೂ ಪ್ರತಿಯೊಂದು
ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ
ಕಾಲದ—ಕನ್ನಡ ಪ್ರದೇಶವನ್ನು ಒಳಗೊಂಡ—ಎಲ್ಲ ರಾಜ್ಯ
ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರ ಸರಕಾರದ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್

ಇವರ

No. F. Dis. G. L. 4250-48/49. D. 3rd Aug 1948 ರ

ಪ್ರಕಾರ

ಜಯಂತಿಯನ್ನು ರಾಜ್ಯದಲ್ಲಿಯ
ಎಲ್ಲ ಹೈಸ್ಕೂಲ್, ಮಿಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್‌ಗಳಿಗೆ
ತರಿಸಿಕೊಳ್ಳಬಹುದೆಂಬ ಮನ್ನಣೆಯ ಒಪ್ಪಿಗೆ ಹೊರಡಿಸಿದೆ.

ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯವಲ್ಲಿ
ಇರಿಸಿಕೊಂಡು, ತಮ್ಮ ತಮ್ಮ ಶಾಲೆಯ ವಾಚನಾಲಯಗಳಿಗೆ
ಜಯಂತಿಯನ್ನು ತರಿಸಿಕೊಳ್ಳ ಬೇಕು.

ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯನ್ನು ಬೆಳೆಸಿ,
ಅವರನ್ನು ನಾಗರಿಕರನ್ನಾಗಿ ಮಾಡಬಲ್ಲ ಮಾಸಪತ್ರಿಕೆ—'ಜಯಂತಿ.'

ಪು ೨೩ } ಫೆಬ್ರುವರಿ ೧೯೬೧ { ಸಂಚಿಕೆ ೮

JAYANTI

ಈ ಸಂಚಿಕೆಯಲ್ಲಿ

ಹೊಸ ಸಮಾಜ, ಹೊಸ ಅರ್ಥವ್ಯವಸ್ಥೆ (ಸಂಪಾದಕೀಯ)

ಸಂಪಾದಕರು ೨೫೩

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)

'ಕಾಲಭೈರವ' ೨೫೫

ಗೋಮುಖವ್ಯಾಘ್ರ (ಸಣ್ಣಕತೆ)

ಶ್ರೀ. ರಾಘವ ಜಿ. ಶೆಟ್ಟಿ, ಬಿ. ಎ., ಮುಂಬಯಿ ೨೫೭

ನೋವು (ಶರೀರ ಸ್ವಾಸ್ಥ್ಯ ನಿಚಾರ ವಿವೇಚನೆ)

ಶ್ರೀ. ರ. ಜ. ಅಗ್ನಿಹೋತ್ರಿ, ಲೆಕ್ಚರರ್, ಬೆಂಗಳೂರು ೨೬೨

ಬಾಳದೀವಳಿಗೆಯದು ಬರುವುದೆಂದು (ಕವಿತೆ)

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ. ಎ. ಹೈದರಾಬಾದ್.... ೨೬೫

ಹುಚ್ಚಿದ್ದು ಕುಣಿಯುತಿದೆ (ಕವಿತೆ)

ಶ್ರೀ. ಎಸ್. ಆರ್. ಪಾಡಿ, ಮುಟ್ಟಿತ್ತೋಡಿ ೨೬೫

ಮುಗಿದ ಅವತಾರ (ಒಂದು ಜೀವನ ದರ್ಶನ)

ಶ್ರೀ. ವಿ. ಎನ್. ಕರಬಂಟನಾಳ, ಬಿ. ಎ. ಅಥಣಿ ೨೬೬

ನಾಡವರ ಮನೆಮಾತುಗಳು (ಭಾಷಾಚಿತ್ರ)

ಶ್ರೀ. ಡಾ. ವಿ. ಆರ್. ಉಮರ್ಜಿ, ಎಂ. ಎ., ಪಿ. ಎಚ್. ಡಿ.
ಬೆಳಗಾಂವ ೨೭೨

ತಾಯಿ-ಮಗು (ಕವನ)

ಶ್ರೀ. ವಿ. ಬಿ. ಅರ್ತಿಕಜೆ, ಮುದನೂರ ೨೭೫

ಬದುಕಿನ ಶೇಷ (ಸಂಜಾಬೀ ಕಥೆ)

ಶ್ರೀ. ಅಪ್ಪಾಸಾಹೇಬ ಸನದಿ, ಬಿ. ಎ. ಅಥಣಿ ೨೭೬

ಪ್ರತಿಫಲ (ಪೌರಾಣಿಕ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ.... .... ೨೮೧

ಸಾಹಿತ್ಯ ನಿಮರ್ಶೆಯ ಶಿಕ್ಷಣರಂಗ

ಶ್ರೀ. 'ರಂಗ' ಮಾಳಮಡ್ಡಿ, ಧಾರವಾಡ ೨೮೫

ಶ್ರೀ. ದಿವಸ್ಪತಿ ಹೆಗಡೆ, ಸಿದ್ದಾಪುರ ೨೮೬

ಜೀವನವಿಕಾಸ (ಕವಿತೆ)

ಶ್ರೀ. ವೀರೇಶ್ವರಿ, ಸಿಗ್ಗಾಂವ ೨೮೮

ಸಾದರ ಸ್ವೀಕಾರ (ಕವರ್ ೩ನೇಯ ಪುಟದಲ್ಲಿ)

ಜಯಂತಿ

ಸಂಪುಟ ೩೩] [ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಸಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಪಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಹೊಸ ಸಮಾಜ, ಹೊಸ ಅರ್ಥವ್ಯವಸ್ಥೆ

ನಮ್ಮ ಸಮಾಜದಲ್ಲಿ ನೆಲೆಗೊಂಡಿರುವ ರೌದ್ರ ವೈಷಮ್ಯವನ್ನು ಕಂಡರೆ, ಅದರ ಮೇಲೆ ಎಂತಹದೋ ಒಂದು ಭೀಕರ ಆಘಾತವಾಗಿದೆಯೆಂಬುದು ಕಂಡುಬಾರದಿರದು. ಸರ್ವಸಾಮಾನ್ಯವಾದ ನಿಯಮಗಳಾವವೂ ಇಲ್ಲದುದರಿಂದ, ಇಂದು ಸಮಾಜವು ಚಿದರಿ ಚೆಲ್ಲಾಪಿಲ್ಲಿಯಾಗಿದೆ. ಈ ದುಃಸ್ಥಿತಿಯು ಹೋಗಿ ನಮ್ಮ ಸಮಾಜದಲ್ಲಿ ಐಕ್ಯ, ಬಂಧುಭಾವ, ಸಹಕಾರವೃತ್ತಿ ಮೊದಲಾದ ಸದ್ಗುಣಗಳು ಬೆಳೆದು ನೆಲೆಗೊಳ್ಳಬೇಕಾದರೆ, ನಮ್ಮ ಸಮಾಜಘಟನೆಯಲ್ಲಿ ಮೂಲಭೂತವಾದ ಪರಿವರ್ತನೆಯಾಗಬೇಕೆಂದು ಉಗ್ರ ವಿಚಾರಿಗಳು ಕೆಲವರು ಹೇಳುವರು; ಕಾಲೋಚಿತ ಸುಧಾರಣೆಗಳಾಗಬೇಕೆಂದು ಕೆಲವು ಜನ ಪ್ರಗತಿಪ್ರಿಯ ಹಿರಿಯರು ಹೇಳುವರು. ಏನೂ ಬದಲಾವಣೆ ಎಲ್ಲರಿಗೂ ಬೇಕಾಗಿರುವುದು ನಿಜವಾದ ಸಂಗತಿ.

ಹಿಂದೆ ನಮ್ಮ ಭಾರತೀಯ ಸಮಾಜ ನಿಯಮಗಳು ಧರ್ಮದ ತಳಹದಿಯ ಮೇಲೆ ನಿಂತುವಾಗಿದ್ದುವು. ಜ್ಞಾನ, ಸದಾಚರಣೆ, ಸುನೀತಿಗಳಿಗೆ ಆಗ ಹೆಚ್ಚಿನ ಗೌರವವಿದ್ದಿತು. ಸಮಾಜದ ಧಾರಣೆಗೆ ಅತ್ಯವಶ್ಯವಾದುದಾವದೂ, ಅರ್ಥವ್ಯವಸ್ಥೆಯು ಧರ್ಮದ ಅನುಯಾಯಿಯಾಗಿದ್ದಿತು. ಜ್ಞಾನಕ್ಕೆ ವಿಶೇಷ ಗೌರವವಿದ್ದುದರಿಂದ, ಆದರೆ ತ್ಯಾಗ ತಪಸ್ಸುಗಳೆ ಕಲ್ಪನೆಯಿದ್ದ ಸಾಮಾಜಿಕರು, ಅದು ಹೇಳಿದಂತೆ ನಡೆದುಕೊಳ್ಳಲು ಸಿದ್ಧರಾಗುತ್ತಿದ್ದರು. ತ್ರಿಕಾಲ ವಿವೇಕಿಯಾದ ಜ್ಞಾನ, ತನ್ನದೇ ಆದ ಒಂದು ವಿಶಿಷ್ಟವಾದ ಆರ್ಥಿಕ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು, ಅರ್ಥದ ನಿರ್ಮಿತಿ ನಿತರಣೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿತ್ತು. ಯಜ್ಞ-ದಾನವ್ಯವಸ್ಥೆಯ ಮೂಲಕ ಎಲ್ಲಿಯೂ ಬಂಡವಾಳ ಬೆಳೆಯದಂತೆ ನಿರ್ಬಂಧ ನಿಯಮಗಳನ್ನು ಬೋಧಿಸುತ್ತಿತ್ತು. ಜ್ಞಾನದ ಧರ್ಮದಂಡ ನಿರ್ಮಿಸಿಕೊಟ್ಟ ಸಾಮಾಜಿಕ ನಿಯಮಗಳನ್ನು, ಆಡಳಿತದ ರಾಜದಂಡ ಸ್ವಲ್ಪವೂ ತಪ್ಪಾಗದಂತೆ ದಕ್ಷತೆಯಿಂದ ಸಂರಕ್ಷಿಸುತ್ತಿತು. ಎಂತಲೇ ಅನೇಕಾನೇಕ ಕಾಲ ನಮ್ಮ ಭಾರತೀಯ ಸಮಾಜ ವ್ಯವಸ್ಥೆ ಸ್ಪೃಹಣೀಯವಾಗಿ ಸಾಗಿತು. ಹಿಂದಿನ ಸಮಾಜದಲ್ಲಿ ವ್ಯಕ್ತಿಸ್ವಾತಂತ್ರ್ಯ ಇರಲಿಲ್ಲವೆಂದಲ್ಲ; ಆದರೆ ಸಾಮಾಜಿಕ ನಿಯಮಗಳಲ್ಲಿ ಶ್ರದ್ಧೆಯಿಟ್ಟವರು ಅವರು ಸ್ವೈರವರ್ತನೆಯಿಂದ ಜೀವನವನ್ನು ಅಪೇಕ್ಷಿಸುತ್ತಿರಲಿಲ್ಲ. ಸಾರ್ಥಕ್ಯಕ್ಕಿಂತಲೂ ಪರಾರ್ಥಜೀವನ ಒಳ್ಳೆಯದೆಂದು ನಂಬುತ್ತಿದ್ದರು.

ಇಂದು ಹಿಂದಿನ ರೀತಿ ಉಳಿದಿಲ್ಲ. ವಿಜ್ಞಾನದ ಪ್ರಗತಿ-ವ್ಯಕ್ತಿಗಳ ವೈಚಾರಿಕ ಪ್ರಪಂಚದಲ್ಲಿ ತುಂಬ ಬದಲಾವಣೆಯನ್ನು ಮಾಡಿಬಿಟ್ಟಿದೆ. ಎಂತಲೇ ನಮ್ಮ ಭಾರತದ ಸಮಾಜವು ಅನಿವಾರ್ಯ-ಧರ್ಮದ ತಳಹದಿಯನ್ನು ಬಿಟ್ಟು, ಇಂದು ಅಜ್ಞಾತವಾಗಿಯೇ ಅರ್ಥದ ತಳಹದಿಯ ಮೇಲೆ ನಿಂತುಕೊಂಡಿದೆ. ನಿಂತುಕೊಂಡ ನೆಲೆ ಬೇರಾದರೂ, ಸಮಾಜದ ಬಹಜನರ ತಲೆಯಲ್ಲಿಯ ಹಳೆಯ ವಿಚಾರದ ಹದ್ದುಗಳು ತಮ್ಮ ಗೂಡುಗಳನ್ನು ಇನ್ನೂ ಬಿಡಲೊಲ್ಲವು. ಹೊಸಕಾಲ ಅವುಗಳನ್ನು ಹಾರಿಸಲೆಂದು ಕೋಲೆತ್ತಿದಾಗ, ಅವು ಕೇರೆಂದು ಕೆರುಚಿ ಅಶಾಂತಿ, ಅತೃಪ್ತಿಗಳನ್ನು ಹರಡುತ್ತಲಿವೆ. ಸಮಾಜದಲ್ಲಿ ಹೆಚ್ಚು ಹೆಚ್ಚು ವೈಷಮ್ಯವನ್ನು ಹಬ್ಬಿಸುತ್ತಲಿವೆ.

ಇಂದು ನಮ್ಮ ಸಮಾಜ, ಅರ್ಥಕ್ಕೆ ಪ್ರಾಧಾನ್ಯವನ್ನು ಕೊಟ್ಟು ಪುನರ್ಘಟಿತವಾಗದೆ ಬೇರೆ ಗತಿಯೇ ಇಲ್ಲ. ಜಗತ್ತಿನಲ್ಲಿಯ ಎಲ್ಲ ರಾಷ್ಟ್ರಗಳ ರಾಜಕೀಯ-ಸಾಮಾಜಿಕ ವ್ಯವಸ್ಥೆಗಳು ಅರ್ಥವನ್ನು ಅವಲಂಬಿಸಿಕೊಂಡೇ ಹೊರಟಿವೆ. ಹತ್ತು ನಿಟ್ಟಿನಿಂದಲೂ ಆ ವೈಚಾರಿಕ ಝಂಝಾವಾತ ಭಾರತವನ್ನಲ್ಲಿ ನುಗ್ಗಿ ಬರುತ್ತಿರುವಾಗ, ನಮ್ಮ ರಾಷ್ಟ್ರದ ಜನತೆಯ ಮೇಲೆ ಅದರ ಪ್ರಭಾವ ಮಾಡದೆ ಇರುವುದೆ? ಅದರ ಪರಿಣಾಮವಾಗಿಯೇ ಭಾರತದಲ್ಲಿ ಉದಯವಾದ ಪ್ರಜಾರಾಜ್ಯ ಕಾಲೋಚಿತವಾದ ಅರ್ಥಪ್ರಧಾನ ರಾಜ್ಯಪದ್ಧತಿಯನ್ನು ಸ್ವೀಕರಿಸಿಬಿಟ್ಟಿದೆ. ಆಡಳಿತವು ಒಪ್ಪಿದ ನೀತಿಯನ್ನು ಸಮಾಜವೂ ಒಪ್ಪಿಕೊಳ್ಳಲೇಬೇಕಲ್ಲವೆ?

ಹಿಂದಿನ ಕಾಲದಲ್ಲಿ ಧರ್ಮದೊಂದಿಗೆ ಹೊಂದಿಕೊಂಡು ಬಂದಿದ್ದ ಆರ್ಥಿಕ ವ್ಯವಸ್ಥೆ, ನಮ್ಮ ಸಮಾಜದಿಂದ ಇಂದು ಸರಾಜ್ಯುಖವಾಗಿದೆ. ಹೊಸಕಾಲಕ್ಕೆ ತಕ್ಕುದಾದ ಅರ್ಥವ್ಯವಸ್ಥೆಯನ್ನು ಅನುಗೊಳಿಸಬೇಕೆಂದರೆ, ನಮ್ಮ ಪರಂಪರಾಸ್ಥಿಯ ಸಮಾಜ, ಎಲ್ಲದರ ಕಡೆಗೂ ಭೀತಿ-ಸಂದೇಹಗಳಿಂದ ನೋಡುತ್ತಲಿದೆ. ಹಳೆಯ ಆರ್ಥಿಕ ವ್ಯವಸ್ಥೆಯ ಕಲ್ಪನೆಗೇ ಕಟ್ಟುಬಿದ್ದು ಕುಳಿತರೆ, ಇಂದು ಸಮಾಜಕ್ಕೆ ಉಳಿಗಾಲವೇ ಇಲ್ಲವೆಂಬ ವಿಷಯವು ಇದುವರೆಗೂ ಅದರ ಮನಸ್ಸನ್ನು ತಟ್ಟುತ್ತಿಲ್ಲ. ಆದರೆ ಹೊಸಕಾಲದ ಆರ್ಥಿಕ ಬಿರುಗಾಳಿ, ದಿನದಿನಕ್ಕೂ ಅವರನ್ನು ಬೇರೆಯ ಪರಿಸ್ಥಿತಿಯಲ್ಲಿ ನೂಕುತ್ತಲಿದೆ ಈ ಪರಿಸ್ಥಿತಿ ಅವರನ್ನು ಪರಂಪರಾಗತ ಆಚಾರ-ವಿಚಾರಗಳಿಂದ ತಿಳಿಯದ ಹಾಗೆಯೆ ದೂರ ದೂರಕ್ಕೆ ಒಯ್ದು ಬಿಡುತ್ತಲಿದೆ.

ಹೊಸತಾಗಿ ಬರಲಿರುವ ಅರ್ಥಮೂಲ ಸಮಾಜಪದ್ಧತಿಯನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗುವುದು. ಅದರ ಪರಿಣಾಮವಾಗಿ ತಲೆದೋರುವ ಸಾಮಾಜಿಕ ಕ್ರಾಂತಿಗೂ ನಾವು ತಲೆಬಾಗಬೇಕಾಗುವುದು ಪರಂಪರಾಸ್ಥಿಯ ಜನರ ಎದೆಯನ್ನದು ನಡುಗಿಸಬಹುದಾದರೂ, ಯುಗಧರ್ಮ—ಕಾಲಧರ್ಮ—ಎಂದು ಭಾವಿಸಿ, ಜನರೂ ಸ್ವಸಾಹಸಚಿತರಾಗಬೇಕಾಗುವುದು. ಅದನ್ನು ವಿರೋಧಿಸಿ ನಿಂತವರು ಇಂದು ಸಮಾಜದ ಘಟಕವಾಗಿ ಬದುಕುವುದು ಸಾಧ್ಯವೇ ಇಲ್ಲ.

ಅರ್ಥವ್ಯವಸ್ಥೆಯೊಂದು ಸರಿಯಾಗಿ ರೂಪುಗೊಂಡು ನಮ್ಮ ಸಮಾಜದಲ್ಲಿ ರೂಢವಾದರೆ, ಇಂದು ಕಾಣುವ ಜೀವನದ ವಿಷಮತೆಗಳೆಷ್ಟೊ ಸಾಮಾನ್ಯವಾಗಬಹುದು. ಜೀವನ ಸುಖಮಯವಾಯಿತೆಂದಾಗ, ನಮ್ಮ ಪರಂಪರಾಸ್ಥಿಯರು ಹೊಸಕಾಲಕ್ಕೆ ಹೊಂದಿಕೊಂಡು ನಡೆಯುವವರಾಗಬಹುದು ಅದರೆ ಬರಲಿರುವ ಆರ್ಥಿಕ ವ್ಯವಸ್ಥೆ ಸಾಮಾನ್ಯಧರ್ಮಕ್ಕೆ ಪೋಷಕವಾದಾಗ ಬರಬೇಕು. ಹೃದಯ ಹೀನವಾದ ಹಿರಣ್ಯಕಶಿಪು-ಹಿರಣ್ಯಾಕ್ಷರ ಆಡಳಿತದ ಆರ್ಥಿಕವ್ಯವಸ್ಥೆ, ಸಮಾಜವನ್ನು ಆಳಲು ತೊಡಗಿದರೆ, ಅದರಿಂದ ಮಾನವತೆಯೆಂಬುದು ಮಣ್ಣುಮುಕ್ಕಿಹೋಗುವುದು. ಕಟ್ಟಿಟ್ಟ ಮಾತು.

ಇಂದು ಆರ್ಥಿಕ ರೀತಿಯಿಂದಲೂ ಸಾಂಸ್ಕೃತಿಕವಾಗಿಯೂ ದಾರಿದ್ರ್ಯವನ್ನು ಅನುಭವಿಸುತ್ತಿರುವ ನಮ್ಮ ಸಮಾಜದ ಬಹು ಜನರನ್ನು 'ಕಮ್ಯುನೀಝಂ' 'ಸೋಶಾಲಿಝಂ' ಮೊದಲಾದ-ಪಶ್ಚಿಮ-ಖಂಡದ—ಅರ್ಥವ್ಯವಸ್ಥೆಯದೆ ಮೋಹನೀಗ್ರಹಗಳು ಆಕರ್ಷಿಸುತ್ತಲಿವೆ. ನಮ್ಮ ದೇಶದಲ್ಲಿ ಆ ಅರ್ಥವ್ಯವಸ್ಥೆಯ ಪ್ರಚಾರಕರೂ ಹೆಚ್ಚಾಗಿದ್ದಾರೆ; ಇಷ್ಟೇ ಅಲ್ಲ, ಆ ವ್ಯವಸ್ಥೆಯನ್ನೊಪ್ಪಿದ ರಾಷ್ಟ್ರಗಳೂ ನಮ್ಮಲ್ಲಿ ಸ್ವತಂತ್ರವಾಗಿ ಪ್ರಚಾರವನ್ನು ನಡೆಸಿವೆ. ಇದರ ಪ್ರಭಾವಕ್ಕೊಳಗಾದರಂತೂ ನಮ್ಮ ಸಮಾಜಪದ್ಧತಿ ಸಂಪೂರ್ಣ ತಲೆಕೆಳಗಾಗಿ ಹೋಗುವುದು. ಆಗ ಭಾರತದ ಪರಂಪರಾ ಸಂಸ್ಕೃತಿಯ ಪರಿಮಳವು ಸಂಪೂರ್ಣ ಮರೆಯಾಗಿ, ಯಂತ್ರ-ಕಾರಖಾನೆಗಳ ಹೊಗೆಯನ್ನು ಕುಡಿಯುತ್ತ ನಮ್ಮ ಜನ ಕುತ್ತುಸುರು ಬಿಡಬೇಕಾದೀತು.

ಇಂದಿನ ನಮ್ಮ ಪ್ರಜಾಪ್ರಭುತ್ವದ ಧುರೀಣರು, ಆರ್ಥಿಕ ತತ್ವಕ್ಕನುಗುಣವಾಗಿ ಹೊಸ ಸಮಾಜವನ್ನು ರೂಪಿಸಬೇಕೆಂದು ಹೊರಟಿರುವರು. ಆದರೆ ಅವರ ಈ ಪ್ರಯತ್ನದ ಪರಿಣಾಮವನ್ನು ನೋಡಿದರೆ, ರಾಷ್ಟ್ರ-ಸಮಾಜಹಿತದ ಕಲ್ಪನೆ ಸ್ವಲ್ಪವೂ ಇರದ ಅಸಂಸ್ಕೃತ ಜನರ ಕೈಯಲ್ಲಿ ಹಣವು ಹೆಚ್ಚು-ಹೆಚ್ಚಾಗುತ್ತಲಿದೆ. ರಾಷ್ಟ್ರಹಿತ-ಸಮಾಜ ಹಿತದ ಕಲ್ಪನೆ ಸಂಪೂರ್ಣವಾಗಿ ಇದ್ದ ಸುಸಂಸ್ಕೃತ ಮಧ್ಯಮ ವರ್ಗ, ದಿನದಿನಕ್ಕೆ ದಾರಿದ್ರ್ಯ ಪಂಕದಲ್ಲಿ ಬೀಳುತ್ತಲಿದೆ. ಕೈಗೆ ಹೆಚ್ಚಾಗಿ ಹಣವು ದೊರೆತ ಸಾಮಾನ್ಯ ಜನತೆ, ಸಮಾಜಘಾತಕವಾದ ವ್ಯಸನ, ಕಲಹ, ಮೊದಲಾದ ಚಟುವಟಿಕೆಗಳನ್ನು ನಡೆಯಿಸಿ, ಮೊದಲೇ ಇದ್ದ ಸಾಮಾಜಿಕ ಅಶಾಂತಿಯನ್ನು ಇನ್ನಿಷ್ಟು ಹೆಚ್ಚಿಸುತ್ತಲಿದೆ. ಹೃದಯ-ಬುದ್ಧಿಗಳ ವಿಕಾಸವಿಲ್ಲದಲ್ಲಿ ಹಣವು ಹೆಚ್ಚಾದರೆ, ಅದರ ಪರಿಣಾಮ ಒಳ್ಳೆಯದಾದೀತೆ? ಆಸುರೀಭಾವವೇ ಹೆಚ್ಚಿ ತನ ಆಟವನ್ನು ನಡೆಯಿಸುವುದು. ಹೀಗಾದಂತೆ ನೋಡಿಕೊಳ್ಳುವುದು ನಮ್ಮ ಹೊಸ ಆರ್ಥಿಕ ವ್ಯವಸ್ಥೆಯ ವಿಧಾತೃಗಳ ಕರ್ತವ್ಯವಲ್ಲವೆ?

ಅರ್ಥವು ಒಂದು ಜೀವನ ಸಾಧನೆ ಮಾತ್ರ, ಅದು ಸಿದ್ಧಿಯಲ್ಲ. ಸುಸಂಸ್ಕೃತ ಜನರ ಕೈಗೆ ಅರ್ಥವು ದೊರೆತರೆ, ಅದು ವಿಧಾಯಕವಾದ ಹಾಲು-ತುಪ್ಪಗಳಿಗೆ ವ್ಯಯವಾದೀತು; ಅಸಂಸ್ಕೃತರ ಕೈಗೆ ದೊರೆತರೆ ಅದು ವಿಘಾತಕವಾದ ಹೆಂಡ-ಸರಾಯಿಗಳಿಗೆ ವ್ಯಯವಾದೀತು. ಆದುದರಿಂದ ನಮ್ಮ ಹೊಸ ಆರ್ಥಿಕ ವ್ಯವಸ್ಥೆಯ ಕನಸಿಗರು, ನಮ್ಮ ಸಾಮಾಜಿಕರಲ್ಲಿ ದೇಶಪ್ರೀತಿ, ಸ್ವಜನ ಪ್ರೀತಿ, ದಯಾಬುದ್ಧಿ, ದಾಕ್ಷಿಣ್ಯವೃತ್ತಿ, ಸಹಕಾರಭಾವ ಮೊದಲಾದುವು ಸಾರ್ವತ್ರಿಕವಾಗಿ ಬೆಳೆಯುವಂತೆ ಸಾಂಸ್ಕೃತಿಕ ಚಟುವಟಿಕೆಯನ್ನು ಮೊದಲು ಕೈಕೊಳ್ಳಬೇಕು. ಕೇವಲ ಸಾಕ್ಷರತಾ ಪ್ರಚಾರದಿಂದ ಸಮಾಜದ ಜನರಲ್ಲಿ ಸಂಸ್ಕೃತಿ ಬೆಳೆಯಲಾರದೆಂಬುದು ಅನುಭವಸಿದ್ಧ ಸಂಗತಿಯಾಗಿದೆ. ಸಂಸ್ಕೃತಿ ಬೆಳೆದರೆ ಅರ್ಥದ ವಿನಿಯೋಗ ಸರಿಯಾಗಿ ಆದೀತು. ಕೇವಲ ಚುನಾವಣೆಯ ಗೆಲುವಿನ ದೃಷ್ಟಿಯಿಂದ ಬಂದಿರುವ ಇಂದಿನ ಆರ್ಥಿಕ ವ್ಯವಸ್ಥೆ, ಸಮಾಜಕ್ಕೆ ಮಾರಕವಾದೀತೇ ಹೊರತು ತಾರಕವೆನಿಸಲಾರದು.

ಜಯಂತಿ
ಮಾಸಪತ್ರಿಕೆಗೆ
ಚಂದಾದಾರರಾಗಿರಿ

ನಾಡನಡೆ

ಉಡುಪಿಯ ಯಶಸ್ವೀ ಸಾಹಿತ್ಯ ಸಮ್ಮೇಳನ

ಡಿಸೆಂಬರ್ ಕೊನೆಯವಾರದಲ್ಲಿ, ಉಡುಪೀ ನಗರದ ಬಳಿ ಮಣಿಪಾಲದಲ್ಲಿ ಸೇರಿದ ಕನ್ನಡ ಸಾಹಿತ್ಯಸಮ್ಮೇಳನವು, ಒಳ್ಳೆಯ ರೀತಿಯಿಂದ ಜರುಗಿ, ಬಹುಜನರ ಪ್ರಶಂಸೆಗೆ ಪಾತ್ರವಾದುದು ಸಂತೋಷದ ಸಂಗತಿ. ಉಡುಪಿಯ ಸ್ವಾಗತಸಮಿತಿಯ ಕಾರ್ಯಕರ್ತರು, ಹಟಕ್ಕೆ ಬಿದ್ದಾದರೂ ಈ ಸಲದ ಸಮ್ಮೇಳನವನ್ನು ನಿಜವಾದ ಸಾಹಿತ್ಯಸಮ್ಮೇಳನವನ್ನಾಗಿ ಮಾಡಿದರೆಂದು ಹೇಳಬಹುದು. ಸಾಹಿತ್ಯಸಮ್ಮೇಳನಕ್ಕೆಂದು ಬಂದ—ಬರಲಾಗದ—ಸಾಹಿತ್ಯಿಕರನ್ನು ದಾರಿಯ ಪೆಚ್ಚು ಕೊಟ್ಟು ಬರಮಾಡಿಕೊಳ್ಳುವುದೆಂದರೆ ಸಣ್ಣ ಮಾತಲ್ಲ. ಸ್ವಾಗತಸಮಿತಿಯವರು ಅಂತಹ ಕಾರ್ಯವನ್ನು ಮಾಡಿ, ಸಮ್ಮೇಳನಕ್ಕೆ ಒಂದು ಹೊಸ ಸ್ವರೂಪವನ್ನು ತಂದು ತೋರಿಸಿದರು. ಹೀಗೆ ಮಾಡದೆ ಹೋಗಿದ್ದರೆ, ಹಿಂದಿನ ಕೆಲವು ಸಮ್ಮೇಳನಗಳಂತೆ ಇದೂ ಒಂದು ಜನಜಂಗುಳಿಯ ಜಾತ್ರೆಯಾಗಿ ಪರಿಣಮಿಸಬಹುದಾಗಿತ್ತು.

ಹೊರಗಿನಿಂದ ಹೋದ ಸಮ್ಮೇಳನ ಯಾತ್ರಿಕರಿಗೆ, ವಸತಿ-ಊಟಗಳ ವ್ಯವಸ್ಥೆ ಸರಿಯಾಗಿ ಇರಲಿಲ್ಲವೆಂಬ ಗುಲ್ಲೂ ಹೊರಟಿತು. ನಿಜವಾಗಿ ನೋಡಿದರೆ, ಉಡುಪಿಯಂತಹ ಅತಿಥಿಪೂಜಾ ಕ್ಷೇತ್ರದಲ್ಲಿ ಹೀಗೆ ಆಗಬಾರದಾಗಿತ್ತು. ಆದರೆ ನಿರೀಕ್ಷೆಗಿಂತ ಹೆಚ್ಚು ಜನರು ಏಕಕಾಲಕ್ಕೆ ಬಂದುಬಿಟ್ಟರೆ, ಯಾವುದೇ ಪೂರ್ವವ್ಯವಸ್ಥೆಯಲ್ಲಿಯೂ ಸ್ವಲ್ಪ ಅವ್ಯವಸ್ಥೆಯುಂಟಾಗುವುದು ಸ್ವಾಭಾವಿಕ. ಇಂತಹ ಪ್ರಸಂಗವಲ್ಲಿ, ಕಾರ್ಯದ ಕಡೆಗೆ ಲಕ್ಷ್ಯಕೊಟ್ಟು, ಸಹನೆಯಿಂದ ಇದ್ದುದರಲ್ಲಿ ಹೊಂದಿಸಿಕೊಂಡು ಹೋಗಬೇಕಾದುದು ಸಾಹಿತ್ಯಾಭಿಮಾನಿಗಳ ಕರ್ತವ್ಯವಾಗಿದೆ.

ಸಮ್ಮೇಳನಾಧ್ಯಕ್ಷರಾದ ಶ್ರೀಮಾನ್ ಎ. ಸಿ. ಕೃಷ್ಣರಾಯರ ಪ್ರಾಸಂಭಭಾಷಣವು ಹೊಸಬಗೆಯದಾಗಿದೆ. ಅದರಲ್ಲಿ ಕೇವಲ ಕನ್ನಡ ಸಾಹಿತ್ಯದ ಏಗು-ಹೋಗುಗಳ ವಿಚಾರವಷ್ಟೇ ಇಲ್ಲ; ನಾಡಿನ ಸರ್ವತೋಮುಖವಾದ ಅಭ್ಯುದಯಕ್ಕಾಗಿ ಮಾಡಿದ ಅನೇಕ ಸೂಚನೆಗಳಿಂದಲೇ ಅದು ತುಂಬಿಸಿಂತಿದೆ. ಸದ್ಯದ ಜೀವನದ ನಿಷ್ಠುರಪರಿಸ್ಥಿತಿಯಲ್ಲಿ, ಸಾಹಿತ್ಯಿಕನಾದವನು ಮಾಡಬೇಕಾದ ಕರ್ತವ್ಯಗಳೇನೆಂಬುದನ್ನು ರಾಯರ ಭಾಷಣ, ರಭಸದ ಮಾತುಗಳಿಂದ ತೋರಿಸಿಕೊಟ್ಟಿದೆ.

ಕವಿಗೋಷ್ಠಿ, ಕಾದಂಬರೀಗೋಷ್ಠಿ, ಪ್ರಬಂಧಗೋಷ್ಠಿ, ಬಾಲಸಾಹಿತ್ಯಗೋಷ್ಠಿ—ಇವೆಲ್ಲ ನಡೆದುವಾದರೂ, ಅದರಲ್ಲಿ ಆಮಂತ್ರಿರಾದ ಹಿರಿಯ ಸಾಹಿತ್ಯಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದ್ದಿತು. ಕಿರಿಯ ಸಾಹಿತ್ಯಿಕರಿಗೆ ತಮ್ಮ ಸಾಹಿತ್ಯಪ್ರದರ್ಶನ ಮಾಡುವುದಕ್ಕೆ ಅವಕಾಶವೇ ಇರಲಿಲ್ಲ. ಇದರಿಂದ ಕಿರಿಯ ಸಾಹಿತ್ಯಿಕರು ಅತೃಪ್ತರಾಗುವುದು ಸಹಜವೇ ಆಗಿದೆ. ಕಾರ್ಯಕ್ರಮವು ಪಟ್ಟಿಯನ್ನು ಮಾಡುವಾಗ, ತರುಣಸಾಹಿತ್ಯಿಕರಿಗಾಗಿ ಸಾಕಷ್ಟು ವೇಳೆಯನ್ನು ಕಲ್ಪಿಸಿಕೊಡಬೇಕೆಂಬುದು ಅದರ ನಿರ್ಮಾತೃಗಳಿಗೆ ಹೇಗೆ ಮರೆತುಹೋಯಿತೋ ಏನೋ!

ಇಂತಹ ಕೆಲವೊಂದು ದೋಷಗಳು ಕಂಡರೂ ಮಿಕ್ಕ ವಿಭಾಗದ ಗುಣಗಳು ಒಟ್ಟುಗೂಡಿ ದೋಷಗಳೆಲ್ಲನ್ನು ಮರೆಯಿಸಿಬಿಡುವ; ಸಮ್ಮೇಳನಕ್ಕೆ ಗೆಲವನ್ನು ತಂದುಕೊಟ್ಟುವು. ಸಾಹಿತ್ಯ ಸಮ್ಮೇಳನದ ಯಶಸ್ವಿಗಾಗಿ ಶ್ರಮಿಸಿದ ಉಡುಪಿಯ ಕಾರ್ಯಕರ್ತರಿಗೆಲ್ಲ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಬ್ರಿಟಿಷ್ ಮಹಾರಾಣಿಗೆ ಭಾರತದಲ್ಲಿ ಸುಸ್ವಾಗತ

ಕಾಲಪುರುಷನ ವಿಚಿತ್ರ ಘಟನೆಗಳಿಗಾಗಿ ಆಶ್ಚರ್ಯ ಪಡಬೇಕು ನಾವು. ಒಂದು ಕಾಲದಲ್ಲಿ ನಮ್ಮನ್ನು ಸಾರತಂತ್ರ್ಯದಲ್ಲಿ ಹತ್ತಿಕ್ಕಿ ಭಾರತವನ್ನು ಸಾರ್ವಭೌಮಿಕೆಯಿಂದ ಆಳುತ್ತಿದ್ದ ಬ್ರಿಟಿಷರು ನಮಗೆ ಜನ್ಮಶತ್ರುಗಳಾಗಿ ಕಾಣುತ್ತಿದ್ದರು. ಎಂತಲೇ ಒಂದು ಶತಮಾನದ ದೀರ್ಘಕಾಲದ ವರೆಗೂ ನಮ್ಮ ಜನ ಬ್ರಿಟಿಷರೊಂದಿಗೆ—ಅಸಹಾಯ ಪರಿಸ್ಥಿತಿಯಲ್ಲಿಯೇ—ಹೋರಾಡುತ್ತ ಬಂದರು. ಆಗ ಬ್ರಿಟನಿನ ರಾಜರೂ ರಾಜಕುಟುಂಬದವರೂ ನಮಗೆ ಶತ್ರುತ್ವದ ಸ್ಥಾನದಲ್ಲಿಯೆ ಇದ್ದರು. ಆದುದರಿಂದಲೇ ಹಿಂದಿನ ಕಾಲದಲ್ಲಿ ಬ್ರಿಟನಿನ ರಾಜಯುವರಾಜರೂ ರಾಜಕುಟುಂಬದವರೂ ಭಾರತಕ್ಕೆ ಬಂದರೆ, ಅವರಿಗೆ ಭಾರತದ ಪ್ರಜಾಗಣದ ಹಾರ್ದಿಕ ಸ್ವಾಗತ ಎಂದೂ ಮೊರೆಯುತ್ತರಲಿಲ್ಲ. ಇಷ್ಟೇ ಅಲ್ಲ, ಉಗ್ರರಾಜಕಾರಣಿಗಳು ಅಂತಹ ಸಂದರ್ಭಗಳಲ್ಲಿ ಬಹುಪ್ರಕಾರದ ಕಾರ್ಯಕ್ರಮಗಳನ್ನೂ ಏರ್ಪಡಿಸಿದುದುಂಟು.

ಬ್ರಿಟಿಷ್ ರಾಜಕಾರಣಿಗಳು ತುಂಬ ಬುದ್ಧಿಶಾಲಿಗಳು. ಭಾರತದಲ್ಲಿ ಉಂಟಾದ ನವಜಾಗೃತಿಯನ್ನು ಹತ್ತಿಕ್ಕಿ ಆಳಲಾರೆನೆಂಬ ಮನವರಿಕೆ ಅವರಿಗೆ ಎಂದು ಆಯಿತೋ, ಆಗ ಅವರುತಮ್ಮ ಧೋರಣವನ್ನು ಬದಲಿಸಿದರು. ಹಳೆಯ ಒಡೆತನದ ಭಾವನೆಯನ್ನು ಬಿಟ್ಟು, ಸ್ನೇಹದ ಮಾತುಗಳನ್ನೇ ಆಡುತ್ತ, ಸ್ನೇಹಭಾವದಲ್ಲಿಯೆ ನಮಗೆ ನಮ್ಮ ರಾಜ್ಯ ಸೂತ್ರಗಳನ್ನು ಒಪ್ಪಿಸಿ, ತಮ್ಮ ದೇಶಕ್ಕೆ ಮರಳಿದರು. ಈ ರಾಜ್ಯಕ್ರಾಂತಿ, ಜಗತ್ತಿನಲ್ಲಿಯೆ ಒಂದು ಅಪೂರ್ವ-ಅದ್ಭುತವಾಗಿ ಕಂಡಿತು. ಬ್ರಿಟಿಷರು ಈ ಸಂದರ್ಭದಲ್ಲಿ ಹುಂಬರಂತೆ ವರ್ತಿಸಿದ್ದರೆ, ಅವರಿಗೂ ಸುಖವಿರಲಿಲ್ಲ; ಭಾರತಕ್ಕೂ ಸುಖವಿರಲಿಲ್ಲ.

ಬ್ರಿಟಿಷರ ಮುನ್ನೋಟದ ಪರಿಣಾಮವಾಗಿ, ಭಾರತವು ರಕ್ತ-ರಹಿತವಾಗಿಯೆ ಸ್ವಾತಂತ್ರ್ಯವನ್ನು ಪಡೆಯಿತು. ಕೊನೆಯ ವ್ಹಾಯಿಸ್-ರಾಯರಾಗಿ ಬಂದಿದ್ದ ಲಾರ್ಡ್ ಮೌಂಟಬ್ಯಾಟನ್ ಅವರ ಸೌಜನ್ಯ-ಸೌಹಾರ್ದದ ನಡೆನಳಿ, ಅವರಿರುವಾಗಲೇ ಭಾರತೀಯರಲ್ಲಿ ವಾಸಿಸಿದ್ದ ಬ್ರಿಟಿಷರ ವಿಷಯಕವಾದ ಶತ್ರುತ್ವದ ಭಾವನೆಯನ್ನು ತೊಡೆದು-ಹಾಕಿತು. ಅದರ ಪರಿಣಾಮವಾಗಿ ಈಗ ಭಾರತ-ಬ್ರಿಟನ್ನಗಳು ಪರ-ಸ್ಪರ ಸ್ನೇಹಸಂಬಂಧವನ್ನು ಹೆಚ್ಚಿಸಿ ಮಿತ್ರರಾಷ್ಟ್ರವಾಗಿ ರೂಪುಗೊಂಡಿವೆ. ಹೀಗಾಗುವುದಕ್ಕೆ ಎರಡೂ ರಾಷ್ಟ್ರಗಳಲ್ಲಿ ನೆಲೆಗೊಂಡ ಉಚ್ಚಸಂಸ್ಕೃತಿ-ಗಳೇ ಮುಖ್ಯ ಕಾರಣ. ಭಾರತವ ಸಾಂಸ್ಕೃತಿಕ ಹಿರಿಮೆಯನ್ನು ಬ್ರಿಟಿಷರು ಬಹುಕಾಲದಿಂದಲೂ ಬಲ್ಲರು. ಪರಾಧೀನತೆಯ ಮೂಲಕ ಇದುವರೆಗೆ ಭಾರತೀಯ ಸಂಸ್ಕೃತಿಗೆ ಸೇಟಿಯ ಬೆಲೆ ಇರಲಿಲ್ಲ-ವಷ್ಟೇ !

ಇಂದು ಬ್ರಿಟನಿನ ಮಹಾರಾಣಿ ತಮ್ಮ ಪತಿಯೊಂದಿಗೆ ಭಾರ-ತಕ್ಕೆ ಬಂದಿದ್ದಾರೆ. ಪರಸ್ಪರರಲ್ಲಿ ಸ್ನೇಹಸಂಬಂಧವನ್ನು ಬೆಳೆಸುವುದೇ ಅವರ ಆಗಮನದ ಉದ್ದೇಶವಾಗಿದೆ. ಸ್ನೇಹ ಸಂದೇಶದೊಂದಿಗೆ ಬಂದ ಮಹಾರಾಣಿಗೆ ಭಾರತರಾಷ್ಟ್ರವು ತನ್ನ ಸ್ನೇಹಪೂರ್ಣ ಸ್ವಾಗತವನ್ನು ನೀಡಿದುದು ತುಂಬ ಸಮಯೋಚಿತವಾಗಿದೆ.

ಕಾಂಗೋದಲ್ಲಿ ಕೆರಳಿದ ರಾಜಕೀಯ

ಬಹುದಿನದ ಪರಾಧೀನತೆಯನ್ನು ಹರಿದೊಗೆದು, ಮೊನ್ನೆ ಮೊನ್ನೆಯೆ ಸ್ವತಂತ್ರವಾದ ಕಾಂಗೋ ರಾಜ್ಯದಲ್ಲಿ, ಅಧಿಕಾರದ ಮುರಾಶೆ ಒಂದು ಮಹಾಪ್ರಳಯವನ್ನೇ ಹಬ್ಬಿಸಿ ಬಿಟ್ಟಿದೆ. ಕಾಂಗೋದ ಸ್ವಾತಂತ್ರ್ಯಕ್ಕಾಗಿ ಎಲ್ಲ ಬಗೆಯಿಂದಲೂ ಹೋರಾಡಿದ ವೀರನಾಯಕ ಲುಮುಂಬಾ, ಇಂದು ಬದುಕಿ ಇದ್ದಾನೆಯೋ ಇಲ್ಲವೋ ಎಂಬಂತಹ ಪರಿಸ್ಥಿತಿಯಲ್ಲಿ ಇದ್ದಾನೆ. ಬದುಕಿ ಇದ್ದಾನೆ—ಎಂದು ಹೇಳಿದರೆ, ತಮ್ಮವರಿಂದಲೇ ಪೈಹುಳಿಯೆ ಎಬ್ಬುತಿಂದು ನೋವಿನಿಂದ ಹಾಸಿಗೆ ಹಿಡಿದಿದ್ದಾನೆ. ಆಧ್ಯಕ್ಷ ಮುಬಟೋವನದು ಒಂದು ಪಕ್ಷವಾದರೆ, ಸೇನಾಪತಿ ಶೋಂಖಿನದು ಇನ್ನೊಂದು ಪಕ್ಷ. ಕಾಂಗೊವಿನಲ್ಲಿ ಬೆಲ್ಜಿ-ಯಮ್ ಜನರು, ರಾಜಕೀಯ ಸೂತ್ರಗಳನ್ನು ಬಿಟ್ಟುಕೊಟ್ಟರೂನ-ರಾದರೂ, ತಮ್ಮ ಕುಟಿಲ ರಾಜಕೀಯ ತಂತ್ರಗಳನ್ನು ನಿಲ್ಲಿಸಿಲ್ಲ. ಸಂಸ್ಕೃತಿಯ ಬೆಂಬಲಸಿಲ್ಲದ ಕಾಂಗೋ ಜನರು, ಸಿಕ್ಕಿರುವ ಸ್ವಾತಂತ್ರ್ಯ-ವನ್ನು ಸಂರಕ್ಷಿಸಿಕೊಳ್ಳುವ ಆದರ್ಶದಿಂದ ಚ್ಯುತರಾಗಿ, ಅಧಿಕಾರಕ್ಕಾಗಿ ತಮ್ಮ ತಮ್ಮಲ್ಲಿಯೆ ಕಚ್ಚಾಟವನ್ನು ನಡೆಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ, ಇಲ್ಲಿಯೂ ಅಧಿಕಾರದ ಆಶೆಯಿಂದ ಸ್ವಯೂಥ ಕಲಹ ನಡೆಯಬಹುದೆಂದು ಅನೇಕರು ನಿರೀಕ್ಷಿಸುತ್ತಿದ್ದರು. ಭಾರತದ ಅಧಿಕಾರದ ಮೇಲೆ ದುರಾಶೆಯನ್ನು ಇರಿಸಿ ಕೊಂಡ ಬ್ರಿಟಿಷ್ ರಾಜಕಾರಣಿಗಳಲ್ಲಿ ಅನೇಕರೂ, ಈ ಸುಸಂದರ್ಭ-ವನ್ನು ನೋಡುವ ಸುಯೋಗ ತಮಗೆ ಬೇಗನೆ ಬಂದೇ ಬರುವುದೆಂಬ ತವಕದಲ್ಲಿದ್ದರು. ಆದರೆ ಅವರೆಲ್ಲರ ಆಶೆಗೆ ಭಾರತ ಬೆನ್ನೀರನ್ನು ಎರೆಯಿತು.

ಭಾರತವೂ ಮಿಕ್ಕ ರಾಷ್ಟ್ರಗಳಂತೆ ಕೇವಲ ಭೌತಿಕವಾಗಿಯೇ ಆಗಿದ್ದರೆ, ಅವರ ನಿರೀಕ್ಷೆ ಖಂಡಿತವಾಗಿ ಸತ್ಯರೂಪದಲ್ಲಿ ಪರಿಣಮಿಸ ಬಹುದಾಗಿತ್ತು. ಏಕೆಂದರೆ, ಭಾರತದಲ್ಲಿ ಅನೇಕ ಭಾಷೆಯ ಜನರು; ಅನೇಕ ಜಾತಿ-ಪಂಥಗಳ ಅನುಯಾಯಿಗಳು. ಅಧಿಕಾರದ ಭೂತ ಬಡಿದುಕೊಂಡರೆ ಇವರಲ್ಲಿ ಪ್ರಳಯ ಪ್ರಸಂಗ ಒದಗುವುದು ನಿಶ್ಚಯ-ವೆಂದು ಭಾವಿಸಿದ್ದರು.

ಆದರೆ ಭಾರತವು ಭೌತಿಕಕ್ಕಿಂತಲೂ ಅಧ್ಯಾತ್ಮಕ್ಕೆ ಹೆಚ್ಚು ಪ್ರಾಧಾನ್ಯವಿತ್ತ ರಾಷ್ಟ್ರವು. ಇಲ್ಲಿ ಹೊರಗಣ್ಣಿಗೆ ವೈವಿಧ್ಯ ಕಂಡು-ಬರುತ್ತಿದ್ದರೂ, ಭಾರತೀಯರೆಲ್ಲರ ಜೀವನದ ಆದರ್ಶ ಒಂದೆ ಬಗೆಯ-ದಾಗಿದೆ. ಇಲ್ಲಿ ಮಿಕ್ಕೆಲ್ಲವುಗಳಿಗಿಂತ ಮಾನವತೆಗೆ ಹೆಚ್ಚಿನ ಬೆಲೆಯಿದೆ. ಮಾನವತೆಯ ಪರಿಪೋಷಣೆಯ ಆದರ್ಶಕ್ಕಾಗಿ ಇವರು ಎಂತಹ ತ್ಯಾಗಕ್ಕೂ ಸಿದ್ಧರಾಗುವರು. ಇಂತಹ ಪೂರ್ವಪರಂಪರೆಯ ಸಾಂಸ್ಕೃತಿಕ ಬಲದ ಕಾರಣದಿಂದಲೇ, ಸ್ವಾತಂತ್ರ್ಯೋತ್ತರದಲ್ಲಿ ಭಾರತವು ಆಂತ-ರಿಕ ಶಾಂತಿಯನ್ನು ಕಾಪಾಡಿಕೊಂಡುದಿಷ್ಟೇ ಅಲ್ಲ; ಲೋಕಕ್ಕೇ ಶಾಂತಿ ಸಮಾಧಾನ ಜೀವನದ ಪಾಠವನ್ನು ಕಲಿಸತೊಡಗಿತು. ಇದನ್ನು ಕಂಡ ಅನೇಕ ಭಾರವಿರೋಧಿಗಳು ಆಶ್ಚರ್ಯಪಟ್ಟರು; ಮತ್ಸರ-ದ್ವೇಷಗಳಿಂದ ಒಳಗೊಳಗೇ ಉರಿದುಬಿದ್ದರು.

ಈಗ ಕಾಂಗೋವಲ್ಲಿ ಆಂತರಿಕ ಶಾಂತಿಯನ್ನು ಸ್ಥಾಪಿಸಲು ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟರೆ, ಅದು ಅತ್ಯಲ್ಪ ಅವಧಿಯಲ್ಲಿಯೆ ಅಲ್ಲಿ ಶಾಂತಿಯನ್ನು ನೆಲಸಿ ತೋರಿಸಬಲ್ಲದು. ಲೋಕಕಲ್ಯಾಣವನ್ನೆ ಗುರಿಯನ್ನಾಗಿ ಇರಿಸಿಕೊಂಡಿರುವ ಭಾರತಕ್ಕೆ ಯಾವ ಸ್ವಾರ್ಥ ಸಾಧ-ನೆಯ ಆಶೆಯೂ ಇಲ್ಲ. ಸತ್ಯಪಕ್ಷಪಾತಕ್ಕಾಗಿ ಅದು ಯಾರ ದಾಕ್ಷಿ-ಣ್ಯದ ಬಲೆಯಲ್ಲಿಯೂ ಸಿಕ್ಕಿಕೊಳ್ಳುವಂತಿಲ್ಲ. ಆದರೆ ಕೆಲವು ಸ್ವಾರ್ಥ ಸಾಧಕ ರಾಷ್ಟ್ರಗಳಿಗೆ ಈ ಮಾತು ಬೇಕಾಗಿಲ್ಲ. ಎಂತಲೇ ಸಂಯುಕ್ತ ರಾಷ್ಟ್ರಸಂಘವೂ ಅಲ್ಲಿ ಒಂದು ನಾಟಕವನ್ನೇ ನಡೆಸಿದೆ. ಪಾಪ, ಇಷ್ಟೆಲ್ಲ ಮಾಟಗಾರರ ಕೂಟದಿಂದ ಕಾಂಗೋ, ತನ್ನ ಪೈರುನ್ನು ತಾನೇ ನುಗ್ಗು ಮಾಡಿಕೊಳ್ಳುತ್ತಲಿದೆ. ಆತ್ಮಜಾಗೃತಿಯುಂಟಾದರೆಯೆ ಅದು ಒಳ್ಳೆಯ ಭವಿಷ್ಯವನ್ನು ಕಾಣಬಲ್ಲದು.

◀ ಗೋಮುಖ ವ್ಯಾಘ್ರ ▶

(ಸಣ್ಣಕತೆ)

ಲೇ: ಶ್ರೀ. ರಾಘವ ಜೆ. ಶೆಟ್ಟಿ, ಬಿ. ಎ. ಮುಂಬಯಿ.

ಇಂದು ಸಮಾಜ, ಡಾಂಭಿಕ ಸಂಭಾವಿತರಿಗೇ ಹೆಚ್ಚು ಬೆಲೆ ಕೊಡುತ್ತದೆ.
ಇಂತಹ ಡಾಂಭಿಕನಿಗೆ ವಾಚಾಳಿತನವೊಂದಿದ್ದರಾಯಿತು; ಅವನ ಬೆಲೆ ಇನ್ನೂ ಹೆಚ್ಚು.
ಆದರೆ, ಆತ ತೆರೆಮರೆಯಲ್ಲಿ ದಾನವತೆಯನ್ನು ನಡೆಸಿದ್ದಾನೆಂಬುದನ್ನು ಯಾರೂ ಅರಿಯರು; ಅರಿತರೂ ಸುಮ್ಮಗಿರುವರು.
ಇಂತಹ ಗೋಮುಖ ವ್ಯಾಘ್ರಗಳು, ಸಮಾಜದಲ್ಲಿಯ ಎಷ್ಟೊಂದು ಸಾಧುಗೋಗಳನ್ನು ಕಬಳಿಸುವುವೊ!

ಅಯ್ಯೋ ಜಾಣ!

ಕೈ ಕೊಸರಿದಳು. ಆದರೆ ನನ್ನ ಬಲವಾದ ಹಿಡಿತದಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಕ್ಷಣ ಸಾವಕಾಶವಾಗುತ್ತಿದ್ದರೆ ಅವಳು ಹಾಳುಬಾವಿಗೆ ಬೀಳುತ್ತಿದ್ದಳು. ಅವಳ ದೇಹ ಕಂಪಿಸುತ್ತಿತ್ತು. ನಾನು ಕೇಳಿದೆ 'ನೀನಾರು'?

ಉತ್ತರವಿಲ್ಲ.

ಇದೇಕೆ ಹೀಗೆ?

ಉತ್ತರವಿಲ್ಲ.

ಮನೆ ಎಲ್ಲಿ?

ಉತ್ತರವಿಲ್ಲ.

'ಸಂಬಂಧಿಕರಾರು?'

ಉತ್ತರವಿಲ್ಲ.

'ಮಾತು ಬರುವದಿಲ್ಲವೆ?'

'ನನ್ನನ್ನು ನನ್ನ ಪಾಡಿಗೆ ಬಿಡಿ.' ದನಿ ನಡುಗುತ್ತಿತ್ತು. ಪುನಃ ಕೈ ಕೊಸರಿಕೊಳ್ಳುವ ಪ್ರಯತ್ನ. ಮತ್ತೆ ವಿಫಲತೆ; ಅಸಹಾಯಕತೆ; ದೃಷ್ಟಿ ನೆಲಕ್ಕೆ; ಕಣ್ಣಲ್ಲಿ ನೀರು ಹರಿದಿರಹೇಕು ದೇಹ ತರತರನೆ ನಡುಗುತ್ತಿತ್ತು. ನಾನು ತೋಳನ್ನು ಹಿಡಿದ ಹಿಡಿತ ಸಡಿಲಿಸಲೇ ಇಲ್ಲ. ನನ್ನ ಪ್ರಶ್ನೆಗಳೊಂದಕ್ಕೂ ಅವಳಿಂದ ಉತ್ತರವಿಲ್ಲ. ಪುನಃ ಪ್ರಶ್ನೆ, ಪುನಃ ಮೌನ, ಪುನಃ ಕೈ ಬಿಡಿಸಿಕೊಳ್ಳಲು ಪ್ರಯತ್ನ, ಪುನಃ ವಿಫಲತೆ; ಪುನಃ ಅಸಹಾಯಕತೆ.

ಹರಡಿದೆ ಕರಿಗತ್ತಲೆ, ಕೈಯತ್ತಿ ಗಡಿಯಾರ ನೋಡಿದೆ. ಗಂಟೆ ಒಂಭತ್ತು. ಕ್ರೂರ ಮೃಗಗಳು ಆ ಕಾಡಿನಲ್ಲಿ ಮನೆ ಮಾಡಿರುವುದಿಲ್ಲವಾದರೂ, ದಟ್ಟ ಬೆಳೆದ ಕಾಡು—ಕರಿಯ ಕತ್ತಲೆಗೆ ಮತ್ತಷ್ಟು ಕರಾಳತೆಯನ್ನು ಉಂಟು ಮಾಡಿತ್ತು. 'ಜೀರ್ ಜೀರ್' ಟ್ರೀ!! ಟ್ರೀ!! ಲ್ಲೌ ಲ್ಲೌ?' ಎನ್ನುವ ನುಸಿ, ಹುಳು, ಕಪ್ಪೆಗಳ ರಾಗದ ಕೂಗಾಟ, ಕತ್ತಲೆಯ ಕರಾಳತೆಗೆ, ಕಾಡಿನ ನಿಬಿಡತೆಗೆ ಮತ್ತಷ್ಟು ಭಯಾನಕತೆಯನ್ನು ತುಂಬಿಸುತ್ತಿತ್ತು. ಮತ್ತ ಮುರಗಿದ-ಸ್ಪೈದೆ-ಸ್ಪೈದರುಗಳು ಮೇಲಿನ ಆಕಾರ ಸರಿಯಾಗಿ ಕಾಣದು. ಬದಿಯಲ್ಲಿ ಹಾಳುಬಾವಿ. ನಾಲ್ಕಾರು ಜಿಳು ಆಳವಿರಬಹುದು. ಮುಳುಗಲಿಕ್ಕೆ ಬೇಕಾದಷ್ಟು ನೀರೂ ಇತ್ತು. ಮೌನ ಮುರಿದು ಕೇಳಿದೆ:

'ಈ ಕಲ್ಲೀಕೆ?'

ಮೌನ.

'ಈ ಹಗ್ಗವೇಕೆ?'

ಮೌನ.

'ಬಾ ನಡಿ ಹೋಗೋಣ'

'ಮೌನ.'

'ಬರುವೆಯಾ ನನ್ನೊಡನೆ?'

ಮೌನ.

'ನಿನ್ನ ಮನೆ ಹತ್ತಿರ ಇದೆಯೇ?'

ಮೌನ.

'ನಿನ್ನ ಮನೆಗೆ ಹೋಗೋಣ ನಡೆ'

ಮೌನ.

ಸಮಯ ತಿಳಿಯೋಣಾಂದ್ರೆ ಮಾತಿಲ್ಲ. ಭಾವ ಅರಿಯೋಣಾಂದ್ರೆ ಮುಖ ಎತ್ತುವುದಿಲ್ಲ. ಬಲತ್ಕಾರದಿಂದ ಗದ್ದ ಹಿಡಿದು ಮುಖ ಮೇಲಕ್ಕೆ ಎತ್ತೋಣಾಂದ್ರೆ ರಾತ್ರಿಯ ಕಾಲ, ಹರೆಯದ ಹೆಣ್ಣು, ಮನಸ್ಸು ಹಿಂಜರೆಯಿತು. ಇನ್ನೇನು? ಇನ್ನೇನು? ಬಿಟ್ಟು ಹೋಗುವುದೇ? ಅದಾಗದು. ಕರಕೊಂಡು ಹೋಗೋಣವೆ? ಹೇಗೆ? ಎಲ್ಲಿಗೆ? ಏನೆಂದು?

ಕ್ಷಣಕಾಲ ನನ್ನ ತಲೆಯಲ್ಲಿ ಯೋಚನೆಯ ಕುಣಿದಾಟ, ಯೋಜನೆಯ ಹೆಣೆದಾಟ, ಕರ್ತವ್ಯದ ತಾಕಲಾಟ ನಡೆಯಿತು: ಬಿಟ್ಟು ಹೋಗಲಾಗದು. ಕಾಡಿನ ಮಧ್ಯೆ, ಒಬ್ಬಳೆ ಹುಡುಗಿ, ಅದರಲ್ಲಿಯೂ ಬಾವಿಗೆ ಹಾರಿ ಪ್ರಾಣ ಕಳಕೊಳ್ಳಲು ಬಂದವಳು! ಇನ್ನು ಇವಳನ್ನು ಕರೆದರೆ ಬರುವುದಿಲ್ಲ. ಒಂದೊಮ್ಮೆಗೆ ಬಂದರೆ ಕರೆದುಕೊಂಡು ಹೋಗಬಹುದೇ? ಎಲ್ಲಿಗೆ? ಹೇಗೆ ಕರೆದುಕೊಂಡು ಹೋಗುವುದು? ಗುರುತು ಪರಿಚಯವಿಲ್ಲದ ಪ್ರಾಯಕ್ಕೆ ಬಂದ ಒಂದು ಹೆಣ್ಣನ್ನು ಮನೆಗೆ ಕರಕೊಂಡು ಹೋಗಬಹುದೆ? ಹೇಗೆ? ಏನೆಂದು? ಹೀಗೆ ಪ್ರಶ್ನೋತ್ತರಗಳು ತಾಕಲಾಟವಾಗಿ, ಅಂತೂ ಇವಳು ಬಂದರೆ ಕರೆದುಕೊಂಡು ಹೋಗುವುದು ಎಂದು. ಬರದಿದ್ದರೆ? ಬರದಿದ್ದರೂ ಕರಕೊಂಡು ಹೋಗುವುದು. ಹೇಗೆ? ಮತ್ತೇನು, ಬಿಟ್ಟು ಹೋಗುವುದೇ? ಇಲ್ಲ ಕರೆದುಕೊಂಡು ಹೋಗಲೇಬೇಕು.

ಹೆಚ್ಚಿನದು ೦೯೬೧

ಮುಂದೆ

ಹೇಗೆ ? ಹೇಗಾದರೂ.

' ಹೂಂ ಹೋಗೋಣ '

ಮಾತಿಲ್ಲ. ಅಲುಗಾಡುವುದಿಲ್ಲ.

' ಹೂಂ. ಹೋಗೋಣ ನಡೆ ! '

ಆಗಲೂ ಮಾತಿಲ್ಲ.

ಬೆನ್ನ ಮೇಲೆ ಕೈ ಇಟ್ಟೆ. " ಹೂಂ ಹೋಗೋಣ " ತುಸು ದೂಡಿದೆ. ಭಾರವಾದ ಕಾಲುಗಳನ್ನು ಮೆಲ್ಲಮೆಲ್ಲನೆತ್ತುತ್ತ ಒಂದೊಂದೇ ಹೆಜ್ಜೆಯನ್ನು ಲೆಕ್ಕ ಮಾಡುತ್ತ ಮುಂದಿಟ್ಟಳು. ನಾನು ಹಿಂದಿನಿಂದ ಬೆನ್ನ ಮೇಲೆ ಕೈ ಇಟ್ಟದ್ದನ್ನು ತೆಗೆಯಲೇ ಇಲ್ಲ. ಸ್ವಲ್ಪ ಮುಂದೆ ಹೋದ ಮೇಲೆ, ಇನ್ನು ನನ್ನನ್ನು ಹಿಂಬಾಲಿಸುತ್ತಾಳೆ ಎಂದು ನನಗೆ ಖಚಿತವಾಯಿತು. ನಾನು ಮುಂದೆ ಮುಂದೆ ನಡೆದೆ. ಅವಳು ನನ್ನನ್ನು ಅನುಸರಿಸಿದಳು. ಸಮ್ಮ ಮನೆಗೆ ಅಲ್ಲಿಂದ ಒಂದು ಮೈಲಾಗ-ಬಹುದು. ಮನೆ ಸೇರಲು ಅರ್ಧತ್ತು ನಿಮಿಷಗಳು ಬೇಕಾದುವು. ಮೌನದಿಂದಲೇ ನಾವು ದಾರಿ ನಡೆದಿದ್ದೆವು.

ಮನೆಯಲ್ಲಿ ದೀಪ ಉರಿಯುತ್ತಿತ್ತು. ನಾಯಿ ಬೊಗಳುತ್ತ ಅಂಗಳಕ್ಕಿಳಿಯಿತು. ನನ್ನನ್ನು ಮೂಸಿ ನೋಡಿ, ಪರಿಚಯ ತಿಳಿದು ಬಾಲ ಬೀಸುತ್ತ ನನಗೊಂದು ಸುತ್ತು ಬಂದು, ನನ್ನೊಡನಿದ್ದ ಆ ಅಪರಿಚಿತ ಹೆಣ್ಣನ್ನು ನೋಡಲು ಪ್ರಾರಂಭಿಸಿತು. ತಂಗಿ ಸುಲೋಚನೆ ಪಠ್ಯಪುಸ್ತಕದ ಪದ್ಯದ ಚರಣವನ್ನು ರಾಗವಾಗಿ ಹಾಡುತ್ತಿದ್ದಳು. ' ಲಟ್ ಲಟ್ ' ಎಂದು ಮೆಟ್ಟಿನ ಶಬ್ದ ಮಾಡುತ್ತ ಮನೆಯ ಮೆಟ್ಟಿ-ಲನ್ನೇರುವ ನನ್ನನ್ನು ಕಂಡು ತಂಗಿಯ ಮುಖ ಅರಳಿತು. ಆ ಹೆಣ್ಣು ಮೆಟ್ಟಿಲೇರದೆ ಅಂಗಳದಲ್ಲೆ ನಿಂತಿತ್ತು.

' ಮೇಲೆ ಬಾ'

ನಾನು ಮೆಲ್ಲಗೆ ಹೇಳಿದೆ. 'ನನ್ನ ತಂಗಿ "ಅಮ್ಮಾ ಅತ್ತಿಗೆ ಬಂದರು " ಎನ್ನುತ್ತ ಓದುವ ಪುಸ್ತಕವನ್ನು ಬಿಸುಟು ನಲಿಯುತ್ತ ನಗುತ್ತ, ಓಡಿಬಂದಳು. ಆ ಅಪರಿಚಿತ ಹೆಣ್ಣನ್ನು ಕಂಡು ಅಲ್ಲೇ ಸ್ತಬ್ಧಳಾದಳು.

ಒಂದು ಗಳಿಗೆ ಮೌನ. ಆ ಕತ್ತಲಿಂಪಲ್ಲಿ ಒಂದು ಕ್ಷಣ ಎಲ್ಲವೂ ಮೌನ.

'ಅಂ....ಮೇಲೆ ಬಾ' ನಾನು ಹೇಳಿದೆ.

ತಂಗಿ ಸುಲೋಚನೆ ನನ್ನನ್ನೊಮ್ಮೆ ಆ ಹೆಣ್ಣನ್ನೊಮ್ಮೆ ಆತುರಾ-ಶ್ಚರ್ಯದಿಂದ ನೋಡುತ್ತಿದ್ದಾಳೆ ಮಾತಿಲ್ಲ. ಮೌನ. ತಂಗಿಯ ಕಣ್ಣು-ಗಳು ಪ್ರಶ್ನಿಸುತ್ತಿವೆ:

ಇದಾರಣ್ಣ ?

ನಾನು ಎರಡು ದಿನದ ಹಿಂದೆ, ತವರ್ಮನೆಯಿಂದ ನನ್ನವಳನ್ನು ಕರೆತರಲು ಹೋಗಿದ್ದೆ. ಅವಳ ತಂದೆಗೆ ಸೌಖ್ಯವಿರಲಿಲ್ಲ. 'ಎರಡು ದಿನ ಬಿಟ್ಟು ಬರುತ್ತೇನೆ. ತಂದೆಯವರಿಗೆ ಸ್ವಲ್ಪ ಗುಣವಾಗಲಿ' ಎಂದಳು ನನ್ನವಳು. ನಾನೊಬ್ಬನೆ ಹಿಂದೆ ಬರಬೇಕಾಯಿತು. ಬರುವಾಗ ಸ್ವಲ್ಪ ರಾತ್ರಿಯಾಯಿತು. ದಾರಿ ಕಾಡಿನಿಂದ ಹಾದುಹೋಗುತ್ತದೆ; ಕಾಡು ಸ್ವಲ್ಪ ದಟ್ಟವಾಗಿ ಬೆಳೆದಿದೆ. ವಿದ್ಯುತ್ ಕೈದೀಪ ಕೈಯಲ್ಲಿತ್ತು. ನನಗೆ ಹೆದರಿಕೆ ಸ್ವಲ್ಪ ಕಡಿಮೆ. ಅದರಲ್ಲಿಯೂ ಆ ಕಾಡಿನ ಮಧ್ಯದ ಕಾಲ್ದಾರಿ ಎಂದರೆ ನನಗೆ ಚಿರಪರಿಚಿತ. ನಿತ್ಯ ನಾಲ್ಕೈದು ಸಲ ನಡೆವ ದಾರಿ ಅದು. ವಿದ್ಯುತ್ ಕೈದೀಪ ಮಿನುಗಿಸುತ್ತ ವೇಗವಾಗಿ ಬರುತ್ತಿದ್ದೆ. ದೂರದಲ್ಲಿ ಒಂದು ನೆರಳು ಹಾಯ್ದಂತೆ ಕಂಡಿತು. ಆ ಕಡೆ ಮತ್ತೊಮ್ಮೆ ದೀಪದ ಬೆಳಕು ಹಾಕಿದೆ. ನೆರಳು ಸ್ಪಷ್ಟವಾಗಿ ಕಂಡಿತು. ಅಲ್ಲಿಯೆ ಒಂದು ಹಾಳು ಬಾವಿ ಇತ್ತು. ಅದರ ಸಮೀಪವೆ ನೆರಳು ಕಂಡಿತು. ನಾನು ಅಲ್ಲಿಯೆ ನಿಂತೆ. ಅದು ನೆರಳಲ್ಲ. ಯಾರೋ ಮನುಷ್ಯರು; ಅತ್ತಿತ್ತ ಚಲಿಸುವಂತೆ ಕಂಡಿತು. ಯಾರದು ?

ಉತ್ತರ ಬರಲಿಲ್ಲ.

ಯಾರದು? ಗದರಿಸುವ ದನಿಯಲ್ಲಿ ಕೇಳಿದೆ. ಈಗಲೂ ಉತ್ತರ-ವಿಲ್ಲ. ಬಗ್ಗಿದಂತೆ ಕಂಡಿತು. ನಾನು ಹಾಗೆ ಕೇಳುತ್ತಿದ್ದಂತೆ ಹಾಳು ಬಾವಿಯ ಹತ್ತಿರಕ್ಕೆ ಬಂದೆ. ವಿದ್ಯುತ್ ಕೈದೀಪದ ಬೆಳಕಿನಲ್ಲಿ ಸ್ಪಷ್ಟ ವಾಗಿ ಕಂಡಿತು. ನಾನೊಮ್ಮೆ ಸ್ತಬ್ಧನಾದೆ. ಎದೆ ಡಬ್ ಡಬ್ ಹೊಡೆಯ ಹತ್ತಿತು. ಹಣೆ ಬೆವರಿತು.

ಒಂದು ಹೆಣ್ಣು ಹಗ್ಗದಿಂದ ಒಂದು ಕಲ್ಲನ್ನು ಕಟ್ಟುತ್ತಿದ್ದಳು. ನಾನು ಅಲ್ಲಿಗೆ ಬಂದುದನ್ನು ಕಂಡು ಅವಸರ ಅವಸರವಾಗಿ ಕಟ್ಟಲು ಪ್ರಾರಂಭಿಸಿದಳು. ಇದನ್ನು ಕಂಡ ನಾನು ಕ್ಷಣಕಾಲ ಮತಿ-ವಿಮೂಢ-ನಾದೆ. ಇವಳು ನಿಜವಾಗಿ ಹೆಣ್ಣೆ ? ಹಿರಿಯರು ಹೇಳುವ ಮೋಹಿನಿ-ಯರ ಕತೆ ಕೇಳಿದ್ದೆ, ಹಾಗೇನಾದರೂ....ಇಲ್ಲ. ಇವಳು ಮೋಹಿನಿ-ಯಾಗಿರಲಿಕ್ಕಿಲ್ಲ. ಇವಳ ಮುಖವಲ್ಲಿ ಮೋಹಿನಿಯ ಮೋಹಕತೆ ಕಾಣಲಿಲ್ಲ. ಹೆದರಿದ ಹೆಣ್ಣಿನಳು. ಇವಳು ಕಟ್ಟಿದ ಜಡೆ ಬೆನ್ನಮೇಲೆ ಬಿದ್ದಿದೆ. ಮೋಹಿನಿಯು ತಲೆಕೂದಲನ್ನು ಬಂಧನವಿಲ್ಲದೆ ಬಿಟ್ಟಿರು-ತ್ತಾಳೆ ಎಂಬುದನ್ನು ಕೇಳಿದ್ದೆ. ಇವಳಾರು ?

ನಾನು ಹತ್ತಿರ ನಿಂತುದನ್ನು ಕಂಡು ಕಲ್ಲು-ಹಗ್ಗಗಳನ್ನು ಅಲ್ಲಿಯೆ ಬಿಟ್ಟು ಬಿಟ್ಟಳು. ನನ್ನನ್ನೊಮ್ಮೆ ತಲೆಯೆತ್ತಿ ನೋಡಿದಳು. ಎದ್ದು ನಿಂತಳು. ಒಂದು ಹೆಜ್ಜೆ ಮುಂದೆ ಸರಿದಳು ನಾನು ನಿಂತಲ್ಲೇ ನಿಂತಿದ್ದೆ. ನನಗೆ ಧಕ್ಕನೆ ಎಲ್ಲ ಅರ್ಥವಾಯಿತು ಮುಂದಕ್ಕೆ ಹಾರಿ ಅವಳ ತೋಳನ್ನು ಬಲವಾಗಿ ಹಿಡಿದೆ. ಬಾವಿಗೆ ಬಿದ್ದು ಸಾಯು-ವವಳನ್ನು ಒತ್ತಾಯದಿಂದ ಮನೆಗೆ ಕರೆತಂದೆ.

ಬೋದುಗೆಯ ಕಂಬ, ಮನೆಯ ಗೋಡೆ, ಉರಿವ ದೀಪ, ನನ್ನ ನಾಯಿ, ದೀಪದ ಬೆಳಕು, ರಾತ್ರಿಯ ಕತ್ತಲು, ಎಲ್ಲವೂ ಕೇಳುತ್ತಿವೆ, ತಂಗಿ ಕೇಳುವ ಪ್ರಶ್ನೆಯನ್ನೆ :

' ಇವಳಾರು ? '

ಅಮ್ಮ ಒಳಗಿನಿಂದ ಅವಳ ಪ್ರೀತಿಯ ಸೊಸೆಯನ್ನು ಸ್ವಾಗತಿ-ಸಲು ಬಂದರು. ನನ್ನ ಮಡದಿ ಸೀತಾ ನನಗೆ ಸಲುಮೆಯ ನಲ್ಲೆ, ನನ್ನ ತಂಗಿಗೆ ಪ್ರೀತಿಯ ಅತ್ತಿಗೆ, ನನ್ನ ಅಮ್ಮನಿಗೆ ವಾತ್ಸಲ್ಯದ ಸೊಸೆ-ಯಾಗಿದ್ದಾಳೆ. ತನ್ನ ಪ್ರೀತಿಯ ಸೊಸೆಯನ್ನು ಕಾಣಲು ಅತುರದಿಂದ ಹೊರಗೆ ಬಂದ ಅಮ್ಮ, ಅಚ್ಚರಿಯಿಂದ ಅಲ್ಲೇ ನಿಂತುಬಿಟ್ಟರು. ಮೆಜ್ಜೆ ಆಂಗಳದಿಂದ ಎರಡು ಮೆಟ್ಟಿಲೇರಿ ಜಾವಡಿಗೆ ಬಂದಳು ಆ ಅಪರಿಚಿತ ಹೆಣ್ಣು.

ನನ್ನವಳು, ನನ್ನ ತಾಯಿಯ ಪ್ರೀತಿಯ ಸೊಸೆ—ಬರುತಿದ್ದರೆ ಅತ್ತೆಯ ಕಾಲು ಹಿಡಿಯುತ್ತಿದ್ದಳು. ಅತ್ತೆ ಸೊಸೆಯನ್ನು ಎತ್ತಿ ಆನಂದದಿಂದ ಅಪ್ಪಿ ಹಣೆಗೆ ಮುದ್ದಿಡುತ್ತಿದ್ದರು. 'ಅತ್ತಿಗೆ! ಅತ್ತಿಗೆ!' ಎನ್ನುತ್ತ ನನ್ನ ತಂಗಿ ಸುಲೋಚನೆ ನನ್ನವಳ ಸೆರಗು ಹಿಡಿದು 'ಅಣ್ಣ ನೀವಿಲ್ಲದ ಊಟಾನೆ ಸರಿಯಾಗಿ ಮಾಡೊಲ್ಲತ್ತಿಗೆ. ನೋಡಿ ಅಣ್ಣ ಎಷ್ಟು ಸಣ್ಣದಾಗಿದ್ದಾರೆ. ಅಲ್ಲವೆ ಅಣ್ಣ!' ಎನ್ನುತ್ತ ಕಣ್ಣು ಮಿಟುಕಿಸಿ ನಗುತ್ತ ನಲಿಯುತ್ತಿದ್ದಳು.

'ಕಳ್ಳಿ ಬಾಯಿ ಮುಚ್ಚು' ಎನ್ನುತ್ತ ನನ್ನವಳು ನನ್ನೆಡೆಗೊಮ್ಮೆ ಓರೆ ನೋಟ ಬೀರಿ ನಕ್ಕು ಸುಲೋಚನೆಯ ಕೆನ್ನೆಗೆ ಚಿವುಟುತ್ತಿದ್ದಳು.

ಅಮ್ಮ ನಿಂತಲ್ಲಿಂದ ನಿಂತಿದ್ದಾರೆ. ತಂಗಿ ಕದಲಲಿಲ್ಲ. ಬಂದ ಅಪರಿಚಿತ ಹೆಣ್ಣು ಆಸಾಕ್ಯಾಗಿ ನಿಂತಿದ್ದಾಳೆ. ಉರಿವ ಸೊಡರಿನ ಕುಡಿ ತಕ ತಕನೆ ನಲಿಯುತ್ತಿತ್ತು. ಜೀವಿಗಳ ಚಾಂಚಲ್ಯತೆಯ ಭಾವನೆಯನ್ನು ಪ್ರತಿನಿಧೀಕರಿಸುತ್ತಿರಬೇಕದು.

ಅಮ್ಮನ ಮೌನ, ತಂಗಿಯ ಸ್ತಬ್ಧತೆ, ನಿಂತ ನೆಲ, ಮನೆಯ ಬಾಗಿಲು ಎಲ್ಲವೂ ಕೇಳುತ್ತಿವೆ: 'ಯಾರಿವಳು?'

ನಾನು ಮೌನವನ್ನು ಮುರಿದು 'ಅಮ್ಮಾ ಇವಳನ್ನು ಒಳಗೆ ಕರೆದುಕೊಂಡು ಹೋಗಿ' ಅಂದೆ.

ಅಮ್ಮ ನನ್ನನ್ನೇ ನೋಡುತ್ತಿದ್ದಾರೆ.

'ಸುಲೋಚನಾ, ಇವಳನ್ನು ಒಳಗೆ ಕರೆದುಕೊಂಡು ಹೋಗಮ್ಮಾ!'

ಸುಲೋಚನೆ, 'ಬನ್ನಿ' ಎನ್ನುತ್ತ ಆ ಅಪರಿಚಿತ ಹೆಣ್ಣಿನ ಕೈ ಹಿಡಿದಳು. ಅವಳ ಕಣ್ಣಿನಿಂದ ಜಾರಿದ ನೀರ ಬಿಂದುಗಳೆರಡು ಕೆನ್ನೆಯಲ್ಲಿ ಹರಿದು ನೆಲಕ್ಕೆ ಬಿದ್ದುವು. ತೊಳೆದ ಸಿಮೆಂಟಿನ ನೆಲದಲ್ಲಿ ಬಿದ್ದ ಬಿಂದುಗಳು, ದೀಪದ ಬೆಳಕಿಗೆ ಹೊಳೆಯುತ್ತಿದ್ದವು. ಕಣ್ಣೀರಲ್ಲಿ ಬರೆದ ಅಕ್ಷರಗಳನ್ನು ಓದಲು ಬರುವವರು, ಆ ನೀರ ಬಿಂದುಗಳಲ್ಲಿ ಅವಳ ಜೀವನದ ದಾರುಣ ಕಥೆಯನ್ನು ಓದಬಹುದಿತ್ತು.

ಹೆಣ್ಣು ತಂಗಿಯೊಡನೆ ಒಳಗೆ ಹೋದಳು. ನಮ್ಮಮ್ಮ ಗುಟ್ಟಿನಲ್ಲಿ 'ಇವಳಾರು?' ಎಂದರು. 'ಯಾರೆಂದು ಗೊತ್ತಿಲ್ಲ. ನಾನು ಬರುತ್ತಿದ್ದೆ ಆಗ ಆ ಕಾಡಿನ ಮಧ್ಯದ ತಾಳು ಬಾವಿಗೆ ಕಲ್ಲು ಕಟ್ಟಿಕೊಂಡು ಬೀಳುವುದರಲ್ಲಿದ್ದಳು. ತಡೆದು ಇಲ್ಲಿಗೆ ಕರೆತಂದೆ. ನಾನು ಬರುವುದು ಸ್ವಲ್ಪತಡವಾಗುತ್ತಿದ್ದರೆ, ಯಾರಿಗೂ ಗೊತ್ತಿಲ್ಲದೆ ಸಾಯುತ್ತಿದ್ದಳೋ ಏನೋ. ಯಾರು ಆ ಬಾವಿಯ ಹತ್ತಿರ ಹೋಗುತ್ತಾರೆ? ಕೊಳೆತು ವಾಸನೆ ಬಂದ ಮೇಲೆಯೆ ತಿಳಿಯಬೇಕಿತ್ತು ಏನೊ' ಎಂದೆ.

'ಯಾರಂದು ನೀನು ಕೇಳಲಿಲ್ಲವೆ?'

'ಅವಳು ಹೇಳಬೇಕಲ್ಲ, ನಾನು ಬಹಳ ಕೇಳಿದೆ. ಅವಳು ಬಾಯಿ ಬಿಡಲೇ ಇಲ್ಲ. ನೀವು ಕೇಳಿ ನೋಡಿ, ಎಷ್ಟಾದರೂ ಅವಳು ಹೆಣ್ಣಲ್ಲವೆ? ನಿಮ್ಮೊಡನೆ ಹೇಳಿಯಾಳು, ಕೇಳಿ ನೋಡಿ.'

'ತಾಯಿಯ ಮುಖ ಸಣ್ಣದಾಯಿತು, ಹೆಸರಿಕೆಯ ಭಾಯಿಸುತ್ತಷ್ಟು ಹೆಚ್ಚಾದುದನ್ನು ಕಂಡುಕೊಂಡೆ' ಏನು ಹೇಳುತ್ತಾರೆ ನೋಡುವ—ಎಂದು ಅವರ ಮುಖವನ್ನೇ ಕಂಡೆ.

'ಯಾರೋ ಏನೋ....ಅವಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದೇ?'

'ಮತ್ತೆ?'

'ನೀನು ಮಕ್ಕಳಾಟಿಕೆ ಮಾಡುತ್ತಿದ್ದಿ! ಹುಡುಗಿಯಾರು? ಎಲ್ಲಿ? ಏನು? ಎಂಬುದು ಒಂದೂ ಗೊತ್ತಿಲ್ಲ. ಮನೆಗೆ ಕರಕೊಂಡು ಬಂದಿರುವೆ. ನಾಳೆ ಏನಾದರೂ....'

ಅಮ್ಮನನ್ನು 'ಅರ್ಧದಲ್ಲಿ ತಡೆದು 'ಆದೆಲ್ಲ ಹಾಗಿರಲಿ, ಈಗ ಅವಳನ್ನು ಸ್ವಲ್ಪ ಸಮಾಧಾನ ಮಾಡಿ. ಅವಳ ವಿಷಯ ಏನಾದರೂ ತಿಳಿಯಲು ಆಗುತ್ತದೋ ನೋಡಿ. ಎಲ್ಲ ಆಗುವುದನ್ನು ನಾಳೆ ನೋಡಿಕೊಳ್ಳುವ' ಎಂದೆ.

ನೆರೆಕರೆಯ ಹೆಂಗಸರು, ನನ್ನವಳ ಗೆಳತಿಯರು 'ಸುನೀತಾ! ಸುನೀತಾ! ಏನು ಬಂದುಬಿಟ್ಟಿಯಾ! ಆಗಬಹುದು ಏನು ಇಷ್ಟು ದಿನ ನಮ್ಮನ್ನು ಬಿಟ್ಟು ಅಲ್ಲಿ ಕೂತದ್ದು? ನಿನ್ನ ಗಂಡನೂ ನೆನಪಾಗಲಿಲ್ಲವೆ?' ಎಂದು ಗೇಲಿ ಮಾಡುತ್ತ ಒಬ್ಬೊಬ್ಬರೇ ಬಂದರು. ಇಲ್ಲಿ ಮಾತ್ರ ಸುನೀತಾ ಇಲ್ಲ, ಒಬ್ಬಳು ಅಪರಿಚಿತೆ ಹೆಣ್ಣು ಇದ್ದಾಳೆ. ಒಬ್ಬರ ಮುಖವನ್ನೊಬ್ಬರು ನೋಡಿ, ಗುಸು ಗುಸು ಮಾತಾಡಲು ಪ್ರಾರಂಭಿಸಿದರು. ಅವರೂ ಕೇಳಲಿರುವ ಪ್ರಶ್ನೆ ಅದೆ:

'ಯಾರಿವಳು?"

ಘಟಿಸಿದ ಘಟನೆಯನ್ನು ಅವರು ಕೇಳುವ ಮೊದಲೇ ಹೇಳಿ ವಿವರಿಸಿದೆ. ನಂಬಿದರೋ ಇಲ್ಲವೋ—ವಿವಿಧ ಪ್ರಶ್ನೆ ಕೇಳಿದರು. ಆ ಹೆಣ್ಣನ್ನು ವಿಚಾರಿಸಿದರು.

'ನೀನಾರಮ್ಮಾ? ಯಾಕೆ ಸಾಯಲು ಬಂದೆ?' ಇನ್ನೇನೋ! ಅದರಿ ಅವಳ ಉತ್ತರ ಸೆರಗಿನಿಂದ ಮುಖ ಮುಚ್ಚಿ ಅತ್ತದ್ದು.

ನೆರೆದವರೆಲ್ಲ ಅವರವರ ಮನೆಗೆ ಅವರವರ ನಿಶ್ಚಯಿಸೊಡನೆ ತೆರಳಿದರು. ರಾತ್ರಿ ಹೇಗೋ ಕಳೆಯಿತು. ಬೆಳಗ್ಗೆ ಎದ್ದಾಗ ತಾಯಿಯಿಂದ ತಿಳಿದುಬಂತು; ಆ ಹುಡುಗಿ ನಮ್ಮ ನೆರೆಯ ಹಳ್ಳಿಯಂದೆಂದು, ಹೆಸರು ಲಲಿತಾ. ಹೆಚ್ಚಿನ ವಿಷಯವೇನೂ ತಿಳಿಯಲಿಲ್ಲ.

'ಅಮ್ಮಾ, ಇನ್ನೇನು ಅವಳ ಕೂಡ ಕೇಳಬೇಡಿ. ಪಾಪ ಹೆದರಿ ಹೋಗಿದ್ದಾಳೆ. ನಾನೇ ಅಲ್ಲಿಗೆ ಹೋಗುತ್ತೇನೆ. ನಮ್ಮ ಜಯರಾಮ ಅಲ್ಲೇ ಇದ್ದಾನಲ್ಲವೆ? ಅವನಲ್ಲಿ ಕೇಳಿದರೆ ಎಲ್ಲಾ ತಿಳಿದೀತು.' ಅಮ್ಮನಿಗೂ ಅದು ಸರಿ ಕಂಡಿತು. ನಾನು ಈಗ ಬರುತ್ತೇನೆಂದು ಮನೆಯಿಂದ ಹೊರಟು ನಮ್ಮ ಗದ್ದೆಗಳತ್ತ ಹೋದೆ. ಎಲ್ಲರೂ ನನ್ನನ್ನು ಹೊಸ ತೆರದಿಂದ ನೋಡುತ್ತಿದ್ದರು. ನಾನು ರಾತ್ರಿ ಹೆಣ್ಣನ್ನು ಕರೆತಂದ ವಿಷಯ ವಿಚಿತ್ರ-ವಿಚಿತ್ರವಾಗಿ ಹೆಚ್ಚಿದೆ—ಎಂದು ಸನನಾಗ ತಿಳಿಯಿತು. ವಿಚಿತ್ರ ಪ್ರಶ್ನೆಗಳನ್ನು ಸಿಕ್ಕಿದವರೆಲ್ಲ ಕೇಳುತ್ತಿದ್ದರು. ವಿಷಯವನ್ನು ನಡೆನಂತೆ ವಿವರಿಸಿ ನನಗೆ ಸಾಕಾಯಿತು.

"ಪಾಪ! ಹೆಣ್ಣುಮಗಳು. ಯಾರೋ ಏನೋ! ಕಷ್ಟ ತಡೆಯದೆ ಪ್ರಾಣ ಕಳಕೊಳ್ಳಲು ಬಂದಿದ್ದಳು" ಎಂದು ಕೆಲವರು ಮರುಕ ಪ್ರದರ್ಶಿಸಿದರೆ ಇನ್ನು ಕೆಲವರು "ನೀನು ಧೈರ್ಯವಂತ" ಎಂದು ನನ್ನನ್ನು ಹೊಗಳಿದರು. ಮತ್ತೆ ಕೆಲವರು "ಏನೋ ಎಂತದೋ" ಎಂದು ಸಂಶಯ

ತೋರಿಸಿದರು. ಕೆಲವರೇನೋ ತಾವು ಹೊಸತೇನೋ ಅರ್ಥ ತಿಳಿದಂತೆ ಮುಸಿ ಮುಸಿ ನಗುತ್ತಿದ್ದರು. ಹೀಗೆ ಸಿಕ್ಕಿದವರಿಗೆಲ್ಲ ವಿಷಯ ವಿವರಿಸುತ್ತ ಮೆಣಸಿನ ಹಿತ್ತಿಲಿಗೆ ನೀರುಬಿಡುವ ಕೆಲಸ ಮುಗಿಸಿ, ಒಂಬತ್ತು ಗಂಟೆಗೆ ಮನೆಗೆ ಬಂದೆ. ತಲೆಯಲ್ಲಿ ಈ ಅಪರಿಚಿತ ಹೆಣ್ಣೇ ತಿರುಗುತ್ತಿದ್ದಳು.

ಯಾರಿವಳು? ಯಾಕೆ ಸಾಯಬಂದಳು? ಏನು ಕತೆ? ಇವಳನ್ನು ಇನ್ನೇನು ಮಾಡಲಿ? ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಹುಟ್ಟುತ್ತಿದ್ದುವು. ಮೊದಲು ಜಯರಾಮನನ್ನು ಭೇಟಿಯಾಗುವುದು ಅವನಿಗೆ ತಿಳಿದಿರಬಹುದು. ಆ ಮೇಲೆಲ್ಲ—ಎಂದು ಸಮಾಧಾನ ಮಾಡಿಕೊಂಡೆ.

ಜಯರಾಮ ನನ್ನ ಗೆಳೆಯ. ಲಲಿತೆಯ ನೆರೆಮನೆಯಲ್ಲಿಯೇ ಇರುವನು. ಈ ವಿಷಯ ಲಲಿತೆಗೆ ಈಗ ತಿಳಿಸುವುದು ಬೇಡವೆಂದು ನಿಶ್ಚಯಿಸಿದೆ. ಮನೆಗೆ ಬಂದೆ.

ಮನೆಯಲ್ಲಿ ತಾಯಿ ಕಣ್ಣೀರು ಇಳಿಸುತ್ತಿದ್ದರು. ನನ್ನನ್ನು ಕಂಡಾಗ 'ಅಯ್ಯೋ ಮಗು ನಿನಗೆ ಏಕೆ ಈ ಬುದ್ಧಿ ಬಂತು! ಈ ಹೆಣ್ಣನ್ನು ಎಲ್ಲಿಂದ ತಂದೆ' ಎಂದು ಅಳಲು ಪ್ರಾರಂಭಿಸಿದರು.

ನನಗೆ ಒಂದೂ ಅರ್ಥವಾಗಲಿಲ್ಲ. " ಏನಾಯ್ತು ಏನಾಯ್ತು?" ಎಂದು ಅಮ್ಮನ ಹತ್ತಿರ ಹೋದೆ.

ಅಮ್ಮ "ಆಗುವುದೇನು! ಎಲ್ಲರೂ ಇದೇ ವಿಷಯ ಮಾತಾಡುತ್ತಿದ್ದಾರೆ. ಸುಲೋಚನೆ ಬಾವಿಕಟ್ಟೆಗೆ ಹೋದಾಗ, ಅಲ್ಲಿ ಹೆಂಗಸರು "ಏನೇ ನಿನ್ನ ಅಣ್ಣ ಹೆಂಡತಿಯನ್ನು ಕರೆಯಲು ಹೋದವ, ಹೊಸತೊಂದು ಹೆಣ್ಣನ್ನು ತಂದಿದ್ದಾನಂತಲ್ಲಾ. ನಿನಗೊಂದು ಹೊಸ ಅತ್ತಿಗೆ ಆಯ್ತು " ಎಂದು ನಗುತ್ತಿದ್ದಾರಂತೆ.

ತಾಯಿ ಹೇಳಿದ ಮಾತು ಸುಳ್ಳಾಗಲಿಲ್ಲ. ರಾತ್ರಿ ಬೆಳಗಾಗುವ ಮೊದಲೇ, ನಾನು ಹೆಣ್ಣನ್ನು ಕರೆತಂದ ವಿಷಯ ವಿಚಿತ್ರರೀತಿಯಲ್ಲಿ ಪ್ರಚಾರವಾಗಿತ್ತು. ಸತ್ಯದ ವಿಚಾರ ಸುಳ್ಳಿನ ರಾಶಿಯೊಳಗೆ ಎಲ್ಲಿ ಹುದುಗಿ ಹೋಗಿದೆ ಎಂದು ಹುಡುಕುವುದು ಕಷ್ಟಸಾಧ್ಯವೆನ್ನುವಷ್ಟು ರೀತಿಯಲ್ಲಿ ಪ್ರಚಾರವಾಗಿತ್ತು. ಎರಡು ಮುಖಗಳು ನಾಲ್ಕು ಕಣ್ಣುಗಳು ಕೂಡಿದಲ್ಲಿ ಇದೇ ಚರ್ಚೆ ನಡೆಯುತ್ತಿತ್ತು. ವಿಷಯ ಕಷ್ಟಕ್ಕೆಟ್ಟುಕೊಳ್ಳುತ್ತಿದೆ ಎಂಬುದು ನನಗೆ ತುಸು ಭಯವುಂಟು ಮಾಡಿತು. ಆದರ್ಶವೇನೋ ಸಹಜವೆ. ಸಾಯಲು ಹೋಗುವ ಹೆಣ್ಣನ್ನು ತಂದು ಮನೆಯಲ್ಲಿ ನಿಲ್ಲಿಸಿಕೊಳ್ಳುವುದು ನಿಜವಾಗಿ ಆದರ್ಶ; ಕರ್ತವ್ಯ. ಸಮಾಜ ಏನೇ ಹೇಳಲಿ. ಅದನ್ನು ಎದುರಿಸಿ ನಿಲ್ಲುವುದು ಸಹಜವೆ. ಆದರೆ ಆದರ್ಶವೆಂಬ ಕೃತಿ ಆದರ್ಶವೆಂಬ ಸೂತಿನಷ್ಟು ಸುಲಭವಾಗಲಾರದು. ಸಮಾಜದಲ್ಲಿ ಆದರ್ಶವೆಂಬುದು ನೆರೆಯ ಕಳಿತದಲ್ಲಿ ಸಿಕ್ಕಿದ ಕೇವಲ ತೃಣದಂತೆ ಸರಿ.

ತಾಯಿಗೆ ಸಮಾಧಾನ ಹೇಳಿ, ಬಟ್ಟೆಧರಿಸಿ ಜಯರಾಮನನ್ನು ನೋಡಲು ಹೋದೆ. ಜಯರಾಮ ಮನೆಯಲ್ಲಿರಲಿಲ್ಲ. ಅವನು ಆ ದಿನ ನಡೆಯಲಿರುವ " ವನಿತಾ ವಿಕಾಸ ಸಮಾಜ"ದ ವಾರ್ಷಿಕೋತ್ಸವಕ್ಕೆ ಅಧ್ಯಕ್ಷನಾಗಿ ಹೋಗಿದ್ದಾನೆಂದು ತಿಳಿದುಬಂತು. ಅಲ್ಲಿಗೆ ಹೋದೆ. ಸಭೆ ಹತ್ತುಗಂಟೆಗೆ ಪ್ರಾರಂಭವಾಗಿತ್ತು. ನಾನು ಹೋಗುವಾಗ ಹನ್ನೊಂದು ಗಂಟೆಯಾಗಿತ್ತು. ಅಧ್ಯಕ್ಷ ಭಾಷಣವಾಗುತ್ತಿತ್ತು. ಜಯರಾಮನೇ ಅಧ್ಯಕ್ಷ. ನೆರೆದ ಸಭಿಕರಲ್ಲಿ ನೂರಕ್ಕೆ ೭೫ ಹೆಂಗಸರೇ ಇದ್ದರು. ಹೇಗಾದರೂ ಸಬೆ ವನಿತಾ ವಿಕಾಸ ಸಮಾಜದ್ದೆ ಅಲ್ಲವೆ? ಸ್ವಯಂಸೇವಿಕೆ ಒಬ್ಬಳು ತೋರಿಸಿದ ಒಂದು ಖುರ್ಚಿಯಲ್ಲಿ ಕುಳಿತೆ. ಜಯರಾಮ ನನ್ನನ್ನು ನೋಡಿರಲಿಲ್ಲ. ಅವನ ಭಾಷಣ ಮುಂದುವರಿಯಿತು:

".....ಪ್ರಾಚೀನ ಭಾರತದಲ್ಲಿ ಸ್ತ್ರೀಯರನ್ನು ಬಹಳ ಸೂಕ್ಷ್ಮತೆಯಿಂದ ಕಾಣುತ್ತಿದ್ದರು. ಬರುಬರುತ್ತ ಪುರುಷರು ಸ್ತ್ರೀಯರೆಂದರೆ ತಮ್ಮ ಸೊತ್ತುಗಳು, ಮಕ್ಕಳನ್ನು ಹೆತ್ತು ಮನೆಗೆಲಸ ಮಾಡಿ ಮನಕ್ಕೆ ತಕ್ಕಂತೆ ನಡೆವ ಸೂತ್ರದ ಬೊಂಬೆಗಳೆಂದು ತಿಳಿಯಹತ್ತಿದರು. ಇದರಿಂದ ನಮ್ಮ ಸ್ತ್ರೀಯರು ಹಿಂದುಳಿದರು. ಈಗ ಹಾಗಲ್ಲ. ಅವರು ಎಚ್ಚತ್ತಿದ್ದಾರೆ. ಪುರುಷರು ತಿಳಿದಿದ್ದಾರೆ. ಹೆಂಗಸರು ಕೂಡಾ ಗಂಡಸರಂತೆ ಸಮಾಜದಲ್ಲಿ ಸಮ್ಮಾನ ಪಡೆಯಲು ಅರ್ಹರೆಂದು. ನಾವು ಎಲ್ಲ ಸ್ತ್ರೀಯರನ್ನು ಅಕ್ಕ-ತಂಗಿಯರಂತೆ ಕಾಣಬೇಕು.....ಭಾಷಣ ಮುಂದುವರಿಯುತ್ತಿತ್ತು. ಆಗ ನನ್ನ ಬದಿಯಲ್ಲಿ ಕುಳಿತ ಒಬ್ಬ ಯುವಕ ತನ್ನ ಬದಿಯವನೊಡನೆ " ನೋಡು ನೋಡು, ಈ ಗೋಮುಖವ್ಯಾಘ್ರ ಯಾವ ರೀತಿ ಬೊಗಳುತ್ತಿದ್ದಾನೆ. ಲಲಿತೆಯನ್ನು ಇವನು ತಂಗಿಯಂತೆ ಕಂಡುದು ಸಾಕು!"

ಮತ್ತೊಬ್ಬ ಯುವಕ "ಯಾರು ಲಲಿತೆ? ಏನಾಯಿತು?" ಎಂದ

ಲಲಿತೆಯ ಹೆಸರು ಕೇಳಿದಾಗ, ನನಗೂ ವಿಷಯ ತಿಳಿಯೋಣವೆಂತ ಮನಸ್ಸಾಯಿತು. ನನ್ನ ಕಿವಿಯನ್ನತ್ತ ನಿವಿರಿಸಿದೆ. ಯುವಕ ಮಾತು ಮುಂದುವರಿಸಿದ:

" ಆ ನಮ್ಮ ಚಂದಣ್ಣನಿದ್ದಾನಲ್ಲ. ಅವನ ಒಬ್ಬಳೇ ಒಬ್ಬಳು ಮಗಳು, ಚಿನ್ನದಂಥಾ ಹುಡುಗಿ. ಈಗ ಮೂರು ದಿವಸಗಳಿಂದ ಮನೆಯಲ್ಲಿಲ್ಲ. ಎಲ್ಲಿ ಹೋಗಿದೆಯೋ ಏನೋ ಹುಡುಗಿ! ಇವನೇ ಅದಕ್ಕೆ ಕಾರಣ'".....

'ಅಹುದಾ?' ಯುವಕ ಆಶ್ಚರ್ಯದಿಂದ ಪ್ರಶ್ನಿಸಿದ. "ಮತ್ತೇನು, ನಾನು ಸುಳ್ಳು ಹೇಳುತ್ತೇನೋ! ಪಾಪ! ಚಂದುಗೆ ಬೇರೆ ಗಂಡಿಲ್ಲ ಹೆಣ್ಣಿಲ್ಲ. ಒಂದೇ ಹುಡುಗಿ ಇದ್ದುದು. ಮೊನ್ನೆ ಏನೋ ಸೌಖ್ಯ ಇಲ್ಲ ಅವಳಿಗೆ, ತಿಂದದ್ದೆಲ್ಲ ವಾಂತಿ ಮಾಡುತ್ತಾಳೆ—ಎಂದು ವೈದ್ಯರ ಹತ್ತರ ತೋರಿಸಿದಾಗ, 'ಮೂರು ತಿಂಗಳು' ಅಂತ ಹೇಳಿದರಂತೆ. ಇವನೇ ಈ ಲಕ್ಷಣಂಗ,ಪಾಪ! ಹುಡುಗಿಗೆ ಹೇಳಿದ್ದಾನಂತೆ "ನಿನ್ನನ್ನು ನಾನು ಮದುವೆಯಾಗುತ್ತೇನೆ. ನೀನೇ ನನ್ನ ಧರ್ಮಪತ್ನಿ" ಎಂದು.ಹೊನ್ನೆ ನನಗೊಂದೂ ಗೊತ್ತಿಲ್ಲ ಅಂದುಬಿಟ್ಟನಂತೆ.

" ಆ ಹುಡುಗಿ ಹೇಗೆ ಅಷ್ಟು ಸುಲಭದಲ್ಲಿ ಅವನಿಗೆ ಸಿಕ್ಕೆನಳು ಶಾಲೆಗೆ ಹೋಗುವುದನ್ನು ಬಿಟ್ಟನೇಲೆ ನಾನು ಕಂಡಿಲ್ಲ ಅವಳನ್ನು ಮನೆಯಿಂದ ಹೊರಗೆ ಬರುವುದೇ ಕಡಿಮೆ. ಶಾಲೆಯಲ್ಲಿರುವಾಗಲೂ ಬಹಳ ಪಾಪದ ಹುಡುಗಿ ಅವಳು. ಹೆಚ್ಚು ಮಾತಾಡುವ ಅಭ್ಯಾಸವೆ ಅವಳಿಗೆ ಇರಲಿಲ್ಲ. ಹುಡುಗಿ ಸಣ್ಣದಾದರೂ ಒಳ್ಳೇ ಮಾನವಂತೆ.

"ಮಾನ ಮರ್ಯಾದೆ, ಏನಿದ್ದರೇನು ? ಈ ಗೋಮುಖವ್ಯಾಘ್ರರ ಗಳ ಮುಂದೆ ? ಅವಳ ತಂದೆಗೆ ಸೌಖ್ಯವಿರಲಿಲ್ಲ. ಹತ್ತು ದಿನ ಆಸ್ಪತ್ರೆಯಲ್ಲಿದ್ದ. ಲಲಿತೆ ಒಬ್ಬಳೇ ಮನೆಯಲ್ಲಿ. ಆಗ ಇವನು ಸಹಾಯ ಮಾಡಲು ಹೋದ. ರೋಗಶಯ್ಯೆಯಲ್ಲಿ ಮಲಗಿದ್ದ ಆ ಮುದುಕ "ಜಯರಾಮಾ ! ನನ್ನ ಲಲಿತೆಯನ್ನು ನಿನ್ನ ತಂಗಿ ಸುಶೀಲಾ ಎಂದೇ ತಿಳಿ" ಎಂದಿದ್ದನಂತೆ. ಇವ "ತಂಗೀ ತಂಗೀ" ಎಂದು, ಪಾಪ!—ಆ ಹುಡುಗಿಯನ್ನು 'ಅಂಗಿ' ಎಂತಲೇ ತಿಳಿದುಬಿಟ್ಟ. ಈಗ ನೋಡು ಎಷ್ಟು ಚೆಂದ ಒ.ಗಳುತ್ತಿದ್ದಾನೆ. ಇವನ ಮುಖಕ್ಕೆ ಯಾರೂ ಉಗುಂಳುವುದಿಲ್ಲ....."

ಜಯರಾಮನ ಭಾಷಣ ಮುಂದುವರಿಯುತ್ತಿತ್ತು.

".....ಪುರುಷರ ಬಲಾತ್ಕಾರಕ್ಕೆ ಅನೇಕ ಅಬಲೆಯರು ಒಳಗಾಗಿ ಪತಿತೆಯರಾಗುತ್ತಿದ್ದಾರೆ. ನಾವು ಸ್ತ್ರೀಯರನ್ನು ಅಕ್ಕ ತಂಗಿಯರಂತೆ ಕಂಡರೆ, ಇಂತಹ ಅನರ್ಥಗಳು ನಡೆಯಲಾರವು....."

ನನಗೆ ಅವನ ಭಾಷಣ ಕೇಳಲು ಮನಸ್ಸಾಗಲಿಲ್ಲ. ಎದ್ದು ಹೊರಬಂದೆ. ತಲೆ ಸಿಡಿಯುತ್ತಿತ್ತು ನನಗೆ. ಸ್ವಯಂ ಸೇವಕಿಯೊಬ್ಬಳು ತನ್ನ ಗೆಳತಿಯೊಡನೆ ಪಿಸುಗುಟ್ಟುತ್ತಿದ್ದಳು. "ನೋಡು ಈ ಪ್ರಾಣಿ ಈಗ ತಾನೇ ಬಂದು ಹತ್ತು ನಿಮಿಷವಾಗಲಿಲ್ಲ. ಎದ್ದು ಹೋಗುತ್ತಿದೆ. ಅಧ್ಯಕ್ಷ ಜಯರಾಮರಾಯರು ಎಷ್ಟು ಒಳ್ಳೆಯ ಭಾಷಣ ಕೊಡುತ್ತಿದ್ದಾರೆ ನೋಡು. ಇಷ್ಟು ಒಳ್ಳೆಯ ಭಾಷಣ ಕೇಳದ ಜನ ಎಂತೆಯೋ ನಾನಂತೆ, ನೆರೆದ ಕೆಂಗಸರನ್ನು ನೋಡಲು ಬಂದುದೋ ಏನೋ....."

ನಾನು ಅದನ್ನು ಕೇಳದಂತೆ ಮಾಡಿ ಹೊರಬಂದೆ. ನನ್ನ ತಲೆ ಬಿಸಿಯಾಗಿತ್ತು. ಲಲಿತೆ—ನಾನು ಕರಕೊಂಡು ಬಂದ ಹುಡುಗಿ ಪತಿತೆ! ಯಾರಿಂದ ? ಜಯರಾಮನಿಂದ ? ಅವನು ಇಂದು ಅಧ್ಯಕ್ಷ "ನವಿತಾ ವಿಕಾಸ ಸಮಾಜದ" ಅಧ್ಯಕ್ಷ. ಎಷ್ಟು ಒಳ್ಳೆದಾಗಿ ಭಾಷಣ ಮಾಡುತ್ತಾನೆ. ಶ್ರೋತೃಗಳಿಗಾನಂದವಾಗುವಂತೆ ಮಾತಾಡುತ್ತಿದ್ದಾನೆ. ಚಪ್ಪಾಳೆಗಳು ತಟ್ಟಲ್ಪಡುತ್ತವೆ. ಹುಂ! ಗೋಮುಖ ವ್ಯಾಘ್ರ.

ಅಲ್ಲಿ ಮತ್ತೆ ಒಂದು ಕ್ಷಣವೂ ನಾನು ನಿಲ್ಲಲಿಲ್ಲ. ಮನೆಗೆ ಬಂದು ಲಲಿತೆಯನ್ನು ಕಂಡು, ಅವಳನ್ನು ವಿಚಾರಿಸುವ ವರೆಗೆ ನನಗೆ ತಡೆಯಲಾಗುತ್ತಿದ್ದಿಲ್ಲ. ಲಲಿತೆಯ ಪಾಡನ್ನು ಎಣಿಸಿದಾಗ ಜಯರಾಮನ ಮೇಲೆ ಸೇಡು ಉಕ್ಕಿ ಬರುತ್ತಿತ್ತು. ಜಯರಾಮ ನನ್ನ ಆತಿ ಸ್ನೇಹಿತರ ಪುತ್ರನಾಗಿದ್ದ. ನನ್ನ ಮನೆಗೆ ಬರುತ್ತಿದ್ದ. ನನ್ನ ತಾಯಿಗೆ ಜಯರಾಮನೆಂದರೆ ಮಗನ ವಾತ್ಸಲ್ಯ. ನನ್ನ ತಂಗಿಗೆ ಜಯರಾಮಣ್ಣ ಬಂದನೆಂದರೆ ಬಹಳ ಆನಂದ. ನನ್ನ ಮಡದಿ ಸುನೀತಾಗೆ, ಜಯರಾಮ "ಅತ್ತಿಗೆ! ಅತ್ತಿಗೆ!" ಎಂದು ಕರೆಯುತ್ತ ಬಂದನೆಂದರೆ ಎಲ್ಲಿಲ್ಲದ ಗೌರವ. ಅಹೋ ಜಯರಾಮ-ಇಂದು ನನಗೆ ವೈರಿಯಾಗಿ ಕಂಡ. ನಾನೊಮ್ಮೆ ನಡುಗಿದೆ. ನನ್ನ ಹೆಂಡತಿಯನ್ನು ಅವನೊಡನೆ ಸಲಿಗೆಯಿಂದ ಮಾತಾಡಲು ಬಿಟ್ಟುದಕ್ಕೆ "ಜಯರಾಮ! ಜಯರಾಮ ! ನೀನು ಮಾಡಿದ ತಪ್ಪೆ ! ಹುಂ' ಇಂದು ನೀನು ನವಿತಾ ವಿಕಾಸ ಸಮಾಜದ ಸಮಾರಂಭಕ್ಕಧ್ಯಕ್ಷನಾಗಿ ಇಲ್ಲಿ ನೂರಾರು ಸ್ತ್ರೀ-ಪುರುಷರಿಂದ ಗೌರವಿಸಲ್ಪಡುತ್ತಿರುವೆ; ನಿನ್ನ ಸಭ್ಯತೆಯ ಬಲೆ ಪರದೆಯೊಳಗೆ ಮುಚ್ಚಿರುವ ಅಪ್ರಾಮಾಣಿಕತೆಗೆ ಬಲಿಬಿದ್ದ ಆ ಬಡ ಹೆಣ್ಣು ಅಲ್ಲಿ ನನ್ನ ಮನೆಯೊಳಗೆ ಹೇಳಲಾರದ ವ್ಯಥೆಯಿಂದ ಬೇಯುತ್ತಿದೆ! ಸೇಡು ! ಸೇಡು !" ನನ್ನ ರಕ್ತಧಮನಿಗಳೆಲ್ಲ ಬುಸುಗುಟ್ಟುತ್ತಿದ್ದುವು. ನನಗೆ ಹಿತವಾಗಿ ಕಂಡಿದ್ದ ಜಯರಾಮನ ಪ್ರತಿಯೊಂದು ಕೃತಿಗಳೂ ಇಂದು ನನಗೆ ವಂಚನೆಗಳೆಂದ ಕೂಡಿದ್ದಂತೆ ಕಂಡುಬಂದುವು.

ಮನೆಗೆ ಬಂದೆ. ಲಲಿತೆ ಮನೆಯಲ್ಲಿಲ್ಲ. "ಅಮ್ಮಾ ಲಲಿತೆ ಎಲ್ಲಿ ?" "ನಾನು ಹೊರಗೆ ಹೋಗಿ ಬರುವಾಗ ಅವಳು ಇರಲಿಲ್ಲ. ಎಲ್ಲಿ ಹೋದಳೆಂದು ಗೊತ್ತಿಲ್ಲ. ಹೊರಗೆ ಹುಡುಕಿದರೂ ಸಿಗಲಿಲ್ಲ." ಅಮ್ಮನ ಉತ್ತರ.

ಮಾತಿನಲ್ಲಿ 'ಕಷ್ಟ ತೊಲಗಿತು' ಎಂಬ ಭಾವ ಭಾಸವಾಗುತ್ತಿತ್ತು. ನನ್ನ ತಲೆಯೊಳಗೆ ಕೈಹಾಕಿ ಮಿದುಳನ್ನು ಕಲಕಿದಂತಾಯಿತು. ನಾನು ದಿಙ್ಮೂಢನಾದೆ. ತಂಗಿಯನ್ನು ಕರೆದು ವಿಚಾರಿಸಿದೆ. ಅವಳು "ನಾನು ಗುಡ್ಡೆಯಲ್ಲಿ ಕಟ್ಟಿದ ದನ ತರಲು ಹೋಗಿದ್ದೆ. ಬರುವಾಗ ಅವರಿರಲಿಲ್ಲ" ಎಂದಳು.

ನನ್ನ ಮನೆಗೆ ಒತ್ತಾಗಿ ಕಾಡು ಬೆಳೆದಿತ್ತು. ಅಲ್ಲಿ ಎಲ್ಲ ಹುಡುಕಿದೆ, ಲಲಿತೆ ಇಲ್ಲ. ತಡೆಯಲಾರದೆ ತಾಯಿಯನ್ನು ಕರೆದು, ಜಯರಾಮ-ಲಲಿತೆಯರ ಸಂಬಂಧದ ವಿಷಯ ಹೇಳಿದೆ. ಆಗ ತಂಗಿ ಸುಳಿಹೇಳಿದಳು :

"ಅಣ್ಣಾ, ನಿನ್ನ ಕೋಣೆಯಲ್ಲಿದ್ದ ನಿನ್ನ ಮತ್ತು ಜಯರಾಮಣ್ಣನ ಭಾವಚಿತ್ರ ನೋಡಿ, ಕಣ್ಣಿಗೆ ಕೈಹಿಡಿದುಕೊಂಡು ಅಳುತ್ತ ಕೋಣೆಯಿಂದ ಓಡಿಬಂದರು ಅವರು"

ಅಮ್ಮ "ಜಯರಾಮನೂ ಹೀಗೆ ಮಾಡಿದನೆ! ಹುಂ ಗೋಮುಖ ವ್ಯಾಘ್ರ !" ಎಂದು ನಿಟ್ಟುಸಿರು ಬಿಟ್ಟರು. ನಾನು ನನ್ನಷ್ಟಕ್ಕೆ ಹೇಳಿಕೊಂಡೆ. **"ಅಪ್ರಮಾಣಿಕತೆಯ ಮೇಲೆ ಸಭ್ಯತೆಯ ಮುಖವಾಡ ಹಾಕಿದೆ ಜಗತ್ತು"**

ಲಲಿತೆಯ ತಂದೆ ಚಂದುವನ್ನು ನನ್ನ ಮನೆಗೆ ಬರಮಾಡಿ ವಿಷಯ ತಿಳಿಸಿದೆ. ಲಲಿತೆಯನ್ನು ಹುಡುಕಿದೆವು ಸಿಗಲಿಲ್ಲ.

ಮರುದಿನ 'ವಾರ್ತಾಪತ್ರಿಕೆಯ ಮುಖಪುಟದಲ್ಲಿ ಹೂಮಾಲೆ ಧರಿಸಿದ ಜಯರಾಮನ ಭಾವಚಿತ್ರಸಹಿತ ಭಾಷಣ ಅಚ್ಚಾಗಿ ಬಂದಿತ್ತು. ಪತ್ರಿಕೆಯ ಮೂಲೆಯಲ್ಲಿ "ಹಳ್ಳಿಯ ಹಾಳುಬಾವಿಯಲ್ಲಿ ಒಂದು ಹೆಣ್ಣಿನ ಹೆಣ ಸಿಕ್ಕಿದೆ, ಗುರುತು ಸಿಗುವುದಿಲ್ಲ" ಎಂದು ಬರೆದಿತ್ತು.

★ ನೋವು ★

ರ. ಜ. ಅಗ್ನಿಹೋತ್ರಿ, ಲೆಕ್ಚರರ್, ಆಚಾರ್ಯ ಪಾಠಶಾಲಾ, ಬೆಂಗಳೂರು.

(ಶರೀರ ಸ್ವಾಸ್ಥ್ಯ ವಿಚಾರ ವಿವೇಚನೆ)

ಮನುಷ್ಯನ ದೇಹದ ಯಾವುದೇ ಭಾಗದಲ್ಲಿ ನೋವು ಕಾಣಿಸುವುದು ಬರಲಿರುವ ಒಂದು ಮಹಾವ್ಯಾಧಿಯ ಪೂರ್ವಸೂಚನೆ. ನೋವು ಕಾಣಿಸಿದೊಡನೆ ತಜ್ಞರಿಗೆ ಅದನ್ನು ತೋರಿಸಬೇಕು; ಸಕಾಲದಲ್ಲಿ ತಕ್ಕ ಚಿಕಿತ್ಸೆ ಮಾಡಿಸಿಕೊಳ್ಳಬೇಕು.

ನೋವು ನಮ್ಮ ಶರೀರದಲ್ಲಿ ಉಂಟಾದ, ಅಥವಾ ಉಂಟಾಗಬಹುದಾದ ರಚನಾತ್ಮಕ ಅಥವಾ ಕ್ರಿಯಾತ್ಮಕ ವಿಕೃತಿಗಳ ಬಗ್ಗೆ ಸೂಚನೆ ಕೊಡುತ್ತದೆ. ನೋವು ಇಲ್ಲದೇ ಹೋಗಿದ್ದರೆ, ರೋಗಿ ಅಥವಾ ಡಾಕ್ಟರರಿಗೆ ಗೊತ್ತಾಗುವುದಕ್ಕೆ ಮುಂಚಿತವಾಗಿಯೇ ಎಷ್ಟೋ ರೋಗಗಳು ತಮ್ಮ ಅಸಾಧ್ಯಾವಸ್ಥೆಯನ್ನು ಹೊಂದುತ್ತಿದ್ದುವು. ಈ ರೀತಿ ನೋವು, ಸಕಾಲದಲ್ಲಿ ರೋಗನಿದಾನ ಮಾಡಲು ಸಹಾಯಕವಾಗಿ, ತನ್ಮೂಲಕ ರೋಗನಿವಾರಣೆಗೆ ಕಾರಣವಾಗುತ್ತದೆ.

ನೋವು ಪ್ರಾಣಿಗಳಿಗೆ ತಮ್ಮ ಯೋಗ್ಯತೆಯ ಇತಿಮಿತಿಗಳನ್ನು ತಿಳಿಸುತ್ತದೆ. ನೋವಿನ ಹೆದರಿಕೆಯಿಂದಲೇ ನಾವು ಅಪಾಯಕರವಾದ ಪ್ರಯೋಗಗಳನ್ನು ಮಾಡದೇ ಇರುತ್ತೇವೆ. ನೋವು ಇಲ್ಲದೆ ಹೋಗಿದ್ದರೆ, ನಾವು ನಮ್ಮ ಯೋಗ್ಯತೆಗೆ ಮೀರಿದ ಸಾಹಸಗಳಿಗೆ ಕೈ ಹಾಕಿ, ಕೈಕಾಲುಗಳನ್ನು ಮುರಿದುಕೊಂಡು ಅಂಗ ವಿಕಲರಾಗುತ್ತಿದ್ದೆವು. ಕುಷ್ಠರೋಗಿಗಳಲ್ಲಿ ಸಾಮಾನ್ಯವಾಗಿ ಕಾಣುವ ಅಂಗವಿಕಲತೆಗೆ, ಅವರಲ್ಲಿ ಶೀತ ಉಷ್ಣನೋವು ಮುಂತಾದುವುಗಳನ್ನು ತಿಳಿಯುವ ಯೋಗ್ಯತೆ ಇಲ್ಲದಿರುವುದೇ ಕಾರಣವಾಗಿದೆ.

ನೋವಿನ ಹೆದರಿಕೆಯಿಂದಲೇ ಪ್ರಾಣಿಗಳು ತಮ್ಮ ಘಾಯಗೊಂಡ ಅಂಗಗಳನ್ನು ಹೆಚ್ಚಾಗಿ ಚಲಿಸದೇ ಸ್ಥಿರವಾಗಿಟ್ಟಿರುತ್ತವೆ. ಈ ಸ್ಥಿರತೆಯುಂದ ಘಾಯಗೊಂಡ ಅಂಗಕ್ಕೆ ವಿಶ್ರಾಂತಿ ಸಿಕ್ಕು, ಘಾಯ ಮಾಯಲು ಅನುಕೂಲವಾಗುತ್ತದೆ. ಈ ರೀತಿ ನೋವು ವಿಕೃತ ಅಂಗಗಳ ಸ್ಥಿರತೆಯನ್ನುಂಟು ಮಾಡಿ, ತನ್ಮೂಲಕ ರೋಗ ಪರಿಹಾರಕ್ಕೆ ಕಾರಣವಾಗುತ್ತದೆ.

ನೋವು ನಮಗೆ ಬೇಡವಾದುದು. ಅದನ್ನು ಪರಿಹರಿಸಬೇಕಾದರೆ, ಅದರ ಹಿನ್ನೆಲೆಯಲ್ಲಿರುವ ವಿಕೃತಿಯ ಸರಿಯಾದ ತಿಳುವಳಿಕೆ ಅವಶ್ಯಕ. ನೋವಿಗೆ ಕಾರಣವಾದ ವಿಕೃತಿಯನ್ನು ತಿಳಿಯಬೇಕಾದರೆ, ನೋವಿನೊಡನಿರುವ ಇತರ ಲಕ್ಷಣಗಳ ಅಧ್ಯಯನವೂ ಅವಶ್ಯಕ. ನೋವಿನ ಸ್ಥಾನಕ್ಕನುಗುಣವಾಗಿ, ಅದರೊಡನೆ ಇರುವ ಇತರ ಲಕ್ಷಣಗಳೂ ಬೇರೆಬೇರೆಯಾಗಿರುತ್ತವೆ. ಆದ ಕಾರಣ ನೋವಿನ ಸ್ಥಾನಾನುಸಾರಿಯಾದ ಅಧ್ಯಯನ, ಅದಕ್ಕೆ ಹೇತುಭೂತನಾದ ವಿಕೃತಿಯನ್ನು ಕಂಡುಹಿಡಿದು, ಅದಕ್ಕನುಗುಣವಾದ ಪರಿಹಾರೋಪಾಯಗಳನ್ನು ಕೈಕೊಳ್ಳಲು ಸಹಾಯಕವಾಗುತ್ತದೆ.

ತ್ವಗ್ಗತ ವೇದನೆ :

ನಮ್ಮ ದೇಹದ ಮೇಲ್ಮೈಯನ್ನೆಲ್ಲ ವಾಸಿಸಿದ. ತ್ವಚೆ ಮತ್ತು ಮೂಗು–ಬಾಯಿ–ಕಿವಿ–ಗುದದ್ವಾರ ಮುಂತಾದುವುಗಳ ಅಭ್ಯಂತರ ಕಲೆಗಳ ವಿಕೃತಿಯಿಂದುಂಟಾಗುವ ನೋವು ಈ ವರ್ಗಕ್ಕೆ ಸೇರಿದ್ದು. ಸಾಮಾನ್ಯವಾಗಿ ಈ ನೋವು ಮೇಲ್ಕಾಣಿಸಿದ ಅಂಗಗಳ ಬಾವು ಅಥವಾ ಗಾಯದಿಂದ ಇಲ್ಲವೇ ತೀಕ್ಷ್ಣೋಷ್ಣ ರಾಸಾಯನಿಕ ದ್ರವ್ಯಗಳ ಸಂಪರ್ಕದಿಂದ ಉಂಟಾಗುತ್ತದೆ. ಈ ನೋವು ಪ್ರಖರ, ತೀಕ್ಷ್ಣ ಮತ್ತು ದಾಹಾತ್ಮಕ ಸ್ವಭಾವದ್ದಾಗಿರುತ್ತದೆ. ಇದರ ಸ್ಥಾನವನ್ನು ಸುಲಭವಾಗಿ ನಿರ್ಣಯಿಸಬಹುದು. ಈ ನೋವು ತಲೆದೋರಿದಾಗ ನಾಡಿಯ ಗತಿ ಹೆಚ್ಚಾಗುತ್ತದೆ ಮತ್ತು ರಕ್ತದ ಒತ್ತಡವೂ ಹೆಚ್ಚುತ್ತದೆ. ಹುಗುಳು, ಮೂಲವ್ಯಾಧಿ, ಭಗಂದರ, ಮೂತ್ರ ಕೃಚ್ಛ್ರ ಮುಂತಾದ ರೋಗಗಳಲ್ಲಿ ಕಂಡುಬರುವ ನೋವು ಇದಕ್ಕೆ ಉದಾಹರಣೆಯಾಗಿದೆ.

ಗಂಭೀರ ವೇದನೆ:

ತ್ವಜೆಗಿಂತಲೂ, ಆಳವಾದ ಸ್ಥಾನದಲ್ಲಿರುವ ಅಸ್ಥಿಸಂಜರ ಮತ್ತು ಅದಕ್ಕೆ ಹೊಂದಿಕೊಂಡಿರುವ ಮಾಂಸಪೇಶಿಗಳ ವಿಕೃತಿಯಿಂದಾಗುವ ನೋವು ಈ ವರ್ಗಕ್ಕೆ ಸೇರಿದೆ. ಮಾಂಸಪೇಶಿಗಳು ಬಹಳ ಹೊತ್ತಿನವರೆಗೆ ಒಂದೇ ರೀತಿ ಸಂಕುಚಿತಾವಸ್ಥೆಯಲ್ಲಿದ್ದರೆ, ಇಲ್ಲವೆ ಯಾವುದೇ ಕಾರಣದಿಂದ ಮಾಂಸಪೇಶಿಗಳಿಗೆ ಸಾಕಷ್ಟು ರಕ್ತ ಒದಗದಿದ್ದರೆ, ಅಥವಾ ಅವುಗಳಲ್ಲಿ ಬಾವುವುಂಟಾದರೆ, ಈ ನೋವು ಕಾಣಿಸಿಕೊಳ್ಳುತ್ತದೆ ಈ ನೋವು ಮುಂದವಾಗಿ,ಯಾವುದೋ ಹಿಡಿತದಲ್ಲಿ ಸಿಕ್ಕಂತೆ( )ಇರುತ್ತದೆ. ಕೆಲವು ಸಲ ಇದು ಬಹಳ ಉಗ್ರವಾಗಿ, ಇಲ್ಲವೇ ಸ್ಫುರಣಾತ್ಮಕವಾಗಿ ಇರುವುದು ಉಂಟು. ಈ ನೋವಿನ ಸ್ಥಾನವನ್ನು ನಿರ್ಣಯಿಸುವುದು ಸುಲಭವಲ್ಲ. ಈ ನೋವು ಉಂಟಾದಾಗ ರಕ್ತದ ನತ್ತಡ ಕಡಿಮೆಯಾಗುತ್ತದೆ. ವೈಯಲ್ಲ ಬೆವರುವುದು, ಬಾಯಲ್ಲಿ ನೀರೂರುವುದು, ಉಬ್ಬಳಿಕೆ ವಾಂತಿ ಮುಂತಾದ ಲಕ್ಷಣಗಳು ತಲೆದೋರುತ್ತವೆ. ಆದ ಕಾರಣ ಇದು ತ್ವಗ್ಗತ ವೇದನೆಗಿಂತ ಹೆಚ್ಚು ದೈನ್ಯವನ್ನುಂಟುಮಾಡುತ್ತದೆ. ಮನಸ್ಸಿನ ಉದ್ವಿಗ್ನಾವಸ್ಥೆಯಲ್ಲಿ ಕಂಡುಬರುವ ತಲೆನೋವು. ಪಿಂಡಿಕೋದ್ವೇಷ್ಟನ(ಕಾಲು ಹರಿಯುವುದು) ಮುಂತಾದುವುಗಳು ಈ ವರ್ಗದ ನೋವಿನ ಉದಾಹರಣೆಗಳಾಗಿವೆ.

ಕೋಷ್ಠಗತ ವೇದನೆ:

ಆಮಾಶಯ, ಪಕ್ವಾಶಯ, ಹೃದಯ, ಶ್ವಾಸಕೋಶ, ಮುಂತಾದ ಕೋಷ್ಠಾಂಗಗಳ ವಿಕೃತಿಯಿಂದ ಉಂಟಾಗುವ ನೋವು ಈ ವರ್ಗಕ್ಕೆ ಸೇರಿದ್ದು.

ಆಮಾಶಯ, ಪಕ್ವಾಶಯಾದಿ ಅಂಗಗಳ ಅಕ್ಕ-ಪಕ್ಕದಲ್ಲಿರುವ ಅವಯವಗಳು ಮತ್ತು ಅವುಗಳ ಮುಂಭಾಗದಲ್ಲಿರುವ ಮಾಂಸಪೇಶಿ, ತ್ವಚೆ ಮುಂತಾದುವುಗಳು, ಆ ಅಂಗಗಳು ಹೆಚ್ಚು ಉಬ್ಬಿಕೊಳ್ಳದಂತೆ ತಡೆಯನ್ನುಂಟುಮಾಡುತ್ತವೆ. ಆದರೆ ಆ ಅಂಗಗಳಲ್ಲಿ ವಾತ (*gas*) ತುಂಬಿದಾಗ, ಇಲ್ಲವೇ ಯಾವುದಾದರೊಂದು ರಕ್ತನಾಳ ಒಡೆದು, ಆ ಅಂಗಗಳು ರಕ್ತದಿಂದ ತುಂಬಿದಾಗ, ಅವು ಅಕ್ಕ-ಪಕ್ಕದ ತಡೆಗಳನ್ನು ಕಡೆಗಣಿಸಿ ಬಹಳವಾಗಿ ಉಬ್ಬಿಕೊಳ್ಳುತ್ತವೆ. ಹಾಗೆ ಅಂಗಗಳ ಉಬ್ಬುವಿಕೆಯಿಂದ, ಆ ಅಂಗಗಳ ನಿರ್ಮಾಣದಲ್ಲಿ ಭಾಗವಹಿಸಿದ ಮಾಂಸಪೇಶೀ ಸೂತ್ರಗಳ ಒತ್ತಡ ಅಲ್ಲಿರುವ ನಾಡೀ ಸೂತ್ರಗಳ ಮೇಲೆ ಬೀಳುವುದರಿಂದ ನೋವು ಉಂಟಾಗುತ್ತದೆ. ಅಧ್ಮಾನ ಅನಾಹಾದಿ ರೋಗಗಳಲ್ಲಿ ಉಂಟಾಗುವ ನೋವು ಈ ಜಾತಿಗೆ ಸೇರಿದ್ದು.

ರಕ್ತನಾಳಗಳ ರೋಧ ಮುಂತಾದ ಕಾರಣಗಳಿಂದಾಗಿ ಕೆಲವು ಅಂಗಗಳ ಮಾಂಸಪೇಶಿಗಳಿಗೆ ಸಾಕಷ್ಟು ರಕ್ತದ ಪೂರೈಕೆ ಆಗದಿದ್ದರೆ, ಅಂಗಗಳ ಕ್ರಿಯಾಶೀಲತೆಯಿಂದ ಉಂಟಾದ ಕೆಲವು ರಾಸಾಯನಿಕ ಕೆಟ್ಟ ದ್ರವ್ಯಗಳು ರಕ್ತದ ಮೂಲಕ, ವಿಸರ್ಜನಾಂಗಾದಿಗಳಿಗೆ ಒಯ್ಯಲ್ಪಡದೆ ಅಲ್ಲಿಯೇ ಶೇಖರವಾಗುತ್ತವೆ. ಹೀಗೆ ಯಾವ ಅಂಗದ ಭಿತ್ತಿಗಳಲ್ಲಿ ಈ ಕೆಟ್ಟದ್ರವ್ಯಗಳು ಶೇಖರವಾಗುತ್ತವೆಯೋ, ಆ ಅಂಗದ ನಾಡೀಸೂತ್ರಗಳು ಪ್ರಕ್ಷುಬ್ಧವಾಗಿ ನೋವನ್ನುಂಟು ಮಾಡುತ್ತವೆ. ಹೃಜ್ಜ್ವೂಲ, ಪಿಂಡಿಕೋದ್ವೇಷ್ಟನ ಮುಂತಾದ ರೋಗಗಳಲ್ಲಿ ಉಂಟಾಗುವ ನೋವು ಈ ಜಾತಿಗೆ ಸೇರಿದ್ದು.

ಯಾವುದೇ ಕಾರಣದಿಂದ, ಆಮಾಶಯ ಪಕ್ವಾಶಯಾದಿ ಕೋಷ್ಠಾಂಗಗಳಲ್ಲಿ ಬಾವು ಉಂಟಾದರೆ, ಆ ಅಂಗಗಳ ಭಿತ್ತಿಗಳಲ್ಲಿ ರಕ್ತಸಂಚಾರ ಹೆಚ್ಚಾಗುತ್ತದೆ. ಹೀಗೆ ಹೆಚ್ಚು ರಕ್ತಸಂಚಾರವುಳ್ಳ ಅಂಗಗಳ ಚಲನವಲನೆಯೂ ನೋವಿಗೆ ಕಾರಣವಾಗುತ್ತದೆ. ಬನ್ನುಗುನೊವ ಮುಂತಾದ ರೋಗಗಳಲ್ಲಿ ಕಾಣುವ ನೋವು ಈ ಜಾತಿಗೆ ಸೇರಿದ್ದು.

ಕೋಷ್ಠಾಂಗಗಳ ಮಾಂಸಪೇಶಿಗಳ ಸಂಕೋಚನಿಕಾಪಸಿಂದಾಗಿ ಆ ಅಂಗಗಳನ್ನು ಆವರಿಸಿದ ಕಲೆ (ಪೊರೆ)ಗಳಲ್ಲಿ ಸೆಳೆತ ಉಂಟಾದರೆ, ಅವು ಬಿಗಿಯಲ್ಪಟ್ಟು ಜಪ್ಪೆಗಳಲ್ಲಿರುವ, ನಾಡೀಸೂತ್ರಗಳು ಪ್ರಕ್ಷುಬ್ಧವಾಗಿ ನೋವನ್ನುಂಟು ಮಾಡುತ್ತವೆ. ಕೆಮ್ಮಿದಾಗ ಇಲ್ಲವೆ ಶೀನಿದಾಗ ನೋವು ಉಂಟಾಗುವಿಕೆ, ಅಥವಾ ಮೊದಲಿನಿಂದಲೇ ಇದ್ದ ನೋವು ಹೆಚ್ಚಾಗುವಿಕೆಗೆ ಇದೇ ಕಾರಣವಾಗಿದೆ.

ನಮ್ಮ ಕೋಷ್ಠಗತ ವೇದನೆಯು ಸ್ಪಷ್ಟವಾಗಿ ಅವರ ಕಾರಣದ ಮೇಲೆ ಅವಲಂಬಿಸಿದೆ. ವೇದನೆಗೆ ಮಾಂಸಪೇಶಿಗಳಲ್ಲಿಯ ರಕ್ತಾಲ್ಪತೆ ಕಾರಣವಾಗಿದ್ದರೆ, ಅವು ಒಂದು ಬಿಗಿಯ ಹಿಡಿತದಲ್ಲಿ ಸಿಕ್ಕಿದಂತೆ ಅನುಭವವಾಗುತ್ತದೆ. ಕೋಷ್ಠಗತ ವಿಪ್ರಧ (ಕಾರುವ್ರ)ಯಿಂದಾಗುವ ನೋವು ಸ್ಫುರಣಾತ್ಮಕವಾಗಿರುತ್ತದೆ. ಆಮಾಶಯ ಪಕ್ವಾಶಯಗಳಲ್ಲಿ ವಾಯು ತುಂಬಿಕೊಳ್ಳುವುದರಿಂದ ಉಂಟಾಗುವ ನೋವು ಮಂದ-ಮಂದವಾಗಿ ಪ್ರಾರಂಭವಾಗಿ, ತೀವ್ರತೆಯ ಚರಮಾವಸ್ಥೆಯನ್ನು ಮುಟ್ಟಿ, ಪುನಃ ಕ್ರಮವಾಗಿ ಮಂದವಾಗುತ್ತಾ-ಒ ಕ್ಷಣಕಾಲ ಪೂರ್ಣವಾಗಿ ಇಲ್ಲದಂತಾಗುತ್ತದೆ. ಆನೇಲೆ ಮತ್ತೆ ಮೊದಲಿನಂತೆಯೇ ಪ್ರಾರಂಭವಾಗುತ್ತದೆ ಹೀಗೆ ಈ ನೋವು ಬಾರಿ ಬಾರಿಗೆ ಬಂದು-ಹೋಗುತ್ತದೆ. ಆವುಶಂಕೆ (ಪ್ರವಾಹಿಕ)ಯಲ್ಲಿ ಹೊಟ್ಟೆ ಮುರಿದಂತೆ ಇಲ್ಲವೆ ಹಿಂಡಿದಂತೆ ಅನುಭವವಾಗುತ್ತದೆ.

ಗಂಭೀರ ನೋವಿನೊಡನೆ ಕಂಡುಬರುವ ಬೆವರು, ಉಬ್ಬಳಿಕೆ, ವಾಂತಿ ಮುಂತಾದ ಲಕ್ಷಣಗಳು ಕೋಷ್ಠಗತ ವೇದನೆಯ ಸಂಗಡವೂ ಇರುತ್ತವೆ.

ತ್ವಗ್ಗತ ನೋವಿನ ಸ್ಥಾನವನ್ನು ಸುಲಭವಾಗಿ ನಿರ್ಣಯಿಸಿದಂತೆ ಗಂಭೀರ ಮತ್ತು ಕೋಷ್ಠಗತ ನೋವಿನ ಸ್ಥಾನವನ್ನು ನಿರ್ಣಯಿಸುವುದು ಸಾಧ್ಯವಲ್ಲ. ಇದಕ್ಕೆ ಕಾರಣಗಳು ಈ ಕೆಳಗಿನಂತಿವೆ.

ತ್ವಗ್ಗತ ನೋವಿನ ಸ್ಥಾನವನ್ನು ನಿರ್ಣಯಿಸುವಲ್ಲಿ ನಾವು ಕಣ್ಣಿನ ಸಹಾಯ ಪಡೆಯುತ್ತೇವೆ. ಆದರೆ ಗಂಭೀರ ಕೋಷ್ಠಗತ ನೋವಿನ ಸ್ಥಾನ ನಿರ್ಣಯಿಸುವಾಗ ಹಾಗೆ ಕಣ್ಣಿನ ಸಹಾಯ ಪಡೆಯಲಾಗದು.

ತ್ವಚೆಯಲ್ಲಿ ನಾಡೀಸೂತ್ರಗಳ ವ್ಯಾಪ್ತಿ ಸಾಕಷ್ಟಿದೆ. ಕೋಷ್ಠದಲ್ಲಿ ನಾಡೀಸೂತ್ರಗಳು ಇಷ್ಟು ವಿಪುಲವಾಗಿಲ್ಲ. ಬಹಳ ವಿರಳವಾಗಿವೆ. ನಮ್ಮ ತ್ವಚೆಯ ಒಂದು ಮುಳ್ಳುಕೊನೆಯಷ್ಟು ಭಾಗವೂ ಬಿಡದಂತೆ ಅದರ ಪ್ರತಿಯೊಂದು ಅಣುವಿನ ಪ್ರಾತಿನಿಧ್ಯ ನಮ್ಮ ಮಸ್ತಿಷ್ಕವಲ್ಕ (ಬುದ್ಧಿ)ದಲ್ಲಿದೆ ಆದಕಾರಣ ತ್ವಚೆಯ ಎಷ್ಟು ಸಣ್ಣ ಭಾಗದಲ್ಲಿ ನೋವು ಉಂಟಾದರೂ, ಅದನ್ನು ನಾವು ಬಹಳ ಸುಲಭವಾಗಿ ಮತ್ತು ಸ್ಪಷ್ಟವಾಗಿ ನಿರ್ದೇಶಿಸಬಲ್ಲೆವು.

ಇದಕ್ಕೆ ವಿಪರೀತವಾಗಿ, ಕೋಷ್ಠಾಂಗಗಳ ಪ್ರತಿಯೊಂದು ಅಣುವಿನ ಪ್ರಾತಿನಿಧ್ಯ ಮಸ್ತಿಷ್ಕವಲ್ಕದಲ್ಲಿರದೆ, ಒಂದೊಂದು ವಿಭಾಗದ ಪ್ರಾತಿನಿಧ್ಯ ಅಲ್ಲಿದೆ. ಹೀಗಿರುವುದರಿಂದ ಕೋಷ್ಠಾಂಗದ ಯಾವ ಅಂಶದಲ್ಲಿ ವಿಕೃತಿ ಉಂಟಾದರೂ, ನೋವು ಆ ವಿಕೃತ ಅಂಶದಲ್ಲಿಯೇ ಕೇಂದ್ರೀಕೃತವಾಗಿರದೇ, ಸಂಬಂಧಿಸಿದ ವಿಭಾಗದಲ್ಲೆಲ್ಲ ವಿಕೀರ್ಣವಾಗಿ ವ್ಯಾಪಿಸಿರುತ್ತದೆ. ಆದ ಕಾರಣ, ಕೋಷ್ಠಾಂಗಗಳ ನೋವಿನ ಸರಿಯಾದ ಸ್ಥಾನವನ್ನು ನಿರ್ಣಯಿಸುವುದು ಕಷ್ಟವಾಗುತ್ತದೆ.

ತ್ವಗ್ಗತ ವೇದನೆಗೂ ಮತ್ತು ಗಂಭೀರ ವೇದನೆಗಳಿಗೂ ಮತ್ತೊಂದು ಭೇದವಿದೆ. ಅದೇನೆಂದರೆ, ತ್ವಗ್ಗತ ವೇದನೆಗಳು ಪ್ರತಿಫಲಿತವಾಗುವದಿಲ್ಲ, ಗಂಭೀರ ವೇದನೆಗಳು ಪ್ರತಿಫಲಿತವಾಗುತ್ತವೆ ನೋವಿನ ಪ್ರತಿಫಲಿತವಾಗುವುದೆಂದರೆ, ವೇದನೆ ವಿಕೃತವಾದ ಕೋಷ್ಠಾಂಗದಲ್ಲಿರುವುದಲ್ಲದೇ ಆ ಅಂಗವನ್ನಾವರಿಸಿಕೊಂಡಿರುವ ಮಾಂಸಪೇಶಿ, ತ್ವಚೆ ಮುಂತಾದುವುಗಳಲ್ಲಾಗಲೀ, ಅಥವಾ ಅದಕ್ಕಿಂತ ದೂರದಲ್ಲಿರುವ ಶರೀರ ಪ್ರದೇಶಗಳಲ್ಲಾಗಲೀ ಕಾಣಿಸಿಕೊಳ್ಳುವುದು. ಯಕೃತ್ ಪ್ರದೇಶದಲ್ಲಿ ವಿಕೃತಿಯುಂಟಾದಾಗ; ಬಲಭುಜದ ಹಿಂಭಾಗದಲ್ಲಿ ಕಾಣಿಸಿಕೊಳ್ಳುವ ನೋವು, ಆಮಾಶಯದ ವಿಕೃತಿಯಲ್ಲಿ ಎದೆಯ ಭುಜಗಳ ಮಧ್ಯಭಾಗದಲ್ಲಿ ಆಗುವ ನೋವು, ಹೃದಯದಲ್ಲಿ ವಿಕೃತಿಯುಂಟಾದಾಗ

ಎಡಬಾಹುವಿನಲ್ಲಿ ಉಂಟಾಗುವ ನೋವು, ಮೂತ್ರಪಿಂಡದಲ್ಲಿ ಅಶ್ಮರಿ ಇರುವಾಗ, ವೃಷಣಗಳಲ್ಲಿ ಕಾಣುವ ನೋವು, ಮೂತ್ರಾಶಯದ ಮುಖದಲ್ಲಿ ಅಶ್ಮರಿ ಇರುವಾಗ ಶಿಶ್ನಾಗ್ರ(ಮಣಿ)ದಲ್ಲಿ ಉಂಟಾಗುವ ನೋವು ಮತ್ತು ಗುದಪರಿಕರ್ತಿಕೆ, ಇವು ಪ್ರತಿಫಲಿತ ವೇದನೆಯ ಕೆಲವು ಮುಖ್ಯ ಉದಾಹರಣೆಗಳಾಗಿವೆ.

ನಮ್ಮ ಶರೀರದ ಬೇರೆ ಬೇರೆ ಭಾಗಗಳಿಂದ ಶೀತ, ಉಷ್ಣ, ನೋವು ಮುಂತಾದ ಸಂವೇದನೆಗಳನ್ನು ಮಸ್ತಿಷ್ಕದೆಡೆಗೆ ಒಯ್ಯುವ ನಾಡೀಸೂತ್ರಗಳು, ಪೃಷ್ಠವಂಶದ ತಮತಮಗೆ ವಿಶಿಷ್ಟವಾದ ವಿಭಾಗದ ಮೂಲಕ ಸುಷುಮ್ನಾಕಾಂಡವನ್ನು ಸೇರುತ್ತವೆ. ಒಂದು ಕೋಷ್ಠಾಂಗದಿಂದ ಸಂವೇದನೆಗಳನ್ನೊಯ್ಯುವ ನಾಡೀಸೂತ್ರಗಳು ಪೃಷ್ಠವಂಶದ ಯಾವ ವಿಭಾಗ ಮೂಲಕ ಸುಷುಮ್ನಾಕಾಂಡವನ್ನು ಸೇರುತ್ತವೆಯೋ, ಅದೇ ವಿಭಾಗದ ಮೂಲಕ ಬಾಹ್ಯತ್ವಚೆಯ ಒಂದು ವಿಶಿಷ್ಟ ಕ್ಷೇತ್ರದಿಂದ ಸಂವೇದನೆಗಳನ್ನು ತರುವ ನಾಡೀಸೂತ್ರಗಳು ಕೂಡ ಸುಷುಮ್ನಾಕಾಂಡವನ್ನು ಸೇರಬಹುದು. ಹೀಗೆ ಒಂದು ಕೋಷ್ಠಾಂಗದ ವಿಕೃತಿಯಿಂದುಂಟಾದ ನೋವು, ಯಾವ ವಿಭಾಗದ ಮೂಲಕ ಸುಷುಮ್ನಾಕಾಂಡವನ್ನು ಸೇರುತ್ತದೆಯೋ, ಅದೇ ವಿಭಾಗಕ್ಕೆ ಸಂಬಂಧಿಸಿದ ಬಾಹ್ಯತ್ವ ಸ್ಥಾನದಲ್ಲಿ, ಆ ನೋವು ಪ್ರತಿಫಲಿತವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಸುಷುಮ್ನಾಕಾಂಡವನ್ನು ಸೇರಿದ ನಂತರ, ಎಷ್ಟೋ ಸಂದರ್ಭಗಳಲ್ಲಿ ಎರಡೂ ಸಂವೇದನೆಗಳ ಮಾರ್ಗ ಒಂದೇ ಆಗಿಬಿಡುತ್ತದೆ. ಈ ರೀತಿ ಒಂದೇ ಮಾರ್ಗದಿಂದ ಬರುವ ಸಂವೇದನೆಗಳನ್ನು ವಿವೇಚಿಸಿ ಅವುಗಳ ಉಗಮಸ್ಥಾನವನ್ನು ಸರಿಯಾಗಿ ನಿರ್ಣಯಿಸುವುದು ನಮ್ಮ ಬುದ್ಧಿಗೆ ಸಾಧ್ಯವಾಗದೇ ಹೋಗಬಹುದು. ಅಂಥ ಸಂದರ್ಭದಲ್ಲಿ ನೋವು, ವಿಕೃತಿಯಿಲ್ಲದತ್ವಗ್ವಿಭಾಗದಲ್ಲೂ ಪ್ರತಿಫಲಿತವಾಗುತ್ತದೆ.

ಯಕೃತ್ತಿನ ಮೇಲ್ಗಡೆಗಿರುವ ಮಹಾಸ್ರಾಚೀರಾಪೇಶಿಯ ಮಧ್ಯಭಾಗ ಮತ್ತು ಹೆಗಲಿನ ಹಿಂಭಾಗ ಈ ಎರಡೂ ಕ್ಷೇತ್ರಗಳು ೩ನೆಯ ಮತ್ತು ೪ನೆಯ ಗ್ರೈವೇಯ ನಾಡೀಮೂಲಗಳಿಂದ ಅನುಸೂತ್ರಿತವಾಗಿವೆ. ಇದೇ ಕಾರಣದಿಂದ ಯಕೃತ್ತಿನ ಅಕ್ಕಪಕ್ಕದಲ್ಲಿ ವಿಕೃತಿ ಉಂಟಾದಾಗ, ಅಲ್ಲಿಯ ನೋವು ಪ್ರತಿಫಲಿತವಾಗಿ ಹೆಗಲಿನ ಹಿಂಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಇತರ ಪ್ರತಿಫಲಿತ ವೇದನೆಗಳಿಗೂ ಇದೇ ಸ್ಪಷ್ಟೀಕರಣವನ್ನು ಕೊಡಬಹುದಾಗಿದೆ.

ನೋವು ಯಾವ ವಿಭಾಗದ ಮೂಲಕ ಸುಷುಮ್ನಾಕಾಂಡವನ್ನು ಸೇರುತ್ತದೆಯೋ, ಆ ವಿಭಾಗದಲ್ಲಿ ಪ್ರಕ್ಷೋಭವನ್ನುಂಟುಮಾಡುತ್ತದೆ. ಇದರ ಪರಿಣಾಮವಾಗಿ ವಿಕೃತ ಅಂಗವನ್ನಾವರಿಸಿಕೊಂಡಿರುವ, ಮಾಂಸಪೇಶಿಗಳ ಕ್ರಿಯೆಗಳಿಗೆ ನಿಯಾಮಕಗಳಾದ ಅಲ್ಲಿಯ ಕೋಶಗಳು ಉತ್ತೇಜಿತವಾಗುತ್ತವೆ. ಇದರಿಂದ ಆ ವಿಕೃತ ಅಂಗದ ಮುಂಭಾಗದಲ್ಲಿರುವ ಮಾಂಸಪೇಶಿಗಳು ಕಠಿಣವಾಗಿ ಬಿಡುತ್ತವೆ. ಹೀಗಾಗಿ ವಿಕೃತಿಯ ಕಾರಣದಿಂದಾಗಿ ನಾಜೂಕಾದ ಅಂಗಕ್ಕೆ ಹೆಚ್ಚಿನ ರಂರಕ್ಷಣೆ ಸಿಕ್ಕುತ್ತದೆ.

ಈ ವರೆಗೆ ವರ್ಣಿಸಲ್ಪಟ್ಟ ನೋವಿನ ಅಧಿಷ್ಠಾನ, ಸ್ವಭಾವ, ಕಾರಣ ಮತ್ತು ಅದರೊಡನೆ ಕಂಡುಬರುವ ಇತರ ಲಕ್ಷಣ ಮುಂತಾದುವುಗಳ ಆಧಾರದ ಮೇಲೆ ರೋಗವನ್ನು ನಿಶ್ಚಯಿಸಿದ ನಂತರ ಔಷಧೋಪಚಾರಕ್ಕೆ ತೊಡಗಬೇಕು. ❋

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ,
ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳನ್ನು

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳನ್ನು

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ಸೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂಪರ್ ಸ್ಟ್ರೀಟ್, ಮದ್ರಾಸ

ಬಾಳ ದೀವಳಿಗೆಯದು ಬರುವುದೆಂದು?

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್

೧

ಮೆರೆದಿಹವು ಮಹಡಿಯಲಿ ಹೊಳಿವ ಬಲ್ಬಿನ ಸಾಲು
ತಮ್ಮ ವೈಭವಕೆ ಸರಿಯಾವುದೆಂದು?
ಮಿಣುಕುತಿವೆ ಗುಡಿಸಲಲಿ ಕಿರುಸೊಡರ ಹಣತೆಗಳು
ಇನ್ನೇನು ಕಾರಿರುಳು ಸರಿದಿತೆಂದು!

೨

ಮಹಡಿಯಲಿ ಶಹನಾಯಿ, ಭಾರಿ ವೈಭವ ತೀವಿ
ಬಂದ ಬಳಗಕ್ಕೆಲ್ಲ ಹಲ್ವಾ ಮೀಠಾಯಿ,
ಗುಡಿಸಲಲಿ ಸಡಸಾಯಿ ಮನೆಯ ಮಕ್ಕಳ ತಾಯಿ
ಹಂಚಿಹಳು ಭತ್ತಳ್ಳು ಕಡಲೆಕಾಯಿ.

೩

ಹಬ್ಬ ಹರುಷವ ನೆಲೆಯು, ನೇಹ ನಲುಮೆಯ ಬೆಳೆಯು
ಪೂಸನವತೆ ವೈವೆತ್ತ ಸಂಸ್ಕೃತಿಯ ಫಲವು,
ಪೂಜೆ ವೈಭವ ವಿಧವು—ಕಾಳಭೇದದ ಒಲವು
ಹಬ್ಬಟುಕ್ಕೆವ ಹರುಷ ಎಲ್ಲರಿಗು ಸಮವು.

೪

ಬರಿ ಮಹಡಿಯನು ಬೆಳಗಿ ಫಳಫಳಿಸಿ ಹೊಳೆದಿಹವು
ಬಣ್ಣ ಬಣ್ಣದ ಬೆಡಗು ಬಲ್ಬುದೀಪ,
ಹೊಗೆಯುಂಡು ಬೆಳಕಾಡಿ ಕತ್ತಲೆಯ ದೂಡುತಿವೆ
ಮನೆಮನೆಯ ಅಂಗಳದಿ ಮಿಣುಕುದೀಪ.

೫

ಅವ ಧನದ ಭಂಡಾರಿ—ಬರಿ ಕೋಕ ವ್ಯಾಪಾರಿ
ಅವನ ಕೈಚಳಕದಲಿ ಇಳಿದ ಬೆಲೆ ಏರಿ,
ಇವನು ಚಿಲ್ಲರೆ ಮಾರಿ ಕಿರುಕುಳದ ವ್ಯಾಪಾರಿ
ಪಡೆವಲ್ಪ ಲಾಭವೂ ಬಹು ಕಷ್ಟಕಾರಿ.

೬

ಅವ ದೊಡ್ಡ ಅಧಿಕಾರಿ, ಪಡೆವ ಸಂಬಳ ಭಾರಿ
ನಿತ್ಯವೂ ಅವಗಿಹುದು ಕಾರಿನ ಸವಾರಿ,
ಇವನು ಕರಣಿಕ ಪೋಲಿ ದಿನ ನಡೆದು ಮೂರ್ಕೈಲಿ
ದುಡಿದು ಸಣ್ಣಾದರೂ ಇವನ ಕೈಖಾಲಿ.

೭

ಅವ ದೊಡ್ಡ ದಲ್ಲಾಲಿ—ಕರಿನೇಟಿಯಾಳ್ವ ಬಲಿ
ಅವನ ಮಹಲಲಿ ನಿತ್ಯ ದೀಪಾವಳಿ,
ಇವನು ಬರಿ ಹನ್ಯಾಲಿ ದೊರೆತಿರಲು ದಿನಗೂಲಿ
ಬೇಯುವವು ಮನೆಯಲ್ಲಿ ಅನ್ನಜೇಳ.

೮

ಅಧಿಕಾರಿ, ದಲ್ಲಾಲಿ, ಧನಿಕ ಜನ, ಶ್ರೇಷ್ಠಿಗಳ
ಧನದ ದೀವಳಿಗೆಯೇ ನಡೆದುದಿಂದು,
ಸಕಲರಿಗು ಸರ್ವಸುಖ ಸಂಪೃಪ್ತಿ ದಯೆನೈವ
ಬಾಳ ದೀವಳಿಗೆಯದು ಬರುವುದೆಂದು?

ಹುಚ್ಚೆದ್ದು ಕುಣಿಯುತಿದೆ!

ಶ್ರೀ. ಎನ್. ಆರ್. ಹಾಡಿ,
ಮುಟ್ಟತ್ತೋಡಿ.

೧

ತಳೆದು ಮಹದಾವೇಶ ವಿಕಟಾಟ್ಟಹಾಸದಲಿ
ಹುಚ್ಚೆದ್ದು ಕುಣಿಯುತಿದೆ ಜಗವು ನೋಡು!
ತಾಳಲಯಗಳನುಳಿದ ಆಸುರೀ ನರ್ತನವು
ಜೀವಕೋಟಿಯ ಕೇಕೆಯದಕೆ ಹಾಡು!

೨

ಸದ್ಗುಣ ಸದಾಚಾರ ಸೋದರತೆ ಸೌಹಾರ್ದ
ನಯವಿನಯ ಸಂಸ್ಕೃತಿಯ ತಳಕೆ ಒತ್ತಿ
ಮರೆಮೋಸವನ್ಯಾಯ ದ್ವೇಷ ಮತ್ಸರ ಮನೆದು
ಗುಸುಗುಟ್ಟುತಿವೆ ತಮ್ಮ ತಲೆಯನೆತ್ತಿ!

೩

ಬುದ್ಧಿಬಲ ಬೆಳೆದಿಹುದು ಹೃದಯವವದು ಕುಗ್ಗಿಹುದು
ಎಲ್ಲೆಲ್ಲು ಸಂಕುಚಿತ ಸ್ವಾರ್ಥನೃಷ್ಟಿ
ಪ್ರೇಮ ದಯೆ ದಾಕ್ಷಿಣ್ಯಗಳ ಸುಟ್ಟು ಕಳೆದಿರಲು
ಬೆಳೆದಿಹುದು ವಿಷಲತೆಯು ಹೊಸತು ಸೃಷ್ಟಿ!

೪

ನಾಗರಿಕರೆಂದುಬ್ಬಿ ಸಭ್ಯತೆಯ ಸೋಗಿನಲಿ
ನಡೆಸುವ ದುರಾಚಾರ ಕೆಲ್ಲೆಯಿಹುದೆ?
ನಗರದಾ ನಾಗರಿಕ ಮೊಗಗಳಲಿ ಬಿಂಬಿಸಿಹ
ಕೃತ್ರಿಮದ ಜೀವನವ ಪುಸಿಯಬಹುದೆ!

೫

ವಿಜ್ಞಾನದಾ ಮಹಾನೆರವಿನಿಂ ಹುಚ್ಚೆದ್ದು
ಭೌತಿಕಜ್ಞಾನದಾ ಶಿಖರ ಮುಟ್ಟಿ
ಮಾರಕಾಸ್ತ್ರದ ರಕ್ತಸರ ಜನ್ಮ ತಳೆದಿಹರು
ಮುಂಗಿ ನೋಜೆಯಲು ಜೀವ ಜಾಲ ಮೆಟ್ಟಿ!

೬

ಉನ್ಮಾದದಿಂದ ಜಗ ವೈಮನೆದು ನಲಿಯುತಿದೆ
ದನಿಯೆಲ್ಲಿ ಕೊನೆಯೆಲ್ಲಿ ಈ ನೃತ್ಯಕೆ?
ಗುರಿಯಿಲ್ಲ ಅರಿವಿಲ್ಲ ತೀವ್ರಗತಿಯಿಂದುರುಳಿ
ಸಾಗುತಿಹುದಾವ ಶೂನ್ಯದ ಗರ್ತಕೆ?

ಮುಗಿದ ಅವತಾರ*

ಒಂದು ಜೀವನ ದರ್ಶನ

ಪಾತ್ರ ಪರಿಚಯ:

ವೆಂಕಮ್ಮ — ಮನೆಯ ಒಡತಿ.
ಮಾಲಾ — ಸೊಸೆ.
ಲೀಲಾ — ಮಾಲಾನ ಗೆಳತಿ, ಕಾಲೇಜ ಕಟ್ಟೆಯನ್ನೇರಿದಾಕೆ.
ನೀಲವ್ವ — ಮನೆಯ ಆಳು.
ಸಾವಿತ್ರಮ್ಮ — ನೆರೆಮನೆಯವರು.

ಶ್ರೀ. ವಿ. ಎನ್. ಕರಬಂಟನಾಳ ಬಿ. ಎ.
ನ್ಯೂ ಹಾಯಸ್ಕೂಲ್ ಆಥಣಿ

ದೃಶ್ಯ ೧

[ತೆರೆ ಏರುತ್ತಲೇ ನೀಲವ್ವ ಟೇಬಲ್ ಕ್ಲಾಥ್ ತೆಗೆದು ಹಾಕುತ್ತಿರುವಳು. ಗೋಡೆಗೆ ಕ್ಯಾಲೆಂಡರು ಮತ್ತು ಫೋಟೋಗಳು ತೂಗುಬಿದ್ದಿವೆ. ಟೇಬಲ್ ಮೇಲೆ ಪೇಪರ್ ಮತ್ತು ಕಾದಂಬರಿಗಳು ಬಿದ್ದಿವೆ.]

ಲೀಲಾ: (ಹೊರಗಿನಿಂದ ಬಂದು ಅಕಡೆ ಈ ಕಡೆ ನೋಡುತ್ತ) ನೀಲವ್ವಾ ! ನೀಲವ್ವಾ !! ಮಾಲಾ ಮನಿಯೊಳಗ ಇದ್ದಾಳೇನು ?

ನೀಲವ್ವ: ಬರ್ರೀ ಬಾಯಿಯವರು ಮನ್ಯಾಗs ಇದ್ದಾರ ಬರ್ರಿ. ಮನಿ ಬಿಟ್ಟು ಮತ್ತೆಲ್ಲಿ ಹೋಗ್ತಾರ ?

ಲೀಲಾ: ಮನೀ ಬಿಟ್ಟು ಮತ್ತೆಲ್ಲಿ ಹೋಗುವದಿಲ್ಲೇನು ?

ನೀಲವ್ವ: ಹೋಗ್ತಾರ ಬಿಡ್ರಿ. ಆದ್ರ ನಿಮ್ಮಾಂಗ ಹ್ಯಾಂಗ ಹೋಗಲಿಕ್ಕೆ ಬರ್ತದರಿ ? ನೀವs ಕಾಲೇಜದಾಗ ಇದ್ದೀರಿ; ಅದಕ್ಕ ಎಲ್ಲಿ ಬೇಕಾದಲ್ಲಿ ಅಂಜಿಕಿಲ್ಲದ ಹೋಗಿ ಬರ್ತೀರಿ.

ಲೀಲಾ: ನೀಲವ್ವಾ, ನಮ್ಮ ಕಾಲೇಜಿನೊಳಗ ಗೆಳತೇರು ಬಹಳ ಮಂದಿ ಇರತಾರ. ಅವರ ಮನಿಗೆ ನಾವು ಹೋಗೋದು, ನಮ್ಮ ಮನಿಗೆ ಅವರು ಬರೂದು–ಹಾಗೇ ನಡಿಯೋದೇ ಅದು. ಇಲ್ಲದಿದ್ದರೆ ಹೊತ್ತು ಹ್ಯಾಂಗ ಹೋಗಬೇಕು ?

ನೀಲವ್ವ: ಹೊತ್ತು ಕಳೆಯೋ ಸಾಧನ ಚೆಲೋ ಐತಿ ಬಿಡ್ರಿ.... ಅಲ್ರೀ... ....ಬಾಯಿತ! ಮನಿಯೊಳಗ ಏನರೇ ಕೆಲಸಾ ಮಾಡಿಕೊಂತ ಕುಂತ್ರ ಆಗೂದಿಲ್ರೆ ?

ಲೀಲಾ: ಮುಂದ ಮದಿವಿ ಆದಮ್ಯಾಲ ಕೆಲಸಾ-ಬೊಗಸಿ ಇದ್ದೇ ಇರ್ತಾವಲ್ಲ. ಹೆಣ್ಣುಮಕ್ಕಳಿಗೆ- ಸ್ವಾತಂತ್ರ್ಯ ಈಗs ಸ್ವಲ್ಪ ಸಿಗೂದು. ಅದಕಂತ ಹೇಳೇ ನಾವು ಈಗ ಆಟಾಪಾ ತಿರುಗ್ಯಾಡ್ತೀವಿ.

ಮಾಲಾ: (ಒಳಗಿನಿಂದ ಬರುತ್ತ) ಅಮ್ಮ .....ಯಾವಾಗ ಬಂದೀಯ ಲೀಲಾ ? ಒಳಗ ಬರಬಾರ್ದೇನು ? ಇಲ್ಲೇ ನಿಂತೀಯಲ್ಲ.

ಲೀಲಾ: ಒಳಗ ನಿನ್ನ ಅತ್ತೀಯವರು ಇರ್ತಾರಂತ ಹೇಳಿ, ನಾ ಇಲ್ಲೇ ನಿಂತಿದ್ದೆ; ಅವರಿದ್ದಾಗ ಬರೂವಕ್ಕ ಸ್ವಲ್ಪ ಅಂಜಿಕೇನೇ ಬರ್ತದ.

ಮಾಲಾ: ನಾ ಇರೂತನಕಾ ನೀ ಯಾಕ ಅಂಜತೀಯ! ಬಂದ ಕೂಡ್ಲೆ ನೆಟ್ಟಗ ಅಡೀಗೀ ಮನೀಗೆ ಬರಬೇಕು, ತಿಳಿತಿಲ್ಲೋ ?

ಲೀಲಾ: ನಿನ್ನ ಅತ್ತೀಯವರು ಮದಲೇ ಸ್ವಲ್ಪ ಹಳೇ ಕಾಲದ ಮಂದಿ. ನಮ್ಮಂಥಾ ಹೊಸಾ ಕಾಲದವರನ್ನ ಅವರು ಸೇರೂದಿಲ್ಲಾ. ಅದರಾಗs ಕಾಲೇಜ ಕಟ್ಟೀ ಏರಿದವರಿದ್ದರಂತೂ ತೀರೇ ಹೋಯ್ತು !

ಮಾಲಾ: ಅಂಥಾದ್ದಕ್ಕೆಲ್ಲಾ ಅಂಜಬಾರ್ದು ನೋಡು! ಹಳೇ ಮಂದೀ ಹಳೇ ವಿಚಾರಕ್ಕ ನಾವು ಸೊಪ್ಪ ಹಾಕಬಾರ್ದು. ಅತ್ತಿಗೆ ಅಂಜೂದು ಒಂದು ಕಾಲ ಇತ್ತು; ಆದ್ರ ಈಗ ಕಾಲ ತಿರಿಗೇದ.

ಲೀಲಾ: ಕಾಲ ತಿರಿಗೇದೋ ಅಥವಾ ನಿನ್ನ ತಲೀ ತಿರಿಗೇದೋ ಯಾರಿಗ್ಗೊತ್ತು.

ಮಾಲಾ: ಸುಮ್ಮನೇ ನೀ ಹುಡುಗಾಟಕೀ ಮಾಡಬ್ಯಾಡ.... ನಾ ಹೇಳೂ ಮಾತು ಖರೇ ಅದ! (ನೀಲವ್ವನ ಕಡೆ ನೋಡಿ)ದ್ಯಾಮವ್ವ ನಿಂತಾಂಗ ಹಿಂಗ್ಯಾಕ ನಿಂತೀಯs ಕೆಲಸಾ ಬಿಟ್ಟು ? ಟೇಬಲ್‌ಕ್ಲಾಥ್ ಒಗೀಲಿಕ್ಕೆ ತಗೊಂಡಿ ಇಲ್ಲೋ ?

ನೀಲವ್ವ: ತಗೊಂಡೀನ್ರಿ.... ....

ಮಾಲಾ: ಅಂದ್ರ ಅದಕ್ಕೆಷ್ಟು ಸಾಬಾಣ ಹಚ್ಚೆಡು. ಮತ್ತ ಹೆಂಗs ನನ್ನ ಬಿಳೀ ಪತ್ತಲ ಒಂದಿತ್ತು ನೋಡು.

ನೀಲವ್ವ: ಹೂನ್ರಿ (ಎಂದು ಒಳಗೆ ಹೋಗುವಳು)

ಲೀಲಾ: ಹಿಂಗ್ಯಾಕ ಜಬರಸ್ತೀಯ ಆಕಿನ್ನ ? ಆಕಿನೂ ನಮ್ಮ ಮಾತು ಕೇಳಬೇಕಂತಿದ್ದಾಳು.

ಮಾಲಾ: ಮತ್ತೇನ ಕೇಳ್ತಾಳ ! ದಿನಾ ಮನಿಯೊಳಗಿನ ಜಗಳದ ಮಾತು ಕೇಳಿ ಸಾಕಾಗಿಲ್ಲೇನು ?

ಲೀಲಾ: ಅಂದ್ರ ಮನಿಯೊಳಗ ಅತ್ತೀ ಸೊಸೀಗೆ ವಾದ ಸಾಕಷ್ಟು ಆಗ್ತದ ಅಂದ್ಹಾಂಗ ಆಯ್ತು.

ಮಾಲಾ: ಇನ್ನೂ ಕೇಳ್ತಿ ಏನು ? ನನಗಂತೂ ಸಾಕಾಗಿ ಹೋಗೇದ ನಮ್ಮವ್ವಾ! ನಮ್ಮ ಅತ್ತೀ ಬಾಯಿ ಸುರು ಆಯ್ತು ಅಂದ್ರ, ಒಡಕ ರಿಕಾರ್ಡ ಹಚ್ಚೆದ್ಹಾಂಗ ...ತಲೀ ಅನ್ನೂದು ಗಿನೌ ಅಂತಿಲ್ಲದ.

ಲೀಲಾ: ಅಲ್ಲಽ ಜಗಳ ಆಗ್ಲಿಕ್ಕೆ ಕಾರಣರೆ ಏನಽ ?

ಮಾಲಾ: ಎಲ್ಲೇ ಮಣ್ಣಾಗಿನ ಕಾರಣ!....ಎಲ್ಲಾ ವಿನಾಕಾರಣ. ನೋಡು, ನಾನು ಅಕಸ್ಮಾತ್ ಗೆಳತೇರ ಮನಿಗೆ ಹೋದ್ರ, 'ನೀ ಯಾಕ ಹೋಗಿದ್ದೀ' ಅಂತ ಕೇಳತಾಳ. ನೀವ್ಯಾರರೆ ಬಂದಾಗ ಚಹಾ ಮಾಡಿ-

*ಧಾರವಾಡ ಆಕಾಶವಾಣಿ ಕೇಂದ್ರದಿಂದ ಚಿತ್ರಣಗೊಂಡ ರೂಪಕ.—ಲೇ.

ವರ, 'ದಿನಕ್ಕ ನಾಲ್ತೈದು ಸಾರೆ ಚಹಾ ಮಾಡ್ಲಿಕ್ಕೆ ಇದು ಚಹಾ-ದಂಗಡೇನು?' ಅಂತ ಕೇಳ್ತಾಳ. ನಾನು ಟೇಬಲ್‌ಕ್ಲಾಥ್ ಹೊಸಾವು ಮಾಡಿದರ, ಮತ್ತ ಕಸೂತಿ ಹಾಕಿದ್ರ,... ಬಹಾಳ ಸಿಟ್ಟು. 'ನಿನಗ ಹಿಡತಿನ ಮ್ಯಾಲೆ ಸಂಸಾರ ಮಾಡ್ಲಿಕ್ಕೇ ಬರೂದಿಲ್ಲಾ; ಹಿಂಗಾದ್ರ ನೀ ಮನಿ ಹಾಳ ಮಾಡತೀದಿ!' ಅಂತ ಒದರ್ಯಾಡತಾಳ.

ಲೀಲಾ: ಹಳೇ ಮಂದಿ ಸ್ವಭಾವ ಬಹಳ ವಿಚಿತ್ರ ಇರತಾವ. ಬರೇ ತಮ್ಮ ಕಾಲದ ವರ್ಣನಾನೇ ಮಾಡತಾರ. ಈಗಿನ ಕಾಲ ಎಂಥಾದ್ದು ಅನ್ನೂದನ್ನ ವಿಚಾರ ಮಾಡೂದೇ ಇಲ್ಲ.

ಮಾಲಾ: ಹೊಸತಾಗಿ ಬಂದಾಗ, ತಮ್ಮ ಅತ್ತಿ ಆಕಿನ್ನ ಬಹಳ ಕಾಡಿಸಿದ್ಲಂತ. ಮತ್ತ ತನ್ನ ಕೈಯಾಗ ಏನೂ ಸ್ವಾತಂತ್ರ್ಯ ಇದ್ದಿದ್ದಿಲ್ಲಂತ. ಈಗ ನನಗ ಇಷ್ಟು ಸ್ವಾತಂತ್ರ್ಯ ಇದ್ದದ್ದನ್ನು ನೋಡಿ ಹೊಟ್ಟೀಕಿಚ್ಚುಪಡತಾಳ.

ಲೀಲಾ: ಅಂದ್ರ....ಈಗ ಮನೀ ಮಾಲಕ್ತಿ ನೀನೇ ಆಗೀದಿ ಅಂದ್ಹಾಂಗ ಆಯ್ತು. ಮತ್ತ ಮೊದಲನೇ ತಾರೀಖಿನ ಪಗಾರ ನಿನ್ನ ಕಯ್ಯಾಗs ತಂದು ಕೊಡತಿದ್ದಾರು ನಿಮ್ಮ ರಾಯರು–ಹೌದಲ್ಲೊ?

ಮಾಲಾ: ಈ ಮೊದಲನೇ ತಾರೀಖಿನ ಪಗಾರನs ನೋಡು, ಎಲ್ಲಾ ಕೆಡಿಸಿದ್ದು!

ಲೀಲಾ: ಯಾಕ?

ಮಾಲಾ: ನಾ ಬರೂದಕಿಂತ ಮೊದಲ, ಪಗಾರ ಬಂದ ಕೂಡ್ಲೆ "ಅವರು" ತಮ್ಮ ಅವ್ವನ ಕೈಯಾಗ ಕೊಡತಿದ್ರು. ಎಲ್ಲಾ ಮನೀ ವ್ಯವಹಾರ–ಅಂದ್ರ—ಸಂತಿ ಪ್ಯಾಟಿ ತಾನೇ ಮಾಡಿಕೊಂತ ಬರತಿದ್ಲು. ತಾನೂ ಸ್ವಲ್ಪ ಹಣಾ–ತನ್ನ ಸಲುವಾಗಿ— ಕೂಡಿ ಹಾಕತಿದ್ಲು ನಾ ಬಂದದ್ಯಾಲ ಅದೆಲ್ಲಾ ತಪ್ಪಿ ಹೋಗೇದ.

ಲೀಲಾ: ಮಾಲಾ "ಅವರು" ಅಂತ ಅಂದೆಲ್ಲs....ಅವರು ಅಂದ್ರ ಯಾರು?

ಮಾಲಾ: ಇಲ್ಲಿ ಬಿಡs ಸುಮ್ಮನs ಏನರೇ ತಗೀತಿಯಲ್ಲ! "ಅವರು" ಅಂದ್ರ "ಅವರು"....ನಾಳೆ ನೀ ಏನಂತಿ ನೋಡೋಣು 'ಅಸರು' ಅಂತೀಯೋ ಅಥವಾ 'ಅವನು' ಅಂತಿಯೋ ಯಾರಿಗ್ಗೊತ್ತು.

ಲೀಲಾ: ಹಂಗ್ಯಾಂಗ ಆಗ್ತದನs! ನಿಮ್ಮಂಥವರು ನಾಲ್ಕು ಮಂದಿ ಹ್ಯಾಂಗ ರೂಢಿ ಇಟ್ಟೆರತೀರಿ, ಹಾಂಗs ನಾವೂ ಆಗಬೇಕಾಗ್ತದ. ಅಲ್ಲs ಮತ್ತ ಬಾಳ ಜೋರ್ಲೆ ಮಾತಾಡ್ಲಿಕ್ಕೆ ಹತ್ತೀದಿ. ನಿಮ್ಮ ಅತ್ತಿ ಮನಿಯೊಳಗ ಇಲ್ಲೇನು?

ಮಾಲಾ: ಮನಿಯೊಳಗ ಇದ್ದರೇನು ಇಲ್ಲದಿದ್ದರೇನು? ಇದ್ದ ಸಂಗತಿ ಮಾತಾಡ್ಲಿಕ್ಕೆ ನಾ ಏನು ಅಂಜೂದಿಲ್ಲ. ಈಗ ನೋಡು, ಹನುಮಂತ ದೇವರ ಗುಡೀಗೆ ಹೋಗ್ಯಾಳ; ಗುಡಿಯಿಂದ ನೆಟ್ಟಗ ಮನೀಗಿ ಬಂದ್ರ ಆಗೂದಿಲ್ಲ? ಅದೆಲ್ಲ ಬಿಟ್ಟು, ದಾರೀಯೊಳಗ ಗಂಗಾ-ಬಾಯಿಯವರ ಮನಿ—ತುಂಗಾಬಾಯಿಯವರ ಮನಿ ಮತ್ತ ಸಾವಿತ್ರಿ-ಬಾಯಿವರ ಮನಿ ಹೀಂಗ ಮೂರು ನಾಲ್ಕು ಮನ್ಯಾಗ ನಿಂತು, ಮಾತು ಕತಿ ಆಡಿ ಮನೀಗಿ ಬರ್ತಾಳ.

ಲೀಲಾ: ನಾವು ಹ್ಯಾಂಗ ಮಾತಾಡ್ತೀವಿ ಹಾಂಗ ಅವರೂ, ತಮ್ಮ ಜೋಡೀ ಮುಂದೀ ಕೂಡಾ ಮಾತಾಡವರೇ ಅಲ್ಲs! ಅದನ್ಯಾಕ ನೀ ಹೇಳಬೇಕಾನೇದ?

ಮಾಲಾ: ಹಾಂಗಲ್ಲs....ಅವರ ಮನೀಗೆ ಹೋಗಿ, ಸಾದಾ ಮಾತು ಕಥಿ ಬೇಕಾದ್ಹಾಂಗ ಆಡ್ಲಿ–ಆದಕ್ಕ ನನ್ನ ತಕರಾರು ಇಲ್ಲ. ಆದರ ಅವರ ಮುಂದ ಸುಳ್ಳೊಂದು ಸೊಟ್ಟೊಂದು ಏನರೇ ಹೇಳಿ, ಕಡ್ಡಿ ಇದ್ದದ್ದನ್ನು ಗುಡ್ಡಾನಮಾಡಿ ಬರ್ತಾಳ. ಒಂದೊಂದು ಸಲಾ ನಮ್ಮ ಮನಿಯೊಳಗಿನ ಸುದ್ದಿ ನಮಗ ಗೊತ್ತಿರೂದಿಲ್ಲ; ಆದ್ರ ಊರಮಂದಿ-ಗೆಲ್ಲಾ ಗೊತ್ತಿರ್ತsದ.

ಲೀಲಾ: ನಿನ್ನ ವಿಷಯಕ್ಕs ಏನರೆ ಹೇಳತಿದ್ದಾಳು, ಹೌದಲ್ಲೊ?

ಮಾಲಾ: ನನ್ನ ವಿಷಯಕ್ಕೂ ಅಷ್ಟೇ ಹೇಳತಾಳ; ಅನರ ವಿಷ-ಯಕ್ಕೂ ಅಷ್ಟೇ ಹೇಳತಾಳ. ನಾವು ನಮ್ಮ ಸಲುವಾಗಿ ಚಹಾ ಬ್ಯಾರೆ ಮಾಡ್ತೀನಂತ; ಆಕಿಗೆ ಬ್ಯಾರೆ ಮಾಡಿಕೊಡತೀನಂತ. ತಿನ್ಲಿಕ್ಕೆ ಏನರೆ ಮಾಡಿದಾಗ, ಇಕಿನ್ನ ಬಿಟ್ಟು ನಾವೇ ತಿಂತೀವಂತ! ಹೀಗೆಲ್ಲಾ ಹೇಳಿದ್ರ ಏನ ಮಾಡಬೇಕು?

ಲೀಲಾ: ಹೀಗೆಲ್ಲಾ ಹೇಳಿದ್ದು ನಿನ್ನ ಮುಂದ ಯಾರ ಹೇದ್ರ?

ಮಾಲಾ: ಮೊನ್ನೆ ನಮ್ಮ ಮನೀಗೆ ಏನೋ ಸಾಮಾನು ಕೇಳ್ಲಿ-ಕ್ಕಂತ–ಸಾವಿತ್ರಿಬಾಯಿಯವರು ಬಂದಿದ್ರು. ಆಗ ಒಂದ ಮಾತಂದ್ರು "ಏನs ಮಾಲಾ, ಮತ್ತ ವೆಂಕಮ್ಮನವರಿಗೆ ಜೆಳ್ಳೋದಿಸ್ದ ಚಹಾ ಮಾಡಿ ಕೊಡಬಾರ್ದ? ಹೀಂಗ ಭೇದಭಾವ ಯಾಕ ಮಾಡ್ತಿ?" ಅಂತ ಅಂದ್ರು. ಆವಾಗ ನನಗ ಬಹಳ ಸಿಟ್ಟು ಬಂತು.

ಲೀಲಾ: ಈ ಮಾತಿಗೆ ನೀ ಏನು ಉತ್ತರಾ ಕೊಟ್ಟೆ?

ಮಾಲಾ: ನಮ್ಮ ಅತ್ತಿ ಏನೇನು ಕುತಂತ್ರ ಮಾಡ್ತಾಳನ್ನೂ-ದನ್ನ ಎಲ್ಲಾ ಅವರ ಮುಂದ ಬಿಚ್ಚಿ ಹೇಳಿಬಿಟ್ಟಿ. ಅತ್ತಿ ಅಂದ್ರ ಮನಿ-ಯೊಳಗ ಸರ್ವಾಧಿಕಾರಿ. ಸೊಸೀ ಅಂದ್ರ ಒಂದು ತೊತ್ತು ಅನ್ನೂ ಭಾವನಾದಿಂದ, ಏನಕೇನರೆ ಮಾತಾಡ್ತಾಳ. ಅದು ನನಗ ತಡಿಯೂ-ದಿಲ್ಲ.

ಲೀಲಾ: ಹಿಂದಕ ನಾವು ತಮ್ಮ ಅತ್ತೀ ಕೈಯಾಗ ಅಂಜಿ ನಡ-ದಿದ್ರು ಅಂದ್ರ, ತಮ್ಮ ಸೊಸೆಯಂದಿರನ್ನ ಅಂಜಿಸಬೇಕನ್ನೂ ಮಂದಿ ಬಹಳ ಇದ್ದಾರ. ಸೊಸಿ ಸಂಭಾವಿತ ರೀತಿಯಿಂದ ಇದ್ರೂ, ಕಾಡಿಸಿ ಕಾಡಿಸಿ ಜೀವಾ ತಿನ್ನೂದಕ ಅತ್ತಿ ಆದವರು ಹಿಂದ ಮುಂದ ನೋಡೂ-ದಿಲ್ಲ.

ಮಾಲಾ: ಇಂಥವರಿಗೆ "ಅತ್ತಿ"ಅಂತ ಹ್ಯಾಂಗ ಅನಬೇಕು ಮತ್ತ?

ಲೀಲಾ: ಅಂಥವರಿಗೆ "ಅತ್ತಿ" ಅಂತ ಅನ್ನುವಾಗ 'ಅ' ತಗದು 'ಕ' ಹಾಕಿ ಬಿಡಬೇಕು, ಅಂದ್ರ ಸರಿ ಹೋಗ್ತದ.

ಮಾಲಾ: (ಇಬ್ಬರೂ ನಕ್ಕು) **ಲೀಲಾ, ಈ** ಮಾತು ನನ್ನ ಮನಸ್ಸಿಗೆ ಬಂತು ನೋಡು.

ಲೀಲಾ: ನಿನಗ ಜೇಕಾದ ಮಾತು ಇದು; ಅಂದ ಮ್ಯಾಲ ನಿನ್ನ ಮನಸ್ಸಿಗೆ ಬರದೇ ಏನಮಾಡ್ತದ? ಅಲ್ಲs ಮಾಲಾ, ನಿಮ್ಮ ಅತ್ತಿ

ಸುನೀ ಮಾತೆಲ್ಲಾ ಮುಂದೀ ಮನೀಗೆ ಹೋಗಿ ಹೇಳಿ ಬರ್ತಾಳಂತ ಹೇಳಿದಿ, ಆದ್ರ ನೀನರೆ ಎಲ್ಲಿ ಬಿಟ್ಟೀದಿ ?

ಮಾಲಾ: ಯಾಕವ್ವಾ, ನಾ ಎಲ್ಲಿ ಮುಂದೀ ಮನಿಗೆ ಹೋಗಿ ಹೇಳೀನಿ— ಹೇಳು ನೋಡೂಣು ?

ಲೀಲಾ: ನಿಮ್ಮ ಅತ್ತಿ ಮುಂದೀ ಮನಿಗೆ ಹೋಗಿ ಹೇಳಿ ಬರ್ತಾಳ; ಆದ್ರ ಮನಿಗೆ ಬಂದ ಮುಂದೀ ಮುಂದ ನೀ ಹೇಳ್ತೀದಿ ಇಷ್ಟೇ ಫರಕು.

ಮಾಲಾ: ಹಂಗೆಲ್ಲಿ ಹೇಳೀನೇ ನಮ್ಮವ್ವಾ! ಸಾವಿತ್ರಿಬಾಯಿಯವರು ತಾವೇ ಕೇಳಿದ್ರು ಅಂತ, ಅವರ ಮುಂದಿಷ್ಟು ಹೇಳ್ದೆ; ಮತ್ತ ನೀನು ನನ್ನ ಗೆಳತಿ ಅಂತ ತಿಳಿದು ನಿನ್ನ ಮುಂದಿಷ್ಟು ಹೇಳಿದೆ. ಏನ ದೊಡ್ಡ ತಪ್ಪಾಯ್ತು ? ಆದ್ರ ನೀನು ಈ ಮಾತು ಯಾರ ಮುಂದೂ ಹೇಳ್ಬ್ಯಾಡ ತಿಳೀತಿಲ್ಲೊ ?

ಲೀಲಾ: ನಾ ಯಾರ ಮುಂದೂ ಹೇಳೂದಿಲ್ಲ; ಒಂದು ಸೇಲಿ ಹೇಳೂದಾಮ್ಯಾ ಸುದ್ದಾ " ನೀವು ಈ ಮಾತು ಯಾರ ಮುಂದೂ ಹೇಳಬ್ಯಾಡ್ರಿ" ಅಂತ ಕರಾರು ಹಾಕಿ ಅವರಿಗೆ ಹೇಳ್ತೀನಿ....ಆಯ್ತಲ್ಲೊ?

ಮಾಲಾ: ಹ್ಯಾಂಗರೆ ಆಗ್ಲಿ, ಜೆಲೋ ಮಾಡ್ತೀಯಂತಾ! ನಿಮ್ಮಂಥವರು ಜೂರಿಗೆ ಇಬ್ಬಿಬ್ಬರು ಇರಬೇಕು ನೋಡು, ಅಂಪ್ರ ಊರೊಳಗ ವರ್ತಮಾನಪತ್ರದ ಆವಶ್ಯಕತೀನೇ ಬೀಳೂದಿಲ್ಲ

ಲೀಲಾ: ಇಲ್ಲೇಳ್ಕ ಮಾಲಾ ! ನಾ ಯಾರ ಮುಂದೂ ಹೇಳೂದಿಲ್ಲಾ. ಇಷ್ಟ್ಯಾಕ ಆಣಕದ ಮಾತಾಡ್ತೀದಿ? (ಗಡಿಯಾರದಲ್ಲಿ ಟಾಯಿಮ್ ನೋಡಿ) ನಾ ಇನ್ನ ಬರ್ತೀನವಾ, ಹೊತ್ತು ಭಾಳ ಆಯ್ತು.

ಮಾಲಾ: ಕೂಡ್ರ ಈಗೆಲ್ಲಿ ಅಂಥಾ ಹೊತ್ತಾಗೇದ? ಇನ ತ್ತಂತೂ ಸಂಡೆ ...ಕಾಲೇಜ ಇಲ್ಲಾ ಏನಿಲ್ಲಾ. ಅಂದಮ್ಯಾಲ ಇಷ್ಟ್ಯಾಕ ಗಡಿಬಿಡಿ ಮಾಡ್ತೀದಿ? ಸ್ವಲ್ಪ ಚಹಾಕಿಟ್ಟವ ಕೂಡ್ರಲಾ !

ಲೀಲಾ: ನಾ ಒಲ್ನವಾ, ಹೋಗ್ತೀನಿ ಕೆಲಸ ಐದ.

ಮಾಲಾ: ಅಂಥಾದು ಏನ ಕೆಲಸ ಐದನ್ಯ....ಸುಮ್ಮ ಸುಮ್ಮನೆ ಏನರೇ ಹೇಳ್ತೀಯಲ್ಲ. ಒಂದು ಕಪ್ಪು ಚಹಾ ತಗೊಂಡು ಹೋಗು ! ಈಗ ಸಪ್ಪೇ ತಯಾರವ.

ಲೀಲಾ: ಏನ ಮಾಡತಿ ಬಿಡವ್ವಾ; ಬರೇ ಚಹಾ ನಾ ಒಲ್ಲೆ....

ಮಾಲಾ: ಅಂಪ್ರ ನಿನಗ ತಿನ್ಲಿಕ್ಕೂ ಬೇಕಂತಾಂಗ ಆಯ್ತಲ್ಲಾ! ಚಹಾ ಒಲ್ಲೆ ಅಂತ ಕೇಳಂತ ನಾ ಮಾಡೀನಿ; ಏನ ಕಡ್ಡಿಮುಲ್ಲು; ನಿನ್ನೆ ಮಾಡಿದ ಬಟಾಟೇ ಚೀಪ್ಸ್ ಇವ, ಅವನ್ನೇ ತರಸ್ತೀನಿ ಕೂಡ್ರು.

ಲೀಲಾ: ಆಗ್ಲಿ, ಲಗೂನೆ ತರಿಸಿಬಿಡು. (ಟೇಬಲ್ ಮೇಲಿನ ಪೇಪರ ನೋಡುವಳು.)

ಮಾಲಾ: ನೀಲವ್ವಾ.....ನೀಲವ್ವಾ.....ಬಾ ಇಲ್ಲಿ.

ನೀಲವ್ವ: ಯಾಕ್ರಿ ಬಾಯವ್ವರ, ಎದಕ್ಕ ಕರದ್ರಿ ?

ಮಾಲಾ: ಪ್ಲೇಟಿನೊಳಗ ಬಟಾಟೇ ಚಿಪ್ಸು ಹಾಕಿಕೊಂಡು, ಕಪ್ಪಿನೊಳಗ ಚಹಾ ಸೋಸಿಕೊಂಡು ಬಾ! ಅಲ್ಲಿ ಐಸೇದ ಮಾಡ-ದಾಗ-ಕಾಜಿನ ಭರಣಿಯೊಳಗ-ಅದಾವು ನೋಡು ಬಟಾಟೆ ಚಿಪ್ಸು (ಹೂಂ ಎಂದು ಒಳಗೆ ಹೋಗುವಳು)

ಲೀಲಾ: ಮಾಲಾ, ಮನ್ನೆ ನಮ್ಮ ಕಾಲೇಜಾ ಡಿಬೇಟಿಂಗ ಯೂನಿಯನ್ನಿನಾಗ ನಾ ಭಾಷಣಾ ಮಾಡಿದಾಗ, ನನ್ನ ಭಾಷಣ ನಿನಗ ಹ್ಯಾಗ ಅನಿಸ್ತು ?

ಮಾಲಾ: ಭಾಷಣಾ ಮಾಡಿದವರಿಗೆ, ತಮ್ಮ ಭಾಷಣ ಹ್ಯಾಗ ಆಯ್ತು ಅನ್ನೂದು ಗೊತ್ತಾಗೂದಿಲ್ಲೇನು ?

ಲೀಲಾ: ಇಂಥಾದ್ದರೊಳಗ ಮತ್ತೊಬ್ಬರ ಅಭಿಪ್ರಾಯ ಕೇಳೂದ ಚೆಲೊ.

ಮಾಲಾ: ನಿನಗ ಏನು ಅನಿಸೇದ ಅನ್ನೂದನ್ನ ಮೊದಲ ನೀ ಹೇಳು. ಆಮ್ಯಾಲ ನನ್ನ ಅಭಿಪ್ರಾಯ ನಿನಗ ಹೇಳ್ತೀನಿ.

ಲೀಲಾ: ನಾ ಸೂತಾಡೂ ಮುಂದ ಹುಡುಗೂರು ಸುಮ್ಮನ ಕೂತಿದ್ರು ಅಂದಮ್ಯಾಲ, ನನ್ನ ಭಾಷಣ ಜೆಲೋ ಆಯ್ತು ಅಂತ ನನಗನಸ್ತದ !

ಮಾಲಾ: ಹುಡುಗೂರು ನಿನ್ನ ಭಾಷಣಕ್ಕೆಲ್ಲಿ ಸುಮ್ಮನ ಕೂತಿದ್ರ ? ನಿನ್ನ ಮುಖಾ ನೋಡಿ ಸುಮ್ಮನ ಕೂತಿದ್ರು. ಮತ್ಯಾರೆ ಸಾಧಾರಣ ಮುಖದವರು ಮಾತಾಡಿದ್ದರ, ಹುಡುಗೂರು 'ಹೂಯ್' ಅಂತಿದ್ರು ! (ನೀಲವ್ವ ಟ್ರೇದಲ್ಲಿ ಚಹಾ ಮತ್ತು ಬಟಾಟೇ ಚಿಪ್ಸು ತಂದು ಇಡುವಳು.

ಲೀಲಾ: (ಚಹಾ ತೆಗೆದುಕೊಳ್ಳುತ್ತ) ನನ್ನ ಭಾಷಣದ ಬಗ್ಗೆ ನಿನ್ನ ಅಭಿಪ್ರಾಯ ಕೇಳದ ಕೂಡ್ಲೆ, ಚಹಾ ಸಹಿತ ಖಾರ....ಖಾರ ಹತ್ಲಿಕ್ಕೆ ಹತ್ತಿತು ನೋಡು.

ಮಾಲಾ: ಸುಮ್ಮನ ಹುಡುಗಾಟಕೇ ಸಲುವಾಗಿ ಹಿಂಗ ಅಂದಿ-ನೇಳ್ಕ ! ಒಮ್ಮೆಲೆ ಇಷ್ಟ್ಯಾಂಗ ತಿಳಕೊಂಡಿ ? ಮತ್ತು ನಿನ್ನ ಭಾಷಣ ಮುಗಿದ ಮ್ಯಾಲ, ಅಧ್ಯಕ್ಷರಾದ ನಿಮ್ಮ ಪ್ರೊಫೆಸರರು, ನಿನ್ನ ಭಾಷಣದ ಬಗ್ಗೆ ಎಷ್ಟೊಂದು ವರ್ಣನಾ ಮಾಡಿದ್ರಲ್ಲಾ— ಅದು ಸುಳ್ಳೇನು ?

ಲೀಲಾ: ಜನರು ನನ್ನ ಭಾಷಣದ ವರ್ಣನಾ ಮಾಡಿದರೋ ಜಥಾ ಮತ್ತೇನು ಮಾಡಿದ್ರೋ ಯಾರಿಗ್ಗೊತ್ತು !

ಮಾಲಾ: ನಿಜವಾಗಿಯೂ ನಿನ್ನ ಭಾಷಣ ಬಹಳ ಚೆಲೋ ಆಯ್ತು. ನೀ ಮಾತಾಡಿದಲ್ಲೇ ಚರ್ಚಾಕೂಟಕ್ಕ ಒಂದುತರದ ಕಳೆ ಬಂತು.

ಲೀಲಾ: ಇರ್ಲಿ ಬಿಡವಾ, ನಾ ಇನ್ನ ಹೋಗ್ತೀನಿ; ಮತ್ತೆನ ಭೆಟ್ಟಿ ಯಾವಾಗ ?

ಮಾಲಾ: ಸಂಜೀಕಡೆ ಖಾಕಿಂಗಗ್ ಹೋಗೂ ಮುಂದ, ಇಬ್ಬರೂ ಕೂಡೇ ಹೊಗೂಣಲ್ಲಾ.

ಲೀಲಾ: ಒಳ್ಳೇದು. ಹಾಗಾದ್ರ ನಾ ಇನ್ನ ಬರ್ತೀನಿ. (ಎಂದು ಹೋಗುವಳು.)

ದೃಶ್ಯ : ೨

[ನೀಲವ್ವ ತಾಟಿನಲ್ಲಿ ಅಕ್ಕಿಯನ್ನು ಸ್ವಚ್ಛ ಮಾಡುತ್ತಿರುವಳು. ಪಾಸೆಯಲ್ಲಿ ಕೆಲಸಕ್ಕೆ ಬೇಡಾರುವಷ್ಟವಳಂತೆ ಮಾತನಾಡುವಳು.]

ನೀಲವ್ವ : ಈಗಿನ ಕಾಲದೊಳಗ ಅತ್ತಿ-ಸೊಸ್ತೇರ ಜಗಳ ಭಾಳ ಆಗ್ಲಿಕ್ಕೆ ಹತ್ಯಾವ. ಅತ್ತಿ ಹಳೇಕಾಲದಾಕಿ ಸೊಸಿ ಹೊಸಾ ಕಾಲದಾಕಿ ಇದ್ದರಂತೂ ತೀರೇ ಹೋಯ್ತು; ಮಾತಿನ ಕಾಳಗ ತಪ್ಪಿದ್ದಲ್ಲ—ಮನಿಯೊಳಗ!

ಈ ಮನ್ಯಾಗಿನ ವೆಂಕಮ್ಮನವರು ಒಂದ ಕೆಲಸಾ ಹೇಳಿದರ, ಮೂಲಾಬಾಯಿಯವರು ಮತ್ತೊಂದ ಕೆಲಸಾ ಹೇಳ್ತಾರ. ದೊಡ್ಡ ಬಾಯಿಯವರು ಹೇಳಿದ್ದು ಸಣ್ಣ ಬಾಯಿಯವರ ಮನಸ್ಸಿಗೆ ಬರೂದಿಲ್ಲಾ; ಸಣ್ಣ ಬಾಯಿಯವರು ಹೇಳಿದ್ದು ದೊಡ್ಡ ಬಾಯಿಯವರ ಮನಸ್ಸಿಗೆ ಬರೂದಿಲ್ಲ. ನಡುವ ನಾನು ಸುಮ್ಮ ಸುಮ್ಮನೆ ಕಿಸಬಾಯಿ ಆದ್ಹಾಂಗ ಆಗೀನಿ. ನಾನು ಯಾರ ಮಾತು ಕೇಳಬೇಕು ಯಾರ ಮಾತ ಬಿಡಬೇಕು— ಅನ್ನೂದು ಒಂದೂ ತಿಳಿಲಾರದ್ಹಂಗ ಆಗೇದ.

ವೆಂಕಮ್ಮ : (ಹೊರಗಿನಿಂದ ಬರುವರು. ಕೈಯಲ್ಲಿ ಒಂದು ಥಾಲಿ ಇರುವುದು.) ಏನs ನೀಲವ್ವಾ ಏನ ಹಸನ ಮಾಡ್ಲಿಕ್ಕೆ ಹತ್ತೀದಿ?

ನೀಲವ್ವ : ಅಕ್ಕೀ ಹಸನ ಮಾಡ್ಲಿಕ್ಕೆ ಹತ್ತೀನ್ರಿ.

ವೆಂಕಮ್ಮ : ಹಳ್ಳು ಚೆಲ್ಲೋತ್ನಾಗ ನೋಡವ್ವಾ ಸ್ವಲ್ಪ! ನಿನ್ನೆ ಅನ್ನದಾಗ ಹಳ್ಳು ಬಹಳ ಬಂದಿದ್ದವು.

ನೀಲವ್ವ : ಎಷ್ಟ ಕಣ್ಣ ಬಿಟ್ಟ ನೋಡಿದ್ರೂ ಹೆಳ್ಳು ಸಿಗೂದಿಲ್ರಿ. ಬರೇ ಬಿಳೀ ಹಳ್ಳಾನೇ ತುಂಬ್ಯಾವ. ಏನು ಮಾಡಬೇಕು! ಅವೂ ಅಕ್ಕಿಯಾಂಗ ಕಾಣಸ್ತಾವ. ಕರೀ ಹಳ್ಳು ಇದ್ದರ ಕಣ್ಣಿಗೆ ಸ್ವಲ್ಪ ಒಡದು ಕಾಣಸ್ತಾವ್ರಿ. ಸ್ವಚ್ಛ ಮಾಡ್ಲಾಕ ಹಗರ ಆಗ್ತದ.

ವೆಂಕಮ್ಮ : ಸ್ವಲ್ಪ ಧಾರಣೆ ಹೆಚ್ಚಾದ್ರೂ ಚಿಂತಿಲ್ಲಾ; ಇನ್ನೊಮ್ಮೆ ಅಕ್ಕೀ ತರಸುವಾಗ, ಬರೇ ಕರೀ ಹಳ್ಳು ಇದ್ದ ಅಕ್ಕೀ ತರಸೂಣಂತ. ಇಸೊಂದು ಸಾರೆ ತ್ರಾಸು ತಗೊಂಡು ಚಲೋತ್ನಾಂಗ ಸ್ವಚ್ಛ ಮಾಡವ್ವಾ.

ನೀಲವ್ವ : ಅಯ್ಯ ಬಾಯರs! ಇವೆಂಥಾ ಮಾತರೀ? ಕರೀ ಹಳ್ಳು ಕಣ್ಣಿಗಿ ಕಾಣಸ್ತಾವ—ಬಿಳೀ ಹಳ್ಳು ಕಾಣೂದಿಲ್ಲಾ—ಅಂತ ಅಂದ್ರು, ಕರೀ ಹಳ್ಳು ಇದ್ದ ಅಕ್ಕೀ ತರಸೂಣಂತ ಹೇಳ್ತೀರಲ್ಲ!

ವೆಂಕಮ್ಮ : ಇಲ್ಲೇನಳ್ಳ ಸುಮ್ಮನೇ ಅಂದೆ....ಛಾಂಡೀ ಅದು ಎಲ್ಲಾ ತಿಕ್ಕಿದಿ ಇಲ್ಲೋ?

ನೀಲವ್ವ : ಎಲ್ಲಾ ತಿಕ್ಕೀನ್ರಿ.

ವೆಂಕಮ್ಮ : ಮತ್ತ ದೇವರ ಮುಂದಿನ ಸಮಯ ಬತ್ತಾಳಿ ಹೊಲಸು ಆಗಿತ್ತು. ಅದನ್ನಷ್ಟ ಉಜ್ಜಲಿಕ್ಕೆ ಕೊಟ್ಟಿದ್ದಳ್ಳೋ ಮೂಲಾಬಾಯಿ?

ನೀಲವ್ವ : ಮೂಲಾಬಾಯಿಯವರಿಗೆ ಅದನ್ನಷ್ಟು ಕೊಡ್ರಿ.... ಇವತ್ತು ಉಜ್ಜತೀನಿ—ಅಂತ ಹೇಳಿದ್ರು, ಬ್ಯಾಡಂದರ್ರಿ! (ಮೂಲಾ ಒಳಗಿನಿಂದ ಬರುವಳು.)

ವೆಂಕಮ್ಮ : (ಏಟ್ಟನಿಂದ) ಸಮಯಿ ಅಷ್ಟು ಉಜ್ಜಲಿಕ್ಕೆ ಕೊಡಬಾರ್ದೇನ? ಅದಕ್ಕ ಎಣ್ಣಿ ಅಂದ್ರ ಮುಚ್ಚಿ ಮುಣಿಗೇದ. ಅದರಿಂದ ದೇವರ ಕಟ್ಟಿ ಸುದ್ದಾ ಹೊಲಸು ಆಗ್ತಂದ ಅನ್ನೂದು ಗೊತ್ತಾಗೂದಿಲ್ಲಾ? ಸ್ವಥಾ ನೀನs ಉಜ್ಜತಿದ್ದರಂತೂ ದೂರ ಇತ್ತು.

ಮೂಲಾ : ಇವತ್ತ ಒಗಿಯೋಣ ಭಾಳ ಇದ್ದು, ಮತ್ತ ಸ್ವಲ್ಪ ಸಾಬೂಣು ಬ್ಯಾರೆ ಹಚ್ಚೂದಿತ್ತು. ಅದಕ್ಕ ಸಮಯ ನಾಳೆ ಉಜ್ಜಿದರ ಬರ್ತದೇಳವಾ ಅಂತ ಅಂದೆ.

ವೆಂಕಮ್ಮ : ಅರಿವೀ ನಾಳೆ ಕೊಟ್ಟಾಗ ಬರ್ತಿದ್ದಿಲ್ಲೇನು?

ಮೂಲಾ : ಬರ್ತಿತ್ತು. ಆದ್ರ ಮನೀಗಿ ನಾಲ್ಕು ಜನಾ ಬರು-ಹೋಗುವವರು ಇರ್ತಾರ. ಅವರೆದುರಿಗೆ ಮನೀ ಸ್ವಚ್ಛ ಕಾಣಬೇಕು. ಅದಕಂತ ಹೇಳಿ, ವಿಂಡೋ ಕರ್ಟನ್ನು-ಟೇಬಲ್ ಕ್ಲಾಥು ಕೊಟ್ಟಿ ಮತ್ತ ನನ್ನ ಬಿಳೀ ಪತ್ತಲಾ ಒಂದು ಒಗೀಲಿಕ್ಕೆ ಕೊಟ್ಟಿ.

ವೆಂಕಮ್ಮ : ಏನು ಸೋಜಿಗ್ವೆ ಏನೋ! ಎರಡ ದಿವಸಕ್ಕೊಮ್ಮೆ ಸಾಬೂಣ ಹಚ್ಚಿ ಒಗದರ ಬಟ್ಟಿ ಯಾಕ ತಾಳ್ತಾವ? ಎಲ್ಲಾ ಸ್ವಚ್ಛ ಆಗಿ ಬಿಡತಾವ ಉಡು ಪತ್ತಲಾ ಲಗೂನೇ ಒಗದು ಹರದರ, ಹೊಸಾ ಪತ್ತಲಾ ತರಿಸಲಿಕ್ಕೆ ಹಾದ್ಯಾಗ್ತದ ಅಂತ ನಾಡೀದಿ ಕಾಣ್ತದ

ಮೂಲಾ : ಅಹಹಹಹ....ಚತ್ತೀ ಮನೀಗೆ ಬಂದ ಮ್ಯಾಲ ಒಂದಾನರೂ ಹೊಸಾ ಪತ್ತಲಾ ತರಿಸಿದ್ದರ ದೂರ ಇತ್ತು. ನನ್ನ ತವರ ಮನಿಯಿಂದ ತಂದ ಪತ್ತಲಾ ಇನ್ನೂ ಸಾಕಷ್ಟು ಇವ ಅವನ್ನು ಸ್ವಚ್ಛ ಮಾಡಿ ಉಡೂದಕ್ಕ ಕೂಡಾ ಅಂಜಬೇಕೇನು?

ವೆಂಕಮ್ಮ : ನೀಯಾಕ ಅಂಜತೀಯೂನಾ ಅಂಜಬ್ಯಾಡ ಗಂಡಾ-ಹೆಂಡತಿ ಒಂದಾಗೀರಿ ಅಂದ ಮ್ಯಾಲ ಕೇಳತಾದೇನನ? ಮನ್ಯಾಗ ನೀ ಮಾಡಿದ್ದೇ ಮಾರ್ಗ ಆಗೇದ, ನಿನ್ನ ಮನಸ್ಸಿಗೆ ಬಂದಂಗ ಮಾಡು ಆಯ್ತಲ್ಲೊ?

ಮೂಲಾ : ಗಂಡಾ-ಹೆಂಡತಿ ಒಂದಾಗಿದ್ದ ಸಂಸಾರ ನೋಡಿದರ ನಿಮಗ ಆಗೂದಿಲ್ಲ ಕಾಣ್ತದ. ಮನಿಯೊಳಗ ಏನಾ ತಾಯೀ ಮನತ ಕೇಳಿ ಹೆಂಡತೀಗೆ ಪೈ-ಪೈ ಹೊಡದು ಸಿವ್ಹಿಲ್ ಹಾಸ್ಪಟ್ಟಿ ಕ್ಕ ಕಳಿಸಾ ವ್ಯವಸ್ಥಾ ಮಾಡಿದ್ರ ಮಾತ್ರ ನಿಮಗ ಸಮಾಧಾನ ಅನಸ್ತದ ಹೌದಲ್ರಿ?

ವೆಂಕಮ್ಮ : ನಿನ್ನೆ ಹುಟ್ಟಿ ಇವತ್ತ ಕಣ್ಣ ತಗದೀದಿ. ನಿನಗೆಲ್ಲಾ ಮನಿ ವ್ಯವಹಾರ ಏನ ಗೊತ್ತಾಗ್ತದ? ಸಮ್ಮ ಸುಮ್ಮನ ಕಾರಭಾರ ಮಾಡ್ತೀಯಲ್ಲಾ. ಹೇಳಿದಷ್ಟು ಕೇಳಕೊಂಡು ಕೆಲಸಾ ಮಾಡ್ಲಿಕ್ಕೆ ಬರೂದಿಲ್ಲಾ?

ಮೂಲಾ : ನೀವು ಇಂದಿಲ್ಲಾ ನಾಳೆ ಕಣ್ಣು ಮುಚ್ಚುವವರಿದ್ದೀರಿ; ಅಂದರೂ ಸುದ್ದಾ ಮನೀ ಕಾರಭಾರ ನೀನೇ ಮಾಡಬೇಕಂತೀರಲ್ಲಾ. ಸುಮ್ಮನ ಸೊಸೀ ಮಾಡೂದನ್ನ ನೋಡಿ, ಥಣ್ಣಗ ಇರಬಾರ್ದ? ಮುಂಜಾವಿನಿಂದ ಸಂಜೀತನಕಾ ಏನರೆ ಕಿರಿ ಕಿರಿ ಹಚ್ಚತೀರಿ.

ವೆಂಕಮ್ಮ : ಅಯ್ಯೋ ರಾಮಾ—ನನಗ ಎಂಥಾ ಕಾಲ ತಂದಿ. ಮಗಾ ಸೊಸಿ ಇಬ್ಬರ ಕಡಿಂದೂ ಅನಿಸಿಕೊಂಡು ನಾ ಹ್ಯಾಗ ಬದುಕಬೇಕು? ಇಷ್ಟಾಗೂವಕ್ಕಿಂತಾ ಥಣ್ಣಗ ಕೆರೀ ಭಾವಿ ಹಾರಿಕೊಳ್ಳೂದು

ಸುಖಾ ಕಾಣ್ತುದೆ. ನಾ ಎಲ್ಲಿರೆ ಹೋಗ್ತೀನಿ. (ಸಾವಿತ್ರಮ್ಮನವರು ಬರುವರು. ಕೈಯ್ಯಲ್ಲಿ ಥಾಲಿ ಇರುವದು.)

ಮಾಲಾ : ನಿಮ್ಮ ಮನಸ್ಸಿಗಿ ಬಂದ ಕಡೆ ಹೋಗ್ರಿ. ನನ್ನ ಮುಂದ ಏನೂ ಹೇಳಬ್ಯಾಡ್ರಿ. (ಎಂದು ಒಳಗೆ ಹೋಗುವಳು.)

ಸಾವಿತ್ರಮ್ಮ: ಏನ ನಡದದರಿ ಕೆಲಸಾ.....?

ವೆಂಕಮ್ಮ: ಬರ್ರೀ ಸಾವಿತ್ರಮ್ಮ, ಚಲೋ ಹೊತ್ತಿಗಿ ಬಂದ್ರಿ: ಬರ್ರಿ ಕೂಡ್ರಿ ಸ್ವಲ್ಪ.

ಸಾವಿತ್ರಮ್ಮ: ಇರ್ಲಿ ಬಿಡ್ರಿ, ಕೂಡ್ರೂದು ಏನ ಮಾಡ್ತೀರಿ! ಕೆಲಸ ಏನ ನಡದುದ ಅಂತ ಕೇಳ್ದೆ.

ವೆಂಕಮ್ಮ: ಈ ಮನಿಯೊಳಗ ಕೆಲಸ ಏನ ನಡೀತದದೇ! ಪಸಂತ ಎಲ್ಲೆರೆ ಊರಿಗೆ ಹೋದ್ರ ನಡಿಯೂದು ಒಂದೇ ಕೆಲಸಾ.

ಸಾವಿತ್ರಮ್ಮ: ಒಂದೇ ಕೆಲಸ ಯಾವದ್ರೀ ?

ವೆಂಕಮ್ಮ: ಜಗಳಾಡೂದು ಒಂದೇ ನೋಡ್ರಿ !

ಸಾವಿತ್ರಮ್ಮ: ನಾ ಬರೂದರಾಗ ಅದೇ ಕೆಲಸಾ ಮುಗಿಸಿ ನಿಂತಿದ್ರಿ ಕಾಣ್ತುದ ?

ವೆಂಕಮ್ಮ: ಅಂವ್ರ ನಿಮ್ಮ ಕಿವಿನೂ ಸ್ವಲ್ಪ ಕೇಳಿದಂಗ ಆಗ್ಯಾವ ಅನ್ರಿ.

ಸಾವಿತ್ರಮ್ಮ: ಸ್ವಲ್ಪ ಯಾಕ್ರೀ–ಸಾಕಷ್ಟ ಕೇಳೀತ. ನೀವಿ. ಬ್ಬರೂ ಬಜಾರಕ್ಕ ಬಂದು ಬಾಯಿಪೂರ್ತಿಲ್ಲಿಕ್ಕ ಹತ್ತೀರಿ ಏನೋ ಅನ್ನುವಂಗ ಅನಿಸ್ತು ಬಿಡ್ರಿ! ಅಲ್ರೀ.....ವೆಂಕಮ್ಮಾ, ಈಗ ಆದದ್ದರೆ ಏನು ?

ವೆಂಕಮ್ಮ: ದೇವರ ಮುಂದಿನ ಸಮಯಿ ಉಜ್ಜಲಿಕ್ಕ ಯಾಕ ಕೊಟ್ಟಿಲ್ಲವಾ ಅಂತ ಕೇಳಿದ್ದಕ್ಕ, ಮಾತಿಗೆ ಮಾತು ಬೆಳೆದು ಜಗಳ ಪ್ರಾರಂಭ ಆಯ್ತು ನೋಡ್ರಿ.

ಸಾವಿತ್ರಮ್ಮ: ಸಣ್ಣ ಸಣ್ಣ ಮಾತಿಗೆ ನೀವರೆ ಯಾಕ ವಾದ ಹಾಕ್ತೀರಿ. ಆಕಿ ಮಾಡಿದ್ದಕ್ಕ ಹೂಂ ಅನ್ನತಾ ನಡೆದರಾಯ್ತು !

ವೆಂಕಮ್ಮ: ಅಲ್ರೀ–ಸಾವಿತ್ರಮ್ಮ–ದೇವರು–ದಿಂಡ್ರು ಅನ್ನೂದು ಸ್ವಲ್ಪರೆ ಇರಬಾರ್ದು ?

ಸಾವಿತ್ರಮ್ಮ: ಈಗಿನವರಿಗೆ ದೇವರು ದಿಂಡ್ರು ಪುರಾಣಾ-ಪುಣ್ಯ ಕಥಿ ಇಂಥಾವ್ದೇನೂ ಸೇರೂವಿಲ್ಲಾ. ಅವೆಲ್ಲಾ ನಮ್ಮ ಪಾಲಿಗೇ ನೋಡ್ರಿ. ನಮ್ಮ ಮನಿಯೊಳಗೂ ಸುದ್ದಾ ಇದೇ ತಾಪತ್ರಯ; ಅದರ ಏನ ಮಾಡಬೇಕು ?

ವೆಂಕಮ್ಮ: ಏನೋ ಹೋಗ್ರೆವಾ. ನನಗ ಒಂದ ತಿಳಿ ಅಂದ್ರ ನೂರಾ ಎಂಟು ತಿಳೀಲಿಕ್ಕ ಹತ್ತ್ಯಾವ. ಮಗಾ ನೌಕರೀ ಹಿತದ. ಇನ್ನೇನು ನನ್ನ ಭಾಗ್ಯ ತಗೀತು ಅಂತ ನಾ ಮಾಡಿದ್ದೆ. ಅದ್ರ ...

ಸಾವಿತ್ರಮ್ಮ: ಅದ್ರ....ಅಂತ ಅನ್ನೂ ಮಾತ ಆಡ್ಲಿಕ್ಕೆ, ಅಂಥಾದ್ದೇನ ಆಗೆದ್ರೆವಾ ನಿಮಗೀಗ ?

ವೆಂಕಮ್ಮ: ಸೊಸೀ ಬರೂದಕ್ಕಿಂತ ಮದಲ, ಪಗಾರ ನನ್ನ ಕೈಯಾಗ ತಂದ ಕೊಡ್ತಿದ್ದ. ಈಗ ಪ್ರತಿತಿಂಗಳಾ ಪೆಂಡತೀ ಕೈಯಾಗ ಕೊಡ್ಲಿಕ್ಕೆ ಹತ್ಯಾನ. ನನಗ ಎದಕರೆ ಹಣಾ ಬೇಕಾದ್ರ, ಸೊಸ್ಸಿ ಹುಡುಗೂರ ಹಾಗ ಬೇಡಿ ಇಸಗೋಬೇಕು. ಇದೆಂಥಾ ಕರ್ಮರೀ ನಂದು. ಸೊಸೀಕಿಂತಾ ಕಡೀ ಆಗಿ ಬಾಳೂ ಪ್ರಸಂಗ ಬಂತಲ್ಲಾ—ಅಂತೇನಿ.

ಸಾವಿತ್ರಮ್ಮ: ಕಾಲಾನ್ಸ ಹಂಗ ಬಂದದರೀ–ಅದಕೆನ್ನ ಏನ ಮಾಡೂದದ' ಅತ್ತಿಗೊಂದು ಕಾಲ ಅದ್ರ ಸೋಸೀಗೊಂದು ಕಾಲು!

ವೆಂಕಮ್ಮ: ನಂದೆಂಥಾ ಹಣೇಬರಹ ನೋಡ್ರಿ ಸಾವಿತ್ರಮ್ಮ. ನಾನು ಸೊಸಿ ಆಗಿದ್ದಾಗ, ನಮ್ಮ ಅತ್ತಿ ಕೊಟ್ಟ ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಮನಿಯೊಳಗ ಒಂದು ಇಲಿಯಾಗಿ ಬಾಳ್ದೆ. ಈಗ ಹುಲಿಯಾಗಿದೂ ಕಾಲ ಬಂದರೂ ಸುದ್ದಾ, ನನ್ನ ಪರಿಸ್ಥಿತಿ ಸುಧಾರಿಸಲಿಲ್ಲ.

ಸಾವಿತ್ರಮ್ಮ: ನನ್ನ ಪರಿಸ್ಥಿತೀನೂ ಹಂಗನ್ನ ಆದರೀ ವೆಂಕಮ್ಮಾ! ಯಾರ ಮುಂದ ಹೇಳಿ ಏನ ಪ್ರಯೋಜನಾ ಅಂತ ಸುಮ್ಮನಿದ್ದೇನಿ.

ವೆಂಕಮ್ಮ: ಪ್ರತಿಯೊಂದಕ್ಕೂ ಸುಮ್ಮನ ಹ್ಯಾಗ ಇರೂದು ಆಗ್ತದರೀ? ಇವರೆಲ್ಲಾ ನಾವು ಕಲಿತವರು ಅಂತ ಬಿಂಕದಿಂದ ಹೇಳಿಕೋತಾರ; ಅದ್ರ ಹಾಲಿನವರ ಲೆಕ್ಕಾ ಸುದ್ದಾ ತೀರಿಸಲಿಕ್ಕ ಬರೂದಿಲ್ಲಾ; ಮನಿಯೊಳಗ ಬರೇ ಎಂಥೆಂಥವರೆ ಕಥಿ ಕಾದಂಬರಿ ತಂದು ಓದ್ತಾ ಕೂಡ್ರೂವು; ಗೆಳತಿಯರ ಜೋಡಿ ಹರಟೇ ಹೊಡಿಸೋದು. ಹೀಗೆಲ್ಲಾ ಮಾಡಿದ್ರ ಏನ ಮಾಡಬೇಕ್ರೆ ! ನೀವೇ ಹೇಳ್ರಿ.

ಸಾವಿತ್ರಮ್ಮ: ಮುಂದ ಮಕ್ಕಳು ಮರಿ ಆದಿಂವ ತಾನೇ ಹಾದಿಗೆ ಬರ್ತಾರ. ನೀವ್ಯಾಕ ಹೇಳಿ ಖೊಟ್ಟಿ ಆಗ್ತೀರಿ?

ವೆಂಕಮ್ಮ: ಮನಿಯೊಳಗ ಮಗಾನೇ ಥೈ ಥೈಅಂತ ಕುಣಿಯೂ ಹೊತ್ತಿನ್ಯಾಗ, ಅವಳಗೇನು ಅನ್ನೂದದ! ಹಾಳಾಗಿ ಹೋಗ್ಲಿ ಅಂತ ನಾನೇ ಒಮ್ಮೊಮ್ಮೆ ಸುಮ್ಮನಾಗ್ತೀನಿ.

ಸಾವಿತ್ರಮ್ಮ: ಹಾಂಗ ಸಿಟ್ಟಿನಿಂದ ಸುಮ್ಮನಿದ್ರ ಉಪಯೋಗ ಆಗೂದಿಲ್ರಿ. ಸ್ವಲ್ಪ ಸಮಾಧಾನದಿಂದ ಇರಬೇಕಾಗ್ತದ !

ವೆಂಕಮ್ಮ: ನೀವೂ ಒಬ್ಬರು ನಮಗನ್ನ ಹೇಳುವಂಗ ಕಾಣ್ತೇರಲ್ಲ.

ಸಾವಿತ್ರಮ್ಮ: ವೆಂಕಮ್ಮಾ ನೀವು ಸಿಟ್ಟಿಗೆ ಮಾತ್ರ ಬರಬ್ಯಾಡ್ರಿ. ನನ್ನ ಅನುಭವದ ಮಾತು ನಾ ಹೇಳ್ತೀನಿ: ಸ್ವಲ್ಪ ಕೇಳಿಕೊಳ್ರಿ.

ವೆಂಕಮ್ಮ: ಆಗ್ಲಿ.....ಏನ ಹೇಳ್ತೀರಿ ಹೇಳ್ರೆವಾ. ಕೇಳ್ತೀನಿ.

ಸಾವಿತ್ರಮ್ಮ: ನಾನೂ ಮೊದಲ ನಿಮ್ಮ ಹಾಗೇ ಅಂದ್ಕೊಂಡಿದ್ದೆ. ಪ್ರತಿನಿತ್ಯ ಮನಿಯೊಳಗ ವಾದ ಮಾಡ್ತಿದ್ದೆ. ಆದ್ರ ಈಗ ನಾನು–ಸೊಸಿ ಮಾಡಿದ ಮಾತಿಗಿ ಪ್ರೋತ್ಸಾಹ ಕೊಡತಾ ನಡದೀನಿ. ಅಂದಲ್ಲೆ ಈಗ ಮನಿ ಸರಿಯಾಗಿ ನಡದುದ. ಒಟ್ಟನ ಮ್ಯಾಲ ಆದಷ್ಟ ಕೆಲಸಾ ಮಾಡಿ, ಹೋದಷ್ಟ ಊಟಾಮಾಡಿ, ಫಣ್ಣಾಗ ಇರಬೇಕು ನೋಡ್ರಿ.

ವೆಂಕಮ್ಮ: ಅಲ್ರೆವಾ.....ಇವರು ನಮ್ಮ ಮಾತು ಯಾಕ ಕೇಳಬಾರ್ದ ? ನಾವೇನು ಇವರಿಗೆ ಅಂಥಾ ಕೆಡಕು ಮಾಡ್ತೀವಿ ?

ಸಾವಿತ್ರಮ್ಮ: ಕೆಟ್ಟಾ-ಚೆಲೋ ಅನ್ನೂ ಮಾತೇ ಇಲ್ರಿ ಇಲ್ಲೆ. ಆದ್ರ ನಮ್ಮ ಹಂಗೇ ವಿಚಾರ ಅವರಿಗೆ ಸರಿ ಬರೂದಿಲ್ಲ ಅವರ ಹೊಸಾ ವಿಚಾರ ನಮಗ ಸರಿ ಬರೂದಿಲ್ಲಾ. ಅಷ್ಟೆ.

ವೆಂಕಮ್ಮ: ಅಂದ್ರ ಹಳೇ ಮಂದೆಲ್ಲಾ ಹಾಳಾಗಿ ಹೋಗಬೇಕು ಅಂದಂಗ ಆಯ್ತಲ್ಲ ?

ಸಾವಿತ್ರಮ್ಮ: ಹಾಳಾಗಿ ಯಾಕ ಹೋಗ್ತೀರಿ? ಹೊಸಾ ಮುದೀ ಜೋಡಿ ಹೊಂದಿಕೊಂತು ಹೋಗ್ಲಿಕ್ಕೆ ಪ್ರಯತ್ನ ಮಾಡಬೇಕು. ಅಂದ್ರ ಮನೀ ಸರಿಯಾಗಿ ನಡೀತದ.

(ಲೀಲಾ ಬಂದು ಆ ಕಡೆ ಈ ಕಡೆ ನೋಡುತ್ತ 'ಮಾಲಾ' ಎಂದು ಕೂಗುವಳು)

ಲೀಲಾ: ಮಾಲಾ ಇದ್ದಾಳೇನ್ರಿ ಮನಿಯೊಳಗ ?

ವೆಂಕಮ್ಮ: ಒಳಗ ಇದ್ದಾಳ, ಸ್ವಲ್ಪ ಕೂತ್ರವಾ ಬರ್ತಾಳ.

ಸಾವಿತ್ರಮ್ಮ: ಲೀಲಾ ನಿನಗೊಂದು ಪ್ರಶ್ನೆ ಕೇಳ್ತೀನಿ. ಅದಕ್ಕ ಸರಿಯಾಗಿ ಉತ್ತರಾ ಕೊಡಬೇಕು ನೋಡು.

ಲೀಲಾ: ಏನ ಕೇಳ್ರೀಲಾ....ನನಗ ತಿಳದ್ರ ನಾ ಹೇಳ್ತೀನಿ.

ಸಾವಿತ್ರಮ್ಮ: ಮನೀ ಸುಯಾಗಿ ನಡೀಬೇಕಾದ್ರ ಏನ ಮಾಡಬೇಕು ಹೇಳು ನೋಡೋಣು. ಯಾಕಂದ್ರ ನೀನೂ ಸ್ವಲ್ಪ ಕಾಲೇಜ ಕಲ್ತಾಕಿ ಇದ್ದೀ.

ಲೀಲಾ: ನಾ ಹೇಳಿದ್ದು ನಿಮಗ ಸರಿ ಬರ್ತದನೋ ಇಲ್ಲೋ ಯಾರಿಗ್ಗೊತ್ತು ?

ವೆಂಕಮ್ಮ: ಮದಲ ನಿನಗ ಏನ ಅನಸ್ತಕದ ಅನ್ನೂದನ್ನ ಹೇಳಿ ಬಿಡು. ಸರಿ ತಪ್ಪು ಅನ್ನೂ ವಿಚಾರ ಹಿಂದಿನಿಂದ ಆಗ್ಲಿ.

ಲೀಲಾ: ಮನಿಯೊಳಗ ಅತ್ತಿ ಸೊಸಿ ಕೂಡಿ ನಡೀಬೇಕು! ಮತ್ತ ಹೊಸಾ ವಿಚಾರಗಳಿಗನುಸಾರವಾಗಿ ನಡೆಯುವ ಸೊಸೆಯನ್ನು ಅತ್ತಿ ಮಾನ್ಯಮಾಡಬೇಕು! ಅಂದ್ರ ಈಗಿನ ಕಾಲದೊಳಗ ಪ್ರಪಂಚ ಸರಿಯಾಗಿ ನಡೀತದ— ಅಂತ ನನಗನಸ್ತದ.

ಸಾವಿತ್ರಮ್ಮ: ಲೀಲೂನ ಮಾತು ಖರೇ ಅದ ನೋಡ್ರಿ ವೆಂಕಕ್ಕಾ.

ವೆಂಕಮ್ಮ: ಏನೋ....ಹೋಗ್ರೆವಾ....ಎಲ್ಲಾ ನೀವೇ ಅಂತೀರಿ, ಅದ್ರ ನನಗೇನು ಖರೆ ಆನಸವಲ್ದು.

ಲೀಲಾ: ನೋಡ್ರಿ..ಈಗಿನ ಬದಲ್ತೀದುನಿಯಾದೊಳಗ ಮನುಷ್ಯ ದಿನಕ್ಕ-ದಿನಕ್ಕ ಬಲ್ಲಿ ಆಗ್ಲಿಕ್ಕ ಹತ್ಯಾನ. ಕಾಲ ಬಹಾಳ ಮುಂದ ಓಡ್ಲಿಕ್ಕೆ ಹತ್ತೀದ ಅಂಥಾದ್ರೊಳಗ ನಾವು ಹಿಂದಿನ ಹಳೇ ಪುರಾಣ ಬಿಚ್ಚಿದರ, ನಾಲ್ಕು ಜನಾ ನಮಗ ಹುಚ್ಚರು ಅಂತ ಕರೀತಾರ. ಅದಕ್ಕ ನಾವು ಕಾಲಕ್ಕ ತಕ್ಕಂತೆ ನಡೀಬೇಕಾಗ್ತದ.

ಸಾವಿತ್ರಮ್ಮ: ಆದರ ಸಲುವಾಗೀನೇ ನಿಮ್ಮ ಸೊಸಿ ಮಾಡೂ ಮಾತಿಗೆ ನೀವು ಒಪ್ಪಬೇಕಾಗ್ತದ. ಈಗ ಅತ್ತೀ ಅವತಾರ ಮುಗದು ಸೊಸಿಯ ಅವತಾರ ಪ್ರಾರಂಭ ಆಗೇದ ಇಷ್ಟ ತಿಳಕೊಂಡು ನೀವು ಸುಮ್ಮನ ಇರ್ತಬಿಡ್ರಿ; ಅಂದ್ರ ನಿಮ್ಮನ್ನ ಸೊಸಿ ಪ್ರೀತಿಯಿಂದ ಕಾಣ್ತಾಳ. ಇಲ್ಲದಿದ್ರ ಮನಿ ಅನ್ನೂದು ಯುದ್ಧಭೂಮಿ ಆಗ್ತದ.

ವೆಂಕಮ್ಮ: ನೀವು ಈ ಮಾತ ನಿಮ್ಮ ಅನುಭವದಿಂದ ಹೇಳ್ತೀರಿ ಅಂದಮ್ಯಾಲ, ನಾ ನಿಮ್ಮ ಮಾತಿಗೆ ಒಪ್ಪಬೇಕಾಗ್ತದ ನೋಡ್ರಿ ಸಾವಿತ್ರಮ್ಮ!

ಸಾವಿತ್ರಮ್ಮ: ಒಂದೊಂದು ಕಾಲದೊಳಗ ಒಬ್ಬೊಬ್ಬರ ಆಟ ನಡೀತದರೀ ವೆಂಕಕ್ಕಾ ಹೊತ್ತ ಹ್ಯಾಗ ಬರ್ತದ ಹಾಗ ನಾವೂ ಹೋಗ ಬೇಕಾಗ್ತದ. ನೀವು ಮನಸಿನಾಗ ವಿಪರೀತ ಮಾಡಿಕೊಳ್ಳದೆ, ನಾ ಹೇಳಿದ ಮಾತು ಲಕ್ಷದಾಗಿಟ್ಟು ನಡದರ, ಎಲ್ಲಾರಿಗೂ ಸುಖಾ ತಟ್ಟ-ತಪ ನೋಡ್ರಿ.....ಹೊತ್ತ ಬಹಳ ಆಯ್ತು ನಾ ಇನ್ನ ಬರ್ತೀನ್ರವ.

ಲೀಲಾ: ಆಲ್ರಿ....ಕೈಯೊಳಗ ವಾಟಗಾ ಹಿಡದೀರಲ್ಲ ಏನರೆ ಬೇಕಾಗಿತ್ತೇನ ಮತ್ತs ?

ಸಾವಿತ್ರಮ್ಮ: ಐ ಸುಡ್ಲಿ.....ನನಗ ಈಗ ನೆನಪ ಆಯ್ತು ನೋಡ್ರಿ. ಮಾತಿನ ಗದ್ದಲದಾಗ ಎಲ್ಲಾ ಮರ್ತಬಿಟ್ಟೆ!

ವೆಂಕಮ್ಮ: ಐ... ಮತ್ತ ಏನ ಬೇಕಾಗಿತ್ರೀ? ಏನೂ ಹೇಳೇ ಇಲ್ಲಲ್ಲ.

ಸಾವಿತ್ರಮ್ಮ: ಮನಿಯೊಳಗ ಚಹಾಕಂತ ಹೇಳಿ ನೀರ ಎಸರಿ-ಗಿಟ್ಟು ನಿಮ್ಮ ಮನೀಗೆ ಸಕ್ಕರಿಗೆ ಬಂದಿದ್ದೆ.

ವೆಂಕಮ್ಮ: ನೀರೆಲ್ಲಾ ಸುಟ್ಟು ಹೋಗಿದ್ದಾವಾದೀತು; ಇಲ್ಲೇ ಚಹಾ ಮಾಡೂಣಂತ ಕೂಡ್ರಿ.

(ಮಾಲಾ ಒಳಗಿನಿಂದ ಬರುವಳು)

ಮಾಲಾ: ಯಾವಾಗ ಬಂದೀಯs ಲೀಲಾ? ನನಗ ಗೊತ್ತೇ ಆಗಿಲ್ಲಾ. ಬಂದು ಬಹಾಳ ಹೊತ್ತಾಯ್ತೇನು ?

ಲೀಲಾ: ಇಲ್ಲ ಇಸ್ನೂ ಈಗ ಬಂದೀನಿ. ನೀನು ಒಳಗ ಕೆಲಸ-ದಾಗ ಇರಬಹುದಂತ ತಿಳದು ನಾ ಇಲ್ಲೇ ನಿಂತಿದ್ದೆ.

ಸಾವಿತ್ರಮ್ಮ: ಲೀಲಾ....ನಾ ಅಂತೂ ವೆಂಕಮ್ಮನವರಿಗೆ ಏನ ಹೇಳಬೇಕೂ ಎಲ್ಲಾ ಹೇಳೀನಿ. ನೀನೂ ಸ್ವಲ್ಪ ಮಾಲಾಗ ತಿಳಿಸಿ ಹೇಳು.

ಲೀಲಾ: ಅಯ್ಯ....ಅದರೊಳಗ ಏನ ಅದರೀ....ನಾ ಅವಶ್ಯ ಹೇಳ್ತೀನಿ ಬಿಡ್ರಿ. ಒಳ್ಳೇ ಮಾತ ಹೇಳಾವ್ದ ಏನ ಬಂದದ. ನೀವು ಹೇಳೂ ಮಾತ ನನ್ನ ಮನಸ್ಸಿಗೆ ಬಂಜು ನೋಡ್ರಿ. ಇವತ್ತಿನ ದಿನಾ ನೆನಪು ಉಳಿಯುವ ಸಲುವಾಗಿ, ಮಾಲಾನ ಕಡಿಂದ ನಾಲ್ಕು ಕಪ್ಪು ಚಹಾ ಮಾಡಿಸಿ ಕುಡಿಯೋಣಂತರಿ. ಇದಕ್ಕ ಒಪ್ಪಿಗಿ ಅದ ಇಲ್ಲವಾ ಮಾಲಾ ?

ಮಾಲಾ: ಏನ ಅಡ್ಡಿ ಇಲ್ಲಾ.....ಎಲ್ಲರೂ ಒಳಗ ನಡೀರಿ. ಚಹಾ ಮಾಡ್ತೀನಂತ.

ವೆಂಕಮ್ಮ: ನಡೀರೀ ಸಾವಿತ್ರಮ್ಮಾ.....ಒಳಗ ಹೋಗೂಣು ನಡೀರಿಷ್ಟ.

(ಎಲ್ಲರೂ ಅನಂದದಿಂದ ಒಳಗಡೆ ಹೋಗುತ್ತಿರುವಾಗ ತೆರೆ ಬೀಳುವದು)

ನಾಡವರ ಮನೆ ಮಾತುಗಳು

ಲೇ : ಡಾ|| ಪ್ರೊ. ಆರ್. ಉಮರ್ಜಿ, ಎಂ. ಎ., ಪಿ. ಎಚ್‌ಡಿ.

೨ ನೆಯ ಲೇಖನ

ಮೊದಲನೆಯ ಲೇಖನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಮನೆಮಾತಿನ ಕನ್ನಡದ ವಿಶಿಷ್ಟ ರೂಪ, ಪ್ರಯೋಗಗಳನ್ನು ಹೇಳಲಾಗಿದೆ. ಇದರಲ್ಲಿ, ಆ ಜಿಲ್ಲೆಯ ಇನ್ನೊಂದು ಪ್ರಮುಖ ಗುಂಪಿನವರಾದ ನಾಡವರ ಮನೆ ಮಾತಿನ ಕನ್ನಡದ ರೂಪ-ಪ್ರಯೋಗಗಳನ್ನು ವಿವೇಚಿಸಲಾಗಿದೆ.

ಅಲ್ಪಪರಿಚಯ:— ಉತ್ತರ ಕನ್ನಡ ಜಿಲ್ಲೆಯ ಕರಾವಳೀ ಪ್ರದೇಶದಲ್ಲಿ ನಾಡವರದು ಒಂದು ಓಜಸ್ವಿ ಹಾಗು ತೇಜಸ್ವಿ ಪಂಗಡ. ಬೇಲೀಕೇರಿ ನದಿ ಅಘನಾಶಿನೀ ನದಿ ಇವುಗಳ ಮಧ್ಯಪ್ರದೇಶವು ಅದರ ವಾಸಸ್ಥಳ. ಭಾವೀಕೇರಿ ಹಿಚ್ಕಡ, ಮಾನ್ಕೇರಿ, ಬಂಕೇಕೋಡ್ಲ, ಸಗಡ ಗೇರಿ, ಸಾಣೇಕಟ್ಟೆ, ತೊರ್ಕೆ, ಹಿರೇಗುತ್ತಿ ವಿಜ್ಞಾನ ಮುಂತಾವವು ಗಳು ನಾಡವರ ಊರುಗಳು. ಒಕ್ಕಲತನವೇ ಇವರ ಮುಖ್ಯ ಉದ್ಯೋಗ. ಮಿತವ್ಯಯ ಹಾಗೂ ಧನವಂತ ಸಮಾಜ ಇವರದು. ಇವರಲ್ಲಿ ಉಪನಾಡವರು (ಉಪ್ನಾಡವರು) ಎಂಬ ಒಂದು ಉಪ ಪಂಗಡವಿದೆ. ಸಂಸ್ಕೃತಿಯ ದೃಷ್ಟಿಯಿಂದ ಇವರನ್ನು ಮಧ್ಯಮ ವರ್ಗ ದಲ್ಲಿ ಸೇರಿಸಿರುವರು. ಅಭ್ಯಾಸಕ್ಕೆ ತೆಗೆದುಕೊಂಡ ಕನ್ನಡ ಪಂಗಡ ಗಳಲ್ಲಿ ಹವ್ಯಕರ ಹಾ ೂ ಶೆಟ್ಟಿಗಳ ನಂತರ ಇವರ ಸ್ಥಾನ ಮಾನಗಳಾ ದರೂ ಇವರ ಮನೆ ಮಾತುಗಳು ವೈವಿಧ್ಯದಲ್ಲಿ ಹವ್ಯಕರ ನಂತರ ಬರು ವವು. ಭೌಗೋಲಿಕ ದೃಷ್ಟಿಯಿಂದಲೂ ನಮ್ಮ ಅಭ್ಯಾಸವಲ್ಲಿ ಇವ-ರಿಗೆ ಎರಡನೆಯ ಸ್ಥಾನ. ಉತ್ತರ ಕನ್ನಡ ಜಿಲ್ಲೆಯಲ್ಲಿ ತುಳು ಕನ್ನಡ ನಾಡಾದ ಅಘನಾಶಿನೀ ನದಿಯಿಂದ ಉತ್ತರಕ್ಕೆ ಗಂಗಾವಳಿ ನದಿಯ ಮಧ್ಯಪ್ರದೇಶದಲ್ಲಿ ಇವರು ಹೆಚ್ಚಾಗಿ ವಾಸಿಸುವರು.

ಹಿರೇಗುತ್ತಿಯ ನಾಡವರ ಮನೆಮಾತಿನ ಮಾದರಿಯು:— ಹಿರೆಗುತ್ತಿ ಎಂಬುದು ಒಂದು ನಾಡವರು ವಾಸಿಸುವ ಮುಖ್ಯ ಕೇಂದ್ರ. ಅದು ಕುಮಟೆಯಿಂದ ಉತ್ತರಕ್ಕೆ ಇದೆ. ಹಿರಿ ಗುತ್ತಿಯ ನಾಡವರ ಮನೆ ಮಾತಿನಲ್ಲಿ ಸೂರ್ಯ ಹಾಗೂ ಗಾಳಿ ಎಂಬ ಕಥೆಯು ಕೆಳಗಿ-ನಂತೆ ಇದೆ.

ಸೂರ್ಯ ಹಾಗೂ ಗಾಳಿ

೧ ಗಾಳ್ಳಿ ಸೂರ್ಯ ಇಬ್ರೂ ತನ್ನ ಶಕ್ತಿ ಹಿಚ್ಚೋಣ
೨ ನಿನ್ನ ಶಕ್ತಿ ಹಿಚೆ್ಚೀನಿ ಎಂದೆ ಸಾವ ಮಾಡ್ತೇ ಬಿದವ್ರು
೩ ಆಗೆ ಒಬ್ಬ ಹಾದಿಲೆ ಹೋಗ್ವಂವ ಅಲ್ಲಿಗೆ ಬಂದ. ಅವ
೪ ಬೆಚ್ಚಂಬೈ ವಿೃತುಂಬಿ ಮುಚ್ಕೆಂಡದ್ರು
೫ ಯಾರ ಮುದ್ಲೆ ಅವನ ಕಂಬ್ಳಿಯಾ ಅವನ ಕೈಲೆ
೬ ಬಿಚ್ಚೆ ಇತ್ತರೋ ಅವ್ನ ಶಕ್ತಿ ಹಿಚ್ಚಿಂದೆ
೭ ತಿಳ್ದಣಬೇಕ. ಹೀಗೆ ಅವರ ರಾಜಿ ಮಾಡ್ಕಂಡ್ರು
೮ ಮುದ್ಲೆ ಗಾಳಿ ತನ್ನ ಶಕ್ತಿ ಇದಟ್ಟೂ
೯ ಬಿಟ್ಟೆ ಊಬ್ದಾ. ಆದ್ರೆ ಅವ ಊಬ್ದಟ್ಟೂ
೧೦ ಹಾದಿಲೆ ಹೋಗ್ವಂವ ಕಂಬ್ಳಿಯಾ ಮತ್ತಿಟ್ಟೆ
೧೧ ಬಿಗ್ತಾಗೆ ವಿೃಯ್ಮೈನೆ. ಇಳ್ಕಂಡ. ಕಾಡಿಗೆ
೧೨ ಗಾಳಿ ಪ್ರಯತ್ನ ಬಿಟ್ಟಾ ಆಮೇನೆ ಸೂರ್ಯ
೧೩ ಬಿಸ್ಲಲ ಬೀತ್ತೇ ಬಂದ. ಬಿಸ್ಲನ ಕಾವಿಗೆ
೧೪ ಹಾದಿಲೆ ಹೋಗ್ವವ ಕಂಬಳಿ ತಾನೇ ಬಿಚ್ಚಾಕ್ದಾ
೧೫ ಹೀಗಾಗಿ ತನ್ನ ಶಕ್ತಿಗಿಂತ ಸೂರ್ಯನ
೧೬ ಶಕ್ತಿಯೇ ಹಿಚ್ಚಿಂದೆ ಗಾಳಿ ಉಸ್ಕಣ್ಬೇಕಾಯ್ತು.

(ಕಥೆಯನ್ನು ಹೇಳಿದವನು ತಿ. ರಾ. ನಾಯ್ಕ, ಹಿರೇಗುತ್ತಿ, ತಾಲೂಕ: ಕುಮಟಾ.)

ಪರಿಶೀಲನೆ: ಮೇಲಿನ ಕಥೆಯನ್ನು ಪರಿಶೀಲಿಸಿದರೆ ಕಂಡು ಬರುವ ಅಂಶಗಳನ್ನು ಹೀಗೆ ವರ್ಗೀಕರಿಸಬಹುದು.

ಅ. ಉಚ್ಚಾರಗಳ ವರ್ಗೀಕರಣ :—

೧. ಸ್ವರಗಳು :—'ಎ' ಕಾರವು 'ಇ' ಕಾರವಾಗಿಯೂ 'ಒ' ಕಾರವು 'ಉ' ಕಾರವಾಗಿಯೂ ಉಚ್ಚರಿಸುವುದನ್ನು ನಾಡವರಲ್ಲಿ ಕಾಣಬಹುದು.

ಎ> ಇ; ಉದಾ:—ಹೆಚ್ಚು > ಹಿಚ್ಚು. ಎಳೆದುಕೊಂಡನು> ಇಳ್ಕಂಡ.

ಒ> ಉ. ಉದಾ:— ಮೊದಲು > ಮುದ್ಲೆ. ಒಪ್ಪಿಕೊಳ್ಳ-ಬೇಕಾಯ್ತು> ಉಸ್ಕಣ್ಬೇಕಾಯ್ತು. ಕೆಲವು ಎಡೆಯಲ್ಲಿ (ಭೂತ ಕೃದ್ವಾಚಕ ಮುಂತಾದವುಗಳಲ್ಲಿ) ಉ ಹಾಗೂ ಇ ಕಾರವು ಎ ಕಾರ ವಾಗಿಯೂ ಇನ್ನು ಬೇರೆಡೆಯಲ್ಲಿ (ಸರ್ವನಾಮ ಮುಂತಾದವುಗಳಲ್ಲಿ) ಉ ಕಾರವು ಅ ಕಾರವಾಗಿಯೂ ಉಚ್ಚರಿಸಲ್ಪಡುವದು.

ಉ> ಎ ಉದಾ:—ಎಂದು > ಎಂದೆ; ಅಂದು> ಅಂದೆ; ಮೊದಲು> ಮುದ್ಲೆ.

ಇ> ಎ ಉದಾ:—ಬಿಚ್ಚಿ> ಬಿಚ್ಚೆ; ಮುಚ್ಚಿ> ಮುಚ್ಚೆ;

ಉ> ಅ · ಉದಾ:—ಅವರು > ಅವರ; ಯಾರು> ಯಾರ, ಒಕಾರವು ಸಂವೃತದ 'ಅ' ಕಾರವಾಗಿ ಉಚ್ಚರಿಸಲ್ಪಡುವದು.

ಒ> ಅ ಉದಾ:—ಎಳೆದುಕೊಂಡನು> ಇಳ್ಕಂಡ. ಮುಚ್ಚಿ-ಕೊಂಡಿದ್ದನು> ಮುಚ್ಚ್ಕಂಡಿದ. ಅಲ್ಲದೆ ಕಡಿಗೆ ಎಂಬುದನ್ನು ಕಾಡಿಗೆ ಎಂದೂ, ಆಗ ಎಂಬುದನ್ನು ಆಗೆ ಎಂದೂ, ಗಾಳಿ ಎಂಬುದನ್ನು ಗಾಳ್ಕೇ ಎಂದೂ ನಾಡವರು ಉಚ್ಚರಿಸುವರು.

೨. ವ್ಯಂಜನಗಳು:—'ಲ' ಕಾರವನ್ನು 'ನ' ಕಾರವಾಗಿಯೂ 'ಳ' ಕಾರವನ್ನು 'ಣ' ಕಾರವಾಗಿಯೂ ನಾಡವರು ಉಚ್ಚರಿಸುವುದನ್ನು ಕಾಣಬಹುದು.

ಲ> ನ; ಉದಾ:—ಮೇಲೆ> ಮೇನೆ.

ಳ> ಣ; ಉದಾ :— ಒಪ್ಪಿಕೊಳ್ಳಬೇಕಾಯ್ತು > ಉಪ್ಪಣ್ಬೇ-ಕಾಯ್ತು.

೩. ದಂತ ತಾಲವ್ಯ ಚವರ್ಗ :—ಚವರ್ಗವು ನಾಡವರ ಮನೆಮಾತಿನಲ್ಲಿಯೂ ದಂತತಾಲವ್ಯವಾಗಿ ಉಚ್ಚರಿಸಲ್ಪಡುತ್ತದೆ.

ಚ್> ಚ್ತಿ; ಹೆಚ್ಚಿ> ಹಿಚ್ಚ್ತಿ; ಬಿಚ್ಚಿ> ಬಿಚ್ಚ್ತಿ; ಮುಚ್ಚಿ > ಮುಚ್ಚ್ತಿ

ಜ್> ಜ್ತಿ; ಉದಾ:—ರಾಜಿ> ರಾಜ್ತಿ.

೪. ಶ ಷ ಸ ಗಳ ಉಚ್ಚಾರ :—ಶ ಷ ಸ ಗಳ ಉಚ್ಚಾರವು ಸರಿಯಾಗಿ ಗಮನಿಸಲ್ಪಡುತ್ತದೆ. ಶ=ಶ. ಶಕ್ತಿ=ಶಕ್ತಿ; ಸ=ಸ ಸೂರ್ಯ =ಸೂರ್ಯ.

೫. ರಲಳ ಗಳ ಉಚ್ಚಾರ:— ಈ ವರ್ಣಗಳ ಉಚ್ಚಾರವು ಯಥಾಪ್ರಕಾರವಿದೆ.

ರ=ರ. ಉದಾ:— ಯಾರು=ಯಾರ; ಸೂರ್ಯ=ಸೂರ್ಯ.

ಲ=ಲ. ಉದಾ:— ಮೊದಲು=ಮುಲ್ಲೆ: ಕಯ್ಯಲ್ಲಿ=ಕೈಲೆ.

ಳ=ಳ. ಉದಾ:— ಕಂಬಳಿ=ಕಂಬ್ಳಿ; ಗಾಳಿ=ಗಾಳಿ.

೬. ಣನಕಾರಗಳ ಉಚ್ಚಾರ:— ನ. ಣಗಳ ಉಚ್ಚಾರ ಭೇದವನ್ನು ಗಮನಿಸುತ್ತಾರೆ. ನ=ನ; ನನ್ನ=ನನ್ನ.

ಣ=ಣ. ನಾಡವರು ಗುಣ, ಹಣ ಎಂಬಿವುಗಳಲ್ಲಿಯ 'ಣ' ಕಾರವನ್ನು 'ಣ' ಕಾರವಾಗಿಯೇ ಉಚ್ಚರಿಸುವುದನ್ನು ಕಾಣಬಹುದು. ಕರೆ 'ತೆಗೆದುಕೊಂಡ' ನಾಡವರ ಕತೆಯಲ್ಲಿ ಣ=ಣದ ಉಚ್ಚಾರವಿಲ್ಲ. ಇವರೆ 'ಳ' ಕಾರವನ್ನು 'ನ' ಕಾರವಾಗಿ ಉಚ್ಚರಿಸುವದನ್ನು ಕಾಣಬಹುದು. ಇವರ ಉದಾಹರಣೆಯನ್ನು ಮೇಲೆ ಕೊಟ್ಟಿದ್ದೇವೆ.

೭. ಮಹಾಪ್ರಾಣಗಳು:— ನಾಡವರಿಗೆ ಮಹಾಪ್ರಾಣಗಳನ್ನು ಸರಿಯಾಗಿ ಉಚ್ಚರಿಸಲು ಬರುವುದಿಲ್ಲ. ಸಂಸ್ಕೃತ ಪದಗಳಲ್ಲಿಯ ಮಹಾಪ್ರಾಣಗಳನ್ನು ಅಲ್ಪಪ್ರಾಣಗಳಾಗಿ ಉಚ್ಚರಿಸುವರು. ಉದಾ: ಧುರ> ದುರ; ಭೀಮ> ಬೀಮ; ಒಮ್ಮೊಮ್ಮೆ ಮಹಾಪ್ರಾಣಗಳು ಇಲ್ಲದ ಕಡೆ ಕೂಡ ಅಂದರೆ ಅಲ್ಪಪ್ರಾಣಗಳನ್ನು ಕೂಡ ಮಹಾಪ್ರಾಣಗಳನ್ನಾಗಿ ಉಚ್ಚರಿಸುವರು. ಉದಾ: ಮುಖ> ಮುಖ್ಖ ಎಂದೂ ಗೃಧ್ರಾಯುದ್ಧ> ಗಿಧ್ರಾಯುದ್ಧ ಎಂದೂ ಉಚ್ಚರಿಸುವರು.

೮. ಸಾನುನಾಸಿಕ ಉಚ್ಚಾರ:— 'ನ' ಕಾರವು ಕೆಲವೆಡೆಯಲ್ಲಿ ಸಾನುನಾಸಿಕವಾಗಿ ಉಚ್ಚರಿಸಲ್ಪಡುತ್ತದೆ. ಅದರಂತೆ 'ಹ' ಕಾರವೂ ಕೂಡ

ಉದಾ:— ಅವನು> ಅವ; ಇವನು> ಇವ; ಹೀಗೆ> ಹಿಂಗೆ.

೯. ಸಂಧಿ:— ಸಂಧಿಯ ಬಳಕೆ ಕಡಿಮೆ. ಆದರೂ ಇಲ್ಲವೆಂದು ಹೇಳುವಂತಿಲ್ಲ.

ಉದಾ:— ಮುಚ್ಚಿಕೊಂಡಿದ್ದನು> ಮುಚ್ಕಂಡಿದ.

೧೦. ಹ್ರಸ್ವದೀರ್ಘ ಪ್ಲುತಗಳು:— ಹ್ರಸ್ವದೀರ್ಘಗಳು ಎಲ್ಲ ಭಾಷೆಯಲ್ಲಿ ಇರುವಂತೆ ಇಲ್ಲಿಯೂ ಇವೆ. ಅವುಗಳ ಉದಾಹರಣೆ ಅವಶ್ಯಕವಿಲ್ಲ. ನಾಡವರು ಕೆಲವು ಸ್ವರಗಳನ್ನು ಪ್ಲುತವಾಗಿ ಅಂದರೆ ತ್ರಿಮಾತ್ರಿಕವಾಗಿ ಉಚ್ಚರಿಸುವರು. ಉದಾ:—ಪ್ರಯತ್ನ ಬಿಟ್ಟಾ....

೧೧. ಪದಗಳ ಮೊದಲನೆಯ ಅಕ್ಷರದ ಮೇಲೆ ಸಾಮಾನ್ಯವಾಗಿ ಆಘಾತ ಬೀಳುವುದು

ಉದಾ:— ಇಬ್ರೂ ನನ್ನ ಶಕ್ತಿ ಹಿಚ್ಚ್ಕೊ ಬಿದದ್ರ.....

೧೨. ವಿರಾಮ ಘಟಕ :— ಪ್ರಮಾಣಬದ್ಧ ಮಾತಿನಂತೆಯೇ ಇದೆ. ಇವರ ಮಾತಿನಲ್ಲಿ ವಿರಾಮ ಘಟಕಗಳು ಗ್ರಂಥಸ್ಥ ಭಾಷೆಯಲ್ಲಿಯ ವಿರಾಮ ಚಿಹ್ನೆಗಳನ್ನು ಅನುಸರಿಸುವವು. ವಿರಾಮ ಘಟಕಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮುಂದೆ ಇದೇ ಪ್ರಕರಣದಲ್ಲಿ ವಿವರಿಸುವೆವು.

೧೩. ಸ್ವರಗಳ ವಿಶಿಷ್ಟತೆ : ನಾಡವರ ಮನೆಮಾತಿನ ಉಚ್ಚಾರದಲ್ಲಿ ಸ್ವರಗಳ ವಿಶಿಷ್ಟತೆಗಳಿವೆ. ಉದಾ :—

ಗಾಳೆ ಸೂರ್ಯ ಇಬ್ರೂ ನನ ಶಕ್ತಿ, ಹಿಚ್ಚ್ಕೊ ನಿನ್ನ ಶಕ್ತಿ ಹೆಚ್ಚ್ಕೊ ಎಂದೆ ವಾದ ಮಾಡ್ತ ಬಿದದ್ರ

೧೪. ಸ್ವರಗಳ ಅಲ್ಪಮಾತ್ರ ಉಚ್ಚಾರ ಹಾಗೂ ವ್ಯಂಜನಗಳ ಅಸ್ಪಷ್ಟ ಉಚ್ಚಾರ : ನಾಡವರ ಮನೆಮಾತಿನಲ್ಲಿ ಅಕಾರದ ಉಚ್ಚಾರವು ಅಲ್ಪಮಾತ್ರಾ ಅಂದರೆ ಅರ್ಧ ಮಾತ್ರೆಯಷ್ಟು ಇದೆ.(ಕೆಲವು ಎಡೆಯಲ್ಲಿ) ಉದಾ :—ತಿಳ್ಕಣಬೇಕು.

ಎಂಬಲ್ಲಿಯ 'ಣ' ಕಾರದಲ್ಲಿರುವ ಅಕಾರವು ಅಲ್ಪಮಾತ್ರೆಯಾಗಿ ಉಚ್ಚರಿಸಲ್ಪಡುವುದು. ಇದನ್ನು 'ತಿಳ್ಕಣ್ಬೇಕ' ಎಂದು ಅವರು ಉಚ್ಚರಿಸುವರು.

೧೫. ತದ್ಭವಗಳ ವರ್ಗೀಕರಣ : ಅನೇಕ ಸಂಸ್ಕೃತಶಬ್ದಗಳನ್ನು ನಾಡವರ ಮನೆ ಮಾತಿನಲ್ಲಿ ಉಪಯೋಗಿಸುವದನ್ನು ಕಾಣಬಹುದು.

ಉದಾ:—ಸೂರ್ಯ, ಶಕ್ತಿ, ಪಾವ, ಪ್ರಯತ್ನ ಇತ್ಯಾದಿ. ಆದರೂ ದೇಶೀಯ (ಕನ್ನಡ) ಶಬ್ದಗಳ ಕಡೆಗೆ ಅವರ ಒಲವು ಹೆಚ್ಚು. ಕಿರಣ ಎಂಬಲ್ಲಿ ಬಿಸ್ಲ ಎಂದೂ, ಪ್ರಯಾಣಿಕ ಎಂಬಲ್ಲಿ ಹಾದೀಲೆ ಹೋಗುವವ ಎಂದೂ ಹೇಳುವರು. ಬಿನಪ್ರ> ಎಂಬುದು ವಿಶಿಷ್ಟ ವಾಕ್ ಪ್ರಚಾರವಾಗಿದ್ದು ಕ್ರಿಯೆಯು ಇನ್ನೂ ನಡೆದಿದೆ ಎಂಬುದನ್ನು

ಸೂಚಿಸುತ್ತದೆ. ಅವರ ಬೀಳು (ಪತನ) ಎಂಬ ಮೂಲ ಅರ್ಥದಲ್ಲಿ ಅವನ್ನು ಇಲ್ಲಿ ಹೇಳಿರುವುದಿಲ್ಲ.

ಉದಾ:—ಗಾಳಿ ಸೂರ್ಯ ನನ್ನ ಶಕ್ತಿ ಹೆಚ್ಚೊ ನಿನ್ನ ಶಕ್ತಿ ಹೆಚ್ಚೊ ಎಂದು ವಾನ ಮಾಡ್ತೆ ಬಿದದ್ರು. ವಾಯು ಸೂರ್ಯ ಇಬ್ಬರೂ ನನ್ನ ಶಕ್ತಿ ಹೆಚ್ಚೆ ನಿನ್ನ ಶಕ್ತಿ ಹೆಚ್ಚೆ ಎಂದು ವಾದ ಮಾಡುತ್ತಾ ಇದ್ದರು.

ವಂದಿಗೆ ನಾಡವರ ಮನೆ ಮಾತುಗಳು

ವಂದಿಗೆ ಎಂಬ ಗ್ರಾಮವು ನಾಡವರು ವಾಸಿಸುವ ಇನ್ನೊಂದು ಕೇಂದ್ರ. ಇದು ಕುಮಟೆಯಿಂದ ಉತ್ತರಕ್ಕೆ ೧೮ ಮೈಲುಗಳ ಮೇಲೆ ಇದೆ. ವಂದಿಗೆಯ ನಾಡವರ ಮನೆಮಾತಿನಲ್ಲಿ ಸೂರ್ಯ ಹಾಗೂ ಗಾಳಿ ಎಂಬ ಕತೆಯು ಕೆಳಗಿನಂತೆ ಇದೆ.

೧ ವಾಯು ಸೂರ್ಯ ಎರಡೂ ನನ್ನ ಶಕ್ತಿ ಹಿಚ್ಚೋ ?
೨ ನಿನ್ನ ಶಕ್ತಿ ಹಿಚ್ಚೋ ಎಂದ ವಾದಾ ಮಾಡ್ತೆ ಬಿದದ್ರು
೩ ಆಗ ಒಬ್ಬ ಪ್ರಯಾಣಿಕ ಆ ಬದಿಗೆ ಬಂದ.
೪ ಬೆಚ್ಚಗಿನ ಕಂಬಳಿಯ ಮುಚ್ಚಿಕೊಂಡದ್ದ.
೫ ಆ ಕಂಬಳಿಯ ಯಾರ ಇನ್ನ ಕೈಯಿಂದ
೬ ಬಿಚ್ಚ ಹಾಕಸತಾರೋ ಇನ್ನ ಶಕ್ತಿ ಹಚ್ಚ ಎಂದ.
೭ ತಿಳಿಬೇಕ ಹೀಗಂದ್ರೇ ಅವ್ರು ಒಪ್ಪಂದ ಮಾಡ-
೮ ಕೊಂಡ್ರು, ಮುದಲೆ ವಾಯು ತನ್ನ ಶಕ್ತಿಯೆಲ್ಲ
೯ ಬಿಟ್ಟ ಊಬಿದ. ಆದ್ರೆ ಅವ ಊಬಿದಷ್ಟ
೧೦ ಆ ಪ್ರಯಾಣಿಕ ಮತ್ತಷ್ಟು ಕಂಬಳಿ
೧೧ ಬಿಗಿಯಾಗೆ ಮೈಮೇಲೆ ಎಳಕೊಂಡ. ಕಡಿಗೆ
೧೨ ವಾಯು ಪರಿಯತ್ನ ಬಿಟ್ಟ. ಆ ಮೇಲೆ ಸೂರ್ಯ
೧೩ ಕಿರಣಾ ಬೀರತಾ ಬಂದ. ಬಿಸಲಿನ ತಾಪಕ್ಕೆ
೧೪ ಪ್ರಯಾಣಿಕ ಕಂಬಳಿ ತಾನೇ ಬಿಚ್ಚ ಹಾಕದ.
೧೫ ಹೀಗಾಗೆ ತನ್ನ ಶಕ್ತಿಗಿಂತ ಸೂರ್ಯನ
೧೬ ಶಕ್ತಿಯೇ ಹಿಚ್ಚೆಂದು ವಾಯು ಒಪ್ಪಕೊಳ್ಳಬೇಕಾಯಿತ.

(ಕತೆಯನ್ನು ಹೇಳಿದವನು ಬಿ. ಸಾಂ. ನಾಯ್ಕ, ವಂದಿಗೆ ತಾಲ್ಲೂಕ :—ಅಂಕೋಲಾ)

ವಾಕ್ಯಗಳು ಸ್ಪಷ್ಟವಾಗಿವೆ ವಿವರಣೆಯ ಅವಶ್ಯಕತೆಯಿಲ್ಲ. ಎ> ಇ ಹಾಗೂ ಒ> ಉ ಪರಿವರ್ತನೆಯನ್ನು ವಂದಿಗೆಯ ನಾಡವದಲ್ಲಿ ಕಾಣಬಹುದು

ಸ್ಥಳಗತ ವೈಶಿಷ್ಟ್ಯಗಳು:—ಅವ, ಇವ ಮುಂತಾಗಿ,....
ಸಂಪರ್ಕಜನ್ಯ ,, :—ಒ> ಉ ಉದಾ:—ಮುಚ್ಚಂಡಿವ....
ಪಂಗಡಗತ ,, :—(ಅ) ಉಚ್ಚಾರದಲ್ಲಿ ಎ> ಇ ಹಾಗೂ ಒ> ಉ ಬದಲಾವಣೆ.

(ಆ) ವಾಕ್‌ಪ್ರಚಾರದಲ್ಲಿ ವಾದಾ ಮಾಡ್ತೆ ಬಿದದ್ರು ಎಂಬುದು ಕ್ರಿಯೆಯು ನಡೆದಿದೆ ಎಂಬುದನ್ನು ಸೂಚಿಸುವ ಸಹಾಯಕ ಕ್ರಿಯಾಪದವಾಗಿದೆ.

ನಾಡವರ ಎಲ್ಲ ವೈಶಿಷ್ಟ್ಯಗಳನ್ನು ತೋರಿಸುವ ಒಂದು ಪ್ರಸಂಗದ ವರ್ಣನೆ.

ನಾಡವರ ಎಲ್ಲ ವೈಶಿಷ್ಟ್ಯಗಳು ಒಂದೇ ಕಡೆಯಲ್ಲಿ ಬರುವ ಹಾಗೆ ಒಂದು ಪ್ರಸಂಗವನ್ನು ಕಲ್ಪಿಸಿ, ಅದನ್ನು ವರ್ಣಿಸುವ ಒಂದು ವಾಕ್ಯ ಬೃಂದವನ್ನು ರಚಿಸಿ, ನಾಡವರ ಪಂಗಡದವರಿಂದ ತಮ್ಮದೇ ಆದ ಶೈಲಿಯಲ್ಲಿ ಹಾಗೂ ಶಬ್ದಗಳಲ್ಲಿ ಹೇಳಿಸಿ ನಮೂದಿಸಿದೆ.

ಒಂದು ಊರಲಿ | ಉಂದ ಅಜ್ಜಿ ಮುದಕೆ | ಇದತ ॥ ಅದಕೆ ಒಬ್ಬನೇ ಮಗ ಇದದ ॥ ಅಂವ ಬೆಟಕೆ ಹೋಗೆ | ಸವದಿ ತಂದ್ರ | ಅದರಾ ಸಾಕತದಾ | ಆದರೆ | ಉಂದಿನಸೆ | ಅವ ಬೆಟ್ಟಿ ಹೋದಾಗೆ | ಹಾದೆ ತಪ್ಪೋಯ್ತು ಬಾಳಾ ಹುಡ್ತದ | ಅದೂ ಹಾವೆ ಸಿಗಲ ॥ ಸಂಜಿಯಾಯ್ತು | ಆಗ ಆನೆ | ಹಿದ್ರಿಕೆಯಾಗುಕೆ ಹತ್ತ ॥ ಅವ ಉಂದ ಮರದ ಮೇಲೆ | ಹತ್ತಂಡೆ | ಕೂತ ॥ ಜೆಳಗಾಗುವಂತ್ರಿಗೆ | ಎಜ್ಜಾಗ ಕಳ್ತ್ರೆ ॥ ಇಬದಿಗೆ ಅಜ್ಜಿ ಮುದಕೆ | ಸಂಜೆಯಾದ್ರೂ ಮಗ ಮನಿಗೆ ಬರಲಾ ಅಂದೆ | ಬಾಗಲದಲ್ಲಿ ಕುಳ್ತಕಂಡೆ | ಮಗನ ಹಾದಿ ನೋಡ್ತೇ | ಇದತ ॥ ಇಪ್ಪಾತ್ರಿಯಾದ್ರೂ ಮಗ ಬರಲ ॥ ಆಗ ಅಜ್ಜಿ ಮುದಕೆ | ಉಂದ ಗಂಡಸು ಕರದೆ | ತನ್ನ ಮಗನ ಹುಡುಕುತೆ | ಕಳಿಸ್ತ ॥ ಅಂವ ಹೋಗೆ | ಅಜ್ಜಿ ಮಗನ | ಹುಡಿಕಂಡೆ ಬಂದಾ ॥ ಆಗ ಅಜ್ಜಿ ಮಗನ ಕಂಡೆ ಕೇಳ್ತ ಆಗ ಅಂವ ಹಾದಿ ತಪ್ಪೋಯ್ತು ಅಂದ | ಇಬಿಬ್ಬು | ನನ್ನ ಮಗನ ಹುಲಿ ಬಲಿ ತಿಂದ ಬಿಡ್ತತಲೆ ॥ ೩ ಹಿಂದ್ನ ಜನ್ಮದ | ಪುಣ್ಯ ಇದ್ದೆ | ಬದ್ಕಮಗನೆ ಎಂದೆ ಹೇಳ್ತ ॥ ಜೆಳ್ಗೆ ಮುಂಜೆ | ಮಗನ ಅಂಗಡಿಗೆ ಕಳಸ್ತ ॥ ಎಪ್ಪಿಮ್ಮಗೆ ದಾಸಿ ತಾಕ ಬಾ | ಅಂತ ಅಡ್ಡಿಲ್ಲಾ ಅಂದೆ | ಮುಟ್ಟಿ ತ್ಕಂಡೆ ಹೋದಾ ॥ ಹೋಗು ವಾಗೆ | ದೊಡ್ಡ ದೊಡ್ಡ | ಹೊಳೆ ಬಂತ ॥ ಅಂವ ಸುತ್ತಂಡೆ ಹೋದ | ಕೊಡೆ ಬಿಡಿ ಎಲ್ಲ ಪಾರಸ್ತಂಡೆ ಹೋಯ್ತು | ತಿಪ್ತೇ | ಮನೆಗೆ ಬಂದ ॥ ಮತ್ತೆ ಜೆಳ್ಗಾ ಮುಂಜಿ | ಮತ್ತ ಕಳಸ್ತ ॥ ಆಗೆ ತಗಂಡೆ ಬಂದ |

(ಪ್ರಸಂಗವನ್ನು ವರ್ಣಿಸಿದವನು: ಯು. ನಾ. ನಾಯ್ಕ. ಅಗ್ರಗೋಣ, ತಾಲೂಕ ಕುಮಟಾ)

ಕಠಿಣ ಶಬ್ದಗಳ ಅರ್ಥವು :—

ಅದರಾ ಸಾಕತದಾ = ಅದನ್ನು (ಮುದುಕೆಯನ್ನು) ಸಾಕುತ್ತಿದ್ದನು

(೩೬ ನೆಯ ಪುಟ ನೋಡಿರಿ)

★ ತಾ ಯಿ - ಮ ಗು ★

(ನಿಶ್ಶಬ್ದ ರವೀಂದ್ರನಾಥ ಠಾಗೋರರ 'The beginning' ಕವನದ ಭಾವಾನುವಾದ)

ಶ್ರೀ. ಪ್ಪಿ. ಬಿ. ಅರ್ತಿಕಜೆ, ಮುದನೂರ.

೧

" ಎಲ್ಲಿಂದ ನಾಬಂದೆನೆಲ್ಲಿಂದ ನೀನೆನ್ನ
ತಂದೆ ಹೇಳಿ"ಂದು ಮಗು ತಾಯಿಯನ್ನು ॥
ಕೇಳಿ ನಗುತಳುತ ಮಗುವನ್ನೆದೆಗೆ ಬಿಗಿದಪ್ಪಿ
ಪೇಳಿದಳು ಬಾಲಕನಿಗೆ ಸಂಗತಿಯನು ॥

೨

" ಎಲೆ ಚಿನ್ನ ! ನೀನೆನ್ನ ಹೃದಯದಲ್ಲಡಗಿದ್ದೆ
ಎನ್ನೆದೆಯ ಬಹುದಿನದ ಬಯಕೆಯಂತೆ ॥
ಬಾಲ್ಯದಾಟಗಳ ಬೊಂಬೆಗಳಲ್ಲಿ ನೀನೆನಗೆ
ಮುದ್ದಾಗಿ ಕಾಣಿಸಿದೆ ದೇವನಂತೆ ॥

೩

ಅನೆಮಣ್ಣಿಂದ ದೇವನ ಪ್ರತಿಮೆ ಮಾಡುವಿರಿ
ಕಂದ ! ನಿನ್ನನೆ ರಚಿಸಿ ನಾನುರಿಸಿದೆ ॥
ಗರ್ಭಗುಡಿಯ ದೇವನೊಡನೆ ನೀನಡಗಿರಲು
ಅವನ ಪೂಜೆಸೆ ನಿನ್ನ ಪೂಜೆಗೈದೆ ॥

೪

ಎನ್ನಾಕಿ, ಪ್ರೇಮ, ಜೀವನಗಳಲಿ ತುಂಬಿದ್ದೆ
ಎನ್ನಮಾತೆಯ ಬಾಳಿನಲ್ಲಿ ನೀನು ॥
ನಮ್ಮ ಮನೆಯನ್ನಾಳುವಮರ ದೈವದಮಡಿಲಿ-
ನಲ್ಲಿ ವರುಷಂಗಳಿಂ ಬೆಳೆದೆ ನೀನು ॥

೫

ತಾರುಣ್ಯದಲ್ಲಿನ್ನ ಹೃದ್ವನಜವರಳುತಿರೆ
ಸೌಗಂಧದಂತೆ ನೀ ಸಂಚರಿಸಿದೆ ॥
ನಿನ್ನ ಕೋಮಲತೆಯೆನ್ನಂಗಗಳಲರಳಿತ್ತು
ರವಿಯುದಿಪ ಮುನ್ನದಾಗಸದ ತೆರದೆ ॥

೬

ಅಮರಪ್ರೇಮದ ಮೂರ್ತಿ ! ನೀನರುಣ ಕಿರಣದೊಡ
ಹುಟ್ಟು! ಕಾಂತಿಯ ಬೀರಿ ಬಂದೆ ಧರೆಗೆ ॥
ನಾತದಿಂ ಜೀವನದ ಗಂಗೆಯಲಿ ತೇಲುತ್ತ
ಬಂದೆಯೆನ್ನೆದೆಯಲ್ಲಿ ಕುಳಿತೆ ಕೊನೆಗೆ! ॥

೭

ನೀನಗಲಬಹುದೆಂಬ ಭಯದಿಂದ ನಾನಿಂತು
ಎದೆಗೆ ಬಿಗಿದಪ್ಪಿ ಹಿಡಿದಿಹೆನು ಮಗುವೆ ॥
ಆವ ಶಕ್ತಿಯವೆನ್ನ ಬಡಕೈಗಳಲಿ ಜಗದ
'ನಿಧಿ'ಯನ್ನು ಬಂಧಿಸಿದೆ ? ಎಂತು ತಿಳಿವೆ ?

೮

ನಿನ್ನ ಮುಖಮಂಡಲವನೀಕ್ಷಿಸುವ ನೇಳೆಯಲಿ
ಗೂಢತತ್ತ್ವವು ಮುಣುಗಿಸುವುದದೆನ್ನ ॥
ನೀ ಜಗದೊಳೆಲ್ಲರಿಗೆ ಸೇರಿರುವೆಯಾದರೂ
ಕೊನೆಗೆ 'ನನ್ನವ'ನಾಗಿ ಬಂದೆ ಚಿನ್ನ ! ॥

● ಬದುಕಿನ ಶೇಷ ●

(ಪಂಜಾಬೀ ಕಥೆ)*

ಶ್ರೀ. ಅಫ್ಸಾನಾಹೇಬ ಸನದಿ, ಬಿ. ಎ. ಆಫಣಿ.

ಬಡವರ ಜೀವನ ಅನ್ನಕ್ಕಾಗಿ ಕಾತರಿಸಿ ಅಳುತ್ತಿದ್ದರೆ, ಸಿರಿವಂತರ ಜೀವನ, ಇನ್ನಾವುದಕ್ಕಾಗಿಯೋ ಹಂಬಲಿಸಿ ಅಳುತ್ತದೆ. ಮನದ ಆಶೆಯೆ ಇರಲಿ, ಹೃದಯದ ಅಪೇಕ್ಷೆಯೇ ಇರಲಿ; ಪೂರಯಿಕೆಯಾಗದಿದ್ದಾಗ ಅವು ಕೆರಳಿದ ಕೇಸುರಿಗಳಾಗುವುವು.

ಬೆಳಗಿನ ಚಹದ ಕಪ್ಪನ್ನು ಖಾಲಿ ಮಾಡುತ್ತಿದ್ದಂತೆಯೇ ನಾನು ಎದುರು ಬಿದ್ದಿದ್ದ ದಿನಪತ್ರಿಕೆಯನ್ನು ಎತ್ತಿಕೊಂಡೆ. ಮೊದಲ ಪುಟದಲ್ಲಿಯೇ ಮಿ. ಫೈನರ ಬ್ಯಾಕನೇ ಅವರ ಚಿತ್ರ ಅಚ್ಚಾಗಿತ್ತು. ಜನಾಂಗಿಕ ಭೇದಭಾವವನ್ನು ತೊಡೆದು ಹಾಕುವ ಕುರಿತು ಇಂಗ್ಲಂಡಿನ ಹೌಸ್ ಆಫ್ ಕಾಮನ್ಸಿನಲ್ಲಿ ಗೊತ್ತುವಳಿಯೊಂದನ್ನು ಮಂಡಿಸಿದ ಮಹಾನುಭಾವ ಮಿನರಗಳೊಂದಿಗೆ ಮೂಡಿ ನಿಂತಿದ್ದ ಅವನ ಚಿತ್ರ.

ಈ ಜನಾಂಗಿಕ ಸಮಸ್ಯೆಯೊಂದು ವಿಚಿತ್ರ ಸಮಸ್ಯೆಯೇ ಆಗಿದೆ. ಈಗ ಮಾನವತೆಯ ತೆರೆದ ಕಣ್ಣುಗಳಿಂದ ನಿಟ್ಟಿಸಿದಾಗ 'ಇದೆಂತಹ ವಿಘಾರಹೀನ ಸಮಸ್ಯೆ !' ಎಂದು ಎನಿಸುತ್ತದೆ ನಮಗೆ. ಅಷ್ಟು ನೀರಸವಾದ, ಕ್ಷುಲ್ಲಕವಾದ ಸಂಗತಿ ಅದು! ಆದರೆ ತೆರೆಯಬಹುದಾಗಿದ್ದ ಕಣ್ಣುಗಳನ್ನು ತೆರೆಯದೆ, ಸ್ವಯಂ ಪ್ರಯತ್ನದಿಂದ ಮನುಷ್ಯ ಹಾಕಿಕೊಂಡಿರುವ ಸಮಸ್ಯೆಯ ಗಂಟು ದಿನದಿನಕ್ಕೂ ಬಿಗಿಯಾಗುತ್ತಲೇ ನಡೆದಿದೆ. ಶತಮಾನಗಳು ಕಳೆದು ಹೋದರೂ ಅದರ ಒಂದು ಎಳೆ ಕೂಡ ಬಿಚ್ಚಲಿಲ್ಲ. ಈ ತೊಡಕನ್ನು ಸಫಲಗೊಳಿಸಲು ಪ್ರಯತ್ನಿಸಿದ ಬುದ್ಧ, ಏಸುವಿನ ಕೈಗಳೂ ದಣಿದು ಹೋದುವು. ನಾನಕ ತನ್ನ ಜೀವನವನ್ನೇ ಧಾರೆ ಎರೆದರು. ಗಾಂಧೀ ಶರೀರದ ಒಂದೊಂದು ಅಣುವಿನ ಸಮಸ್ತ ಶಕ್ತಿಯೂ ಈ ಕಾರ್ಯದಲ್ಲಿ ವಿನಿಯೋಗವಾಯಿತು. ಜಗತ್ತಿನ ವಿಶಾಲ ಲೇಖಕವೃಂದ ತಮ್ಮ ಲೇಖನಿಯ ಶಕ್ತಿ ಎಲ್ಲವನ್ನೂ ಇದೇ ವೇದಿಕೆಗೆ ಅರ್ಪಿಸಿ ಹೋಯಿತು. ಇಷ್ಟು ಶ್ರಮ, ಪ್ರಯತ್ನ, ಜಗ್ಗಾಟಗಳ ನಂತರವೂ, ಶತಕ-ಶತಕಗಳ ನಿರಂತರ ಹೋರಾಟದ ಬಳಿಕ ಇಂದಿಗೂ ಆ ಗಂಟು ಅಷ್ಟೇ ಭದ್ರವಾಗಿ, ಬಿಗಿಯಾಗಿ ಹೌಸ್ ಆಫ್ ಕಾಮನ್ಸಿನಲ್ಲಿ ಗೊತ್ತುವಳಿಯೊಂದಕ್ಕೆ ಆಜ್ಞಾನವೀಯುತ್ತಿದೆ!

ಕೂಡಲೇ ನನ್ನ ದೃಷ್ಟಿ ಪತ್ರಿಕೆಯ ಕೊನೆಯ ಪುಟದ ಕಡೆಗೆ ಹರಿಯಿತು. ಅದರ ಮೂಲೆಯ ಕಾಲಮ್ಮಿನಲ್ಲಿ ಅಚ್ಚಾಗಿತ್ತು—"ಶ್ರೀಮತಿ ಚೇತನಾಕುಮಾರಿ ಅವರ ದೇಹತ್ಯಾಗ."

ಚೇತನಾಕುಮಾರಿ ನನಗೆ ಅಪರಿಚಿತೆಯಾಗಿರಲಿಲ್ಲ. ಅಂತೆಯೇ ಅವಸರ ಅವಸರವಾಗಿ ನಾನಾ ಸುದ್ದಿ ಓದಿದೆ. "ಜಹಮ್ಮದಾಬಾದಿನ ಸುಪ್ರಸಿದ್ಧ ವ್ಯಾಪಾರಿಗಳಾದ ಸೇಠ ದೇವಿದಾಸರ ಧರ್ಮಪತ್ನಿಯವರಾದ ಶ್ರೀಮತಿ ಚೇತನಾಕುಮಾರಿ ಅವರು, ನಿನ್ನೆ ರಾತ್ರಿ ಸುಮಾರು ೨ ಗಂಟೆಗೆ ಸ್ವರ್ಗಸ್ಥರಾದರು. ಶ್ರೀಮತಿ ಅವರು ಬಹುದಿನಗಳಿಂದ ರಕ್ತದ ಒತ್ತಡದಿಂದ ಬಳಲುತ್ತಿದ್ದರು. ಮೊನ್ನೆ ದೇಹಸ್ಥಿತಿ ತುಂಬ ಕೆಟ್ಟು ಹೋಗಲು, ಶ್ರೀಮತಿಯವರು ತಮ್ಮ ಕೊನೆಯ ಬಯಕೆಯಾಗಿ ತಮ್ಮನ್ನು ಮುಂಬೈಯ ಗ್ರೀನ ಹೋಟಲಿಗೆ ಕರೆದೊಯ್ಯಬೇಕೆಂದೂ, ಅಲ್ಲಿ ೯ ನಂಬರಿನ ಕೋಣೆಯಲ್ಲಿ ಇಡಬೇಕೆಂದೂ ಕೇಳಿಕೊಂಡರು. ನಿನ್ನೆ ಬೆಳಗು ಕಾರಿನಲ್ಲಿ ಅವರನ್ನು ಅಹಮದಾಬಾದಿನಿಂದ ಮುಂಬೈಗೆ ತರಲಾಯಿತು. ಮುಂಬೈಯಲ್ಲಿ ಸ್ವಂತದ ಭವ್ಯ ಭವನವಿದ್ದರೂ, ಅವರ ಆಶೆಯಂತೆ ಗ್ರೀನ್ ಹೋಟಲಿನ ೯ನೆಯ ನಂಬರು ಕೋಣೆಯಲ್ಲಿಯೇ ಇಡಲಾಯಿತು. ನಗರದ ಖ್ಯಾತನಾಮ ಡಾಕ್ಟರರೆಲ್ಲ ಆರೈಕೆ ಮಾಡಿ

(೨೭ ನೆಯ ಪುಟದಿಂದ ಬಾಮುದು)

ಬೆಳಗಾಗುವಂತ್ರಿಗೆ = ಬೆಳಗಾಗುವ ಹೊತ್ತಿಗೆ; ಕಳ್ತಾ = ಕುಳಿತ; ಮೊಳೆ = ಮಳೆ; ಇಬಿಬ್ಬು = ಅಬ್ಬಬ್ಬ; ಪುಟ್ಟೆ = ಬುಟ್ಟಿ; ಕೊಡೆಬಿಡಿ = ಮನೆ ಗಿನೆ ಎಂಬಹಾಗೆ ಜೋಡುನುಡಿ;

ತೀಡ್ತೆ = ಅಳುತ್ತಾ.

ಮುದುಕಿಗೆ ಒಬ್ಬ ಮಗನಿದ್ದನು. ಕಟ್ಟಿಗೆಗಾಗಿ ಅರಣ್ಯಕ್ಕೆ ಹೋದಾಗ ದಾರಿ ತಪ್ಪಿತು. ಮುದುಕಿಯು ಗಾಬರಿಯಾಗಿ ಒಬ್ಬ ಮನುಷ್ಯನನ್ನು ಕಳಿಸಿ ಮಗನನ್ನು ಕರೆಸಿದಳು. ಆಗ ಸಂಜೆಯಾಗಿತ್ತು. ಮಗನನ್ನು ಎಮ್ಮೆಗೆ ಧಾನ್ಯ ತರಲು ಅಂಗಡಿಗೆ ಕಳಿಸಿದಳು. ಮಳೆಗಾಳಿಯ ಮೂಲಕ ಅವನ ಕೊಪ ಹಾರಿಹೋಯಿತು. ಆದ್ದರಿಂದ ಅವನಿಗೆ ಅಂಗಡಿಗೆ ಹೋಗುವುದು ಸಾಧ್ಯವಾಗಲಿಲ್ಲ. ಮರುದಿನವು ಅವನು ಅಂಗಡಿಗೆ ಹೋದನು. ಎಂಬುದು ಪ್ರಸಂಗದ ಸಾರಾಂಶ.

ನೀಲಿನ ಪ್ರಸಂಗದ ವರ್ಣನೆಯಲ್ಲಿ ನಾಡವರ ಮನೆಮಾತಿನಲ್ಲಿಯ ಸ್ವರಗಳ ಏರಿಳಿತಗಳನ್ನೂ ಗ್ರಾಮಘಟಕಗಳನ್ನೂ ತೋರಿಸಿದೆ. ವಿಮರ್ಶಿಸಿಕೊಳ್ಳಬೇಕು.

ಸ್ವರಗಳ ಏರಿಳಿತದ ಚಿಹ್ನೆ ——— ೮

ಅಲ್ಪವಿರಾಮ ಘಟಕ ಚಿಹ್ನೆ |

ಪೂರ್ಣವಿರಾಮ ಘಟಕ ಚಿಹ್ನೆ ||

ಒಟ್ಟಿನ ಮೇಲೆ ಹೇಳುವದಾದರೆ ನಾಡವರ ಮನೆಮಾತುಗಳು ಎಲ್ಲ ರೀತಿಯಿಂದಲೂ ಒಳ್ಳೆಯ ಒಲವಿನ ಭಾಷೆಯೆಂದು ಹೇಳಬಹುದು. ಕೃಷಿ

* ಸುಪ್ರಸಿದ್ಧ ಪಂಜಾಬೀ ಕಥೆಗಾರ್ತಿ ಶ್ರೀಮತಿ ಅಮೃತಾ ಪ್ರೀತಮ್ ಅವರ ಕಥೆಯೊಂದರ ಅನುವಾದವಿದು. —ಲೇ.

ದರೂ ಪ್ರಯೋಜನವಾಗಲಿಲ್ಲ. ರಾತ್ರಿ ೨ ಗಂಟೆಯ ಸುಮಾರಿಗೆ ಅವರ ಪ್ರಾಣಪಕ್ಷಿ ಹಾರಿಹೋಯಿತು." ಇಷ್ಟು ವರದಿಯ ನಂತರ ಸುದ್ದಿಗಾರ ಬರೆದಿದ್ದ—

" ಶ್ರೀಮತಿ ಚೇತನಾಕುಮಾರಿ ಅವರು ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಗಮನೀಯ ಪಾತ್ರವಹಿಸಿದ್ದರು. ಕಾಂಗ್ರೆಸ್ಸಿನ ಆಂದೋಲನ ಸಮಯದಲ್ಲಿ ಹೆಸರಾಂತ ಕಾಂಗ್ರೆಸ್ ಮುಖಂಡರು ಅವರ ನೆರವನ್ನು ಕೋರುತ್ತಿದ್ದರು. ಒಂದು ಸಲ ಅಹಮದಾಬಾದಿನ ಮಿಲ್ ಕೆಲಸಗಾರರು ದೊಡ್ಡ ಪ್ರಮಾಣದ ಮೇಲೆ ಸಂಪು ಕೈಕೊಂಡರು. ಈ ಅಭೂತಪೂರ್ವ ಸಂಪನ್ನು ಹಿಂತೆಗೆದುಕೊಳ್ಳಲು ಗಾಂಧೀಜಿಯವರು ಚೇತನಾದೇವಿಯ ನೆರವಿನಿಂದಲೇ ಕೆಲಸಗಾರರ ಬೇಡಿಕೆಗಳನ್ನು ಒಪ್ಪುವಂತೆ ಸಂಧಾನ ಮಾಡಿದ್ದರು. ಅಂದಿನಿಂದಲೇ ಗಾಂಧೀಜಿಯ ಸಲಹೆ ಹಾಗೂ ಕೆಲಸಗಾರರ ಸಂತೋಷಕ್ಕಾಗಿ ಒಂದು ಮಿಲ್ಲಿಗೆ " ಚೇತನಾ ಕ್ಲಾಥ್ ಮಿಲ್ಸ್ " ಎಂದು ಹೆಸರಿಸಲಾಗಿತ್ತು. ರಾಷ್ಟ್ರೀಯ ಕಾರ್ಯಗಳಿಗೆ ಧಾರಾಳವಾಗಿ ಧನಸಹಾಯವಿತ್ತು ಶ್ರೀಮತಿಯವರು ತುಂಬ ಹೆಸರುವಾಸಿಯಾಗಿದ್ದಾರೆ. "

" ಓ ! ಚೇತನಾ, ಕೊನೆಗೂ ಹೊರಟು ಹೋದೆಯಾ ನೀನು?"

ಕಣ್ಣು ತುಂಬಿಬಂದುವು. ಅದರೆ ಮನಕ್ಕೆ ನಿರಂತರವಾಗಿ ಚೇತನಾಳ ಜತೆ ಸಂಭಾಷಣೆಯಲ್ಲಿ ತೊಡಗಿಕೊಂಡ ಅನುಭವವಾಗ ಲಾರಂಭಿಸಿತು. " ಬದುಕಿನಲ್ಲಿ ನೀನು ಗಳಿಸಿದುದೆಷ್ಟೋ, ಕಳೆದು ಕೊಂಡುದೆಷ್ಟೋ ಅದಾರು ಬಲ್ಲರು ? ಆದರೂ ಈ ವ್ಯವಹಾರದಲ್ಲಿ ಕೊನೆಗೆ ಉಳಿದ ಶೇಷವನ್ನು ನೀನು ಮಾತ್ರವೇ ಬಲ್ಲೆ ಚೇತನಾ— ಇನ್ನಾರೂ ಇಲ್ಲ, ಯಾರಾರೂ ಇಲ್ಲ—ಅಂದಾಗ, ಈ ಬಡಪಾಯಿ ಸುದ್ದಿಗಾರನಿಗೇನು !....

ಕಳೆದ ಏಪ್ರೀಲ ತಿಂಗಳು ಇನ್ನೊಮ್ಮೆ ಕಣ್ಣುಗಳಿದುರು ಸುಳಿಯಿತು. ೧೨ ದಿನಗಳ ರಜೆ ಪಡೆದು ನಾನು ಮುಂಬೈಗೆ ಹೋಗಿದ್ದೆ. ಹೇಳಿಕೊಳ್ಳುವಂತಹ ಕೆಲಸವೇನೂ ಇರಲಿಲ್ಲ. ಆದರೂ ಆ ಹನ್ನೆರಡು ದಿನಗಳನ್ನು ಕೇವಲ ಸಾಗರದೊಡನೆಯೇ ಕಳೆಯಬೇಕೆಂಬ ಆಸೆ ಇತ್ತು. ಅಂತೆಯೇ ಅಲ್ಲಿ ಬರುವ ಸುದ್ದಿಯನ್ನು ಯಾರಿಗೂ ತಿಳಿಸಿರಲಿಲ್ಲ. ಸಮುದ್ರತೀರದ 'ಸೀ-ಗ್ರೀನ್' ಹೋಟಲಿನಲ್ಲಿ ೯ನೆಯ ನಂಬರಿನ ಕೋಣೆಯಲ್ಲಿ ನಾನು ಇಳಿದುಕೊಂಡಿದ್ದೆ. ಆ ಕೋಣೆಯ ಯಾವ ಮೂಲೆಯಲ್ಲಿ ಕುಳಿತರೂ ಸಮುದ್ರದ ದರ್ಶನವಾಗುತಿತ್ತು. ಬಂದ ೧ನೆಯ ದಿನವೇ ಹಿರಿಜೇಕು— ರಾತ್ರಿಯ ಊಟ ಮುಗಿಸಿಕೊಂಡು ನನ್ನ ಕೋಣೆಗೆ ತೆರಳಬೇಕೆಂದು ಲಿಫ್ಟಿನ ಬಳಿ ಬರುತ್ತಿದ್ದಂತೆಯೇ ಹೋಟಲಿನ ಮ್ಯಾನೇಜರ್ ಅವಸರವಾಗಿ ಸಮೀಪಿಸಿ ಹೇಳಿದ : " ಹೊರಗೆ ಮಹಿಳೆಯೊಬ್ಬರು ನಿಮ್ಮನ್ನು ಕಾಣಬಯಸುತ್ತಾರೆ. "

" ನನ್ನನ್ನು ? ಆಶ್ಚರ್ಯ !"

ನಾನು ಬರುವ ಸುದ್ದಿ ಯಾರಿಗೂ ತಿಳಿದಿರಲಿಲ್ಲ. ಹೀಗಿರಲು ಭೇಟಿಯಾಗುವ ಯಾರಾದರೂ ಬರುವುದು ಸಾಧ್ಯವೇ ? ಆದರೂ ಕುತೂಹಲದಿಂದ ಪ್ರತೀಕ್ಷಾಲಯದೆಡೆ ನಡೆದೆ. ತುಂಬ ಸುಂದರಿಯಾದ ಸ್ತ್ರೀ ಒಬ್ಬಳು ಅಲ್ಲಿ ಕಾಣುತ್ತಿದ್ದಳು. ಅವಳನ್ನು ಈ ಮೊದಲು ನೋಡಿದ್ದಂತೆಯೂ ನನಗೆ ಎನಿಸಲಿಲ್ಲ.

" ನಿಮ್ಮ ಹೆಸರು ಅಮೃತಾ ಪ್ರೀತಮ ಅಲ್ಲವೇ ?" ಅವಳೇ ಕೇಳಿದಳು.

" ಹೂಂ "

ನನ್ನ ಅತ್ಯಾಸೆಯೋ, ಸ್ವಾರ್ಥವೋ ಎಂದು ಹೇಳಬಹುದಾದ ಮಾತೊಂದಕ್ಕಾಗಿ ಇಲ್ಲಿ ಕುಳಿತು ನಿಮ್ಮ ದಾರಿ ಕಾಯುತ್ತಿದ್ದೆ—" ನಿಧಾನವಾಗಿ ಅವಳೇ ಮತ್ತೆ ಮುಂದುವರಿಸಿದಳು.

ಪರಿಚಯವಾದವರಲ್ಲಿ ನನಗಿಂತಲೂ ಹಿರಿಯಳೆಂಬುದರಲ್ಲಿ ಸಂದೇಹ ವಿರಲಿಲ್ಲ. ಮುಖಮುಂಡಲದಲ್ಲಿ ಎಂಥವರನ್ನೂ ಆದರದಿಂದ ತಲೆತಗ್ಗಿಸುವಂತೆ ಮಾಡಬಲ್ಲ ಆದರವೊಂದು ಕಳೆ ತಾನೇತಾನಾಗಿ ತುಂಬಿ ಕೊಂಡಿತ್ತು. ವಿನಯಪೂರ್ವಕವಾಗಿ ನಾನು ಹೇಳಿದೆ—"ಬನ್ನಿ, ನನ್ನ ಕೋಣೆಗೆ ಹೋಗೋಣ. "

ಕೋಣೆ ಎರಡನೆಯ ಅಂತಸ್ತಿನಲ್ಲಿ ಇತ್ತು. ಅವಳಿಗಾಗಿ ಕುರ್ಚಿಯೊಂದನ್ನು ಮುಂದೆ ಸರಿಸಿ ಕುಳಿತುಕೊಳ್ಳಲು ಹೇಳಿದಾಗ ಅವಳು ಹೇಳಿದಳು—

" ಒಂದು ದೃಷ್ಟಿಯಿಂದ ಇದು ನನ್ನ ವೈಯಕ್ತಿಕ ಸ್ವಾರ್ಥವೇ! ನಿಮ್ಮನ್ನುಳಿದು ಮತ್ತಾರಿದ್ದರೂ ಈ ಮಾತನ್ನು ನಾನು ಅವರೆದುರು ಎತ್ತುತ್ತಿರಲಿಲ್ಲ— ಸುಮ್ಮನೆ ಬಂದ ಹಾಗೆ ಹೊರಟು ಹೋಗುತ್ತಿದ್ದೆ. ಅದರೆ ನಿಮ್ಮೆದುರು ಸ್ವಾರ್ಥದ ಮಾತೊಂದನ್ನು ಉಸುರಲು ಬಹುಶಃ ನನಗೆ ಕಷ್ಟವಾಗದೆಂದು ತೋರುತ್ತದೆ. "

" ಅಪ್ಪಣೆ ಕೊಡಿ ಹಾಗಾದರೆ. "

" ನಾನು ಅಹಮದಾಬಾದಿನವಳು. ಎಲ್ಲಿಡೆಯಲ್ಲಿಯೂ ಮನ ಉದ್ವಿಗ್ನಗೊಂಡು ಮನೆ ಅಸ್ವಸ್ಥಗೊಂಡಾಗ, ಒಂದೆರಡು ದಿನಗಳಿಗಾಗಿ ಇಲ್ಲಿ ಬಂದು ನಿಲ್ಲುತ್ತೇನೆ. ನಮ್ಮದೇ ಜವ ಭವ್ಯವಾದೊಂದು ಬಂಗ್ಲೆ ಇದೆ ಮುಂಬೈಯಲ್ಲಿ. ಆದರೆ ಮನಕ್ಕೆ ಅಲ್ಲಿ ನಿಮ್ಮದಿ ಸಿಗುವದಿಲ್ಲ; ಅಂತೆಯೇ ಪ್ರತಿ ೨-೩ ತಿಂಗಳಿಗೊಮ್ಮೆ ಈ ಹೋಟಲಿಗೇ ಬಂದು ಇದೇ ಕೋಣೆಯಲ್ಲಿ ನಾನು ತಂಗುತ್ತೇನೆ— ಈ ೯ನೆಯ ನಂಬರಿನಲ್ಲಿಯೇ. ಆಗ ಮನ ನನಗರಿವಿಲ್ಲದಂತೆಯೇ ಶಾಂತಿಯ ನೆಲೆಯನ್ನು ಕಂಡುಕೊಳ್ಳುತ್ತದೆ. ಎರಡು ದಿನ ಕಳೆದು ಬಳಿಕ ಊರಿಗೆ ಮರಳಿ ಹೋಗುತ್ತೇನೆ. ಪ್ರತಿಸಲ ಬರುವಾಗಲೂ ತಂತಿಯ ಮೂಲಕ ಹೋಟಲಿಗೆ ಸೂಚನೆ ಕೊಡುವುದು ವಾಡಿಕೆ. ಇವರು ಕೂಡಲೇ ನನಗಾಗಿ ಈ ಕೋಣೆಯನ್ನು ಖಾಲಿ ಮಾಡಿಸಿ ಇಡುತ್ತಿದ್ದರು. ಆದರೆ ಏನು ಕಾರಣವೋ, ಈ ಸಲ ತಂತಿ ಇವರಿಗೆ ತಲುಪಲಿಲ್ಲ. ಅಂತೆಯೇ ನಾನು ಬಂದು ವಿಚಾರಿಸಿದಾಗ ಕೋಣೆ ತೆರವಿಲ್ಲವೆಂದು ತಿಳಿದು ಬಂದಿತು. ಆಗ ನನಗಾದ ನಿರಾಶೆಯನ್ನು ಏನೆಂದು ಹೇಳಲಿ ? ರಜಿಸ್ಟರಿನಲ್ಲಿ ನಿಮ್ಮ ಹೆಸರು ಓದಿದಾಗ, ಎಲ್ಲಿಯೋ ಪರಿಚಿತ ಹೆಸರಿನ ಹಾಗೆ ಅನಿಸಿತು. ಎಲ್ಲಿ ?— ಎಂದು ಯೋಚಿಸುತ್ತಿರುವಾಗಲೇ ನಿಮ್ಮ 'ಆರು' ಕಾದಂಬರಿ ಓದಿದುದರ ನೆನಪಾಯಿತು. ಅಂತೆಯೇ

'ಅಶು'ವಿನ ಹೃದಯದ ನೋವನ್ನು ಅರಿತು ಅನುಭವಿಸಿದ ಹೃದಯ ನನ್ನ ವೇದನೆಯನ್ನು ಅರಿಯಲಾರದೇ— ಎಂಬ ವಿಶ್ವಾಸ ತುಂಬಿತು."

"ಸ್ವಾರ್ಥವೇನು ಬಂತು. ಇದು ಸಾಮಾನ್ಯ ಸಂಗತಿ. ನೀವು ಬೇಕು ಎಂದರೆ ನಾನು ಖಾಲಿ ಮಾಡಿಕೊಡುತ್ತೇನೆ. ಕೋಣೆ ಬದಲಿಸಿಕೊಳ್ಳಲು ನನ್ನ ಆತಂಕವೇನೂ ಇಲ್ಲ. ಕೂಡಲೇ ನಾನು ಮೆನೇಜರರನ್ನು ಕೇಳುತ್ತೇನೆ. ಬೇರೆ ಅದೆಷ್ಟೋ ಕೋಣೆಗಳು ತೆರವಾಗಿರಬೇಕು." ಎಂದು ಗಂಟೆಬಾರಿಸಿದೆ. ಆಳು ಹೋಗಿ ಮೆನೇಜರನನ್ನು ಕರೆತಂದ.

"ಇವರು ಈ ಕೋಣೆಯಲ್ಲಿಯೇ ಇರಬಯಸುತ್ತಾರೆ. ಬೇರೆ ಕೋಣೆಗೆ ಸಾಮಾನು ಸ್ಥಳಾಂತರಿಸಲು ನನ್ನ ಆಕ್ಷೇಪಣೆ ಏನೂ ಇಲ್ಲ!"

ಸರಿ, ಅವರು ಯಾವಾಗಲೂ ಬಂದು ಈ ಕೋಣೆಯಲ್ಲಿಯೇ ಇರುವುದು— ಪದ್ಧತಿ. ಈ ಸಲ ಮಾತ್ರ ಅವರ ತಂತಿ ನಮಗೆ ಸಿಗಲಿಲ್ಲ. ಅದರೆ ನಿಮಗೂ ನಾವು ಹಾಗೆಂದು ಹೇಳಲಾರದಾಗಿದ್ದೆವು. ಅಂತೆಯೇ ಸ್ವತಃ ಬಿನ್ನವಿಸಿಕೊಳ್ಳುವುದಾಗಿ ಅವರು ಹೇಳಿದರು."

"ಕೋಣೆ ಯಾವುದಾದರೂ ಪರವಾ ಇಲ್ಲ— ಇದೇ ರೀತಿ ಶುಚಿಯಾಗಿ, ಇದೇ ರೀತಿ ಸಮುದ್ರಾಭಿಮುಖವಾಗಿ ಮಾತ್ರ ಇರಲಿ." ಎಂದೆ ನಾನು. ಒಂದಿಷ್ಟು ನಿಂತು ಕೂಡಲೇ— "ಕಡಲ ಕಡೆಗೆ ಇರದಿದ್ದರೂ ಆಸ್ಟೇ ಹೋಯಿತು; ಇದನ್ನು ಮಾತ್ರ ಅವರಿಗೆ ಖಾಲಿ ಮಾಡಿಸಿ ಕೊಟ್ಟು ಬಿಡಿ!"

"ಐದನೆಯ ಮಾಳಿಗೆಯಲ್ಲಿ ಇಂಥದೇ ಇನ್ನೊಂದು ಕೋಣೆ ಇದೆ. ೫೫ನೆಯ ನಂಬರಿನದು. ನನ್ನ ಅಭಿಪ್ರಾಯದಲ್ಲಿ ಇದಕ್ಕಿಂತಲೂ ಅಂದವಾದುದು. ಇದೇ ರೀತಿ ಕಡಲು-ಕರೆಯ ನೋಟ!...."

"ಮಹಾಶಯರೇ, ನೀವು ಈ ಹೋಟಲಿನ ಮೆನೇಜರರೆಂದು ನಾನು ಬಲ್ಲೆ. ದಯವಿಟ್ಟು ಬೇಗನೇ ಈ ಕೋಣೆಯನ್ನು ತೆರವು ಮಾಡುವ ವ್ಯವಸ್ಥೆ ಮಾಡಿ."

—ಅವನ ಮಾತನ್ನು ನಮುನೆಯೇ ತಡೆದು ನಾನು ಹೇಳಿದೆ.

ಅತನೂ ನಗುತ್ತ— "ಸರಿ, ಆಳನ್ನು ಕಳಿಸುತ್ತೇನೆ. ನಿಮ್ಮ ಸರಕುಗಳನ್ನವನು ಮೇಲೆ ಸಾಗಿಸುತ್ತಾನೆ—" ಎನ್ನುತ್ತ ಹೊರಗೆ ಹೋದ.

"ನನ್ನನ್ನು ಕ್ಷಮಿಸಿ, ಎಷ್ಟೊಂದು ತೊಂದರೆ ಕೊಡುತ್ತಿದ್ದೇನೆ ನಿಮಗೆ...." ಆಪಳ ಮುಖ, ಭಾವನೆಗಳ ಉದ್ರೇಕದಿಂದ ಇನ್ನಷ್ಟು ಪ್ರಭೆ ತುಂಬಿ ಹೊಳೆಯಲಾರಂಭಿಸಿತು.

"ಐದನೆಯ ಮಾಳಿಗೆ!— ಅಂತೂ ನಾನು ಆಕಾಶಕ್ಕೆ ಇಲ್ಲಿಗಿಂತ ಸಮೀಪವಾಗುತ್ತೇನೆ. ಕಡಲು ಇದೇ ರೀತಿ ನನ್ನ ಕಿಟಕಿಯ ಬಳಿಯೂ ಭೋರ್ಗರೆಯುತ್ತಿರುವುದು." ಎಂದು ನಗುತ್ತ, ಹರಡಿಕೊಂಡಿದ್ದ ಬಟ್ಟೆ-ಬರೆಗಳನ್ನೆಲ್ಲ ಸೂಟ್‌ಕೇಸಿನಲ್ಲಿ ತುಂಬಲಾರಂಭಿಸಿದೆ.

"ಅಶುವಿನ ಕಥೆಯನ್ನು ನೀವು ಅದೆಂತು ಬರೆದಿರಿ?"

"ಪೂರ್ಣ ಓದಿದಿರಾ ಅವನ್ನು?"

"ಹಾಂ. ಓದಿದುದೇ ತಲ್ಲಣಿಸಿ, ಓದಿ ತುಂಬಾ ಹತ್ತಿದ್ದೆ ಕೂಡ."

"ಅಶುವಿನಂತಹ ಪಾತ್ರಗಳು ಸ್ತ್ರೀಯರಲ್ಲಿ ಇರುವುದೇ ಇಲ್ಲವೆಂದು ಜನ ಹೇಳುತ್ತಾರೆ. ಇಷ್ಟು ಪೃಥಗನುಭವಗಳೂ, ಈ ತೆರ ಹೃದಯಾರ್ಪಣ ಮಾಡುವವರೂ ದರ್ಲಭವೇ ಎಂದು ಅವರ ವಾದ."

"ಸುಳ್ಳು, ಪೂರಾ ಸುಳ್ಳು. ಯಾರು, ಯಾರಿಗೂ ಎಂದೂ ಆ ರೀತಿ ತಮ್ಮ ಹೃದಯವನ್ನು ಅರ್ಪಿಸಿಲ್ಲವೋ, ಅಂಥ ಹೃದಯ. ಹೀನರಿಗೆಲ್ಲಿ ಇಂಥ ವ್ಯಕ್ತಿಗಳು ಸಿಗಬೇಕು? ನನಗಂತೂ ನನ್ನೆಪಿಯಲ್ಲಿಯೂ ಒಬ್ಬ ಕುಳಿತಿರುವ ಅನುಭವವಾಗಿತ್ತು."

"ನಿಮ್ಮೆದೆಯೂ ಕಡಿಮೆ ಶ್ರೀಮಂತವಾಗಿರುವಂತೆ ತೋರುವದಿಲ್ಲ. ನನಗಂತೂ ಮೊದಲ ಅವಲೋಕನದಲ್ಲಿಯೇ ನಿಮ್ಮ ಮುಖ ತುಂಬ 'ಸುಂದರ'ವಾಗಿ ಕಂಡಿತ್ತು."

"ಅವಲೋಕಿಸುವವರೇ ಬೆಲೆಯನ್ನು ಹೆಚ್ಚಿಸುತ್ತಾರೆ. ಇಲ್ಲದಿದ್ದರೆ ನನಗಿಷ್ಟು ಹಿರಿಮೆ ಸಿಗುತ್ತಿತ್ತೆ? ನನ್ನಂತಹ ಅದೆಷ್ಟೋ ಮುಖಗಳು ಹುಡಿಗೂಡಿ ಹೋಗುತ್ತವೆ ಜಗತ್ತಿನಲ್ಲಿ—ಯಾರ ಕಣ್ಣಿಲ್ಲಿಯೂ ಬೆಲೆ ಪಡೆಯದೆ!"

"ಇಲ್ಲ, ನಿಮ್ಮ ಮೊಗವೇ ಅಷ್ಟು ಶ್ರೀಮಂತವಾಗಿದೆ—ಬದುಕಿನ ಸಿರಿವಂತಿಕೆಯಿಂದ—ಜೀವನದ ಹಿರಿಮೆಯಿಂದ ಅಲೌಕಿಕವಾಗಿದೆ."

"ಬದುಕಿನ ಸಿರಿವಂತಿಕೆ!"

—ಅವಳ ಮೊಗದಲ್ಲಿ ಇನ್ನಷ್ಟು ಕಳೆ ತುಳುಕಿತು. ಒಂದು ಕ್ಷಣ ತಡೆದು ಹೇಳಿದಳು— "ಬದುಕಿನಲ್ಲಿ ನಾನು ಸಂಪಾದಿಸಿದುದೂ ಬಹಳ, ಕಳೆದುಕೊಂಡುದೂ ಬಹಳ. ಆದರೆ ಕೊನೆಗೆ ಉಳಿದಿರುವ 'ಶೇಷ'—ಈ 'ಶೇಷ'ವನ್ನು ಕುರಿತು ಯಾರಿದುರೂ ನಾನು ಪ್ರಸ್ತಾಪಿಸಿಲ್ಲ—ಈ ವರೆಗೆ. ಆದರೆ ತಮ್ಮೆದುರು ಇಂದು ಈ ಮಾತನ್ನು ಹೇಳದಿರುವುದು ಕಠಿಣವೆನಿಸುತ್ತಿದೆ."

"ಇನ್ನೊಬ್ಬ ಅಶು ನನಗೆ ದೊರೆಯುತ್ತಾಳೆ ಹಾಗಾದರೆ!"

"ಹಾಂ. ನಿಜವಾಗಿಯೂ! ಈ ಮಾತನ್ನು ಕೇವಲ 'ಅಶು' ಬರೆಯುವಂತಹ ಜೀವದೆದುರು ಮಾತ್ರವೇ ಹೇಳಬಹುದಷ್ಟೇ!"

"ನೀವು ನಿಮ್ಮ ಕೋಣೆಯನ್ನು ಅಣಿ ಮಾಡಿಕೊಳ್ಳಿ. ನಾನೂ ನನ್ನ ಹೊಸ ಕೋಣೆಯ ವ್ಯವಸ್ಥೆ ನೋಡಿ ಬರುತ್ತೇನೆ."

"ಬಳಿಕ ನೀವು ಇಲ್ಲಿಗೇ ಬಂದು ಬಿಡಿ. ನಾನೇ ಬರುತ್ತಿದ್ದೆ— ಆದರೆ ಆ ಮಾತು ಈ ಕೋಣೆಯಲ್ಲಿಯೇ ಹೇಳಲು ಯೋಗ್ಯವಾದುದು."

ಅರ್ಧಗಂಟೆಯ ನಂತರ ನಾನು ಮರಳಿದಾಗ, ಕೋಣೆಯ ಸಾಮಾನುಗಳನ್ನೆಲ್ಲ ಅಣಿಗೊಳಿಸಿಕೊಂಡುದಲ್ಲದೆ ಅಕೆ ಕಾಫಿಯನ್ನೂ ತಯಾರಿಸಿಟ್ಟಿದ್ದಳು. ಬಾಗಿಲನ್ನು ಮುಚ್ಚಿ ಸಮುದ್ರಾಭಿಮುಖವಾಗಿ ಹರಡಿಕೊಂಡಿದ್ದ ತೆರೆದ ಕಟ್ಟೆಯ ಮೇಲೆ ಖುರ್ಚಿಗಳನ್ನು ಹಾಕಿಕೊಂಡೆವು. ಗುಲಾಬಿ ಹೂಗಳ ದೊಪ್ಪ ಗುಚ್ಛವೊಂದು ಮೇಜಿನ ಮೇಲೆ ಇಡಲ್ಪಟ್ಟಿತ್ತು.

"ನನ್ನ ಹೆಸರು ಚೇತನಾ."

"ಚೇತನಾ!"

"ನಾಗಪುರದಲ್ಲಿ ಹುಟ್ಟಿದೆ. ಅಪ್ಪನುದಾಬಾದಿನ ವ್ಯಕ್ತಿಯೊಬ್ಬರೊಡನೆ ನನ್ನ ಮದುವೆಯಾಯಿತು. ಮಿಲ್ ಮಾಲೀಕರ ಮನೆಯಲ್ಲಿ ಬಾಲ್ಯವನ್ನು ಕಳೆದೆ; ಯೌವನವೂ ಮಿಲ್ ಓಡೆಯ-

ರಲ್ಲಿಯೇ ಕಳೆಯಿತು.

" ಬೆಳ್ಳಿಯ ಚಮಚೆ ಕೈಯಲ್ಲಿ ಹಿಡಿದು ಹುಟ್ಟುವುದೆಂದರೆ ಇದೇ ಎಂದು ತೋರುತ್ತದೆ. "

ಚೇತನಾ ಜೋರಾಗಿ ನಕ್ಕು ಮುಂದುವರಿಸಿದಳು:—

" ಚಮಚೆ ಬೆಳ್ಳಿಯದೇ ಇರಲಿ. ಅಥವಾ ಬಂಗಾರದ್ದೇ ಆಗಿರಲಿ. ಅದರಲ್ಲಿ ಜೇನ ಹನಿಯೊಂದು ಬೀಳುವವರೆಗೂ ಹೃದಯದ ಹಸಿವು ಹಿಂಗಲಾರದು. ನಾನು ಎಳೆಯ ಬಾಲಿಕೆಯಾಗಿದ್ದೆ. ಗಿರಣಿಯೊಡೆಯನಾದ ತಂದೆಯ ಭವ್ಯಭವನದ ಬಳಿ ಇಕ್ಕಟ್ಟಾದ ಮನೆಯೊಂದಿತ್ತು. ಕಾಂಗ್ರೆಸ್ಸಿನ ಸತ್ಯಾಗ್ರಹದ ಕಾಲಕ್ಕೆ ಆ ಮನೆಯ ತಂದೆ ತನ್ನೆಲ್ಲ ಸಮಯವನ್ನು ಜೇಲಿನಲ್ಲಿಯೇ ಕಳೆದ. ಮನೆಯ ಮಗ ಅಂತಹ ದಾರಿದ್ರ್ಯದಲ್ಲಿಯೇ ಸಾಮಾನ್ಯ ಸ್ಕೂಲೊಂದರಲ್ಲಿ ಓದಿ ಸಾಧಾರಣನಾದುದೊಂದು ಕೆಲಸಕ್ಕೆ ಸೇರಿಕೊಂಡ. ಅವನ ಹೆಸರು ಯುಗರಾಜ. ಅವನನ್ನು ನೋಡಿದಾಗಲೆಲ್ಲ ನನ್ನೆದೆಯಲ್ಲಿ ಜೇನು ತುಂಬಿದಂತಹ ಅನುಭವವಾಗುತ್ತಿತ್ತು ನನಗೆ. ಆದರೆ ನಮ್ಮ ಗಿರಣಿಯೊಡೆಯರ ಈ ಮಹಿಲಿನಲ್ಲಿ ಆ ಮುರುಕುಮನೆಯ ಪ್ರಸ್ತಾಪ ಬರುವುದು ಅಶಕ್ಯವಾಗಿತ್ತು....ಮದುವೆಯಾಯಿತು. ಪತಿಗೃಹಕ್ಕೆ ಬಂದೆ. ಅಲ್ಲಿ ಬೆಳ್ಳಿಯ ಚಮಚೆಗಳೇನೋ ಅಸಂಖ್ಯವಾಗಿದ್ದವು. ಆದರೆ ಬದುಕೇನ ಬಟ್ಟಲು ಬರಿದಾಗಿತ್ತು. ಉತ್ತಮೋತ್ತಮವಾದ ಪುಸ್ತಕಗಳನ್ನೆಲ್ಲ ಓದಿದೆ. ನೂಷ್ಟ ದೊಡ್ಡ ಜನರೊಡನೆ ಬೆರೆತೆ—ಮನದ ಕೊರತೆಯನ್ನು ತುಂಬಿಕೊಳ್ಳಲು ಕೈಲಾದಷ್ಟು ಪ್ರಯತ್ನಿಸಿದೆ. ಸಾಧ್ಯವಾದಷ್ಟು ಪರಿಸ್ಥಿತಿಯ ಅವಶ್ಯಕತೆಗಳನ್ನು ಪೂರೈಸಲು ಶ್ರಮಿಸುತ್ತಲೇ ಇದ್ದೆ.

" ಒಂದು ಸಲ ನನ್ನ ಗಂಡನ ಗಿರಣಿಯಲ್ಲಿ ಕೆಲಸಗಾರರಿಂದ ಸಂಪು ಹೂಡಲ್ಪಟ್ಟಿತು. ನಾನು ನನ್ನೆಲ್ಲ ಸಹಾನುಭೂತಿಯನ್ನು ಕೆಲಸಗಾರರ ಮೇಲೆ ಸುರಿದೆ. ಆದರೆ ಅದೆಲ್ಲವೂ ಬರಿನೆಲದ ಮೇಲೆ ಜರಿದು ಹೋಗುತ್ತಿತ್ತು. ಅವರ ಹರಿದ ಜೋಳಿಗೆಗಳಲ್ಲಿ ಅದನ್ನು ಹಿಡಿದುಕೊಳ್ಳುವ ಸಾಮರ್ಥ್ಯವೂ ಇರಲಿಲ್ಲಿ. ಹಸಿವು, ಬೇಸೆಗಳು ಹೆಚ್ಚುತ್ತಲೇ ನಡೆದಿದ್ದುವು. ಅವರ ಪ್ರತಿಜ್ಞೆ, ಇನ್ನೇನು ಭಂಗನಾಗುವುದರಲ್ಲಿತ್ತು. ಅವರ ರಕ್ಷಣೆಗಾಗಿ ನಾನು ಕೂಡಲೇ ಗಾಂಧೀಜಿಯ ಸಬಲ ಕೈಗಳಿಗೆ ಸೊರೆಹೊಕ್ಕೆ. ಮಧ್ಯಸ್ಥಿಗಾಗಿ ಪ್ರಯತ್ನಿಸಲು ಅವರನ್ನು ಆಮಂತ್ರಿಸಿ ಕೆಲಸಗಾರರ ಕೆಲ ಬೇಡಿಕೆಗಳನ್ನು ಮನ್ನಿಸುವಂತಾಯಿತು. ಸಂಪು ಹಿಂದೆಗೆಯಿತು. ಇದೇ ರೀತಿ ಅನೇಕ ಪ್ರಸಂಗಗಳು ಬಂದುಹೋದವು. ನನಗೆ ಸಾಧ್ಯವಾದಷ್ಟು ಸಂತೋಷವನ್ನು ಇತರರಿಗೆ ಹಂಚುತ್ತಲೇ ಇದ್ದೆ. ಈ ದೆತ್ತಿಯಿಂದುಂಟಾದ ಆನಂದವನ್ನು ನನ್ನ ತೆರವಾದ ಎದೆಯಲ್ಲಿ ತುಂಬಿಕೊಳ್ಳುತ್ತಿದ್ದೆ. ಆದರೆ....ಆದಂತಹ ಗುಂಡಿಯಿತ್ತಿದ್ದ ನನ್ನೆದೆಯಲ್ಲಿ, ಎಂಥ ಸಂಪತ್ತಿಯಿಂದಲೂ ಅದು ತುಂಬಲೇ ಇಲ್ಲ....

ಕಾಂಗ್ರೆಸ್ಸಿನ ಉತ್ಸವವೊಂದರಲ್ಲಿ ಯುಗರಾಜನನ್ನ ಒಮ್ಮೆ ನೋಡಿದೆ. ಅವನ ಅಸ್ತಿತ್ವದಲ್ಲಿ ಅದಾವ ನಿಶೇಷವಿತ್ತೋ! ನಿವರಿಸಲಾಗದ ಪರಿಮಳವೊಂದು ಅತ್ತಣಿಂದ ಹೊರಟು ನನ್ನೆಡೆಗೆ ಹರಿದು ಬಂದು ನನ್ನ ಎದೆಯಾಕಾರದ ಕೊನ್ಯದಲ್ಲಿ ತುಂಬಲಾರಂಭಿಸಿತು. ಕೆಲ ನಿಮಿಷ ಅವನೊಡನೆ ಮಾತನಾಡಿದೆ. ನನಗೆ ಕೀರ ಹತ್ತಿರವಾಗಿ ಅವನು ನಿಂತಿದ್ದ, ಅವನುಸಿರನ್ನು ಸಹಿಸುವುದು ನನ್ನಿಂದಾಗಲಿಲ್ಲ. ಉಸಿರಿನ ಆ ಪರಿಮಳ ಮಹಾನದಿಯ ಪ್ರವಾಹವಾಗಿ ಹರಿಯುತ್ತಿರುವಂತೆಯೂ, ಅದರ ಒತ್ತಡದಲ್ಲಿ ನನ್ನ ಕಾಲುಗಳು ಸಿಕ್ಕು, ಇನ್ನೇನು ಹರಿದು ಹೋಗುತ್ತಿರುವಂತೇ ಅನುಭವವಾಗಲಾರಂಭಿಸಿತು ನನಗೆ. ತುಂಬ ಕಷ್ಟದಿಂದ ನನ್ನನ್ನು ನಾನೇ ತಡೆದುಕೊಂಡು ಮನೆಗೆ ಬಂದೆ.

"ಮರುದಿನ, ಅದೆಷ್ಟೋ ಸಲ ಟೆಲಿಫೋನಿನ ಡಯಲ್ ತಿರುವಿದೆ; ಆದೆಷ್ಟೋ ಸಲ ಎತ್ತಿದ ಫೋನನ್ನು ಕೆಳಗೆ ಇಟ್ಟೆ; ಆದರೆ ಕೊನೆಗೊಮ್ಮೆ ಸೂತ್ರ ಪ್ರಕಂಪಿತವಾಗಿದ್ದರೂ ಆ ನನ್ನ ಕೈಯನ್ನು ತಡೆಯುವುದು ನನಗೆ ಸಾಧ್ಯವಾಗಲೇ ಇಲ್ಲ. ಕಾಂಗ್ರೆಸ್ ಕಚೇರಿಗೆ ಫೋನ್ ಮಾಡಿ, ನಾನು ಯುಗರಾಜನನ್ನು ಕರೆಸಿಕೊಂಡೆ. ಫೋನಿನ ಕರೆಗೆ ಉತ್ತರವಾಗಿ ಅವನು ಮಾತನಾಡಿದಾಗ—"

ಚೇತನಾ ಒಮ್ಮೆಲೇ ಮೌನವಾದಳು. ಅನಂತರವೂ ಬಹು ಸಮಯದ ವರೆಗೆ ಅವಳು ಮಾತನಾಡಲಿಲ್ಲ. ಅವಳ ಕೈಯನ್ನು ನನ್ನದರಲ್ಲಿ ಇಟ್ಟುಕೊಂಡು ಸುಮ್ಮನೆ ಕುಳಿತೆ. ಅವಳ ತುಂಬು ಶಾಂತಿಯನ್ನು ಭಂಗಿಸುವ ಇಚ್ಛೆ ನನಗೂ ಆಗಲಿಲ್ಲ. ತುಸು ಸಮಯದ ನಂತರ ತನ್ನ ಮೌನವನ್ನು ತಾನೇ ಮುರಿಯುತ್ತ ಚೇತನಾ ಹೇಳಲಾರಂಭಿಸಿದಳು:— ಎಷ್ಟು ವಿಚಿತ್ರ ಸಂಗತಿ! ಅವನು ಮಾತಿಗೆ ತೊಡಗಿದಾಗ ಧ್ವನಿಯ ಜೊತೆಗೆ ಅವನ ಉಸಿರೂ ಹರಿದು ಬಂದು ನನ್ನನ್ನು ತಟ್ಟುತ್ತಿರುವ ಅನುಭವವಾಯಿತು. ನನಗೆ ನಾನೇ ಬೆಚ್ಚಿಬಿದ್ದೆ! ಫೋನಿನಲ್ಲಿ ಮಾತನಾಡುವವನ ಉಸಿರು ಬರುವದು ಸಾಧ್ಯವೇ!— ತನಗೆ ದಿಲ್ಲಿಗೆ ಮರಳಿ ಹೋಗಬೇಕಾಗಿದೆ ಎಂದು ಯುಗರಾಜ ಹೇಳಿದ. ಒಂದು ದಿನಕ್ಕಾಗಿ ಮುಂಬೈಗೆ ಹೋಗಬೇಕೇ, ಬಾರದೇ—ಎಂಬುದೇ ಅವನ ಯೋಜನೆ. ಅಗತ್ಯವಾದ ಕೆಲಸವೊಂದು ಉಳಿದುಕೊಂಡಿದೆ ಅಲ್ಲಿ—ಎಂದು ಅವನು ಹೇಳಿದ. ಮುಂಬೈಯಲ್ಲಿ ನಮ್ಮ ಭವನ ನಿರ್ಮಾಣದ ಕೆಲಸ ಭರದಿಂದ ಸಾಗಿತ್ತು. ಕೆಲಸದ ಪ್ರಗತಿಯನ್ನು ನಿರೀಕ್ಷಿಸಲು ಮಾರನೆಯ ದಿನ ನಾನೂ ಮುಂಬೈಗೆ ಹೊರಡುವವಳಿದ್ದೆ. ಅಂತೆಯೇ ಅವನಿಗೆ ನಾನು ಹೇಳಿದೆ— " ಮುಂಬೈಯಲ್ಲಿನ ನಿಮ್ಮ ಕೆಲಸವನ್ನು ಸ್ಥೂರೈಸಲು ನಾನು ಸಮರ್ಥಳಾದರೆ ನನಗೆ ತುಂಬ ಸಂತೋಷವಾದೀತು. "

ಆದರೆ ಮರುದಿನ ನನ್ನ ಜತೆಯಲ್ಲಿ ಅವನೂ ಬಂದನು—ಇದಕ್ಕೂ ಪೊಲಲು ಗೆಳತಿಯೊಬ್ಬಳ ಮನೆಯಲ್ಲಿಯೇ ನಾನು ಇಳಿದುಕೊಳ್ಳುತ್ತಿದ್ದೆ; ಅವನೆ ಆ ದಿನ ಮಾತ್ರ ಅವಳ ಮನೆಗೆ ಹೋಗುವ ಮನಸ್ಸಾಗಲಿಲ್ಲ. ಇಲ್ಲಿಯೇ ಇವೇ ಕೋಣೆಯಲ್ಲಿಯೇ ಅಂದು ನಾನು ನಿಂತೆ...."

ಚೇತನಾ ಕಥೆಯ ಗಂಟನ್ನು ಬಿಚ್ಚಿಬಿಚ್ಚುತ್ತಿದ್ದಳು. ತುಂಬ ಗೌರವಾನ್ವಿತ ಶಕ್ತಿಯಾಗಿ ನಿಡಿದಾದ ಉಸಿರೊಂದನ್ನು ತೆಗೆದುಕೊಂಡು ಮತ್ತೆ ಮುಂದುವರಿಸಿದಳು:— " ಇವೇ ಕೋಣೆ— ಊಟವ ಕೈಯೆ ಸ್ಥೂರೈಸಿದ ಬಳಿಕ ನಾನು 'ನಿಮಗೆ ನಿದ್ರೆಯ ತೊಂದರೆಯಿಲ್ಲವಾದರೆ ನನ್ನ ಕೋಣೆಯಲ್ಲಿಯೇ ಕುಳಿತು ನನಗಾಗಿ ಕೆಲ ಕವಿತೆಗಳನು

ಓದುತ್ತೀರಾ ?''— ಎಂದು ಕೇಳಿದೆ. ಇದೇ ರೀತಿ ಇದೇ ಕಟ್ಟೆಯ ಮೇಲೆ ಅವನೂ ಖುರ್ಚಿಗಳನ್ನಿಟ್ಟು ಕುಳಿತುಕೊಂಡು; ಮಧ್ಯ ರಾತ್ರಿಯ ಎರಡು ಗಂಟೆಯ ವರೆಗೂ ಆತ ನಿಮ್ಮ ಹಾಗೆಯೇ ನನ್ನ ಬಳಿ ಕುಳಿತು ಕೊಂಡಿದ್ದ ಮೇಜಿನ ಮೇಲೆ ಹೀಗೆಯೇ ಗುಲಾಬೀ ಹೂವಿನ ಪಾತ್ರೆ. ಒಂದರ ನಂತರ ಇನ್ನೊಂದು, ಶವಿತಾಪಠಣವಲ್ಲಿ ತಲ್ಲೀನನಾಗಿದ್ದ. ಅವನ ತೀರಬಂದಿದ್ದ ಸಿಗರೇಟಿನ ತುದಿಯಿಂದಲೇ ಇನ್ನೊಂದನ್ನು ಹೊತ್ತಿಸಿಕೊಂಡು ಮುಂದುವರೆಯುತ್ತಿದ್ದ—

" ಅಮೃತಾ !"

" ಹಾಂ, ಚೇತನಾ ?"—

" ನಿನಗೆ ಆಕ್ಷೇಪಣೆ ಇಲ್ಲವಾದರೆ...."

" ಏನು ?"

" ನಾನೂ ಒಂದು ಸಿಗರೇಟು ಹೊತ್ತಿಸಿಕೊಳ್ಳಲೇ ?"

" ಸಿಗರೆಟ್ !! "

" ಹಾಂ ! ಸಿಗರೇಟ್. ಆದರೆ ಆಶ್ಚರ್ಯಪಡಬೇಡಿ. ಸೇದುವ ದಿಲ್ಲ ನಾನು. ಈ ಕೋಣೆಯಲ್ಲಿದ್ದಾಗಲೆಲ್ಲ ಉರಿಯುವ ಸಿಗರೇಟನ್ನು ಕೈಯಲ್ಲಿ ಹಿಡಿದರೆ ತುಂಬ ಸಮಾಧಾನವಾಗುತ್ತದೆ ನನಗೆ; ಹಾಗೆಯೇ ಈ ಗುಲಾಬಿ ಹೂ ಕೂಡ. ಸಾಧ್ಯವಾದರೆ ಇದೇ ತೆರನಾಗಿ ಅವನ್ನು ಜೋಡಿಸಿಡುತ್ತೇನೆ. ಇದೇ ತೆರನಾಗಿ ಉರಿಯುವ ಸಿಗರೇಟನ್ನು ಕೈಯಲ್ಲಿ ಹಿಡಿದುಕೊಳ್ಳುತ್ತೇನೆ. ಆಗ ಅವನ ಅಸ್ತಿತ್ವ ಮತ್ತೊಮ್ಮೆ ಸಾಕಾರಗೊಂಡಂತಹ ಭಾವನೆ ನನಗುಂಟಾಗುತ್ತದೆ. ಅಂಥ ಗಳಿಗೆಯಲ್ಲಿ, ನನ್ನ ಬಾಳ ಬಟ್ಟೆಲಲ್ಲಿ ಬಹುದಿನಗಳಿಂದ ಪರಿತಪಿಸುತ್ತಿದ್ದ ಜೀವ ಹಸಿಯೊಂದು ತಟ್ಟನೆ ತೊಟಕಿ ಬಿದ್ದಂತೆ ಭಾಸವಾಗುತ್ತದೆ."

" ನಾನು ಆಕ್ಷೇಪಿಸುವುದು ಸಾಧ್ಯವೇ ಚೇತನಾ "

ಕೂಡಲೇ ಚೇತನಾ ಸಿಗರೇಟೊಂದನ್ನು ಹೊತ್ತಿಸಿದಳು. ಆದರೆ ಅಧರಗಳೆಡೆ ಒಯ್ಯಲಿಲ್ಲ. ಉರಿವ ಅದನ್ನು ಬೆರಳಲ್ಲಿ ಗಟ್ಟಿಯಾಗಿ ಹಿಡಿದು ಮತ್ತೆ ಮುಂದುವರಿಸಿದಳು—

" ಅವನ ಉಸಿರಿನೊಡನೆ ಅವ್ಯಕ್ತ ಪರಿಮಳವೊಂದು ಹೊರ ಬಂದು ಬಂದು ನನ್ನೆದೆಯ ಸುವಿಶಾಲ ಶೂನ್ಯವನ್ನು ತುಂಬಿದಾಗ, ಪಡೆಯಬೇಕಾಗಿದ್ದುದನ್ನು ಬಹುದಿನಗಳ ಪ್ರತೀಕ್ಷೆಯ ನಂತರ ಪಡೆದ ಅನುಭವ ನನಗಾಗುತ್ತಲೇ ಇತ್ತು. ಬದುಕಿನ ಪ್ರಶ್ನೆಯನ್ನು ಎಲ್ಲರೂ ಬಿಡಿಸುತ್ತಾರೆ. ನಾನೂ ಬಿಡಿಸಿಕೊಂಡಿದ್ದೇನೆ. ಈ ಪ್ರಶ್ನೆಗಳಲ್ಲಿ, ವರ್ಷಗಳ ಕಾಲಾವಧಿಯಲ್ಲಿ ಬಹಳಷ್ಟು ಸೇರಿಕೊಂಡು ಬಹಳಷ್ಟು ಹರಿದೂ ಹೋಯಿತು. ಆದರೆ ಇಂದು, ಆ ಸಂಗತಿಗೆ ೭೦ ವರುಷಗಳಾದ ಬಳಿಕ ಇಂದು— ಜೀವನದಲ್ಲಿ ನಾನು ನಡೆದು ಬಂದ ದಾರಿಯೆಡೆಗೆ ಕಣ್ಣು ಹಾಯಿಸಲು ಕುಳಿತಾಗ, ಈ ಪ್ರಶ್ನೆಯ ಶೇಷವಾಗುಳಿದುದು ಅವನ ಉಸಿರಿನ ಪರಿಮಳ ಮಾತ್ರ— ಎನಿಸುತ್ತದೆ ನನಗೆ."

" ಚೇತನಾ ! "

— ನನ್ನೆದೆಯಲ್ಲಿ ಚೇತನೆಗಾಗಿ ಭಾವನೆಗಳ ಜಲಧಿ ತುಳುಕಾಡಿತು ಆದರೂ ಒಂದು ಸಲ ಉದ್ವೇಗವೂರ್ಣವಾಗಿ 'ಚೇತನಾ' ಎಂದು ಹೆಸರನ್ನು ಸುರುವುದಕ್ಕೂ ಹೆಚ್ಚಾಗಿ ಬೇರೇನೂ ಹೇಳಲು ಆಗಲಿಲ್ಲ ನನ್ನಿಂದ. ನನ್ನ ಹೃದಯದ ಅರ್ಧಕ್ಕಿಷ್ಟು ಭಾಗ ಆ ಒಂದು ಪದದಲ್ಲಿ ಸೇರಿಕೊಂಡಿತ್ತೋ

ಕೈಯಲ್ಲಿ ಹೊತ್ತಿದ್ದ ಸಿಗರೇಟಿನಂತೆಯೇ ಹೊತ್ತಿ ಕೊಂಡು ಚೇತನಾ ಹೇಳಿದಳು— " ಕೆಲವು ಸಾಸಿಗಳಂತರದಲ್ಲಿ ಆ ದಿನದಿಂದ ನಿಯಮಿತವಾಗಿ ನಾನಿಲ್ಲಿ ಬರುತ್ತೇನೆ. ಹೆಚ್ಚುತ್ತಿರುವ ವಯಸ್ಸಿನಿಂದಾಗಲೀ ಇನ್ನಾವ ವಸ್ತು ನಿನಿಂದಲೇ ಆಗಲಿ, ನನ್ನ ಆಂತರಿಕ ಅನುಭೂತಿಯಲ್ಲಿ ಅಂತರವುಂಟಾಗಿಲ್ಲ. ಈ ಕೋಣೆಯಲ್ಲಿ ರಾತ್ರಿಯೆಲ್ಲವೂ ಅವನ ಉಸುರಿನ ಸುಗಂಧ ಹೊರಹೊಮ್ಮುತ್ತಲೇ ಇರುತ್ತದೆ."

—ಇಷ್ಟು ಸುಡಿದ ಚೇತನೆಗೆ ಮರುಕ್ಷಣವೇ ನನ್ನ ಅಸ್ತಿತ್ವವೂ ಮರೆತುಹೋಯಿತು. ಆ ಗುಲಾಬಿ ಹೂಗಳ ಪರಿಮಳ, ಸಿಗರೇಟಿನ ಆ ಹೊಗೆ ಎಲ್ಲ—ಎಲ್ಲವೂ ಎಲ್ಲಿಯೋ ದೂರ ಬಹುದೂರ ಹೊರಟು ಹೋದುವು. ಅವಳ ಸುಂದರ ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಆ ಅಪೂರ್ವಾನಂದ ಆ ಓಜಸ್ಸು ನಾನು ಪ್ರತ್ಯಕ್ಷವಾಗಿ ಕಂಡಿದ್ದ ಅವಳ ಆ ಕಾಲ್ಪನಿಕ ಪರಿಮಳದ ಜ್ವಾಲೆಗಳಿಂದಲೇ ಮೂಡಿಕೊಂಡಿತ್ತೆಂಬುದರಲ್ಲಿ ಸಂದೇಹವಿರಲಿಲ್ಲ.

ಖುರ್ಚಿಯಿಂದೆದ್ದು ನಾನೊಮ್ಮೆ ಹಗುರಾಗಿ 'ಚೇತನಾ' ಎಂದು ಕರೆದೆ. ಚೇತನಾ ನನ್ನೆಡೆ ನಿರುಕಿನಿದಳು—ಆದರೆ ಆ ದೃಷ್ಟಿಯಲ್ಲಿ ಪರಿಚಯದ ಅಭಾಸವಿರಲಿಲ್ಲ. ಅವಳ ಕಂಪಿತ ಅಧರಗಳಲ್ಲಿ "ಯುಗರಾಜ" ರೂಪುಗೊಳ್ಳುತ್ತಿದ್ದಂತೆ ನನಗೆ ತೋರಿತು.

ನಿಃಶಬ್ದವಾಗಿ ಬಾಗಿಲು ತೆರೆದು ನಾನು ಹೊರಗೆ ಬಂದೆ.

* * * *

ಇದು ಎಸ್ಕೀಲಿನ ಮಾತು.

ಆದರಿಂದು ನೇ ೭೦ನೆಯ ದಿನ—ನಾನು ದಿನಪತ್ರಿಕೆ ನೋಡುತ್ತಿದ್ದೇನೆ. ಅವರಲ್ಲಿ ಅಚ್ಚಾಗಿದೆ— "ಶ್ರೀಮತಿ ಚೇತನಾಕುಮಾರಿ ಅವರ ಕೊನೆಯ ಇಚ್ಛೆ—'ಗ್ರೀನ್ ಹೊಟೆಲ್'—ಇನೆಯ ಸಂಬಂಧಿಸ ಕೋಣೆ — ಮಧ್ಯರಾತ್ರಿಯ ೩ ಗಂಟೆ !"

ಚೇತನೆಯೂ ಮಂಜುಳ ಧ್ವನಿ ಮತ್ತೆ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸಲಾರಂಭಿಸಿತು. ಬದುಕಿನ ಪ್ರಶ್ನೆಯನ್ನು ಎಲ್ಲರೂ ಬಿಡಿಸುತ್ತಾರೆ—ನಾನೂ ಬಿಡಿಸಿಕೊಂಡಿದ್ದೇನೆ ಈ ಕ್ರಿಯೆಯಲ್ಲಿ ಬಹಳಷ್ಟು ಸೇರಿಕೊಳ್ಳುತ್ತದೆ. ವರುಷಗಳ ಕಾಲಾವಧಿಯಲ್ಲಿ ಬಹಳಷ್ಟು ಹರಿದೂ ಹೋಗುತ್ತದೆ. ನಾನು ಆ ಪ್ರಶ್ನೆಯನ್ನು ಬಿಡಿಸಲು ಕುಳಿತಾಗಲೂ ಆದುದಿಷ್ಟೇ ! ಸಂತಯಿಸಿದುದಿಷ್ಟಾದರೆ, ಹರಿದು ಹೋದುದೂ ಅಷ್ಟ ! ಆದರೆ ಇಪ್ಪತ್ತು ವರುಷಗಳ ನಂತರ ಈಗ ನಾನದನ್ನು ಬಿಡಿಸಲು ಕುಳಿತಾಗ—ಈ ಪ್ರಶ್ನೆಯ ಶೇಷವಾಗುಳಿದುದು ಅವನುಸುರಿನ ಪರಿಮಾತ್ರ ಎನಿಸುತ್ತದೆ ನನಗೆ.'

ಜೋರಾಗಿ ಬೀಸಿದ ಗಾಳಿಯಲೆಯೊಂದು ನೊದಲ ಪುಟವನ್ನು ಎರಡನೆಯದರ ಮೇಲೆ ಅಪ್ಪಳಿಸಿ ಮುಚ್ಚಿ ಬಿಟ್ಟಿತು— ಎದುರಿಗೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಜನಾಂಗದ ಭೇದಭಾವವನ್ನು ತಳಸಿ ಹಾಕಲು ಗೊತ್ತುವಳಿ ಮಂಡಿಸಿದ್ದ ಮಿಸ್ಟರ್ ಫೈನರ ಬ್ರಾಕವೇದು ಚಿತ್ರ; ಆದರೂ ಆ ಚಿತ್ರದ ಎದೆಯಾಂತರಾಳದಲ್ಲಿ ಚೇತನೆಯ ಮೃತ್ಯುವಿನ ಸುದ್ದಿಯನ್ನು ನನ್ನ ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಹನಿಗಳು ಮತ್ತೆ ಮತ್ತೆ ಓದುತ್ತಲೇ ಇದ್ದುವು....

ವರ್ಗಭೇದಭಾವ-ಹೃದಯಗಳ ಹಾವ್ಸ್ ಒಂದರಲ್ಲಿ ಇದನ್ನು ತೊಡೆದು ಹಾಕಲು ಯಾರಾದರೂ ಗೊತ್ತುವಳಿಯನ್ನು ಮಂಡಿಸಬಾರದೇ ? ಒಂದಲ್ಲ—ಸಾವಿರ ಚೇತನೆಯರು ತಮ್ಮ ಜೀವನದ ಈ ಪ್ರಶ್ನೆಯನ್ನು ಬಿಡಿಸಲು ಯತ್ನಿಸಿದ್ದಾರೆ. ಈ ಕ್ರಿಯೆಯಲ್ಲಿ ಒಂದಿಷ್ಟು ಸೇರಿಕೊಳ್ಳುತ್ತದೆ—ಒಂದಿಷ್ಟು ಸರಿದೂ ಹೋಗುತ್ತದೆ. ತಮ್ಮ ಎಲ್ಲ ಆಯುಷ್ಯವನ್ನೂ ಧಾರೆ ಎರೆದು ಶೇಷ ತೆಗೆದಾಗ ಉರಿವ ಬೆಂಕಿ ಮಾತ್ರ ಅವರ ಉಸಿರಿನಲ್ಲಿ ಶೇಷವಾಗಿ ಉಳಿದುಕೊಳ್ಳುತ್ತದೆ.... ಈ

◀ ಪ್ರತಿಫಲ ▶

(ಐದು ದೃಶ್ಯಗಳ ಒಂದು ಪೌರಾಣಿಕ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

೫ನೆಯ ದೃಶ್ಯ

(ಶುಕ್ರಾಚಾರ್ಯರ ಆಶ್ರಮ. ಶುಕ್ರಾಚಾರ್ಯರು ದುಗುಡದಿಂದ ಅತ್ತಿಂದಿತ್ತ ತಿರುಗಾಡುತ್ತಿದ್ದಾರೆ.)

ಶುಕ್ರ : ಆಹಾ, ಈ ವೇದನೆಯನ್ನು ಹೇಗೆ ಸಹಿಸಲಿ? ನನ್ನ ಹೃದಯವೇ ಕಲಕಿಹೋಗಿದೆ. ನನ್ನ ಕರುಳಿನ ಕಂದ, ನನ್ನ ಕಣ್ಮಣಿ ದೇವಯಾನಿಯನ್ನು ಪತಿಗೃಹಕ್ಕೆ ಈ ದಿನ ಕಳುಹಿಕೊಡಬೇಕಲ್ಲಾ— ಅವಳ ಮುಗ್ಧತೆ, ಆ ಸೊಬಗು ಆ ಪ್ರೀತಿ—ಆಹಾ, ಹೇಗೆ ಮರೆಯಲಿ? ಆನೆಗಳಿಗೆ ಅವಳನ್ನು ಕಾಣದಿದ್ದರೆ ಅರೆಮರುಳಿನಂತಾಡುತ್ತಿದ್ದ. ಈಗ ಹೇಗೆ ಸಹಿಸಲಿ? ಎಷ್ಟು ಸಮಾಧಾನ ಹೇಳಿಕೊಂಡರೂ ಎದೆಯಾಳದಿಂದ ದುಃಖ ಒತ್ತರಿಸಿ ಬರುವುದಲ್ಲಾ. (ಅತ್ತ ನೋಡಿ) ಓ ದೇವಯಾನಿ ಇತ್ತಲೇ ಬರುತ್ತಿದ್ದಾಳೆ. ಅವಳಿಗೂ ಈ ವಿಯೋಗ ಬಹು ತಾಪದಾಯಕ! ಹಿರಿಯನಾದ ನಾನು ದುಃಖವನ್ನಡಗಿಸಿಕೊಂಡು ಅವಳನ್ನು ಸಂತೈಸಬೇಕು (ಅಷ್ಟಾ ಎನ್ನುತ್ತ ದೇವಯಾನಿ ಬಂದು ಭಾವಾವೇಶದಿಂದ ಅಡಿಗೆ ನಮಿಸುವಳು) ಏಳು ತಾಯಿ, ಸೈರಣೆ ತಂದುಕೊ (ಮುಡಿನೇವರಿಸಿ ಮೇಲೆಬ್ಬಿಸುವರು. ಇಬ್ಬರ ಕಣ್ಣಲ್ಲೂ ನೀರು.)

ದೇವ : (ಬಿಕ್ಕುತ್ತಾ) ಅಪ್ಪಾ, ನಾ ಹೇಗೆ ನಿಮ್ಮನ್ನು ಬಿಟ್ಟಿರಲಿ? ಈ ಅಗಲಿಕೆಗಿಂತ ನಾನು ಲಗ್ನವಾಗದಿದ್ದರೆ ಚೆನ್ನಾಗಿರುತ್ತಿತ್ತು. ನಿಮ್ಮಂತೆ ನನ್ನನ್ನಾರು ನೋಡಿಕೊಳ್ಳುವರು? ನನಗೆ ಕೋರಿದ್ದನೆಲ್ಲಾ ಕೊಡುವ ಕಲ್ಪವೃಕ್ಷದಂತಿದ್ದಿರಿ; ನಾ ಹೇಗೆ ಸಹಿಸಲಿ (ಬಿಕ್ಕುವಳು).

ಶುಕ್ರ : (ಕಣ್ಣೊರಸಿಕೊಂಡು) ಮಗೂ, ನಿನ್ನ ಬಿಟ್ಟಿರುವುದು ನನಗೂ ಕಷ್ಟವೇ; ಆದರೆ ಹೊಸಬಾಳಿನ ಹರ್ಷ ನಿನ್ನದೆಂದು ನನ್ನ ಶೋಕವನ್ನು ಹತ್ತಿಕ್ಕಿರುವೆ. ಎಂದಾದರೊಂದು ದಿನ ಪರಗೃಹ ವಾಸಗಳು ನೀನು ಲಗ್ನವಾಗಿ ಹೋಗಲೇಬೇಕಿತ್ತು. ಗುಣಶ್ರೇಷ್ಠನಾದ ಯಯಾತಿಯಂತಹ ಪುರುಷಸಿಂಹ ನಿನಗೆ ಪತಿಯಾದನಲ್ಲಾ— ಎಂಬ ಸಂತೋಷದಿಂದ ಸಮಾಧಾನ ಪಡುತ್ತೇನೆ. ಶೋಕಿಸಬೇಡ ಮಗಳೇ ಯಯಾತಿಮಹಾರಾಜ ನಿನ್ನನ್ನು ಪ್ರೀತ್ಯಾದರಗಳಿಂದ ನೋಡಿಕೊಳ್ಳುತ್ತಾನೆ. ರಾಜಮಹಿಷಿಯಾಗಿ ಸಪುತ್ರವತಿಯಾಗುವ ಮಗನನ್ನು ಪಡೆದು ಗುಣಿಯಾಗುವೆ.

ದೇವ : ಅಪ್ಪಾಜಿ, ನೀವು ಮಾಡುವುದೆಲ್ಲಾ ನನ್ನ ಹಿತಕ್ಕಾಗಿಯೇ; ಆದರೆ ನನಗೊಂದೇ ಅಂಜಿಕೆ: ಅವರು ರಾಜರು. ಹತ್ತಾರು ಮಂದಿಯನ್ನು ಲಗ್ನವಾಗುವುದು ಅವರಿಗೆ ಸಹಜ. ಆದರೆ ನಾನು ಮಾತ್ರ ಆದನ್ನು ಸಹಿಸಲಾರೆ. ಪತಿಯ ಪ್ರೇಮ ಅನ್ಯಪಾತ್ರದಲ್ಲಿ ಪ್ರವೃತ್ತವಾದರೆ ನನ್ನೆದೆಯೊಡೆದು ಹೋಗುವುದು. ಪತಿಯ ಅವ್ಯಭಿಚಾರೀ ಪ್ರೇಮ ನನಗೆ ಲಭಿಸುವಂತೆ ಆರ್ಯಪುತ್ರನಿಂದ ನೀವು ವಚನ ಪಡೆಯಬೇಕು.

ಶುಕ್ರ : ವತ್ಸೆ, ನೀನು ಬಹಳ ಅಭಿಮಾನಿನಿ ಎಂಬುದನ್ನು ಬಲ್ಲೆ. ಬ್ರಾಹ್ಮವಿಧಿಯಿಂದ ನಿನ್ನನ್ನು ಲಗ್ನವಾದಾಗಲೇ ಅವನು ಏಕಪತ್ನೀವ್ರತಕ್ಕೆ ಬದ್ಧನಾದ. ನಿನ್ನಿಷ್ಟದಂತೆ ಅವನನ್ನು ವಚನಬಂಧಿತನನ್ನಾಗಿಯೂ ಮಾಡುತ್ತೇನೆ. ನೀನು ಚಿಂತಿಸಬೇಡ. (ಅತ್ತ ನೋಡಿ) ಅದೋ, ನಿನ್ನ ಪತಿ ಬರುತ್ತಿರುವಂತಿದೆ.

(ಅತ್ತಣಿಂದ ಯಯಾತಿಯ ಪ್ರವೇಶ. ರಾಜಯೋಗ್ಯ ಉಡುಪು ಧರಿಸಿದ್ದಾನೆ.)

ಯಯಾತಿ : ಪೂಜ್ಯರಿಗೆ ವಂದಿಸುವೆ. ನಿಮ್ಮ ಪವಿತ್ರಸಾನ್ನಿಧ್ಯವನ್ನು ಬಿಟ್ಟುಹೋಗಲು ಇಷ್ಟವಿಲ್ಲದಿದ್ದರೂ, ರಾಜಕಾರ್ಯನಿಮಿತ್ತ ಹೊಗಲೇ ಬೇಕಾಗಿದೆ. ಈ ದಿನವೇ ಹೊರಡಲು ಅನುಮತಿ ಕೊಡಬೇಕು.

ಶುಕ್ರ : ವತ್ಸ, ವಿವಾಹ ನಿನ್ನ ಅಂತಸ್ತಿಗೆ ತಕ್ಕಂತೆ ನಡೆಯಿತೇ? ನಿನಗೆ ತೃಪ್ತಿಯಾಯಿತೇ?

ಯಯಾತಿ : ಪೂಜ್ಯರೇ, ನಾನು ತುಂಬಾ ಸಂತೃಪ್ತನಾಗಿದ್ದೇನೆ. ನನ್ನ ಪಾಲಿಗೆ ಅಲಭ್ಯಳಾಗಿದ್ದ ದೇವಯಾನಿ ನಿಮ್ಮ ಕೃಪೆಯಿಂದ ಧರ್ಮಸಮ್ಮತವಾಗಿ ನನ್ನವಳಾದಳು. ತ್ರಿಲೋಕವಂದ್ಯರಾದ ತಮ್ಮ ಬಂಧುತ್ವವೂ ಅನುಗ್ರಹವೂ ನನಗೆ ಲಭಿಸಿತು. ಅಭೂತಪೂರ್ವ ವೈಭವದಿಂದ ಲಗ್ನವಾಯಿತು. ನಾನು ನಿಜಕ್ಕೂ ಧನ್ಯನಾದೆ.

ಶುಕ್ರ : ವತ್ಸ, ಈ ದೇವಯಾನಿಯನ್ನು ಕಣ್ಮಣಿಯಂತೆ ಕಾಪಾಡಿದ್ದೀನೆ. ಅವಳನ್ನು ಅಗಲುವುದೆಂದರೆ ನನಗೆ ಭೂಮಿಹಿಡಿದಂತಾಗುತ್ತದೆ. ನಿನ್ನಂತಹ ಧರ್ಮಾತ್ಮನೂ ವೀರನೂ ಆದ ವರ ದೊರಕಿರುವನಲ್ಲಾ ಎಂಬುದೊಂದೇ ನನಗೆ ಸಮಾಧಾನ. ನಿನ್ನನ್ನು ನಾನು ಕೈಮುಗಿದು ಕೇಳಿಕೊಳ್ಳುವುದಿಷ್ಟೇ— ಅವಳಿಗೆ ಸದಾ ಪ್ರಿಯವನ್ನುಂಟು ಮಾಡು! ಅವಳ ಮನಸ್ಸು ಯಾವ ರೀತಿಯಲ್ಲೂ ನೋಯದಿರಲಿ!

ಯಯಾತಿ : ಪೂಜ್ಯರೇ, ನಿಮ್ಮ ಮಾತೇ ನನಗೆ ಆಜ್ಞೆ. ಗುಣವತಿಯೂ ಸುಂದರಿಯೂ ಆದ ನಿಮ್ಮ ಮಗಳು ನನ್ನ ಭಾಗ್ಯದ

ದೇವಿ. ಗುರುಕೃಪೆ ದೈವಕೃಪೆಗಳನ್ನು ಗಳಿಸಿಕೊಡುವ ನನ್ನ ಪುಣ್ಯವ ಸಾಕಾರಮೂರ್ತಿ ಅವಳು. ಅವಳನ್ನು ನನ್ನ ಜೀವಕ್ಕಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತೇನೆ. ನೀವು ಆ ಬಗ್ಗೆ ಯೋಚಿಸಲೇ ಬೇಡಿ.

ಶುಕ್ರ : ರಾಜಶ್ರೇಷ್ಠಾ, ನಿನ್ನ ಸದ್ಗುಣಗಳಿಂದಾಗಿಯೇ ದೇವಯಾನಿ ನಿನಗೆ ಲಬ್ಧಳಾದಳು. ಅವಳನ್ನು ನೀನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುವೆಯೆಂಬುದನ್ನೂ ಬಲ್ಲೆ. ಆದರೂ ಕರ್ತವ್ಯವೆಂದು ನಾಲ್ಕು ಮಾತು ಹೇಳುತ್ತೇನೆ. ನೀನು ಕ್ಷತ್ರಿಯರಾಜ. ಸೋತ ಅರಸರು ನಿನ್ನ ಶಾಶ್ವತ ಸ್ನೇಹ ಬೆಳಸಲು ಸಂಬಂಧದ ಬೆಸುಗೆ ಬೀಳಲೆಂದು ಕಾತರರಾಗಿ ಒತ್ತಾಯ ಮಾಡಬಹುದು. ಆ ಸಂದಿಗ್ಧದಲ್ಲಿ ಏನು ಮಾಡುವೆ? ನೀನು ಬ್ರಾಹ್ಮವಿಧಿಯಿಂದ ದೇವಯಾನಿಯನ್ನು ವರಿಸಿದ್ದೀಯ. 'ಧನೆರ್ಗಚ, ಅರ್ಥೇಚ, ಕಾಮೇಚ ನಾತಿ ಚರಾಮಿ' ಎಂದು ಅಗ್ನಿಸಾಕ್ಷಿಯಾಗಿ ಪ್ರಮಾಣಮಾಡಿದ್ದೀಯ. ಆದ್ದರಿಂದ ನೀನು ಅವರ ಒತ್ತಾಯಕ್ಕೆ ಮಣಿಯಕೂಡದು. ಸೂಕ್ಷ್ಮಿಯೂ ಅಭಿಮಾನಿನಿಯೂ ಆದ ದೇವಯಾನಿಗೆ ಎಂದೆಂದಿಗೂ ಸವತಿಯನ್ನು ತರಕೂಡದು.

ಯಯಾತಿ : ಅದರಲ್ಲಿ ಸಂದೇಹಬೇಡ, ಪೂಜ್ಯರೇ. ಯಾವ ಒತ್ತಾಯಕ್ಕೂ ಯಾವ ವಿಕಾರಕ್ಕೂ ಮಣಿಯದೆ ನನ್ನ ಪ್ರತಿಜ್ಞೆಯಂತೆ ನಡೆಯುತ್ತೇನೆ.

ಶುಕ್ರ : ನೀನು ಬ್ರಾಹ್ಮವಿಧಿಯಿಂದ ದೇವಯಾನಿಯನ್ನು ವರಿಸಿದಾಗಲೇ ಏಕಪತ್ನೀವ್ರತಬದ್ಧನಾದಂತಾಯಿತು. ನೀನು ಧರ್ಮಸಂಕಟಕ್ಕೆ ಸಿಕ್ಕಿಬಿದ್ದಾಗ ನಿನ್ನ ಪ್ರತಿಜ್ಞಾವಚನವೇ ನಿನಗೆ ರಕ್ಷೆಯಾಗಲಿ, ನಿಸರ್ಗಸಹಜ ಪ್ರವೃತ್ತಿಯಂತೆ ನಡೆವುದು ಮೃಗಧರ್ಮ. ಆ ಪ್ರವೃತ್ತಿಯನ್ನು ಹದಗೊಳಿಸಿ ಧರ್ಮಮಾರ್ಗದಲ್ಲಿ ನಡೆವುದು ಮಾನವಧರ್ಮ. ರಾಜಶ್ರೇಷ್ಠಾ, ನಿನ್ನ ಅವ್ಯಭಿಚಾರೀ ಪ್ರೇಮ ದೇವಯಾನಿಯ ಸ್ಪತ್ತಾಗಲಿ !

ಯಯಾತಿ : ಸೂರ್ಯಚಂದ್ರರ ಸಾಕ್ಷಿಯಾಗಿ, ನಿಮ್ಮ ಪಾದಸಾಕ್ಷಿಯಾಗಿ ದೇವಯಾನಿಯ ಹೊರತು ಉಳಿದವರೆಲ್ಲರೂ ನನಗೆ ತಾಯಿ ಸಮಾನರು. (ನಮಿಸುವ)

ಶುಕ್ರ : (ಅವನ ತಲೆಯ ಮೇಲೆ ಕೈಯಿಟ್ಟು) ಆಯುಷ್ಮಂತನಾಗು, ವಿಜಯಿಯಾಗು. ನೀನೂ ನನಗೆ ಪುತ್ರಸಮಾನ. ಹಿರಿಯನ ಕರ್ತವ್ಯವೆಂದು ಹಿತವಾದ ಹೇಳುವೆ— ಸದಾ ಧರ್ಮಭೀರುವಾಗಿರು. ಪ್ರಜಾರಂಜಕನಾಗಿರು. ದುಷ್ಕೀರ್ತಿಗೆ ಎಡೆಕೊಡಬೇಡ. ಸಂಯಮದ ಕಡಿವಾಣ ಹಾಕಿ ಅರಿಷಡ್ವರ್ಗಗಳನ್ನು ಸದಾ ನಿನ್ನ ಹತೋಟಿಯಲ್ಲಿಟ್ಟುಕೋ.

ಯಯಾತಿ : ಅನುಗ್ರಹೀತನಾದೆ. ನಿಮ್ಮ ಆಶೀರ್ವಾದ ಕವಚ ಸದಾ ನನಗೆ ರಕ್ಷೆಯಾಗಿರಲಿ, ನಿಮ್ಮಲ್ಲಿ ನನ್ನದೊಂದು ಬೇಡಿಕೆ— ನಿಮ್ಮ ಪ್ರಿಯಪುತ್ರಿಯಾದ ದೇವಯಾನಿ ನಿಮ್ಮ ಅಗಲುವಿಕೆಯಿಂದ ದುಸ್ಸಹವಾದ ವೇದನೆ ಪಡುತ್ತಿದ್ದಾಳೆ. ನೀವು ದಯವಿಟ್ಟು ನಿಮ್ಮ ಪುತ್ರಿಯ ಗೃಹಕ್ಕೇ ಬಂದು ನೆಲಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕು.

ಶುಕ್ರ : (ಪ್ರಸನ್ನರಾಗಿ ಅವನ ಬೆನ್ನು ಚಪ್ಪರಿಸಿ) ವತ್ಸಾ, ನಿನ್ನ ಔದಾರ್ಯಕ್ಕೆ ತಕ್ಕ ಮಾತನ್ನಾಡಿದೆ. ಆದರೆ ನನ್ನನ್ನೇ ನಂಬಿರುವ ವೃಷಪರ್ವನನ್ನು ಹೇಗೆ ತೊರೆದು ಬರಲಿ? ನನ್ನನ್ನು ನೋಡಬೇಕೆನಿಸಿದಾಗ ನೀವಾದರೂ ಬನ್ನಿ; ಇಲ್ಲವೇ ನಾನಾದರೂ ಬರುತ್ತೇನೆ. ನೀವಿಬ್ಬರೂ ಎಲ್ಲಿದ್ದರೂ ನನ್ನ ಯೋಚನೆಗಳು ನಿಮ್ಮಲ್ಲೇ ಇರುತ್ತವೆ.

ಯಯಾತಿ : ಎಲ್ಲ ತಿಳಿದ ಹಿರಿಯರಿಗೆ ನಾನೇನು ಹೇಳಲಿ? ಸದಾ ನಿಮ್ಮ ಕೃಪಾಕಟಾಕ್ಷ ನಮ್ಮ ಮೇಲಿರಲಿ. ಅಷ್ಟೇ ನನ್ನ ಕೋರಿಕೆ.

ಶುಕ್ರ : ರಾಜಶ್ರೇಷ್ಠಾ, ಅತ್ತ ನೋಡು, ಆ ಯಜ್ಞಕುಂಡದಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿ ಕಾಣುತ್ತಿದೆಯೇ? ಅಗ್ನಿ ಯಜ್ಞಕುಂಡದ ಕಟ್ಟೆಯೊಳಗಿದ್ದಾಗ ಹೋಮಾಗ್ನಿಯಾಗಿ ಪೂಜೆಗೊಳ್ಳುತ್ತಾನೆ; ದೇವತೆಗಳಿಗೂ ಹವಿಸ್ಸನ್ನೊದಗಿಸುವ ಪವಿತ್ರವಾಹಕನಾಗುತ್ತಾನೆ. ಆದರೆ ಅದೇ ಅಗ್ನಿ ಸ್ಮಶಾನದಲ್ಲಿ ಚಿತಾಗ್ನಿಯಾಗಿ ಸರ್ವಭಕ್ಷಕನಾಗುತ್ತಾನೆ. ಹಾಗೆಯೇ ಕಾಮವೂ ಸಹ. ವಿವಾಹದ ಕಟ್ಟುಕಟ್ಟಳೆಯಲ್ಲಿ ವ್ಯಕ್ತವಾದಾಗ ಅದು ಪ್ರೇಮದ ದಿವ್ಯಪ್ರಭೆಯಾಗುತ್ತದೆ. ಆದರೆ ಅಯುಕ್ತ ಪಾತ್ರಗಳತ್ತ ಹರಿದಾಗ ಅದೇ ದೋಷವಾಗಿ, ಕೇಡು ತರುತ್ತದೆ. ಇಷ್ಟು ಒತ್ತಿ ಒತ್ತಿ ಹೇಳುತ್ತಿರುವೆನೆಂದು ಬೇಸರಿಸಬೇಡ – ಅರಿಷಡ್ವರ್ಗಗಳಲ್ಲಿ ಇದೇ ಅತಿ ಬಲವತ್ತರವಾಗಿ ಮೊದಲಸ್ಥಾನ ಪಡೆದಿದೆ. ಧರ್ಮಜ್ಞನಾಗಿ ದೇವೇಂದ್ರಪದವಿಪಡೆದ ನಿನ್ನ ಪೂಜ್ಯಪಿತ ಕಾಮವಶನಾಗಿ ಶಾಪಚ್ಯುತನಾದ ದು ನಿನಗೆ ತಿಳಿದೇ ಇದೆ. ಆದ್ದರಿಂದ ಸದಾ ನೀನು ಜಾಗೃತನಾಗಿದ್ದು, ನಿನ್ನ ಪ್ರತಿಜ್ಞೆಯನ್ನು ಪಾಲಿಸು. ದೇವಯಾನಿಯನ್ನು ಆದರಿಸು.

ಯಯಾತಿ: (ನಮ್ರನಾಗಿ) ನೀವೇ ನನಗೆ ತಂದೆ, ಗುರು, ವೈದ್ಯ. ನಿಮ್ಮ ಹಿತವಾದ ನನಗೆ ಶಿರೋಧಾರ್ಯ. ನಿಮ್ಮ ಪಾದ ಮುಟ್ಟಿ ಹೇಳುತ್ತೇನೆ—ನನ್ನ ಪ್ರತಿಜ್ಞೆಯಂತೆ ನಡೆಯುತ್ತೇನೆ. ನಾನು ಪ್ರತಿಜ್ಞಾಭಂಗಮಾಡಿ ನಿಮ್ಮ ಕೃಪೆಗೆ ಎರವಾಗುವ ಬದಲು ಜೀವ ಬಿಡುತ್ತೇನೆ.

ಶುಕ್ರ: ನೀನೆಂತಹ ಧರ್ಮಾತ್ಮನೆಂಬುದನ್ನು ಬಲ್ಲೆ, ವತ್ಸಾ. ದೇವಯಾನಿಯ ಬಗ್ಗೆ ನಾನಿನ್ನು ನಿಶ್ಚಿಂತೆಯಿಂದಿರುವೆ. ನಿಮ್ಮ ಪ್ರಯಾಣಕ್ಕೆ ಸಕಲ ಸಿದ್ಧತೆಗಳನ್ನೂ ಮಾಡುವಂತೆ ವೃಷಪರ್ವನಿಗೆ ಹೇಳಿಕಳುಹಿರುವೆ.

(ಯಯಾತಿ ಕೈಮುಗಿದು ಹೋಗುವನು— ದೇವಯಾನಿ ಒಲವು ತುಂಬಿದ ನೋಟ ಬೀರುವಳು.)

ಶುಕ್ರ: ಮಗಳೇ, ನೀನು ಶೀಲವತಿ, ಗುಣವತಿ. ನಿನಗೆ ನಾನು ಹೇಳಬೇಕಾದುದೇನೂ ಇಲ್ಲ. ಆದರೂ ತಂದೆಯ ಕರ್ತವ್ಯವೆಂದು ಹೇಳುತ್ತಿರುವೆ. ಸದಾ ಪತಿಹಿತಳಾಗು. ಅವನು ಬಳಲಿ ಬಂದಾಗ ತಾಯಾಗಿ ಉಪಚರಿಸು, ಸಖಿಯಾಗಿ ಆದರಿಸು. ನಿನ್ನ ಪತಿ ರಾಜ್ಯ

ಭಾರದತ್ತ ಹೆಚ್ಚು ಗಮನ ಕೊಟ್ಟು ನಿನ್ನನ್ನು ನಿರ್ಲಕ್ಷ್ಯಿಸಿದರೆ ನೋಯಬೇಡ ನೀನೂ ರಾಜ್ಯದ ಆಗುಹೋಗುಗಳನ್ನರಿತುಕೋ, ಆಶ್ರಿತ ವಾತ್ಸಲ್ಯದಿಂದ ಪ್ರಜಾರಂಜಕಳಾಗು. ಅನಸೂಯಳಾಗಿರು. ಗುರು-ಹಿರಿಯರ ಹಿತವಾದವನ್ನು ನಿರ್ಲಕ್ಷಿಸಬೇಡ. ಇನ್ನೇನು ಹೇಳಲಿ ಮಗಳೇ ? ಚಕ್ರವರ್ತಿಯಾಗುವ ಮಗನನ್ನು ಪಡೆದು ಸುಖಿಯಾಗಿ ಬಾಳಮ್ಮಾ .

ದೇವ: ಪಿತೃದೇವಾ, ನಿಮ್ಮ ಹಿತವಾದದಂತೆ ತಪ್ಪದೆ ನಡೆಯುತ್ತೇನೆ.

ಶುಕ್ರ: ಇನ್ನೊಂದು ವಿಷಯ ನೆನಪಾಯಿತು. ರಾಜಕುಮಾರಿ ಶರ್ಮಿಷ್ಠೆಯನ್ನು ಕರುಣೆಯಿಂದ ನೋಡಿಕೋ. ಅವಳನ್ನೂ ತಿಳಿವಿಲ್ಲದ ಬಾಲೆ. ಬಹು ಬೇಗನೆ ರಾಗಭಾವಗಳಿಗೆ ವಶಳಾಗುವ ಮುಂಗೋಪದ ಸ್ವಭಾವಿನಿ. ಅವಳ ಅಪರಾಧಕ್ಕೆ ದೊಡ್ಡ ಶಿಕ್ಷೆಯೂ ಆಗಿದೆ. ಆಶ್ರಿತ-ವತ್ಸಲೆಯಾದ ನೀನು ಅವಳನ್ನು ಕರುಣೆಯಿಂದ ನಡೆಸಿಕೋ. ದ್ವೇಷ ಬಿಟ್ಟು, ಸ್ನೇಹದಿಂದ ಕಂಡುಕೋ.

ದೇವ: ಅಪ್ಪಾ, ಶರ್ಮಿಷ್ಠೆ ತನ್ನ ತಪ್ಪನ್ನೊಪ್ಪಿಕೊಂಡಾಗಲೇ ಅವಳನ್ನು ಕ್ಷಮಿಸಿದೆ. ನನಗೆ ಸ್ವಲ್ಪವೂ ದ್ವೇಷವಿಲ್ಲ. ಆದರೆ ರಾಜ-ದಂಪತಿಗಳು ತ್ಯಾಗಮಾಡಿರುವುದರಿಂದ ಅವಳನ್ನು ಸಂಗಡ ಕರೆದೊಯ್ಯ ಬೇಕಾಗಿದೆ. ಅವಳನ್ನು ದಾಸಿಯಂತೆ ಕಾಣದೆ ಸಖಿಯಂತೆ ನಡೆಸಿ-ಕೊಳ್ಳುತ್ತೇನೆ

ಶುಕ್ರ: ಮಗಳೇ, ಗುಣಾಗ್ರಗಣ್ಯಳಾದ ನಿನ್ನ ಸ್ವಭಾವ ನನಗೆ ತಿಳಿಯದೇ ? ನೀತಿನಿಪುಣಳೂ ಪ್ರಾಜ್ಞೆಯೂ ಆದ ಶಾಲಿನಿಯೂ ನಿನ್ನೊಡನೆ ಬರುವಳು. ಅವಳ ತಪ್ಪವಚನಗಳಿಗೆ ಕಿವಿಗೊಡು. ನಿನಗೆ ಶುಭವಾಗುವುದು.

ದೇವ: ಆಗಲಿ, ಪೂಜ್ಯರೆ, ಇನ್ನು ರಾಜದಂಪತಿಗಳಿಗೆ ಹೇಳ ಬರಲೇ ? (ಹೋಗುವಳು. ಶುಕ್ರರು ಅತ್ತಲೇ ನೋಡುವರು.)

ಶುಕ್ರ: (ಆಶ್ಚರ್ಯದಿಂದ) ಇತ್ತ ಬರುತ್ತಿರುವಳು ರಾಜ-ಕುಮಾರಿ ಶರ್ಮಿಷ್ಠೆಯಲ್ಲವೇ ? ಅಹಾ, ಎಂತಹ ಅಚ್ಚಳತ ಪಾರ್ಪಾ-ಡಾಗಿದೆ ಇವಳಲ್ಲಿ. ಎಲ್ಲಿ ಆ ಹಿಂದಿನ ಠೀವಿ, ಆ ಉಗ್ರತೆ, ಆ ಸೆಡವು-ಗಳು ? ವಿನಯ ವಿಧೇಯತೆಗಳೇ ಮೂರ್ತಿಗೊಂಡಂತಿರುವಳಲ್ಲಾ !

(ಶರ್ಮಿಷ್ಠೆ ದೈನ್ಯದಿಂದ ಬಂದು ಶುಕ್ರರ ಕಾಲುಗಳಿಗೆ ಮಂಡಿ-ಯೂರಿ ನಮಿಸುವಳು)

ಶರ್ಮಿಷ್ಠೆ: ಗುರುದೇವಾ, ಈ ಪರಮಪಾಪಿಯನ್ನು ಮನ್ನಿಸಿ. ಗುರುದೇವಾ, ಈ ನಿಮ್ಮ ಪಾದವೇ ಪವಿತ್ರಗಂಗಾತೀರ್ಥ. ನಿಮ್ಮ ಪಾದಸ್ಪರ್ಶ ಮಾಡಿದ ನನ್ನ ಪಾಪ ನಾಶವಾಗುವಂತೆ ಅನುಗ್ರಹಿಸಿ, ಗುರುದೇವಾ. ಸರ್ವ ಕಲ್ಮಷವನ್ನೂ ದಗ್ಧಮಾಡುವ ಪವಿತ್ರ ಯಜ್ಞೇ-ಶ್ವರ ರೂಪರು ನೀವು. ನನ್ನ ಪೂರ್ವದ ಕಲ್ಮಷವನ್ನೆಲ್ಲಾ ಭಸ್ಮಮಾಡಿ, ಗುರುದೇವಾ ! ಅಪಾರಕರುಣಾಸಿಧಿಯಾದ ನೀವು ಗುರುನಿಂದೆ ಮಾಡಿದ ಈ ಪಾಪಿಯನ್ನು ಕ್ಷಮಿಸಿ, ಗುರುದೇವಾ! (ಬಿಕ್ಕುವಳು)

ಶುಕ್ರ: ಏಳು ತಾಯಿ, ಏಳು, ನಿನ್ನ ಅಲ್ಪ ಅಪರಾಧವನ್ನು ಎಂದೋ ಕ್ಷಮಿಸಿರುವೆ ಏಳು ! ಆವೇಶಭರದಲ್ಲಿ ನೀನು ಮಾಡಿದ್ದಾ-ಗಲೀ, ಆಡಿದ್ದಾಗಲೀ ದೊಡ್ಡ ತಪ್ಪಲ್ಲ ಏಳು, ಮಗಳೇ.

ಶರ್ಮಿಷ್ಠೆ: ನಿಮ್ಮ ಕೃಪೆ ನನ್ನ ಮೇಲುಂಟೆಂದು ಹೇಳುವವರೆಗೂ ಈ ಪವಿತ್ರ ಪಾದಗಳನ್ನು ಬಿಡಲಾರೆ. ನನ್ನ ಸ್ಥಿತಿಗಾಗಿ ನನಗೆ ದುಃಖ ವಿಲ್ಲ. ಗುರುಕೃಪೆಗೆ ಎರವಾದೆನಲ್ಲಾ ಎಂದು ನನ್ನ ಮನ ಕುದಿಯು-ತ್ತಿದೆ. ಗುರುದೇವಾ, ಅರಿಷಡ್ವರ್ಗಗಳು ನನ್ನೆದೆಯಲ್ಲಿ ತಲೆ ಎತ್ತದಂತೆ ಹರಸಿ ಗುರುದೇವಾ! ಶಾಂತಿ, ಕ್ಷಮೆಗಳು ನನ್ನೆದೆಯಲ್ಲಿ ಸದಾ ಬೆಳಗು-ವಂತೆ ಹರಸಿ ಗುರುದೇವಾ.

ಶುಕ್ರ: ಹಾಗೇ ಆಗಲಿ, ಏಳು, ಮಗಳೇ. ಗುರುಕೃಪೆ ಸಂಪೂರ್ಣ ನಿನ್ನ ಮೇಲಿದೆ, ಏಳು, ಮಗಳೇ.

ಶರ್ಮಿಷ್ಠೆ: (ಎದ್ದು) ಗುರುದೇವಾ, ಇನ್ನು ಆದಿಮಾತೆಯೇ ನನ್ನ ತಾಯಿ ತಂದೆ. ಅವಳ ಪ್ರತ್ಯಕ್ಷಸ್ವರೂಪವೇ ದೇವಯಾನಿ ಎಂದು ಭಾವಿಸಿ, ಸೇವಿಸುವೆ. ಇದೇ ನನ್ನ ಜೀವನದ ಗುರಿ. ದೇವಯಾನಿಯ ಸೇವೆಯ ಮೂಲಕ ಆದಿಮಾತೆಯನ್ನಾರಾಧಿಸಿ ಅವಳ ಕೃಪಾಪ್ರಸಾದ ಪಡೆಯುವೆ ಈ ಸೇವಾಭಾಗ್ಯದ ಹೊರತು ಬೇರಾವ ಭೋಗ ಭಾಗ್ಯಗಳನ್ನು ಬಯಸೆ ಗುರುದೇವಾ. ನಿಮ್ಮ ಕೃಪೆಯ ರಕ್ಷೆ ಮಾತ್ರ ಸದಾ ನನ್ನ ಮೇಲಿರಲಿ. (ಕೈಮುಗಿವಳು)

ಶುಕ್ರ: ಹಾಗೇ ಆಗಲಮ್ಮಾ. ನನಗೆ ನೀನು ಬೇರೆಯಿಲ್ಲ, ದೇವ-ಯಾನಿ ಬೇರೆಯಲ್ಲ. ಕಷ್ಟವೆಂದೂ ಸ್ಥಿರವಲ್ಲ ಮಗಳೇ ! ಕಷ್ಟವನ್ನೆದು-ರಿಸಿ, ಅದರಿಂದ ಪಾಠ ಕಲಿಯುವುದು ವಿವೇಕಿಗಳ ಲಕ್ಷಣ (ಅವಳ ತಲೆಯ ಮೇಲೆ ಕೈಯಿಟ್ಟು) ಇದೋ, ಮನಮುಟ್ಟಿ ಹರಸುತ್ತೇನೆ. ನಿನ್ನ ಹೃದಯಪಲ್ಲಿ ಶಾಂತಿ ಪ್ರಸನ್ನತೆ ನೆಲಸಲಿ. ಆದಿಮಾತೆಯ ಕೃಪೆ ನಿನಗೆ ಲಭಿಸಲಿ, ನಿನ್ನ ಬಾಳು ಭವ್ಯವಾಗಲಿ.

ಶರ್ಮಿಷ್ಠೆ: (ಹರ್ಷದಿಂದ) ಧನ್ಯಳಾದೆ, ಗುರುದೇವಾ. ಇನ್ನು ನಾನು ಬರಲೇ ? (ನಮಸ್ಕರಿಸಿ ಹೋಗುವಳು).

ಶುಕ್ರ: ಧನ್ಯೆ ನೀನು ಶರ್ಮಿಷ್ಠಾ ! ಮೂರುಜನ್ಮಗಳ ಸಾಧನೆ-ಯಿಂದ ಸಾಧಿಸಲಾರದುದನ್ನು ಮೂರು ದಿನಗಳಲ್ಲಿ ಸಾಧಿಸಿರುವೆಯಲ್ಲಾ! ತಾಯಿ. ಅಸುರೀ ಸ್ವಭಾವವನ್ನು ಇಷ್ಟರ ಮಟ್ಟಿಗೆ ನಿಗ್ರಹಿಸಿರುವ ನಿನ್ನ ಸಾಹಸ ಅಸಾಮಾನ್ಯ. ನಿನ್ನ ಸಾಧನೆ ಇದೇ ತೀವ್ರತೆಯಲ್ಲಿ ಮುಂದು ವರಿದರೆ, ನೀನು ಸಾಕ್ಷಾತ್ ಸರ್ವಮಂಗಳೆಯೇ ಆಗುವೆ. ನಿನ್ನ ಹೃತ್ಸಂಕಲ್ಪಗಳು ನಿಶ್ಚಯವಾಗಿ ಫಲಿಸುತ್ತವೆ. ನಿನ್ನ ಈ ಕಷ್ಟವೂ ನಿನ್ನ ಕಲ್ಯಾಣಕ್ಕೆ ನಾಂದಿಯಾಗುತ್ತದೆ. ನಿಮಗೆಲ್ಲರಿಗೂ ಶುಭವಾಗಲಿ!

[ತೆರೆ ಬೀಳುವುದು]

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದ ಮೇರೆಗೆ 'ಜೂಲೈ ೪' ಕಥೆಯನ್ನು ವಿಮರ್ಶಿಸಿ ೫ ಜನರಿಂದಲೂ, 'ಪುಷ್ಯಮಾಸದ ರಾತ್ರಿ' ಕಥೆಯನ್ನು ವಿಮರ್ಶಿಸಿ ೬ ಜನರಿಂದಲೂ ಲೇಖನಗಳು ಬಂದಿವೆ. ನಿಮರ್ಶಕರ ಪರಿವಿಡಿ ಕೆಳಗಿನಂತಿದೆ :

'ಜೂಲೈ ೪' ಕಥೆಯ ವಿಮರ್ಶಕರು:

೧ ಶ್ರೀ. ಎನ್. ರಾಮಮೂರ್ತಿ, ಚಿಕ್ಕನುಗಳೂರು. ೨ ಶ್ರೀ. ದೇವಿದಾಸ ಎಂ. ಎ. ಬೆಳಗಾಂವಿ. ೩ 'ಸುಜಯ' ಸೀ. ಎಂ. ಎ. ಧಾರವಾಡ. ೪ ಶ್ರೀ. 'ರಂಗ' ಮಾಳಮಡ್ಡಿ, ಧಾರವಾಡ. ೫ 'ಸುಮಾಧವ' ಎಂ. ಪದ್ಮನಾಭಾಚಾರ್ಯ ಮಾಸ್ತರ್, ಭಾಲ್ಕಿ.

'ಪುಷ್ಯಮಾಸದ ರಾತ್ರಿ' ಕಥೆಯ ವಿಮರ್ಶಕರು:

೧ ಶ್ರೀ. ದಿವಸ್ಪತಿ ಹೆಗಡೆ, ಸಿದ್ದಾಪುರ. ೨ ಶ್ರೀ. ಟಿ. ಆರ್. ಶ್ರೀನಿವಾಸನ್, ಮೈಸೂರು. ೩ ಶ್ರೀ. ಚಿದಾನಂದ ಪತ್ತಾರ, ಮೊರಬ (ತಾ. ನವಲಗುಂದ). ೪ ಶ್ರೀ. ವಸಂತಮಾಧವ ಹರಿಹರ, ಕೆಲ್ಲೆ-ಹುಬ್ಬಳ್ಳಿ. ೫ ಶ್ರೀ. ಎಂ. ಗಂಗಾಧರಭಟ್ಟ ನೀಚಾರಳ್ಳ (ದ.ಕ.) ೬ ಶ್ರೀ. ವಿ. ಬಿ. ಆರ್ತಿಕಜೆ, ಎನ್. ಮುಡ್ನೂರು.

* * * * * *

ಎಂದಿನಂತೆ, ನಮ್ಮ ಸಂಪಾದಕಮಂಡಲಿಯವರೇ, ಎಲ್ಲ ವಿಮರ್ಶೆಗಳನ್ನೂ ನೋಡಿ, ಪರೀಕ್ಷಿಸಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. ಬಹುಸಂಖ್ಯಾಕ ವಿಮರ್ಶೆಗಳು—ಈ ಸಲ—ಉತ್ತಮವಾಗಿ ಇರುವುದರ ಕುರಿತು, ನಿರ್ಣಾಯಕರು ತಮ್ಮ ಸಂತುಷ್ಟಿಯನ್ನು ಪ್ರಕಟಿಸಿದ್ದಾರೆ.

'ಜೂಲೈ—೪' ಕಥೆಯ ವಿಮರ್ಶೆಗಳಲ್ಲಿ **'ರಂಗ' ಮಾಳಮಡ್ಡಿ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. **ಶ್ರೀ. ದೇವಿದಾಸ ಎಂ. ಎ., ಶ್ರೀ. ಸುಮಾಧವ,** ಭಾಲ್ಕಿ ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವು ಒಳ್ಳೆಯ ವಿಮರ್ಶೆಗಳೆ.

'ಪುಷ್ಯಮಾಸದ ರಾತ್ರಿ' ಕಥೆಯ ವಿಮರ್ಶೆಗಳಲ್ಲಿ **ಶ್ರೀ. ದಿವಸ್ಪತಿ ಹೆಗಡೆ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಚಿದಾನಂದ ಪತ್ತಾರ—ಮೊರಬ ಅವರ ವಿಮರ್ಶೆ ಉತ್ತಮವಾಗಿದೆ. ಮಿಕ್ಕ ವಿಮರ್ಶೆಗಳೂ ಚೆನ್ನಾಗಿವೆ.

ಮುಂದಿನ ತಿಂಗಳ ಸೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'ಬದುಕಿನ ವೇಷ'** ಎಂಬ ಕಥೆಯನ್ನಾಗಲಿ, **'ಮುಗಿದ ಅವತಾರ'** ಎಂಬ ರೂಪಕವನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು. ನಮ್ಮ ವಿಮರ್ಶಕರೊಬ್ಬರು, ಕವನವೊಂದನ್ನೂ ವಿಮರ್ಶೆಗೆ ಇರಿಸಬೇಕೆಂದು ಸೂಚಿಸಿದ್ದಾರೆ. ಒಳ್ಳೆಯ ಸೂಚನೆಯೆ. ಬೇರೆಯವರಿಗೂ ಈ ಸೂಚನೆ ಸಮ್ಮತವೆನಿಸಿದಲ್ಲಿ, ಒಂದು ಕವನವನ್ನೂ ವಿಮರ್ಶೆಗೆ ಇರಿಸಲಾಗುವುದು.

— ಸಂಪಾದಕರು

ಜುಲೈ ೪

(ಸತ್ಯಕಥೆಯ ವಿಮರ್ಶೆ)

ಶೀ. 'ರಂಗ' ಮಾಳಮಡ್ಡಿ, ಧಾರವಾಡ

ಇದೊಂದು ಕೆಲವೇ ದಿನಗಳ ಹಿಂದೆ ಆಸಾಮದಲ್ಲಿ ನಡೆದ ಆಸಾಮಿಯಾ ಬಂಗಾಲೀ ಭಾಷಾವಿವಾದಕ್ಕೆ ಗಲಭೆಯ ನೈಜಚಿತ್ರ.

ಕಥೆಯು, ಗೌಹಾತಿಯ ಆಫೀಸೊಂದರಲ್ಲಿ ಕೆಲಸಗಾರನಾದ ಪ್ರಮೋದಕುಮಾರ ಚಟರ್ಜಿಯ—ಆ ಪೇಳೆಯಲ್ಲಿಯ ಸ್ಥಿತಿಯ ಬಗ್ಗೆ ಹೆಣೆಯಲ್ಪಟ್ಟಿದೆ. ಅವನೇ ಕಥೆಯ ಬೆನ್ನೆಲುವು. ಅವನ ಪಾತ್ರದ ಚಿತ್ರಣವೆಂದರೆ ಕಥೆಯ ಸಾರವೆಂದು ಬಹುಶಃ ಹೇಳಬಹುದು.

ಜುಲೈ ೪ರಂದು, ಹಿಂದಿನ ದಿನ ಊರಲ್ಲಿ ನಡೆದ ಭೀಕರ ಸಂಗತಿಗಳನ್ನು ಮೆಲಕು ಹಾಕುತ್ತ, ಏನೂ ತೋಚದೆ, ಆಫೀಸಿನಲ್ಲಿ ಪ್ರಮೋದ ಕುಮಾರ ದಿಙ್ಮೂಢನಾಗಿ ಕುಳಿತಿದ್ದಾನೆ. ತನ್ನ ಮಗು ಕುಮುದಳ ಹುಟ್ಟಿದ ಹಬ್ಬವನ್ನು ಒಳ್ಳೆ ವಿಜೃಂಭಣೆಯಿಂದ ಆಚರಿಸಬೇಕೆಂದ ಅವನು, ಕೆಲವೊಂದು ದಿನಗಳಿಂದ ನಡೆದ ಗಲಭೆ ಉಗ್ರರೂಪ ತಾಳಿದ್ದನ್ನು ಕಂಡಿದ್ದ. ಆದ್ದರಿಂದ ಮಗುವಿನ ಹುಟ್ಟಿದ ಹಬ್ಬವನ್ನು ಅಷ್ಟರಲ್ಲಿಯೇ ನಿರಾಡಂಬರವಾಗಿ ಮುಗಿಸಿದ್ದ. ಕೆಲವು ದಿನಗಳ ಹಿಂದೆ ತನ್ನ ಮನೆಯವರನ್ನು ಕಲಕತ್ತೆಗೆ ಕಳಸಲಿಕ್ಕೆ ಮಿತ್ರ ಬ್ಯಾನರ್ಜಿ ಸಲಹೆ ನೀಡಿದಾಗ, ಅವನನ್ನು 'ಮುಗಿಲು ಹರಿದು ಬೀಳುತ್ತದೆ ಎಂದು ಓಡಿ ಹೋದ ಮೊಲದ ಹಾಗಿದೆ ನಿನ್ನ ಪರಿಸ್ಥಿತಿ' ಎಂದು ಹಾಸ್ಯ ಮಾಡಿದ್ದ. ಆದರೆ ಇಂದಿನ ದಿನ ಅದೇ ಬ್ಯಾನರ್ಜಿ ಜಾಣನೆನಿಸಿದ್ದ. ಅವನಂತೆ ತಾನೂ ತನ್ನ ಮನೆಯನರನ್ನು ಕಲಕತ್ತೆಗೆ ಈ ಮೊದಲೇ ಕಳಿಸಿದ್ದರೆ ಚೆನ್ನಾಗಿತ್ತಲ್ಲ ಎಂದು ಹಳಹಳಿಸುತ್ತಿದ್ದ. ಹಿಂದಿನ ದಿನ ಮಗುವಿನ ಹುಟ್ಟಿದ ದಿನವೆಂದು ರಜೆ ಪಡೆದ ಅವನು, ಆಫೀಸಿಗಾದರೂ ಹೊದರೆ ಹೆಚ್ಚಿನ ಸುದ್ದಿ ತಿಳಿಯಬಹುದೆಂದು ಆತುರದಿಂದ ಇಂದು ಬಂದಿದ್ದ. ದಾರಿಗುಂಟ ಪೋಲೀಸರ ಓಡಾಟ; ಬಂದಾವ ಅಂಗಡಿಗಳ ಮುಂದೆ ಗುಂಪುಗುಂಪಾಗಿ ನಿಂತು ಗುಜುಗುಜಿಸುತ್ತಿರುವ ಜನರು; ಆಗಾಗ ಭರದಿಂದ ಅತ್ತಿಂದಿತ್ತ ಓಡುತ್ತಿರುವ Fire Brigade ಮೋಟರು– ಅವನನ್ನು ಭಯ ಬಿಹ್ವಲನನ್ನಾಗಿ ಮಾಡಿದ್ದುವು. ಆಫೀಸಿನಲ್ಲಿಯೂ ಅವನಂತೆ ಹೊರಗಿನ ಸುದ್ದಿಗಳಿಗಾಗಿ ಕಾತರರಾದ ಆಫೀಸು ಸುತ್ತ ಬ್ಯಾನರ್ಜಿ, ಸಿಳ್ಳೆ, ಶರ್ಮಾ ಮುಂ. ಕಾಣುತ್ತಾನೆ. ಯಾಕೆಂದರೆ ನಿನ್ನೆ ಕಲಕತ್ತೆಯಿಂದ ಬಂದ ವೃತ್ತಪತ್ರಿಕೆಗಳನ್ನು ಸುಟ್ಟು ಹಾಕಿದ್ದಾರೆ. 'ಹೊರಗಿನ ಪೇಪರು ಪೂರಾ ಪೂಡುವ ಹಾಗಿಲ್ಲ' ಎಂಬ ಸುದ್ದಿ ಅವನನ್ನು ಅಧೀರನನ್ನಾಗಿ ಮಾಡಿತ್ತು. ಪರಪ್ರಾಂತದಲ್ಲಿದ್ದ ಅವನಿಗೆ ತನ್ನ ಪ್ರಾಂತದ ಪತ್ರಿಕೆಗಳೆಂದರೆ ಎಷ್ಟೋ ನೆಮ್ಮದಿ. ಅಷ್ಟರಲ್ಲಿ, 'ಹಾಸ್ಟಲಿನ ಹತ್ತಿರ ಮನೆಗೆ ಬೆಂಕಿ ಇಟ್ಟರು, ಹಾಸ್ಟಲಿನ ಮೇಲೆ ಗೋಳೀಬಾರು, ಒರ್ವ ವಿದ್ಯಾರ್ಥಿಯ ಮರಣ' ಮುಂತಾದ ಒಂದರ ಮೇಲೊಂದು ಸುದ್ದಿಗಳು ಅವನ ಮನಃಪಟಲದ ಮೇಲೆ ಅಪ್ಪಳಿಸುತ್ತವೆ. ಅವನಿಗೆ ತನ್ನ ಮನೆಯ ಜನರದೇ ಚಿಂತೆ ಹಿಡಿಯುತ್ತದೆ. ಮನೆಗಾದರೂ ಹೋಗೋಣವೆಂದರೆ, ಹೊರಗೆ ಕರ್ಫ್ಯೂ ಆರ್ಡರ್. ಅಂತೂ ಬ್ಯಾನರ್ಜಿಯ ಸಹಾಯದಿಂದ ಮನೆಗೆ ಸೇರಿದರೆ, ಭಯಭೀತರಾದ ಅವನ ತಂದೆ, ಪಂ. ನಾರಾಯಣಶರ್ಮರೊಡನೆ ಏನೋ ಹರಟುತ್ತ ಕುಳಿತಿದ್ದಾರೆ. ಇದಕ್ಕೆಲ್ಲ ಊರ ಹತ್ತಿರದ ಪ್ರಸಿದ್ಧ ಕಾಮಾಖ್ಯಾದೇವಿಯ ಅವಕೃಪೆಯೆ ಕಾರಣವೆಂದು ಸೋದಾಹರಣವಾಗಿ ವರ್ಣಿಸುತ್ತಿರುವುವರಲ್ಲಿ, ಮನೆಯ ಮೇಲೆ ಕಲ್ಲು ಬಿದ್ದ ಸಪ್ಪಳ, ಹೊರಗೆ ಭರದಿಂದ ಓಡಾಡುತ್ತಿರುವ ಪೋಲೀಸುವ್ಯಾನು, ಮುಂತಾದುವು ಅವನನ್ನು ಅರೆಜೀವನನ್ನಾಗಿ ಮಾಡುತ್ತವೆ. ಅಷ್ಟರಲ್ಲಿ ದೇವರಂತೆ ಬಂದ ನೆರೆಮನೆಯ ಸುಶೀಲದಾಸನ ನೆರವಿನಿಂದ ಮನಸ್ಸಿಗೆ ಎಷ್ಟೋ ನೆಮ್ಮದಿ ದೊರೆಯುತ್ತದೆ.

ಕಥೆಯ ಮೊದಲಿನಿಂದ ಕೊನೆಯ ವರೆಗೂ ಪ್ರಮೋದಕುಮಾರನ ಪಾತ್ರ ಒಳ್ಳೇ ಉದ್ದೇಶಪೂರ್ಣವಾಗಿ ವಿಚಿತ್ರವಾಗಿದೆ. ಲೇಖಕರ ಶೈಲಿಯಲ್ಲಿಯೇ ಹೇಳುವುದಾದರೆ 'ಭಾಷೆಯ ಮೂಲಕ ಪ್ರಾರಂಭವಾದ ಈ ಗೊಂದಲ ಇಷ್ಟು ದೀರ್ಘಕ್ಕೆ ಹೋಗಿ, ಕಾಡುಬೇಗೆಯಂತೆ ಹೀಗೆ ಹಬ್ಬಬಹುದೆಂದು ಅವನು ಎಣಿಸಿರಲಲ್ಲ.' ಈ ವಾಕ್ಯ ನಿಜವಾಗಿಯೂ ಅವನು ಎಷ್ಟು ಅಧೀರನಾಗಿದ್ದ ಎಂಬುದನ್ನು ತೋರಿಸುತ್ತದೆ. ಗೌಹಾತಿಯಂತಹ ಮುಖ್ಯ ಪಟ್ಟಣದಲ್ಲಿಯೇ ಈ ಸ್ಥಿತಿಯಾದರೆ ಗತಿಯೇನು? ಇದಕ್ಕೆಲ್ಲ ರಾಜಕೀಯ ಕೈವಾಡವಿಲ್ಲದೇ ಇಲ್ಲ. ಸಮಾಜದಲ್ಲಿ ಪ್ರತಿಷ್ಠಿತರ ಸೋಗುಹಾಕಿ ತಮ್ಮ ಸ್ವಾರ್ಥ ಸಾಧನೆಗಾಗಿ, ನಾಳಿನ ದೇಶದ ಆಧಾರಸ್ಥಂಭಗಳಾದ ವಿದ್ಯಾರ್ಥಿಗಳನ್ನು 'ಹಾಳುಮಾಡುವ ಆಷಾಢಭೂತಿಗಳನ್ನು ಶಪಿಸುತ್ತಾನೆ. ಭಾಷೆಯ ಅಭಿಮಾನವಿರಬೇಕು. ಆದರೆ ಅದು ಮರಭಿಮಾನವಾಗಿ ಪರಿಣಮಿಸಿ ನಿರಪರಾಧಿಗಳನ್ನು ಹಾನಿಗೀಡು ಮಾಡುವದು ನಾಚಿಗೇಡು ಎಂಬ ವಿಚಾರ ಓದುಗನಲ್ಲಿ ಸುಳಿಯದೇ ಇರಲಾರದು. ಪ್ರಮೋದ ಕುಮಾರನಂತಹ ನೂರಾರು ಜನರ ಚಿತ್ರಪಸನ್ನು ಓದುಗ ಸಹಜವಾಗಿ ಕಾಣುತ್ತಾನೆ, ಮತ್ತು ಅಂಥವರಿಗಾಗಿ ಮರುಗುತ್ತಾನೆ. ಹೀಗೆ ಪ್ರಮೋದಕುಮಾರನ ಪಾತ್ರ ಓದುಗನನ್ನು ಘಟನೆಗಳೊಂದಿಗೆ ಸಾಮರಸ್ಯಮಾಡಿಕೊಂಡು, ಅವನ ಕರುಣಾಪೂರಿತ ಸ್ಥಿತಿಗೆ ಮೆರುಗು ಕೊಡುತ್ತದೆ.

ಇತರ ಪಾತ್ರಗಳಲ್ಲಿ ಬ್ಯಾನರ್ಜಿ, ಸಿಳ್ಳೆ, ಶರ್ಮಾ ಮುಂ. ಪ್ರಮೋದ ಕುಮಾರನ ಆಫೀಸು ಮಿತ್ರರು, ಅವನ ಮುದ್ದುಮಗು ಕುಮುದ, ಚುಟುಕಾಗಿ ಪೇಪರ್ ಮಾರುವ ಹುಡುಗ, ಪೋಸ್ಟಮನ್, ಆಫೀಸು ಸಿಪಾಯಿ, ಸುಶೀಲದಾಸ ಮತ್ತು ಕೊನೆಯಲ್ಲಿ ಪರಿಣಾಮ ಕಾರೀ ಪಾತ್ರವೆನಿಸಿದ ಪಂಡ ನಾರಾಯಣಶರ್ಮಾ, ಇವರೆಲ್ಲ ಕಥೆಗೆ ಒಳ್ಳೇ ಪೋಷಕವಾಗಿ ಚಿತ್ರಿತರಾಗಿದ್ದಾರೆ.

ಸಹಾಯಕ ಪಾತ್ರಗಳಲ್ಲಿ ಬ್ಯಾನರ್ಜಿ, ಪ್ರಮೋದಕುಮಾರನಿಗೆ ಅತಿ ಹತ್ತಿರದ ನೆಳೆಯ. ವಾರದ ಹಿಂದೆ ತನ್ನ ಮನೆಯವರನ್ನೆಲ್ಲ ಕಲಕತ್ತೆಗೆ ಕಳಿಸಿದ್ದಾನೆ. ಅವನು ಮುಂದೆ ಬರಬಹುದಾದ ಗಂಡಾಂತರ-ಪರಿಸ್ಥಿತಿಯನ್ನು ಮೊದಲೇ ಗ್ರಹಿಸಿ, ಲೇಖಕರೇ ಹೇಳುವಂತೆ ಆಮೇಲೆ ಪಶ್ಚಾತ್ತಾಪ ಪಡುವದಕ್ಕಿಂತ ಮೊದಲೇ ಎಚ್ಚರಿಕೆ ತೆಗೆದುಕೊಳ್ಳುವದು

ಲೀಸು' ಎಂದು, ಪ್ರಮೋದಕುಮಾರ ತನ್ನ ಅಸಹಾಸ್ಯ ಮಾಡಿದಾಗ ಉತ್ತರಿಸುತ್ತಾನೆ. ಅಸಾಮಿಯಾ ಜನರ ಭಾಷಾತೀವ್ರತೆಯನ್ನು, ಒಳ್ಳೇ ಮಾರ್ಮಿಕವಾಗಿ, 'ಪೋಲಿಸ ಸ್ಟೇಶನ್ನಿಗೆ *Complain* ಮಾಡಲು ಹೋದರೆ ಅಸಾಮಿಯಾ ಭಾಷೆಯಲ್ಲಿಯೇ ಮಾತನಾಡಬೇಕೆಂದು ಒತ್ತಾಯಿಸುವ ಪೋಲಿಸರ ಸಹಾಯವಿಲ್ಲದೇ ಇಸ್ಟೆಲ್ಲ ಅನರ್ಥ ಸಂಭವಿಸುವುದು ಸಾಧ್ಯವೇ ?' ಎಂದು ಪ್ರಶ್ನಿಸುವ ಬ್ಯಾನರ್ಜಿಯ ಪಾತ್ರದ ಮೂಲಕ ಲೇಖಕರು ಚಿತ್ರಿಸಿದ್ದಾರೆ. ಕೆಲವೇ ಕಡೆಯಲ್ಲಿ ಬಂದರೂ, ಬ್ಯಾನರ್ಜಿ ತನ್ನ ವಾಕ್‌ಚಾತುರ್ಯದಿಂದ ಓದುಗನ ಮನ ಸೆಳೆಯುತ್ತಾನೆ.

ಕೊನೆಯಲ್ಲಿ ಬರುವ ಪಂಡ- ನಾರಾಯಣಶರ್ಮರ ಪಾತ್ರ ಕಥೆಯ ಇನ್ನೊಂದು ಮುಖ. ಮೊದಲಿನಿಂದ ಜನರ ಪುಂಡಾಟಿಕೆಗೆ ರಾಜಕೀಯ ಕೈವಾಡವೇ ಕಾರಣವೆಂದು ಭಾವಿಸಿದ ಓದುಗನಿಗೆ, ನಾರಾಯಣಶರ್ಮರ,— 'ಕೆಲವೇ ದಿನಗಳ ಹಿಂದೆ ಊರ ಹತ್ತಿರದ ಪ್ರಸಿದ್ಧ ಕಾಮಾಖ್ಯಾ ಮಂದಿರದಲ್ಲಿ, ಹಣದ ಆಸೆಗೆ ಮಂದಿರದ ಕೆಲವು ಪಂಡರು ಯಾತ್ರಿಕರನ್ನು ಸುರಪಸ್ಥೆಗೆ ಈಡು ಮಾಡಿದ್ದ ಒಳ್ಳೇ ಮಾರ್ಮಿಕವಾದ ಹೇಳಿಕೆ ಮತ್ತು ದೇವಿಯ ಅವಕೃಪೆಯೆ ಇದೆಲ್ಲ ಅನಿಷ್ಟಕ್ಕೆ ಕಾರಣವಿರಬಹುದೆಂಬ ಅವರ ನಿಜಾತ, ಕೆಲಮಟ್ಟಿಗೆ ಸತ್ಯವೆನಿಸುವದು. ಕಾಮಾಖ್ಯಾ ಮಂದಿರದ ಪಂಡರಾದ ಅವರು, ದೇವಿಯ ದರ್ಶನಕ್ಕಾಗಿ ಬರುವ ಯಾತ್ರಿಕರಿಗೆ ಸಹಾಯಮಾಡುವದೆಂದರೆ, ಅದೊಂದು ಕರ್ತವ್ಯ, ದೇವಿಯ ಸೇವೆ– ಎಂದು ತಿಳಿದವರು ಮೊದಲು ಅವರದು ಮೂಢನಂಬಿಕೆ ಎನಿಸಿದರೂ, ಪ್ರಮೋದಕುಮಾರನ ಜನ, ಮನೆಯ ಮೇಲೆ ಕಲ್ಲು ಬೀಳುವದು, ಹೊರಗಿನ ಗದ್ದಲ ಮುಂತಾದವುಗಳಿಂದ ಭಯ ವಿಹ್ವಲರಾದಾಗ 'ಎಲ್ಲವೂ ದೇವಿಯ ಇಚ್ಛೆ, ಆಕೆಯನ್ನೇ ಸ್ತೋತ್ರ ಮಾಡಿರಿ, ಅವಳು ನಿಮ್ಮ ಕೈಬಿಡುವದಿಲ್ಲ.' ಎಂದು ಹೇಳುವಷ್ಟರಲ್ಲಿ, ದೇವರೆನ್ನುವಂತೆ ಬಂದ ನೆರಮನೆಯ ಸುಶೀಲದಾಸ ತನ್ನಲ್ಲಿ ಆಶ್ರಯ ಪೀಡುವದನ್ನು ನೋಡಿದರೆ, ಅವರ ಬಗ್ಗೆ ಗೌರವ ಉಂಟಾಗದೇ ಇರದು. ಹೀಗೆ ಲೇಖಕರು ಆದರ್ಶಜೀವಿಯಾದ ನಾರಾಯಣಶರ್ಮರ ಪಾತ್ರವನ್ನು ಒಳ್ಳೇ ಔಚಿತ್ಯಪೂರ್ಣವಾಗಿ ಚಿತ್ರಿಸಿದ್ದಾರೆ.

ಇತರ ಪಾತ್ರಗಳಾದ ಪ್ರಮೋದನ ಆಫೀಸಿನಮಿತ್ರರಾದ ಶರ್ಮಾ, ಪಿಳ್ಳೆ, ಛಿಡೆ ಇವರಲ್ಲಿ ತಮ್ಮ ಪ್ರಾಂತೀಯ ಅಭಿಮಾನ ಸುಳಿದರೆ, *Sr. Clerk*ನ ಪಾತ್ರದಲ್ಲಿ ನಿಜವಾದ ತಂದೆಯ ಅಂತಃಕರಣವಿದೆ. ಹೊರಗಿನ ಭಯಾನಕತೆಯ ಅರಿವಿಲ್ಲದೇ ತನ್ನ ಹುಟ್ಟುಹಬ್ಬದ ಸಂತಸದಲ್ಲಿ ಮುಳುಗಿದ ಮುದ್ದು ಕುಮುದಾ, ಮುಗ್ಧ ಸ್ವಭಾವದ ಚಿಕ್ಕ ಮಗುವಿನ ಪ್ರತೀಕ. ಪೇಪರು ಮಾರುವ ಹುಡುಗ, ಆಫೀಸು ಶಿಪಾಯಿ ಮುಂ. ಸನ್ನಿವೇಶಗಳಿಗೆ ತಕ್ಕಂತೆ ಚಿತ್ರಿತರಾಗಿದ್ದಾರೆ. ಕಡೆಯಲ್ಲಿ ಬರುವ ಸುಶೀಲದಾಸನ ಪಾತ್ರ ಎಳೆದುತಂದಂತೆ ಎನಿಸುತ್ತದೆ. ಆದರೂ ಪಾತ್ರಪರಿಪೋಷಣೆಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು.

ಮುಖ್ಯವಾಗಿ ಪ್ರಮೋದಕುಮಾರನ ಆಫೀಸಿನ ಚಿತ್ರ, ನಾರಾಯಣಶರ್ಮರ ಹೇಳಿಕೆಯ ಸನ್ನಿವೇಶಗಳು ಮಾರ್ಮಿಕವಾಗಿ ಮೂಡಿಬಂದಿವೆ. ಪ್ರತಿಯೊಂದರಲ್ಲಿ ವಾಸ್ತವತೆ ಮೂಡಿಬಂದಿದೆ. ಆದರೆ ಕಥೆಯ ಕೊನೆ, ದುರಂತದಲ್ಲಿ ಆಗಬಹುದೆಂದು ಎಣಿಸಿದ ಓದುಗನಿಗೆ ಸುಶೀಲದಾಸನ ಆಗಮನದಿಂದ ಸುಖಾಂತವಾಗಿ ಕೊನೆಗೊಳ್ಳುವಂತೆ ಮಾಡಿರುವದರಿಂದ, ಕೆಲಮಟ್ಟಿಗೆ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಆದರೆ ಎತ್ತರವಾದ ಗುಡ್ಡದ ಮೇಲಿಂದ ಒಮ್ಮೆಲೆ ಕೆಳಗೆ ನೂಕಿದಂತೆ ಎನಿಸದೇ ಇರದು. ಆದರೂ ಮೊದಲಿನಿಂದ ಆನಿಷ್ಟಘಟನೆಗಳಿಂದ ಪ್ರಕ್ಷುಬ್ಧಗೊಂಡ ಓದುಗನ ಮನಸ್ಸಿಗೆ, ಕೊಳ್ಳದಲ್ಲಿ ಹರಿಯುವ ನದಿ ಸಪಾಟಾದ ಪ್ರದೇಶದಲ್ಲಿ ಪ್ರವೇಶಿಸಿದಂತೆ ಅನಿಸುತ್ತದೆ.

ಶೈಲಿಯ ದೃಷ್ಟಿಯಿಂದಲೂ, ಕಥೆಯ ವೇಗ ಎಲ್ಲಿಯೂ ಕುಗ್ಗದೆ ನಿರರ್ಗಳವಾಗಿ ಹರಿಯುವದನ್ನು ಕಾಣುತ್ತೇವೆ ಪೇಪರು ಮಾರುವ ಹುಡುಗನ ಹೇಳಿಕೆ, ಬ್ಯಾನರ್ಜಿ ನಿವರಿಸುವ ಅಸಾಮಿಯಾ ಜನರ ಭಾಷಾತೀವ್ರತೆ, ಮುಂ. ಅನೇಕ ಸನ್ನಿವೇಶಗಳ ಶೈಲಿ ನೈಜತೆಯ ಅರಿವನ್ನು ಮಾಡಿಕೊಡುತ್ತದೆ. ನಾರಾಯಣಶರ್ಮರ ಹೇಳಿಕೆಯಲ್ಲಿ ಲೇಖಕರು ಕಥೆಯ ಪ್ರವಾಹ ಬದಲಿಸಿದಂತೆ ಎನಿಸಿದರೂ ಶೈಲಿಯಲ್ಲಿ ಅಗಾಧತೆಯನ್ನು ತೋರಿಸಿದ್ದಾರೆ.

ತಲೆಯ ಬರೆಹವು ಘಟನೆಗೆ ಸಂಬಂಧ ಪಟ್ಟಿರುವದರಿಂದ, ಯೋಗ್ಯವೇ ಎನಿಸಿದೆ. ಈ ರೀತಿ ಓದುಗರಿಗೆ ನಿಜವಾಗಿ ಅಮೃತ ಸೇವನವೆನಿಸುವ ವಾಸ್ತವಿಕ ಶೈಲಿಯ ಗತ್ತುಗಾರಿಕೆಯನ್ನು, ಈ ಮೊದಲೇ ಗುಂಡುಮಾಮಾನ ಗೋಷ್ಠಿ, ಕಾಮಾಖ್ಯಾ ಮಂದಿರ ದರ್ಶನದಲ್ಲಿ ತೋರಿಸಿದ ಲೇಖಕರ ಮುಂದಿನ ಲೇಖನಗಳಿಗೂ ಸದಾ ಸ್ವಾಗತ ಕಾದಿದೆ— ಎಂದು ಬೇರೆ ಹೇಳಬೇಕಾಗಿಲ್ಲ.

"ಪುಷ್ಯಮಾಸದ ರಾತ್ರಿ"

(ಕಥೆಯ ವಿಮರ್ಶೆ)

ಶ್ರೀ. ದಿವಸ್ಪತಿ ಹೆಗಡೆ, ಸಿದ್ದಾಪುರ

ದಿ. ಪ್ರೇಮಚಂದರಮ ಹಿಂದೀ ಸಾಹಿತ್ಯ ಪ್ರಸಂಚವಲ್ಲಿ ಶಾಶ್ವತವಾದ ಸ್ಥಾನ ಪ್ರೇಮಚಂದರು ಮಾನವನ ಅಂತರಂಗವನ್ನು ಸೂಕ್ಷ್ಮವಾಗಿ ನಯವಾಗಿ ಚಿತ್ರಿಸುವದರಲ್ಲಿ ಸಮರ್ಥರು. ಅವರ ಸಮರ್ಥ ಲೇಖನಿಯಿಂದ ಬಂದ ಸುಂದರ ಕತೆಯೊಂದನ್ನು ಶ್ರೀ. ಕೆ. ಕೆ. ಕುಲಕರ್ಣಿಯವರು 'ಪುಷ್ಯಮಾಸದ ರಾತ್ರಿ' ಎಂದು ಕನ್ನಡ ಓದುಗರಿಗಿತ್ತಿದ್ದಾರೆ.

ಹಲ್ಕಾ ಬಡ ಒಕ್ಕಲಿಗ— ಮುನ್ಸಿ ಅವನಿಗನುವರ್ತಿನಿಯಾದ ಪತ್ನಿ. ಜಬರಾ ಅವನು ಸಾಕಿದ ಅವರ ಅಕ್ಕರೆಯ ನಾಯಿ. ಇನ್ನೊಬ್ಬ ಸಹನಾ (ಸಾಲಕೊಟ್ಟವ), ಎಮರು ಕತೆಯಲ್ಲಿ ಬರದಿದ್ದರೂ ಕತೆಯ ಮೂಲೋದ್ದೇಶಕ್ಕೆ ಕಾರಣನಾದ ವ್ಯಕ್ತಿ.

ಚಳಿಗಾಲಕ್ಕೆ ಕಂಬಳಿಕೊಳ್ಳಲೆಂದು ಕೂಲಿಯ ಹಣವಲ್ಲಿ ಪೈ-ಪೈ ಕೂಡಿಸಿ ಆದ ಮೂರು ರೂಪಾಯಿಗಳನ್ನು ಹಲ್ಲಾ ಹೆಂಡತಿಯಿಂದ ಬೇಡಿ ತಂದು ಸಹನಾನ ಸಾಲ ತೀರಿಸುತ್ತಾನೆ.

ಚಳಿಗಾಲದ (ಪುಷ್ಯಮಾಸದ) ರಾತ್ರಿಯಲ್ಲಿ ಹಲ್ಲಾ ಗದ್ದೆ-ಯಂಚಿನಲ್ಲಿ ನಡುಗುತ್ತ ಮಲಗಿದ್ದಾನೆ. ಪಕ್ಕದಲ್ಲಿದ್ದಾನೆ. ಅವನ ಸಂಬಿಗೆಯ ಬಂಟ ಜಬರಾ–ನಾಯಿ. ಭೀಕರವಾದ ಚಳಿ! ಚಿಲುಮೆ ಸೇದಿ ಸೇದಿ ಚಳಿಯನ್ನು ಹೊರದೂಡಲಾರದೆ ಹಲ್ಲಾ, ಪಕ್ಕದ ತೋಟಕ್ಕೆ ಹೋಗಿ ಒಣಗಿದೆಲೆ ತೀರಿಸಿ ಬೆಂಕಿಮಾಡಿ ಮೈ ಬೆಚ್ಚಗೆ ಮಾಡಿಕೊಂಡು ಮಲಗುತ್ತಾನೆ. ನಾಯಿಯ ಕೂಗುವಿಕೆ, ಗದ್ದೆಯಲ್ಲಿ ನಡೆಯುತ್ತಿರುವ ಗದ್ದಲ— ಎಲ್ಲವೂ ಚಳಿಯಿಂದುಂಟಾದ ಆಲಸ್ಯದ ಹಿನ್ನೆಲೆಯಲ್ಲಿ ಅಡಗಿ ಹೋಗುತ್ತವೆ. ಹೃದಯದ ನೋವನ್ನು ಹತ್ತಿಕ್ಕಿ ಶಾಂತನಾಗಿ ನಿದ್ರಿಸಿಬಿಡುತ್ತಾನೆ ಹಲ್ಲಾ. ಮುಂಜಾನೆ ಎದ್ದಾಗ ಬಿಸಿಲು ಬಂದಿತ್ತು. ಹೊಲ ಹಾಳಾದ್ದನ್ನು ಕಣ್ಣಾರೆ ಕಂಡುಬಂದ ಮುನ್ಸಿ ರೇಗುತ್ತಾಳೆ. ಚಿಂತೆಯಿಂದ "ಇನ್ನು ಕೂಲಿಯಿಂದ ಲಾವಣಿ ಹಣ ಭರತಿ ಮಾಡಬೇಕು" ಎನ್ನುತ್ತಾಳೆ. "ಹೌದು ರಾತ್ರಿಯ ಇಂಥ ಚಳಿಯಲ್ಲಿ ಮಲಗುವ ಪ್ರಸಂಗ ಆಗ ಬರಲಾರದು" ಎಂದು ಹಲ್ಲಾ ಶಾಂತಮುದ್ರೆಯಿಂದ ಉತ್ತರಿಸುತ್ತಾನೆ— ಕತೆ ಮುಗಿಯುತ್ತದೆ.

ಕತೆಯಲ್ಲಿ ಎದುರು ಬರುವ ಪಾತ್ರಗಳು ಎರಡು–ಮುನ್ಸಿ–ಹಲ್ಲಾ; ಆದರೆ ಗದ್ದೆಯಲ್ಲಿ ಹಲ್ಲಾ ಜಬರಾನೊಂದಿಗೆ ಮಾಡಿದ ಸಂಭಾಷಣೆ ಹಲ್ಲಾನ ಹೃದಯವನ್ನು ತೆರೆದು ತೋರಿಸುತ್ತದೆ. ಜಬರಾನೂ ಒಂದು ಪಾತ್ರ—ಎಂದು ಹಿಡಿದರೆ ತಪ್ಪಾಗಲಿಕ್ಕಿಲ್ಲ.

ಸಂಭಾಷಣೆಯೇ ಕತೆಯ ಜೀವಾಳ ಪ್ರತಿ ಮಾತಿನಲ್ಲಿಯೂ ಅತಿ ಸೂಕ್ಷ್ಮವಾದ ಮಾನಸಿಕ ವಿಶ್ಲೇಷಣೆಯಿದೆ.

'ಸಾಲ ತೀರಿಸಬೇಕಾಗಿದೆ. ನೀನು ಇಟ್ಟ ಹಣ ಕೊಡು' ಎಂದು ಹಲ್ಲಾ ಹೆಂಡತಿಯನ್ನು ಕೇಳುತ್ತಾನೆ.

ಕಸಗುಡಿಸುತ್ತಿದ್ದ ಮುನ್ಸಿ 'ಚಳಿಗಾಲದಲ್ಲಿ ಕಂಬಳಿಗೆಂದು ಕೂಡಿಟ್ಟ ಮೂರೇ ಮೂರು ರೂಪಾಯಿ ಹೇಗೆ ಕೊಡುವದು?' ಮುನ್ಸಿಗೆ ಕೊಡುವೆನೆಂದು ಹೇಳು' ಎನ್ನುತ್ತಾಳೆ. ಹಲ್ಲಾ ಸಹನಾ ಹಣ ಕೇಳುವ ರೀತಿಯನ್ನು ನೆನೆದುಕೊಳ್ಳುತ್ತಾನೆ. ಅವನು ಬೆದರಿಸುತ್ತಾನೆ; ಬೈಯುತ್ತಾನೆ ಛೀ! ಈ ದೈನ್ಯಜೀವನಕ್ಕಿಂತ ಛಳಿಯೇ ಲೇಸೆಂದೆನಿಸುತ್ತದೆ ಅವನಿಗೆ. ಸತ್ತರೂ ಚಿಂತೆಯಿಲ್ಲ ಎಂದುಕೊಂಡೇ "ಸಾಲದಿಂದ ಮುಕ್ತನಾಗುವೆ; ಕಂಬಳಿಗೆ ಬೇರೆ ಉಪಾಯ ಯೋಚಿಸುವೆ" ಎನ್ನುತ್ತಾನೆ ಹೆಂಡತಿಗೆ. ಮುನ್ಸಿಗೆ ಗೊತ್ತು ಬೇರೆ ಉಪಾಯವೂ ಇಲ್ಲವೆಂಬುದು. ಈ ಮಾತಿನಿಂದಲೂ ಅಸಫಲವಾದ ಹಲ್ಲಾ ಕೊನೆಯದಾಗಿ "ಹಾಗಾದರೆ ನಾನು ಬೈಸಿಕೊಳ್ಳಲಾ?" ಕೊನೆಗೆ ಈ ಮಾತನ್ನು ಆಡುವಲ್ಲಿ ಹಲ್ಲಾ ತನಗಾದ ನೋವನ್ನು ಮುಚ್ಚಿಟ್ಟುಕೊಂಡು, ಕೊನೆಯಲ್ಲಿ ಗತಿಯಿಲ್ಲದೆ ಹೆಂಡತಿಗೆ ಈ ಮಾತನ್ನು ಹೇಳುತ್ತಾನೆ, ಎಂಬ ಅರಿವಾಗುತ್ತದೆ ನಮಗೆ. ಆಲ್ಲಿ ಹಲ್ಲಾ ದೈನ್ಯದ ಮುದ್ದೆಯಾಗಿದ್ದಾನೆ. ಅವನ ಆ ನುಡಿ ಮುನ್ಸಿಯ ಹೃದಯವನ್ನು ಕಲಕುತ್ತದೆ. ತಳಮಳಿಸುತ್ತಾಳೆ "ಬಯ್ಯುವನೇಕೆ? ಅವನದೇನು ರಾಜ್ಯವು?" ಎನ್ನುತ್ತಲೇ ಹಣ ಕೊಡುತ್ತಾಳೆ. ಈ ಒಂದು ಭಾಗದಲ್ಲಿ ಆದೆಷ್ಟು ಸೂಕ್ಷ್ಮವಾದ ಮಾನಸಿಕ ವಿಶ್ಲೇಷಣೆಯಿದೆ! ಪವಿತ್ರ ಪ್ರೇಮಾಭಿಮಾನದ ದಾಂಪತ್ಯದ ಚಿತ್ರಣ ಅತಿ ಸೂಕ್ಷ್ಮವಾಗಿ, ನಯವಾಗಿ ಅಷ್ಟೇ ಪವಿತ್ರವಾಗಿ ಚಿತ್ರಿಸಲ್ಪಟ್ಟಿದೆ— ಇದೇ ಪ್ರೇಮಚಂದರ ಲೇಖನಿಯ ಮೇಲ್ಮೈ.

ಚಳಿಯಲ್ಲಿ ನಡುಗುತ್ತ ಗದ್ದೆಯಲ್ಲಿ ಮಲಗಿದ ಹಲ್ಲಾ, ಜಬರಾನೊಂದಿಗೆ ಆಡುವ ಮಾತು ಅವನ ಹೃದಯವನ್ನು ತೆರೆದು ತೋರಿಸುತ್ತದೆ. ಚಳಿಯು ಸುಳಿವಿಲ್ಲದಂತೆ ಬೆಚ್ಚಗೆ ಮಲಗಿದ ಸವಿಪಂತರನ್ನು ನೆನೆಯುತ್ತಾನೆ ಹಲ್ಲಾ. 'ನಾವು ದುಡಿಯುವವರು; ಇನ್ನೊಬ್ಬರು ಆದರ ಲಾಭ ಹೊಡೆಯುವವರು' ಎಂದುಕೊಳ್ಳುತ್ತಾನೆ. ಅದನ್ನು ನೆನೆಯುತ್ತಲೇ ತಾನಾಗಿ ಎಳೆದು ಜಬರಾನನ್ನು ಅಪ್ಪಿಕೊಳ್ಳುತ್ತಾನೆ. ಲೇಖಕನ ಶಬ್ದದಲ್ಲಿ ಜಬರಾನನ್ನು ಅಭಿನ್ನಮಿತ್ರ ಅಥವಾ ಬಂಧುವಿನಂತೆ ಕಾಣುತ್ತಾನೆ. ಈ ಅಸಾಧಾರಣ ವೈತ್ರಿಯಿಂದ ಅವನ ಹೃದಯದ ಎಲ್ಲ ದ್ವಾರಗಳು ತೆರೆದಿರುವಂತೆ ಅವನಿಗೆ ಎನಿಸುತ್ತಿತ್ತು. ಆವರ ಒಂದೊಂದು ಅಣುವೂ ಪ್ರಕಾಶದಿಂದ ಹೊಳೆಯುತ್ತಿರುವಂತೆ ಕಾಣುತ್ತಿತ್ತು; ಹಲ್ಲಾನ ಹೃದಯದ ಪವಿತ್ರತೆ ಅವನ ಸಾತ್ವಿಕತೆ ಪ್ರತಿನುಡಿಯಲ್ಲಿ ಪ್ರತಿ ಕಣದಲ್ಲಿ ವ್ಯಕ್ತವಾಗಿದೆ ನಾಯಿಯು ಜೊತೆ ಕೆಟ್ಟಿನ ನೋಲಿನಿಂದ ಏಜೆ ಹಾರುವಾಗ 'ಮಗನೆ ಸುಟ್ಟುಕೊಂಡರೆ ನಾನೇನು ಔಷಧಿ ಮಾಡಲಿಕ್ಕಿಲ್ಲ— ಮುನ್ಸಿಗೆ ಹೇಳಿಗೀಳಿ ಮತ್ತೆ! ಅವಳು ಜಗಳಕ್ಕೆ ಬಂದಾಳು' ಎಂದು ನುಡಿಯುವಾಗ, ಅವನ ಹೃದಯದಲ್ಲಿ ಪತ್ನಿಯ ಬಗೆಗಿದ್ದ ಮಧುರತೆಯು— ಪ್ರೇಮದ ಅರಿವಾಗುವದು.

ಮಲಗುವ ತಯಾರಿಯಲ್ಲಿರುವಾಗ ನಾಯಿಯ ಜೊಗಳುವಿಕೆ, ಗದ್ದೆಯಲ್ಲಿ ಆಗುವ ಸಪ್ಪಳ ಇವುಗಳನ್ನು ಕೇಳಿ, ಹೊಲ ಹಾಳಾಗುತ್ತಿರುವ ಕಲ್ಪನೆಯಿಂದ ಏಳುತ್ತಾನೆ. ಚಳಿ ಮುಂದೆ ಹೋಗಗೊಡುವದಿಲ್ಲ. ಹಿಂದೆ ಬಂದು ಬಿಸಿ ಬೂದಿಯ ಬಳಿಯಲ್ಲಿ ಕುಳಿತು ಕೆಲಸಿಮಿಷದಲ್ಲಿ ಶಾಂತಮುದ್ರೆ ತಳೆದು ನಿದ್ರಿಸಿ ಬಿಡುತ್ತಾನೆ! ಮುಂಜಾನೆ ಮುನ್ಸಿಯ ಬಾಯಿಂದ ಹೊಲನೆಲ್ಲ ನಾಶವಾದ ವಿಷಯ ಕೇಳಿಯೂ ಶಾಂತನಾಗಿರುತ್ತಾನೆ. 'ತನ್ನ ಹೊಟ್ಟೆಯಲ್ಲಿಯೂ ನೋವಾಗಿತ್ತು' ಎಂದು ಮುನ್ಸಿಗೆ ನುಡಿಯುತ್ತಾನೆ.

'ಇನ್ನು ಮುಂದೆ ಕೂಲಿಯಿಂದ ಲಾವಣಿಯ ಹಣ ಭರತಿಮಾಡಬೇಕಾಗುವದು' ಎಂದು ಮುನ್ಸಿ ನುಡಿದಾಗಲೂ "ಹೌದು, ರಾತ್ರಿಯ ಇಂಥ ಚಳಿಯಲ್ಲಿ ಮಲಗುವ ಪ್ರಸಂಗ ಆಗ ಬರಲಾರದು" ಎಂದು ಶಾಂತನಾಗಿಯೇ ಉತ್ತರಿಸುತ್ತಾನೆ. ಅವನ ಈ ಶಾಂತತೆಯ ಹಿನ್ನೆಲೆಯಲ್ಲಡಗಿದ ಸತ್ಯವಾವುದು? ಅವನ ನಿಷ್ಠ ಕರ್ತವ್ಯಕ್ಕೆ ಸಿಕ್ಕ ಕಹಿಫಲ ಅವನ ಹೃದಯದ ಸೂಕ್ಷ್ಮ ಸಂವೇದನಶೀಲ ಭಾಗ ಕೆಲವನ್ನು

ನಿರ್ಜೀವವಾಗಿ ಮಾಡಿತ್ತು. ಭಾವುಕ ನಿರ್ಮಲ ಹೃದಯವ್ಯೊಬ್ಬನ ಶ್ರಮಕ್ಕೆ ಸಮಾಜ ಅರಿತೋ ಅಜ್ಞಾನದಿಂದಲೋ ಕೊಡುವ ಒಂದೊಂದು ಪೆಟ್ಟೂ ಅವನ ಹೃದಯದಲ್ಲಿ ಹುದುಗಿದ ಕೋಮಲ ಭಾವನೆಯ ಕೆಲವಂಶವನ್ನು ನಿರ್ಜೀವವಾಗಿ ಮಾಡುತ್ತದೆ. ಹಾಗಾಗಲೇಬೇಕು. ಅದಿಲ್ಲವಾದರೆ ನೂರು ವೇದನಾ ತರಂಗಗಳು—ಹೃದಯದ ಶಕ್ತಿಯಾರಿ— ವ್ಯಕ್ತಿಯನ್ನು ಹುಚ್ಚನನ್ನಾಗಿ ಮಾಡುತ್ತವೆ.

ನಿಜಜೀವನದಲ್ಲಿ ಇಂಥ ಘಟನೆ ಹಲವಾರು ನಡೆಯುತ್ತಿರುತ್ತವೆ. ಎಲ್ಲಿಯಾದರೂ ಕೇಳಿದರೆ "ಅಲಸಿ! ಮಲಗಿಕೊಂಡು ಹೊಲವನ್ನೆಲ್ಲ ಹಾಳು ಮಾಡಿಕೊಂಡ" ಎಂದುಬಿಡುತ್ತೇವೆ. ಅದರ ಹಿಂದಿನ ಕಾರಣ— ಕಂಬಳಿಯೆಂದು ಜನ ಹೇಳುತ್ತಾರೆ; ಕೇಳಿ ನಕ್ಕು ಬಿಡುತ್ತೇನೆ. ಆದರೆ ಭಾವುಕನಾದ ರಸಋಷಿ ಅದಕ್ಕೂ ಒಳಗಿನದನ್ನು ಕಾಣುತ್ತಾನೆ. ಸಮಾಜದಲ್ಲಿ ಹಬ್ಬಿರುವ ಒಡೆಯ-ಒಕ್ಕಲು ಹಾಗೂ ಬಡತನಗಳೇ ಇದರ ಹಿನ್ನೆಲೆಯೆಂದು ಅರಿಯುತ್ತಾನೆ. ನಿಜವಾಗಿ ಪ್ರಸ್ತುತ ಕತೆಯ ಘಟನೆ ಸಾಮಾನ್ಯವಾದುದು. ಆದರೆ ಸೂಕ್ಷ್ಮ ಸಂವೇದನಾಶಕ್ತಿ ಸಡೆವ ಕತೆಗಾರರು ಸುಂದರವಾದ ಪಾತ್ರ ನಿರೂಪಣೆಯ ಮೂಲಕ ರಾಷ್ಟ್ರೀಯವಾದ ಒಂದು ಸಮಸ್ಯೆಯತ್ತ ನಮ್ಮ ಹೃದಯವನ್ನು ನಿಡಿಸುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಇಂತಹ ನಿರೂಪಣೆಯನ್ನು ಪಡೆದ ಕತೆಗಳು ಇಲ್ಲವೇ ಇಲ್ಲವೆಂದು ಹೇಳುವುದು ತಪ್ಪಾಗುವದಾದರೂ, ಸಂಖ್ಯೆಯಲ್ಲಿ ತೀರ ಕಡಿಮೆ ಇವೆಯೆಂದು ಹೇಳಬೇಕಾಗುವದು. ಸ್ವತಂತ್ರವಾಗಿ ಅಲ್ಲದಿದ್ದರೂ ಅನುವಾದಿತವಾದ ಇಂತಹ ಕತೆಗಳು ಕನ್ನಡದಲ್ಲಿ ಹೆಚ್ಚು ಬೆಳಕಿಗೆ ಬಂದು, ಸ್ವತಂತ್ರ ನಿರ್ಮಾಣಕ್ಕೆ ಚಾಲನೆ ಕೊಡಲಿ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಲೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಸಾರಾಟ ಮಾಡುವವರು.

ಸಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ್ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದಿಂದಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಷ ಕೋರ್ಸ್, ಧಾರವಾಡ

ಜೀವನ ವಿಕಾಸ

ಶ್ರೀ. ವೀರೇಶ್ವರ, ಸಿಗ್ಗಾಂವ

ಒಲವಿನೊರತೆಗಳೆರಡು ಹೊಸಲಾಗಿ ಹರಿಯುತಿರೆ
ಒಂದೊಂದನೊಂದು ಸಲೆ ಮೆಚ್ಚಿ ಹಿಗ್ಗುವವು;
'ಅಹ! ನಮ್ಮ ಸಂಗಮವು ಸುಖದ ಬೀಡಾಗುವುದು'
ಎಂದೆರಡರೊಳು ಒಂದೆ ನುಡಿಯು ನುಡಿಯುವುದು.

ಮಿಡಿತದಿಂ ಜೀವಂಗಳಲ್ಲಿ ಸಣ್ಣಾಗುತಿರೆ
ಆಶೆಯೆಂತೋ ದಿನದಿ ದಿನಕೆ ಬೆಳೆಯುವುದು;
ಆದರಾವುದೊ ಭೀತಿ, ಸಂಕೋಚಗಳ ಸಂಚು
ಆಶೆಯನು ಒತ್ತಿಡಿದು ಗೋಳಾಡಿಸುವುದು.

ಅಸಹನೀಯದ ಗೋಳು ಬಿಡಿಸುವುದು ಭೀತಿಯನು,
ಸಂಕೋಚ ಬಯಕೆಯೊಲೆಯೊಳಗೆ ಕರಗುವುದು;
ಒಲವಿನೊರತೆಗಳೆರಡು ಕಣ್ಮುಚ್ಚಿ ಧಾವಿಸುತ
ಸಂಗಮಿಸೆ ಸುಖದ ಧ್ವಜವೇರಿ ನಿಲ್ಲುವುದು.

ಇಂತೆರಡೊಲವು ಸುವಿಸುತಿರಲು ಅನಿರೀಕ್ಷಿತದಿ
ದುಃಖವೂ ಆಗಮಿಸಿ ಸೆಣಸತೊಡಗುವುದು;
ಸೆಣಸಾಟದಿಂ ಸಹನೆಯುದಿಸಿ ನಗಿಸುವುದಾಗ
'ಲಾಲಿ ಜೋ ಜೋ' ಎನುತ ಬಾಳು ತರಳುವುದು.

ಸಾದರ ಸ್ವೀಕಾರ

೨೨. ಬೆಂಬತ್ತಿದ ಕಣ್ಣು (ಐದು ವಿಕಾಂಕಗಳು) ಬರೆದವರು ಶ್ರೀ. ಚಂದ್ರಶೇಖರ ಕಂಬಾರ; ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೧೧೦ ಪುಟಗಳು. ಬೆಲೆ ೧-೫೦.

೨೨. ಆನಂದಕಂದ (ವ್ಯಕ್ತಿ ಮತ್ತು ಕೃತಿಪರಿಚಯ) ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಸುಪ್ರಸಿದ್ಧ ಲೇಖಕರು ಬರೆದಿದ್ದಾರೆ. ಧಾರವಾಡದ ನಿಂಬಿನಬಳ್ಳಿಯವರ ಪ್ರಕಾಶನ. ಕ್ರೌ. ಅ. ೧೦೪ ಪುಟಗಳು. ಬೆಲೆ ೧-೫೦.

೨೪. ಅಡಳಿತ ಭಾಷಾ ಸಂಬಂಧವಾದ ಸಮಿತಿಯ ವರದಿ. (ಮೂಲ ಇಂಗ್ಲಿಷ್ ವರದಿಯ ಕನ್ನಡಾನುವಾದ) ಭಾರತ ಸರಕಾರದ ಪ್ರಕಟನಾ ಶಾಖೆ, ನ್ಯೂದಿಲ್ಲಿ— ಅವರು ಪ್ರಕಟಿಸಿದ್ದಾರೆ. ರಾಯಲ್ ೫. ೧೪೦ ಪುಟಗಳು.

೨೯. ಶತಶ್ಲೋಕೀ (ವೈದ್ಯಕ ಗ್ರಂಥ) ಮೂಲ ಸಂಸ್ಕೃತ ಗ್ರಂಥವನ್ನು, ವೈದ್ಯ ಬುಲ್ಲಿ ಮಧ್ವಾಚಾರ್ಯರು ಸಂಪಾದಿಸಿ ಕನ್ನಡದಲ್ಲಿ ಅರ್ಥ ಬರೆದಿರುವರು. ಪ್ರಕಾಶಕರು ಆಯುರ್ವೇದ ಸೇವಾ ಕುಟೀರ ಪ್ರಕಾಶನ, ಬಾಗಿಲಕೋಟೆ. ಕ್ರೌ. ಅ. ೬೬ ಪುಟಗಳು. ಬೆಲೆ ೧-೫೦.

೩೦. ಪಂಚಾಯತೀ ರಾಜ್ಯ (ಮಾಸಪತ್ರಿಕೆಯ ಡಿಸೆಂಬರ್ ವಿಶೇಷ ಸಂಚಿಕೆ. ಕನ್ನಡ ಇಂಗ್ಲಿಷ್). ಸಂಪಾದಕರು ಶ್ರೀ. ಕೆ ಸಿ. ಚೌಡಪ್ಪರಡ್ಡಿ, ಬಿ. ಎ. ಅವರು; ಸಹಸಂಪಾದಕರು ಶ್ರೀ. ಬಿ. ವಿ. ವೆಂಕಟಾಚಲಪತಿಯವರು. ಪ್ರಕಾಶಕರು ಮೈಸೂರು ಸರಕಾರದ ಪ್ರಕಾರನ ಶಾಖೆಯ ಡೈರೆಕ್ಟರರು, ಬೆಂಗಳೂರು ಕ್ರೌ. ೧೧೦ ಪುಟಗಳು ಕನ್ನಡಕ್ಕೆ, ೩೮ ಪುಟಗಳು ಇಂಗ್ಲಿಷಿಗೆ ಮೀಸಲಾಗಿವೆ.

೩೧. ಆಕಸ್ಮಿಕ ಧನಯೋಗ (ಭವಿಷ್ಯ ವಿಷಯಕ ಪುಸ್ತಕ) ಲೇಖಕರು ಶ್ರೀಮಾನ್ ಎನ್. ಕೆ. ಜೋಗಳೇಕರ, ಧಾರವಾಡ. ಪ್ರಕಾರಕರು ಜ್ಯೋತಿಷ್ಯ ಕಾರ್ಯಾಲಯ, ಧಾರವಾಡ. ಕ್ರೌ. ೫. ೮೮ ಪುಟಗಳು. ಬೆಲೆ ೧-೫೦.

೩೨. ಚಿದಂಬರ ಲೀಲಾಮೃತ (ಪದ್ಯಮಯ ಚರಿತ್ರ). ಬರೆದವರು 'ಚಿದಂಬರ'. ಪ್ರಕಾಶಕರು ಶ್ರೀಮಾನ್ ಚಿದಂಬರ ಯಜ್ಞೇಶ್ವರ ದೀಕ್ಷಿತ, ೩೪೪-೪೮ ಪುಲಬಾಗಗಲ್ಲಿ, ಬೆಳಗಾಂವ. ಕ್ರೌ. ಅ. ೪೧೬ ಪುಟಗಳು. ಬೆಲೆ ೪-೦೦. (ಭಾಮಿನೀಷಟ್ಪದಿಯಲ್ಲಿ ರಚಿತವಾದ ಗ್ರಂಥ).

೩೩. ಸುದರ್ಶನ (ಪಕ್ಷ ಪತ್ರಿಕೆಯ ಸಾಹಿತ್ಯ ಸಮ್ಮೇಳನದ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಬನ್ನಂಜೆ ರಾಮಾಚಾರ್ಯರು ಮತ್ತು ಶ್ರೀ. ಬನ್ನಂಜೆ ಗೋವಿಂದಾಚಾರ್ಯರು. 'ಸುದರ್ಶನ ಕಾರ್ಯಾಲಯ, ಉಡಿಪಿ. ಕ್ರೌ. ೧೧೮ ಪುಟಗಳು. ಬೆಲೆ ೦೦-೫೫

ಬೇರೆ ಬೇರೆ ಲೇಖಕರು ಬರೆದ ಲಲಿತ ಲೇಖನಗಳೂ ಸಾಹಿ ವಿಷಯಕವಾದ ಲೇಖನಗಳೂ ಇದರಲ್ಲಿವೆ.

೩೪. ಧನ್ವಂತರಿ (ಆಯುರ್ವೇದ ವಿಷಯಕ ಮಾಸಪತ್ರಿಕೆ ಆತ್ರೇಯ ಜಯಂತಿ— ವಿಶೇಷ ಸಂಚಿಕೆ. ಪ್ರಧಾನ ಸಂಪಾದಕ ಶ್ರೀಮಾನ್ ಆದ್ಯ ಅನಂತಾಚಾರ್ಯರು. ಕಾರ್ಯಕಾರಿ ಸಂಪಾದಕ ಶ್ರೀಮಾನ್ ಬಿಂದುಮಾಧವ ಒಡೆಯರ 'ಆಯುರ್ವೇದ ತೀರ್ಥ ಅವರು. ಪ್ರಕಾಶಕರು ಧನ್ವಂತರಿ ಕಾರ್ಯಾಲಯ, ವಿಜಾಪು ಡೆ. ೧೧೮ ಪುಟಗಳು. ಬೆಲೆ ೫೦ ನಯೇ ಪೈಸೆ.

ಇದರಲ್ಲಿಯ ಶ್ರೀಮಾನ್ ಆದ್ಯ ಅನಂತಾಚಾರ್ಯರ ವ್ಯಕ್ತಿ ಪರಿಚಯವು ವಾಚನೀಯವಾಗಿದೆ.

೩೫. ಭೀಷ್ಮದರ್ಶನ (ಪೌರಾಣಿಕ ಮಹಾವ್ಯಕ್ತಿ ಚರಿತ್ರೆ ಬರೆದವರು ಶ್ರೀಮಾನ್ ರಂಗರಾವ ಸ್ವಾಮಿರಾವ ದೇಶಪಾಂಡೆ— ಆಲದಕಟ್ಟೆ. ಪ್ರಕಾಶಕರು ಗೀತಾ ಸಾಹಿತ್ಯಮಂದಿರ, ೩೬೪ ವಿ.ವಿ ಮೋಹಲ್ಲಾ, ಮೈಸೂರು—೩. ಕ್ರೌ. ಅ. ೩೪+೨೩೮ ಪುಟಗಳು.

೩೬. ಪ್ರಕಾಶ (ವಾರಪತ್ರಿಕೆಯ ಪ್ರಜಾರಾಜ್ಯ ವಿಶೇಷ ಸಂಚಿಕೆ). ಸಂಪಾದಕರು ಸರ್ವಶ್ರೀ. ಎ. ಜನಾರ್ದನ ಆಲ್ಸೀ, ಬನ್ನಂ ರಾಮಾಚಾರ್ಯರು ಮತ್ತು ಪಾಡಿಗುರು ಶೀನಪ್ಪಯ್ಯ ಅವರು. ಪ್ರಕಾ ಕಾರ್ಯಾಲಯ, ಉಡಿಪಿ. ಕ್ರೌ.ಫೋ. ೫೮ ಪುಟಗಳು. ಬೆಲೆ ೦೦-೪೮

ಅಂತರಂಗದಲ್ಲಿಯೂ ಬಾಹ್ಯಾಂಗದಲ್ಲಿಯೂ ಮನಸ್ಸನ್ನು ಹಿಡಿ ಯುವಂತಹ ಸಂಚಿಕೆ. ಎಲ್ಲರೂ ಓದಬೇಕು.

ಕಳ್ಳರ ಗುರು

ಮತ್ತು ಬೇರೆ ಕಥೆಗಳು

'ಆನಂದಕಂದ'ರ

ಹೊಸ ಕಥಾಸಂಕಲನ ಅಚ್ಚಿನಲ್ಲಿದ್ದು

— ಬೇಗನೆ ಪ್ರಕಟವಾಗಲಿದೆ —

'ಜಯಂತಿ' ಕಾರ್ಯಾಲಯ, ಧಾರವಾಡ.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ–ಬಂಧನಗಳ ಬಿಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇನೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರಾ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮುಂದಿರುವ ಬೇರೆ ಪ್ರಕಟನೆಗಳು

ಮುಗಿಲ ಮುದುಡಿ
(ಸಾಮಾಜಿಕ ಕಾದಂಬರಿ)
ಕ್ರಾ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೧.೨೫

ನಲ್ ಪಾಡುಗಳು
(ಪ್ರೇಮ ಗೀತ ಸಂಕಲನ)
ಕ್ರಾ. ಅ. ೭೨ ಪುಟ ● **ಬೆಲೆ : ೧.೨೫**

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

ಜಯಂತಿ

ಜಯಂತಿಗೆ ಚಂದಾದಾರರಾಗಿರಿ!

ಜಯಂತಿಯಂತಹ ಸದಭಿರುಚಿ-ಸಂಸ್ಕೃತಿ ಪ್ರಚಾರಕ ಮಾಸಪತ್ರಿಕೆಯನ್ನು, ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

* * * * *

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ವಿದ್ಯಾಶಾಲೆಯೂ ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ—ಕನ್ನಡ ಪ್ರದೇಶವನ್ನು ಒಳಗೊಂಡ—ಎಲ್ಲ ರಾಜ್ಯ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರ ಸರಕಾರದ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್

ಅವರ

No. F. Dis. G. L. 4250-48/49. D. 3rd Aug 1948 ರ

ಪ್ರಕಾರ

ಜಯಂತಿಯನ್ನು ರಾಜ್ಯದಲ್ಲಿಯ
ಎಲ್ಲ ಹೈಸ್ಕೂಲ್, ಮಿಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್‌ಗಳಿಗೆ
ತರಿಸಿಕೊಳ್ಳಬಹುದೆಂಬ ಮನ್ನಣೆಯ ಒಪ್ಪಿಗೆ ದೊರೆತಿದೆ.

ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯದಲ್ಲಿ
ಇರಿಸಿಕೊಂಡು, ತಮ್ಮ ತಮ್ಮ ಶಾಲೆಯ ವಾಚನಾಲಯಗಳಿಗೆ
ಜಯಂತಿಯನ್ನು ತರಿಸಿಕೊಳ್ಳ ಬೇಕು.

ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯನ್ನು ಬೆಳೆಸಿ,
ಅವರನ್ನು ನಾಗರಿಕರನ್ನಾಗಿ ಮಾಡಬಲ್ಲ ಮಾಸಪತ್ರಿಕೆ—'ಜಯಂತಿ.'

ಸಂಪುಟ ೨೩ | ಮಾರ್ಚ್ ೧೯೬೧ | ಸಂಚಿಕೆ ೯

JAYANTI

ಈ ಸಂಚಿಕೆಯಲ್ಲಿ

ಕಾಂಗೋದಲ್ಲಿ ಬೀಸಿದ ಬಿರುಗಾಳಿ (ಸಂಪಾದಕೀಯ)
ಸಂಪಾದಕರು ೨೮೯

ನಾಡನಡೆ (ಸ್ವಾಸಂಗಿಕ ಟಪ್ಪಣಿಗಳು)
'ಕಾಲಭೈರವ' ೨೯೧

ನನ್ನ ಊರು (ಕವಿತೆ)
ಶ್ರೀ. ಶಾಂತ ಪಾಟೀಲ, ಸದಲಗೆ ೨೯೨

ಪಾಪ ಮತ್ತು ಪಾಪಿ (ಸಣ್ಣಕತೆ)
ಲೇ : 'ಕಿಟ್ಟಣ್ಣ' ಮುಂಬಯಿ ೨೯೩

ನೋವಿಗೆ ಚಿಕಿತ್ಸೆ (ದೇಹಸ್ವಾಸ್ಥ್ಯ ವಿಚಾರ)
ಶ್ರೀ. ರ. ಜ. ಅಗ್ನಿಹೋತ್ರಿ, ಬೆಂಗಳೂರು ೨೯೮

ಭಾರತಿ ಬಹುಭಾಷಿಣಿ (ಕವಿತೆ)
'ಆನಂದಕಂದ' ೩೦೦

ಕುಂಜ (ಸಣ್ಣಕತೆ)
ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಬೆಂಗಳೂರು ೩೦೧

ವಿದ್ಯಾರ್ಥಿಗಳೂ, ಶಿಸ್ತುಗೇಡಿತನವೂ (ವಿಷಯ ಎಂಬಿನ)
ಶ್ರೀ. ಚಿದಂಬರ ಕಾಶೀನಾಥ ಜೋಶಿ, ಬೆಳಗಾಂವಿ ೩೦೫

ಋತಿ (ಕವಿತೆ)
ಶ್ರೀ. ಗಂಗಾಧರ ಚಿತ್ತಾಲ, ಹೊಸದಿಲ್ಲಿ ೩೦೮

ಕನ್ಯಾನ್ವೇಷಕ (ಹೊಸಜೀವನದ ಭಾವಚಿತ್ರ)
ಶ್ರೀಮತಿ ಚಂಪಾವತಿ ಮುಹಿಷಿ, ಧಾರವಾಡ ೩೧೦

ಕಾಳಿದಾಸನ ಸುಭಾಷಿತಗಳು (ಶಾಕುಂತಲ ನಾಟಕ)
ಶ್ರೀ. ಎ. ಶಂಕರ ಕೆದಿಲಾಯ, ಮದ್ರಾಸ ೩೧೬

ಸಾಹಿತ್ಯ ನಿಮರ್ಿಯ ಶಿಕ್ಷಣರಂಗ
ಶ್ರೀ. ದಿನಪತಿ ಹೆಗಡೆ ಸಿದ್ದಾಪುರ ೩೨೧
ಶ್ರೀ. 'ರಂಗ' ಧಾರವಾಡ ೩೨೩

ಸಾದರಸ್ವೀಕಾರ .... (ಕವ್ವರ ೩ ನೆಯ ಪುಟದಲ್ಲಿ)

ಜಯಂತಿ

ಸಂಪುಟ ೨೩] [ಸಂಚಿಕೆ ೯

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೪ ಆಣೆ

ಜಾಹೀರಾತು
ಕೊಡಬಯಸುವವರು ಪತ್ರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕಾಂಗ್ಗೋದಲ್ಲಿ ಬೀಸಿದ ಬಿರುಗಾಳಿ

ಕರುಣಾಜನಕ ಪರಿಸ್ಥಿತಿಯ ಮೂಲಕ ಕಾಂಗೋದ ಹೆಸರು ಇಂದು ದಿಕ್ಕು ದಿಕ್ಕಿನಲ್ಲಿಯೂ ಪ್ರತಿಧ್ವನಿತವಾಗುತ್ತಲಿದೆ. ನೂರಾರು ವರ್ಷಗಳಿಂದ ಬೆಲ್ಜಿಯಂ ಸಾಮ್ರಾಜ್ಯದ ನಿವಿಧ ದುಃಖ-ದುಮ್ಮಾನಗಳನ್ನು ಸಹಿಸಿದ ಕಾಂಗೋಪ್ರದೇಶವು, ಮೊನ್ನೆ ಮೊನ್ನೆಯೆ ಸ್ವಾತಂತ್ರ್ಯವನ್ನು ಪಡೆದಿದ್ದಿತು. ಇದಕ್ಕೆ ಹುತಾತ್ಮಾ ಲುಮುಂಬಾ ಅವರ ಸ್ವಾತಂತ್ರ್ಯ ಸಮರವೇ ಮುಖ್ಯಕಾರಣವಾಗಿದ್ದಿತು. ಕಾಂಗೋ ಸ್ವಾತಂತ್ರ್ಯವನ್ನು ಪಡೆದು, ಪ್ರಜಾಪ್ರಭುತ್ವವನ್ನು ಪುರಸ್ಕರಿಸಿ, ಅದಕ್ಕೆ ಅನುಗುಣವಾದ ರಾಜ್ಯಶಾಸನ ಯಂತ್ರವನ್ನೂ ನಿರ್ಮಿಸಿಕೊಂಡಿತು. ಆದರೆ ಬೆಲ್ಜಿಯಂ ಜನರ ಅಸಂಸ್ಕೃತಿ-ಕುಟಿಲತಂತ್ರಗಳ ಮೂಲಕ, ಕಾಂಗೋಕ್ಕೆ ದೊರೆತ ಸ್ವಾತಂತ್ರ್ಯ, ಸ್ವಲ್ಪಕಾಲದಲ್ಲಿಯೆ ಸ್ವಾತಂತ್ರ್ಯದ ವಿಫಾಸವಾಗಿ ಪರಿಣಮಿಸಿತು.

ಕಾಂಗೋ, ದಕ್ಷಿಣ ಆಫ್ರಿಕೆಯಲ್ಲಿಯ ಒಂದು 'ಅನಾಗರಿಕ' ಜನರ ಪ್ರದೇಶ. ಆದರೆ ಇದನ್ನು ಆಕ್ರಮಿಸಿದ ಬೆಲ್ಜಿಯಂ ಜನರಿಗೆ ಅದು ಕಾಮಧೇನುವಾಗಿ ಪರಿಣಮಿಸಿತ್ತು. ಕಾಂಗೋದಲ್ಲಿ ನೈಸರ್ಗಿಕವಾಗಿಯೆ ಸಿಕ್ಕುವ ಜೇನುತುಪ್ಪ ಬೆಲ್ಜಿಯಂ ಜನರ ಕೋಶವನ್ನು ಧನದಿಂದ ತುಂಬುತ್ತಿತ್ತು. ಅಲ್ಲಿಯ ಚಿನ್ನ-ಬೆಳ್ಳಿಗಳ ಗಣಿಗಳು, ಬೆಲೆಬಾಳುವ ಕಾಡುಮರಗಳು, ಬೆಲ್ಜಿಯಂ ರಾಷ್ಟ್ರದ ಸಂಪದಭಿವೃದ್ಧಿಗೆ ಕಾರಣವಾಗಿದ್ದುವು. ಕಾಂಗೋ ಜನರಿಗೆ ರಾಜಕೀಯ ಸ್ವಾತಂತ್ರ್ಯ ದೊರೆಯಿತಾದರೂ, ಅಲ್ಲಿಯ ಆರ್ಥಿಕ ಸೂತ್ರಗಳೆಲ್ಲ ಬೆಲ್ಜಿಯಂ ಬಂಡವಾಳಗಾರರ ಕೈಯಲ್ಲಿಯೆ ಉಳಿದಿವೆ. ಅವರು ಕಾಂಗೋನಲ್ಲಿಯ ಪರಂಪರಾ ಸಂಸ್ಕೃತಿ, ಸ್ವದೇಶ ಇವುಗಳ ಅಭಿಮಾನವಿಲ್ಲದ ಸ್ವಾರ್ಥವೃತ್ತಿಯ ಕಾಂಗೋ ಜನರಲ್ಲಿ ಬುದ್ಧಿ ಭೇದವನ್ನು ಮಾಡಿದರು. ಎಂತಲೇ ಸ್ವಾತಂತ್ರ್ಯೋತ್ಸವದ ಕೆಲದಿನಗಳಲ್ಲಿಯೆ ಕಟಾಂಗಾ ಪ್ರದೇಶವು ಕಾಂಗೋ ಪ್ರಜಾಪ್ರಭುತ್ವವನ್ನು ನಿರಾಕರಿಸಿತು. ಬೆಲ್ಜಿಯಂ ಬಂಡವಾಳಗಾರರ ಪ್ರಭಾವಕ್ಕೊಳಗಾದ ಸೇನಾಪತಿಗಳು ಕೆಲವರು, ಮುಖ್ಯಮಂತ್ರಿ ಲುಮುಂಬಾ ಅವರಿಗೆ ವಿರೋಧಿಗಳಾಗಿ ನಿಂತರು. ಸ್ವಾತಂತ್ರ್ಯದ ಸೌಖ್ಯಕ್ಕೆ ಕಾಂಗೋಪ್ರದೇಶ ಎರವಾಗಿ, ಅಲ್ಲಿ ಬೂನವೀ ಕಲಹ ಪ್ರಾರಂಭವಾಯಿತು. ಪ್ರಜಾಸ್ವಭುತ್ವದಲ್ಲಿ ಅಧ್ಯಕ್ಷನಾಗಿ ಆಯ್ಕೆಗೊಂಡ ವ್ಯಕ್ತಿಯೂ ಮುಖ್ಯಮಂತ್ರಿಗೆ ವಿರೋಧಿಯಾಗಿ ನಿಂತನು. ಇದೆಲ್ಲಕ್ಕೂ ಕಾರಣವೆಂದರೆ ಸಾಮ್ರಾಜ್ಯಲೋಭಿಗಳಾದ ಬೆಲ್ಜಿಯಂ ಜನರು.

ಯುರೋಪ ಖಂಡದಲ್ಲಿ ಬೆಲ್ಜಿಯಂ ರಾಷ್ಟ್ರವೆಂದರೆ ತೀರ ಚಿಕ್ಕ ಪ್ರದೇಶ. ಎರಡೂ ಮಹಾಯುದ್ಧಗಳಲ್ಲಿ ಜರ್ಮನರಿಂದ ಏಟುತಿಂದು, ಪರರಾಜ್ಯ-ಪರತಂತ್ರಗಳ ದುಃಖವೆಂತಹದೆಂಬುದನ್ನು ಸಂಪೂರ್ಣವಾಗಿ ಕಂಡು ಉಂಡವರು ಅಲ್ಲಿಯ ಜನ. ಬಡಪ್ರದೇಶವಾದ ಬೆಲ್ಜಿಯಂ ರಾಷ್ಟ್ರ, ಒಂದು ಕಾಲವಲ್ಲಿ ಬೇಗೋ ಆಕ್ರಮಿಸಿಕೊಂಡ ಹೊರಗಿನ ವಸತಿ ಪ್ರದೇಶಗಳಿಂದಲೇ ಸಾಮ್ರಾಜ್ಯಗೌರವವನ್ನು ಪಡೆದು ನಿಂತಿತ್ತು. ಕಾಂಗೋದ ಸ್ವಾತಂತ್ರ್ಯ ಬೆಲ್ಜಿಯಂ ಜನರ ಸುಖಜೀವನವನ್ನೇ ಹುಡಿಗೂತಿಸಿ ಬಿಡುವುದೆಂದು ಜನರು ಸಂಪೂರ್ಣವಾಗಿ ತಿಳಿದುಕೊಂಡರು. ಸ್ವಾರ್ಥಾಂಧರಾಗಿ, ಕಾಂಗೋ ಜನರಲ್ಲಿಯ ಅಜ್ಞಾನದ ಪ್ರಯೋಜನವನ್ನು ಪಡೆದುಕೊಳ್ಳಲು ಸಿದ್ಧರಾಗಿ, ಬಗೆಬಗೆಯ ಕುತಂತ್ರಗಳನ್ನು ನಡೆಸತೊಡಗಿದರು. ಅರ್ಥಲುಬ್ಧರಾದ ಕಾಂಗೋ ಜನರಲ್ಲಿ ಹಲವರು ಇವರ ಕೈಗೊಂಬೆಗಳಾಗಿ ಕುಣಿಯತೊಡಗಿ, ಕಾಂಗೋದ ಸ್ವತಂತ್ರ ಶಾಸನಕ್ಕೆ ಸ್ವಲ್ಪಕಾಲದಲ್ಲಿ ಬೆನ್ನೀರನ್ನು ಎರಚಿಬಿಟ್ಟರು.

ಹಿಂದುಸ್ತಾನವನ್ನು ಬಿಟ್ಟುಹೋಗಲಿದ್ದಾಗ, ಬ್ರಿಟಿಷರೂ ಭಾರತದಲ್ಲಿ ಬೇಕಾದಷ್ಟು ಕುತಂತ್ರಗಳನ್ನು ನಡೆಸಬಹುದಾಗಿತ್ತು. ಅವರ ಪ್ರಭಾವಕ್ಕೆ ಒಳಗಾದ ಸ್ವಾರ್ಥಿಗಳು ಭಾರತದಲ್ಲಿ ಕಡಮೆಯೇನೂ ಇರಲಿಲ್ಲ. ಅದರೆ ಸಂಸ್ಕೃತಿಯ ಬೆಲೆಯನ್ನು ಚೆನ್ನಾಗಿ ಅರತ ಬ್ರಿಟಿಷ್ ರಾಜಕಾರಣಿಗಳು, ಭಾರತದ ದಿವ್ಯಸಂಸ್ಕೃತಿಪರಂಪರೆಯ ಮಹತ್ತ್ವವನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಇಲ್ಲಿ ನರಿಯಾಟ ಹೂಡಿ, ಪರಿಸ್ಥಿತಿಯನ್ನು ಕೆಡಿಸಿ, ಶಾಶ್ವತವಾಗಿ ತಮ್ಮ ಚರಿತ್ರೆಗೆ ಕಲಂಕವನ್ನು ತೊಡೆಯಬಾರದೆಂಬ ದೂರದೃಷ್ಟಿಯಿಂದ, ಅವರು ಭಾರತವನ್ನು ಬಿಟ್ಟುಹೋಗುವಾಗ, ಯಾವ ಬಗೆಯ ಕುಟಿಲತಂತ್ರಕ್ಕೂ ಅವಕಾಶವನ್ನು ಕೊಡಪೆ ಹೊರಟುಹೋದರು. ಬೆಲ್ಜಿಯಂ ಬ್ರಿಬಿಷರ ನೆರೆಯ ರಾಷ್ಟ್ರವಾದರೂ, ಬ್ರಿಟಿಷರಂತಹ ಸಾಂಸ್ಕೃತಿಕ ಜೀವನವನ್ನು ಕಂಡುದಲ್ಲ; ಅದರ ಬೆಲೆಯನ್ನೂ ಕಂಡುದಲ್ಲ. ಹಲವಾರು ಸಲ ಸೋಲಿನ ದುಃಖವನ್ನು ಉಂಡ ಬೆಲ್ಜಿಯಂ, ಹೃದಯಧರ್ಮವನ್ನು ಕಳೆದುಕೊಂಡಂತೆ ಕಾಣುತ್ತದೆ. ಕಾಂಗೋದಲ್ಲಿ ನಡೆಸಿರುವ ಬೆಲ್ಜಿಯಂ ಜನತೆಯ ಕೈಚಳಕ, ದಾನವವೃತ್ತಿಯನ್ನು ನೆನಪಿಗೆ ತಂದುಕೊಡುವಂತಹದಾಗಿದೆ.

ಕಾಂಗೋ ಜನರ ಅಜ್ಞಾನ—ಅಸಂಸ್ಕೃತತೆಗಳು ಅವರನ್ನು ಕೇವಲ ಸ್ವಾರ್ಥಪಶುಗಳನ್ನಾಗಿ ಮಾಡಿಬಿಟ್ಟಿವೆ. ಅವರಿಗೆ ದೇಶದ ಸ್ವಾತಂತ್ರ್ಯದ ಬೆಲೆ ಗೊತ್ತಿಲ್ಲ. ಸ್ವಾತಂತ್ರ್ಯಕ್ಕಾಗಿ ಪ್ರಾಣಪಣದಿಂದ ಹೋರಾಡಿದ ವೀರ ಪುರುಷನ ವಿಷಯಕವಾದ ಅಭಿಮಾನವಿಲ್ಲ. ಎಂತಲೇ ಸ್ವಾತಂತ್ರ್ಯವನ್ನು ಪಡೆದ ಕಾಂಗೋವನ್ನು ಲೋಕವು ಅಭಿನಂದಿಸುತ್ತಿರುವಾಗಲೇ, ಅಲ್ಲಿ ಸ್ವಯೂಥಕಲಹದ ಅಪಸ್ವರಗಳು ಕೇಳತೊಡಗಿದುವು. ಅದರ ಪರಿಣಾಮವಾಗಿ, ಸ್ವಾತಂತ್ರ್ಯದ ಅಭಿಮಾನಿ ಪುರುಷನಾದ ಮುಖ್ಯಮಂತ್ರಿ, ಕಾಂಗೋ ಸ್ವಕೀಯರಿಂದಲೇ ಬಂಧನಕ್ಕೊಳಗಾಗಬೇಕಾಯಿತು; ತನ್ನ ಅನುಯಾಯಿಗಳೊಂದಿಗೆ ಸ್ವಕೀಯರ ಶಸ್ತ್ರಗಳಿಗೇ ಆಹುತಿಯಾಗಬೇಕಾಯಿತು. ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟ ಲುಮುಂಬಾನ ಪೂಜೆ ನಡೆಯಬೇಕಾಗಿದ್ದಲ್ಲಿಯೇ, ಅವನು ಬಂಧನದ ವಿವಿಧ ದುಃಖಗಳನ್ನು ಅನುಭವಿಸಿ ಅಜ್ಞಾತಮೃತ್ಯುವನ್ನು ಅಪ್ಪಿಕೊಳ್ಳಬೇಕಾಯಿತು.

ಲುಮುಂಬಾನ ಪೊರೆಕೇಳಿ, ಅತನಿಗೆ ನೆರವು ನೀಡಲು ಕಾಂಗೋಗೆ ಹೋದ ಸಂಯುಕ್ತ ರಾಷ್ಟ್ರಸಂಘ, ತನ್ನ ನಿಷ್ಕ್ರಿಯತೆಯ ಮೂಲಕ, ಕಾಂಗೋ ರಾಜ್ಯದ ಪರಿಸ್ಥಿತಿಯನ್ನೆಲ್ಲ ಹದಗೆಡಿಸಿ ಬಿಟ್ಟಿತು. ಅದರ ಕರ್ತವ್ಯವಿಲಂಬಕ್ಕೆ ಕಾರಣ: ಸಂಯುಕ್ತ ರಾಷ್ಟ್ರಸಂಘದಲ್ಲಿ ಸದಸ್ಯವಾಗಿರುವ ಪ್ರಭಾವೀ ರಾಷ್ಟ್ರಗಳ ಆಂತರಿಕ ಘರ್ಷಣೆಯೂ ಆಗಿರಬಹುದು. ಕಾಂಗೋ ಪ್ರಕರಣದಲ್ಲಿ ಸಂಯುಕ್ತ ರಾಷ್ಟ್ರಸಂಘ, ತನ್ನ ನಿಷ್ಪ್ರಯೋಜಕತೆಯನ್ನು ಸಿದ್ಧಪಡಿಸಿಕೊಟ್ಟುದು ಪ್ರಪಂಚವೆಲ್ಲವೂ ಒಪ್ಪಿದ ಮಾತು. ಕಾಂಗೋದಂತಹ ಚಿಕ್ಕ ಪ್ರದೇಶದಲ್ಲಿಯೇ ತನ್ನ ನಿಷ್ಕ್ರಿಯತೆಯನ್ನು ತೋರಿಸಿದ ಸಂಯುಕ್ತ ರಾಷ್ಟ್ರಸಂಘ, ಮಿಕ್ಕ ಕಡೆಗೆ ಯಶಸ್ವಿಯಾಗಿ ಹೇಗೆ ಕಾರ್ಯವೆಸಗೀತು?

ಸಂಯುಕ್ತ ರಾಷ್ಟ್ರಸಂಘದ ಬೆನ್ನಿಗೆ ಬಿದ್ದ ಲುಮುಂಬಾ, ಅದೇ ಸಾನ್ನಿಧ್ಯದಲ್ಲಿಯೆ ವಿಲವಿಲ ಒದ್ದಾಡಿ ಸತ್ತುಹೋದ. ಅಲ್ಲಿ ಎದ್ದ ಬಿರುಗಾಳಿ ಇನ್ನೂ ತನ್ನ ಹಾವಳಿಯನ್ನು ನಡೆಸಿಯೇ ನಡೆಸಿದೆ. ನಡೆಯಬೇಕಾದುದೆಲ್ಲ ನಡೆದು ಹೋದ ಮೇಲೆ, ಈಗ ಎಚ್ಚೆತ್ತವರಂತೆ ಸಂ. ರಾ. ಸಂಘವೆ ಜನ ಗಟ್ಟಿಯಾಗಿ ಮಾತನಾಡುತ್ತಿದ್ದಾರೆ. ಭದ್ರತಾ ಮಂಡಲವು ಲುಮುಂಬಾರ ಕೊಲೆಯನ್ನು ವಿರೋಧಿಸಿ ಗೊತ್ತುವಳಿಯೊಂದನ್ನೂ ಮಾಡಿದೆ. ಇಷ್ಟಾದರೂ ಬೆಲ್ಜಿಯಂ ಜನರ ಕುತಂತ್ರಕುಚೇಷ್ಟೆಗಳು ಕಡಿಮೆಯಾಗಿಲ್ಲ ಕಾಂಗೋ ಪ್ರದೇಶವೆಂದರೆ ಇಂದು ಒಂದು ಮಹಾಪ್ರಳಯದಲ್ಲಿ ಸಿಕ್ಕಿಕೊಂಡಂತಾಗಿದೆ. ಅಲ್ಲಿಯ ಜನಸಾಮಾನ್ಯರ ಜೀವನವೆಂಬುದು ಬೆಂಕಿ ತಗುಲಿದ ಮನೆಯಲ್ಲಿ ಸಿಕ್ಕಿದವರ ಜೀವನದಂತೆ ಕಸಿವಿಸಿ ಪಡುತ್ತಿರಬಹುದು.

ಬಲಿಷ್ಠರಿಂದ ಬಲಹೀನರನ್ನು ಸಂರಕ್ಷಿಸುವ ಮಹಾಧ್ಯೇಯವನ್ನು ಇರಿಸಿಕೊಂಡು ಹೊರಟ ಸಂಯುಕ್ತ ರಾಷ್ಟ್ರಸಂಘಕ್ಕೆ ಕಾಂಗೋವು ಒಂದು ಪರೀಕ್ಷಾ ಕಾಲವನ್ನು ಒಡ್ಡಿದಂತೆ ಮಾಡಿದೆ. ಈ ಪರೀಕ್ಷೆಯಲ್ಲಿ ಅದು ಉತ್ತೀರ್ಣವಾಗದೆ ಹೋದರೆ, ಲೋಕದ ಜನರ ಅಶ್ರದ್ಧೆಗೆ ಅದು ಪಾತ್ರವಾಗಿ, ತನ್ನ ಅಳಿಗಾಲಕ್ಕೆ ತಾನೇ ಕಾರಣವಾಗಬಹುದು

—ಸಂಪಾದಕರು

ಜಯಂತಿ

ಮಾಸ ಪತ್ರಿಕೆಗೆ

ಇಂದೇ

ಚಂದಾದಾರರಾಗಿರಿ

ನಾ ಡ ನ ಡೆ

ಜಬಲ್‌ಪುರದಲ್ಲಿ ನಡೆದುದೇನು?

ಹೆಣ್ಣಿನ ಪಾವಿತ್ರ್ಯಭಂಗಪ್ರಸಂಗವನ್ನು ಭಾರತದ ಜನತೆ ಎಂದೂ ಸಹಿಸಿ ಸುಮ್ಮನಿರದು. ಹೆಣ್ಣಿನ ಪಾವಿತ್ರ್ಯ ಸಂರಕ್ಷಣೆಗಾಗಿಯೇ ಅನೇಕ ಯುದ್ಧ–ಮಹಾಸಮರಗಳು ನಡೆದುದನ್ನು ನಮ್ಮ ಇತಿಹಾಸ ಸಾರಿಸಾರಿ ಹೇಳುವುದು. ತಮ್ಮ ಹೆಂಗುಸರ ಪಾವಿತ್ರ್ಯ ರಕ್ಷಣೆಗಾಗಿಯೇ ರಜಪೂತ ವೀರರು, ರಣದಲ್ಲಿ ಕಾದಿ ಮಡಿಯುತ್ತಿದ್ದರು. ವೀರರಮಣಿಯರು ಅಗ್ನಿನಾರಾಯಣನಿಗೆ ಆಹುತರಾಗುತ್ತಿದ್ದರು. ಸ್ತ್ರೀಯರ ಪಾವಿತ್ರ್ಯರಕ್ಷಣೆಯ ಬೆಲೆ ಗೊತ್ತಿಲ್ಲದ ಹುಂಬ ಜನರು, ಭಾರತೀಯರಿಂದ ಯಾವಾಗಲೂ ವಿರೋಧದ ಏಟುಗಳನ್ನು ತಿನ್ನಬೇಕಾಗುವುದು.

ಮೊನ್ನೆ ಮೊನ್ನೆ ಜಬಲಪುರದಲ್ಲಿ ಇಂತಹ ಸ್ತ್ರೀಪಾವಿತ್ರ್ಯಭಂಗದ ಘಟನೆಯೊಂದು ಘಟಿಸಿತು. ಈ ಘಟನೆಗೆ ಕಾರಣರಾದವರು ಹುಂಬ ಜನರಲ್ಲ; ಉಚ್ಚ ಶಿಕ್ಷಣವನ್ನು ಪಡೆಯುವ ಕಾಲೇಜಿನ ವಿದ್ಯಾರ್ಥಿಗಳು. ಅವರ ತಿಳಿಗೇಡಿತನಕ್ಕೆ ಒಳಗಾದ ಹೆಣ್ಣುಮಗಳು, ಅಪಮಾನವನ್ನು ಸಹಿಸದೆ ಆತ್ಮಹತ್ಯೆಯನ್ನು ಮಾಡಿಕೊಂಡಳು. ಈ ಅನ್ಯಾಯದ ಘಟನೆಯನ್ನು ಕೇಳಿ, ಸ್ತ್ರೀ ಪಾವಿತ್ರ್ಯಾಭಿಮಾನಿ ಜನರಿಗೆ ಸುಮ್ಮನೆ ಕುಳಿತುಕೊಳ್ಳಲಿಕ್ಕಾದೀತೆ? ಅನ್ಯಾಯದ ಪರಿಮಾರ್ಜನೆಗಾಗಿ, ರೊಚ್ಚಿಗೆದ್ದು ಹೊರಡುವರೇ! ಅನ್ಯಾಯ ಮಾಡಿದವರ ಜಾತಿ ನೀತಿಗಳನ್ನು ಅವರು ಲಕ್ಷ್ಯಿಸರು. ಅನ್ಯಾಯಿಗಳನ್ನು ಶಿಕ್ಷಿಸಬೇಕೆಂಬುದೇ ಆ ನೀತಿಪ್ರಿಯ ಜನತೆಯ ಗುರಿ. ಇಲ್ಲಿ ಅನ್ಯಾಯಕ್ಕೊಳಗಾದ ಮಹಿಳೆ ಹಿಂದು ವಾಗಿದ್ದಳು; ಅನ್ಯಾಯ ಮಾಡಿದವರು ಮುಸ್ಲಿಮರಿಂದ ಬೇರೆ ಜಾತಿಯವರಾಗಿದ್ದರು. ರೊಚ್ಚಿಗೆದ್ದ ಜನ ನಡೆದ ಅನ್ಯಾಯವನ್ನು ಪ್ರತಿಭಟಿಸಿತಲ್ಲದೆ, ಯಾವುದೇ ಜಾತಿವಿಷಯಕವಿಷದಿಂದ ಪ್ರೇರಿತವಾಗಿರಲಿಲ್ಲ. ಎಲ್ಲ ಜನರೂ ಕೂಡಿ ಆ ಅನ್ಯಾಯಗಳನ್ನು ನಿಗ್ರಹಿಸುವ ಕೆಲಸ ಮಾಡಿದ್ದರೆ, ಜಬಲ್‌ಪುರವಲ್ಲಿ ಜಾತೀಯ ಜಗಳ ಸಂಭವಿಸಲು ಕಾರಣವೇ ಇರಲಿಲ್ಲ. ಆದರೆ ಅನ್ಯಾಯಿಗಳು ತಮ್ಮ ಜಾತಿಯವರೆಂಬ ದುರಭಿಮಾನದಿಂದ, ಅವರ ಬೆನ್ನು ಕಟ್ಟಲು ಅವರ ಜಾತಿಯ ಜನ ಗುಂಪುಗೂಡಿ ಬಂದುದರಿಂದ, ಇದು ಜಾತೀಯ ಕಲಹವಾಗಿ ಪರಿಣಮಿಸಿತು. ಹೀಗಾದುದು ದೇಶದ ದುರ್ದೈವವೇ ಸರಿ. ನೆರೆನೆರೆಯಲ್ಲಿಯೆ ಕೂಡಿ ಬಾಳಬೇಕಾದವರು ಪರಸ್ಪರರಲ್ಲಿ ಬಡಿದಾಡಿ, ವೈಷಾಗ್ನಿಗೆ ಅವಕಾಶ ಕಲ್ಪಿಸಿ ಕೊಡಲಾಯಿತು. ನಮ್ಮಲ್ಲಿ ಇದೀಗ ರೂಪುಗೊಳ್ಳುತ್ತಿರುವ ಪ್ರಜಾಪ್ರಭುತ್ವದ ಪ್ರಗತಿಯ ದಾರಿಯಲ್ಲಿ ಇಂತಹ ಪ್ರಸಂಗಗಳು ಮುಳ್ಳು-ಕಲ್ಲುಗಳನ್ನೇ ಹರಡಿಬಿಡುವುವು.

ಪಾಕಿಸ್ತಾನಿಗಳ ಅವಿವೇಕದ ಆಟ

ಹಿಂದುಸ್ತಾನದಲ್ಲಿ ಇಂತಹದೊಂದು ನಿಷ್ಪರೀತ ಘಟನೆ ಏನಾದರೂ ಸಂಭವಿಸಿದರೆ ಸಾಕು, ಪಾಕಿಸ್ತಾನ ಅದನ್ನು ತನ್ನ ಮುಷ್ಕರಾಚಾರಕ್ಕಾಗಿ ಉಪಯೋಗಿಸಿಕೊಳ್ಳುವುದು. ಅದಕ್ಕೆ ಇಲ್ಲದ ಬಣ್ಣಗಳನ್ನು ಹಚ್ಚಿ, ಸಾವಿರ ಬಗೆಯ ಸುಳ್ಳುಗಳೊಂದಿಗೆ ಸಾರುತ್ತ, ಪಾಕಿಸ್ತಾನದಲ್ಲಿಯ ಜನಸಾಮಾನ್ಯದ ಮನಸ್ಸನ್ನು, ಭಾರತದ ವಿಷಯಕ್ಕೆ ಕೆರಳಿಸತೊಡಗುವುದು. ಅದು ಎಂತಹ ಭವಿಷ್ಯವನ್ನು ತಂದೊಡ್ಡೀತೆಂಬ ವಿಚಾರ, ಅಲ್ಲಿ ಸೊದಲಿನಿಂದ ಕೊನೆಯವರೆಗೆ—ಯಾರಲ್ಲಿಯೂ ಇರದು. ಜಬಲಪುರದಲ್ಲಿ ಜರುಗಿದ ಜಗಳದ ಮೂಲನೆಲ್ಲಿದೆಯೆಂಬುದರ ವಿಚಾರವನ್ನು ಪಾಕಿಸ್ತಾನದಲ್ಲಿಯ ಯಾವ ರಾಜಕೀಯ—ಸಾಮಾಜಿಕ—ಧುರೀಣನೂ ಮಾಡಲಾರ. ಭಾರತದ ವಿರೋಧ ಪ್ರಚಾರಕ್ಕೆ ಅವರಿಗೆ ಏನಾದರೊಂದು ನೆಪ ಬೇಕಾಗಿರುತ್ತದೆ. ಹೊರ್ಮಾಲಿ ಹೆಂಗುಸರಂತೆ ಒಮ್ಮೆಲೇ ರೊಚ್ಚಿಗೆದ್ದು—ಜನರಲ್ಲಿ ರೊಚ್ಚು ಪ್ರಜ್ವಲಿಸುವಂತೆ—ಬೊಬ್ಬೆಯಿಕ್ಕತೊಡಗುತ್ತಾರೆ.

ಪಾಕಿಸ್ತಾನದ ಸರ್ವಾಧಿಕಾರಿ ಆಯೂಬ್ ಖಾನರು ಸೊದಲು, ಈ ಘಟನೆಯನ್ನು ದುರುಪಯೋಗ ಪಡಿಸಿಕೊಂಡು, ಲುಮುಂಬಾರ ಅನ್ಯಾಯದ ಕೊಲೆಯೊಂದಿಗೆ ಜಬಲ್‌ಪುರದ ಘಟನೆಯನ್ನು ಹೋಲಿಸಿ ಭಾರತೀಯರು ಜಾತಿದ್ವೇಷಿಗಳೆಂದು ಗುಲ್ಲೆಬ್ಬಿಸಿದರು. ಪಾಕಿಸ್ತಾನದ ಇಂದಿನ ಸೂತ್ರಸಂಚಾಲಕರೆನಿಸಿರುವ ಭಾರತ–ಪಾಕಿಸ್ತಾನಗಳ ಸಂಬಂಧ ಒಳ್ಳೆಯದಾಗಬೇಕೆಂಬ ಸದಿಚ್ಛೆಯನ್ನೂ ಆಗಾಗ ಅಪ್ಪಿತಪ್ಪಿ ಪ್ರಕಟಿಸುತ್ತಿರುತ್ತಾರೆ. ಅತಿಥಿಗಳಾಗಿ ಭಾರತಕ್ಕೆ ಬಂದಾಗ, ಎಲ್ಲ ಕಡೆಗೂ ಸಕ್ಕರೆಯ ಸವಿಯನ್ನು ಸೂರೆ ಮಾಡಿದರು. ಆದರೆ ಅವೆಲ್ಲವೂ, ಸಂದರ್ಭವನ್ನರಿತು ಬಹುಸಿಪ ಸೋಗಿನ ಮಾತೆಂಬುದನ್ನು ಅವರು ತಮ್ಮ ಕ್ರಿಯೆಗಳಿಂದ ಆಗಾಗ ಸಿದ್ಧ ಮಾಡಿ ತೋರಿಸಿಯೇ ಇದ್ದಾರೆ.

ವಾಸ್ತವವಾಗಿ ನೋಡಿದರೆ, ಪಾಕಿಸ್ತಾನದಲ್ಲಿಯ ಮುಸ್ಲೀಮರಿಗಿಂತ ಭಾರತದಲ್ಲಿಯ ಮುಸಲ್ಮಾನರೇ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಲಿದ್ದಾರೆ. ಅವರ ಹಕ್ಕು-ಬಾಧ್ಯತೆಗಳಿಗೆ, ನಮ್ಮ ಪ್ರಜಾ ಪ್ರಭುತ್ವ ಎಲ್ಲ ರೀತಿಯಿಂದಲೂ ಸಂರಕ್ಷಣೆಯನ್ನು ಕೊಟ್ಟಿದೆ. ಭಾರತದಲ್ಲಿರುವ ಮುಸಲ್ಮಾನರ ಸುಖ-ಸಮಾಧಾನಗಳ ಜೀವನ, ಪಾಕಿಸ್ತಾನದ ಧುರೀಣರಿಗೆ ಅಪಥ್ಯವಸ್ತುವಾಗಿದೆ. ಆದುದರಿಂದ, ಧರ್ಮದ ನೆವದಿಂದ ಅವರ ಮನಸ್ಸನ್ನು ಕೆರಳಿಸಿ, ಅವರನ್ನು ಅಸಂತುಷ್ಟರನ್ನಾಗಿಸಬೇಕೆಂಬುದು ಪಾಕಿಸ್ತಾನಿಗಳ ಹವಣಿಕೆ.

ಆಯೂಬ್ ಖಾನರ ದುರೂಹೆಗಳನ್ನು ಪಾಕಿಸ್ತಾನದ ದ್ವೈಭಾಷಿಕ ಪತ್ರಿಕೆಗಳು ಎತ್ತಿ ಹಿಡಿದುವು. ಭಾರತದ ಮತ್ತು ಭಾರತೀಯ ಸರಕಾರದ ಬಗೆಗೆ ನಲ್ಲದ ಮಾತುಗಳನ್ನಾಡಿ ಪ್ರಚಾರ ಮಾಡಿದುವು. ಅದರ ಪರಿಣಾಮವೇನಾಯಿತು? ಪಾಕಿಸ್ತಾನದ ಜನತೆಯ ವಿವೇಕ ಲೋಕಕ್ಕೆಲ್ಲ ಗೊತ್ತಾಯಿತು.

ರಾಜನೀತಿಯನ್ನು ಅರಿಯದ ಅನಾಗರಿಕ ವೃತ್ತಿ

ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದಲ್ಲಿ ತನ್ನ ರಾಯಭಾರಿ ಕಾರ್ಯಾಲಯವನ್ನು ತೆರೆಯುವುದೆಂದರೆ, ರಾಯಭಾರಿ ಕಾರ್ಯಾಲಯದ ಅಧಿಕಾರಿ ಮತ್ತು ಕಾರ್ಯಕರ್ತರ ಯೋಗ-ಕ್ಷೇಮದ ಹೊಣೆಗಾರಿಕೆ, ಆ ಇನ್ನೊಂದು ರಾಷ್ಟ್ರದವರ ತಲೆಯನ್ನೇರಿರುವುದು. ಆ

ಹೊಣೆಗಾರಿಕೆಯನ್ನು ಅರಿತು ನಡೆಯುವುದು. ಆ ರಾಷ್ಟ್ರದ ಸಹಕಾರ ಮತ್ತು ಜನತೆಯ ನೈತಿಕ ಕರ್ತವ್ಯವಾಗಿದೆ. ಅದನ್ನು ಬಿಟ್ಟು ಯಾವುದೋ ಒಂದು ಅಭಾಸ ಕಾರಣದಿಂದ ಜನತೆಯ ಮನಸ್ಸನ್ನು ಕೆರಳಿಸಿ, ರಾಯಭಾರಿ ಕಾರ್ಯಾಲಯದ ಮೇಲೆ ಛೂ ಬಿಡುವುದೆಂದರೆ, ಆ ರಾಷ್ಟ್ರದ ನೈತಿಕ ದಿವಾಳಿಯೆದ್ದಂತೆಯೇ ಸರಿ. ಹೊರಗಣಿಂದ ಬಂದು ವಾಸಿಸಿದ ರಾಯಭಾರಿ ಕಾರ್ಯಾಲಯದವರು, ಯಾವುದೇ ಒಂದು ರಾಷ್ಟ್ರದಲ್ಲಿ ಅಲ್ಪಸಂಖ್ಯಾಕರೇ ಸರಿ. ಪರಿಸ್ಥಿತಿ ಹೀಗಿರುವಾಗ, ನಿಶ್ಚಿಂತರಾಗಿದ್ದ ಅಲ್ಪಸಂಖ್ಯಾಕರ ಮೇಲೆ ಬಹುಸಂಖ್ಯಾಕರು ಹಟಾತ್ತಾಗಿ ದಾಳಿ ನಡೆಸುವುದನ್ನು, ರಾಜನೀತಿಯನ್ನರಿತ ಯಾವ ರಾಷ್ಟ್ರವೂ ಪುರಸ್ಕರಿಸೀತು. ಪಾಕಿಸ್ತಾನಿ ಪ್ರಜೆಗಳು ಪುಂಡಾಟ ನಡೆಸಿ, ಭಾರತದ ರಾಯಭಾರಿ ಕಚೇರಿಗೆ ಮುತ್ತಿಗೆ ಹಾಕಿ ಗೊಂದಲ ನಡೆಸಿತು. ಕಲ್ಲು ಬೀಸಿ ಕಟ್ಟಡವನ್ನು ನಾಶಗೊಳಿಸಿತು; ಜನರನ್ನು ಗಾಯಗೊಳಿಸಿತು. ತಾಸುಗಟ್ಟಲೆ ಈ ದಾಳಿ ನಡೆದರೂ ಪೋಲೀಸರಿಂದ ಸಂರಕ್ಷಣೆ ದೊರೆಯಲಿಲ್ಲ; ಬಳಿಯಲ್ಲಿಯೇ ಇದ್ದರೂ ಸರಕಾರದ ಅಧಿಕಾರಿಗಳು ಕಣ್ಣು ತೆರೆದು ನೋಡಲಿಲ್ಲ.

ಪಾಕಿಸ್ತಾನ್ ರಾಯಭಾರಿ ಕಚೇರಿಯೂ ಭಾರತದಲ್ಲಿ ಇದೆ. ಇಲ್ಲಿಯ ಆ ಅಧಿಕಾರಿಗಳಿಗೆ ಭಾರತದ ಪ್ರಜೆಗಳಿಂದ ತೊಂದರೆಯಾಗಿದೆಯೆ? ಪಾಕಿಸ್ತಾನ್ ಸರಕಾರ, ಭಾರತದ ವಿಷಯದಲ್ಲಿ ಬೇಕಾದಂತಹ ಕ್ಷುದ್ರರೀತಿಯಿಂದ ನಡೆದುಕೊಂಡಾಗ ಕೂಡ, ಭಾರತದಲ್ಲಿಯ ಪಾಕಿಸ್ತಾನ್ ರಾಯಭಾರಿಗಳಿಗೆ ಎಂದೂ ತೊಂದರೆಯಾಗಿಲ್ಲ. ಈಗಲೂ ನಮ್ಮ ರಾಯಭಾರದ ಜನರಿಗೆ ಉಪದ್ರವ ಕೊಟ್ಟುದನ್ನು ಕೇಳಿ, ಭಾರತದ ಜನತೆಯ ಮನಸ್ಸು ಕನಲಿದರೂ, ಅದು ಇಲ್ಲಿಯ ಪಾಕಿಸ್ತಾನಿ ರಾಯಭಾರಿಕಾರ್ಯಾಲಯದ ಮೇಲೆ ಏರಿ ಹೋಗುವ ನಿಂದ್ಯಕಾರ್ಯಕ್ಕೆ ಎಂದೂ ಸಿದ್ಧವಾಗಲಾರದು.

ಭಾರತದಲ್ಲಿ ಬ್ರಿಟಿಷ್ ಮಹಾರಾಣಿ ಸುತ್ತಾಡಿ ಇಲ್ಲಿಯ ಪ್ರಜಾಪ್ರಭುತ್ವವನ್ನು ಮುಕ್ತಕಂಠದಿಂದ ಗೌರವಿಸುತ್ತಿರುವಾಗ, ಬ್ರಿಟನಿನ ಹಳೆಯ ಪಾರ್ಲಮೆಂಟಿನ ಮುಖ್ಯ ಮಂತ್ರಿ ಆಟ್ಲೀಯವರು ಕಣ್ಣಾರೆ ಕಂಡು, ಭಾರತದ ಪ್ರಜಾಪ್ರಭುತ್ವದ ಮಹತಿಯನ್ನು ಹೊಗಳಿ ಹಾಡುತ್ತಿರುವಾಗ, ರಶಿಯದ ಮಂತ್ರಿಯೂ ಶಿಷ್ಟಮಂಡಲಿಯೂ ಭಾರತಕ್ಕೆ ಬಂದು, ಭಾರತದ ರಾಜ್ಯಪದ್ಧತಿಯನ್ನು ಮೆಚ್ಚಿ ಕೊಂಡಾಡುತ್ತಿರುವಾಗ, ಇಲ್ಲಿ ಪಾಕಿಸ್ತಾನದಲ್ಲಿ ಸರಕಾರದ ಧೋರಣೆಯಿಂದಲೇ ಪ್ರಚೋದನೆಗೊಂಡ ಜನತೆ. ಅನಾಗರಿಕರಿಗಿಂತ ಅನಾಗರಿಕರಾಗಿ, ರಾಯಭಾರಿ ಕಾರ್ಯಾಲಯವನ್ನು ಮುತ್ತಿ ವಿಧ್ವಂಸಗೊಳಿಸುತ್ತಿರುವ ಈ ಅಕಾರ್ಯಕ್ಕಾಗಿ ಲೋಕದ ಜನರು ಏನೆಂದಾರೆಂಬ ಎಚ್ಚರಿಕೆಯಾದರೂ ಇರಬೇಡವೇ ಪಾಕಿಸ್ತಾನಿಗಳಿಗೆ? ರಾಜನೀತಿ-ಧರ್ಮಗಳನ್ನು ಮೆಟ್ಟಿ ನಡೆಯುವ ಸರಕಾರ—ಜನತೆ ಇವುಗಳಿಗೆ ಎಂದೂ ಉಳಿಗಾಲವಿರದು. ಇಲ್ಲಿ ಎದ್ದ ಅಸಂತೋಷಕ್ಕೆ, ರಾಷ್ಟ್ರಜೀವನದಲ್ಲಿ ಎಂದೂ ಶಾಂತಿ-ಸಮಾಧಾನವನ್ನು ಕಾಪಾಡಲಾರದು.

ನ ನ್ನ ಊ ರು

ಶ್ರೀ. ಶಾಂತ ಹಾಟೇಲ, ಸದಲಗೆ

ಈಚೆ ಏರು, ಆಚೆ ನೀರು
ನಡುನೆ ಊರು ಬೆಳೆದಿದೆ ।
ನೆಲದ ಮಣ್ಣು, ಚೊಕ್ಕಹೊನ್ನು
ಜನರ ಕಣ್ಣು ಸೆಳೆದಿದೆ ॥ ೧

ಶನುನಮೀರ, ದೇವಬೀರ
ಮಹಾದೇವ ಗುಡಿಗಳು ।
ಜೈನಬಸದಿ, ಪೂಜ್ಯಸಿಷಧಿ
ಪುಣ್ಯಪುರುಷರಡಿಗಳು ॥ ೨

ವಿಜಯವಿಠಲ, ದೇವದತ್ತ
ಏಕನಾಥ ಮಂದಿರ ।
ಸರ್ವಧರ್ಮದೇವರಿಂದ
ನಮ್ಮ ಊರು ಸುಂದರ ॥ ೩

ಲಕುಮಿ ಸರಸಿ, ಸ್ನೇಹಬೆರಸಿ
ಇಲ್ಲಿ ಮೆರೆಯುತಿರುವರು ।
ನಮ್ಮ ಊರ, ಹಣೆಯಬರೆಹ
ಅವರೆ ಬರೆಯುತಿರುವರು ॥ ...೪

ಊರ ಬದಿಗೆ ಹರಿಯುತಿಹಳು
ಹಾಲಗಂಗೆ ಜುಳುಜುಳು ।
ನೀರನುಜಿಸಿ, ನಮ್ಮತಣಿಸಿ
ನುದದಿ ಸಲಹುತಿರುವಳು ॥ ೫....

ನನ್ನ ಹಳ್ಳಿ, ರಸದ ಬಳ್ಳಿ
ಅವರ ಹೆಸರು ಸದಲಗೆ ।
ನಮ್ಮ ನಾಡಿನಲ್ಲಿ ಅದುನೆ
ಗ್ರಾಮಗಳಲಿ ಮೊದಲಿಗೆ ॥ ೬

ಇಂಥ ಹಳ್ಳಿಯಾಗಿ ಬೆಳ್ಳಿ
ಕಡೆಯತನಕ ಉಳಿಯಲಿ ।
ಸ್ನಿಗ್ಧಪ್ರೀತಿ, ಶುಭಸುಶಾಂತಿ
ನಮ್ಮೊಳಿಲ್ಲ ಬೆಳೆಯಲಿ ॥ ೭

ಪಾಪ ಮತ್ತು ಪಾಪಿ

(ಸಣ್ಣ ಕತೆ)

ಲೇ: 'ಕಿಟ್ಟಣ್ಣ' ಮುಂಬಯಿ

ವಿವೇಕವಿಲ್ಲದ ಸ್ವೈರಾಚರಣೆಯಂತೆಯೆ, ವಿವೇಚನಾರಹಿತವಾದ ಅಂಧಾನುಕರಣವೂ ವ್ಯಕ್ತಿಯ ಜೀವನಕ್ಕೆ ನಿಘಾತಕನಾದುದು; ಹಾಗೆಯೆ ಸಮಾಜಜೀವನಕ್ಕೂ ವೈಷಮ್ಯಕಾರಿಯಾದುದು.

ಮನೆಯು ದೀನವಾದರೂ, ಮುತ್ತು ಕೊಡಲು ಹೋದರೆ ಬಾಯಿಗೆ ಬಿಸಿ ತಗಲದಿರದು!

೧

ಅಂತು ಬೆಳಕು ಹರಿಯುವ ಹೊತ್ತಿಗೆ ಅತ್ತು ಅತ್ತು ಗೌರಮ್ಮನವರ ಕಣ್ಣು ಪೂರ್ತಿ ಸೀದು ಹೋಗಿತ್ತು. ಎದೆ ಬತ್ತಿ ಹೋಗಿತ್ತು. ಇನ್ನು ಅಳಕೆಗೆ ಅಳಬೇಕೆಂದರೂ ಆಗುತ್ತಿರಲಿಲ್ಲವೇನೊ! ಹಣೆಗೆ ಕೈ ಕೊಟ್ಟು, ದುಃಖವನ್ನು ನುಂಗಿ, ಶೋಚನೀಯ ಪರಿಸ್ಥಿತಿಯಲ್ಲಿ ತಲೆ ತಗ್ಗಿಸಿ ಕುಳಿತಿದ್ದರು. ಶಾಸ್ತ್ರಿಗಳು. ಆಗಾಗ ನೀಳವಾದ ನಿಟ್ಟುಸಿರು ಬಿಡುತ್ತಿದ್ದರು ಮಾತ್ರ. ಗೌರಮ್ಮನವರ ಶೂನ್ಯ ದೃಷ್ಟಿಯು, ಶಾಸ್ತ್ರಿಗಳು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡಿದ್ದ ಅವರ ಎರಡು ವರ್ಷದ ಏಕಪುತ್ರ ಪುತ್ರಿ ರಾಧೆಯ ಶವದ ಮೇಲೆ ನೆಟ್ಟಿತ್ತು. ಕಡೆಗೊಂದು ಸಲ ಶಾಸ್ತ್ರಿಗಳ ಕಣ್ಣುಗಳಿಂದಲೂ ನೀರೊತ್ತಿ ಬಂದು ಶವದ ಮುಖವನ್ನು ತೊಳೆಯಿತು. ದುಃಖದ ಒತ್ತಡದಿಂದ ಕಂಪಿಸುತ್ತಿದ್ದ ಅವರ ತುಟಿಗಳು ಮಗುವಿನ ಶೀತಲ ಹಣೆಯನ್ನು ಚುಂಬಿಸಿದುವು.

ಮತ್ತೆ ದೀರ್ಘವಾದ ನಿಟ್ಟುಸಿರಿಟ್ಟು, ಹೆಂಡತಿಯ ಕಡೆಗೆ ತಲೆಯೆತ್ತಿ, "ಗೌರೀ....!" ಎಂದರು, ಶಾಸ್ತ್ರಿಗಳು. ದನಿ ಹೂತು ಹೋಗಿತ್ತು.

ಈಗ ಮತ್ತೆ ಮುಂಡಿಗಳ ನಡುವೆ ಮುಖವನ್ನು ಹುಗಿದು ಬಿಕ್ಕಿ ಬಿಕ್ಕಿ ಅಳುತ್ತಿದ್ದರಾಕೆ.

"ಗೌರೀ....!" ಅತ್ತು ಸ್ವಯೋಚನೆಯಿಲ್ಲವೆಂದು ಅವರ ದನಿ ಬುಸುರುತ್ತಿತ್ತು.

ಶಾಸ್ತ್ರಿಗಳಿಗೆ ಮುಂದೇನು ಘಾತನಾಡಬೇಕೆಂದು ತೋಚಲಿಲ್ಲ. ಯಾವ ರೀತಿಯಲ್ಲಿ ಸಮಾಧಾನ ಮಾಡಲು ಹೊರಟರೂ, ಪದು ಇಬ್ಬರ ದುಃಖವನ್ನೂ ಹೆಚ್ಚಿಸುವುದೆಂದು ಕಾಣುತ್ತಿತ್ತು ಅವರಿಗೆ.

ಹೀಗೇ ಎಷ್ಟು ಹೊತ್ತು ಕುಳಿತುಬಿಡುತ್ತಿದ್ದರೋ ಏನೋ—ಪಕ್ಕದ ಮನೆಯ ಜೋಯಿಸರು. ಬಾರದೇ ಹೋಗಿದ್ದರೆ! ಮಗುವಿನ ಯೋಗಕ್ಷೇಮವನ್ನು ವಿಚಾರಿಸಿ ಹೋಗೋಣವೆಂದೇ ಬೆಳಗ್ಗೆ ಎದ್ದು ಕೂಡಲೆ, ತಲೆಬಾಗಿಲಿನಿಂದಲೇ ಹೆಸರು ಹಿಡಿದು ಕೂಗುತ್ತ ಒಳಕ್ಕೆ ಬಂದ ಜೋಯಿಸರು, ಈ ವೈಶ್ಯವನ್ನು ನೋಡಿ ಗರಬಡೆದವರಂತೆ ನಿಂತು ಬಿಟ್ಟರು.

೨

ಶ್ಮಶಾನದಲ್ಲಿ ಸೀರಸಾಬಿಯು ದೊಡ್ಡ ಹಾರೆಯಿಂದ ಗುಂಡಿ ತೋಡುತ್ತಿದ್ದಾಗ, ಶವವನ್ನಪ್ಪಿ ನಿಂತಿದ್ದ ಶಾಸ್ತ್ರಿಗಳು ಹುಚ್ಚನಂತೆ ಕಾಣುತ್ತಿದ್ದರು.

ಯಾವ ತಪ್ಪಿಗಾಗಿ ಈ ಶಿಕ್ಷೆ? ಮುಡುವೆಯಾಗಿ, ಏಳು ವರ್ಷಗಳ ಪೂಜೆಯ ನಂತರ, ತಪಸ್ಸಿಗೆ ವರನೆನ್ನುವಂತೆ ಕೊಟ್ಟ ಮಗುವನ್ನು ತಾನೇ ಕಿತ್ತುಕೊಂಡ ದೇವರ ವಿಚಿತ್ರ ಲೀಲೆಯ ಮೇಲೆ ಶಾಸ್ತ್ರಿಗಳಿಗೆ ಜಿಗುಪ್ಸೆ ಹುಟ್ಟಿತು. ಮತ್ತೆ ಮತ್ತೆ ಮಗುವಿನ ಆಟಪಾಟಗಳು ಅವರ ಸ್ಮೃತಿಪಟಲದಲ್ಲಿ ಮೂಡಿ ತೀವ್ರ ವೇದನೆಯಾಗತೊಡಗಿತು. ಹೌದು! ಆ ಹಳ್ಳಿಯಲ್ಲೇ ಅಂತಹ ಸೂಟಿಯಾಡಿ, ಮಾಟನಾದ, ಮುದ್ದಾದ ಮಗು ಇರಲಿಲ್ಲ! ಈಗ ಆಹುತಿ ತೆಗೆದುಕೊಂಡ ಆ ಜ್ವರದ ಹೊರತಾಗಿ, ಹುಟ್ಟಿದಾರಭ್ಯ ಯಾವ ಖಾಯಿಲೆಯೂ ಇಲ್ಲದೆ ಆರೋಗ್ಯವಾಗಿ ಬೆಳೆದ ಮಗು ರಾಧೆ! ಆ ವ್ಯೆಯ ಮಾಟ, ಹೊಳಿಯುವ ದೊಡ್ಡ ಕಣ್ಣುಗಳು, ಸದಾ ನಗುವ ತುಟಿ,—ಯಾರನ್ನಾವರೂ ಆಕರ್ಷಿಸುತ್ತಿತ್ತು ಅವಳ ರೂಪು. ಅರು ತಿಂಗಳಿಗೇ 'ಅಮ್ಮ' ಎನಲು ಕಲಿತ ಮಗು, ಒಂಬತ್ತು ತಿಂಗಳಲ್ಲಿ ಪುಟಾಣಿ ಹೆಜ್ಜೆ ಹಾಕುತ್ತ ನಡೆಯುತ್ತಿತ್ತು. ಎರಡು ವರ್ಷಕ್ಕೆ ನೂರಿಪ್ಪತ್ತೈದು ತೊದಲು ಮಾತುಗಳಿಂದ ತಾಯಿ-ತಂದೆಗಳಿಗೆ ಸದಾ ಹರ್ಷವನ್ನು ನೀಡುತ್ತಿದ್ದ ಮಗುವದು ಬಹಳ ಮುದ್ದಿನಿಂದ ಬೆಳೆದ ಒಂದೇ ಮಗು.

ಯಾವ ಕೈಯಿಂದ ಅಂತಹ ಮಗುವನ್ನೀಗ,—ತೋಡುತ್ತಿರುವ ಆ ಗುಂಡಿಯಲ್ಲಿಟ್ಟು, ಮಣ್ಣು ಮುಚ್ಚಬೇಕು? ವರ್ಣನಾತೀತ ವೇದನೆಯನ್ನನುಭವಿಸುತ್ತಿದ್ದರು ಶಾಸ್ತ್ರಿಗಳು.

ಕಡೆಗೆ, ಮಗುವನ್ನು ತಮ್ಮ ಸರ್ವಸ್ವವೆಂದು ನಂಬಿದ್ದ ಜೋಯಿಸರು, ಶಾಸ್ತ್ರಿಗಳನ್ನು ಎಚ್ಚರಿಸಿದರು. ಶಾಸ್ತ್ರಿಗಳು ಶವದ ಮುಖವನ್ನು ತೆಗೆದು ನೋಳ್ಕೋ ಎಂದು ಅಳುತ್ತ ಮಗುವನ್ನು ಗುಂಡಿಯಲ್ಲಿ ಮಲಗಿಸಿದರು.

ವಿಚಿತ್ರ! ಕಡೆಗೆ ದೇವರು ಕಣ್ಣು ಬಿಟ್ಟನೆ? ಇದ್ದಕ್ಕಿದ್ದಂತೆ ಮಗು ಚಿಟ್ಟನೆ ಚೀರಿತು. ಶಾಸ್ತ್ರಿಗಳು ನೂಕರಾದರು. ಜೋಯಿ-

ಸರು ನಡುಗಿ ಹೋದರು. ಏರ್ ಸಾಬ್ ಗರಬಡಿದವನಂತೆ ನಿಂತು ಬಿಟ್ಟ. ಶ್ಮಶಾನದಲ್ಲಿ ಬೇರೆ ಯಾರೂ ಇರಲಿಲ್ಲ.

ಮಗುವನ್ನೆತ್ತಿಕೊಳ್ಳಲು ಶಾಸ್ತ್ರಿಗಳು ಅನಾಮತ್ತಾಗಿ ಬಗ್ಗಿದರು. ಆದರೆ ಜೋಯಿಸರ ಬಲವಾದ ರಟ್ಟೆಗಳು ಅವರನ್ನು ಗಟ್ಟಿಯಾಗಿ ಹಿಡಿದಿದ್ದುವು.

"ಬೇಡ! ಬೇಡ, ಸುಬ್ಬೂ, ಬೇಡ! ಮಗುವನ್ನು ಮುಟ್ಟೀಯೆ! ಇನ್ನು ಮಗು ನಮ್ಮದಲ್ಲ!" ಜೋಯಿಸರ ದನಿ ಕಂಪಿಸುತ್ತಿತ್ತು.

"ಏನು ಜೋಯಿಸರೇ, ಏಕೆ?" ಏದುಸಿರು ಬಿಡುತ್ತ ಕೇಳಿದರು ಶಾಸ್ತ್ರಿಗಳು.

"ಬಾ! ಹೀಗೆ ಬಂದುಬಿಡು! ಹೇಳುತ್ತೀನೆ! ಶವವನ್ನು ತಂದ ಮೇಲೆ ಅದು ನಮ್ಮದಲ್ಲ! ಈಗ ಆ ಮಗು ಅನಿಷ್ಟ! ಸುಮ್ಮನೆ ಬಂದು ಬಿಡು! ಏನೂ ಮಾಡುವುದಕ್ಕಾಗುವದಿಲ್ಲ!"

"ಬದುಕಿರುವ ಮಗು ಜೋಯಿಸರೆ! ನನ್ನ ಕಂದನನ್ನು ನಾನು ಎತ್ತಿಕೊಳ್ಳುವುದರಲ್ಲಿ ತಪ್ಪೇನಿದೆ?"

"ರಾಮ, ರಾಮ! ನಿನ್ನ ಮಗುವಿಗಾಗಿ ಬ್ರಾಹ್ಮಣಿಕೆಯ ನಿಯಮ-ನೀತಿಗಳನ್ನೇ ತಲೆಕೆಳಗೆ ಮಾಡುತ್ತಿದ್ದೀ! ತಿಳಿದವ ನೀನು ಹೀಗೆಲ್ಲ ಮಾಡಕೂಡದು! ಮಹಾಪಾಪ! ಏಳೇಳು ಜನ್ಮಕ್ಕೂ ಕಾಡುವ ಪಾಪ!" ಶಾಸ್ತ್ರಿಗಳ ಕೈಯನ್ನು ಇನ್ನೂ ಹಿಡಿದುಕೊಂಡೇ ಜೋಯಿಸರು ಹೇಳುತ್ತಿದ್ದರು.

ಸುಬ್ಬರಾಮ ಶಾಸ್ತ್ರಿಗಳಿಗೆ ಜೋಯಿಸರ ಮಾತು ಈಗ ಅರ್ಥವಾಯಿತು. ಬ್ರಾಹ್ಮಣಿಕೆಯ ಕ್ರೂರ ಕಟ್ಟಳೆಗಳನ್ನವರು ಮರೆತಿದ್ದರು. ಆಕಾಶವೇ ಕಳಚಿ ಬಿದ್ದಂತಾಯಿತು ಅವರಿಗೆ. ದಿಕ್ಕೇ ತೋರದೆ ಮತ್ತೆ ಮಗುವಿನ ಕಡೆ ನೋಡಿದರು. ಮಗುವಿನ ಉಸುರಾಟದಿಂದ ಅದರ ಹೊಟ್ಟೆ ಅಲುಗಾಡುತ್ತಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ಅವರ ಜೀವ ತಡೆಯಲಿಲ್ಲ. ಮುಕ್ಕಳಿಂತೆ ಅಳುತ್ತ ಜೋಯಿಸರ ಕಾಲು ಕಟ್ಟಿಕೊಂಡು, "ನಿಮ್ಮ ದನ್ಯಾಯ್ಯ, ಜೋಯಿಸರೇ, ಯಾರಿಗೂ ತಿಳಿಸಬೇಡಿ. ಅರ್ಧ ದಾರಿಯಲ್ಲೆ ಮಗು ಬದುಕಿತೆಂದು ಹೇಳಿದರಾಯಿತು. ಜನರಿಗೆ, ಬಹುಶಃ ರಾಧೆ ಸತ್ತ ಸುದ್ದಿಯೂ ಯಾರಿಗೂ ಗೊತ್ತಿಲ್ಲ. ಈ ಸ್ಮಶಾನದಿಂದ ಹೇಗಾದರೂ ಪಾರುಮಾಡಿ ಜೋಯಿಸರೇ! ನೀವೂ ಎಂಟು ಮಕ್ಕಳ ತಂದೆ!" ಎಂದರು. ಅವರ ರೋದನ ಕರುಣಾಜನಕವಾಗಿತ್ತು.

ಜೋಯಿಸರಿಗೆ ಕ್ಷಣಕಾಲ ಏನು ಹೇಳಬೇಕೆಂದು ತೋಚಲಿಲ್ಲ. ಶಾಸ್ತ್ರಿಗಳನ್ನು ಬಿಗಿದಪ್ಪಿಕೊಂಡು ಉತ್ತರಿಸಿದರು: "ಸುಬ್ಬೂ, ನಾನೇನು ಮಾಡಲಿ ಹೇಳು? ನಾನಿಲ್ಲಿಗೆ ಬಾರದೇ ಹೋಗಿದ್ದರೇ ಚೆನ್ನಾಗಿತ್ತು; ಬಂದು ಧರ್ಮಸಂಕಟದಲ್ಲಿ ಸಿಕ್ಕಿಕೊಂಡೆ. ಈಗ ಮಗುವನ್ನು ಮರಳಿ ಮನೆಗೆ ಕರೆದುಕೊಂಡು ಹೋಗುವುದೆಂದರೆ ಮಹಾ ಪಾಪ! ಅನಿಷ್ಟ! ಇದು ನಿನಗೂ ತಿಳಿದ ವಿಷಯ. ಗುಟ್ಟು ಹೊರಬಿದ್ದರೆ ಇಬ್ಬರಿಗೂ ಬಹಿಷ್ಕಾರ! ಅಲ್ಲದೆ, ಊರಿನ ಜೋಯಿಸನೆನಿಸಿಕೊಂಡ ನಾನು ಹೀಗೆ ಮಾಡಿದರೆ ಹೇಗೆ? ದಯವಿಟ್ಟು ಏಳು, ಸುಬ್ಬು. ನಿನ್ನ ಸ್ಥಿತಿಯನ್ನು ನೋಡಿ ಹೊಟ್ಟೆ ಉರಿಯುತ್ತಿದೆ; ಆದರೆ ಏನೂ ಮಾಡುವುದಕ್ಕಾಗುವುದಿಲ್ಲ. ಮುಖ್ಯ: ವಸ್ತು ನಮ್ಮದಲ್ಲ." ಜೋಯಿಸರ ಕಣ್ಣು ತೇವಗೊಂಡಿತ್ತು.

"ಜೋಯಿಸರೇ, ನನ್ನನ್ನು ಕೊಂದು ಬಿಡುತ್ತೀರಿ? ಕರುಣೆಯಿಂದ ಯೋಚಿಸಿ ನೋಡಿ ಜೋಯಿಸರೇ!" ಶಾಸ್ತ್ರಿಗಳು ಈಗ, ಮಗು ಸತ್ತಾಗ ಅತ್ತಿದ್ದಕ್ಕಿಂತಲೂ ಗಟ್ಟಿಯಾಗಿ ಅಳುತ್ತಿದ್ದರು.

"ಖಂಡಿತ, ಸುಬ್ಬು, ನಾನೇನೂ ಮಾಡುವ ಹಾಗಿಲ್ಲ. ಕರ್ಮನಿಷ್ಠ ಬ್ರಾಹ್ಮಣನಾದ ನಿನಗೆ ಸಕಾಲದಲ್ಲಿ ಧರ್ಮಸೂಕ್ಷ್ಮವನ್ನು ತಿಳಿಸಿದೆ. ಇನ್ನು ನಿನ್ನ ಇಷ್ಟ." ವ್ಯಥಸ್ವರದಲ್ಲಿ ಹೇಳಿದರು ಜೋಯಿಸರು.

ಶಾಸ್ತ್ರಿಗಳ ದೃಷ್ಟಿ ಮತ್ತೆ ಗುಂಡಿಯ ಕಡೆ ತಿರುಗಿತು. ಆದರೆ ಗುಂಡಿಯಲ್ಲಿ ಮಗು ಇರಲಿಲ್ಲ. ಒಂದು ಮಗ್ಗುಲಿಗೆ ನಿಂತಿದ್ದ ಮುದಿ ಸಾಬಿ, ರಾಧೆಯನ್ನು ತನ್ನ ಹೆಗಲ ಮೇಲೆ ಮಲಗಿಸಿಕೊಂಡಿದ್ದ.

ಇವರ ಮಾತುಗಳನ್ನು ಇಷ್ಟು ಹೊತ್ತೂ ಅಸಹನೆಯಿಂದ ಆಲಿಸುತ್ತಿದ್ದ ಅವನು, ನಿಷ್ಠುರವಾಗಿ "ಕ್ಯಾ ಸ್ವಾಮಿ! ಚಿನ್ನದಂಥಾ ಮಗೂನ ಬದುಕಿರೋವಾಗಲೇ ಮಣ್ಣು ಮಾಡೋಕೆ ಬಂದಿದೀರ? ಇಲ್ಲಿ ಮಗು ಸಾಯ್ತಾ ಇದೆ; ಅಲ್ಲಿ ನಿಮ್ಮ ಸಾಸ್ತ್ರ! ಜೇಟಿಯ ಆಸ್ಪತ್ರೆಗಾದರೂ ಹೋಗಿ ಈ ಜೀವನ ಬನುಕಿಸ್ತೀನಿ. ಸಾಸ ಬಂದರೆ ನನಗೆ ಬರಲಿ!" ಎಂದವನೇ ಉತ್ತರಕ್ಕೂ ಕಾಯದೆ, ಹಾರೆಯನ್ನು ಅಲ್ಲಿಯೇ ಬಿಟ್ಟು, ಮಗುವನ್ನೆತ್ತಿಕೊಂಡು ಬೇಗ ಬೇಗನೆ ಹೊರಟೇ ಬಿಟ್ಟ.

ಜೋಯಿಸರಿಗಾಗಲಿ, ಶಾಸ್ತ್ರಿಗಳಿಗಾಗಲಿ, ಏನು ಮಾಡುವುದನ್ನೂ ತೋಚಲಿಲ್ಲ. ಅವರು ಏನನ್ನೂ ಯೋಚಿಸುವುದಕ್ಕೆ ಮುಂಚೆಯೇ ಮುದುಕ ಶ್ಮಶಾನ ಬಿಟ್ಟು ಬಹಳ ದೂರ ಹೋಗಿಯಾಗಿತ್ತು!

ಸ್ವಲ್ಪ ಹೊತ್ತಾದ ಮೇಲೆ ನಿರಾಳವಾದ ನಿಟ್ಟುಸಿರು ಬಿಟ್ಟು ಜೋಯಿಸರೆಂದರು: "ಹೇಗೋ ಒಳ್ಳೆಯದೇ ಆಯಿತು ಬಿಡು!"

"ಈಗೇನು ಮಾಡುವುದು, ಜೋಯಿಸರೆ?" ಅಸಹಾಯ ಪರಿಸ್ಥಿತಿಯಲ್ಲಿ, ಸಾಬ ಹೋದ ದಿಕ್ಕನ್ನೇ ನೋಡುತ್ತಿದ್ದ ಶಾಸ್ತ್ರಿಗಳು ಜೋಯಿಸರನ್ನು ಕೇಳಿದರು.

"ಮಾಡುವುದೇನು? ಮಗು ಬದುಕಿತು. ಆ ಮುದಿ ಸಾಬ ಬಹಳ ಒಳ್ಳೆಯ ಮನುಷ್ಯ. ಅರು ಮುಕ್ಕಳ ತಂದೆ. ಅವನ ಎರಡನೆಯ ಹೆಂಡತಿ ಹೊನ್ನೆ ಮೊನ್ನೆ ತೀರಿಕೊಂಡಳು. ತನ್ನ ಮುಕ್ಕಳನ್ನು ಬಹಳ ಪ್ರೀತಿಯಿಂದ ಸಾಕುತ್ತಾನೆಂದು ಎಲ್ಲರೂ ಹೇಳುತ್ತಾರೆ. ನಿನ್ನ ಮಗುವನ್ನು ತಾನೇ ಸಾಕಿದರೂ ಸಾಕುವನೆನೆ. ತನ್ನ ಪಾಡಿಗೆ ಮಗು ಬೆಳೆದು ದೊಡ್ಡದಾಗುತ್ತದೆ. ಅದರೆ ನಿನ್ನ ಪಾಲಿಗಿಲ್ಲ. ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ನಾವು ಪಡೆದುಕೊಂಡು ಬಂದ ಕರ್ಮ ಇಷ್ಟು!"

"ಸರಿ, ಜೋಯಿಸರೇ, ಹೇಗೂ ಈಗ ಆಗುವುದು ಆಗಿ ಹೋಯಿತು. ಆದರೆ ಈ ವಿಷಯವನ್ನು ನನ್ನ ಹೆಂಡತಿಗೆ ಹೇಗೆ

ಹೇಳಲಿ ಜೋಯಿಸರೇ ? ಹೇಳಿದರೆ ಅವಳು ಹುಚ್ಚಿಯಂತೆ ಓಡಿಹೋಗಿ ಮಗುವನ್ನು ಕರೆದು ತರದೆ ಬಿಡುತ್ತಾಳೆಯೆ ? ಅವಳನ್ನು ತಡೆಯುವುದಕ್ಕಾಗುತ್ತದೆಯೆ ? ಒಬ್ಬ ಸಾಬಿ ನನ್ನ ಮಗಳನ್ನು ಸಾಕುತ್ತಿರುವನೆಂಬುದು ಗೊತ್ತಾದರೆ, ಜನ ನನ್ನ ತಿಳಿಗೇಡಿತನಕ್ಕೆ ಏನೆಂದಾರು ? ನಾನು ತಾನೆ ಮಗು ಬಿಟ್ಟು ಹೇಗೆ ಇದ್ದು ಬಿಡಲಿ ಜೋಯಿಸರೇ ? "

" ಸುಬ್ಬು, ಏನೂ ಮಾಡುವುದಕ್ಕಾಗುವುದಿಲ್ಲ, ಸುಬ್ಬು. ಋಷಿಗಳು ಮಾಡಿಟ್ಟು ಹೋಗಿರುವ ಶಾಸ್ತ್ರಗಳನ್ನು ನಮ್ಮ ಸ್ವಾರ್ಥಕ್ಕಾಗಿ ಬೇಕೆಂದಾಗ ವ್ಯತ್ಯಾಸ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ, ಸುಬ್ಬು. ನಿನ್ನಂಥ ಕರ್ಮನಿಷ್ಠ ಬ್ರಾಹ್ಮಣ ಹೀಗೆ ಚಿಂತಿಸುತ್ತ ಕುಳಿತರೆ ನಮ್ಮ ಬ್ರಾಹ್ಮಣಿಕೆ ಹೇಗೆ ಉಳಿಯಬೇಕು ಹೇಳು ? ಇನ್ನು ನಿನ್ನ ಹೆಂಡತಿಯ ವಿಚಾರ : ಹೆಂಗಸರಿಗೆ ವಿವೇಚನಾಶಕ್ತಿಯೇ ಇರುವುದಿಲ್ಲ. ನನಗೊಂದು ತೋಚುತ್ತಿತ್ತು ಸುಬ್ಬು. ಈ ವಿಷಯವನ್ನು ಅವಳಿಗೆ ಹೇಳಲೇ ಬೇಡ. ಮಗುವನ್ನು ಸಮಾಧಿ ಮಾಡಿದೆನೆಂದು ಹೇಳಿಬಿಡು. "

ಶಾಸ್ತ್ರಿಗಳಿಗೆ ಮುಗ್ಧ ಜೋಯಿಸರು ಯುಗಾಂತರದಂತೆ ಕಂಡರು.

ಜೋಯಿಸರು ತಮ್ಮ ಮಾತನ್ನು ಮುಂದುವರೆಸಿದರು : " ನನಗೆ ಗೊತ್ತು ನಿನ್ನ ಸಂಕಟ. ಏನು ಮಾಡುವುದಕ್ಕೆ ಬರುತ್ತೆ ಹೇಳು ? ಇನ್ನೊಂದು ವಿಷಯ : ಆ ಸಾಬಿಗೆ ದುಡ್ಡು ಕೊಟ್ಟು, ಹೇಗೋ ಅವನನ್ನು ದೂರ ಸಾಗಿಸೋಣ. ಅಂದರೆ ಜನರ ಮಾತೂ ತಪ್ಪುತ್ತೆ, ನಿನಗೆ ಚಿಂತೆಯೂ ತಪ್ಪುತ್ತೆ, ಗೌರಮ್ಮನಿಗೂ ಗುಟ್ಟು ತಿಳಿಯುವುದಿಲ್ಲ. ಏನು ಬೇಕಾದರೂ ಸಹಾಯ ಕೇಳು, ಸುಬ್ಬು; ಮಾಡುತ್ತೇನೆ. ಅರವೆಬ್ರಾಹ್ಮಣ ಧರ್ಮಕ್ಕೆ ಚ್ಯುತಿ ಬರುವಂತಹ ಸಾಹಸಕಾರ್ಯ ಮಾತ್ರ ನನ್ನಿಂದ ಸಾಧ್ಯವಿಲ್ಲ. "

ಶಾಸ್ತ್ರಿಗಳು ಏನೂ ನಿರ್ಧರಿಸಿದರೂ ಏನೂ. " ಸರಿ, ನಿನ್ನ ಹಣೇ ಬರಹ.... ನಡೆಯುತ್ತೆ ಹೋಗೋಣ, " ಎಂದು ಹೇಳಿ, ತಮ್ಮ ಕಲ್ಲು ಮನಸ್ಸಿಗೆ ತಾನೇ ಆಶ್ಚರ್ಯಪಟ್ಟು, ಜೋಯಿಸರೊಡನೆ ಹೊರಟು ಹೋದರು.

೩

ಮೂರನೆಯ ದಿನ ಜೋಯಿಸರು ಪುಟ್ಟಿಸಾಬಿಯನ್ನು ಊರು ಬಿಡೆಂದು ಪುಸಲಾಯಿಸಿದಾಗ, ಅವರಿಗೆ ಚೆನ್ನಾಗಿ ಅಪಮಾನವಾಯಿತು. " ನಿಮ್ಮ ಜಾತಿಗೆ ನಾಚಿಕೆಯೂ ಇಲ್ಲವಲ್ಲ, " ಎಂತಲೂ ಅವನಿಂದ ಅನಿಸಿಕೊಂಡು ಬಂದರು.

ಇನ್ನೂ ಒಂದು ತಿಂಗಳೂ ಕಳೆದಿರಲಿಲ್ಲ. ಹೇಗೆ ಹಬ್ಬಿತೋ, ವಿಷಯ, ಊರೆಲ್ಲರ ಮನೆಮಾತಾಯಿತು.

ಶಾಸ್ತ್ರಿಗಳ ಅವೈಷ್ಟಕ್ಕೋ, ದುರದೃಷ್ಟಕ್ಕೋ, ಮಗುವನ್ನು ಕಳಿಸುಕೊಂಡ ದುಃಖದಿಂದ ಗೌರಮ್ಮನವರು ಯಾರಿಗೂ ಮುಖ ತೋರಿಸದೆ ಮನೆಯಲ್ಲೆ ಇದ್ದುದರಿಂದ, ಆಕೆಗಿನ್ನೂ ವಿಷಯ ತಿಳಿದಿರಲಿಲ್ಲ. ದಿನಗಳುರುಳಿದಂತೆ ಗೌರಮ್ಮನವರು ಕೊರಗಿನಲ್ಲಿ ಕುಗ್ಗಿ ಹೋದರು. ಶಾಸ್ತ್ರಿಗಳಿಗೂ ಹೆಂಡತಿಗೆ ವಿಷಯವನ್ನು ಹೇಳಲು ಧೈರ್ಯ ಬರಲಿಲ್ಲ. ಅವರೂ ಮುಖವೆತ್ತಿ ಸೂತನಾಡದೆ ಒಳಗೇ ಕ್ಷಯಿಸುತ್ತಿದ್ದರು.

ಊರಿನ ಜನ ಈಗಾಗಲೇ ತಲೆಗೊಂದು ಸೂತನಾಡುತ್ತಿದ್ದರು. ಯಾರೋ ಒಬ್ಬರು, ಮುಂದುವರೆದವರು, ಬಹಳ ನುರುಕಷಟ್ಟು, ಈ ವಿಷಯವಾಗಿ ಆಡಿದ ಮಾತೇನೆಂದರೆ: ತಾನೇ ಆ ಸಂದರ್ಭದಲ್ಲಿ ಶ್ಮಶಾನದಲ್ಲಿದ್ದಿದ್ದರೆ, ಹೇಗಾದರೂ ಮಾಡಿ ಸುಳ್ಳು ಹೆಳಲು ಜೋಯಿಸರನ್ನೊ ಸ್ಪಿಸಿ, ಮಗುವನ್ನು ಮರಳಿ ಕರೆದುತರಬಹುದಿತ್ತು; ಅದರೆ ಈಗ ತುರುಕನ ಮನೆಯಲ್ಲಿದ್ದು ಮಗುವಿಗೆ ಜಾತಿ ಹೋಗಿರುವುದರಿಂದ; ನಿನೂ ಮಾಡುವುದಕ್ಕಾಗುವುದಿಲ್ಲವೆಂದು.

ಈಗ ಸಹಾಯ ಮಾಡದಿದ್ದರೆ ಮನುಷ್ಯನು ಇನ್ನೂ ಸ್ವಯೋಜನವಿಲ್ಲವೆಂದುಕೊಂಡ ಜೋಯಿಸರು, ಶಾಸ್ತ್ರಿಗಳಿಗೆ ಸತೀಸಮೇತ ತೀರ್ಥಯಾತ್ರೆ ಮಾಡುವ ಸಲಹೆಯನ್ನು ಕೊಟ್ಟರು. ಶಾಸ್ತ್ರಿಗಳಿಗೂ ಬೇರೆ ಉಪಾಯ ಕಾಣಲಿಲ್ಲ ಇವರಿಗೆ ಊರೂ ಬೇಸರವೆನಿಸಿತ್ತು. ಹೆಂಡತಿಯ ಕಿವಿಗೂ ಈ ವಿಷಯ ಬೀಳದಿರುವುದಕ್ಕೆ ಈ ಉಪಾಯ ಸೂಕ್ತವಾಗಿಯೂ ತೋರಿತು. ಸತೀಸಮೇತರಾಗಿ ತೀರ್ಥಯಾತ್ರೆಗೆ ಹೊರಟೇ ಬಿಟ್ಟರು.

೪

ಬಡವನಾದ ಮುದಿ ಪೀರ್‌ಸಾಬಿಯು ತನ್ನ ಆರು ಮಕ್ಕಳ ಜೊತೆಗೆ ಏಳನೆಯ ರಾಫಿಯನ್ನು ತನಗೆ ಸಾಧ್ಯವಾದ ರೀತಿಯಲ್ಲಿ ಸಾಕಿದ್ದಾನೆ. ರಾಫಿಗೆ ಈಗ ಎಂಟು ವರ್ಷ. ಒಳ್ಳೇ ಮಿಂಚಿನಂತಿದ್ದಾಳೆ. ಪೀರ್‌ಸಾಬಿಯನ್ನು, ಎಲ್ಲ ಮಕ್ಕಳೂ ಕರೆಯುವಂತೆ, ತಾನೂ 'ದಾದಾ' ಎಂದು ಕರೆಯುತ್ತಾಳೆ. ಎಲ್ಲರೂ ರಾಫಿಯನ್ನು 'ನೂರ್‌ಜಹಾನ್' ಎಂದು ಕರೆಯುತ್ತಾರೆ.

ಜನರು ತಮಗೆ ತೋರಿದಂತೆ ನೂರ್‌ಜಹಾನಳ ಭವಿಷ್ಯವನ್ನು ಕಟ್ಟುತ್ತಿದ್ದಾರೆ. ಆದರೆ ಎಲ್ಲರಿಗೂ ಒಂದೇ ಒಂದು ವಿಷಯ ಒಗ್ಗಿಬಾಗಿದೆ— ಶಾಸ್ತ್ರಿಗಳೇಕೆ ಹಿಂದಿರುಗಲಿಲ್ಲ ? ಹೇಗಾದರೂ ಮಾಡಿ ತಮ್ಮ ಸುಬ್ಬುವಿನ ಪತ್ತೆ ಹಚ್ಚಬೇಕೆಂದು ಜೋಯಿಸರು ಪ್ರಯತ್ನ ಮಾಡಿದರೂ ಸಾಧ್ಯವಾಗಿಲ್ಲ. ನಾನಾ ಸ್ಥಳಗಳಿಗೆ ಯೋಗಿ ಹುಡುಕಿದಂತಾಯಿತು; ಎಲ್ಲೆಲ್ಲಿಗೋ ಕಾಗದ ಬರೆದು ನೋಡಿಯಾಯಿತು; ಕೊನೆಗೆ ವರ್ತಮಾನಪತ್ರಿಕೆಗಳಲ್ಲೂ ಸಾರಿದ್ದಾಯಿತು; ಇಲ್ಲ, ಶಾಸ್ತ್ರಿಗಳ ಪತ್ತೆಯೇ ಇಲ್ಲ.

ಈಗೀಗ ಜೋಯಿಸರ ನಡತೆಯೂ ಬದಲಾಗಿದೆ. ಮೊದಲಿದ್ದ ಗೆಲವೂ ಇಲ್ಲ. ಬಹಳ ಸೋತಿದ್ದಾರೆ. ಹೆಚ್ಚು ಹೆಚ್ಚು ಸೂತನಾಡುವುದಿಲ್ಲ ನಿನ್ನೋ ಪ್ರಶ್ನೆಗೆ ಏನೋ ಉತ್ತರ ಕೊಡುತ್ತಾರೆ. ಇನ್ನೂ ವಿಚಿತ್ರವೆಂದರೆ, ನಿಜವೋ ಸುಳ್ಳೋ, ಪೀರ್ ಸಾಬಿಯ ಮಕ್ಕಳ ಮೂಲಕ, ನೂರ್‌ಜಹಾನಳಿಗೆ ತಿಂಡಿ ತಿನಿಸುಗಳನ್ನು ಒಂದೆರಡು ಸಲ ಕಳುಹಿಸಿದರೆಂದು ಕೆಲವರ ಹೇಳಿಕೆ. ಅಷ್ಟೇ ಅಲ್ಲ, ಮತ್ತೆ ಕೆಲವರು ಹೇಳುವುದು: ಒಂದು ದಿನ ಜೋಯಿಸರು ತುರುಕರ ಪಾಳ್ಯಕ್ಕೆ ಹೋಗಿ,

ಪೀರ್ ಸಾಬಿಯ ಮನೆಯ ಮುಂದೆ ಆಟವಾಡುತ್ತಿದ್ದ ನೂರ್‌ಜಹಾನಳನ್ನು ಎದೆಗವಚಿಕೊಂಡು ಅತ್ತರೆಂದು.

ಜೀ

ಅಂದು ಬೆಳಗ್ಗೆ ಮುದಿ ಪೀರ್‌ಸಾಬಿ ಜೋಯಿಸರ ಮನೆಗೆ ಬಂದು, ಶಾಸ್ತ್ರಿಗಳನ್ನು ತಾನು ಹಿಂದಿನ ದಿನ ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ನೋಡಿದೆನೆಂದು ಹೇಳಿದಾಗ, ಜೋಯಿಸರು ಗಟ್ಟಿಯಾಗಿ "ಸುಬ್ಬಾ! ಸುಬ್ಬಾ!" ಎಂದು ಕೂಗುತ್ತ ಅರಡಿ ಎತ್ತರ ಕುಪ್ಪಳಿಸಿದರು. ಮುದಿ ಸಾಬಿ ಇನ್ನೂ ಏನನ್ನೋ ಹೇಳಲು ಹೊರಟಿದ್ದ; ಆದರೆ, ಅಷ್ಟರಲ್ಲಿ, ಜೋಯಿಸರು ಬೀದಿಗೆ ಓಡಿಯಾಗಿತ್ತು.

ಸೂರ್ಯಾಸ್ತಮಯದ ಹೊತ್ತಿಗೆ, ಮೈಯೆಲ್ಲ ದೂಳು ತುಂಬಿ, ಹುಚ್ಚನ ಹಾಗೆ ಜೋಯಿಸರು ಪೀರ್‌ಸಾಬಿಯ ಜೋಪಡಿಗೆ ಬಂದಾಗ, ಮುದಿಸಾಬಿಗೆ ನೊದಲು ಇವರ ಗುರುತೇ ಸಿಗಲಿಲ್ಲ. ಗುರುತಿಸಿದಾಗ ಅವನಿಗೆ ಗಾಬರಿಯೂ ಆಯಿತು.

"ಇದೇನು ಸಾಮಿ ಹೀಗೆ!" ಅವನು ಕೇಳಿದ, ಬಾಯಿ ತೆರೆದು, ಕಣ್ಣು ಅಗಲಿಸಿ.

"ನನ್ನ ಸುಬ್ಬು ಸಿಕ್ಕಲಿಲ್ಲ," ಸೋತ ದನಿಯಲ್ಲಿ ಹೇಳುತ್ತಿರುವಂತೆಯೇ ಜೋಯಿಸರ ಆಯಾಸಗೊಂಡ ಶರೀರವು ನೆಲದ ಮೇಲೆ ಕುಸಿಯಿತು

"ಈ ಊರು ಬಿಟ್ಟು ಎಲ್ಲೂ ಹೋಗಿಲ್ಲ ಸಾಮಿ, ಅವರು. ಇನ್ನೂ ನಿನ್ನೆ ರಾತ್ರಿ ಇಲ್ಲಿ ಅವರು ಬಂದಿದ್ದರು ಈ ಊರಲ್ಲಿ ಏಲ್ಲೊ ಇರಬೇಕು." ಎಂದು ಭಾವರಹಿತನಾಗಿ ಹೇಳುತ್ತಿದ್ದಾಗ, ಅವನ ತಲೆ ಕೆಲಸ ಮಾಡುತ್ತಿತ್ತು.

"ಇಲ್ಲ ಪೀರ್, ನನಗೇಕೋ ಬಹಳ ಭಯವಾಗುತ್ತಿದೆ. ನಿನಗೇನೂ ಹೇಳಲಿಲ್ಲವೆ?" ಜೋಯಿಸರು ನಿಜಕ್ಕೂ ಬಹಳ ಹೆದರಿದ್ದರೆನ್ನುವುದು ಅವರ ದನಿಯಲ್ಲಿ ಕಾಣುತ್ತಿತ್ತು.

ಮುದಿ ಸಾಬಿ ಏನೋ ಯೋಚಿಸಿ, "ನೂರ್ ಬೇಟಿ, ನೀನು ಆಟವಾಡಿಕೋ ಹೋಗು ಮಗು," ಎಂದು ಉರ್ದು ಭಾಷೆಯಲ್ಲಿ ಹೇಳಿ, ತನ್ನ ಇಬ್ಬರು ಹೆಣ್ಣುಮಕ್ಕಳೊಡನೆ ನಿಂತಿದ್ದ ರಾಧೆಯನ್ನು ಹೊರಕ್ಕೆ ಕಳುಹಿಸಿದನು.

"ಸಾಮಿ, ನಾನು ನಿನಗೆ ಬೆಳಗ್ಗೆ ಎಲ್ಲ ವಿಷಯಾನೂ ತಿಳಿಸೋಣಾಂತೆ ಬಂದೆ. ನೀವು ಕೇಳಿದೆ ಬೀದಿಗೆ ಓಡಿಬಿಟ್ಟಿರಿ," ಹೆಣ್ಣುಮಕ್ಕಳು ಹೊರಕ್ಕೆ ಹೋದನಂತರ ಪೀರ್ ಸಾಬಿ ಹೇಳಿದನು.

"ಏನು ಪೀರ್? ಬೇಗ ಹೇಳು!" ತವಕಗೊಂಡು ಕೇಳಿದರು ಶಾಸ್ತ್ರಿಗಳು.

"ನಿನ್ನೆ ರಾತ್ರಿ ಸುಮಾರು ಹನ್ನೊಂದು ಗಂಟೆಗೆ ಸಾಸ್ತ್ರೀ ಸಾಮಿಗಳು ಇಲ್ಲಿಗೆ ಬಂದರು. 'ಯಾರಿವ ಹುಚ್ಚ' ಅಂದುಕೊಂಡೆ ನೋಡಿ. ಗುರುತೇ ಸಿಗಲಿಲ್ಲ ಸಾಮಿ! ಸೂರ್ತಿ ದಾಡಿ ಬೆಳಸೀದಾರೆ! ಜಕ್ಕಳ ನೂಳೆ ಆಗೀದಾರೆ! 'ಯಾರಪ್ಪ ನೀನು?' ಅಂತ ಕೇಳಿದೆ. ತಕ್ಷಣ ಅವರು ನನ್ನ ಕಾಲಿನ ಮೇಲೆ ಅನಾಮತ್ತ ಬಿದ್ದು, ಗಟ್ಟಿಯಾಗಿ ಅಳುತ್ತ 'ನಾನು ಪಾಪಿ, ಸುಬ್ಬರಾಮ ಸಾಸ್ತ್ರಿ, ಸಿರ್, ರಾಧೆಯ ತಂದೆ; ಈ ಪಾಪೀನ ಕಾಪಾಡು' ಅನ್ನುತ್ತ ತಲೆ ತಲೆ ಜಜ್ಜಿಕೊಂಡರು. ನನಗೆ ಆ ಮನ್ಸನ್ನ ನೋಡಿ ಬಹಳ ನೋವಾಯಿತು, ಸಾಮಿ. ಆ ಬಡಕಲು ಮೈ, ಪೊಟ್ರೆ ಕಣ್ಣು, ಅವರ ಮಾತು, ಹೇಗಿದ್ದೋರು ಹೇಗೆ, ಏನೋ ಆಗಿರಬೇಕು ಅಂದುಕೊಂಡೆ. 'ಏನು ಹೀಗಾಗಿದೀರ, ಸಾಮಿ?' ಅಂತ ಕೇಳಿದೆ. 'ಎಲ್ಲ ಆಯಿತು ಪೀರ್, ಏನೇನಾಗಬೇಕೋ ಎಲ್ಲ ಆಯಿತು' ಅಂತ ಅವರು ನಡೆದಿದ್ದೆಲ್ಲ ಹೇಳಿದರು, ಸಾಮಿ."

ಸಾಬಿ ಸ್ವಲ್ಪ ತಡೆದು, ಅನಂತರ ಮುಂದುವರೆಸಿದ: "ಎಲ್ಲಾ ಊರೂ ಆಲೆದು ಕಾಸೆಯನ್ನು ತಲುಸಿದಾಗ, ಕೈಯಲ್ಲಿ ಒಂದು ಪೈಸೆ ಕೂಡ ಉಳೀಲಿಲ್ಲವಂತೆ. ಹೆಂಡತಿ ಒಳಗೇ ಕೊರಗಿ ಬಾಯಿಲೆ ಬಿದ್ದರಂತೆ, ಸಾಸ್ತ್ರಿಗಳು ಭಿಕ್ಷ ನೂಡುತ್ತ ಹೊಟ್ಟೆ ಹೊರೆದರಂತೆ. ಹೆಂಡತಿಗೆ ಖಾಯಿಲೆ ಜಾಸ್ತೀ ಆಗಿ ಸಾಯಲು ಮಲಗಿದರಂತೆ; ಅಲ್ಲೀ ವರೆಗೂ ಗೌರಮ್ಮನವರಿಗೆ ನಮ್ಮ ನೂರಜಹಾನ್ ಬಮಕಿರೋದೇ ಗೊತ್ತಿರಲಿಲ್ಲವಂತೆ. ಸಾಸ್ತ್ರಿಗಳು ಸಂಕಟ ತಡೀಲಾರದೆ ಅಮ್ಮಾವರಿಗೆ ನಿಜ ಹೇಳಿದರಂತೆ. ಕೇಳಿದ ತಕ್ಷಣ ಗೌರಮ್ಮಾವರ ಪ್ರಾಣ ಹೋಯಿತಂತೆ," ಇಷ್ಟು ಹೇಳಿ ಮುದುಕ ಕಣ್ಣೀರು ಒರೆಸಿಕೊಂಡ. ಜೋಯಿಸರ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಿತ್ತು.

ಮತ್ತೆ ಪೀರ್ ಸಾಬಿ ಮುಂದುವರೆಸಿದ: "ಆ ಮೇಲೆ, ಅವರಿಗೆ ಹುಚ್ಚು ಹಿಡಿಯಿತೋ, ಇಲ್ಲಾ ಇಲ್ಲಿಗೆ ಬರೋಕ್ಕೆ ಕಾಸು ಸಿಗಲಿಲ್ಲವೋ, ಇಲ್ಲಾ ಅವರಿಗೇ ಮುಖ ತೋರಿಸಲು ಆಗಲಿಲ್ಲವೋ, ಅಂತು ಸಾಸ್ತ್ರಿಗಳು—ತಾವೇಕೆ ಇಷ್ಟು ದಿವಸ ಬರಲಿಲ್ಲ ಅನ್ನೋದನ್ನ ಹೇಳಲಿಲ್ಲ ಸಾಮಿ. ಆ ಮೇಲೆ ಹೇಗೆ ಇಲ್ಲಿಗೆ ಬಂದರೋ ಅದೂ ಸಹ ಗೊತ್ತಿಲ್ಲ. ಎಲ್ಲಾ ಹೇಳಿ 'ಪೀರ್, ನಿನ್ನ ಕಾಲು ಕಟ್ಟಿಕೋತೀನೆ, ನಿನ್ನ ದಮ್ಮಯ್ಯ, ನನ್ನ ಮಗೂನ ಪಾಪಸು ಕೊಡು,' ಅಂತ ಅಳ್ತ ಕೇಳಿದರು. ನಾನೇನು ಮನಸ್ಸಾ ಅಲ್ಲೆ ಸಾಮಿ. 'ನೂರಾಯ್ಸೆ, ನಿಮ್ಮ ಮಗೂನ ನೀವೇ ಕರ್ಕೊಂಡು ಹೋಗಿ; ಎಲ್ಲಾದರೂ ಸುಖವಾಗಿರಿ; ಅಲ್ಲಾ ನಿನಗೆ ಒಳ್ಳೇದು ಮಾಡ್ತಾನೆ,' ಅಂದೆ. 'ಆದರೂ ಈಗ ಅನಿಸ್ತಾ ಇದೆ, ಸಾಮಿ, ನೂರ್ ಬೇಟಿ ಬಿಟ್ಟು ನಾನಿರಲಾರೆಂತ. ಆಗ ನೂರ್ ಬೇಟಿ ಮಲಗಿತ್ತು. 'ಇಲ್ಲೀ ಇದ್ದು ಬೆಳಿಗ್ಗೆ ಕರ್ಕೊಂಡು ಹೋಗಿ' ಅಂತ ಅಂದೆ. ಅದಕ್ಕೆ ಸಾಸ್ತ್ರಿಗಳು, 'ಇಲ್ಲಪೀರ್, ಇಷ್ಟು ಹೊತ್ತಾ ತಡೆದಿದ್ದೇ ಹೆಚ್ಚು' ಅಂತ ಹೇಳುತ್ತ, ಗಟ್ಟಿಯಾಗಿ ಅಳ್ತಾ ನಿಲ್ಲೆ ಮಾಡ್ತಾ ಇದ್ದ ಮಗೂನ ಎಬ್ಬಿಸಿದರು. ಗಾಬರಿಯಿಂದ ನನ್ನ ಎಲ್ಲ ಮುಕ್ಕಳೂ ಎದ್ದವು. ನೂರ್‌ಜಹಾನ್ ಎದ್ದು ನಿಂತು ಚೀರಿದಳು. ನಾನು ಹೋಗಿ ಎತ್ತಿಕೊಂಡೆ. ಶಾಸ್ತ್ರಿಗಳು ನನ್ನ ಕೈಯಿಂದ ಅನಾಮತ್ತನೆ ಕಿತ್ತುಕೊಂಡು ನೂರ್ ಬೇಟಿಗೆ ಮುಮ್ಮನೆ ಮೈಯೆಲ್ಲ ಮುತ್ತುಕೊಟ್ಟರು. ನಿಜವಾಗ್ಲೂ ಹುಚ್ಚನೇನೋಂತ ಅನುಮಾನ ಬಂತು ನನಗೆ. ಆದರೂ ಕರುಳಿನ ಸಂಕಟ ನನಗೂ ಗೊತ್ತು ಸ್ವಾಮಿ. ನಾನು ಮಗಳಿಗೆ 'ನೂರ್ ಬೇಟಿ, ಅವರೇ ನಿನ್ನ ದಾದಾ. ಅಳಬೇಡ. ಭಯ ಇಲ್ಲ' ಅಂತ ಅಂದೆ. ಆದರೂ ನೂರ್‌ಜಹಾನ್ ರಂಪಾಟ

ಬಿಡಲಿಲ್ಲ. ಅನಳಿಗೆ ಗಾಬರಿಯಾಗಿತ್ತು. ಸಮಾಧಾನ ಮಾಡೋಣಾಂದರೇ ಸಾಸ್ತ್ರಿಗಳು ಮಗೂನ ಕೊಡೋಲ್ಲ. ಕಡೆಗೆ ನೂರ್ ಬೇಟಿಗೆ ಕೋಪ ಬಂದು ಸಾಸ್ತ್ರಿಗಳಿಗೆ ಜೋರಾಗಿ ಕೆನ್ನೆಯ ಮೇಲೆ ಏಟು ಕೊಟ್ಟಳು. ತಕ್ಷಣ ಸಾಸ್ತ್ರಿಗಳು ಮಗೂನ ಕೆಳಗಿಳಿಸಿ, ಕೈ ಬಿಟ್ಟು, ಸೈತಾನ್ ಬಡಿದಂತೆ ನಿಂತು ಬಿಟ್ಟರು. 'ಸಾಸ್ತ್ರಿಗಳೇ, ತಳಿ-ಬೋರು ನೀನೇ ಹೀಗೆ ಒರಟಾಟ ಮಾಡಿದರೆ ಹೇಗೆ!' ಅಂದೆ. ಅವರಿಗೆ ಯಾವುದೂ ಕಿವೀ ಮೇಲೆ ಬೀಳಲಿಲ್ಲಾಂತ ಕಾಣುತ್ತೆ. ನೇರವಾಗಿ ಹೋಗಿ ಬಾಗಿಲು ತೆಗೆದುಕೊಂಡು ಹೊರಗೆ ಹೊರಟೇ ಹೋದರು. 'ಸಾಸ್ತ್ರಿಗಳೇ, ಸಾಸ್ತ್ರಿಗಳೇ' ಅಂತ ಕೂಗಿಕೊಂಡು ಹೊರಗೆ ಬಂದು ನೋಡಿದೆ. ಕಾಣಲಿಲ್ಲ. ಹುಡುಕಲು ಹೋಗೋಣಾಂದರೆ ಎಲ್ಲಾ ಮುಕ್ಕಳೂ ತೆದರಿಕೆಯಿಂದ ಅಳುತ್ತಿದ್ದುವು. ಹೇಗೂ ಬೆಳಗ್ಗೆ ಬರ್ತಾರೆ ಸಾಸ್ತ್ರಿಗಳೂಂತ ಸುಮ್ಮನಾದೆ. ಬೆಳಗ್ಗೆ ಬರಲಿಲ್ಲ. ನಿಮ್ಮ ಮನೆಗೆ ಬಂದು ನಿನುಗೆ ಹೇಳಿದೆ."

ಇಷ್ಟು ಹೊತ್ತೂ ಕೇಳುತ್ತಿದ್ದ ಜೋಯಿಸರು ಇದ್ದಕ್ಕಿದ್ದಂತೆಯೇ ಎದ್ದು ನಿಂತರು. ಅವರ ಮುಖದಲ್ಲಿ ಬಹಳ ಗಾಬರಿ ಕಾಣುತ್ತಿತ್ತು. ನಿನೇನೋ ಊಹೆಗಳು ಅವರನ್ನು ಕಾಡುತ್ತಿದ್ದುವು.

"ಸರಿ, ಸೀರ್, ಬರುತ್ತೇನೆ" ಎಂದು ಮೇಳ ಉತ್ತರಕ್ಕೂ ಕಾಯದೆ ಅವಸರವಸರವಾಗಿ ಹೊರಟು ಹೋದರವರು.

೬

ಸೂರನೆಯ ದಿನವೂ ಅನ್ನ ನೀರು ಬಿಟ್ಟು, ಜೋಯಿಸರು ಸೀರ್ ಸಾಬಿಯನ್ನೂ ಕಟ್ಟಿಕೊಂಡು ಸುತ್ತಮುತ್ತಲ ಊರು, ಗುಡ್ಡ, ಕೇರಿ, ಹೊಲ, ತೋಟ, ಭಾಸಿ, ಕೆರೆ, ಎಲ್ಲ ಕಡೆಗಳಲ್ಲಿಯೂ ಶೋಧಿಸಿದರು. ಎಲ್ಲೂ ಅವರ ನಷ್ಟಿನ ಸುಬ್ಬು ಸಿಕ್ಕಲಿಲ್ಲ

ಆದರೆ ಎರಡು ದಿನ ಹೀಗೇ ಹುಡುಕಿದನಂತರ ಮೂರನೆಯ ದಿನ ಮಧ್ಯಾಹ್ನ ಹನ್ನೆರಡು ಗಂಟೆ ಸಮಯದಲ್ಲಿ, ಹುಡುಕಿ ಸೋತು ಕಾಲೆಳೆದು ಬರುತ್ತಿದ್ದ ಜೋಯಿಸರಿಗೂ ಹಾಗೂ ಸಾಬಿಗೂ ತೋಟದ ಬಳಿಯ ಕೆರೆಯ ಮುಂದೆ ನೆರೆದಿದ್ದ ಊರ ಜನರು ಕಾಣಿಸಿ, ಗಾಬರಿಯಾಯಿತು. ದಡದ ಮೇಲೆ ಮಲಗಿಸಿದ್ದ ಒಬ್ಬನ ಮೃತದೇಹವನ್ನು ನೋಡಿದಾಗ ಜೋಯಿಸರು ಅಲ್ಲಿಗೆ ಹಾರಿದರು.

"ಸುಬ್ಬೂ ಸುಬ್ಬೂ!" ಜೋಯಿಸರ ಕೂಗನ್ನು ಕೇಳಿ ಎಲ್ಲರೂ ಬೆಚ್ಚಿ ನಾರಿ ಬಿಟ್ಟರು. ಜೋಯಿಸರು ಹತ್ತಿರ ಧಾವಿಸಿ ಶವವನ್ನು ಬಿಗಿದಪ್ಪಿ ಗೋಳೋ ಎಂದು ಅಳುತ್ತ "ಸುಬ್ಬೂ, ನಿನ್ನನ್ನು ನಾನೇ ಕೈಯಾರ ಕೊಂದೇಪ್ಪ! ನಿನ್ನ ಹೆಂಡತಿಯನ್ನೂ ನಾನೇ ಕೊಂದೆ! ನರಕಯಾತನೆಯನ್ನು ಕೊಟ್ಟು ಇಬ್ಬರನ್ನೂ ನಾನೇ ಕೊಂದೆ! - ನನ್ನನ್ನು ಕ್ಷಮಿಸಬೇಡ ಸುಬ್ಬೂ!" ಎನ್ನುತ್ತಿದ್ದರೆ, ಜನರ ಮೋದನ ಮುತ್ತಲ ಬೆಬ್ಬಗಳಲ್ಲಿ ಪ್ರತಿಧ್ವನಿತವಾಗುತ್ತಿತ್ತು ಜನ ಮೂಕರಂತೆ ನಿಂತಿದ್ದರು. ಸೀರ್ ಸಾಬಿ ನೂರನಲ್ಲಿ ತಲೆ ಮೇಲೆ ಕೈ ಹೊತ್ತು ಕುಳಿತಿದ್ದ.

ದಿ ಸಜ್ಜೀವ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಶಾಸ್ತ್ರೀಯವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಡು ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ

ನೋವಿಗೆ ಚಿಕಿತ್ಸೆ

(ದೇಹಸ್ವಾಸ್ಥ್ಯ ವಿಚಾರ)*

ಶ್ರೀ. ರ. ಜ. ಅಗ್ನಿಹೋತ್ರಿ, ಲಕ್ಚರರ್, ಆಚಾರ್ಯ ಪಾಠಶಾಲಾ, **ಬೆಂಗಳೂರು**

'ನೋವಿಗೆ ಮದ್ದು ಕಾವು' ಎಂದು ಕನ್ನಡದಲ್ಲಿ ಒಂದು ಅನುಭವವಾಣಿಯೇ ಇದೆ.
ಆದರೆ ತಂಪಿನ ಉಪಾಯದಿಂದಲೂ ಒಮ್ಮೊಮ್ಮೆ ನೋವುಗಳನ್ನು ತಗ್ಗಿಸಬಹುದು.
ಇವುಗಳ ವಿಚಾರ ನಮ್ಮ ಜನ ತಿಳಿದುಕೊಳ್ಳಬೇಕು.

ಪ್ರತಿಯೊಂದು ನೋವಿನ ಚಿಕಿತ್ಸೆಯೂ, ಅದರ ಕಾರಣಕ್ಕನುಗುಣವಾಗಿ ಭಿನ್ನ ಭಿನ್ನವಾಗಿರುತ್ತದೆ. ಹೊಟ್ಟೆನೋವು ಭೇದಿಯಿಂದ ಕಡಮೆಯಾದೀತೆ, ಕಾಲು ಹರಿಯುವುದಕ್ಕೆ ಕಾಲನ್ನು ಒತ್ತಬೇಕಾಗುತ್ತದೆ; ಮತ್ತು ಹಿಮ್ಮಡಿ ಸೀಳಿದರೆ ವ್ಯಾಸಲೀನ್ ಮುಂತಾದ ಸ್ನೇಹದ್ರವ್ಯಗಳ ಲೇಪನ ಮಾಡಬೇಕಾಗುತ್ತದೆ. ಕೆಲವು ನೋವುಗಳು ಯಾವ ಔಷಧೋಪಚಾರಕ್ಕೂ ಕಡಿಮೆಯಾಗುವುದಿಲ್ಲ, ಅವುಗಳಿಗೆ ಶಸ್ತ್ರಚಿಕಿತ್ಸೆ ಅಗತ್ಯವಾಗಿರುತ್ತದೆ. ಈ ರೀತಿ ನೋವಿಗೆ ಅನೇಕ ಕಾರಣಗಳಿರಬಹುದಾದ್ದರಿಂದ, ತದನುಸಾರಿಯಾದ ಚಿಕಿತ್ಸಾವಿಧಾನಗಳೂ ಅನೇಕವಾಗಿರಬಹುದು, ಅವುಗಳನ್ನೆಲ್ಲ ಇಲ್ಲಿ ಪರಿಗಣಿಸಿ ಬಿಡುವುದು ಸಾಧ್ಯವಲ್ಲ; ಆದರೂ, ಸಾಮಾನ್ಯವಾಗಿ ನೋವಿನ ಪರಿಹಾರಕ್ಕೆಂದು ಸ್ವಚಾರವಲ್ಲಿರುವ ಮುಖ್ಯವಾದ ಕೆಲವು ಉಪಕ್ರಮಗಳು, ನೋವನ್ನು ಹೋಗಲಾಡಿಸುವುದರಲ್ಲಿ ಹೇಗೆ ಸಮರ್ಥವಾಗುತ್ತವೆ ಎಂಬುದನ್ನು ತಿಳಿದುಕೊಂಡರೆ, ಅವುಗಳನ್ನು ಯಥೋಚಿತವಾದ ಸಂದರ್ಭಗಳಲ್ಲಿ ಉಪಯೋಗಿಸಿ, ಅವುಗಳಿಂದ ಯಥೇಷ್ಟ ಲಾಭ ಪಡೆಯಲು ಸಾಧ್ಯವಾಗಬಹುದು.

ಉಷ್ಣತೆ:—

ನೋವಾದ ಭಾಗಕ್ಕೆ ಉಷ್ಣತೆಯನ್ನು ಒದಗಿಸುವುದರಿಂದ ನೋವು ಕಡಿಮೆಯಾಗುತ್ತದೆ. ಹಂಚಿನ ಮೇಲೆ ಬೆಚ್ಚಗೆ ಮಾಡಿದ ಬಟ್ಟೆಯಿಂದಾಗಲಿ, ಕುದಿಯುವ ನೀರಿನಲ್ಲಿ ತೋಯಿಸಿ ಹಿಂಡಿದ ಅರಿವೆಯಿಂದ ಬರುವ ಹಬೆಯಿಂದಾಗಲಿ, *Hot water bag*ನಿಂದಾಗಲಿ ಅಥವಾ ಫೋಲ್ಟೀಸ್ ಹಾಕುವುದರಿಂದಾಗಲಿ— ಹೀಗೆ ಯಥೋಚಿತವಾದ ರೀತಿಯಲ್ಲಿ ಉಷ್ಣತೆಯನ್ನು ಒದಗಿಸಬಹುದು.

ಯಾವ ಭಾಗಕ್ಕೆ ಕಾವು ಕೊಡಲಾಗುತ್ತದೆಯೊ, ಆ ಭಾಗದ ರಕ್ತನಾಳಗಳು ಹಿಗ್ಗಲುವಾಗಿ, ಅಲ್ಲಿಯ ರಕ್ತ ಸಂಚಾರ ಹೆಚ್ಚುತ್ತದೆ. ಇದರಿಂದ ಆ ಸ್ಥಳದಲ್ಲಿ ಶೇಖರವಾದ ರಾಸಾಯನಿಕ ದ್ರವ್ಯಗಳು, ರಕ್ತದ ಮೂಲಕ ಬೇರೆಡೆಗೆ ಸಾಗಿಸಲ್ಪಡುತ್ತವೆ; ಇದರಿಂದ ಅಲ್ಲಿಯ ನಾಡೀಸೂತ್ರಗಳ ಪ್ಲೋಭೆ ಕಡಿಮೆಯಾಗಿ ನೋವು ಇಲ್ಲದಂತಾಗುತ್ತದೆ.

ರಕ್ತಸಂಚಾರದ ಹೆಚ್ಚುವಿಕೆಯಿಂದ ವಿವೃಧಿ (ಕುರುವು) ಮುಂತಾದುವುಗಳು ಬೇಗನೇ ಪಕ್ವವಾಗಿ ಒಡೆಯುತ್ತವೆ ಮತ್ತು ಅವುಗಳಲ್ಲಿ ಶೇಖರವಾದ ಕೀವೂ ಜಿಟ್ಟು ರಕ್ತ ಮುಂತಾದುವೂ ಸೋರಿ ಹೋಗುವುದರಿಂದ, ಅವುಗಳ ಒತ್ತಡ ಕಡಿಮೆಯಾಗಿ ನೋವು ಇಲ್ಲದಂತಾಗುತ್ತದೆ ಅಥವಾ ಕುರುವು ಮುಂತಾದುವುಗಳು, ಇನ್ನೂ ಪ್ರಾರಂಭಾವಸ್ಥೆಯಲ್ಲಿದ್ದರೆ, ಕಾಣಿಸುವ ರಕ್ತ ಸಂಚಾರ ಹೆಚ್ಚಾಗಿ, ಅವು ಅಲ್ಲಿಯೇ ಕರಗಿ ಹೋಗುವಂತಾಗುತ್ತದೆ ಮತ್ತು ನೋವು ಇಲ್ಲದಂತಾಗುತ್ತದೆ.

ಕೋಷ್ಠಾಂಗಗಳಲ್ಲಿ ಬಾವು ಇದ್ದು, ಅದರಿಂದ ನೋವು ಉಂಟಾಗಿದ್ದರೆ, ಆ ಕೋಷ್ಠಾಂಗದ ಮೇಲಿನ ತ್ವಚೆಗೆ ಕಾವು ಕೊಡುವುದರಿಂದ, ಅದರ ಭಿತ್ತಿಯಲ್ಲಿನ್ನೆ ರಕ್ತದ ಬಹುಭಾಗ ತ್ವಚೆಯ ಕಡೆಗೆ ಬರುತ್ತದೆ; ಮತ್ತು ಆ ಅಂಗದ ಭಿತ್ತಿಯಲ್ಲಿಯ ರಕ್ತದ ಒತ್ತಡ ಕಡಮೆಯಾಗುವುದರಿಂದ ನೋವು ನಾಸಿಯಾಗುತ್ತದೆ.

ಆಮಾಶಯ ಪಕ್ವಾಶಯಗಳಲ್ಲಿ ವಾಯು ತುಂಬಿಕೊಂಡು, ಹೊಟ್ಟೆ ಉಬ್ಬರವಾಗಿ ನೋವು ಉಂಟಾಗಿದ್ದರೆ— ಹೊಟ್ಟೆ ಕಾವುವುದರಿಂದ ಆ ವಾಯುವಿನ ಸಾಂದ್ರತೆ ಕಡಮೆಯಾಗಿ, ಅದು ತೇಗು ಅಥವಾ ಅಪೋವಾಯುವಿನ ಮೂಲಕ ಹೊರಗೆ ಹೋಗಲು ಅನುಕೂಲವಾಗುತ್ತದೆ. ಈ ರೀತಿ ಕೋಷ್ಠವಾತ ವಿಸರ್ಜಿತನಾಗುವುದರಿಂದ, ಆಮಾಶಯ-ಪಕ್ವಾಶಯಗಳಲ್ಲಿಯು ಒತ್ತಡ ಕಡಮೆಯಾಗಿ ನೋವು ಹೋಗುತ್ತದೆ, ಹೊಟ್ಟೆ ಹಗುರಾಗುತ್ತದೆ.

ಶೀತತೆ

ಎಷ್ಟೋ ಸಂದರ್ಭಗಳಲ್ಲಿ ನೋವಾದ ಭಾಗಕ್ಕೆ ತಂಪನ್ನೊದಗಿಸುವುದರಿಂದಲೂ ನೋವು ಕಡಮೆಯಾಗುತ್ತದೆ. ಮಂಜುಗಡ್ಡೆಯ ಸ್ಪರ್ಶದಿಂದಾಗಲಿ, ತಣ್ಣೀರಿನಲ್ಲಿ ತೋಯಿಸಿದ ಬಟ್ಟೆಯ ಪಟ್ಟೆ-

* ಜಯಂತಿಯ ಕಳೆದ ಸಂಚಿಕೆಯಲ್ಲಿ ಇದೇ ವಿಷಯದ 'ನೋವು' ಎಂಬ ಲೇಖನ ಪ್ರಕಟವಾಗಿದೆ. —ಸಂ. ಜ.

ಯುಂದಾಗಲಿ ಅಥವಾ Ice bag ಸಿಂದಾಗಲೀ, ಹೀಗೆ ಯಥೋಚಿತವಾದ ರೀತಿಯಲ್ಲಿ ತಂಪನ್ನೊದಗಿಸಬಹುದು.

ನೋವಾದ ಭಾಗಕ್ಕೆ ಶೈತ್ಯವನ್ನೊದಗಿಸುವುದರಿಂದ, ಅಲ್ಲಿಯ ನಾಡೀ ಸೂತ್ರಗಳ ಸಂವೇದನ ಶೀಲತೆ ಕಡಮೆಯಾಗಿ, ನೋವು ನಾಶವಾಗುತ್ತದೆ. ತಂಪುತಾಗಿದ ಸ್ಥಳದ ರಕ್ತನಾಳಗಳು ಸಂಕುಚಿತವಾಗಿ, ಅಲ್ಲಿಯ ರಕ್ತಸಂಚಾರ ಕಡಮೆಯಾಗುವುದರಿಂದ, ರಕ್ತನಾಳಗಳ ಭಿತ್ತಿಯಲ್ಲಿರುವ ವೇದನಾವಾಹಕ ನಾಡೀಸೂತ್ರಗಳ ಮೇಲೆ ಒತ್ತಡ ಇಲ್ಲದಂತಾಗಿ ನೋವು ನಾಶವಾಗುತ್ತದೆ.

ವಿಕೃತ ಕೋಷ್ಠಾಂಗದ ಮುಂಭಾಗದಲ್ಲಿರುವ ತ್ವಚೆಗೆ ತಂಪನ್ನೊದಗಿಸುವದರಿಂದ, ತ್ವಚೆಯಿಂದ ರಕ್ತದ ಬಹುಭಾಗ ಕೋಷ್ಠಾಂಗದೆಡೆಗೆ ಹೋಗುತ್ತದೆ, ಇದರಿಂದ ಕೋಷ್ಠಾಂಗ ಸ್ಪರ್ಶಾಪಕ್ಷೆಗೆ ಬರಲು ಅನುಕೂಲವಾಗಿ ನೋವು ಕಡಮೆಯಾಗುತ್ತದೆ.

ಈ ಮೇರೆಗೆ ಉಷ್ಣ–ಶೀತ ಎರಡೂ ನೋವನ್ನು ಹೋಗಲಾಡಿಸಬಲ್ಲವು. ಆದಾಗ್ಯೂ ನೋವನ್ನು ಹೋಗಲಾಡಿಸಲು ಶೀತತೆಗಿಂತ ಉಷ್ಣತೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾದದ್ದು.

ರುಂಬಿ, ಸಾಸಿವೆ, ಲವಂಗ, ನೀಲಗಿರಿಎಣ್ಣೆ, ಅಜವಾಯನದ ಕರ್ಕ, ಪುದೀನಾ ಕರ್ಕ, ಕರ್ಪೂರ ಮುಂತಾದ ದ್ರವ್ಯಗಳನ್ನು ನೋವಾದ ಭಾಗದಲ್ಲಿ ಲೇಪಿಸುವುದರಿಂದ, ಇವು ತಮ್ಮ ಕಟುರಸ ಮತ್ತು ತೀಕ್ಷ್ಣೋಷ್ಣ ಗುಣಗಳಿಂದ, ಅಲ್ಲಿಯ ನಾಡೀಸೂತ್ರಗಳನ್ನು ೧–೨ ನಿಮಿಷಗಳ ಮಟ್ಟಿಗೆ ಉತ್ತೇಜಿಸಿ, ಅಲ್ಲಿ ಉರುಪು ಅಥವಾ ಚಿಮುಚಿಮಾಯನ ಮುಂತಾದ ಲಕ್ಷಣಗಳನ್ನುಂಟು ಮಾಡುತ್ತವೆ. ಈ ಉತ್ತೇಜನಾವಸ್ಥೆ ಮುಗಿದ ತಕ್ಷಣವೇ, ಉತ್ತೇಜನೆಯಿಂದಾಗಿ ಮಣಿದುಕೊಂಡ ನಾಡೀಸೂತ್ರಗಳ ಸಂವೇದನ ಶೀಲತೆ ಕಡಮೆಯಾಗಿ ನೋವು ಇಲ್ಲದಂತಾಗುತ್ತದೆ.

ಅಫೀಮು ತಾಂಜನ, ಕರ್ಪೂರಾದಿತೈಲ, ಅಫೀಮು ತಥಾರಾ, ನೋಜೇನಾ ಮುಂತಾದ ಸಾಮಾನ್ಯವಾಗಿ ನೋವಿಗೆಂದು ವ್ಯವಹರಿಸಲ್ಪಡುವ ಔಷಧಿಗಳಲ್ಲಿ, ಈ ಮೇಲೆ ನಿರ್ದೇಶಿಸಲ್ಪಟ್ಟ ದ್ರವ್ಯಗಳೇ ಇವೆ. ಮತ್ತು ಇವು ಈ ಸಿದ್ಧಾಂತಕ್ಕನುಸಾರವಾಗಿಯೇ ಕೆಲಸ ಮಾಡುತ್ತವೆ. ಈ ಔಷಧಿಗಳು ಸಾಮಾನ್ಯವಾದ ನೋವಿನಲ್ಲಿ ಉಪಯುಕ್ತವಾಗಿವೆ.

ಈ ಮೇಲೆ ಹೇಳಿದ ಔಷಧಿಗಳಿಂದ ಕಡಮೆಯಾಗದ, ಸ್ವಲ್ಪ ಹೆಚ್ಚಿನ ಮಟ್ಟದ ನೋವುಗಳಿಗೆ—ವತ್ಸನಾಭಿ, ಅಹಿಫೇನ, ಧತ್ತೂರ, ಭಾಂಗಾ ಮುಂತಾದ ಔಷಧಿಗಳನ್ನೊಳಗೊಂಡ ಲೇಪಗಳನ್ನುಪಯೋಗಿಸಬೇಕು. ಈ ಔಷಧಿಗಳು ಲೇಪ ಮಾಡಿದ ಸ್ಥಳದ ವೇದನಾವಾಹಕ ನಾಡೀಸೂತ್ರಗಳ ಸಂವೇದನ ಶೀಲತೆಯನ್ನು ತಾತ್ಕಾಲಿಕವಾಗಿ ನಷ್ಟಮಾಡಿಬಿಡುತ್ತವೆ, ಹೀಗಾಗಿ ನೋವು ನಾಶಿಯಾಗುತ್ತದೆ.

ಇದಕ್ಕೂ ಹೆಚ್ಚಿನ ಮಟ್ಟದ ನೋವುಗಳಲ್ಲಿ ಅಹಿಫೇನ, ಭಾಂಗಾ, ಮದ್ಯ ಮುಂತಾದ ಮಾದಕ ಮತ್ತು ನಿದ್ರಾಜನಕ ಔಷಧಿಗಳನ್ನು ಕೊಟ್ಟಯೊಳಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈ ಔಷಧಿಗಳು ಮಸ್ತಿಷ್ಕದ ವೇದನಾಕೇಂದ್ರಗಳನ್ನು ಸುಸ್ತಾಗಿ ಮಾಡಿ ನೋವನ್ನು ಹೋಗಲಾಡಿಸುತ್ತವೆ. ನಿದ್ರೆ ಅಥವಾ ಮತ್ತನನ್ನುಂಟು ಮಾಡದೆಯೆ ವೇದನಾಕೇಂದ್ರವನ್ನು ಸುಸ್ತಾಗಿ ಮಾಡುವ ದ್ರವ್ಯಗಳೂ ಎಸ್ಪ್ರೋ ಇವೆ. ಸಾಮಾನ್ಯವಾಗಿ ನೋವಿಗೆಂದು ಕೊಡಲ್ಪಡುವ ಎಸ್ಪ್ರೋ, ಎನ್ಯಾಸೀನ್ ಮುಂತಾದ ಗುಳಿಗೆಗಳು ಈ ವರ್ಗಕ್ಕೆ ಸೇರಿದುವು.

ಅತ್ಯಸಹ್ಯವಾದ ವೇದನೆಗಳಲ್ಲಿ, ಮತ್ತು ನೋವಾಗದಂತೆ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾದಾಗ, ಪ್ರಾದೇಶಿಕ ಅಥವಾ ಸಾರ್ವದೈಹಿಕ ಸಂಜ್ಞಾನಾಶವನ್ನು ಮಾಡಬೇಕಾಗುತ್ತದೆ.

ನೋವು ಉಂಟಾದಾಗ, ವೇದನಾಹರ ಔಷಧಿಗಳನ್ನು ಕೊಂಡು ಅವಿಚಾರದಿಂದ ಅತಿಯಾಗಿ ಸೇವಿಸಬಾರದು. ಯೋಗ್ಯ ಡಾಕ್ಟರರಿಂದ ಪರೀಕ್ಷೆ ಮಾಡಿಸಿಕೊಂಡು, ಆ ನೋವಿಗೆ ಕಾರಣವಾದ ವಿಕೃತಿಯನ್ನು ತಿಳಿದು, ಅದಕ್ಕೆ ತಕ್ಕ ಚಿಕಿತ್ಸೆಯನ್ನು ಹೊಂದಬೇಕು. ಡಾಕ್ಟರರಿಂದ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕಿಂತ ಮುಂಚಿತನಾಗಿಯೇ ಅತಿಯಾಗಿ ವೇದನಾಹರ ದ್ರವ್ಯಗಳನ್ನು ಸೇವಿಸಿದ್ದೇ ಆದರೆ, ನೇದನೆಯು ಸ್ವಭಾವ ಪರಿವರ್ತನವಾಗಿ, ಡಾಕ್ಟರರು ರೋಗ ನಿದಾನದಲ್ಲಿ ಮೋಸ ಹೋಗುವ ಸಂಭವವಿರುತ್ತದೆ. ಆದಕಾರಣ ನೋವು ಉಂಟಾದ ಮೇಲೆ ಹೆಚ್ಚು ವಿಲಂಬ ಮಾಡದೆ, ಮತ್ತು ಅವಿಚಾರದಿಂದ ಅತಿಯಾಗಿ ವೇದನಾಹರ ದ್ರವ್ಯಗಳನ್ನು ಸೇವಿಸದೆ, ಡಾಕ್ಟರರ ಸಲಹೆ ಪಡೆದು ಯೋಗ್ಯ ಚಿಕಿತ್ಸೆ ಹೊಂದಬೇಕು. ●

ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು: ಮಾರಾಟ ಮಾಡುವವರು.

ನಂಬುಗೆಯ ಮಾಲು! **ಪ್ರಾಮಾಣಿಕ ವ್ಯವಹಾರ!!**

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಷ ರೋಡ್, ಧಾರವಾಡ

★ ಭಾರತಿ ಬಹುಭಾಷಿಣೀ! ★

ಅನಂದಕಂದ

೧

ಬಹುಸದನೆ ಬಹುನದನೆ ಭಾರತಿ
ಅಹುದಹುದು ಬಹುಭಾಷಿಣೀ....
ವಹಿಸುತಿರುವುದು ನುಡಿ-ನುಡಿಯಲೂ
ಒಂದೆ ಹೃದಯತರಂಗಿಣಿ!
ಭಾರತಿಯ ಬಹುಭಾಷೆ ಒಂದಕೆ
ಒಂದಹುದು ಸಂವಾದಿ....
ಶಾರದೆಯ ಮಂದಿರವ ಜೀವನ-
ಸಂಸ್ಕೃತಿಯು ಸಂವೇದಿ!

೨

ಋಷಿನೃಂದ ಕಂಡು ಹಾಡಿದ ಶ್ರುತಿಯ ಸೂಕ್ತಗಳ
ಸಾರವುಣ್ಣುತ ಬೆಳೆದ ಭಾಷೆಗಳಿವು....
ಉಸಿರಿನಷ್ಟಿನ ತತ್ತ್ವದನ್ವಿತನನು ಸುರಿ-ಸುರಿದು
ದೇವವಾಣಿಯು ಬೆನ್ನ ಬಳಸಿ ನಡೆದಿಹವು;
ಸ್ಮೃತಿಶೀಲಗಳನರಿತು ತಂತನ್ನ ಜನಕುಲಕೆ
ಬಾಳ ನೀತಿಗಳನ್ನು ಬೋಧಿಸುವುವು....
ಕಥೆ-ಪುರಾಣಗಳ ರಸದೂಟವನೆ ಉಂಡುಂಡು.
ಅವರ ಸತ್ತ್ವದಿ ಪುಷ್ಟವಾಗಿರುವುವು!

೩

ಶಿವಭಕ್ತಿ-ವಿಷ್ಣುಭಕ್ತಿಯ ಹೊಸಲು ಹರಿ-ಹರಿಸಿ
ಮಾಡಿದುವು ನಾಡೆಲ್ಲ ಭಕ್ತಿಯ ಬನ....
ಚಳವಳಿಟ್ಟಿನಿಂದೆ ತೆಂಕಣ ಕಡಲವರೆಗು ಇವು
ತುಂಬಿಬಿಟ್ಟುವು ಭಕ್ತಿಗೀತ-ವಚನ;
ರಾಮ-ಕೃಷ್ಣರನು ಮನಮನದಲಿಯು ನೆಲೆಗೊಳಿಸಿ
ಸಾರಿದುವು ಒಂದೆಂದು ಭಾರತ ಜನ....
ರಾಮೇಶ್ವರದ ತಮಿಳು ನಾರಾಣಸಿಯು ಹಿಂದಿ
ಕರೆದು ಸ್ವಾಗತಿಸುವುವು ಸರುವರನ್ನ!

೪

ತೀರ್ಥಂಕರರೊರೆವಹಿಂಸೆಯರ್ಥವಿವಕೆ ಗೊತ್ತು....
ಬುದ್ಧನ ಸಂಬುದ್ಧವಚನ ಮಾಡಿಯಿಹವು ತುತ್ತು;
ನವನಾಥರ ವಜನರಚನೆಯಿಲ್ಲವಿನಕೆ ಮುತ್ತು....
ನುಡಿ-ನುಡಿಗಳ ಸೃತ್ಯಕಿಹುದು ಒಂದೆ ಬಗೆಯ ಗತ್ತು!
ಅರಮನೆಯುಪರೊಡನೆ ಬಳೆದು ಸಿರಿಯ ಬಾಳ ಕಂಡಿವೆ-
ಗುರುಗಳ ಮಠಗಳಲಿ ಬಾಳ ಹಿರಿಯ ಬದುಕನುಂಡಿವೆ;
ಸರಸಕಲೆಗೆ ಒಂದೊಂದೂ ರಂಗವಾಗಿ ನಿಂತಿವೆ....
ಸರುವರ ಬದುಕಿನಲಿ ಸುಳಿದು ಗುರಿಗಾರಿಕೆಯರಿತಿವೆ!

೫

ತುಲಸೀದಾಸನ ರಾಮಚರಿತ ಮಾ-
ನಸವನ್ನೊಪ್ಪದೆ ಕನ್ನಡವು?
ಕುಮಾರವ್ಯಾಸನ ಭಾರತಾವ್ಯತಕೆ
ಒಲಿದು ಕುಣಿಯದೇ ದ್ರಾವಿಡವು?
ಬಸವಣ್ಣನ ತಿಳಿನುಡಿಗಳ ತಿರುಳನು
ತಿಳಿದು ನಿಚ್ಚದೇನುತ್ಕಲವು?
ಕಬೀರ ಹಾಡಿದ ಜೀವಗೀತಗಳ
ಕೀಳಾಗಳೆದೀತೇ ಕೇರಳವು?

೬

ಧ್ವನಿವಿಕೃತಿ ಬೇರೆಬೇರೆಯು ರೀತಿಯಾದರೂ
ಮನಕೆ ಒಂದೇ ಅರ್ಥಗಳನೊರೆವುವು...
ಕನ್ನಡದ ಕನ್ನಡಿ ಮರಾಠಿಯಲಿ 'ಆರಸಾ'
ಹೇಗೆ ಕರೆದು ಇರುವುದದರ ಗುಣವು!
ತಾಮು ಪೂಜೆಗೆ ಒಂದು ಜಯಘೆಂಟೆಯಿಟ್ಟಿಹುದರೆ
ಬೇರೆ ನುಡಿಯನಿಸಿಹುವು ಶಂಖ-ಘೋಲು....
ಕರಡಿ-ಕಂಸಾಳೆ-ಕೊಳಲುಗಳಾಗಿ ಕೆಲವು ನುಡಿ....
ಕೂಡಿ ನೊರೆದರೆ ಅದುವೆ ಮಂಗಲದ ಹೊಳಲು!

೭

ಪನದ ಸಂಗೀತದಲಿ ಗಿಳಿಯ ಗಳುಹೇ ಬೇರೆ
ಕೋಗಿಲೆಯ ಕುಕಿಲಿಂಗೆ ಬೇರೆಯಂದ...
ನವಿಲ ಕೇಕೆಯೆ ಬೇರೆ ಸಾರಿಗೆಯ ಸ್ವರ ಬೇರೆ
ಎಲ್ಲ ಬೆರೆತರೆಯೆ ಪನಗೀತಕಂದ!
ಅಂತೆಯೇ ಭಾರತಿಯ ಬಹುಭಾಷೆಗಳು ಕೂಡಿ
ಏಕತೆಯ ಕರೆಯುವುದೆ ಅವಕೆ ಚೆಂದ....
ಎಲ್ಲವೂ ಭಾರತಿಯ ಮುಖದ ಶುಭಮಾನಿಗಳೆ
ಇದನರಿತು ನಡೆದರೆಯೆ ಇಹುವಸಂದ!

§ § §

ಬಹುಸದನೆ ಬಹುನದನೆ ಭಾರತಿ
ಅಹುದಹುದು ಬಹುಭಾಷಿಣೆ....
ವಹಿಸುತಿರುವುದು ನುಡಿ-ನುಡಿಯಲೂ
ಒಂದೆ ಭಾವತರಂಗಿಣಿ!

---

* ಆಕಾಶವಾಣಿ ಸಸ್ಥಾಪಿತ ಕವಿಸಮ್ಮೇಳನದಲ್ಲಿ ಓದಿದ ಸ್ವಸ್ಥನಿದು.—ಸಂ.

ಸಣ್ಣ ಕತೆ*

ಕುಂಜು

ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್, ಬೆಂಗಳೂರು

ಮಧ್ಯಮ ತರಗತಿಯ ದಾಂಪತ್ಯ ಜೀವನದಲ್ಲಿ, ಅತೃಪ್ತಿ ತಲೆದೋರುವುದು ಅಸ್ವಾಭಾವಿಕವೇನಲ್ಲ. ಅದರಲ್ಲಿಯೂ ಕುಂಜುವಿನಂತಹ ಹೆಣ್ಣಿನ ರಸಿಕ ಹೃದಯ, ಅತೃಪ್ತಿಗೆ ಎಡೆಗೊಡಲಿಕ್ಕೆ, ಪರಿಸರವೊಂದು ಹೆಚ್ಚಿನ ಕಾರಣವಾಯಿತು. ಆದರೂ ಕುಂಜುವಿನ ದೈನ ಆಕೆಯ ಪತನವನ್ನು ತಡೆದು ಹಿಡಿಯಿತು.

ಕುಂಜುವಿಗೆ ಹದಿನೇಳು ವರ್ಷಗಳು ತುಂಬಿತ್ತು, ಒಳ್ಳೆಯ ಲುನೆ. ಎತ್ತರಕ್ಕೆ ತಕ್ಕಂತೆ ನೈಕಟ್ಟು. ಚಿನ್ನದ ಪ್ರತಿಮೆಯಂತೆ ದ್ದಳು. ದಟ್ಟವಾದ ಗುಂಗುರುಗೂದಲು ಬಿಚ್ಚಿದರೆ ನೊಣಕಾಲನ್ನು ಬಟ್ಟುವುದು. ಚಂಚಲನೇತ್ರಗಳು ಅವಳ ಮುಗ್ಧತೆಯನ್ನು ವ್ಯಕ್ತ-ಡಿಸುತ್ತಿದ್ದುವು. ಯಾವಾಗಲೂ ನಗುಮುಖ. ಪರಮ ಸಾಧ್ವಿ, ಪಟನೆಂಬುದನ್ನೇ ಅರಿಯಳು. ಯಾರಾದರೂ ಹಶಾತ್ತನೆ ತಪಾಷ-ಗಿ ಸುಳ್ಳು ಹೇಳಿದರೂ ಕೂಡ, "ಹಾಗೇನು?" ಎಂದು ಅಚ್ಚರಿ-ಗೊಳ್ಳುವಳು.

ಅವಳಿಗೆ "ಅಪ್ಪನ ಮುದ್ದು" ಎಂದು ಮನೆಯಲ್ಲಿ ತಮ್ಮ-ಂಗಿಯರಿಂದ ಹಿಡಿದು ನಾಮಕರಣವಾಗಿತ್ತು. ಆದರೆ, ಶಾಸ್ತ್ರಿ-ಗಳಂತೂ ಅವಳಲ್ಲಿ ಅಸಾರ ಪ್ರೇಮವನ್ನಿಟ್ಟಿದ್ದೇನೋ ನಿಜ. ಆಫೀಸಿ-ಂದ ಬಂದವರು ಮನೆಯೊಳಗೆ ನುಗ್ಗುವಾಗಲೇ "ಕುಂಜಮ್ಮಾ, ನನು ವಿಷಯ?" ಎಂದೆನ್ನುವ ಧ್ವನಿ ಸಾಧಾರಣವಾಗಿ ಕೇಳಿಬರು-ತ್ತಿದ್ದು. ಅಜ್ಜಿ ಯಾವಾಗಲಾದರೂ "ಕುಂಜು ಅಳಲು ಹುಟ್ಟಿದವಳೇ?" ಎಂದೆಂದರೆ, ಅವರ ಮುಖ ಸಪ್ಪೆಯಾಗುವುದು. "ಇಲ್ಲಜ್ಜಾ ಅವಳು ಸ್ಪಷ್ಟವಾದಿನಿ. ಅವಳು ಹುಟ್ಟಿದ ಬಳಿಕವೇ ನನಗೆ ಒಳ್ಳೆಯಕಾಲ" ಎಂದೆನ್ನುತ್ತಿದ್ದರು.

ಕುಂಜುವಿಗೆ ಇದರಲ್ಲೆಲ್ಲ ಚಿಂತೆಯಿಲ್ಲ. ತನ್ನ ಸಾರಾಲೆಯ ಲಸಗಳುಂಟು, ತಾನುಂಟು. ತಪ್ಪದೆ 'ಆನಂದ ವಿಕಟನ್,' ಾರತಿಯ ಹಾಡುಗಳು.. ಇವೇ ಅವಳಿಗೆ ತಿಳಿದವು. ಮದುವೆಗೆ ುಂಚಿತವಾಗಿ ಅವಳಿಗೆ ಭಾರತಿ (ತಮಿಳುಕವಿ) ಯ ಹಾಡುಗಳ ಚಯವೂ ತಿಳಿದಿರಲಿಲ್ಲ. ನೀನು ಕಳೆದ ದೀಪಾವಳಿಗೆ ಬಂದಿದ್ದಾಗ ಭಾರತಿ 'ಯ ಪುಸ್ತಕಗಳನ್ನು ಕೊಂಡು ತಂದಿದ್ದನು.

ನೀನು ಚಿನ್ನದಂತಹ ಹುಡುಗ. ಉದ್ಯೋಗವಿಲ್ಲದ ಕಷ್ಟಕ್ಕೆ ನನನು ನನು ಮಾಡಲು ಸಾಧ್ಯ? *M. A.* ಪ್ಯಾಸ್ ಮಾಡಿ ಎರಡು ವರ್ಷಗಳಾದುವು. ಉಪಯೋಗವೇನು? ಸರ್ವಸಾಧಾರಣವಾದ ಕೆಲಸ ಸಿಕ್ಕಿದರೂ ಹೋಗಲು ತಯಾರಿದ್ದನು. ಸಿಕ್ಕಿರಲ್ಲವೇ?

ಆಯಿತು, ಒಂದು ವರ್ಷ, ನೀನುನಿಂದ ಕಾಗದ ಸಹ ಬರಲಿಲ್ಲ. ಮದುವೆಯನ್ನು ಕೇಳಲು ಮಾತೆತ್ತಿದರೆ "ಎಲ್ಲೇ ಹೋಗುವನು? ಾರೆಲ್ಲ ಸುತ್ತಿಕೊಂಡು, ತಾನೇ ತಾನಾಗಿ ಬಂದು ಸೇರುತ್ತಾನೆ." ಎಂದೆಂದು ಬಿಡುವರು.

"ಪಾಪು, ಆ ದಡ್ಡನನ್ನು ನೆನೆನೆನೆದು ಜೀಂತಿಸುವುದೇಕೆ? ಕವನಂತೂ ನಿದು ನಯಸ್ಕೇ ಕಾಡೋಂದನ್ನು ಸಹ ಗೀಚಿ ಾಕಿಲ್ಲ!" ಎಂದಂದು ಕಣ್ಣೊರಸಿಕೊಳ್ಳುವಳು ಅಜ್ಜಿ. ಕುಂಜುವಿ-ಗಂತೂ ಏನೊಂದೂ ಬಗೆಹರಿಯುತ್ತಿರಲಿಲ್ಲ. ಾಲೆಗೆ ಹೋಗುತ್ತಿ-ದ್ದಾಗ ಒಂದು ರೀತಿಯ ಸಮಾಧಾನದಿಂದಿರುತ್ತಿದ್ದಳು. ಓದು ನಿಂತ ಬಳಿಕ ಅವಳಿಗೆ ಕ್ರಮೇಣ ಜಿಗುಪ್ಸೆ ತಲೆದೋರಲಾರಂಭಿಸಿತು. ಮಗು ಗೋಪು ಹುಟ್ಟಿದಬಳಿಕ ಮತ್ತಷ್ಟು ನೊಂದುಕೊಳ್ಳುತ್ತಿದ್ದಳು. ಯಾವಾಗಲೂ ಳಿಮುಖವೇ?

"ಕುಂಜಾ, ಕುಂಜಪ್ಪಾ ಎಂದು ಗಟ್ಟಿಯಾಗಿ ಕೂಗಿ ಕರೆದರು ರಾಜುಶಾಸ್ತ್ರಿಗಳು. ಕಣ್ಣುಗಳನ್ನು ಒರೆಸಿಕೊಂಡು "ಇಗೋ ಬಂದೆ" ಎಂದು ಎದ್ದು ಓಡಿದಳು ಕುಂಜು.

"ಕಲ್ಕತ್ತೆಯಿಂದ ಒಂದು ಕಾರ್— ನೀನುವಿನ ಕೈಬರಹ ದಂತಿದೆ" ಎಂದು ಜೋಜಗುಟ್ಟುತ್ತ ಲಕೋಟೆಯೊಂದನ್ನು ಅವಳ ಕೈಗಿತ್ತರು ಕುಂಜುವಿನ ಮುಖ ಅರಳಿತು. ಕೈಕಾಲುಗಳೆಲ್ಲ ಜನ-ರಲು, ನೆಲ್ಲಗೆ ತನ್ನ ಕೊಠಡಿಯೊಳಗೆ ಪ್ರವೇಶಿಸಿದಳು ಕುಂಜು.

ರಾತ್ರಿ ಪೂರ್ತಿ ಅವಳಿಂದ ನಿದ್ರೆ ಮಾಡಲು ಸಾಧ್ಯವಾಗಲಿಲ್ಲ. ಮದುವೆಯಾದಂದಿನಿಂದ ನಡೆದ ಪ್ರತಿಯೊಂದು ಸಣ್ಣ ಸಂಭವವು ಕೂಡ ಅವಳ ಮನಗಣ್ಣ ಮುಂದೆ ತೋರಿ ತೋರಿ ಮರೆಯಾಗು-ತ್ತಿತ್ತು. ಕಲ್ಕತ್ತೆಗೆ ಹೊರಡುವುದರ ಮೊದಲು ತನಗೆ ಅವರು ಬರೆದ ಪತ್ರವೂ, ಉಂಗುರವನ್ನು ಮಾರಿ ಕಲ್ಕತ್ತೆಗೆ ಹೋದುದೂ....ಹೇಗೋ ಆ ವಿಷಯ ಶಾಸ್ತ್ರಿಗಳ ಕಿವಿಗೆ ಎಟುಕಿ ಅವರು ಮಾಡಿದ ಅರ್ಭಾಟವೂ —ಪ್ರತಿಯೊಂದೂ ನೆನಪಿಗೆ ಬರಲು, ಅವಳ ಕಣ್ಣುಗಳಿಂದ ಕಣ್ಣೀರ ಕೋಡಿ ಹರಿಯತು. ಆದರೆ, ಭವಿಷ್ಯದಲ್ಲಿ ತನ್ನ ಬಾಳ್ವೆಯನ್ನು ಕುರಿತು ಅವಳ ಮೈ ಉಬ್ಬಿತೆನ್ನಿ. ಮಗು ಗೋಪುವನ್ನು ತೋಳಲ್ಲಿ ಮಲಗಿಸಿಕೊಂಡು, ತನ್ನ ಕೈಹಿಡಿದು ಗಾಡಿಯಲ್ಲಿ ತನ್ನ ಪತಿ ಹೆತ್ತಿ ಸು-ತ್ತಿರುವಂತೆಯೂ, ಉನ್ನತವಾದೊಂದು ಮನೆಯಲ್ಲಿ ಗೌರವವಾಗಿ ತಾನು ಸಂಸಾರ ಮಾಡುತ್ತಿರುವಂತೆಯೂ ಭಾಸಿಸಿ ಆನಂದಪಡುತ್ತಿ-ದ್ದಳು ಕುಂಜು.

ಮಗು ಗೋಪಾಲ ದೀಪದ ಬೆಳಕನ್ನು ನೋಡುತ್ತ ಕೈಕಾಲು ಬಡಿಯುತ್ತ ಆಟವಾಡುತ್ತಿದ್ದನು.

ಕುಂಜುವಿನ ದೂರದ ಸಂಬಂಧಿಕಳಾದ ಜೇಜೀಅತ್ತೆ ಕಲ್ಕ-ತ್ತೆಯ ಭವಾನೀಪುರದಲ್ಲಿ ಒಕ್ಕಲಿದ್ದಳು. ಆಕೆಗೆ ಒಬ್ಬನೇ ಮಗ. ಅವನಿಗೆ ಆಲ್ಲೀ ಯಾವುದೋ ಒಂದು ಕಂಪೆನಿಯಲ್ಲಿ ಕೆಲಸ. ನೀನು, ಕುಂಜುವಿಗೆ ಮನುಷ್ಯ ಸಹಾಯವೂ ಆಯಿತೆಂದು, ಅವರಿದ್ದ ಕಟ್ಟಡ-ದಲ್ಲಿಯೇ ಒಕ್ಕಲಿರಲು ಏರ್ಪಾಟು ಮಾಡಿದನು.

---

* ಕನ್ನಡ ಭಾಷೆಯ ಸುಪ್ರಸಿದ್ಧ ಕತೆಗಾರ್ತಿ ಶ್ರೀಮತಿ ತ್ರಿವೇಣಿಯವರ ಒಂದು ಕತೆಯೊಂದರ ಅನುವಾದವಿದು. — ಲೇ.

ತೀನುವನ್ನು ಸ್ಟೇಷನ್ನಿನಲ್ಲಿ ಕಂಡಾಕ್ಷಣ 'ಓ' ಎಂದು ಅತ್ತು ಬಿಟ್ಟಳು ಕುಂಜು. ಮೂರು ದಿನಗಳ ಸಯಣ. ಆ ಉಪವಾಸ, ಹಸಿವು, ಸುಸ್ತು.... ಎಲ್ಲ ಸೇರಿ ಬಾಡಿ ಬಳಲಿ ಹೋಗಿದ್ದಳೆನ್ನಿ. ಮಗು ಗೋಪು ತೀನುವಿನ ಹತ್ತಿರ ಹೋಗುವುದಿಲ್ಲವೆಂದನು. ಹೇಗೆ ಹೋಗಬಲ್ಲ? ಮೊದಲು ನೋಡಿದ್ದರಲ್ಲವೆ?

ಸೋದರತ್ತೆ ವಿಪರೀತ ಉಪಚರಿಸಿದಳು. ಅವಳ ಮಗನ ವಿಷಯ ಹೇಳಬೇಕಾಗಿಯೇ ಇಲ್ಲ. ಕುಂಜು ತನ್ನೊಡನೆ ಬಂದು ನಾಸಿಸುವುದೇ ಒಂದು ಹೆಣ್ಮೊಯೆಂದೆಂದು ಕೊಂಡನು.

ಕಲ್ಕತ್ತೆಗೆ ಬಂದು ಐದಾರು ತಿಂಗಳುಗಳು ಆಗಿರಬೇಕಷ್ಟೆ. ಕುಂಜುವಿಗೆ ಬಂದ ಹೊಸವರಲ್ಲಿ ವಿಸರ್ಟ್ಟಿದ್ದಂತಹ ಉತ್ಸಾಹವೂ, ಆಸಕ್ತಿಯೂ ಕಡಿಮೆಯಾದುವು. ಬೆಳ್ಳಗ್ಗೆ ಎಂಟು ಘಂಟೆ ಹೊಡೆಯುವುದರ ಮೊದಲೇ ತೀನೂ ಹೊರಗೆ ಹೊರಟು ಹೋಗುವನು; ಹಗಲು ಹನ್ನೆರಡು ಘಂಟೆಯ ವೇಳೆಗೆ ಊಟಕ್ಕೆ ಬರುವನು ಅವಸರ ಅವಸರವಾಗಿ ಎರಡು ತುತ್ತು ಊಟನುಂಡು ಮತ್ತೆ ಓಡಿಹೋಗುವನು. ಮರಳಿ ಮನೆಗೆ ಬರುವುದು ರಾತ್ರಿ ಹತ್ತು ಘಂಟೆಗೇ.

ಸಣ್ಣ ಹುಡುಗಿ; ಮಗು ಬೇರೆ. ಘಂಟೆ ಒಂಬತ್ತು ಹೊಡೆಯುವುದರೊಳಗಾಗಿಯೇ 'ಇನ್ನೂ ಬರಲಿಲ್ಲವಲ್ಲಾ' ಎಂದು ದಾರೀ ಕಾಯುತ್ತಿರುವಳು ಕುಂಜು. ಗಂಡನ ಕೂಡ ನಾನಕಾರವಾಗಿ ಮಾತನಾಡುವಾಗ 'ಏನಂತಹ ಕೆಲಸ, ಇಷ್ಟು ಹೊತ್ತಿನವರೆಗೂ?' ಎಂದು ಕೇಳಲು ಬಾಯಿ ತೆರೆಯುವಳು. ಆದರೆ ಕೇಳಲು ಸಂಕೋಚ.

ಊಟವಾದ ಮೇಲೆ ರಾತ್ರಿ ಕಾಗದಗಳನ್ನಿಟ್ಟುಕೊಂಡು, ಬರೆದು ಬರೆದು ಗುಡ್ಡೆ ಹಾಕಲು ತೊಡಗುವನು. ರಜದ ದಿನಗಳಲ್ಲಂತೂ ಗೆಳೆಯರ ಗುಂಪೋ ಗುಂಪು. ಹರಟೆಯ ಕಛೇರಿ. ಗೆಳೆಯರ ಗುಂಪನ್ನೂ, ಆಫೀಸಿನ ಕಾಗದಗಳನ್ನೂ ಕಂಡರೇನೇ ಕೆಲಸವುಯು ಅವಳಿಗೆ ವಿಪರೀತ ಸಿಟ್ಟು ಬರುವುದು. ಅವರುಗಳನ್ನು ತನ್ನ ಹಕ್ಕನ್ನು ಅಪಹರಿಸುವ ಹಗೆಗಳೆಂದು ವಿರೋಧಿಸುವಳು ಅವಳ ಕರುಳು ಉರಿಯುವುದು.

ಕುಂಜುವಿಗೆ ಸ್ವಾಭಾವಿಕವಾಗಿಯೇ ಮಾತೆಂದರೆ ಪ್ರೀತಿ. ಅವರಲ್ಲೂ ತನ್ನ ಗಂಡನ ಕೂಡ ನಾನಕಾರವಾಗಿ—ಮಾತನಾಡಲೂ ಆಗಲಿಲ್ಲವಲ್ಲಾ—ಎಂದು ಅವಳ ಮನಸ್ಸು ತಪಿಸುವುದು. ಬಳಿಕ, ಕೋಪದಲ್ಲೂನ ತಾಳಿ, ಒಳುವಿನಲ್ಲಿ ಕೊನೆಗಾಣುವುದು. ತೀನು ಅವಳಿಗೆ ಎಂತಹ ಕೊರತೆಯನ್ನೂ ಇಟ್ಟಿರಲಿಲ್ಲ. ಆದರವಳ ಮನಸ್ಸು ಮಾತ್ರ ಕೊರಗುತ್ತಲೇ ಇತ್ತೆನ್ನಿ.

ಸೋಪತ್ತೆಯ ಮಗ ನಾವು ಬಳಿಯನೇನೋ ಹೌದು; ಆದರೆ, ತಾನೇ ಮೇಧಾವಿ; ಇತರರೆಲ್ಲರೂ ದಡ್ಡರು— ಎಂಬ ಗರ್ವ ಅವನಿಗೆ. ಅದಕ್ಕೆ ತಕ್ಕಂತೆಯೇ ಆಯಾಸವಿಲ್ಲದ ಉದ್ಯೋಗ, ಬೆಳಿಗ್ಗೆ ಹತ್ತು ಘಂಟೆಗೆ ಹೋಗಿ, ಸಂಜೆ ಆರು ಘಂಟೆಗೆ ಬಂದು ಬಿಡುತ್ತಿದ್ದನು. ಚೇಚೇ ಅತ್ತೆಗನಂತೆ, ಸದಾ ಸರ್ವದಾ ಜಂಭಕೊಚ್ಚಿಕೊಳ್ಳುತ್ತಿದ್ದಳು.

* * *

ರಾತ್ರಿ ಹತ್ತು ಘಂಟೆಯ ಸಮಯ. ಊರವದ್ದು ಅಡಗಿತ್ತು. ಕುಂಜು ಮಂಚದಲ್ಲಿ ಕಣ್ಣು ಮುಚ್ಚಿ ಮಲಗಿದ್ದಳು. ತೀನು ದೀಪದ ಸಮೀಪದಲ್ಲಿ ಕುಳಿತು ಬರೆಯುತ್ತಿದ್ದನು. ಅವನ ಮುಖದಲ್ಲಿ ಆನಂದ ತಾಂಡವವಾಡುತ್ತಿತ್ತು. ವಿಜಯವನ್ನು ನಿರೀಕ್ಷಿಸುತ್ತ ಧೈರ್ಯವಾಗಿ ಮುನ್ನುಗ್ಗುತ್ತಿರುವ ಯೋಧನಂತೆ, ಅವನು ಒಂದೇ ಸವನೆ ಪಾಯು ವೇಗದಲ್ಲಿ ಬರೆದು ಬರೆದು ಗುಡ್ಡೆ ಹಾಕುತ್ತಿದ್ದನು.

ತೊಟ್ಟಿಲಲ್ಲಿ ಮಗು ಎದ್ದು ಸಣ್ಣದಾಗಿ ಅಳಲು ಪುರುಮಾಡಿತು. ಕುಂಜು ಬೇಕುಬೇಕೆಂದೇ ಅಲುಗದೆ ಮಲಗಿದ್ದಳು. ತೀನು ಲೇಖನಿಯನ್ನು ಮೇಜಿನಮೇಲಿಟ್ಟು ಕುರ್ಚಿಯಿಂದ ಎದ್ದುಹೋಗಿ ಮಗುವನ್ನು ತಂದು ಹಾಸಿಗೆಯಲ್ಲಿ ಮಲಗಿಸಿ, ತಟ್ಟಿ ನಿದ್ರೆ ಮಾಡಿಸಿದನು. 'ಅವಳಿಗೆ ಮೈ ಸರಿ ಇಲ್ಲವೇನು? ಎಂಬ ಸಂದೇಹ ಹುಟ್ಟಿತವನಿಗೆ. ಅವಳ ಹಣೆ ಮುಟ್ಟಿ ನೋಡಿದನು; ಕುಂಜುವಿನ ಮೈ ಜಂ ಎಂದಿತು. ಹಿಡಿಸಲಾರದಷ್ಟು ಸಂತೋಷ. ಆ ಬಳಿಕ ಅವನು ಹೊದ್ದಿಕೆಯನ್ನು ತೆಗೆದು ಅವಳಿಗೆ ಚೆನ್ನಾಗಿ ಹೊದ್ದಿಸಿ ಮತ್ತೆ ಮೇಜಿನ ಸಮೀಪದಲ್ಲಿ ಬಂದು ಕುಳಿತನು.

ಗಡಿಯಾರದ 'ಟಿಕ್ ಟಿಕ್' ಶಬ್ದದ ಹೊರತಾಗಿ ಇನ್ನೆಂತಹ ಶಬ್ದವೂ ಕಾಣೆ. ತೀವನು ಕಾಗದದ ಹಾಳೆಗಳನ್ನು ತಿರುವಿ ಹಾಕುವ ಶಬ್ದಕೂಡ ಕುಂಜುವಿಗೆ ಸುಂಟರ ಗಾಳಿಯೋಪಾದಿಯಲ್ಲಿ ಕೇಳಿಸುತ್ತಿತ್ತು. ಅವಳ ಮನಸ್ಸೆಲ್ಲ ತಾನು ಹಗಲಲ್ಲಿ ಕಿವಿಗೊಂಡ ವಿಷಯದಲ್ಲೇ ಲಯಿಸಿತ್ತು. M.A ಫ್ಯಾಸ್ ಮಾಡಿದ ತನ್ನ ಗಂಡನು ಕೇವಲ ಟ್ಯೂಷನ್ ಓಡಿಸುತ್ತಾನೆ—ಎಂಬುದನ್ನು ನೆನೆನೆನೆದು, ಅವಳ ಹೃದಯವು 'ಡಬ್ ಡಬ್'ನೆ ಹೊಡೆದುಕೊಂಡಿತು. "ಕೆಲಸವನ್ನಾಡಿ ಜೀವನ ನಡೆಸಬೇಕೆಂಬುದೇನೋ ಸರಿಯೇ; ಆದರೆ ಗೌರವ ಬೇಡವೇ?" ಎಂಬ ಪ್ರಶ್ನೆ ಏಳುವುದು. "ಇಲ್ಲದಿದ್ದರೆ ಅಪ್ಪಾಜಿಯವರು ಅಳಿಯನಿಗೆ ಮೊದ್ದೊಂದು ಉದ್ಯೋಗವನ್ನು ಕೊಡಿಸಿದ್ದಾರೆಯೇ?" ಎಂಬ ಉತ್ತರವನ್ನು ಉದ್ಭವಿಸುವುದು ಅದೆಲ್ಲ ಜಾಳಾಗಲಿ. "ರಾತ್ರಿ ಹತ್ತು ಘಂಟೆಯವರೆಗೆ ಏನಂತೆ ಪ್ರಯೋಜನದ ಕೆಲಸ? ಎಲ್ಲಾದರೂ ಸಿದ್ ಸೂರ ರಸ್ತೆಯಲ್ಲಿ ಕಾದಿರುತ್ತಾನಷ್ಟೆ! ಸಣ್ಣ ಹುಡುಗಿಯನ್ನು ಮನೆಯಲ್ಲಿ ಬಿಟ್ಟು ಬಂದಿರುವೆನಲ್ಲಾ ಎಂಬ ಯೋಚನೆಯುಂಟೇ ಇವನಿಗೆ? ಗಿಣಿಯನ್ನು ಸಾಕಿ ಪಂಜರದಲ್ಲಿ ಕೂಡಿಟ್ಟಿರುವಂತೆ ಇಲ್ಲಿಗೆ ತಂದು ಸೆರೆಮಾಡಿದ್ದಾನೆ! ಇಷ್ಟು ಮುಟ್ಟಿಗಾದರೂ ನೀನೂ ನಾನೂ ಮಾತಿಗಾದರೂ ಇಪ್ಪೇವೆ" ಎಂದು ಚೇಚೇ ಅತ್ತೆ ಮಗನ ಹತ್ತಿರ ಹೇಳಿದ ಮಾತುಗಳು ಪುನಃ ಪುನಃ ಅವಳ ನೆನಪಿಗೆ ಬಂದುವು.

ಆದರೆ, ತೀನುವಿನ ಮುಖವನ್ನು ನೋಡಿದಾಗಲೆಲ್ಲಾ "ಛೇಛೇ ಹಾಗೆಲ್ಲ ಇರಲಾರದು. ಈ ಮುದಿಗೊಡ್ಡುಗಳೇ ಹೀಗೆ, ಮನಬಂದಂತೆ ಕನವರಿಸುತ್ತಿರುತ್ತವೆ." ಎಂದು ಕುಂಜು ತಿಂದುಕೊಳ್ಳುವಳು. ಮರು ಘಳಿಗೆ "ಇಲ್ಲ, ಈ ಪಾಪಂತಿ ಎಲ್ಲಾವನೂ ರಾಮುವಿನ ಕಿವಿಗೆ ಬಿದ್ದಿಬೇಕು ಅವನ್ನು ಅಮ್ಮನ ಕಿವಿಗೆ ರಹಸ್ಯವಾಗಿ ಹಾಕಿದ್ದಾನೆ. ಎಂದು ತೋರುವುದು. ಕೊನೆಗೆ ತೀನುವನ್ನೇ ಕೇಳಿ ಬಿಡೋಣವೆಂದು ಧೈರ್ಯತಂದುಕೊಂಡು ಹಾಸಿಗೆಯಿಂದ ಎದ್ದು ಕುಳಿತಳು.

ತೀನು ನಸುನಗುತ್ತ ಅವಳನ್ನು ಸಮೀಪಿಸಿ "ಏನು ಕುಂಜು ಮೈ ಸರಿ ಇಲ್ಲವೇ?" ಎಂದು ಆದರದಿಂದ ಕೇಳುತ್ತ ಮೆಲ್ಲಗೆ ಅವ

ಗಲ್ಲ ಸವರಿದನು. ಅವಳ ಕಣ್ಣುಗಳಲ್ಲಿ ನೀರು ತುಂಬಿತುಳುಕುತ್ತಿತ್ತು.

"ಏನು? ಏನಾಯಿತು?" ಎಂದು ಶೀನು ಗಾಬರಿಯಿಂದ ಪ್ರಶ್ನಿಸಿದನು.

"ಏನೂ ಇಲ್ಲ." ಎಂದು ಕುಂಜು ಉಸುರಿದಳು. ಅವಳು ಕೇಳಬೇಕೆಂದಿದ್ದ ವಿಷಯಗಳೆಲ್ಲ ಅವಳ ಗಂಟಲೊಳಗೇ ಅಡಗಿ ಹೋದುವು. "ವಿಷಯವೇನು? ಕೇಳಬಾರದೆ?" ಎಂದು ಮತ್ತೆ ಪ್ರೇಯವಾಗಿ ಕೇಳಿದನು ಶೀನು.

ಅವನ ಮಾತುಗಳನ್ನು ಕಿವಿಗೊಂಡು ಕುಂಜುವಿಗೆ ಮುಂಜಿ ಕಾಣಿಸಿಕೊಂಡಿದ್ದ ಸಂಶಯಗಳೆಲ್ಲವೂ ಕ್ಷಣಕಾಲದಲ್ಲಿ ಮಾಯವಾದುವು. "ಛೇ ಛೇ! ಇಂತಹ ಉತ್ತಮಶೀಲರನ್ನು ಸಿಕ್ಕಾಪಟ್ಟೆ ಕೇಳಿ ಮನಸ್ತೋಯಿಸಬಹುದೇ?" ಎಂದು ಹೊಳೆಯಿತು ಅವಳಿಗೆ. ಆ ಸಹಸ ಅಸ್ಪಷ್ಟಕ್ಕೇ ಕೊನೆಗಾಣಲಿ—ಎಂಬಂತೆ ಮಗು ಎಚ್ಚೆತ್ತಳು.

ಂ ಂ ಂ

ಕುಂಜುವಿಗೆ ಬಂಗಾಲಿ ಹಿಂದಿ ಕಲಿಸುವುದಕ್ಕಾಗಿ ಶೀನು ಪಾಠ ಪುಸ್ತಕಗಳನ್ನು ಕೊಂಡಿಟ್ಟಿದ್ದನು. ಎಂದಾದರೂ ಕೊಂಚ ಅವಕಾಶ ದೊರಕಿದರೆ ಕಲಿಸುತ್ತಿದ್ದನು. ಪುರಸೊತ್ತೆಂಬುದೇ ಇಲ್ಲದೆ ಹೊರಗೆ ಹೋಗುವುದೂ ಬರುವುದೂ, ಊಟ ಮಾತುವುದೂ, ನಿದ್ರೆ ಮಾಡುವುದೂ, ಇದೇ ಕೆಲಸವಾಗಿತ್ತು ಅವನಿಗೆ. ಇಂತಹ ಬಾಳ್ವೆಯು ಕುಂಜುವಿಗೆ ಬೇಸರವಾಯಿತು.

ಸಾಲದುದಕ್ಕೆ ಚೀಚೀ ಚತ್ತೆ "ನಾಳೆ ನನ್ನ ಸೊಸ ಬರಲಿ. ಕಣ್ಮಾಣಿಯಂತೆ ನೋಡಿಕೊಳ್ಳುವೆನು ಗೊತ್ತೇ? ನಿನ್ನ ಗಂಡನಿಗೆ ಕೊಂಚವಾದರೂ ನಿನ್ನ ಬೆಲೆ ತಿಳಿದಿದೆಯೇ? ಇದಿರುಮನೆಯ ರಾಷ್ಟ್ರಿಯನನ್ನು, ಅವನ ಹೆಂಡತಿಯನ್ನೂ ನೋಡು" ಎಂದು ಮಾತಿಗೆ ಸಪ್ರಾರಂಭಿಸಿಬಿಡುತ್ತಿದ್ದಳು.

ಬಂದಿಗೆ ಹಾಲಿಗೆ ತೊಟ್ಟು ಮಜ್ಜಿಗೆ ಸಾಲದೇ, ಸೊಸವಾಗಲು! ಕ್ರಮೇಣ, ಶೀನು ತನ್ನನ್ನು ಬಹಳ ಹೀನಾಯವಾಗಿ ನಡೆಸುತ್ತಿರುವಂತೆ ಕುಂಜುವಿಗೆ ಭಾಸವಾಯಿತು. ಅವನು ಸಹಜವಾಗಿ ಅನ್ನುವ ಹಿತನುಡಿಗಳನ್ನು ಸಹಿಸಬಹುದೆಂದು ತಿಳಿದಳು ಕುಂಜು. ರಾಮುವೇ ಮುಖ್ಯ ಪೆಧಾನ. ಶೀನು ಅವನ ಸಾವಧೂಳಿಗೂ ಸಮಾನನಾಗಲಾರನೆಂದು ಕೆಲವಮಯ ಅವಳಿಗೆ ತೋರುತ್ತಿತ್ತು. ಲಂಟಾಣಪೊದೆಗೆ ಕಳೆ ತೆಗೆದು ಪಾಠ ಮಾಡಬೇಕೇನು? ಕುಂಜು ಯೋಸ ಕುಂಜುವಾಗಿ ಬದಲಾಯಿಸಿದಳು. "ಶೊಲ್ಲಕ್ಕೊದಿಕ್ಕು ಪಡಿಪೆಂಜಂ. ನೆರುಂಪೇಚ್ಚಿಕ್ಕೋವಂದೇ ಸಂಜಂ" ಎಂಬ ತಮಿಳು ಪದ್ಯವು (ಹೇಳಲು ಕಾತರಗೊಂಡರೂ, ತಿಳುಹಲು ಮಾತಿನ ಕ್ಷಾಮ ವಿಪರೀತವೆಯಲ್ಲಾ!) ಶೀನುವನ್ನು ಕಾಣುವಾಗಲೆಲ್ಲಾ ಅವಳ ಮನದೊಳಗೆ ಹೊಳೆಯುವುದು.

ರಜದ ದಿನಗಳಲ್ಲಿ ಶೀನುವಿನ ಬರುವಿಕೆಯಿಂದ ಅರಳುತ್ತಿದ್ದ ಅವಳ ಮುಖವು, ರಾಮುವಿನ ಆಗಮನದಿಂದ ಅರಳತೊಡಗಿತು. ಸ್ವಾಭಾವಿಕವಾಗಿಯೇ ಅವನು ತನೂಜೆಯಾಗಿ ಮಾತನಾಡುವನು. ಅದರಲ್ಲೂ ಕುಂಜುವಿನ ಸನ್ನಿಧಾನದಲ್ಲಿ ಹೇಳಬೇಕೆ? ಮಾತಿನಲ್ಲಿ ತನಗಿದ್ದ ಸ್ವಾಧೀನ್ಯ ಎಲ್ಲವನ್ನೂ ಅವಳ ಪಾದಗಳಲ್ಲಿ ಅರ್ಪಿಸಿಬಿಡುವನು. ಮಣ್ಣು ಪುಟ್ಟ ವಿಕಟವಿನೋದಗಳು, ಭಾರತಿಯ ಹಾಡುಗಳು ಎಲ್ಲವನ್ನೂ ಅವನು ಮಾತಿನಲ್ಲಿ ಸರ್ವಸಾಧಾರಣವಾಗಿ ಬಳಸುವನು. ಕುಂಜುವಂತೂ ದೊಡ್ಡದಾಗಿ ಕಣ್ಣುಗಳನ್ನು ಅರಳಿಸಿಕೊಂಡು ವಿನೋದವಾಗಿ ಅವನ ಮಾತುಗಳ ಸವಿಯನ್ನು ಅನುಭವಿಸುವಳು. ಮಗು ನೋಪ್ಪು ಚತ್ತೆಯ ಮಡಿಲಲ್ಲಿ ಕುಳಿತು "ಕೃಷ್ಣಾ ರಾಮಾ ಗೋವಿಂದಾ" ಎಂದು ಕೈಚಪ್ಪಾಳೆ ಹೊಡೆಯುತ್ತಿರುವನು. ಚತ್ತೆಗೆ ಕೊಂಚ ಪ್ರಪಂಚ ಜ್ಞಾನ ಉಂಟು "ರಾಮುವನ್ನು 'ಬ್ಯಾಂಸ್ಟರ್' ಪರೀಕ್ಷೆಗೆ ಕಳುಹಿದ್ದರೆ 'ಸಾರ್ಟಿನ್' ಪೊರೆಯನ್ನು ವೀರಿಸುತ್ತಿದ್ದೆ. ನನ್ನ ದುರದೃಷ್ಟ, ಒಂದೇ ಒಂದು ಕಣ್ಣು, ಕಂಪೆನಿಯ ಕೆಲಸಕ್ಕಾಗಿ ಇಷ್ಟು ಮಾಬರಬೇಕಾಯಿತು." ಎಂದು ನಿಟ್ಟುಸುರು ಬಿಡುವಳು.

ಂ ಂ ಂ ಂ

ಆ ಮೊತ್ತೊ ಊಟ ಮಾಡುವಾಗ ಶೀನು ಕೊಂಜೆ ವಿರಾಮ ನಾಗಿದ್ದನು. ಕುಂಜು ನಲ್ಲಿಯ ಕೆಳಗೆ ಕೈತೊಳೆಯುತ್ತಿದ್ದಳು. ನೋಪ್ಪು ಕೈಯಲ್ಲಿ ಹಪ್ಪಳ ಹಿಡಿದು ಮುದ್ದುಮುದ್ದಾಗಿ ನಡೆಯಲು ಕಲಿಯುತ್ತಿದ್ದನು. ತನಗೆ ಈಗ ದೊರಕಿರುವ ಉನ್ನತಪದವಿಯನ್ನು ಕುಂಜುವಿನ ಹತ್ತಿರ ಹೇಳಬೇಕೆಂದು ಶೀನು ತವಕಪಟ್ಟನು. "ಕುಂಜು ಒಳ್ಳೆಯ ಅದೃಷ್ಟವಂತೆ!" ಎಂದು ತನ್ನಷ್ಟಕ್ಕೆ ಅಂದುಕೊಂಡನು. ಅವಳು ಬಂದು ಊಟಕ್ಕೆ ಕುಳಿತುಕೊಳ್ಳುವವರೆಗೂ ಕಾದಿದ್ದನು. ಮೆಲ್ಲಗೆ ಬಂದು ತನ್ನ ಎಲೆಗೆ ಬಡಿಸಿಕೊಂಡಳು ಕುಂಜು. "ಕುಂಚಾ," ಕುಂಜು ಬೆರಗಾದಳು. ಯಾವಾಗಲಾದರೂ ಅತ್ಯಾನಂದ ಏರ್ಪಟ್ಟಾಗಲೇ ಅವನು ಅವಳನ್ನು "ಕುಂಜಾ!" ಎಂದು ಕರೆಯುವ ವಾಡಿಕೆ.

"ನಾನಿಲ್ಲ ಮುಂದಿನ ತಿಂಗಳು ದೆಹಲಿಗೆ ಹೋದರೂ ಹೋಗಬಹುದು." ಅವನ ಮಾತಿನಲ್ಲಿ ಅಸಂದ ತುಂಬಿ ತುಳುಕುತ್ತಿತ್ತು. ಕುಂಜು ತಲೆಯೆತ್ತಿ ನೋಡಿದಳು. ಅವಳ ಮುಖದಲ್ಲಿ ಎಂತಹ ಭಾವಾರ್ಪಣೂ ಕಾಣಿಸಲಿಲ್ಲ. "ದೆಹಲಿಗಾ? ಏಕೆ?" ಎಂದು ನಿದಾನವಾಗಿ ಕೇಳಿದಳು.

ಶೀನು ಅದನ್ನೆಲ್ಲ ಗಮನಿಸಲಿಲ್ಲ. "ದೆಹಲಿ ಎಂತಹ ಊರೆಂದು ಗೊತ್ತೆ?"

"ಗೊತ್ತಿಲ್ಲವೆ ಏನು, ವಿನ್ಯವಾಗಿ ಗೊತ್ತುಂಟು" ಎಂದೆಂದು, ಹೀಗೆ ಹೇಳಬಾರದಿತ್ತೆಂಬಂತೆ ಸೌನವಾಗಿ ಕುಳಿತಳು.

"ಅಪಷ್ಟ ಬೇಗ ಹೋರಡಬೇಕಷ್ಟೇ....ಉತ್ತರ ಪತ್ರ ಬರಲಿ, ತಿಳಿಯುತ್ತೆ" ಎಂದನು ಶೀನು. ಕುಂಜು ಜವಾಬು ಕೊಡಲಿಲ್ಲ.

'ದೆಹಲಿ ಬಹಳ ದೂರವೆಂದು ಚಿಂತಿಸುತ್ತಿರುವಳೋ ನಿನೋ' ಎಂದುಕೊಂಡು ಶೀನು "ನಿನಗೆ ಇಷ್ಟವಿಲ್ಲದಾದರೆ, ಅಷ್ಟೇ ಆಯಿತು. ಈಗ ಬರುವುದೇ ಸಾಕು; ಇಲ್ಲೇ ಇದ್ದು ಬಿಟ್ಟರಾಯಿತು" ಎಂದನು.

ಅದಕ್ಕೂ ಜವಾಬಿಲ್ಲ. "ಏನಿದು ಕುಂಜು? ನಿನ್ನನ್ನು ಉದ್ವೇಪಿಸಿಯೇ ಅಲ್ಲವೇ ಈ ಏರ್ಪಾಡು ಮಾಡಿದೆ? ಬೇಡವೆಂದರೆ ಹೇಳು."

"ಹೌದ್ದಾದು. ಬಹಳ ಕನಿಕರ! ನನ್ನನ್ನು ಉದ್ವೇಪಿಸಿಯಂತೆ!" ಎಂದು ಅವಳ ಮನದೊಳಗೆ ಒಂದು ಧ್ವನಿ ಎದ್ದಿತು.

"ನಿಮ್ಮಿಷ್ಟ ಹೇಗೋ ಯಾಗಿ! ನನಗೆಂದು ಪ್ರತ್ಯೇಕವಾದೊಂದು ಇಷ್ಟವೇ?" ಎಂದು ಪ್ರಕಾಶವಾಗಿ ನುಡಿದಳು.

ಶೀನುವಿಗೆ ಚಿಂತೆ ಮೂಡಿತ್ತು. "ಏನಾಯಿತು ಇವಳಿಗೆ? ತೌರನ್ನು ನೆನಸಿಕೊಂಡಳೋ? ಅಯ್ಯೋ ಪಾಪ! ಇವಳನ್ನು ಸಂಪೂರ್ಣವಾಗಿ ಅರಿಯದಾದೆ! ಏನು ಮಾಡಲಿ? ಹೊತ್ತಿಗೂ ತೀರದ ಕೆಲಸ, ಇನ್ನೆಲ್ಲಿ ಒಂದೇ ವಾರ. ಆ ಬಳಿಕ ಇವಳೇ ಬೇರಾಗುತ್ತಾಳೆ!" ಎಂದು ತನ್ನಷ್ಟಕ್ಕೆ ಅಂದುಕೊಂಡನು ಶೀನು

§ § § § §

"ಉಳ್ಳ ನಿರೈ ವಿಲೋರ್ ಕಳ್ಳಂಪುಗುಂದಿಡಿಲ್ ಉಳ್ಳನಿರೈವಾವೊ" (ತುಂಬಿಪ ಹೃದಯದಲ್ಲಿ ಒಂದು ಕಲ್ಮಷ ತೋರಿದರೆ, ಅದು ತುಂಬಿದ ಎಂದರೆ ನಿರ್ಮಲ ಮನಸ್ಸಾದೀತೇ?) ಕುಂಜುವಿಗೆ ಆ (ತಮಿಳು) ಹಾಡು ತನಗಾಗಿಯೇ ಹಾಡಿದಂತೆ ಭಾಸವಾಯಿತು.

ಆ ಹೊತ್ತು ದಕ್ಷಿಣೇಶ್ವರಕ್ಕೆ ಹೋಗಿ ಬಂದ ಸುಸ್ತು, ಚೇಚೀ ಬಿತ್ತೆ ಅಪೂರ್ವರಾಗಗಳಲ್ಲಿ ಗೊರಕೆ ಹೊಡೆಯುತ್ತಾ ನಿದ್ರಾದೇವಿಯನ್ನು ಆರಾಧಿಸುತ್ತಿದ್ದಳು.

"ಕುಂಜೂ, ನೀನು ತಯಾರೇ? ಬಳಿಕ 'ಜ್ಞಯ-ನಿಯ' ಅನ್ನಬೇಡ. ಏನು? ಮನಬಿಚ್ಚಿ ಮಾತನಾಡಲು ಈ ಮನೆಯಲ್ಲಿ ಸ್ಥಳವೆಲ್ಲಿ? ಅಮ್ಮನೂ ನಿನ್ನ ಗಂಡನೂ, ಒಬ್ಬರು ತಪ್ಪಿದರೊಬ್ಬರು ಕಾವಲಿರುತ್ತಾರೆ. ಇದಕ್ಕಾಗಿಯೇ ಮತ್ತೆ ಅವಳನ್ನು ಈ ಹೊತ್ತೂ ಚೆನ್ನಾಗಿ ಅಲೆದಾಡಿಸಿಕೊಂಡು ಕರೆತಂದೆ ... ಬಂದ ಮೇಲೆ ಚಂಚಲಕೂಡದು, ಗೊತ್ತೇ? ನಾನು ನಿನ್ನನ್ನು ನಡೆಸುವ ರೀತಿಯನ್ನು ಪ್ರತ್ಯಕ್ಷನಾಗಿ ಕಾಣುತ್ತಿ! 'ಕತ್ತೆಗೆ ಗೊತ್ತೇ ಕರ್ಪೂರದ ವಾಸನೆ?' ಅವನಿಗೆ ನಿನ್ನ ಬೆಲೆ ತಿಳಿಯಲೂ, ನಿನ್ನನ್ನು ಅನುಭವಿಸಲೂ ಯೋಗ್ಯತೆಯುಂಟೆ? ಹೊರಡು. ಬೇಕಾದರೆ ಒಡಪೆಗಳನ್ನು ತೆಗೆದುಕೊ. ಇಲ್ಲವಾದರೆ ಬೇಡ."

"ಹೊರಡು. ಬೇಗ ಹೊರಡು. ಟ್ಯಾಕ್ಸಿ ರಸ್ತೆಯ ಕೊನೆಯಲ್ಲಿ ನಿಂತಿದೆ. ಶಾಲನ್ನು ತೆಗೆದು ಹೊದ್ದುಕೊ" ಎಂದು ರಾಮು ಕುಂಜುವನ್ನು ಅವಸರಪಡಿಸಿದನು. ಕುಂಜುವಿನ ಕಾಲುಗಳು ಥರಥರನೆ ನಡುಗಲಾರಂಭಿಸಿದುವು. "ನನಗೆ ಹೇಗ್ವೆಗೋ ಆಗುತ್ತೆ. ಹೊಟ್ಟೆಯಲ್ಲಿ ಏನೋ ಸಂಕಟ. ತಲೆ ತಿರುಗುತ್ತೆ" ಎಂದಳು.

"ಛೇ ಛೀ, ಏನೂ ಇಲ್ಲ, ಬರೇ ದಿಗಿಲಷ್ಟೆ! ಇಷ್ಟೆಲ್ಲ ಹೇಳ, ಟಿಕೆಟೂ ಕೊಂಡುದಾಯಿತು. ಮನೆಯನ್ನೂ ಗೊತ್ತು ಮಾಡಿದ್ದೇನೆ. ಇಷ್ಟೆಲ್ಲ ಮಾಡಿದ ಬಳಿಕ ಹಿಂಜರಿಯುವೆಯಲ್ಲ? ಹೆಂಗುಸರಿಗೇ ಸ್ಥಿರ ಬುದ್ಧಿಯಿಲ್ಲ" ಎಂದು ಮುಖ ಸಿಂಡರಿಸಿಕೊಂಡನು.

"ಇಲ್ಲ, ಇಲ್ಲ, ಇಗೋ ಹೊರಟೆ. ಮುಖ್ಯವಾದುವುಗಳನ್ನು ಮಾತ್ರ ತೆಗೆದುಕೊಂಡಿರುವೆನು. ಚಾಬು ಅನರ ಪೆಟ್ಟಿಗೆಯಲ್ಲಿದೆ."

"ಒಡವೆಯನ್ನು ಕಟ್ಟಿಕೊಂಡು ಏನೀಗ? ಹೊರಡು ಬೇಗ"

"ಇಗೋ, ಗೋಪುವನ್ನು ಎತ್ತಿಕೊಂಡು ಬಂದೆ!"

"ಅಯ್ಯೋ ರಾಮಾ. ಅದೇಕೆ? ಜನನವನ್ನೂ ತರುತ್ತೀಯೇನು? ದಾನೇಶ್ವರಕ್ಕೆ ಹೋದರೂ ರಾಜೇಶ್ವರ ಬಿಡೋಲ್ಲ ಎಂದು?" ಎಂದು ರಾಮು ಸರಿಹಾಸ್ಯವಾಗಿ ಅಂದನು.

§ § § §

ಅದೇ ಸಮಯ "ಅಮ್ಮಾ" ಎಂದು ಗೋಪುವಿನ ಕರೆ ಅವಳ ಕಿವಿಗಳಲ್ಲಿ ಬಿತ್ತು. ಕುಂಜುವಿನ ಕಣ್ಣುಗಳು ತೆರೆದುವು. ಮಗುವನ್ನು ತುಚ್ಛವಾಗಿ ನೆನೆದ ರಾಮುವಿನ ನಿಜಸ್ವರೂಪವು ಕ್ಷಣಮಾತ್ರದಲ್ಲಿ ಅವಳಿಗೆ ಗೋಚರವಾಯಿತು. ತಾಯ್ತನವೇ ಗೆದ್ದಿತು. "ಅಮ್ಮಾ, ಅಮ್ಮಾ!" ಎಂದು, ತಾನೂ ತನ್ನಷ್ಟಕ್ಕೆ ಹೇಳಿಕೊಂಡಳು, 'ಅಮ್ಮಾ!' ಎಂಬ ಆ ಸರ್ವ ಸಾಧಾರಣವಾದಂತಹ ಆ ಮಾತಿನ ಒಳತಿರುಳು ಅವಳಿಗೆ ಭಾಸವಾಯಿತು.

"ಬಾರೋ ನನ್ನ ಕಂದಾ!" ಎಂದು ಉತ್ಸಾಹದಿಂದ ಕೂಗುತ್ತ, ಒಂದೇಟಿಗೆ ಧಾವಿಸಿ ಓಡಿ ಬಂದು ಮಗುವನ್ನು ಬಾಚಿ ತಬ್ಬಿಕೊಂಡಳು; ಅವಳ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು.

"ಊಂ" ಎಂದು ಗಡುಸಾಗಿ ಅಂದು, ತನ್ನ ಕೊಠಡಿಗೆ ಹೋಗಿ, ಮಂಚದಲ್ಲಿ 'ದೊಪ್ಪನೆ' ಬಿದ್ದುಕೊಂಡನು ರಾಮು.

ಕುಂಜು ಬಿಕ್ಕಿ ಬಿಕ್ಕಿ ಅಳುತ್ತ ತನ್ನ ಮಂಚದಲ್ಲಿ ಕುಳಿತಿದ್ದಳು. ನುಳಿ ಧಾರಿಧಾರೆಯಾಗಿ ಸುರಿಯುವಂತೆ, ಒಂದೇ ಸವನೆ ಅವಳ ಕೆನ್ನೆಗಳ ಮೇಲೆ ಕಣ್ಣೀರು ಸುರಿಯುತ್ತಿತ್ತು.

ಮೈಯೆಲ್ಲ ದಿಗಿಲಿನಿಂದ ಬೆವತು ಒದ್ದೆಯಾಗಿತ್ತು. ಕೈಕಾಲುಗಳು ಥರಥರನೆ ನಡುಗುತ್ತಿದ್ದುವು. ಸೆಣಿಕೆಯಿಂದ ಹೊಡೆಯುವಂತೆ ಅವಳ ಎದೆ ಡಬಡಬನೆ ಹೊಡೆದುಕೊಳ್ಳುತ್ತಿತ್ತು. ತಡೆಯಲಾರದಂತಹ ವೇದನೆಯಿಂದ ಗೋಪುವನ್ನು ಬಿಗಿಯಾಗಿ ಅಪ್ಪಿಕೊಂಡಳು.

ಎರಡು ನಿಮಿಷಗಳು ಮಾತ್ರ ಕಳೆದಿರಬಹುದು. ಬೀದಿಯ ಬಾಗಿಲಲ್ಲಿ 'ಬಾಪ್, ಬಾಮ್, ಬಾಮಾ' ಎಂದು 'ಕಾರಿನ ಹಾರ್ನ್' ಕೇಳಿಸಿತು. ಶೀನುವಿನ ಕಾರು. ಕುಂಜು ಏಳಲು ಪ್ರಯತ್ನಿಸಿದಳು. ಸಾಧ್ಯವಾದರಲ್ತವೇ?

"ಕುಂಜಾಳು!" ಎಂದು ಅತ್ಯಂತ ಆನಂದಿತನಾಗಿ ಕೂಗುತ್ತ, ಎಡಗೈಯಲ್ಲಿ ದೊಡ್ಡದೊಂದು ಗುಲಾಬಿಹಾರ ಹಿಡಿದು, ಮನೆಯೊಳಗೆ ಪ್ರವೇಶಿಸಿದನು ಶೀನು.

ಕುಂಜು ಚಕಿತಳಾದಳು. ಜೋಕೆಯೇ ನಿಶ್ಚಿತ ಸುತ್ತುವಂತಿತ್ತು ಅವಳಿಗೆ. ಪುಷ್ಪಹಾರವನ್ನು ಕುರ್ಚಿಯ ಕೈಮೇಲಿಟ್ಟು "ಕುಂಜೂ, ಪೆಹಲಿಯಲ್ಲಿ 'ಹಿಂದೂಸ್ತಾನ್ ಟೈಮ್ಸ್'ನಲ್ಲಿ ೫೦ ರೂಪಾಯಿಗಳು ಸಂಬಳ, ದಿನಕ್ಕೆ ಮೂರೇ ಘಂಟೆಗಳ ಕಾಲ ಕೆಲಸವಷ್ಟೆ. ನಮ್ಮಿಷ್ಟ ಬಂದಂತೆ ಊರೆಲ್ಲ ಸುತ್ತಾಡಬಹುದು. ಅಬ್ಬಾ! ಇಷ್ಟು ಕಾಲ ನಾವು ಪಟ್ಟ ಶ್ರಮಕ್ಕೆ ತಕ್ಕ ಫಲ ಸಿಕ್ಕಿತು!" ಎಂದು ಮಾತಿನ ಸರಣಿ ಜೋಡಿಸಿದನು.

"ಹಾಗೇನು?" ಎಂದೆನ್ನುತ್ತ ಏಳಲು ಯತ್ನಿಸಿದಳು ಕುಂಜು.

"ಹಠಾತ್ತನೆ ಹೇಳಿ ನಿನ್ನನ್ನೂ ಬೆದರುಗೊಳಿಸಬೇಕೆಂದೇ ಮುಂಚೆ ಹೇಳಿಲಿಲ್ಲ. ಏನಿದು? ಸ್ವೆಟ್ ಚೆನ್ನಾಗಿಲ್ಲವೇ?" ಎಂದೆನ್ನುತ್ತ ಅವಳ ಸಮೀಪದಲ್ಲಿ ಕುಳಿತು ಸ್ವೇತ್ಯಾವರನಿಂದ ಅವಳ ಕರಗಳನ್ನು ಬಿಡಿಸಿದನು.

ಕರಗಳಿಂದ ಮುಖ ಮುಚ್ಚಿಕೊಂಡು 'ಗೋಳೋ' ಎಂದು ಅತ್ತಳೆನ್ನು ಕುಂಜು.

ವಿದ್ಯಾರ್ಥಿಗಳೂ, ಶಿಸ್ತುಗೇಡಿತನವೂ

[ಒಂದು ವಿಷಯವಿವೇಚನೆ]

ಶ್ರೀ. ಚಿದಂಬರ ಕಾಶೀನಾಥ ಜೋಶಿ, ವನಿತಾ ವಿದ್ಯಾಲಯ ಹಾಯ್‌ಸ್ಕೂಲ್, ಬೆಳಗಾಂವಿ

ವಿದ್ಯಾರ್ಥಿಗಳಲ್ಲಿಯ ಶಿಸ್ತುಗೇಡಿತನವೆಂಬುದು, ದೇಶದಲ್ಲಿಯ ಎಲ್ಲ ವಿಚಾರಿಗಳ ತಲೆಯನ್ನೂ ತಿನ್ನುವ ಸಮಸ್ಯಾಕ್ರಿಮಿಯಾಗಿದೆ. ಆದರೆ ಸಮಾಜದಲ್ಲಿ ಮೊದಲಿನಿಂದ ಕೊನೆಯ ವರೆಗೂ ಅಸಂಯಮನೃತ್ತಿ, ಸ್ವಾರ್ಥಸಾಧನೆ, ಭೋಗಲಾಲಸೆ ಇವುಗಳು ಗೊಂದಲಹಾಕುತ್ತಿರುವಾಗ, ವಿದ್ಯಾರ್ಥಿಗಳಲ್ಲಿ ಶಿಸ್ತು ಬರಬೇಕು ಹೇಗೆ ?

ವಿದ್ಯಾರ್ಥಿಗಳಲ್ಲಿ ಶಿಸ್ತುಗೇಡಿತನವು ಬರು-ಬರುತ್ತ ಬೆಳೆಯತೊಡಗಿದೆಯೆಂಬ ಕೂಗು ಎಲ್ಲ ಕಡೆಯಿಂದಲೂ ಕೇಳಬರುತ್ತದೆ. ಹೀಗಾಗಲು ಕಾರಣವೇನು ? ವಿದ್ಯಾರ್ಥಿಗಳಿಗೆ ಶಿಸ್ತು ಎಷ್ಟರಮಟ್ಟಿಗೆ ಅವಶ್ಯಕವಾದ ವಿಷಯ ? ಅವರಲ್ಲಿ ಪುನಃ ಶಿಸ್ತನ್ನು ಪ್ರಸ್ಥಾಪಿಸಲು ಕವಾವ ಬಗೆಯ ಉಪಾಯಗಳನ್ನು ಕೈಕೊಳ್ಳಬಹುದು :- ಎಂಬ ಸಂಗತಿಗಳನ್ನು ವಿವೇಚಿಸುವದು— ತೋಚಿದ ವಿಚಾರಗಳನ್ನು ವ್ಯಕ್ತಗೊಳಿಸುವದೇ ಈ ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಶಿಸ್ತಿನ ಅಭಾವದಿಂದ ಶಿಕ್ಷಣಕ್ಷೇತ್ರದಲ್ಲಿ ಕಾರ್ಯ ಮಾಡುವವರಿಗೆ ತಮ್ಮ ಕಾರ್ಯವನ್ನು ಸಾಗಿಸಿಕೊಂಡು ಹೋಗುವದು ಮುಸ್ತರವಾಗಿದೆ. ಆಗಾಗ ವೃತ್ತಪತ್ರಿಕೆಗಳಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಒಂದಿಲ್ಲೊಂದು ಬಗೆಯ ವೃತ್ತಾಂತವನ್ನು, ಯಾವುದಾದರೊಂದು ಮೂಲೆಯಿಂದ ಕೇಳಿಯೇ ಕೇಳುತ್ತೇವೆ. ಕೆಲ ವಿದ್ಯಾರ್ಥಿಗಳು ಭಾಷಣಕಾರರ ಭಾಷಣಕ್ಕೆ ಗುಲ್ಲೆಬ್ಬಿಸಿ ವ್ಯತ್ಯಯವನ್ನುಂಟು ಮಾಡಿದರೆ, ಇನ್ನು ಕೆಲವರು ತಮ್ಮ ವಿದ್ಯಾಸಂಸ್ಥೆಯನ್ನು ಮೂರುತ್ತ ಸಂಪನ್ನಗೊಳಿಸುತ್ತಾರೆ. ಮತ್ತೆ ಕೆಲವರು ತಮ್ಮ ಸಂಸ್ಥೆಯ ಕಾರ್ಯನಿರ್ವಾಹಕರಿಗೆ ಅವರ ಕಾರ್ಯನಿರ್ವಹಣೆಯಲ್ಲಿ ವಿಘ್ನವನ್ನುಂಟು ಮಾಡಿ, ತಮ್ಮ ಪ್ರೌಢಿಮೆಯನ್ನು ಮೆರೆಯಿಸುತ್ತಾರೆ. ಕೆಲ-ಕೆಲ ಕಡೆಗಂತೂ ವಿದ್ಯಾರ್ಥಿಗಳ ಶಿಸ್ತುಗೇಡಿತನವು ವಿಕೋಪಕ್ಕೆ ಹೋಗಿ, ಸರಕಾರಿಯನ್ನು ಪಿತಿಕರದಲ್ಲಿ ತರಲು ಪೋಲೀಸರು ಲಾಠಿಹಾರಿಸಬೇಕಾಯಿತು. ಅಲ್ಲದೆ ಎಷ್ಟೋ ಕಡೆಗೆ ಬಂಡೂಕಿನ ಬಲದಿಂದ ಪ್ರಕ್ಷುಬ್ಧತೆಯನ್ನು ಶಾಂತಗೊಳಿಸಿದ ಉದಾಹರಣೆಗಳಿಗಾದರೂ ಕಡಿಮೆಯಿಲ್ಲ. ಇವೆಲ್ಲವೂ ಬರಿಯ ಶಿಸ್ತುಗೇಡಿತನದ್ದಾಗಿದೆಯೆಂಬುದು ತುಸು ಒಳಹೊಕ್ಕು ವಿಚಾರ ಮಾಡಿದರೆ ತಿಳಿಯದಿರದು.

ನಿಜವಾಗಿ ನೋಡಿದರೆ ವಿದ್ಯಾರ್ಥಿಗಳು ಮತ್ತು ಶಿಸ್ತು ಅನ್ಯೋನ್ಯವಾಗಿ ಸಿಕಟವಾದ ರೀತಿಯಲ್ಲಿ ಸಂಬಂಧಪಟ್ಟ ಸಂಗತಿಗಳು. ಯಾವಾಗಲೂ ಇವೆರಡೂ ಒಂದಕ್ಕೊಂದು ಹಾಸುಹೊಕ್ಕಾಗಿಯೇ ಒಂದೇ ನಾಣ್ಯದ ಎರಡು ಬದಿಗಳಂತೆ ಹೊಂದಿಕೊಂಡಿರತಕ್ಕವುಗಳು. ಎಲ್ಲಿ ವಿದ್ಯಾರ್ಥಿಗಳೋ, ಅಲ್ಲಿ ಶಿಸ್ತು; ಎಲ್ಲಿ ಶಿಸ್ತೋ, ಅಲ್ಲಿ ವಿದ್ಯಾರ್ಥಿಗಳು! ಇಂದಿನ ವಿದ್ಯಾರ್ಥಿಗಳು ನಾಳೆಯ ಧೀಶದ ಹೊಣೆಯನ್ನು ಹೊರುವ ಮುಂದಾಳುಗಳು; ಎಂದ ಮೇಲೆ ವಿದ್ಯಾರ್ಥಿದಶೆಯಲ್ಲಿ ಶಿಸ್ತಿನ ಬೀಜಗಳು ಚೆನ್ನಾಗಿ ಬಿತ್ತಲ್ಪಟ್ಟರೆ ಅವುಗಳ ಫಲಗಳು ಮುಂದಾಳುಗಳಲ್ಲಿ ದೊರೆಯುವುದರಲ್ಲಿ ಸಂದೇಹವಿಲ್ಲ. ಆದರೆ ಬೀಜಗಳನ್ನೇ ಬಿತ್ತನೆ, ಹದವಾದ ಭೂಮಿಯನ್ನೆಲ್ಲ ಅಲಕ್ಷಿಸಿ, ಕೆಡಿಸಲು ಅಸ್ಪದಕೊಟ್ಟರೆ ದೇಶಕ್ಕೊಂದು ಬಲವಾದ ಪೆಟ್ಟು— ಗಂಡಾಂತರವಲ್ಲದೇನೇ ? ಈ ಬಗೆಯ ಶಿಸ್ತುಗೇಡಿತನವನ್ನು ಬಲಿಯಗೊಡದೆ ಯೋಗ್ಯ ವೇಳೆಯಲ್ಲಿಯೇ ಅದನ್ನು ಚಿವುಟಿ ತೆಗೆದು ಪುನಃ ಶಿಸ್ತನ್ನು ಪ್ರಸ್ಥಾಪಿಸುವದು ಪ್ರತಿಯೊಬ್ಬ ನಾಗರಿಕನ ಸ್ವಾಪ್ತಕರ್ತವ್ಯವಾಗಿದೆ.

ಈ ರೀತಿಯ ಶಿಸ್ತಿನ ಅಭಾವವು ತಲೆದೋರಲು ಮುಖ್ಯವಾದ ಕಾರಣವೆಂದರೆ, ವಿದ್ಯಾರ್ಥಿಗಳಲ್ಲಿರತಕ್ಕ ಸ್ವಾತಂತ್ರ್ಯದ ತಪ್ಪು ಕಲ್ಪನೆ. ಇಂದು ಪ್ರತಿಯೊಬ್ಬ ಹಿಂದೀಯನೂ ಸ್ವತಂತ್ರನಾಗಿದ್ದಾನೆ ನಿಜ; ಆದರೆ ಅದರ ಅರ್ಥವು ಸ್ವೈರಾಚಾರಕ್ಕೆ ಅಪ್ಪಣೆ ದೊರೆತಂತಲ್ಲ. ಹಿಂದುಸ್ಥಾನದಲ್ಲಿಯ ಒಂದು ಚಿಕ್ಕ ಮಗುವು ಕೂಡ ಇಂದು ಸ್ವತಂತ್ರನಿವೆಯೇನೋ ಸರಿ, ಆದರೆ ಸ್ವಾತಂತ್ರ್ಯದ ಅಪಾರ್ಥವನ್ನು ಮಾಡಿಕೊಂಡು, ದೊರೆತ ಸ್ವಾತಂತ್ರ್ಯವನ್ನು ಈ ತೆರನಾಗಿ ಮನಃಸೂತ ನರ್ತನೆಯಿಂದ ಅತ್ತಿತ್ತ ಜಗ್ಗಾಡಿ-ಎಳೆದಾಡಿ ಮುರಿದು ಬಿಡುವುದು ಸರಿಯೆನಿಸಲಾರದು. ನನಗೆ ಸ್ವಾತಂತ್ರ್ಯವು ದೊರೆತು, ನನ್ನ ನನ್ನ ಕರ್ತವ್ಯಗಳ ಕ್ಷೇತ್ರವಾವರೂ ಇಂದು ವಿಶಾಲಗೊಂಡಿದೆ: ಇದನ್ನು ನಾವು ಮರೆಯುತ್ತೇವೆ., ಪ್ರತಿಯೊಬ್ಬ ವಿದ್ಯಾರ್ಥಿಯೂ, 'ಇಂದು ಹಾನು ಸ್ವತಂತ್ರನು, ತನ್ನ ಮನಸ್ಸಿನಂತೆ ವರ್ತಿಸಲು— ತನ್ನ ಮನಸ್ಸಿನಂತೆ ಮಾತಾಡಲು ಶಕ್ತನು.' ಎಂದು ನೆನೆಸುತ್ತಾನೆ. ಆದರೆ ಈ ಪ್ರಾಪ್ತವಾದ ಸ್ವಾತಂತ್ರ್ಯದೊಡನೆಯೇ ಹೊಂದಿಕೊಂಡಿವ್ವ ತನ್ನ ಕರ್ತವ್ಯಗಳಾವುವು ? ಎಂಬುವರೆ ಅರಿವು ಮಾತ್ರ ಅವನಿಗಿಲ್ಲ. ತನ್ನ ಹಕ್ಕು- ಜವ್ಯತೆಗಳಷ್ಟೇ ಅವನ ಕಣ್ಣಿನಂಚಿಗೆ ತೋರುತ್ತಿವೆ. ತನ್ನ ಮನವಂತೆ ಅನ್ಯರು ನಡೆಯಬೇಕೆನ್ನುವಾಗ, ಅನ್ಯರಿಗೂ ಈ ಭಾವನೆ-

ಯುಂಟೆಂಬುದನ್ನು ಮರೆತು ನಡೆಯಲಾಗದು. 'ತನ್ನಂತೆ ಪರರು' ಎಂಬುದನ್ನು ನೆನಪಿನಲ್ಲಿಟ್ಟುಕೊಂಡಾಗ ಕರ್ತವ್ಯದ ಅರಿವಾಗಬಲ್ಲದು; 'ಶಿಕ್ಷಣಾಧಿಕಾರಿಗಳೂ ಶಿಕ್ಷಕರೂ ಸ್ವತಂತ್ರ ದೇಶದ ನಾಗರಿಕರು. ವಿದ್ಯಾರ್ಥಿಗಳೂ ಅದೇ ಸ್ವತಂತ್ರ ದೇಶದ ನಾಗರಿಕರು. ಎಂದಮೇಲೆ 'ಇರ್ವರೂ ಸರಿಸಮಾನಸ್ಕಂಧರು' ಎಂಬ ತಿಳಿವಳಿಕೆಯಿಂದ ವರ್ಗದ ಕೋಣೆಯಲ್ಲಿ ಕೂಡ ಈ ರೀತಿಯ ಸ್ವಾತಂತ್ರ್ಯದ ಅಪಾರ್ಥವು ಶಿಕ್ಷಣಕಾರ್ಯಕ್ಕೆ ವ್ಯತ್ಯಯವನ್ನುಂಟು ಮಾಡುತ್ತಿದೆ. ಇದು ವಿದ್ಯಾರ್ಥಿಗಳಿಗೇ ಪೆಟ್ಟು— ದೇಶಕ್ಕೆ ನಷ್ಟವಲ್ಲದೆ ಮತ್ತೇನು ?

ಎರಡನೆಯ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿ ಸರಿಯಾದ ನಾಗರಿಕತೆಯು ಬೆಳೆದು ಬಾರದಿರುವದು. ಒಳ್ಳೆಯ ನಾಗರಿಕತೆಯನ್ನು ಉದಾಹರಿಸಬೇಕಾದರೆ— ಇಬ್ಬರು ಸೈಕಲ್ ಸ್ವಾರರು ದುರ್ದೈವದಿಂದ ಒಬ್ಬರಿಗೊಬ್ಬರು ಡಿಕ್ಕಿ ಹೊಡೆದು ಕೆಳಗೆ ಬೀಳುತ್ತಾರೆ; ಅವರ ಸೈಕಲ್ಲುಗಳು ಕೆಳಗೆ ಬೀಳುತ್ತವೆ. ಸೈಕಲ್ಲಿಗೆ ಹಾಕಿದ್ದ ಕೈಚೀಲಗಳು ಕೆಳಗೆ ಬಿದ್ದು ಅವುಗಳಲ್ಲಿಯ ವಸ್ತುಗಳೆಲ್ಲವೂ ಚೆಲ್ಲಾಪಿಲ್ಲಿಯಾಗುತ್ತವೆ. ಆಗ ಒಬ್ಬನು ಇನ್ನೊಬ್ಬನ ಸೈಕಲ್ಲನ್ನು ಎದ್ದು ನಿಲ್ಲಿಸಿ, ಅವನ ಕೈಚೀಲವನ್ನು ತುಂಬಿಕೊಟ್ಟು, ಅನ್ನುತ್ತಾನೆ— 'ಮಿತ್ರಾ, ಕ್ಷಮಿಸು. ನನ್ನ ತಪ್ಪಿನಿಂದ ನಿನಗೆ ಏಟು ತಿನ್ನಬೇಕಾಯಿತು.' ! ಇದರಂತೆ ಇನ್ನೊಬ್ಬನು ಇವನ ಸೈಕಲ್ಲನ್ನು ಎದ್ದುನಿಲ್ಲಿಸಿ, ಕೈಚೀಲವನ್ನು ತುಂಬಿಕೊಟ್ಟು ಮರಳಿ ಇವನಿಗೆ ಅನ್ನುತ್ತಾನೆ. 'ಛೇ, ಮಿತ್ರಾ, ಇದು ನಿನ್ನ ತಪ್ಪಲ್ಲ. ನನ್ನ ತಪ್ಪು. ಸಾಪ! ನನ್ನ ತಪ್ಪಿನಿಂದ ನಿಷ್ಕಾರಣವಾಗಿ ನಿನಗೆ ಏಟು ತಿನ್ನಬೇಕಾಯಿತು.' ಹೀಗೆಂದು ಒಬ್ಬರನ್ನೊಬ್ಬರು ಸಾವರಿಸುತ್ತಾರೆ. ಮತ್ತು ಕಡೆಗೆ ಒಬ್ಬರಿಗೊಬ್ಬರು ಪರಮಮಿತ್ರರಾಗಿ ಮನೆಗೆ ತೆರಳುತ್ತಾರೆ. ಇಂತಹ ನಾಗರಿಕತೆಯು ನಮಗಿಂದು ಬೇಕಾದುದು; ಇಲ್ಲವಾದರೆ ನಮ್ಮ ನಾಗರಿಕತೆಯ ಕಲ್ಪನೆಯ ಮೇರೆಗೆ ಡಿಕ್ಕಿ ಹೊಡೆದ ಇರ್ವರೂ ತಮ್ಮ ಜೀವನದ ಕೊನೆಯವರೆಗೂ ಕಡುವೈರಿಗಳಾಗಿಯೇ ಬಾಳಬೇಕು. ಹೀಗೆ ನಾಗರಿಕತೆಯು ಸರಿಯಾಗಿ ಬೆಳೆದು ಬಾರದಿರುವುದರಿಂದ, ಉದ್ಭವಿಸುವ ಎಷ್ಟೋ ತಿಕ್ಕಾಟಗಳನ್ನು ನಾವು ದಿನಾಲೂ ಕಾಣುತ್ತೇವೆ-ಕೇಳುತ್ತೇವೆ. ಹಾಗಾದರೆ ನಾಗರಿಕತೆಯಲ್ಲದಲ್ಲಿ ಶಿಸ್ತು ನೆಲೆಯೂರುವುದೆಂತು ?

ಮೂರನೆಯ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿ ಗುರು-ಹಿರಿಯರ ವಿಷಯಕವಾಗಿ ಕಡಮೆಯಾಗುತ್ತಿರುವ ಆದರ, ಶ್ರದ್ಧೆ, ನಿಷ್ಠಾಪಗಳು. ಈ ಪ್ರಪಂಚದಲ್ಲಿ ನಾವು ಯಾವ ಮನುಷ್ಯನಿಂದಲೂ ಸರಿಪೂರ್ಣತೆಯನ್ನು ಅಪೇಕ್ಷಿಸಲಾರೆವು. ಎಂದಮೇಲೆ ಅಪರಿಪೂರ್ಣನೆಂದು ಯಾರನ್ನೂ ಉಪೇಕ್ಷಿಸುವುದು ಸಾಧ್ಯವಿಲ್ಲ. ಒಬ್ಬನಲ್ಲಿ ಒಂದು ಸಂಗತಿಯು ಅನುಕರಣೀಯವಾಗಿದ್ದರೆ ಇನ್ನೊಬ್ಬನಲ್ಲಿ ಮತ್ತೊಂದು ಸಂಗತಿಯು ಅನುಕರಣೀಯವಾಗಿರುತ್ತದೆ. ಮತ್ತು ಒಬ್ಬ ವ್ಯಕ್ತಿಯ ವಿಕಾಸವು ಅನ್ಯವ್ಯಕ್ತಿಗಳ ಮೇಲೆ ಅವಲಂಬಿಸಿರದೆ, ಸಂಪೂರ್ಣವಾಗಿ ಸ್ವಪ್ರಯತ್ನಗಳ ಮೇಲೆ ಅವಲಂಬಿಸಿರುತ್ತದೆಂಬುದನ್ನು ವಿದ್ಯಾರ್ಥಿಗಳು ಮರೆಯಬಾರದು. ಕೇವಲ ತುಸು ಮಟ್ಟಿಗೆ, ಅದು ಕೂಡ ಸ್ವಭಾವಸ್ಥೆಯಲ್ಲಿ ಮಾತ್ರ, ವ್ಯಕ್ತಿ-ವಿಕಾಸಕ್ಕೆ ಅನ್ಯವ್ಯಕ್ತಿಗಳ ಸಹಾಯವು ಬೇಕು. 'ಉದ್ಧರೇದಾತ್ಮನಾತ್ಮಾನಮ್' ಎಂದು ತನ್ನ ವ್ಯಕ್ತಿವಿಕಾಸವನ್ನು ತಾನೇ ಮಾಡಿಕೊಂಡ ಏಕಲವ್ಯನಂತಹ ಉದಾಹರಣೆಗಳನ್ನೂ ನಾವು ಗಮನಿಸಬಹುದು. ಆದ್ದರಿಂದ ಯಾವುದೊಂದು ವ್ಯಕ್ತಿಯಲ್ಲಿದ್ದ ಅನುಕರಣೀಯ ಗುಣದ ಬಗ್ಗೆಯಾದರೂ ಆದರ್ಶವ್ಯಕ್ತಿಯೊಂದು ಪರಿಗ್ರಹಿಸಲು ಅದಾವ ಪ್ರತ್ಯವಾಯವುಂಟು ? ಆದರ್ಶ ಗುಣದ ಬಗ್ಗೆ ಶಿಕ್ಷಕನ ವಿಷಯವಾಗಿ— ವ್ಯಕ್ತಿಯ ವಿಷಯವಾಗಿ ಆದರವನ್ನು ತಾಳುವದು ಶಿಕ್ಷಕನ ಇಲ್ಲವೆ ವ್ಯಕ್ತಿಯ ಮಾನಸವನ್ನು ಎತ್ತರಿಸುವುದಕ್ಕಲ್ಲ. ನಮ್ಮ ವ್ಯಕ್ತಿತ್ವವನ್ನು ರೂಪುಗೊಳಿಸುವುದಕ್ಕೋಸ್ಕರ ನಮ್ಮ ಮೇಲ್ಮೈಯನ್ನು ಎತ್ತರಿಸುವುದಕ್ಕೋಸ್ಕರವೆಂಬುದನ್ನು ವಿದ್ಯಾರ್ಥಿಗಳು ಚೆನ್ನಾಗಿ ಮನಗಾಣಬೇಕು. 'ಗುಣೀ ಗುಣಂ ವೇತ್ತಿ ನ ವೇತ್ತಿ ನಿರ್ಗುಣಃ' ಗುಣಿಯಾದವನೇ ಗುಣದ ಬೆಲೆಯನ್ನು ತಿಳಿಯುತ್ತಾನಲ್ಲವೇ ? ಅನ್ಯರನ್ನು ದೂಷಿಸುವಲ್ಲಿ, ಅನಾದರಿಸುವಲ್ಲಿ ನಮ್ಮ ಮನಸ್ಸಿನ ಕ್ಷುದ್ರತೆಯೇ ಬಯಲಿಗೆ ಬರುವುದಿಲ್ಲವೇ ? ವ್ಯಕ್ತಿ ವಿಕಾಸವಾದ ಮೇಲೆ ನಮ್ಮ ಕಾರ್ಯದಲ್ಲಿ ಯಾರೂ ಹಸ್ತಕ್ಷೇಪನೂಡಲಾರರು. ವ್ಯಕ್ತಿವಿಕಾಸವಾಗಲು ಮಾತ್ರ ತುಸು ಮಟ್ಟಿಗಾದರೂ ಶ್ರಮವಹಿಸಿದ ವ್ಯಕ್ತಿಯನ್ನು ಉಪೇಕ್ಷಿಸುವುದು, ಅವನ ಬಗ್ಗೆ ಅನಾಸ್ಥೆಯನ್ನು ತಾಳುವುದು ಸ್ವತಂತ್ರದೇಶದ ಸು-ನಾಗರಿಕರಾಗಿ ಬಾಳಬಯಸುವ ವಿದ್ಯಾರ್ಥಿಗಳಿಗೆ ಶೋಭಿಸಲಾರದು.

ನಾಲ್ಕನೆಯ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿ ಬೇರೂರಿದ ತಮ್ಮ ಜೀವನವಿಷಯಕವಾದ ಸಂಕುಚಿತ ಕಲ್ಪನೆ. ಹೇಗಾದರೂ ಸುಖ-ದುಃಖ ಮಾರ್ಗಗಳಿಂದ ಪದವಿಗಳನ್ನು ಪಡೆಯುವುದು. ಸಾಧ್ಯವಿದ್ದಷ್ಟುಮಟ್ಟಿಗೆ ಬೇಕಾದ ಮಾರ್ಗವನ್ನನುಸರಿಸಿ ಹಣ ಸಂಪಾದಿಸುವುದು— 'ಗಾಳಿ ಬಿಟ್ಟಾಗ ತೂರಿಕೊ', ಎಂಬಂತೆ ಸಾಧ್ಯವಿದ್ದಾಗಲೇ ಎಲ್ಲ ಬಗೆಯ ಐಷ್-ಆರಾಮಗಳನ್ನು ಭೋಗಿಸುವುದು— ಮೊದಲಾದುವುಗಳೇ ಜೀವನದ ಗುರಿಗಳಾಗಿವೆ. ಆದರೆ '*Die to live*—ಬದುಕುವುದಕ್ಕಾಗಿ ಸಾಯಿ' ಎಂಬ ಪ್ರಯತ್ನಶೀಲರ ತತ್ತ್ವವು ಮಾಯವಾಗಿ ಹೋಗಿದೆ. 'ಆರಾಮು ಹರಾಮು ಹೈ' ಎಂಬ ನೆಹರೂ ಸ್ವಪ್ನೋಕ್ತಿಯನ್ನು ನಾವಿಲ್ಲಿ ನೆನಪಿಗೆ ತಂದುಕೊಳ್ಳಬಹುದು. ಒಬ್ಬ ಮನುಷ್ಯನ ಜೀವಮಾನವು ನಿರ್ದಿಷ್ಟ ಕಾಲಾವಧಿಯದಾದರೂ, ಜನ-ಜೀವನವು ಮಾತ್ರ ಅನಿರ್ದಿಷ್ಟ ಕಾಲಾವಧಿಯುಳ್ಳದು. ಒಂದು ಪ್ರಾಣಿಯು ಮತ್ತೊಂದು ಪ್ರಾಣಿಗೆ ಜೀವದಾನವನ್ನು ಪಡೆಸಾಲಿಸಿಯೇ ತನ್ನ ಜೀವನವನ್ನು ಸಾರ್ಥಕಗೊಳಿಸಲು ಪ್ರಯತ್ನಿಸುವುದು ನಿಸರ್ಗನಿಯಮವು. ಇವರಿಂದ ಒಬ್ಬ ವ್ಯಕ್ತಿಯು ತುಸು ಕಾಲಾವಧಿಯವರೆಗೆ ಮಾತ್ರ ಬಾಳುತ್ತಿದ್ದರೂ, ನಮ್ಮ ದೇಶದ ಜೀವನವು ಮಾತ್ರ ನಿರಂತರವಾಗಿ ನಡೆಯಬಲ್ಲದ್ದಾಗಿದೆಯೆಂಬುದನ್ನು ಮರೆಯಕೂಡದು.

ಐದನೆಯ ಮತ್ತು ಮಹತ್ತ್ವದ ಕಾರಣವೆಂದರೆ ಈಗಿನ ಶಿಕ್ಷಣ ಪದ್ಧತಿ. ಈ ಶಿಕ್ಷಣಪದ್ಧತಿಯು ವಿದ್ಯಾರ್ಥಿಗಳ ಮನಸ್ಸನ್ನು ಪರಿಪಕ್ವಾವಸ್ಥೆಗೆ ತಲುಪಿಸುವೆಡೆಗೆ ತನ್ನ ಗುರಿಯನ್ನಿಡದೆ, ಕೇವಲ

ನವಕರಿಯ ಪೇಟೆಯಲ್ಲಿ ಇಡಲ್ಪಡುವ ಲೇಬಲ್ ಅಂಟಿಸಿದ ಶೀಶೆಗಳಂತೆ ತಯಾರು ಮಾಡುತ್ತಿದೆ. ಆಂತರಿಕ ಪರಿಪೂರ್ಣತೆಯಿಲ್ಲದೆ—ಮನಸ್ಸಿನ ವಿಕಾಸವು ಪೂರ್ಣವಾಗದೆ ಪದವೀಧರರಾಗಿ ವಿದ್ಯಾರ್ಥಿಗಳು ಕಾರ್ಖಾನೆಯಿಂದ ಪೇಟೆಗೆಂದು ಹೊರಬರುವ ಸರಕಿನಂತೆ ಹೊರಬೀಳುತ್ತಿದ್ದಾರೆ. ಎಂದ ಮೇಲೆ ಯಾವ ಮನಸ್ಸು ಇನ್ನೂ ಅಪರಿಪಕ್ವವಾಗಿಯೇ ಉಳಿದಿರುತ್ತದೆಯೋ, ಅಂತಹ ಮನಸ್ಸಿಗೆ ಶಿಸ್ತಿನ ಬೆಲೆಯಾದರೂ ತಿಳಿಯುಬೇಕೆಂದು ನಾವು ಅಪೇಕ್ಷಿಸುವುದೆಂತು? 'ಪರೀಕ್ಷೆಯಲ್ಲಿ ತೇರ್ಗಡೆಯಾದೆ'ನೆಂದೆನ್ನಿಸಿಕೊಳ್ಳುವುದೇ ಶಿಕ್ಷಣದ ಗುರಿಯಾಗಿದೆ. ಜ್ಞಾನವನ್ನು ಸಂಪಾದಿಸುವದು ಜ್ಞಾನಕ್ಕಾಗಿ; ಆದರೆ ಕೇವಲ ಪರೀಕ್ಷೆಯಲ್ಲಿ ಪಾಸಾಗುವದಕ್ಕಲ್ಲ. ಜ್ಞಾನಪೂರ್ಣವಾದ ವ್ಯಕ್ತಿಯ ಮನಸ್ಸು ಸುಸಂಸ್ಕೃತವಾಗಿರುತ್ತದೆ. ಸುಸಂಸ್ಕೃತವಾದ ಮನಸ್ಸು ಶಿಸ್ತು ಬದ್ಧವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗೆ ಆಳವಾದ ಜ್ಞಾನವನ್ನುಂಟು ಮಾಡಿ ಕೊಡುವೆಡೆಗೆ ಮತ್ತು ಅವರ ಮನಸ್ಸನ್ನು ಸಕ್ಕಾವನಸ್ಥೆಗೆ ತಲುಪಿಸುವೆಡೆಗೆ ಗುರಿಯನ್ನಿಡುವಂತೆ ಶಿಕ್ಷಣ ಕ್ರಮವನ್ನು ಸುಸಜ್ಜಗೊಳಿಸಿದರೆ ಮಾತ್ರ ಶಿಸ್ತಿನ ಬೀಜಗಳನ್ನು ನೆಡಲು ಭೂಮಿಯು ಹದಗೊಳಿಸಲ್ಪಟ್ಟಂತಾಗುತ್ತದೆ. ಈ ಸಂದರ್ಭದಲ್ಲಿ "I call a complete and generous education that which fits a man to perform justly, skilfully and magnaniously all the offices both private and public of peace and war." ಎಂಬ ವಿಲ್ಟನ್ನನ ಮಹದುಕ್ತಿಯನ್ನು ಆದರ್ಶವಾಗಿಟ್ಟುಕೊಳ್ಳಬಹುದು.

ಅರನೆಯ ಕಾರಣವೆಂದರೆ, ತಿಳಿದೋ ಅಜ್ಞಾನ ತಿಳಿಯದೆಯೋ ಆಗುವ ಪಾಲಕರ ಅಲಕ್ಷತನವು. ತಮ್ಮ ಮಕ್ಕಳ ಮಾನಸಿಕ ಶಾರೀರಿಕ ಪ್ರಗತಿಯು ಶಿಸ್ತುಬದ್ಧವಾಗಿ ನಡೆದಿದೆಯೋ ಇಲ್ಲವೋ ಎಂದು ನೋಡಲು ಎಷ್ಟೋ ಪಾಲಕರು ಬಾರದಿರುವುದು ಕಂಡು ಬರುತ್ತಿದೆ. ಪರಿಸ್ಥಿತಿಯ ಅನನುಕೂಲತೆಯಿಂದ ಹೀಗಾಗುತ್ತಿರಬಹುದು. ಮತ್ತು ನಿರಕ್ಷರತೆಯೂ ಇದಕ್ಕೊಂದು ಬಲವಾದ ಕಾರಣವಿರಬಹುದು. ಒಪ್ಪಿವಾದರೆ ತನ್ನ ಮಗುವಿನ ಶುನ್ನತಿಯಾಗಬಾಕಾದೆಂದು ಅದಾವ ಪಾಲಕನಿಗೆ ಎನಿಸಬಹುದು? ಏನಾದರೂ ಇದ್ದ ಪರಿಸ್ಥಿತಿಯು ಮಾತ್ರ ಹೀಗುಂಟು. ಮಕ್ಕಳ ಪ್ರಗತಿಯ ವಿಷಯವಾಗಿ ಯೋಗ್ಯ ನೇಳೆಯಲ್ಲಿ ಗಮನವೀಯಲಾಗುತ್ತಿರುವುದಿಲ್ಲವೆಂಬ ಸಂಗತಿಯನ್ನು ಬಚ್ಚಿಟ್ಟುಡಾವರೆ, ನಮ್ಮ ಕಾಲನೇಲೆ ನಾವೇ ಕಲ್ಲು ಚೆಲ್ಲಿಕೊಂಡಂತಾಗುವುದು. ದಿನದ ಹೆಚ್ಚು ಕಾಲಾವಧಿಯ ಪರೆಗೆ ಮಕ್ಕಳು ಯಾರ ಅಧೀನದಲ್ಲಿರುವರೋ, ಅವರ ಮೇಲೆಯೇ ಮಕ್ಕಳ ಮನಸ್ಸನ್ನು ಶಿಸ್ತುಗೊಳಿಸುವ ಹೊಣೆಯು ಬೀಳುವುದೆಂಬುದು ಸೂರ್ಯಪ್ರಕಾರವನ್ನು ಸ್ಪಷ್ಟಪಡಿಸಿ. ಶಿಸ್ತಿನ ಪಾಠಗಳು ನಿಜವಾಗಿಯೂ ಬಾಲ್ಯಾವಸ್ಥೆಯಲ್ಲಿಯೇ ಹೇಳಿಕೊಡಲ್ಪಡಬೇಕು. ಮಕ್ಕಳ ವಿಷಯವಾಗಿ, "ಲಾಲಯೇತ್ ಪಂಚ ವರ್ಷಾಣಿ, ದಶವರ್ಷಾಣಿ ತಾಡಯೇತ್; ಪ್ರಾಪ್ತೇತು ಷೋಡಶೇ ವರ್ಷೇ. ಪುತ್ರೇ ಮಿತ್ರವದಾಚರೇತ್ spare the rod and spoil the child" ಎಂಬ ಮಾರ್ಗದರ್ಶನಗಳು ಸರಿಯಾಗಿ ಪಾಲಿಸಲ್ಪಡದಿರುವುದು ಕಾಣದಿರದು. ಚಿಕ್ಕಂದಿನಲ್ಲಿಯೇ ಮಕ್ಕಳಲ್ಲಿ ಕಷ್ಟಸಹಿಷ್ಣುತೆಯನ್ನೂ, ಮನಸ್ಸಿನ ನಿಯಂತ್ರಣವನ್ನೂ, ಮನೋನಿಗ್ರಹವನ್ನೂ ಅವರ ಮನಸ್ಸಿನ ವಿರುದ್ಧವಾಗಿಯಾದರೂ, ಸಾಮ-ದಾನ-ದಂಡ-ಭೇದೋಪಾಯಗಳಿಂದ ಬೇರೂರಿಸಿದರೆ, ಅವರೇ ಶಿಸ್ತು ಪಾಲಿಸಬಲ್ಲ ವಿದ್ಯಾರ್ಥಿಗಳು; ಮತ್ತು ಈ ರೀತಿ ತರಬೇತುಗೊಂಡ ವಿದ್ಯಾರ್ಥಿಗಳು ಪಾಲಿಸಿದಷ್ಟು ಶಿಸ್ತುಪಾಲನೆಯು ಮನಃಪೂತವಾಗಿ ಬೆಳೆದು ಬಂದ ವಿದ್ಯಾರ್ಥಿಯಿಂದಾಗಲಾರದು.

ಸಾಲದ್ದಕ್ಕೆ ವಿದ್ಯಾರ್ಥಿಗಳು ಅಪ್ರಗಲ್ಭಾವಸ್ಥೆಯಲ್ಲಿಯೇ ರಾಜಕಾರಣದಲ್ಲಿ ಭಾಗವಹಿಸುತ್ತಿರುವುದು ಶಿಸ್ತುಗೇಡಿತನದ ಏಳನೆಯ ಕಾರಣವು. ಇನ್ನೂ ವ್ಯಕ್ತಿವಿಕಾಸವು ಪೂರ್ಣವಾಗದ ಮುನ್ನವೇ ವಿದ್ಯಾರ್ಥಿಗಳು ಈ ರೀತಿ ತಮ್ಮ ಕರ್ತವ್ಯವನ್ನು ಬದಿಗೊತ್ತಿ ರಾಜಕಾರಣದಲ್ಲಿ ಭಾಗವಹಿಸತೊಡಗಿದರೆ, ಅಪರಿಪೂರ್ಣತೆಯ ಮೂಲಕ ಅವರಿಗೆ ರಾಜಕಾರಣದ ಮಹತ್ವವೂ ತಿಳಿಯಲಾರದು, ಮಾತ್ರವಲ್ಲದೆ ರಾಜಕಾರಣದಲ್ಲಿ ಅತ್ತಿತ್ತ ಎಳೆದಾಡಲ್ಪಟ್ಟು, ಎಲ್ಲಿಯೂ ಸ್ಥಿರವಾಗಿ ನಿಲ್ಲದೆ, ಕಡೆಗೆ ವಿದ್ಯಾರ್ಥಿಗಳು, ಕಾರ್ಯವಿಮುಖರಾಗುತ್ತಾರೆ. ಇದು ಮನಸ್ಸಿನ ಪೂರ್ಣ ಬೆಳೆವಣಿಗೆಯಾಗದಿರುವ ಪರಿಣಾಮವು. ಇಂತಹ ಅಪರಿಪೂರ್ಣ ಮನಸ್ಸಿಗೆ ರಾಜಕಾರಣದಲ್ಲಿ ಎಡೆಕೊಟ್ಟುದಾವರೆ, ರಾಜಕಾರಣದಲ್ಲಿಯೂ ಶಿಸ್ತು ಉಳಿಯಲಾರದು. ವಿದ್ಯಾರ್ಥಿಗಳ ಜ್ಞಾನಾರ್ಜನೆಯೂ ಸರಿಯಾಗಲಾರದು. ಶಿಸ್ತು ಪಾಲಿಸಲ್ಪಡಲಾರದು ಮತ್ತು ದೇಶದ ಭವಿಷ್ಯವೂ ಸುರಕ್ಷಿತವಾಗಿ ಉಳಿಯಲಾರದು. ಇಂಥವರಿಂದ ಕಾರ್ಯನಿರ್ವಹಣೆಯಾದರೂ ಯಶಸ್ವಿಯಾಗಲಾರದು. ಜ್ಞಾನಾರ್ಜನೆಯು ಕೊನೆಸೊಳ್ಳುವವರೆಗೆ-ವ್ಯಕ್ತಿವಿಕಾಸವು ಪೂರ್ಣವಾಗುವವರೆಗೆ-ವಿದ್ಯಾರ್ಥಿಗಳನ್ನು ರಾಜಕಾರಣದಿಂದ ದೂರವಿಡಲು ಪ್ರತಿಯೊಬ್ಬ ನಾಗರಿಕನೂ ಪ್ರಯತ್ನಿಸಬೇಕು. ಪರಿಪಕ್ವವಾದುದೂ, ಸುಸಂಸ್ಕೃತವಾದುದೂ ಆದ ಮನಸ್ಸು ಯಾವ ಕ್ಷೇತ್ರದಲ್ಲಿಯಾದರೂ ಯಶಸ್ಸನ್ನು ತರಬಲ್ಲದು. ಮತ್ತು ಶಿಸ್ತುಬದ್ಧವಾಗಿ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗಬಲ್ಲದು.

ಎಂಟನೆಯ ಕಾರಣವು ವಿದ್ಯಾರ್ಥಿಗಳ ಮೇಲಿನ ಶಿಕ್ಷಣ ಸಂಸ್ಥೆಗಳ ನಿಯಂತ್ರಣವು ಸಡಿಲಾದುದು. ಒಂದು ವೇಳೆ ಇದು ಪರಿಸ್ಥಿತಿಗನುಗುಣವಾಗಿಯೂ ಇರಬಹುದು. ಯಾಕೆಂದರೆ ವಿದ್ಯಾರ್ಥಿಯನ್ನು ನಿಯಂತ್ರಿಸಲು ಯಾವ ಶಿಕ್ಷಣಸಂಸ್ಥೆಯೂ ವಿದ್ಯಾರ್ಥಿಗಳ ಗುಂಪಿನ ಮನಸ್ಸಿನ ವಿರುದ್ಧವಾಗಿ ಕಾರ್ಯ ಮಾಡಲು ಸಾಧ್ಯವಿಲ್ಲದಂತಾಗಿದೆ. ತುಸು ವಿರುದ್ಧ ಮೋದರೆ ಸಾಕು. ಸಂಘಸಂಘಟನೆ ಮತ್ತು ತಿಕ್ಕಾಟಗಳು ಪ್ರಾರಂಭವಾದುವೆಂದೇ ತಿಳಿಯಬೇಕು. ಬನಾರಸ ವಿಶ್ವವಿದ್ಯಾಲಯದಂತಹ ಸಂಸ್ಥೆಯನ್ನೇ ಮುಚ್ಚಿಬಿಡುವ ಪ್ರಸಂಗವೊದಗುತ್ತದೆ. ಮಾನಸಶಾಸ್ತ್ರದ ನೇರೆಗೆ ವಿದ್ಯಾರ್ಥಿಗಳಿಗೆ ಶಿಕ್ಷಣರಂಗದಲ್ಲಿ ಸ್ವಾತಂತ್ರ್ಯವಿರಬೇಕು ನಿಜ; ಆದರೆ ಮನಸ್ಸಿನ ಅಸಕ್ತಾವಸ್ಥೆಯಲ್ಲಿ ವಿದ್ಯಾರ್ಥಿಯು ಮನಸ್ಸು ಉದ್ದಾದಾರಿಗೆ ಜಗ್ಗುವ ಸಂಭವವು ಬಹಳವಾಗಿರುತ್ತದೆ. ಅಂಥ ನೇಳೆಯಲ್ಲಿ ಅದನ್ನು ತಿರುಗಿಸಿ ಮತ್ತೆ ಸರಿಯಾದ

[೨೦೯ ನೆಯ ಪುಟಕ್ಕೆ ಮುಂದುವರಿದಿದೆ.]

ಋಷಿ

ಶ್ರೀ ಗಂಗಾಧರ ಚಿಕ್ಕಾಲ, ಹೊಸದಿಲ್ಲಿ

ಬೆಳಗಿನಿಂದಲೇ ಎಂತಹದೋ ಋಷಿ
ಮನಸಿನಲ್ಲಿ. ತನ್ನಷ್ಟಕ್ಕೆ ಏಸಿಏಸಿ
ಜೀವ ಒಳಗೊಳಗೆ ನಗುತಿತ್ತು.
ಹೊಕ್ಕುಳಲ್ಲಿ ಹೂವರಳಿದ ತೆರದಿ
ಏನೋ ಸಂತಸ ಹೊಮ್ಮುತ ಉರದಿ
ಕಾರಣವಿಲ್ಲದೆ ನಿಗುತಿತ್ತು.

ಈ ದಿನಕೇ ಮೊದಲಾಯಿತು ಹೀಗೆ
ಎದ್ದು ಕಿಟಕಿಯಲಿ ಬರುವುದರಾಗೆ
ಕೈಯತಟ್ಟಿ ಕೆಲೆಯುತಲಿತ್ತು–
ಬಿಸಿಲ ನೀರಿನಲಿ ಜೊಕ್ಕನಿಂದ ಜಗ
ಎಳೆಯರಾಟದಲಿ ಮಗ್ನವಾಗಿ ನೊಗ
ವಗಲ ತೆರೆದು ವೈಮರೆತಿತ್ತು.

ಹಿಗ್ಗಲು ಇದಕೂ ಹೆಚ್ಚಿಗೆ ಬೇಕೇ ?
ಬಾನ ನೀಲಿಯಡಿ ಮಕ್ಕಳ ಕೇಕೆ,
ಚಿಗುರು ಬೆಳಕಿನಲಿ ಬಾಳ ಕಣ–
ತೊಳೆದ ಮನಸಿನೊಲು ಎಲ್ಲ ಜಗತ್ತು
ಎಂಥ ಹಗುರು ನಿಚ್ಚಳವೀ ಹೊತ್ತು—
ಮರಳಿದಂತೆ ನಮ್ಮೀ ಮನುಸೃಷ್ಟಿಯು
ಮೊಟ್ಟಮೊದಲ ನಿಷ್ಪಾಪ ಕ್ಷಣ!

ನಿಂತಲ್ಲಿಯೆ ಹಿರಿ ಹಿರಿ ಹಿಗ್ಗಿತು ಜಸು—
ಹುಲ್ಲ ಹಸಿರಿನಲಿ ನೋಯಬಿಟ್ಟು ಹಸು
ಬಾಲ ನಿಗುರಿ ನೆಗೆದಾಡಿತ್ತು—
ತನ್ನ ಹರ್ಷಕೇ ತಾ ವಶವಾಗಿ
ತನ್ನಷ್ಟಕೆ ನಲಿದಾಡಿತ್ತು.

ಎಂದೆನಲ್ಲ ಎದ್ದವನೇ ಬಂದು
ಕಿಟಕಿಯಲಿಂಬೆ ಎಲ್ಲವನು ಕಂಡು
ಹಿಗ್ಗಿದೆನೆಂದು....
ತಮ ಬರಿ ಸಮಿತ್ರ, ಬರಿಯ ನೆವ
ಬರುವ ಮೊದಲಿಗೇ ಎಂತಹದೊ ಋಷಿ
ಮನಸಿನಲಿತ್ತು ತನ್ನ ಸೆಲಿಯೊಡೆಸಿ
ಆದರ ಉಗಮ ಕಂಡವನಾನ ?
ಮೆತ್ತಿದ ಮಣ್ಣಿನ ಕವಚ ಕಳಚಿದೊಲು
ಗುಳುಗುಳು ಉಗ್ಗುವ ನೀರ ಚಿಲುಕಿನೊಲು
ಒಳಗೊಳಗೇ ಬಸಿಯುತಲಿತ್ತು-

ತಲೆಯ ಭಾರವೆಲ್ಲವು ಹುದಿಳಿದು
ಜಗದ ಗುಲ್ಲೆಲ್ಲ ಎಲ್ಲೋ ಸರಿದು
ಬಿಡುಗಡೆ ಪಡೆದೊಲು ಮನಸಿತ್ತು.

ಎದೆಯ ತಳಕೆ ತಂಗೊಳದೊಲು ತಣಿವು
ಇಲ್ಲಾ ಬೇಸರು, ಇಲ್ಲಾ ದಣಿವು
ಒಲವಿನಿಂದ ಒಡವೆಗಳಲಿ ನೆಲಸಿ ನೆಲುಕಾಡುವ ಕಣ್ಣು-
ಅವಸರವಿಲ್ಲದ ನಿಧಾನ ಉಸಿರು
ನಿರಿಗೆ ಮುರಿಗೆಯೊಂದಿಲ್ಲದ ಬಸಿರು
ಒತ್ತಡವಿಲ್ಲದೆ ಹರೆಸಿನೆ ನಾಡಿ-ವ್ಯೆಯ ನೆತ್ತರನ್ನು.

ತಕ್ಕಷ್ಟು ತಂಪು ತಕ್ಕಷ್ಟೇ ಬಿಸಿ
ತಾನೆ ತಾನೆ ಅಹ ಹೊಟ್ಟಿತುಂಬ ಋಷಿ
ತನ್ನ ಅಕ್ಷದಲೆ ಆರಾಮಿನಲಿ ಕುಳಿತೊರಗಿದೆ ಜೀವ–
ಮರೆತು ತನ್ನ ಗತಿ ಅಷ್ಟಾವಕ್ರ
ಮೂಲೆಗೆ ನಿಂತಿದೆ ವಿಚಾರಚಕ್ರ
ಬಯಕೆ ಬಾಧೆ ಲವಲೇಶವು ಇಲ್ಲದ ಸಂತುಷ್ಟಿಯ ಭಾನ

ಗಂಟಿಲ್ಲಾ ತೊಡಕಿಲ್ಲಾ ಒಂದೂ
ಕರ್ಮಚಿಂತೆ ಕೇಸರಿಸದು ಬಂದು
ಎಲ್ಲವು ಸುಸೂತ್ರ ಸುರೀತ–
ಗುಡ್ಡ ಮಗುಚಿ ಹಾಕುವ ಹವ್ಯಾಸ
ಜಗದ ಡೊಂಕನೂ ತಿದ್ದುವ ಧ್ಯಾಸ
ಒಂದಿನಿಸಿಲ್ಲಾ ಜೀವಕೆ ಈ ಕ್ಷಣ, ತಾನೆ ಅದು ಸಂಪ್ರೀತ

ಕಾಲಪ್ರವಾಹವು ತಡೆಯದೆ ಹರಿದಿದೆ
ಒಳಿತು ಕೆಡಕುಗಳ ಬಿಡಿಸ ಬರದ ಬೆಳೆ ಯುಗಗಳಿಂದಲೂ
ನಡದಲಿ ಬೆಳೆದಿದೆ
ಕೀಳ ಬರದ ಕಳೆಯೇ ನಿತಿನಿರಾರಿ ಮನುಜೀವನ ಗುರಿ
ಕಾಣದೆ ತೊಳಲಿದೆ
ಆದರೂ ವ್ಯಥೆ ಬಾಧಿಸದಿಂದು.

ಇದನೆಲ್ಲವ ಹಗುರಾಗಿ ತೂಗಿ
ಜೀವನಿಹುದು ನಿಶ್ಚಿಂತನಾಗಿ
ಸುಖದ ಬಿಂದುವನೆ ಸಹಜ ಆಶ್ರಯಿಸಿ ನಲಿದು
ಪಡುವುಗೊಂಡು

ಇದು ಸ್ವಾರ್ಥವೆ, ನೈಗಳ್ಳತನವೆ ಇದು
ಸ್ವರತಿಯು, ಮರೆವೇ, ಬಧಿರತನವೆ ಇದು

ಆತ್ಮಲಂಪಟನು ಇರುವ ರೀತಿಯೇ ತಿರುಗುಬೆನ್ನ ಮಾಡಿ?
ಅಥವಾ ಹೊಮ್ಮುವ ಆರೋಗ್ಯವೆ ಇದು
ಒಳಹೊರಗಿನ ಸರಿ-ಸಮತೂಕವೆ ಇದು
ಅಂತರಾಳದಲಿ ಚಿಮ್ಮುತ ತೆರೆಯಿತೆ ಅನಂದದ ನಾಡಿ?

ಅಯ್ಯಾ ಬದುಕ ಮೂಲಕಿಹ ಸುಖನಿದು
ಎಂಥ ಹೊರೆಯಡಿಗು ಹಿಗ್ಗುವ ಮುಖವಿದು
ಹುಟ್ಟಿನಿಂದಲೇ ಇರವಿಗೆ ನಮ್ಮನು ಕಟ್ಟಿಹಿಡಿದ ಬಂಧ
ಹೆತ್ತು ತಂಟೆ ತಾಪತ್ರಯದಲ್ಲೂ
ದಿನ ಬೆಳಗಿನ ಕ್ರಯವಿಕ್ರಯದಲ್ಲೂ
ಬಾಳಿನ ಅತೀವ ಧಾವತಿಯಲ್ಲೂ
ಜಗದೀ ದಿಕ್ಕಿಲ್ಲದ ಗತಿಯಲ್ಲೂ
ನಾವೆ ನಮ್ಮ ಸಹವಾಸದಲಿನಿಸು ಹಾಯಾಗಿ ನೈಯೊಡ್ಡಿಸುಳಿತರೆ
ಕ್ಷಣಕಾಲವೆ ಎದೆ ಹರಹಿ ತಳಿತರೆ
ಜೀವದ ಹೂವಿನ ದೇಟಿನೊಳಿಂದೆ
ತಾನೆ ತಾನೆ ನೆರೆಯೇರಿ ನುಗ್ಗಿ ತೆರೆಹಾಯಿಸಿ ತುಂಬುಃ
ಸಹಜ, ಅನಾಯಸ, ನಿರ್ಹೇತುಕ ಬರಿ ಜೀವನದಾನಂದ!
ಬೆಳಗಿನಿಂದಲೇ ಎಂತಹದೋ ಖುಶಿ
ಮನಸಿನಲ್ಲಿ.

(ಇದೇ ಶಿಂಗಳಲ್ಲಿ ಪ್ರಕಟವಾಗಲಿರುವ "ಮನುಕುಲದ ಹಾಡು" ಎಂಬ ಕವನ ಸಂಗ್ರಹದಿಂದ)

[ಶಂಕರ ನೆಯ ಪುಟದಿಂದ ಬಂದಿದೆ:]

ದಾರಿಗೆ ತರಬಲ್ಲ ನಿಯಂತ್ರಕ ಶಕ್ತಿಯೊಂದು ಬೇಡವೇ ? ಈ ವಿಷಯದಲ್ಲಿ ಶಿಕ್ಷಣಸಂಸ್ಥೆಗಳೂ, ಪಾಲಕರೂ ಸಹಕರಿಸಿ ಕಾರ್ಯಮಾಡಿದರೆ ವಿದ್ಯಾರ್ಥಿಗಳನ್ನು ಶಿಸ್ತಿನ ಮಾರ್ಗಕ್ಕೆ ಹೆಚ್ಚಲು ಹೆಚ್ಚು ಅನುಕೂಲವಾಗಬಹುದು. 'ಹುಡುಗನು ಕಲಿತಷ್ಟು ಕಲಿಯಲಿ. ಅವನ ಮನಸ್ಸಿನ ವಿರುದ್ಧ ಹೋಗಿ ಮನಸ್ಸನ್ನು ನೋಯಿಸುವುದು ಬೇಡ' ಎಂದು ಪಾಲಕರು ಅಭಿಪ್ರಾಯಪಟ್ಟರೆ, ಹುಡುಗನನ್ನು ಸನ್ಮಾರ್ಗದಿಂದ ತಳ್ಳಿ ಅವನ ಭವಿಷ್ಯವನ್ನು ಬಲಿಗೊಟ್ಟಂತೆಯೇ ಅಲ್ಲವೆ, ದೇಶದ ಭವಿಷ್ಯವನ್ನು ಗಂಡಾಂತರದಲ್ಲಿ ಕೆಡಹಿದಂತೆ. ಮಕ್ಕಳು ನಮ್ಮವಾದರೂ ಅವು ದೇಶದ ಸೊತ್ತು, ದೇಶದ ಸೊಗವನ್ನು ಹೊರುವ ವ್ಯಕ್ತಿಗಳು-ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕಲ್ಲವೇ ?

ಒಂಬತ್ತನೆಯ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿ ಶಿಸ್ತು ಕೇವಲ ಅಚ್ಚು-ಕಟ್ಟುತನದ ಉಡುಪು-ತೊಡಪುಗಳಿಗೆ ಮಾತ್ರ ಪರಿಸೀಮಿತವಾಗಿದೆ. 'ಅಚ್ಚುಕಟ್ಟುತನವೆ ಪೋಷಾಕು ಎಂದರೆ ಶಿಸ್ತು' ಎಂಬ ಕಲ್ಪನೆ ಬೇರೂರಿದೆ. ನಿಜವಾಗಿ ನೋಡಿದರೆ ಶಿಸ್ತು ಪೋಷಾಕಿಗೆ ವಿಶೇಷವಾಗಿ ಸಂಬಂಧಿಸಿರದೆ, ಮನಸ್ಸಿಗೆ ಹೆಚ್ಚು ಸಂಬಂಧಪಟ್ಟ ವಿಷಯ. ಯಾವನ ಮನಸ್ಸು ಶಿಸ್ತಿನದೋ, ಅವನು ಮಾತ್ರ ಶಿಸ್ತನ್ನು ಸರಿಯಾಗಿ ಪಾಲಿಸಬಲ್ಲನು. ಆದರೆ ಮನಸ್ಸಿಗೆ ಶಿಸ್ತಿನ ಸಂಸ್ಕಾರವಿಲ್ಲದೆ ಕೇವಲ ಪೋಷಾಕಿನಲ್ಲಿ ಶಿಸ್ತನ್ನು ಪ್ರದರ್ಶಿಸುವುದು ನಿಜವಾದ ಶಿಸ್ತೆನಿಸಲಾರದು.

ಹತ್ತನೆಯ ಮತ್ತು ಕಡೆಯ ಕಾರಣವೆಂದರೆ ವಿದ್ಯಾರ್ಥಿಗಳಲ್ಲಿ ಕಡಮೆಯಾಗುತ್ತಿರುವ ಕಷ್ಟ-ಸಹಿಷ್ಣುತೆಯು. ಇದಕ್ಕೆ ವಿದ್ಯಾರ್ಥಿಗಳಿಗೆ ತಮ್ಮ ಮನಸ್ಸಿನ ಮೇಲೆ ನಿಯಂತ್ರಣವಿಲ್ಲದಿರುವುದೇ ಕಾರಣವು. ಕಷ್ಟವನ್ನು ಸಹಿಸಲು ತನ್ನಿಂದ ತಾನೇ ಯಾವ ಮನಸ್ಸೂ ತಯಾರಾಗಲಾರದು. ಅದನ್ನು ನಾವಾಗಿಯೇ ತಯಾರುಗೊಳಿಸಬೇಕು. ಹೀಗೆ ಮನಸ್ಸಿನ ಮೇಲೆ ನಿಯಂತ್ರಣವಿಲ್ಲದಿರುವುದರಿಂದ ಶಿಸ್ತುಭಂಗವಾದ ಎಷ್ಟೋ ಉದಾಹರಣೆಗಳನ್ನು ನಾವು ಕೇಳುತ್ತೇವೆ ಮತ್ತು ಕಾಣುತ್ತೇವೆ. ಒಂದು ಚಿಕ್ಕ ರಾಷ್ಟ್ರಗೀತೆಯನ್ನು ಅನ್ನುವಾಗಲೂ ಕೇವಲ ಕೆಲ ನಿಮಿಷಗಳ ಪರೆಗೆ ಮಾತ್ರ ಶಿಸ್ತಿನಿಂದ ನಿಲ್ಲುವಷ್ಟು ವಿದ್ಯಾರ್ಥಿಗಳಲ್ಲಿ ಮನಸ್ಸಿನ ಮೇಲಿನ ನಿಯಂತ್ರಣವುಳದಿಲ್ಲ; ತಾಳ್ಮೆಯುಳದಿಲ್ಲ. ಅಂದಮೇಲೆ ಶಿಸ್ತು ಪಾಲನೆಯಾಗುವುದೆಂದು ?

ಈ ಎಲ್ಲ ಸಂಗತಿಗಳನ್ನು ಮನವಂದು ವಿದ್ಯಾರ್ಥಿಗಳಿಗೆ ಶಿಸ್ತನ್ನು ಕಲಿಸಿಕೊಟ್ಟುದಾದರೆ ಆ ಶಿಸ್ತು ಚಿರಕಾಲ ಬಾಳುವುದು ಖಂಡಿತ

◀ ಕನ್ಯಾನ್ವೇಷಕ ▶

(ಹೊಸಜೀವನದ ಭಾವಚಿತ್ರ)

ಶ್ರೀಮತಿ ಚಂಪಾವತಿ ಮಹಿಷಿ, ಬಿ. ಎ., ಬಿ. ಟಿ. **ಧಾರವಾಡ**

ಪಾತ್ರಪರಿಚಯ

ನಾಗೇಶರಾವ್ ದೇಸಾಯಿ (ಸರಕಾರಿ ಅಧಿಕಾರಿ)
ಇಂದಿರಾಬಾಯಿ (ರಾಯರ ಹೆಂಡತಿ)
ರೋಹಿಣಿ (ರಾಯರ ಪದವೀಧರ ಪುತ್ರಿ)
ಸವಿತಾ (ರೋಹಿಣಿಯ ತಂಗಿ)
ಜಗದೀಶ ದೇಸಾಯಿ (ಕನ್ಯಾನ್ವೇಷಕ)
ಎಚ್. ಕೆ. ದೇಶಪಾಂಡೆ (ಜಗದೀಶನ ಗೆಳೆಯ)
ಗಿರಿಜಾ (ರೋಹಿಣಿಯ ಗೆಳತಿ)
ನಿರ್ಮಲಾ ,,

ನಾಗೇಶರಾವ ದೇಸಾಯಿಯರ ಬಂಗ್ಲೆ, ಬಂಗ್ಲೆಯ ಮುಂದಿನ ಹಾಲಿನಲ್ಲಿ ನಾಲ್ಕೈದು ಕುರ್ಚಿಗಳು; ಪಡುಮನೆ ಮಧ್ಯದಲ್ಲಿ ಅಕಾರದ ಮೇಜು, ಎಂದೆಡೆಯಲ್ಲಿ ಟೀಪಾಯ್ ಇನ್ನೆ. ಹಾಲಿನಲ್ಲಿ ದೇಶಭಕ್ತರ ಮತ್ತು ಮನೆಯ ತರರ ಕೆಲವು ಛಾಯಾಚಿತ್ರಗಳು ಇವೆ. ಕೆಳಗೆ ರತ್ನಗಂಬಳಿ ಹಾಸಿವ್ವಾರೆ. ಎಂಗ್ಲೆಯು ಎಮುರು ಚಿಕ್ಕವಾದರೂ ಸುಂದರವಾದ ಪೂದೋಟವಿದೆ. ಎಂಗ್ಲೆಯ ಮುಂದಿನ ಹಾಲಿನಲ್ಲಿ ನಾಗೇಶರಾಯರ ಮಗಳಾದ ರೋಹಿಣಿ, ಕಥೆಯ ಪುಸ್ತಕವೊಂದನ್ನು ಓದುತ್ತ ಕುಳಿತಿರುವಳು ತೋಟದ ಒಂದು ಕಡೆಯಲ್ಲಿ ತರುಣನೊಬ್ಬ ನಿಂತಿರುವನು. ಯಾರದೋ ಮಾರ್ಗಪ್ರತೀಕ್ಷೆ ಮಾಡುತ್ತಿರುವಂತೆ ಮುಖದ ಮೇಲಿನ ಭಾವನೆ.

ರೋಹಿಣಿ : (ತನ್ನಲ್ಲಿ) ಈ ದಿನ ನನ್ನ ಗೆಳತೇರ್ಯಾರೂ ಬರಲಿಲ್ಲ. ವಾರದಾಗ ಒಮ್ಮೆ ಬರೋ ರವಿವಾರ ಹಾಂಗs ಹೋಗಬೇಕಽ? ಎಲ್ಲಾರೂ ಕೂಡಿ ಒಂದು ಒಳ್ಳೆ ಸಿನೆಮಾ ನೋಡಬೇಕಂತ ಮಾಡಿದ್ದಿವಿ.

ಸವಿತಾ : ಅಕ್ಕಾ, ನಿನ್ನ ಗೆಳತೇರು ಯಾರೂ ಬರಲೇ ಇಲ್ಲಲ್ಲಾ. ಇವತ್ತ ಸಿನೆಮಾಕ್ಕ ಹೋಗವರು ಇದ್ದಿರೆಲ್ಲಾ ಎಲ್ಲಾರೂ ಕೂಡಿ?

ರೋಹಿಣಿ : ಹೌದು ನಾನೂ ಅವರ ಹಾದೀನs ಕಾಯಿತಿದ್ದೆ. ಅವರು ಬಂದ ಮ್ಯಾಲೆ ನಿನ್ನೂ ಕರಕೊಂಡು ಹೋಗತೀವಿ.

ತರುಣ : (ನಿಂತಲ್ಲಿಯೇ ತನ್ನಷ್ಟಕ್ಕೆ) ರೋಹಿಣಿನ್ನ ಭೆಟ್ಟಿಯಾಗಿ ಮಾತಾಡಿ ಹೋಗಬೇಕಂದರೆ, ನಡುವ ಈ ಹುಡಿಗಿ ಒಬ್ಬಾಕೆ ಬಂದಳು. ಇನ್ನ ಈ ಹುಡಿಗಿ ಸ್ವಲ್ಪ ಹೊತ್ತಿನ್ಯಾಗ ಒಳಗೆ ಹೋಗಬಹುದು. ನಾನು ಮಾತಾಡಿನೇ ಹೋಗತೀನಿ.

ಸವಿತಾ : (ರೋಹಿಣಿ ಓದುತ್ತಿರುವ ಪುಸ್ತಕದ ಹಾಳೆಗಳೊಡನೆ ಆಟವಾಡುತ್ತ) ಅಕ್ಕಾ ಒಂದು ಹಾಡು ಹಾಡೆ.... ಏನು....

ರೋಹಿಣಿ : ನಾನೇನ ಹಾಡಿಲೆ? ನಾ ಏನು ನಿನ್ಹಾಂಗ ಗಾಯನಾ ಕಲೀಲಿಕ್ಕೆ ಹೋಗತೀನೇನು?

ಸವಿತಾ : (ಸಲಿಗೆಯಿಂದ) ಗಾಯನಾ ಕಲೀದಿದ್ದರ ಏನಾತು; ಯಾವಾಗಾದರೂ ನೀ ಪುಸ್ತಕದೊಳಗಿನ ಹಾಡು ಹಾಡತೀಯಲ್ಲಾ!

ರೋಹಿಣಿ : (ಪ್ರೀತಿಯಿಂದ ಸಲಿಗೆಯ ಧ್ವನಿಯಲ್ಲಿ) ನಾ ಎಂದ ಹಾಡಿದ್ದೆನೇ? ನೀ ಎಂದ ಕೇಳಿದ್ದಿ?

ಸವಿತಾ : ಕಾವ್ಯಗಾಯನ ಸ್ಪರ್ಧಾದೊಳಗ ನಿನಗ ಇನಾಮು ಸಿಕ್ಕಽದ ನನಗೇನು ಅದು ನೆನಪಿಲ್ಲಾಂತ ತಿಳಿದೇನು..... ಊಂ! (ಅಕ್ಕನ ಕೈ ಹಿಡಿದುಕೊಂಡು ಸಲಿಗೆಯಿಂದ ಮಾತನಾಡುವಳು.)

ರೋಹಿಣಿ : ನೀ ಯೇನು ಸುಮ್ಮನೆತ ಬಿಡೋ ಹಾಂಗ ಕಾಣೂದಿಲ್ಲ. ನಮ್ಮ ಗೆಳತೇರು ಬರ್ತಾರೇನೊ ಹಾದೀ ನೋಡತೀನಿ.

ಸವಿತಾ : ಅವರು ಬರೋ ತನಕಾ ಒಂದು ಹಾಡು ಹೇಳಲಾ.

(ರೋಹಿಣಿಯು 'ಭೃಂಗದ ಬೆನ್ನೇರಿ ಬಂತು ಕಲ್ಪನಾನಿಲಾಸಾ' ಎಂಬ ಹಾಡನ್ನು ಇಂಪಾದ ಧ್ವನಿಯಲ್ಲಿ ಪಾಡುವಳು.)

ತರುಣ : (ನಿಂತಲ್ಲಿಯೇ ತನ್ನಲ್ಲಿ) ಎಷ್ಟು ಇಂಪಾದ ಧ್ವನಿ ರೋಹಿಣಿ ಅಂದರ ಸಾಕ್ಷಾತ್ ರೋಹಿಣೀನs! ಸೃಷ್ಟಿಯಲ್ಲಿ ಒಂದೆ ಕಡೆ ಕೂಡಿರಲಾರವು ಲಕ್ಷ್ಮಿ ಸರಸ್ವತಿ ರೋಹಿಣಿಯ ಹತ್ತರ ಇದ್ದಾರ ಈಕೆ ಒಪ್ಪಿದರ ನನ್ನ ಪೈವಕ್ಕ ಸರಿ ಇಲ್ಲ.

(ತರುಣನು ನಿಂತ ಬದಿಯನ್ನು ಬಿಟ್ಟು, ಇನ್ನೊಂದು ಬದಿಯಿಂದ ಗೆಳತಿಯರ ಪ್ರವೇಶ.)

ರೋಹಿಣಿ : ನಿನ್ಯಾ ದಾರೀ ನೋಡಿ ಬೇಸತ್ತು ಈಗ ಹಾಡತಿದ್ದೆ!

ಗಿರಿಜಾ : ನಾನು ಲಗು ಹೊರಟಪ್ಪೆ. ನಿರ್ಮಲಾ ತನ್ನ ಅಲಂಕಾರ ಮುಗಿಸಿಕೊಂಡು ಮನೆಯಿಂದ ಹೊರಬೀಳಲಿಕ್ಕೆ ಇಷ್ಟು ಹೊತ್ತು ಮಾಡಿದಳು. ನಾ ಹೇಳಿದೆ— 'ಅಲ್ಲ, ನೀ ಏನು 'ಅಸ್ಟೆ' ನಾಟಕಾ ಮಾಡೋದಿಲ್ಲ ಸಿನೇಮಾ ನೋಡೋದನ' ಅಂತ! ಕೇಳಬೇಕಲ್ಲಾ!

ತರುಣ : (ತನ್ನಷ್ಟಕ್ಕೆ) ಇವರ ಮಾತಂತೂ ಮುಗಿಯೂ ಹಾಂಗ ಕಾಣೂದಿಲ್ಲ. ನನಗ ರೋಹಿಣಿನ್ನ ಕಂಡು ಮಾತಾಡೂ ಸುಯೋಗ ಇಲ್ಲ. ಈಗ ತಿರುಗಿ ಮನೀಗೆ ಹೋಗ್ತೀನಿ. ಮತ್ತ ಯಾವಾಗಾದರೂ ಭೆಟ್ಟಿಯಾಗಿ ಆಕಿನ್ನ ಮಾತಾಡಸ್ತೀನಿ. (ಹಾಗೆಯೆ ಯಾರಿಗೂ ಕಾಣದಂತೆ ಹೋಗುವನು.)

ನಿರ್ಮಲಾ : ಈ ಗಾ ದೆರೂ ಬಹಳ ಹೊತ್ತಾಗಲಿಕ್ಕಿಲ್ಲ. ಹೋಗೋಣ ನಡೀರಿ.

ರೋಹಿಣಿ : ನಿನೇಮಾ ಸುರು ಆಗಿ ಸ್ವಲ್ಪ ಹೊತ್ತು ಆಗಿರಬಹುದು. ಮತ್ತ ನಾವು ಹೋಗೋದರೊಳಗ ಇನ್ನೂ ಹೊತ್ತಾಗತ್ತದ; ಇವತ್ತ ಹೋಗೋದು ಬಿಟ್ಟು ಇನ್ನೊಮ್ಮೆ ಎಂದಾದರೂ ಹೋಗೋಣಂತ. ಒಳಗ ನಡೀರಿ. ಚಹಾ ತೊಗೊಕ್ಕೋಣಂತ ನೀವಂತೂ ಬಹಳ ಹೊತ್ತು ಹಾದೀ ನೋಡಿವ ಮ್ಯಾಲೆ ಮಳೆಗಾಲದಾಗ ಬಿಸಲು ಬಿದ್ದಾಂಗ ಬಂದೀರಿ. ಇನತ್ತೊಂದು ದಿನಾ ನಮ್ಮನ್ನ್ಯಾಗ ಕೂತು ಮಾತಾಡೋಣ !

ಗಿರಿಜಾ : ನುತ್ತೆ ನಿಮ್ಮ ತಾಯಿಗೆ ಹೆಚ್ಚಿನ ಕೆಲಸಾ ಹಚ್ಚಿದ್ದಾಂಗಾಂತು. ನಮ್ಮದು ಈಗ ಜೆಹಾ ಆಗೇದ !

ರೋಹಿಣಿ : ಈಗ ನಮ್ಮನ್ಯಾಗ ಮಾಡೋ ಹೊತ್ತs ಐದ. ನಾವೆಲ್ಲಾರೂ ಕೂಡಿಸಮಾಡೋಣಂತ.ಇಲ್ಲಾನಾಒಬ್ಬಾಕಿ ಮಾಡತೀನಿ. ನೀನೆಲ್ಲಾ ಮಾತಾಡಿಕೋತ ಇಲ್ಲೇ ಕೂತ್ರಿ. ನನಗೆ ಮುನೀ ಕೆಲಸ ಬರೂದಿಲ್ಲಾಂತ ತಿಳಿದಿರೇನು ?

ನಿರ್ಮಲಾ : ನಿನಗೆ ಬರಲಾರದ್ದು ನಿನದನಷ್ಟಾ ! ಎಲ್ಲಾದರೊಳಗೂ ನಿನ್ನದು ಎತ್ತಿದ ಕೈ. ನಡೀ ಹೋಗೋಣ.

(ಮೂವರೂ ಒಳಗೆ ಹೋಗುವರು; ಕಪ್ಪು ಬಸಿಗಳ ಸಪ್ಪಳ)

'ನಾಗೇಶರಾವ ದೇಸಾಯ ಅವರ ಮನೆಯ ಎದುರಿಗೆ ಜಿ.ಆರ್. ದೇಸಾಯ (ತರುಣ) ಹೋಗುತ್ತಿರುವನು. ಎಡಗಡೆಯಿಂದ ಪ್ರವೇಶ. ಅವನು ಒಳಗಿಂ ಹೆಜ್ಜೆ ಹೋಗುವುದರೊಳಗಾಗಿ ಅವನ ಗೆಳೆಯ ಎಚ್.ಕೆ. ಶೇಷಪಾಂಡೆ ' ಏ ದೇಸಾಯ ನಿಲ್ಲೋ ' ಎಂದು ಕರೆಯುತ್ತ ಪ್ರವೇಶಿಸುವನು.)

ಜಗದೀಶ : (ತಿರುಗಿ ನಿಂತು ನೋಡಿ) ಏನೋ ಶೇಷಪಾಂಡೆ ! ಅಪರೂಪಕ್ಕ ಭೆಟ್ಟಿಯಾದೆಲ್ಲ. ಏನು ಹೊಸ ಸುದ್ದಿ ?

ಶೇಷಪಾಂಡೆ : ಏನು ಸುದ್ದೆಪಾ ! ನೀನs ಹೇಳೋದು ನೋಡು ಹೊಸ ಸುದ್ದಿ (ಕಾಲಿನಿಂದ ತಲೆಯ ವರೆಗೆ ನಿಟ್ಟಿಸಿ ನೋಡಿ) ಏನಪಾ ವೇಷ ? ಒಳ್ಳೆ ರಾಜಕುಮಾರನ ಹಾಂಗ ಇದ್ದೀ ನೋಡಪಾ ನೀ ಒಬ್ಬ ! ಪುತ್ತೇನು, ಕೆಲಸದ್ದು ಎಲ್ಲೈ ಪ್ರಯತ್ನ ನಡೆಸಿದ್ದಿ. ಎಲ್ಲಾರ ಸಿಕ್ಕಿತೇನು ?

ಜಗದೀಶ : (ಒಳ್ಳೆ ತಿನಿಯುವಂದ) ಏನಪಾ ಅಂಥಂಥ ಕೆಲಸ ಬೇಕಾದಷ್ಟು ಐವ. ಅದರ ನನಗ ಮನಸ್ಸಿಗೆ ಬರಬೇಕಲ್ಲ. ಈ ಕಾರಕೂನಿಕಿ ಕೆಲಸಮೊಳಗ ಮೊದಲ ಹೋಗಬಾರದು – ಅಂತೀನಿ ನೋಡು ನಾನು. ಅಲ್ಲೆ ಒಮ್ಮೆ ಸಿಕ್ಕುಬಿದ್ದರೆ, ಹೊರಗ ಬರೋ ಹಾದೀನs ಇಲ್ಲ. ಎಲ್ಯಾರ ಆಫೀಸರಾಗಿ ಕೆಲಸ ಮಾಡೋವ ನಾನು. ಇನ್ನ ವರ್ಷ ಎರಡು ವರ್ಷ ಹಾಂಗs ಉಳಿಯೋ ಪ್ರಸಂಗ ಬಂದರೂ ಅಡ್ಡಿ ಇಲ್ಲಾ. ಕಾಗದಾ ಗೀಕೋ ಕೆಲಸಾ ಮಾತ್ರ ಮಾಡೋ ಹಾಂಗಿಲ್ಲ.

ಶೇಷಪಾಂಡೆ : (ಸಮಾಧಾನದ ಧ್ವನಿಯಲ್ಲಿ) ನಿನಗೇನಪಾ ! ದುಡದು ತಂದು ಊಟಾ ಅನ್ನೋ ಪರಿಸ್ಥಿತಿ ಇಲ್ಲ. ಬುತ್ತನ್ನ ಇದ್ದಾಂನಾ– ನೀನು! ನಿನಗ ನಡೀತsದ. ನಮ್ಮದು ಹಾಂಗಲ್ಲ !

ಜಗದೀಶ: ಹೌದೋ, ನಿನಗ ಗೊತ್ತು ಅದಲ್ಲಾ.ನೀನs ಪ್ರ್ಯಾಕ್ಟಿ ಮಾಡತಿದ್ದಿ ನನ್ನ ರೂಮಿಗೆ ಯಾವಾಗಲೂ ಬಂದಾಗ:-ಹೊಸ ಸಾಮಾನು ಪ್ಯಾಟಾಗ ಬಂದದ್ದುವ ಗೊತ್ತಾಗಬೇಕಾದರ ನೋದ ದೇಸಾಯ ರೂಮಿಗೆ ಬಂದು ನಮೂನೆ ನೋಡಿಕೊಂಡು ಹೋಗಬೇಕ ' ಅಂತ. ಈಗೂ ನಾನು ಸುನ್ಯಾಗ ಅಷ್ಟು ತೀವಿ ಇಟ್ಟೀನಿ ನೋಡಪಾ

ಶೇಷಪಾಂಡೆ : ಇಟ್ಟಿದ್ದಿ! ಆಗರ್ಭ ಶ್ರೀಮಂತಪಾ ನೀನು. ಇನ್ನ ವ್ಯಾಲ ಆಫೀಸರ್ ಆಗಪರು ಅನಬಾರದ ದೇಸಾಯರು.

ಜಗದೀಶ : ಆಗೇ ತೋರಸ್ತೀನಿ ನೋಡು. ಯಾಪಾಗೂ ಬಡಬಡಕೊಂಡು ಓದತಿದ್ದನಲ್ಲೊ ಆ ನಮ್ಮ ಸಿಂಧೆ– ಇವs ಊರಾಗs ಮಾಸ್ತರ ಆಗ್ಯಾನ ! ಕಲಿಯೋ ಮುಂದೂ ಆರಾಮ ನೋಡು ನಾನು ಎಷ್ಟು ಆಗತದ ಅಷ್ಟು ಅಭ್ಯಾಸ ಮಾಡೋನು ಆತು. ಹ್ಯಾಂಗs ಇರಲಿ, ಪಾಸಾದರ ಆತು.

ಶೇಷಪಾಂಡೆ : (ಸುತ್ತಲೂ ನೋಡಿ ಮೆಲ್ಲಗೆ) ಅಲ್ಲೋ ಆ ರೋಹಿಣಿ ಅಂತ ನಮ್ಮ ಜೋಡೀನs ಇದ್ದಳಲ್ಲ ! ಆಕಿನ್ನ ನೀ ಮದಿಸಿ ಆಗಾಂವಾ ಇದ್ದಿ. ಅದರದು ನಮಗ ಏನೂ ಸುದ್ದಿ ತಿಳೀಲಿಲ್ಲ ?

ಜಗದೀಶ: ಅದರ ವಿಷಯ ಒಮ್ಮೆ ಆಕೀ ಮಾವಾ ಅಂದಿದ್ದರು. ಅಷ್ಟನ! ತಿರುಗಿ ನಾನೇನು ಅದರ ವಿಚಾರ ಮಾಡಿಲ್ಲಾ, ನನ್ನ ಕ್ಲಾಸಿನೊಳಗಿನವರs ಎಷ್ಟು ತ್ರಾಸ ಕೊಡತಿದ್ದರು ಆಕೀಗೆ ಸಾಸ ! ಎಲ್ಲಾ ಹೊಣಿಗೇಡಿ ಜನರು!

ಶೇಷಪಾಂಡೆ : ನೀನೂ ಅದರೊಳಗಿನವನನ್ನ ಇದ್ದೆಲ್ಲಪಾ ನನಗ ಇದೇನು ಹೊಸದೇನು ?

ಜಗದೀಶ : (ಗಂಭೀರ ಭಾವದಿಂದ) ನನಗ ಆ ಮಂದಿ ಆಕೀಗೆ ತ್ರಾಸು ಕೊಡೋದು ನೋಡಲಿಕ್ಕೆ ಆಗತಿದ್ದಿಲ್ಲ. ಅವರಿಗೇನಾದರೂ ಬುದ್ಧೀ ಮಾತು ಹೇಳಿದರ ಟೀಕಾ ಟಿಪ್ಪಣಿ ಸುರು ಆಗತಿದ್ದವು :– ' ಆಕೀ ಸಲುವಾಗಿ ನೀನ್ಯಾಕ ವಕೀಲಿ ಮಾಡತೀರಿ ? ' ಅಂತ !

ಶೇಷಪಾಂಡೆ : ಸ್ತ್ರೀಮೂರ್ಖಿಕ ಬುದ್ಧಿಯಿಂದ ಕೆಲಸಾ ಮಾಡತಿದ್ದಳು. ಬುದ್ಧಿವಂತೀನೂ ಹೌದು. ಅದಕ ಆಕಿನ್ನ ಮದಿನಿ ಆಗೋ ಸುದ್ದೆವಿ ನೀನು ಏನೂ— ಅಂದೆ :

ಜಗದೀಶ : ಅದರ ನನ್ನ ದೈವ ಬಹಳ ಒಳ್ಳೀದು. ಇದರಾಗ ನನ್ನ ದೈವ ಪರೀಕ್ಷಾನs ಐದ.

ಶೇಷಪಾಂಡೆ : ನೀ ಭಾಪ ಹಾಕಿ ಕೆಲಸ ಮಾಡಿಕೊಳ್ಳೋ ವೈಕಿ ಇದ್ದೀ ಬಿದು. ನೀ ಏನು ಪುಸ್ತಕ ಓದಿ ಪುಸ್ತಕದಾಗಿನ ಹುಳಾ ಆಗಿಲ್ಲಾ – ಸಮ್ಮಾಂಗ. ಮೊದಲಿನಿಂದ ವ್ಯವಹಾರಬುದ್ಧಿ ಇದ್ದ ಮನುಷ್ಯ ನೀನು.'

ಜಗದೀಶ : (ಗೆಳೆಯನ ಬೆನ್ನ ಮೇಲೆ ಕೈ ಇಟ್ಟು) ನನ್ನ ಸ್ವಭಾವ ಒಂದ ಮಾತಿನಾಗ ಹೇಳ ಬಿಟ್ಟಲ್ಲಾ ನೀನು. ನೋಡಬೇಕಪಾ. ಏನಾಗತದೊ ! ಕಲಸದೊಳಗಾಗಲಿ, ಮನಿಯೊಳಗಾಗಲಿ ಎಲ್ಲಾ ಪ್ರಯತ್ನದ ವ್ಯಾಲೆ ದೈವಬಲ ಇರಬೇಕು. ಕಂಪ್ಲೀಟ ಕೆಲಸ ಆಗತಾವ.

ಶೇಷಪಾಂಡೆ : Wish you good luck (ನಿನಗೆ ಒಳ್ಳೆಯದಾಗಲಿ).

ಜಗದೀಶ : 'Thank you, ನಡಿ ಚಹಾ ತೊಗೆಂಡು ಹೋಗೋಣ.

(ಇಬ್ಬರೂ ಬಲಗಡೆಯ ದಾರಿಯಿಂದ ಹೋಗುವರು.)

(ಎಡಗಡೆಯಿಂದ ರೋಹಿಣಿ ಮತ್ತು ಆಕೆಯ ಗೆಳತಿ ಗಿರಿಜಾ ಪ್ರವೇಶಿಸುವರು.)

ಗಿರಿಜಾ : (ವಿಶ್ವಾಸವನ್ನು ಹುಟ್ಟಿಸುವ ಧ್ವನಿಯಲ್ಲಿ) ರೋಹಿಣಿ, ಮೊನ್ನೆ ನಮ್ಮನಿಯೊಳಗ ಬಂದಾಕಿ ಏನೋ ಸ್ವಲ್ಪ ಸುದ್ದಿ ಹೇಳಿದಿ. ಪೂರಾ ನೀ ಹೇಳಲೇ ಇಲ್ಲ !

ರೋಹಿಣಿ : (ಚಿಂತೆಯ ಧ್ವನಿಯಲ್ಲಿ) ಅದೊಂದು ತಲೆಭಾರ ಆಗಿ ಕೂತಽದ.

ಗಿರಿಜಾ : (ಸಂತೈಸುವ ಧ್ವನಿಯಲ್ಲಿ) ಹೇಳಬಾರದಽ ಏನದು ? ನಿನ್ನ ಚಿಂತೀ ಕಡಿನು ಮಾಡಲಿಕ್ಕೆ ಬರೋಹಾಂಗ ಅದಽ ಏನೋ ನೋಡೋಣ !

ರೋಹಿಣಿ : ನಾನು 'ಬಿ. ಎ.'ದಾಗ ಇದ್ದಾಗ, ನನ್ನ ಕ್ಲಾಸಿನ್ಯಾಗ ಜೆ. ಆರ್. ದೇಸಾಯಿ ಅನ್ನೋವ ಇದ್ದ. ನೂರಾರು ಮಂದಿಯೊಳಗ ನನಗ ಅವನ ಪರಿಚಯನೂ ಇಲ್ಲಾ. ನಮ್ಮ ಮಾಮಾ ನನ್ನ ಮದಿವೀ ಮಾಡಿಕೊಳ್ಳಲಿಕ್ಕೆ ಅಂವನ್ನ ಒಮ್ಮೆ ಕೇಳಿದ್ದರಂತ; ಈಗ ಅತೀ ಅಗ್ರಹಾನಽ ಮಾಡಲಿಕ್ಕೆ ಹತ್ಯಾಸ.

ಗಿರಿಜಾ : ಯಾಕ ನಿನ್ನ ಮನಸ್ಸಿಗೆ ಬಂದದಿಲ್ಲೊ ?

ರೋಹಿಣಿ : ಮನಸ್ಸಿಗೆ ಬಂದಿದ್ದರ ಪ್ರಶ್ನೆ ಇಷ್ಟು ಗಡಚ ಆಗತಿದ್ದಿಲ್ಲಾ ! ಅದು ಮನಸ್ಸು ಬಾರದ ವಿಷಯು ಅಂತಽ—

ಗಿರಿಜಾ : ಹಾಂಗಾದ್ರ ಇದೇ ರೀತಿ ಹೇಳಿದರಾತು !

ರೋಹಿಣಿ : ಅಷ್ಟ ಸೂಕ್ಷ್ಮದಿಂದ ಹೋಗೋ ಮನುಷ್ಯ ಅಲ್ಲಾ ಅಂವ. ನಮ್ಮ ತಂದೆ ಮತ್ತ ಮಾಮಾನ್ನ ಒಂದಽ ಸಲನ ಕೇಳತಾನಂತ. (ಸ್ವಲ್ಪ ಸಣ್ಣ ಧ್ವನಿಯಲ್ಲಿ) ನನಗೂ ಐದಾರ್ರ ಪತ್ರ ಬರದಾನ !

ಗಿರಿಜಾ : ತಪಸ್ಸು ಮಾಡಿ ನಿನ್ನ ಮೆಚ್ಚಿಸಲಿಕ್ಕೆ ನಿಂತಾನ ಅನಬಾರದಽ !

ರೋಹಿಣಿ : ಸಾಕವ್ವಾ ನಿನ್ನ ಚಾಷ್ಟಿ ಏನು ಮಾಡಬೇಕನ್ನೋದು ನನಗಂತೂ ತಿಳಿಯುವ್ಲೊದ್ಲದು.

ಗಿರಿಜಾ : ಏನಾದರೂ ಉಪಾಯ ಮಾಡಿ ತಪ್ಪಿಸೋದು ! ಅವನ ವಿಷಯು ಅದರೂ ಏನದ ?

ರೋಹಿಣಿ : ಹೆಚ್ಚಿಗೆ ಏನ ಹೇಳಲಿ; ಎಲ್ಲಾರೂ ನಾಲ್ಕು ವರ್ಷದಾಗ ಕಲಿಯೋದನ್ನ ಏಳೆಂಟು ವರ್ಷದಾಗ ಕಲಿತಾನ. ಈ ಸಾರೆ ಸಾಸಾಗಿ ಮನ್ಯಾನಽ ಉಂಡು ತಿರಗತಾನ—ಅತು.

ಗಿರಿಜಾ : (ಆಶ್ಚರ್ಯದಿಂದ ಗಲ್ಲದ ಮೇಲೆ ಕೈ ಇಟ್ಟುಕೊಂಡು) ಅಯ್ಯ ನಿಜೀಬ, ಇಂತಾವ ಇನ್ನು ಪೆನ್ಡ್ಲತ್ತಿ ತಿರಗತಾನಽ ? ಮುಗೀತು, ಇಂತಾವನ್ನ ಮದಿವಿ ಆದರ, ನಿನ್ನೇನು ಜ್ಞಾನಾನ ಮಾಡತಾನ ?'

ರೋಹಿಣಿ : ಸದ್ಯ ತಪಸ್ಸ ಜ್ಞಾನಾನ ಮಾಡಲಿಕ್ಕೆ ಹೆಂಡತಿ ಬೇಕಾಗ್ಯಾಳ. ರೊಕ್ಕಾ ತರೋ ಹೆಂಡತಿ ಇದ್ದರಂತೂ ಬಹಳ ಒಳ್ಳೆಯದು !

ಗಿರಿಜಾ : ಈಗ ಯಾವ ಕೆಲಸನೂ ಇಲ್ಲದಿದ್ದರ, ಸದ್ಯಕ್ಕ ತನ್ನ ಖರ್ಚಾದರೂ ಹ್ಯಾಂಗ ನಡೀಬೇಕು ?

ರೋಹಿಣಿ : ಅವರಪ್ಪ ಸ್ವಲ್ಪ ಪೊಲಾ ಮನಿ ಮಾಡಿ ಇಟ್ಟಾರಂತವ್ವ. ಅದರ ಉತ್ಪನ್ನದಿಂದ— ಹ್ಯಾಂಗೋ ಖರ್ಚು ನಡೀತದ ಅತು. ಸದ್ಯಕ್ಕಂತೂ ಏರ್ಚು ದೊಡ್ಡದಿಲ್ಲಾ.

ಗಿರಿಜಾ : (ಗಂಭೀರಧ್ವನಿಯಿಂದ) ಮುಂದ ಹ್ಯಾಂಗ ಮಾಡೋದು ರೋಹಿಣಿ ?

ರೋಹಿಣಿ : ನಾನೂ ಅದಽ ವಿಚಾರ ಮಾಡ್ತಿದ್ದೀನಿ. 'ಸದ್ಯಕ್ಕ ನನಗ ಮದವಿ ಆಗೋ ವಿಚಾರ ಇಲ್ಲಾ, ಅಂತ ನಮ್ಮ ಮಾಮಾನ ಕಡೆಯಿಂದ ಹೇಳಸೀನಿ. ಅದರ ಮತ್ತ ಪತ್ರ ಬರೀತಾನ.

ಗಿರಿಜಾ : ಒಳ್ಳೆ ಕೆಲಸ ! ನಾ ನಿನಗ ಇನ್ನೊಂದು ಯುಕ್ತಿ ಹೇಳತೀನಿ. ಅಂವಗ ಹೀಂಗ ಹೇಳಿ ಕಳಸು:— ನನ್ನ ಮದುವಿಯ ನಿಶ್ಚಯ ಆಗಿ ಒಂದು ವರ್ಷ ಆತು. ನನ್ನ ಮದುವಿ ಆಗವರು ಫಾರೆನ್ನಿಗೆ ಹೋಗ್ಯಾರ. ಬಂದ ಮ್ಯಾಲೆ ಸುದ್ದುನಿ— ಅಂತ !

ರೋಹಿಣಿ : ನೀ ಹೇಳದ್ದು ಇದಽ ಒಳ್ಳೇ ಯುಕ್ತಿ ಕಾಣತದ ! ಹಾಂಗ 'ಇಲ್ಲಾ' ಅಂದರ ಆ ಮನುಷ್ಯಗ ಒಪ್ಪಿಗಿ ಇಲ್ಲಾ. ಈ ಯುಕ್ತಿಯಾದರೂ ನಮ್ಮ ಕೆಲಸ ಮಾಡತದೇನೊ ನೋಡೋಣ !

ಗಿರಿಜಾ : ಅಲ್ಲ ರೋಹಿಣಿ, ಬ್ಯಾಡಾದ ಮ್ಯಾಲೆ ಹೀಂಗ ಕಾಡಿಸಿದರ ತ್ರಾಸದನವ್ವ. ಇದು ಸೈಯುಕ್ತಿಕ ಪ್ರಶ್ನೆ ಅದ. ಜುಲುಮಿ ಮಾಡಿದರ ಮದಿವಿ ಆಗತಾರ ?

ರೋಹಿಣಿ : ಅಂವಗ ಅವರಾಗ ವಿಶ್ವಾಸ ಇರಬೇಕು.'

ಗಿರಿಜಾ : 'ಅವಕ್ಕಽ ಮ್ಯಾಲಿಂದಮ್ಯಾಲೆ ಪತ್ರ ಬರೀತಾನ. ಏನಾದರೂ ಆಗಲಿ, ಒಮ್ಮೆ ಗಟ್ಟ್ಯಾಗಿ ಹೇಳಿಬಿಡು. ಇಲ್ಲದಿದ್ದರ ನಿನಗಽ ತ್ರಾಸ.

ರೋಹಿಣಿ : ನೀ ಹೇಳದ ಮಾತಽ ನಮ್ಮ ತಂದೀ ಕಡಿಯಿಂದ ಹೇಳಿಸಿ ಬಿಡಬೇಕು— ಅಂತ ಮಾಡೀನಿ.

ಗಿರಿಜಾ : ಅಷ್ಟು ಕೆಲಸ ಲಗು ಮಾಡು

ರೋಹಿಣಿ : ಉಪಾಯ ಸೂಚಿಸಿದ್ದಕ್ಕ ಥ್ಯಾಂಕ್ಸ್ !

ಗಿರಿಜಾ : ಅಪೇನು ದೊಡ್ಡದು....ಗೆಳತಿಯ ಸಲುವಾಗಿ ಅಷ್ಟು ಮಾಡೋದು ದೊಡ್ಡದಽ ? ಒಳ್ಳೇದು ಹೋಗಿ ಬರ್ತೀನಿ; ನಮಸ್ತೇ ! (ಗಿರಿಜಾ ಹೋಗುವಳು).

ರೋಹಿಣಿ : ನಮಸ್ತೆ !

(ರೋಹಿಣಿಯು ಅದೇ ಹಾಲಿನಲ್ಲಿಯ ಫೋಟೋಗಳನ್ನು ಸರಿಮಾಡುತ್ತ 'ಗಾಂಧೀ ತು ಆಜ ಹಿಂದಕೇ ಏಕ ಶಾಸ ಬನಗಯಾ'ಎಂಬ ಹಿಂದೀ ಗೀತವನ್ನು ಅನ್ನುತ್ತಿರುವಳು. ತರುಣನು ಆ ಹಾಲನ್ನು ಸಾವಕಾಶವಾಗಿ ಪ್ರವೇಶಿಸುವನು. ಹಾಡು ಮುಗಿಯುವ ವರೆಗೆ ಹಾಡನ್ನು ಕೇಳುತ್ತ ಸುಮ್ಮನೆ ನಿಂತಿರುವನು. ಹಾಡನ್ನು ಮುಗಿಸಿ ರೋಹಿಣಿಯು ತರುಣನತ್ತ ತಿರುಗುವಳು.)

ಜಗದೀಶ : ನಮಸ್ಕಾರ ಎಲ್ಲಾ ಸೆಟ್ಟಿಗವಸ್ಯ !

ರೋಹಿಣಿ : (ಪೋರೆಯನ್ನು ಗಂಟ್ಟಕ್ಕಿ) ಏನಾದರೂ ಕೆಲಸ ಇತ್ತೇನು?

ದೇಸಾಯಿ : ನಾನು ಬಂದದ್ದಕ್ಕ ಇದ್ದೂ ಸ್ವಾಗತ ಏನು? ಬಂದವರಿಂಗೆ 'ಬರ್ರಿ ಕೂಡ್ರಿ' ಅಂತ ಹೇಳೋದು ಬ್ಯಾಡ!

ರೋಹಿಣಿ : ಯಾರಾದರೂ ಇನ್ನೊಬ್ಬರ ಮನೀಗೆ ಬರಬೇಕಾದ್ರ ಕೆಲಸ ಇತ್ತಂದ್ರ ಬರತಾರ; ಬಂದ ಮ್ಯಾಲೆ ಕೂಡೋದು ಅದೂನ ಅದ.

ಜಗದೀಶ : ಇಸ್ಟು ಒರಟಾಗಿ ಮಾತಾಡಿದ್ರ ಬಂದವರ ಭಾಗ್ಯ.

ರೋಹಿಣಿ : (ಅಸ್ಟೇ ಉದಾಸೀನತೆಯಿಂದ) ಇರಬಹುದು.

ಜಗದೀಶ : ನಿಮ್ಮ ತಂದೆ ಮತ್ತು ಮಾವನೂ ಇವರು ಹೇಳಿದ ವಿಷಯ ವಿಚಾರ ಮಾಡೀರೇನು?

ರೋಹಿಣಿ : ಅದನ್ನ ನಾ ಪೂರಾ ವಿಚಾರ ಮಾಡೀನಿ; ಅದು ಸಾಧ್ಯ ಇಲ್ಲದ ಮಾತು.

(ಸ್ವಲ್ಪ ಗಾಬರಿಯಾಗಿ ಅದನ್ನ ತೋರಗೊಡದೆ) ನೀವು ಸರಿಯಾಗಿ ವಿಚಾರ ಮಾಡಿಲ್ಲ ...ಇನ್ನೊಮ್ಮೆ ವಿಚಾರ ಮಾಡಿ ನೋಡ್ರಿ.

ರೋಹಿಣಿ : ನಾನು ಎಲ್ಲಾ ದೃಷ್ಟಿಯಿಂದ ವಿಚಾರ ಮಾಡೀನಿ; ಸರಿಯಾಗೀನೇ ವಿಚಾರ ಮಾಡೀನಿ.

ದೇಸಾಯಿ : ನಿಮ್ಮ ತಂದೆ ಮತ್ತು ಮಾವನೂ ಅವರು ನಿಮ್ಮ ಹಿತದ ದೃಷ್ಟಿಯಿಂದೇನ ವಿಚಾರ ಮಾಡ್ಯಾರ!

ರೋಹಿಣಿ : ನೀವು ಹೇಳೋ ಮಾತು ಸ್ವಲ್ಪ ಮಟ್ಟಿಗೆ ಸರಿಯಾಗಿದ್ದರೂ, ನಾನೂ ವಿಚಾರ ಮಾಡಬೇಕಾಗ್ತದ. ವಿಚಾರ ಮಾಡದ ಒಪ್ಪಿಕೊಳ್ಳಲಿಕ್ಕೆ ನಾನು ಚಿಕ್ಕ ಹುಡುಗಿ ಅಲ್ಲ.

ಜಗದೀಶ : ನೀವು ಬೇಕಾದಷ್ಟು ವಿಚಾರ ಮಾಡ್ರಿ....ನಾ ಎಂದಿಗೂ 'ಬ್ಯಾಡ' ಅನ್ನೋದಿಲ್ಲ. ನಿಮಗ ಸ್ವಾತಂತ್ರ್ಯಾನೂ ಸಾಕಷ್ಟು ಸಿಗತಕದ. ನಿಮ್ಮ ವಿಚಾರಕ್ಕೂ ನಾನು ಮನ್ನಣೆ ಕೊಡ್ತೀನಿ.

ರೋಹಿಣಿ : ಇದು ನನ್ನ ಸ್ವಂತದ ವಿಚಾರ. ನೀವು ಇಂತಹ ವಿಷಯದಾಗ ಜುಲುಮಿ ಮಾಡಬಾರದು

ಜಗದೀಶ : ಇದು ಜುಲುಮಿಯ ಮಾತಲ್ಲ ನಿಮ್ಮ ಹಿತದ ದೃಷ್ಟಿಯಿಂದ ನಾ ಹೇಳತೀನಿ. ನನ್ನ ಮಾತು ಕಡೆಗಣಿಸಿ ನಿಮಗ ಸಿಕ್ಕ ಸಂದರ್ಭ ಕಳಕೊಳ್ಳಬಾರದು.

ರೋಹಿಣಿ: ಈ ಸಂಬಂಧ ಎಷ್ಟರಮಟ್ಟಿಗೆ ಯೋಗ್ಯ ಅನ್ನೋದನ್ನ ನಾನು ವಿಚಾರ ಮಾಡಿ ಮುಗಿಸೀನಿ ...ಇನ್ನು ಹೆಚ್ಚು ವಿಚಾರ ಮಾಡಲಿಕ್ಕೆ ಅವಕಾಶವೂ ಇಲ್ಲ—ಮನಸ್ಸೂ ಇಲ್ಲ!

ಜಗದೀಶ : ನಾನು ಈ ಬಗ್ಗೆ ವಿಚಾರ ಮಾಡ್ತ ಇದ್ದಾಗ, ಒಮ್ಮೆ ಒಳ್ಳೆ ಭವ್ಯ ಆಕೃತಿ ಇದ್ದ ಮನುಷ್ಯ ಕನಸಿನೊಳಗ ಬಂದು 'ಇಚ್ಛೆ ಪೂರ್ತಿಯಾಗತಕದ' ಅಂತ ಹೇಳ್ಯಾನ.

ರೋಹಿಣಿ : (ಮುಖದ ಮೇಲೆ ಯಾವ ಭಾವನೆಯನ್ನೂ ತೋರಗೊಡದೆ) ಇರಬಹುದು! ನನಗಂತೂ ಕನಸಿನೊಳಗ ಅಷ್ಟು ವಿಶ್ವಾಸ ಇಲ್ಲ.

ಜಗದೀಶ : ನನಗೂ ಸ್ವಲ್ಪ ಹೊಲ, ಎರಡು ಮನಿ ಅವ. ಆರ್ಥಿಕ ದೃಷ್ಟಿಯಿಂದ ಯಾವ ತ್ರಾಸನೂ ಇಲ್ಲ!

ರೋಹಿಣಿ : ಇದ್ದೀತು!

ಜಗದೀಶ : ನಮಜ್ಜನ ಕಾಲದಿಂದಲೂ ನಮ್ಮದು ಗಣ್ಯ ಮನೆತನ; ನಮ್ಮೂರಾಗ ನಮ್ಮನ್ನ ಎಲ್ಲರೂ ಗುರುತಿಸತಾರ!

ರೋಹಿಣಿ : ಅದನ್ನೆಲ್ಲ ನಾ ಕೇಳೀನಿ.

ಜಗದೀಶ : ನಿಮಗ ಅದರ ಬಗ್ಗೆ ನಿಶ್ಚಿತ ಮಾಹಿತಿ ತಗಿಯೋದು ಇದ್ದರ, ನಾಲ್ಕು ದಿನಾ ನಮ್ಮೂರಾಗ ಬಂದು ಉಳಿದು ಮಾಹಿತೀ ತಗೀಬಹುದು.

ರೋಹಿಣಿ : (ಎತ್ತರದ ಧ್ವನಿಯಲ್ಲಿ) ಅದೆಲ್ಲ ನಮಗ ಬೇಕಾಗಿಲ್ಲ ದೇಸಾಯರ! ಈಗ ಎಷ್ಟಜನೋ ಅಷ್ಟೇ ಸಾಕು.

ಜಗದೀಶ : ನೀವು ಅಷ್ಟೊಂದು ಬೇಸರ ಮಾಡಿಕೊಳ್ಳೋ ಕಾರಣ ಇಲ್ಲ. ನಿಮ್ಮ ಮನ್ಯಾಗಿನ ಹಿರೇರನ್ನೂ ಕರಕೊಂಡು ಬರಬಹುದು.

ರೋಹಿಣಿ : ಯಾರೂ ಬರೋದು ಸಾಧ್ಯ ಇಲ್ಲ. ನೀವು ಅದನ್ನ ಯಾವದನ್ನೂ ಮನಸ್ಸಿನೊಳಗ ಇಟ್ಟುಕೊಳ್ಳದ, ನಿಮ್ಮ ಸ್ವಂತದ ಬಗ್ಗೆ ವಿಚಾರ ಮಾಡಿಕೊಳ್ಳೋದು ಬಹಳ ಒಳ್ಳೇದು.

ಜಗದೀಶ : ನಾನು ನಿಮ್ಮ ಸಲುವಾಗಿಯೂ ಬಹಳ ವಿಚಾರ ಮಾಡೀನಿ!

ರೋಹಿಣಿ : ಆತುರದಿಂದ ಏನದು?

ಜಗದೀಶ : (ತಡವರಿಸುತ್ತ) ನಿಮ್ಮದೂ ದೊಡ್ಡ ಕುಟುಂಬ; ಪ್ರತಿಯೊಬ್ಬರಿಗೆ ಸಿಕ್ಕಂಗ ಹಣ ಖರ್ಚು ಮಾಡಿದರ ಹಣ ತರೋದಾದರೂ ಎಲ್ಲಿಂದ? ಇದೆಲ್ಲಾ ವಿಚಾರ ಮಾಡಿ, ನಾನು ನಿಮ್ಮ ಕೈಯಿಂದ ಬರದತ್ತೀನೀ ತೋಗೋಬಾರದು ಅಂತ ಮಾಡೀನಿ.

ರೋಹಿಣಿ : ಬಹಳ ಸಂತೋಷದ ಮಾತು, ಆದರ ನಾವು ಅದರ ವಿಚಾರನs ಬಿಟ್ಟಾಗ, ನಿಮ್ಮ ಮಾತು ನಮಗ ಅಸ್ಟು ಮುಖ್ಯತ್ವನ್ನು ಅನಿಸೂದಿಲ್ಲ.

ಜಗದೀಶ : ನಾ ಮತ್ತ ಮಾತಾಡೋದು ಬ್ಯಾಡ್ರ.

ರೋಹಿಣಿ : (ತನ್ನ ಹೊಡೆಯನ್ನು ಮುಗಿಸಿಕೊಳ್ಳುವ ರೀತಿಯಲ್ಲಿ) ನನಗಂತೂ ನಿಮ್ಮ ಮಾತು ಅವಶ್ಯ ಅನಿಸೂದಿಲ್ಲ.

ಜಗದೀಶ : ನಿಮಗ ಮದಿನೀ ಮಾಡಿಕೊಳ್ಳೋ ಇಚ್ಛಾ ಇಲ್ಲ ಅನ್ನೋದು ನಿಮ್ಮ ನಿರ್ಧಾರ?

(ಒಳಗಿನಿಂದ ರೋಹಿಣಿ, ಏ ರೋಹಿಣಿ, ಈ ಹುಡುಗನ್ನ ಸ್ವಲ್ಪ ಕರಕೋ! ಈ ಮಕ್ಕಳನ್ನ ಕರಕೊಂಡು ಕೆಲಸ ಮಾಡೋನಂದರ ಯಾವುದೂ ಆಗೋ ಹಾಂಗಿಲ್ಲ' ಎಂಬ ಮಾತು ಕೇಳಿಸುವುದು. ಜಗದೀಶ ಲಗು ಬಗೆಯಿಂದ ಹೊರಗೆ ತೋಗುವನು. ರೋಹಿಣಿಯು 'ಅವ್ವಾ ಬಂದೆ' ಎಂದು ನಿಂತಲ್ಲಿಯೇ ಉತ್ತರ ಕೊಡುವಳು. ಅಷ್ಟರಲ್ಲಿಯೇ ತೊಲಿಯುತ್ತಿದ್ದ ಕುಪ್ಪುಸವನ್ನು ತೆಗೆದುಕೊಂಡು ರೋಹಿಣಿಯ ತಾಯಿ ಅಲ್ಲಿಯೇ ಬರುವರು. ಕೆಳಗೆ ಜಾಸಿದ್ದ ರತ್ನಗಂಬಳಿಯ ಮೇಲೆ

ಕುಳಿತುಕೊಳ್ಳುವರು. ರೋಹಿಣಿಯೂ ಅಲ್ಲಿಯೇ ಇರುವ ಕುರ್ಚಿಯ ಮೇಲೆ ಕುಳಿತುಕೊಳ್ಳುವಳು.)

ಇಂದಿರಾಬಾಯಿ: ರೋಹಿಣಿ, ಮೊನ್ನೆ ಮೇಜು ತಕ್ಕೆದ ಮ್ಯಾಲೆ ಹಾಕೋದು ಅಂತ ಎಷ್ಟು ಅರಿವೀ ತಂದಿ! ಅದನ್ನ ಹೆಣೆಯೋದು ಇನ್ನೂ ಮುಗಿಸಲಿಲ್ಲ ಏನು?

ರೋಹಿಣಿ: ಅದೊಂದನ್ನ ಕೆಲಸ ಅವ್ವಾ ನನಗ? ಓದಲಿಕ್ಕಿಂತ ಎಷ್ಟು ಪುಸ್ತಕ ತಂದೀನಿ; ಅದರೊಳಗ ಡಿಸೈನ್ ಹಾಕೋ ಕೆಲಸಾನೂ ಮಾಡತೀನಿ.

ಇಂದಿರಾಬಾಯಿ: ನೋಡವ್ವಾ ಕೆಲಸ ಹಿಂದ ಉಳದರ ಹಾಂಗs ಉಳೀತsದ. ನೀ ಮುಗಿಸದಿದ್ದರ ಮತ್ತ ಅದನ್ನ ಮತ್ತ ಯಾರೂ ಮುಗಿಸೂದಿಲ್ಲ! ನನಗೇನು ಈಗಿನ ನಮೂನೆ ಹೆಣಿಕೆ ಜಾವುದೂ ಬರೂದಿಲ್ಲ.

ರೋಹಿಣಿ: 'ನೀ ಅದರ ಕಾಳಜೀ ಮಾಡಬ್ಯಾಡ ಅವ್ವಾ— ತಮ್ಮನ ಹುಟ್ಟಿದ ಹಬ್ಬಕ್ಕ ಅವನ್ನೆಲ್ಲಾ ಮುಗಿಸಿ ತಯಾರ ಮಾಡಿದೆ- ರಾತಿಲ್ಲೊ?'

ಇಂದಿರಾಬಾಯಿ: ಏನು ಮಾಡತೀಯೊ ನೋಡು— ಲಗು ಮುಗಿಸು ಅತು!

ರೋಹಿಣಿ: ಆ ಕೆಲಸ ಅಲ್ಲಿಗೇ ಬಿಟ್ಟು ಹದಿನೈದು ದಿವಸಾತು, ಇನ್ನೂ ಎಷ್ಟ ಉಳಿದದೋ ನೋಡತೀನಿ! (ಎಡಗಡೆಯಿಂದ ಒಳಗೆ ಹೋಗುವಳು. ಬಲಗಡೆಯಿಂದ ನಾಗೇಶರಾಯರ ಪ್ರವೇಶ. ಬಂದವರು ಅಲ್ಲಿಯೇ ಇದ್ದ ಪೇಪರನ್ನು ಓದುತ್ತ ಕುಳಿತುಕೊಳ್ಳುವರು)

ಇಂದಿರಾಬಾಯಿ: ಇದs ಓಣ್ಯಾಗ, ಕಡೀಮನಿಗೆ ಹೊಸದಾಗಿ ವರ್ಗ ಆಗಿ ಬಂದಾರಲ್ಲ, ಅವರ ಮನೀ ಸುದ್ದಿ ಕೇಳಿದಿರೇನು?

ನಾಗೇಶರಾಯ: (ಓದುವುದನ್ನು ನಿಲ್ಲಿಸಿ ಹೆಂಡತಿಯತ್ತ ನೋಡಿ) ಏನದು? ಹೊಸ ಸುದ್ದಿ! ನಾಯೀನು ಕೇಳಿಲ್ಲ!

ಇಂದಿರಾಬಾಯಿ: ಅವರ ಮಗಳ ಮದವಿ ಹದಿನೈದು ದಿನದಾಗ ಗೊತ್ತುಮಾಡಿ ಮಾಡಿದರಂತ.

ನಾಗೇಶರಾಯ: ಇದ್ದೀತು. ಈಗಿನ ಕಾಲದಾಗ ಕೈತುಂಬ ರೊಕ್ಕ ಇದ್ದರಾತು!

ಇಂದಿರಾಬಾಯಿ: ಮತ್ತೇನು, ರೊಕ್ಕ ಬಹಳ ಇಲ್ಲದವರು ಹುಡಿಗಿನ್ನ ಹಾಂಗs ಸುನ್ಯಾಗ ಇಟ್ಟುಕೊಂಡು ಕೂಡೋದ ಅದನ್ನs? ತಮ್ಮ ತಕ್ಕ ಹಾಂಗ ನೋಡಲಿಕ್ಕೇ ಬೇಕಲ್ಲಾ! ನೀವೂ ಎಲ್ಲಾರ ಪ್ರಯತ್ನ ಮಾಡಬಾರದs?

ನಾಗೇಶರಾಯ: ನೀ ಯಾವಾಗಲೂ ಇದರಾಗs ಇರು. ನನಗೇನು ಅವರ ವಿಚಾರ ಇಲ್ಲಂತೇನಿಲ್ಲ! ಎಲ್ಲಾ ರೀತಿಂದ ಜೆಲೋ ಇದ್ದಲ್ಲಿ ಐದಾರು ಸಾವಿರತನಕಾ ಬೇಡತಾರ—ಅತೀ ಕನಿಷ್ಠ ಪರಿಸ್ಥಿತಿ ಇದ್ದಲ್ಲಿ ಹ್ಯಾಂಗ ಕೊಡಲಿಕ್ಕೆ ಬರತsದ. ನಾನೂ ಅದs ಪ್ರಯತ್ನದಾಗ ಇದ್ದೀನಿ.

ಇಂದಿರಾಬಾಯಿ: ನೋಡರಿ ಏನ ಮಾಡತೀರ್ಯೊ— ಈಗೆಲ್ಲಾರೇ ಗೊತ್ತಾಗೋಹಾಂಗ ಅದs ಏನು?

ನಾಗೇಶರಾಯ: ಅಂತಾ ಚೆಲೋ ಸೈಕಿ ಸದ್ಯಕ್ಕ ಯಾವುದs ಇಲ್ಲ. ನಾ ಹಿಂದಕ್ಕ ಕೇಳಿದ ದೇಸಾಯರ ವರಾನs ಮತ್ತ ಹೇಳಿ ಕಳಿಸ್ಯಾನ.

ಇಂದಿರಾಬಾಯಿ: (ಹೊಲಿಯುವುದನ್ನು ನಿಲ್ಲಿಸಿ) ಯಾರ ಆ ದೇಸಾಯರ ವರಾನs? ಯಾಕ ನೀನs ನಪಾಸು ಮಾಡೀರೇನ ಅವನ್ನ?

ನಾಗೇಶರಾಯ: ಏನ ನಪಾಸೊ ಏನು ಗಿಪಾಸೊ— ಸಾಗದಾನ ಇದ್ದಾನs ಅತು. ಈಗಿನ ಹುಡಿಗಿಯರು ಪಾಸ ಮಾಡತಾರೊ ಅವನ್ನ?

ಇಂದಿರಾಬಾಯಿ: ನೀವನ್ನೋದೂ ಖರೇನs. ನಮ್ಮ ಕಾಲ ಮಾತು ಬ್ಯಾರೆ ಇತ್ತು. ಹದಿನಾಲ್ಕು ವಯಸ್ಸು ಅಂದರ ಬಹಳ ಆತು. ಎಲ್ಲೋ ಒಬ್ಬ ನಾಕೈದು ಯೆತ್ತಾ ಕಲಿತಿದ್ದಿನಿ. ನನಗ ಇಂತಾದೆಲ್ಲ ತಿಳೀತಿದ್ದಿಲ್ಲಾ.

ನಾಗೇಶರಾಯ: ನಿನಗ ಏನು ತಿಳಿತಿತ್ತು? ತವ್ವಾ ಅಪ್ಪ ಹೇಳಿದ್ದು ಖರೆ ನಿನಗ— ಹೌದಲ್ಲೊ?

ಇಂದಿರಾಬಾಯಿ: ನಾನಂತೂ ಅಷ್ಟೇ ಮಾಡೀನಿ. ಇನ್ನ ರೋಹಿಣೀ ಸಲುವಾಗಿ ಏನು ವಿಚಾರ ಮಾಡ್ತೀರಿ?

ನಾಗೇಶರಾಯ: ನಾ ವಿಚಾರದಾಗ ಇದ್ದೀನಿ. ಆದರ ವರಾ ಮಾತ್ರ ಪಾಸ ಆಗಲಿಲ್ಲ. ನಾನು ಯಾರದೋ ಮಾತು ತೆ ಒಮ್ಮೆ ತಂದಿದ್ದೆ. ಅದಕ್ಕ ಅಂವ ಪತ್ರ ಬರದಾನ.

ಇಂದಿರಾಬಾಯಿ: ನೀನೇನಂತ ಬರದೀರಿ?

ನಾಗೇಶರಾಯ: ನಾ ಏನೂ ಬರದಿಲ್ಲಾ. ಹಂಗೂ ಮಾತ ನನಗೂ ಗುರುತಿದ್ದ ಮಂದೀ ಕೈಯಿಂದ ಹೇಳಿಸೀನಿ: ಇನ್ನ ಪ ಬರಿಯೋದು ಬ್ಯಾಡಾಂತ. ಈ ಮಾತು ಮಾತ್ರ ಸಾಧ್ಯವಿಲ್ಲಂತ!

ಇಂದಿರಾಬಾಯಿ: ನಿನ್ನುದೇನು ಮನಸ್ಸೊ, ಆಕೀದೇನು ಮನಸ್ಸು ನನಗ ಯಾವುದೂ ತಿಳಿಯುದಿಲ್ಲಾ! ಎಂಥ ಜೆಲೆ ಮನಿ ಅದ ಜಾ ಹೊಲಾಮನೀನೂ ಅದ. ಇನ್ನೊಮ್ಮೆ ವಿಚಾರ ಮಾಡಿ ನೋ ಬಾರದs ನೀವೂ!

ನಾಗೇಶರಾಯ: ಈಗ ಎಲ್ಲಾ ವಿಚಾರಾನೂ ಮುಗಿದs ಎರಡುಮನಿ, ಒಂದು ತುಂಡು ಹೊಲಾ ಇಷ್ಟ ಹಿರೇರ ಆಸ್ತಿ ಇ ಗೊಂಡು ನಡೀತದs ಜೀವನ ಈಗಿನ ಕಾಲಕ್ಕ? ಅತೀ ದರಿದ್ರ; ಯಾ ಕೆಲಸಾನೂ ಮಾಡೋದು ಹೊಂದೂ ಹಾಂಗಿಲ್ಲಾ.

ಇಂದಿರಾಬಾಯಿ: ಇಷ್ಟೆಲ್ಲಾ ಕಲಿತ ಮ್ಯಾಲೆ, ಹೆಣ್ಣುಮಕ್ಕಳ ಸುದ್ದಾ ಪರಾ ನಪಾಸು ಮಾಡೇ ಮಾಡತಾರ. ನನಗೆಲ್ಲಾ ಇ ಸಚಿತ್ರ ಅನಿಸತsದ. ನಾ ನಿನಗ ಎಷ್ಟು ಹೇಳಿದೆ, ಹೆಣ್ಣುಮಕ್ಕಳ ಕಲಿತು ಏನು ಮಾಡೋದು? ಲಗ್ನ ಮಾಡಿಕೊಂಡು ತಮ್ಮ ಗೈನ ತಾವು ತಕ್ಕೊಂಬೋದು! ಈಗ ನಾ ಏನು ಬಹಾಳ ಕಲ್ತೀನೆ? ನಿನ್ನ ದೊಡ್ಡ ಕಲಸ ಆದ ಮ್ಯಾಲೆ ನನ್ನ ತವರಮನೀ ಮಂದಿಗೆಲ್ಲಾ ಎಷ್ಟ ಸಂತೋಷ ಆಗೇದ?

ನಾಗೇಶರಾಯ : ನಿನ್ನ ಮಾತಿನಮ್ಯಾಲ ಹೇಳಬೇಕಾದರ ನಿನ್ನ, ದೈವ ನೀನು ತಕ್ಕೊಂಡೀದಿ ಅತು. ಈಗಿನ ಕಾಲದ ಹುಡಿಗಿಯರಿಗೆ ಹೆಚ್ಚು ಶಿಕ್ಷಣ ಇರತದ, ಅನರ ವಿಚಾರದ ರೀತಿ ನಿನ್ನಕಿಂತ ಬ್ಯಾರಿ ಇರತ್ತದ. ಇದನ್ನ ನೀ ಮನ್ಯಾಗೂ ನೋದತೀ, ಹೌದಲ್ಲೊ ?

ಇಂದಿರಾಬಾಯಿ : ನನಗಂತೂ ಯಾವ ವಿಚಾರಾನೂ ಹೊಳಿಯೂದಿಲ್ಲಾ; ನಮಗ ಓದು ಬರಹನೂ ಅಷ್ಟಕಷ್ಟ. ಅಡಿಗಿಮನಿ ಕೆಲಸ ಇಷ್ಟು ನಮ್ಮವ್ವ ಕಲಿಸಿದ್ದಳು, ಅಷ್ಟು ಮಾಡಿಕೊಂಡಿದ್ದೀನಿ ಅತು.

ನಾಗೇಶರಾಯ: ಈಗ ಅಂತಸ್ತು ನಿಂದು ಏರತು ಇನ್ನ ಅಡಿಗಿಯವರನ್ನ ಇಟ್ಟು ನೋಲ್ಡಿಚಾರಣಿ ಮಾಡಕೋತ ಇದ್ದರೂ ಸಣೀತದ. ನಂದೂ ಆಫೀಸಿನ ಕೆಲಸ ಅಷ್ಟು ಅದ. ಮನ್ಯಾಗ ಮಾಡಿ ಮುಗಿಸಬೇಕಾಗೇದ. (ಒಳಗೆ ಹೋಗಲು ಏಳುವರು. ಅಷ್ಟರಲ್ಲಿ ಒಳಗಿನಿಂದ ಮಾತು ಕೇಳಿಸುವುದು.—'ಅವ್ವಾ ಏ ಅಜ್ಜಾ ಹಾಲಿನಾಕೀದು ಲಿಕ್ಕಾ ಮಾಡಿಕೊಡಬೇಕಂತ ಬಾ' ಇಂದಿರಾಬಾಯಿ ನಾಗೇಶರಾಯ ಒಳಗೆ ಹೋಗುವರು.)

(ನಾಗೇಶರಾಯರ ಮನೆಯ ಮುಂದಿನ ರಸ್ತೆಯ ಮೇಲೆ ಜೆ.ಆರ್. ದೇಸಾಯಿ ಮತ್ತು ಅವನ ಗೆಳೆಯ ಬರುವರು. ೪, ೧೦ ಹೆಜ್ಜೆ ನಡೆದು ನಿಲ್ಲುವರು.)

ದೇಶಪಾಂಡೆ : ಯಾಕೋ ದೇಸಾಯಿ ಬಹಾಳ ಚಿಂತೆಯೊಳಗಿದ್ದಂಗ ಕಾಣಸ್ತೀದಿ.

ಜಗದೀಶ : (ದಿರ್ಘವಾಗಿ ಉಸಿರು ಬಿಟ್ಟು) ಮೊನ್ನಿನದ ಸಂಗತಿ; ಯಾವದಾದರೊಂದು ನಿರ್ಣಯಕ್ಕ ಬರಬೇಕಂತ ಸೊನ್ನೆ ರೋಹಿಣಿನ್ನ ಭೆಟ್ಟಿಯಾದೆ. ಅಬಾ! ಹೆಚ್ಚಿನ ಹುಡಿಗಿ.

ದೇಶಪಾಂಡೆ : ಯಾಕ, ಏನಂದಳು? ಪರಾನೂ ಶಾಪೊ ?

ಜಗದೀಶ : ಅಲ್ಲಾ ದೊರದಿಂದ ನಯವಾಗಿ ನಾಜೂಕಾಗಿ ಹೂವಿನಂತೆ ಕಾಣೂ ಆ ರೋಹಿಣಿಯ ಮಾತಾನದರೂ ಎಷ್ಟು ಒರಟು?

ದೇಶಪಾಂಡೆ : ಈಗ ಅಕಿ ಅನ್ನೋದಾದರೂ ನಿನು ?

ಜ. ದೇಸಾಯಿ : ನಾ ಹೇಳಿದ ನಿರ್ಧಾರ ತಲಿಯೊಳಗ ಹಾಕಿ ಕೊಳ್ಳಲಿಕ್ಕೆ ಸಿದ್ಧ ಇಲ್ಲಾ ನಾ ಏನ ಹೇಳಲಿ ??

ದೇಶಪಾಂಡೆ—ಅಕಿ ತಾಯಿ ತಂದಿನ್ನ ಭೆಟ್ಟಿಯಾಗಬೇಕಿತ್ತು ?

ಜ. ದೇಸಾಯಿ : ಅವರ ಮಾತಾದರೂ ಅಕಿ ಎಲ್ಲಿ ಕೇಳತಾಳ ? ಬೇವರು ಅವರ ಮನಸಿನೊಳಗಿನ ಎಲ್ಲರ ಬುದ್ಧಿನೂ ಈಕೀಗೆ ಕೊಟ್ಟಾಂಗ ಕಾಣಿಸ್ತದ.

ದೇಶಪಾಂಡೆ : ಇಷ್ಟು ಒಟಿತನ ಇದ್ದ ಮ್ಯಾಲೆ ಸುಮ್ಮನ ಅಕೀ ಹಾದೀ ಬಿಡು, ಮತ್ತ ನಿನ್ನ ಮದಿವಿ ಆಗಲಿಕ್ಕಿಲ್ಲೇನು ?

ಜ. ದೇಸಾಯಿ : ಇಲ್ಲ ! ವಿಚಾರ ಇಲ್ಲದ ಅಕಿ ಇದನೆಲ್ಲಾ ಮಾತಾಡ್ಯಾಳ; ನಾ ಮನಸಿನೊಳಗ ಇದನ್ನ ಹಿಡಿಯದೆ ಮತ್ತ ಅಕಿನ್ನ ಭೆಟ್ಟಿಯಾಗಿ ಏನನ್ನೋದು ವಿಚಾರ ಮಾಡತೀನಿ.

ದೇಶಪಾಂಡೆ : ಅಕೆಯ ತಂದಿ ಭೆಟ್ಟಿಯಾಗಿ, ನಿನಗ ಅಷಮಾನ ಆಗೋ ಮಾತು ಆಡಿದರ?

ಜ. ದೇಸಾಯಿ : ಅವರು ಭೆಟ್ಟಿಯಾದರ, ಇದರ ಸುದ್ದೀನೂ ಎತ್ತೂದಿಲ್ಲ. 'ನಿಮ್ಮ ಆಫೀಸಿನ್ಯಾಗ ನನಗ ಯೋಗ್ಯ ಆಗೋ ಕೆಲಸ ಯಾವದಾದರೂ ಅದ ಏನು' ಅಂತ ಕೇಳತೀನಿ.

ದೇಶಪಾಂಡೆ: ನಿ ಏನು ಸೋಲೋ ಪೈಕಿ ಅಲ್ಲಪ್ಪಾ ರೋಹಿಣಿಯ ತಾಯಿ ಹೊರಗ ಬಂದು ನೀನು ಬಂದ ಕೆಲಸ ಕೇಳಿದರ ?

ಜ. ದೇಸಾಯಿ : ರಾಯರನ್ನ ಭೆಟ್ಟಿಯಾಗೋದಿತ್ತು. ಅವರ ಕಡೇನ ನನ್ನ ಕೆಲಸ ಇತ್ತು—ಅಂತ ಹೇಳತೀನಿ. ಇಂಥಾ ಪ್ರಸಂಗಾವಧಾನದ ಉತ್ತರ ನಮ್ಮ ಕಡೆ ಕಡಿಮಿ ಇಲ್ಲ.

ದೇಶಪಾಂಡೆ : ನೀನು ಅಜಜಯ ಹೊಂದಿ ಸುಮ್ಮನ ಕೂಡ್ಯವ ಅಲ್ಲ. ಇಬ್ಬರೂ ಭೆಟ್ಟಿಯಾಗದ ರೋಹಿಣಿನ ಮತ್ತ ಭೆಟ್ಟಿಯಾದರೆ—

ಜ. ದೇಸಾಯಿ : ನನ್ನ ಪೊಟ್ಟಿ ತುಪ್ಪದಾಗ ಬಿದ್ದಾಂಗಾತು. ಇನ್ನೊವ್ಮೆ ನನ್ನ ದೈವದ ಪರೀಕ್ಷಾ ಮಾಡಿ ನೋಡತೀನಿ.

ದೇಶಪಾಂಡೆ : ಈ ಸಲ ನಿನಗ ಅವಶ್ಯ ಜಯ ಸಿಗಲಿ.

ದೇಸಾಯಿ : ಕೆಲಸ ಆದರ ನಿನಗ ಸೂದಲ ಸೇಫ ಕೊಡತೀನಿ.

(ದೇಶಪಾಂಡೆ ನಗುನಗುತ್ತ ಹೊರಟು ಹೋಗುವನು.)

ಜಗದೀಶ : ಒಳಗೆ ಹೋಗಿ ಸೋಜಿನ ಮೇಲೆ ಬಡಿದು ಸಪ್ಪಳ ಮಾಡುವನು. ರೋಹಿಣಿ ಹೊರಗೆ ಬರುವಳು.)

ಜಗದೀಶ : ನಮಸ್ಕಾರ.

ರೋಹಿಣಿ : (ಮುಖವನ್ನು ನೋಡಿ) ಅಂ.... ತಡವರಿಸುವಳು.

ಜಗದೀಶ ; ನಿಮ್ಮನ್ನ ಇನ್ನೊಮ್ಮೆ- ಭೆಟ್ಟಿಯಾಗಿ ಮಾತಾಡಿ ಹೋಗಬೇಕಂತ ಬಂದೆ. (ಮಾತನಾಡುತ್ತಲೆ ಅಲ್ಲಿದ್ದ ಕುರ್ಚಿಯ ಮೇಲೆ ಕೂಡ್ರುವನು. ರೋಹಿಣಿಯು ಮತ್ತೊಂದು ಕುರ್ಚಿಯ ಮೇಲೆ ಕೂಡ್ರುವಳು.)

ರೋಹಿಣಿ : (ಗಂಭೀರವಾಗಿ) ಮತ್ತೇನಾದರೂ ಕೆಲಸ ಇತ್ತ ?

ಜಗದೀಶ : (ಮುಗುಳು ನಗುತ್ತ) ಮತ್ತೇನು ಕೆಲಸ ? ನಿನಗ ಗೊತ್ತು ಅದಅಲ್ಲಾ.

ರೋಹಿಣಿ : ನನಗ ಗೊತ್ತಿದ್ದದ್ದನ್ನ ನಿನ್ನ ಕೆಲಸ ಯಾವೂದೂ ಇಲ್ಲಲ್ಲಾ.

ಜಗದೀಶ : (ಗಂಭೀರವಾಗಿ) ಆದ್ಯಾಕ ನಿನಗ ಗೊತ್ತದ ! ಬೇಕಂತ ಕೇಳತೀರಿ.

ರೋಹಿಣಿ : (ಯಾವ ಭಾವನೆಯನ್ನೂ ತೋರಿಸದೆ) ನನಗಂತೂ ಗೊತ್ತಿಲ್ಲಾ.

ಜಗದೀಶ : ನಿಮಗೆ ನಿಶ್ಚಿತವಾಗಿ ಗೊತ್ತದ. ಈ ಮೊದಲು ಬಂದಾಗ ನಾನು ನಿಮ್ಮೆದುರಿಗೆ ಹೇಳಿದ್ದೆ.

ರೋಹಿಣಿ : ನನಗಂತೂ ನೆನಪಿಲ್ಲ.

ಜಗದೀಶ : ಅದಕ್ಕ ನೆನಪು ಕೊಡಲಿಕ್ಕಂತ್ನ ನಾ ಬಂದೆ. ಮದುವೆಯ ವಿಚಾರ ನೀವು ಮಾಡಲಿಕ್ಕೇ ಬೇಕು.

ರೋಹಿಣಿ : (ಬೇಸರದ ಮುಖಭಾವದಿಂದ) ಅದನ್ನ ಹೋದ ಸಾರೆ ನಾನು ವಿಚಾರ ಮಾಡಿ ತಿಳಿಸೀನಿ. ಇನ್ನ ಅದರ ಅವಶ್ಯಕತೆ ನನಗ ಇಲ್ಲಾ.

ಜಗದೀಶ : ನೀವು ವಿಚಾರ ಮಾಡಲಿಕ್ಕೇ ಬೇಕು. ಇಂಥ ಸಂಧರ್ಭ ನಿನಗ ಇನ್ನೊಮ್ಮೆ ಸಿಗಲಾರದು.

ರೋಹಿಣಿ : (ನಿಶ್ಚಯದ ಧ್ವನಿಯಲ್ಲಿ) ನಾನು ಪೂರಾ ವಿಚಾರ ಮಾಡಿ ನಿಮಗ ತಿಳಿಸೀನಿ. ಇನ್ನ ತಾವು ಇದರ ವಿಷಯ ನನಗೆ ಹೇಳೋದು ಅವಶ್ಯ ಇಲ್ಲಾ.

ಜಗದೀಶ: ಮದುವೆಯಾದಪಡೆ ಸ್ವಾತಂತ್ರ್ಯ ಉಳಿಯಲಾರದೆಂಬ ಅಂಜಿಕೆಯನ್ನೂ ನೀವು ಇಟ್ಟುಕೊಳ್ಳಬಾರದು. ನನ್ನ ಆಸ್ತಿ, ಹಣ, ಬೆಳ್ಳಿ ಬಂಗಾರ ಎಲ್ಲಾ ನಿಮ್ಮ ಕೈಯಾಗ ಉಳೀತದ.

ರೋಹಿಣಿ : ನೀವು ಹೇಳಿದ ಈ ಸಂಗತಿ ನಾ ಮೊದಲs ತಿಳಕೊಂಡು ಉತ್ತರಾ ಕೊಟ್ಟೀನಿ.

ಜಗದೀಶ : (ಸಾವಕಾಶವಾಗಿ) ನಿಮ್ಮ ಈ ಉತ್ತರದಿಂದ ನನಗ ಬಹಾಳ ನಿರಾಶೆ ಆಗತsದ. ನಿನಗೆ ನಾ ಹೇಳೋದೆಲ್ಲಾ ಹೇಳೀನಿ.ಇನ್ನ ಇದಂ ವಿಷಯು ನಿಮ್ಮ ತಂದೆಗೂ ಹೇಳಬೇಕಂದ್ರ ನಾ ಭೆಟ್ಟಿಯಾಗಿ ಹೇಳತೀನಿ.

ರೋಹಿಣಿ : ಏನೂ ಕಾರಣ ಇಲ್ಲಾ; ಈಗ ನಾವೆಲ್ಲಾ ವಿಚಾರ ಮಾಡಿ ಈ ನಿರ್ಧಾರಕ್ಕೆ ಬಂದೀವಿ. .... ಇದು ಸಾಧ್ಯ ಇಲ್ಲಾಂತ !

(ಜಗದೀಶ ಒನ್ಮೆ ಮುಖ ಸಣ್ಣಾದು ಮಾಡುವನು. ಮುಖದಲ್ಲಿ ನಿರಾಶೆ ಮೂಡುವದು.ನೆಲ್ಲನೆ ಕಿಸೆಯಲ್ಲಿಯ ಸಣ್ಣ ಪೆಟ್ಟಿಗೆಯೊಂದನ್ನು ತೆಗೆಯುವನು. ಅದನ್ನು ಮೇಜಿನ ಮೇಲಿಟ್ಟು ತಾನು ಸುಮ್ಮನೆ ನಿಲ್ಲುವನು.)

ರೋಹಿಣಿ : (ಗಾಬರಿಯಾದರೂ ಅದನ್ನು ತೋರಗೊಡದೆ ಧೈರ್ಯದಿಂದ) ' ಅಂ ಏನಿದು ? ಹೊಡೀಲಿಕ್ಕೆ ಏಸ್ತೂಲ ಇಟ್ಟಿಲ್ಲ ಹೌದಲ್ಲೋ ?

ಜಗದೀಶ : ನಾನು ಪ್ರೇಮವೀರ; ಏಸ್ತೂಲ ಹಿಡಿಯಲಿಕ್ಕೆ ನನಗೆಲ್ಲಿಯ ಧೈರ್ಯ? ಲೆಕ್ಕಣಿಕೆ ಹಿಡಿದು ಆಗೀಗ ಮದುವೆಯ ಬೇಡಿಕೆಗಳ ಪತ್ರಗಳನ್ನು ಬರೆದಿರುವೆ. ಆದರೆ .... ಮದುವಣಿಗನಾಗುವ ಸುಯೋಗ ಇನ್ನೂ ಬರಲಿಲ್ಲ.

ರೋಹಿಣಿ: ಅಂದರ ಇಂಥ ಪತ್ರ ಬರೆಯೋ ಕೆಲಸ ನೀವು ಬಹಾಳ ಮಾಡ್ತಾ ಇದ್ದಿರೀ !

ಜಗದೀಶ : (ದೀರ್ಘವಾದ ಉಸಿರು ಬಿಟ್ಟು ಅದನ್ನ ಹೇಳೋದ ಕಠಿಣ. ಹೆಣ್ಣು ಮಕ್ಕಳಿಗೆ ಇಷ್ಟು ಗರ್ವ ಇರೋದು ನೋಡಿ ನನಗ ಆಶ್ಚರ್ಯ ಅನಿಸಿತು. ಕೃಷ್ಣನ ಬಣ್ಣ ಕಪ್ಪಿರಲಿಲ್ಲs?ಅದಕ್ಕ ಫೆನಶ್ಯಾಮ, ಅಂತ ಅವನಿಗೆ ಹೆಸರು. ರಾಧಾ ಅವನನ್ನ ಎಷ್ಟೊಂದು ಪ್ರೀತಿಸುತ್ತಿದ್ದಳು (ಸುಮ್ಮನಾಗುವನು).

ರೋಹಿಣಿ : ಕೃಷ್ಣನ ಕಪ್ಪು ಬಣ್ಣದಿಂದ ನಿನುಗೇನು ತ್ರಾಸ ?

ಜಗದೀಶ : ಹಾಗೆಯೇ ಇರುವ ನನ್ನ ಕಪ್ಪು ಬಣ್ಣ ಈಗಿನ ಹುಡಿಗಿಯರಿಗೆ ಒಪ್ಪುಗೆ ಆಗಲೊಲ್ಲದು !

ರೋಹಿಣಿ : ಇರಬಹುದು.

ಜಗದೀಶ : ಇಂಥ ಹುಡಿಗಿಯರೆದುರಿಗೆ ನೂತಾಡಿ ಏನು ಪ್ರಯೋಜನ ? ಅದಕ್ಕಾಗಿಯೇ ಎಲ್ಲಾರೂ ತಪ್ಪು ಅಸಮ್ಮತಿ ತೋರಿಸ್ಯಾರ.'

ರೋಹಿಣಿ : ನೀವು ಮಾತ್ರ ಪ್ರಯತ್ನ ಮಾಡಬಹುದು, ಬೇರೆ ಕಡೆಗ.

ಜಗದೀಶ : ಹಾಂಗs ಮಾಡತೀನಿ; (ಏನೋ ನೆನಪು ಮಾಡಿಕೊಂಡಂತೆ) ಆಗಳೆ ನೀವು ಕೇಳಿದರೆಲ್ಲಾ-ಈ ಪೆಟ್ಟಿಗ್ಯಾಗ ಏನದಂತ ? ನನ್ನ ನಿರಾಕರಿಸಿದ ಹುಡಿಗಿಯರ ಹೆಸರೆಲ್ಲಾ ಬರದು ಈ- ಪೆಟ್ಟಿಗ್ಯಾಗ ಇಟ್ಟೀನಿ; ಅದರೊಳಗ ಒಂದೊಂದ ಹೆಸರು ಕಾಟ ಹಾಕತಾ ಬಂದೀನಿ. ಈಗ ನಿಮ್ಮ ಸರತಿ; ನಿಮ್ಮ ಕೈಯಿಂದ ನಿಮ್ಮ ಹೆಸರು ಕಾಟು ಹಾಕಿರಿ.

(ಸವಿತಾ ಒಳಗಿನಿಂದ ಓಡಿಬರುವಳು.ಪೆಟ್ಟಿಗೆಯ ಕಡೆಗೆ ನೋಡಿ)

ಸವಿತಾ : ಅಕ್ಕಾ, ಏನದ ಆ ಪೆಟ್ಟಿಗ್ಯಾಗ?

ರೋಹಿಣಿ : ಏನರ ಇರಲಿ; ನೀ ಯಾಕ ಅಷ್ಟ ಅವಸರಲೆ ಓಡಿಕೋತ ಬಂದಿ ?

ಸವಿತಾ : ನಿನ್ನ ಗೆಳತೇರು ಯಾರೋ ಬಂದಾರ; ಹತ್ತಲದಾಗ ಭಾವಿಕಟ್ಟಿ ಹತ್ತರ ನಿಂತಾರ.

ರೋಹಿಣಿ : ಹೆಸರು ಕೇಳಿಕೊಳ್ಳಬೇಕಾಗಿತ್ತು.

ಸವಿತಾ : ಅವರು ಹೇಳಲಿಲ್ಲ; ನಿನ್ನ ಕರಿ ಅಂತಾರ.

ರೋಹಿಣಿ : ಬರ್ತೀನಿ ನಡಿ (ಸವಿತಾ ಹೋಗುವಳು) ನಿಮ್ಮ ಇಚ್ಛೆಯಂತೆ ನನ್ನ ಹೆಸರು ಕಾಟು ಹಾಕ್ತೀನಿ. ಇನ್ನ ಅದರ ವಿಚಾರ ಬಿಡ್ರಿ.

ಜಗದೀಶ : ನನಗ ಬಹಳ ಹುಡಿಗಿಯರು ಇದs ರೀತಿ ಹೇಳ್ಯಾಗ ನೀವೂ ಇದs ನೂತ ಹೇಳೀರಿ. ಬಹಳ ಉಪಕಾರ ಆತು; ನಾ ಇನ್ನ ಹೋಗ್ತೀನಿ.

ರೋಹಿಣಿ : ನಮಸ್ಕಾರ (ಎದ್ದು ಒಳಗೆ ಹೋಗುವಳು).

[ಜಗದೀಶನು ಮನೆಯ ಹೊರಗೆ ಬರುವನು. ಮುಖದ ಮೇಲೆಲ್ಲ ನಿರಾಶೆಮೂಡಿದೆ. ಆದರಿಂದಲೇ ದಿಕ್ಕು ತಪ್ಪಿದಂತಾಗಿದ್ದಾನೆ. (ತನ್ನಷ್ಟಕ್ಕೆ) 'ಎಷ್ಟು ಸೊಕ್ಕು ಇವಳಿಗೆ' ತಲೆಯನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಕೆಳಗೆ ಕೂಡ್ರುವನು. ಒಂದೆರಡು ಕ್ಷಣಗಳಾದ ಮೇಲೆ ಮತ್ತೆ ಎದ್ದು ನಿಲ್ಲುವನು. ಎಲ್ಲಿಲ್ಲದ ಧೈರ್ಯವನ್ನು ತಂದುಕೊಂಡು—]

ಬಿಡಲಿ, ಇವಳು ಬಿಟ್ಟರೆ ನನಗೇನಾಗಬೇಕಾಗಿದೆ. ಆ ಬೆಳ್ಳಿ ಮುಖ, ಬಿ. ಎ. ಡಿಗ್ರಿ, ಎರಡಕ್ಕ ಮೆಚ್ಚಿ ಮದುವೆ ಆದ್ರು, ಲಗೂನ ಗಂಡನ ಕೈಗೆ ಊದುಗೊಳವಿ ಸೌಟು ಕೊಟ್ಟು ಕೂಡಸ್ತಾರ. ಇವರಿಗೆಲ್ಲಾ ನನ್ನ ಯೋಗ್ಯತಾ ತೋರಿಸೇ ಬಿಡತೀನಿ. ' ಕರೀ ಕಸ್ತೂರಿ ವಡಾಕ ಸೇರು ' ಅನ್ನೋದನ್ನ ಇವರಿಗೆಲ್ಲಾ ತೋರಿಸೇ ಕೊಡ್ತೀನಿ. (ವಿಷಾದದ ನಗೆಯನ್ನು ನಕ್ಕು) ನನ್ನನ್ನು ನಿಂದಿಸುವವರಿಗೆ ಯಾವ ಅಗ್ರಹಾ ಇಲ್ಲಾ. ಇವರೆಲ್ಲಾ ಹೀಂಗ ಮದುವೆ ಇಲ್ಲದ ಕೂಡಲಿ— ನಾನು ನನ್ನನ್ನು ಸೆಟ್ಟಿ ಮದುವೆಯಾಗುವಾಕಿನ್ನ ಹುಡುಕಿ ಮದುವೆಯಾಗ್ತೀನಿ. ಈ ಹುಡಿಗೇರೆಲ್ಲಾ ತಾವಂದ್ರ ಏನಂತ ತಿಳಕೊಂಡಾರ? ಇವರ್ಟತ್ತ'ಗುಣಕ್ಕಿಂತ ನಾಟಕಾನ ಹೆಚ್ಚು. ಹಳೇದಕ್ಕ ಅಂಟಕೊಳ್ಳೋ-ಹಾಗಿಲ್ಲಾ, ಇನ್ನು ಹೊಸ ಯೋಗ್ಯತೆ ಬಂದಿಲ್ಲಾ ಅನ್ನೋ ರೀತಿ ಇವರದು. ಹಾಂ (ಉಸಿರನ್ನೆಳೆದು ,ಸಂಸ್ಥಾನ ತೋವರೂ ಸಂಸ್ಥಾನಿಕರು ನೀವಿ ಮಾತ್ರ ಇವರೊಳಗ ಉಳಿದದ (ಒಳ್ಳೇ ಉತ್ಸಾಹವನ್ನು ತಂದುಕೊಂಡು) ನನ್ನ ಪ್ರಯತ್ನಕ್ಕ ಯಶಸ್ಸು ಸಿಗಲಿಕ್ಕೆ ಬೇಕು. ದೇವರಿಗೆ ನನ್ನ ಮೇಲೆ ಕರುಣೆ ಇದೆ. (ಎನ್ನುವಾಗ ಸರದೆ ಬೀಳುವುದು) ❋

ಕಾಳಿದಾಸನ ಸುಭಾಷಿತಗಳು

(ಶಾಕುಂತಲ ನಾಟಕ)

ಡಿ. ಎ. ಶಂಕರ ಕೆದಿಲಾಯ ಎಂ. ಎ., ಬಿ. ಟಿ. ಮದ್ರಾಸ ವಿ. ವಿ. ನಿಲಯ

'ಸುಭಾಷಿತ' ಎಂದರೆ, ಜೀವನದ ಸತ್ಯಾನುಭವವನ್ನು ಹದುಗಿಸಿಕೊಂಡ ಸವಿನುಡಿಗಳು. ನಮ್ಮ ಮಹಾಕವಿಗಳ ಕೃತಿಗಳಲ್ಲಿ, ಇಂತಹ ಸವಿನುಡಿಯ ಮುತ್ತು-ರತ್ನಗಳು ಅಲ್ಲಲ್ಲಿ ಮೆರುಗುಹರಿಸುತ್ತ ಬಿದ್ದಿರುವುವು. ಅವುಗಳನ್ನು ಸೇರಿಸಿ ನೂಲಿ ಹೆಣೆಯಬೇಕಾದುದೂ ಒಂದು ಆವಶ್ಯಕ ಕಾರ್ಯ!

ಸೂಕ್ತಿಗಳು, ಸುಭಾಷಿತಗಳು ಕವಿಗಳ ದೀರ್ಘ ಅನುಭವದಿಂದ, ಪ್ರತಿಭೆಯಿಂದ, ಹೊರಹೊಮ್ಮಿದ ನುಡಿಮುತ್ತುಗಳು. ಇವುಗಳ ಬೆಲೆಯನ್ನು ಕಾಲವು ಕಡಮೆ ಮಾಡಲಾರದು; ಚಿರಪರಿಚಿತತೆಯೂ ಇವುಗಳ ಮೌಲ್ಯವನ್ನು ಕೆಳತರಲಾರದು. ಹೀಗಾದುದರಿಂದ ಇಂತಹ ಸುಭಾಷಿತಗಳ ಚೆನ್ನಾದ ಜ್ಞಾನ ಪ್ರತಿಯೊಬ್ಬನಿಗೂ ಆವಶ್ಯಕ. ಇಂತಹ ಸೂಕ್ತಿಗಳನ್ನು ನೆಚ್ಚಿ, ಸರಿಯಾಗಿ ತಿಳಿಕೊಂಡು, ಇವುಗಳಿಂದ ಪ್ರಯೋಜನ ಹೊಂದುವುದು ನಮ್ಮ ಕರ್ತವ್ಯ.

ಕೆಲವು ಕವಿಗಳು ಸೂಕ್ತಿಗಳನ್ನು ಪುಸ್ತಕರೂಪವಾಗಿ ಬರೆದಿಟ್ಟಿರುವರು ಭರ್ತೃಹರಿಯ ಸುಭಾಷಿತಗಳು, ಸೋಮೇಶ್ವರ ಕೊದಲಾದ ಕವಿಗಳ ನೀತಿಶತಕಗಳು, ಮಹಾಲಿಂಗ ರಂಗನ ಅನುಭವಾಮೃತ ಮೊದಲಾದುವು ಇಂತಹ ಪುಸ್ತಕಗಳು. ಇನ್ನೂ ಕೆಲ ಉದ್ದಾಮ ಕವಿಗಳು ತಮ್ಮ ಅಮೂಲ್ಯವಾದ ಕಾವ್ಯಗಳಲ್ಲಿಯೇ ಚೆಲುವಾದ ಸುಭಾಷಿತಗಳನ್ನೂ ಸೇರಿಸಿರುವರು. ಅಂತಹರಲ್ಲಿ ಪ್ರಖ್ಯಾತನಾದ ಕಾಳಿದಾಸ ಮಹಾಕವಿಯ ಸುಭಾಷಿತಗಳನ್ನು ಸಂಗ್ರಹಿಸಲು ಇಲ್ಲಿ ಪ್ರಯತ್ನಿಸಿದೆ.

ಕಾಳಿದಾಸನಿಂದ ರಚಿತವಾದ ಶಾಕುಂತಲ ನಾಟಕದಲ್ಲಿ ಕಾಣಬರುವ ಸುಭಾಷಿತಗಳು ಇವು:

೧. 'ಅಥವಾ ಭವಿತವ್ಯಾನಾಂ ದ್ವಾರಾಣಿ ಭವಂತಿ ಸರ್ವತ್ರ' ೧.೧೪ ಇನ್ನು ಮುಂದಾಗಬೇಕಾಗ ದೈವಸಂಕಲ್ಪಿತ ಘಟನೆಗಳಿಗೆ ಎಲ್ಲೆಡೆಗಳಲ್ಲೂ ದ್ವಾಳಗಳು ತೆರೆದೇ ಇವೆ.

ಮನಿನಸತಿ ನಿರ್ವಿಕಾರಮಿ।
ದೆನಗಾದೊಡೆ ತೋಳು ಪಾರ್ವುದಿವಕೆಲ್ಲಿಂದಂ॥
ಜನಿಯಿಸುವುದೊ ಸುಫಲಂ ಮೇಣ್।
ತನಗಪ್ಪುದು ತಪ್ಪದಕ್ಕುಮೆಲ್ಲಿ ಜಿಯೊಳಗಂ ೧-೧೬.
(ಕರ್ನಾಟಕ ಶಾಕುಂತಲ—ಬಸವಪ್ಪ ಶಾಸ್ತ್ರಿ)

೨. 'ಕಿಮಿವಹಿ ಮಧುರಾಣಾಂ ಮಂಡನಂ ನಾಕೃತೀನಾಂ' ೧-೧೭. ಮಧುರವಾದ ಆಕಾರವುಳ್ಳವರಿಗೆ ಯಾವುದನ್ನು ಧರಿಸಿದರೆ ತಾನೇ, ಅದು ಅಲಂಕಾರವಾಗಿ ತೋರುವುದಿಲ್ಲ?

ಶೈವಲದಿಂದೆ ತಾನರೆ ಮುಸುಂಕಿದೊಡಂ ರಮಣೀಯಂ, ಇಂದುವಿಂ।
ಗೀವುದು ಕಾಂತಿಯಂ ಮಲಿನಮಾದೊಡಮೇಂ ಕರೆ, ವಲ್ಕದಿಂದಿವಳ್॥
ಪ್ರಾವೃತೆಯಾದೊಡಂ ಬಹುಮನೋಜ್ಞೆ, ಮನೋಹರವಾದ ರೂಪುಗ।
ಗಳ್ಗಾವುದು ಕಾನೆ ತಾಳಿದೊಡೆ ಭೂಷಣಮಾಗದೆ ಪೋಪುದುರ್ವಿಯೊಳ್
—೧-೨೦

೩. 'ಸತಾಂಹಿ ಸಂದೇಹಪದೇಷು ವಸ್ತುಷು
ಪ್ರಮಾಣಮಂತಃಕರಣಪ್ರವೃತ್ತಯಃ' ೧-೧೯.

ಸಂದೇಹಕ್ಕೆ ಎಡೆಗೊಡುವ ವಸ್ತುಗಳಲ್ಲಿ ಸಜ್ಜನರಾದವರಿಗೆ ಅಂತಃಕರಣದ ಪ್ರವೃತ್ತಿಯೇ ಪ್ರಮಾಣವು.

ಸಂತರಾದರ್ಗೆ ಧಾ।
ರಿಣಿಯೊಳ್ ತಮ್ಮ ಮನಃಪ್ರವರ್ತನಮೆ ತಾನಕ್ಕುಂ
ಪ್ರಮಾಣಂ ವರಂ॥
—೧-೨೨

೪. 'ಆಹೋ ಜೇಷ್ಠ ಪ್ರತಿರೂಪಿಕಾ ಕಾಮಿಜನ ಮನೋವೃತ್ತಿಃ' ೧.೨೫ ಕಾಮಿಗಳ ಮನೋವ್ಯಾಪಾರವು ಜೇಷ್ಠೆಗೆ ಪ್ರತಿರೂಪವಾದುದು.

೫. 'ಶಮಪ್ರಧಾನೇಷು ತಪೋಧನೇಷು
ಗೂಢಂ ಹಿ ದಾಹಾತ್ಮಕ ಮಸ್ತಿ ತೇಜಃ' ೨-೭.

ಶಾಂತಿಗುಣವೇ ಪ್ರಧಾನವಾಗಿರುವ ತಪೋಧನರಲ್ಲಿ ಉರಿಯುವ ತೇಜಸ್ಸು ಗೂಢವಾಗಿ ಇದ್ದೇ ಇದೆ.

ಶಾಂತಿಪ್ರಧಾನೆ ಮುನಿಗಳೊ।
ಳಂತರ್ಗತಮಿರ್ಪುದುರಿಪ ತೇಜಂ.... ॥ ೨-೪೨.

೬. 'ಸ್ನಿಗ್ಧಜನ ಸಂವಿಭಕ್ತಂಹಿ ದುಃಖಂ ಸಹ್ಯವೇದನಂ ಭವತಿ' ೩—.

ಸ್ನೇಹಿತರಲ್ಲಿ ಹೇಳಿಕೊಂಡ ದುಃಖವು ಹೆಚ್ಚು ವೇದನೆಯನ್ನು ಕೊಡುವುದಿಲ್ಲ.

೭. 'ಸಾಗರಮುಜ್ಝಿತ್ವಾ ಕುತ್ರ ವಾ ಮಹಾನದ್ಯವತರತಿ?' ೩—.

ಸಾಗರವನ್ನುಳಿದು ಬೇರೆ ಎಲ್ಲಿ ತಾನೇ ಮಹಾನದಿಯು ಹೋಗಿ ಸೇರುವುದು?

' ಯಾತ್ಯೇಕತೋಸ್ತ ಶಿಖರಂ ಪತಿರೋಷಧೀನಾ ।
ಮಾವಿಷ್ಕೃತೋರುಣಪುರಃಸರ ಏಕತೋರ್ಕಃ ॥
ತೇಜೋದ್ವಯಸ್ಯ ಯುಗಪದ್ವ್ಯಸನೋದಯಾಭ್ಯಾಂ ।
ಲೋಕೋ ನಿಯಮ್ಯತ ಇವಾತ್ಮದಶಾಂತರೇಷು ॥' ೪-೧.

ಚಂದ್ರನು ಅಸ್ತಾಚಲವನ್ನು ಸೇರುತ್ತಿದ್ದಾನೆ. ಅರುಣನನ್ನು ಮುಂದಿಟ್ಟುಕೊಂಡು ಸೂರ್ಯನು ಉದಯವಾಗುತ್ತಿದ್ದಾನೆ. ಈ ಎರಡು ತೇಜಸ್ಸುಗಳ ಸಮಕಾಲಿಕ ಉದಯಾಸ್ತಗಳು ಲೋಕದ ಜನರಿಗೆ ಅವರ ಜೀವನದ ಆಗು-ಹೋಗುಗಳ ನಿಯಮವನ್ನು ಸೂಚಿಸುವುವೋ ಎಂಬಂತಿವೆ.

ಸಸಿ ಮುಳುಗುವನೊಂದೆಡೆಯುದ !
ಯಿಸುವನದೊಂದೆಡೆ ದಿನೇಶನಿವರ್ಗಳ ಯುಗಪ ।
ದ್ವ್ಯಸನೋದಯಂಗಳವು ದುಃ
ಖಿ ಸುಖಿಂಗಳೊಳಿಳೆಯ ನಿಯಮಿಪಂತಿರೆ ತೋರ್ಕುಂ ೪-೮೦.
' ಗುರ್ವಪಿ ವಿರಹದುಃಖಮಾಶಾಬಂಧಃ ಸಾಹಯತಿ '
—೪-೧೬.

ವಿರಹದ ದುಃಖವು ಮಹತ್ತಾದರೂ ಇನ್ನು ಮುಂದಿನ ಸಮಾಗಮದ ಆಶೆಯ ಬಂಧನವು ಆ ವಿರಹವೇದನೆಯನ್ನು ಸಹಿಸುವಂತೆ ಮಾಡುತ್ತದೆ.

ಬಲು ವೆ ।
ಗ್ಗಳಿಸಿದ ವಿರಹವ್ಯಥೆಯಂ ।
ಕೆಳದಿಯೆ ಸಹಿಪಂತೆ ಮಾಳ್ಪುದಾಶಾಬಂಧಂ ॥ ೪-೯೪.

೧೦. ' ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀವೃತ್ತಿಂ
ಸಪತ್ನೀಜನೇ ।
ಭರ್ತುರ್ವಿಪ್ರಕೃತಾಪಿ ರೋಷಣತಯಾಮಾಸ್ಮ ಪ್ರತೀಪಂ ಗಮಃ ॥
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೈಷ್ವನುತ್ಸೇಕಿನೀ ।
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ ' ೪-೧೭.

ಗುರುಜನರ ಸೇವೆಯನ್ನು ಮಾಡು, ಸವತಿಯರನ್ನು ಅಪ್ತ ಗೆಳತಿಯರಂತೆ ನೋಡು, ಪತಿಯಿಂದ ಬಾಧೆಹೊಂದಿದರೂ ಕೋಪ ಗೊಂಡು ನೀನು ಪ್ರತಿಕೂಲೆಯಾಗಬೇಡ. ಪರಿಜನರಲ್ಲಿ ದಾಕ್ಷಿಣ್ಯವನ್ನು ತೋರು. ಭಾಗ್ಯವು ಬರುವಾಗ ಗರ್ವಿತಳಾಗಬೇಡ. ಇಂತಹ ಆಚರಣೆಯಿಂದ ಯುವತಿಯರು ಗೃಹಿಣಿಯರೆನ್ನಿಸಿಕೊಳ್ಳುವರು. ಇದಕ್ಕೆ ವಿರೋಧವಾಗಿ ನಡೆದರೆ ಕುಲದ ಅಧೋಗತಿಗೆ ಕಾರಣರಾಗುವರು.

ಹಿರಿಯರ ಸೇವೆಗೆಯ್ ಸವತಿಯರ್ಕಳೊಳಿಷ್ಟವಯಸ್ಯೆಯಂದದಿಂ।
ದಿರು ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್ ॥

ಪರಿಜನನಂ ಕರಂ ಸಲಹು ಭಾಗ್ಯದೆ ಬಾಗಿರು ನೆಣ್ಗಳಿಂತಿರಲ್
ಗರತಿಯರಪ್ಪರಿಂತಿರದರಸ್ವಯಕಾಧಿಯನುಂಟುಮಾಳ್ಪರೌ ೪-೯೬.

೧೧. 'ಅತಿ ಸ್ನೇಹಃ ಪಾಪಶಂಕೀ' ೪—
ಬಹುವಾದ ಸ್ನೇಹವು ಕೆಟ್ಟುದನ್ನೇ ನೆನೆಯುವಂತೆ ಮಾಡುವುದು.

೧೨. 'ತಚ್ಚೇತಸಾಸ್ಮರತಿ ನೂನಮಬೋಧಪೂರ್ವಂ ।
ಭಾವಸ್ಥಿರಾಣಿ ಜನನಾಂತರ ಸೌಹೃದಾನಿ ॥' ೫-೨

ತನಗರಿಯದಂತೆಯೇ ಭಾವದಲ್ಲಿ ಆಡಗಿರುವ ಜನನಾಂತರಗಳ ಸ್ನೇಹಸಂಬಂಧಗಳನ್ನು ಆತನು ನೆನೆಯುವನು.

ಇನಿದೆನಿಸಿರ್ಪ ಶಬ್ದಮನೆ ಕೇಳಿ ವಿಲೋಕಿಸಿ ರಮ್ಯವಸ್ತುವಂ ।
ಜನಮಿಳೆಯಲ್ಲಿ ನೆಮ್ಮದಿಯನಾಂತಿರುತಿರ್ದೊಡಮುಮ್ಮಳಿಪ್ಪುದೇ ॥
ನೆನಲಿದು ನಿಕ್ಕುವಂ ಪರಿಕಿಸಲ್ ಬಗೆಯಿಂದಮಬೋಧ
ಪೂರ್ವನಕಂ ।
ನೆನೆದಪನಂತು ಭಾವದೊಳೆ ನಟ್ಟ ಪುರಾಭವಸೌಹೃದಂಗಳಂ ॥
೫-೧೦೨.

೧೩. 'ನಾತಿಶ್ರಮಾಪನಯನಾಯ ನಚ ಶ್ರಮಾಯ ।
ರಾಜ್ಯಂ ಸ್ವಹಸ್ತಧೃತ ದಂಡಮಿವಾತಪತ್ರಂ ' ॥ ೫-೬

ತನ್ನ ಕೈಯಲ್ಲಿ ಧರಿಸಿದ ಬೆಳ್ಕೊಡೆಯಂತೆ ರಾಜ್ಯವೆಂಬುದ ಶ್ರಮವನ್ನುಂಟುಮಾಡುವುದೂ ಇಲ್ಲ. ಅತಿ ಶ್ರಮವನ್ನು ಹೋಗ ಲಾಡಿಸುವುದೂ ಇಲ್ಲ.

ಅತಿಶ್ರಮಾಪಹರಮುಂ ಶ್ರಮಕಾರಿಯುಮೆಲ್ಲದಿರ್ಪ ಕ ।
ಟ್ಟರಸುತನಂ ಸ್ವಹಸ್ತಧೃತದಂಡ ಮಹಾತಪವಾರಣೋಪಮ
೫—೧೦೫

ಫಲಂತಿ ನಮ್ರಾಸ್ತರವಃ ಫಲಾಗಮೈ ।
ರ್ನವಾಂಬುಭಿರ್ದೂರ ವಿಲಂಬಿನೋ ಘನಾಃ ॥
ಅನುದ್ಧತಾಃ ಸತ್ಪುರುಷಾ ಸಮೃದ್ಧಿಭಿಃ ।
ಸ್ವಭಾವ ಏವೈಷ ಪರೋಪಕಾರಿಣಾಂ ॥ ೫-೧೪

ತರುಗಳು ಫಲಭಾರದಿಂದ ಬಾಗುವುವು. ನೀರಕಣಗಳಿಂದ ಭಾರವಾದ ಮೇಘಗಳು ಕೆಳ ಕೆಳಗೆ ಜೋಲುವುವು. ಸತ್ಪುರುಷರು ಸಮೃದ್ಧಿಯ ಕಾಲದಲ್ಲೂ ಔದ್ಧತ್ಯವನ್ನು ತೋರುವುದಿಲ್ಲ. ಪರೋಪಕಾರಿಗಳಿಗೆ ಇವು ಸ್ವಭಾವವಾಗಿನೆಯಷ್ಟೆ ?

ಫಲಭರದೆ ತಗ್ಗುಗುಂ ತರು,
ಜಲಂಗಳಿಂ ಜೋಲ್ದಪುವು ಘನಂಗಳ್, ಸಿರಿಯಿಂ ।
ತಲೆವಾಗಿ ನಡೆವರುತ್ತಮರ್,
ಇಳೆಯಲ್ಲಿ ಪರೋಪಕಾರಿಗಳ್ಗಿದು ಸಾಜಂ ೪-೧೧.

೧೪. ಸ್ತ್ರೀಣಾಮನಿಕ್ಷಿತ ಪಟುತ್ವಮಮಾನುಷೀಷು
ಸಂದೃಶ್ಯತೇ ಕಿಮುತ ಯಾಃ ಪ್ರತಿಬೋಧವತ್ಯಃ
ಪ್ರಾಗಂತರಿಕ್ಷಗಮನಾತ್ ಸ್ವಮಪತ್ಯಜಾತ
ಮನ್ಯೈರ್ದ್ವಿಜೈಃ ಪರಭೃತಾಃ ಖಲು ಪೋಷಯಂತಿ ೫-೨.

ಮಾನವ ವರ್ಗಕ್ಕೆ ಸೇರದ ಇತರ ಹೆಣ್ಣು ಜೀವಿಗಳಲ್ಲಿಯೂ ಬೇರೆಯವರು ಕಲಿಸದೆ ತಾನಾಗಿಯೇ ಕೌಶಲವು ತೋರಿಬರುವುದು

ಹೀಗಿರುವಾಗ ಕಲಿತ ಹೆಂಗಸರ ವಿಷಯವೇನೆಂದು ಹೇಳಲಿ ? ಹೆಣ್ಣು-ಕೋಗಿಲೆಯು ತನ್ನ ಮರಿಗಳಿಗೆ ಹಾರಲು ಶಕ್ತಿ ಬರುವವರೆಗೂ ಅವುಗಳನ್ನು ಕಾಗೆಗಳು ಪೋಷಿಸುವಂತೆ ಮಾಡುತ್ತದೆ.

ಕಲಿಸದೆ ಬರ್ಪುದು ಕೌಶಲ ।
ಮಿಳೆಯೊಳಮಾನುಷಗವುರಿದ ಪೆಣ್ಗಳ ಮಾತೇಂ
ಸಲಹಿಪುದಲೆ ಮರಿಯಂ ಕೋ ।
ಗಿಲೆವೆಣ್ ಕಾಕಂಗಳಿಂದೆ ಪಾರುವವರೆಗಂ ॥ ೫–೧೨೨

೧೬. 'ಅತಃ ಪರೀಕ್ಷ್ಯ ಕರ್ತವ್ಯಂ ವಿಶೇಷಾತ್ಸಂಗತಂ ರಹಃ
ಅಜ್ಞಾತ ಹೃದಯೇಷ್ವೇವಂ ವೈರೀ ಭವತಿ ಸೌಹೃದಂ' ೫–೨೪

ವಿಕಾಂತವಾಗಿ ಸಂಗಮಿಸುವಾಗ ಹೆಚ್ಚಿನ ಯೋಚನೆಯು ಕರ್ತವ್ಯವಾಗಿದೆ. ಹೃದಯವನ್ನು ತಿಳಿಯದೆ ಮಾಡಿದ ಸೌಹೃದವು ಹೀಗೆ ವಿರೋಧವಾಗಿ ಪರಿಣಮಿಸುವುದು.

ಅದರಿಂ ನಿಗೆ ಪರಿಕಿಸಿ ನೂ ।
ಳ್ಪುದು ತಾನೇಕಾಂತ ಸಂಗಮವನಲ್ಲದಿರಲ್ ॥
ಹೃದಯವನಱಯಮರಿಯದೆ ನೂ ।
ಡಿದ ಸೌಹೃದಮಿಂದು ಜಗದೊಳಹಿತಮೆಸಿಕ್ಕುಂ॥ ೫–೧೪೪

೧೭. 'ಕುಮುದಾನ್ಯೇವ ಶಶಾಂಕಃ ಸವಿತಾ ಬೋಧಯತಿ
ಪಂಕಜಾನ್ಯೇವ ।
ವಶಿನಾಂಹಿ ಪರಪರಿಗ್ರಹಸಂಶ್ಲೇಷ ಪರಾಙ್ಮುಖೀವೃತ್ತಿಃ' ॥
೫–೨೪

ಚಂದ್ರನು ಕುಮುದವನ್ನೇ ಅರಳಿಸುವನು. ರವಿಯು ಕಮಲವನ್ನೇ ವಿಕಸಿಸುವನು. ಪರಸ್ತ್ರೀ ಸಮಾಗಮದಲ್ಲಿ ಜಿತೇಂದ್ರಿಯರ ಮನಸ್ಸು ಹೋಗಲಾರದು.

ಕುಮುದವನೆ ವಿಕಾಸಿಸುವಂ ।
ಹಿಮಕಿರಣಂ ತಾವರೆಯನೆ ರವಿಯರಲಿಸುವಂ ॥
ಯಮಿವರ ಪರಕಾಂತಾ ಸಂ ।
ಗಮದೊಳ್ ಮನವಿಕ್ಕರಲೆ ಜಿತೇಂದ್ರಿಯರಿಳೆಯೊಳ್॥ ೫–೧೩೪

೧೮. 'ಸಹಜಂ ಕಿಲ ಯದ್ವಿನಿಂದಿತಂ ನಖಲು ಶತ್ತರ್ಮ
ವಿವರ್ಜನೀಯಂ' ೬–೧

ಕುಲಸಹಜವಾದ ಕರ್ಮವು ನಿಂದಿತವಾದರೂ ಅದನ್ನು ಬಿಡಕೂಡದು.

೧೯. 'ರಂಧ್ರೋಪಸಾತಿ ನೋನರ್ಥಾಃ' ೬–೭.

'ಅನರ್ಥಗಳು ದೌರ್ಬಲ್ಯದ ಅವಕಾಶವನ್ನು ನೋಡಿಯೇ ಬರುತ್ತವೆ.

೨೦. 'ಪ್ರಸಾದ ಸೌಮ್ಯಾನಿ ಸತಾಂ ಸುಹೃಜ್ಜನೇ
ಪತಂತಿ ಚಕ್ಷೂಂಷಿ ನ ದಾರುಣಾಃ ಶರಾಃ' ೬–೨೯

ಗೆಳೆಯರಲ್ಲಿ ಸಜ್ಜನರ ಅನುಗ್ರಹಪೂರಿತವಾದ ಕಟಾಕ್ಷಗಳು ಬೀಳುವವು; ದಾರುಣವಾದ ಬಾಣಗಳು ಬೀಳುವುದಿಲ್ಲ.

ನೆರೆ ಬೀಳ್ವುವು ಸಖರೊಳ್ ಸಂ ।
ತರ ಕರುಣಾದೃಷ್ಟಿ ಬೀಳವಲೆ ಕೂರ್ಗಣೆಗಳ್ ॥ ೬–೧೬೦.

೨೧. 'ಜ್ವಲತಿ ಚಲಿತೇಂಧನೋಗ್ನಿರ್ವಿಪ್ರಕೃತಃ ಪನ್ನಗಃ ಫಣಾಂ
ಕುರುತೇ !
ಪ್ರಾಯಃ ಸ್ವಂ ಮಹಿಮಾನಂ ಕ್ಷೋಭಾತ್ಪ್ರತಿಪದ್ಯತೇ
ಹಿ ಜನಃ ॥ ೬–೩೧.

ಕಟ್ಟಿಗೆಯನ್ನಲುಗಿಸಲು ಬೆಂಕಿಯು ಜ್ವಲಿಸುವುದು. ಕೆಣಕಿದರೆ ಸರ್ಪವು ಹೆಡೆಯನ್ನೆತ್ತುವುದು. ಕೋಪವನ್ನುಂಟುಮಾಡಿದರೆ ಸಾಮಾನ್ಯವಾಗಿ ಜನರು ತಮ್ಮ ಸಹಜವಾದ ಧೈರ್ಯವನ್ನು ತೋರುವರು.

ಜ್ವಲಿಪುದು ತಿಖಿಯಿಂಧನಂಗಳ ।
ನಲುಗಿಸೆ, ಕೆಣಕಿದೊಡೆ ಹೆಡೆಯನೆತ್ತುವುದುರಗಂ ॥
ಸಲೆ ಕೋಪಮನಾಗಿಸಿದೊಡೆ ।
ಸಲುಗುಂ ನಿಜಧೈರ್ಯಗುಣಕೆ ಜನವಿದು ಸಾಜಂ ॥ ೬–೧೬೨.

೨೨. 'ಸಿಧ್ಯಂತಿ ಕರ್ಮಸು ಮಹತ್ಸ್ವಪಿ ಯನ್ನಿಯೋಜ್ಯಾ
ಸಂಭಾವನಾ ಗುಣಮವೇಹಿ ತವಾಪ್ತಸಾರಾಣಾಂ ॥
ಕಿಂವಾ ಭವಿಷ್ಯದರುಣಸ್ತಮಸಾಂ ವಿಭೇತ್ತಾ
ತಂ ಜೇತ್ ಸಹಸ್ರಕಿರಣೋ ಧುರಿ ನಾಕರಿಷ್ಯತ್ ॥ ೭–೪.

ಯಜಮಾನರು ಸೇವಕರಲ್ಲಿ ತೋರಿಸುವ ಅನುಗ್ರಹವೇ ಆ ಸೇವಕರು ಮಹತ್ತಾದ ಕಾರ್ಯಗಳಲ್ಲಿಯೂ ಜಯಶೀಲರಾಗುವುದಕ್ಕೆ ಕಾರಣ. ಸೂರ್ಯನು ಅರುಣನನ್ನು ಮುಂದಿಟ್ಟುಕೊಳ್ಳದಿದ್ದರೆ, ಆ ಅರುಣನು ಹೇಗೆ ತಾನೇ ಕತ್ತಲನ್ನು ಪರಿಹರಿಸಿಯಾನು ?

ಫಣಿಕಾರ್ಯಮೊಳಂ ಸಾಧಕ !
ರೆನಿಪರ್ ಭೃತ್ಯರ್ಕಳೆಂಬುದಾಳ್ದರ ಸಂಭಾ ॥
ವನೆಯ ಗುಣಂ ದಿನಮಣಿಯರು !
ಣನ ಮುಂದಿಡದೊಡಪನೆಂತು ತಮಮಂ ತೂಳ್ವಂ ॥ ೭–೧೭೭.

೨೩. 'ಅಲಕ್ಷ್ಯದಂತ ಮುಕುಲಾನಸಿಮಿತ್ತಹಾಸ್ಯೈ-
ರವ್ಯಕ್ತವರ್ಣ ರಮಣೀಯ ವಚಃಪ್ರವೃತ್ತೀನ್
ಅಂಕಾಶ್ರಿತ ಪ್ರಣಯಿನಸ್ತನಯಾನ್ಪ್ರಪಂತೋ
ಧನ್ಯಾಸ್ತದಂಗ ರಜಸಾ ಮಲಿನೀಭವಂತಿ ೭–೧೬.

ಮೊಗ್ಗಿನಂತಹ ಎಳೆ ಹಲ್ಲುಗಳು ತೋರಲು, ನಿಷ್ಕಾರಣವಾದ ನಗುವು ಒಪ್ಪುತ್ತಿರಲು, ಲಾಲಾಜಲವು ಬಾಯಿಯಿಂದ ತುಳುಕುತ್ತಿರಲು, ಮುದ್ದಾದ ತೊದಲುಮಾತುಗಳು ಶೋಭಿಸುತ್ತಿರಲು, ಇಂತಹ ಮುದ್ದು ಮಕ್ಕಳನ್ನು ಮುದ್ದಾಡುತ್ತಾ, ಅವುಗಳನ್ನು ತೊಡೆಯಲ್ಲಿರಿಸಿಕೊಂಡು, ಶಿಶುಗಳ ಸಂಸರ್ಗದಿಂದ ಮಾಲಿನ್ಯವನ್ನು ಹೊಂದಿದ ಮನುಷ್ಯರೇ ಧನ್ಯರು.

[ಮುಂದಿನ ಪುಟ ನೋಡಿ]

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಕೋರಿಕೊಂಡಂತೆ, 'ಬದುಕಿನ ಶೇಷ' ಎಂಬ ಅನುವಾದಿತ ಕಥೆಯನ್ನು ಕುರಿತು ೪ ಜನರಿಂದಲೂ, 'ಮುಗಿದ ಅವತಾರ' ಎಂಬ ಸಾಮಾಜಿಕ ದೃಶ್ಯಚಿತ್ರವನ್ನು ಕುರಿತು ೫ ಜನರಿಂದಲೂ ವಿಮರ್ಶೆಗಳು ಬಂದಿವೆ.

'ಬದುಕಿನ ಶೇಷ' ಕಥೆಯ ವಿಮರ್ಶಕರು :

೧. ಶ್ರೀ. ಎಸ್. ಎಂ. ಬಿರಾದಾರ ಬಿ. ಎ. III, ವಿಜಯ ಕಾಲೇಜ್, ವಿಜಾಪುರ. ೨. ಶ್ರೀ. ಎಸ್. ಆರ್. ಕುಲಕರ್ಣಿ, ನವಲಗುಂದ. ೩. ಶ್ರೀ. ಎಂ. ಶಾಂತಿನಾಥ, ಕೊಲ್ಹಾಪುರ. ೪. ಶ್ರೀ. ದಿವಸ್ಪತಿ ಹೆಗಡೆ, ಸಿದ್ದಾಪುರ.

'ಮುಗಿದ ಅವತಾರ' ದೃಶ್ಯದ ವಿಮರ್ಶಕರು :

೧. ಶ್ರೀ. ಎ. ಆರ್. ಕುಲಕರ್ಣಿ, ಅಥಣಿ. ೨. ಶ್ರೀ. 'ರಂಗ' ಮಾಳನುಡ್ಡಿ, ಧಾರವಾಡ. ೩. ಶ್ರೀ. ವಸಂತಮಾಧವ ಹರಿಹರ, ಕಿಲ್ಲೆ— ಹುಬ್ಬಳ್ಳಿ. ೪. ಶ್ರೀ. ಗಂ. ಚಿ. ಕುಲಕರ್ಣಿ, ಪುಣೆ. ೫. ಶ್ರೀ. ಚಿದಾನಂದ ಪತ್ತಾರ, ಮೊರಬ.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಸಮಿತಿಯವರು ನೋಡಿ, ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ :

ಒಟ್ಟಿನ ಮೇಲೆ ಈ ಸಲ ಬಂದ ವಿಮರ್ಶೆಗಳ ಮಟ್ಟ ಒಳ್ಳೆಯದಾಗಿದೆಯೆಂಬುದು ಸಮಾಧಾನದ ಸಂಗತಿಯಾಗಿದೆ.

"ಬದುಕಿನ ಶೇಷ" ಕಥೆಯ ವಿಮರ್ಶೆಗಳಲ್ಲಿ ಶ್ರೀ. ದಿವಸ್ಪತಿ ಹೆಗಡೆ ಅವರ ವಿಮರ್ಶೆ ಉತ್ತಮವಾಗಿದೆ. ನಿಕ್ಕುನ್ನೂ ಒಳ್ಳೆಯ ವಿಮರ್ಶೆಗಳಾಗಿವೆ.

"ಮುಗಿದ ಅವತಾರ" ದೃಶ್ಯದ ವಿಮರ್ಶೆಗಳಲ್ಲಿ ಶ್ರೀ. 'ರಂಗ' ಅವರ ವಿಮರ್ಶೆ ಉತ್ತಮವಾಗಿದೆ. ಶ್ರೀ. ಎ. ಆರ್. ಕುಲಕರ್ಣಿ ಅವರ ವಿಮರ್ಶೆಯೂ ಚೆನ್ನಾಗಿದೆ. ನಿಕ್ಕುವು ಒಳ್ಳೆಯ ವಿಮರ್ಶೆಗಳು.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'ಪಾಪ ಮತ್ತು ಪಾಪಿ'** ಎಂಬ ಸ್ವತಂತ್ರ ಕಥೆಯನ್ನಾಗಲಿ, 'ಕುಂಜು' ಎಂಬ ಅನುವಾದಿತ ಕಥೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು. ಹೆಚ್ಚು ಜನರು ಮೇಲಾಟದಲ್ಲಿ ಭಾಗವಹಿಸಿ, ಈ ವಿಭಾಗದ ಪ್ರಯೋಜನವನ್ನು ಸಿದ್ಧಮಾಡಿ ತೋರಿಸಬೇಕು. ಉಪೇಕ್ಷೆ-ಔದಾಸೀನ್ಯಗಳಿಂದ ವಿಮರ್ಶಾ ಸಾಹಿತ್ಯ ಬೆಳೆಯಲಾರದು.

—ಸಂಪಾದಕರು

[೭೧ನೆಯ ಪುಟದಿಂದ ಬಂದಮುದು]

ಮೊಳೆವಲ್ ಶೋಭಿಸೆ, ನಿರ್ಮಿತ್ತ ಹಸಿತಂ ಚೆಲ್ವಾಗೆ,
ಲಾಲಾಜಲಂ
ತುಳುಕಲ್, ಬರ್ಪ ತೊದಳ್ ಮನಂಗೊಳಿಸಲ್, ಅಂಕಾರೋ
ಹಕಿಚ್ಚೈಸನು !
ಕ್ಕಳಿಸಿಕೈಗಳಿನೆತ್ತಿಕೊಂಡು ನಲವಿಂ ತದ್ವೇಹಚಂಚದ್ರಜೋ
ಮಲಿನಾಂಗರ್ಕಳೆನಿಪ್ಪ ಮಾನವರೆ ತಾಂ ಧನ್ಯರ್ ವಲಂ
ಧಾತ್ರಿಯೊಳ್ ॥ ೭–೧೮೦.

೨೪. 'ಏವಂ ವ್ಯಾಯೋಃ ಶುಭೇಷು ಪ್ರವೃತ್ತಯಃ
ಸ್ರಜಮಪಿ ಶಿರಸ್ಯಂಧಃ ಕ್ಷಿಪ್ತಾಂ ಧುನೋತ್ಯಹಿ ರಂಕವಾ'.
೭–೨೪.

ಶುಭಗಳಲ್ಲಿ ಮರವೆಯುಳ್ಳವರಲ್ಲಿ ಇದೇ ರೀತಿಯ ವರ್ತನೆಯು ಸಾಮಾನ್ಯವಾಗಿ ಕಂಡುಬರುವುದು. ಕುರುಪಸ ಕುತ್ತಿಗೆಯಲ್ಲಿ ಹೂವಿನ ಮಾಲೆಯನ್ನು ಹಾಕಿದರೂ, ಆತನು ಅದನ್ನು ಸರ್ಪವೆಂಬ ಭ್ರಾಂತಿಯಿಂದ ಕಿತ್ತು ಬಿಸಾಡುವನು.

ಪಿರಿದು ಶುಭಂಗಳೊಳ್ ಮರವೆಯುಳ್ಳವರೊಳೀ ಪರಿಯಲ್ತೆ
ವರ್ತನಂ
ಸಿರಪೆಡೆಗಿಟ್ಟ ಮಾಲೆಯುಮನಂಧನಹಿ ಭ್ರಮೆಯಿಂದೆ
ನೂಂಕುವಂ ॥ ೭–೧೮೪

೨೫. 'ಶ್ರದ್ಧಾ ವಿತ್ತಂ ವಿಧಿಶ್ಚೇತಿ ತ್ರಿತಯಂ ತತ್ಸಮಾಗತಂ' ೭–೩
ಶ್ರದ್ಧೆ, ಹಣ, ನಿಯಮ—ಇವು ಮೂರೂ ಸೇರಿದಂತಾದುವು.

"ಬದುಕಿನ ಶೇಷ"

(ಕಥೆಯ ವಿಮರ್ಶೆ)

ಶ್ರೀ ದಿವಸ್ಪತಿ ಹೆಗಡೆ, ಸಿದ್ದಾಪುರ

ಪವಿತ್ರ ಪ್ರೇಮ—, ಸಮಾಜ ಬಂಧನ—ನೀತಿ ಅದಕ್ಕೆ ಕೊಡುವ ಪ್ರತಿಕ್ರಿಯೆ— ಈ ವ್ಯಷ್ಟಿ-ಸಮಷ್ಟಿಗಳ ಹೋರಾಟದಲ್ಲಿ ವ್ಯಕ್ತಿಹೃದಯ ಅನುಭವಿಸಬೇಕಾದ ನೋವು ನಲಿವುಗಳು— ಇವರ ಸುಳಿಯಲ್ಲಿ ಸುತ್ತಲ್ಪಟ್ಟ ವ್ಯಕ್ತಿ ತನ್ನ ಜೀವನದಲ್ಲಿ ಅದಕ್ಕಾಗಿ ತೆರಬೇಕಾದ ಬೆಲೆ-ದಂಡವೇನು? ಇದರಿಂದ ಅವನು ಪಡೆಯಬಹುದಾದುದೇನು? ಇದರ ಕೊನೆಯಲ್ಲಿ ಉಳಿಯುವ ಶೇಷವೇನು?— ಎಂಬುದನ್ನು ದಾರುಣವಾಗಿ ಚಿತ್ರಿಸಿದ ಕತೆ "ಬದುಕಿನ ಶೇಷ". ಶ್ರೀಮತಿ ಅಮೃತಾ ಪ್ರೀತಮ್ ಅವರು ಬರೆದ ಈ ಉತ್ತಮ, ಭಾವಪೂರ್ಣ—ಪಂಜಾಬೀ ಕತೆಯನ್ನು ಸುಂದರವಾಗಿ ಅನುವಾದಿಸಿ ಕನ್ನಡಿಗರಿಗಿತ್ತವರು ಶ್ರೀ. ಅಪ್ಪಾಸಾಹೇಬ ಸನದಿಯವರು.

ಅಂದಿನ ಪತ್ರಿಕೆಯಲ್ಲಿ "ಚೇತನಾ ಅವರ ದೇಹತ್ಯಾಗ" ಎಂಬ ಶೀರ್ಷಿಕೆಯ ಕೆಳಗೆ..... ಚೇತನಾ ಅವರು ತಮ್ಮ ಅಂತಿಮ ಬಯಕೆಯಾಗಿ ತಮ್ಮನ್ನು ಮುಂಬಯಿಯ "ಗ್ರೀನ್" ಹೋಟೆಲಿನ ೯ನೇ ನಂಬರಿನ ಕೋಣೆಯಲ್ಲಿ ಇಡಬೇಕೆಂದೂ. ಕೇಳಿಕೊಂಡರು ಕಾರಿನಲ್ಲಿ ಅಹಮದಾಬಾದಿನಿಂದ ಅವರನ್ನು ಮುಂಬಯಿಗೆ ತರಲಾಯಿತು..... ಡಾಕ್ಟರರ ಶಕ್ತಿ ಸೀರಿ— ರಾತ್ರಿ ೨ ಗಂಟೆಯ ಸುಮಾರಿಗೆ ಅವರ ಪ್ರಾಣಪಕ್ಷಿ ಹಾರಿಹೋಯಿತು....." ಸುದ್ದಿಯನ್ನೋದಿದ ಲೇಖಿಕೆಯರ ಕಣ್ಣೆದುರು' ತಾನು ಚೇತನಾ ಅವರನ್ನು ಕಂಡ ಸಂದರ್ಭ— ತಾನೇ ತಾನಾಗಿ ಮುಂದೆ ಬರುತ್ತದೆ. 'ರಾತ್ರಿಯ ೨ ಗಂಟೆ, ೯ನೇ ನಂಬರ್ ರೂಮು' ಅವರನ್ನು ಹಿಂದೆ ಒಯ್ಯುತ್ತವೆ.

ವಿಶ್ರಾಂತಿಗೆಂದು, ರಜೆ ಪಡೆದು, ಲೇಖಿಕೆಯರು ಮುಂಬಯಿಯ "ಗ್ರೀನ್" ಹೋಟೆಲಿನಲ್ಲಿಳಿದಿರುವಾಗ, ಅಪರಿಚಿತ ಹೆಂಗುಸೊಬ್ಬಳು ಅವರನ್ನು ಕಾಣಲು ಬರುತ್ತಾಳೆ. ಲೇಖಿಕೆಯರು ಉಳಿದುಕೊಂಡ ೯ನೆಯ ನಂಬರಿನ ರೂಮಿನಲ್ಲಿಯೇ ತಾನು ಇಲ್ಲಿ ಬಂದಾಗಲೆಲ್ಲ ಉಳಿದುಕೊಳ್ಳುವವಾದರೂ, ಈ ಸಾರಿ ತನ್ನ ತಾರು ಇವರಿಗೆ (ಹೋಟೆಲಿನವರಿಗೆ) ಮುಟ್ಟಿದ್ದರಿಂದ ಈ ಅನಾನುಕೂಲವಾಯಿತೆಂದು ಹೇಳುತ್ತಾಳೆ. ಲೇಖಿಕೆಯ ಮೃದುಹೃದಯವನ್ನು ಅವರ ಕಾದಂಬರಿಯೊಂದರ ಮೂಲಕ ಅರಿತ ಅವಳು ಇವರಿಗೆ ನಯವಿಟ್ಟು ಆ ರೂಮು ತೆರವು ಮಾಡಿಕೊಡಲು ಹೇಳಿ, ತನ್ನೆದೆಯ ವೇದನೆಯನ್ನು ಅವರೊಡನೆ ತೋಡಿಕೊಳ್ಳುತ್ತಾಳೆ—

ಅವಳ ಹೆಸರು ಚೇತನಾ— ತಂದೆ ಮಿಲ್ಲಿನ ಒಡೆಯ; ಬಾಲ್ಯ ಯೌವನಗಳನ್ನು ಸುಖದಲ್ಲಿ ಕಳೆದಳು

ಶಕ್ಕದಲ್ಲಿಯೇ ವಾಸವಾಗಿದ್ದ ಸಾಮಾನ್ಯ ಬಡ ಯುವಕ ಯುಗರಾಜ (ಅವನ ತಂದೆ ಕಾಂಗ್ರೆಸ್ ಚಳವಳಿಯಲ್ಲಿ ಎಲ್ಲ ಕಳೆದುಕೊಂಡು ಕೀಲು ಕಂಡಿದ್ದ) ನತ್ತ ಅವಳ ಹೃದಯ ಮಿಡಿಯುತ್ತದೆ. ಅವರ ಸಮಾಜ— ವರ್ಗಧರ್ಮ— ಅವಳ ಪತಿಗ್ರಹವನ್ನು ಅಹಮದಾಬಾದಿನಲ್ಲಿ ನಿರ್ಮಿಸಿತು— ಅಂತಸ್ತಿಗೆ ಯೋಗ್ಯವಾಗಿ, ಬರಿದಾದ ಬಾಳ ಬಟ್ಟಲನ್ನು ತುಂಬಿಕೊಳ್ಳಲು— ತನ್ನ ಅತೃಪ್ತ ಹೃದಯವನ್ನು ಸಂತಯಿಸಲು ಇತರರ ದುಃಖ, ಸುಖಗಳಲ್ಲಿ ಬೆರೆತು ತನ್ನನ್ನು ಮರೆಯಲುಯತ್ನಿಸುತ್ತಾಳೆ. ಕೂಲಿಕಾರರ ಸಂಪಿನಲ್ಲಿ ಮೂಲಕರಿಗೂ ಕೂಲಿಕಾರರಿಗೂ ಮಧ್ಯೆನಿಂತು ಗಾಂಧಿಯವರ ಸಹಾಯದಿಂದ ತೊಡಕನ್ನು ಬಗೆಹರಿಸುತ್ತಾಳೆ. ಅವರೆಲ್ಲರ ತೃಪ್ತಿಯಲ್ಲಿ ತನ್ನೆದೆಯನ್ನು ತುಂಬಿಕೊಳ್ಳಲು ಪ್ರಯತ್ನಿಸುತ್ತಾಳೆ.

ಕಾಂಗ್ರೆಸ್ ಉತ್ಸವವೊಂದರಲ್ಲಿ ಯುಗರಾಜನನ್ನು ಕಂಡು ಸಮೀಪದಿಂದ ಮಾತನಾಡಿದಾಗ, ಹೃದಯದ ನೋವು ಮರುಕಳಿಸುತ್ತದೆ. ಮನೆಗೆ ಬಂದು ಹತ್ತಿಕ್ಕಲಾರದೆ ಫೋನಿನಲ್ಲಿ— ಅವನೊಡನೆ ಮಾತನಾಡುತ್ತಾಳೆ ತನ್ನಂತೆ ಅವನು ಮುಂಬೈಗೆ ಹೊರಡಲಿದ್ದುದು ತಿರಿಯುತ್ತಾಳೆ ಅವನ ಜೊತೆಯಲ್ಲಿ ಮುಂಬೈಗೆ ಹೋದವಳು ಅದೇ ಹೋಟೆಲಿನ ೯ನೇ ನಂಬರ ರೂಮಿನಲ್ಲೇ ಉಳಿಯುತ್ತಾಳೆ. ಅಂದು ಯುಗರಾಜ, ಅವಳ ಬೇಡಿಕೆಯಂತೆ ರಾತ್ರಿ ೨ ಗಂಟೆಯ ವರೆಗೆ ಅವಳ ರೂಮಿನಲ್ಲಿ ಅವಳಿಗಾಗಿ ಕವಿತೆಗಳನ್ನೋದುತ್ತ ಕುಳಿತುಕೊಳ್ಳುತ್ತಾನೆ. ಕಳೆದುಕೊಂಡುದನ್ನು ಪಡೆದಂಥ ತೃಪ್ತಿಯನ್ನು ಚಿಮ್ಮಿಸುಗಳಲ್ಲಿ ಅವಳು ಅನುಭವಿಸುತ್ತಾಳೆ. ಅಂದಿನಿಂದ ಹೃದಯ ಪೂರೈಯಿಟ್ಟ ದಿನಗಳೆಲ್ಲೆಲ್ಲ ಒಂದೆರಡು ದಿನಕ್ಕಾಗಿ ಅದೇ ಕೋಣೆಯಲ್ಲಿ ಬಂದು ಉಳಿಯುತ್ತಾಳೆ. ಅಂದಿನಂತೆಯೇ ಮೇಜಿನ ಮೇಲೆ 'ಹೂ'ಗಳನ್ನು, ಅಣಿಗೊಳಿಸಿ ಇಡುತ್ತಾಳೆ. ಅವನು 'ಸಿಗರೇಟು' ಸೇದುತ್ತಿದ್ದಂತೆ ಆ ನೆನಪಿಗೆ ಜೈಯಲ್ಲಿ ಸಿಗರೇಟೊಂದನ್ನು ಹತ್ತಿಸಿ ಹಿಡಿದುಕೊಳ್ಳುತ್ತಾಳೆ. ಆಗ ಅವನಿರುವಿಕೆಯ ಅರಿವನ್ನು – ಅವನುಸುರಿನ ಗಂಧವನ್ನು–ಅನುಭವಿಸಿದಂತೆ ತೃಪ್ತಿಪಡುತ್ತಾಳೆ.

ಕತೆ ಹೇಳುತ್ತ ಹೇಳುತ್ತ ಭಾವಶೂನ್ಯಳಾಗಿ ಮೌನಳಾಗಿ ಕುಳಿತ ಚೇತನಾಳನ್ನು ಎಬ್ಬಿಸುವ ಗೋಜಿಗೆ ಹೋಗದೆ ಲೇಖಿಕೆಯರು ಹೊರಬರುತ್ತಾರೆ.

"ಬದುಕಿನ ಪ್ರಶ್ನೆಯನ್ನು ಎಲ್ಲರೂ ಬಿಡಿಸುತ್ತಾರೆ. ನಾನೂ ಬಿಡಿಸಿಕೊಂಡಿದ್ದೇನೆ. ಈ ಪ್ರಶ್ನೆಗಳಲ್ಲಿ ವರುಷಗಳ ಕಾಲಾವಧಿಯಲ್ಲಿ ಬಹಳಷ್ಟು ಸೇರಿಕೊಂಡು ಬಹಳಷ್ಟು ಹರಿದೂ ಹೋಗುತ್ತದೆ.... ಸಂತಯಿಸಿದುದಿಷ್ಟಾದರೆ ಹರಿದು ಹೋದುದೂ ಅಷ್ಟೇ; ಆದರೆ ಇಪ್ಪತ್ತು ವರುಷಗಳ ನಂತರ ಈಗ ನಾನದನ್ನು ಬಿಡಿಸಲು ಕುಳಿತಾಗ, ಅದರ ಶೇಷವಾಗುಳಿದುದು ಅವನುಸುರಿನ ಪರಿಮಳ ಮಾತ್ರ ಎಂದೆನಿಸುತ್ತದೆ. ನನಗೆ" ಎಂಬ ಚೇತನೆಯ ನುಡಿ, ಇಂದು ಅವಳ ಮರಣದ ಸುದ್ದಿ— ಅದೂ ಗ್ರೀನ್ ಹೋಟೆಲಿನ ೯ನೇ ನಂಬರ ರೂಮಿನಲ್ಲಿ ರಾತ್ರಿ ೨ ಗಂಟೆಗೆ— ಓದಿದಾಗ ಮತ್ತೆ ಗುಣುಗುಣಿಸುತ್ತದೆ ಲೇಖಿಕೆಯರ ಕಿವಿಯಲ್ಲಿ— ಹೃದಯದಲ್ಲಿ.

ಸಮಾಜಕ್ಕೊಂದು ಕರೆಯಿತ್ತು. ಲೇಖಿಕೆಯರು ಕತೆ ಮುಗಿಸುತ್ತಾರೆ 'ವರ್ಗ-ಭೇದಭಾವ-ಹೃದಯಗಳ ಹವ್ಯಸ್' ಬಂದರಲ್ಲಿ ಪದವನ್ನು ತೊಡೆದು ಹಾಕಲು ಯಾರಾದರೂ ಒಂದು ಗೊತ್ತುವಳಿ

ನುಂಡಿಸಬಾರದೇ ? ಒಂದಲ್ಲ ಸಾವಿರ ಚೇತನೆಯರೂ ಈ ಪ್ರಶ್ನೆಯನ್ನು ಬಿಡಿಸಲುಯತ್ನಿಸಿ ಶಮ್ಮ ಆಯುಷ್ಯವನ್ನು ಧಾರೆ ಎರೆದು ಶೇಷ ತೆಗೆದಾಗ ಉರಿವ ಬೆಂಕಿ ಮಾತ್ರ ಅವರುಸಿರಿನಲ್ಲಿ ಶೇಷವಾಗಿ ಉಳಿದುಕೊಳ್ಳುತ್ತದೆ' ಇದು ಆವರಿತ್ತ ಕರೆ-ಅವಂಟ್ಪಮೊರೆ.

ಚೇತನೆಯ ಬಾಯಿಂದ ಹೇಳಿಸಿದ ಅನಳದೇ ಕತೆ ತುಂಬ ಪರಿಣಾಮಕಾರಿಯಾಗಿ (ಓದುಗನ ಮೇಲೆ) ಹೇಳಿಸಲ್ಪಟ್ಟಿದೆ.

" ಪತಿಗ್ರಹಕ್ಕೆ ಬಂದೆ. ಬೆಳ್ಳಿಯ ಚಮಚೆಗಳೇನೋ ಅಲ್ಲಿ ಅಸಂಖ್ಯವಾಗಿದ್ದುವು; ಆದರೆ ಬದುಕಿನ ಬಟ್ಟಲು ಬರಿದಾಗಿತ್ತು" ಚೇತನೆಯ ನುಡಿ ಓದುಗನ ಹೃದಯ ಕಲಕುತ್ತದೆ. " ನನ್ನೆಲ್ಲ ಸಹಾನುಭೂತಿಯನ್ನು ಕೆಲಸಗಾರರ ಮೇಲೆ ಸುರಿದೆ; ಆದರೆ ಅವರ ಹರಿದ ಜೋಳಿಗೆಯಲ್ಲಿ ಅದನ್ನು ಹಿಡಿದುಕೊಳ್ಳುವ ಸಾಮರ್ಥ್ಯವೂ ಇರಲಿಲ್ಲ " ಇದು ತುಂಬ ಪರಿಣಾಮಕಾರಿಯಾದ ನುಡಿ. ಈ ಮಾತುಗಳಲ್ಲಿ ಚೇತನೆಯ ಹೃದಯವನ್ನು ತೆರೆದು ತೋರಿಸಿದ್ದಾರೆ-ಅದೆಂತಹ ಗುಂಡಿ ! ಅದೆಂತಹ ಆಳ ! ಅವಳೆದೆಯಲ್ಲಿ. "

ಲೇಖಿಕೆಯರ ನಿರೂಪಣಾ ಶಕ್ತಿ ಚೇತನೆಯ ಪಾತ್ರವನ್ನು ಪರಿಪೂರ್ಣವಾಗಿಸಿದೆ.

ಚೇತನೆಯ ನುಡಿಗಳಿಂದ, ಯುಗರಾಜ ಬಡವನಾದರೂ ಸತ್ವಶಾಲಿ ವ್ಯಕ್ತಿತ್ವವುಳ್ಳನ ಎಂಬ ಅಂಶ ನಮಗರಿವಾಗುವುದು.

ಕತೆಯಲ್ಲಿ ಲೇಖಿಕೆಯರೂ ಒಂದು ಪಾತ್ರ-ತುಂಬು ಹೃದಯದ-ಕರುಣಾಪೂರ್ಣ ವಿಚಾರ ಶೀಲ ಅವಳು—

" ಚೇತನೆಗಾಗಿ ನನ್ನೆದೆಯಲ್ಲಿ ಭಾವನೆಯ ಜಲಧಿ ತುಳುಕಾಡಿತು. ಒಂದು ಸಲ ಉದ್ವೇಗಪೂರ್ಣವಾಗಿ " ಚೇತನಾ " ಎಂದು ಅವಳ ಹೆಸರನ್ನು ಉಸುರುವುದಕ್ಕೂ ಹೊರತಾಗಿ ಬೇರೇನೂ ಆಗಲಿಲ್ಲ ನನ್ನಿಂದ."

ಇದರ ಜೊತೆಗೆ ಲೇಖಿಕೆಯರು ಜನತೆಗೆ ಕೊಡುವ ಸತ್ವಪೂರ್ಣ ಶಬ್ದಗಳ ಕರೆ ಅವರ ಪಾತ್ರವನ್ನು ಪೂರ್ಣಗೊಳಿಸಿದೆ.

ಕತೆಯ ಪ್ರಾರಂಭದಲ್ಲಿ, ಪತ್ರಿಕೆಯಲ್ಲಿಯ, ' ಇಂಗ್ಲಂಡಿನಲ್ಲಿ ಹೌಸ್ ಆಫ್ ಕಾಮನ್ಸಿನಲ್ಲಿ ಜನಾಂಗಿಕ ಭೇದಭಾವನೆಯನ್ನುಳಿಸಲು ಫೈಸರ್ ಬ್ರಾಕವೇ ಅವರು ಗೊತ್ತುವಳಿ ಮಂಡಿಸಿದ ವಿಷಯ ತೆಗೆದುಕೊಂಡು, ಲೇಖಿಕೆಯರು ಅದೇ ನಿಮಿತ್ತವಾಗಿ ಮಂಡಿಸುಹೋದ ಮಹನೀಯರ ಹೆಸರನ್ನೆಲ್ಲ ಹೇಳುತ್ತಾರೆ. ಇದನ್ನೋದಿ ಸಮುಗೆ ಹೀಗೇ ಪ್ರಾಸಂಗಿಕವಾಗಿ ಕತೆಯ ಆರಂಭಕ್ಕೆ ಇಷನ್ನು ಹೇಳಿದ್ದಾರೆ—ಎಂದು ಮೊದಲು ಅನಿಸುತ್ತದೆ; ಆದರೆ ಕತೆಯ ಕೊನೆಯಲ್ಲಿ 'ಹೃದಯದ ಹವುಸ್ ಒಂದರಲ್ಲಿ ವರ್ಗಭೇದಭಾವವನ್ನು ತೊಡೆದುಹಾಕುವ ಗೊತ್ತುವಳಿಯನ್ನೊಬ್ಬರು ಮಂಡಿಸಬಾರದೇ ?' ಎಂದು ಪ್ರಶ್ನೆಯಿಟ್ಟಾಗ, ಕತೆಯ ವಿಷಯಕ್ಕೂ-ಉದ್ದೇಶಕ್ಕೂ ಈ ಪ್ರಾರಂಭಕ್ಕೂ ಎಷ್ಟು ಸುಂದರವಾಗಿ ಪರಿಣಾಮಕಾರಿಯಾಗಿ ಸಂಬಂಧ-ಲೇಖಿಕೆಯರು-ಕಲ್ಪಿಸಿದ್ದಾರೆ ಎಂಬುದರ ಅರಿವಾಗುತ್ತದೆ ನಮಗೆ.

ಪ್ರತಿಯೊಂದೂ ವ್ಯವಹಾರವಾಗಿ ಯಂತ್ರವತ್ತಾದ ಜೀವನ ಆರಂಭವಾದ ಇಂದಿನ ಜಗತ್ತಿನಲ್ಲಿ, ಪ್ರೇಮವನ್ನೂ ಹೃದಯವನ್ನೂ ವ್ಯವಹಾರದಿಂದಲೇ ಅಳಯುತ್ತಿರುವ ಜಗತ್ತಿನಲ್ಲಿ-ಪವಿತ್ರವಾದ ಪ್ರೇಮ, ಹೃದಯದ ಕೂಗು, ವ್ಯತಿರಿಕ್ತ ಪ್ರತಿಕ್ರಿಯೆಯನ್ನು ಹೊಂದಿ ಮೂಕ ವೇದನೆಯಿಂದ ಬೆಂದು ಕರಕಲಾಗುತ್ತಿದೆ. ಹೃದಯದ ಮೇಲೆ ತನ್ನ ಪರೆ ಕಟ್ಟಿದ ವ್ಯವಹಾರ, ವ್ಯಕ್ತಿಯನ್ನು ಆದರಾಳಕ್ಕೆ ಇಳಿಯಲು ಕೊಡುವದಿಲ್ಲ. ಸಹಸ್ರಾರು ಜೀವದ ಅಳಲು, ಬೇಗುದಿಗಳೂ ಈ ಪರೆಯನ್ನು ಹರಿಯಲಾರವೇ ? ವ್ಯಕ್ತಿ, ಸಮಾಜ, ಹೃದಯದ ಕಣ್ಣು ತೆರೆದು ನೋಡಬಾರದೇ ? ಮನುಷ್ಯತ್ವವೂ ಯಂತ್ರಕ್ಕೆ ಆಳವಟ್ಟು ನಿರ್ಜೀವವಾಗಿ ಚಾಲಕನ ಕೈಗೂಸಾಗಬೇಕೆ ? ಇದು ಪ್ರತಿ ವ್ಯವಹಾರಿಗೂ ಸಮಾಜಕ್ಕೂ ಲೇಖಿಕೆಯರು ಕೇಳುವ ಪ್ರಶ್ನೆ. ಇದೇ ಕತೆಯ ಮೂಲ ಉದ್ದೇಶ.

ಪ್ರೇಮು ಶಕ್ತಿಯ ಕೀರ್ತಿಸಿದರೂ
ನಡೆಗು ನುಡಿಗೂ ಅಂತರ
ಹೃದಯದೀ ಮೊರೆಗೋಗುಡಲು ಜನ
ಬೇಕು ಬಹು ಮನ್ವಂತರ—

ಆ ಮನ್ವಂತರ ಬೇಗ ಕಳೆದು ಹೋಗಿ ಸಮಾಜದ ಹೃದಯದ ಕಣ್ಣು ತೆರೆದು-ಇನ್ನೂ ಸಹಸ್ರಾರು ಜೀವಿಗಳ ಕಣ್ಣಿನಲ್ಲಿ ನೀರು ಹರಿಯದಂತಾಗಿ ಹೃದಯವನ್ನು ಸಂತಯಿಸಲು-ಕೈಯಲ್ಲ-ಹೃದಯವೇ ಮುಂದೆ ಬರಲಿ ಎಂದು ಆಶಿಸೋಣವೇ ?

ಹಾಗೆ ಆಶಿಸಲೇ ಬೇಕೆಂದು ಹಾಗಾಗಲೇ ಬೇಕೆಂದು ಪ್ರತಿ ವ್ಯಕ್ತಿಗೂ ಸಮಾಜಕ್ಕೂ ಲೇಖಿಕೆಯರು, ಸುಂದರವಾದ ಸತ್ವಪೂರ್ಣವಾದ ಕತೆಯ ಮೂಲಕ ಕರೆಯಿತ್ತಿದ್ದಾರೆ. ❋

ಮುಗಿದ ಅವತಾರ

(ಜೀವನದರ್ಶನದ ವಿಮರ್ಶೆ)

ಶ್ರೀ 'ರಂಗ' ಮಾಳಮಡ್ಡಿ, ಧಾರವಾಡ

ಪ್ರಸ್ತುತ ನಾಟಕ ಸಾಮಾನ್ಯವಾಗಿ ಅತ್ತೆಯರಿದ್ದ ಮನೆಗಳಲ್ಲಿ ಪ್ರತಿನಿತ್ಯ ಅತ್ತೆ-ಸೊಸೆಯರಲ್ಲಿ ನಡೆಯುವ ರಣರಂಗದ ಚಿತ್ರ.

ಮದುವೆಯಾಗಿ ಬಂದ ಮರುದಿನದಿಂದಲೇ ಗಂಡನ ಹೊರತು ಉಳಿದೆಲ್ಲ ಗಂಡನ ಬಳಗ, ತನಗೇನು ಸಂಬಂಧವೆಂದು, ಅತ್ತೆ-ಮಾವಂದಿರನ್ನು ಗುಡುಚಾಪೆ ಕತ್ತಿಸಿ ಮನೆಯಿಂದ ಹೊರಗೆ ಓಡಿಸುವ ಸೊಸೆಯರಿಗೆ ಈಗಿನ ಕಾಲದಲ್ಲಿ ಬರವಿಲ್ಲ. ಅದರಲ್ಲಿ ಪ್ರಸ್ತುತ ನಾಟಕದಲ್ಲಿಯೂ ಸೊಸೆ ಮಾಲಾ ಮತ್ತು ಅವಳ ಅತ್ತೆ ವೆಂಕಮ್ಮ ಇವರಲ್ಲಿ ನಾಯಿ-ಬೆಕ್ಕುಗಳ ಕಚ್ಚಾಟದ ಜೀವನ ಕಂಡುಬರುತ್ತದೆ. ಮಾಲಾಳ ಗಂಡ ವಸಂತ ಬಂದ ಸಗಾರವನ್ನೆಲ್ಲ ಅವಳ ಕೈಗೆ ಹಾಳುತ್ತಂದಿನಿಂದ, ಮನೆಯಲ್ಲಿ ಅವಳದೇ ಅಧಿಕಾರ. ಅವಳು ಅಂದದ್ದೇ ನೇಮವಾಕ್ಯ. ಹೀಗಾಗಿ ಅವಳ ಅತ್ತೆ ವೆಂಕಮ್ಮ ಅವಳಿಗೆ ಕಾಲುಕಸ. ಹಾಕಿದ್ದನ್ನು ತಿಂದು ಯಾಕೆ ಥಣ್ಣಗೆ ಕಾಲ ಹಾಕಬಾರದು ?- ಎಂದು ಅವಳ ವಾದ.

ಆದರೆ ವೆಂಕಮ್ಮನಿಗೆ, ಮಗ ಮದುವೆಯಾದಂದಿನಿಂದ ಸಾಕೆಸಲುಹಿದ ತನ್ನನ್ನೇ ಮರೆತು, ನಿನ್ನೆ ಮೊನ್ನೆ ಬಂದಂಥ ಸೊಸೆಯ ಕೈ

ಸೊಂಬೆಯಾಗಿ, ಪ್ರತಿಯೊಂದಕ್ಕೂ ತಾನು ಸೊಸೆಗೆ ಕೈಯೊಡ್ಡಬೇಕಲ್ಲ ಎಂಬ ಕೊರಗು. ಅದಕ್ಕೆ ಅವಳು ಗುಡಿ-ಗುಂಡಾರಗಳಿಗೆ ಹೋಗುವ ಸೇವ ಮಾಡಿಕೊಂಡು ಮಗ ಸೊಸೆಯರನ್ನು ನೆರೆಮನೆಯ ಸಾವಿತ್ರಮ್ಮ, ತುಂಗಮ್ಮರ ಮುಂದೆ ಆಡಿಕೊಂಡು ಕಾಲಕಳೆಯುತ್ತಾಳೆ. ಅದರಂತೆ ಸೊಸೆ ಮಾಲಾಳು ತನ್ನ ಅತ್ತೆಗೆ ಕಡಮೆ ಇಲ್ಲ.ಅತ್ತೆಯ ಮುಂದೆ ಮನೆಗೆ ಹೋಗಿ ಮನೆಯ ಸುದ್ದಿ ಕಡ್ಡಿ ಇದ್ದದ್ದನ್ನು ಗುಡ್ಡ ಮಾಡಿ ಹೇಳಿ ಬಂದರೆ, ಇವಳು ಮನೆಗೆ ಬಂದ ತನ್ನ ಗೆಳತಿ ಲೀಲಾ, ಮತ್ತಿತರರ ಮುಂತೆ ಅತ್ತೆಯನ್ನು ಟೀಕಿಸಿ ನೆಮ್ಮದಿ ಪಡೆಯುತ್ತಾಳೆ. ಹಳೆಯ ಕಾಲದ ಅತ್ತೆಗೆ ಹೊಸ ಕಾಲದ ಸೊಸೆ ಮಾಡಿಸ್ವಲ್ಪ ತಪ್ಪು. ಅಧರ್ಮ. ಬೇಡಾದ ಗಂಡನಿಗೆ ಅನ್ನದ ತುಂಬೆಲ್ಲಾ ಕಲ್ಲು ಎಂಬಂತೆ, ಅವಳು ಪೂರ್ವಪೆಂಪರೆ, ಇವಳು ಪಶ್ಚಿಮ. ಹೀಗೆ ಮನೆಯ ಮಾನ ಕಾಸಿಗೆ ಪಂಚೇರು ಆಗಿದ್ದನ್ನು ಅರಿಯದ ಮೂಢರು ಅವರು. ಇವರಿರ್ವರ ಜಗಳದಲ್ಲಿ ಮನೆಯ ಒಳು ನೀಲವ್ವನ ಪರಿಸ್ಥಿತಿ ತ್ರಿಶಂಕು ಸ್ವರ್ಗದಂತೆ ಯಾರ ಮಾತನ್ನು ಕೇಳಬೇಕು? ಎಂಬುದೇ ಅವಳಿಗೆ ಒಡೆಯದ ಒಗಟುವಾಗಿದೆ. ಅಂತೂ ನೆರೆಮನೆಯ ಸಾವಿತ್ರಮ್ಮ ತಾನು ಸೊಸೆಯೊಂದಿಗೆ ಸಾಧಿಸಿದ ಸಾಮರಸ್ಯದ ಕಥನದಿಂದ, ಅತ್ತೆ ಪಂಕಮ್ಮ ಮತ್ತು ಸೊಸೆ ಮಾಲಾಳಲ್ಲಿ ಸಂಧಾನನೇರ್ಪಡಿಸುತ್ತಾಳೆ. ಅದಕ್ಕೆ ಮಾಲಾಳ ಗೆಳತಿ ಲೀಲಾಳ ನೆರವು ಬೇಕಾಗುತ್ತದೆ. ಹೀಗೆ ಅತ್ತೆ ಸೊಸೆ ನೆಮ್ಮದಿ ಜೀವನಕ್ಕೆ ಶ್ರೀಕಾರ ಹಾಕುತ್ತಾರೆ.

ನಾಟಕದ ಮೂಲ ಉದ್ದೇಶ ಹಳೆಯ ಕಾಲದ ಅತ್ತೆ ಹೊಸಲಿನಂತೆ ಹೊಸ ಕಾಲದ ಸೊಸೆಯನ್ನು ಕಟ್ಟಿ ಆಳಲು ಸಾಧ್ಯವಿಲ್ಲ. ಅವಳು ಸೊಸೆಯೊಂದಿಗೆ ಹೊಂದಿಕೊಂಡು ನಡೆದರೆ ಮಾತ್ರ ಕುಟುಂಬದ ಜೀವನ ಸಾಗವಾಗಿ ಸಾಗುವದು. ಯಾಕೆಂದರೆ ಹಳೆಯ ಕಾಲದ ಜನಕ್ಕೆ ನವನಾಗರಿಕತೆಯ ರೀತಿ ನಡತೆಗಳೆಲ್ಲ ಸೇರವು. ಅವರು ತಮ್ಮ ಗತವೈಭವವನ್ನು ಹೇಳಿಕೊಂಡು ಕಾಲಕಳೆಯಬೇಕೆನ್ನುವವರು. ಕಾಲ ಬದಲಾದಂತೆ ತಮ್ಮ ರೀತಿ-ನಡತೆಗಳಲ್ಲಿ ಬದಲಾವಣೆಯಾಗಬೇಕೆಂಬ ಭಾವನೆ ಅವರಲ್ಲಿಲ್ಲ. ಆದರೆ ಈಗಿನ ಜನ ಅವರ ಹಳೆಯ ವಿಚಾರಗಳಿಗೆ ಕಿವಿಗೊಡದಿರುವದರಿಂದ, ಅವರಿಗೆ ತಮ್ಮ ಪುರಾತನ ಸಂಪ್ರದಾಯಗಳನ್ನು ನಡೆಸಿಕೊಂಡು ಬರಲು ಸಾಧ್ಯವಿಲ್ಲ. ಅತ್ತ ಸುಧಾರಿಸಿದ ಜನರನ್ನು ಅನುಸರಿಸಲು ಮನಸ್ಸಿಲ್ಲ.– ಹೀಗಾಗಿ ಅವರು 'ಕಿಸುಕರ್ತವ್ಯ ತಾ ಮೂಢ' ಎಂಬ ಪರಿಸ್ಥಿತಿಗೆ ಇಳಿದಿದ್ದಾರೆ. ಆದ್ದರಿಂದ ಇಂದು ಅತ್ತೆ-ಸೊಸೆಯರಲ್ಲಿ ತಂದೆ-ಮಕ್ಕಳಲ್ಲಿ ವಿರಸ ಮೈದಾಳಿದೆ. ಇದಕ್ಕೆ ಲೇಖಕರು ಕುಟುಂಬದಲ್ಲಿ ಹೊಸ ಮತ್ತು ಹಳೆ ಜನ ಒಬ್ಬರಿನೊಬ್ಬರು ಹೊಂದಿಕೊಂಡು ಹೋಗುವುದೇ ಶಾಂತಿಯುತವಾದ ಸಹಜೀವನಕ್ಕೆ ನಾಂದಿ– ಎಂದು ಅತ್ತೆ-ಸೊಸೆಯರ ಉದಾಹರಣೆಯಿಂದ ಸೂಚಿಸಿದ್ದಾರೆ.

ಇನ್ನು ಪಾತ್ರಗಳಲ್ಲಿ ಸೊಸೆ ಮಾಲಾಳದೇ ಮುಖ್ಯಪಾತ್ರ. ಅವಳೊಬ್ಬಳು ಆಧುನಿಕ ಸಮಾಜದ ಹೆಣ್ಣುಮಕ್ಕಳ ಪಂಜ್ತಿಗೆ ಸೇರಿದವಳು. ಅಂದ ಮೇಲೆ ನವನಾಗರಿಕತೆಯ ಬೆಡಗು-ಬಿನ್ನಾಣಗಳನ್ನು ಬಯಸುವದು ಸಹಜ. ಅದರಂತೆ ಸ್ವಚ್ಛಂದಜೀವನವನ್ನು ಬಯಸುವುದು ಆಶ್ಚರ್ಯವಲ್ಲ. ಇದಕ್ಕೆ ಪ್ರೌತ್ಸಾಹವೆನ್ನುವಂತೆ ಸಂಸಾರ ನಿರ್ವಹಣೆಯನ್ನು ಅವಳ ಗಂಡ ವಸಂತ ಒಪ್ಪಿಸಿದ್ದಾನೆ. ಯಾವಾಗಲು ಮನೆಯ ಹೆಣ ಅವಳ ಹತ್ತರವೇ ಇರುವದರಿಂದ, ಮನೆಯಲ್ಲಿ ಅವಳದೇ ಕೈಬಾಯಿ, ಅವಳು ಅಂದುದೇ ಆಗಬೇಕು. ಹೀಗಾಗಿ ಮನೆಯಲ್ಲಿಯ ಉಳಿದ ಜನರ ಪರಿವೆಯೆನು ಅವಳಿಗೆ? ಅದರಲ್ಲಂತೂ ತನ್ನ ಅಸೆಗಳಿಗೆ ಅಡ್ಡಗಲ್ಲಾಗಿ ನಿಂತ ಅತ್ತೆಯನ್ನು ಕಂಡರೆ ಆಗಬೇಕಾದರೂ ಹೇಗೆ? ಅದಕ್ಕೆ ಮನೆಗೆ ಬಂದವರ ಎದುರು ತನ್ನ ಅತ್ತೆಯನು ಹೀನಾಯಮಾನವಾಗಿ ಹಳಿಯುತ್ತಾಳೆ. ಹೆಣ್ಣುಮಕ್ಕಳ ಸಹಜ ಭಾವನೆಯಂತೆ ಅತ್ತೆ ಎಂದರೆ ತನ್ನನ್ನು ಗೋಳು ಹೊಯ್ದುಕೊಳ್ಳುವ ಪ್ರಾಣಿ ಎಂಬ ಭಾವನೆ ಅವಳಲ್ಲಿ ಕಂಡುಬರುತ್ತದೆ. ವೃದ್ಧಾಪ್ಯದ ಮರುಳಿನಿಂದ ಏನಾದರೂ ಒಂದು ನಾಲ್ಕು ತಪ್ಪು ಮಾತನಾಡಿದರೂ, ಅದನ್ನು ತಾಳಿಕೊಳ್ಳುವ ಔದಾರ್ಯ ಅವಳಲ್ಲಿಲ್ಲ. ಮಾಲಾ ಕಲಿತವಳಾದರೂ ಅವಳಲ್ಲಿ ಸ್ವಾರ್ಥದ ಭಾವನೆಯು ತುಂಬಿ ತುಳುಕುತ್ತಿದೆ. ಅತ್ತೆ ಪಂಕಮ್ಮ, ಮನೆಯಾಳು ನೀಲವ್ವನ ಮೇಲೆ ಪ್ರತಿನಿಮಿಷಕ್ಕೂ ಹರಿಹಾಯುತ್ತಾಳೆ. ಅವಳಲ್ಲಿ ಅಂತಃಕರಣ, ಗೌರವಗಳಿಲ್ಲ. ಅದಕ್ಕೆ ಹಿಂದಿನ ಜನ 'ಅಂತಃಕರಣ, ಒಳ್ಳೆಯ ಸಂಸ್ಕಾರ ಹೇಳಿ ಕೊಟ್ಟರೆ ಬರುವದಿಲ್ಲ, ಅವು ತಾವೇ ಮನದಲ್ಲಿ ಮೂಡಬೇಕು' ಎಂದು ಹೇಳುವುದು ಸಳ್ಳಿಲ್ಲ ಎಂಬುದರೆ ಪ್ರತೀಕ ಮಾಲಾ. ಅವಳ 'ನೀವು ಇಂದಿಲ್ಲಾ ನಾಳೆ ಕಣ್ಣು ಮುಚ್ಚುವರಿದ್ದೀರಿ .... ಅಂದರೂ ಸುದ್ದಾ ಮನೀಕಾರಭಾರ ನೀವೇ ಮಾಡಬೇಕಂತೀರಲ್ಲಾ' ಎಂಬ ಮಾತುಗಳು, ತನ್ನ ಅತ್ತೆ ಇದ್ದರೆಷ್ಟು ಸತ್ತರೆನ್ನುವ ಎಂಬ ಭಾವ ತೋರಿಸುತ್ತವೆ. ಹೀಗೆ ಲೇಖಕರು ಇಂದಿನ ಸಮಾಜದ ಬಹುಸಂಖ್ಯಾತ ಸೊಸೆಯರು ಯಾವ ರೀತಿ ಅತ್ತೆಯನ್ನು ಕಾಣುತ್ತಾರೆ ಎಂಬುದನ್ನು ಮಾಲಾಳ ಪಾತ್ರದ ಮೂಲಕ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಮಾಲಾಳ ಪ್ರತಿಸ್ಪರ್ಧಿಯಾಗಿ ಮನೆಯಲ್ಲಿ ಅವಳ ಅತ್ತೆ ಪಂಕಮ್ಮ ಚಿತ್ರಿತಳಾಗಿದ್ದಾಳೆ. ಅವಳಲ್ಲಿ ಸೊಸೊಯನ್ನು ಕಟ್ಟಿ ಆಳುವ ಕಡುವು ಇಲ್ಲ. ತನ್ನ ಮಗ ಮನುಷ್ಯನಾದಂದಿನಿಂದ ಹೆಂಡತಿಯ ಕೈಗೆ ಸಗಾರ ಹಾಕುತ್ತ, ತನ್ನ ಕೈ ಬರಿದು ಮಾಡಿರುವನಲ್ಲ ಎಂಬ ನೆವದಿಂದ, ದೇವರ ಮುಂದಿನ ಸಮಯಿ ತಿಕ್ಕಲು ಯಾಕೆ ಕೊಟ್ಟಿಲ್ಲ? ದಿನಕ್ಕೆ ನಾಲ್ಕಾರು ಸಲ ಚಹ ಮಾಡುವುದೇಕೆ? ಮುಂ. ಕ್ಷುಲ್ಲಕ ವಿಷಯಗಳ ಮೇಲೆ ವ್ಯರ್ಥವಾಗಿ ಸೊಸೆಯೊಂದಿಗೆ ಜಗಳವಾಡುತ್ತಾಳೆ. ತನ್ನ ಅತ್ತೆಯ ಕಾಲಕ್ಕಂತೂ ಇಲಿಯಾಗಿ ಬಾಳಿಯಾಯಿತು, ಈಗಾದರೂ ಹುಲಿಯಾಗಿ ಬಾಳೋಣ ಎಂದರೆ ಸೊಸೆಯು ಎದಿರು ಅವಳ ಕೈ ಸಾಗದು. ಅವಳ ಏರಾಟವನ್ನು ಸಹಿಸಲಿಕ್ಕಾಗದೇ, ಕೊನೆಗೆ ಕೈ ಸೋತು ಕೆರೆಭಾವಿ ಪಾಲಾಗಬೇಕೆಂಬುವಲ್ಲಿಗೆ ಅವಳ ಸ್ಥಿತಿ ಬರುತ್ತದೆ. ಆದರೆ ಅಷ್ಟರಲ್ಲಿ ನೆರೆಮನೆಯ ಸಾವಿತ್ರಮ್ಮನ ಜೀವನದಿಂದ ಪಾಠ ಕಲಿಯುತ್ತಾಳೆ. ಧಾರ್ಮಿಕ ಬುದ್ಧಿಯ ಅವಳಿಗೆ ಸೊಸೆಯ ಸುಖ ಲೋಲುಪ ಜೀವನ ಸೇರದು. ಅದರಂತೆ ಸೊಸೆಯ ಅಧಿಕಾರವೇ ಯಾಕೆ ಮನೆಯಲ್ಲಿ?— ಎಂಬ ಸ್ತ್ರೀಸಹಜವಾದ ಮತ್ಸರವಿದೆ. ಅದನ್ನೇ

'ಪ್ರತಿಯೊಂದಕ್ಕೂ ಸುಮ್ಮನ ಹ್ಯಾಂಗ ಇರೋದು ಆಗ್ತದರೀ ? .... ನೀವೇ ಹೇಳ್ರಿ ! ' ಎಂಬ ಮಾತುಗಳಲ್ಲಿ ಪ್ರದರ್ಶಿಸುತ್ತಾಳೆ. ಅವಳಲ್ಲಿ ಸೊಸೆಯ ಬಗ್ಗೆ ದ್ವೇಷವಿಲ್ಲ. ಆದ್ದರಿಂದಲೇ ತನ್ನನ್ನು ಕಟುಮಾತು ಗಳಿಂದ ಟೀಕಿಸಿದ ಸೊಸೆಯೊಂದಿಗೆ ಸಹಜವಾಗಿ ಹೊಂದಿಕೊಂಡು ಹೋಗಲು ಒಪ್ಪುತ್ತಾಳೆ. ಅದೇ ಅವಳ ದೊಡ್ಡ ಗುಣ. ಎಷ್ಟೇ ಆದರೂ ಸೊಸೆ, ಮಗ ಹೊರಗಿನವರಲ್ಲ ಎಂಬ ಕರುಳು ಅವಳದು. ಹೀಗೆ ಲೇಖಕರು ಮತ್ತೆ ವೆಂಕಮ್ಮನ ಬಗ್ಗೆ ನಮ್ಮಲ್ಲಿ ಅನುಕಂಪ ಹುಟ್ಟಿಸು-ತ್ತಾರೆ.

ಇನ್ನಿತರ ಪಾತ್ರಗಳಲ್ಲಿ ಹೆಚ್ಚಾಗಿ ಮನ ಸೆಳೆಯುವ ಪಾತ್ರವೆಂದರೆ ಮಾಲಾಳ ಗೆಳತಿ ಲೀಲಾಳದು. ಅವಳಲ್ಲಿ ಕಾಲೇಜ ಹುಡುಗಿಯರ-ಲ್ಲಿಯ ಸಹಜವಾದ ಮಾತಿನ ಚಾತುರ್ಯ, ಸಲಿಲ ಹಾಸ್ಯ, ಸೌಂದರ್ಯದ ಬಗ್ಗೆ ಹೆಮ್ಮೆ ಕಾಣಬಹುದು. ಅವಳು ಅವಿವಾಹಿತಳು. ಇನ್ನೂ ಸ್ಪಿನಲ್ಲಿ ಚಿಕ್ಕವಳು. ಆದರೆ ಅವಳು ಜೀವನವನ್ನು ಹಗುರೆಂದು ದುಃಕೊಂಡಿಲ್ಲ ಅಂತೇ ತನ್ನ ಗೆಳತಿಯ ಸಂಸಾರ ನೆಮ್ಮದಿಯಿಂದ ಸಾಗಲು ನೆರವಾಗುತ್ತಾಳೆ. 'ಆಧುನಿಕ ಕುಟುಂಬದಲ್ಲಿ ಅತ್ತೆ-ಸೊಸೆಯರಲ್ಲಿ ಸಹಕಾರವೇ ಶಾಂತಿಯುತ ಸಹಜೀವನಕ್ಕೆ ತಾರಕ. ಹೊಸ ಕಾಲದ ಸೊಸೆಯರು ಮಾಡುವ ಪ್ರತಿಯೊಂದು ಕೆಲಸದಲ್ಲಿ ಹಳೆಯ ಕಾಲದ ಅತ್ತೆಯರು ಹುಳುಕು ತೆಗೆಯುತ್ತ ತಮ್ಮ ಗತವೈಭವ-ವನ್ನು ಉಣ್ಣಿಸುತ್ತ ಕಾಲಕಳೆಯದೇ, ನವನಾಗರಿಕತೆಯ ಅವರ ಆಸೆ-ಗಳಿಗೆ ಹೊಂದಿಕೊಂಡು ಹೋಗಬೇಕು ' ಎಂಬ ಅವಳ ಮಾತುಗಳಲ್ಲಿ ಸಗ್ಗತ್ಯ ಅಡಗಿದೆ. ಹೀಗೆ ಅವಳು ಯಾವುದೇ ಅನುಭವಿಕ ಹೃದ-ಯಕ್ಕೆ ಸಾಟಿಯಾಗಿ ಮೂಡಿ ಬಂದಿದ್ದಾಳೆ. ಮದುವೆಗೆ ಮೊದಲಿನ ಸ್ವಚ್ಛಂದ ಜೀವನ ಮದುವೆ ಆದ ಮ್ಯಾಲ ಸಾಧ್ಯವಿಲ್ಲವೆಂದು 'ಮುಂದ ಮದುವಿ ಆದ ಮ್ಯಾಲ ಕೆಲಸಾ ಬೊಗಸಿ....' ಎಂಬ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾಳೆ. ಮಾಲಾಳಿಗೆ ' ಅವರು ' ಎಂದರೆ ಯಾರು ? ' ಇಂಥ ಅತ್ತೆಗೆ ಅತ್ತೆ ಅನ್ನೂದಕ್ಕಿಂತ 'ಅ' ತೆಗೆದು 'ಕ' ಹಾಕಿ ಕರೆಯಬೇಕು ' ಮತ್ತು ' ನಿಮ್ಮ ಅತ್ತೆ ಮುಂದೀ ಮನಿಗೆ ಹೊಗಿ ಮನೆಯ ಸುದ್ದಿ ಹೇಳಿಬಂದರೆ, ನೀನು ಮನೆಗೆ ಬಂದವರ ಎದುರಿಗೆ ಅವಳನ್ನು ಟೀಕಿಸಿ ಸಮಾಧಾನ ಪೊಂದುತ್ತೆ' ಮುಂ. ಸಂದರ್ಭಗಳಲ್ಲಿ ಅವಳು ಹಾಸ್ಯದ ಜೊಳೆ ಜಿನಿಸಿದ್ದಾಳೆ. ಕಾಲೇಜಿನಲ್ಲಿಯ ತನ್ನ ಭಾಷಣದ ಬಗ್ಗೆ ಅಭಿಪ್ರಾಯ ಕೇಳುವಲ್ಲಿ ಅವಳಿಗೆ ತನ್ನ ಸೌಂದರ್ಯದ ಬಗ್ಗೆ ಇದ್ದ ಹೆಮ್ಮೆ ವ್ಯಕ್ತವಾಗಿದೆ. ಹೀಗೆ ಲೀಲಾ ಸರಳ ಜೀವನದಿಂದ ಓದುಗರ ಮನ ಸೆಳೆಯುವೇ ಇರಲಾರಳು.

ಅತ್ತೆ-ಸೊಸೆಯರ ಮಾತಿನ-ಕಾಳೆಗದಲ್ಲಿ ಮನೆಯಾಳು ಸೀಲವ್ವನ ಪರಿಸ್ಥಿತಿ ಎಂದರೆ *'On the horns of dilemma'* ಎಂಬಂತೆ ಅವನ್ನೇ 'ಈಗಿನ ಕಾಲದೊಳಗ ಅತ್ತಿ ಸೊನೆರ ಜಗಳ..... ಒಂದೂ ತಿಳಿಲಾರದಂಗ ಆಗೇದ' ಎಂಬ ಅವಳ ಮಾತುಗಳಲ್ಲಿ, ದಿಕ್ಕು ತೋಚದ ಪರಿಸ್ಥಿತಿಯಲ್ಲಿ ಅನಸಿದ್ದಳೆಂಬುದು ವ್ಯಕ್ತವಾಗುವುದು. ' ಹೆಣ್ಣು ಮಕ್ಕಳು ಮದುವೆಯಾದಸಂತರ ಕಾಲೇಜ ಹುಡುಗೆಯರಂತೆ ಸ್ವಚ್ಛಂದ ವಾಗಿ ತಿರುಗಾಡಲು ಹೇಗೆ ಸಾಧ್ಯ ? ಹೊತ್ತು ಕಳೆಯಬೇಕಾದರೆ ಮನೆಯೊಳಗೆ ಏನಾರೆ ಕೆಲಸ ಮಾಡಿಕೊಂತ ಕುಂತ್ರೆ ಆಗುವದಿಲ್ರೇ ಎಂಬ ಅವಳ ಮಾತುಗಳಲ್ಲಿ ಈಗಿನ ಕಾಲದ ನವಯುವತಿಯರಿಗೆ ಅನುಭವಿಕ ಹೃದಯದ ನುಡಿ ಇದೆ. 'ಅಕ್ಕಿಯನ್ನು ಹಸನು ಮಾಡು. ವಾಗ್ಗೆ 'ಅಕ್ಕಿಯ ತುಂಬ ಬಿಳಿಯ ಹಳ್ಳಾ ತುಂಬ್ಯಾನ, ಕರೀ ಹಳ್ಳ ಇದ್ದರೆ ಕಣ್ಣಿಗೆ. ಸ್ವಲ್ಪ ಒಡೆದು ಕಾಣಸ್ತಾವ್ರಿ.....' ಅದಕ್ಕೆ ಅತ್ತೆ ವೆಂಕಮ್ಮ ಕರೀ ಹಳ್ಳ ಇಪ್ಪ ಅಕ್ಕೀನ ತರಸೋಣಂತ ಎನ್ನೆಲು, 'ಅಯ್ಯ ಬಾಯರ್ಸ ! ಇದೆಂಥಾ ಮಾತರಿ ?.... ತರಸೋಣಂತ ಹೇಳ್ತೀರಲ್ಲ !' ಎಂಬಲ್ಲಿ ಅವಳಲ್ಲಿಯ ಸಹಜಹಾಸ್ಯ ಗುಣ ಪ್ರಕಟವಾಗಿದೆ. ಹೀಗೆ ಸೀಲವ್ವ ಕೆಲವೇ ಮೇಳೆ ರಂಗದ ಮೇಲೆ ಬಂದರೂ, ಮಾರ್ಮಿಕವಾಗಿ ಎಲ್ಲರ ಮನ ಸೆಳೆಯುತ್ತಾಳೆ.

ಕಡೆಯದಾಗಿ ನೆರೆಮನೆಯ ಸಾವಿತ್ರಮ್ಮನ ಪಾತ್ರ ಅನುಭವಿಕ ಹೃದಯದ ಪಡಿನೆಳಲು. ಸ್ವಾರ್ಥಕ್ಕಾಗಿ ಅತ್ತೆ-ಸೊಸೆಯರಲ್ಲಿಯ ಜಗಳವನ್ನು 'ಉರಿಯುತ್ತಿರುವ ಬೆಂಕಿಯಲ್ಲಿ ತುಪ್ಪ ಹೊಯ್ದಂತೆ ಹೆಚ್ಚಿಸಬೇಕೆಂಬ ಬುದ್ಧಿ ಅವಳದಲ್ಲ. ಅಂತೇ ವೆಂಕಮ್ಮನ ಸಂಸಾರ ರಥ ಸುಗಮನಾಗಿ ಸಾಗುವಂತೆ ಮಾಡುತ್ತಾಳೆ. ಇವಳ ಪಾತ್ರ ಚುಟುಕಾವರೂ ನಾಟಕದ ಮೂಲ ಉದ್ದೇಶಕ್ಕೆ ಮುಖ್ಯ ಸಹಾಯಕ ವಾಗಿದೆ.

ಪಾತ್ರಗಳ ರಚನೆಯಲ್ಲಿ ಲೇಖಕರು ಬಹುಮಟ್ಟಿಗೆ ಯಶಸ್ವಿ ಯಾಗಿದ್ದಾರೆ ಎಂದು ಹೇಳಬಹುದು. ಆದರೆ ದೃಶ್ಯ ನಿರೂಪಣೆಯಲ್ಲಿ ಕಾಲವನ್ನು ಸೂಚಿಸಿದ್ದರೆ ಚೆನ್ನಾಗಿರುತ್ತಿತ್ತು. ಯಾಕೆಂದರೆ ೧ನೆಯ ದೃಶ್ಯದಲ್ಲಿ ಸಂಜೆಯ ವೇಳೆಗೆ ತಿರುಗಿ ಬರುವನೆಂದು ಹೇಳಹೋಗಿ ಲೀಲಾ, ಏಕಸ್ಮಿಕವಾಗಿ ೨ನೆಯ ದೃಶ್ಯದಲ್ಲಿ ಪ್ರವೇಶಿಸುವಲ್ಲಿ ವಾಸ್ತವ ವೆನಿಸುವುದಿಲ್ಲ. ಆದರಂತೆ ರಂಗಭೂಮಿಯ ಮೇಲೆ ಎರಡೇ ಪಾತ್ರಗಳ (ಉದಾ: ೧ನೆಯ ದೃಶ್ಯದಲ್ಲಿ ಮಾಲಾ ಮತ್ತು ಲೀಲಾ. ೨ನೆಯ ದೃಶ್ಯ ದಲ್ಲಿ ವೆಂಕಮ್ಮ ಮತ್ತು ಸಾವಿತ್ರಿಮ್ಮ) ಬಹಳ ವೇಳೆಯ ವರೆಗೆ ಉಳಿ ಯುವದರಿಂದ, ನೋಡುವವರಿಗೆ ಮತ್ತು ಕೇಳುವರಿಗೆ ಬೇಸರ ತರಿಸು ವಂತೆ ಅನಿಸಬಹುದು. ಆದ್ದರಿಂದ ೧ನೆಯ ದೃಶ್ಯದಲ್ಲಿ ಮನೆಯಾಳು ಸೀಲವ್ವ, ೨ನೆಯ ದೃಶ್ಯದಲ್ಲಿ ಸೊಸೆ ಮಾಲಾ ನಡು ನಡುವೆ ರಂಗ ಮೇಲೆ ಬಂದಿದ್ದರೆ, ನಾಟಕ ಇನ್ನೂ ಕಳೆ ಏರಬಹುದಾಗಿತ್ತು. ಆದರಂ ಅತ್ತೆ ವೆಂಕಮ್ಮ, ನೆರೆಮನೆಯ ಸಾವಿತ್ರಮ್ಮ ಮತ್ತು ಲೀಲಾ ಇವ ರಲ್ಲಿಯ ಯಾವ ಸಂಭಾಷಣೆಯನ್ನೂ ಕೇಳದ ಸೊಸೆ ಮಾಲಾ, ಅವ ಸಂಧಾನಕ್ಕೆ ಒಪ್ಪಿಗೆ ಎನ್ನುವಂತೆ ಚಹಕ್ಕೆ ಬೆಣಸವೀಯುವುದು ಅಷ್ಟ ಸೋಜಿಸಿನಿಸುವುದಿಲ್ಲ. ಆವೇ ರೀತಿ ಸೊಸೆ ಮಾಲಾ, ತನ್ನ ಅ ಸಾವಿತ್ರಮ್ಮನ ಮುಂದೆ ಮಾಡಿದ ತನ್ನ ಮೇಲಿನ ಟೀಕೆಗಳನ್ನು ಅಹಾ ನಿಸುವಂತೆ ರಂಗದ ಮೇಲೆ ಬಂದಿದ್ದರೆ, ಇನ್ನೂ ವಾಸ್ತವಿಕನೆನಿಸುತ್ತಿತ್ತು ಆದರಂತೆ ಸೊಸೆ ಮಾಲಾಳನ್ನು ಕಂಡರೆ ಮುಖ ಅತ್ತ ತಿರುಗಿಸು ಅತ್ತೆ ವೆಂಕಮ್ಮ, ಸೊಸೆಯೊಂದಿಗೆ ಅವಳಲ್ಲಿ ಯಾವ ಅಗಾಧತೆಯನ್ನು ಕಾಣದೇ ಒಮ್ಮೆಲೆ ಸಾಮರಸ್ಯ ಸಾಧಿಸುವುದಕ್ಕೆ ಸಿದ್ಧವಾಗುವುದು ನೈಜನೆನಿಸುವುದಿಲ್ಲ.

ಸಾದರ ಸ್ವೀಕಾರ

೨೭. ಅಬೋಲಿಸ್ (ಕಥಾಸಂಕಲನ) ಬರೆದವರು ಶ್ರೀಮಾನ್ ಯಶವಂತ ಚಿತ್ತಾಲ, ಮುಂಬಯಿ. ಧಾರವಾಡದ ಮನೋಹರ ಗ್ರಂಥಮಾಲೆಯ ೧೪೬ನೆಯ ಪ್ರಕಟನೆ. ಕ್ರೌ.ಆ. ೧೭೨ ಪುಟಗಳು. ಸಾಮಾನ್ಯ ಪ್ರತಿಗೆ ೩-೫೦; ಉತ್ತಮ ಪ್ರತಿಗೆ ೩-೮೦.

೨೮. ಶ್ರೀ ಭುವನೇಶ್ವರೀ ಪಂಚಾಂಗ (ಶಕ ವರ್ಷ ೧೮೮೩ ಪ್ಲವನಾಮಸಂವತ್ಸರ) ಕರ್ತೃಗಳು ಜ್ಯೋತಿರ್ವಿದ್ವಾನ್, ಶ್ರೀ. ಶೇಷಶಾಸ್ತ್ರಿ ಹೆಬ್ಬಾಳ, ಸುರಪುರ. ಪ್ರಕಾಶಕರು ಆರ್ಯವೈಶ್ಯ ಸಂಘ, ರಂಗಂಪೇಟೆ ಸುರಪುರ). ೧೦೨ ದೊಡ್ಡ ಪುಟಗಳು. ಬೆಲೆ ೦೦-೪೫.

ಸುರಪುರದ ಜ್ಯೋತಿರ್ವಿದ್ವಾಂಸರ ಮನೆತನವು ಹಲವು ತಲೆಮಾರುಗಳಿಂದ ನಡೆದುಕೊಂಡು ಬಂದಿದು. ಈ ಮನೆತನದವರು ರಚಿಸಿದ ಪಂಚಾಂಗವು ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಎಂದಿನಿಂದಲೂ ಜನಾದರಕ್ಕೆ ಪಾತ್ರವಾಗಿ ಪ್ರಸಿದ್ಧಿಯನ್ನು ಪಡೆದಿದು. ಜನತೆಯ ಕಾಲೋಚಿತ ಅಪೇಕ್ಷೆಯನ್ನರಿತು ಅದರಲ್ಲಿ ಈಗ ಅನೇಕ ಜಾತಕ, ಸಧೂವರ ಘಟನಾಯೋಗ, ರಾಶಿಭವಿಷ್ಯ, ದೇಶ-ವಿದೇಶಗಳ ಭವಿಷ್ಯ, ಮುಹೂರ್ತ ವಿಚಾರ. ಮೊದಲಾದ ಉಪಯುಕ್ತ ವಿಷಯ ತುಂಬಿದ ಪುಟಗಳನ್ನು ಹೆಚ್ಚಿಸಲಾಗಿದೆ. ಸುಂದರವೂ ಸುಬೋಧವೂ ಆದ ಮುದ್ರಣ. ಸ್ವಾತಂತ್ರ್ಯ-ನೈಷ್ಟಿಕ ಏಕಾದಶೀ ನಿರ್ಣಯ, ವಿವಿಧ ಹಬ್ಬ, ಹುಣ್ಣಿಮೆ, ಪುಣ್ಯತಿಥಿ, ಜಾತ್ರೆಯ ದಿನ ಇನ್ನೆಲ್ಲವುಗಳನ್ನೂ ಸವಿವರವಾಗಿ ಕೊಡಲಾಗಿದೆ. ಪಂಚಾಂಗ ಭಕ್ತರು ಅವಶ್ಯ ಮನೆಯಲ್ಲಿ ಇಟ್ಟು ಪ್ರಯೋಜನ ಪಡೆಯಬೇಕಾದ ಪಂಚಾಂಗವಿದು.

೨೯. ಆಕಾಶ ಮಲ್ಲಿಗೆ (ಕವನ ಸಂಕಲನ). ಬರೆದವರು ಶ್ರೀಮಾನ್ 'ವಿರೂಪಾಕ್ಷ'. ಪ್ರಕಾಶಕರು ಶ್ರೀ ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಳ್ಳಿ, ಬಳ್ಳಾರಿ ಜಿಲ್ಲೆ. ಕ್ರೌ. ಆ. ೪೮ ಪುಟಗಳು. ಬೆಲೆ ೧-೦೦.

ಶ್ರೀ. 'ವಿರೂಪಾಕ್ಷ' ಅವರು ತರುಣ ಕವಿಗಳು. ಅವರ ಎರಡನೆಯ ಸಂಕಲನವಿದು. ಕೆಲವು ಕವಿತೆಗಳು ಕವಿಯ ಒಳ್ಳೆಯ ಭವಿಷ್ಯದ ಬಗೆಗೆ ಆಶೆಯನ್ನು ಹುಟ್ಟಿಸುವಂತಿವೆ.

೩೦. ಬೆಳಕು (ಲೇಖನ ಸಂಪುಟ). ಪುಟ್ಟಯ್ಯ ರಾಘವೇಂದ್ರ ಎಜ್ಯುಕೇಶನ್ ಸೊಸಾಯಿಟೀಜ ಹೈಸ್ಕೂಲಿನ ಕರ್ನಾಟಕ ವಿದ್ಯಾರ್ಥಿ ಸಂಘದವರು ಸಂಗ್ರಹಿಸಿ ಪ್ರಕಟಿಸಿದ ಸಂಪುಟವಿದು. ಕ್ರೌ. ಆ. ೬೮ ಪುಟಗಳು.

ಒಂದು ಕಾಲ ಹೀಗಿದ್ದಿತು: ಕನ್ನಡಿಗರು ನೆರೆನಾಡು ನೆರೆನಾಡುಗಳಿಗೆ ಕೆಲಸಕ್ಕೆಂದು ಹೋಗಿ ನಿಂತರೆ, ತಮ್ಮ ಮಾತೃಭಾಷೆಗೆ ತೀಲಾಂಜಲಿಯನ್ನೇ ಕೊಡುತ್ತಿದ್ದರು. ಅವರು ಮುಂದೆ ಕರ್ನಾಟಕಕ್ಕೆ ಬಂದರೂ, ಅವರು ಕನ್ನಡಿಗರಾಗಿ ಉಳಿದಿರುತ್ತಿರಲಿಲ್ಲ. ಕರ್ನಾಟಕತ್ವದ ಇಂದಿನ ಜಾಗೃತಿ, ಎಲ್ಲಿಯಿ ಇದ್ದರೂ ತಮ್ಮ ಕನ್ನಡತನವನ್ನು ಕಾಯ್ದುಕೊಳ್ಳಬೇಕೆಂಬ ಭಾವನೆಯನ್ನು ನಮ್ಮ ಜನರಲ್ಲಿ ಮೂಡಿಸಿದೆ. ಅದರ ಪ್ರತ್ಯಕ್ಷ ಪ್ರಮಾಣವೆಂದರೆ, ಪುಣೆಯ ರಾಸ್ತಾಪೇಟೆಯ ಕನ್ನಡ ಹೈಸ್ಕೂಲು— ಅದರ ಪರವಾಗಿ ಹೊರಟ ಈ 'ಬೆಳಕು' ಎಂಬ ಕನ್ನಡ ಲೇಖನ ಸಂಪುಟ. ಇಂದಿನ ಕಿರಿಯ ಪ್ರಯತ್ನ ಹಿರಿಯದಾಗಿ, ಕನ್ನಡಿಗರ ಸ್ವಸಂಸ್ಕೃತಿಯ ಸ್ವಭಾವ ಜೀರೆಯವರ ಕಣ್ಣೆದುರೂ ಮುಂಚೂ ವಂತಾಗಲಿ.

ಶೈಲಿಯು ವೈಷ್ಣಿಯಿಂದಲೂ ಆಸ್ಫೋ, ನಾಟಕದ ಉದ್ದಕ್ಕೂ ಹಾಸ್ಯದ ಹೊಳೆ ಹರಿಸಿದ್ದರೂ, ಲೇಖಕರು ವೆಂಕಮ್ಮನ ಪಾತ್ರದಲ್ಲಿ ನಿಜವಾದ ಫೈಸ್ಯಭಾವ ಮೂಡಿಸಲು ಶಕ್ತರಾಗಿಲ್ಲವೆಂದು ಅನಿಸುತ್ತದೆ. ಅದರೆ ನೀಲವ್ವ ಉಪಯೋಗಿಸುವ ಗ್ರಾಮ್ಯಭಾಷೆ, ಲೀಲಾನ ಸಹಜ ಮಾತಿನ ವೈಖರಿ, ಸಾವಿತ್ರೆಮ್ಮನಲ್ಲಿಯ ಸಹಜೀವನತತ್ಪ ಚೆನ್ನಾಗಿ ಒಡಮೂಡಿವೆ. ಲೇಖಕರು ವೆಂಕಮ್ಮ ಮುತ್ತು ಮಾಲಾರ ಪಾತ್ರಗಳಲ್ಲಿ ಸ್ವಾಭಾವಿಕ ಭಾಷಾ ಪ್ರಯೋಗ ಉಪಯೋಗಿಸಿಲ್ಲವೆಂದು ಅನಿಸುವದು. ಯಾಕೆಂದರೆ ವೆಂಕಮ್ಮನ 'ಸಮಯಕ್ಕ ಎಣ್ಣಿ ಅಂದ್ರ ಮುಚ್ಚಿ ಮುಣಗೇದ,' 'ಒಂದ ತಿಳಿ ಅಂದ್ರ ಸೂರಾಎಂಟು ತೀಲಿಕ್ಕೆ ಹತ್ಯಾವ' ಮತ್ತು 'ಅವಳು ಮಾಡಿದ್ದೇ ಮಾರ್ಗ ಅನೇನ' ಮುಂ. ಮಾತುಗಳಲ್ಲಿ; ಅದರಂತೆ ಮಾಲಾನ 'ಶಿತ್ತೀ ಮನಿಗೆ ಬಂದವ್ಯಾಲ ಒಂದಾದರೂ ಹೊಸಾ ಪತ್ತಲಾ ತರಿಸಿದ್ದರ ಮೂರ ಇತ್ತು' ಮತ್ತು 'ಮಗಾ ತಾಯೀ ಮಾತು ಕೇಳಿ ನೆಟ್ಟ ನೆಟ್ಟ ಹೊಡದು ಸಿನ್ಮಿಲ್ ಹಾಸ್ಪಿಟಲಕ್ಕ ಕರಸೂ ವ್ಯವಸ್ಥಾ ಮಾಡಿದ್ರ....' ಮುಂ. ಮಾತುಗಳಲ್ಲಿ ಸರಿಯಾದ ಭಾಷೆ ಉಪಯೋಗಿಸಿಲ್ಲವೆಂದು ಹೇಳಬಹುದು. ಆದರೂ ಬಹುಸಂಖ್ಯಾತ ಒಳ್ಳೆಯ ಗುಣಗಳನ್ನೊಳಗೊಂಡ ಈ ನಾಟಕ, ಧಾರ್ಮಿಕ ಸಮಾಜದ ಕೌಟುಂಬಿಕ ಜೀವನದ ಮೇಲೆ ನಿಜವಾಗಿ ಕನ್ನಡಿಯಂತೆ ಇದೆ.

ನಾಟಕದ ಕಥಾವಸ್ತು ಹಳೆಯದಾದರೂ ವಿಷಯ ನಿರೂಪಣೆ ಚೆನ್ನಾಗಿದೆ. ಹಳೆಯ ಕಾಲದ ಅತ್ತೆಯು ಕಾಲ ಬದಲಾದಂತೆ ಸೊಸೆಯೊಂದಿಗೆ ಹೊಂದಿಕೊಂಡು ಹೋಗುವ ನಿರ್ಧಾರಕ್ಕೆ ಬರುತ್ತಾಳೆ. ಹೀಗೆ ಅವಳ ಕಡುವಿನ ಅವತಾರ ಮುಗಿದು, ಮನೆಯಲ್ಲಿ ಸಾಮರಸ್ಯದ ಅಧ್ಯಾಯ ಪ್ರಾರಂಭವಾಗುತ್ತದೆ. ಅದಕ್ಕೇ ಲೇಖಕರು 'ಮುಗಿದ ಅವತಾರ' ಎಂದು ತಲೆಬರಹ ಕೊಟ್ಟಿದ್ದೂ ಸಮಂಜಸವೆನಿಸುವದು. ಈ ರೀತಿ ಆಧುನಿಕ ಸಾಮಾಜಿಕ ಜೀವನದ ರಹಸ್ಯಗಳನ್ನು ಭೇದಿಸುವ ಪಥದಲ್ಲಿಗಳ ಮೇಲೆ ಮುಂದೆ ಬರುವ ಪ್ರಸ್ತುತ ಲೇಖಕರ ಸ್ವಾಭಾವಿಕ ಕೃತಿಗಳಿಗೆ ಹಾರ್ದಿಕ ಸ್ವಾಗತ ಸಿಲ್ಲಿತ.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬಿಡಗಿನೊಂದಿಗೆ ಇದೀಗ ಬಿಳಿಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕಥಾಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

ಜಯಂತಿ

ಹೊಸವರ್ಷ

*

ಹೊಸವರ್ಷ ಬಂದಿದೆಯೆಂದು ಹಿಗ್ಗಿ ಹಾರಾಡುವ ಹಸುಳೆಗಳೆ, ಹಳೆಯ ವರ್ಷದ ಹೊಟ್ಟೆಯಿಂದ ಹುಟ್ಟಿದುದೇ ಈ ಹೊಸವರ್ಷವೆಂಬುದನ್ನು ಮರೆಯದಿರಿ. ಹಳೆಯ ತಾಯಿ-ತಂದೆಗಳ ಗುಣ-ಅಗುಣಗಳು ಮಗುವಿನಲ್ಲಿ ಮೊಳಕೆಗೊಂಡಿಪ್ಪುವೆಂಬುದನು ಮರೆಯಬೇಡಿರಣ್ಣಾ!

ಬೇವು ಹೂ ಬಿಟ್ಟು ನಳನಳಿಸುತಿರಬಹುದು; ಮಾವು ಕಾಯ್-ಗೊಂಚಲುಗಳಿಂದ ತುಂಬಿನಿಂತಿರಬಹುದು. ಬರಲಿರುವ ಹೊಸದಿನಂಗಳೇ ಬೇವು-ಮಾವುಗಳನ್ನು ಬರಲು ಬರಲಾಗಿಸುವುದೆಂಬುದು ಬಹುಕಾಲದ ಅನುಭವವಣ್ಣಾ! ಹೊಸವರ್ಷ ತಂದಿರುವ ಈ ಬೇವು-ಮಾವುಗಳ ವ್ಯೆಸಿರಿ, ಹಳೆಯ ವರ್ಷದ ತಪಸ್ಸಿನ ಪರಿಣಾಮವೆಂಬುದನು ಅರಿಯಿರಣ್ಣಾ!

ದಿನದ ಹಿಂದೆ ದಿನಗಳು ಬಂದು ಸಾಗುತ್ತಲೇ ಇರುವುವಣ್ಣಾ! ಇಂದಿನ ಹೊಸತು ನಾಳೆ ಹಳೆಯದೆನಿಸುವುದಣ್ಣಾ! ನಿರ್ಗದ ಕರ್ತವ್ಯವೇ ಇದಾಗಿದೆ; ಹೊಸದನು ಹಳತನಾಗಿಪ್ಪುದು; ಹಳೆಯದರಲ್ಲಿಯೆ ಹೊಸದನು ಹುಟ್ಟಿಸುವುದು. ಹನನವಿದನು ಅರಿತುಕೊಂಡು, ಹದವರಿತು ಬಾಳುವುದೆ ಮಾನವತೆಯಣ್ಣಾ!

ಹಳೆಯ ಬಾಳಿನ ನೆನಹು ಮನುಜಂಗೆ ಹೊಸ-ಹೊಸತಾಗಿಯೆ ಇಪ್ಪುದು! ಹೊಸಕಾಲ ಬಾಳ್ವೆಗೆ ಎಡೆಗೊಡುವುದು; ಹಳೆಯ ಕಾಲ ಬಾಳ್ವೆ ಬುತ್ತಿಯನೊದಗಿಸುವುದು. ಅನಾಮ್ಯನಂತನಾದ ತನ್ನನು, ಹಳೆಯದು ಹೊಸದು ಎಂಬ ಬಗೆಯಿಂದ ನೋಡುವ ಹಸುಳೆಗಳ ಹುಸಿತಿಳಿವಿಗಾಗಿ. ಮುಸಿ ಮುಸಿ ನಗುವ ನಮ್ಮ ಕಾಲರಾಯ!

—ಮಾನಾಳಿಕ.

JAYANTI

● ಈ ಸಂಚಿಕೆಯಲ್ಲಿ ●

ಭಾರತವು ಸಾಗುತ್ತಿರುವ ಸುಪಥ (ಸಂಪಾದಕೀಯ)
ಸಂಪಾದಕರು ೩೨೫

ನಾಡನುಡಿ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೩೨೭

ಕೊನೆಯ ಉಡುಗೊರೆ (ಸಣ್ಣಕತೆ)
"ರುಚಿರ" ಮಂಗಳೂರು ೩೨೯

ಕಲಿಪು ಹಬ್ಬುದಿಗಳು
ಕೆಕ್ಕುಂಜೆ ಗೋಪಾಲಕೃಷ್ಣಭಟ್ಟ, ಎಂ. ಎ. ಮಂಗಳೂರು. ೩೩೨

ಅಯಿದು ವರ್ಷದ ಹಿಂದಿನ ಕತೆ (ಕವನ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೩೩೪

ಸಾರಸ್ವತಾರ್ (ಏಕಾಂಕ ನಾಟಕ)
"ಚಿದಂಬರಾನಂದ" ಧಾರವಾಡ ೩೩೬

ಕಾಳಿದಾಸನ ಸುಭಾಷಿತಗಳು (ಕುಮಾರಸಂಭವ)
ಶ್ರೀ. ಎಂ. ಶಂಕರ ಕೆದಿಲಾಯ, ಎಂ. ಎ. ಬಿ., ಟಿ. ಮದ್ರಾಸು ೩೪೬

ಬಳು ಬಡಿದಿದೆ ಗಂಟೆ (ಕವನ)
"ರಂಜನ" ಭಟ್ಟ, ಮದ್ರಾಸು ೩೪೪

ಪುರಸ್ಕಾರ (ಐತಿಹಾಸಿಕ ಸಣ್ಣಕತೆ)
ಶ್ರೀ. ಎಸ್. ಆರ್. ಪಾಡಿ, ಮುಟ್ಟತ್ತಾಯ (ದ. ಕ.) ೩೪೫

ಭಾವಪ್ರಣಯ (ಕವನ)
ಶ್ರೀ. ಸುಂದರ ಸಾಡಕರ್ಣಿ, ವಲ್ಲಭಪಟ್ಟಣ ೩೫೧

ಅರುಣೋದಯ (ಕವನ)
ಶ್ರೀ. ಕಂ. ಸು. ಸಿಂಡಬಾದ್ರಿಶರ್ಮ, ಬಿ. ಎಸ್ಸಿ. ಬಿ. ಎಡ್. ಹೊಸಕೋಟೆ ೩೫೨

ಅಸಿ ಬಕಾಸುರ (ಕವನ)
ಶ್ರೀ. ಈಶ್ವರ ಹಿರೇಸಂದಿಹಳ್ಳಿ, ಧಾರವಾಡ ೩೫೩

ಅಭ್ಯುದಯ (ಪೌರಾಣಿಕ ರೂಪಕ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೩೫೫

ಸಾಹಿತ್ಯಪರಿಷತ್ತಿನ ಶಿಕ್ಷಣಾಧಿವೇಶನ
ಶ್ರೀ. ಕೆ. ಎಸ್. ಶ್ರೀಪತಿ, ಬಿ. ಎಸ್ಸಿ. ಮಂಗಳೂರು ೩೫೬
ಶ್ರೀ. ಚನ್ನಬಸಪ್ಪ ಆರ್. ಕುಲಕರ್ಣಿ, ತಡಸ ೩೫೮

ಸಾದರ ಸ್ವೀಕಾರ .... (ಕವರ್ ೩ನೇ ಪುಟ)

ಜಯಂತಿ

ಸಂಪುಟ ೪] [ಸಂಚಿಕೆ ೧೦

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುತ್ತದೆ.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೬ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಭಾರತವು ಸಾಗುತ್ತಿರುವ ಸುಪಥ

ಬರುತ್ತಿರುವ ಹೊಸ ಹೊಸ ದಿನಗಳು, ಹೊಸ ಹೊಸ ಬಗೆಯ ಸಮಸ್ಯೆ- ಸಂಕಟಗಳನ್ನೇ ಹೊತ್ತುಕೊಂಡು ಬರುತ್ತಲಿವೆ. ನಿಶ್ಚಿಂತೆಯಿಂದ ನಮ್ಮ ಮಟ್ಟಿಗೆ ನಾವು ಒದುಕಿಕೊಂಡು ಇರಬೇಕೆನ್ನುವವರಿಗೆ, ಇಂದು ಅನುಕೂಲ ಅವಕಾಶವೆ ಇಲ್ಲದಂತಾಗಿದೆ. ನಿಜವಾಗಿ ನೋಡಿದರೆ, ಪ್ರಪಂಚದಲ್ಲಿ ಇಂದು ಧೀಮಂತರಿಗೆ ಕೊರತೆಯಿಲ್ಲ. ಅವರೆಲ್ಲರೂ ಪ್ರಪಂಚದ ಸುಖ-ಸಮಾಧಾನಗಳ ಸಲುವಾಗಿ ವಿಚಾರ ಮಾಡುತ್ತಲೇ ಇದ್ದಾರೆ. ವೈಷಮ್ಯ ಹೆಚ್ಚುತ್ತ ನಡೆದಿರುವ ಜಗತ್ತಿನಲ್ಲಿ ಸಮತೆಯನ್ನು ಉಂಟುಮಾಡಬೇಕಾದ ಹಂಚಿಕೆಗಳನ್ನು ಹುಡುಕಲು ತಮ್ಮ ಆಯುಷ್ಯದ ಬಹುಭಾಗವನ್ನು ವೆಚ್ಚಮಾಡುತ್ತಲಿದ್ದಾರೆ. ಇದೇ ಉದ್ದೇಶದಿಂದ ಅನೇಕ ಸಂಸ್ಥೆ – ಸಂಘಗಳು ಹುಟ್ಟಿಕೊಂಡಿವೆ; ಉದ್ದೇಶೋಚಿತವಾದ ವಾಙ್ಮಯವನ್ನು ಸೃಷ್ಟಿಸುತ್ತಲಿವೆ ಶಾಂತಿಮಯವಾದ ಜೀವನ ಜಗತ್ತಿನ ಜನರಿಗೆಲ್ಲ ಬೇಕಾಗಿದೆಯೇನೋ ನಿಜ, ಆದರೆ ಬರುತ್ತಿರುವ ದಿನಗಳು ಶಾಂತಿ-ಸಮಾಧಾನಾಪೇಕ್ಷೆಗಳನ್ನು ಬಿರುಸಿನಿಂದ ಕಂಗೆಡಿಸುವಂತಹವಾಗಿಯೇ ಬರುತ್ತಲಿವೆ.

ಜಗತ್ತಿನ ಜನರೆಲ್ಲರೂ ಶಾಂತಿ-ಸಮಾಧಾನಗಳನ್ನು ಬಯಸುವವರಾದರೂ ಸ್ವಾಭಾವಿಕವಾದ ಜೀವನವೈಷಮ್ಯಗಳೂ ಸಾಂಸ್ಕೃತಿಕ ವಿಷಮತೆಯೂ, ಆವರ ಬಯಕೆಯ ದಾರಿಯಲ್ಲಿ ಮುಳ್ಳು-ಕಲ್ಲುಗಳನ್ನು ಹರಡುತ್ತಲಿವೆ. ವೈಜ್ಞಾನಿಕ ಪ್ರಗತಿಯು ನಿರ್ಮಿಸಿದ ಬಲದ ವಿಷಮತೆ, ಶಾಂತಿ-ಸಮಾಧಾನದ ಜೀವನಕ್ಕೆ ತಡೆಯೊಡ್ಡುತ್ತ ನಡೆದಿದೆ. ಇದು ಮಾನವತಾಭಾವಕ್ಕಿಂತಲೂ ವ್ಯಕ್ತಿ ವ್ಯಕ್ತಿಗಳಲ್ಲಿ ಮಹತ್ತ್ವಾಕಾಂಕ್ಷೆಯ ಭಾವವನ್ನು ಹೆಚ್ಚಿಸಿ, ಅದನ್ನು ಪೋಷಿಸುತ್ತಲಿವೆ. ಎಂತಲೇ ವೈಜ್ಞಾನಿಕ ಪ್ರಗತಿಯಲ್ಲಿ ಹಿಂದೆ ಬಿದ್ದ ಜನರೆಲ್ಲರೂ ಇಂದು ವಿಜ್ಞಾನಬಲಿಗಳ ಹಿಡಿಯಲ್ಲಿ ಸಿಕ್ಕಿಕೊಂಡು ಬಾಯಿ ಬಾಯಿ ಬಿಡಬೇಕಾಗಿದೆ.

ಜಗತ್ತಿನ ಎಲ್ಲ ಪ್ರದೇಶಗಳ ಸಾಂಸ್ಕೃತಿಕ ಪರಂಪರೆಯೂ ದೇಶ-ಕಾಲಗಳ ಔಚಿತ್ಯವನ್ನರಿತು, ಅಲ್ಲಲ್ಲಿಯ ಸಮಾಜಗಳಲ್ಲಿ ವ್ಯಕ್ತಿಪ್ರಭುತ್ವವನ್ನು ಒಪ್ಪಿಕೊಂಡಿದ್ದಿತು. ಅದರಿಂದ ಒಳ-ವರು – ಪ್ರಜೆಗಳು ಎಂಬ ವರ್ಗಗಳು ನಿರ್ಮಾಣವಾಗಿದ್ದುವು. ಅವು ಸಾಮಾಜಿಕ ವೈಷಮ್ಯವನ್ನು ನಿರ್ಮಾಣಮಾಡುವುವೆಂದು, ವ್ಯಕ್ತಿಪ್ರಭುತ್ವವನ್ನು ಕಿತ್ತುಹಾಕಬೇಕೆಂಬ ವಿಚಾರದ ಉದಯವಾಯಿತು ಅದು ಬಲವತ್ತರವಾಗಿ ಪ್ರಜಾಪ್ರಭುತ್ವ ಪ್ರಚಾರದಲ್ಲಿ ಬಂದಿತು. ಪ್ರಭುತ್ವ-ಪದ್ಧತಿ ಯಾವುದೇ ಬಗೆಯದಾಗಿರಲಿ, ಆಗ ' ಆಳುವವರು ! ' ಎಂಬ ವರ್ಗವೊಂದು ನಿರ್ಮಾಣವಾಗಲೇಬೇಕು. ವ್ಯಕ್ತಿಪ್ರಭುತ್ವದಲ್ಲಿ ಆಳುವವರನ್ನು ನಿಯಮಿಸಿಕೊಂಡು ಆ ವರ್ಗವನ್ನು ನಿರ್ಮಿಸುವ ಅಧಿಕಾರ, ವ್ಯಕ್ತಿಯ ಕೈಯೊಳಗೆ ಇರುತ್ತಿದ್ದಿತು; ಆದರೆ ಪ್ರಜಾಪ್ರಭುತ್ವದಲ್ಲಿ ಆಳುವವರ ವರ್ಗವನ್ನು ನಿರ್ಮಿಸುವ ಅಧಿಕಾರ ಜನತೆಯ ಕಡೆಗೆ ಬಂದಿತು. ಈ ಪದ್ಧತಿ ಹೊಸ ಮೊಂದು ಸಮಸ್ಯೆಯನ್ನು ಜೊತೆಯಲ್ಲಿ ತೆಗೆದುಕೊಂಡು ಹುಟ್ಟಿತು.

ಆಳುವವರ ವರ್ಗ ಅಧಿಕಾರ, ಸನ್ಮಾನ, ಸುಖಜೀವನದಿಂದ ಕೂಡಿರುವುದೆಂದು ಜನರೆಲ್ಲರ ಭಾವನೆಯಾಗಿದೆ. ಆದುದರಿಂದ ತಾನೂ ಆ ವರ್ಗಕ್ಕೆ ಸೇರಿಕೊಳ್ಳಬೇಕೆಂದು ಪ್ರತಿಯೊಂದು ವ್ಯಕ್ತಿಯೂ ಇಂದು ಅಪೇಕ್ಷಿಸುತ್ತಿದೆ; ಅದಕ್ಕಾಗಿ ಶಕ್ತಿಮೀರಿ ಪ್ರಯತ್ನ ಮಾಡುತ್ತಿದೆ. ಪ್ರಯತ್ನ ನಿಷ್ಫಲವಾದಾಗ, ಅತೃಪ್ತಿ-ಅಸಂತುಷ್ಟಿಗಳ ಬೀಜಗಳನ್ನು ಉಡಿಯಲ್ಲಿ ಕಟ್ಟಿಕೊಂಡು, ಸಮಾಜದ

ಜನರಲ್ಲಿ ಬಿತ್ತತೊಡಗುತ್ತದೆ. ಈ ಬೀಜಗಳು ಮೊಳೆತು ಬೆಳೆಯು ತೊಡಗಿದುವೆಂದರೆ, ಆ ಪ್ರದೇಶದಲ್ಲಿ ಶಾಂತಿ-ಸಮಾಧಾನಗಳೇ ಉಳಿಯಲಾರವು. ಇದರಿಂದಲೇ ಸ್ವದೇಶದಲ್ಲಿಯೇ ಅಳುವ ವರ್ಗವನ್ನು ವಿರೋಧಿಸಿ ಬಂಡಾಯ-ದೊಂಬಿಗಳೇಳುವುವು. ಇಂದಿನ ಕಾಂಗೋ, ಲಾವೋಸ್ ಮೊದಲಾದ ಪ್ರದೇಶಗಳಲ್ಲಿಯ ಸ್ವಜನ ಕಲಹಗಳು ಇದೇ ಮಾದರಿಯವು. ಆಳುವವರ ವರ್ಗ ಅಸಮರ್ಥವಾಗಿದ್ದರೆ, ಪ್ರತಿಯೊಂದು ಸ್ವತಂತ್ರಪ್ರದೇಶಗಳಲ್ಲಿಯೂ ಇಂತಹ ದುರವಸ್ಥೆ ನಿರ್ಮಾಣವಾಗಬಹುದು.

ರಾಜಕೀಯ ಅಧಿಕಾರ ವಿಷಯುಕ್ತವಾದ ಹೋರಾಟದಂತೆಯೆ ಇಂದು ಆರ್ಥಿಕ ಅಧಿಕಾರದ ಅಪೇಕ್ಷೆಗಳೂ ಹೋರಾಟಗಳನ್ನು ನಿರ್ಮಿಸುತ್ತಲಿವೆ. ಇಂದಿನ ಕೆಲವೊಂದು ವಿಜ್ಞಾನಶೀಲ ರಾಷ್ಟ್ರಗಳಲ್ಲಿ, ಜೀವನಾವಶ್ಯಕ ಪದಾರ್ಥಗಳ ಕೊರತೆಯಿದೆ; ಆದ-ದರಿಂದ ತಮ್ಮ ವಿಜ್ಞಾನದಿಂದ ನಿರ್ಮಿಸಿದ ವಸ್ತುಗಳಿಗೆ ದೊಡ್ಡ ದೊಡ್ಡ ಮಾರಾಟದ ಕೇಂದ್ರಗಳು ಬೇಕಾಗಿವೆ. ವಿಜ್ಞಾನ ಪ್ರಪಂಚದಲ್ಲಿ ಹಿಂದೆ ಬಿದ್ದಿರುವ ಪ್ರದೇಶಗಳಲ್ಲೆಲ್ಲ ತಮ್ಮ ವಸ್ತುಗಳನ್ನು ಮಾರಾಟಮಾಡಿ, ಆದರಿಂದ ತಮ್ಮ ಪ್ರದೇಶಗಳನ್ನು ಸಮೃದ್ಧಗೊಳಿಸಿಕೊಳ್ಳಬೇಕಾಗಿದೆ ಆದುದ-ರಿಂದಲೇ ಈ ವೈಜ್ಞಾನಿಕ ಬಲವ ರಾಷ್ಟ್ರಗಳು, ಒಂದು ಇನ್ನೊಂದನ್ನು ಸ್ಪರ್ಧೆ-ಮತ್ಸರಗಳ ಭಾವದಿಂದ ನೋಡುತ್ತಿವೆ. ಇಂತಹ ರಾಷ್ಟ್ರಗಳು, ಹಿಂದುಳಿದ ಪ್ರದೇಶದಲ್ಲಿ ಸಂದೇಹ-ಭೇದಬುದ್ಧಿಗಳನ್ನು ಹುಟ್ಟಿಸುತ್ತ-ಲಿವೆ. ನಮ್ಮ ಭಾರತದ ವಿಷಯದಲ್ಲಿ ಪ್ರಬಲ ಪರರಾಷ್ಟ್ರಗಳು ತೋರಿ-ಸುತ್ತಿರುವ ಸಹಾನುಭೂತಿ-ಸಹಕಾರಬುದ್ಧಿಗಳ ಹಿಂದೆ ಈ ಬಗೆಯ ಸ್ಪರ್ಧೆ-ಮತ್ಸರಗಳಿಗೆ ಎಡೆಯಿಲ್ಲದೆ ಇಲ್ಲ.

ಸ್ಪೇನ್, ಪೋರ್ತುಗಾಲ್, ಬೆಲ್ಜಿಯಂ ಮೊದಲಾದ ಸಂಸ್ಕೃತಿ-ವಿದೂರವಾದ – ಪಾಶವಬಲವನ್ನು ನಂಬಿಕೊಂಡಿದ್ದ, ಅಧಿಕಾರ-ಪ್ರಿಯ ರಾಷ್ಟ್ರಗಳು, ಈ ಇಪ್ಪತ್ತನೆಯ ಶತಮಾನದಲ್ಲಿಯೂ ಗತ-ಶತಮಾನದ ಹಳೆಯ ಕನಸುಗಳನ್ನೇ ಕಾಣುತ್ತಲಿವೆ. ಎಂತಲೇ ಇವು ಮುನ್ನೋಟವಿಲ್ಲದೆ, ಪರರಾಷ್ಟ್ರದ ಆಕ್ರಮಣವನ್ನು ಮುಂದು-ವರಿಸಬೇಕೆನ್ನುತ್ತಿವೆ. ಪ್ರಬಲ ರಾಷ್ಟ್ರಗಳಲ್ಲಿಯ ಪರಸ್ಪರ ವಿಷಯುಕ್ತವಾದ ಸ್ಪರ್ಧೆ-ಮತ್ಸರಗಳು, ಇವರ ಅವಿವೇಕದ ಚಟುವಟಿಕೆಗಳಿಗೆ ಪರ್ಯಾಯದಿಂದ, ಪ್ರಚೋದನೆಯನ್ನೇ ನೀಡುತ್ತಲಿವೆ. ಎಂತಲೇ ಪೋರ್ತುಗೀಜರು ಅಂಗೋಲಾ, ಗೋವಾ ಪ್ರದೇಶಗಳಲ್ಲಿ ದಾನವರಂತೆ ವರ್ತಿಸುತ್ತಿದ್ದರೂ, ಹೀಗೆಯೇಕೆಂದು ಅವರನ್ನು ಕೇಳುವವರೇ ಇಲ್ಲ-ದಂತಾಗಿದೆ.

ಬದ್ದು ಬಿಟ್ಟಿದ್ದ ಚೀನಾ ಇಂದು ಸ್ವತಂತ್ರವಾಗಿ ಎದ್ದುನಿಂತಿದೆ. ಆದರೆ ಬಹುಕಾಲದ ಅದರ ಪತನಸ್ಥಿತಿ, ಅದರ ಮನಸ್ಸನ್ನು ವಿಕೃತ-ಗೊಳಿಸಿದೆ. ಇನ್ನೊಬ್ಬರ ಸಹಕಾರ-ಸಹಾನುಭೂತಿಗಳನ್ನು ಲಕ್ಷ್ಯಿಸದೆ ಎಲ್ಲರ ಜೊತೆಗೂ ಅದು ಕಾಲುಕೆದರಿ ಜಗಳವಾಡುವ ದನದ ಅವಸ್ಥೆಗೆ ಇಳಿದಿದೆ. ನೆರೆಹೊರೆಯ ಪ್ರದೇಶಗಳಲ್ಲಿ ಕೈಚಾಚಿ ಬಲ್ಲಿಯ ಜನತೆಯನ್ನು ಕೆಣಸಿ-ಕೆರಳಿಸುವುದೇ ಸಾಹಸದ ರಾಜಕಾರ್ಯವೆಂದು ಅದು ಭಾವಿಸಿಬಿಟ್ಟಿದೆ. ನಂಬಕತನ, ವಿಶ್ವಾಸಘಾತ, ದುಡುಕು ಇವು ತನಗೆ ಸದ್ಗುಣವೆಂದು ಅದು ತೀರ್ಮಾನಿಸಿಕೊಂಡಿದೆ. ಆದರೆ ಜಗತ್ತಿನ ಪ್ರತಿ ಯೊಂದು ರಾಷ್ಟ್ರದೊಂದಿಗೂ ಸಹಜೀವನದಿಂದಿರಬೇಕೆಂದು ಪ್ರಾಮಾ ಣಿಕವಾಗಿ ಆದರಂತೆ ಅಡಿಗಳನ್ನು ಮುಂದೆ ಇರಿಸುತ್ತಿರುವ ಭಾರತ ರಾಷ್ಟ್ರವು, ಜಗತ್ತಿನಲ್ಲಿ ರುದ್ರಲೀಲೆಯನ್ನು ನಡೆಯಿಸಿದ ಎಲ್ಲ ರಾಷ್ಟ್ರ ಗಳಿಂದ ಹರಿದುಬರುವ ದುರ್ವಿಷಗಳನ್ನೂ ಕುಡಿಯಬೇಕಾಗಿದೆ. ಜಗತ್ಕಲ್ಯಾಣವನ್ನು ಬಯಸುವ ರಾಜಕಾರಣ ಧುರೀಣರಿಂದು ಭಾರತದ ಧೋರಣೆಯನ್ನು ಸ್ವಾಗತಿಸುತ್ತಿರುವರಾದರೂ, ಸ್ವಾರ್ಥಸಾಧಕರು ಮತ್ಸರಿಗಳೂ ಭಾರತದ ವಿಷಯದಲ್ಲಿ ಅಪಪ್ರಚಾರವನ್ನು ನಡೆಯಿ ಸಿದ್ದಾರೆ.

ಇಪ್ಪತ್ತನೆಯ ಶತಮಾನದ ಈ ವಿಜ್ಞಾನಯುಗದಲ್ಲಿಯಾದರೂ ಭಾರತವು ಧರ್ಮ-ನೀತಿಗಳನ್ನು ನಂಬಿ ನಡೆಯುತ್ತಲಿದೆ. ಮಾನವತೆಗೆ ಹೆಚ್ಚಿನ ಬೆಲೆಯನ್ನು ಕೊಡುತ್ತಲಿದೆ. ಅದರ ಉಪದೇಶವು ಮಾನವಕಲ್ಯಾಣದ ಕಳವಳವನ್ನೇ ಮಿಡಿಯುತ್ತಲಿದೆ. ಎಂತಲೆ ಆ ಕಾಂಗೋದ ದುಃಖ ದೂರಮಾಡಲು ಸೊಂಟಕಟ್ಟಿದೆ. ಲಾವೋಸ ತೊಡಕನ್ನು ಬಿಡಿಸಲು ವಿವೇಕಿಗಳನ್ನು ಕೂಡಿಸುತ್ತಲಿದೆ. ಶಸ್ತ್ರಬಲ ಪಾಶವಶಕ್ತಿಯನ್ನು ಜಗತ್ತಿನಲ್ಲಿ ಕಡವೆಮಾಡಬೇಕೆಂದು ಜೀವಭಾವ ದಿಂದ ಹೋರಾಡುತ್ತಲಿದೆ. ಸತ್ಯ-ಧರ್ಮಗಳಿರುವಲ್ಲಿ ಶ್ರೇಯಸ್ಸು ತಾನಾಗಿ ಬರುವುದು!

—ಸಂಪಾದಕರು

— ಕರ್ನಾಟಕದಲ್ಲಿಯೇ —

ಅತ್ಯುತ್ತಮವೆನಿಸಿದ

ಏಕೈಕ ಮಾಸಪತ್ರಿಕೆ

"ಜಯಂತಿ"

ಇಷ್ಟವೇ ಓದಿರಿ.

ನಾಡನಡೆ

ಸಂಯುಕ್ತ ರಾಷ್ಟ್ರಸಂಘದ ಸಂದಿಗ್ಧಸ್ಥಿತಿ

ಯಾವುದೇ ಸಾರ್ವಜನಿಕ ಸಂಸ್ಥೆಯಾಗಲಿ, ಸರಕಾರವಾಗಲಿ, ನಿಷ್ಕ್ರಿಯವಾಗಿ ನಿಲ್ಲುವುದಕ್ಕೆ, ಆ ಸಂಸ್ಥೆಯ ಅಥವಾ ಸರಕಾರದ ನಿಯಮೋಲ್ಲಂಘನವೇ ಮುಖ್ಯ ಕಾರಣವಾಗಿರುವುದು. ಈಗ ನಮ್ಮ ಜಗತ್ತಿನ ಕಲ್ಯಾಣಸಾಧನೆಗಾಗಿಯೇ ಹೊರಟ ಸಂಯುಕ್ತ ರಾಷ್ಟ್ರ-ಸಂಘವನ್ನೇ ಉದಾಹರಣೆಗಾಗಿ ತೆಗೆದುಕೊಳ್ಳೋಣ. ಸದ್ಯ ಕಮ್ಯುನಿಸ್ಟ್ ಚೀನಾ ಒಂದನ್ನು ಬಿಟ್ಟರೆ, ಪ್ರಪಂಚದಲ್ಲಿಯ ಎಲ್ಲ ರಾಷ್ಟ್ರಗಳೂ ಆ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಪಡೆದಿರುವುದು. ಅವೆಲ್ಲ ರಾಷ್ಟ್ರಗಳ ಸಂಯುಕ್ತ ರಾಷ್ಟ್ರಸಂಘದಲ್ಲಿಯ ಪ್ರತಿನಿಧಿಗಳು ಒಂದು ಬಗೆಯವಾದರೆ, ವೈಯಕ್ತಿಕವಾಗಿ ಅವುಗಳ ವಿಚಾರಸರಣಿಯೂ ನಡೆ-ನುಡಿಗಳೂ ಇನ್ನೊಂದು ಬಗೆಯವಾಗಿರುವುದು. ಅವೆರಡರಲ್ಲಿಯೂ ಸಮಂಜಸ ಸಾಂಗತ್ಯವೇ ಇರುವುದಿಲ್ಲ.

ಕಾಂಗೋ ಗೊಂದಲದ ವಿಷಯದಲ್ಲಿ ಸಂಯುಕ್ತ ರಾಷ್ಟ್ರಸಂಘ ಪುರಸ್ಕರಿಸಿದ ಧೋರಣೆಯೇ ಬೇರೆ; ಅದರ ಪ್ರಮುಖ ಸದಸ್ಯ ರಾಷ್ಟ್ರಗಳು ಪ್ರತ್ಯಕ್ಷ ನಡೆಯಿಸಿದ ಪ್ರಚಾರ-ಅಚಾರಗಳೇ ಬೇರೆ. ಸತ್ಯ-ನ್ಯಾಯಗಳ ಪಕ್ಷಪಾತಕ್ಕಿಂತಲೂ ಸ್ವನಿರ್ದೇಯರು—ಸ್ನೇಹಿತರು—ಎಂಬ ಭಾವನೆಯ ಸ್ವಾರ್ಥಪೂರಿತ ಪಕ್ಷಪಾತವೇ ಹೆಚ್ಚಿನ ಕೆಲಸ ಮಾಡುತ್ತಲಿದೆ. ಕಾಂಗೋವಿನಲ್ಲಿ ಸಂಯುಕ್ತ ರಾಷ್ಟ್ರಸಂಘದ ಅಧಿಕಾರಿಗಳು ಕಾರ್ಯ ಮಾಡಲು ಕಂಗೆಟ್ಟು ಹೋದುದಕ್ಕೆ, ಪ್ರಮುಖ ಪಶ್ಚಿಮ ರಾಷ್ಟ್ರಗಳ ನ್ಯಭಿಚಾರವೃತ್ತಿಯೆ ಕಾರಣವಾಗಿದೆ ಸಂ. ರಾ. ಸಂಘದ ಅಭಯದಲ್ಲಿ ನಂಬುಗೆಯುಸಿಸಿದ್ದ ಪೆ. ಲುಮುಂಬಾ ಮತ್ತು ಅವನ ಅನುಯಾಯಿ ವರ್ಗದವರು, ಸಂ. ರಾ ಷ್ಟ್ರ ಸಂ ಘ ದ ದೀರ್ಘಸೂತ್ರವೃತ್ತಿಗಾಗಿಯೆ ವ್ಯರ್ಥ ಪ್ರಾಣ ಕಳೆದುಕೊಂಡರು. ಅಮೇರಿಕದವರಿಗಾಗಲಿ, ಇಂಗ್ಲಂಡಿನವರಿಗಾಗಲಿ, ಬೆಲ್ಜಿಯಂ ಕೆಂಪು ಜನರು ಅತ್ಯೀಯರು; ಕಾಂಗೋಲೀ ಕಪ್ಪು ಜನರು ಪರಕೀಯರು. ತತ್ತ್ವವನ್ನರಿಯದ ಲೌಕಿಕ ಬುದ್ಧಿ, ಆತ್ಮೀಯತೆಯ ಅಭಿಮಾನವನ್ನು ಕೈಕೊಳ್ಳಬಹುದೇ ಹೊರತ., ಸತ್ಯ-ನ್ಯಾಯ ಗಳಿಗೆ ಅಪ್ಪೊಂದು ಬೆಲೆಯನ್ನು ಕೊಡಲಾರದು. ಕಾಂಗೋನಿನಲ್ಲಿಯ ಬೆಲ್ಜಿಯಂ ಜನರ ದುಷ್ಪ್ರವೃತ್ತಿಯನ್ನು ಎತ್ತಿ ಹಿಡಿದು, ಅಮೇರಿಕೆಯಂತಹ ಪ್ರಬಲರಾಷ್ಟ್ರದಲ್ಲಿಯೆ ಅನ್ಯಾಯ ಪ್ರಚಾರ ನಡೆದಿದೆಯೆಂದ ಮೇಲೆ, ಮಿಕ್ಕ ಚಿಕ್ಕಪುಟ್ಟ ಅನುಯಾಯಿ ರಾಷ್ಟ್ರಗಳಲ್ಲಿ ಏನು ನಡೆದಿರಬಹುದು?

ಸಂಯುಕ್ತ ರಾಷ್ಟ್ರಸಂಘದಿಂದ ದೀನ-ದಲಿತರಾಷ್ಟ್ರಗಳು ಈ ಬಗೆಯ ನೆರವನ್ನೇ ಪಡೆಯುವುದಾದರೆ, ಆ ಸಂಸ್ಥೆಯ ಬೆಲೆ ಇನ್ನೆಷ್ಟು ಕಾಲ ಉಳಿದೀತು?

ಪಶ್ಚಿಮರಾಷ್ಟ್ರಗಳ ಸಂಕುಚಿತ ಸ್ವಾರ್ಥ

ಜಗತ್ತಿನಲ್ಲಿಯ ಎಲ್ಲ ಪ್ರದೇಶಗಳನ್ನೂ ಸ್ವತಂತ್ರವಾಗಿಸಬೇಕೆಂಬುದು ಸಂಯುಕ್ತ ರಾಷ್ಟ್ರಸಂಘದ ಹಿರಿಯ ಗುರಿಯಾಗಿದೆ. ಆದರೆ ಆದರ ಈ ಗುರಿಯು ಸಾಧನೆಯನ್ನು, ಆ ಸಂಸ್ಥೆಯ ಅನೇಕ ಸದಸ್ಯ-ರಾಷ್ಟ್ರಗಳಿಗೆ ವಿಷವಾಗಿ ಪರಿಣಮಿಸಬಹುದಾಗಿದೆ. ಇನ್ನೊಬ್ಬರ ರಕ್ತ-ಮಾಂಸಗಳನ್ನು ತಿಂದುಕೊಂಡೇ ಜೀವಿಸಬೇಕೆನ್ನುವವರಿಗೆ, ಅಹಿಂಸೆ, ಸಹಜೀವನ ಮೊದಲಾದ ಆದರ್ಶ ತತ್ತ್ವಗಳನ್ನು ಉಪದೇಶಿಸಿದರೆ ಏನು ಫಲ? ಪಶ್ಚಿಮದ ಅನೇಕ ರಾಷ್ಟ್ರಗಳು, ಇದುವರೆಗೆ ಅನ್ಯರ ಕೈದುತ್ತನ್ನು ಕಸಿದುಕೊಂಡೇ ಕೊಬ್ಬಿ ಬಾಳುತ್ತ ಬಂದಿವೆ. ಎಂತಹ ಭೋಗವಿಲಾಸಗಳನ್ನೋ ಭೋಗಿಸುತ್ತಲಿವೆ- ಸಂಯುಕ್ತ ರಾಷ್ಟ್ರ ಸಂಘದ ವಿಶ್ವಸ್ವಾತಂತ್ರ್ಯದ ಆದರ್ಶ, ಅವುಗಳಿಗೆ ಹೇಗೆ ಮಧುರವೆನಿಸಬೇಕು?

ಪಶ್ಚಿಮದ ರಾಷ್ಟ್ರಗಳೆಲ್ಲ ಹೊಟ್ಟಾಗಿ ಲೌಕಿಕ ರೀತಿಯನ್ನು ಅವಲಂಬಿಸಿ ನಡೆದವು. ತ್ಯಾಗ-ತಪಸ್ಸುಗಳ ತಾತ್ತ್ವಿಕ ಸೌಖ್ಯವನ್ನು ಅವು ಕನಸಿನಲ್ಲಿಯೂ ಕಂಡವಲ್ಲವು. ತಮ್ಮ ಪಾಶವಶಕ್ತಿಯಿಂದ ಸಾಗರಬೌರ್ಯದಿಂದ ಸಾಹಸಜೀವನವನ್ನು ಪ್ರಾರಂಭಿಸಿ, ಸಂಘಟನೆ ಸ್ವಾತಂತ್ರ್ಯಜಾಗೃತಿಗಳು ಇಲ್ಲದ ಪರಪ್ರದೇಶಗಳನ್ನು ಆಕ್ರಮಿಸಿ, ಸೈನ್ಯ-ಶಸ್ತ್ರಗಳ ಹೆದರಿಕೆ ತೋರಿಸಿಯೆ ಇದುವರೆಗೆ ಅವುಗಳನ್ನು ಆಳುತ್ತ ಬಂದಿದ್ದಾರೆ—ಪಶ್ಚಿಮದ ಹಲವು ರಾಷ್ಟ್ರಗಳವರು! ಅಂತಹರು ಒಮ್ಮೆಲೆ ತಮ್ಮ ಅಧಿಕಾರ ಬಿಡಲು ಹೇಗೆ ಸಿದ್ಧರಾಗುವರು? ಪ್ರಯತ್ನ ಮಾಡಿಯೂ ತಮಗೆ ದಕ್ಕಲಾರದೆಸಿದಾಗ—ಬೆಕ್ಕು ಹಾಲ ಗಡಿಗೆಯನ್ನು ಉರುಳಿಸಿ ಕೆಡಿಸುವಂತೆ—ತಮ್ಮ ಅಧೀನದಲ್ಲಿದ್ದ ಪ್ರದೇಶದ—ಜನಜೀವನವನ್ನೇ ಹಾಳು ಮಾಡುವುದು ಅವರ ಪದ್ಧತಿಯಾಗಿದೆ.

ಭಾರತವನ್ನು ಬಿಟ್ಟುಹೋಗುವಾಗ, ಇಂಗ್ಲಿಷರಿಗೆ ಇಲ್ಲಿ ಅಂತಹ ಪರಿಸ್ಥಿತಿಯನ್ನು ಉಂಟುಮಾಡಲಿಕ್ಕೆ ಸಾಧ್ಯವಾಗಲಿಲ್ಲ; ಇದಕ್ಕೆ

ಭಾರತೀಯರಲ್ಲಿ ಸಜೀವವಾಗಿ ಇದ್ದ ಪರಂಪರೆಯ ಸಾಂಸ್ಕೃತಿಕ ಶಕ್ತಿಯೇ ಮುಖ್ಯ ಕಾರಣ. ಆದರೂ ಇಂತಹ ಸಾಂಸ್ಕೃತಿಕ ಬಲವು ಇಲ್ಲದ ಮುಸಲ್ಮಾನರನ್ನು ತಮ್ಮ ಕೈಗಣ್ಣಿಗೆ ಸಿಕ್ಕಿಸಿಕೊಂಡು, ಅವರಿಂದ ಭಾರತರಾಷ್ಟ್ರವನ್ನು ಒಡೆಯುವ ಕಾರ್ಯವನ್ನು ಅವರು ಮಾಡಿಸಿದರು. ಸಮಂಜಸವೃತ್ತಿಯ ಬ್ರಿಟಿಷರಿಗೆ ಇದು ಒಪ್ಪಿಗೆಯಿಲ್ಲದೆ ಹೋಗಿರಬಹುದಾದರೂ, ಬ್ರಿಟಿಷ್ ಕುಟಿಲ ರಾಜಕಾರಣಿಗಳು, ಹೋಗುವಾಗ ಭಾರತದ ಮೇಲೆ ಒಂದು ಮರೆಯದಂತಹ ಏಟನ್ನು ಹಾಕಿಯೇ ಹೋದರು.

ಈಗ ಆಗ್ನೇಯ ಏಷಿಯಾ ಪ್ರದೇಶದಲ್ಲಿ ತಲೆದೋರಿರುವ ಅಂತಃಕಲಹಗಳಿಗೆ, ಆದೇಶಗಳಲ್ಲಿ ಉಳಿ ಬಿಟ್ಟುಹೋಗಿರುವ ಪಶ್ಚಿಮರಾಷ್ಟ್ರದ ರಾಜಕಾರಣಿಗಳ ಕೈಚಳಕವೇ ಮುಖ್ಯ ಕಾರಣವಾಗಿದೆ. ಅಲ್ಲಿ ಹಬ್ಬಿರುವ ಅಂತಃಕಲಹದ ವಿಷವು, ಪ್ರಪಂಚದ ಮೇಲೆಯೆ ಪರಿಣಾಮ ಮಾಡಬಹುದೆಂದು ಕಂಡುದರಿಂದ, ಸೀಟೋ ರಾಷ್ಟ್ರಗಳು ತಮ್ಮ ತಮ್ಮಲ್ಲಿ ರಭಸದಿಂದ ವಿಚಾರವಿನಿಮಯ ನಡೆಸಿದೆ. ಅಮೇರಿಕೆಯಲ್ಲಿಯ ಹಿಂದಿನ ರಾಜಕೀಯ ವಿಚಾರ ಧೋರಣೆ ಬದಲಾದುದರಿಂದ, ಆಗ್ನೇಯ ಏಷಿಯಾದಲ್ಲಿ ಶಾಂತಿ ನೆಲಸಬಹುದೆಂದು ಆಶೆಯನ್ನು ಪಡಬಹುದಾಗಿದೆ—ಇಷ್ಟೆ!

ಭಾರತದ ಸೈನಿಕರು ಕಾಂಗೋನಿಗೆ—

ಸಂ. ರಾ. ಸಂಘದ ಬೇಡಿಕೆಗೆ ಮನ್ನಣೆಯಿತ್ತು ಭಾರತವು, ಕಾಂಗೋಪ್ರದೇಶದ ಸ್ವಾಸ್ಥ್ಯಸಂರಕ್ಷಣೆಗಾಗಿ ತನ್ನ ಸೈನ್ಯಸಹಾಯವನ್ನು ಕಳುಹಿಸಿದೆ ಇದಕ್ಕಾಗಿ ಬೆಲ್ಜಿಯಂ ಜನರ ಕೈಗೊಂಬೆಯಾದ—ಕಟಾಂಗಾ ಪ್ರದೇಶದ ನಾಯಕ—ಜ ಶೋಂಬೆ ಇವನು, ತನ್ನ ಉಳಿವನ್ನು ಉಳಿದುಕೊಳ್ಳಲೆ, ಭಾರತಕ್ಕೆ ಅವಮಾನವಾಗುವಂತೆ ನಡೆದುಕೊಳ್ಳುತ್ತಿದ್ದಾನೆ — ಘೋಷಣೆಗಳನ್ನು ಹೊರಡಿಸುತ್ತಿದ್ದಾನೆ. ಇದೆಲ್ಲವೂ ಬೆಲ್ಜಿಯಂ ಜನರ ತಂತ್ರದಿಂದ ನಡೆದಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಆದರೆ ಭಾರತವು ಸಂ. ರಾಷ್ಟ್ರಸಂಘದ ಆದರ್ಶಗಳನ್ನು ಶ್ರದ್ಧೆಯಿಂದ ನೋಡುವಂತಹದು. ಕಾಂಗೋ ಪ್ರದೇಶದಲ್ಲಿ ಅದು ತನ್ನ ಯಾವ ಸ್ವಾರ್ಥವನ್ನೂ ಸಾಧಿಸಿಕೊಳ್ಳಬೇಕಾಗಿಲ್ಲ. ಕಾಂಗೋ ಜನತೆಯ ಸ್ವಾತಂತ್ರ್ಯ-ಸ್ವಾಸ್ಥ್ಯಗಳ ಸಂರಂಕ್ಷಣೆಯೆ ಅದರ ಗುರಿಯಾಗಿದೆ. ಹಿಂದೆ ಕೋರಿಯಾ ಪ್ರದೇಶದಲ್ಲಿ ಭಾರತದ ಸೈನಿಕರು, ಎಂತಹ ಸಾಹಸದಿಂದ ಅಲ್ಲಿಯ ಗೊಂದಲವನ್ನು ಪರಿಹರಿಸಿದರೆಂಬ ಕಲ್ಪನೆ, ಬೆಲ್ಜಿಯಂ ಜನರಿಗೂ, ಅವರ ಕೈಗೊಂಬೆ ಶೋಂಬೆಗೂ ಇರಬಹುದು. ಆದರ್ಶಸಾಧನೆಗಾಗಿ ಜೀವದ ಹಂಗುದೊರೆದು ಹೋರಾಡಬಲ್ಲ ಭಾರತೀಯ ಸೈನಿಕರು, ಖಂಡಿತವಾಗಿಯೂ ಕಾಂಗೋನಿನ ಗೊಂದಲಗಳನ್ನು ಹುಡಿಗೂಡಿಸಬಹುದು. ಅದರಿ ಇದಕ್ಕೆ ರಾಷ್ಟ್ರ ಸಂಘವು ಪ್ರಾಮಾಣಿಕವಾಗಿ—ನಿರ್ದಾಕ್ಷಿಣ್ಯವಾಗಿ—ತನ್ನ ನೈತಿಕ ಬೆಂಬಲವನ್ನು ನೀಡುವುದು ಅತ್ಯಗತ್ಯವಾಗಿದೆ. ಇಲ್ಲವಾದರೆ, ಸದಸ್ಯ ರಾಷ್ಟ್ರಗಳು 'ನುಡಿವುದೇ ಬೇರೆ, ನಡೆವುದೇ ಬೇರೆ' ಎಂಬ ನೀತಿಯನ್ನು ಅನುಸರಿಸಿದರೆ, ಭಾರತದ ಸೈನಿಕರು ನಿಷ್ಕ್ರಿಯರಾಗಿ ಹಿಂದಿರುಗ ಬೇಕಾದೀತು ಅಷ್ಟೆ!

ಬಹುಮಾನಿತ ಸಾಹಿತ್ಯಕರ ಅಭಿನಂದನೆ

ಈ ಸಲದ ಕೇಂದ್ರಸರಕಾರದ ಸಾಹಿತ್ಯಅಕೆಡೆಮಿಯ ೫೦೦೦ ರೂ. ಗಳ ಒಂದು ಬಹುಮಾನವನ್ನು, ಶ್ರೀಮಾನ್ ವಿ. ಕೃ. ಗೋಕಾಕ ಅವರ 'ದ್ಯಾವಾಪೃಥಿವೀ' ಎಂಬ ಕನ್ನಡ ಕವನಸಂಕಲನಕ್ಕೆ ದೊರೆತುದು ಸಂತೋಷದ ಸಂಗತಿ. ಶ್ರೀಮಾನ್ ಗೋಕಾಕ ಅವರು ಇಂಗ್ಲಿಷ್ ಭಾಷೆಯಲ್ಲಿ ಅಸಾಮಾನ್ಯ ಪಾಂಡಿತ್ಯವನ್ನು ಪಡೆದವರಾದರೂ, ಅವರು ಕನ್ನಡವನ್ನು ಮರೆಯಲಿಲ್ಲ. ಕನ್ನಡ ಸಾಹಿತ್ಯ-ಸಂಸ್ಕೃತಿಗಳನ್ನು ಒಳವಾಗಿ ಅಭ್ಯಾಸಮಾಡಿ, ಅವುಗಳ ಔನ್ನತ್ಯವನ್ನು ಸರಿಯಾಗಿ ಕಂಡುಹಿಡಿದವರವರು. ದೇಶ-ವಿದೇಶಗಳಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಶ್ರೇಷ್ಠತೆಯನ್ನು ಪ್ರಚಾರಮಾಡುವಂತಹ ಸಂದರ್ಭಗಳು ಅವರಿಗೆ ಈಗಾಗಲೇ ಅನೇಕ ಒದಗಿವೆ. ಇನ್ನೂ ಒದಗಲಿವೆ. ಅಭ್ಯಾಸ, ಅಭಿನಿವೇಶ ಎರಡೂ ಇರುವ ಶ್ರೀಮಾನ್ ಗೋಕಾಕರಿಂದ ಕನ್ನಡದ ಹೆಸರು ಎಲ್ಲ ಕಡೆಯಲ್ಲಿಯೂ ಬೆಳಗಿದೆ. ಕೇಂದ್ರಸರಕಾರ ಈ ಸಲ ಬಹುಮಾನವಿತರಣೆಗಾಗಿ, ಕನ್ನಡ ನಾಡಿನ ಯೋಗ್ಯ ಸಾಹಿತ್ಯಿಕ ವ್ಯಕ್ತಿಯನ್ನು ಆರಿಸಿದುದು ಸಮಾಧಾನಪಡಬೇಕಾದ ವಿಷಯ. ಆದುದರಿಂದ ಬಹುಮಾನವಿತ್ತ ಸಾಹಿತ್ಯ ಅಕೆಡೆಮಿಯ ಸೂಚಾಲಕರನ್ನೂ ಬಹುಮಾನ ಪಡೆದ ಶ್ರೀಮಾನ್ ಗೋಕಾಕ ವಿನಾಯಕರಾಯರನ್ನೂ ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಕೊನೆಯ ಈಡು

(ಸಣ್ಣಕತೆ)

"ರುಚಿರ" ಮಂಗಳೂರು

ಮಾಲಿಂಗನಾಯ್ಕರ ಮನಸ್ಸಿನ ರೀತಿ, ಅವರನ್ನು ಮಾನವತೆಯ ದಾರಿಯಲ್ಲಿ ಕರೆದೊಯುತ್ತಲಿದೆ.
ಮಾನವರೆಲ್ಲರ ಮನಸ್ಸೂ ಮಾಲಿಂಗನಾಯ್ಕರಂತೆ ಆದರೆ,
ಸಮಾಜದಲ್ಲಿ ಅಶಾಂತಿ – ವೈಷಮ್ಯಗಳಿಗೆ ಅವಕಾಶವಿರದು!

ನಮ್ಮೂರಲ್ಲಿ ರಜಾದಿನಗಳನ್ನು ಕಳೆಯುವುದೆಂದರೆ ನನ್ನ ಪಾಲಿಗದೊಂದು ದೊಡ್ಡ ಸಮಸ್ಯೆ. ಹೆತ್ತವರ ಪ್ರೀತಿ, ತಮ್ಮ-ತಂಗಿಯರ ಒಡನಾಟ, ಗೆಳೆಯರ ಮಾತುಕತೆ, ಇವುಗಳಿಂದ ಸಂತಸಪಡುತ್ತೇನೆ. ಬೆಳಗಾದೊಡನೆ ಹಕ್ಕಿಗಳ ಚಿಲಿಪಿಲಿ, ಸಂಜೆಯಾದೊಡನೆ ಹಟ್ಟಿಗಳಿಗೆ ಹಿಂದಿರುಗುವ ದನಕರುಗಳ ಕೊರಳಘಂಟೆಗಳ ಕಿರುಗಂಟೆಗಳ ಕಿಂಕಿಣಿ, ಸುತ್ತಲಿನ ಹೊಲಗದ್ದೆಗಳು, ಅವುಗಳ ಹಸಿ ಹಸುರು, ನಿಡಿದಾಗಿ ಚಾಚಿ ಬಾನನ್ನು ಮುದ್ದಿಸುತ್ತಿರುವ ಹೆಮ್ಮರಗಳು, ಇವುಗಳು ನನ್ನ ಮನಸ್ಸನ್ನು ಕುಣಿಸುತ್ತವೆ. ನಿಜ! ಆದರೆ ಎಷ್ಟು ದಿನ? ವಾರ, ಎರಡು ವಾರ ಅಥವಾ ಒಂದು ತಿಂಗಳು; ಮತ್ತೆ ಎಲ್ಲವೂ ನೀರಸ. 'ನೊಸ್ಟೋಟನಸ್' ಎನ್ನುತ್ತಾರಲ್ಲ, ಅದು. ಮತ್ತೆ ಪುಸ್ತಕಗಳಲ್ಲೇ ಮನಸ್ಸನ್ನು ನೆಟ್ಟುಬಿಡುವುದು ನನ್ನ ಸ್ವಭಾವ. ಆದರೂ ಒಮ್ಮೊಮ್ಮೆ ಯಾವುದಾದರೊಂದು ಹೊಸ ವಿಷಯವು ಅಲೆ ಅಲೆಯಾಗಿ ಬಂದು ನನ್ನ ಕವಿಯನ್ನು ಸೇರಿಬಿಡುವುದಿದೆ. ಅದಕ್ಕೆ ಕಾರಣವಿಷ್ಟೆ— ನನ್ನ ತಂದೆಯವರ ಪರಿಚಯದವರು ಬಹಳ ಮಂದಿ. ದಿನವೊಂದರಲ್ಲಿ ನಾಲ್ಕಾರು ಜನರಾದರೂ ನಮ್ಮ ಮನೆಗೆ ಬಂದು ತಂದೆಯವರೊಡನೆ ಹರಟೆ ಹೊಡೆಯುವುದಿದೆ. ಇವರ ಸಟ್ಟಿಸುರಾಣಗಳಲ್ಲಿ ಒಂದೊಂದು ತುಣುಕು ನನ್ನತ್ತ ಸಿಡಿಸುಬಿಡುವುದು. ಅಂತಹ ಒಂದು ತುಣುಕನ್ನು ನಿಮ್ಮ ಮುಂದಿರಿಸುತ್ತೇನೆ:

ಒಂದು ದಿನ, ಎಂದಿನಂತೆ, ಯಾವುದೋ ಪುಸ್ತಕದ ಹಾಳೆಗಳನ್ನು ತಿರುವುತ್ತಿದ್ದೆ. ಜಗಲಿಯಲ್ಲಿ ಯಾರೋ ಮಾತಾಡುವುದು ಕೇಳಿಸಿತು. ಪಸ್ಸನ್ನರ; ಹಾಗೆಯೇ ತುಸು ಕರ್ಕಶ. ಮಾಲಿಂಗನಾಯ್ಕರು ಬಂದಿರಬೇಕೆಂದು ಊಹಿಸಿದೆ. ಪುಸ್ತಕವನ್ನು ಮುಚ್ಚಿಟ್ಟು ನನ್ನ ಕೋಣೆಯಿಂದ ಜಗಲಿಗೆ ಬಂದೆ. ನನ್ನ ಊಹೆಯು ಸರಿಯಾಗಿತ್ತು. ಇವರೇ ಬಂದಿದ್ದರು. ಇವರೊಡನೆ ನನಗೆ ಹಿಂದಿನಿಂದಲೂ ಬಹಳ ಸಲುಗೆ. ಮಾಲಿಂಗನಾಯ್ಕರ ವಯಸ್ಸಿಗೆ ಅರುವತ್ತರ ಸೀಮೆಯನ್ನು ದಾಟಿದೆ. ಕಡುಗಪ್ಪು ಮೈಯ್, ಹರವಾದ ಎಸೆ, ಅಗಲವಾದ ಹಣೆ, ಅಲ್ಲಲ್ಲಿ ಹರಯದ ಹೆಗ್ಗುರುತುಗಳು—ಸಾಕ್ಷಿಗಳು. ಬಲಗೈಯಲ್ಲೊಂದು ಬಳೆ— ಅದು ಅವರು ಫಟ್ಟದಲ್ಲಿ 'ರೈಟರ್' ಆಗಿದ್ದಾಗ, ಕಾಫಿತೋಟದ ಯಜಮಾನರು ಬಹುಮಾನವಾಗಿ ಕೊಟ್ಟದ್ದಂತೆ. ಹಾಗೆಯೇ ತಿರುಪತಿ ತಿಮ್ಮಪ್ಪದೇವರ ಹೆಸರಲ್ಲಿ, ಬಲಗಾಲಲ್ಲೊಂದು 'ಬೀಡಿ'. ಮೇಲ್ದುಟಿಯ ದಪ್ಪ ಮೀಸೆ ಕೆಳದುಟಿಯನ್ನು ಮುಚ್ಚಿಬಿಟ್ಟಿದೆ. ವೀಳ್ಯವನ್ನು ಜಗಿಯುವವರಾದುದರಿಂದ ಕಡೆಬಾಯಿಗಳಲ್ಲಿ ಸ್ವಲ್ಪ ಜೊಲ್ಲು ಸೂಸುತ್ತಿರುತ್ತದೆ. ಅವರು ತೊಟ್ಟದ್ದು, ನಾವು ಹೇಳುವ 'ಬುಶ್‌ಕೋಟು'. ಅದಕ್ಕೆ ನಾಲ್ಕಾರು ಜೇಬುಗಳು. ಅವುಗಳಲ್ಲಿ ನಿತ್ಯೋಪಯೋಗಿಯಾದ ಎಲೆಯಡಕೆ ಚೀಲ, ಅಡಕತ್ತರಿ, ಚೂರಿ ಇತ್ಯಾದಿ. ತಲೆಗೊಂದು ಮಾಸಲು ಬಣ್ಣದ ಕೆಂಪು ರುಮಾಲಿನ ಮುಂಡಾಸು. ಇಂತಹ ಹಳ್ಳಿಗಾಡಿನ ವ್ಯಕ್ತಿಯಲ್ಲಿ ನನಗೆ ಸಲುಗೆಯೆಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ, ನಾನು ರಜೆಯಲ್ಲಿ ಊರಿಗೆ ಬಂದಿದ್ದೇನೆಂದು ತಿಳಿದಕೂಡಲೆ, ಗೇರುಬೀಜದ ಬೆಂಸಸ್ನೋ, ರಸಬಾಳೆ ಹಣ್ಣುಗಳನ್ನೋ ತಂದು 'ಬಡಕಾಣಿಕೆ' ಎಂದು ಒಪ್ಪಿಸುತ್ತಾರೆ. ಒಮ್ಮೊಮ್ಮೆ ಏನಾದರೂ ಕಾಯಿಪಲ್ಯಗಳನ್ನು ತಂದು ನನ್ನ ತಾಯ ಕೈಗಿತ್ತು, 'ಅಮ್ಮನವರೇ, ಅಣ್ಣಯ್ಯನವರಿಗೆ ಗಮ್ಮತ್ತು ಔತಣ ಮಾಡಿ, ಎನ್ನುತ್ತಾರೆ. ನಾನೆಲ್ಲಾದರೂ ಅವರ ಮನೆಯತ್ತ ಕಡೆ ತೋಟದ ಬದಿಯಲ್ಲಿ ಸುಳಿದಾಡುವುದನ್ನು ಕಂಡರೆ, 'ಅಣ್ಣಯ್ಯ, ಕೂತುಕೊಳ್ಳಿ' ಎಂದು ಮನೆಯಿಂದ ಮಣೆಯೊಂದನ್ನು ಎತ್ತಿಕೊಂಡೇ ಓಡಿ ಬರುತ್ತಾರೆ. ಎಳನೀರುಗಳನ್ನಿತ್ತು ಉಪಚರಿಸುತ್ತಾರೆ. ಸೀಯಾಳಗಳ ತನಿರಸದಂತೆ ಅವರ ಹೃದಯವೂ ಸಿಹಿ. ಅದು ತುಂಬುಹೃದಯ. ಅಂಥವರನ್ನು 'ಕಡೆಗಣಿಸುವಷ್ಟು ಆತ್ಯಾಧುನಿಕ' ನಾನಲ್ಲ. ಹೃದಯವನ್ನು ಹೃದಯವು ಗುರುತಿಸಿಕೊಳ್ಳುವುದೆಂದರೆ ಇದೇ ಇರಬಹುದು.

ಕೋಣೆಯಿಂದ ಹೊರಬಂದ ನನ್ನನ್ನು ಕಂಡಕೂಡಲೆ, 'ಓಹೋ ಅಣ್ಣಯ್ಯನವರು! ಯಾವಾಗ ಬಂದಿರಿ? ಸೌಖ್ಯವೇ? ರಜೆಯೆಷ್ಟು ದಿನ?' ಎಂದು ಮುಂಗಾಲಾಗಿ ಪ್ರಶ್ನಿಸಿದರು— ಮಾಲಿಂಗನಾಯ್ಕರು.

ಪ್ರಶ್ನೆಗಳೆಲ್ಲವಕ್ಕೂ ಸಾವಧಾನವಾಗಿ ಉತ್ತರವಿತ್ತು ಸುಮ್ಮನಾದೆ. ತಂದೆಯವರೆದುರು ನಾನು ಮಿತಭಾಷಿ. ಅವರು ತಂದೆಯವರತ್ತ ತಿರುಗಿದರು. ನಾನು ಅಲ್ಲೇ ಬಾಜಿರದಲ್ಲಿ ಕುಳಿತೆ. ಸಕ್ಕನೆ ತಂದೆಯವರು, "ಅಂದ ಹಾಗೆ ನಾಯ್ಕರೇ, ನೀವು ಸವಣೆಯನ್ನು ಬೆಳೆಸುತ್ತೀರಷ್ಟೆ. ಈ ವರ್ಷ ಹೇಗಾಗಿದೆ? ನನಗೆ ಒಂದು ಪರೆ ಕೊಡುವಿರಾ? ನಮ್ಮ ವಕೀಲರ ಗುಮಾಸ್ತರು ಕೇಳಿದ್ದಾರೆ. ನಾನು ಸಂಪಾದಿಸಿಕೊಡುತ್ತೇನೆಂದು ಒಪ್ಪಿದ್ದೇನೆ," ಎಂದರು.

ನಾಯ್ಕರು— "ಅದನ್ನು ಏನು ಹೇಳುತ್ತೀರಿ, ಅಯ್ಯನವರೇ! ಈ ವರ್ಷ ಕುಮ್ರಿಯಲ್ಲಿ ಸಪ್ಪ ಅಲ್ಲದೆ ಲಾಭವಿಲ್ಲ. ಸವಣೆಯ ವಿಷಯ ಬಿಡಿ: ರಾಗಿಯೂ ಅಷ್ಟೆ. ಪ್ರತಿ ವರ್ಷ ಹತ್ತು-ಹದಿನಾಲ್ಕು ಮುಡಿ ಸಿಕ್ಕುವಲ್ಲಿ, ಈ ವರ್ಷ ನಾಲ್ಕೈದು ಮುಡಿ ಸಿಕ್ಕಿದರೆ ಭಾಗ್ಯ. ಹಾಳು ಕಾಡುಕೋಣಗಳು ಎಲ್ಲಾ ತಿಂದು ಮುಗಿಸಿದವು. ಎಲ್ಲವನ್ನೂ ಗುಂಡು ಹಾಕಿ ಧ್ವಂಸಮಾಡಿಬಿಡುತ್ತಿದ್ದೆ, ಕೋಪಿ ಇರುತ್ತಿದ್ದರೆ!.... ಥೂ, ಹಾಳು ನಾಲಗೆ. ಏನೇನೋ ಹೇಳಿಬಿಟ್ಟೆ."

"ಅದ್ಯಾಕೆ ನಾಯ್ಕರೇ, ನಾಲಗೆಯನ್ನು ಬಯ್ಯುತ್ತೀರಿ. ನಿಮ್ಮಲ್ಲಿ ಕೋವಿ ಇತ್ತಲ್ಲವೇ. ಅದೇನಾಯಿತು?"

ಮಾಲಿಂಗನಾಯ್ಕರು ನಮ್ಮ ಹಳ್ಳಿಯಲ್ಲೇ ದೊಡ್ಡ ಬೇಟೆಗಾರರು. ಗುರಿತಪ್ಪದ ಈಡುಗಾರರೆಂದು ಪ್ರಸಿದ್ಧ. ಹಾರುವ ಹಕ್ಕಿಯನ್ನೋ, ಓಡುವ ಜಿಂಕೆಯನ್ನೋ ಗುಂಡಿಕ್ಕಿ ಉರುಳಿಸಬಲ್ಲರಂತೆ. ಅಂತಹ ಬೇಟೆಗಾರನಾದರೂ ಅವರು ಮಾಂಸಾಹಾರಿಯಲ್ಲವಂತೆ! ಇದಕ್ಕೊಂದು ಕತೆಯನ್ನು ಕೇಳಿದ್ದೆ. ಅವರಿಗೆ ಮದುವೆಯಾದ ಹೊಸತಿನಲ್ಲಿ, ಹೆಂಡತಿಯೊಡನೆ ತನ್ನ ನೆಂಟರ ಮನೆಗೆ 'ಸಮ್ಮಾನ'ಕ್ಕೆ ಹೋಗಿದ್ದಾಗ, ಸಮುಸ್ಪಾಯದ ಜಪ್ಪನಿಗರೊಡನೆ ಬೇಟೆಗೆ ಹೋದರಂತೆ. ಮಾಲಿಂಗ ನಾಯ್ಕರು ಫಾಂಡಿಗ ಹೆಂಡಿಯೊಂದನ್ನು ಕೆಡವಿಯೇ ಬಿಟ್ಟರಂತೆ. ಬಿಸಿನೆತ್ತರಲ್ಲವೇ? ನೆಂಟರ ಮನೆಯಲ್ಲಿ, ಗೆಳೆಯರೊಡನೆ ಹರಟುತ್ತಾ, ಭರ್ಜರಿಯಾಗಿ ಮಾಂಸದ ಹೋಳುಗಳನ್ನು ಮುಕ್ಕಿದರಂತೆ. ಆದರೆ ಪರಿಸ್ಥಿತಿ ವಿಷಮವಾಯಿತು. ಅಧಿಕಪ್ರಸಂಗದ ಮಾಂಸಭಕ್ಷಣೆ ಹೊಟ್ಟೆಯನ್ನು ಉಬ್ಬಿಸಿತು. ಉಬ್ಬಸ ಬಂತು! ಪಾಂತಿಗೆ ತಿರುವಾಯಿತು. ನೆಂಟರು ಆರೈಕೆ ಮಾಡಿದರು. ಮದುವಣಗಿತ್ತಿಗಾದದ್ದೋ ತಲೆಯಲ್ಲಾರವಷ್ಟು ಲಜ್ಜೆ. ಅಂದಿನಿಂದಲೇ ಭೀಷಣ ಪ್ರತಿಜ್ಞೆ ಮಾಡಿದರಂತೆ: ಮಾಂಸಾಹಾರವನ್ನು ಮುಟ್ಟುವುದಿಲ್ಲವೆಂದು!

"ಅದು ಒಂದು ಹಾಳುಕತೆ. ನಾನು ಬೇಟೆಯಾಡುವುದನ್ನು ಬಿಟ್ಟು ಬಿಟ್ಟಿದ್ದೇನೆ ಮತ್ತೆ ಕೋವಿಯ ವಿಷಯ..... ಅದು ಹಾಳಾಗಿ ಹೋಯಿತು. ಹೋಗಲಿ!" ಎಂದು ನಿಟ್ಟುಸಿರುಬಿಟ್ಟರು.

'ಆ! ಅಂತಹ ಬೇಟೆಗಾರ ರಸ್ತ್ರಸಂನ್ಯಾಸವನ್ನು ಕೈಗೊಳ್ಳಬೇಕಿದ್ದರೆ, ಏನೋ ಪ್ರಬಲ ಕಾರಣವಿರಬೇಕು'— ಎಂದು ನುಡಿದೆ ಮನಸ್ಸಿನಲ್ಲಿ.

'ಏನು ಕತೆಯದು? ನಾನು ಕೇಳಬಾರದೇ?" ಎಂದರು ತಂದೆಯವರು.

"ಧಾರಾಳವಾಗಿ ಅದೊಂದು ಹಾಳು ಪುರಾಣ. ಕೇಳಿಬಿಡಿ." ನಾನೂ ಕವಿಯನ್ನು ನಿಗುರಿಸಿದೆ.

"ಈಗ ಎರಡು ತಿಂಗಳುಗಳ ಹಿಂದೆ ಒಂದು ಸಂಗತಿ ನಡೆದು ಹೋಯಿತು. ನಿರ್ನಾಲ ಮುಗಿಯುವುದರಲ್ಲಿತ್ತು. ಒಂದು ದಿನ ರಾತ್ರಿ ನನ್ನ ಜೋಡುನಳಿಗೆಯ ಕೇಪಿನ ಕೋವಿಯನ್ನು ಹಿಡಿದುಕೊಂಡು ಕುಮ್ರಿಯ ಕಡೆಗೆ ಹೊರಟೆ. ಹುಣ್ಣಿಮೆ ಕಳೆದು ನಾಲ್ಕೋ ಐದೋ ದಿನಗಳು ಸಂದಿರಬೇಕು. ತಿಂಗಳು ಮೂಡಲು ಇನ್ನೂ ನಾಲ್ಕು-ಐದು ಗಳಿಗೆಗಳು ಇದ್ದಿರಬೇಕು. ಆ ಕಾಡುಕೋಣಗಳ ಹಾವಳಿ ಸಹಿಸಿ ಸಾಕಾಗಿತ್ತು. ಸರಕಾರಕ್ಕೆ ಗೊತ್ತಾದರೂ ಸರಿ. ಒಂದನ್ನು ಗುಂಡುಹಾಕಿ ಕೊಂದೇಬಿಡುತ್ತೇನೆ. ಎಂದು ತೀರ್ಮಾನ ಮಾಡಿ ಹೊರಟಿದ್ದೆ.

"ಕುಮ್ರಿಯನ್ನು ಮುಟ್ಟಿದೆ. ಬೇಲಿಯ ಕರೆಯಲ್ಲೇ ನಡೆದೆ. ರಾಗಿಯ ಚೆಂಡುಗಳು ಬಲಿಯಲು ತೊಡಗಿದ್ದುವು. ಬಲ್ಲೇ ಒಂದು ಬದಿಯಲ್ಲಿ ಒಂದು ಕಂಟಿಯಿತ್ತು. ಯಾವಾಗಲೂ ಅದೇ ಕಂಟಿಯಲ್ಲಿ ಕಾಟಿಗಳು ಒಳಗೆ ನುಗ್ಗುತ್ತಿರಬೇಕು. ನಾನು ಅದಕ್ಕೆ ಸುಮಾರು ಐದು ಮಾರು ದೂರವಲ್ಲಿ ಅಡಗಿ ಕುಳಿತೆ. ನಡುವಿನಲ್ಲಿ ಒಂದು ದಟ್ಟವಾದ ಹೊದರು ಇತ್ತು.

"ತಿಂಗಳು ಮೂಡುವುದಕ್ಕೆ ಇನ್ನೂ ಸ್ವಲ್ಪ ಹೊತ್ತು ಇದ್ದಿರಬೇಕು. ಕಾಡಿನ ಕರೆಯಲ್ಲವೇ? ದೂರದಲ್ಲಿ ಒಂದು ಗೂಗೆ 'ಘೂಂ, ಘೂಂ' ಎನ್ನುತ್ತಿತ್ತು. ಹುಳು-ಹುಪ್ಪಡಿಗಳ 'ಜಿರಿ, ಜಿರಿ' ಸದ್ದು. ಬೇರೇನೂ ಕೇಳಿಸುತ್ತಿರಲಿಲ್ಲ. ಸ್ವಲ್ಪ ಚಳಿಯಿತ್ತು. ಕಂಬಳಿಯನ್ನು ಮರೆತು ಬಂದಿದ್ದೆ. ನಿದ್ದೆಯನ್ನು ದೂರಮಾಡುವುದಕ್ಕೆ ಎಲೆಯಡಕೆ ಚೀಲವನ್ನು ತಂದಿದ್ದೆ. ನಿರ್ನಾಲ ತಿಂಗಳಾದರೂ ಮುಳಿಯ ಮುಳಿವು ಇರಲಿಲ್ಲ. ಎಲೆಯನ್ನು ಜಗಿಯುತ್ತಾ ಕುಳಿತೆ. ಹಾಗೆಯೇ ಮೂಡಲಲ್ಲಿ ತಿಂಗಳ ಬೆಳಕು ಕಾಣಿಸಿಕೊಂಡಿತು. ನಾನು ಅದಷ್ಟು ಮುಮ್ಮಡಿಕೊಂಡೆ. ಮರಗಳ ತುದಿಯಲ್ಲಿ ಬೆಳ್ಳಂಬೆಳಕು. ತಳಗಡೆ ಮಾತ್ರ ಕರಿನೆರಳು.

"ತಿಂಗಳು ಏರಿತು. ಸುಮಾರು ಹನ್ನೊಂದು ಹನ್ನೊಂದೂವರೆ ಗಂಟೆಯಾಗಿರಹುದು. ಕಾಟಿಗಳ ಸುಳಿವೇ ಇಲ್ಲ. ಕೂತು ಕೂತು ಸಾಕಾಗಿತ್ತು. ನೀಳ್ಯ ಜಗಿದು ಜಗಿದು ನಾಲಗೆ ಬಚ್ಚಲು ತೊಡಗಿತು. ಮನೆಯಲ್ಲಿ ಆಗಿದ್ದರೆ ಯಾವಾಗಲೋ ಗೊರಕೆ ಹೊಡೆಯುವ ಹೊತ್ತು. ಬೇಡವೆಂದರೂ ಕಣ್ಣು ಮುಚ್ಚಿಕೊಳ್ಳುತ್ತಿತ್ತು. ಎದ್ದು ತಿರುಗೋಣ ಎಂದರೆ ಮನಸ್ಸು ಒಪ್ಪುವುದಿಲ್ಲ. ತಲೆಯನ್ನು ಮೇಲಕ್ಕೆ ಎತ್ತಿದೆ. ತಿಂಗಳು ಬೆಳ್ಳಿಯ ಬಟ್ಟಲಂತೆ ಹೊಳೆಯುತ್ತಿತ್ತು. ಅಲ್ಲಲ್ಲಿ ಹತ್ತಿಜೋಡಗಳು ತೇಲುತ್ತ ಇದ್ದುವು. ಚುಕ್ಕೆಗಳು ಲೆಕ್ಕಕ್ಕೆ ಸಿಕ್ಕುವಷ್ಟು. ಚಳಿ ಸ್ವಲ್ಪ ಹೆಚ್ಚಾಗಿತ್ತು. ಸುಂಜಿನ ಹನಿಗಳು

ತಟಪಟ ಸದ್ದು ಮಾಡುತ್ತ ಒಂದೊಂದಾಗಿ ಉದುರುತ್ತಿದ್ದುವು. ಕಣ್ಣು ತಾನಾಗಿಯೇ ಮುಚ್ಚಿಕೊಂಡಿತು.

" ಎಷ್ಟು ಹೊತ್ತು ಹಾಗೆಯೇ ಇದ್ದೆನೋ ? ಚಟಚಟ ಸದ್ದಿಗೆ ಕಣ್ಣು ತೆರೆಯಿತು. ನಾನು ಕುಳಿತಲ್ಲಿಂದ ನಾಲ್ಕಾರು ಮಾರು ದೂರದಿಂದ ಕೇಳಿಸುತ್ತಿತ್ತು— ಸದ್ದು. ಸ್ವಲ್ಪವೇ ಹೊತ್ತಿನೊಳಗೆ ತಿಂಗಳ ಬೆಳಕಿನಲ್ಲಿ ಕಸ್ಕಾದ ಒಂದು ಬಂಟೆ ಕಂಡಿಯ ಕಡೆಗೆ ಉರುಳುತ್ತಾ ಬರುತ್ತಿತ್ತು. ಅದರ ಬಳಿಯಲ್ಲಿಯೇ ಒಂದು ಮರಿಬಂಡೆ. ಕಾಡೆಮ್ಮೆ ನುತ್ತು ಅದರ ಕರು! ನನ್ನ ಬಲಗೈಯ ಹೆಬ್ಬೆಟ್ಟು ಕೋವಿಯ ಕುದುರೆಯನ್ನು ಮುಟ್ಟಿತು..... ಕಾಡೆಮ್ಮೆ ಹತ್ತಿರ ಹತ್ತಿರ ಬಂತು. ರೆಪ್ಪೆ ಮುಚ್ಚುವಷ್ಟರಲ್ಲಿ ಹೊತ್ತು ! ಜೊರಲು 'ಕಳ್ಳ'ನನ್ನು ಎಳೆಯಿತು.... 'ಫುಂಕಸ್ಸ' ಕಾಡಿಗೆ ಕಾಡೇ ಎಚ್ಚರವಾಯಿತು. ಹಕ್ಕಿಗಳು ಚಿಲಿಪಿಲಿಗುಟ್ಟಿದುವು. ನುಂಗ, ಮುಸುವಗಳು ಕಿರಿಚುತ್ತಾ ಮರದಿಂದ ಮರಕ್ಕೆ ಹಾರಿದವು. ಎಲ್ಲೆಲ್ಲೂ ಗಲಿಬಿಲಿ. ನಾನು ಎದ್ದುನಿಂತೆ. ಎಳೆಂಟು ಹೆಜ್ಜೆ ದೂರಹೋಗಿ ಕಾಡೆಮ್ಮೆ ಘರುಳಿತ್ತು. ಅದರ ಕರು ಮಾತ್ರ ಕಾಣಿಸಲಿಲ್ಲ.

" ಬಿದ್ದಿದ್ದ ಎಮ್ಮೆಯ ಹತ್ತಿರಕ್ಕೆ ಹೋದೆ. ಗಾಯದಿಂದ ನೆತ್ತರು ಹರಿಯುತ್ತಿತ್ತು. ನಾಲಗೆಯನ್ನು ಹೊರಕ್ಕೆ ಚಾಚಿತ್ತು. ಕಿವಿಗಳು ಜೋಲುಬಿದ್ದಿವೆ. ಅಬ್ಬಾ! ಒಂದೇ ಈಡಿಗೆ ಸತ್ತು ಹೋಯಿತೇ ಎನಿಸಿತು. ಅಷ್ಟರಲ್ಲಿ ಕರುವಿನ ಕೂಗು ಕೇಳಿಸಿತು. ತಿರುಗಿನೋಡಿದೆ. ಕರು ನೆಗೆಯುತ್ತಿತ್ತಿ ಬರುತ್ತಿತ್ತು. ನಾನು ಮರೆಯಲ್ಲಿ ನಿಂತೆ. ಕರು ಬಿದ್ದಿದ್ದ ತಾಯಿ ಹತ್ತಿರ ಬಂತು. ಅದನ್ನು ಸೂಸಿತು ಅದರ ಮೈತ್ತಲೂ ತಿರುಗಿತು. ದುತ್ತೊಮ್ಮೆ ಅದರ ಮೊಲೆಯನ್ನು ನೆಕ್ಕಿತು. ಇಲ್ಲ, ಏಳುವ ಲಕ್ಷಣವಿಲ್ಲ. ಸ್ವಲ್ಪ ದೂರಕ್ಕೆ ಹೋಯಿತು. ತಿರುಗಿ ಬಂತು. ಕರುವಿಗೆ ಏನು ತೋಚಿತೋ! ತನ್ನ ಮುಸುಡಿನಿಂದ ಬಿದ್ದಿದ್ದ ತಾಯಿ ಕೆಚ್ಚಲನ್ನು ಕುಟ್ಟಲು ತೊಡಗಿತು. ಮತ್ತೊಮ್ಮೆ ತಾಯನ್ನು ಸುತ್ತಿತು. ತಿರುಗಿ ಕೆಚ್ಚಲನ್ನು ಕುಟ್ಟಿತು. ಒಮ್ಮೆ ಜೋರಾಗಿ ಕೂಗಿತು. ಮತ್ತೊಮ್ಮೆ ಕೂಗಿತು. ಕೆಚ್ಚಲನ್ನು ಕುಟ್ಟಿತು..... ಕೂಗಿತು.....

" ನನ್ನ ಹೊಟ್ಟೆ ಚುರು ಚುರು ಎಂದಿತು. ಕಣ್ಣನ್ನು ತಡವಿದೆ. ಬೆರಳು ಒದ್ದೆಯಾಯಿತು. ಒಂದು ಹನಿ ತಟಕ್ಕನೆ ನೆಲಕ್ಕೆ ಉದುರಿತು. ನನಗೆ, ಮನೆಯಲ್ಲಿದ್ದ 'ಅಪಳೆ' ಮತ್ತು ಚಿಕ್ಕ ಚೆನ್ನಿಯ ನೆನಪಾಯಿತು. ನನ್ನ ಕಣ್ಣ ಎದುರಿನಲ್ಲಿ ಒಂದು ನೋಟ; ಮನಸ್ಸಿನಲ್ಲಿ ಇನ್ನೊಂದು ನೋಟ! ಇಲ್ಲಿ ತಾಯಿ ಮತ್ತು ಕರು; ಅಲ್ಲಿ, 'ಅಪಳು' ಮತ್ತು ಚೆನ್ನಿ. ಉಸಿರು ಭಾರವಾಯಿತು. ಕಣ್ಣೆತ್ತಿ ನೋಡಿದೆ. ಕರು ಹಾಗೆಯೇ ಇತ್ತು.....

" ತಿಂಗಳನ್ನು ನೋಡಿದೆ. ನೆತ್ತಿಯ ಮೇಲಕ್ಕೆ ಏರಿತ್ತು. ನನ್ನನ್ನು ನೋಡಿ ಅಣಕಿಸುತ್ತಿತ್ತು. ಒಮ್ಮೆ ಎಚ್ಚರಗೊಂಡಿದ್ದ ಕಾಡು ಮತ್ತೆ ಸುಮ್ಮನಾಗಿತ್ತು. ನನ್ನ ತಲೆಯಲ್ಲಿ ಏನೋ ಯೋಚನೆ. ಕೈಗಳೆರಡೂ ಕೋವಿಯ ನಳಿಗೆಯನ್ನು ಒತ್ತಿ ಹಿಡಿದುವು. ಅಲ್ಲೇ ಹತ್ತಿರವಿದ್ದ ದೊಡ್ಡ ಬಂಡೆಗೆ ಎತ್ತಿ ಬಡಿದೆ. ಕೋವಿ ಚೂರುಚೂರಾಗಿ ಹಾರಿತು! ಮನಸ್ಸು ಸ್ವಲ್ಪ ಸಮಾಧಾನ ಹೊಂದಿತು.

" ಕರಿಸೋಡವೊಂದು ತಿಂಗಳನ್ನು ಮುತ್ತಿತು. ಬೆಳಕು ನುಂದವಾಯಿತು. ಕರು ತಾಯಿ ಬಳಿಯಲ್ಲೇ ಇತ್ತು. ನಾನು ಅಣೆ ಹಾಕಿದೆ: 'ಇನ್ನು ಮುಂದೆ ಕೋವಿಯನ್ನು ಮುಟ್ಟುವುದಿಲ್ಲವೆಂದು !— "

ಒಂದು ಕ್ಷಣ ತಡೆದು ಮಾಲಿಂಗನಾಯ್ಕರು ತಂದೆಯವರ ಮುಖವನ್ನು ನೋಡಿ ಹೇಳಿದರು: " ಇದಕ್ಕೇ ನಾನು ಹೇಳಿದ್ದು,ಹಾಳು ನಾಲಗೆಯೆಂದು ! "

ಮಾಲಿಂಗ ನಾಯ್ಕರು ಕತೆ ಮುಗಿಸಿ ಸುಮ್ಮನಾದರು. ತಂದೆಯವರ ಯೋಚನಾಪರರಾವಂತೆ ಕಾಣಿಸಿತು. ನಾನು ಮಾಲಿಂಗನಾಯ್ಕರ ಮುಖವನ್ನು ದಿಟ್ಟಿಸಿದೆ— ಅದೇ ಒರಟು ಮುಖ. ಆದರೂ ಅದೇನೋ ಮುಗ್ಧತೆ, ಅದೇನೋ ದಯಾಪರತ್ವ ಸ್ಥಿರವಾಗಿ ನೆಲಸಿದಂತೆ ತೋರಿತು. ಯಾರೋ ಹಿರಿಯರು ಹೇಳಿದ್ದರು:— ಒಬ್ಬನ ವ್ಯಕ್ತಿತ್ವದಲ್ಲಿ ಬೇರೆ ಬೇರೆ ಪದರುಗಳಿವೆ—ಎಂದು. ನಾಯ್ಕರು ಹೇಳಿದ ಆ 'ಕತೆ' ಅವರ ವ್ಯಕ್ತಿತ್ವದ ಪದರುಗಳಲ್ಲಿ ಒಂದನ್ನು ಎತ್ತಿತೋರಿಸಿತು.

ಟಿಪ್ಪಣಿ :

೧ "ಜೀಡಿ" : ದೇವರ ಹೆಸರಲ್ಲಿ ಕೈಗೆ ಅಥವಾ ಕಾಲಿಗೆ ಹಾಕಿಕೊಳ್ಳುವ ಬೆಳ್ಳಿಯ ಬಳೆ.

೨ "ಕುಮ್ಮ" : ಬೆಟ್ಟದ ಇಳಿಜಾರಿನ ಕಾಡನ್ನು ಸವರಿ, ಸುಟ್ಟು, ಉತ್ತು ರಾಗಿಯನ್ನು ಬಿತ್ತುವರು. ಇದಕ್ಕೆ ಕುಮ್ಮಿ ಎನ್ನುತ್ತಾರೆ.

೩ ನಿರ್ಜಾಲ್ : ಕಸ್ಕಾದಾಸ್ತ್ರ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು ! ಪ್ರಾಮಾಣಿಕ ವ್ಯವಹಾರ !!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಷ ರೋಡ್, ಧಾರವಾಡ

ಕೆಲವು ಷಟ್ಪದಿಗಳು

ಶ್ರೀ. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಎಂ. ಎ. ಮಂಗಳೂರು.

ಕನ್ನಡ ಮಾತ್ರಾವೃತ್ತಗಳಾದ ಷಟ್ಪದಿಗಳು ಆರು ಮಾತ್ರ ರೂಢಿಯಲ್ಲಿವೆ. ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಷಟ್ಪದಿಗಳನ್ನು ನಿರ್ಮಿಸಿಕೊಳ್ಳಲು ಬರುವುದೆಂಬ ವಾದವೆದ್ದಿದೆ ಹಾಗೆ ಮಾಡುವುದು ಸೂಕ್ತವಾದೀತೆ ?

ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಿಕ ಎಂಬ ಆರು ಷಟ್ಪದಿಗಳ ಸಾಮಾನ್ಯ ಲಕ್ಷಣವು ಸರ್ವವಿದಿತವಷ್ಟೆ! ಅವುಗಳಲ್ಲಿ ಅನುಕ್ರಮವಾಗಿ ೪, ೧೦, ೧೨, ೧೪, ೧೬ ಮತ್ತು ೨೦ ಮಾತ್ರೆಗಳು. ಮೊದಲನೆಯ ಪಾದದಲ್ಲಿಯೂ, ತೃತೀಯ ಪಾದದಲ್ಲಿ ಪ್ರಥಮ ಪಾದದ ಒಂದುವರೆ ಪಾಲು ಮಾತ್ರೆಗಳೂ ಒಂದು ಗುರುವೂ ಇರಬೇಕೆಂಬದನ್ನು ಸಾಮಾನ್ಯವಾಗಿ ಎಲ್ಲರೂ ಬಲ್ಲರು. ಆದರೆ ನಡುವೆ ೧೪ ಮಾತ್ರೆಗಳು ಮೊದಲ ಚರಣದಲ್ಲಿರುವ ಷಟ್ಪದಿಯೊಂದಿಲ್ಲದ ಕೊರತೆ ಗೋಚರಿಸುತ್ತದೆ ಎಂಬುದರಿಂದಲೂ ಮಾತ್ರಾಗಣಗಳ ವ್ಯವಸ್ಥೆಯಲ್ಲಿಯೂ ಅಪೂರ್ಣತೆಯಿದ್ದಂತೆ ಕಂಡುಬರುತ್ತಿದೆ ಎಂಬುದರಿಂದಲೂ ಹೊಸ ಷಟ್ಪದಿಗಳನ್ನು ನಿರ್ಮಾಣಮಾಡಿ ಹೆಸರು ಕೊಟ್ಟವರಿದ್ದಾರೆ. * ಅವು ಹೀಗಿನೆ:

೧. ತಲ	೩+೩	= ೬ ಮಾತ್ರೆ.
	೩+೩	= ೬ ಮಾತ್ರೆ.
	೩+೩+೩+೧ ಗುರು.	= ೯ ಮಾತ್ರೆ ೧ ಗು.
೨. ಜಲ	೩+೪	= ೭ ಮಾತ್ರೆ.
	೩+೪	= ೭ ಮಾತ್ರೆ.
	೫+೪+೩+೧ ಗುರು.	= ೧೦ ಮಾತ್ರೆ ೧ಗು.
೩. ವರ	೩+೫	= ೮ ಮಾತ್ರೆ.
	೩+೫	= ೮ ಮಾತ್ರೆ
	೫+೫+೩+೧ ಗುರು.	= ೧೨ ಮಾತ್ರೆ ೧ಗು.
೪. ಅಸಮ	೪+೫	= ೯ ಮಾತ್ರೆ.
	೪+೫	= ೯ ಮಾತ್ರೆ.
	೪+೫+೪+೧ ಗುರು.	= ೧೩ ಮಾತ್ರೆ ೧ಗು.
೫. ಪರಿವರ್ಧಿನಿ	೩+೫+೩+೫	= ೧೬ ಮಾತ್ರೆ.
	೩+೫+೩+೫	= ೧೬ ಮಾತ್ರೆ.
	೩+೫+೩+೫+೫+೧ ಗುರು.	= ೨೪ ಮಾತ್ರೆ ೧ಗು.
೬. ವಾರ್ಧಿಕ	೪+೫+೪+೫	= ೧೮ ಮಾತ್ರೆ.
	೪+೫+೪+೫	= ೧೮ ಮಾತ್ರೆ
	೪+೫+೪+೫+೪+೧ ಗುರು.	= ೨೭ ಮಾತ್ರೆ ೧ಗು.

ಇವುಗಳಲ್ಲಿ, ಕೆಲವಲ್ಲಿ ಪ್ರಥಮಪಾದದಲ್ಲಿರುವ ಮಾತ್ರೆಗಳ ಒಂದುವರೆ ಪಾಲು ಮಾತ್ರೆಗಳು ಮತ್ತು ಒಂದು ಗುರು ತೃತೀಯ ಪಾದದಲ್ಲಿರಬೇಕೆಂಬ ಷಟ್ಪದಿಯ ಸಾಮಾನ್ಯ ಲಕ್ಷಣವು ಸಂಗತವಾಗುವುದಿಲ್ಲ. ಆದರೆ ಬದಲಾಗಿ, ಸೂರನೆಯ ಪಾದದಲ್ಲಿ ಪ್ರಥಮ ಪಾದದ ಒಂದುವರೆ ಪಾಲು ಗಣಗಳು ಬರಬೇಕೆಂಬ ಲಕ್ಷಣವನ್ನು ಹೇಳಬೇಕಾಗುತ್ತದೆ. ಉದಾಹರಣೆಗೆ ಮೇಲಿನ ಷಟ್ಪದಿಯ ೨, ೩ ಮತ್ತು ೪ರಲ್ಲಿ ಪ್ರಥಮಪಾದದಲ್ಲಿ ೭, ೮ ಮತ್ತು ೯ ಮಾತ್ರೆಗಳಿದ್ದು, ತೃತೀಯ ಪಾದದಲ್ಲಿ ೧೦, ೧೧ ಮತ್ತು ೧೩ ಮಾತ್ರೆಗಳೂ ಒಂದು ಗುರುವೂ ಇವೆ. ಗಣಗಳ ಲೆಕ್ಕದಂತೆ ಪ್ರಥಮ ಪಾದದಲ್ಲಿ ಪ್ರತಿಯೊಂದರಲ್ಲೂ ಎರಡೆರಡು ಗಣಗಳೂ ತೃತೀಯ ಪಾದದಲ್ಲಿ ಮೂರು ಮೂರು ಗಣಗಳೂ ಇದ್ದು ಮುಂದೆ ಗುರುವಿದೆ. ಈ ಗಣವ್ಯವಸ್ಥೆಯಲ್ಲಿ ಪ್ರಥಮಪಾದದ ಮೊದಲ ಗಣವೇ ತೃತೀಯಪಾದದ ಮೂರನೆಯ ಗಣವಾಗಬೇಕಾಗುತ್ತದೆ. ಇದರಿಂದಲೇ ಮಾತ್ರೆಗಳ ಲೆಕ್ಕ ಸರಿಬರುವುದಿಲ್ಲ.

ಈಗ ಬೆಳಕಿಗೆ ಬಂದಿರುವ ಆರು ಷಟ್ಪದಿಗಳಲ್ಲಿ ಪ್ರಥಮ ಪಾದದಲ್ಲಿ ಸಮಸಂಖ್ಯೆಯ ಮಾತ್ರೆಗಳೇ ಇವೆ. ವಿಷಮಸಂಖ್ಯೆಯವುಗಳಿದ್ದರೆ, ತೃತೀಯ ಪಾದದಲ್ಲಿ ಪ್ರಥಮ ಪಾದದ ಒಂದುವರೆ ಪಾಲು ಮಾತ್ರೆಗಳಿರಬೇಕೆಂಬ ಲಕ್ಷಣ ಸರಿಹೊಂದುವುದಿಲ್ಲವೆಂದೇ ಪೂರ್ವಜರು ಮೊದಲ ಚರಣದಲ್ಲಿ ಸಮಸಂಖ್ಯೆಯ ಮಾತ್ರೆಗಳುಳ್ಳ ಷಟ್ಪದಿಗಳನ್ನೇ ಬಳಕೆಗೆ ತಂದಿಂಬೇಕು. ಆದರೆ ಪ್ರಥಮಪಾದಕ್ಕೆ ಹೊಂದಿಸಿಂಟು ಮಾತ್ರೆಗಳುಳ್ಳ ಷಟ್ಪದಿಯೊಂದು ಎಡೆಯಲ್ಲಿಲ್ಲದ ಕಾರಣ ಅಂತಹ ಷಟ್ಪದಿಯಾದರೂ ಇರಬೇಕಿತ್ತೇ ಎಂದು ತೋರಿದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೆ ಜತೆಗೆ ಇನ್ನೂ ಕೆಲವು ಷಟ್ಪದಿಗಳ ಕೊರತೆಯೂ ಕಾಣುವುದು ಸಹಜ. ಅದರೆ ಈಯೆಲ್ಲ ಷಟ್ಪದಿಗಳನ್ನು ಸರಿಯಾಗಿ ಓದಲು ಸಾಧ್ಯವಾಗುವುದೆ? ಸುಲಭಸಾಧ್ಯವಲ್ಲವೆಂದು ಯಾರೂ ಒಪ್ಪಬಹುದು. ಅದುಬಂದಲೇ ಪಾಟಿಯನ್ನು ಸೂಚಿಸುವ ಈ ಪದ್ಯವು ಅಗತ್ಯವೆನಿಸಿತು:

* ಇ ಬಪಪಸ್ಯ ಚಿಸ್ಮಪ್ಪ ಷಟ್ಪದಿ— "ಷಟ್ಪದಿ ಸಂಶೋಧನೆ", ೧೯೫೨.

ಮೂಗಲೆಯಗಣಕೊಂದು ಪೆಟ್ಟಂ
ನಾಗಲೆಯ ಮೇಣ್ಯೆಗಲೆಯ ಗಣ
ಮಾಗಲಿಪೆಟ್ಟಾದಿ ಮೇಣ್ಮೂರನೆಯ ಮಾತ್ರೆಯೊಳು ॥
ಮೂಗಲೆಯ ಗಣದೊಡನೆ ಒಂದೊಡೆ
ನಾಗಲೆಯ ಮೇಣ್ಯೆಗಲೆಯ ಗಣ
ತೂಗಿ ಮಾರ್ಪಟ್ಟುಗಳ ಹಾಕಲು ದಾಟಿ ಹೊಂದುವುದು ॥

ಆದರೂ ಈ ಸೂಚನೆಯು ಸಾಮಾನ್ಯವಾಚಕನಿಗೆ—ಸಂಗೀತ ಶಾಸ್ತ್ರವನ್ನು ಸರಿಯಾಗಿ, ಬಹಳವಾಗಿ ಅಭ್ಯಾಸ ಮಾಡದವನಿಗೆ— ನುಂಗಲಾರದ ತುತ್ತಾಗದಿರದು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನಕ್ಕೆ ತಂದರೆ ವಿಹಿತ. ಎಷ್ಟೋ ಕವಿಗಳು ಕಾವ್ಯರಚನೆಗೆ ವಿವಿಧ ಛಂದಸ್ಸುಗಳನ್ನು ಪ್ರಯೋಗಕ್ಕೆ ತರುವ ಪ್ರಯತ್ನಮಾಡಿರಬೇಕು. ರಾಘವಾಂಕನು 'ಉದ್ದಂಡ ಷಟ್ಪದಿ' ಎಂಬ ಹೆಸರಿನ ಅಪೂರ್ವ ಷಟ್ಪದಿಯಲ್ಲಿ 'ವೀರೇಶ ಚರಿತೆ' ಎಂಬ ಮಿಾಸಲುಗವಿತೆಯನ್ನು ಬರೆದಿದ್ದಾನೆ. ಅದರ ಪದ್ಯಾರ್ಧವು ಹೀಗಿದೆ :

ಸ್ಯಡನೋಲಗದೊಳ್ ಮನ್ನಣೆವಡೆಯದೆ ದಕ್ಷಂ
ಕಡುಮುಳಿಸಿಂ ಹರಿವಿರಹಿತಯಾಗುವ ನಡಸಲ್
ಘುಡುಘುಡಿಸುತ ನಡೆತಂದು ದಧೀಚಿವ್ರತಿ ಶಪಿಸಿದ-
ನಮರರ ಮುನಿಗಳನು ॥

ಇದರ ಮೊದಲ ಪಾದದಲ್ಲಿ ೪ ಮಾತ್ರೆಯ ೫ ಗಣ (೨೦ ಮಾತ್ರೆ)ಗಳೂ, ಸೂರನೆಯ ಪಾದದಲ್ಲಿ ೪ ಮಾತ್ರೆಯ ೬॥ ಗಣ (೩೦ ಮಾತ್ರೆ)ಗಳೂ ಒಂದು ಗುರುವೂ ಇವೆ. ಗಣಗಳನ್ನು ಅರ್ಧ, ಕಾಲು ಎಂದು ವಿಭಜಿಸುವುದು ಛಂದಶ್ಶಾಸ್ತ್ರದಲ್ಲಿ ಇಲ್ಲದ ವಿಷಯವಾದುದರಿಂದ, ಮೂರನೆಯ ಪಾದದಲ್ಲಿ ಮೊದಲ ಪಾದದ ಒಂದುವರೆ ಪಾಲು ಮಾತ್ರೆಗಳಿರಬೇಕೆಂಬ ಸಾಮಾನ್ಯ ಲಕ್ಷಣವನ್ನು ರಾಘವಾಂಕನು ಅಂಗೀಕರಿಸಿವಂತಿದೆ. ಆದರೆ ಹಿಂದೆ ಕೊಟ್ಟ ಜಲ, ವರ ಮತ್ತು ಅಸಮ ಗಳಲ್ಲಿ ಹಾಗಿಲ್ಲ. ಉದ್ದಂಡ ಷಟ್ಪದಿಯೆಂಬುದಾದರೂ, ಪ್ರಥಮ ಪಾದದಲ್ಲಿ ವಿಷಮ ಸಂಖ್ಯೆಯ ಗಣಗಳಿರುವುದರಿಂದಲೂ, ಉಳಿದ ಮೂರು ಪ್ರಸಿದ್ಧ ಷಟ್ಪದಿಗಳು ಹಾಗಿಲ್ಲದಿರುವುದರಿಂದಲೂ, ಸರಿಯಾದ ಲಕ್ಷಣವುಳ್ಳದ್ದೆನ್ನುವಂತಿಲ್ಲ. ಅದರಿಂದ ಜಲ, ವರ, ಅಸಮ ಮತ್ತು ಉದ್ದಂಡಷಟ್ಪದಿಗಳ ಲಕ್ಷಣವೇ ಸರಿಯಲ್ಲವೆನ್ನಬೇಕಾಗುತ್ತದೆ.

ಉದ್ದಂಡ ಷಟ್ಪದಿಯ ಪ್ರಸ್ತಾಪವೆತ್ತಿದುದು ಹಿಂದೆಯೂ ಬಗೆ ಬಗೆಯ ಷಟ್ಪದಿಗಳ ಪ್ರಯೋಗ ಪ್ರಯತ್ನ ನಡೆಯುತ್ತಿತ್ತೆಂದು ತೋರಿಸುವುದಕ್ಕೆ ಮಾತ್ರ. ನಮಗೆ ಉಪಲಬ್ಧವಾದ ಈ ಉದ್ದಂಡ ಷಟ್ಪದಿಯೊಂದನ್ನು ಬಿಟ್ಟರೆ, ಪ್ರಸಿದ್ಧಗಳಾದ ಆರು ಷಟ್ಪದಿಗಳಲ್ಲದೆ ಬೇರೆ ಷಟ್ಪದಿಗಳು ಮೊರೆಯುವುದಿಲ್ಲ ಎನ್ನಬಹುದು. ಕುಮುದೇಂದು, ಕಲ್ಯಾಣಕೀರ್ತಿಗಳು ಕೆಲವು ಪ್ರಸಿದ್ಧ ಷಟ್ಪದಿಗಳ ೩—೬ನೆಯ ಪಾದಗಳಲ್ಲಿ ಕೆಲವು ಗಣಗಳನ್ನು ಹೆಚ್ಚಿಸಿದಂತೆ ಕಂಡುಬರುವುದಾದರೂ ಇಂತಹವುಗಳು ಇತಂತ್ರಬಳಕೆಯಲ್ಲಿಲ್ಲ ಎಂಬುದರಿಂದ, ಬೇರೆ ಷಟ್ಪದಿಗಳು ಸುಲಭಗ್ರಾಹ್ಯಗಳಲ್ಲವೆಂದು ಅವನ್ನು ಬಿಟ್ಟುರಬೇಕೆಂದು ಊಹಿಸಿದರೆ ತಪ್ಪಾಗದು.

ನಾಗವರ್ಮನ ಛಂದೋಂಬುಧಿಯಲ್ಲಿ ಒಂದು ಷಟ್ಪದಿಯ ಲಕ್ಷಣವನ್ನು ಹೇಳಲಾಗಿದೆ. ಜಯಕೀರ್ತಿಯ ಛಂದೋನುಶಾಸನದಲ್ಲಿ ನುತ್ತು ಸಂಗೀತ ರತ್ನಾಕರದಲ್ಲಿ ಹೇಳಿದ ಷಟ್ಪದಿಯ ಲಕ್ಷಣವೂ ಅದರಂತೆಯೇ ಇದೆ. ಈ ಲಕ್ಷಣವನ್ನನುಸರಿಸಿ ಶಾಂತಿನಾಥನ ಕನ್ನಡ ಸುಕುಮಾರಚರಿತದಲ್ಲಿ ಮತ್ತು ಚಂದ್ರರಾಜನ ಮದನತಿಲಕದಲ್ಲಿ ಷಟ್ಪದಿಗಳಿವೆ. (ಈ ಕುರಿತಾದ ಲೇಖನವೊಂದು ಅನ್ಯತ್ರ ಪ್ರಕಟವಾಗಿದೆ)

ಈ ರೀತಿ ವಿರಳವಾಗಿ ಷಟ್ಪದೀಪ್ರಯೋಗವಿದ್ದರೂ ಕವಿಗಳು ಬೇರೆ ಬೇರೆ ಷಟ್ಪದಿಗಳನ್ನು ಬಳಕೆಗೆ ತರಲು ಕಾಲಾವಕಾಶ ಹುಡಿದಿರಬೇಕು. ಆದರೆ ಸುಗಮವಾಗಿ ಓದಲಾಗದ ಷಟ್ಪದಿಗಳನ್ನು ಕೈಬಿಟ್ಟಿರಬೇಕು. ಈಗ ಬಳಕೆಯಲ್ಲಿರುವ ಷಟ್ಪದಿಗಳೇ ಕಾವ್ಯರಚನೆಗೆ ಅನುಕೂಲವೆಂದು ಉಳಿದುವುಗಳನ್ನು ಬಿಟ್ಟುರಬೇಕು. ಹಾಗೆಂದು ಹೊಸ ಷಟ್ಪದಿಗಳನ್ನು ನಿರ್ಮಿಸಹೊರಟರೆ, ಎಷ್ಟು ಷಟ್ಪದಿಗಳನ್ನೂ ತಯಾರಿಸಬಹುದು. ಉದಾ :

೧	೪+೩	= ೭ ಮಾತ್ರೆ.
	೪+೩	= ೭ ಮಾತ್ರೆ.
	೪+೩+೪+೧ ಗುರು	= ೧೧ ಮಾತ್ರೆ+೧ಗು.
೨	೫+೩	= ೮ ಮಾತ್ರೆ.
	೫+೩	= ೮ ಮಾತ್ರೆ.
	೫+೩+೫+೧ ಗುರು	= ೧೩ ಮಾತ್ರೆ+೧ಗು.
೩	೫+೪	= ೯ ಮಾತ್ರೆ.
	೫+೪	= ೯ ಮಾತ್ರೆ.
	೫+೪+೫+೧ ಗುರು	= ೧೪ ಮಾತ್ರೆ+೧ಗು.
೪	೪+೩+೪+೩	= ೧೪ ಮಾತ್ರೆ.
	೪+೩+೪+೩	= ೧೪ ಮಾತ್ರೆ.
	೪+೩+೪+೩+೪+೩+೧ ಗುರು	= ೨೧ ಮಾತ್ರೆ +೧ಗು.
೫	೫+೩+೫+೩	= ೧೬ ಮಾತ್ರೆ.
	೫+೩+೫+೩	= ೧೬ ಮಾತ್ರೆ.
	೫+೩+೫+೩+೫+೩+೧ ಗುರು	= ೨೪ ಮಾತ್ರೆ ೧ಗು.
೬	೫+೪+೫+೪	= ೧೮ ಮಾತ್ರೆ.
	೫+೪+೫+೪	= ೧೮ ಮಾತ್ರೆ.
	೫+೪+೫+೪+೫+೪+೧ ಗುರು	= ೨೭ ಮಾತ್ರೆ+ ೧ಗು.

ಇತ್ಯಾದಿ, ಇತ್ಯಾದಿ.

ಮುಖ್ಯವಾಗಿ, ಹೊಸ ಷಟ್ಪದಿಗಳ ನಿರ್ಮಾಣ ಸರಿಯಲ್ಲವೆಂದೇ ಹೇಳಬೇಕಾಗುತ್ತದೆ.

———

ಅಯಿದು ವರುಷದ ಹವಣಿಕೆ

ಡಿ. ಚೆಟಗೇರಿ ಕೃಷ್ಣಕರ್ಮ

❋

ಅಯಿದು ವರುಷದ ಹವಣಿಕೆ—ಇದು—ನಯನಿವರ ಮುಂಗಾಣಿಕೆ !
ನಯವಿದರ ಮುಂಗಾಣಿಕೆ—ನಿಜ—ನವಯುಗದ ನಲ್ಲಾಣಿಕೆ !

— ೧ —

ಪಾರತಂತ್ರ್ಯದುರುಳ ಕಳಚಿ ಭಾರತ ಮೇಲೆದ್ದಿದೆ....
ಬಹುಕಾಲದ ಬೇನೆಯಿಂದ ಒಡಲು ಬಡಕಲಾಗಿದೆ....
ಭಾಗ್ಯಪೂರ್ಣ ಭಾರತ ನಿರ್ಭಾಗ್ಯರಂತೆ ನಿಂತಿದೆ....
ಬಲ-ತೈಜಸ-ಸತ್ತ್ವಗಳನು ಇದರಲಿ ತುಂಬುವುದಿದೆ.
ಒಳ್ಳೊಳ್ಳೆಯ ವೈದ್ಯವೃಂದ ಬಲ್ಲ್ಯಗಳನು ಹುಡುಕಿದೆ
ಬಳ್ಳಿವರಿದ ಬಡತನವನು ತಳ್ಳಲಿಕಣಿಯಾಗಿದೆ—

ಅಯಿದು ವರುಷದಲಿಯೇ—ಭಾ-
ರತನ ಬಲವು ಬಲಿಯಿ....

ನಾಯಕಳ ಮೂಲಿಕೆಯನೊಂದ ಕಂಡುಹಿಡಿದಿದೆ—ಜನತೆ
ಕಾಯಕದಿಂದದನು ಅಮೃತನೆಸಗಬೇಕಿದೆ.

— ೨ —

ಭಾರತದ ಭೂತಕಾಲದ ಭಾಗ್ಯ ಕಿರಿಯದೇ ?
ಹೊನ್ನಿನಾ ಹೊಗೆಯ ಹಬ್ಬಿಸಿದ ಕಥೆಯು—
ಸೂರೆಹೋಗಿರುವ ಸಿರಿಮನೆಯಂತೆ ಇಂದಿಲ್ಲಿ
ಸೇರಿಕೊಂಡಿದೆ ನೂರು ಬಗೆಯ ವ್ಯಥೆಯು.
ಯಾರು-ಯಾರನೊ ಕರೆದು ಉಣಿಸಿ ತಣಿಸಿದ ತಾಯಿ
ತಾನೆ ಹಸಿನೆಯಲಿ ಬಾಯ್ ಬಿಡುತಲಿಹಳು....
ತನ್ನ ಹಸುಳೆಗಳ ಬರಿಬಸಿರ ತುಂಬಿಸಲೆಂದು
ಅನ್ನಿಗರ ಮನೆಯೆದುರು ತಿರುಗುತಿಹಳು !
ಹೀಗೆಯೇ ಇವಳಟಿಯ ಬೇಕ ?
ಇಲ್ಲವೇನು ಉಪಾಯವಿದಕೆ ?

— ೩ —

ಇಂದಾವರು ಭಾರತಿಯೇಂ ಬಡನಿಯೆ ?
ಅಡಗಿವೆ ಅಕೆಯ ವೈಭವವು....
ಹುಡುಕಿ ಹುಡುಕಿ ಹೊರಗೆಳೆದರೆ ತಾಯಿಯ
ಬಡತನವುಳಿಯದು ನಿಶ್ಚಯವು !
ಬಡಗಣ ಬೆಟ್ಟದ ಹೊಳೆಗಳು ತೆಂಕಣ
ಕಡೆಯ ಹಿರಿ-ಕಿರಿಯ ಹೊನಲುಗಳು....
ಒಡಲು ತುಂಬಿ ಸಿರಿಯನೆ ಹರಿಸುತಲಿನ್ನೆ,
ತಡೆದು ನಿಲಿಸೆ ಕೊರತೆಯೆ ಕೂಳು ?
ಇರುಳನು ಕಳೆಯುವ ಹಿರಿಬೆಳಕು—
ದೊರೆವುದಲ್ಲಿ ಬಲ ಚಣಚಣಕು !

— ೪ —

ಬಡವೈ-ಭಾರತಿಯ ಒಡಲ ತುಂಬ ಬಲದ ಬೀಜ....
ಅಡಗಿವೆ ಗಣಿಗಳಲಿ ಚಿನ್ನ ಕಾರ್ಬೊನ್ನಿನೋಜ;
ಒಡಲೊಳೇಸೊ ಹರಿಯುತಿಹವು ವಿಲಾತ್ಯೆಲ ದ್ಯುರಿಗಳು
ಅಗಿದು ತೆಗೆಯಲಿಕ್ಕೆ ಬೇಕು ಹುರುಪಿನ ಹುಡ್ಗರಿಗಳು—

ಇಂದಿನ ಈ ಯುಗಕೆ— ತೈಲ
ಸಿರಿ-ಬಲಗಳ ಕಾಣ್ಕೆ....

ಹೊರನಾಡಿನ ಪರಿಗೆ ನಿಂತು ಬಾಳಲು ಈ ಭಾರತ ...
ಹೊರಡಬೇಕು ಗಣಿಗಳಿಂದೆ ಖಣಖಣಾಟ ಸಂತತ !

— ೫ —

ಕುರುಡರಂತೆ ಇದ್ದಲ್ಲಿಯೆ ಬಿದ್ದುಕೊಳುವುದೇಕೆ ?
ಕರೆಯುತಿಹನು ಎಲ್ಲರನೂ ಕಾಲ ಕಾಯಕಕ್ಕೆ—
ಕುರಿಯ ಮರಿಗಳಲ್ಲ ಭರತಮಾತೆಯ ಕಲಪುತ್ರರು;
ಕರಿಯ ಬಲಕೆ ಹುಲಿಯ ಬಲಕೆ ಹಿರಿಯರುಹಿಗೆ ಪಾತ್ರರು.

ಏಳಿರಿ ಎದ್ದೇಳಿರಿ !....
ಏಳಿರಿ ಎದ್ದೇಳಿ ಮನೆಯ
ಅಲಸಿಕೆಯನು ಹೂಳಿರಿ !

ನಿಮ್ಮ ನಿಮ್ಮ ಕಜ್ಜಗಳನು ಮನ್ನಿಸವರಿತು ಮಾಡಿರಿ—
ನಮ್ಮ ಹಿರಿಯ ನಾಯಕರಿಗೆ ಕೈನೆರವನು ನೀಡಿರಿ !

— ೬ —

ಹಳ್ಳ-ತಿಟ್ಟಿನ ನೆಲವ ಸಮ ಮಾಡಬೇಕೀಗ
ಹಳ್ಳಿ-ಪಟ್ಟಣದ ಭೇದವ ದೂಡಬೇಕು—
ಎಲ್ಲರಿಗು ಹಿಟ್ಟು-ಬಟ್ಟೆಗಳನೊದಗಿಸಬೇಕು
ಬಯಲ ಬಾಳುವೆಯ ತೊಲಗಿಸಲೆಬೇಕು !
ನಡೆವ ದಾರಿಗಳೆಲ್ಲ ಸುಣ್ಣಿತಾಗಲು ಬೇಕು
ಬಡತನವದೆಲ್ಲಿಯೂ ಕಾಣದಿರಬೇಕು—
ನಡೆ-ನುಡಿಗಳೆಲ್ಲವೂ ನಯವಾಗಬೇಕದಕೆ
ಹುಡುಗರಿಗು ಹಿರಿಯರಿಗು ವಿದ್ಯೆಬೇಕು !
ರೋಗರಕ್ಕಸರ ದಂಡು— ಇಲ್ಲಿಂದ
ಗೂಳಿಯನ ಕಟ್ಟಿಕೊಂಡು—
ಕಾಲುಕೀಳುವ ಹಾಗೆ ಧನ್ವಂತರಿಯ ಸೈನ್ಯ
ದಾಳಿಯನು ನಡೆಸಬೇಕು !

— ೭ —

ಭರತಮಾತೆಯಣುಗರೆಲ್ಲ ಅಣ್ಣ-ತಮ್ಮ, ಅಕ್ಕ-ತಂಗಿ—
ನೋಡಿಯಬೇಕು ಈ ಭಾವವು ಎಲ್ಲರ ಎದೆಯಲ್ಲಿ ತಂಗಿ,
ಜಾತಿ-ಪಂಥ-ಮತಗಳಿಂದ ಒಡೆದುಹೋದ ಜನಸಮಾಜ
ನೀತಿ-ಸದಾಚಾರದಿಂದ ಹೊಂದಬೇಕು ಹೊಸತು ತೇಜ !
ನಮ್ಮ ನಾಡಗುಡಿಯು— ಜನದ
ಹೆಮ್ಮೆಗಾಗಲೆಡೆಯು—
ಅದರ ಮಾನ-ಸ್ಥಾನ—ಕಾಯು-
ವಂತಾಗಲಿ ಸಡೆಯು !

— ೮ —

ಪರದಾಸ್ಯವು ಹೋಯುತಂತೆ ಪರಾಶ್ರಯ ಹೋಗಲಿ,
ಭರತಪುತ್ರರೆಲ್ಲ ತಾನೆ ದುಡಿದು ಸಡೆದು ಬೀಗಲಿ !
ಹೊಸಕಾಲದಿ ಧಾನ್ಯ-ಧನದ ಸುಖಸಮೃದ್ಧಿಯಾಗಲಿ—
ನಿಷಮತೆಯಳಿದೆಲ್ಲೆಲ್ಲಿಯು ಶುಭಜೀವನ ಸಾಗಲಿ !
ಇದಕಾಗಿಯೆ ದುಡಿಯೆರಣ್ಣ ಮುಂದಿನಯ್ದು ವರುಷ—
ಸದದ ಗೆಜ್ಜೆ ಝಣರ್ಝಣಿಸುತೆ ಬರುವುದು ಬಳಿ ಹರುಷ !
ಚಿರಸುಖಪ್ರದಾಯಿನಿ—
ನಮ್ಮ ಭರತ ಜನನಿ....
ಅವಳಿಗಾಗಿ ನಮ್ಮ ಬಾಳು— ಎಂಬ ತಿಳಿವು ಬೆಳೆಯಲಿ—
'ಜಯ ಭಾರತ, ಜಯ ಭಾರತ' ಎನುವ ಕೂಗು ನೊಳಗಲಿ !

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,
— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ,
ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ನುತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಡು ಬಟ್ಟು)

ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಎಸ್ಸೆಲ್ ೧೯೬೧

ವಾರಸ್ದಾರ್

(ಏಕಾಂಕ ನಾಟಕ)*

"ಚಿದಂಬರಾನಂದ" ಧಾರವಾಡ

ಪಾತ್ರಗಳು : ● ದೊಡ್ಡ ರಾಯರು (ನಿವೃತ್ತ ಕಲೆಕ್ಟರು) ● ಶಾಮರಾಯರು (ದೊಡ್ಡರಾಯರ ತಮ್ಮ; ನಿವೃತ್ತ ಮಾಮಲೇದಾರ್) ● ಭೀಮರಾಯರು (ದೊಡ್ಡರಾಯರ ಹೆಂಡತಿಯ ತಮ್ಮ; ನಿವೃತ್ತ ಫೌಜದಾರ್) ● ಕಲ್ಲಂಭಟ್ಟರ (ಪುರೋಹಿತರು) ● ಮಲ್ಲ (ಸೇವಕ) ● ಫಕೀರಪ್ಪ (ಬೇಲೀಫ್) ● ರಂಗರಾಯರು (ನ್ಯಾಯಾಧೀಶ)

(ದೊಡ್ಡರಾಯರ ಹುಸೆಯ ದಿವಾಣಖಾನೆ. ಪ್ರೇಕ್ಷಕರಿಗೆ ಎದುರಾಗಿ ದೊಡ್ಡ ರಾಯರ ದೊಡ್ಡ ಭಾವಚಿತ್ರವಿದೆ. ಆ ಭಾವಚಿತ್ರದ ಕೆಳಗೆ ಪಕ್ಕೆಯ ಕಾಲದ ಒಂದು ದೊಡ್ಡ ಆರಾಮುಕುರ್ಚಿಯಿದೆ ಅದರಲ್ಲಿ ಆತು ಕುಳಿತು ಕೊಳ್ಳಲು ದಿಂಬು ಇದೆ ಅದರ ಎಡಬಲದಲ್ಲಿ ಕುಳಿತುಕೊಳ್ಳಲು ಪಕ್ಕೆಯ ಪದ್ಧತಿಯ ಒಳ್ಳೆಯ ಕುರ್ಚಿಗಳಿವೆ ದೊಡ್ಡ ರಾಯರ ಫೋಟೊದ ಕೆಳಗೆ ಒಂದು ಗೋಡೆಯ ಗಡಿಯಾರ (Wall Clock) ಇದೆ. ತೆರೆ ಸರಿದಾಗ ರಂಗಸ್ಥಳವು ತೆರವಾಗಿರುತ್ತದೆ.)

ಭೀಮರಾಯಃ (ಪ್ರವೇಶಿಸಿ) ಎಲಾ! ಯಾರಿಲ್ಲೇನು? ಆ ಶಾಮರಾಯ ಇಲ್ಲೇ ಕೂತಾನ ಅಂತ ತಿಳಕೊಂಡಿದ್ದೆ. ಎಲ್ಲ್ಯೋ ಹೋಗ್ಯಾನ. ಆದರ....ಮತ್ತೇನು ಮಸಲತ್ತ ಮಾಡಲಿಕ್ಕೆ ಅಂತ ಹೋಗ್ಯಾನೊ, ಯಾರಿಗ್ಗೊತ್ತು? (ವಿಚಾರಿಸಿ) ಏನೇ ಆಗಲಿ, ಇನ್ನ ಹೀಂಗ ಸುಮ್ಮನಽ ಕೂತರ, ಈ ಆಸ್ತಿ ನನ್ನ ಕೈಗೇನು ಹತ್ತೂದಿಲ್ಲ. ಅದಕ್ಕ ಸ್ವಲ್ಪ ಧೈರ್ಯ ಮಾಡಬೇಕು. (ವಿಚಾರಿಸಿ) ಅಂದ್ಹಾಂಗ ಆ ಮಲ್ಲ್ಯಾಗ ಒಂದು ಟ್ರಂಕ್ಕು ಗೊತ್ತು ಮಾಡಿಕೊಂಡು ಬಾ ಅಂತ ಹೇಳಿದ್ದೆ. ಮತ್ತು ಯಾರಿಗೂ ಗೊತ್ತಾಗೂದಕಿಂತಾ ನೊದಲs, ಈ ಮನ್ಯಾಗಿನ ಸಾಮಾನೆಲ್ಲಾ ಹೊತ್ತಾಕಿಬಿಡೋಣು. (ಗಡಿಯಾರದ ಕಡೆಗೆ ನೋಡಿ) ಎಲಾ, ನಾಲ್ಕು ಹೊಡೀತು. ಈ ಮಲ್ಲ್ಯಾ ಇನ್ನೂ ಬಂದಿಲ್ಲ್ಯಾಕ? ಅಥವಾ ಬಂದು ಒಳಗs ಯಾವದಾದರೂ ಪೋಲ್ಯಾಗ ಕೂತು ಕಾಳು ಕಡಿ ಎತ್ತಿ ಹಾಕೋ ಉದ್ಯೋಗ ನಡಿಸ್ಯಾನೇನು ಮತ್ತ? ಈಗಿನ ದಿವಸದಾಗ ಈ ಆಳು ಮನುಸ್ಯಾರನ್ನs ನಂಬೋಹಾಂಗಿಲ್ಲ. ಆದಕ್ಕ ಮಲ್ಲ್ಯಾ ಒಳಗ ಎಲ್ಲ್ಯಾದರೂ ಇದ್ದಾನೇನೋ ನೋಡೇ ಬರೋಣ. (ಹೋಗುವನು)

ಮಲ್ಲಃ (ನೆಲ್ಲನೆ ಬರುವನು) ಇದೇನಿದು? ಅಂ! ಇಬ್ಬರೂ ಹೊರಟುಹೋದರೇನು? ಛೇಸ್ಯಾತ ಬಿಡು. ಹೇಡಾ ಹೋದ್ಹಾಂಗ ಆತು. ಆದರ....ಅತ್ತs ಹೋಗಬೇಕಲಾ ಇವು. (ಅತ್ತಿತ್ತ ನೋಡಿ) ನಮ್ಮ ದೊಡ್ಡರಾಯರಿಗೆ ಚಾಲವರದು ಹೇಳಿದ್ನಿ 'ಎಫ್ಫಾs, ಫಣೇರs, ಈ ಎರಡೂ ಮುದುಪಗಳನ್ನ ನಂಬಬ್ಯಾಡ್ರೀ, ಇವರ ಮ್ಯಾಲ ಮನಿ ಬಿಟ್ಟು ಯಾತ್ರಿ ಮಾಡಾಕ ಹೋಗಬ್ಯಾಡ್ರೀ—ಅಂತ. ಆದರ ಅವರ ಕೇಳsಲಿಲ್ಲ, ಹಾಂಗ ಹೊರಟು ಹೋಗಿಬಿಟ್ರು. (ಕುರ್ಚಿಗಳನ್ನು ಸ್ವಚ್ಛ ಮಾಡುವನು. ಆದಾದ ನೋಲೆ) ಆದೇನಾತೋ ಏನೋ, ಹೋದವರು ಕೈಲಾಸಕ್ಕs ಹೋದರಂತ! ಏನ ಬಂತಪಾ ಈಗಿನ ಕಾಲಾ ಅಂತೇನಿ ಹೊರಗ ಹೋದವರು ತಿರಿಗಿ ಬರತಾಗನ್ನೂದs ನೇನಿಲ್ಲ ಇನ್ನ ಊರಿಗೆ ಹೋದವರಿಗಂತೂ ದೇವರs ಗತಿ. (ದೊಡ್ಡರಾಯರ ಕುರ್ಚಿ ಸ್ವಚ್ಛಮಾಡುವನು). ಅತ್ಯು ನಮ್ಮ ದೊಡ್ಡರಾಯರ ಪುಣ್ಯೇವ ಮಾಡಿದ್ರಂತ ಕಾಶೀ ಒಳಗ ಮರಣ ಬಂತು; ನಾ ಏ ಪಾಪಾ ಮಾಡಿದೇನೋ, ಈ ಎರಡೂ ಮುದಕಗೋಳ ಕೂ ಗೋಳ್ಯಾಡಬೇಕಾಗೇತಿ. (ಅತ್ತಿತ್ತ ನೋಡಿ) ಈ ಭೀಮರಾಯಾ ಶ್ಯಾಮರಾಯಾ ಕೂಡಿ, ದೊಡ್ಡ ರಾಯರ ಈ ದೊಡ್ಡ ಆಸ್ತಿ ಎ ಹಾಕಾಕ ಸಂಚು ನಡಿಸ್ಯಾರು. ದೊಡ್ಡ ರಾಯರು ಕೈಲಾಸ ಕಂ ಇನ್ನೂ ಪಂಗನಾಗಿಲ್ಲ; ಇಷ್ಟರೊಳಗs ಮನೀಗೆ ಹೆಗ್ಗಣ ಹತ್ತಿದ್ಹಾಂ ಆಗ್ಯೇತಿ....ಹೆಗ್ಗಣ! ಇವನೂ ತಮ್ಮ ಮಂದಿನ್ನ ಊರಿಗೆ ಕಳಸಿದಾನ. ಅವನೂ ತಮ್ಮ ಮಂದಿನ್ನ ಊರಿಗೆ ಕಳಸಿದಾನು. ಈಗ ಈ ಆಸ್ತಿ ಎಲ್ಲಾ ಹ್ಯಾಂಗ ತಾ ಒಬ್ಬನs ಎತ್ತಿ ಹಾಕಬೇಕು—ಅಂತ ಇಬ್ಬರೂ ಬ್ಯಾರೆ ಬ್ಯಾರೆ ಮಸಲತ್ತು ನಡಿಸೀದಾರು. (ವಿಚಾರಿಸಿ) ನಮ್ಮ ಕಲ್ಲಂಭಟ್ಟರು ಊರಾಗಿದ್ದಿದ್ರ ಏನಾರೇ ಮಾಡಾಕ ಬರತಿತ್ತು. ಅವರು ಇಲ್ಲ. ಅಂತೂ ಇವರಿಬ್ಬರೂ ಈ ಮನಿಗೆ ಬಂದಾಗ್ನಿಂದ - ಈ ಮನ್ಯಾಗ ಬೆಳವ ಹೊಕ್ಕಾಂಗ ಆಗೇತಿ, ಬೆಳವ....

ಭೀಃ (ಪ್ರವೇಶಿಸಿ) ಏನಲೇ ಮಲ್ಲ್ಯಾ ಅದು? ಏನೋ ಬೆಳವ ಜನ್ಮಾಕ ಹತ್ತೀದಿ. ಯಾರಲೇ ಬೆಳವ?

ಮಃ (ಚಕಿತನಾಗಿ) ಬೆಳವಾ? ಬೆಳವಲ್ಲರೀ ಕಳವು! ಈ ಊರಾಗ ಕಳವು ಭಾಳ ನಡದಾವಂತ್ರಿ! ಕೊಟ್ಟದ್ದು ಕೊಟ್ಟಲ್ಲೆ ಇಟ್ಟದ್ದಿಟ್ಟಲ್ಲೇ ಸಾಮಾನು ಹೋಗಾಕ ಹತ್ತಾವಂತರಿ ಮತ್ತೇ..

* ಇದನ್ನು ರಂಗಭೂಮಿಯ ಮೇಲೆ ತರುವವರು ಶ್ರೀ. ಎಸ್. ಕುಲಕರ್ಣಿ, ಧಾರವಾಡ ಇವರಿಂದ ಲಿಖಿತ ಒಪ್ಪಿಗೆ ಪಡೆಯುವುದು.

ಮತ್ತ ಅಗದೀ ಗುರುತು ಇಸ್ವಾಸ ಇದ್ದವರೂ ಕಳವು ಮಾಡ್ಲಾಕ ಹತ್ತ್ಯಾರಂತರಿ. ಏನ ಕಾಲ ಬಂತಪಾ ಅಂತೇನಿ !

ಭೀ : ಆದರಲಿ, ನಾ ಹೇಳಿದ ಕೆಲಸಾ ಏನು ಮಾಡಿದೆಲೇ, ಒಂದು ಟ್ರಕ್ಕು ಗೊತ್ತು ಮಾಡಿಕೊಂಡು ಬಾ ಅಂತ ಹೇಳಿದ್ದಿಲ್ಲಽ ?

ಮು: ಅದಕ್ಕss ಹೋಗಿದ್ನಿರಿ, ಅಟ್ಟರಾಗss ಮತ್ತೇನೋ ಸುದ್ದೀ ಕೇಳಿದ್ದಾಂಗ ಆತ್ಯು; ಅದಕss ಗಡಾನ ಓಡಿಬಂದಿನಿರಿ.

ಭೀ: ಏನಲೇ ಅದು ಸುದ್ದಿ ? ಗಡಾನ ಹೇಳು.

ಮು: (ಅತ್ತಿತ್ತ ನೋಡುವನು).

ಭೀ: ಆ ಬೆಳವ ಹೊರಗ ಹೋಗೇತಿ, ನೀ ಅಂಜದss ಅಳಕದss ನನ್ನ ಮುಂದ ಹೇಳು. ಅಲ್ಲಲೇ ಮಲ್ಲ್ಯಾ, ನನ್ನಂಥಾ ಫೌಜದಾರಾ ನಿನ್ನ ಮುಂದಿರೊವಾಗ, ಹೆದರತೀ ಅಲ್ಲಲೇ, ಗಡಾನss ಹೇಳು.

ಮು: ಏನೋ ಇಂದ ನಿಮ್ಮನ್ನss ಈ ಮನಿಂದ ಹೊರಗ ಹಾಕೇ ಬಿಡತಾರಂತರೀ ! ಆದಕ್ಕ ಮುಂದಿನ್ನ ಕರಕೊಂಡು ಬರ್ಲಾಕ ಹೋಗಿ-ನಾರಂತ....ಏನೋ ಸುದ್ದಿ ಹತ್ತಿ....

ಭೀ : ಏನಂದಿ ? ನನ್ನ ಹೊರಗ ಹಾಕತಾನಂತss ಆ ಮುದುವ? ಅದಕ್ಕss ಈಗ ಹೊರಗ ಹೋಗ್ಯಾನ ಕಾಣಕ್ಕದ. ಹೋಗಲಿ, ಹೋಗಲಿ. ಹೊರಗ ಹೋದಾಂವ ಹೊರಗss ಹೊಗೋ ಹಾಂಗ ಮಾಡತೀನಿ ಈ ಭೀಮರಾಯ ಸುಮ್ಮನ ಜೆಂದಕ್ಕಂತ ಈ ಹುರಿ-ಮೀಸಿ ಬಿಟ್ಟಾನೇನು ? (ಮೀಸೆಯಮೇಲೆ ಕೈ ಹಾಕುವನು) (ವಿಚಾರಿಸಿ) ಏ ಮಲ್ಲ್ಯಾ, ನೀ ಈಗ ಹೋಗಿ ಆ ಟ್ರಕ್ಕಿನವನ್ನ ಕರಕೊಂಡು ಬಾ! ಮತ್ತss ಆ ದೊಡ್ಡ ರಾಯರ ಬಂಗಾಳಿ ಅದss ನೋಡು, ಅದನ್ನ ತಗೊಂಡ ಬಾ. ನೋಡೇ ಬಿಡತೇನಿ ಒಂದು ಕೈ, ನಾ ಮೂವತ್ತು ವರುಷ ಫೌಜದಾರಿಕೀ ಮಾಡಿದ್ದು ಪುಕ್ಸಟ್ಟೆ ಅಂತ ತಿಳದೀ ಏನು ?

[ಇತ್ತಲಲ್ಲಿ ಶಾಮರಾಯನು ಹೊರಗಿನಿಂದ ಬರುವನು]

ಶಾ : ನಾನೂ ಮೂವತ್ತು ವರುಷ ಪುಕ್ಸಟ್ಟೆ ಮಾಮಲೇದಾರಿಕೀ ಮಾಡಿಲ್ಲ. ನಾ ಮನ್ಯಾಗ ಇಲ್ಲದಾಗ, ಇಬ್ಬರೂ ಕೂಡಿ ಏನು ಸುಸಲತ್ತು ನಡಿಸೀರಿ ?

ಭೀ : (ನಿಟ್ಟನಿಂದ) ನಾ ಸುಸಲತ್ತು ನಡಿಸಿಲ್ಲ ನೀ ನಡಿಸೀದಿ-ನೀ! ನನ್ನss ಇವ್ವೊತ್ತss ಮನೀ ಬಿಟ್ಟು ಹೊರಗ ಹಾಕಾಂವss ನೀನು ? ಏನೋ ದೊಡ್ಡರಾಯರ ತಮ್ಮ ಅಂತ ನಾ, ಇಲ್ಲೀವರಿಗೆ ಕೈಕಾಯ್ದೆ ಅದರ ಇನ್ನ ಮಾತ್ರ ಸಾಧ್ಯ ಇಲ್ಲ.

ಶಾ : ನೀ ಅದ್ರೂ ದೊಡ್ಡ ರಾಯರ ಬೀಗ ಅಂತ ನಾನೂ ಇಲ್ಲಿತನಕಾ ಸುಮ್ಮನss ಇದ್ದೆ. ಇವ್ವೊತ್ತು ನಿನ್ನ ಮನೀಬಿಟ್ಟು ಹೊರಗ ಹಾಕದಿದ್ದರ, ನನ್ನ ಹೆಸರು ಶ್ಯಾಮರಾಯನss ಅಲ್ಲ.

ಭೀ : ಓಹೋ, ನಿನ್ನ ಮಾಮಲೇದಾರಿಕೀ ಇಲ್ಲೀ ತನಕಾ ಬಂತೇನು ? ಇವತ್ತss ತಿಳದ ಹೋಗಲಿ; ನಿನ್ನ ಮಾಮಲೇದಾರಿಕಿ ಹೆಚ್ಚೋ ನನ್ನ ಫೌಜದಾರಿಕಿ ಹೆಚ್ಚೋ ಅನ್ನೋದು !

[ಗಾಬರಿಯಾಗಿ ನಿಂತ ಮಲ್ಲನ ಕಡೆಗೆ ತಿರುಗಿ]

ಏ ಮಲ್ಲಾ, ಹೀಂಗ್ಯಾಕ ನಿಂತೇಲೇ ನೀ, ದೆವ್ವ ಬಡದವರ ಹಾಂಗ ? ನೆನಸಿಲ್ಲೇನು ನಾ ಹೇಳಿದ್ದು ? ಲಗೂ ತಗೊಂಡ ಬಾ.

[ಮುಲ್ಲನು ಹೊರಡುವನು]

ಶಾ : ಏ ಮಲ್ಲ್ಯಾ! ಹೋಗಬ್ಯಾಡ, ಬಾರಲೇ ಇಲ್ಲೆ! (ಬರುವನು) ಅವರೇನು ತರ್ಲಾಕ ಹೇಳಿದರು ನಿನಗss? ಇಲ್ಲೆ ನನ್ನ ಮುಂದ ಹೇಳು. ಏನೋ ಗುಂಡು ಬಂದೂಕು ಅಂತ ಶಬ್ದ ಕೇಳಿಸಿತ್ತು. ಏನದು ಹೇಳು !

(ಮುಲ್ಲ ಸುಮ್ಮನೇ ನಿಲ್ಲುವನು).

ಭೀ : ಹೂಂ, ಹೋಗಲೇ ಲಗೂನss. (ಹೊರಡುವನು)

ಶಾ : ಬಾರಲೇ ಇಲ್ಲೆ. (ಬರುವನು)

ಮು: ಎಸ್ಟಾ ನಾ, ದೊಡ್ಡರಾಯರ ಅನ್ನಾಉಂಡು ಅವರ ಮನೀ ಬಾಗಲದಾಗ ಬಿದ್ದುಕೊಂಡಿರೋ ನಾಯಿರಿ ! ಹೀಂಗ ನೀವss ಇಬ್ಬರೂ ಕಚ್ಚ್ಯಾಡಿದರ, ನಾ ಏನು ಮಾಡಬೇಕರಿ ?

ಭೀ : (ಅವನೆಡೆಗೆ ಬಂದು) ದೊಡ್ಡರಾಯರ ತರುವಾಯ ನಾನss ಈ ಮನಿಗೆ ಯಜಮಾನ ಅನ್ನೋದು ನಿನಗ ಗೊತ್ತಿಲ್ಲೇನಲೇ ? ದೊಡ್ಡರಾಯರು ನನ್ನ ಮಗನ್ನss ದತ್ತಕ ತಗೊಂಡಾರ. ಈ ಮಾತು ನಿನಗ ತಿಳಿಧಿರಲಿ. (ಮಲ್ಲನು ತಲೆ ಅಲ್ಲಾಡಿಸುವನು.) ಅಂದಮ್ಯಾಲ ಈಗ ನಾ ಹೇಳದ್ದಾಂಗ ನೀ ಕೇಳಬೇಕು.

ಶಾ : ಅವೆಲ್ಲಾ ಸುಳ್ಳು. ನಾನು ದೊಡ್ಡರಾಯರ ಖಾಸಾss ತಮ್ಮ ತಿಳೀತss ? ಖಾಸss ತಮ್ಮನ ಮಗನ್ನ ದತ್ತಕ ತಗೊಳ್ಳದss, ಹೇಣತೀ ತಮ್ಮನ ಮಗನ್ನ ಯಾರಾದರೂ ದತ್ತಕ ತಗೋತಾರೇನು ? ಈ ಮನಿಗೆ, ಈಗ ನನ್ನ ಮಗಾ, ಅಂದರ ನಾ, ವಾರಸ್ದಾರ! ನೀ ಈ ಮನೀ ಆಳುಮನಸ್ಯಾ. ಅಂದಮ್ಯಾಲ ನಾ ಹೇಳದ್ಹಾಂಗ ಕೇಳೋದು ನಿನ್ನ ಕೆಲಸ..... ಕೆಲಸೇನು ನಿನ್ನ ಕರ್ತವ್ಯ. ತಿಳೀತss (ಮಲ್ಲನು ತಲೆ ಹಾಕುವನು) ಅದಕ್ಕss ಇಲ್ಲೆ ಬಾ! ಅರ್ಜೆಂಟ್ ಒಂದು ಕೆಲಸಾ ಹೇಳೋದದss.

[ಮುಲ್ಲ ಸುಂಕಪ್ಪನ ನಿಲ್ಲುವು, ಅವನ ರಟ್ಟೆ ಹಿಡಿದು ಜಗ್ಗುತ್ತ] ಇತ್ತ ಬಾರಲೇ!

ಭೀ : (ತಾನೂ ಮಲ್ಲನ ಇನ್ನೊಂದು ರಟ್ಟೆ ಹಿಡಿದು ಜಗ್ಗುತ್ತ) ಇತ್ತ ಬಾರಲೇ ಮಗನss ! ನಾ ಹೇಳಿದ ಕೆಲಸಾ ಸೊದಲ ಮಾಡು !

ಮು: ಇವರು ಇತ್ತ ಎಳಿಯೂವಾಗ ನಾ ಹ್ಯಾಂಗ ಬರಬೇಕರಿ ಅತ್ತss ?

ಭೀ : ಶ್ಯಾಮರಾಯಾ ಅವನ ರಟ್ಟೇ ಬಿಡು.

ಶ್ಯಾ : ಬಿಡೂದಿಲ್ಲ. ಯಾಕss ಅಂನೇನು ನಿಮ್ಮಪ್ಪನ ಮನೀ ಆಳೇನು ?

ಭೀ : ನಮ್ಮಪ್ಪನ ಮನೀ ಆಳಲ್ಲ. ನನ್ನ ಮನೀ ಆಳು !

ಶ್ಯಾ : ಇದು ನಿನ್ನ ಮನೀಕನss ? ಇದು ದೊಡ್ಡರಾಯರ ಮನೀ.... ದೊಡ್ಡರಾಯರದು !

ಮು: ಬಾಳ ಕರೇನ ಹೇಳಿದ್ರಿ ನೋಡ್ರಿ.

ಭೀ: (ಸಿಟ್ಟಿನಿಂದ) ಮುಚ್ಚಲೇ ಬಾಯೀ! ಇಸ್ಪರಾಗ ಅವನ ಕಡೆ ಆಡ್ಯೇನು?

ಶಾ: ಆಗದೇನು? ಇದು ನನ್ನ ಮನೀ ಅಂದಮ್ಯಾಲ ಅಂವ ನನ್ನ ಆಳು ಮನಸ್ಯಾ ಆಗತಾನ.

ಭೀ: ಇದು ನಿನ್ನ ಮನೀನs? ಯಾಂವ ಹೇಳ್ಯಾಂವ? ಇದು ದೊಡ್ಡರಾಯರ ಮನೀ!

ಮು: ಹೌದರೀ ಯೆಪ್ಪಾ! ಈಗ ನೀವೂ ಭಾಳ ಕರೀನ ಹೇಳಿದರಿ ನೋಡ್ರಿ!

ಶಾ: (ಸಿಟ್ಟಿನಿಂದ) ಮುಚ್ಚಲೇ ಬಾಯಿ. ಇದು ನನ್ನ ಮನೀ ಅದs. ದೊಡ್ಡರಾಯರದಲ್ಲ.

ಭೀ: ನಿನ್ನದೂ ಅನ್ನಬ್ಯಾಡ. ನಿನ್ನದೂ—ಅಂದೀ ಅಂದರs, ನಿನ್ನ ನಾಲಗೀನs ಸೀಳೇನು?

ಶ್ಯಾ: ನೀ ನಾಲಿಗೀ ಸಿಳೋದ್ರಾಗs ನಿನ್ನ ತಲೀನs ಒಡಿತೇನು ನಾನು! (ಕೈಯಲ್ಲಿಯ ಬಡಿಗೆಯನ್ನು ಎತ್ತುವನು) ಇಂಥಾ ದಾಂಡಗಾಯಿತನಾ ನನ್ನ ಮುಂದ ನಡಿಯೂದಿಲ್ಲ ನಿನ್ನ ಫೌಜದಾರಕೀ ಎಲ್ಲಾ ಆ ಪ್ಯಾದೇಗೋಳ ಮುಂದs! ಈ ಮೂವಲೇದಾರನ ಮುಂದ ನಿನ್ನ ಆಟ ನಡ್ಯೋ ಹಾಂಗಿಲ್ಲ. ಸುಮ್ಮನs ಈ ಮಲ್ಲ್ಯಾನ ಕೈಬಿಡು.

ಭೀ: ಬಿಡೂದಿಲ್ಲ. ನೀ ಏನ ಮಾಡ್ತಾಂವಾ? ನಿನ್ನಂಥಾ ಪಿಂಚಣೀ ಮೂವಲೇದಾರರಿಗೆ ಹೆದರೋ ಫೌಜದಾರ್ ಅಲ್ಲ ನಾ. ಹೆಚ್ಚು ಕಡಿಮಿ ಮಾತಾಡಿದರ ಗುಂಡ ಹಾಕಿಬಿಡ್ತಾಂವ—ನಾ ತಿಳೀತಿ? ಇಲ್ಲೀತನಕಾ ದೊಡ್ಡರಾಯರ ತಮ್ಮಾ ಅಂತ ತಾಳಿದೆ. ಏ ಮಲ್ಲ್ಯಾ ನಾ ಹೇಳತೇನಿ— ನೀ ಒಳಗ ಹೋಗಿ ಆ ಬಂದೂಕು ತಗೊಂಡ್ ಬಾ. (ಅವನನ್ನು ಎಳೆಯುವನು).

[ಕಲ್ಲಂಭಟ್ಟರು ಪ್ರವೇಶಿಸುವರು]

ಕಲ್ಲಂ: ಎಲಾ! ಎಲಾ! ಇದೇನು? ಏನ ನಡಿಸೀರಿ ಇದನ್ನs? ಈ ಮಲ್ಲ್ಯಾನ ರಟ್ಟೇ ಹಿಡಕೊಂಡು ಯಾಕ ನಿಂತೀರಿ? ಒಬ್ಬರು ಬಡಿಗೀ ಎತ್ತೀದೀರಿ. ಒಬ್ಬರು ಬೆತ್ತಾ ಹಿಡದೀರಿ. ಅಂವ ಏನಾದ್ರೂ ಕಳವು ಗಿಳವು ಮಾಡ್ಯಾನೇನು ಮತ್ತs? ಅಲ್ಲಾ ದೊಡ್ಡರಾಯರು ಹೋದರೂ ಅಂತs ಯಾರೋ ಸುದ್ದೀ ಹೇಳಿದರು; ಅದನ್ನ ಕೇಳಿ ಘಾಬರಿ ಬಿಗಿ ನಾ ಓಡಿ ಬಂದೆ. ಅದರ ಇಲ್ಲಿ ನಿನ್ನೋ ಕುರುಕ್ಷೇತ್ರನs ನಡದೂದಲ್ಲಾ, ಏನಿದು ಎಲ್ಲಾ? ರಾಯರs?

[ಇಬ್ಬರೂ ಮಲ್ಲ ಕೈಬಿಟ್ಟು ದೂರ ಸರಿದು ನಿಲ್ಲುವರು]

ಮಲ್ಲ: (ಭಟ್ಟರ ಕಾಲಿಗೆ ಬಿದ್ದು) ಯಪ್ಪಾ, ಒಳ್ಳೇ ಹೊತ್ತಿಗೆ ಬಂದ್ರಿ ನೀವು— ದೇವರು ಬಂದ್ಹಾಂಗs. ಇಲ್ಲದಿದ್ದರs ಇಲ್ಲೆ ಎರಡು ಹೆಣಾ ಬೀಳತಿದ್ದೂರಿ ಇಂವ.

ಕಲ್ಲಂ: (ಚಕಿತನಾಗಿ) ನಿನ್ನೋ ಮಲ್ಲ್ಯಾ ನೀ ಹೇಳೋದಾವರೂ ಏನು? ದೊಡ್ಡರಾಯರ ಮನ್ಯಾಗ ಹೆಣಾಬೀಳತಾವ?

ಮು: (ಅಳುತ್ತ) ಹೌದರೀ ಏಪ್ಪಾ, ಹೌದು!

ಕಲ್ಲಂ: [illegible]

ಭೀ: [illegible] ತಾವ ಇಂದೆ.

ಶ್ಯಾ: [illegible]

(ಮೆಲ್ಲನೆ ಪಿಲ್ಲನೇ ತಲ್ಲಿಂದ [illegible])

ಕ: (ಬಾಯ್ತೆಗೆದಿಂತೆ) [illegible] ಹೆಸಾ?

ಭೀ: [illegible]

ಶ್ಯಾ: ಅಲ್ಲ! [illegible]

ಕಲ್ಲಂ: [illegible] ಅರ್ಥ ಆಗವ್ವೋಲ್ದೆ! [illegible]

ಶ್ಯಾ: [illegible]

ಭೀ: [illegible]

ಕಲ್ಲಂ: [illegible] ಕೂಡ್ರಿ. [illegible] ಸ್ವಲ್ಪ ಹೇಳ್ರಿ! [illegible] ಬೀಳತಾವ ಕಾಯ್ರಿ [illegible] ದೊಡ್ಡರಾಯರ [illegible] ಹಾಂಗಿಲ್ಲ. [illegible] ದೇನೋ ನೋಡೋಣ. [illegible] ಕೂಡ್ರಿ. (ಕುರ್ಚಿ [illegible]) [illegible] ಬರ್ರಿ. ಇಲ್ಲೆ ಕೂತ್ರಿ (ಕುರ್ಚಿಯೊಂದಿಸುವನು) [illegible] ಮಲ್ಲ್ಯಾ, ಏ ಮಲ್ಲ್ಯಾ! [illegible] ಹೋದ್ಲಲಾ ತಾಯಿ ಇಷ್ಟವಾ! [illegible] ಕೊಳ್ಳುವನು)

(ಭಟ್ಟರೂ [illegible] ಕೊಳ್ಳುವರು)

ಶ್ಯಾ: [illegible] ಕಲ್ಲಂಭಟ್ಟರ ಮುಂದೆ ಒಸ್ತಿ ಕೇಳಲಿಕ್ಕೆ

ಭೀ : ಅದೇನಿಲ್ಲ. ನೀನು ಏನು ಹೇಳೋದು ಹೇಳಿಬಿಡು.

ಶ್ಯಾ : (ವಿಚಾರಿಸಿ) ನೋಡು ಹಾಂಗಾದರೆ, ನಾ ಹೇಳುವಾಗ ನೀ ನಡುವ ಬಾಯಿ ಹಾಕಬಾರದು!

ಭೀ : ಇಲ್ಲಪಾ. ನಿಂದು ಮುಗಿಯೋ ವರಿಗೂ ಬಾಯಾಗ ತಂಬಾಕ ಹಕ್ಕೊಂಡು ಕೂತಿರತೀನಿ .... ಆತು ?

(ಚಂಚಿಯನ್ನು ಬಿಚ್ಚುವನು).

ಶ್ಯಾ : [ನಸ್ಯವನ್ನು ತೆಗೆದು ಭಟ್ಟರ ಮುಂದೆ ಹಿಡಿಯುವನು. ಭಟ್ಟರು ಒಂದು ಚುಟುಕಿ ಹಾಕಿಕೊಂಡ ಮೇಲೆ ತಾನೂ ಏರಿಸಿ]. ಈಗ ಎರಡು ತಿಂಗಳ ಹಿಂದ, ರಾಯರು ನಮ್ಮನ್ನ ಕರಿಸಿಕೊಂಡ್ರು. ಆಗ ನೀವು ಊರಾಗ ಇರಲಿಲ್ಲ.

ಕಲ್ಲ : ಹೌದು. ನಾನು ರಾಮೇಶ್ವರಕ್ಕೆ ಹೋಗಿದ್ದೆ. ಈಗ ಎರಡು ತಿಂಗಳು ನಾನು ಊರಲ್ಲಿರಲಿಲ್ಲ!

ಶ್ಯಾ : ' ನಿಂದೂ ಏನ ನೇಮ ಇಲ್ಲಪಾ. ಅದಕ ಬದರೀ ಯಾತ್ರಿ ಮಾಡಿ ಬರತೀನಿ ' ಅಂತ ಹೇಳಿದರು. ನಾ ಆಗ ' ನಿಮಗ ವಯಸ್ಸಾಗೇದ, ಹೋಗಬ್ಯಾಡ್ರಿ' ಅಂತ ಹೇಳಿದೆ. ಆದರೂ ಅವರು ನನ್ನ ಮಾತು ಕೇಳದ್ದೆ ಹೊರಟ್ರು ಬಿಟ್ರು. ಕಾಶಿಗೆ ಮೊದಲ ಹೋಗಿ ಅಲ್ಲಿಂದ ಬದರಿಗೆ ಹೋಗನವರಿದ್ದರು. ಅದರ ಅವರು ಕಾಶೀ ಮುಟ್ಟದ ಎರಡೇ ದಿವಸಕ್ಕ ' ಗಂಗಾನದೀ ಒಳಗ ನಾವು ಮುಣಿಗಿ ದೊಡ್ಡ ರಾಯರು ತೀರಿಕೊಂಡರು ' ಅಂತ ತಾರು ಬಂತು. (ಗದ್ಗದಿತನಾಗಿ) ನಾವೆಲ್ಲಾ ಒಮ್ಮೆಲೇ ಪರದೇಶ ಆದೆವು. ನಮಗೆಲ್ಲಾ ಎಷ್ಟು ದುಃಖಾತು ಅನ್ನೋದನ್ನ ಬಾಯಿಲೇ .... (ಕಣ್ಣೀರು ಸುರಿಸುವನು. ಕ್ಷಣ ಹೊತ್ತು ಮೌನ. ಆ ಮೇಲೆ ಕಣ್ಣೀರು ಒರೆಸಿಕೊಂಡು). ಹೋದವರು ಪುಣ್ಯಾವಂತರಾಗಿ ಹೋಗತಾರ. ಇದ್ದವರಿಗೆ ಸಂಸಾರ ನಡಸೋದು ಬಿಟ್ಟದ್ದಲ್ಲಲಾ! ಅದಕ್ಕ ಈಶ್ವರನ ಇಚ್ಛಾಕ ಯಾರೇನು ಮಾಡೋದಂದ ಅಂತ ಸುಸಸ್ಸು ಕಲ್ಲುಮಾಡಿಕೊಂಡು, ನಮ್ಮ ಸದಾಶಿವನ ಕಡಿಂದ ದಿನಕರ್ಮ ಮಾಡಿಸಿದೆ.

ಕಲ್ಲಂ : ಸದಾಶಿವನ ಕಡಿಂದ ಯಾಕ ದಿನ ಕರ್ಮಾ ಮಾಡಿಸಿದಿರಿ ?

ಶ್ಯಾ : ಅಂದ್ಹಾಂಗ ನಿನಗ ಹೇಳಲಿಕ್ಕೆ ಮರೆತ ಬಿಟ್ಟೆನೋಡ್ರಿ. ದೊಡ್ಡರಾಯರು ಬದರಿಗೆ ಹೋಗೋಕಿಂತಾ ಮೊದಲ, ನನ್ನ ಚಿರಂಜೀವನಾದ ಸದಾಶಿವನ್ನ ದತ್ತಕಮಾಡಿಕೊಂಡು, ತಮ್ಮ ಮನೀ ದೀಪಾ ಆರದ್ಹಾಂಗ ಮಾಡಿ ಹೋಗ್ಯಾರಿ.

ಕಲ್ಲ : ಹೀಂಗs ? ಭಾಳ ಛಲೋ ಆತು ಬಿಡ್ರಿ. ಮುಂದ?

ಭೀ : (ತಂಬಾಕಿನ ಬಾಯಿಂದ) ಇಳ್ಯಾ. ಇಳ್ಯಾ. (ಎನ್ನುತ್ತ ಕಿಡಕಿಯ ಬದಿಗೆ ಎದ್ದು ಹೋಗಿ ತಂಬಾಕು ಉಗುಳಿ ಬರುತ್ತ) ಅದೆಲ್ಲಾ ಸುಳ್ಳದ ಭಟ್ಟರs, ಸುಳ್ಳದ.

ಶ್ಯಾ : ನೀ ನಡುವ ಬಾಯಿಹಾಕಬ್ಯಾಡ. ನೀ ಸುಮ್ಮನ ಕೂಡತೇಸಂದೆಲ್ಲೆನs ನಾ ಹೇಳಿದೆ.

ಕಲ್ಲ : ಭೀಮರಾಯರ, ಸ್ವಲ್ಪ ತಡೀರಿ! ಅವರದೆಲ್ಲಾ ಸೊದಲ ಒಮ್ಮೆ ಮುಗೀಲಿ; ಆ ಮ್ಯಾಲ ನೀವೂ ಹೇಳುವಂತರಿ.

ಭೀ : ಆಗಲಿ. ಆಗಲಿ. (ಎನ್ನುತ್ತ ಮತ್ತೆ ಚಂಚೀ ಬಿಚ್ಚುವನು.

ಕಂ : ಹಂ ! ಮುಂದೇನಾತು?

ಶ್ಯಾ : ಈಗ ನೀವು ನೋಡಿದಿರೆಲ್ಲಾ ಈ ಭೀಮರಾಯನ ದಾಂಡಗಾಯಿತನಾ? ಅದs ಆತು! ನಾನು ಮುಂದಿನ್ನೆಲ್ಲಾ ಊರಿಗೆ ಕಳಸಿ,ರಾಯರ ಆಸ್ತೀ ಕಬಜಾ ತಗೊಂಡು ಒಂದು ವ್ಯವಸ್ಥಾ ಮಾಡಬೇಕು—ಅಂತs ನಿಂತೆ. ಆಗ ಇಂವಾ ಅಡ್ಡ ಬಂದು, ನನ್ನ ಹೊರಗ ಹಾಕಲಿಕ್ಕೆ ನಿಂತಾನ. ನೀವಾದರೂ ಇಂವಗ ಸ್ವಲ್ಪ ಬುದ್ಧೀ ಹೇಳರಿ.

[ಭೀಮರಾಯ ಮತ್ತೆ ಎದ್ದು ತಂಬಾಕು ಉಗಳಿ ಬಂದು].

ಭೀ : ಮುಗೀತಿಲ್ಲಪಾ ನಿನ್ನ ಪುರಾಣಾ ?

ಶಾ : ಮುಗೀತು ಬಾ.

ಭೀ : ಇನ್ನs ನಾ ಆಪ್ಪ ಹೇಳೋತನಕಾ ಮೂಗಿನಾಗ ನಸ್ಯಾ ತುಂಬಿಕೊಂಡು ಸುಮ್ಮನs ಕೂಡು.

ಶ್ಯಾ : ಆಗಲಿ, ನಿಂದೂ ಹೂರಣ ಒಮ್ಮೆ ಹೊರಬೀಳಲಿ!

ಭೀ : ಕಲ್ಲಂಭಟ್ಟರs, ನೀವು ಹ್ಯಾಂಗಾದರೂ ದೊಡ್ಡ ರಾಯರ ಮನೀ ಪುರೋಹಿತರು. ಅವರ ಮನಿತನದ ಹಿತಾಹಿತಗಳನ್ನs ನೋಡವರು. ಅಂದಮ್ಯಾಲ ನಾ ಹೇಳೋದಷ್ಟು ಕೇಳ್ರಿ. ಇದರಾಗ ಖರೇ ಯಾವ್ದು ಬೊಟ್ಟಯಾವುದು ಅನ್ನೋದನ್ನ ನೀವs ನಿರ್ಣಯ ಮಾಡಿ ಹೇಳರಿ ।

ಶ್ಯಾ : ಇದೆಲ್ಲಾ ಬರೀ ರಗಳೇ ಆತಲಾ—ಮುಖ್ಯ ವಿಷಯ ಸೊದಲ ಹೇಳು.

ಭೀ : ಏ ಶ್ಯಾಮರಾಯಾ, ನೀ ನಡುವ ಬಾಯಿ ಹಾಕಲಿಕ್ಕೆ ಬರಬ್ಯಾಡ.

ಕಲ್ಲಂ : ಶ್ಯಾಮರಾಯರs, ನೀವು ಸ್ವಲ್ಪ ತಾಳರಿ. ನೀವು ಈಗ ಹೇಳಿದಿರಿ; ಇನ್ನ ಇವರು ಹೇಳಲಿಕ್ಕೆ ಅವಕಾಶ ಕೊಡ್ರಿ.

ಶ್ಯಾ : ಆಗಲಿ, ಆಗಲಿ!

ಭೀ : ಭಟ್ಟರs, ನೀವು ಊರಿಗೆ ಹೋದ ಮ್ಯಾಲ, ದೊಡ್ಡ ರಾಯರು ಬದರೀ ಯಾತ್ರೆಗೆ ಒಮ್ಮೆಲೇ ಹೊರಟುನಿಂತರು. ಆಗ ನನ್ನ ಬದಿಗೆ ಬ್ಯಾರೇ ಕರದು, ''ನೋಡು ಭೀಮರಾಯಾ, ನಾ ಅಂತೂ ಈಗ ಬದರೀಯಾತ್ರೆಗೆ ಹೊಂಟೇನಿ. ಬದರಿಗೆ ಹೋಗಿ ಸುರಕ್ಷಿತ ಮರಳಿ ಬಂದೇನು ಅನ್ನೋ ಭರೋಸಿಲ್ಲ ನನಗ. ಮತ್ತ ಆಕೀ ಮನಸ್ಸಿನಾಗ ನಿನ್ನ ಮಗನ್ನ ದತ್ತಕ ತಗೋಬೇಕು ಅಂತ ಇತ್ತು. ಹಾಂಗ ನನ್ನ ಕಡಿಂದ ವಚನ ತಗೊಂಡು ಆಕೆ ಕಣ್ಣು ಮುಚ್ಯಾಳ. ಅದಕ್ಕ ನಿನ್ನ ಚಿರಂಜೀವನಾದ ಶಂಕರನನ್ನ ನಾ ದತ್ತಕ ಮಾಡಿಕೊಂಡು ಹೋಗತೇನಿ'' ಅಂತ ಹೇಳಿ, ನನ್ನ ಮಗನ್ನ ದತ್ತಕ ಮಾಡಿಕೊಂಡು ಹೋದರು. ಮತ್ತ ಅವರು ಅವಸರದೊಳಗ ಇದ್ದರೂ ಅಂತ, ಅವಸರಲೇ ಧಾರ್ಮಿಕವಿಧಿ ಅಷ್ಟs ಮುಗಿಸು. ಫೋಟೋ ವಗೈರೆ ಲೌಕಿಕ ವಿಧಿ ಮಾಡಲಿಲ್ಲ. ಇಲ್ಲದಿದ್ದರ ನಾ ಫೋಟೋ ತಂದು ತೋರಸ್ತಿದ್ದೆ.

ಕಲ್ಲಂ : ಫೋಟೋ ಏನು ಮಹತ್ವವಿಲ್ಲ. ಮುಂದೇನಾತ್ಯ ಹೇಳ್ರಿ.

ಭೀ: ದಿನಕರ್ಮೂ ಎಲ್ಲಾ ಮಾಡಿ, ಬಂದ ಮಂದಿನ್ನೆಲ್ಲಾ ಊರಿಗೆ ಕಳಿಸಿ, ದೊಡ್ಡರಾಯರ ಈ ದೊಡ್ಡ ಆಸ್ತಿ ಒಂದು ವ್ಯವಸ್ಥೆಗೆ ತರಬೇಕು ಅಂದ್ರೆ, ಈ ಶ್ಯಾಮರಾಯಾ ನನ್ನ ಹೊರಗ ಹಾಕಲಿಕ್ಕೆ ಈ ನಾಟಕಾ ಹೂಡ್ಯಾನ. ಅಂದರ, ನಾ ಹೊರಗ ಹೋಗಿ ಇವನ ಮ್ಯಾಲ ದಾವೆಮಾಡಿ, ಕೋರ್ಟು ಕಚೇರಿ ಅಂತ ಹೊಲಾಮನಿ ಮಾರಿ ಕೊಂಡು ಹುಚ್ಚ್ಯಾಗಿ ಹೋಗಬೇಕು. ತಾ ಮಾತ್ರ ರಾಯರ ಆಸ್ತಿ ಕಬಜಾ ತಗೊಂಡು, ಎಲ್ಲಾ ತನ್ನ ಮನೀ ತುಂಬಿಕೋಬೇಕು—ಅಂತ ಲೆಕ್ಕಾ ಹಾಕ್ಯಾನ. ಅಲ್ಲವನ ಭಟ್ಟರs, ಈಗ ಮನ್ಯಾಗ ಇದ್ದದ್ದೆಲ್ಲಾ ಬಳಕೊಂಡು ತಮ್ಮೂರಿಗೆ ಕಳಿಸ್ಯಾನೀಗ!

ಶ್ಯಾ : (ಉದ್ರಿಕ್ತನಾಗಿ) ಸುಳ್ಳು ಭಟ್ಟರ! ಇದೆಲ್ಲಾ ಸುಳ್ಳದs! ಇಂಥಾ ಸುಳ್ಳು ಕಥೀ ಹೇಳಿದರ ಜನಾ ನುಳ್ಳಾಗತಾರೇನು? (ಎದ್ದು ನಿಲ್ಲುವನು.)

ಭೀ : ಇಲ್ಲಾ, ನಿನ್ನ ಕಟ್ಟು ಕಥಿ ಮಾತ್ರ ಖರೇ ಅಂತ ನಂಬ-ತಾರಲ್ಲs ಜನರು? (ಎದ್ದು ನಿಲ್ಲುವನು.)

ಕಲ್ಲಂ : (ತಾನೂ ಎದ್ದು) ಶ್ಯಾಮರಾಯಾ, ಭೀಮರಾಯಾ, ಇಬ್ಬರೂ ಶಾಂತ ಆಗಿರಿ. ಮಾಮುಲೇದಾರ ಆಗಿ, ಫೌಜದಾರ ಆಗಿ, ಎಲ್ಲಾರಕಡಿಂದ ಹೌದು ಅನಿಸಿಗೊಂಡು, ಪಿಂಚಣಿ ಪಡೆದ ನೀವು, ಈಗ ಹಳ್ಳೀ ಹುಂಬರ್ತಾಂಗ ಬಡದಾಡೋದು ನನಗೇನು ಪರಿಕಾಣೂ-ದಿಲ್ಲ. ನೀವು ಹೇಳಿದ್ದನ್ನ ಕೇಳಿದರ, ಇದರೊಳಗ ಯಾರು ಖರೇ ದತ್ತಕ ಕೊಟ್ಟವರು ಅನ್ನೋದನ್ನ ನಿಂತಕಾಲಮ್ಯಾಲ ಹೇಳಲಿಕ್ಕೆ ಬರೂದಿಲ್ಲ. (ವಿಚಾರಿಸಿ) ಅದಕ್ಕs ನಾ ಒಂದು ಹಾದೀ ಹೇಳತೇನಿ.... ಹಾಂಗ ಮಾಡಿದರ, ಈಗ ಎಲ್ಲಾರಿಗೂ ಕ್ಷೇಮ ಆಗತೈದ.

ಶ್ಯಾ : ಅದು ನಮಗನುಕೂಲ ಇದ್ದರ ಏನೂ ಅಡ್ಡಿ ಇಲ್ಲ.

ಭೀ: ಹೌದು, ನನಗೂ ಅನುಕೂಲ ಇದ್ದರ, ನಾ ಏನೂ ಬ್ಯಾಡ ಅನ್ನೂದಿಲ್ಲ.

ಕಲ್ಲಂ : ಈಗ ರಾಯರ ಈ ಮನಿಗೆ ಇಬ್ಬರೂ ನಿಮ್ಮ ನಿಮ್ಮ ಕೇಲಿ ಹಾಕೇರಿ. ನಿನ್ನ ಕೇಲೀಕ್ಕೆ ನಿಮ್ಮ ಕಡೆಗೇ ಇರಲಿ. ನಾಳ ಕೋರ್ಟನಾಳಗs ಯಾರಂತs ನಿರ್ಣಯs ಆಗತೈದೋ ಅವರು ಕಬಜಾ ತಗೊಳ್ಳ.

ಶ್ಯಾ : ಕೈಗೆ ಬಂದ ಆಸ್ತೀ ಹೀಂಗ ಸುಕಟ ಬಿಟ್ಟುಬಿಡಲಿಕ್ಕೆ ನಾ ಸುಮ್ಮನಸ ಮೂವತ್ತು ವರುಸ ಮಾಮುಲೇದಾರಿಕೀ ಮಾಡಿಲ್ಲ!

ಭೀ : ಮತ್ತs ನಾ ಫೌಜದಾರಿಕೀ ಸುಕಟ ಮಾಡಿನೀನಂತ ತಿಳಕೊಂಡೇನು? ಫೌಜದಾರ ಇದ್ದಾಗ ಎಂಥೆಂಥಾ ದಕ್ಕದ ಆಸ್ತಿ ಕಬಜಾ ಕೊಡಿಸಿ ದಕ್ಕಿಸೀದೇನು. ಈಗ ಅನಾಯಾಸ ಕೈಗೆಬಂದ ಆಸ್ತೀ ಕಬಜಾ ಬಡಲ್ಯಾ? ಭಟ್ಟರ, ಈ ಮನಿಗೆ ಕೇಲಿ ಹಾಕೋ ಮಾತ ಬಿಟ್ಟು ಮತ್ತೇನಾದರೂ ಇವ್ವರ ಹೇಳ್ರಿ!

ಕಲ್ಲಂ: (ಉಸಿರು ಬಿಟ್ಟು) ರಾಯರ, ನಿಮ್ಮುಂದ ನಾ ಹೇಳೋ-ದೆಲ್ಲಾ ಮುಗೀತು. ಇನ್ನ ಆ ದೇವರಿಗೇ ಹೇಳಬೇಕಾಗೇನ. (ಉಸಿರ್ಗರೆದು) ಆಗಲಿ ದೊಡ್ಡರಾಯರ ಪುಣ್ಯಾನs ಮುಗದ್ಹಾಂಗೆ ಕಾಣಸ್ತದ ಅಂದಮ್ಯಾಲ, ನಾ ಆರೇ ಏನು ಮಾಡಾಂವ? ದೇವ ಇಚ್ಛಾ ಇದ್ಹಾಂಗ ಆಗಲೇ. (ಒನ್ಮೆಲೇ ಗಂಭೀರನಾಗಿ) ಆದರ ಒಂದು ಮಾತು: ಇಬ್ಬರೂ ಈ ಮನ್ಯಾಗ ಕೂಡಿ ಇರಲಿಕ್ಕೆ ನನ್ನದೇನೂ ಅಡ್ಡಿ ಇಲ್ಲ. ದೊಡ್ಡರಾಯರ ಈ ದೊಡ್ಡ ಮನ್ಯಾಗ ರಕ್ತಪಾತ ಆಗೋ ಹಾಂಗಿಲ್ಲ; ಬಡಿದಾಟಾ ಹೊಡದಾಟಾ ನಡೆಯೋ ಹಾಂಗಿಲ್ಲ! ಹಾಂಗೇ ನಾದರೂ ನಿಮ್ಮ ವಿಚಾರಿವ್ವರ ಹೇಳಿಬಿಡ್ರಿ. ನಾ ಇಲ್ಲೇ ಕೂತೇ ಬಿಡತೇನಿ. ನಾನೂ ದೊಡ್ಡರಾಯರ ಅನ್ನಾ ಉಂಡೀದೇನು, ಅಲ್ಲದs, ನಾ ಅವರ ಮನೀ ಪುರೋಹಿತನೂ ಆಗಬೇಕು. ಅವರ ಮನಿತನದ ಹಿತಾ ಮಾಡೋ ಕೆಲಸ ನನ್ನದು. ಅದಕ್ಕs ನೀವಿಬ್ಬರೂ ಒಂದು ನಿರ್ಣಯಕ್ಕ ಬರೋತನಕಾ, ನಾ ಇಲ್ಲೇ ಕೂಡತೇನಿ!

[ಎಂದು ದೊಡ್ಡರಾಯರ ಕುರ್ಚಿಯ ಮೇಲೆ ಕುಳಿತುಕೊಳ್ಳುವನು.]

[ಮಲ್ಲನು ಹೊರಗಿನಿಂದ ಬೇಲಿಫನನ್ನು ಕರದುಕೊಂಡು ಒಳಗೆ ಬರುವನು].

ಮ : ಯೆಸ್ಪಾ, ಇಂವ ಏನೋ ಬೇಲೀಫ ಅಂತರಿ! ಕೋರ್ಟ-ನಿಂದ ಬಂದಾನಂತರೀ! ಏನೋ ನಿಮ್ಮ ಮ್ಯಾಲ ನೋಟೀಸ್ ಜಾರೀಮಾಡ್ಲಾಕ ಬಂದಾನಂತರೀ!

ಫಕೀರಪ್ಪ : ನಿಮ್ಮ ಮ್ಯಾಲ ಅಲ್ಲರೀ. ಇವರಾಗ ದೊಡ್ಡ-ರಾಯರ ವಾರಸದಾರರು ಯಾರು ಅದಾರು ಅವರ ಮ್ಯಾಲ!

ಶ್ಯಾ : ಹೀಂಗಽ. ನಾ .... ಅಂದರ ನನ್ನ ಮಗಾ ದೊಡ್ಡ ರಾಯರ ವಾರಸದಾರ! ಆದರ ಅಂವ ಅಜ್ಞಾನ ಇರುವದರಿಂದ ಅವನ ಸಂರಕ್ಷಕ ಅಂತ ನಾನs ಸಹಿ ಮಾಡತೀನಿ.

ಭೀ : ಏ ಬೇಲಿಫ, ಕೇಳೋ ಇಲ್ಲಿ. ದೊಡ್ಡರಾಯರಿಗೆ ವಾರಸ-ದಾರರು ಅವರೂ ಅಲ್ಲಾ ಅವರ ಮಗನೂ ಅಲ್ಲಾ! ನಾ ... ಅಂದರ.... ನನ್ನ ಮಗಾ ವಾರಸದಾರನಸಾ! ಅವನ ಅಜ್ಞಾನ ಸಂರಕ್ಷಣದಾರ-ನಾದ ನಾನು ಅದಕ್ಕ ಸಹೀ ಮಾಡತೀನಿ! ಅದನ್ನ ಇಲ್ಲಿತಾ.

ಶ್ಯಾ : ಅದನ್ನ ಇಲ್ಲೆ ತಾರೋ.

ಭೀ : ತಾರೋ ಅದನ್ನ ಇಲ್ಲೆ!

(ಇಬ್ಬರೂ ಬೇಲೀಫನ ಕೈಯ್ಯಾಗಿನ ಕಾಗದ ಕಸಗೊಳ್ಳಲು ಹೋಗುವರು).

ಬೇಲೀಫ್ : (ದೂರ ಸರಿದು) ರಾಯರs ಸ್ವಲ್ಪ ತಾಳೀರಿ. ಇಬ್ಬರೂ ಬೇಕಾವರ ಸಹಿ ಮಾಡುವಂತೀರಿ. ಯಾಕಂದರ 'ಒಬ್ಬರ ಕೆಂತಾ ಇಬ್ಬರು ಲೇಸು' ಅಂತ ಹಿರ್ಯಾರು ಹೇಳತಿರತಾರು. ಒಬ್ಬರಾ-ದರೂ ಸಹೀ ಮಾಡ್ಲಾಕ ಸಿಗತಾರೋ ಇಲ್ಲೋ ಅಂತ ಅನುಮಾನ ಮಾಡಿಕೊಂತ ನಾ ಬಂದಿದ್ನಿರೀ. ಈಗ ಇಬ್ಬರೂ ಕಬೂಲ್ ಅನ ಮ್ಯಾಲ ಪಾಡs ಆತ್ಯ ಬಿಡ್ರಿ!

ಶ್ಯಾ : ಅಲ್ಲೋ ಒಂದs ಆಸ್ತಿಗೆ ಇಬ್ಬರೂ ವಾರಸದಾರ್ರು ಹ್ಯಾಂಗ ಆಗತಾರ?

ಭೀ : ಆಗದೇನು? ಇಬ್ಬರಲ್ಲ. ನಾಲ್ಕು ಮಂದಿನೂ ವಾರಸ-ದಾರ್ರು ಆಗತಾರ!

ಕಲ್ಲಂ : ಅಲ್ಲೋ, ಆ ನೋಟೀಸು, ಅಲ್ಲ... ಸಮನಸು. ಯಾರ ಕಳಸ್ಯಾರ ? ಯಾಕ ಕಳಿಸ್ಯಾರ ಅನ್ನೋದನ್ನ ಮೊದಲ ಕೇಳರಿ ೪ ಸ್ಯಾಲ ಬೇಕಾದರೆ, ಇಬ್ಬರೂ ಸಹಿ ಮಾಡಿರಿ.

ಶ್ಯಾ : ಬರಾಬರಿ, ಬೇಲಿಫ್, ಅದರ ಹಕೀಕತ್ತು ಏನಗ ಹೇಳ್ಯಾದರೂ ಹೇಳಪ್ಪಾ !

ಬೇ : ಬೇಲಿಫರಿಗೆಲ್ಲಾ ಹಕೀಕತ್ತು ಗೊತ್ತಿರಬೇಕಂತ ನೇಮೇನೂ ಇಲ್ಲರಿ. ಆದ್ರ ನನಗೂ ದೊಡ್ಡರಾಯರು ಉಪಕಾರ ನೂಡಿದ್ರು. ಅದಕ್ಕ ಇದರ ಹಕೀಕತ್ತರೀ ಏನ್ಕೆತಿ ಕೇಳಬೇಕಂತ ಕೇಳಿದ್ನಿ. ಅದಕ ಸ್ವಲ್ಪು ಇದರ ಮಾಹಿತೀ ನಮ್ಮ ನಾರ್ಯುರಿಂದ ತಿಳದ್ಕೆರಿ.

ಭೀ : ಅದನ್ನ ಲಗೂನ ಹೇಳು.

ಬೇ : ಇವರ ಮಾಹಿತೀ ಇಷ್ಟು ಇತೆಂತ ಅನರು ಹೇಳಿದ್ರು. ದೊಡ್ಡರಾಯರದೂ ಹಾಳೂರ ದೇಶಪಾಂಡೆಯನವರದೂ ಋಣಾನುಬಂಧ ಭಾಳ ಇತ್ತಂತರ! ಹಾಳೂರ ದೇಶಪಾಂಡೆಯನರಿಗೆ ಒಂದು ಸಿನೇಮಾ ಕಂಪನೀ ತಗೀಬೇಕಂತ ತಲ್ಯಾಗಬಂತಂತರೀ. ಸಿನೇಮಾ ಕಂಪನಿಗೆ ಭಾಳ ರೊಕ್ಕ ಬೇಕಲ್ಲರೀ ಅದಕ್ಕ ಅವರು ತಮ್ಮ ಅಸ್ತಿ ಬ್ಯಾಂಕಿನಾಗ ಒತ್ತಿ ಹಾಕಿ ಸಾಲಾ ತಗದ್ರೀ! ಆಗ ದೊಡ್ಡರಾಯರು ಅವರಿಗೆ ಜಾಮೀನ ಆಗಿದ್ರಂತರೀ! ಮುಂದ ಸಿನೇಮಾ ಕಂಪನೀ ವ್ಯವಹಾರ ನೈವ್ಯಾಲ ಬಂದು, ದೇಶಪಾಂಡೇರು ದಿವಾಳಿ ತಗದ್ರಂತರೀ, ಅವರ ಸಾಲ ಅವರ ಅಸ್ತಿಮ್ಯಾಲ ನಸೂಲ್ ಆಗ್ಲಿಲ್ಲಂತ ತಿಳದು, ದೊಡ್ಡರಾಯರ ಕಡಿಂದ ಅದನ್ನ ವಸೂಲ ಮಾಡಬೇಕಂತ, ಬ್ಯಾಂಕಿನವರು ಈಗ ದಾವೇ ಮಾಡಿದಾರಂತ! ಅದರ ದೊಡ್ಡರಾಯರು ತೀರಿಕೊಂಡದ್ದರಿಂದ, ಅವರ ವಾರಸದಾರರಿಗೆ ಸಮನಸ್ ತೆಗೀಬೇಕು. ಅವರು ಕೋರ್ಟಗೆ ಬಂದು ಹಾಜರ್ ಆಗಬೇಕು ಅಂತ ಹುಕುಂ ಆಗೇತಿರಿ, ಆ ಸಮನಸ್ ಜಾರೀ ಮಾಡ್ಲಾಕೆ ನಾ ಬಂದೇನರಿ.

ಶ್ಯಾ : ಹೌದು, ಹಾಳೂರ ದೇಶಪಾಂಡೆಯನರ ಸಿಲ್ಮ್ ಕಂಪನಿ ದಿವಾಳೀ ತಗದದ್ದು ನಮಗೂ ಗೊತ್ತದ.

ಭೀ : ಅದರ, ದೊಡ್ಡರಾಯರು ಅವರಿಗೆ ಜಾಮೀನಾದದ್ದನ್ನ ನಮ್ಮ ಮುಂದ ಹೇಳಿದ್ದಿಲ್ಲ ನೋಡ್ರಿ!

ಕಲ್ಲಂ : ಇಂಥಾ ವಿಷಯ ಹೇಳೋಹಾಂಗ ಇರೂದಿಲ್ಲರೀ !

ಬೇ : ಹೌದರೀ! ಶಿಟ್ಟೇ ಲಿಕ್ಕ ಲಂಚ ಸತ್ತ ಸ್ಯಾಲ್ಸ್ ಕಳಕತ್ತಾನಂತರೀ.

ಮು : ಏ ಬೇಲಿನಾ, ನಮ್ಮ ದೊಡ್ಡರಾಯರ ಸಂಬಂಧ ಹಾಂಗೆಲ್ಲಾ ನೂಶಾಡಬ್ಯಾಡ ನೋಡ ಮತ್ತ! ಇನ್ನೊಮ್ಮೆ ಹೀಂಗ ನೂತಾಡಿದರ ಪಾಡಾಗಾಕೆಲ್ಲ!

ಶ್ಯಾ : ಅದಿರಲಿ, ಬಿಡೋ! ನಮ್ಮ ದೊಡ್ಡರಾಯರು ಎಷ್ಟು ರೂಪಾಯಿಗೆ ಜಾಮೀನು ಆಗಿದ್ದರಂತ ?

ಬೇ : (ಕಾಗದ ತಿರುವಿ) ಎರಡು ಲಕ್ಷ ರೂಪಾಯಿಗೆ ಜಾಮೀನಾಗಿದ್ದರಂತರೀ!

ಭೀ : ಏನು.... ಏನಂದಿ ? ಎರಡ ಲಕ್ಷಂ ? ದೊಡ್ಡರಾಯರ ಮನೀ ಮುಣಗೋ ಹೊತ್ತ ಬಂತಲ್ಲಾ!

ಶ್ಯಾ : ಹೌದು. ದೊಡ್ಡರಾಯರ ಆಸ್ತೀ ಎಲ್ಲಾ ಮಾರಿದರೂ ಒಂದು ಲಕ್ಷ ರೂಪಾಯಿ ಆಗಬೇಕಾದ್ರ ಸುಸ್ತಾತು. ಎರಡು ಲಕ್ಷ ಯಾರು ತುಂಬವರು ?

ಭೀ : ನೀವು ತುಂಬಬೇಕು, ನೀವು! ನೀವು ದೊಡ್ಡರಾಯರಿಗೆ ನಿಮ್ಮ ಮಗನ್ನ ದತ್ತಕ ಕೊಟ್ಟೀರಿ. ಅದಕ್ಕ ನೀವು ತುಂಬಬೇಕು. ಏ ಬೇಲಿಫ, ಆ ಸಮನಸ್ ಅವರಿಗೆ ಜಾರೀ ಮಾಡಿ ಹೋಗು !

ಶ್ಯಾ : ನಾ ದೊಡ್ಡರಾಯರಿಗೆ ನನ್ನ ಮಗನ್ನ ದತ್ತಕ ಕೊಟ್ಟೇ ಇಲ್ಲ. ಈ ಭೀಮರಾಯರು ದತ್ತಕ ಕೊಟ್ಟಾರ. ಅವರಿಗೇ ಆ ಸಮನ್ಸು ಜಾರೀ ಮಾಡು ಏನಪಾ !

ಭೀ : ನಾ ನನ್ನ ಮಗನ್ನ....ದೊಡ್ಡರಾಯರಿಗೆ ದತ್ತಕ ಕೊಟ್ಟೇ ಇಲ್ಲ. ಮತ್ತ ನಾ ಅವರ ವಾರಸದಾರನೂ ಆಗೂದಿಲ್ಲ ! ಈ ಶ್ಯಾಮರಾಯರು ಮಾತ್ರ ತಮ್ಮ ಮಗನ್ನ ದತ್ತಕ ಕೊಡದಿದ್ದರೂ ದೊಡ್ಡರಾಯರಿಗೆ ಅವರು ವಾರಸದಾರ ಆಗತಾರ. ಯಾಕಂದರ ದೊಡ್ಡರಾಯರ ತಮ್ಮ ಅವರು.

ಶ್ಯಾ : (ಹಲ್ಲು ಕಡಿಯುತ್ತ) ಭೀಮರಾಯಾ, ನಿನ್ನ ಹಂಚಿಕೆ ಎಲ್ಲಾ ನನಗೂ ತಿಳೀತು ಅಂದೆ. ಇದರ ಸೇಡು ಒಮ್ಮಿಲ್ಲಾ ಒಮ್ಮೆ ತೀರಿಸಿಕೋತೇನು. ಇದರ ನಿನ್ನ ಹಂಚಿಕೆ ಮಾತ್ರ ಸಫಲ ಆಗೂದಿಲ್ಲಾ ಅಂದೆ.

ಭೀ : ಅದು ಹ್ಯಾಂಗ ಆಗೂದಿಲ್ಲ ? ನೀ ದೊಡ್ಡರಾಯರ ತಮ್ಮ ಅಲ್ಲೇನು ?

ಶ್ಯಾ : ತಮ್ಮ ಹೌದೋ! ಆದರ ದೊಡ್ಡರಾಯನೂ ಈ ಮನಿಗೆ ದತ್ತಕ ಬಂದಿದ್ದರು. ಇದು ನಮ್ಮ ತಾಯೀ ತವರುಮನಿ. ತಿಳೀತೇ? ಆದಕ್ಕ ನಾ ಏನೂ ಅವರ ವಾರಸದಾರ ಆಗೂದಿಲ್ಲ. ಬೇಕಾದರ ಕಲ್ಲಂಭಟ್ಟರನ್ನ ಕೇಳು.

ಭೀ : ಹೌದೇನರೀ ಭಟ್ಟರ ?

ಕ : ಇರಬಹುದು. ನನಗ, ನೀವ ಏನು ನಡಿಸೀರಿ ಅನ್ನೋದು ತಿಳೀನೊಲ್ಲದು !

ಬೇ : ಅಲ್ಲರೀ ರಾಯರ. ಇದರಾಗ ನಾ ಯಾರಿಗೆ ಸಮನಸ್ ಜಾರೀ ಮಾಡಬೇಕನ್ನೋದನ್ನ ಗಡಾನ ಹೇಳರಿ.

ಶಾ : ನಾ ವಾರಸ್‌ದಾರ ಅಲ್ಲ ?

ಭೀ : ನಾನೂ ವಾರಸ್‌ದಾರ ಅಲ್ಲ ?

ಬೇ : ಇದೇನರೀ ಮತ್ತ? ಆಗಳೇ ನನ್ನ ಕೈಯಾಗಿನ ಕಾಗದಾ ಕಸಗೊಂಡು ಸೈ ಮಾಡ್ಲಾಕ ಬಂದಿದ್ದಿರಿ. ಈಗ ' ನಾ ವಾರಸದಾರ ಅಲ್ಲಾ.... ನಾ ವಾರಸದಾರ ಅಲ್ಲಾ ' ಅನ್ಲಾಕ ಹತ್ತೀದೀರಿ. ಸರಕಾರಿ ಸಮನಸ್ಯಾನಗೂಡಾ ಹುಡುಗಾಟಿಕೀ ನಡಿಸೀರಿರಲ್ಲಾ ನೀವು?

(ಮುಲ್ಲ ಹೊರಗಿನಿಂದ ಓಡುತ್ತ ಬಂದು).

ಮ : ಯೆಸ್ಪಾ ಭಟ್ಟರ ಅಲ್ಲ, ಯಾಕ ಬಂಲ್ಲಿಕ ಹತ್ತಿದಾರು ನೋಡರೀ ಯೆಸ್ಪಾ! ದೊಡ್ಡರಾಯರು ಅಲ್ಲಽ ಅವರು ?

ಕಲ್ಲಂ : (ಕುರ್ಚಿಯಿಂದ ಪುಟವೆದ್ದು) ದೊಡ್ಡರಾಯರು ? ಎಲ್ಲ್ಯದಾರೋ ?

ಮ : ಅಲ್ಲೇ ನೋಡ್ರೀಯಪ್ಪಾ ! ಅವರು ದೊಡ್ಡರಾಯರಽ ಅಲ್ಲಽ ? ಹತ್ತವರು ಹ್ಯಾಂಗ ಎದ್ದು ಬಂದರ್ರೀ ! ದೆವ್ವಾಗಿ ಬಂದರೇನರೀ ಮತ್ತಽ ? ಅಯ್ಯೋ ದೆವ್ವರೀ ಯೆಸ್ಪಾ. ದೆವ್ವಽ (ಚೀರುತ್ತ ಬೀಳ್ತೊತಗುವನು. ಕಲ್ಲಂಭಟ್ಟರು ಅವನನ್ನು ಗಟ್ಟಿಯಾಗಿ ಹಿಡಿಯುವರು).

ಶ್ಯಾ : ಅಯ್ಯೋ ದೊಡ್ಡರಾಯರ ಭೂತ!

ಭೀ : ಅಯ್ಯೋ ದೊಡ್ಡರಾಯರ ಪಿಶಾಚಿ !

(ದೊಡ್ಡರಾಯರೂ ರಂಗರಾಯರೂ ಬರುವರು).

ದೊಡ್ಡ : ಶ್ಯಾಮರಾಯಾ, ಭೀಮರಾಯಾ, ನಾ ಭೂತ ಅಲ್ಲಾ, ಪಿಶಾಚಿ ಅಲ್ಲ! ನೀವೇನೂ ಘಾಬರಿ ಆಗಬ್ಯಾಡ್ರಿ. ಮಲ್ಲ್ಯಾ, ಏ ಮುಲ್ಲ್ಯಾ ! ಕಣ್ಣ ತಗದು ನೋಡಲೇ ನಾ ಯಾರನ್ನೋದು! ಇದೇನು ಕಲ್ಲಂಭಟ್ಟರು ಬಂದಾರಲ್ಲಾ? ಭಟ್ಟರಽ, ನಿಮಗ ನನ್ನ ಗುರುತು ಹತ್ತಲಿಲ್ಲಽ? ನಾ ನಿಮ್ಮ ದೊಡ್ಡರಾಯಾ! ನನಗ ಅನಿಸಿತ್ತು. ನೀವೆಲ್ಲಾರೂ ನನ್ನ ಪಿಶಾಚಿ ಅಂತ ತಿಳಕೋತೀರಿ ಅಂತ. ನಿಮಗ ಖಾತ್ರೀ ಮಾಡಿ ಕೊಡೋದಕ್ಕ, ಸಂಗತಿಲೇ ರಂಗರಾಯರನ್ನ ಕರಕೊಂಡು ಬಂದಿನಿ ! ಬೇಲಿಫ, ನಸ್ಸಗಡಾ ಬಂದ ರಾಯರ ಗುರುತು ಹತ್ತಿತೇನು ನಿನಗಽ ?

ಬೇ : ಹತ್ತೇದೇನರೀ, ಅವರಽ ನಮ್ಮ ಮುನಸೂಫರು! ಸಲಾಂರೀ ರಾವ್ ಸಾಬ (ಸಲಾಂ ಮಾಡುವನು.)

ರಂ : (ಬೇಲಿಫನಿಗೆ) ಫಕೀರಪ್ಪಾ, ನೀನೂ ಸ್ವಲ್ಪು ಇಲ್ಲೇ ನಿಲ್ಲು.

ಬೇ : ನಿಲ್ಲತೇನರಿ. (ಒಂದು ಕಡೆಗೆ ಸರಿದು ನಿಲ್ಲುವನು).

ಕಲ್ಲಂ : ರಾಯರ್ರ, ಇವೆಲ್ಲಾ ಏನು ? ನನಗಂತೂ ಇಲ್ಲಿ ಏನ ನಡದ್ರದ ಅನ್ನೋದ್ರ ತಿಳೀವೊಲ್ಲದು ! ಇದೆಲ್ಲಾ ಏನು ? ನನಗಂತೂ ಇದೇನು ಕನಸೋ ನೆನಸೋ ತಿಳೀದ್ಹಾಂಗ ಆಗೇದ. ನನಗಽ ಹುಚ್ಚು ಹಿಡಿಯೋದು ಒಂದ ಉಳ್ದಽದ.

ದೊ-ರಾ : ಭಟ್ಟರಽ! ಘಾಬರಿ ಆಗಬ್ಯಾಡ್ರಿ. ಇದೂ ಒಂದು ನಾಟಕ. ಜೀವನ ನಾಟಕ! ಈಗ ನಡವದ್ದು ಇದರ ಕಡೀ ಅಂಕು! ಇದನ್ನಷ್ಟು ಮುಗಿಸಿ ನಾ ಹೋಗಬೇಕಾಗೇದ. ತಿಳೀತಽ.

ಶ್ಯಾ : ನಾಟಕಾ ?

ಭೀ : ನೀವು ಸತ್ತಿಲ್ಲಾ ಹಾಂಗಾದ್ರ ?

ದೊ-ರಾ : ನಾಸತ್ತಿಲ್ಲಿ, ಸತ್ತಿದ್ದಿಲ್ಲ.

ಶ್ಯಾ : ಯಾತ್ರಿಗೆ ಹೋದದ್ದು ಎಲ್ಲಾ ಸುಳ್ಳೇನು ?

ದೊ-ರಾ : ಸುಳ್ಳು, ನಾನು ಕಾಶೀಗೂ ಹೋಗಿಲ್ಲಾ, ಬದರಿಗೂ ಹೋಗಿಲ್ಲ! ಒಂದು ಊರಿಗೆ ಹೋಗಿ ಇದೆಲ್ಲಾ ನಾಟಕಾ ಆಡಿದೆ. ನನ್ನ ಆಸ್ತಿಗೆ ಯಾರನ್ನ ದತ್ತಕ ತಗೋಬೇಕು ? ತಮ್ಮನ ಮಗನ್ನ ತಗೋಬೇಕೋ, ಹೆಂಡತೀ ತಮ್ಮನ ಮಗನ್ನ ತಗೋಬೇಕೋ.... ಯಾರನ್ನ ದತ್ತಕ ತಗೋಬೇಕು ಅಂತ ಪ್ರಶ್ನೆ ಬಿತ್ತು. ನಾಲ್ಕು ವರುಷ ಅದರೂ ಇದು ಬಗೀ ಹರೀಲಿಲ್ಲ. ಕಡೀಕ ಯಾರು ನನಗ ಖರೇ ವಾರಸ್‌ದಾರ್ರು ಆಗತಾರೋ ನೋಡಬೇಕು— ಅಂತ ಈ ನಾಟಕಾ ಆಡಿದೆ. ಶ್ಯಾಮರಾಯ ಆಗಲಿ, ಭೀಮರಾಯ ಆಗಲಿ, ಖರೇ ವಾರಸದಾರ್ರು ಆಗಲಿಲ್ಲ. ಯಾಕಂದರ, ನನ್ನ ಆಸ್ತೀ ತಗೊಳ್ಳಲಿಕ್ಕೆ ಮಾತ್ರ ಅವ್ರಽ ಅವರು ವಾರಸದಾರ್ರು ಅದ್ರು; ಅದರ ನನ್ನ ಸಾಲಕ್ಕ ಮಾತ್ರ ಆಗಲಿಲ್ಲ. ಖರೇ ವಾರಸದಾರ್ರು ಅಂದರ ಆಸ್ತಿಗೂ ಆಗಬೇಕು; ಸಾಲಕ್ಕೂ ಆಗಬೇಕು. ಸುಖಕ್ಕೂ ಆಗಬೇಕು, ದುಃಖಕ್ಕೂ ಆಗಬೇಕು. ಈಗ ನನಗ ಗೊತ್ತಾತು; ನನಗ ವಾರಸ್‌ದಾರು ಯಾರೂ ಇಲ್ಲಾ ಅಂತ ! ಶ್ಯಾಮರಾಯಾ, ಭೀಮರಾಯಾ, ನನ್ನ ಮಾತು ಸುಳ್ಳೇನು ?

[ಇಬ್ಬರೂ ತಲೆ ತಗ್ಗಿಸಿಕೊಂಡು ಸುಮ್ಮನೆ ನಿಲ್ಲುವರು]

ಕಲ್ಲಂ : ಹಾಂಗಾದರ ನಿಮ್ಮ ಆಸ್ತಿಯೆಲ್ಲಾ ಏನು ಮಾಡವರು?

ದೊ-ರಾ : ಅದನ್ನಽ ಹೇಳತೇನಿ ಕೇಳ್ರಿ. ನನ್ನ ಆಸ್ತಿಯೆಲ್ಲಾ ಒಂದು ಸಾರ್ವಜನಿಕ ವಿಶ್ವಸ್ತ ನಿಧಿ ಅಂತ ಮಾಡಿ, ಅದರಿಂದ ಬರುವ ಬಡ್ಡಿಯಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನ ಗೊತ್ತು ಮಾಡಿದ್ದೇನೆ. ಮಕ್ಕಳಿಲ್ಲದ ನನಗ, ಬಡವಿದ್ಯಾರ್ಥಿಗಳೇ ಮಕ್ಕಳು. ಮತ್ತ ಈಗ ಊರಾಗ ಇಲ್ಲದಾಗ ಶ್ಯಾಮರಾಯಾ ಭೀಮರಾಯಾ ಏನೇನು ತಗೊಂಡಾರೋ ಅದನ್ನ ಅವರಿಗೇ ಬಿಟ್ಟಿದ್ದೇನೆ. ಮತ್ತ ನಾ ಹೇಳಿದ್ದೆಲ್ಲಾ ನಿಮಗ ಸುಳ್ಳನಿಸಬಾರದು ಅಂತ, ಇಲ್ಲೆ ಮುನಸೂಫರಾಗಿದ್ದಂಥಾ ರಂಗರಾಯರನ್ನ ಕರಕೊಂಡು ಬಂದೇನಿ. ಇವರ ತಂದಿಯನವರಿಗೆ ನನಗಽ ಭಾಳ ಋಣಾನುಬಂಧ ಇತ್ತು.

ರಂ : ಹೌದು, ಶ್ಯಾಮರಾಯರಽ, ಭೀಮರಾಯರಽ, ದೊಡ್ಡರಾಯರು ಹೇಳಿದ್ದೆಲ್ಲಾ ಖರೇ ಅದ್ಯ. ನಾವಿಬ್ಬರೂ ಕೂಡಿ ಒಂದು ನಾಟಕ ಮಾಡಿದೆವು. ಈ ನಾಟಕಕ್ಕ ನಾ ನ್ಯಪಸ್ಥಾಪಕ ಆಗಿದ್ದೆ. ಇವರು ದಿಗ್ದರ್ಶಕರು !

ಕಲ್ಲಂ: ನಾಟಕ ಮಾತ್ರ ಯಶಸ್ವಿ ಆತು ನೋಡ್ರಿ.

ದೊ ರಾ: ಅದಕ್ಕ ನಮ್ಮ ರಂಗರಾಯರ ಉಪಕಾರಾ ಎಷ್ಟು ನೆನಿಸಿದರೂ ಕಡಿಮೇ !

ರಂ: ನನ್ನ ಉಪಕಾರ ಏನ ಬಿತ್ರಿ. ಮುಕ್ಕಳಿಲ್ಲದವರಿಗೆಲ್ಲಾ ನಿಮ್ಮಂಥಾ ಬುದ್ಧಿ ಹುಟ್ಟಿದರ, ಅದs ನಮಗೆಲ್ಲಾ ದೊಡ್ಡ ಉಪಕಾರಾ.

ದೊ ರಾ: ಭಟ್ಟರಽ, ಇನ್ನ ನನಗ ಯಾತ್ರಿಗೆ ಹೋಗಲಿಕ್ಕೆ ಅಪ್ಪಣೆ ಕೊಡ್ರಿ.

ಮ: ಯೆಸ್ಪಾ ದನೇರ, ಕಾಲಿಗೆ ಬಿದ್ನೀರೀ ಎಪ್ಪಾ! ನಿಮಗೆ ದೆವ್ವು ಅಂತ ಅಂದದ್ದು ತಪ್ಪಾತ್ರಿ. ನೀವು ಕರೇನು ಸತ್ತಿದ್ರಿ ಅಂತ ತಿಳಿದು ಹಾಂಗ ಒದರಿನ್ನಿರಿ. ಎಪ್ಪಾ ಈ ಮಗನ್ನ ತಪ್ಪು ಹೊಟ್ಟಾಕ್ಕಾಗ ಹಾಕ್ಕೋರಿ. (ಕಾಲಿಗೆ ಬೀಳುವನು).

ಶ್ಯಾ—ಭೀ: ದೊಡ್ಡರಾಯರಽ ನಮ್ಮ ತಪ್ಪು ಹೊಟ್ಟಾಕ್ಕಾಗ ಹಾಕ್ಕೋರಿ. (ಅಡ್ಡ ಬೀಳುವರು).

[ತೆರೆ ಬೀಳುವುದು.]

● ಕಾಳಿದಾಸನ ಸುಭಾಷಿತಗಳು ●

[ಕುಮಾರ ಸಂಭವ ೧-೮]

ಶ್ರೀ. ಎ. ಶಂಕರ ಕೆದಿಲಾಯ, ಎಂ. ಎ, ಬಿ. ಟಿ. ಮದರಾಸ್

ಜೀವನದಲ್ಲಿಯ ಸತ್ಯಗಳನ್ನು ಕವಿಗಳು ಉಪಮೆ-ರೂಪಕಗಳಲ್ಲಾಗಲಿ, ಅರ್ಥಾಂತರನ್ಯಾಸಗಳಲ್ಲಿಯಾಗಲಿ ಹೊಂದಿಸಿ ಹೇಳುತ್ತಿರುವುದುಂಟು. ಕವಿರಾಜ ಕಾಲಿದಾಸನ ಕೃತಿಗಳೆಲ್ಲವುಗಳೂ ಇವುಗಳನ್ನು ರಾಶಿ-ರಾಶಿಯಾಗಿ ನೋಡಬಹುದು. ಇಲ್ಲಿಯ ಅನುಭವವಾಣಿಗಳು 'ಕುಮಾರ ಸಂಭವ' ಕಾವ್ಯದಲ್ಲಿಯವು.

೧. 'ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ' ೧—೫.

ಚಂದ್ರನ ಕಲೆಯು ಅತನ ಕಿರಣಗಳಲ್ಲಿ ಮುಳುಗಿ ಮಾಯವಾಗುವಂತೆ, ಗುಣಸಮೂಹಗಳ ನಡುವೆ ಒಂದು ದೋಷವಿದ್ದರೂ ಕೂಡ ಅದು ಅಡಗಿ ಹೋಗುವುದು.

೨. 'ಕ್ಷುದ್ರೋಪಿ ನೂನಂ ಶರಣಂ ಪ್ರಪನ್ನೇ ಮಮತ್ವಮುಚ್ಚೈಃ ಶಿರಸಾಂ ಸತೀನಾಂ.' ೧—೧೨.

ಶರಣುಬಂದವನು ಅಲ್ಪನಾದರೂ, ಮಹಾತ್ಮರಾದವರು ಸಾಧುವಿನಲ್ಲಿ ತೋರುವಂತೆಯೇ ಅತನಲ್ಲಿಯೂ ಮಮತೆಯನ್ನು ತೋರುವರು.

೩. 'ಸಂಸ್ಕಾರವತ್ಯೋವ ಗಿರಾ ಮನೀಷೀ ತಯಾ ಸ ಸ್ಪೃತಶ್ಚ ನಿಭೂಷಿತಶ್ಚ'. ೧—೩೪.

ಸಂಸ್ಕಾರ ಹೊಂದಿದ ಮಾತಿನಿಂದ ವಿದ್ವಾಂಸನು ಹೇಗೆ ಪವಿತ್ರನೂ ಅಲಂಕೃತನೂ ಆಗುವನೋ, ಅಂತೆಯೇ ಅತನು ಆಕೆಯಿಂದ ಪವಿತ್ರನೂ ಅಲಂಕೃತನೂ ಆದನು.

೪. 'ವಿಷವೃಕ್ಷೋಪಿ ಸಂವರ್ಧ್ಯ ಸ್ವಯಂಛೇತ್ತುಮಸಾಂಪ್ರತಂ' ೩—೨೫.

ಬೆಳಿಸಿದವನು ತಾನೇ ವಿಷವೃಕ್ಷವನ್ನಾದರೂ ಕಡಿಯುವುದು ಯೋಗ್ಯವಲ್ಲ.

೫. 'ಆತ್ಮೇಶ್ವರಾಣಾಂ ನಹಿ ಜಾತು ವಿಘ್ನಾಃ ಪದಾದಿ ಭೇದಸ್ಪೃಹಣೋ ಭವಂತಿ' ೩—೪೦.

ಆತ್ಮನನ್ನು ವಶದಲ್ಲಿಟ್ಟುಕೊಂಡವರ ಚಿತ್ತದ ಏಕಾಗ್ರತೆಯನ್ನು ವಿಘ್ನಗಳು ಭೇದಿಸಲಾರವು.

೬. 'ನಹೀಶ್ವರವ್ಯಾಹೃತಯಃ ಕದಾಚಿತ್ಪುಷ್ಣಂತಿ ಲೋಕೇ ವಿಪರೀತಮರ್ಥಂ' ೩—೪೩.

ಈ ಲೋಕದಲ್ಲಿ ಈಶ್ವರವಚನವು ಎಂದಿಗೂ ಅನ್ಯಥಾ ಆಗಲಾರದು.

೭. 'ಸ್ವಜನಸ್ಯಹಿ ದುಃಖಮಗ್ರತೋ ವಿವೃತದ್ವಾರವಿವೋತಿ ಜಾಯತೇ' ೪—೭೬.

ಸ್ವಜನರ ಇದಿರಿನಲ್ಲಿ ದುಃಖವು ಮುಕ್ತದ್ವಾರದಿಂದ ಹೊರಹೊಮ್ಮಿದಂತೆ ಹೆಚ್ಚುವುದು.

೮. 'ನ ಸನ್ಪದಶ್ರೇಣಿಭಿರೇವ ಸಂಕಟಂ ಸ ಶೈವಲಾಸಂಗಮಪಿ ಪ್ರಕಾಶತೇ' ೫—೯.

ಕಮಲವು ಪ್ರಕಾಶಿಸುವುದು ತುಂಬಿಯ ಸಾಲುಗಳಿಂದ ಮಾತ್ರವಲ್ಲ; ಹಾಪಸಿಯ ಸಂಸರ್ಗದಿಂದಲೂ ಅದು ಶೋಭಿಸುವುದು.

೯. 'ನ ಧರ್ಮವೃದ್ಧೇಷು ವಯಃ ಸಮೀಕ್ಷತೇ' ೫—೧೨.

ಧರ್ಮದಲ್ಲಿ ವೃದ್ಧರಾದವರಲ್ಲಿ ವಯಸ್ಸು ಗಣಿಸಲ್ಪಡುವುದಿಲ್ಲ.

೧೦. 'ಶರೀರಮಾದ್ಯಂ ಖಲು ಧರ್ಮಸಾಧನಂ' ೫—೩೩.

ಧರ್ಮಸಾಧನೆಗೆ ಶರೀರವೇ ನೊದಲು.

೧೧. 'ಅಲೋಕ ಸಾಮಾನ್ಯಮಚಿಂತ್ಯ ಹೇತುಕಂ ನಿಂದಂತಿ ಮಂದಾಶ್ಚರಿತಂ ಮಹಾತ್ಮನಂ' ೫—೬೫.

ಮಹಾತ್ಮರ ಅಲೌಕಿಕವೂ ಅಚಿಂತ್ಯವೂ ಆದ ಚರಿತೆಯನ್ನು ಮೂಢರು ನಿಂದಿಸುವರು.

೧೨. 'ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ' ೫—೬೬.

ಫಲವನ್ನು ಪಡೆದ ಮೇಲೆ ನೊದಲಿನ ದುಃಖವು ಮಾಯವಾಗಿ ನವ್ಯತೆಯು ಬರುವುದು.

೧೩. "ತಾಮಗೌರವಭೇದೇನ ಮುನೀಶ್ವಾಸಶ್ಯದೀಶ್ವರಃ **ಸ್ತ್ರೀ ಪುಮಾನಿತ್ಯಸಾಸ್ಮೃಷ್ಟಾ ನೃತ್ತಂ ಹಿ ಮಹಿತಂ ಸತಾಂ**" ೬—೧೬.

ಸಜ್ಜನರು ಗಂಡಸು ಹೆಂಗಸು ಎಂಬುದಾಗಿ ಲಿಂಗಭೇದವನ್ನೆಣಿಸದೆ, ಪದ್ಮೋತ್ಪತ್ತಿಯನ್ನು ಸಾತ್ರ ಗೌರವಿಸುವರು.

೧೪. 'ನಿಕ್ರಿಯಾಯೈ ನ ಕಲ್ಪಂತೇ ಸಂಬಂಧಾಃ ಸದನುಷ್ಠಿತಾ' ೬—೨೯.

ಸುಜನರು ಏರ್ಪಡಿಸಿದ ಸಂಬಂಧಗಳು ನಿಷ್ಫರಿಣಾಮಗಳನ್ನುಂಟು ಮಾಡುವುದಿಲ್ಲ.

೧೫. 'ವಿನಿಯೋಗಸ್ಯಸಾಧಾ ಹಿ ಕಿಂಕರಾಃ ಪ್ರಭವಿಷ್ಣವಃ.' ೬—೬೨.

ತಮ್ಮ ಒಡೆಯರ ಆಜ್ಞೆಯನ್ನು, ಸೇವಕರು ಅನುಗ್ರಹವೆಂದೆಣಿಸುವರು.

೧೬. 'ಅಶೋಚ್ಯಾ ಹಿ ಪಿತುಃ ಕನ್ಯಾ ಸದ್ಭರ್ತೃ ಪ್ರತಿಪಾದಿತಾ'. ೬—೬೯.

ಒಳ್ಳೆಯ ವರನಲ್ಲಿ ಕನ್ಯೆಯನ್ನು ಪ್ರದಾನ ಮಾಡಿದ ಮೇಲೆ ದುಃಖಿಸಬೇಕಾದ ಕಾರಣವಿಲ್ಲ.

೧೭. 'ಪ್ರಾಯೇಣ ಗೃಹಿಣೀ ನೇತ್ರಾಃ ಕನ್ಯಾಥೇಷು ಕುಟುಂಬಿನಃ' ೬—೨೫.

ಹೆಣ್ಣುಮಕ್ಕಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸಾಮಾನ್ಯವಾಗಿ ಗೃಹಸ್ಥರು ತಮ್ಮ ಗೃಹಿಣಿಯರ ಅಭಿಮತವನ್ನು ಅನುಸರಿಸುವರು.

೧೮. 'ಭವಂತ್ಯನ್ಯಭಿಚಾರಿಣ್ಯೋ ಭರ್ತುರಿಷ್ಟೇ ಪತಿವ್ರತಾಃ.' ೬—೮೬.

ಪತಿವ್ರತೆಯರು ಪತಿಯ ಇಷ್ಟದ ವಿಷಯದಲ್ಲಿ ಸದಾ ಅನುಕೂಲರಾಗಿಯೇ ಇರುತ್ತಾರೆ.

೧೯. 'ಸ್ತ್ರೀಣಾಂ ಪ್ರಿಯಾಲೋಕ ಫಲೋ ಹಿ ವೇಷಃ' ೭—೨೨.

ಸ್ತ್ರೀಯರ ವೇಷಭೂಷಣಗಳಿಗೆ ತಮ್ಮ ಗಂಡಂದಿರ ದೃಷ್ಟಿಯು ತಮ್ಮ ಮೇಲೆ ಬೀಳುವುದೇ!

೨೦. 'ಗುಣಾಪೇಕ್ಷಿಣಿ ಗಿರ್ಯಾಲಯಮಭ್ಯಗಚ್ಛನ್' **ಪ್ರಶಸ್ತ ಮಾರಂಭಮಿವೋತ್ಸವಾರ್ಥಾಃ**' ೭—೭೧.

ಉತ್ತಮವಾದ ಸಾಧನೆಗಳು ಪ್ರಶಸ್ತವಾದ ಆರಂಭವನ್ನು ಅನುಸರಿಸುತ್ತವೆ

೨೧. 'ಕಾಲಪ್ರಯುಕ್ತಾ ಖಲು ಕಾರ್ಯವಿದ್ಭಿರ್ವಿಜ್ಞಾಪನಾ ಭರ್ತೃಷು ಸಿದ್ಧಿಮೇತಿ' ೭—೭೩.

ಕಾರ್ಯಜ್ಞಾನರಿಂದ ತಮ್ಮ ಒಡೆಯಂದಿರಲ್ಲಿ ಸಕಾಲದಲ್ಲಿ ಮಾಡಿಕೊಂಡ ವಿಜ್ಞಾಪನೆಗಳು ಸಿದ್ಧಿಸುತ್ತವೆ.

೨೨. 'ನಿಕ್ರಿಯಾ ನ ಖಲು ಕಾಲದೋಷಜಾ ನಿರ್ಮಲ ಪ್ರಕೃತಿಷು ಸ್ಥಿರೋದಯಾ' ೮—೬೫.

ನಿರ್ಮಲಪ್ರಕೃತಿಗಳಲ್ಲಿ ಕಾಲದೋಷದಿಂದ ಹುಟ್ಟುವ ವಿಕಾರಗಳು ಉತ್ಪನ್ನವಾಗುವುದಿಲ್ಲ.

ಏಳು ಬಡಿದಿದೆ ಗಂಟೆ

"ರಂ.ಸ" ಭಟ್ಟ ಮದ್ಯಾಸು

ಕೇಳದೊ ರಣಕಹಳೆ —
ಬಟ್ಟೆಯನು ನೇಯಲಿಹ ಹತ್ತಿಗಿರಣಿಯ ಕೂಗೆ
ಕೋಚೀನು ಕಾಣಲಿಹ ಉಗಿಬಂಡಿ ಹೊಗೆಯೆ
ಬದುಕಿಹರು ಬದುಕಿದರು, ಸತ್ತವರು ಸತ್ತಿಹರು,
ಎಂದೇನೊ ಸಾರಿರುವ ಚರ್ಚುಗಂಟೆಯು ಕೂಗೆ

— ಏನೊ ಯಾವುದೊ
ಆದರೂ ಇದು ಕಹಳೆ
ಧರ್ಮಕ್ಷೇತ್ರದ ಮೊಳಗೆ ಪಾಣಿಪತ್ತಿನ ಕಹಳೆ
ಮೀಸೆಯಿದ್ದವರೆಲ್ಲ ಬನ್ನಿಮುಂದೆ—
ಗಂಡುಸಾದವರೆಲ್ಲ ಬಲಿಯಾಗಿ ಬನ್ನಿ
ಎಂದು ಕೂಗುವ ಗುಡುಗೆ ನೂರಿಯಮ್ಮನ ಜಾಗಟೆ....

ಇದು ಕಹಳೆ —
ಬಂದರೂ ಬಿಡೆ ನಿನ್ನ ಬಾರದಿದ್ದರೂ ಬಿಡೆನು
ಎಂದು ಕತ್ತಿಯ ಮಸೆದು ಕಾದುಕುಳಿತಿಹ ಕಹಳೆ
ಇದೂ ಕಹಳೆ—ರಣ ಕಹಳೆ—ಕಹಳೆ —

* * *

ಮೈಮುರಿದು ಅಳಲಿಸಿ ಕಣ್ಣ ತೆರೆದನಿವ ಸರದಾರ.
ಅಲ್ಲಾಡಿತು ಕಿವಿ, ತೆರೆಯುತೇನೊ ಕಣ್ಣು—

ಕೇಳುತಿದೆ ರಣಕಹಳೆ
ಬೇಡುತಿದೆ ಬಲಿಕಂಭ
ನಿನ್ನೆ ಹೋದವರೆಲ್ಲ ಮರಳಿಬಂದಿಲ್ಲ.
ಅಭಿಮನ್ಯು ಹತನಾದ ಕಸಟು ಕತ್ತಿಯ ಮಸೆತ
ಭೀಷ್ಮಗದೊ ಶರಮಂಚ
ಶಕುನಿಯಕೊ ಆಡುತಿಹ
ನುಗಿದಿಲ್ಲವೀ ಆಟ
ನಿನ್ನೆ ಹೋದವರೆಲ್ಲ ಮರಳಿ ಬಂದಿಲ್ಲ.
ಏನು ಯಾರಿಗೆ ಗೊತ್ತು ಏನು ಕಾದಿದೆಯೆಂದು
ಹೊರಡು ಕೂಗಿದೆ ಕಹಳೆ ಏಳು ಬಡಿದಿದೆ ಗಂಟೆ.
ಹಕ್ಕಿ ಹದ್ದುಗಳೆಲ್ಲ ಕಾಯುಬಹುದಲ್ಲ.
ನೂಂಸಾಹಾರಿಯೊ ಹದ್ದು ನೆಯ್ಯದದು ಹುಲ್ಲ!
ಹಕ್ಕಿ ಹದ್ದುಗಳೆಲ್ಲ ಬೆಳೆಯಬೇಕಯ್ಯ
ಅಗಸದ ತುಂಬೆಲ್ಲ ಹಾರಬೇಕಯ್ಯ!
ಯಾರದಾದರೆ ಏನು ಬಲಿತ ಮಾಂಸವೆ ಬೇಸು.
ಕೇಳು ಕೇಳದೊ ಕಹಳೆ—
ಬಟ್ಟೆಯನು ಕಾರಲಿಹ ಹತ್ತಿಗಿರಣಿಯ ಕೂಗೆ
ಕೋಚೀನು ಸೇರಲಿಹ ಉಗಿಬಂಡಿ ಹೊಗೆಯೆ
ಹೊರಡು ಕಾದಿದೆ ಕಹಳೆ
ಏಳು ಬಡಿದಿದೆ ಗಂಟೆ.

ಪುರಸ್ಕಾರ

(ಐತಿಹಾಸಿಕ ಕಣ್ಣಕತೆ)

ಶ್ರೀ. ಎಸ್. ಆರ್. ಪಾಡಿ, ಮುಟ್ಟತ್ತಾಯ (ದ. ಕ.)

ಪರಸ್ಪರ ವಿರೋಧಿಯಾದ ಎರಡು ಆದರ್ಶಗಳನ್ನು ಒಂದೆ ಕಾಲದಲ್ಲಿ ಸಾಧಿಸುವುದು ಲೌಕಿಕರಿಗೆ ಅಸಾಧ್ಯವಾದ ಕಾರ್ಯ. ಪಾಪ! ಮಧೂಲಿಕೆ, ರಾಜನಿಷ್ಠೆಯನ್ನೂ ಸಾಧಿಸಬೇಕೆಂದಳು; ಹೃದಯಪ್ರಿಯನನ್ನೂ ಸಂಪಾದಿಸಬೇಕೆಂದಳು. ಪರಿಣಾಮವೇನಾಯಿತು?

ಆರ್ದ್ರಾ ನಕ್ಷತ್ರದ ಮಳೆಗಾಲದ ದಿನ! ಆಗಸದಲ್ಲಿ ಕಾರ್ಮೋಡಗಳು ಸಂಚರಿಸಿ, ದೇವದುಂದುಭಿಯ ಗಂಭೀರನಾದದಿಂದ ಗುಡುಗುಡಿಸುತ್ತಿದ್ದುವು. ಪೂರ್ವದಿಗಂತದ ನಿರ್ಮಲಾಕಾಶದಂಚಿನಲ್ಲೊಂದೆಡೆ ಸೂರ್ಯದೇವನು ಇಣಿಕಿ, ಮಹಾರಾಜನ ಮೆರವಣಿಗೆಯನ್ನು ನೋಡತೊಡಗಿದನು. ಪರ್ವತಮಾಲೆಗಳ ಮಡಿಲಲ್ಲಿ ಮಲಗಿರುವ ಬಯಲುಭೂಮಿಯಿಂದ ಸುಗಂಧಿತ ವಾಯು ಬೀಸಿ ಬರುತ್ತಿತ್ತು. ನಗರದ ಹೆಬ್ಬಾಗಿಲಲ್ಲಿ ಜಯಘೋಷವಾಯಿತು. ಚಾಮರಧಾರಿಯಾದ ಆನೆಯು ಸೊಂಡಿಲು ಅತ್ಯುನ್ನತವಾಗಿ ನೆರೆದ ಗುಂಪಿನ ಮಧ್ಯದಲ್ಲಿದ್ದು ಕಾಣುತ್ತಿತ್ತು. ಜನಸಮುದ್ರವು ಆನಂದೋತ್ಸಾಹಗಳ ತರಂಗಗಳಿಂದ ಉಕ್ಕಿ ನುಂದಕ್ಕೆ ಬರುತ್ತಿತ್ತು.

ಉಷಃಕಾಲದ ಹೇಮಕಿರಣಗಳಿಂದ ಅಲಂಕರಿಂಚಿತವಾದ ಮಳೆಯ ಹನಿಗಳು, ಬಂಗಾರದ ಮಲ್ಲಿಗೆಯ ಹೊಗ್ಗುಗಳಂತೆ ಸುರಿದುವು. ಮಂಗಲ ಸೂಚನಾರ್ಥವಾಗಿ ಜನತೆ ಹರ್ಷಧ್ವನಿಮಾಡಿತು.

ರಥ, ಆನೆ ಮತ್ತು ಅಶ್ವಾರೋಹಿಗಳ ಸಾಲುಸಾಲೇ ಅಲ್ಲಿ ನೆರೆಯಿತು. ಪ್ರೇಕ್ಷಕರ ಒಳಗೆ ಅಸಂಖ್ಯನಾಗಿತ್ತು. ರಾಜನು ಪಟ್ಟದಾನೆಯ ಬೆನ್ನಿಂದಿಳಿದನು. ಸುಂದರಿಯರಾದ ಕನ್ಯೆಯರೂ, ಮುತ್ತೈದೆಯರೂ ಮಂಗಲಕಲಶ, ಪುಷ್ಪ, ಲಾಜಾ, ದಧಿ, ದೂರ್ವಾಕ್ಷತೆಗಳ ತಟ್ಟೆಗಳನ್ನು ಹಿಡಿದು, ಸುಮಧುರಗಾನನಿನಾದವನ್ನು ಹಾಡುತ್ತಾ ಮುಂದೆ ಹೋದರು.

ಮಹಾರಾಜನ ಮುಖದತ್ತ ಮುಂದಹಾಸ ಬೀಸುಗುತ್ತಿತ್ತು. ಪುರೋಹಿತರು ಮಂಗಲವಚನಗಳನ್ನೋದಿದರು. ರಾಜನು ಬಂಗಾರದ ನೇಗಿಲ ತುದಿಯನ್ನು ಹಿಡಿದು, ಅದಕ್ಕೆ ಕಟ್ಟಿದ್ದ ಪುಷ್ಪಮಾಲೆ ಎತ್ತುಗಳನ್ನು ನಡೆಸಿದನು. ಮಂಗಲತೂರ್ಯಗಳು ಮೊಳಗಿದುವು ಬಾಲಕಿಯರು ಅರಳು ಮತ್ತು ಪುಷ್ಪಗಳ ಮಳೆಗರೆದರು.

ಕೋಸಲದೇಶದಲ್ಲಿ ಈ ಉತ್ಸವವು ಬಹಳ ಪ್ರಸಿದ್ಧವಾಗಿತ್ತು. ಒಂದು ದಿನದ ಮಟ್ಟಿಗೆ ಮಹಾರಾಜನು ಕೃಷಿಕನಾಗಬೇಕಾಗಿತ್ತು. ಆ ದಿನ ವಿಶ್ವಂಭರೆಯು ಇಂದ್ರಪೂಜೆ ನಡೆಯುತ್ತದೆ. ಪಟ್ಟಣಿಗರು ಆ ಬೆಟ್ಟದೂರಿನಲ್ಲಿ ಪ್ರತಿವರ್ಷವೂ ಈ ಕೃಷಿಮಹೋತ್ಸವನನ್ನು ಬಹಳ ಸಂತೋಷದಿಂದಲೂ ಉತ್ಸಾಹದಿಂದಲೂ ಆಚರಿಸುತ್ತಾರೆ ಪರರಾಜ್ಯಗಳಿಂದಲೂ ತರುಣ ರಾಜಕುಮಾರರು ಬಂದು ಈ ಉತ್ಸವದಲ್ಲಿ ಜಯಂತ ಆಗಕ್ತಿಯಿಂದ ಭಾಗವಹಿಸುತ್ತಾರೆ.

ಮಗಧ ರಾಜಕುಮಾರನಾದ ಅರುಣನು ತನ್ನ ರಥದಲ್ಲಿ ಕುಳಿತು ಬಹಳ ಕುತೂಹಲದಿಂದ ಈ ದೃಶ್ಯವನ್ನು ನೋಡುತ್ತಲಿದ್ದನು.

ಬೀಜಪುಂಬಿದ ತಟ್ಟೆಯನ್ನು ಹಿಡಿದ ಕುಮಾರಿ ಮಧೂಲಿಕೆಯು ರಾಜನೊಂದಿಗಿದ್ದಳು. ಬೀಜಗಳನ್ನು ಬಿತ್ತುತ್ತಾ ರಾಜನು ಕೈನೀಡಿದಾಗ, ಮಧೂಲಿಕೆಯು ಕೂಡಲೆ ತಟ್ಟೆಯನ್ನು ಒತ್ತುತ್ತಿದ್ದಳು. ಆ ಸಪರ್ಶ ಮಧೂಲಿಕೆಯ ಹೊಲವು ರಾಜನ ಉತ್ಸವಕ್ಕೆ ಚುನಾಯಿಸಲ್ಪಟ್ಟಿದ್ದಿತು. ಆದುದರಿಂದ ಬೀಜದ ತಟ್ಟೆಯನ್ನು ಹಿಡಿಯುವ ಆ ಗೌರವವು ಆಕೆಗೇ ದೊರೆಯಿತು. ಆಕೆ ಸುಂದರಿಯಾದ ಕನ್ಯೆ! ಧರಿಸಿದ್ದ ಕೌಶೇಯವಸನವು ಗಾಳಿಯಲ್ಲಿ ಉತ್ತಿಂದಿತ್ತ ಹಾರಾಡುತ್ತಾ ಶೋಭಿಸುತ್ತಿತ್ತು. ಆಗಾಗ ಆದನ್ನು ಸರಿಪಡಿಸುತ್ತಲೂ, ಇನ್ನು ಕೆಲವು ವೇಳೆ ಹಾರಾಡುತ್ತಿದ್ದ ಮುಂಗುರುಳುಗಳನ್ನು ತಿದ್ದುತ್ತಲೂ ಇದ್ದಳು. ಆ ಬಾಲಿಕೆಯ ರುಭ ಫಾಲದತ್ತ ಸಾಲು ಸಾಲಾಗಿದ್ದ ಸ್ವೇದಬಿಂದುಗಳು ಇಳಿಬಿದ್ದ ಕೂದಲಿನೊಂದಿಗೆ ಪ್ರೇಣಿಸಿಕೊಂಡಿದ್ದುವು. ಅಭಿಮಾನ ಮತ್ತು ಲಜ್ಜೆಗಳಿಂದೊಡಗೂಡಿದ ಮಂದಹಾಸ ತುಟಿಗಳಲ್ಲಿ ಮಿನುಗುತ್ತಿತ್ತು. ಆದರೆ ರಾಜನ ಮುಂದೆ ಬೀಜದ ತಟ್ಟೆಹಿಡಿಯುವುದರಲ್ಲಿ ಯಾವ ಉದಾಸೀನವನ್ನೂ ತೋರುತ್ತಿರಲಿಲ್ಲ. ನೆರೆದ ಜನರೆಲ್ಲರೂ ರಾಜನು ಉಳುತ್ತಿರುವ ದೃಶ್ಯವನ್ನು ವಿಸ್ಮಯದಿಂದಲೂ ಕುತೂಹಲದಿಂದಲೂ ನೋಡುತ್ತಿದ್ದರು. ಅರುಣನ ದೃಷ್ಟಿಯಾವತ್ತೋ, ಆ ರೈತಕುವರಿಯ ಮೇಲೆ ನೆಟ್ಟಿತ್ತು. ಆಹಾ! ಎಂತಹ ಮುಗ್ಧ ಸೌಂದರ್ಯ! ಎಷ್ಟು ಸೋಹಕರವಾದ ಸರಳ ನೋಟ!

ಸನ್ನಾಹಂಭವ ಮುಖ್ಯ ಘಟನೆ ಮುಗಿಯಿತು. ಅರಸನು ಮಧೂಲಿಕೆಯ ಹೊಲಕ್ಕೆ ಪುರಸ್ಕಾರ ರೂಪವಾಗಿ ಸ್ವಲ್ಪ ಚಿನ್ನದ ನಾಣ್ಯಗಳನ್ನು ತಟ್ಟೆಯಲ್ಲಿ ಹಾಕಿ ಆಕೆಗೆ ಕೊಟ್ಟನು. ಅದು ರಾಜಾನುಗ್ರಹವಾಗಿತ್ತು. ಮಧೂಲಿಕೆಯು ಆ ತಟ್ಟೆಯನ್ನು ಒಮ್ಮೆ ಶಿರದ ಮೇಲಿಟ್ಟು, ಕೂಡಲೇ ಅದರಲ್ಲಿರುವ ಬಂಗಾರದ ನಾಣ್ಯಗಳನ್ನು ರಾಜನ ಪಾದಮೂಲದಲ್ಲಿ ಚೆಲ್ಲಿ ಅವನಿಗರ್ಪಿಸಿದಳು. ಜನರು ಮಧೂಲಿಕೆಯ ಆ ತೇಜಸ್ವೀ ಸೂರ್ತಿಯನ್ನು ಆಶ್ಚರ್ಯಚಕಿತರಾಗಿ ನೋಡತೊಡಗಿದರು. ರಾಜನು ಹುಬ್ಬುಗಂಟಿಕ್ಕಲು, ಮಧೂಲಿಕೆ ವಿನಮ್ರಭಾವದಿಂದ ಹೇಳಿದಳು:—

" ದೇವಾ, ಇದು ನನ್ನ ತಂದೆ-ಅಜ್ಜಂದಿರ ಕಾಲದ ಭೂಮಿ. ಇದನ್ನು ಹೊರುವುದು ಮೂಕಾಪರಾಧ; ಆದುದರಿಂದ ಇದರ ಬೆಲೆಯನ್ನು

ಸ್ವೀಕರಿಸುವ ಸಾಹಸ ಮಾಡಲಾರೆ!" ರಾಜನು ಮಾತಾಡುವುದಕ್ಕಿಂತ ಮೊದಲೇ ವೃದ್ಧಮಂತ್ರಿಯು ಕಠೋರವಾಣಿಯಿಂದ ಹೇಳಿದನು:— "ಅಪ್ರಬುದ್ಧಳೆ! ಏನು ಹರಟುತ್ತಿರುವೆ? ರಾಜಾನುಗ್ರಹದ ತಿರಸ್ಕಾರವೇ? ನಿನ್ನ ಭೂಮಿಯ ನಾಲ್ಕರಷ್ಟು ಬೆಲೆಯು ಇದರಲ್ಲಿದೆ. ಮಾತ್ರವಲ್ಲ, ಇದಾದರೋ ಕೋಸಲದ ರಾಷ್ಟ್ರೀಯ ನಿಯಮವಾಗಿದೆ. ಇಂದಿನಿಂದ ನೀನು ರಾಜಕೀಯ ರಕ್ಷಣೆ ಪಡೆಯಲು ಅಧಿಕಾರಿಣಿಯಾಗಿರುತ್ತೀ. ಈ ಹಣವನ್ನು ತೆಗೆದುಕೊಂಡು ಸುಖಿಯಾಗು!"

"ಎಲ್ಲಾ ಪ್ರಜೆಗಳೂ ರಾಜರಕ್ಷಣೆಗೆ ಭಾಗಿಗಳು ಮಂತ್ರಿಶ್ರೇಷ್ಠ! ಮಹಾರಾಜನಿಗೆ ಭೂಮಿಯನ್ನರ್ಪಿಸುವುದರಲ್ಲಿ ನನ್ನದೇನೂ ವಿರೋಧವಿರಲಿಲ್ಲ; ಈಗಲೂ ಇಲ್ಲ. ಆದರೆ ಮೌಲ್ಯ ಸ್ವೀಕರಿಸುವುದು ಅಸಂಭವ!" — ಮಧೂಲಿಕೆಯು ಉತ್ತೇಜಿತಳಾಗಿ ನುಡಿದಿದ್ದಳು.

ರಾಜನು ಅಕೆಯ ಕುರಿತು ಕೇಳಿದಾಗ ಮಂತ್ರಿ ಹೇಳಿದನು:— 'ದೇವಾ, ವಾರಣಾಸೀ ಯುದ್ಧದಲ್ಲಿ ಅನುಪಮ ಪರಾಕ್ರಮವನ್ನು ತೋರಿದ ಅನನ್ಯವೀರ ಸಿಂಹಮಿತ್ರನ ಏಕಮಾತ್ರ ಪುತ್ರಿಯಿವಳು!"

"ಸಿಂಹಮಿತ್ರನ ಪುತ್ರಿ! ಯಾವಾತನು ಮಗಧದೇಶದ ಸಮಕ್ಷವು ಕೋಸಲದ ಮಾನಾಭಿಮಾನಗಳನ್ನು ರಕ್ಷಿಸಿದ್ದನೋ ಆ ವೀರನ ಕುಮಾರಿಯೇ ಇವಳು?" ಆಶ್ಚರ್ಯಚಕಿತನಾಗಿ ನುಡಿದನು ಮಹಾರಾಜ.

"ಹೌದು ಪ್ರಭು" – ಸವಿನಯದಿಂದ ಬಿನ್ನವಿಸಿದನು ಮಂತ್ರಿ.

"ಈ ಉತ್ಸವದ ಪರಂಪರಾಗತ ನಿಯಮವೇನು ಮಂತ್ರಿವರಾ?"

"ಪ್ರಭು, ನಿಯಮವಾವುದೂ ಬಹಳ ಸರಳವಾದದ್ದೇ. ಯಾವುದಾದರೂ ಒಳ್ಳೆಯ ಹೊಲವನ್ನು ಉತ್ಸವಕ್ಕಾಗಿ ಆರಿಸಿಕೊಂಡು, ಅದರ ಬೆಲೆಯನ್ನು ಪುರಸ್ಕಾರರೂಪವಾಗಿ ಕೊಡುವುದು ಪದ್ಧತಿ. ಆ ಭೂಮಿಯು ಮೌಲ್ಯದ ನಾಲ್ಕರಷ್ಟು ಬೆಲೆ ಭೂಮಿಯೊಡೆಯನಿಗೆ ಸಿಗುತ್ತದೆ. ಆ ಬೆಳೆಯನ್ನು ಆದೇ ವ್ಯಕ್ತಿ ವರ್ಷವಿಡೀ ನೋಡಿಕೊಂಡಿರುತ್ತಾನೆ. ಅದು ರಾಜನ ಹೊಲವೆಂದು ಕರೆಯಲ್ಪಡುತ್ತದೆ."

ಮನಸ್ಸಿನಲ್ಲಿ ಮೂಡಿದ ವಿಚಾರಸಂಘರ್ಷದಿಂದಾಗಿ ರಾಜನು ಕೆಲಹೊತ್ತು ಸುಮ್ಮನಿದ್ದನು. ಜಯಘೋಷದೊಂದಿಗೆ ಸಭೆ ವಿಸರ್ಜಿಸಲ್ಪಟ್ಟಿತು. ಎಲ್ಲರೂ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು. ಆದರೆ ಅನಂತರ ಉತ್ಸವದಲ್ಲಿ ಪುನಃ ಮಧೂಲಿಕೆಯನ್ನು ಯಾರೂ ನೋಡಲಿಲ್ಲ. ಅವಳು ತನ್ನ ಹೊಲದ ಸೀಮಾಪ್ರದೇಶದಲ್ಲಿರುವ ಮಧೂಕ ವೃಕ್ಷ (ಇಪ್ಪೆಮರದ ದಟ್ಟವಾದ ನೆರಳಲ್ಲಿ ಮೂಕಳಾಗಿ ಕುಳಿತಿದ್ದಳು. ಉತ್ಸವ ಮುಗಿದು ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ರಾಜಕುಮಾರ ಅರುಣನು ಮಾತ್ರ ತನ್ನ ವಿಶ್ರಾಂತಿಗೃಹದಲ್ಲಿ ಜಾಗರಣೆ ಮಾಡುತ್ತಿದ್ದನು. ಅವನ ಕಣ್ಣುಗಳಿಗೆ ನಿದ್ದೆಹತ್ತಲೊಲ್ಲದು. ಪೂರ್ವದಿಗಂತದ ಅರುಣರಾಗದಂತೆ ಅವನ ಕಣ್ಣುಗಳೂ ಕೆಂಪಾಗಿದ್ದುವು. ಅವನೆದುರಿನಲ್ಲಿ ಗೋಡೆಯ ಮೇಲೆ ಹೆಣ್ಣು ಪಾರಿವಾಳವೊಂದು ಒಂಟಿಗಾಲಿನಲ್ಲಿ ಕುಳಿತು ರೆಕ್ಕೆಯರಳಿಸಿ ತೂಕಡಿಸುತ್ತಿತ್ತು. ಅರುಣನು ಎದ್ದು ನಿಂತನು. ದ್ವಾರಪ್ರದೇಶದಲ್ಲಿ ಅಶ್ವವೊಂದು ಸುಸಜ್ಜಿತವಾಗಿತ್ತು. ನೋಡುತ್ತಿದ್ದಂತೆ ನಗರದ ಹೆಬ್ಬಾಗಿಲಿಗೆ ಬಂದನು. ಕಾವಲುಗಾರರು ಗೊರಕೆ ಹೊಡೆಯುತ್ತಿದ್ದರು. ಕುದುರೆಯ ಗೊರಸಿನ ಸಪ್ಪಳದಿಂದ ಹೌಹಾರಿದರು.

ಯುವಕ ರಾಜಕುಮಾರನು ಶರವೇಗದಲ್ಲಿ ಹೊರಟನು. ಮುಂಜಾವದ ತಂಗಾಳಿಯಿಂದ ಪುಲಕಿತವಾಗಿ ಸಿಂಧುದೇಶದ ಕುದುರೆಯು ಓಡಿತು. ಅಲೆಅಲೆದು ಅರುಣನು ಮಧೂಕ ವೃಕ್ಷದ ಬಳಿಗೆ ಬಂದನು. ಮಧೂಲಿಕೆಯು ಕೈಯನ್ನೇ ತಲೆಗಿಂಬಾಗಿ ಮಾಡಿ ನಿದ್ರಾಸುಖವನ್ನು ಅನುಭವಿಸುತ್ತಿದ್ದಳು.

ಛಿನ್ನ ಮಾಧವೀಲತೆಯೊಂದು ವೃಕ್ಷದ ಶಾಖೆಯಿಂದ ಜಾರಿ ಕೆಳಕ್ಕೆ ಬಿದ್ದಿರುವುದನ್ನು ನೋಡಿದನು ಅರುಣ.. ಹೂವು ಮುದುಡಿತ್ತು. ತುಂಬಿಗಳು ಸ್ತಬ್ಧವಾಗಿದ್ದುವು. ಆ ಅಪೂರ್ವ ಸೌಂದರ್ಯರಾಶಿಯನ್ನು ನೋಡುವುದಕ್ಕಾಗಿ ಅರುಣನು ತನ್ನ ಕುದುರೆಗೆ ಸುಮ್ಮನಿರುವಂತೆ ಸಂಕೇತ ಮಾಡಿದನು. ಅದರೆ ಕೋಗಿಲೆಯೊಂದು ಕೂಗಿತು – "ಛಿ ನಿದ್ರಿಸಿರುವ ಕುವರಿಯ ಮೇಲೆ ಕಣ್ಣಿಡುವ ದುಷ್ಟನೇ, ನೀನು ಯಾರು?" ಎಂಬಂತಿತ್ತು ಆ ಕೂಗು. ಮಧೂಲಿಕೆಯ ಕಣ್ಣುಗಳು ತೆರೆದುವು. ಮುಂದೆ ಅಪರಿಚಿತ ಯುವಕನೊಬ್ಬನು ನಿಂತಿರುವುದನ್ನು ನೋಡಿ ಸಂಕೋಚದಿಂದ ಎದ್ದು ಕುಳಿತಳು.

"ಭದ್ರೇ, ನಿನ್ನಿನ ಉತ್ಸವದ ಸಂಚಾಲಿಕೆಯಾಗಿದ್ದವಳು ನೀನೇ ಅಲ್ಲವೆ?"

"ಉತ್ಸವ! ಹೌದು, ಉತ್ಸವವಾಗಿತ್ತು!"

"ನಿನ್ನೆ ಆ ಸೌಂದರ್ಯ.....?"

"ಯಾಕೆ ತಮ್ಮನ್ನು ಇನ್ನೂ ನಿನ್ನೆಯ ಸ್ವಪ್ನ ಬಾಧಿಸುತ್ತಿದೆಯೇ? ಮಹಾಶಯ, ತಾವು ನನ್ನನ್ನು ಈ ಸ್ಥಿತಿಯಲ್ಲಿಯೂ ಸ್ವಂತಿಯಾಗಿರಲು ಬಿಡುವುದಿಲ್ಲವೇ?"

"ನನ್ನ ಹೃದಯ ನಿನ್ನ ಆ ಸೌಂದರ್ಯದ ದಾಸನಾಗಿಬಿಟ್ಟಿದೆ ದೇವಿ!"

"ಏನು ದಾಸನೇ? ಹೀಗೆನ್ನುತ್ತಿರುವುದು ಅಭಿನಯಕ್ಕೋ, ಅಥವಾ ವಿಡಂಬನೆಗೋ? ಅಹಾ! ನಾನುಷ್ಯನೆಷ್ಟು ನಿರ್ದಯನು! ಅಪರಿಚಿತನೇ, ಕ್ಷಮಿಸು ನಿನ್ನ ದಾರಿಗೆ ನೀನು ಹೋಗು."

"ಸರಳತೆಯೇ ಮೂರ್ತಿವೆತ್ತಂತಿರುವ ದೇವಿ! ನಾನು ಮಗಧ ದೇಶದ ರಾಜಕುಮಾರನು ನಿನ್ನ ಕೃಪಾಗ್ರಹಕ್ಕೆ ಪ್ರಾರ್ಥಿಸುವ ಭಕ್ತನಾನು! ಹೃದಯದ ಭಾವನೆಯನ್ನು ಮುಚ್ಚಿಡಲು ನಾನರಿಯೆ. ಅದನ್ನು ಅದರ...."

"ರಾಜಕುಮಾರಾ, ನಾನು ರೈತಕುವರಿ. ತಾವಾದರೋ ಸುಂದರವಾದ ನಂದನವನಗಳಲ್ಲಿ ವಿಹಾರ ಮಾಡುವವರು. ನಾನು ಭೂಮಿಯಲ್ಲಿ ದೇಹಶ್ರಮದಿಂದ ಜೀವಿಸುವವಳು ಇಂದು ನನ್ನ ಪ್ರೀತಿಯ ಭೂಮಿಯು ಮೇಲಣ ಅಧಿಕಾರ ಕಸಿದುಕೊಳ್ಳಲ್ಪಟ್ಟಿತು.

ನಾನು ದುಃಖದಿಂದ ಕಂಗೆಟ್ಟಿದ್ದೇನೆ. ನನ್ನನ್ನು ಪರಿಪಾಕ ಮಾಡಬೇಡಿರಿ."

"ನಿನ್ನ ಭೂಮಿಯನ್ನು ನಾನು ಕೋಸಲರಾಜನಿಂದ ನಿನಗೆ ಪುನಃ ಕೊಡಿಸುವೆ."

"ಬೇಡ ಅದು ಕೋಸಲದ ರಾಷ್ಟ್ರೀಯ ನಿಯಮ. ಅದರಿಂದ ನನಗೆಷ್ಟು ದುಃಖವಾದರೂ ಆ ನಿಯಮವನ್ನು ಪಾರ್ಶ್ವಡಿಸಲು ನಾನು ಬಯಸಲಾರೆ."

"ಹಾಗಾದರೆ ನಿನ್ನ ರಹಸ್ಯವೇನು?"

"ಈ ರಹಸ್ಯ ನನ್ನದಲ್ಲ. ಇದು ಮಾನವ ಹೃದಯಕ್ಕೇ ಸಂಬಂಧಿಸಿದ ರಹಸ್ಯ. ರಾಜಕುಮಾರಾ! ಮನುಷ್ಯನ ಹೃದಯ ನಿಯಮಗಳನ್ನು ಪರಿಯಾಗಿ ಪಾಲಿಸುತ್ತಿದ್ದರೆ, ಮಗಧ ರಾಜಕುಮಾರನು ಯಾವಳಾದರೊಬ್ಬ ರಾಜಕುಮಾರಿಯ ಕಡೆಗೆ ಆಕರ್ಷಿತನಾಗದೆ, ಒಬ್ಬಳು ಧೈತಗುವರಿಯ ಅಪಮಾನ ಮಾಡಲು ಬರುತ್ತಿದ್ದಿಲ್ಲ." ಎನ್ನುತ್ತಾ ಮಧೂಲಿಕೆ ಎದ್ದು ನಿಂತಳು.

ಹೃದಯಕ್ಕಾದ ಆಘಾತದಿಂದ ರಾಜಕುಮಾರನು ಹಿಂತಿರುಗಿದನು. ಎಳನೇಸರಿನಲ್ಲಿ ಅವನ ರತ್ನಕಿರೀಟ ಹೊಳೆಯಿತು. ಕುದುರೆಯು ವೇಗವಾಗಿ ಓಡುತ್ತಿತ್ತು. ಮಧೂಲಿಕೆಯು ತನ್ನನ್ನು ನಿಷ್ಠುರ ವಚನಗಳಿಂದ ನೋಯಿಸಿದ ಮೇಲೆ ತಾನಾದರೂ ನೆಮ್ಮದಿಯಿಂದಿದ್ದಳೇ? ಇಲ್ಲ. ಅವಳ ಹೃದಯದಲ್ಲಿ ಏನೋ ಒಂದು ರೀತಿಯ ವೇದನೆಯಾಗುತ್ತಿತ್ತು. ಕಜಲನೇತ್ರಗಳಿಂದ ಎವ್ವ ಧೂಳನ್ನೇ ನೋಡುತ್ತಿದ್ದಳು.

೦ ೦ ೦ ೦ ೦

ಮಧೂಲಿಕೆಯು ರಾಜನ ಪುರಸ್ಕಾರವನ್ನಾಗಲಿ, ಅನುಗ್ರಹವನ್ನಾಗಲಿ ಸ್ವೀಕರಿಸಲಿಲ್ಲ. ಅವಳು ಇತರ ಹೂಲಗಳಲ್ಲಿ ನುಡಿದು ಸಿಕ್ಕಿದ ಕೂಳನ್ನು ತಿಂದು, ಸಂಜೆಯಾದಾಗ ಮಲಗಿಕೊಳ್ಳುತ್ತಿದ್ದಳು. ಮಧೂಕ ವೃಕ್ಷದ ಕೆಳಗೆ ಒಂದು ಸಣ್ಣ ಎಲೆಮನೆಯಿತ್ತು. ಒಣಹೆಂಬೆಗಳಿಂದ ಅದರ ಗೋಡೆ ಹೊದೆಸಲ್ಪಟ್ಟಿತ್ತು. ಅದೇ ಮಧೂಲಿಕೆಯ ಆಶ್ರಯ ಸ್ಥಾನ. ಕಠಿಣ ಪರಿಶ್ರಮದಿಂದ ಸಿಕ್ಕಿದ ಒಣ ಆಹಾರದಿಂದ ಜೀವಸಿಡಿದು ಬದುಕಿದ್ದಳು. ಧೈರ್ಯವೇಷವಾಗಿದ್ದರೂ ಅವಳ ಅಂಗಾಂಗಗಳಲ್ಲಿ ತಪಸ್ವಿನ ಕಾಂತಿ ಹೊರಹೊಮ್ಮುತ್ತಿತ್ತು. ನೆರೆಹೊರೆಯ ಧೈತರು ಅವಳನ್ನೇ ಗೌರವಿಸುತ್ತಿದ್ದರು. ಅವಕೊಬ್ಬ ವಿಧವೆ ಬಾಲಿಕೆಯಾಗಿದ್ದಳು. ದಿನ, ತಿಂಗಳು, ವರ್ಷಗಳು ಒಂದರ ಮೇಲೊಂದು ಉರುಳಿದುವು.

ಚಳಿಗಾಲದ ರಾತ್ರಿ! ಸೋಡಗಳು ತುಂಬಿದ ಆಕಾಶದಲ್ಲಿ ಗುಡುಗು-ಮಿಂಚುಗಳ ಕೋಲಾಹಲ! ಮಧೂಲಿಕೆಯ ಗುಡಿಸಲಿನಲ್ಲಿ ನೀರು ಸೋರುತ್ತಿತ್ತು. ಹೊದೆಯುವುದಕ್ಕೂ ಬಟ್ಟೆಗಳಿರಲಿಲ್ಲ. ಅವಳು ಚಳಿಯಿಂದ ಪುಟ್ಟುಡಿ ಒಂದು ಮೂಲೆಯಲ್ಲಿ ಕುಳಿತಿದ್ದಳು. ತನ್ನ ಅವಶ್ಯಕ ಸಾಮಗ್ರಿಗಳ ಅಭಾವನಿಂದು ಚಿಕೆಯನ್ನು ಹೆಚ್ಚಾಗಿ ಬಾಧಿಸುತ್ತಿತ್ತು. ಜೀವನದೊಡನೆ ನಿಕಟಸಂಬಂಧವನ್ನಿಟ್ಟುಕೊಂಡಿರುವ ನಿತ್ಯೋಪಯೋಗೀ ವಸ್ತುಗಳ ಪರಿಮಿತಿಯು ನಿರ್ದಿಷ್ಟವಾಗಿದೆ. ಆದರೆ ಅವುಗಳ ಅವಶ್ಯಕತೆಯು ಮನುಷ್ಯನ ಮನೋಭಾವಗಳನ್ನು ಹೊಂದಿಕೊಂಡು, ಹೆಚ್ಚು ಕಡಿಮೆಯಾಗುತ್ತದೆ. ಎಷ್ಟೋ ದಿನಗಳ ಹಿಂದೆ ನಡೆದ ಘಟನೆ ಅವಳ ಸ್ಮೃತಿಪಟಲದಲ್ಲಿ ಮೂಡಿತು. ಎರಡು ವರ್ಷ, ಜಿಲ್ಲಲ್ಲ; ಮೂರು ವರ್ಷ ಕಳೆದಿರಬಹುದು— ಇದೇ ಮಧೂಕ ವೃಕ್ಷದ ಕೆಳಗೆ, ಒಂದು ಪ್ರಾತಃಕಾಲದಲ್ಲಿ ತರುಣ ರಾಜಕುಮಾರ ಅರುಣನು ನಿನು ಹೇಳಿದ್ದನು?

ಅವಳು ತನ್ನ ಹೃದಯವನ್ನು ಪ್ರಶ್ನಿಸತೊಡಗಿದಳು—ಆ ನಿಷ್ಟಿನ ನುಡಿಗಳನ್ನು ಕೇಳಲು ಉತ್ಸುಕಳಾದಂತೆ ಮತ್ತೆ ಮತ್ತೆ ತನ್ನಲ್ಲೇ ಕೇಳಿಕೊಂಡಳು— ಅವನಂದು ಏನು ಹೇಳಿದ್ದನು? ಅವಳ ಮುಖದಗ್ಗ ಹೃದಯ ಸ್ಪಷ್ಟವಲ್ಲಿ ಕೇಳಿದಂತಿರುವ ಆ ಮಾತುಗಳನ್ನು ಸ್ಮರಿಸಲು ಶಕ್ತವಾಗಿತ್ತು. ಸ್ಮರಣೆಯಾಗುತ್ತಿದ್ದರೂ ಕಷ್ಟದಿಂದ ನೆರಳುವ ಈ ಕಾಳರಾತ್ರಿಯಲ್ಲಿ ಕೂಡಾ ಅದನ್ನವಳು ಹೇಳುವ ಸಾಹಸ ಮಾಡುತ್ತಿದ್ದಳೇ? ಹಾಯ್! ಎಂತಹ ವಿಡಂಬನೆ!

ಮಧೂಲಿಕೆಯಿಂದು ಕಳೆಯುಹೋದ ಆ ಕ್ಷಣವನ್ನು ಹಿಂತಿರುಗಿ ತರಲು ಪರಿತಪಿಸುತ್ತಿದ್ದಳು. ದಾರಿದ್ರ್ಯದ ಕಠೋರ ಆಘಾತ ಅವಳನ್ನು ದುಃಖಕ್ಕೆ ಗುರಿಮಾಡಿ ಅಧೀರಳನ್ನಾಗಿ ಮಾಡಿತು. ಮಗಧರಾಜಮಂದಿರದ ವೈಭವಯುಕ್ತವಾದ ಉನ್ನತ ಪ್ರಾಸಾದಗಳ ಕಾಲ್ಪನಿಕ ಚಿತ್ರ, ಪರ್ಣಕುಟಿಯ ಎಲೆಗಳ ರಂಧ್ರದ ಮೂಲಕ ಮಿಣಿಮಿಣಿಯಿಂದ ಬೆಳಗಿ ನಭೋಮಂಡಲದಲ್ಲಿ ನಲಿಯುವುದನ್ನು ಕಂಡಂತೆ ಭಾಸವಾಯಿತವಳಿಗೆ. ಶ್ರಾವಣದ ಸಂಧ್ಯೆಯಲ್ಲಿ ಮಿಂಚುಹುಳಗಳನ್ನು ಹಿಡಿಯಲೆಳಸಿ ಕೈನೀಡುವ ಕ್ರೀಡಾಸಕ್ತರಾದಿ ಶಿಶುವಿನಂತೆ ಮಧೂಲಿಕೆ ಮನಸ್ಸಿನಲ್ಲೇ ನಿರಾಶಳಾಗಿ ಹೇಳಿಕೊಳ್ಳುತ್ತಿದ್ದಳು—"ಅದಾಗಲೇ ಅವನು ಹೊರಟು ಹೋದನು." ನುಳಿಯು ಭೀಕರ ರೂಪ ತಾಳಿತು. ಗುಡುಗು, ಸಿಡಿಲುಗಳ ಗರ್ಜನೆ ಹೆಚ್ಚತೊಡಗಿತು. ಬಲಿಕಲ್ಲು ಬೀಳುವ ಸೂಚನೆ ಕಂಡುಬರುತ್ತಿತ್ತು. ಮಧೂಲಿಕೆ ತನ್ನ ಮುರುಕು ಗುಡಿಸಲನ್ನು, ನೆನೆದು ನಡುಗಹೋದಳು. ಕೂತಲೇ ಹೊರಗೆ ಏನೋ ಸದ್ದಾಯಿತು.....

"ಇಲ್ಲಿ ಯಾರಿದ್ದಾರೆ? ಪಥಿಕನಿಗೆ ಆಶ್ರಯ ಬೇಕಾಗಿದೆ."

ಮಧೂಲಿಕೆಯು ಜಾಗಿಲನ್ನು ತೆರೆದಳು. ಮಿಂಚು ಜೆಳಗಿತು. ಪುರುಷನೊಬ್ಬನು ಕುದುರೆಯ ಕಡಿವಾಣ ಹಿಡಿದು ನಿಂತಿರುವುದನ್ನು ನೋಡಿ ಒಮ್ಮೆಲೇ ಅವಳು ಕೂಗಿದಳು— "ರಾಜಕುಮಾರ!"

"ಮಧೂಲಿಕೇ" ಆಶ್ಚರ್ಯದಿಂದ ಹೇಳಿದನು ಯುವಕ. ಒಂದು ಕ್ಷಣ ಮೌನವಾವರಿಸಿತು. ಮಧೂಲಿಕೆಯು ಇನ್ನಷ್ಟು ದಿನಗಳ ನಂತರ ತನ್ನ ಕಲ್ಪನಾಮೂರ್ತಿ ಪ್ರತ್ಯಕ್ಷವಾದುದನ್ನು ಕಂಡು ಚಕಿತಳಾದಳು.

ಅರುಣನೆಂದನು.—"ನಾನೆಷ್ಟು ಮೋಸಿಸಿದೆ ನಿನಗೆ! ಆದರೆ..?" ತನ್ನ ದಯನೀಯ ಸ್ಥಿತಿಯ ಕುರಿತು ಅರುಣನು ಹೇಳುವುದನ್ನು ಅವಳು ಬಯಸಲಿಲ್ಲ ಅವನನ್ನು ಅರ್ಧದಲ್ಲೇ ತಡೆದು ನುಡಿದಳು:—"ಇಂದು ತಾವು ಇದೇನು ಈ ಸ್ಥಿತಿಯಲ್ಲಿ ?"

"ನಾನಿಂದು ಮಗಧದ ರಾಜದ್ರೋಹಿ, ದೇಶಭ್ರಷ್ಟ ಮತ್ತು ಕೋಸಲದಲ್ಲಿ ಉದ್ಯೋಗವನ್ನರಸಿ ಜೀವನ ಸಾಗಿಸಲು ಬಂದವನು!" ತಲೆತಗ್ಗಿಸಿ ಹೇಳಿದನು ಅರುಣ.

ಮಧೂಲಿಕೆಯು ಆ ಅಂಧಕಾರದಲ್ಲಿಯೂ ನಕ್ಕಳು.—"ಮಗಧದ ರಾಜದ್ರೋಹಿ ರಾಜಕುಮಾರನನ್ನು ಸ್ವಾಗತಿಸುವವಳು ಒಬ್ಬಾಕೆ ಅನಾಥೆಯಾದ ಶೈತಗುವರಿ. ಇದೂ ಒಂದು ವಿಡಂಬನೆ; ಆದರೂ ಸ್ವಾಗತಕ್ಕೆ ಸಿದ್ಧಳಾಗಿದ್ದೇನೆ ನಾನು."

೦ ೦ ೦ ೦

ಚಳಿಗಾಲದ ಪ್ರಶಾಂತರಾತ್ರಿ; ಹಿಮದಿಂದ ತೊಳೆಯಲ್ಪಟ್ಟ ಬೆಳುದಿಂಗಳು, ಎಲುಬನ್ನು ಕೊರೆಯುವಂತಹ ಚಳಿಗಾಳಿ ಹೀಗಿದ್ದರೂ ಅರುಣ ಮತ್ತು ಮಧೂಲಿಕೆ ಇಬ್ಬರೂ ಪರ್ವತ ಪ್ರದೇಶದ ಗುಹೆಯ ದ್ವಾರದಲ್ಲಿ ಪಟವೃಕ್ಷದ ಕೆಳಗೆ ಕುಳಿತು ಮಾತಾಡುತ್ತಿದ್ದರು. ಮಧೂಲಿಕೆಯ ಮಾತಿನಲ್ಲಿ ಉತ್ಸಾಹವಿತ್ತು; ಆದರೆ ಅರುಣನು ಅಷ್ಟೇ ಜಾಗರೂಕತೆಯಲ್ಲಿ ಮಾತಾಡುತ್ತಿದ್ದನು.

"ನೀವಿಂತಹ ಕಷ್ಟದ ಪರಿಸ್ಥಿತಿಯಲ್ಲಿರುವಾಗ ಇಷ್ಟು ಸೈನಿಕರನ್ನು ಇಟ್ಟುಕೊಳ್ಳುವುದು ಅವಶ್ಯಕತೆಯೇನು ?" ಕೇಳಿದಳು ಮಧೂಲಿಕೆ.

"ಮಧೂಲಿಕಾ! ಬಾಹುಬಲವೇ ವೀರವೃತ್ತಿ. ಇವರು ನನ್ನ ಜೀವನ-ಮರಣದ ಸಂಗಾತಿಗಳು. ಆದುದರಿಂದ ಇವರನ್ನು ಹೇಗೆ ಬಿಡಲಿ ? ಅಲ್ಲದೆ ಇವರನ್ನು ಮತ್ತೇನು ಮಾಡಲಿ ?"

"ಯಾಕೆ ? ನೀವುಗಳು ಕಷ್ಟಪಟ್ಟು ಸಂಪಾದಿಸಿ ಉಣ್ಣುತ್ತೀರಿ. ಈಗಲಾದರೋ ನೀವು ...."

"ತಪ್ಪಿಸಿಕೊಳ್ಳದಿರು; ನನಗೆ ನನ್ನ ಬಾಹುಬಲದ ನೇರಳೆ ಸಂಪೂರ್ಣ ಭರವಸೆಯಿದೆ. ಇದರಿಂದ ನಾನು ಹೊಸ ರಾಜ್ಯವನ್ನು ಸ್ಥಾಪಿಸಬಲ್ಲೆ. ಆದುದರಿಂದ ಯಾಕೆ ನಿರಾಶನಾಗಲಿ ?" ಅರುಣನ ಮಾತುಗಳಲ್ಲಿ ಕಂಪನವಿತ್ತು. ಅವನು ಮತ್ತೂ ಏನೋ ಹೇಳಲು ಬಯಸುತ್ತಿದ್ದನು, ಆದರೆ ಹೇಳಲಾಗಲಿಲ್ಲ ಆತನಿಗೆ.

"ಹೊಸರಾಜ್ಯ! ಓಹೋ ನಿನ್ನ ಉತ್ಸಾಹವೇನೂ ಕಡಿಮೆಯಿಲ್ಲ. ಒಳ್ಳೆಯದು. ಹೇಗೆ ? ಯಾವ ರೀತಿಯಲ್ಲಿ- ಎಂದು ಹೇಳಿದರೆ ನಾನೂ ಆ ಕಲ್ಪನೆಯ ಆನಂದವನ್ನು ಸವಿಯಬಹುದು."

"ಕಲ್ಪನೆಯ ಆನಂದವಲ್ಲ ಮಧೂಲಿಕೆ! ಮಹಾರಾಣಿಯ ಘನತೆಗೆ ತಕ್ಕಂತೆ ನಿನ್ನನ್ನು ನಾನು ಸಿಂಹಾಸನದ ಮೇಲೆ ಕೂಡಿಸುವೆ. ನಿನ್ನಿಂದ ಕಸಿದುಕೊಳ್ಳಲ್ಪಟ್ಟ ಆ ಭೂಮಿಯ ಕುರಿತು ಚಿಂತಿಸುತ್ತಾ ನೀನು ಅಧೀರಳಾಗಬೇಡ."

ಒಂದೆಕ್ಷಣ ಮಧೂಲಿಕೆಯ ಹೃದಯದಲ್ಲಿ ರಾಜಮಂದಿರದ ವೈಭವ-ವಿಲಾಸಗಳ ಬಿರುಗಾಳಿ ಬೀಸತೊಡಗಿತು— ಮಾನಸಿಕ ದ್ವಂದ್ವ ಆರಂಭವಾಯಿತು. "ಆಹಾ! ನಾನು ನಿಜವಾಗಿಯೂ ಇಂದಿನ ವರೆಗೆ ನಿನ್ನ ನಿರೀಕ್ಷಣೆ ಮಾಡುತ್ತಿದ್ದೆ ರಾಜಕುಮಾರ!" ಕೂಡಲೇ ಹೇಳಬಿಟ್ಟಳು ಆಕೆ.

ಅರುಣನು ದಿಟ್ಟತನದಿಂದ ಆಕೆಯ ಕರಗಳನ್ನು ಮೃದುವಾಗಿ ಅದುಮುತ್ತಾ ಹೇಳಿದ:— "ಹಾಗಾದರೆ ನನ್ನದು ಭ್ರಮೆಯಾಗಿತ್ತೇ? ನಿಜವಾಗಿಯೂ ನೀನು ನನ್ನನ್ನು ಪ್ರೀತಿಸುವೆಯಾ ?"

ಇದನ್ನು ಕೇಳಿದ ಯುವತಿಯ ವಕ್ಷಸ್ಥಲ ಅನಂದದಿಂದ ತುಂಬಿ ಬಂತು. 'ಹೌದು' ಅಥವಾ 'ಇಲ್ಲ' ಎಂದು ಎರಡನ್ನೂ ಹೇಳಲಾರದಾದಳು. ಅವಳ ಮನೋಭಾವವನ್ನು ಅರುಣನು ಅರ್ಥಮಾಡಿಕೊಂಡನು. ಜಾಣನಂತೆ ಆ ಸುಸಂದರ್ಭವನ್ನು ಕಳಕೊಳ್ಳದೆ ಅವನು ಹೇಳಿದನು:—"ನೀನು ಇಚ್ಛಿಸಿದರೆ ನನ್ನ ಪ್ರಾಣವನ್ನೇ ಪಣವಾಗಿಟ್ಟು ನಿನ್ನನ್ನು ಈ ಕೋಸಲ ಸಿಂಹಾಸನ ಮೇಲೆ ಕುಳ್ಳಿರಿಸುವೆ. ಮಧೂಲಿಕೇ, ಈ ಅರುಣನ ಖಡ್ಗದ ಪ್ರಭಾವನನ್ನು ನೋಡುವೆಯಾ ?" ಮಧೂಲಿಕೆಯೊಮ್ಮೆ ನಡುಗಿಹೋದಳು. "ಇಲ್ಲ" ಎಂದು ಹೇಳಬಯಸಿದ್ದಳವಳು. ಆದರೆ ಮುಖದಿಂದ ಹೊರಟ ಶಬ್ದ "ಏನು ?" ಎಂದಾಗಿತ್ತು.

"ನಾನೆಂದೂ ಸತ್ಯ ಮಧೂಲಿಕೆ ಕೋಸಲದ ರಾಜನ. ಅಂದಿನಿಂದ ನಿನಗೋಸ್ಕರ ಚಿಂತಿಸುತ್ತಿದ್ದಾನೆಂದು ನಾನು ತಿಳಿದಿರುವೆ. ನಿನ್ನ ಸಣ್ಣ ಕೇಳಿಕೆಯನ್ನಾದರೂ ಅವನು ಮಾನ್ಯಮಾಡದಿರಲಾರ. ಅಲ್ಲದೆ ಕೋಸಲದ ಸೇನಾಧಿಪತಿಯು ಸೈನ್ಯದ ಬಹುಭಾಗವನ್ನು ತೆಗೆದುಕೊಂಡು, ಗುಡ್ಡಗಾಡುಗಳ ದಸ್ಯುಗಳನ್ನು ದಮನ ಮಾಡಲು ಬಹಳ ದೂರ ಹೊರಟು ಹೋಗಿದ್ದಾನೆ ಎಂಬ ವರ್ತಮಾನವನ್ನು ತಿಳಿದಿರುವೆ."

ಮಧೂಲಿಕೆಯ ಕಣ್ಣುಗಳ ಮುಂದೆ ಮಿಂಚುಗಳು ಕುಣಿಯತೊಡಗಿದವು ಭೀಕರ ಭಾವನೆಗಳಿಂದ ಅವಳ ಮನಸ್ಸು ವಿಕೃತವಾಯಿತು. "ನೀನೇಕೆ ಮಾತಾಡುವುದಿಲ್ಲ ?" ಕೇಳಿದನು ಅರುಣ.

"ನೀನು ಹೇಳಿದಂತೆ ಮಾಡುವೆನು." ಮಂತ್ರಮುಗ್ಧಳಂತೆ ನುಡಿದಳು ಮಧೂಲಿಕೆ.

೦ ೦ ೦ ೦ ೦

ಕೋಸಲಾಧೀಶನು ಸ್ವರ್ಣಪರ್ಯಂಕದಲ್ಲಿ ಅರ್ಧನಿದ್ರಾವಸ್ಥೆಯಲ್ಲಿದ್ದು ಕಣ್ಣುಗಳನ್ನು ಅರೆಮುಚ್ಚಿದ್ದನು. ರಾಜನ ಹಿಂಬಾಗಡೆ ಚಾಮರಧಾರಿಣಿಯಾದ ಯುವತಿಯೊಬ್ಬಳು ಚಾಮರ ಬೀಸುತ್ತಾ ತನ್ನ ಕೈಯ ಕುಶಲತೆಯನ್ನು ತೋರಿಸುತ್ತಿದ್ದಳು. ಚಾಮರದ ಶುಭ್ರ ಆಂದೋಲನ ಮೆಲ್ಲಮೆಲ್ಲನೆ ಇಡೀ ಕೋಣೆಯನ್ನು ಅನರಿಸುತ್ತಿದೆ ಹಡಪನವಳು ಗೊಂಬೆಯಂತೆ ದೂರದಲ್ಲಿ ನಿಂತಿದ್ದಾಳೆ.

ಪ್ರತೀಹಾರಿಯು ಬಂದು ಹೇಳಿದನು—"ಪ್ರಭುಗಳಿಗೆ ಜಯವಾಗಲಿ! ಒಬ್ಬಳು ತರುಣಿ ಏನೋ ವಿಜ್ಞಾಪಿಸಿಕೊಳ್ಳಲು ಬಂದಿದ್ದಾಳೆ.

ಕಣ್ಣುಗಳನ್ನು ತೆರೆಯುತ್ತಾ ರಾಜ ಹೇಳಿದ:— "ಸ್ತ್ರೀಯು ವಿಜ್ಞಾಪಿಸಿಕೊಳ್ಳಲು ಬಂದಿದ್ದಾಳೆಯೇ ? ಒಳಗೆ ಬರಲಿ!"

ಪ್ರತೀಹಾರಿಯೊಡನೆ ಮಧೂಲಿಕೆ ಒಳಗೆ ಬಂದಳು. ಬಂದವಳೇ ರಾಜನಿಗೆ ಪ್ರಣಾಮ ಮಾಡಿದಳು. ರಾಜನು ನೆಟ್ಟನೋಟದಿಂದ ಆಕೆಯನ್ನು ನೋಡಿ,— "ನಿನ್ನನ್ನು ಎಲ್ಲಿಯೋ ನೋಡಿದಂತಿದೆ." ಎಂದನು.

"ಮೂರು ವರುಷಗಳ ನೊಪಲು ಮಹಾಪ್ರಭು ! ನನ್ನ ಭೂಮಿ ರಾಜವ್ಯವಸಾಯಕ್ಕಾಗಿ ತೆಗೆದುಕೊಳ್ಳಲಾಗಿತ್ತು."

"ಓಹೋ ಸರಿ. ನೀನು ಇಷ್ಟುದಿನ ಕಷ್ಟದಲ್ಲಿ ಕಳೆದಿರುವೆ" ಇಂದು ಅದರ ಬೆಲೆಯನ್ನು ಬೇಡಲು ಬಂದಿರುವೆಯಷ್ಟೇ ? ಒಳ್ಳೆಯದಾಯಿತು. ನಿನಗದು ದೊರಕುವುದು.... ಪ್ರತೀಹಾರಿ !"

"ಅಲ್ಲ ಮಹಾರಾಜ, ನನಗೆ ಅದರ ಬೆಲೆಯು ಬೇಡ."

"ಮೂರ್ಖಳೆ ! ಮತ್ತೇನು ಬೇಕಾಗಿದೆ ?"

"ಈ ದುರ್ಗದ ದಕ್ಷಿಣದಿಕ್ಕಿನಲ್ಲಿ ಹರಿಯುವ ನದೀತಟದ ಅರಣ್ಯಭೂಮಿ ನನಗೆ ಬೇಕಾಗಿದೆ. ಅಲ್ಲಿಯೇ ನಾನು ಬೇಸಾಯ ಮಾಡುವೆನು. ನನಗೊಬ್ಬ ಸಹಾಯಕನು ದೊರೆತಿರುವನು. ಅವನು ತನ್ನ ಜನರಿಂದ ನನಗೆ ಸಹಾಯ ಕೊಡುವನು. ಭೂಮಿಯನ್ನು ಸನು ಕಬ್ಬಾಗಿ ಕೂಡಾ ಮಾಡಬೇಕಾದೀತು."

"ಶ್ಯಿತಗುವರಿಯೇ, ಅದು ಬರೇ ಬಂಜರು ಭೂಮಿ. ಅಲ್ಲದೆ ಆ ಸ್ಥಳ ದುರ್ಗಕ್ಕೆ ಸಮೀಪವಾಗಿದ್ದು ಸೈನಿಕರಿಗೆ ಅಗತ್ಯವಾದುದು." ರಾಜನೆಂದನು.

"ಹಾಗಾದರೆ ನಾನು ನಿರಾತಳಾಗಿ ಹಿಂದಿರುಗಬೇಕೆ ?"

"ಸಿಂಹಮಿತ್ರನ ಕುಮಾರಿ ! ನಾನೇನು ಮಾಡಲಿ ? ನಿನ್ನ ಈ ಬೇಡಿಕೆ...."

"ಪ್ರಭೂ, ಹಾಗಾದರೆ ನನಗೆ ಹಿಂದಿರುಗಲು ಅಜ್ಞೆಯಾಗಲಿ."

"ಹೋಗು, ನೀನು ನಿನ್ನ ಕೆಲಸಗಾರರನ್ನು ಅಲ್ಲಿ ಕೆಲಸಕ್ಕೆ ಕೊಡಗಿಸು. ನಾನು ಮಂತ್ರಿಗೆ ಆಜ್ಞಾಪತ್ರ ಕೊಡುವ ವ್ಯವಸ್ಥೆ ಮಾಡುತ್ತೇನೆ."

"ಜಯವಾಗಲಿ ಮಹಾಪ್ರಭುವಿಗೆ." ಎಂದು ನಮಸ್ಕಾರ ಮಾಡಿ, ಮಧೂಲಿಕೆಯು ರಾಜಮಂದಿರದಿಂದ ಹೊರಕ್ಕೆ ಬಂದಳು.

೦ ೦ ೦ ೦

ದುರ್ಗದ ದಕ್ಷಿಣದಲ್ಲಿ ಹರಿಯುವ ನದೀತಟದಲ್ಲೊಂದು ರಮಣೀಯವಾದ ದಟ್ಟಡವಿಯಿದೆ. ಈಗ ಮನುಷ್ಯಸಂಚಾರದಿಂದ ಅಲ್ಲಿನ ಶೂನ್ಯತೆಗೆ ಭಂಗವಾಗುತ್ತಿತ್ತು. ತಲೆಮರೆಸಿಕೊಂಡಿದ್ದ ಅರುಣನ ಸೈನಿಕರು ಸ್ವೇಚ್ಛೆಯಿಂದ ಅಲ್ಲಿ ಅತ್ತಿತ್ತ ಅಲೆಯುತ್ತಿದ್ದರು. ಪೊದೆಗಳನ್ನು ಕಡಿದು ದಾರಿಯಾಗುತ್ತಿತ್ತು. ನಗರವು ಅಲ್ಲಿಂದ ದೂರವಿಲ್ಲತ್ತು. ಅಲ್ಲಿಗೆ ಯಾರೂ ಬರುತ್ತಿರಲಿಲ್ಲ ಮಾತ್ರವಲ್ಲದೆ, ಈಗ ರಾಜನ ಆಜ್ಞೆಯಿಂದ ಅಲ್ಲಿ ಮಧೂಲಿಕೆಯ ಹೊಲಗಳು ಬಿಗುತ್ತಿದ್ದುವು. ಆದುದರಿಂದ, ಆ ಕಡೆಯ ಯೋಚನೆ ಯಾರಿಗೂ ಇರಲಿಲ್ಲ.

ಒಂದು ನೆಟ್ಟನಾದ ಲತಾಕುಂಜದಲ್ಲಿ ಅರುಣ ಮತ್ತು ಮಧೂಲಿಕೆ ಒಬ್ಬರನ್ನೊಬ್ಬರು ಹರ್ಷ ತುಂಬಿದ ಕಣ್ಣುಗಳಿಂದ ನೋಡುತ್ತಿದ್ದರು ಸಂಧ್ಯಾಕಾಲವಾಗಿತ್ತು. ಆಗೊಂದಾರಣ್ಯದಲ್ಲಿ ಹೊಸತಾಗಿ ಬಂದ ಆ ಮನುಷ್ಯರನ್ನು ನೋಡಿ ಗೂಡಿಗೆ ಹಿಂತಿರುಗುತ್ತಿರುವ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು.

ಪ್ರಸನ್ನನಾಗಿದ್ದ ಅರುಣನ ಕಣ್ಣುಗಳು ಮಿನುಗಿದುವು. ಸಂಧ್ಯೆಯ ಸೂರ್ಯಕಿರಣಗಳು ಗಿಡಗಂಟಿಗಳೆಡೆಯಲ್ಲಿ ನುಗ್ಗಿ ಮಧೂಲಿಕೆಯ ಕಪೋಲದಲ್ಲಿ ಕ್ರೀಡಿಸತೊಡಗಿದುವು. "ಇನ್ನು ನಾಲ್ಕು ಜಾವಗಳಿನಿ. ಬೆಳಗಾಗುತ್ತಲೇ ಜೀರ್ಣ ಕಳೇವರದಂತಿದ್ದ ಈ ಕೋಸಲ ರಾಷ್ಟ್ರದ ರಾಜಧಾನಿಯಾದ ಶ್ರಾವಸ್ತಿಯಲ್ಲಿ, ನಿನ್ನ ಅಭಿಷೇಕವಾಗುವುದು. ಮತ್ತು ಮಗಧದಿಂದ ದೇಶಭ್ರಷ್ಟನಾದ ನಾನು, ಒಂದು ಸ್ವತಂತ್ರ ರಾಷ್ಟ್ರದ ಅಧಿಪತಿಯಾಗುವೆನು ಮಧೂಲಿಕೆ !" ಎಂದು ನುಡಿದನು ಅರುಣ.

"ಭಯಾನಕ ಮೂರ್ತಿಯಾದ ಅರುಣನೇ ! ನಿನ್ನ ಸಾಹಸವನ್ನು ನೋಡಿ ನಾನು ಆಶ್ಚರ್ಯಚಕಿತಳಾಗಿದ್ದೇನೆ. ಕೇವಲ ನೂರು ಮಂದಿ ಸೈನಿಕರಿಂದ ನೀನು...."

"ರಾತ್ರಿಯು ಮೂರನೆಯ ಜಾವದಲ್ಲಿ ನನ್ನ ದಂಡಯಾತ್ರೆಯಾಗಲಿರುವುದು."

"ಹಾಗಾದರೆ ನಿನಗೆ ಈ ವಿಜಯದಲ್ಲಿ ನಂಬಿಕೆ ಇದೇಯೇ ?"

"ನಿಜವಾಗಿಯೂ! ನೀನು ಈ ರಾತ್ರಿಯನ್ನು ನಿನ್ನ ಗುಡಿಸಲಲ್ಲಿ ಕಳೆ. ಪ್ರಭಾತದಲ್ಲಿ ಅರಮನೆಯೇ ನಿನ್ನ ಕ್ರೀಡಾಸುಂದರವಾಗುವುದು."

ಮಧೂಲಿಕೆಯು ಹರ್ಷಭರಿತಳಾಗಿದ್ದಳು. ಆದರೆ ಅರುಣನಿಗೆ ಜಯವಾಗುವುದೆಂಬುದರಲ್ಲಿ ಅವಳ ಮನಸ್ಸು ಸಂದೇಹಕ್ರೀಳಾಗಿತ್ತು. ಅವಳು ಬುದ್ಧಿಗೆಟ್ಟವಳಂತೆ ಜಾಗಾಗ ಪ್ರಶ್ನಿಸುತ್ತಿದ್ದಳು. ಅರುಣನು ಅವಳಿಗೆ ಸಮಾಧಾನ ಹೇಳುತ್ತಿದ್ದನು. ಒಮ್ಮೆಲೇ ಏನೋ ನೆನಸಿಕೊಂಡು ಅವನು ಹೇಳಿದನು:— "ಒಳ್ಳೆಯದು; ಕತ್ತಲು ಹೆಚ್ಚಾಯಿತು. ನೀನೀಗಲೇ ಇಲ್ಲಿಂದ ದೂರ ಹೋಗಬೇಕು. ಮತ್ತು ನಾನೂ ಈ ದಂಡಯಾತ್ರೆಯ ಯೋಜನೆಗಳನ್ನು ಮಧ್ಯರಾತ್ರಿಯೊಳಗೆ ಮುಗಿಸಬೇಕಾಗಿದೆ ಆದುದರಿಂದ ಈ ಒಂದು ರಾತ್ರಿಯ ಮಟ್ಟಿಗೆ ಬೀಳ್ಕೊಳ್ಳು ಮಧೂಲಿಕೆ ?"

ಮಧೂಲಿಕೆ ಎದ್ದು ನಿಂತಳು. ಮುಳ್ಳಿಡಿದ ಪೊದರುಗಳೆಡೆಯಲ್ಲಿ ನುಸುಳುತ್ತಾ, ಹೆಚ್ಚುತ್ತಿರುವ ಅಂಧಕಾರದಲ್ಲಿ ಅವಳು ತನ್ನ ಗುಡಿಸಲ ಕಡೆಗೆ ನಡೆದಳು.

೦ ೦ ೦ ೦ ೦

ದಾರಿಯಲ್ಲಿ ಕಗ್ಗತ್ತಲು ಕವಿದಂತೆ ಅವಳ ಹೃದಯವನ್ನು ದಟ್ಟನಾದ ತಮವು ಆವರಿಸಿತ್ತು. ಒಮ್ಮಿಂದೊಮ್ಮೆಯೇ ಅವಳ

ಮನಸ್ಸು ಚಲಿಸಿತು. ಸುಖಭೋಗದ ಲಾಲಸ ನಾಶನಾಯಿತು. ಯಾವ ಯಾವ ಸುಖದ ಕಲ್ಪನೆಗಳನ್ನು ಮಾಡುತ್ತಿದ್ದನೋ ಅವೆಲ್ಲ ಆ ಕತ್ತಲೆಯಲ್ಲಿ ವಿಲೀನವಾದುವು. ಅವಳು ಭಯಭೀತಳಾಗಿದ್ದಳು. ಮೊದಲನೆಯದಾಗಿ ತರುಣನಿಗೋಸ್ಕರ ಅವಳ ಹೃದಯದಲ್ಲಿ ಭಯವುಂಟಾಯಿತು. ಒಂದು ವೇಳೆ ಅವನು ಜಯಶಾಲಿಯಾಗದಿದ್ದರೆ? ಕೂಡಲೇ ಅವಳ ಮನಸ್ಸು ಹೇಳಿತು:— " ಅವನು ಯಾಕೆ ನಿಜಯಿಯಾಗಬೇಕು? ಶ್ರಾವಸ್ತಿಯ ದುರ್ಗವು ಒಬ್ಬ ವಿದೇಶೀಯನ ಅಧಿಕಾರಕ್ಕೊಳಪಡುವುದಾದರೂ ಏಕೆ? ಮಗಧವು ಕೋಸಲದ ಚಿರಶತ್ರು! ಅವನ ವಿಜಯ! ಕೋಸಲದ ರಾಜನು ಏನು ಹೇಳಿದ್ದನು?— 'ಸಿಂಹಮಿತ್ರನ ಕನ್ಯೆ!' ಸಿಂಹಮಿತ್ರನು ಕೋಸಲವನ್ನು ರಕ್ಷಿಸಿದ ವೀರ. ಅವರೆ ಅವನ ಕನ್ಯೆಯಿಂದು ಏನು ಮಾಡಲುದ್ಯುಕ್ತಳಾಗಿದ್ದಾಳೆ? ಇಲ್ಲ, ಇಲ್ಲ!" 'ಮಧೂಲಿಕೇ, ಮಧೂಲಿಕೇ!' ಆ ಅಂಧಕಾರದಲ್ಲಿ ತನ್ನ ತಂಪೆ ಕರೆಯುತ್ತಿದ್ದಂತೆ ಭಾಸವಾಯಿತವಳಿಗೆ. ಅವಳು ಹುಚ್ಚಿಯಂತೆ ಕೂಗಿದಳು; ದಾರಿ ತಪ್ಪಿದಳು.

ರಾತ್ರಿಯು ಮೊದಲನೆಯ ಜಾವ ಕಳೆಯಿತು. ಆದರೆ ಮಧೂಲಿಕೆಯನ್ನೂ ಅವಳ ಗುಡಿಸಿಲಿಗೆ ತಲುಪಿರಲಿಲ್ಲ! ಅವಳು ಯೋಚನೆಯಲ್ಲೇ ಮೈಮರೆದು ಮುಂದೆ ಸಾಗಿದ್ದಳು. ಸಿಂಹಮಿತ್ರ ಮತ್ತು ತರುಣ ಇಬ್ಬರ ಚಿತ್ರಗಳೂ ಕಣ್ಣತ್ತಲೆಯಲ್ಲಿ ಅವಳ ಕಣ್ಮುಂದೆ ಬಂದು ನಿಲ್ಲುತ್ತಿದ್ದವು. ಮುಂದೊಗಡೆ ಏನೋ ಬೆಳಕು ಕಂಡಿತು. ದಾರಿಯ ಮಧ್ಯದಲ್ಲಿ ನಿಂತಳು. ಸಂಜುಗಳನ್ನು ಹಿಡಿದವ— ಸುಮಾರು ಒಂದು ನೂರು ಅಶ್ವಾರೋಹಿಗಳು ಬರುತ್ತಿದ್ದರು ಮತ್ತು ಅವರೆಲ್ಲರಿಂದ ಮುಂದೆ ಬಲಿಷ್ಠನಾದೊಬ್ಬ ವೀರ ಸೈನಿಕನಿದ್ದನು. ಅವನ ಎಡಕೈಯಲ್ಲಿ ನಗ್ನ ಖಡ್ಗವಿತ್ತು. ಬಹಳ ಧೀರತ್ವದಿಂದ ಆ ಗುಂಪು ಮುಂದೆ ಬರುತ್ತಿತ್ತು. ಆದರೆ ಮಧೂಲಿಕೆಯು ನಡುದಾರಿಯಿಂದ ಎಳ್ಳಷ್ಟು ಚಲಿಸಲಿಲ್ಲ. ಸೈನಿಕರ ನಾಯಕನು ಸನಿಹಕ್ಕೆ ತಲಪಿದರೂ ಮಧೂಲಿಕೆಯು ದಾರಿಯಿಂದ ತೊಲಗಲಿಲ್ಲ. ಸೈನಿಕನು ಕುದುರೆಯನ್ನು ನಿಲ್ಲಿಸಿ, " ಯಾರು? " ಎಂದು ಕೇಳಿದನು. ಏನೂ ಉತ್ತರ ದೊರೆಯಲಿಲ್ಲ. ಅಷ್ಟರಲ್ಲಿ ಮತ್ತೊಬ್ಬ ಅಶ್ವಾರೋಹಿಯು ಗದರಿಸಿ ನುಡಿದನು:— "ಎಲೈ ಸ್ತ್ರೀಯು, ನೀನು ಯಾರು? ಕೋಸಲ ಸೇನಾಪತಿಗೆ ಬೇಗನೇ ಉತ್ತರ ಕೊಡು! "

ತರುಣಿಯು ಹುಚ್ಚಿಯಂತೆ ಕೂಗಿದಳು : " ನಾನು ಮಹಾಪರಾಧ ಮಾಡಿದ್ದೇನೆ. ನನ್ನನ್ನು ಕಟ್ಟಿರಿ, ಕೊಲ್ಲಿರಿ!"

ಸೇನಾಪತಿಯು ನಕ್ಕು ನುಡಿದನು:-"ನೀನೇನು ಹುಚ್ಚಿಯೋ?"

" ಹುಚ್ಚಿಯಲ್ಲ. ಹುಚ್ಚಿಯಾಗಿದ್ದರೆ ಇಷ್ಟು ವಿಚಾರ ವೇದನೆಗಳಿರುತ್ತಿರಲಿಲ್ಲ. ಸೇನಾಪತಿ, ನನ್ನನ್ನು ಬಂಧಿಸು; ರಾಜನ ಬಳಿಗೆ ಕೊಂಡು ಹೋಗು! "

" ಏನು ವಿಷಯ? ಸ್ಪಷ್ಟವಾಗಿ ಹೇಳು! "

" ಶ್ರಾವಸ್ತಿಯ ದುರ್ಗವು ಇನ್ನು ಒಂದು ಜಾವದೊಳಗೆ ದಸ್ಯುಗಳ ಕೈವಶವಾಗುವುದು. ದಕ್ಷಿಣದ ಹೊಳೆಯನ್ನು ದಾಟಿ ಅವರು ಆಕ್ರಮಣ ಮಾಡಲಿರುವರು. "

ಸೇನಾಪತಿಯು ಹೌಹಾರಿದನು. "ನೀನೇನು ಹೇಳುತ್ತಿರುವೆ?" ಆಶ್ಚರ್ಯದಿಂದ ಕೇಳಿದನು.

" ನಾನು ಸತ್ಯವನ್ನು ಹೇಳುತ್ತಿದ್ದೇನೆ. ತ್ವರೆಮಾಡು! "

ಸೇನಾಪತಿಯು ನದಿಯ ಕಡೆಗೆ ಗುಟ್ಟಾಗಿ ಹೋಗುವಂತೆ ಎಂಭತ್ತು ಸೈನಿಕರಿಗೆ ಆಜ್ಞೆಯಿತ್ತು, ಇಪ್ಪತ್ತು ಸೈನಿಕರೊಡನೆ ತಾನು ದುರ್ಗದ ಕಡೆಗೆ ನಡೆದನು. ಮಧೂಲಿಕೆಯು ಸೈನಿಕನೊಬ್ಬನ ಕುದುರೆಯ ಬೆನ್ನಮೇಲೆ ಬಂಧಿಸಲ್ಪಟ್ಟಳು.

೦ ೦ ೦ ೦ ೦

ಕೋಸಲ ರಾಷ್ಟ್ರದ ರಾಜಧಾನಿಯಾದ ಶ್ರಾವಸ್ತಿಯ ದುರ್ಗವು ಈ ರಾತ್ರಿಯಲ್ಲಿ ತನ್ನ ಗತವೈಭವದ ಸ್ವಪ್ನವನ್ನು ನೋಡುತ್ತಿತ್ತು. ವಿವಿಧ ರಾಜವಂಶಗಳು ಅದರ ಪ್ರಾಂತ್ಯಗಳಲ್ಲಿ ಅಧಿಕಾರವಹಿಸಿದ್ದರು. ಆದರೆ ಈಗ ಅದು ಕೇವಲ ಕೆಲವು ಗ್ರಾಮಗಳ ಅಧಿಪತಿಯಾಗಿತ್ತು. ಅವನೂ ಕೋಸಲದ ಗತಕಾಲದ ಸ್ವರ್ಣಗೀತಗಳು ಅದರ ನೆಲಕ್ಕೆ ಅಂಟಿಕೊಂಡಿವೆ. ಇದರ ಅಸೂಯೆಗೆ ಇದೇ ಕಾರಣವಾಗಿತ್ತು. ಕೆಲವೇ ನಿಮಿಷಗಳಲ್ಲಿ ಅಶ್ವಾರೋಹಿಗಳು ತ್ವರೆಯಿಂದ ಬಂದು, ದುರ್ಗದ ದ್ವಾರದಲ್ಲಿ ನಿಂತಾಗ ಕಾವಲುಗಾರನು ಹೌಹಾರಿದನು. ಪಂಜಿನ ಬೆಳಕಿನಲ್ಲಿ ಅವನು ಸೇನಾಪತಿಯನ್ನು ಗುರುತಿಸಿದನು. ಸೇನಾಪತಿಯು ಕುದುರೆಯಿಂದಿಳಿದನು: "ಅಗ್ನಿಸೇನಾ, ದುರ್ಗದಲ್ಲಿ ಎಷ್ಟು ಸೈನಿಕರಿರಬಹುದು?" ಎಂದು ಕೇಳಿದನವನು.

" ಸೇನಾಪತಿಗೆ ಜಯವಾಗಲಿ, ಇನ್ನೂರು. "

" ಅವರೆಲ್ಲರನ್ನೂ ಅತಿ ಶೀಘ್ರವಾಗಿ ಒಂದುಗೂಡಿಸು; ಏನೂ ಗದ್ದಲವಾಗಕೂಡದು. ಅವರಲ್ಲಿ ೧೯೦ ಮಂದಿಯನ್ನೆ ಕೂಡಿಕೊಂಡು. ಬಹಳ ಬೇಗನೆ ಗುಟ್ಟಾಗಿ ದುರ್ಗದ ದಕ್ಷಿಣಭಾಗಕ್ಕೆ ಹೋಗು. ಬೆಳಕಿಲ್ಲದೆ ಮತ್ತು ಸದ್ದಾಗದಂತೆ ಹೋಗಬೇಕು. "

ಸೇನಾಪತಿಯು ಮಧೂಲಿಕೆಯ ಕಡೆಗೆ ನೋಡಿದನು. ಅವಳನ್ನು ಬಂಧಮುಕ್ತಮಾಡಲಾಗಿತ್ತು. ಸೇನಾಪತಿಯು ಅವಳೊಡನೆ ತನ್ನನ್ನು ಹಿಂಬಾಲಿಸುವಂತೆ ಹೇಳಿ ಅರಮನೆಯ ಕಡೆಗೆ ನಡೆದನು. ಸೇನಾಪತಿಯನ್ನು ನೋಡಿದೊಡನೆಯೇ ಪ್ರತೀಹಾರಿಯು ರಾಜನಿಗೆ ತಿಳಿಸಿದನು. ರಾಜನು ಸುಖನಿದ್ರೆಗೆ ಸಿದ್ಧತೆ ನಡೆಸುತ್ತಿದ್ದನು. ಆದರೆ ಸೇನಾಪತಿ ಮತ್ತು ಅವನೊಂದಿಗಿದ್ದ ಮಧೂಲಿಕೆಯನ್ನು ನೋಡುತ್ತಲೇ ವಿಚಲಿತನಾದನು.

" ಮಹಾರಾಜರಿಗೆ ಜಯವಾಗಲಿ " ಸೇನಾಪತಿಯು ಹೇಳಿದನು— " ಈ ಹೆಂಗುಸಿನಿಂದಾಗಿ ನನಗೆ ಈ ವೇಳೆಯಲ್ಲಿ ಇಲ್ಲಿಗೆ ಬರಬೇಕಾಯಿತು. "

ಮಹಾರಾಜನು ನೆಟ್ಟನೋಟದಿಂದ ನೋಡಿ ನುಡಿದನು:— " ಸಿಂಹಮಿತ್ರನ ಕನ್ಯೆ! ಪುನಃ ಇಲ್ಲೇಕೆ ಬಂದೆ? ನಿನ್ನ ಹೊಲಗಳು ಸಿದ್ಧವಾಗುತ್ತಿಲ್ಲವೇ? ಏನಾದರೂ ಅಡ್ಡಿ-ಆತಂಕಗಳು ಸಂಭವಿಸಿ-

ದುವೇ? ಸೇನಾಪತಿ, ನಾನು ನನ್ನ ದುರ್ಗದ ದಕ್ಷಿಣ ಭಾಗದ ನದಿಯ ಸಮೀಪದ ಭೂಮಿಯನ್ನು ಇವಳಿಗೆ ಕೊಟ್ಟಿರುತ್ತೇನೆ. ಅದರ ಸಂಬಂಧವಾಗಿ ನೀನೇನಾದರೂ ಹೇಳಬೇಕೆಂದಿರುವೆಯೋ ಹೇಗೆ?"

"ಪ್ರಭು, ಯಾವನೋ ಗುಪ್ತಶತ್ರುವು ಇಂದಿನ ರಾತ್ರಿಯಲ್ಲಿ ಆ ಕಡೆಯಿಂದ ದುರ್ಗಕ್ಕೆ ಧಾಳಿಮಾಡಿ, ಸ್ವಾಧೀನಪಡಿಸುವ ಸಿದ್ಧತೆಯಲ್ಲಿರುವನಂತೆ. ದಾರಿಯಲ್ಲಿ ಈಕೆಯು ನನಗೆ ಈ ಸುದ್ದಿ ತಿಳಿಸಿದಳು."

ರಾಜನು ಮಧೂಲಿಕೆಯ ಕಡೆಗೆ ನೋಡಿದನು. ಆತ್ಮಗ್ಲಾನಿ ಮತ್ತು ಲಜ್ಜೆಯಿಂದ ಕಂಪಿಸತೊಡಗಿದಳವಳು. "ಮಧೂಲಿಕೇ! ಇದು ಸತ್ಯವೇ?" ಕೇಳಿದನು ರಾಜ.

"ಹೌದು ಪ್ರಭು!"

ಕೂಡಲೇ ರಾಜನು ಸೇನಾಪತಿಯೊಡನೆ—"ಸೈನ್ಯ ಸಂಗ್ರಹಿಸಿಕೊಂಡು ನೀನು ಹೋಗು. ನಾನೀಗಲೇ ಬರುವೆ." ಎಂದು ಹೇಳಿದನು. ಸೇನಾಪತಿಯು ಹೋದನಂತರ ರಾಜನು ಮಧೂಲಿಕೆಯನ್ನು ಸಂಬೋಧಿಸಿ ನುಡಿದನು. "ಸಿಂಹನಿತ್ರಕುಮಾರಿ, ನೀನು ಮತ್ತೊಮ್ಮೆ ಕೋಸಲ ರಾಷ್ಟ್ರಕ್ಕೆ ಸಹಾಯನೂಡಿದೆ. ಆಗಲಿ, ನೀನಿಲ್ಲಿಯೇ ಇರು. ನೋಡಲು ಆ ದ್ರೋಹಿಗಳಿಗೆ ತಕ್ಕ ಶಾಸ್ತಿ ಮಾಡುವೆನು."

೦ ೦ ೦ ೦ ೦

ಈ ಸಾಹಸಪೂರ್ಣ ದಂಡಯಾತ್ರೆಯಲ್ಲಿ ಅರುಣನು ಕೈದಿಯಾದನು. ಮತ್ತು ದುರ್ಗವು ಸಂಜೆಗಳ ಬೆಳಕಿನಿಂದ ರಂಜಿಸಿತು. ನೆರೆದ ಗುಂಪು ಜಯಘೋಷಮಾಡಿತು. ಎಲ್ಲರ ಮನದಲ್ಲಿಯೂ ಉಲ್ಲಾಸ! ಶ್ಯಾಮಸ್ತಿಯು ದುರ್ಗವಿಂದು ಪರಕೀಯನ ಅಧಿಕಾರಕ್ಕೊಳಪಡುವ ದುರ್ಘಟನೆ ತಪ್ಪಿತು. ಆಬಾಲವೃದ್ಧರೂ ಸ್ತ್ರೀಯರೂ ಆನಂದತುಂದಿಲರಾಗಿದ್ದರು.

ಉಷೆಯ ಮುಂಬೆಳಗಿನಲ್ಲಿ ಸಭಾಮಂಟಪವು ಪ್ರೇಕ್ಷಕರಿಂದ ತುಂಬಿಹೋಯಿತು. ಕಬ್ಬಿಯಾಳಾಗಿದ್ದ ಅರುಣನನ್ನು ನೋಡುತ್ತಲೇ ಜನತೆಯು ರೋಷದಿಂದ ಗರ್ಜಿಸಿತು—"ಕೊಲ್ಲಿರಿ!" ರಾಜನು ಎಲ್ಲರ ಒಪ್ಪಿಗೆಯೊಂದಿಗೆ ಆಜ್ಞೆಯಿತ್ತನು—"ಮರಣ ದಂಡನೆ!" ಎಂದು.

ಮಧೂಲಿಕೆಯು ಸಭೆಗೆ ಕರೆಯಲ್ಪಟ್ಟಳು. ಅವಳು ಹುಚ್ಚಿಯಂತೆ ಬಂದು ನಿಂತಳು. ಕೋಸಲೇಶ್ವರನು ಅವಳಿಂದನೆ ಕೇಳಿದನು—"ಮಧೂಲಿಕೇ! ನಿನಗೇನು ಪುರಸ್ಕಾರಬೇಕೋ ಅದನ್ನು ಬೇಡು!" ಅವಳು ಸುಮ್ಮನಿದ್ದಳು.

ರಾಜನು ಮತ್ತೆ ಹೇಳಿದನು:— "ನನ್ನ ಸ್ವಂತವ ಎಲ್ಲಾ ಹೊಲಗಳನ್ನೂ ನಿನಗೆ ಕೊಡುತ್ತೇನೆ." ಮಧೂಲಿಕೆಯೊಮ್ಮೆ ಅರುಣನ ಕಡೆಗೆ ನೋಡಿ ಅನಂತರ ನುಡಿದಳು:— "ನನಗೇನೂ ಬೇಕಾಗಿಲ್ಲ!"

ಅರುಣನು ನಕ್ಕನು. ರಾಜನು ಮತ್ತೂ ಹೇಳಿದ:—'ಆದಾಗದು, ನಾನು ನಿನಗೆ ಖಂಡಿತವಾಗಿಯೂ ಕೊಡುವೆನು, ಬೇಡು!'

"ಹಾಗಾದರೆ ನನಗೂ ಮರಣದಂಡನೆ ದೊರೆಯಲಿ." ಎನ್ನುತ್ತಾ ಅವಳು ಬಂಧಿತನಾಗಿದ್ದ ಅರುಣನ ಬಡಿಯಲ್ಲಿ ಹೋಗಿ ನಿಂತಳು.

[ಹಿಂದಿಯ ಸುಪ್ರಸಿದ್ಧ ಸಾಹಿತಿಗಳಲ್ಲೊಬ್ಬರಾದ ಶ್ರೀ. ಜಯಶಂಕರ ಪ್ರಸಾದ್ ಅವರ ಕತೆಯೊಂದರ ಅನುವಾದ.]

—ಶ್ರೀ. ಎಸ್. ಆರ್. ಪಾಡಿ,

ಭಾವ ಪ್ರಣಯ

ಶ್ರೀ. ಸುಂದರ ನಾಡಕರ್ಣ, ವಲ್ಲಭನಗರ

ನಿನ್ನ ನೋಟಕೆ ಇಕೋ ನನ್ನ ಕಣ್ಣು
ಚೆಲುವು ಬೆಲ್ಲಾಟಕ್ಕೆ ಮೃಗನಯನೆ ಬಾ.
ನಿನ್ನ ತುಟಿಗಳು ಎರಡು ಅದಕಿರುನೆ ನಾ ಕೆಂಪು
ಅರಳುಮಲ್ಲಿಗೆ ನೀನು ಮುಗುಳು ನಗು ಬಾ!
ಹೆಲ್ಲು ಸಾಲುಗಳಲ್ಲ ಹೊಳಪು ನನ್ನದು ಅಲ್ಲಿ
ಮುತ್ತನೆಣೆಸುನೆ ಮಂದಹಾಸಿನಿಯೇ ಬಾ!
ನಿನ್ನ ಮೂಗನು ಮೊಗಕೆ ಅಳೆದು ಇಟ್ಟವ ನಾನು
ಗಂಧಾನುಭಾವಕ್ಕೆ ಸುಮಗಂಧಿ ಬಾ!
ಗಲ್ಲ ನಿನ್ನದು ಮಾತ್ರ ಶಿಲ್ಪಿನಾನದಕೆ,
ನುಣುಪು ಪೆಚ್ಚಿಸಬೇಕು ಮಾಯಾಮುಖಿ ಬಾ!
ಕೊರಳು ಮಣಿತಕೆ ನಾನು ಸೀನೆ ರೇಖೆ
ಹೊರಳ ನೋಡಲು ಸನಿಹ ಬಾ ನನ್ನ ಹರಿಣ!
ಕಂಠಕ್ಕೆ ಧ್ವನಿ ಚೆಂದ ಸವಿಮಾತು ಸ್ವಚ್ಛಂಧ
ನನಗಾಗಿ ಉಲಿಯುತಿರೆ ಹಿತಭಾಷಿ ಬಾ!
ಎದೆಯ ವಿರಳಿತವನು ಬರೆದು ಕಂಡಿಹೆ ನಾನು
ಅಳೆದು ನೋಡಲು ನನ್ನ ಮನದನ್ನೆ ಬಾ!
ಕೈಬೆರಳು ಬಿಗಿಯಾಗಿ ಮರವನಪ್ಪುವ ಲತೆಯೇ
ನೀರನುಣಿಸುನೆ ನನ್ನ ಲಲಿತಾಂಗಿ ಬಾ!
ಸರಳರೇಖೆಯು ನೀನು ಬಾಹುಗೋಲವು ನಾನು
ಭೇದ ಕಾಣದ ಐಕ್ಯ ಅನುಗೋಲೆಯೇ ಬಾ!
ಪಂಚಬಾಣಕ್ಕೆ ಆ ವಸಂತನೊಡನಾಟ
ಸೃಷ್ಟಿ ಉಗಮದ ಬಿಂದು ಮದನಾಂಗಿ ಬಾ!
ಅಡಗಿಕೊಂಡಿಹ ಹೂವು ನಾನದಕೆ ಕಂಪು
ಕಲ್ಪನೆಗೂ ಹಗುರಾದ ಪುಷ್ಪಾಂಗಿ ಬಾ!
ಭೃಂಗಬೊಳು ಇದೆ ಜೀನು, ಕೇಳುತಿರುವುದು ಏನೋ
ಮಧುವನೆನೆಯುವೆ ನನ್ನ ಮಧುವನಿತೆಯೇ ಬಾ!
ಮದನಾಗಿ ನೀ ಬಂದು ಹದವಾಗಿ ನಾ ನಿಂತು
ಮುನಿದ ಮಾಟಕ್ಕೆ ಮೇನಕೆಯೇ ಬಾ!
ಸ್ವರ್ಗ ನಿರ್ಮಿಸು ನೀನು ಅದರ ಪಟ್ಟನಿ ಎನಗೆ
ಅಮೃತ ಗಳಿಗೆಯು ತರುವ ಒಡನಾಟಿ ಬಾ!
ಬಾಳ ಹೊಂಗನಸಿನಲಿ ಮೂಡಿರುವ ನನ್ನ ಉಷಾ:
ಸಂತಸದ ಸಂಚಯಕೆ ಸಹನಾಸಿ ಬಾ!
ಸತತವಾಗಿದೆ ಬರೆಹ ಅಲ್ಲೀ ಮೂಡಿದೆ ವಿರಹ
ಭಾವಪ್ರಣಯವು ನಾಕು ಒಂದಾಗು ಬಾ!
ಕವನವಾಗಿಹೆ ನೀನು ಕವಿನೂತ್ರ ನಾನು
ಕವಿಯ ಕವನದ ಐಕ್ಯ ಕವಿರಾಣಿ ಬಾ!

ಅರುಣೋದಯ

ಶ್ರೀ. ಕಂ. ಭು. ವೆಂಕಟಾದ್ರಿಕರ್ಮಾ ಬಿ. ಎಸ್‌ಸಿ. ಬಿ. ಎಡ್.
ಹೊಸಕೋಟೆ

ಹಸಿರೆಲೆಯ ಝುಲ್ಲರಿಯ ಮೇಲ್ಗಡೆ
ನುಸುಳಿ ಸುಳಿದಿರೆ ಗಾಳಿಯು
ಮುಸುಳೆ ಸುಳಿಸುಳಿಯಾಗಿ ಎಳೆಸುಳಿ-
ಯೆಸೆಯೆ ಮುಂಜುಳ ಮಂಜರಿ
ಸಸಿನೆ ನೋಡದೊ ದೇವ-ಧ್ಯಾನವು
ಗಾನ ತಾನ ವಿತಾನವು
ಮಸೆದುದೆಸಕವ ಕಳೆಪುದಾಕೃತಿ
ಉಲಿವ ಗಿಳಿಕೋಗಿಲೆಗಳ ॥ ೧ ॥

ಮೇಲೆ ಹಸುರಿನ ಸಾಟಕಾಂಗಣ
ಮೇಳ ಗಾನದ ದ್ವಿಜಗಣ।
ಲೀಲೆ ವಿಗೆ ಸಾವೇರಿ ಮೋಹನ
ಲಲಿತ ಪಲವಿಧ ರಾಗದಿ।
ನೀಲ ಕೇಕದ ಬಾಲೆ ನಿದ್ರಾ-
ದೇವಿಯಳಿ ಬಳಿ ಸ್ವಸ್ತಿಯ
ಪೇಳಿ, ಎಚ್ಚರಗೊಳಿಸೆ, ಸೂರ್ಯನ
ರಥದ ಸಾರಥಿ ಸರಿವನು ॥ ೨ ॥

ಬಾನ ಜಲಧಿಯೊಳೀಸುತಿವೆವೊ
ಮೀನೆ ವಿಮಾನಗಳ್ವಿಧವಿಧ
ಏನ ಪೇಳಲಿ ! ಹಿರಿಯ ವಿಮಾನವು
ಕಿರಿಯ ವಿಮಾನವ ನುಂಗಿತು।
ಮೀನೆ ಪುಷ್ಪಕಗಳಲಿ ದಿನಿಜರು
ಕುಳಿತು ಜಲಿಸರೊ, ಬಾನಲಿ
ಸಾಗಿ ಹೋಗುತ ಮಾರ್ಗದಲಿ ಅ-
ಗಾಗ ಮರ್ತ್ಯರ ಹಸುತ ॥ ೩ ॥

ಮೋಡ-ಹಂಸಗಳಾಡುತೋಡುತ
ತಾರೆ ಮುತ್ತುಗಳಾಯುತ
ನೋಡಿದೆಡೆಯಲಿ ಬಿಡದೆ ಕುಕ್ಕಿ
ಮುಕ್ಕುತಿವೆ ಲಕ್ಷಾಯುತ।
ಬೇಡಬೀಸಿದ ಅರುಣ ಬಲೆಯೊಳು
ತಾರೆ ಮೀನಗಳ್ ಸಿಕ್ಕಿತೋ !
ಬೇಡ ನೀತನು ತೊಲಗಲೆಂದೇ
ಅರುಣ ತೀರ್ಥವ ಹೊಕ್ಕಿತೊ ! ॥ ೪ ॥

ಮಾರುತ ಗಂಧ ಬೀರುತ ಬನದ ದೇವಿಯು ಸಾರಲು,
'ಬಂದ ಸೂರ್ಯನು' ಎಂಬ ಒಕ್ಕಣೆಯುಸುರು ಹಸುರೆಡೆಯುಟ್ಟು ತಾ-
ನಿಟ್ಟು ಕುಂಕುಮಬೊಟ್ಟು, ಮುಡಿಯುತ ಬಣ್ಣ ಬಣ್ಣದ ಹೂಗಳ,
ಇಟ್ಟು ಪಲವಿಧ ಫಲದ ತಂಬುಲ ತಟ್ಟೆ ಹೊತ್ತಿಹ ಸಖಿಯರ ಹಿಂ-
ದಿಟ್ಟು, ಸ್ವರ್ಣದ ಹೂ. ಕರಂಡದಿ ಶುದ್ಧ ಶೀತಲ ಪಾದ್ಯವ
ಹೊತ್ತ ಸಖಿಯರ ಸೇರಿ, ಸಾರುತ ಬಾಳೆ-ಗುಡುರೆ ವೈಹಾಳಿಯೊಳ್,
ಎತ್ತಿ ಹಿಡಿದ ಹೊಂಬಾಳೆಗಲಶದಿ, ಮುತ್ತು-ಹಸಿಗಳ ಮುಕುರದಿ,
ಸ್ವಸ್ತಿವಾಚಿಪ ದುಂಬಿ ನಿಚಯದಿ, ಅರ್ಯಸೂರ್ಯಗೆ ಸ್ವಾಗತ.
ವಿತ್ತು ಇಸಿರಿಯಿಂದ ಕರೆಯಲು ಶಿರವ ಬಳಕುತ ಬರುವಳು ॥

ಗುರು-ಕರಣಿಯು ಬರುತಿರಲು ದ್ವಿಜ-ಶಿಷ್ಯರ ಗಾನ
ಎಚ್ಚೆತ್ತಿಹ ತರುಣಿಯಿರು ಮನೆಗೆಲಸದಿ ಲೀನ.
ಗುರು-ಹಿರಿಯರ ಋಷಿವರ್ಯರ ಗಾಯತ್ರಿಯ ಧ್ಯಾನ
ಹೊರಹೊರಟಿಹ ಜನಸಂದಣಿ ತಮ ಕಾರ್ಯದಿ ಲೀನ !

ಆಸೆ ಬಕಾಸುರ

ಶ್ರೀ. ಈಶ್ವರ ಹಿರೇನಂದೀಹಳ್ಳಿ, ಧಾರವಾಡ

ಕೂದಲಿನ ತಲತಲದಿ ಆಸೆಸಿಗಳ ನೆಡಿಸಿ
ಕಳೆದಿಹುದು ಈ ಕಾಲು ಶತಮಾನ ವರುಷ;
ನಿದ್ದೆಹೋಗುವ ಮುನ್ನ ಆಸೆಸಿಗಳು ಅರಳಿ
ಕನಸಾಗಿ ಕರೆದಂತೆ ಅಭಿಮಾನ ಹರುಷ. ೧

ಆಸೆಯೊಂದೊಂದಾಗಿ ನಂದನವ ತರಬಹುದು
ತಾನಿಂದ್ರ ಚಂದ್ರರಿಗೆ ಮಿಗಿಲಾಗಬಹುದು;
ಸೌಖ್ಯಮಂಚವ ಹತ್ತಿ ಹತ್ತು ದೆಸೆಗಳ ಹಾಯ್ದು
ನವಿರು ನವಿರಿಗೆ ನಾಕ ಇಳಿಗಿಳಿಸಬಹುದು ! ೨

ಇಂತಾಸೆ ಜಾಲವನೆ ಹೆಣೆದು ಬಲೆ ಸೇರಿದಲು
ಕಣ್ಣೀರ ಕಡಲೊಳಗೆ ಮುಳುಗೇಳುತಿರುವೆ
ಒಮ್ಮೆ ಮಾಡಿದ ತಪ್ಪು ತಿವಿಯುತಿರೆ ಶೂಲದೊಲು
ಎಂತು ಬದುಕುವದೆನುತ ಮನಬೇಯುತಿರುವೆ ೩

ಆಶೆಮುಂದಾರಗಳು ಚಿಂತಾನುಕುಟಿದಿ ಮೆರೆದು
ಎದೆತಲದಿ ಕಮರುತಲಿ ಉದುರುದುರುಪಿಹವು !
ಭವಿಷ್ಯದಾಗಸವಲ್ಲಿ ಮೆರೆವ ತಾರಕೆ ಸರಿದು
ಚದುರಿ ಕಾರ್ಗತ್ತಲೆಯ ಸುಖ ಮರೆಸುತಿಹವು ! ೪

ಎಣಿಕೆ ಮೀರಿದ ಬಯಕೆ ಸನಿಹವಹುದೆನ್ನುತಲಿ
ಬೆವರ ಧಾರೆಯ ಸುರಿಸಿ ಬೆಳೆದಾಯುತೇನು ?
ಗಣನೆಗೆನಿಸದೆ ತನುವ - ದಿನದಿನವು ತೇಯುತಲಿ
ಬಯಕೆ ವೃಕ್ಷವು ಬೆಳೆದು ಫಲವಾಯಿತೇನು ? ೫

ನಿನ್ನದಿರಿ ಕರ್ತವ್ಯ- ದುಡಿಯುತಿರು ಪಣ ತೊಟ್ಟು
ಬಲು ಆಶೆ ಅದಕೆನಿತು ಬರಿ ಬೆಸೆಯು ಬೇಡ
ಮನದಿ ಮಂದಿರ ಕಟ್ಟಿ- ಆಸೆಯುರಿಯನು ಇಟ್ಟು
ಕಲ್ಪನೆಯ ಯಜ್ಞದಲಿ ಬಲಿಯಾಗ ಬೇಡ. ೬

ಟಿಗಿವ ಆಶೆಯ ಮುಗುಳಿ- ಚಣ ಮುಗುಚಿ ಹಾಕುತಿರು
ಮಾನವನ ಮನದಾಸೆ ಬರಿವ್ಯರ್ಥನಯ್ಯ !
ಇದ್ದ ಹಾಸಿಗೆಯೆಲ್ಲೆ ಮೈಮುದುಡಿ ಮಲಗುತಿರು
ನಾಳೆ ಬರುತಿಹ ಸುಖವು ನಿಜವೆನ್ನ ಬೇಡ.
ಆಶಾ ಬಕಾಸುರನ ಬಲೆಯೊಳಗೆ ಬೇಳೆದಿರು
ಕೈ ಮುಗಿವೆ ನೂರಾಯು ಸರಿ ದುಡುಕಬೇಡ ! ೭

ಆರೋಹಣ

(ಪೌರಾಣಿಕ ರೂಪಕ)

ದೃಶ್ಯ : ೧

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ಬರುವ ಪಾತ್ರಗಳು

ಯಯಾತಿ : ಚಂದ್ರವಂಶದ ರಾಜ.

ಶರ್ಮಿಷ್ಠಾ : ವೃಷಪರ್ವನ ಮಗಳು, ದೇವಯಾನಿಯ ದಾಸಿ.

ದೇವಯಾನಿ : ಶುಕ್ರರ ಮಗಳು, ಯಯಾತಿಯ ಪಟ್ಟಮಹಿಷಿ.

ಶುಕ್ರಾಚಾರ್ಯರು : ಅಸುರರ ಕುಲಗುರುಗಳು.

ಕಾಲಿನಿ : ದೇವಯಾನಿಯ ಆಪ್ತಸಖಿ.

ಪುರೂರವ : ಶರ್ಮಿಷ್ಠೆಯ ಕಿರಿಯಪುತ್ರ, ಹದಿನಾಲ್ಕು ವರುಷದ.

(ದೇವಯಾನಿಗೆ ವಿವಾಹವಾಗಿ ಎಳುವರ್ಷ ಕಳೆದಿವೆ. ಅಶೋಕ ವನದ ಒಂದು ಭಾಗ. ಶರ್ಮಿಷ್ಠೆ ಸರ್ವಾಭರಣ ಭೂಷಿತೆಯಾಗಿ ವನದಲ್ಲಿ ಅಡ್ಡಾಡುತ್ತಿರುವಳು. ಶರ್ಮಿಷ್ಠೆಯ ರೂಪಿನೊಡನೆ ಸದ್ಗುಣಗಳೂ ತಪಸ್ಸಿನ ತೇಜವೂ ಸುಳಿತವಾಗಿ. ಸುಂದರ ಸುಗಂಧ ಪುಷ್ಪದಂತೆ ಸೋಹಕಳಾಗಿರುವಳು.)

ಶರ್ಮಿ : (ಹರ್ಷದಿಂದ) ಆಹಾ, ಈ ದಿನ ವನಕ್ಕೆಲ್ಲಾ ಅಪೂರ್ವ ಶೋಭೆ ಬಂದಿದೆ. ದೇವಯಾನಿಗೆ ಈ ದಿನ ದ್ವಿತೀಯ ಸೀಮಂತ. ಅರಮನೆಯಲ್ಲಿ ಮಹೋತ್ಸವದ ಸಂಭ್ರಮ. ದೇವಿಗೆ ನಾನೇನು ಮೆಚ್ಚನ್ನಿಯಲಿ? (ಕ್ಷಣ ಚಿಂತಿಸಿ) ಅದಕ್ಕೇಕೆ ಯೋಚನೆ? ಸೊಂಪಾದ ದಿನಗಳಿಂದ ಸಂಗ್ರಹಿಸಿರುವ ಪುಷ್ಪಗಳನ್ನೆಲ್ಲ ಬಳಸಿ, ಸೊಗಸಾದ ಪುಷ್ಪದುಡಿಗೆ ನೆಯ್ದು ಕಳುಹುವೆ. ನಾಲ್ಕಾರು ಪುಷ್ಪಗಳನ್ನು ಕೂಡುವಳು) ದೇವಯಾನಿಯ ದಾಸಿಯಾಗಿ ಬಂದರೂ ಅವಳು ನನ್ನನ್ನೀಗ ಸಖಿಯಾಗಿಯೇ ಕಾಣುತ್ತ ಪ್ರೇಮದಿಂದ ನಡೆಸಿಕೊಳ್ಳುತ್ತಿದ್ದಾಳೆ. ಸರ್ವಾಭರಣಗಳನ್ನೂ ದಿವ್ಯದುಕೂಲಗಳನ್ನೂ ತೊಡಲು ಕಳುಹುವಳು. ರಾಜಯೋಗ್ಯ ಭಕ್ಷಭೋಜ್ಯಗಳನ್ನೆ ಉಣಲು ಕಳುಹುವಳು. ನಿಜ ನಿಜ. (ನಿಡುಸುಯ್ದು) ಆದರೇನು? ಸಂಜರ ಚಿನ್ನದ್ದಾದರೂ ಹಕ್ಕಿಗದು ಬಂಧನವಲ್ಲವೇ? ಅಶೋಕವನದ ಮೂಲೆಯಲ್ಲಿ ಬಂಧಿತಳಾಗಿರುವ ನಿಕಾಂಗಿನಿ ನಾನು! ದಿನವೂ ನನಗೆ ಅಶನವಿತ್ತು ಪುಷ್ಪ ಒಯ್ಯುವ ಆ ಕುರೂಪಿ ಮದನಿಕೆಯ ಮುಖದರ್ಶನದಿಂದ ನೂಸವರಿನ್ನೂ ಶೋಕದಲ್ಲಿರುವರೆಂದು ನಂಬಬೇಕಾಗಿದೆ. ಉಲಿವ ಪಕ್ಷಿಗಳೇ ನನ್ನ ಸಖಿಯರು. ಕೋಮಲ ಕುಸುಮಗಳನ್ನೇ ಕುಸುಮ ಕೋಮಲೆಯರೆಂದು ಭಾವಿಸಿ ಗೆಳೆತನ ಬೆಳೆಸುವೆ. (ಪಾರಿವಾಳಗಳು ಹಾರಿ ಬಂದು ಅವಳ ಮೇಲೆ ಕೂತು ಮುಂದೆ ಸುಳಿಯುವವು.) ಈ ಪಾರಿವಾಳಗಳೇ ನನ್ನ ಸಂಸಾರ ಪರಿವಾರ!

ಅಯ್ಯೋ, ನನ್ನ ಹೃದಯವೇಕೆ ತಣಿಯದು? ಅತೃಪ್ತಿಯು ಬಿರುಗಾಳಿ ನನ್ನ ಮನವ ಅಲ್ಲೋಲ ಕಲ್ಲೋಲಗೊಳಿಸುತಿಹುದೇಕೆ? ಆಸೆ-ಆಕಾಂಕ್ಷೆಗಳ ಬೇರುಗಳಿಷ್ಟು ಆಳವೋ! ನನ್ನ ಪಂಚಪ್ರಾಣಗಳೇ ಆ ಬೇರಿಗಾಸರವಾಗಿಹುದೇನೋ! ನಾನೆಷ್ಟು ಶ್ರಮಿಸಿ, ಆಸೆಯ ಮರ್ದಿಸಿದರೂ ಭೋಗದಾಸೆಯ ಚಿಸಿಲು ಸಮಯ ಕಾದು ಚಿಗಿಲ್ಲನೆ ಮೇಲೇಳುತಿದೆ! ಹಾಯ್, ಒಮ್ಮೊಮ್ಮೆ ತೀವ್ರವೇದನೆಯ ಶೌರವವ ತಾಳಲಾರದೆ ನನ್ನಾತ್ಮ ತಲ್ಲಣಿಸಿ ತಪ್ತವಾಗುವುದು. ಓ, ಜಗದಂಬೆ! ನನ್ನ ಗುಣದೋಷವನೆಲ್ಲ ನೀನರಿತಿಹೆ. ನಿನ್ನಿಚ್ಛೆಯಂತೆ ಎಲ್ಲ ನಡೆಯುವುದೆಂಬ ಅಚಲ ನಂಬಿಕೆಯೊಂದೆ ನನ್ನ ಶಾಂತಿಗೆ ರಕ್ಷೆ.

ಇದೀಗ ವಸಂತಮಾಸ, ಈ ವನದೇವಿ ಚಿಗುರು, ಹೂವು, ಹಣ್ಣುಗಳಿಂದ ತನ್ನನ್ನು ಸಿಂಗರಿಸಿಕೊಂಡು, ಹರ್ಷದಿಂದುಲಿಯುತ್ತ ವಸಂತನಿಗೆ ತೆರೆದ ಕೈಗಳಿಂದ ನಲಿವ ಕಣ್ಣಿಂದ ಸ್ವಾಗತ ಬಯಸುತ್ತಿದ್ದಾಳೆ. ಈ ಬಿಗ್ಗಿನ ಸುಗ್ಗಿಯಲ್ಲಿ ಮನ ಲೀನವಾಗಿ ನಲಿದರೂ, ಮರುಕ್ಷಣವೇ ಯಾವುದೋ ನೋವಿನ ನರ ಎದೆಯಲ್ಲಿ ಮಿಡಿಯುವುದು. ಹಗಲೆಲ್ಲಾ ಹಗಲುಗನಸುಗಳಾಗಿ ಕಾಡುವುವೆನ್ನ ಎದೆಯಾಕಾಂಕ್ಷೆಗಳು.

ರಾತ್ರಿ ಮಾನಸ್ಯವೆ ಕಡಿವಾಣವನ್ನೂ ಕಳಚಿಕೊಂಡು ಅಲ್ಪನೆಯು ಕುದುರೆಯೇರಿ ಕನಸುಗಳಾಗಿ ಕಾಡುವುದೆನ್ನ!

ಒಲವಿಲ್ಲದ ಜೀವನವೇಕೆ? ಒಲವೇ ಜೀವನದುಸಿರು, ಉಸಿರಿಲ್ಲದ ದೇಹ ಒಲವಿಲ್ಲದ ಬಾಳು! ಹಾಯ್, ಎಂತಹ ಶುಷ್ಕ ಜೀವನವಾಯಿತೆನ್ನದು! (ಪಾರಿವಾಳವನ್ನು ಹಿಡಿದುಕೊಂಡು ಮುದ್ದಿಸುತ್ತಾ) ಆಹಾ, ಅದೆಷ್ಟು ಪುಣ್ಯವತಿ ನನ್ನ ಮುದ್ದುಪಕ್ಕಿ! ನನ್ನಂತೆ ಏಕಾಂಗಿ ನೀನಲ್ಲ ಹುಟ್ಟುವಾಗಲೇ ಜೊತೆಗಾರನನ್ನು ವರವಾಗಿ ಪಡೆದು ಬರುವೆ ನೀನು! ಓ, ಮುದ್ದುಮರಿಯೇ, ನಾನೂ ನಿನ್ನಂತೆ ಹಕ್ಕಿಯಾಗಬಾರದಿತ್ತೆ? (ನಿಡುಸುಯ್ಯುವಳು)

ಸೃಷ್ಟಿನಿಯಮವು ಪ್ರಣಯ. ಪ್ರಕೃತಿಮಾತೆ ಎಷ್ಟು ರೀತಿ-ನೀತಿಗಳಲ್ಲಿ ಪ್ರಣಯ ಭಾವನೆ ಮೆರೆಸಿ ಒಲವಿನಾಟವಾಡಿಸುತ್ತಿಹಳು! (ಪುಷ್ಪಗಳನ್ನು ಪ್ರರ್ತಿಸಿ, ಕಾತುರದಿಂದ) ಎಲ್ಲೆ ಕುಸುಮ ಸಖಿಯರೇ, ಭೃಮರನೃತ್ಯದ ಬರವ ಕಡು ನಿನ್ನ ಮುಖಗಳಿಷ್ಟುಕಾಂತಿ ತಳೆದಿವೆ! ಗುಟ್ಟು ತಿಳಿಸಿ ಸಖಿಯರೆ—ಭೃಮರಗಳಿಗೆ ನೀವಿಲ್ಲಿರುವ ಸುದ್ದಿ ಹೇಗೆ ತಿಳಿಯಿತು? ಹೇಳಿ, ನಿಮ್ಮ ಪ್ರೇಮಸಂದೇಶ ಒಯ್ದವರಾರು? ಭೃಮರಗಳು ನಿನ್ನ ಮುದ್ದಿಸಿ, ಮಧುವೀಂಟಿ, ನಿಮ್ಮ ಬಾಳ ಸಾರ್ಥಕಗೊಳಿಸುವುವು (ವ್ಯಥೆಯಿಂದ) ನನ್ನ ಬಾಳು ಹೀಗೆಯೇ ಅಪೂರ್ಣವಾಗಿರಬೇಕೇ? ಪ್ರಣಯ ಜೀವನದ ನವನೀತ-ಸಾನಿಧ್ಯದಿಂ ವಂಚಿತಳು. ಶ್ರೇಷ್ಠವಿದ್ಯೆಯ ಕಟ್ಟು, ಹೆರ್ಮಜಲದಲಿ ಮಿಂದು, ರಾಗಭಾವದಿ ಪ್ರಿಯತಮನನ್ನು ಆರಾಧಿಸುವ ಭಾಗ್ಯವ ನಾ ಪಡೆದಿಲ್ಲ. ಹಾಯ್, ದಾಸಿಯಾಗಿರುವ ನನಗೇಕೆ ಒಣ ಹೆಂಬಲ! ಬರಿಕನಸು ನನ್ನಾಸೆ!

(ಅಳಲು ಕೂಗುವ ಸದ್ದು) ಓ ಅಳಲವಿಂದು! ಓ, ನಾನಂದು ಕಾಲಿಗೆ ಗೆಜ್ಜೆ ಕಟ್ಟಿ ಬಿಟ್ಟ ತಾಯಿತಳಲು ಮರಿಗೆ ಪಾಠ ಕಲಿಸುತಿದೆ. ಅದೋ, ಸರಸರನೆ ಮರವೇರಿತು. ಬರಿದ ದಾಳಿಂಬೆಯ ಕಚ್ಚಿತು. ಮರಿಯನ್ನೂ ಕರೆಯುತಿದೆ. ಆಹಾ, ಆನಂದ ಅದರ ದೇಹದಿಂಮಕ್ಕಿ ಬಾಲಕ್ಕೆ ಹರಿದು ರೋಮರೋಮವನೆಲ್ಲ ನಿಮಿರಿ ನಿಲ್ಲಿಸಿದೆ! ಸೃಷ್ಟಿಯಾನಂದನೇ ಮೈವೆತ್ತು ನಿಂದಿದೆ ತಾಯ್ತನದ ಸಾರ್ಥಕತೆಯಲ್ಲಿ! (ವ್ಯಾಕುಲದಿಂದ) ಅಯ್ಯೋ, ಇದೇನಸರ್ಥ! ಚಿನ್ನಾಟದಲಿದ್ದ ಮರಿಯ ಕಾಗೆ ಹಿಡಿಯುತಲಿತ್ತಲ್ಲಾ, ಹಾಯ್, ನಿಷ್ಠುರ ಸೃಷ್ಟಿಯೇ! (ಉತ್ಸುಕಳಾಗಿ) ಆಹ್! ಇದೇನದ್ಭುತ! ತಾಯಿಳಿಲ್ ಕುಪಿತಳಾಗಿ ನೆಗೆದ ರಭಸಕೆ ಕಾಗೆ ಮರಿಯನು ಬಿಟ್ಟು ಹಾರಿ ಹೋಯಿತಲ್ಲಾ! ಜೀವಿಗಳ ಜೀವದಾಸೆಯನ್ನೂ ಮೆಟ್ಟಿ ಮೇಲೇರುವ ತಾಯ್ತನವೇ—ಧನ್ಯಧನ್ಯ!

ಹೆಣ್ಣಾ ಬಾಳಿಗೆ ಕಣ್ಣೆರಡು,— ಒಂದು ಸತೀತ್ವ, ಮತ್ತೊಂದು ತಾಯ್ತನ! ಹಾಯ್ ಧಿಕ್ಕಾರ ನಿನ್ನೀ ಕುರುಡು ಬಾಳಿಗೆ! ನನ್ನದೆನ್ನುವ ವಸ್ತು ಒಂದಿಲ್ಲ ಜಗಬೊಳಗೆ. ರಾಜ್ಯಕೋಶವು ಬೇಡ, ಐಶ್ವರ್ಯವೂ ಬೇಡ. ದಾಸ್ಯವೇ ಸಾಕೆನಗೆ— ಒಲುಮೆಯೊಂದರ ಹೆಂಬಲವೆನಗೆ. ಎನ್ನ ಪ್ರಣಯಪಂಜರದಲ್ಲಿ ಪ್ರಿಯಕರನು ಬಂಧಿಯಾಗುವುದೂ ಬೇಡ. ಈ ಭೃಮರಬಂಧುನಿನಂತೆ ಛೇಟೆಯಿತ್ತರೆ ಸಾಕು! ನನ್ನದೆನ್ನುವ ಕಂದ ನನಗೆ ದೊರೆತರೆ ಸಾಕು!

(ನಿಡುಸುಯ್ದು) ಎಲ್ಲ ವ್ಯರ್ಥಾಲಾಪ— ಎಲ್ಲ ಹೆಗಲುಗನಸು! ಓ ಭಗವತಿ ನಿನ್ನಆಣತಿಯಲ್ಲದೇನು ನಡೆಯಲು ಸಾಧ್ಯ? ನನ್ನ ಕಾಮನೆಗಳೆಲ್ಲವನು ನಿನ್ನಡಿಯಲಿಡುವೆ ನಿನ್ನಿಚ್ಛೆಯಂತೆ ನಡೆಸು. ಇದೋ ಕೈ ಮುಗಿದು ಬೇಡುವೆ, ಎದೆಯಾರ ಪ್ರಾರ್ಥಿಸುವೆ. (ಕೈ ಮುಗಿದು ಕಣ್ಮುಚ್ಚಿ ತದೇಕ ಚಿತ್ತದಿಂದ ಪ್ರಾರ್ಥಿಸುವಳು)

ಯಯಾತಿ: (ದಿವ್ಯಾಭರಣಭೂಷಿತ — ಚಿಂತಾಸಕ್ತನಾಗಿ ಚಿತ್ತಣಿಂದ ಪ್ರವೇಶಿಸುವನು)

ರಾಜಮಕುಟಧಾರಿಯಾದರೂ ನನಗೆ ಸ್ವಾತಂತ್ರ್ಯವಿಲ್ಲವಲ್ಲಾ! ದೇವಯಾನಿಗೆ ಕಾಣದಂತೆ ನಾನು ಸುರಾಪಾನ ಮಾಡಬೇಕಾಗಿದೆ! ಸುರಾಪಾನ ನಿಷಿದ್ಧವೆಂದು ನನಗೆ ಗುರುಗಳು ಹೇಳಿರಲಿಲ್ಲ! ಅತಿಗೆ ಹೋಗದೆ ಮಿತಿಯ ಮೀರದೆ ಬಳಸಿದರಾಯಿತು. ಸುರಾಪಾನ ಆಮೋದ-ಪ್ರಮೋದಗಳಿಗೆ ಅಗತ್ಯವೆಂದು ಭಾವಿಸಿದ್ದೆ. ದೇವಯಾನಿ ಸುರೆಯ ವಾಸನೆಗೆ ಹೇಸಿ ಓಕರಿಸುವಳು. ತ್ರಿಕಾಲಜ್ಞರಾದ ಶುಕ್ರರಿಗೂ ಮತ್ತು ಬರಸಿ ಅವರು ಕಚನ ಭಸ್ಮಾವಶೇಷವನ್ನು ಸೇವಿಸುವಂತೆ ಮಾಡಿದ ಮಹಾಪಾಪಕನೆಂದು ಜರೆವಳು. ಶುಕ್ರಾಚಾರ್ಯರು ಸುರಾಪಾನ ನಿಷಿದ್ಧನೆಂದು ಸಾರಿರುವಳೆನ್ನುವಳು. ಅವಳ ಮನನೋಯದಿರಲೆಂದು ಅವಳಿಗದಿವಾಗದಂತೆ ಸೇವಿಸುತ್ತಿರುವೆ. ಈ ದಿನ ಸೀಮಂತಸಮಾರಂಭ. ಪರಿಜನ-ಪುರಜನರೆಲ್ಲಾ ಅರಮನೆಯಲ್ಲಿದ್ದಾರೆ. ನಿರ್ಜನವಾಗಿರುವ ಈ ಅಶೋಕವನದಿ ಸುರೆಸೇವಿಸಿ ಅನಂತರ ಅರಮನೆಗೆ ಹೋಗುವೆ. (ಅಲ್ಲಿದ್ದ ಸೋಪಾನದಲ್ಲಿ ಕುಳಿತು ಜೇಬಿನೊಳಗಿನಿಂದ ಬೆಳ್ಳಿಯ ಕರಂಡವನ್ನು ಹೊರತೆಗೆದು ಸೇವನೆಮಾಡುವ.)

ಓ, ದೇವಯಾನಿ, ಆಚಾರ್ಯಪುತ್ರಿಯೆಂಬ ಹೆಮ್ಮೆನಿಂದ ನೀನೂ ಆಚಾರ್ಯಪಟ್ಟವಹಿಸಿ ಉಪದೇಶ ಪ್ರಾರಂಭಿಸಿದೆಯಾ? ಭರ್ತನನ್ನು ನೆರಳಿನಂತೆ ಅನುಸರಿಸಬೇಕಾದ ಸತಿ ನೀನು— ಆಪತನು ತಿದ್ದುವ ಗುರುವಲ್ಲ—ಅಜ್ಞಾವರ್ತಿಯಾದ ಭೃತ್ಯಳಂತಿರಬೇಕು ನೀನು ಅರ್ಚಾರ್ಯರ ಮೇಲಿರುವ ಭಯಭಕ್ತಿಯಿಂದ ನಿನ್ನ ದರ್ಪವನ್ನು ಸಹಿಸುತ್ತಿದ್ದೇನೆ, ಅಷ್ಟೇ! (ದರ್ಪದಿಂದ ತಲೆದೂಗುತ್ತ).

ನನ್ನನ್ನು ಮೋಹಿಸಿದ್ದ ಆ ವಿಶ್ವಾಚಿ ಸುಗೀತ-ನಾಟ್ಯಚತುರಿ, ಮನೋಹ್ಲಾದಿನೀ. ನಿನ್ನ ಶಾಪಭೀತಿಯಿಂದ ಗರುಡಮಚ್ಛೆಕಂಡ ಹಾವಿನಂತೆ ಹೆದರಿ ನನಗೂ ಹೇಳದೆ ಅಜ್ಞಾತವಾಸಿಯಾದಳು. (ಇನ್ನೊಮ್ಮೆ ಕುಡಿಯುವ).

ಶ್ರೀಮನ್ನಾರಾಯಣನಿಗೆ ಶ್ರೀದೇವಿ ಭೂದೇವಿಯರು. ಶಿವನಿಗೆ ಗಂಗೆ-ಗೌರಿಯರು, ಕಾರ್ತಿಕೇಯನಿಗೆ ವಲ್ಲಿ-ದೇವಸೇನೆಯರು. ನಾರಾಯಣ ಸ್ವರೂಪನಾದ ಭೂಪತಿಗೆ ಪತ್ನೀದ್ವಯರಿರಬೇಕಾದುದು ಧರ್ಮದೇವಯಾನಿ, ಉಪದೇಶ ಸಾಂಡಿತ್ಯವನ್ನು ನಿನ್ನ ಪತಿತನಾಶ್ರಮಕ್ಕೇ ಹಿಂತಿರುಗಿಸು! ರಾಜಪತ್ನಿಯಂತೆ ಪತಿಯ ನಡತೆಯನ್ನು ಸಹಿಸಿಕೋ—ಇಲ್ಲದಿನ್ನರೆ ಪರಿಣಾಮ ಒಳ್ಳೆತಾಗದು! (ಮತ್ತೊಮ್ಮೆ ಕುಡಿಯುವ).

ನಾನು ಚಕ್ರಾಧಿಪತಿ ನಾನು ರಾಜ್ಯ ಶಾಸಕ. ನನಗೆ ಶಾಸನ ವಿಧಿಸುವವರಾರು? ನನ್ನಿಚ್ಛೆಯಂತೆ ನಾನು ಮಾಡಿಯೇ ಸಿದ್ಧ. ಆಹಾ, ನಂದನವನವನ್ನು ನಾಚಿಸುವ ಈ ಉದ್ಯಾನವನದಲ್ಲಿ ವಿಶ್ರಾಂತಿ ಮಾತ್ರ ಜೊತೆಯಾಗಿದ್ದಿದ್ದರೆ! ನಾನೇ ದೇವೇಂದ್ರನಾಗುತ್ತಿದ್ದೆ. (ಮೇಲಕ್ಕೆದ್ದು ನಾಲ್ಕು ಹೆಜ್ಜೆ ಬರುವ. ಧ್ಯಾನಲೀನಳಾಗಿರುವ ಶರ್ಮಿಷ್ಠೆಯನ್ನು ಕಂಡು ಬೆರಗಾಗುವ.)

ಇದೇನು? ನನ್ನ ಭ್ರಮೆಯೇ? ಎಂತಹ ಅಪ್ಸರ ದಿವ್ಯ ಸುಂದರ ನಿಗ್ರಹ! ಇಷ್ಟು ಜೀವಂತ ಕಳೆಯ ಕೊಟ್ಟು ಕಡೆದ ಶಿಲ್ಪಿ ಯಾರು? ನನಗೆ ತಿಳಿಯದಂತೆ ದೇವಯಾನಿ ಕಡೆಯಿಸಿರಬಹುದೇ? (ಹತ್ತಿರ ಬರುವ. ಚಕಿತನಾಗಿ) ಇಲ್ಲಿಲ್ಲ ಉಸಿರಾಡುವಂತಿದೆ. ಜೀವಂತ ನಿಗ್ರಹವೋ, ನಿಗ್ರಹಕೇ ಜೀವ ಬಂತೋ? ಯಾರಿಗಾಗೀ ಧ್ಯಾನ? ನನಗಾಗಿಯೇ? ಇರಬೇಕು, ಇರಬೇಕು! ಇದೇ ನಂದನವನ, ನಾನೇ ಇಂದ್ರ. ಇವಳೇ ಶಚಿ! ಶಂಭಾದಿ ಅಪ್ಸರೆಯರ ಶೃಂಗಾರದ ಪಾಕದಲಿ ನಿರ್ಮಿಸಿದ ದಿವ್ಯ ಮೂರುತಿಯಿವಳು. (ಶರ್ಮಿಷ್ಠೆಯ ತುಟಿಯಲುಗುವುದು. ಕಣ್ಣೆರೆಯುವಳು. ಯಯಾತಿಯನ್ನು ಕಂಡು ಬೆಚ್ಚಿ ನೋಡುವಳು.)

ಯಯಾತಿ: ಹೆದರದಿರು, ಭದ್ರೇ. ನೀನಾರು? ಯಾವ ಕೋರಿಕೆಯಿಂದ ತಪಿಸುತ್ತಿದ್ದೆ?

ಶರ್ಮಿ: ಓ, ಮಹಾನುಭಾವ, ಪುರುಷ ಸ್ಪರ್ಶಕಾಸ್ಪದವಿಲ್ಲದ ಈ ಕಾವಿಗೆಂತು ಬಂದೆ? (ಯೋಚಿಸುತ್ತಾ) ಈ ತೇಜ, ಈ ರೂಪು ಮಾನವ ದುರ್ಲಭ! ನನ್ನ ಪ್ರಾರ್ಥನೆಗೆ ಉತ್ತರರೂಪವಾಗಿ ಬಂದಿರುವ ನೀನು ಯಕ್ಷನೋ, ಸಿದ್ಧನೋ, ಗಂಧರ್ವನೋ, ದೇವತೆಯೋ?

ಯ: (ಸ್ವಗತ) ಓ, ನನ್ನ ನಿಜ ತಿಳಿದರೆ ಹೆದರಿಯಾಳು. ಅವಳ ಊಹೆಗೇ ಪುಷ್ಟಿಕೊಡುವೆ. (ಪ್ರಕಾಶ) ಭದ್ರೇ, ನಿನ್ನ ರೂಪ-ಗುಂಧದಿಂದ ಮೋಹಿತನಾಗಿ ಬಂದ ಗಂಧರ್ವಭ್ರಮರ ನಾನು. ಈ ರೂಪು, ಈ ಯೌವನ, ಈ ಸೊಬಗು ಎಲ್ಲವನ್ನು ಕಾಡುಕುಸುಮದಂತೆ, ಕಾನನದ ಬೆಳುದಿಂಗಳಂತೆ ವ್ಯರ್ಥಗೊಳಿಸುತ್ತಿರುವ ನೀನಾರು? ಏಕೀ ಏಕಾಂತವಾಸ. ಹೇಳು ಸುಭಗೆ.

ಶ: ನಾನು ಮಹಾರಾಣಿಯ ದಾಸಿ. ನನ್ನ ವಿಧಿಲಿಖಿತ ಹೀಗಿರುವಾಗ ಯಾರೇನು ಮಾಡುವರು? ಮಾನವ ಮುಖದರ್ಶನವೇ ದುರ್ಲಭವಾಗಿರುವ ನನಗೆ, ಪುಣ್ಯಸ್ವರೂಪಿಯಾದ ನೀನು ದರ್ಶನ ಕೊಟ್ಟು ಧನ್ಯಳನ್ನಾಗಿ ಮಾಡಿದೆ. (ನಿಡುಸುಯ್ದು) ನಾನೂ ಉಚ್ಚ ಕುಲವನಳೇ: ಅಸುರ ರಾಜಕುಮಾರಿಯಾಗಿದ್ದಾಗ ನನಸನ್ನು ಶರ್ಮಿಷ್ಠೆಯೆನ್ನುತ್ತಿದ್ದರು. ದೇವಯಾನಿಗೆ ನಾನು ಮಡುಕಿಸಲ್ಲಿ ಮಾಡಿದ ಅಪಚಾರಕ್ಕಾಗಿ ಆಜೀವಪರ್ಯಂತ ಅವಳಿಗೆ ದಾಸಿಯಾಗಬೇಕಾಯಿತು.

ಯ: (ಕರುಣೆಯಿಂದ) ಹಾಯ್, ರಾಜಪುತ್ರಿಯಾದ ನಿನಗೀ ದುರವಸ್ಥೆಯೇ? ಆ ದೇವಯಾನಿ ನಿಜಕ್ಕೂ ಮಹಾಕ್ರೂರಿ. ಸಹಸ್ರ ತಪ್ಪಿಗಾದರೂ ಕ್ಷಮೆಯಿ ಯೋಗ್ಯವಾಗಿದೆ. ನಿನ್ನ ಅಸಮಾನ ಲಾವಣ್ಯ! ನಿನ್ನ ತಪ್ಪನ್ನು ಮನ್ನಿಸಬಹುದಿತ್ತು. ನಿಕಾಂತವಾಸದ ಘೋರಶಿಕ್ಷೆಯಿತ್ತಿರುವುದು ಅಕ್ಷಮ್ಯ ಮಹಾಪರಾಧ.

ಶ: ಮಹಾತ್ಮ, ನಯವಿಟ್ಟು ಮಹಾರಾಣಿಗೆ ದೋಷ ಕೊಡದಿರಿ. ಈಗಸರು ನನ್ನನ್ನು ದಾಸಿಯಂತೆ ಕಾಣುತ್ತಿಲ್ಲ. ಸಖಿಯಂತೆ ನಡೆಸಿಕೊಳ್ಳುತ್ತಿದ್ದಾರೆ. ಎದೆಯಿಂದುಕ್ಕುವ ರಾಗಭಾವಗಳಿಂದ ಭ್ರಮಿತಳಂತಾಗಿ ನಾನು ತಪಿಸುತ್ತಿರುವೆ. ಅಸರಿಲ್ಲದ ಬಳ್ಳಿಯಂತೆ ಭಾವುಕತೆಯ ತೊಡಕಿನಿಂದ ಶೋಭಾಹೀನವಾಗಿದೆ ನನ್ನ ಬಾಳು. ನನ್ನ ಸ್ವಾರಬ್ಧ ಕರ್ಮಕ್ಕೆ ಯಾರೇನು ಮಾಡುವರು?

ಯ: (ಉಕ್ಕುವ ಕರುಣೆ, ಪ್ರೇಮಗಳಿಂದ) ಭದ್ರೇ, ಇಂದಿಗೆ ನಿನ್ನ ಕಷ್ಟ ಪರಿಯುತೆಂದುಕೋ! ಸೂರ್ಯಚಂದ್ರಸಾಕ್ಷಿಯಾಗಿ, ನನ್ನೊಲುಮೆಯನ್ನು ನಿನಗೆ ಧಾರೆಯೆರೆಯುತ್ತೇನೆ. ನಿನ್ನನ್ನೇ ಲಗ್ನವಾಗುವೆ ನನ್ನ ಕಣ್ಮಣಿಯಂತೆ ನಿನ್ನನ್ನು ರಕ್ಷಿಸುವೆ.

ಶ: (ಮುಂಡಿಯೂರಿ ಭಕ್ತಿ-ಕೃತಜ್ಞತೆಗಳಿಂದ) ದಾಸಿಯಾದ ನನಗೆ ಲಗ್ನದ ಹಂಬಲೇಕೆ? ನಿನ್ನೊಲುಮೆಯನ್ನೂ ಯಾಚಿಸಲಾರೆ. ಓ ಪ್ರಭು, ನನ್ನೆದೆಯ ಶೂನ್ಯತೆಯನ್ನು ತುಂಬಿ, ನಿನ್ನ ಸೇವೆಯನ್ನು ಸ್ವೀಕರಿಸಿ ನನ್ನ ಬಾಳನ್ನು ಧನ್ಯಗೊಳಿಸು.

ಯ: (ಅವಳ ಕೈಹಿಡಿದೆಬ್ಬಿಸಿ) ಎಳು ಪ್ರಿಯೆ, ಗಾಂಧರ್ವ ವಿಧಿಯಿಂದ ನಾವು ವರಿಸುವ! ಮಹಾನದಿಗೆ ಸಾಗರವೇ ಆಶ್ರಯಿಸಲ್ಲವೇ? ನನ್ನೊಲುಮೆಗೆ ನಿನ್ನ ವಿಶಾಲ ಹೃದಯವೇ ತಕ್ಕ ಪಾತ್ರ. ಎಂದೆಂದಿಗೂ ನೀನೇ ನನ್ನ ಹೃದಯೇಶ್ವರಿ, ನನ್ನೊಲುಮೆಯೊಡತಿ!

ಶ: (ಹರ್ಷದಿಂದ) ಇಂದೆನ್ನ ಪ್ರಾರ್ಥನೆ ಫಲಿಸಿತು. ಜಗದಂಬೆಯ ಕೃಪಾಶೀರ್ವಾದ ದೊರಕಿತು. ನನ್ನ ಬಾಳು ಸಾರ್ಥಕವಾಯಿತು. ಓ, ದಿವ್ಯದೇವಿ, ಇಂದಿನಿಂದ ನೀನೇ ನನ್ನ ಆರಾಧ್ಯ ದೇವತೆ. ನನ್ನ ಹೃದಯದಲ್ಲಿ ನಿನ್ನ ಮೂರ್ತಿಯನ್ನು ಪ್ರತಿಷ್ಠಿಸಿ ಸದಾ ಸೇವಿಸುವೆ. ನಿನ್ನೊಲುಮೆಯ ಕಿರಣವೊಂದು ಸಾಕು ಈ ದಾಸಿಗೆ.

ಯ: ಶುಭಾಂಗಿ, ನಿನ್ನ ವಿನಯ ನಿನ್ನ ಫನತೆಗೆ ಸಾಕ್ಷಿ. ನಿನ್ನ ಪ್ರೇಮವ ಬಂದಿ ನಾನು. ಬಾ ನಲ್ಲೆ, ಬಾಳಿನ ವಸಂತವನ್ನು ಸಂತಸದಿ ಸವಿಯೋಣ.

(ಕೈ ಕೈ ಹಿಡಿದು ನಡೆಯುವರು).

(ತೆರೆ ಬೀಳುವುದು)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, 'ಹಾಡೆ ಮತ್ತು ಹಾಸಿ' ಎಂಬ ಕಥೆಯನ್ನು ಕುರಿತ ವಿಮರ್ಶೆಗಳು ನಾಲ್ಕು ಜನರಿಂದಲೂ 'ಕೊಂಜು' ಎಂಬ ಅನುವಾದಿತ ಕಥೆಯನ್ನು ಕುರಿತ ವಿಮರ್ಶೆ ಒಬ್ಬರೇ ಒಬ್ಬರಿಂದಲೂ ಬಂದಿವೆ. ಹೀಗಾಗುವುದಕ್ಕೆ, ಸದ್ಯ ನಡೆದಿರುವ ಶಾಲೆ-ಕಾಲೇಜುಗಳ ಪರೀಕ್ಷೆಗಳು ಕಾರಣವಾಗಿರಬಹುದು.

'ಹಾಡೆ ಮತ್ತು ಹಾಸಿ' ಕಥೆಯ ವಿಮರ್ಶಕರು

೧. ಶ್ರೀಮತಿ ಎಂ. ಲಕ್ಷ್ಮೀ ದಾನ್, ಮುತ್ತೂರು (ಶಿವಮೊಗ್ಗ). ೨. ಶ್ರೀ. ಕೆ. ಎಸ್. ಶ್ರೀಪತಿ, ಬಿ. ಎಸ್ಸಿ., ಮಂಗಳೂರು. ೩. ಶ್ರೀ. ಜಯರಾಮ ಶೆಟ್ಟಿ, ಪಾರೆಕಟ್ಟೆ (ಕಾಸರಗೋಡು). ೪. ಶ್ರೀ. 'ರಂಗ' ಮಾಳಮಡ್ಡಿ, ಧಾರವಾಡ.

'ಕೊಂಜು' ಕಥೆಯ ವಿಮರ್ಶಕರು

೧. ಶ್ರೀ. ಅರವಿಂದ ಆರ್. ಕುಲಕರ್ಣಿ, ಜಮಖಂಡಿ.

ನಮ್ಮ ಸಂಪಾದಕ ಮಂಡಲಿಯವರೇ ವಿಮರ್ಶೆಗಳನ್ನೆಲ್ಲ ವಿಮರ್ಶಿಸಿ ನೋಡಿ ನಿರ್ಣಯವನ್ನು ಹೀಗೆ ಕೊಟ್ಟಿದ್ದಾರೆ:

'ಹಾಡೆ ಮತ್ತು ಹಾಸಿ' ಕಥೆಯ ವಿಮರ್ಶೆಗಳಲ್ಲಿ ಶ್ರೀ ಕೆ. ಎಸ್. ಶ್ರೀಪತಿ ಅವರ ವಿಮರ್ಶೆ ಉತ್ತಮವಾಗಿದೆ. ಶ್ರೀ 'ರಂಗ' ಮಾಳಮಡ್ಡಿ ಮತ್ತು ಶ್ರೀ ಜಯರಾಮ ಶೆಟ್ಟಿ ಅವರ ವಿಮರ್ಶೆಗಳೂ ಚೆನ್ನಾಗಿವೆ; ಆದರೆ ಅವಶ್ಯಕತೆಗಿಂತ ದೀರ್ಘವಾಗಿವೆ. ಶ್ರೀ. ಜಯರಾಮ ಶೆಟ್ಟಿ ಅವರು ಪತ್ರಲೇಖನದ ತಂತ್ರವನ್ನು ಬಳಸಿ, ಕಥೆಯನ್ನು ವಿಮರ್ಶಿಸಿದ್ದಾರೆ.

'ಕೊಂಜು' ಕಥೆಯ ವಿಮರ್ಶೆ ಬಂದುದು ಒಂದೇ ಒಂದು. ಚೆನ್ನಾಗಿದೆ

ಈ ವಿಭಾಗದ ಔಚಿತ್ಯವನ್ನು ಸೂಚಿಸಿ, ಜಯಂತಿಯ ಈ ಪ್ರಯೋಗವನ್ನು ಅನೇಕರು ಪ್ರಶಂಸಿಸುತ್ತಾರೆ. ಆದರೆ ಪ್ರಶಂಸಕರ ಪ್ರಮಾಣದಿಂದ, ಈ ವಿಭಾಗದಲ್ಲಿ ಭಾಗವಹಿಸುವ ತರುಣ ವಿಮರ್ಶಕರ ಸಂಖ್ಯೆ ತೀರ ಕಡಮೆಯೆಂದು ಯಾರೂ ಹೇಳಬಹುದು. ಈ ಪರಿಸ್ಥಿತಿಯು ಹೋಗಬೇಕೆಂದು ನಮ್ಮ ಹಾರೈಕೆ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ವಾರೆಸ್‌ದಾರ್' ಎಂಬ ಏಕಾಂಕ ರೂಪಕವನ್ನಾಗಲಿ— 'ಅಯಿದು ಪರುಷದ ಪಡಣಿಕೆ' ಎಂಬ ಕವನವನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

—ಸಂಪಾದಕರು.

ಪಾಪ ಮತ್ತು ಪಾಪಿ

(ಕಥಾವಿಮರ್ಶೆ)

ಶ್ರೀ. ಕೆ. ಎಸ್. ಶ್ರೀಪತಿ, ಬಿ. ಎಸ್ಸಿ. ಮಂಗಳೂರು

" ಸಿವೇಕವಿಲ್ಲದ ವೈರಾಚರಣೆಯಂತೆಯೇ, ವಿವೇಚನಾರಹಿತವಾದ ಅಂಧಾನುಕರಣವೂ ವ್ಯಕ್ತಿಯ ಜೀವನಕ್ಕೆ ವಿಘಾತಕವಾದುದು." ರವೀಂದ್ರರ ಮಾತು ಅನ್ವರ್ಥಕವಾಗಿದೆ " ಪಾಪ ಮತ್ತು ಪಾಪಿ " ಕತೆಗೆ. ಕೆಲವರು ಮಕ್ಕಳು ಬೇಕೆಂದು ಹರಿಯಿಡುತ್ತಾರೆ- ಕೆಲವರು ದೇವರು ಯಾಕಾದರೂ ಇವರನ್ನು ಕೊಟ್ಟ ? ' ಎಂದು ದೂಷಿಸುತ್ತಾರೆ. ಆದರೆ ಮಕ್ಕಳು ಹುಟ್ಟಾದೂ ಪಾಪವಲ್ಲ, ಕೊಲ್ಲುವ ಪ್ರವೃತ್ತಿಯವರೆಡೂ ತರದ ತಂದೆ-ತಾಯಿಗಳಗೂ ದುಸ್ತರ! ಹೇಯವಾದ ಕೆಲಸವೇ ಸರ ! ಅಂಕೆ ಅಂತಹವೇ ಸ್ಥಿತಿ ಬೇಡವಾದಾಗ್ಯೂ ಭೂತದಂತೆ ಬಂದು ಕಬಳಿಸಿದರೆ, ಯಾರನ್ನು ದೂಷಿಸಬೇಕು ? ಯಾರನ್ನು, ಯಾವ ಬಗೆಯಲ್ಲಿ ಕಾಣಬೇಕು ?- ಎಂಬುದನ್ನು ಮನ ನಿಚಾರಿಸಲು. ಅನಿವೇಕಯುಕ್ತ ಕೆಲಸಗಳು ಆ ಪರಿಸ್ಥಿತಿಯಲ್ಲಿ ಜರುಗಿದರೂ ಆಶ್ಚರ್ಯವಾಗವಂತಹದು. ಧರ್ಮವೇ ತಲೆಯೆತ್ತಿ ನಡಹತ್ತಿದಾಗ, ಸಮಾಜ ದುರುಗುಟ್ಟುವತ್ತ ವ್ಯಕ್ತಿಯ ರಸಾತಳವನ್ನೇ ಬಯಸುತ್ತಿದ್ದಾಗ, ಅನೆರಡನ್ನೂ ಎದುರಿಸಿ ಬಾಳುವ ಧೀರೋದಾತ್ತತೆಯನ್ನು ಆಸುವದು ನಮ್ಮ ಸಮಾಜಕ್ಕೆ ತುಂಬಾ ದೂರ.- ' ನಿನಿಲ್ಲದಿದ್ದರೂ ಅಷ್ಟೆ, ಧರ್ಮವೊಂದಿರಲಿ ' ಎಂದು ಹೇಳುವ ಜನಕ್ಕೇನೂ ಕಡಮೆಯಿಲ್ಲ ನಮ್ಮ ಸಮಾಜದಲ್ಲಿ ! ವೈಯಕ್ತಿಕ ಧರ್ಮವು ಮಧ್ಯದಲ್ಲಿ ಮಾನವನಿಹೆಜವಾದ ಧರ್ಮವನ್ನೂ ಪ್ರವೃತ್ತಿಯನ್ನೂ, ಹಿತಾಹಿತಗಳನ್ನೂ ಬದಿಗೊತ್ತಿ ಸಾಗುವ ಜನಕ್ಕೆ ನಮ್ಮದು ಒಂದು ಆದರ್ಶ ಉದಾಹರಣೆ— ಧರ್ಮ ಬಲೆಯಾಗಿದೆ ಇಲ್ಲಿ. ಧರ್ಮಾಂಧತೆಗೆ, ಸಮಾಜದ ತರುಣಾರಹಿತ ನಿಯಮಗಳಿಗೆ ವ್ಯಕ್ತಿ ಹೆದರಿ, ತನ್ನ ಸಹಜ ಆತಾಪ್ರವೃತ್ತಿಗಳನ್ನು ಒನ್ಮೆ ನೂರೀಕರಿಸಿದರೂ, ಆ ಗುಣ ತಾನೇ ತಾನಾಗಿ ಅವನ ಧಮನಿಗಳಲ್ಲೆಲ್ಲಾ ಹರಿಡಿಕೊಳ್ಳುವದಕ್ಕೆ ಈ ಕತೆ (ಪಾಪ ಮತ್ತು ಪಾಪಿ) ಒಂದು ಪಾವರಿ ವ್ಯಾಯವಾಗಿದೆ !!

ಮಕ್ಕಳೇ ಪ್ರಾಣವೆಂದು ಹೆಂಬಲಿಸಿ, ಏಳು ಪರ್ವಗಳನಂತರ ನೂಟವಾದ ವೈಯಿಂದ ಕೂಡಿನ, ಮುದ್ದು ಮುದ್ದು ಮಾತುಗಳಿಂದ ದಂಪತಿಗಳಿಗೆ ಹರುಷವನ್ನೀಯುತ್ತ ನಕ್ಕು ನಗಿಸುವ ಬಾಧೆ ಬಂದಿಳಿದಾವರೂ, ಬಹಳ ನರುಷ ಬಿಡದೆ, ಬಾಲ್ಯದಲ್ಲಿಯೇ ತೆಗೆದುಕೊಂಡು ಹೋಗುವ ದೇವನ ಲೀಲೆ ಶಾಸ್ತ್ರಿಗಳಿಗೆ ಬಿಡಿಸಲಾರದ ಸಮಸ್ಯೆಯಾಗಿತ್ತು. ಪತ್ತಿದ್ದಕ್ಕಾಗಿ ಚಿಂತಿಸುವದು ತಿಳಿದವನಿಗೆ ಶೋಭಿಸುವದಿಲ್ಲ ಎಂದು ಯೋಚಿಸಿ, ಹಾಲಿತ್ತ ಸಲಹಿದ, ತನ್ನ ರಕ್ತದಿಂದ ಪೋಷಿತವಾದ ಮಗಳನ್ನು ಗುಂಡಿಯಲ್ಲಿಡುವಾಗ, ಬಂದು ಸ್ಥೈರ್ಯವನ್ನು ಆಶ್ರಯಿಸಿದ್ದರು ಶಾಸ್ತ್ರಿಗಳು. ಆದರೆ ವಿಧಿ ಅವರನ್ನು ಆಷ್ಟಕ್ಕೆ ಬಿಡದೆ, ತನ್ನ ನಾಲಗೆಯನ್ನು ನುಂದೆ ಚಾಚಿತು. ಪತ್ತ ಮಗು ಮರಳಿತ್ತು- ಜೀವ ಬಂದು ಅಳುತ್ತಿತ್ತು ! ಎತ್ತ ಬೇಕೆಂದು ಹರುಷದಿಂದ ನುಂದು ನರೆದಾಗ, ಧರ್ಮನೇ ನೂರ್ತಿವೆತ್ತು ಬಂದಂತಿದ್ದ, ಜೋಯಿಸರು, ಅವನನ್ನು ತಡೆದರು. " ಈಗ ಆ ಮಗು ಅನಿಷ್ಟ !" ಎಂದರು ಜೋಯಿಸರು. ಆದರೆ ' ಹೆತ್ತ ನುಗಳು ತಂದೆಗೆ ಹೇಗೆ ಅನಿಷ್ಟವನ್ನು ತರುವಳು ? ' ಎಂಬುದು ಶಾಸ್ತ್ರಿಗಳಿಗೆ ತಿಳಿಯಲಿಲ್ಲ. ' ತನಗಾಗಿ ಸರಮಾತ್ಮನನ್ನ ಮಗಳಲ್ಲಿ ಪುನಃ ಜೀವ ತುಂಬಿದ್ದಾನೆ' ಎನ್ನುವದೇ ಅವರ ನಿಚಾರ.—" ನಿನ್ನ ಮಗುವಿಗಾಗಿ ಬ್ರಾಹ್ಮಣಿಕೆಯ ನಿಯನು-ನೀತಿಗಳನ್ನೇ ತಲೆಕೆಳಗೆ ಮಾಡುತ್ತಿದ್ದಿ ! ತಿಳಿದವ ನೀನು ಮಾಡಬಾರದು ! ಮಹಾಪಾಪ ! ಸಕ್ಕೇಳು ಜನ್ಮಕ್ಕೂ ಕಾಡುವ ಪಾಪ ! " ಎಂದು ಜೋಯಿಸರು ನುತಿದಾಗ, ಶಾಸ್ತ್ರಿಗಳು ದಂಗುಬಡಿದರು. ಜೀವಂತ ಮಗುವನ್ನು ತಂದೆಯೇ ಕೊಲ್ಲುವ ಬ್ರಾಹ್ಮಣಿಕೆಯು ಅವರಿಗೆ ಅರ್ಥವಾಗಲಿಲ್ಲ ! ಕಪಟವಿಲ್ಲದ್ದದು ತಂದೆಯ ವಾತ್ಸಲ್ಯ !- ಮಗುವಿಗಾಗಿ ಜೋರಿ ! ಆದೂ ಒಂದೊಂಮೆ ಧರ್ಮ, ಸಮಾಜದ ಕಟುನಿಯಮನು ಅವರಲ್ಲಿ ಜಾಣೆ ಹುಕುತ್ತಿದ್ದುವು. ಮಳ್ಳು ಹೇಳಿ ಮಗಳನ್ನು ಉಳಿಸಿಕೊಂಡು ಧರ್ಮದಲ್ಲಿಯೂ ಇರಬೇಕೆಂಬ ಭಾವವನ್ನು ಜೋಯಿಸರ ನುಂದೆ ನುಡಿದಾಗ, ಜೋಯಿಸರು ಅದಕ್ಕೂ ಜಗ್ಗಲಿಲ್ಲ. ಜನರಿಗೆ ಬ್ರಾಹ್ಮಣಿಕೆ, ಬಹಿಷ್ಕಾರಗಳೇ ಕಾಣಿದು ಕುಪ್ಪಳಿಸುತ್ತಿದ್ದುದೇ ಕಾಣಿಸಿದ್ದರಿಂದ, ಶಾಸ್ತ್ರಿಗಳನ್ನು ಸುಮ್ಮನಾಗಿಸಿಬಿಟ್ಟರು. ಅವರೆ, " ಧರ್ಮ, ನಿಯಮಗಳು ಏನು ? " ಎಂಬುದನ್ನು ಅರಿಯದ ಕೇವಲ ನಿತೃಭಾವನೆಯಿಂದಲೇ ಕೂಡಿದ ಸೀರ್ ಸಾಬಿಗೆ ನುಗುವೊಂದೇ ಪ್ರಾಧಾನ್ಯವಾಯಿತು ! ಕೂಳಿಕ್ಕಲಾಗದ ಮುದುಕನಷ್ಟಿ ಕರುಣೆ ಉಪಾರವಾಗಿತ್ತು! ವಾತ್ಸಲ್ಯ ಸೀಮಾತೀತನಾಗಿತ್ತು ! " ಪಾಪ ಬಂದರೆ ನನಗೆ ಬರಲಿ " ಎಂದು, ಹೆತ್ತ ತಂದೆಯನ್ನೇ ಮೂಡಲಿಸಿ ನುಡಿದ ಸೀರ್ ಸಾಬಿ !

ಬ್ರಾಹ್ಮಣಿಕೆಗೆ ಅಷ್ಟೇ ಸಾಗಲಿಲ್ಲ— 'ತಾನು ಸಾಕದಿದ್ದರೂ ಅಷ್ಟೆ, ತನ್ನ ಮಗುವನ್ನು ಒರ್ವ ಮುಸ್ಲಿಂ ಸಾಕುತ್ತಿದ್ದಾನೆ' ಎಂದು, ಜನಕ್ಕೆಲ್ಲಾದೂ ತಿಳಿದರೆ, ತನಗೆಷ್ಟು ಅಪಮಾನ-ಎಂದು ಯೋಚಿಸಿದ ಬ್ರಾಹ್ಮಣ ಮನಕ್ಕಾಗಿ ಏನೆಲ್ಲಾ ಪ್ರಯತ್ನ ಪಟ್ಟ— ಕೊನೆಗೂ ಸಾಧಿಸದೆ ಹೂರು ಬಿಟ್ಟ. ತಾಯಿಗೆ ತಿಳಿದಿಲ್ಲ ಮಗಳ ಮರಣಂತ— ಸತ್ತಕಿಂದೇ ಅವಳ ಎಣಿಕೆ. ಬಹುಶಃ ನಿಜಸ್ಥಿತಿ ತಿಳಿದಿದ್ದರೆ ಅಷ್ಟು ಅಂಧಶ್ರದ್ಧೆ, ಭಯಗಳು ಮಾತೃಹೃದಯಲ್ಲಿ ಪ್ರವೇಶಿಸದೆ ಕೇವಲ ತಾಯಿಯಾಗಿಯೇ ಆ ಒಡಲ ಹಿರಿಮೆ ಎತ್ತಿ ತೋರಿಸುತ್ತಿದ್ದಳೇನೋ !

ಮಕ್ಕಳು ಜಾಸ್ತಿ ಇದ್ದರೂ ಒಂಮೊಂಮೆ ಮಮತೆ ಹೆಚ್ಚಾಗುವ ಸಂಭವ ಉಂಟು— 'ಮಕ್ಕಳು ದೇವರು ಕೊಟ್ಟ ಕೊಡುಗೆ' ಎಂದು ತಿಳಿದಾಗ ಅಂತೇ ಸೀರ್ ಸಾಬಿ ಶಾಸ್ತ್ರಿಗಳ ಮಗಳನ್ನು ಮಮತೆಯಿಂದ ಸಾಕಿದ— ತನ್ನ ಮಕ್ಕಳಿಗಿಂತಲೂ ಅಧಿಕ ಪ್ರೀತಿಯಿಂದ ಸಾಕಿದ. 'ತನ್ನ ಮಕ್ಕಳಿಗೆ ತಂದೆಯಾದರೂ ಇದ್ದಾನೆ—ಆದರೆ ಅವಳಿಗೆ ಯಾರೂ ಇಲ್ಲ ಅನಾಥೆ.' ಎಂದು ಅವನ ಅಭಿಪ್ರಾಯ. ರಾಧೆ ಇಂದು ನೂರಜಹಾನ್..... ಸೀರ್ ಸಾಬಿ ಅವಳ ದಾದಾ..... ತುಂಬಾ ಕರುಣಾಜನಕ ಹನ್ನೀರೇ !

ಜೋಯಿಸರು ಧರ್ಮಕ್ಕೆ ಅಂಟಿಕೊಂಡರೂ, ಮಕ್ಕಳಲ್ಲಿದ್ದ ಮಮತೆಯನ್ನು ಕಠೋರನಿಯಮವನ್ನಾಗಿ ಪರಿವರ್ತಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. 'ತಾನು ಮಾಡಿದುದು ತಪ್ಪು, ಸುಬ್ಬಾಶಾಸ್ತ್ರಿ ನನ್ನಿಂದಲೇ ಕಷ್ಟ ಅನುಭವಿಸಿದ, ತಂದೆ-ತಾಯಿಗಳಿದ್ದೂ, ಆರಾಮಾಗಿ ಬದುಕುವದಕ್ಕೆ ಸಾಧ್ಯವಾದಾಗ್ಯೂ ಪೀರ್‌ಸಾಬಿಯು ಮನೆಯಲ್ಲಿ ಆರಿಕೂಳು ತಿಂದು ಬದುಕುವ ಸ್ಥಿತಿ ರಾಧೆಗೆ ಬಂದಿರುವದು. ನನ್ನ ದೆಸೆಯಿಂದಲೇ' ಎಂಬ ಅವರ ಒಳಮನಸ್ಸು ಆಗಾಗ ನುಡಿಯತೊಡಗಿತು— ಆ ಮಗುವಿನ ಬಗೆಗೆ ಪ್ರೀತಿ ಅಧಿಕವಾಗಿ ಮೊಳೆಯಿತು. ಆದರೂ ಒಪ್ಪಲಿಲ್ಲ. ಬ್ರಾಹ್ಮಣ ಹುಡುಗಿಯೆಂದು— ಸಮಾಜದೆದುರು ನುಡಿಯಲಿಲ್ಲ ಸೆಣೆಸಲಿಲ್ಲ..... ಅದು ಅವರಲ್ಲಿದ್ದ ದೌರ್ಬಲ್ಯ'— ಸಮಾಜದಲ್ಲಿದ್ದ ಕಟ್ಟುನಿಯಮ-ಧರ್ಮದಲ್ಲಿದ್ದ ಅಂಧಶ್ರದ್ಧೆ —!

ತಂದೆಯ ಮನಸ ಮರೆತೀತೇ ಮಗುವನ್ನ? ಹಗಲು-ರಾತ್ರಿ ಎಲ್ಲೆಲ್ಲಿಯೂ ಆ ಮುದ್ದುಮಗುವಿನ ತೊದಲುನುಡಿಯೇ ಅವರ ಕಿವಿಗೆ ಕೇಳಿಸುತ್ತಿತ್ತು. ಹೆಂಡತಿಗೆ ಹೇಳದೆ ಕಳೆದ ಕೆಲವು ಕಾಲ. ಕೊನೆಗೊಮ್ಮೆ ಹೆಂಡತಿಗೆ ಹೇಳಿದಾಗ, ಅವಳು ಎದೆ ಒಡೆದುಕೊಂಡು ತೀರಿಕೊಂಡಳು. 'ತನ್ನ ಮಗಳನ್ನು ಕೊಂದ ಸಮಾಜ ನನಗೆ ದೂರ. ತುಂಬಾ ನೀಚ ಸನಾತನವಾದುದು— ಇವರಲ್ಲಿ ಮನುಷ್ಯತ್ವವೇ ಇಲ್ಲ! ಇಲ್ಲಿ ತಾಯಿ ಹೃದಯಕ್ಕೆ ತಾಣವಿಲ್ಲ' ಎಂದಿತು ಮಡಿವಳೇನೋ ಅನ್ನುವುದಿತ್ತು ಅವಳ ಬಿಗಿದ ನೊಗದ ಛಾಯೆ! ತಂದೆ ಮಗಳಾಗಿ ಹುಬಲಿಸಿ ತಿರುಗಿ ಊರಿಗೆ ಬಂದ. ಮಗಳು ತನ್ನನ್ನು 'ಅಪ್ಪ' ಎಂದು ತಿಳಿದ ಬರುಹದು. ನನ್ನೊಡನೆ ಪುನಃ ಅದೇ ಭಾವನೆಯೊಂದಿಗೆ ನಡೆದುಕೊಳ್ಳಬಹುದು.' ಎಂದಿತ್ತು ಶಾಸ್ತ್ರಿಗಳ ವಿಚಾರ. ಎರಡು ವರುಷದ ಮಗಳು ಇಂದು ಎಂಟು ವರುಷದ ಹುಡುಗಿ— ಎಂಬುದನ್ನು ಮರೆತಿದ್ದರು. ಅನಳಿಗೆ ಇಂದು ಪೀರ್‌ಸಾಬಿಯೇ ದಾದಾ ಎಂದು ಶಾಸ್ತ್ರಿಗಳು ಅರಿಯದಾಗಿದ್ದರು— ಮಗಳ ವಿಚಾರದಲ್ಲಿ ಹುಚ್ಚನಾಗಿ ಪೀರ್‌ಸಾಬಿಯು ಮನೆಗೆ ಬಂದು, ಮಗುವಿಗಾಗಿ ಹಂಬಲಿಸಿ ಅಂಗಲಾಚಿದಾಗ, ಮಲಗಿದ ಮಗುವನ್ನು ತಂದೆಯು ಹೃದಯವನರಿತ ಪೀರ್‌ಸಾಬಿ ತಂದುಕೊಟ್ಟ. ಆಗ ಅವರಲ್ಲಿದ್ದ ವಿಮತಿ, ಪ್ರೀತಿ, ಎಲ್ಲಾ ಒಂದೇ ಸಾರಿ ಬಂದು, ಅವರನ್ನು ಮುಕ್ತಿದಿಂಗ, ತನ್ನನ್ನು ತಾನೇ ಮರೆತು ಮಗಳ ಪ್ರೀತಿಯೊಂದಿಗೆ ತಂಗನನ್ನು ಮುತ್ತಿಟ್ಟ! — ತಾಯಿ ಕರುವನ್ನು ನೆಕ್ಕುವಂತೆ! ಆದರೆ ಮನಗೆಗೆ ಅದು ಬೇತವಾಗಿತ್ತು. ಅವಳಿಗೆ ಶಾಸ್ತ್ರಿಗಳು ಹುಚ್ಚ, ಗುಮ್ಮ— ತಂದೆಯೆಂದೂ ತಿಳಿಯುವ ಹಸುಳೆ, ಹೊಡೆದಳು ತಂದೆಗೆ. ಶಾಸ್ತ್ರಿಗಳಲ್ಲಿದ್ದ ಎಲ್ಲಾ ಆಶೆಗಳು ರಸಾತಳಕ್ಕೆ ಇಳಿದು ಮರುಮನಾತನಾದವನೆ ಹಿಂದಿರುಗಿ ನಡೆದರು. ಕೊನೆಯಲ್ಲಿ ಸಾವನ್ನಪ್ಪಿದರು!

ಯಾರೋ ಮಾಡಿದ ಪಾಪಕ್ಕಾಗಿ ಪಾಪಿಯೆಂದು ಮನುಷ್ಯನ ಹೃದಯ ನಡುಗಬೇಕೆ? ತನ್ನ ಮಗಳನ್ನು ಸಾಕುವದು ಪಾಪವೇ? ಕೊಟ್ಟು ತೆಗೆದುಕೊಂಡು ಹೋಗುವದು ಪಾಪವೇ? ಪ್ರೀತಿ, ಪ್ರೇಮ, ದಯೆ, ದಾಕ್ಷಿಣ್ಯ, ಮಮತೆಗಳನ್ನು ಬದಿಗೊತ್ತಿದ ಸಮಾಜದ ನಿಯಮನೀತಿಗಳು ಪಾಪಪೂರಿತವೇ? ಧರ್ಮಕ್ಕೆ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಅಂಟಿಕೊಂಡಿರುವದು ಪಾಪವೇ? ಬಿಡುವದು ಪಾಪವೇ? ವ್ಯಕ್ತಿ ವಿಷಯ ಸಮಾಜ ಪಾಪಿಯೇ?- ಎಂಬೆಲ್ಲ ಪ್ರಶ್ನೆಗಳನ್ನು ಗೂಢವಾಗಿರಿಸಿದ ಈ ಕತೆ ತುಂಬಾ ಮಾರ್ಮಿಕವಾಗಿದೆ — ವ್ಯಕ್ತಿ ಒಳ್ಳೆಯವ — ಜನರು ಕೆಟ್ಟವರು— *'Man is kind but men are cruel'* ಎನ್ನುವ ಮಾತು ಜೋಯಿಸರ ವ್ಯಕ್ತಿತ್ವದ ಉದ್ದಕ್ಕೂ ಅಳವಡಿಸಿಕೊಂಡಿದೆ. ಜೋಯಿಸರು ಹೆದರಿದ್ದು ಸಮಾಜಕ್ಕಾಗಿ. ಅಂತೇ ತನ್ನ ಭಾವಕ್ಕಾಗಿ ಮರುಗಿದರು.

ಮನುಷ್ಯ ಹೆದರಿ ಬಾಳುವದರಲ್ಲಿ ಸಾರ್ಥಕವಿಲ್ಲ— ಸಮಾಜ ನಿಂದಿಸೀತು— ಬಹಿಷ್ಕಾರವಿತ್ತೀತು— ಬ್ರಾಹ್ಮಣಿಕೆ ಹೋದೀತು— ಆದರೆ ಅವುಗಳಿಗಾಗಿ ಮಾನವಧರ್ಮವನ್ನೇ ಕೊಲೆಸೈಯುವುದು ಸೂಕ್ತವೇ?

ನನ್ನ ಧರ್ಮವಿದು.

ನನ್ನ ಧರ್ಮವದು ಎಂಬ ಕದನದಲ್ಲಿ, ತಮ್ಮ ಧರ್ಮವನೆ ಮರೆತು
ರೋಷದಲಿ ರಕ್ತ ಸುರಿಪ ಜ್ಞ!'

ಎನ್ನುವ ಮಾತು ಸದಾ ಜಾಗೃತವಾಗಿರಬೇಕೆಂಬುದೇ ಈ ಕತೆಯ ತಾತ್ಪರ್ಯ. "ಮನೆಯ ದೀಪವಾದರೂ ಮುತ್ತುಕೊಡಲು ಹೋದರೆ ಬಾಯಿಗೆ ಬಿಸಿ ತಗಲದಿರದು." ಎಂಬುದನ್ನು ಸೂಚ್ಯವಾಗಿ ಸಾರಿ ಹೇಳುವ 'ಕಿಟ್ಟಣ್ಣ'ನವರ "ಪಾಪ ಮತ್ತು ಪಾಪಿ" ಕತೆ, ಈ ತರದ ಕನ್ನಡ ಕಥಾಶ್ರೇಣಿಯಲ್ಲಿ ಒಂದು ಮೈಲುಗಲ್ಲು ❋

★ ಕುಂಜು ★

(ಅನುವಾದಿತ ಕಥೆಯ ಏಮುರ್ಶ)

ಶ್ರೀ. ಅರವಿಂದ ಆರ್. ಕುಲಕರ್ಣಿ, ಅಥಣಿ.

ರಸಿಕ ಹೆಣ್ಣಿನ ದಾಂಪತ್ಯಿಕ ಜೀವನ ಗಂಡನ ಸಾಮಾಜ್ಯವನ್ನು ಇಚ್ಛಿಸುವದು ಸ್ವಾಭಾವಿಕವೇ! ನಿರಾಶೆ ಕಂಡು ಬಂದಾಗ ಹೆಣ್ಣು ಯಾವ ಹಾದಿ ಹಿಡಿಯುವಳೋ ಹೇಳಲುಬಾರದು. ಸರಿಸರವೇ ಒಂದು ಹೆಣ್ಣಿನ ಸ್ವಭಾವಕ್ಕೆ ಮೂಲ. ತಾಯ್ತನವೇ ಅವಳ ಆದರ್ಶ. ದೈವವೇ ಅವಳ ಹಿಡಿತ.—ಎಂಬುದನ್ನು ಪ್ರತಿಬಿಂಬಿಸುವ ಈ ತಮಿಳು ಕಥೆ "ಕುಂಜು" ಶ್ರೀಮತಿ ಗುರುಪ್ರಿಯಾ ಅವರಿಂದ ಬರೆಯಲ್ಪಟ್ಟಿದ್ದು, ಇವನ್ನೇ ಶ್ರೀಮತಿ ಜಯಲಕ್ಷ್ಮೀ, ಶ್ರೀನಿವಾಸರವರು ಕನ್ನಡಕ್ಕೆ ಭಾಷಾಂತರಿಸಿ, ನಮ್ಮೆಲ್ಲರ ಮುಂದಿಟ್ಟಿದ್ದಾರೆ.

ಕಥೆಯು: ಕುಂಜ ತನ್ನ ಹದಿನೇಳನೆಯ ವರುಷದಲ್ಲಿಯೇ ಗಂಡನ ಮನೆ ಸೇರಿದ್ದಳು. ಗಂಡ ಶೇನು ಎಂ. ಎ. ಪಾಸಾಗಿದ್ದ. ನೌಕರಿ ಶೋಧನೆಗಾಗಿ ಊರೂರು ಅಲೆಯಬೇಕಾಗಿತ್ತು. ಆದ್ದರಿಂದ ಕುಂಜು

ವನ್ನು ಅವಳ ತವರು ಮನೆಯಲ್ಲಿಯೇ ಇಟ್ಟಿದ್ದ. ಶೀನು ಎರಡು ವರುಷಗಳ ವರೆಗೂ ಅಲೆದು ಕೊನೆಗೆ ಕಲಕತ್ತೆಯಲ್ಲಿ ನೌಕರಿ ದೊರೆಯಿತು. ಅನಂತರ ಕುಂಜು ತನ್ನ ಎರಡು ವರುಷದ ಮಗು ಗೋಪುವಿನ ಜತೆ ಕಲಕತ್ತೆಗೆ ಹೋದಳು. ಶೀನುವಿನ ಸಾಮಿಪ್ಯದ ಬಗ್ಗೆ ಕುಂಜು ಏನೇನೋ ಕನಸು ಕಟ್ಟಿದ್ದಳು. ಕಾನೊಂದು ಬಗೆದರೆ ದೈವವೊಂದು ಬಗೆಯಿತು – ಎನ್ನುವಂತೆ, ಕುಂಜುವಿನ ಕನಸು ಸನಸಾಗದೆ ಉಳಿಯಿತು. ಕಲಕತ್ತೆಯಲ್ಲಿ ಕುಂಜು ತನ್ನ ಸೋದರತ್ತೆಯಲ್ಲಿ ಒಕ್ಕಲಾಗಿದ್ದಳು. ಚೀಚಿ ಅತ್ತೆಗೆ ರಾಮು ಒಬ್ಬನೇ ಮಗ. ರಾಮು ಕುಂಜುವನ್ನು ಕಾಮುಕ ದೃಷ್ಟಿಯಿಂದ ನೋಡಿದ. ತನ್ನ ತಾಯಿಯ ಸಹಾಯದಿಂದ ಏನೇನೋ ಜುಚ್ಚುಪಾತಗಳನ್ನಾಡಿಸಿದ; ತಾನೂ ಆಡಿದ. ಇದಿರುಮನೆಯ ಶಾಸ್ತ್ರಿಯನ್ನು ಮುಂದೊಡ್ಡಿದ. ಈ ರೀತಿ ಪರಿಸರದಿಂದ ಕುಂಜು ಶೀನುವಿನ ಬಗೆಗೆ ನಿರಾಶೆ ತಾಳಿ, ರಾಮುವಿನ ಜತೆ ಓಡಿಹೋಗುವ ವಿಚಾರವನ್ನು ಮಾಡಿದಳು. ಅವಳ ಮಗು ಗೋಪುವಿನ ಕರೆ ಅವಳನ್ನು ತಡೆ ಹಿಡಿಯಿತು. ಅವಳ ದೈವವೇ ಅವಳನ್ನು ತಡೆದು, ದಾಂಪತ್ಯಿಕ ಜೀವನದ ಸುಖ ಅನುಭೋಗಿಸುವಂತೆ ಮಾಡಿತು ಶೀನುವಿಗೆ ಮೂರು ತಾಸಿನ ಕೆಲಸ ಕೊಟ್ಟು, ಕೆಟ್ಟ ಪರಿಸರದಿಂದ ದೂರ ಒಯ್ದು.

ಕಥೆಯಲ್ಲಿ ವ ಯಿಖ್ಯ ಪಾ ತ್ರವೆಂದರೆ ಕುಂಜು. ಕುಂಜುವಿನಂಥ ಒಂದು ಸಾಮಾನ್ಯ ಹೆಣ್ಣು ಮದುವೆಯಾದ ನಂತರ ಗಂಡನ ಸಾಮಿಪ್ಯವನ್ನು ಇಚ್ಛಿಸುವಳು. ಸ್ವಾಭಾವಿಕವೇ. ಅದು ಸಾಧ್ಯವಾಗದಿದ್ದಾಗ ಗಂಡನ ಸಾಲ್ಕು ಅಕ್ಷರಗಳಾದರೂ ಮನ ಹಾತೊರೆಯುವದು. ಅದೂ ದೊರೆಯದಿದ್ದಾಗ, ಅವಳ ಹೃದಯ ನೊಂದುಬೇಗುವದು. ಮುಖ ಅಳುಮುಖವಾಗುವದು. ಅದರಲ್ಲೂ ಕುಂಜು ಒಂದು ವರ್ಷದ ಮಗುವಿನ ತಾಯಿ ಶೀನುವಿನಿಂದ ಒಂದು ವರುಷದ ವರೆಗೆ ಕಾಗದ ಬಂದಾಗ ಅವಳ ಪರಿಸ್ಥಿತಿ ಹೇಗಾಗಿರಬೇಕೆಂಬುದು ಓದುಗರೇ ವಿಚಾರಿಸಬಹುದು. ಒಂದು ವರುಷದ ನಂತರ ಅದು ದೊರೆತಾಗ ಅವಳ ಮನ ಅರಳುವದು. ಇದರಲ್ಲಿ ಅವಳ ಉತ್ಸುಕತೆ ಅಡಗಿದೆ. ಕುಂಜುವಿಗೆ ಮಾತ್ರವೆಂದರೆ ಪ್ರೀತಿ ಅದರಲ್ಲೂ ಶೀನುವಿನ ಜತೆ. ಆದರೆ ಶೀನುವಿಗೆ ಬೇಳೆ ದೊರೆಯ ಬತ್ತಿರಲಿಲ್ಲ ಮುಂಜಾನೆ ಆರರಿಂದ ರಾತ್ರಿಯ ಹತ್ತರ ವರೆಗೂ ಆಫೀಸ ಕೆಲಸ. ರಜೆಯ ದಿನದಲ್ಲಿ ಗೆಳೆಯರ ಚರ್ಚಾಕೂಟ. ಹೀಗಾಗಿ ಕುಂಜುವಿನಂಥ ರಸಿಕ ಹೆಣ್ಣಿಗೆ ಶೀನುವಿನ ಪೂರ್ತು ದೊರೆಯದೆ ಇದ್ದಾಗ ಮನ ಕೋಪಗೊಳ್ಳುತ್ತಿತ್ತು. ಅದು ಅಳವಿನ ರೂಪದಲ್ಲಿ ಕೊನೆಗಾಣುತ್ತಿತ್ತು. ಅದರಲ್ಲಿ ಚೀಚಿ ಅತ್ತೆ, ರಾಮು, ಶಾಸ್ತ್ರಿಯಂಥ ಪರಿಸರವಿದ್ದರಂತೂ ತೀರೇಹೋಯಿತು. ರಸಿಕ ಹೆಣ್ಣು ಇನ್ನ ಗಂಡನಲ್ಲಿ ಇಚ್ಛಿಸಿದ ಗುಣ ಬೇರೊಬ್ಬನಲ್ಲಿ ಕಂಡರೆ ವ್ಯಸನಪಡುವದು ಸಹಜವೇ. ಅಂತೆಯೇ ಕುಂಜು ! ತಮಾಷೆಯಾಗಿ ಮಾತನಾಡುವದೂ, ವಿನೋದವೂ, ಭಾವಪೂರ್ಣ ಹಾಡುಗಳೂ ರಾಮುವಿನಲ್ಲಿ ಕಂಡು ವ್ಯಸನಪಡುವಳು. ಚೀಚಿ ಅತ್ತೆಯು ಜುಚ್ಚಿ ಆಡಿದ ಮಾತುಗಳು ಕುಂಜುವಿನಲ್ಲಿ ಹುಟ್ಟುಗಿಕೊಂಡಿದ್ದ ಶೀನುವಿನಬಗೆಯ ಆಕೆಯನ್ನ ತೊಳೆದುಹಾಕಿದ್ದವು M A.

ಕಲಿತ ಶೀನು ಟ್ಯಾಕ್ಸ ಸಡೆಸುವನು... 'ಎಂದು ಹೇಳಿ, ಶೀನುವಿನ ಬಗ್ಗೆ ಇದ್ದ ಗೌರವವನ್ನೂ ತೊಳೆದು ಹಾಕಲಾಗಿತ್ತು. ಈ ರೀತಿ ನಿರಾಶಳಾದ ರಸಿಕ ಕುಂಜುವಿನ ಕಣ್ಣು ಮುಂದೆ ರಾಮುವಿನ ಜತೆ ಓಡಿ ಹೋಗುವ ಕಲ್ಪನೆಯೂ ಹಾಯ್ದುಹೋಯಿತು. ಆದರೆ ಕುಂಜು ರಸಿಕ ಹೆಣ್ಣೊಂದೇ ಅಲ್ಲದೆ ಆದರ್ಶ ತಾಯಿಯಾದದರಿಂದ ರಾಮುವಿನ ಸುಖ-ಸೌಲಭ್ಯಗಳಿಗೆ ಓಗೊಡದೆ ಮಗನ 'ಜಮ್ಮಾ' ಎಂಬ ಕರೆಗೆ ಓಗೊಟ್ಟಳು. ಮುಂದೆ ಕೆಲವೇ ದಿವಸಗಳಲ್ಲಿ ಶೀನುವಿಗೆ 'ದೇಹಲಿ.... ಹಿಂದು ಟಾಯಿಮ್ಸ್ಸು, ರೂ ೩೦೦ !– ಸಂಬಳ, ದಿನಕ್ಕೆ ಮೂರೇ ತಾಸು ಕೆಲಸ' ಎಂದು ಬಂದ ಕಾಗದ ನೋಡಿ ಕುಂಜುವಿಗೆ ಎಷ್ಟು ಸಂತೋಷವಾಗಿತ್ತೋ ಅಷ್ಟೇ ದುಃಖವಾಗಿತ್ತು. ತಾನು ಮಾಡಲು ಹೊರಟದ್ದ ತಪ್ಪು ನೆನೆದು. ತಾನು ಮಾಡಿದ್ದಕ್ಕೆ ಪಶ್ಚಾತ್ತಾಪ ಪಡುವದು ಒಳ್ಳೆಯ ಹೆಣ್ಣಿನ ಸ್ವಭಾವ.

ಈ ರೀತಿ ಕುಂಜುವಿನ ಪಾತ್ರವನ್ನು ಬಹಳ ಚೆನ್ನಾಗಿ ರಚಿಸಿದ್ದಾರೆ. ಕುಂಜುವಿನ ವರ್ಣನೆ ಮನ್ನು ಚೆನ್ನಾಗಿ ಮಾಡಿ ಅವಳ ಪ್ರತ್ಯಕ್ಷ ರೂಪವನ್ನೇ ನಮ್ಮ ಮುಂದಿಟ್ಟಿದ್ದಾರೆ. ಆದರೆ ಕುಂಜುವಿನ ವರ್ಣನೆ ಎಷ್ಟು ಮಾಡಿದರೂ ಲೇಪಿಕೆಯರಿಗೆ ತೃಪ್ತಿಯಾಗಿಲ್ಲ ಕಾಣುತ್ತೆ. ಕುಂಜು ಒನ್ಮೆ ಮುದ್ದೆ ಎಂದು ಹೇಳಿದರೆ, ಮತ್ತೊನ್ಮೆ ನಗುಮುಖದವಳೆಂದು ಹೇಳಿದ್ದಾರೆ. ವರ್ಣನೆ ಮಾಡುವ ಗಡಿಬಿಡಿಯಲ್ಲಿ ಕುಂಜುವಿನ ಚಂಚಲನೇತ್ರಗಳನ್ನು ಅವಳ ನಗುಮುಖಕ್ಕೆ ಜೋಡಿಸದೆ ಅಳುಮುಖಕ್ಕೆ ಜೋಡಿಸಿದ್ದಾರೆ ದುರ್ದೈವ್ಯಶಾಲಿನಿಯಾದ ಕುಂಜುವಿಗೆ ಅದೃಷ್ಟಶಾಲಿನಿಯೆಂದ ಏಕೆ ಹೇಳಿದ್ದಾರೋ, ಏನೋ ? ಎಂಬ ಪ್ರಶ್ನೆ ಓದುಗನ ಮುಂದೆ ಏಳದೆ ಇರಲಾರದು ಆದಕ್ಕಾಗಿ ಕಥೆಯ ಪ್ರಾರಂಭಕ್ಕೆ ದುರದೃಷ್ಟಶಾಲಿನಿಯೆಂದು ಹೇಳಿ ಕೊನೆಗೆ ಅದೃಷ್ಟಶಾಲಿನಿಯೆಂದು ಹೇಳಿದ್ದಾದರೆ ಬಹಳ ಸರಿಯಾಗಿ ತೋರುತ್ತಿತ್ತು.

ಸಂಸಾರದಲ್ಲಿ ಹೆಂಡತಿಯಷ್ಟೇ ಮಹತ್ವವ ಗಂಡನ ಪಾತ್ರಕ್ಕೂ ಇರುವದು. ಅವರಂತೆಯೇ ಇಲ್ಲಿ ಶೀನು. ಶೀನು ಕುಂಜುವಿನ ಗಂಡ ಎಂ. ಎ. ಪಾಸಾಗಿದ್ದ. ಕುಂಜುವಿಗೆ ಒಪ್ಪುವ ಸೌಂದರ್ಯ. B. S Holdane 'If a married life to be successful the husband should stedy his wife not only physiologically but also biologically and psychologically.' ಎಂದು ಹೇಳಿದಂತೆ ಎಂ. ಎ. ವರೆಗೆ ಓದಿದ ಶೀನುಗೆ ಇದು ತಿಳಿಯದಾಗಿತ್ತೆ ? ತಿಳಿದಿತ್ತು. ಆದರೆ ಮಾಡುವದೇನು? ಈಗಿನ ಜಗತ್ತಿನ ವಾತಾವರಣವೇ ಅವನನ್ನು ಎರಡು ವರುಷ ನೌಕರಿಗಾಗಿ ಅಲೆಯುವಂತೆ ಮಾಡಿತ್ತು. ಅಂತೆಯೇ ಶೀನು ಹಿಂದೀ, ಪಂಜಾಬಿ, ಭಾರತೀಯ ಹಾಡಿನ ಪುಸ್ತಕಗಳನ್ನು ತಂದಿಟ್ಟಿದ್ದ. ಕುಂಜುವಿಗೆ ಹೇಳಲಿಂದು ! ಆಫೀಸಿನ ಕೆಲಸವನ್ನಲ್ಲಿ ಬೇಳೆ ಸಿಕ್ಕಿರಲಿಲ್ಲವಷ್ಟೇ. ಶೀನುವಿಗೆ ಕುಂಜುವಿನ ಬಗ್ಗೆ ಸಾಕಷ್ಟು ವಿಶ್ವಾಸವಿತ್ತು. ಈ ಮಾತಿಗೆ ಶೀನು ಕುಂಜುವಿಗೆ ತನಗೆ ಪ್ರೊಮೋಶನ್ ದೊರೆತ ಸುದ್ದಿ ಹೇಳಲು ಬಂದಘಟನೆ ಸಾಕ್ಷಿಯಾಗಿದೆ.

ಶೀನುವಿಗೆ ಹೃದಯವಿತ್ತು, ಪ್ರೇಮವಿತ್ತು ಎಂಬುದು ರಾತ್ರಿ ಕೂಸು ಅಳುತ್ತಿರುವಾಗ ನಡೆದ ಘಟನೆಯಿಂದ ತಿಳಿದುಬರುವುದು.

ಈ ರೀತಿ ಶೀನುವಿನ ಮುಖಾಂತರ ಈಗಿನ ಜಗತ್ತಿನಲ್ಲಿಯ ವಾತಾವರಣವನ್ನು ಎತ್ತಿ ತೋರಿಸಿದ್ದಾರೆ ಲೇಖಕಿಯರು. ಎಂ. ಎ. ಕಲಿತರೂ ನೌಕರಿ ಸಿಗುವದಿಲ್ಲ–ಎಂಬ ಜನರ ತಪ್ಪು ತಿಳಿವಳಿಕೆಯನ್ನು ಕಿತ್ತಿ ಹಾಕಿದ್ದಾರೆ. ಮಾಂಪಶ್ಯಿಕ ಜೀವನದಲ್ಲಿ ಇರಬೇಕಾದ ಗಂಡನ ಸ್ವಭಾವವನ್ನು ತೋರಿಸಿದ್ದಾರೆ ಶೀನುವಿನ ಉದಾಹರಣೆಯಿಂದ.

ಇದೇ ರೀತಿ ಚೇಚೇ ಅತ್ತೆ, ರಾಮು, ಶಾಸ್ತ್ರಿ, ಅಜ್ಜಿ ರಾಜು ಶಾಸ್ತ್ರಿ ಅವರ ಪಾತ್ರ ಚೆನ್ನಾಗಿ ರಚಿಸಿದ್ದಾರೆ. ಆವರೆ ರಾಮುವಿನ ಮುಖಾಂತರ ಶೀನು 'M. A. ಕಲಿತರೂ ಟ್ಯಾಕ್ಸಿ ನಡೆಸುವ ಕೆಲಸ ಮಾಡುತ್ತಾನೆ' ಎಂದು ಹೇಳಿಸಿದುದು ಅತಿಶಯೋಕ್ತಿಯಾಗಿದೆ. ಇನ್ನೂ ಅಂತಹ ಪರಿಸ್ಥಿತಿ ಬಂದಿಲ್ಲ, ಬರಲಿಕ್ಕಿಲ್ಲ.

ಕಥೆಯೇನೋ ಬಹಳ ಚೆನ್ನಾಗಿದೆ. ಆದರೆ ಅನುವಾದ ಸ್ವಲ್ಪ ಗಡುಚಾಗಿದೆ. 'ಬಿಂದಿಗೆ ಹಾಲಿಗೆ ತೊಟ್ಟು ಮಜ್ಜಿಗೆ ಸಾಲದೇ, ಮೊರಾಗಲು ?' 'ತುಂಬಿದ ಹೃದಯದಲ್ಲಿ ಒಂದು ಕಲ್ಮಷ ತೋರಿದರೆ ಅದು ತುಂಬಿದ ಎಂದರೆ ನಿರ್ಮಲ ಮನಸ್ಸಾದೀತೆ' ಈ ಬರಹ ಉಕ್ತಿಗಳ ಅರ್ಥವನ್ನು ಕನ್ನಡದಲ್ಲಿ ತಿಳಿಸಿ ಹೇಳಲು ಪ್ರಯತ್ನವನ್ನೇನೋ ಮಾಡಿದ್ದಾರೆ. ಆದರೆ ಅಷ್ಟು ತೃಪ್ತಿಕರವಾಗಿ ತೋರುವದಿಲ್ಲ. ಲೇಖಕಿಯರು ಕುಂಜುವಿನ ಹೆಸರಿನಲ್ಲಿಯೂ ಸಹ ಜೀವ ತುಂಬಿದ್ದಾರೆ. 'ಕುಂಜು' 'ಕುಂಜಾಳು' ಕುಂಜಪ್ಪಾ' 'ಕುಂಜಾ' ಈ ನಾಲ್ಕು ರೀತಿಯಲ್ಲಿಯೂ ನಾಲ್ಕು ಜೀವಗಳೇ ಅಡಗಿವೆ. ಮಗು ಗೋಪಾಲನ ವರ್ಣನೆ 'ಮಗು ಗೋಪಾಲ ದೀಪದ ಬೆಳಕನ್ನು ನೋಡುತ್ತ ಕೈಕಾಲು ಬಡಿಯುತ್ತ ಆಟವಾಡುತ್ತಿದ್ದನು' 'ಗೋಪು ಕೈಯಲ್ಲಿ ಹಪ್ಪಳ ಹಿಡಿದು ಮುದ್ದು ಮುದ್ದಾಗಿ ನಡೆಯಲು ಕಲಿಯುತ್ತಿದ್ದನು.' ಎಂದು ಎರಡೇ ವಾಕ್ಯದಲ್ಲಿ ಹೇಳಿದ್ದರೂ. ಗೋಪುವಿನ ಮೂರು ವರಷದ ಬಾಲ್ಯದಾಟದ ಚಿತ್ರ ಕಣ್ಣು ಕಟ್ಟುವದು. ಚೆನ್ನಾಗಿದೆ.

ತಲೆಬರಹ 'ಕುಂಜು' ಬಹಳ ಸರಿಯಾಗಿದೆ. ಇಂತಹ ತಮಿಳು ಕಥೆಯನ್ನು ನಮ್ಮ ಸಮಾಜಕ್ಕೆ ನೀಡಲು ಭಾಷಾಂತರಿಸಿದ ಶ್ರೀಮತಿಯವರ ಕಥೆಗೆ ಸ್ವಾಗತವಿರಲಿ. ●

ರಜಿಸ್ಟ್ರೇಶನ್ ಆಫ್ ನ್ಯೂಜ್‌ಪೇಪರ್ [ಸೆಂಟ್ರಲ್] ರೂಲ್ಸ್ ೧೯೫೬ ರ ನಿಯಮ ೮ ಕ್ಕೆ ಸಂಬಂಧಿಸಿದ ಪ್ರಕಾರ, "ಜಯಂತಿ" ಮಾಸಪತ್ರಿಕೆಯ ಒಡೆತನ ಮತ್ತು ಇತರ ಸಂಗತಿಗಳನ್ನು ಕುರಿತ ವಿವರಣೆ :

೧.	ಪತ್ರಿಕೆಯ ಪ್ರಕಾಶನ ಸ್ಥಳ	"ಜಯಂತಿ" ಕಾರ್ಯಾಲಯ, ವಿಜಯರೋಡ್, ಧಾರವಾಡ.
೨.	ಪತ್ರಿಕೆಯ ಕಾಲಸಮಯ	ಮಾಸಪತ್ರಿಕೆ
೩.	ಮುದ್ರಕರ ಹೆಸರು	ಬಸವರಾಜ ಹೊರಡಿ, ಧಾರವಾಡ.
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	ಲಲಿತ ಮುದ್ರಣಾಲಯ, ಧಾರವಾಡ.
೪.	ಪ್ರಕಾಶಕರ ಹೆಸರು	ಕೃಷ್ಣಶರ್ಮ ಬೆಟಗೇರಿ
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	"ಜಯಂತಿ" ಕಾರ್ಯಾಲಯ, ವಿಜಯರೋಡ್, ಧಾರವಾಡ.
೫.	ಸಂಪಾದಕರ ಹೆಸರು	ಕೃಷ್ಣಶರ್ಮ ಬೆಟಗೇರಿ
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	"ಜಯಂತಿ" ಕಾರ್ಯಾಲಯ, ವಿಜಯರೋಡ್, ಧಾರವಾಡ.
೬.	ಪತ್ರಿಕೆಯ ಒಡೆಯರು	ಕೃಷ್ಣಶರ್ಮ ಬೆಟಗೇರಿ

"ಜಯಂತಿ" ಪತ್ರಿಕೆಯ ಒಡೆಯ, ಪ್ರಕಾಶಕ, ಸಂಪಾದಕನಾದ ನಾನು, ಮೇಲಿನ ವಿವರಗಳ ಸತ್ಯತೆಯ ವಿಷಯದಲ್ಲಿ ಖಾತ್ರಿಯನ್ನು ಇದರ ಮೂಲಕ ಸಾರಿ ಹೇಳುತ್ತೇನೆ.

ಕೃಷ್ಣಶರ್ಮ ಬೆಟಗೇರಿ

ಸಾದರ ಸ್ವೀಕಾರ

೪೧. **ಮಣಿಪಾಳದ ಸಮ್ಮೇಳನದ ಸಿಂಹಾವಲೋಕನ** ಮತ್ತು ಸಮ್ಮೇಳನಾಧ್ಯಕ್ಷರ ಭಾಷಣವನ್ನು ಕುರಿತು (ಒಂದು ನಿವರಣೆ). ನಿವರಣೆ ಕೊಟ್ಟವರು ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು, ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ರೊ. ಅ. ೧೨ ಪುಟಗಳು.

ಮಣಿಪಾಳದ ಸಾಹಿತ್ಯ ಸಮ್ಮೇಳನ ಮುಗಿದರೂ, ಅದರ ಬಗೆಗೆ ಅಪಸ್ವರ ಬೆರೆತ ಪ್ರತಿಧ್ವನಿಗಳು ಏಳುತ್ತಲೆ ಇವೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ರಜೋಗುಣ ಪ್ರವೇಶಮಾಡಿದುದರ ಲಕ್ಷಣವಿದು. ಅಡಿಗೆಮನೆಯ ಅಧಿಕಾರಕ್ಕಾಗಿ ಬಡಿದಾಡುವ ಇಬ್ಬರು ಹೆಣ್ಣುಮಕ್ಕಳು, ಒಬ್ಬರೊಬ್ಬರ ಅಡಿಗೆಯ ಪದಾರ್ಥಗಳಲ್ಲಿ ಕಹಿಯನ್ನು ಬೆರಸಿದಂತಿದೆ ಇದು. ಇವರಿಬ್ಬರ ದ್ವೇಷದ ಪರಿಣಾಮವನ್ನು ಉಣ್ಣುವವರು ತಾಳ್ಮೆಯಿಂದ ಅನುಭವಿಸಬೇಕಾಗುವುದು. ತಾಯಿ ಕನ್ನಡ ತಾರದೆ, ತನ್ನ ವೀಣೆಯ ಇಂಚರದಿಂದ, ಈ ಅಪಶ್ರುತಿಗಳನ್ನು ಅಡಗಿಸಲೆಂದು ಪ್ರಾರ್ಥನೆಯಾಕೆ. 'ತಾಳಿದವನಿಗೆ ಸಿರುಬ್ಬ ಲೋಕವೊಳುಂಟೆ ?'.

೪೨. **ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ** (ವಿಮರ್ಶನಾತ್ಮಕ ಲಘುಗ್ರಂಥ). ಲೇಖಕರು ಶ್ರೀ. ಸಿ. ಸಿ. ರಂಗಸ್ವಾಮಿ ಎಂ. ಎ. ಜಿನರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸನ ಗ್ರಂಥಮಾಲೆ. ೨೦ನೆಯ ಕುಸುಮ. ಪ್ರೂ. ಕ್ರಾ. ಅ. ೬೪ ಪುಟಗಳು. ಬೆಲೆ ೦೦-೨೫.

೪೩. **ಸಮಾಜಕಾರ್ಯ** (ವಿಮರ್ಶನಾತ್ಮಕ ಲಘುಗ್ರಂಥ). ಲೇಖಕರು ಶ್ರೀ. ಎಸ್. ಎಂ. ಮಲುಳಸಿದ್ಧಯ್ಯಾ ಎಂ. ಎ., ಎಂ. ಎ. (ಎಸ್. ಡಬ್ಲ್ಯೂ.) ಇದು ಕರ್ನಾಟಕ ವಿ. ವಿ.ನಿಲಯದ ಪ್ರಚಾರೋಪನ್ಯಾಸ ಗ್ರಂಥಮಾಲೆಯ ಎಂಟನೆಯ ಕುಸುಮ. ಪ್ರೂ. ಕ್ರಾ. ಅ. ೬೪ ಪುಟಗಳು. ಬೆಲೆ ೦೦-೨೫.

೪೪. **ಕಂಕಣದ ಕಂಠಿಲ್ಲ** (ಸಾಮಾಜಿಕ ನಾಟಕ) ಬರೆದವರು 'ಸೀತಾಪತಿ'. ಪ್ರಕಾಶಕರು ಚಾತಕ ಪ್ರಕಾಶನ, ಬೆಂಗಳೂರು-೨ ಪ್ರೂ. ಕ್ರಾ. ಅ. ೫೬ ಪುಟಗಳು. ಬೆಲೆ ೦೦-೫೦.

೪೫. **ಸಾಧನಾ** (ಸಚಿತ್ರ ವಾರ್ಷಿಕ ಸಂಪುಟ). ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾಪಾಠಶಾಲೆಯ ವಿದ್ಯಾರ್ಥಿನೀವೃಂದ ಮತ್ತು ಅಧ್ಯಾಪಕರ ಬೇಟಣಗಳಿಂದ ಕೂಡಿದ ಸಂಪುಟವಿದು. ಶಾಲೆಯ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಚಿತ್ರದ ಪುಟಗಳು ಜೇಕೆಯಾಗಿವೆ ಕ್ರೌ. ಅ. ೬೦ ಪುಟಗಳು. ಕನ್ನಡ ಲೇಖನಗಳಿಗಾಗಿ ೪೦ ಪುಟಗಳನ್ನೆ ಅಚ್ಚುಕಟ್ಟಾದ ಮುದ್ರಣ.

೪೬. **ಮಣ್ಣಿನ ಮೊರಪಣಿಗೆ** (ಕವಿತಾ ಸಂಕಲನ) ಬರೆದವರು ಶ್ರೀ. ಚಿನ್ನವೀರ ಕಣವಿ, ಧಾರವಾಡ. ಪ್ರಕಾಶಕರು ಶಾರದಾ ಪ್ರಕಾಶನಾಲಯ, ಆರಳೇಪೇಟೆ, ಬೆಂಗಳೂರು—೨. ಕ್ರೌ. ಅ. ೭೫ ಪುಟಗಳು. ಬೆಲೆ ೧-೫೦.

೪೭. **ಹೇಮಾ ಹಾಗೂ ಇತರ ಕಥೆಗಳು** (ಕಥಾಸಂಕಲನ) ಲೇಖಕರು ಶ್ರೀ. ಬಿ. ಬಿ. ರವದಿ, ಹುಕ್ಕೇರಿ. ಪ್ರಕಾಶಕರು ಆಶೋಕ ಬುದರ್ಸ್ ಪಬ್ಲಿಕೇಶನ್ಸ್, ಹುಕ್ಕೇರಿ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೧೧೦ ಪುಟಗಳು. ಬೆಲೆ ೧-೭೫.

೪೮. **ಭಾರತೀಯ ಸಂಗೀತದರ್ಶನ** (ಸಂಗೀತಶಾಸ್ತ್ರ ಪರಿಚಯಾತ್ಮಕ ಗ್ರಂಥ). ಬರೆದವರು 'ಸಂಗೀತ ವಿದುಷಿ' ಕುಮಾರಿ ಗಾಯತ್ರಿ ರಾಜಾಶೇಖರ—ಅವರು. ಪ್ರಕಾಶಕರು ಹುಬ್ಬಳ್ಳಿಯ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಶ್ರೀಮಾನ್ ಹ. ರಾ. ಪುರೋಹಿತ ಕೊಪ್ಪೀಕರ ರೋಡ್, ಹುಬ್ಬಳ್ಳಿ. ಡೆ. ಅ. ೨೮೪ ಪುಟಗಳು. ಬೆಲೆ ೫-೦೦.

೪೯. **ಹರಿಪುರೀ ಮಹಾಸಿದ್ಧ ತೆಗ್ಗಿನಮಠದ ಶ್ರೀ ಪ್ಲವನಾಮ ಸಂವತ್ಸರದ ಸಿದ್ಧಾಂತ ಪಂಚಾಂಗ** (ಹೊಸ ವರ್ಷದ ಪಂಚಾಂಗ) ಗಣಿತಿಗಳು ಶ್ರೀ. ರಾಜಶೇಖರಯ್ಯ ಶಾಸ್ತ್ರಿ ಮತ್ತು ಶ್ರೀ. ವಿಟ್ಠ ಚೂಡಪ್ಪಶಾಸ್ತ್ರಿ. ಪುರೋಹಿತರು ಶ್ರೀ. ಬಿ. ಅಬ್ದುಲ್‌ಕರೀಮ ಮತ್ತು ಮೊಹಮ್ಮದ ಹಾಷಂ, ಹೆರಪನಹಳ್ಳಿ. ಪ್ರಕಾಶಕರು ಬಿ. ಹಯಾತ್‌ಖಾನ್ ಅಂಡ್ ಸನ್ಸ್, ಭಾರತ ಜ್ಯೋತಿಷ್ಯವೈದ್ಯಾಲಯ, ಹರಪನಹಳ್ಳಿ, ಜಿ. ಬಳ್ಳಾರಿ, ಕ್ರೌ. ೧೮ ಪುಟಗಳು. ಬೆಲೆ ೦೦-೨೫

ದೈನಂದಿನ ಜೀವನಕ್ಕೆ ಅಗತ್ಯವಾದ— ಜ್ಯೋತಿಷ್ಯದ ಹೇಳಿ ಉಪಯುಕ್ತ ವಿಷಯಗಳನ್ನೂ, ರಾಶಿಭವಿಷ್ಯವನ್ನೂ ಒಳಗೊಂಡ ಈ ಪಂಚಾಂಗವು, ಹಲವಾರು ವರ್ಷಗಳಿಂದ ಪ್ರಕಟವಾಗುತ್ತಿದ್ದು, ಜನಪ್ರೀತಿಗೆ ಪಾತ್ರವಾಗಿದೆ. ಮುದ್ರಣವು ಅಂದವಾಗಿದೆ. ಜ್ಯೋತಿಷ್ಯದ ಬಗೆಗೆ ಶ್ರದ್ಧೆಯುಳ್ಳವರು, ಈ ಪಂಚಾಂಗದಿಂದ ಸಾಕಷ್ಟು ಪ್ರಯೋಜನವನ್ನು ಪಡೆಯಬಹುದು.

ಜಯಂತಿ

ಮಾಸ ಪತ್ರಿಕೆಗೆ

ಇಂದೇ

ಚಂದಾದಾರರಾಗಿರಿ

ಶರತ್ ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಸೊಸಕಾಲಕ್ಕೆ ತಕ್ಕ

ಮುದ್ರಣ–ಬಂಧನಗಳ ಬಿಡಗಿಸೊಂದಿಗೆ ಇದೀಗ ಬೆಳಕಿಗೆ ಬಂದಿದೆ!

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತಪ್ಪೂಪ ಚಿತ್ರಣವಾಗಿರಬೇಕು. ಪಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇನೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯಪಹರಿಸಿ ಶೋಭಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ಪಾಚಕರಿಗೆ ಹೊಸ-ಹೊಸದೇ ಎನಿಸುತ್ತಿದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● ಬೆಲೆ : ೨ ರೂ. ೨೫ ನಯೇಪೈಸೆ

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಪಾಮಾಜಿಕ ಕಾದಂಬರಿ)
ಕ್ರೌ. ಅ. ೬೫೦ ಪುಟ * ಬೆಲೆ : ೪ ರೂ.

ಸಾರಜಮುಣ್ಣಿಪೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ಪೂವಕ ಪಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ಪೂವಕ ಪಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲಿವಾದುಗಳು
(ಪುಟಾಣಿ ಪಂಕಲನ)
ಕ್ರೌ. ಅ. ೨೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್ ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudrunalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.



◆ ಕೈಯಿರದ ಕುಂಬಾರನ ಕೊಡ ◆

ಅಯ್ಯಾ, ಕೈಯಿರದವರೆಲ್ಲ ಕೊಡಗಳನು ಅನುಗೊಳಿಸುವ ಕುಂಬಾರರಾಗಲು ತವಕಿಸುತ್ತಿದ್ದಾರೆ. ಕೆಸರ ಕಲಸುವ ಹದಸನರಿಯರು; ತಿಗುರಿಯ ತಿರುಹುವ ತೆರನನರಿಯರು; ಕೆಸರಿಗೆ ಕೊಡದ ರೂಹನು ಕೊಡುವ ಕಲೆಯನರಿಯರು. ಇಂತಹ ಗಾಂಪರು ಮಾಡಿದ ಮಡಕೆಯೋಡುಗಳು ಕೊಡಗಳಿಂತಪ್ಪವಯ್ಯಾ! ಇವುಗಳನ್ನೇ ಕೊಡಗಳೆಂದು ಕೊಂಬ ನಾವಿಲರು, ಬದುಕಿಗೆ ಬೇಕಿರ್ದ ತಿಳಿನೀರನೆಂತು ತುಂಬಿ ಇರಿಸುವರು ತಂದೆ!

ಅಯ್ಯಾ, ತುಂಬಿದ ಕೊಡವಿದೆಯೆಂಬ ಭ್ರಮೆಯಲ್ಲಿರುವವರೇ ಬಾಯಾರಿ ಬಂದು ನೀರನೀಂಟಲೆಳಸಿದಾಗ, ಬರಿಗೊಡವ ಕಂಡು ಬಾಯ್ ಬಾಯ್ ಬಿಡುವುದನು ನೋಡುತಿಪ್ಪೆ ಭೋ! 'ಕೊಡ' ಎಂಬ ಹೆಸರಿನಿಂದ ಕರೆದ ಮಾತ್ರಕೆ, ಹಸಿಯ ಮಣ್ಣ ವಿಕಾರ ಕೊಡನಪ್ಪುದೇನು ಭೋ! ಅವಿಗೆಯ ಕಾವಿನಲಿ ಬೆಂದು ಗಟ್ಟಿಗೊಳದ ಮಣ್ಣು ನೀರಿನೊಂದುಗೆಯಿಂದ ಕರಗಿಹೋಹುದಲ್ಲದೆ, ಅದಕ್ಕೆ ಇರವು ಇಪ್ಪುದೇನಯ್ಯಾ!

ಅಯ್ಯಾ, ಕೊಡವ ಮಾಡಬೇಕೆಂಬ ಕುತೂಹಲಿಗಳೇ ಕೇಳಿ ಭೋ! ನಿಮಗೆ ಕೈಗಳಿ ಇಲ್ಲವೆಂಬುದನು ಮೊದಲು ಅರಿಯಿರಣ್ಣಾ! ಕೊಡಗಳೆಂಬುವು ನಿಮಗೆ ಬೇಕಿದ್ದರೆ, ಕೈಯಿರುವ ಕುಲಸರಂಪರೆಯ ಕುಂಬಾರನು ಕರೆಯಿರಣ್ಣಾ! ಹುಡಿಯ ಕಲಸಿ ಹದವ ಕೆಸರನಾಗಿಸಬಲ್ಲರವರು! ತಿಗುರಿಯು ತಿರುಗಿಸುವ ಚಳಕವನರಿತವರವರು! ಬಾಳ ಬದುಕಿಸುವ ಜಲವ ಹಿಡಿದಿಡಬಲ್ಲ ಕೊಡಗಳನಣಿಗೊಳಿಪ ಕಲೆಯನು ಅವರಿಗೇ ಕಲಿಸಿಪ್ಪನಯ್ಯ, ಕಾಲ್ಕರಾಯ!

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ.....

ಕರ್ನಾಟಕಕ್ಕೆ ಮತ್ತೆ ಅಜ್ಞಾತವಾಸ (ಸಂಪಾದಕೀಯ)
ಸಂಪಾದಕರು ೩೬೧

ನಾಡನುಡಿ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೩೬೩

ಪ್ರೀತಿಯ ಫಲ (ಸಣ್ಣ ಕಥೆ)
ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ. ಬೆಳಗಾಂವಿ ೩೬೫

ಮಹಾಧಾರವಡ ಹಿನ್ನೆಲೆ (ಒಂದು ವಿವೇಚನೆ)
ಶ್ರೀ. ರಂಗರಾವ ದೇಶಪಾಂಡೆ, ಇಲಕಲ್ಲ ೩೬೯

ನಿನ್ನ ಧ್ಯಾನವೆಯೆನ್ನ ಬಾಳಗಾನ (ಕವನ)
ಶ್ರೀ. ಮಾಧವ, ಬಾಯಾರು (ದ. ಕ.) ೩೭೩

ಸಂಜೆಯಾಗಿತ್ತು (ಕವನ)
ಶ್ರೀ. ಈಶ್ವರ ಪೆರಡಾಲ, ಹೊಸದಿಲ್ಲಿ ೩೭೩

ಮಾತೃಪ್ರೇಮ (ಸಣ್ಣ ಕಥೆ)
ಶ್ರೀಮತಿ ವೈದೇಹಿರಾವ್, ಶಿವಮೊಗ್ಗ ೩೭೪

ಪ್ರಿನ್ಸಿಪಾಲ್ ಶ್ರೀಕೃಷ್ಣ ಹುಲ್ಕಾಳಕರ (ವ್ಯಕ್ತಿ ಪರಿಚಯ)
ಶ್ರೀ ಜಿ. ಎಸ್. ಮಠಕರ ಎಂ. ಎ.,ಬಿ.ಟಿ. ಪುಣೆ ೩೭೭

ಉತ್ತರಕನ್ನಡ ಜಿಲ್ಲೆಯ ಧಾರಾಚಿತ್ರಗಳು (ಲೇಖ ೩)
ಡಾ. ವಿ. ಆರ್. ಭುಮರ್ಜಿ ಎಂ. ಎ., ಪಿ.ಎಚ್.ಡಿ. ಮಂಡ್ಯ ೩೮೯

ವ್ಯರ್ಥಕಥಾ (ಸಣ್ಣ ಕಥೆ)
ಶ್ರೀ. ಅಶ್ವತ್ಥ, ಬನಾರಸ ೩೯೩

ನಾಡ ಬಿಡುಗಡೆಯೊಂದಿಗೆ (ಕವನ)
ಶ್ರೀ. ಪಸಂತಾಚಾರ್ಯ ಕುಷ್ಟಗಿ ಎಂ. ಎ. ಬೀದರ ೩೯೭

ಆಶೆ-ನಿರಾಸೆ (ಲಘುಪ್ರಬಂಧ)
ಶ್ರೀ. ಎನ್. ಎಸ್ ಗದಗಕರ ಬಿ. ಎ. ಧಾರವಾಡ ೩೯೯

ಹೋಮಿಯೊಪತಿ ನಿವಾರಿಸಿ ಹಿಮ್ಮೆಟ್ಟಿಸಿದ ಜೀವನ ವೃತ್ತ (ಜೀವನ ವೃತ್ತ)
ಕುಮಾರಿ ಎಂ. ಕೆ. ಉಮಾದೇವಿ, ಕನಕಪುರ ೪೦೦

ಯಾರು ಹೊಣೆ ? (ಪುಸ್ತಕ ವಿಮರ್ಶೆ)
'ಎನ್ನೆಸ್ಜಿ' ಧಾರವಾಡ ೪೦೨

ನಾ. ನಿಮರ್ಶೆಯ ಶಿಕ್ಷಣರಂಗ
ಶ್ರೀ. ಸೀತಾರಾಮು ಸಾಡಿ ಮತ್ತು 'ರಂಗ' ಮಾಳಮಡ್ಡಿ ೪೦೪

ಜಯಂತಿ

ಸಂಪುಟ ೨೩] ಸಂಚಿಕೆ ೧೧]

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಡಿ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೪ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕರ್ನಾಟಕಕ್ಕೆ ಮತ್ತೆ ಅಭ್ಯುದಯವಾಸ

ನಮ್ಮ ರಾಜ್ಯ ತನ್ನ ಪೂರ್ವಪರಂಪರೆಯ 'ಕರ್ನಾಟಕ' ಎಂಬ ಹೆಸರಿನಿಂದ ಮೆರೆಯುವ ಶುಭಸಮಯ ಒದಗಿ ಬಂದಿತೇನೋ— ಎಂದು ಕನ್ನಡಿಗರೆಲ್ಲರೂ ಆಶಾವಾದಿಗಳಾಗಿ, ವಿಧಾನ ಸಭೆಯ ನಿರ್ಣಯದ ಕಡೆಗೆ ಕುತೂಹಲಿಗಳಾಗಿ ನೋಡುತ್ತಿದ್ದರು; ಆದರೆ ವಿಧಾನಸಭೆಯ ಸದಸ್ಯರನೇಕರ ಸಾಂಸ್ಕೃತಿಕ ಜ್ಞಾನದ ಅಭಾವ, ಅಧಿಕಾರದಲ್ಲಿರುವ ಜನರ ಭವಿಷ್ಯಕಾಲದ ಅಧಿಕಾರ-ಸ್ವಾರ್ಥ ಇವುಗಳ ಮೂಲಕ, 'ಕರ್ನಾಟಕ' ಎಂದು ಹೆಸರಿರಿಸಬೇಕೆಂದು ಬಂದ ಗೊತ್ತುವಳಿ, ಅನಿಯಮಿತ ಅವಧಿಯ ವರೆಗೆ ಮುಂದೆ ಬಿದ್ದು, ವ್ಯಾಪಕದೃಷ್ಟಿಯ ಕರ್ನಾಟಕಾಭಿಮಾನಿಗಳ ಹೃದಯದ ಮೇಲೆ ಸಿಡಿಲಿನ ಆಘಾತವನ್ನೇ ಹಾಕಿಬಿಟ್ಟಿತು.

ಕನ್ನಡಿಗರಿಗೆ ತಮ್ಮದೇ ಆದ ಪ್ರಾಂತ್ಯ ಬೇಕಾದುದು 'ಕರ್ನಾಟಕ' ಎಂಬ ಹೆಮ್ಮೆಯ ಹೆಸರುಳ್ಳುದು. ಅದಕ್ಕಾಗಿಯೆ ಅವರು ಕಾಲುಶತಮಾನದ ಅವಧಿಯಿಂದಲೂ ವಿವಿಧ ಪ್ರಕಾರದ ಚಟುವಟಿಕೆಗಳನ್ನು ನಡೆಯಿಸುತ್ತ ಬಂದಿದ್ದಾರೆ. 'ಕರ್ನಾಟಕ' ಎಂಬ ಭಾವನಾತ್ಮಕ ಹೆಸರು ಕನ್ನಡಿಗರಲ್ಲಿ ತುಂಬಬಹುದಾದಷ್ಟು ಶಕ್ತಿ-ಸತ್ವಗಳನ್ನು ಇನ್ನಾವ ಹೆಸರೂ ತುಂಬಲಾರದು. 'ಕರ್ನಾಟಕ' ಎಂಬ ಹೆಸರಿಗೆ ದಿವ್ಯ-ಭವ್ಯವಾದ ಚಾರಿತ್ರಿಕ ಹಿನ್ನೆಲೆಯಿದೆ; ಸಾಂಸ್ಕೃತಿಕ ಪ್ರಭಾವಲಯವಿದೆ.

ರಾಮಾಯಣ-ಮಹಾಭಾರತಗಳೂ ಹಲವು ಪುರಾಣಗಳೂ "ಕರ್ನಾಟಕ" ಎಂಬ ಹೆಸರಿಗೆ ಮಾಹಾತ್ಮ್ಯವನ್ನು ಒದಗಿಸಿಕೊಟ್ಟಿವೆ. ಇತಿಹಾಸ ಕಾಲದ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗಂಗ, ಹೊಯಿಸಳ ಸಾಮ್ರಾಜ್ಯಗಳು, 'ಕರ್ನಾಟಕ' ಎಂಬ ಹೆಸರಿನ ಘನತೆಯನ್ನು ಹೆಚ್ಚಿಸಿವೆ. ಈ ಪ್ರದೇಶದಲ್ಲಿ ಬೆಳೆದ ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರ ಮೊದಲಾದ ಕಲೆಗಳು, 'ಕರ್ನಾಟಕ' ಎಂಬ ಹೆಸರಿಗೆ ಒಂದು ವೈಶಿಷ್ಟ್ಯವನ್ನು ನಿರ್ಮಿಸಿಕೊಟ್ಟಿವೆ. ಭಾರತದಲ್ಲಿ ನಿರ್ಮಾಣವಾದ ಎಲ್ಲ ನವೀನ ರಾಜ್ಯಗಳೂ ತಮ್ಮ ಭಾಷೆ-ಸಂಸ್ಕೃತಿಗಳ ಪ್ರತೀಕವಾಗಿರುವಂತೆ, ತಮ್ಮ ಪರಂಪರೆಯ ಹೆಸರನ್ನೇ ಅಭಿಮಾನದಿಂದ ಇರಿಸಿಕೊಂಡಿವೆ. ಕನ್ನಡಿಗರಿಗೂ ತಮ್ಮ ರಾಜ್ಯಕ್ಕೆ ಪರಂಪರೆಯ ಹೆಸರೇ ಬೇಕೆನಿಸುತ್ತಲಿದೆ. ಹೀಗಿದ್ದರೂ, ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರನ್ನು ಇರಿಸಗೊಡಬಾರದೆಂಬ ವಿಕೃತಚಿತ್ತದ ವಿಘಾತಕರಿಗೆ ಏನೆನ್ನಬೇಕೋ ತಿಳಿಯದಾಗಿದೆ.

ಕನ್ನಡಿಗರ ಏಕಮೇವ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು, ಪ್ರತಿನಿರ್ಧರದ ತನ್ನ ಸಮ್ಮೇಳನದ ಅಧಿವೇಶನದಲ್ಲಿಯೂ, ಕರ್ನಾಟಕ—ಎಂಬ ಹೆಸರೇ ನಮ್ಮ ನಾಡಿಗಿರಬೇಕೆಂದು ಸರ್ವಾನುಮತದಿಂದ ಉದ್ಘೋಷಿಸುತ್ತಲಿದೆ. ನಾಡಿನಲ್ಲಿಯ ಮೆಮಳೆದ್ದ ವಿಚಾರವೇಲರೆಲ್ಲರೂ 'ಕರ್ನಾಟಕ' ಎಂಬ ಹೆಸರೇ ಯುಕ್ತಿಯುಕ್ತವಾಮುದೆಂದು ಸಾರಿಹೇಳುತ್ತಲಿದ್ದಾರೆ. ಇದೆಲ್ಲ ಗೊತ್ತಿದ್ದರೂ, ತಮ್ಮ ಹಟವನ್ನು ಸಾಧಿಸಲು ಕರ್ನಾಟಕದ ಕತ್ತನ್ನು ಹಿಸುಕುವ ದುರಭಿಮಾನಿ ಧುರೀಣರು ನಮ್ಮಲ್ಲಿ ಕೆಲವು ಜನರಿರುವುದು ಖೇದದ ಸಂಗತಿಯಾಗಿದೆ.

ಸ್ವಾತಂತ್ರ್ಯೋತ್ತರ ನಮ್ಮ ನಾಡಿನಲ್ಲಿ ಸಂಸ್ಕೃತಿಪ್ರೀತಿ, ಆದರ್ಶಜೀವನಸಾಧನೆ ಎಂಬುವೇ ಕಣ್ಮರೆಯಾಗುತ್ತ ನಡೆದಿವೆ. ಜನಾವಣೆಯ ಮೂಲಕ ಧುರೀಣತ್ವದ ಪದವನ್ನು ಪಡೆಯಬೇಕಾಗಿರುವ ಈ ಕಾಲದಲ್ಲಿ ಆದರ್ಶ, ಸ್ವಾರ್ಥತ್ಯಾಗ ಇವುಗಳ ಬೆಲೆಯನ್ನು ಅರಿತು ನಡೆಯುವವರೆಲ್ಲ ಮೂಲೆಗೆ ಸರಿಯುತ್ತಲಿದ್ದಾರೆ. ಬಹುಮತದ ಬಲದಿಂದ ಆಂತರಿಕ ಸಂಸ್ಕೃತಿವಿಕಾಸವಿಲ್ಲದ ಪರ್ತಮಾನನಿಲಾಸಿಗಳೇ ಧುರೀಣರೆಂಬ ಪೆಸರನ್ನು ಪಡೆದು, ಎಲ್ಲ ಸಾರ್ವಜನಿಕ ಕ್ಷೇತ್ರಗಳಲ್ಲಿ ತುಂಬಿ ನಿಂತಿದ್ದಾರೆ. ಇವರಿಗೆ ವೈಯಕ್ತಿಕ ಸ್ವಾರ್ಥಸಾಧನೆಯೊಂದಲ್ಲದೆ ಇನ್ನಾವುದೂ ಕಣ್ಣಿಗೆ ಕಾಣುತ್ತಿಲ್ಲ! ಇಂತಹರಿಗೆ ಭೂತಕಾಲದ ಇತಿಹಾಸದ ಹೆಮ್ಮೆಯೇತಕ್ಕೆ ಬೇಕು? ಭವಿಷ್ಯಕಾಲದ ದೇಶದ ಅಭ್ಯುದಯದ ಆದರ್ಶವೇತಕ್ಕೆ ಬೇಕು?

ನಮ್ಮ ನಾಡಿನ ಕಾಂಗ್ರೆಸ್ಸಿಗರೇ ಹೆಣಗಾಡಿ ಹೋರಾಡಿ, ಕಾಂಗ್ರೆಸ್ಸಿನ ಕಾರ್ಯಕ್ಷೇತ್ರದ ನುಟ್ಟಗಾದರೂ ಮೊದಲು ಪಡೆದುದು "ಕರ್ನಾಟಕ" ಪ್ರಾಂತವನ್ನು. ರಾಷ್ಟ್ರದ ಸ್ವಾತಂತ್ರ್ಯಯುದ್ಧದಲ್ಲಿ ಹೋರಾಡಿ ಹೆಸರು ಪಡೆದುದು ಕರ್ನಾಟಕ ಪ್ರಾಂತ್ಯವೇ! ಸ್ವಾತಂತ್ರ್ಯೋತ್ತರದ ಸಂಕ್ರಮಣಕಾಲದಲ್ಲಿ ಸಂಧಿಸಾಧಕರಾಗಿ ಬಂದ ಕೆಲವು ಜನ ಸ್ವಾರ್ಥಿಗಳು, ಸಂದರ್ಭವನ್ನು ದುರುಪಯೋಗ ಮಾಡಿ 'ಕರ್ನಾಟಕ' ಎಂಬ ಹೆಸರನ್ನೇ ಮೂಲೆಗೆ ಕುಳ್ಳಿರಿಸಿ ಬಿಟ್ಟರು. ಇದರಲ್ಲಿಯೂ ಅಧಿಕಾರವ್ಯಾಮೋಹದ ದುರುದ್ದೇಶವೇ ಇದ್ದಿತಲ್ಲವೆ, ಇನ್ನಾವ ಜನಹಿತವೂ ಅವರ ಗುರಿಯಾಗಿರಲಿಲ್ಲ. ಅಧಿಕಾರಮೋಹಕ್ಕೆ ಕಟ್ಟುಬಡಿದ ಮಿಕ್ಕ ಕಾಂಗ್ರೆಸ್ಸಿಗರೂ, ತಾವು ನಿಂತ ನೆಲವನ್ನು ಮರೆತುಬಿಟ್ಟಿದ್ದಾರೆ. ಎಂತಲೇ ಕಾಂಗ್ರೆಸ್ಸಿಗರ ಬಹುಮತವಿರುವ ರಾಜ್ಯದ ವಿಧಾನಸಭೆಯಲ್ಲಿ ಕೂಡ 'ಕರ್ನಾಟಕ' ಎಂಬ ಹೆಸರಿಗೆ ಬೆಂಬಲಕೊಡುವವರು ಇಲ್ಲದಂತಾಗಿದ್ದಾರೆ.

"ಕರ್ನಾಟಕ" ಹೆಸರಿನ ಪ್ರಕರಣವು ಈಗ ತಾತ್ತ್ವಿಕ ಮೇರೆಯನ್ನು ಮೀರಿಹೋಗಿ, ಎರಡು ಬಹುಸಂಖ್ಯಾತ ಜಾತಿಗಳ ಅಂತರಿಕ ತಿಕ್ಕಾಟವನ್ನು ಅವಲಂಬಿಸಿಕೊಂಡು ಕುಳಿತಿದೆ. 'ವೀರಶೈವ' ಪಂಗಡದವರು ಕರ್ನಾಟಕದ ಪುರಸ್ಕರ್ತೃಗಳಾಗಿದ್ದರೆ, 'ಒಕ್ಕಲಿಗ' ಪಂಗಡದವರು ಅದಕ್ಕೆ ವಿರೋಧಿಗಳಾಗಿದ್ದಾರೆ. ಇವೆರಡೂ ಪಂಗಡಗಳಲ್ಲಿ ಸೌಹಾರ್ದ-ಸಹಕಾರಭಾವಗಳು ಬೆಳೆದ ಹೊರತು, ನಮ್ಮ ರಾಜ್ಯ 'ಕರ್ನಾಟಕ' ಎಂಬ ಹೆಸರನ್ನು ಕಾಣುವಂತಿಲ್ಲ— ಎಂದು ತೋರುವುದು. ಕನ್ನಡಿಗರಲ್ಲದ ವಿಧಾನಸಭೆಯಲ್ಲಿಯ ಕೆಲವು ಜನ ಸದಸ್ಯ-ಬಂಧುಗಳು, ಕನ್ನಡಿಗರಲ್ಲಿಯ ಒಳತೋಟಿಯನ್ನು, ತಮ್ಮ ಬೇಳೆ ಬೇಯಿಸಿಕೊಳ್ಳಲಿಕ್ಕೆ ಉಪಯೋಗಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಕನ್ನಡ ಭಾಷೆ, ಪ್ರಾಂತ್ಯ ಇವುಗಳ ಅಗತ್ಯವೇ ಇಲ್ಲ. ಅಲ್ಪಸಂಖ್ಯಾತರೆಂಬ ನೆಪವನ್ನು ಮುಂದೆ ಮಾಡಿ, ತಮ್ಮ ಭಾಷೆ-ಸಂಸ್ಕೃತಿಗಳನ್ನು ಇಲ್ಲಿ ಬೆಳೆಯಿಸಬೇಕೆಂಬ ದುರುದ್ದೇಶ ಅವರದು. ಪಂಗಡ ದ್ವೇಷಾಂಧರಾದ ನಮ್ಮ ಜನರಿಗೆ ಪರಕೀಯರ ದುಸ್ಸಾಧನೆಯ ಕಡೆಗೆ ಲಕ್ಷ್ಯವೇ ಇದ್ದಂತಿಲ್ಲ. ಎಂತಲೇ ಆರ್ಯೋಗಂಗಳೂ ಮುಕ್ಕಣ್ಣಿನವರೂ, ಕರ್ನಾಟಕವನ್ನು ವಿರೋಧಿಸಿ, ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ.

ಒಬ್ಬ ಮಹನೀಯರಂತೂ, ಈ ಹೆಸರಿನ ಜಗಳಾಟದಲ್ಲಿ, ಕೂಡಿದ ನಾಡನ್ನು ಒಡೆದು ಎರಡೋ ಮೂರೋ ರಾಜ್ಯಗಳನ್ನು ಮಾಡಲು ಸೂಚಿಸಿ, ತಮ್ಮ 'ಮೈಸೂರು' ಎಂಬ ಹೆಸರನ್ನು ಸಂರಕ್ಷಿಸಿಕೊಳ್ಳಲು ಹೋರಾಡಿದ್ದಾರೆ. ಇವರೂ ಕನ್ನಡಜನತೆಯಿಂದ ಚುನಾವಣೆ ಹೊಂದಿದ್ದ ಸದಸ್ಯರು. ಇವರು ಆಡಿದ ಆನೇಕಪೂರಿತ ಮಾತುಗಳನ್ನು ನೋಡಿದರೆ, ಜನಹಿತ, ದೇಶದ ಕಲ್ಯಾಣ ಎಂಬುವುಗಳ ಕಲ್ಪನೆ, ಇವರಿಗೇನಾದರೂ ಇರಬಹುದೇ— ಎಂದು ಯಾವ ಸಹೃದಯನಿಗೂ ಎನಿಸದಿರದು. ಇವರಿಗೆ ಆಡಳಿತದ ಅಧಿಕಾರಬೇಕಾಗಿದೆಯೆಂದು ಒಂದು ಗುಂಪಿನಲ್ಲಿ ಸೇರಿಕೊಂಡಿದ್ದಾರೆ— ಇಷ್ಟೇ! ಅದು ತಮಗೆ ದೊರೆಯದಂತಾದಾಗ, ಸದಸದ್ವಿವೇಕ ಬುದ್ಧಿಯೆಂಬುದೇ ಇವರಲ್ಲಿ ಉಳಿದಿರುವುದಿಲ್ಲ— ಯಾವ ಜನಹಿತ ಸೂಚನೆಯನ್ನೂ ವಿರೋಧಿಸಿ ವೀರರಸದ ಅಭಿನಯಮಾಡುವುದಷ್ಟನ್ನೇ ಇವರು ಅರಿತಿರುವರು.

ಸದ್ಯ ಮೈಸೂರು ರಾಜ್ಯದ ಕಾಂಗ್ರೆಸಿನಲ್ಲಿ ಅಸ್ವಾಭಾವಿಕವಾದ ಬೆಸುಗೆಯಿದ್ದಂತೆ ಕಾಣಿಸುತ್ತಿದ್ದರೂ, ಅದು ಯಾವಾಗ ಬಿಚ್ಚಿಬಿದ್ದೀತೆಂಬುದರ ನಿಯಮವಿಲ್ಲ. ಆದರೆ ಕಾಂಗ್ರೆಸ್ಸಿಗರಲ್ಲಿ ನಿಜವಾದ ಹೃದಯದ ಬೆಸುಗೆಯಾಗದೆ ಹೋದರೆ, ಕರ್ನಾಟಕ ಎಂಬ ಹೆಸರಿನ ಅಭಿಮಾನಿಗಳು, ಕೊನೆಯವರೆಗೂ ನಿರಾಶೆಯ ನಂಜನ್ನೇ ಕುಡಿಯುತ್ತ ಕುಳಿತುಕೊಳ್ಳಬೇಕಾಗುವುದೆಂಬುದು ಖಂಡಿತವಾದ ಮಾತು. ಈ ಚುನಾವಣೆ ಮುಗಿದು ಹೊಸ ವಿಧಾನಸಭೆ ರೂಪುಗೊಳ್ಳುವವರೆಗಂತೂ ನಮ್ಮ ನಾಡು 'ಕರ್ನಾಟಕ' ಎಂಬ ಹೆಸರನ್ನು ಪಡೆಯಲಾರದು. ಬರಲಿರುವ ವಿಧಾನಸಭೆಯೂ, ಮಂತ್ರಿಮಂಡಲವೂ ಇಂತಹ ಸ್ವಾರ್ಥಸಾಧಕರ ಮತ್ತು ಉದಾಸೀನ ವೃತ್ತಿಯವರ ಕೈಯಲ್ಲಿಯೇ ಸೇರಿಬಿಟ್ಟರೆ, 'ಕರ್ನಾಟಕ'ವು ಕನಸಿನ ಮಾತೇ ಆಗುವುದು.

ಜಯಂತಿಗೆ ಸಹಾಯಧನ

ಡಾಕ್ಟರ್ ಎಚ್. ಜಿ. ನರಗುಂದ, ಲಕ್ಷ್ಮೇಶ್ವರ	೧೦-೦೦
ಶ್ರೀ. ಕೆ. ಎ. ಎನ್. ರಾವ್, ಬನಾರಸ	೫-೦೦
ಶ್ರೀ. ಬಿ ಎಸ್. ಚೌಧರಿ, ಜಮಖಂಡಿ	೨-೦೦

ಜಯಂತಿ ಬಹುಕಾಲ ಬಾಳಬೇಕೆಂಬ ಸದಿಚ್ಛೆಯಿಂದ, ಧನ ಸಹಾಯವಿತ್ತ ಮಹನೀಯರಿಗೆ ನಮ್ಮ ಅಭಿನಂದನೆಗಳು.

—ಸಂಪಾದಕರು
ಜಯಂತಿ, ಧಾರವಾಡ

ನಾಡನಡೆ

ರಾಜಕೀಯ ಲೋಕದಲ್ಲಿಯ ಸುಶ್ಚಾರಿತ್ರ್ಯ

ಕನ್ನಡ ನಾಡಿನ ಪ್ರಾಚೀನ ಘನತೆಯನ್ನು ಹಾಡಿದ ನಮ್ಮ ಕವಿಯೊಬ್ಬ, 'ಭಾರತದ ಗುರುಕುಲವು ನೋಡು! ನನ್ನದು ಈ ಕನ್ನಡ ನಾಡು!' ಎಂದು ಅಭಿಮಾನದಿಂದ ಹಾಡಿದ್ದಾನೆ. ಸ್ತ್ರೀಯರ ಶೀಲ-ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನು ರಣದಲ್ಲಿ ಈಡಾಡಿದ ಕನ್ನಡ ವೀರರ ಕಥೆಗಳನ್ನು, ನಮ್ಮ ನಾಡಿನ ವೀರಗಲ್ಲುಗಳೆಷ್ಟೋ-ಉಗ್ಗಡಿಸುತ್ತ ನಿಂತುಕೊಂಡಿವೆ. ಶ್ರೀಬಸವಣ್ಣನವರು 'ಹರಿವ ಹಾವಿಂಗಂಜೆ, ಉರಿವ ಕಿಚ್ಚಿಂಗಂಜೆ! ಸುರಿಗೆಯ ಮೊನೆಗಂಜೆ, ಅಯ್ಯಾ, ಒಂದಕ್ಕಂಜುವೆ ಒಂದಕ್ಕಳುಕುವೆ. ಪರಸ್ತ್ರೀಯೆಂಬ ಜೂಜಿಗಂಜುವೆ" ಎಂದು ತಮ್ಮ ಸಂಸ್ಕೃತಿಶುದ್ಧ ಹೃದಯವಾಣಿಯನ್ನು ಹೊರಗೆ ಹಾಕಿದ್ದಾರೆ. ಇಂತಹ ಕಾಲದಲ್ಲಿ ಈ ಬಗೆಯ ನಿರ್ವಿಚಾರತರಂಗಿಣಿಯೊಂದಿಗೆ ಬೆಳೆದು ಬಾಳಿದುದರಿಂದಲೇ ಕನ್ನಡಿಗರ ಶೀಲ-ಚಾರಿತ್ರ್ಯಗಳು ಲೋಕದ ಕಣ್ಣನ್ನು ಕುಕ್ಕಿಸಿದುವು.

ಇಂದು ಅದೇ ಕನ್ನಡನಾಡಿನಲ್ಲಿ ಅಪಂತಹ ಶೀಲದಾರಿದ್ರ್ಯದ ಕಾಲಬಂದಿದೆಯೆಂಬುದನ್ನು ನೋಡಿದರೆ, ಕನ್ನಡದ ಅಭಿಮಾನಿಗಳಿಗೆ ಕರುಳಲ್ಲಿ ಕಿಚ್ಚು ಸುರಿದಂತೆ ಆಗುತ್ತಿದೆ. ನಿಜವಾಗಿ ನೋಡಿದರೆ, ನಮ್ಮ ರಾಜಕೀಯ ಧುರೀಣರು ತಮ್ಮ ಪವಿತ್ರಶೀಲದಿಂದ ಜನತೆಯ ಚಾರಿತ್ರ್ಯವನ್ನು ತಿದ್ದಲು ಕಾರಣರಾಗಬೇಕು. ಆದರೆ ಬೆಂಗಳೂರು ಶಾಸನಸಭಾಸದಸ್ಯರ ಭವನದಲ್ಲಿ, ಮೊನ್ನೆ ಜರುಗಿದ ನಿಷಪು ಸಂಗತಿಯನ್ನು ಕೇಳಿದರೆ, ನಮ್ಮ ಧುರೀಣಬ್ರುವರ ಸಾಂಸ್ಕೃತಿಕ ಮಟ್ಟ ಎಷ್ಟೊಂದು ರಸಾತಳಕ್ಕಿಳಿದಿದೆಯೆಂಬುದು ಎಲ್ಲರಿಗೂ ಸ್ಪಷ್ಟವಾಗಿ ಕಂಡುಬರುವುದು. ಇಂತಹ ನಿರ್ಲಜ್ಜರನ್ನು ಮುಂದಾಳುಗಳನ್ನಾಗಿ ಪಡೆದ ಜನತೆಗಾಗಿ, ಮರುಕಪಡಬೇಕಾಗಿದೆ ನಾವು.

ನೀತಿಯೊಪ್ಪದ ಅನ್ಯಾಯದ ಕೃತ್ಯಗಳನ್ನು ಎಸಗಿದವರು ಒಂದು ಬಗೆಯ ಪಾತಕಿಗಳಾದರೆ, ಪಕ್ಷ-ಪಂಗಡಗಳ ಅಭಿಮಾನಕ್ಕೊಳಗಾಗಿ, ಅನ್ಯಾಯಮಾಡಿದವರನ್ನು ಕ್ಷಮಿಸಿ ಅವರ ಕೃತ್ಯಗಳ ಮೇಲೆ ತೆರೆಯೆಳೆಯಲು ಬಯಸುವುದು ಇನ್ನೊಂದು ಬಗೆಯ ಅನ್ಯಾಯ ಅಪರಾಧ! ಜನರಿಗೆಲ್ಲ ಆದರ್ಶಬೋಧೆಯನ್ನು ನೂಡುವ ಮುಂದಾಳುಗಳೇ ಮದ್ಯಪಾನ-ವ್ಯಭಿಚಾರ ಮೊದಲಾದ ಸಾಮಾಜಿಕ ನೀತಿ-ನಿಯಮಗಳ ಅತಿಕ್ರಮಣ ಮಾಡಿದರೆ, ಅವರು ಕ್ಷಮೆಗೆ ಅರ್ಹರೆನಿಸುವರೇ? ಇಂತಹರಿಗೆ ಕ್ಷಮೆ ದೊರೆಯುತ್ತಹೋದರೆ, ರಾವಣ ರಾಜ್ಯವನ್ನು ನಾವು ಸಮಾಪಿಸುತ್ತಲಿದ್ದೇವೆಯೇನೋ-ಎಂದು ಮನಸ್ಸು ಭೀತಿಕಂಪಿತವಾಗುವುದು.

ಉತ್ತಮ ಪುಸ್ತಕಗಳಿಗೆ ಬಹುಮಾನ

ಮೈಸೂರ ಸರಕಾರದ ವಿದ್ಯಾವಿಭಾಗದವರು, ೧೯೬೦ನೆಯ ಇಸ್ವಿಯಲ್ಲಿ ಪ್ರಕಟನಾದ ಕನ್ನಡ ಪುಸ್ತಕಗಳಲ್ಲಿ 'ಉತ್ತಮ ಪುಸ್ತಕಗಳು' ಎಂದು ನಿರ್ಣಯಿಸಿ, ಕೆಲವೊಂದು ಪುಸ್ತಕಗಳಿಗೆ, ಬಹುಮಾನವೆಂಬ ಹೆಸರಿನಿಂದ ಹಣವನ್ನು ಹಂಚಿಕೊಟ್ಟಿದ್ದಾರೆ. ಹಣ ಹಂಚಿದ ಪ್ರಮಾಣವನ್ನು ನೋಡಿದರೆ, ಬಹುಮಾನ ಪಡೆದ ಪುಸ್ತಕಗಳಲ್ಲಿ ಗುಣತಾರತಮ್ಯವೇ ಕಂಡುಬರುವಂತಿಲ್ಲ. ಬಂದ ಪುಸ್ತಕಗಳಲ್ಲಿ ವಿಷಯಾನುಸಾರ ೧೦-೧೧ ಗುಂಪುಗಳನ್ನು ಮಾಡಿರುವರಾದರೂ, ಕೆಲವೊಂದು ಗುಂಪುಗಳ ವಿಷಯಕ್ಕೂ ಬಹುಮಾನಕೊಟ್ಟ ಪುಸ್ತಕಗಳ ವಿಷಯಕ್ಕೂ ಸಂಬಂಧವೇ ಇದ್ದಂತೆ ಕಾಣುವುದಿಲ್ಲ. ಉದಾಹರಣೆಗಾಗಿ 'ಪ್ರಬಂಧಗಳು' ಎಂಬ ಗುಂಪಿನ ಪ್ರತಿನಿಧಿಗಳಾಗಿ ಬಹುಮಾನ ಪಡೆದ ಪುಸ್ತಕಗಳು, ಆ ಗುಂಪಿಗೆ ಸೇರಲು ತಕ್ಕವುಗಳಾಗಿವೆಯೇ? ಜನಪದ ಸಾಹಿತ್ಯ ಸಂಕಲನದ ಪುಸ್ತಕವೊಂದು ಬಾಲಸಾಹಿತ್ಯವಿಭಾಗದಲ್ಲಿ ಸೇರಿ ಬಹುಮಾನ ಪಡೆದುದು ಆಶ್ಚರ್ಯಪಡಬೇಕಾದ ಸಂಗತಿಯೇ ಆಗಿದೆ.

ಇನ್ನೂ ಒಂದು ಆಶ್ಚರ್ಯದ ವಿಷಯವೆಂದರೆ, ೩೦೦-೪೦೦ ಪುಟಗಳ ಒಂದು ಕಾದಂಬರಿಗೂ ೬೫೦ ರೂಪಾಯಿ ಬಹುಮಾನ; ೩೦-೪೦ ಪುಟಗಳ ಬಾಲಸಾಹಿತ್ಯದ ಪುಸ್ತಕಕ್ಕೂ ೬೫೦ ರೂ. ಬಹುಮಾನ. ಒಂದೊಂದು ವಿಭಾಗಗಳನ್ನು ನೋಡಿದರೂ ಇದೇ ಗತಿ: ಒಳ್ಳೆಯ ಪಳಗಿದ ಸಾಹಿತ್ಯಕನ ಮೊದಲ ತರಗತಿಯ ಕೃತಿಗೂ ೬೫೦ ರೂಪಾಯಿ; ನಿನ್ನೆ ಮೊನ್ನೆ ಬರೆಯಲು ಪ್ರಾರಂಭಿಸಿದ ಕಿರಿಯ ಸಾಹಿತ್ಯಕನ ಕೃತಿಪ್ರಯತ್ನಕ್ಕೂ ೬೫೦ ರೂಪಾಯಿಗಳು. ಒಳ್ಳೆಯ ಸಮತಾಭಾವವಿದು! ಇದೇ ಸಮತಾಭಾವವನ್ನು ಮಿಕ್ಕಕಡೆಗಳಲ್ಲಿಯೂ ಏಕೆ ಪ್ರಯೋಗಿಸಬಾರದು ನಮ್ಮ ಸರಕಾರ? ಮಂತ್ರಿಗಳು ಪಡೆಯುವ ಸಂಬಳ-ಸಲಕರಣೆಗಳನ್ನೇ ಜವಾನರಿಗೂ ಏಕೆ ಕೊಡಬಾರದು? ಮಂತ್ರಿಗಳಿಗೆ ಕಾರು, ಸಾರಥಿ, ಕಾರಿನ ವೆಚ್ಚ ಎಲ್ಲವೂ ದೊರೆಯುವುವು. ಇಂತಹ ಸೌಕರ್ಯಗಳನ್ನು ಸೀಪಾಯಿಗಳಿಗೂ ಕಾರಕೂನರಿಗೂ ಒದಗಿಸಿಕೊಟ್ಟರಾಗದೆ? ಅಲ್ಲಿ ಪ್ರಯೋಗಿಸಲಾಗದ ಸಮತಾಭಾವನನ್ನು ಈ ಬಹುಮಾನ ಪ್ರಪಂಚದಲ್ಲಿ ಪಾತ್ರ ಪ್ರಯೋಗಿಸುವುದರಲ್ಲಿ ಔಚಿತ್ಯವೇನು? ಸಾಹಿತ್ಯಿಕರಲ್ಲಿ ಇವರ ಕೃತಿಗಳಲ್ಲಿ ತಾರತಮ್ಯವಿರುವುದೇ ಇಲ್ಲವೆಂದು ಈ ಬಹುಮಾನನಿಯೋಜಕರ ಅಭಿಪ್ರಾಯವೇ? ಎಲ್ಲ ಪುಸ್ತಕಗಳೂ ಕಾಗದದ ಮೇಲೆ ಮಸಿಯಿಂದ ಅಕ್ಷರಗಳನ್ನು ಮೂಡಿಸಿದುವುಗಳಾದುದರಿಂದ, ಎಲ್ಲವುಗಳ ಯೋಗ್ಯತೆ ಒಂದು ಮಾದರಿಯದು' ಎಂಬ ತಿಳಿವಳಿಕೆಯಿಂದ ಈ ಬಹುಮಾನನಿರ್ಣಯ ಕಾರ್ಯ ನಡೆಯುತ್ತಲಿದ್ದರೆ, ನಮ್ಮ ಸಾಹಿತ್ಯಿಕರ ಉದ್ಧಾರವಾದಂತೆಯೇ ಸರಿ!

ಇವೇ ಉತ್ತಮ ಪುಸ್ತಕಗಳೇ?

೧೯೬೦ನೆಯ ಇಸ್ವಿಯಲ್ಲಿ ಪ್ರಕಟನಾಗಿ ಬಹುಮಾನ ಪಡೆದಿರುವ ಈ ಪುಸ್ತಕಗಳಲ್ಲಿಯ ಹಲವಾರು ಪುಸ್ತಕಗಳನ್ನು ತೆರೆದು ನೋಡಿದರೆ, 'ಇವು ಉತ್ತಮ ಪುಸ್ತಕಗಳೇ?' ಎಂದು ನಿಜವಾದ ವಿಮರ್ಶಕ

ಆಶ್ಚರ್ಯದಿಂದ ಕೇಳದಿರಲಾರ. ಈ ಪುಸ್ತಕಗಳೇ 'ಉತ್ತಮ ಪುಸ್ತಕ' ಎನಿಸಿಕೊಳ್ಳುವುವಾದರೆ, ೧೯೬೦ನೆಯ ವರ್ಷದ ಕನ್ನಡ ಸಾಹಿತ್ಯ ನಿರ್ಮಿತಿ, ಪ್ರಗತಿಪಥದಲ್ಲಿ ಮುಂದುವರೆದಿಲ್ಲ ಎಂದು ಧಾವಿಸಬೇಕಾಗುವುದು. ಆದರೆ ವಸ್ತುಸ್ಥಿತಿಯು ಹಾಗೆ ಇದ್ದಂತಿಲ್ಲ. ಈ ಬಹುಮಾನ ಪಡೆದ ಪುಸ್ತಕಗಳನ್ನು ಗುಣದಲ್ಲಿ ಮೀರಿಸುವಂತಹ ಕೆಲವು ಕೃತಿಗಳು ಕಳೆದ ವರ್ಷದಲ್ಲಿ ನಿರ್ಮಾಣವಾಗಿವೆಯೆಂಬುದು ನಮ್ಮ ಅನುಭವದ ಸಂಗತಿಯಾಗಿದೆ. ಹಾಗಾದರೆ, ಆ ಸಾಹಿತ್ಯಕರು ಬಹುಮಾನಕ್ಕೆಂದು ತಮ್ಮ ಗ್ರಂಥಗಳನ್ನು ಕಳುಹಿಲ್ಲವೆಂದು ತಿಳಿದುಕೊಳ್ಳಬೇಕೋ–ಕಳುಹಿದ್ದರೂ ಸರಕಾರದಿಂದ ನಿಯಾಮಕಗೊಂಡ ವಿಮರ್ಶಕಸಮಿತಿಯ ಒರೆಗೆ ಅವು ಇಳಿದಿಲ್ಲವೆನ್ನಬೇಕೋ? ನಿಜವಾಗಿಯೂ ಗುಣಯುಕ್ತ ಪುಸ್ತಕಗಳು ಒರೆಗೆ ಇಳಿಯದೆ, ಸಾಮಾನ್ಯ ಪುಸ್ತಕಗಳು ಒಳ್ಳೆಯವೆಂದು ಪರಿಗಣಿತವಾಗಬೇಕಾದರೆ, ಅಂತಹ ವಿಮರ್ಶಕರನ್ನು ಜನರು ಸಂದೇಹ ದೃಷ್ಟಿಯಿಂದ ನೋಡಿದರೆ, ಅದು ಆಶ್ಚರ್ಯಪಡಬೇಕಾದ ಸಂಗತಿಯೇನೂ ಅಲ್ಲ.

ಗಾಳಿಯಲ್ಲಿ ಸುಳಿದಾಡುವ ವರ್ತಮಾನವೊಂದೆಂದರೆ; 'ವಿಮರ್ಶಕರ ಅಭಿಪ್ರಾಯಪಡೆಯುವುದು ಒಂದು ಸಾಂಪ್ರದಾಯಿಕ ನಾಟಕ; ಬಹುಮಾನವಿತರಣೆಗೂ ವಿಮರ್ಶಕರ ಅಭಿಪ್ರಾಯಕ್ಕೂ ಸಂಬಂಧವೇ ಇರುವುದಿಲ್ಲ' ಎಂದು! ಹೇಳಿಕೇಳಿ ಹಾರಾಡುವ ಸುದ್ದಿಯದು. ಇದು ಹುಸಿಯಾದುದೇ ಆಗಿದ್ದರೆ ನಮಗೆ ತುಂಬ ಸಂತೋಷ. ವಾಸ್ತವ್ಯವಾದುದೇ ಆಗಿದ್ದರೆ, ಈ ವಿಮರ್ಶಕರ ಅಭಿಪ್ರಾಯದ ನಾಟಕವನ್ನಾದರೂ ಏತಕ್ಕೆ ನಟಿಸಬೇಕು? ತಮಗೆ ಬೇಕೆನಿಸಿದವರಿಗೆ ಅಧಿಕಾರಿಗಳು ಬಹುಮಾನದ ಹಣ ಹಂಚಿದರೆ ಆಯಿತು.

ಉತ್ತಮ ಪುಸ್ತಕಗಳಿದ್ದರೂ, ಈ ಬಹುಮಾನ ನಾಟಕದಲ್ಲಿ ಅನುತ್ತಮವೆನಿಸಿಕೊಂಡ ಗ್ರಂಥಗಳ ಬಗೆಗೆ ನಮಗೆ ಖೇದವೆನಿಸುತ್ತದೆ.

ಗಡಿಸಮಿತಿಯ ಮರಾಠೀ ಸದಸ್ಯರ ಸಂಚಾರ

ಮಳೆ ನಿಂತರೂ ಮರದ ನೀರು ತೊಂದರೆ ಕೊಡುತ್ತಲಿದೆ. ನೂತನ ರಾಜ್ಯಗಳು ನಿರ್ಮಾಣಗೊಂಡು ನಿಂತಿದ್ದರೂ, ಗಡಿಸಮಸ್ಯೆ ಜನತೆಯ ಜೀವನವನ್ನು ತಿನ್ನುತ್ತಲಿದೆ. ನೆರೆ–ನೆರೆಯ ಜನರಲ್ಲಿ ಸಮಂಜಸಬುದ್ಧಿ, ಸರಳವೃತ್ತಿಗಳು ಇರುತ್ತಿದ್ದರೆ, ಇದೊಂದು ಮಹಾ ಸಮಸ್ಯೆಯಾಗಿ ಪರಿಣಮಿಸುತ್ತಿರಲಿಲ್ಲ. ಆದರೆ ಆಕ್ರಮಣಬುದ್ಧಿಯ ನೆರೆನಾಡಿಗರು ಇದ್ದುದರಿಂದ, ನಮ್ಮ ನಾಡಿನ ಗಡಿಯ ಸಮಸ್ಯೆ ಬಗೆಹರಿಯದಂತಾಗಿದೆ. ಕನ್ನಡಿಗರಲ್ಲಿ ಆಕ್ರಮಣಬುದ್ಧಿ ಇಲ್ಲವಿಷ್ಟೇ ಅಲ್ಲ; ಪರಕೀಯ ಆಕ್ರಮಣಗಾರರ ಚಟುವಟಿಕೆಗಳನ್ನು ತಡೆಯುವಂತಹ ಕರ್ತವ್ಯದಕ್ಷತೆಯೂ ಇಲ್ಲವೆಂಬುದು ಎಲ್ಲರ ಅನುಭವದ ವಿಷಯವಾಗಿದೆ.

ಕಾಸರಗೋಡನ್ನು ಕೇರಳಿಗರು ಸಹಜವಾಗಿಯೇ ಕಬಳಿಸಿಬಿಟ್ಟಿದ್ದಾರೆ. ಅಲ್ಲಿಯ ಕನ್ನಡಿಗರ ಕಳವಳದ ಕಡೆಗೆ, ಮಿಕ್ಕ ಪ್ರದೇಶದ ಕನ್ನಡಿಗರು ಲಕ್ಷ್ಯವನ್ನೇ ಕೊಡುತ್ತಿಲ್ಲ. ಹಳೆಯ ಮೈಸೂರಿಗರಿಗೆ ಉತ್ತರ ಕರ್ನಾಟಕವೇ ಬೇಸರದ ವಿಷಯವಾಗಿದೆ; ಆದುದರಿಂದ ಉತ್ತರದ ಗಡಿಯ ಪ್ರದೇಶದ ಭಾಗ ಹೋದರೆ ಅವರಿಗೆ ದುಃಖವಿಲ್ಲ; ಉಳಿದರೆ ಹೆಚ್ಚಿನ ಸಂತೋಷವಿಲ್ಲ. ಅವರ ಔದಾಸೀನ್ಯ ಪ್ರವೃತ್ತಿಯೇ ಉತ್ತರದ ಗಡಿಯ ಸಮಸ್ಯೆಯನ್ನು ಇನ್ನೊಂದು ದೀರ್ಘಕಾಲದ ವರೆಗೆ ಬದುಕಿಸಿದೆಯೆಂದು ಹೇಳಬಹುದು.

ಈಗಲೂ ನೋಡಿ: ಗಡಿಸಮಿತಿಯಲ್ಲಿ ಮಹಾರಾಷ್ಟ್ರ ಸರಕಾರದ ಪ್ರತಿನಿಧಿಗಳಾಗಿ ಇಬ್ಬರು ಸದಸ್ಯರಿದ್ದಾರೆ; ಮೈಸೂರು ಸರಕಾರದ ಪ್ರಾತಿನಿಧ್ಯವಹಿಸಿದ ಇಬ್ಬರು ಸದಸ್ಯರೂ ಇದ್ದಾರೆ. ಮಹಾರಾಷ್ಟ್ರ ಸರಕಾರದ ಪ್ರತಿನಿಧಿಸದಸ್ಯರು; ಈಗ ಸುಮ್ಮನೆ ಕುಳಿತಿರದೆ, ವೈಯಕ್ತಿಕ ಹೊಣೆಗಾರಿಕೆಯ ಮೇಲೆ, ಕರ್ನಾಟಕದ ಉತ್ತರದ ಗಡಿಯ ನಗರಗಳಲ್ಲಿ ಸುತ್ತಾಡುತ್ತಲಿದ್ದಾರೆ. ಮಹಾರಾಷ್ಟ್ರದಲ್ಲಿ ಪ್ರತಿಯೊಬ್ಬ ಮನುಷ್ಯನೂ, ಹೇಗಾದರೂ ಮಾಡಿ, ತನ್ನ ಪ್ರಾಂತದ ಗಡಿಯನ್ನು ಹಿಂದೆ ಹಿಂದೆ ಒತ್ತಿ, ತಮ್ಮ ಕ್ಷೇತ್ರವನ್ನು ಬೆಳೆಯಿಸಬೇಕೆಂದು ಅಪೇಕ್ಷಿಸುತ್ತಾನೆ. ಜನಸಾಮಾನ್ಯರಷ್ಟೇ ಅಲ್ಲ; ಸುಪ್ರತಿಷ್ಠಿತ–ಸುಪ್ರಸಿದ್ಧ–ಧುರೀಣರೆನಿಸಿಕೊಳ್ಳುವ ಮಹಾರಾಷ್ಟ್ರೀಯರೂ, ಇಂತಹ ಮಹತ್ತ್ವಾಕಾಂಕ್ಷೆಯನ್ನು ಇಟ್ಟುಕೊಂಡವರಾಗಿದ್ದಾರೆ. ಆದುದರಿಂದಲೇ ಗಡಿಯಲ್ಲಿಯ ಮರಾಠಿಗರನ್ನು ಎಚ್ಚರಿಸಿ, ಅವರನ್ನು ಹೋರಾಡುವ ಹುಮ್ಮಸ್ಸಿಗಾರರನ್ನಾಗಿ ಮಾಡುವ ಪೂರ್ವಸಿದ್ಧತೆಯೇನೋ–ಎಂಬಂತೆ, ಗಡಿಸಮಿತಿಯ ಮರಾಠೀಸದಸ್ಯರು ಈಗ, ಅನಧಿಕೃತವಾಗಿ, ಬೆಳಗಾವಿ, ಬಿದರೆ, ಕಾರವಾರ ಜಿಲ್ಲೆಗಳಲ್ಲಿ ಸುತ್ತಾಡಿ, ತಮ್ಮ ಕಾರ್ಯಸಾಧನೆಗೆ ಅಗತ್ಯನೆನಿಸುವಂತಹ ಸುದ್ದಿ–ಸಂಗತಿಗಳನ್ನೂ, ಜನಾಭಿಪ್ರಾಯಗಳನ್ನೂ ಕೂಡಿಹಾಕುತ್ತಲಿದ್ದಾರೆ. ನಮ್ಮ ಸರಕಾರವೂ ಅವರಿಗೆ ಯಾವುದೇ ಬಗೆಯ ಅಡೆತಡೆಗಳನ್ನು ಒಡ್ಡಿಲ್ಲ. ಪಕ್ಷಪಾತರಹಿತ ನ್ಯಾಯಿಗಳಿರುವಲ್ಲಿ ಸರಕಾರವ ಈ ಧೋರಣೆ ಸಮಂಜಸವೆನಿಸುವುದು; ಆದರೆ ಮರಾಠಿಗರು ತಮ್ಮ ಅನ್ಯಾಯದ ಆಕ್ರಮಕ ಚಟುವಟಿಕೆಗಳಲ್ಲಿ ಸರಕಾರದ ಎದೆಗೆ ಹಾಕಿರುವ ಏಟುಗಳನ್ನು ಮಹಜೆದಿರು ತಂದು ನೋಡಿದರೆ, ನಮ್ಮ ಸರಕಾರದವರಿಗೆ—ಇನ್ನೂ ವಾಸ್ತವದ ಕಲ್ಪನೆ ಉಂಟಾಗಿಲ್ಲವೆಂದು ತೋರುವುದು.

ನಮ್ಮ ಸದಸ್ಯರು ಜತ್ತಿ–ಅಕ್ಕಲಕೋಟೆ–ಸೊಲ್ಲಾಪುರ–ಕೊಲ್ಹಾಪುರ–ಸಾತಾರಾ ಜಿಲ್ಲೆಗಳ ಗಡಿಪ್ರದೇಶದಲ್ಲಿ ಹೋಗಿ, ಅಲ್ಲಿ ಕನ್ನಡಿಗರ ಹಿತಸಂಬಂಧಗಳನ್ನು ತಿಳಿದುಕೊಳ್ಳಬಾರದೇ? ಇವರ ತತ್ತ್ವಮೂಲಕವಾದ ಔದಾಸೀನ್ಯ, ಕನ್ನಡಿಗರ ಕಲ್ಯಾಣಸಾಧನೆಗೆ ತಡೆಯಾಗದಿರಲಿ!

ಪ್ರೀತಿಯ ಫಲ

(ಸಣ್ಣಕತೆ)

ಶೀ. ಆರ್. ಪಿ. ಕುಲಕರ್ಣಿ, ಎಂ. ಎ. ಬೆಳಗಾಂವಿ.

ಸಹೃದಯನ ಹೃದಯದ ಪ್ರೀತಿಗಂಗೆಯ ಪ್ರವಾಹಕ್ಕೂ ವ್ಯವಹಾರಿಯ ಬುದ್ಧಿಸರ್ವದ ವಿಷಪೂತ್ಕಾರಕ್ಕೂ ಎಷ್ಟು ದೂರದ ಅಂತರ ? ಪಾಪ. ಶಿವಪ್ಪ, ಪ್ರೀತಿ ಬೇಕಾಗಿ ಲೋಕವನ್ನೇ ಪ್ರೀತಿಸಿದ; ಆದರೆ ವ್ಯವಹಾರ-ದೃಷ್ಟಿಯ ಲೋಕ ಆತನ ಪ್ರೀತಿಗೆ ಬೆಲೆಯನ್ನೇ ಕೊಡಲಿಲ್ಲ !

ಶಿವಪ್ಪ ಇತ್ತೀಚೆಗೆ ಹೊಲಕ್ಕೆ ಹೋಗುವುದನ್ನೇ ಬಿಟ್ಟಿದ್ದ. ಹೋಗುವುದಾದರೂ ಏತಕ್ಕೆ ? ವಯಸ್ಸೂ ಆಗಿತ್ತು. ಇಂದೇಕೋ ಅವನ ಮನಸ್ಸು ಹೊಲದತ್ತ ಹರಿಯಿತು. ಎಲೆಯಡಿಕೆ ಬಾಯೂಡಿಸುತ್ತ, ಸಾವಕಾಶ ನಡೆದು ಹೊಲ ತಲುಪಿದ. ಆತ ನಿರಾಯಾಸವಾಗಿ ಹತ್ತಿಪ್ಪತ್ತು ಮೈಲು ನಡೆದನ; ಇಂದು ಹೊಲ ತಲಪುವಷ್ಟರಲ್ಲಿ ದಣಿದ. ಹೊಲವಾದರೂ ಮನೆಯಿಂದ ಎಷ್ಟು ದೂರ ? ಒಂದು ಕೂಗಳತೆಯಷ್ಟೇ !

ಆತ ಹಾಳೆಯ ತೆವರಿಗೆ ಒರಗಿ ಕುಳಿತ. ಸಂಚಿಯ ನೆನಪಾಯಿತು. ರುಮಾಲಿನಲ್ಲಿ ಕೈಹಾಕಿದ. ಎಲ್ಲಿಯೋ ಮರೆತಿದ್ದ. ಅ ಎಲ್ಲಿ ಅಪಶಕುನದ ಮೂರ್ತಿ. ಅವಳು ಮುಂದೆ ಬಂದರೆ ಯಾರೂ ಯಾವ ಮಹತ್ವದ ಕೆಲಸಕ್ಕೂ ಹೋಗುತ್ತಿರಲಿಲ್ಲ. ಹೊಲಕ್ಕೆ ಹೊರಡುವಾಗ ಅವಳೇ ಮುಂದೆ ಬರಬೇಕೇ ? ಇದೆಲ್ಲ ಮುಂದೇನಾಗುವುದನ್ನು ಸೂಚಿಸುವುದು ? ಆಗಬೇಕಾದದ್ದಾರೂ ಏನು ಉಳಿದಿದೆ ?

ಕಲ್ಲ ಶಿವಪ್ಪನ ರೈತ. ಆತ ಹೊಲದಲ್ಲಿ ನೇಗಿಲು ಹೂಡಿದ್ದ. ಪುಷ್ಟವಾದ ಹೋರಿಗಳು. ಇದಕ್ಕೂ ಮೊದಲಿನ ಜೋಡಿಯನ್ನು ಮೊನ್ನೆ ಮೊನ್ನೆ ಮಾರಿದ್ದ. ಅವುಗಳಿಗೆ ವಯಸ್ಸಾಗಿತ್ತು. ಅವು ಕಲ್ಲನ ಮನೆಯಲ್ಲಿ ಹದಿನೈದು ವರ್ಷ ದುಡಿದಿದ್ದುವು. ಶಿವಪ್ಪ ಇವನು ಕಣ್ಣಾರೆ ಕಂಡಿದ್ದ. ಕೊಳಕುಬಟ್ಟೆಯ ಎಳೆಗಳನ್ನು ಒಂದೊಂದು ಬಿಚ್ಚಿದಂತೆ, ಅವನ ವಿಚಾರಗಳ ಸುರುಳಿ ಬಿಚ್ಚಿದಷ್ಟೂ ದೊಡ್ಡದಾಗಹತ್ತಿತು. ವಿಚಾರಿಸಿ ಉಪಯೋಗವೇನು ? ಹಣ್ಣೆಲೆ ಉದುರುವ ಸಮಯವನ್ನು ಹೇಳುವಂತಿಲ್ಲ.

ಶಿವಪ್ಪನಿಗೆ ಮಣ್ಣು ಬಲು ಪ್ರೀತಿ. ಮಣ್ಣಿನ ಮಕ್ಕಳೆಂದರೆ ಜೀವ. ಆತ ತನ್ನ ಹೊಲ ನಂದನವನ ಮಾಡಿದ್ದ. ಅವನಿಗೆ ಮಣ್ಣಿನ ಸೇವೆ ತಾಯಿಯ ಸೇವೆ. ಈ ತಾಯಿ ಬಾಯಿಂದ ದುಃಖ ತೋಡಿಕೊಳ್ಳುವಂತಿಲ್ಲ. ಈಗ ತಾವು ಮಣ್ಣಿನ ಮಕ್ಕಳೆಂದು ಯಾರು ತಿಳಿಯುವರು ? ಶಿವಪ್ಪನ ಮನಸ್ಸಿನಲ್ಲಿ ಹಳೆಯ ನೆನಪಿನ ತೆರೆಗಳೆದ್ದುವು. ತನ್ನ ಹೊಲದಲ್ಲಿ ದುಡಿದ ಆಳುಮಕ್ಕಳನ್ನು ಆತ ಸ್ಮರಿಸುತ್ತಿದ್ದ. " ಹೊಸಕೇರಿಯ ಕಲ್ಲ ಈಗೇನುಮಾಡುತ್ತಿರಬಹುದು ? ಕೂರಿಗೆಯಲ್ಲಿ ಆತನದು ನುರಿತ ಕೈ. ಬಸಪ್ಪ ಎಂತಹ ಇರುಕುಳಿ ದನವನ್ನೂ ಹಿಡಿಯುತ್ತಿದ್ದ. ಅವನ ಧೈರ್ಯ-ಶಕ್ತಿಗಳು ಕಡಿಮೆಯಾಗಿರಲಿಕ್ಕಿಲ್ಲನೇ?" ಮೊದಲಾದ ವಿಚಾರಗಳು ನಿಂಚಿದುವು. ಆತನ ಮನಸ್ಸಿನ ಕುಡಿಕೆಗೆ ತೂತುಬಿದ್ದು, ವಿಚಾರಗಳು ಸೋರಿಹೋದುವು. ಮನಸ್ಸು ಮಾತ್ರ ಬರಿಯದಾಯ್ತು.

ಕಲ್ಲನ ವೃಷ್ಟಿ ಶಿವಪ್ಪನತ್ತ ಹರಿಯಿತು. " ಮನಿಮುರಕ ಮುದುಕ !" ಎಂದು ಉದ್ಗಾರ ತೆಗೆದ. ಶಿವಪ್ಪನಿಗೆ ಕೇಳಿಸುವಷ್ಟು ಜೋರಾಗಿಯೆ ನುಡಿದ. ಶಿವಪ್ಪನಿಗೆ ಇಂಥ ಬೈಗಳು ಹೊಸವಲ್ಲ. ಜನರು ತನ್ನನ್ನು ಕುರಿತು ಏನು ಆಡುವರೆಂದು ಆತನಿಗೆ ಗೊತ್ತು. ಒಬ್ಬ " ಜೀನ ಮುದುಕ !" ಎನ್ನುತ್ತಿದ್ದ. ಮತ್ತೊಬ್ಬ " ಪರದೇಶಿ ! ಪಾಪಿಷ್ಠ !" ಎಂದು ಆಡಿಕೊಳ್ಳುತ್ತಿದ್ದ. ಅಹುದು. ಆತ ಮನೆಮುರುಕ ಪರದೇಶಿ. ಆತ ಜೀನ! ಆದಕ್ಕಾಗಿಯೇ ಜನರು ಅವನನ್ನು ಸೇರುತ್ತಿರಲಿಲ್ಲ. ಊರಲ್ಲಿ ಜಾತ್ರೆಯಾಗುತ್ತಿತ್ತು. ಎಲ್ಲ ಸಾವುಕಾರರನ್ನೂ ಆಟ-ನೋಟಗಳಿಗೆ, ಪೂಜೆ-ಪುರಸ್ಕಾರಗಳಿಗೆ ಊದಿಸುತ್ತ ಬಾರಿಸುತ್ತ ಕರೆಯುವ ಸಂಪ್ರದಾಯ. ಈತನಿಗೆ ಮಾತ್ರ ಕರೆ-ಹೋಗುತ್ತಿರಲಿಲ್ಲ. ಇವನು ಜನರು ತನ್ನ ಮನೆಗೆ ಬರಬೇಕೆಂದು ಇಚ್ಛಿಸುತ್ತಿದ್ದ; ಅವರೊಡನೆ ಪ್ರೀತಿಯ ಮಾತುಗಳನ್ನು ಆಡುವ ಆಶೆ. ಆದರೆ ಜನರು, ಕೊಳಕು ಅತ್ತಿಯ ಹಣ್ಣಿನಂತೆ ಇವನನ್ನು ಕಾಣುತ್ತಿದ್ದರು.

ಒಬ್ಬ ಕೂಲಿಯಾಳು ಕದಿಯುತ್ತಿದ್ದ. ಜನರು ಆತನನ್ನು ಮೈ ಹಣ್ಣಾಗುವಂತೆ ಎಷ್ಟೋ ಸಾರೆ ಥಳಿಸಿದ್ದರು. ಶಿವಪ್ಪ ಆತನಿಗೆ ಬುದ್ಧಿಯ ಮಾತು ಹೇಳಿ ತನ್ನಲ್ಲಿ ಕೆಲಸಕ್ಕೆಟ್ಟುಕೊಂಡಿದ್ದ. ಆಳು ಕದಿಯುವುದನ್ನು ಪೂರ್ಣ ಬಿಟ್ಟಿದ್ದಿಲ್ಲ. ' ಪಾಪ ! ಬಡವ. ಹೊಟ್ಟೆಗೆ ಇಲ್ಲದ್ದಕ್ಕೆ ಮಾಡ್ತಾನ !" ಎಂದು ಶಿವಪ್ಪ ತನ್ನ ಮನಸ್ಸಿಗೆ ತಾನೇ ಸಮಾಧಾನ ಹೇಳುತ್ತಿದ್ದ. ಈಗ ಅವನು ಎಲ್ಲಿರುವನೆಂಬುದು ಶಿವಪ್ಪನಿಗೆ ಗೊತ್ತಿಲ್ಲ. ಆತ ಹೋಗುವಾಗ ಶಿವಪ್ಪನಿಗೆ ತಿಳಿಸಲಿಲ್ಲ. ಕದ್ದರೂ ಆತನ ದುಡಿತದ ಸಾನುಭ್ಯ ಮೊಡ್ಡದು. ಅವನದು ಅನೆಯ ಕಸುವು. ಕೆಲಸದಲ್ಲಿಯೂ ಪಳಗಿದ ಕೈಯವನು. ಹೀಗೆ ಅವನು ತನ್ನನ್ನು ಬಿಟ್ಟು ಹೋಗುವನೆಂದು ಶಿವಪ್ಪನಿಗೆ ಗೊತ್ತಿದ್ದರೆ, ಅವನಿಗೆ ತೊಡಲು ಒಂದು ಅಂಗಿಯನ್ನೂ ಉಡಲು ದೋತರವನ್ನೂ ಕೊಡುತ್ತಿದ್ದ. ಪಾಪ! ಅವನು ಬರಿಗಾಲಿನಿಂದ ತಿರುಗುತ್ತಿದ್ದ. ಶಿವಪ್ಪ ಅವನಿಗೆ ಒಂದು ಜೋಡು ಮೆಟ್ಟು ಕೊಂಡುಕೊಡುವನನ್ನಿದ್ದ. ಆದರೂ ಅವನು ಸಹ ಶಿವಪ್ಪನಿಗೆ 'ಜೀನಬುರುಕ', ಮನೆಮುರಕ', 'ಪರದೇಶಿ ಮುದುಕ !' ಎಂದು ಅನ್ನುತ್ತಿರಬಹುದು !

ಕಲ್ಲಪ್ಪನ ಮುದಿಯೆತ್ತುಗಳು ಅವನ ಮುಂದೆ ಬಂದು ನಿಂತಂತೆ ಭಾಸವಾಗಹತ್ತಿತು! ಶಿವಪ್ಪ ಬೇರೆ ಕಡೆಗೆ ಹೋಗಿ ಕುಳಿತ. ಆ ಮುದಿಯೆತ್ತುಗಳು ಅವನ ಬೆನ್ನುಹತ್ತಿ ಬಂದಂತೆ ಎನಿಸಹತ್ತಿತು. ಅವನಿಗೂ ಅವುಗಳಿಗೂ ಯಾವ ಅಂತರ? ಶಿವಪ್ಪನೂ ಒಂದು ಮುದಿಯೆತ್ತು. ಕಲ್ಲ ಅವುಗಳನ್ನು ಮಾರಿದ. ಅವಕ್ಕೆ ಬೆಲೆ ಬಂದಿತು! ಶಿವಪ್ಪನಿಗೆ ಯಾವ ಬೆಲೆ? ಅಲ್ಲಿಯೇ ಅವನು ಸತ್ತರೆ? "ಸತ್ತಮ್ಯಾಗ ಸಹಿತ ಮುದಕನ ಕಾಟ!" ಎಂದು ಕಲ್ಲ ಅನ್ನಬಹುದಿತ್ತು. ಆ 'ಜೀನಬುರುಕ ಪರದೇಶಿ, ಮನೆಮುರುಕ' ಮುದುಕನಿಗೆ ಕುಣಿ ತೋಡಲೂ ಅಲ್ಲಿ ಸ್ಥಳವು ದೊರೆಯಬಹುದೋ, ಇಲ್ಲವೋ?

ಶಿವಪ್ಪನ ಹೊಲದಲ್ಲಿ ಕಲ್ಲಸ ಅಳುಗಳು ದುಡಿಯುತ್ತಿದ್ದರು. ಅವರು ದುಡಿಯುವುದು ಕಲ್ಲ ಕೊಡುವ ಒಂದು ರೂಪಾಯಿಯ ದಿನದ ಪಡಿಗಾಗಿ. ಅವರು ಕೆಲಸದ ಭಕ್ತರಲ್ಲ! ಬಿಟ್ಟಿಯಾಳುಗಳು! ದೊರೆಯುವ ಕಾಸಿಗೆ ಮನುಷ್ಯತ್ವವನ್ನು ಮಾರಿಕೊಂಡವರು! ಶಿವಪ್ಪನಿಗೆ ತಾನು ತಾರುಣ್ಯದಲ್ಲಿ ದುಡಿಯುತ್ತಿದ್ದುದು ನೆನಪಾಯಿತು ಹೊಟ್ಟೆಯಲ್ಲಿ ಚೂರಿಯನ್ನು ತಿವಿದಂತಾಯಿತು. ತುಟಿಗಳು ನಡುಗಹತ್ತಿದುವು. ಕಣ್ಣು ಹನಿಗರಿದುವು. ಆತ ಕಣ್ಣೀರು ಒರಸಲಿಲ್ಲ. ಕಲ್ಲನಾಗಲಿ, ಅವನ ಅಳುಗಳಾಗಲಿ ಅವನನ್ನು ಮಾತನಾಡಿಸಲಿಲ್ಲ. ಆತ ಇಂತಹ ಎಷ್ಟೋ ಅವಮಾನದ ಹೊರೆಗಳನ್ನು ಹೊತ್ತಿದ್ದ. ಇನ್ನೆಲ್ಲಿಯ ಅಳು, ಪುನೆ, ಹೊಲ! ಅವನನ್ನು ದೇವರು ಕರೆಯುತ್ತಿದ್ದನು. ತನ್ನ ಬುದ್ಧಿಗೆ ತಿಳಿದಂತೆ ನಡೆದ. ಇನ್ನು ಅವನಿಗೆ ಸುಖವು ದೊರೆಯಲಾರದೇನೋ ನಿಜ. ಅದರೆ ಕಷ್ಟದ ದಿನಗಳು ತೀರುತ್ತ ಬಂದದ್ದು ಅವನಿಗೆ ಸ್ವಲ್ಪ ಸಮಾಧಾನವನ್ನು ಮಾಡಿತ್ತು.

ನೆನಪು ಅವನನ್ನು ನಲವತ್ತು ವರ್ಷಗಳ ಹಿಂದೆ ಒಯ್ದಿತು. ಅವನ ಮಗ ಬಸಪ್ಪನ ನೆನಪಾಯಿತು. ಮಗ ಸಾಯುವುದಕ್ಕೆ ಮೊದಲು ತಾನು ಅನುಭವಿಸಿದ ಸುಖ ನೆನೆದ. ಅದು ಅಷ್ಟಿಷ್ಟಲ್ಲ. ಆಗ ಅವನ ಮಗನಿಗೆ ಹದಿನೆಂಟು ವರ್ಷಗಳು ತುಂಬಿದ್ದುವು. ಕಲ್ಲನ ಹೋರಿಯ ಕುತ್ತಿಗೆಯಂತೆ ತುಂಬಿ ಬೆಳೆದ ತೋಳು. ಒಮ್ಮೆ ಯಾರೊಡನೆಯೋ ಜಿದ್ದು ಹಾಕಿದ್ದ. ಹತ್ತು ಮಣದ ಕಬ್ಬಿಣದ ಅಚ್ಚನ್ನು ಹತ್ತಿಯ ಚೀಲದಂತೆ ತಲೆಯ ಮೇಲಿಟ್ಟುಕೊಂಡ; ಗಂಡ-ಹೆಂಡಿರು ಮಗನ ಪೃಷ್ಟಿಯನ್ನು ತೆಗೆದರು. ಹೊಲದ ಹಾಳೆಯ ಮೇಲೆ "ಏ! ಏ!!" ಎಂದು ಗುಡುಗಿದರೆ, ಊರಲ್ಲಿಯು ಜನರು ನಡುಗುತ್ತಿದ್ದರು. ಎರಡೂ ಕೈ ಕಟ್ಟಿಕೊಂಡು ನಿಂತರೆ ತೀರಿತು! ತಪ್ಪೂರ ಗುಡ್ಡದಂತೆ ಕಾಣುತ್ತಿದ್ದ. ಆಗ ಶಿವಪ್ಪನ ಮನೆಯಲ್ಲಿ ಒಕ್ಕಲುತನವಿತ್ತು. ಬಸಪ್ಪ ಹತ್ತಾಳುಗಳ ಕೆಲಸ ಒಬ್ಬನೇ ಮಾಡುತ್ತಿದ್ದ. ಇದೇ ಹೊಲದಲ್ಲಿ ಮಗ ದುಡಿದ; ತಂದೆ ದುಡಿದ. ಶಿವಪ್ಪನ ಹೆಂಡತಿ ದುಡಿವಳು. ಮೂರು ನಾಲ್ಕು ವರ್ಷಗಳಲ್ಲಿ ಕೈತುಂಬ ಹಣ ಗಳಿಸಿದ. ಆ ಹಣ ಹೊಲಕ್ಕಾಗಿಯೇ ಖರ್ಚು ಮಾಡಿದೆ. ಬಸಪ್ಪ ತನ್ನ ಮುಂದೆಯೇ ಸತ್ತದ್ದಕ್ಕೆ ಅವನನ್ನು ಥಳಿಸುವಷ್ಟು ಸಿಟ್ಟು! ಮಗ ತಂದೆಯನ್ನು ಬಿಟ್ಟು ಹೋದ.

ಮಗನನ್ನು ನೋಡುವ ಆಶೆ ತೀವ್ರವಾಯಿತು. ತಲೆ ತಿರುಗ ಲಾರಂಭಿಸಿತು. ಎದೆಯ ಬಡಿತ ಜೋರಾಯಿತು. ಹೊಲದಲ್ಲಿ ಕುಳಿತದ್ದನ್ನು ಕಲ್ಲ ನೋಡಿದ, ಹುಬ್ಬು ಗಂಟಿಕ್ಕಿದ. ಶಿವಪ್ಪ ಇದೇ ಹೊಲದಲ್ಲಿ ತನ್ನ ಬೆವರಿನ ಹೊಳೆ ಹಳೆಯಿಸಿದ್ದ. ಎರಡು ಭೂಮಿಯನ್ನು ಸಾಗು ಮಾಡಿದ್ದ. ಅಲ್ಲಿಯ ಕಲ್ಲುಗಳನ್ನು ಹೊತ್ತು ಹೊತ್ತು ಆತನ ತಲೆ ಬೋಳಾಗಿತ್ತು. ಈಗ ಹೊಲದಲ್ಲಿ ಹಸಿರುಬಣ್ಣ ಕುಣಿಯುತ್ತಿತ್ತು. ಅವನ ಅಸಹಾಯ ಮನಸ್ಸು ಮಾತ್ರ ಕುದಿಯುತ್ತಿತ್ತು.

ಕೃತಿಗೆ ನಿಲುಕದ ವಿಚಾರ ನಿಷ್ಪ್ರಯೋಜಕವೆಂದು ಆತನಿಗೆ ಈಗ ಗೊತ್ತಿರಲಿಲ್ಲ. ಪರಲೋಕದಲ್ಲಿ ಮಗನನ್ನು ಕಾಣುವ ಹೊಂಗನಸನ್ನು ಕಟ್ಟಿದ. ಅಲ್ಲಿ ಮಗನು ತಂದೆಗೆ, "ಯಪ್ಪಾ, ನೀ ಬಾಳ ದುಡದಿ. ಎಷ್ಟಎಷ್ಟರೆ ನಿನಗ ನಮ್ಮ ಹಿಂದ ಕಷ್ಟ ಐತ್ಯ" ಎಂದು ಸಮಾಧಾನವನ್ನು ಹೇಳಬಹುದೆಂದು ಗಾಳಿಯ ಗೋಪುರ ಕಟ್ಟಿದ.—ಶಿವಪ್ಪ.

ಶಿವಪ್ಪನಿಗೆ ಮಗ ಬಂದು ಮುಂಬೆ ನಿಂತಂತಾಯಿತು. "ನೀ ಸತ್ತಮ್ಯಾಲ ನನ್ನ ದುಃಖಾ ಏನ ಹೇಳ್ಲಿ? ನನ್ನ ನೋಡೋದ್ಕ ಯಾರೂ ಇಲ್ದಾಂಗ ಆದ್ರು. ಜನಾ ನನಗ 'ಮಗನ್ನ ನುಂಗಿದ ಪರದೇಶಿ' ಅನ್ನಾಕ ಹತ್ತಿದರು" ಎಂದ ಶಿವಪ್ಪ. ಮಗನು ತೀರಿದ ನೋಲೆ ಹೊಲವೇ ಮಗನೆಂದು ತಿಳಿದ ಶಿವಪ್ಪ, ಮಗ ಮತ್ತೂ ಸಮೀಪ ಬಂದಂತಾಯಿತು.

"ಮಗನ, ನಿನ್ನ ದುಕ್ಕಾ ನುಂಗಿದ್ನಿ. ನಿನ್ನ ಅವ್ವ....." ಎಂದ ಶಿವಪ್ಪ.

"ಅಪ್ಪ! ಏನಾತು ಅಕೀಗೆ?".

"ಆಕಿನ್ನ ಸಹಿತ ಯಮಾ ನುಂಗಿಕೊಂಡ ಹ್ವಾದ!"

ಅವಳ ನೆನಪು ಆಗುವಷ್ಟರಲ್ಲಿ ಹೆಂಡತಿಯೂ ಮುಂದೆ ಬಂದು ನಿಂತಂತೆ ಭಾಸವಾಯಿತು.

"ಮಗ ನನ್ನ ಬಿಟ್ಟ ಹ್ವಾದ ಅಂತ, ನೀನೂ ನನ್ನ ಬಿಟ್ಟ ಹೋಗಬೇಕು? ನನ್ನ ಹೊಟ್ಯಾಗ ಬೆಂಕಿ ಬಿದ್ದಾಂಗ ಆಗತೈತಿ. ನನಗ ಯಾರ ಆಧಾರೂ ಊಳೀಲಿಲ್ಲ. ನೀ ಇಷ್ಟೇ ತನಕಾ ಒಂದೂ ಚೆಂದಾಗಿರೂ ಸೀರೀ ತಂದು ಕೊಡಲಿಲ್ಲ ನಿನಗ" ಎಂದು ತನ್ನ ಹೆಂಡತಿಯನ್ನು ಕುರಿತು ಶಿವಪ್ಪನೆಂದ.

"ನನಗಾರೆ ಎಲ್ಲಿ ಬೇಕಾಗಿತ್ತು? ಈ ಹೊಲಾ ನೋಡಿ ಹಸಿವಿ ನೀರಡಿಕೆ ಪರೀತಿದ್ದೂ!"

"ಹೌದು ಹೌದು! ಹೊಲಾ ಹೊಲಾ ಅಂತ ಬಡಕೊಂಡೆವ್ವ. ಇದ್ದ ಬಿದ್ದದ್ದನ್ನ ಎಲ್ಲಾ ಹೊಲದಾಗs ಹಾಕಿದ್ನಿ! ನೀನಾರೆ ನಂಗ ಜೀನ ಅಂತ ಅನಬ್ಯಾಡಾ! ದೇವರು ನಿನ್ನಷ್ಟs ಕರಕೊಂಡು ಹ್ವಾದ... ನನ್ನ ಮಾತ್ರ ಪರದೇಶಿನ್ನ ಬಿಟ್ಟು! ಇನ್ನಾರೆ ಎಷ್ಟದಿನ?. ನಾನೂ ನಿನ್ನ ಕಡೇನ ಬರತೇನಿ" ಎಂದ ಶಿವಪ್ಪ.

ತಂದೆ ತೀರಿದಾಗ ಶಿವಪ್ಪ ಹದಿನೈದು-ಹದಿನಾರು ವರ್ಷದವನಿರಬಹುದು. ತಂದೆಯ ಎಡೆಯಲ್ಲಿಯೇ ಶಿವಪ್ಪನ ಊಟ. ಆತ ಅಳುವುದನ್ನು ಕಂಡರಂತೂ ತೀರಿತು. ತಂದೆಯ ಕಣ್ಣು ಕಿಡಿ ಕಾರುತ್ತಿದ್ದುವು. ಮಗನ ಹಟಕ್ಕೆ ಶಾಯಿಗೇಟು! ತಂದೆ ಮಗನಿಗಾಗಿ ಎಲುಬು ಪುಡಿಯಾಗುವಂತೆ ದುಡಿದ. ಮಗನಿಗಾಗಿ ಹೊಲ ಕೊಂಡು ಕೊಳ್ಳಲು ಹಣ ಕೂಡಿಹಾಕಿದ. ಶಿವಪ್ಪನೂ ತಂದೆಯ ಭಾರಕ್ಕೆ ಕೈ ಹಚ್ಚಿದ. ಸತ್ತ ಮೇಲೆ ತಂದೆಯು ಆಶೆ ಫಲಿಸಿತು. ಶಿವಪ್ಪ ಹೊಲ ಕೊಂಡ. ಸ್ವರ್ಗದಲ್ಲಿಯ ಅವನ ತಂದೆ ಇದನ್ನು ಕಂಡು ಹಿರಿ ಹಿರಿ ಹಿಗ್ಗಿರಬಹುದು.

ಶಿವಪ್ಪ ತಂದೆಯ ರೀತಿ-ನಡಾವಳಿಯ ಜಾಡನ್ನೇ ತುಳಿದ. ತಂದೆ ತನ್ನನ್ನು ಪ್ರೀತಿಸಿದಂತೆ ತಾನು ಮಗನನ್ನು ಪ್ರೀತಿಸಿದ; ಅದರೆ ಪರದೇಶಿಯಾದ. ಇಲ್ಲಿಯವರೆಗೆ ತಂದೆಯ ದಿನ-ಕಾರ್ಯ ಮಾಡುವುದನ್ನು ಎಂದೂ ತಪ್ಪಲಿಲ್ಲ, ತನ್ನ ದಿನಕಾರ್ಯವನ್ನು ಮಾಡಲು ಮಗ ಉಳಿಯಬಾರದೆ? ಶಿವಪ್ಪನ ಎಲ್ಲ ಆಧಾರಗಳು ಮುರಿದುವು. ಕೆಲಸ ನೀಗದಾಯಿತು. ಒಮ್ಮೆ ತಂಗಿಯ ಮನೆಗೆ ಹೋಗಿ ಇರುವ ವಿಚಾರ ಮಾಡಿದ. ಅದು ಸರಿ ಬರಲಿಲ್ಲ.

ಒಂದು ದಿನ ಕಲ್ಲ ಶಿವಪ್ಪನ ಮನೆಗೆ ಬಂದ. ನಮಸ್ಕರಿಸಿದ. ಶಿವಪ್ಪ ಕಲ್ಲನ ಕೈಹಿಡಿದು ಒಳಗೆ ಕರೆದುಕೊಂಡು ಬಂದ.

"ಹ್ಯಾಂಗ ಬಂತು ಸ್ವಾರೀ? ಏನ ಕೆಲಸ?" ಕೇಳಿದ ಶಿವಪ್ಪ.

"ನಿನ್ನ ಕಡೇನs ಒಕಟ ಕೆಲಸ ಇತ್ತು!"

"ಏನ ಹೇಳಲಾ. ನನ್ನ ಕೈಲೇನೂ ಆಗದ್ಹಾಂಗ ಆತು."

"ಹಾಂಗ ಅಂದ್ರ ನಂದ ಒಬ್ಬಂದs ಏನ ಕೆಲಸ ಅಲ್ಲಾ; ನಿಂದೂ ಒಟs ಕಲ್ಯಾಣ ಆಗ್ಲಿ—ಅಂತ!"

"ನಂದು ಯಾವ ಕಲ್ಯಾಣ ಆಗಬೇಕು ಇನ್ನ? ದಿನಾ ಎಣಿಸಿಗೋತ ಅದೇನು. ಮಾಡಿಪ ಹೊಲಾ ನೀಗಪ್ಪೊಲ್ಲ; ಯಾರಿಗರರೇ ಹಚ್ಚಿ ಬಿಡಬೇಕಂತ ವಿಚಾರ."

"ಹಂ. ಹಂ. ನಾನೂ ಅದಕ್ಕs ಬಂದೇನು. ಭೂಮಿ ತಾಯೀ ಸೇವಾ ಮಾಡಿದರ ಕೆಟ್ಟಲ್ಲ ಶಿವಪ್ಪಾ! ಅದಕ್ಕೂ ಪುಣ್ಯಾಬೇಕು. ಎಷ್ಟು ಖಂಡ ಕೊಡು ಅಂತೀ?"

"ಖಂಡ ಕೊಡೋದs ನೀ? ನನಗ? ಯಾರಿಗೆ ಬೇಕಪಾ, ಆ ಖಂಡ! ನಾ ಅಂತೂ ಪರದೇಶಿ!"

"ನಿನ್ನ ಹೊಲಾ ಅಂದ್ರ, ಬಂಗಾರ ಖಣೀ ಐತಿ. ಬಂಗಾರ ಬಿತ್ತಿ ಬಂಗಾರ ಬೆಳಕೋಬೇಕು ಅಲ್ಲಿ! ಇಂಥಾ ಹೊಲಾ ನಿಂದ ನಾ ಮಾಡಿ, ನಿನಗ ಏನೂ ಕೊಡಬಾರದೂ ಅಂದ್ರ?"

"ನಾ ಹೊಲಾ ರೊಕ್ಕಾ ಗಳಸೋದ್ಕ ಬೆಳಸಲಿಲ್ಲಾ. ಇಲ್ಲೀ ಬೆಲೀ ಕಂಡು ನನ್ನ ಮನಸ್ಸು ತುಂಬಿ ಬರತೈತಿ. ಕಲ್ಲಾ, ನಿನ್ನ ಮಕ್ಕಳನ್ನ ನೀ ದೊಡ್ಡವರನ್ನ ಮಾಡತೀ ಯಾತಕಪ್ಪಾ ಅದು?"

"ನಿನ್ನ ಹೊವಿನ್ಯಾಗ ಇಟ್ಟಾಂಗ ಇಡತೇನಿ....ಏನೂ ಚಿಂತೀ ಮಾಡಬ್ಯಾಡ. ನಿನ್ನ ಬಿಂಡು ಮುಟ್ಟಿಸಿ, ಇದ್ದ-ಬಿದ್ದ ಕೆಲ್ಸಾ ನೋಡತೇನಿ. ದೇವರ್ದಂಗ ಸುಮ್ಮನ ನೀ ಕುಂತರ ಸಾಕು" ಎಂದ ಕಲ್ಲ.

ಕಲ್ಲ ಶಿವಪ್ಪನ ಧೈರ್ಯನಾದ. ತಾನು ಕೊಡತಕ್ಕ ದವಸ-ಧಾನ್ಯವನ್ನು ತಪ್ಪದೆ ಒಪ್ಪಿಸುತ್ತಿದ್ದ. ಇಬ್ಬರ ಮನಸ್ಸುಗಳನ್ನೂ ಪ್ರೀತಿಯು ಬೆಸೆಯಿತು. ಒಮ್ಮೊಮ್ಮೆ ಶಿವಪ್ಪನಿಗೆ ತನ್ನ ಸ್ಥಿತಿಯ ಅರಿವಾಗುತ್ತಿತ್ತು. ಮುಪ್ಪು ಅವನನ್ನು ಬೇಗ ಬೇಗ ಆವರಿಸಹತ್ತಿತು. ಉಬ್ಬಿದ ಗಲ್ಲಗಳು ಜೆಜ್ಜು ಬಿದ್ದುವು. ಎಲೆಯಡಿಕೆಯಿಂದ ಕೆಂಪಾದ ಕೆಳದುಟಿಯು ಜೋಲು ಬಿದ್ದಿತು. ಕಾಲಿನ ನರಗಳು ಸುತ್ತಿದ ಹಗ್ಗದಂತೆ ಕಾಣಹತ್ತಿದುವು.

ಒಂದು ದಿನ ಯಾರೋ ಊರಿಗೆ ಬಂದರು. ಪ್ರಚಾರ ಕಾರ್ಯವನ್ನು ಆರಂಭಿಸಿದರು: "ಊಳುವವನದೇ ಭೂಮಿ! ಹೊಲದೊಡೆಯರು ವಿಷದ ಬೀಜ!" ಎಂದರು. ವಾಚನಾಲಯ, ಚರ್ಚೆ, ಭಾಷಣ ನೊದಲಾದುವುಗಳಿಂದ ಜನರು ಹಳ್ಳಿಯ ಜೀವನದ ಬಗ್ಗೆ ತಿಳಿದುಕೊಂಡಿದ್ದರು ಹೆಸಿಬಿಸಿಜ್ಞಾನದ ಉತ್ತನು ಪ್ರತೀಕರಿದ್ದರಪರು. ಎಷ್ಟೋ ಹಳ್ಳಿಗಳಲ್ಲಿ ಸಭೆ-ಮೆರವಣಿಗೆಗಳನ್ನು ಮಾಡಿ ದೇಶಭಕ್ತರೆಂಬ ಬಿರುದನ್ನು ಗಳಿಸಿದ್ದರು. "ಹೊಲದೊಡೆಯರು ರೈತರ ಮೇಲೆ ಮಾಡಿದ ಅನ್ಯಾಯ-ಅತ್ಯಾಚಾರಗಳು" ಎಂಬುದು ಅವರ ಪ್ರೀತಿಯ ವಿಷಯ. ಎಂತಹ ಹೊಲದೊಡೆಯನನ್ನು ಕಂಡರೂ ಅವರು ಆವೇಶಪೂರ್ವಕ ಭಾಷಣವನ್ನು ಮಾಡುತ್ತಿದ್ದರು. 'ತಮ್ಮ ಶತ್ರುಗಳನ್ನು ಸಮೂಲ ನಾಶಮಾಡುವುದರಲ್ಲಿಯೇ ರೈತರ ಕಲ್ಯಾಣವಿದೆ' ಎಂದು ಸಾರಿದರು. ರೈತರ ಬಡತನಕ್ಕೆ, ಅಜ್ಞಾನಕ್ಕೆ, ಪೈಗಳ್ಳತನಕ್ಕೆ ಹೊಲದೊಡೆಯರೇ ಕಾರಣರೆಂದರು. ಮುಗ್ಧಮನಸ್ಸುಗಳು ಇದನ್ನು ನಂಬಿದುವು.

ಇದಾದ ಕೆಲವೇ ದಿನಗಳಲ್ಲಿ, ಕಲ್ಲ ಶಿವಪ್ಪನ ಮನೆಗೆ ಬರುವುದನ್ನು ಬಿಟ್ಟ. ಅವರಿಬ್ಬರಲ್ಲಿ ಕಳೆದ ಎಷ್ಟೋ ವರ್ಷ ಬೆಳೆದು ಬಂದ ಪ್ರೀತಿಯ ಕೂಡಿಕೆಯು ಸಡಿಲಾಯಿತು. ಶಿವಪ್ಪ ಒಂದು ದಿನ ತಾನೇ ಕಲ್ಲನ ಮನೆಗೆ ಬಂದ. "ಹಬ್ಬದಾಗ ಸಹಿತ ನಿನ್ನ ದರ್ಶನ ಇಲ್ಲಾಂಗ ಆತಲೋ?" ಎಂದ ಶಿವಪ್ಪ.

"ಹುಂ....ಹುಂ" ಕಲ್ಲನ ಉತ್ತರ. ಅವನ ಸಿತ್ತ ನೆತ್ತಿಗೇರಿತ್ತು.

"ನನ್ನ ದಿನಾ ತೀರತಕ್ಕ ಬಂದೂ. ಇಷ್ಟ ದಿನಾ ನಿಂದs ಪಾದೀ ನೋಡಿದಿನಿ. ನೀ ಅಂತೂ ಬರಕಲಿಲ್ಲ. ನಿನ್ನ ಬೆಟ್ಟಿ ಆಗದಿದ್ದರ ಹ್ಯಾಂಗರೇ ಆಗತೈತೋ" ಎಂದ. ಶಿವಪ್ಪನ ನೋಟವಲ್ಲಿ ಪ್ರೀತಿ ತುಂಬಿತ್ತು. ಮಾತಿನಲ್ಲಿ ದೈನ್ಯವಿತ್ತು.

ಕಲ್ಲ ತುಟಿಬಚ್ಚಲಿಲ್ಲ. ಶಿವಪ್ಪನೇ ಮುಂದುವರಿಸಿದ. "ನನ್ನ ಹೆಂಡತಿ ಮಗಾ ತೀರಿ ಎಷ್ಟೋ ವರ್ಷ ಆದೂ. ನಿನ್ನ ಗೂಡಾ ಅಟ್ಟ ಮಾತಾಡ್ತಾ ಕುಂತ್ರ, ಹಿಂದಿನ ದುಕ್ಕ ನುರೀತೈತಿ."

"ನಿನ್ನ ಸುಕಾ-ದುಕ್ಕಾ ತಗೊಂಡು ನಾ ಏನಮಾಡ್ಲಿ ? ನಿನ್ನ ಹೊಲಾ ಮಾಡಿದಿನಿ. ನಾಕುದುಡ್ಡು ಆತು; ಅದ್ರ ದುಡ್ಡಿನ ಸಲುವಾಗಿ ಜಗಳಾ ಆಡಿ ನನ್ನ ತಮ್ಮಂದಿರು ಪಾಲಾತಗೊಂಡರು; ಬ್ಯಾರೇ ಆದ್ರು. ನನ್ನ ನುನೀಮುರೀತು !"

"ನನ್ನ ಹೊಲಾ ಮಾಡಿ ನಿನ್ನ ನುನೀ ಮುರೀತ ? ಆದರಾಗ ನಂದೇನು ತಪ್ಪು ?"

"ನಿನ್ನ ಹೊಲಾನ ? ಮನ್ನೆ ಸಭಾದಾಗ ಏನ ಹೇಳೀತಿ ಗೊತ್ತ ಐತಿ ಇಲ್ಲೊ ? ಮಾಡಿದಾವಂದ್ರ ಹೊಲಾ ಅಂತ ! ಇನ್ನ ಮುಂದ ನೀ ಆ ಹೊಲಕ್ಕ ಬರೋಕಾರಣ ಇಲ್ಲ. ಕಾಯದೇಶಿರ್ ಬರತಕ್ಕದ್ದ ನಾ ನಿನಗ ಕೊಟ್ಟರ ಆತು. ಆದರೇ ಎಷ್ಟ ದಿನಾ ? ಹ್ಯಾಂಗೂ ಇನ್ನ ಮುಂದ ನಾವ್ರ ಮಾಲಕರು ಆಗಾವ್ರು ಅದೇವು."

ಕಲ್ಲನಿಂದ ಇಂತಹ ಉತ್ತರವನ್ನು ಅವನು ನಿರೀಕ್ಷಿಸಿರಲಿಲ್ಲ. ಆತ ಕಲ್ಲನಿಂದ ಯಾವ ಆಶಿಯನ್ನೂ ಮಾಡಿರಲಿಲ್ಲ. ಆತ ಕಳೆತ ಹೆಣ್ಣು. ಅವನ ಮನಸ್ಸು ಪ್ರೀತಿಗೆ ಹಸಿದಿತ್ತು. ಮೊದಲೇ ನಡುಗುತ್ತಿದ್ದ ಅವನ ಶರೀರ ಮತ್ತೂ ನಡುಗಿತು. ಶಿವಪ್ಪ ಮೂಕನಂತಾದ. ಅವನ ಜೋಲುಬಿದ್ದ ಕೆಳದುಟಿ ಮಾತ್ರ ಕಂಪಿಸಿತು. ಆತ ಮನೆಗೆ ಹಿಂದಿರುಗಿದ. ಅದೇ ವಿಚಾರದಲ್ಲಿ ಮುಳುಗಿದ. ಶಿವಪ್ಪನಿಗೆ ತಾನು ಮಾಡಿದ ತಪ್ಪೇ ತಿಳಿಯಲಿಲ್ಲ.

ಕೆಲವು ದಿನಗಳು ಉರುಳಿದುವು. ಕಾಲ ಮನಸ್ಸಿನ ಗಾಯಕ್ಕೆ ಮುಲಾಮು ಹಚ್ಚಿತು. ಆತ ತನ್ನ ಹೊಲ ನೋಡಲು ಆಶೆಪಟ್ಟ. ಹೊಲಕ್ಕೆ ಹೋದ. ಕಲ್ಲನ ಮುದಿಯೆತ್ತುಗಳು ಅವನನ್ನು ಕಂಡು ಅಟ್ಟಹಾಸ ಮಾಡುವಂತೆ ಭಾಸವಾಯಿತು. ಅವು ಅವನ ಸಮೀಪ ಬಂದಂತಾಯಿತು. ಅವನ ಪ್ಯೆ ಬೆವತಿತು. ಹಿಂದೆ ಸರಿಯಬೇಕೆಂದರೆ ಶಕ್ತಿಯಿಲ್ಲ. ಎದೆಯಲ್ಲಿ ತೀಕ್ಷ್ಣ ನೋವು. ಆತ ಬಾಯಿ ತೆರೆದ. "ಕಲ್ಲಾ....ಕಲ್ಲಾ....ಬಾ....ಬಾರೋ !" ಎಂದು ಕಿರಿಚಿದ. ಕಲ್ಲ ತನ್ನ ಮೇಲೆ ನೇಗಿಲುಹೊಡೆಯುತ್ತಿದ್ದಂತೆ ಎನ್ನಿಸಹತ್ತಿತು. ಉಸಿರು ಮೇಲಕೆಳಗಾಗತೊಡಗಿತು. ಕಣ್ಣು ಗರಗರ ತಿರುಗಿದುವು. ಎಚ್ಚರ ತಪ್ಪಿತು. ಆತ ಕೈ ಬದಿಗೆ ಚಾಚಿದ. ಅವು ಬದಿಗೆ ಸೆಟೆದುಬಿದ್ದುವು. ಕಣ್ಣು ಮುಚ್ಚಿದುವು.

ಊರಲ್ಲಿ ಶಿವಪ್ಪನ ಮರಣದ ಸುದ್ದಿ ಹಬ್ಬಿತು. ಯಾರ ಮನಸ್ಸಿಗೂ ದುಃಖದ ಕಿಡಿಯು ಹತ್ತಲಿಲ್ಲ. "ಮುದುಕ ಸತ್ತ ! ಪರದೇಶಿ ! ಪಾಪಿಷ್ಠ ! ಮನೆಮುರುಕ !! ಜೀಸಬಡಕ !!" ಎಂದರು ಜನರು. ಶಿವಪ್ಪ ಇಂದು ಸತ್ತುದು ನಿಜ, ಆದರೆ ಆತ ಸತ್ತು ಎಷ್ಟೋ ವರ್ಷಗಳಾಗಿದ್ದುವು.

●

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ಸಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ.

(ಕನ್ನಡ ಸೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಮಹಾಭಾರತದ ಹಿನ್ನೆಲೆ

(ಒಂದು ವಿವೇಚನೆ)

ಶ್ರೀ. ರಂಗರಾವ ದೇಶಪಾಂಡೆ, ಇಲಕಲ್ಲ.

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ
ದೇವೀಂ ಸರಸ್ವತೀಂ ವ್ಯಾಸಂ ತತೋಜಯಮುದೀರಯೇತ್ ॥

ಭಾರತದ, 'ಮಹಾಭಾರತ' ಗ್ರಂಥವು, ಇಂದು ಜಗತ್ತಿನ ಜನಮನವನ್ನೇ ತನ್ನೆಡೆಗೆ ಸೆಳೆದುಬಿಟ್ಟಿದೆ. ಮಹಾಭಾರತವೆಂದರೆ, ಮಾನವಜೀವನ-ಸಮಸ್ಯಾಚಿತ್ರಗಳದೊಂದು ಮಹಾ ಚಿತ್ರಶಾಲೆ. ಭಗವಾನ್ ವ್ಯಾಸ-ಮಹರ್ಷಿಗಳು ಇದರಲ್ಲಿಯ ಪಾತ್ರಗಳನ್ನು ಆಧ್ಯಾತ್ಮಿಕ ದೃಷ್ಟಿ-ಯಿಂದ ಹೇಗೆ ರೂಪಿಸಿದ್ದಾರೆ ? ಇಲ್ಲಿ ನೋಡಿ !

ಶ್ರೀ ಮನ್ಮಹಾಭಾರತವೆಂಬ ಹೆಸರಿನಿಂದ ಜಗತ್ಪ್ರಸಿದ್ಧವಾದ "ಜಯ" ನಾಮಕ ಇತಿಹಾಸ, ದೈವೀಘಟನೆಗಳಿಂದ ಕೂಡಿದ್ದಾಗಿದೆ. ಧರ್ಮಕ್ಷೇತ್ರವಾದ ಕುರುಕ್ಷೇತ್ರ ರಣಕ್ಷೇತ್ರವಾದದ್ದು ಮಾನವ-ಮಾನವರಲ್ಲಿಯ ಈರ್ಷೆ, ದ್ವೇಷ, ಮತ್ಸರದ ಕಾರಣದಿಂದಾಯಿತೆಂದು ತೋರಿಬರುತ್ತಿದ್ದರೂ, ಮಾನವತೆಗೆ ಹೊರತಾದ, ಮಾನವರಲ್ಲಿ ದೈತ್ಯ-ದಾನವರು ಬೆರೆತ ಪಕ್ಷವೊಂದಾದರೆ, ಸದ್ಭಾವಪರ ಮಾನವರ ಉದ್ಧಾರ-ಕ್ಕಾಗಿ, ಸಾನುರಾಗದಿಂದ ಮಾನವರೂಪದಲ್ಲಿ ಅವತರಿಸಿ ಮಾನವರಲ್ಲಿ ಬೆರೆತ ದೇವ-ದೇವತೆಗಳ ಪಕ್ಷ ಇನ್ನೊಂದು. ದೇವ-ದಾನವರ ಅಂತಃಸ್ಥ ದ್ವೇಷ, ಮಾತ್ಸರ್ಯದ ಕಾರಣವೇ ಕುರುಕ್ಷೇತ್ರದ ವಿಶ್ವಮೇಧ. ಪ್ರತಿಪಕ್ಷದ ಸೇನೆಗಳನ್ನು ಮುನ್ನಡೆಯಿಸಿಕೊಂಡು ಯುದ್ಧಮಾಡಿದ ಮಹಾದಂಡನಾಯಕರು—ಪಾಂಡವನ ಪಕ್ಷದಲ್ಲಿ ದೃಷ್ಟದ್ಯುಮ್ನ; ಕೌರವ ಪಕ್ಷದಲ್ಲಿ ಭೀಷ್ಮ, ದ್ರೋಣ, ಕರ್ಣ, ಶಲ್ಯರು — ಮೇಲ್ನೋರಿಕೆಗೆ-ನಾಮಮಾತ್ರ. ತಾತ್ತ್ವಿಕ ದೃಷ್ಟಿಯಲ್ಲಿ ದೇವತೆಗಳ ಪಕ್ಷದ ಮಹಾ-ದಂಡನಾಯಕ ಭೀಮಸೇನ ಅರ್ಥಾತ್ ವಾಯುದೇವ; ದಾನವಪಕ್ಷದ ಅಧಿನಾಯಕ ದುರ್ಯೋಧನ ಅರ್ಥಾತ್ ದೇವಕಂಟಕ ಕಲಿ-ಇವರುಗಳೇ.

'ದೇವ-ದಾನವರಲ್ಲಿ ಎಂದಿನಿಂದಲೂ ಇರಲೊಲ್ಲದೇಕೆ ಕಲಹ! ಮಾನವರಿಗೇನು ಸಂಬಂಧ?' ಎಂದು ಕೇಳಿಬಹುದು. ದೇವ-ದೈತ್ಯದ ಅಸ್ತಿತ್ವಕ್ಕೂ ಮಾನವಜೀವಿತಕ್ಕೂ ಸಂಬಂಧ ಇಲ್ಲದಿಲ್ಲ—ಅತ್ಯಂತ ನಿಕಟಸಂಬಂಧವಿದೆ. ಅಪರಪರ ಅದೃಶ್ಯ ಅವ್ಯಕ್ತ ವ್ಯಾಪಾರದಿಂದ ಮಾನವಜೀವಿತದ ಮೇಲೆ ವ್ಯಕ್ತ ಪರಿಣಾಮವಾಗಿ, ಮಾನವಸಿಗೆ ಸುಖ-ದುಃಖ ಫಲಗಳು ಲಭಿಸುವುವು. ಮಾನವ ದೃಷ್ಟಿಗೆ ಅಗೋಚರವಾದ ಲೋಕಗಳಲ್ಲಿ ಅವರಿದ್ದರೂ, ಅವರಲ್ಲಿ (ಹರಿಕಥಾಮೃತ ಸಾರಸಂಧಿ ೧೭ ಪಾಗೂ ೩೦), ಕೆಲ ಮುಖ್ಯ ಮುಖ್ಯ ದೇವಾಸುರರು ತಮ್ಮ ಒಂದೊಂದಂಶದಿಂದ ಪ್ರತಿಮಾನವದೇಹದಲ್ಲಿ ಮನಸ್ಸೇ ಮೊದಲಾದ ತತ್ತ್ವಗಳ ಅಭಿಮಾನಿಗಳೆನಿಸಿ, ನೆಲಸಿ ತಮ್ಮ ತಮ್ಮ ಪರ್ಚಸ್ಸನ್ನು ಪ್ರಸ್ಥಾಪಿಸಲು ಹೆಣಗುತ್ತಲೇ ಇರುವರು. ಈ ಅವರ ವ್ಯಾಪಾರದಿಂದ ಮಾನವನ ಆ ಆ ಇಂದ್ರಿಯದ ವ್ಯಾಪಾರದ ಮೇಲೆ ಪರಿಣಾಮವಾಗಿ—ಮನಸ್ಸು, ಬುದ್ಧಿ, ಭಾವ, ಸ್ವಭಾವಗಳಲ್ಲಿ ಪರಿ-ವರ್ತನೆಯಾಗುವುದು. ಇದನ್ನು ಮಾನವನು ಅವಶ್ಯವಾಗಿ ಅರಿತಿರ-ಬೇಕು. -ಮರೆತರಾಗದು. ಮಾನವರಲ್ಲಿ ದೇವತ್ವ ದಾನವತ್ವ ಅಥವಾ ಪಶುತ್ವಗಳು ಸುಪ್ತವಾಗಿವೆ—ಎಂದು ಹೇಳಲು ಇದುವೇ ಕಾರಣ.

ಜೀವಸವದಲ್ಲಿ ಶ್ರೇಯಸ್ಸನ್ನು ಆಪೇಕ್ಷಿಸುವುದಾದರೆ, ತನ್ನಲ್ಲಿದ್ದ ಪಶುತ್ವದ-ದಾನವತ್ವದ ಮೇಲೆ ಜಯ ಸಂಪಾದಿಸಬೇಕಷ್ಟೇ ? ಈ ಮಹಾತ್ಕಾರ್ಯ ನಮ್ಮಲ್ಲಾದ ಪ್ರೇರಣೆಯ ಅನುಸರಣೆಯ ಮೇಲೆಯೇ ಅವಲಂಬಿಸಿದೆ.

ಜೀವಿಯು ಯಾವ ಕಾಲದಲ್ಲಿಯೂ ಯಾವ ಅವಸ್ಥೆಯಲ್ಲಿಯೂ ಯಾವ ಕರ್ಮವನ್ನೂ ಮಾಡದೇ ಸುಮ್ಮನೆ ಕುಳಿತಿರಲಾರ. ಇದಕ್ಕೆ ತತ್ತ್ವಾಭಿಮಾನಿಗಳ ಪ್ರೇರಣೆಯೇ ಕಾರಣ. ಸೂಕ್ಷ್ಮ ವಿಚಾರ ಮಾಡಿದರೆ ಸರ್ವ ಕರ್ತೃತ್ವ (ಸಂಪೂರ್ಣ ಕರ್ತೃತ್ವ) ಕಂತರ್ಯಾ-ಮಿಯಾದ ಪರಮಾತ್ಮನದೆ—ತತ್ತ್ವಾಭಿಮಾನಿಗಳಲ್ಲಿಯೂ ಇಲ್ಲ—ಮಾನವನಲ್ಲಿಯೂ ಇಲ್ಲ. ಆದರೂ ಪರಮಾತ್ಮ ಕಿಂಚಿತ್ ಕರ್ತೃತ್ವ-ಸ್ವಾತಂತ್ರ್ಯವನ್ನು ಎಲ್ಲರಿಗೂ ಸಾಲಿಸಿರುವ; ಅದರಿಂದಲೇ ಪ್ರಪಂಚದ ಸಕಲ ವ್ಯಾಪಾರವೂ ನಡೆದಿದೆ.] ಈ ಪ್ರೇರಣೆ, ಮನಸ್ಸಿನಲ್ಲಿ ಹುಟ್ಟಿ-ಬರುವ ಸುವಿಚಾರ—ಕುವಿಚಾರಗಳ ಹಿಂದೆ ಅಡಗಿರುವುದು. ದೇವತೆಗಳ ಪ್ರೇರಣೆಯಿಂದ ಸುವಿಚಾರ; ದಾನವ ಅಥವಾ ಅಸುರ ಪ್ರೇರಣೆಯಿಂದ ಕುವಿಚಾರ ! ಸುವಿಚಾರದಿಂದ ಮನಸ್ಸು ಪ್ರಸನ್ನವಾದರೆ, ಕುವಿಚಾರ-ದಿಂದ ಮನಸ್ಸು ವ್ಯಗ್ರವಾಗಿ ವಿಕಾರಿಯಾಗುವುದು. ಪ್ರಸನ್ನ ಮನಸ್ಸಿ-ನಿಂದ ಮಾನುಷತ್ವ ಉಳಿದು, ದೇವತ್ವದ ಗಳಿಕೆಗೆ ಸಾಧನವಾಗುವುದು. ವಿಕಾರೀ ಮನಸ್ಸಿನಿಂದ ಮಾನುಷತ್ವವು ಅಳಿದು, ಪಶುತ್ವ ಅಥವಾ

ದಾನವತ್ವ ಬೆಳೆದು, ದುರ್ಗತಿಗೆ ಸಾಧನವಾಗುವುದು. ಕಾರಣ ದೇವ ಪ್ರೇರಣೆಯನ್ನೋ ಅಸುರ ಪ್ರೇರಣೆಯನ್ನೋ ಯಾವುದನ್ನು ಅನುಸರಿಸಬೇಕೆಂಬುದನ್ನು ಚಿಂತಿಸಬೇಕು ಮಾನವನು. ಈ ಉದ್ದೇಶದಿಂದಲೇ ಪರಮಾತ್ಮ ಎಲ್ಲ ಪ್ರಾಣಿಗಳಿಗಿಂತಲೂ ವಿಶೇಷವಾದ ಸದಸದ್ವಿವೇಕ ಬುದ್ಧಿಯನ್ನು ದಯಪಾಲಿಸಿರುವ ಮಾನವನಿಗೆ.

ಉಪನಿಷತ್ತಿನಲ್ಲಿ ತಾತ್ತ್ವಿಕವಾಗಿ ಹೇಳಿದ ಈ ಅಸುರೀ ಪ್ರೇರಣೆಯ ಫಲಗಳನ್ನು ಕಂಡುಹಿಡಿದು, ಶಾಸ್ತ್ರದಲ್ಲಿ ಇವುಗಳಿಗೆ ಕಾಮ (ವಿಷಯ ವಾಸನೆ) ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂದು ಹೇಳಿ (ಗೀತಾ ೩/೩೭) ಇವೇ ಷಡ್ರಿಪುಗಳೆಂದೂ ವರ್ಣಿಸಲ್ಪಟ್ಟಿದೆ. ಹಾಗೂ ಈ ಕಾರಣದಿಂದಲೇ ಪ್ರಪಂಚದ ಪ್ರಾಣಿಗಳಲ್ಲಿ (ಮಾನವರಲ್ಲಿ) ದೈವೀ-ಅಸುರೀ ಸಂಪದ್ವಿಭಾಗವೆಂದು ಎರಡು ಭಾಗ ಮಾಡಲ್ಪಟ್ಟಿದೆ. (ಗೀತಾ ೫ ೧೬-೬) ಅಲ್ಲದೆ ದೈವೀ ಹಾಗೂ ಅಸುರೀ ಸ್ವಭಾವದ ಜೀವಿಗಳ ಲಕ್ಷಣಗಳೂ ವರ್ಣಿಸಲ್ಪಟ್ಟಿವೆ. ಅಸುರೀ ಸಂಪತ್ತಿನ ಲಕ್ಷಣ ಈ ಕೆಳಗಿನಂತಿದೆ:—

> ದಂಭೋ ದರ್ಪೋಭಿಮಾನಶ್ಚ ಕ್ರೋಧಃ ಪಾರುಷ್ಯಮೇವಚ
> ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಂ ॥೪॥

೧) ತಾಮಸು ಚಿಲ್ಲರಾದರೂ ಮಹತ್ತ್ವವನ್ನು ಪ್ರದರ್ಶಿಸುವುದು. ೨) ಭಯಕ್ಕೆ ಕಾರಣವಿದ್ದಾಗಲೂ ಭಯವಿಲ್ಲದವನಂತೆ ತೋರಿಸುವುದು. ೩) ಅಹಂಕಾರ ೪) ಕ್ರೋಧ—ಇತರರಿಗೆ ಪೀಡಾಕಾರಿಯಾದ ಚಿತ್ತವಿಕಾರ! ೫) ನಿಷ್ಠುರತ್ವ. ೬) ಅಜ್ಞಾನ. ಈ ಆರು ಲಕ್ಷಣಗಳು ಅಸುರೀ ಸ್ವಭಾವದುವು.

ಇದಲ್ಲದೆ ಈ ಸ್ವಭಾವದವರ ಸ್ವಾಭಾವಿಕ ಆಚರಣೆ, ಜಗತ್ತಿನ ಅಹಿತಕ್ಕೆ ಕಾರಣವಾಗುವದೆಂದೂ ಅನೇಕ ಆಶಾಪಾಶದಿಂದ ಬದ್ಧರಾದ ಇವರು, ತಮ್ಮ ವಿಷಯ ಭೋಗಸುಖಕ್ಕಾಗಿ ಎಂತಹ ಅನ್ಯಾಯವನ್ನೂ ಮಾಡಲಿಕ್ಕೆ ಹೇಸದವರೆಂದೂ ಕಾಮ-ಕ್ರೋಧಗಳಿಂದ ಪೂರ್ಣರಾದವರೆಂದೂ ಮುಂತಾಗಿ ವಿಸ್ತಾರವಾಗಿ ವರ್ಣಿತವಾಗಿದೆ.

ಈ ಮನೋಧರ್ಮ-ದುಸ್ಸ್ವಾಭಾವಗಳು ದಸ್ಯು ಅಥವಾ ಅನಾರ್ಯರೆಂದು ಕರೆಯಿಸಿಕೊಳ್ಳುವವರ ಲಕ್ಷಣಗಳೆಂದು ಬೇರೆ ಹೇಳಬೇಕಾಗಿಲ್ಲ. ಇಂತಹವರದೇ ಪ್ರಾಬಲ್ಯವಾದ ಕಾಲಬಂದಿತ್ತು. ಅದು ಅರಾಜಕ! ಅರಾಜಕ ರಾಷ್ಟ್ರದಲ್ಲಿ ಧರ್ಮಕ್ಕೆ ಉಳಿಗಾಲವಿಲ್ಲ. ದೇವತೆಗಳಿಗೆ ಹವಿಸ್ಸಿಲ್ಲ. ಸ್ತ್ರೀಯರ ರಕ್ಷಣೆಗೆ ಎಡೆಯಿಲ್ಲ. ಮಾನಭಂಗ, ಬಲಾತ್ಕಾರ, ಅಪಹರಣ, ದಾಸರು ದಾಸರಾಗುವರು, ನೀರಿನಲ್ಲಿದ್ದ ಬಲಿಷ್ಠ ಮೀನುಗಳು ದುರ್ಬಲವಾದುವುಗಳನ್ನು ತಿಂದುಬಿಡುವಂತೆ, ಒಬ್ಬರನ್ನೊಬ್ಬರು ತಿಂದುಬಿಡುವ ದುರ್ದರ ಪ್ರಸಂಗ. ಇಂತಹ ಅರಾಜಕ ರಾಷ್ಟ್ರಕ್ಕಿಂತಲೂ ಪಾಪಕಾರಿ ಸ್ಥಾನ ಬೇರೊಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದುಷ್ಟರನ್ನು ದಂಡಿಸಿ ಶಿಷ್ಟರನ್ನು ಸಂರಕ್ಷಿಸುವ ಉದ್ದೇಶದಿಂದ ದೇವತೆಗಳು ಪೃಥ್ವಿಯಲ್ಲಿ ದಂಡಧಾರಕ ರಾಜನ ಸ್ಥಾನವನ್ನು ಕಲ್ಪಿಸಿದರು. ಈ ಪೃಥ್ವೀಪಾಲನೂ ತನ್ನ ಸತ್ತಾಮದದಿಂದ ಸ್ವೇಚ್ಛಾಚಾರಿಯಾಗದಂತೆ ಅವನ ನಡೆವಳಿಕೆಯ ಮೇಲೆ ಕೆಲವು ನಿರ್ಬಂಧಗಳನ್ನಿಟ್ಟರು. ಸಮಾಜಸ್ವಾಸ್ಥ್ಯಕ್ಕೆ ಅತ್ಯಂತ ಅವಶ್ಯವಾದ ವಿಧಿ-ನಿಷೇಧ ಸಹಿತ ಕರ್ತವ್ಯ (ಧರ್ಮ)ವನ್ನು ವ್ಯಕ್ತಿ ಹಾಗೂ ಸಮಾಜಗಳಿಗೆ ನಿರ್ಧರಿಸಿದಂತೆ, ಇವುಗಳೆಲ್ಲವನ್ನು ಒಳಗೊಂಡ ಒಂದು ವಿಶಿಷ್ಟ ಧರ್ಮವನ್ನು ಈ ಪೃಥ್ವಿಪಾಲ (ರಾಜ)ನಿಗಾಗಿ ವಿಧಿಸಿದರು. ಇದಕ್ಕೆ **ರಾಜಧರ್ಮ**ವೆಂದು ಹೆಸರು. ಅಸುರೀವೃತ್ತಿಯ ಅನಾರ್ಯರನ್ನು ದಂಡಿಸಿ ನ್ಯಾಯ-ಧರ್ಮನೀತಿಯಿಂದ ಪ್ರಜಾಕೋಟಿಯನ್ನೂ ಸಂರಕ್ಷಿಸುವುದು ರಾಜನ ಕರ್ತವ್ಯ.

ಆದರೆ ಮಹಾಭಾರತ ಕಾಲದಲ್ಲಿ ಇದಕ್ಕೆ ವಿಪರೀತವಾಗಿ ಕೆಲ ರಾಜರೇ ಅಸುರೀ ಸಂಪದ್ಸಮೃದ್ಧರಾಗಿದ್ದರು. ಅಸುರ ಪ್ರೇರಣೆಯನ್ನನುಸರಿಸಿ ಮತ್ತರಾಗಿದ್ದರು.

ಅಸುರರೊಡೆಯ ಕಲಿರಾಯ. ದೇವಕಂಟಕನೆಂದು ಅವನ ಬಿರುದು. ದೈತ್ಯ-ದಾನವ—ರಾಕ್ಷಸರೆಲ್ಲರಿಗೂ ಇವನೇ ಅಧಿಪತಿ. ಸೃಷ್ಟಿಯೇ ಮೊದಲಾದ ಅಷ್ಟಕರ್ತೃತ್ವ ಸಂಪನ್ನನಾದ ಪರಮಾತ್ಮನ ಬೆಂಬಲವಿದ್ದ ದೇವತೆಗಳ ಕೂಡ ಸದಾಕಾಲ ಸ್ಪರ್ಧಿಸುತ್ತಿರುವ ಕಲಿಯ ಧೈರ್ಯ-ಸಾಹಸ-ಸಾಮರ್ಥ್ಯ, ಮಾನವನ ಊಹೆಗೂ ನಿಲುಕದಷ್ಟು ಪ್ರಬಲವಾಗಿದೆ. ಹಿಂದೆ ಎಷ್ಟೋ ಸಲ ಪರಾಜಯವೊಂದಿ ನೆಲಕ್ಕೆ ಬಿದ್ದಿದ್ದರೂ ಮತ್ತೆ ಮತ್ತೆ ಮೇಲೆದ್ದು ಭುಜತಟ್ಟುತ್ತಲಿ ಇರುವ ಅವನ ಅದಮ್ಯ ಉತ್ಸಾಹ ಎಂತಹದಿರಬೇಕು! ಅವನ ಮಾಯಾತಂತ್ರ ದೇವತೆಗಳನ್ನು ಬಲೆಗೆ ಹಾಕಿಕೊಳ್ಳುವಷ್ಟು ಪ್ರಬಲ; ಸಮಯಾನುಸಾರ ಅದನ್ನು ಉಪಯೋಗಿಸಿಕೊಳ್ಳುವ ಧೂರ್ತರಲ್ಲಿ ಇವನೇ ಅಗ್ರಗಣ್ಯ.

ನಿರ್ಜೀವಶರೀರಗಳನ್ನು ಪ್ರವೇಶಿಸುವ ವಿದ್ಯೆಗೆ ಪರಕಾಯಪ್ರವೇಶವೆಂದು ಹೆಸರು. ಇದು ಅಷ್ಟಮಹಾಸಿದ್ಧಿಗಳಲ್ಲೊಂದೆನಿಸಿಕೊಂಡಿದೆ. ಆದರೆ ಸಜೀವ ಮಾನವಶರೀರದಲ್ಲಿ ಸೇರುವ ಮಹಾಸಿದ್ಧಿ ಕಲಿಪರಂಪರೆಯವರಲ್ಲಿ ಮಾತ್ರ ಸಾಧ್ಯ ಗತಿಗಾಣದ ಜೀವಿಗಳು ಭೂತ-ಪ್ರೇತ-ಪಿಶಾಚ್ಯ ರೂಪದಿಂದ ಮಾನವಶರೀರದಲ್ಲಿ ಸೇರಿ ಬಾಧಿಸುವ ಅನುಭವ ಲೋಕದಲ್ಲಿ ಕಂಡಿದೆ. ಕೇವಲ ಮಾನವ ಶರೀರಗಳನ್ನಷ್ಟೆ ಅಲ್ಲ, ದೇವ-ದೇವತೆಗಳ ಶರೀರಗಳಲ್ಲಿಯೂ ಒಳಹೊಕ್ಕು ತನ್ನ ಪ್ರಭಾವ ಬೀರುವ ಮಹಾಸಿದ್ಧಿ ಕಲಿಯ ಒಂದು ವೈಲಕ್ಷಣ್ಯ.

ಜ್ವಲಂತ ವಿದ್ವೇಷದ ಸಾಕಾರಮೂರ್ತಿಯಾವ ಕಲಿಗೆ, ಹರಿಯ ಹೆಸರನ್ನು ಕೇಳಿದರೆ ಕಸಿವಿಸಿ. ಕಲಿಯು ಪೃಷ್ಟಿಯಲ್ಲಿ ಪರಮಾತ್ಮವಂಚಕ, ಪಕ್ಷಪಾತಿ. "ಬಂಧು-ಬಂಧುಗಳಲ್ಲಿ ಭೇದ ಉಂಟಾದರೆ ಹಿರಿಯರಾದವರು ನಿಷ್ಪಕ್ಷಪಾತದಿಂದ ಸರಿಯಾಗಿ ಬಗೆಹರಿಸಬೇಡವೇ? ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿ ಕಟ್ಟಿ ಒಬ್ಬರ ಪಕ್ಷವಹಿಸುವುದೇ? ಅಮೃತಕ್ಕಾಗಿ ದೇವಾಸುರರು ಸಮನಾಗಿ ಶ್ರಮಿಸಲಿಲ್ಲವೇ? ಅಮೃತ ದೇವತೆಗಳ ಪಾಲಿಗೆ! ಇದೆಂತಹ ನ್ಯಾಯ! ಅಬ್ಬಾ: ಆ ಮೋಹಿನೀ ರೂಪ! ಆ ನಂಜನೆ! ದೇವತೆಗಳ ಪಂಕ್ತಿಯಲ್ಲಿ ಕುಳಿತು ಅಮೃತ ಪ್ರಾಶನ ಮಾಡಿದ ನಮ್ಮಲ್ಲಿಯವನೊಬ್ಬನ ಕತ್ತನ್ನು ಕಡಿದು ಹಾಕಬೇಕೆಂದರೆ.... ದೇವತೆಗಳ ಹಿತವೇ ಅವನಿಗೆ ಪ್ರಾಧಾನ್ಯ. ದೈತ್ಯ,

ದಾನವ, ರಾಕ್ಷಸನೆಂದರೆ ಕಾಲುಕಸ! ಅವನ ಯಾಜಮಾನ್ಯ ಶ್ರೇಷ್ಠತ್ವವನ್ನು ಒಪ್ಪಿಕೊಳ್ಳಲು ಎಂದೂ ಸಾಧ್ಯವಿಲ್ಲ. ಸರ್ವಶಂತ್ರ ಸ್ವತಂತ್ರ ಶಕ್ತಿ ಇದ್ದು ದೇವತೆಗಳ ಅಡಿಯಾಳಾಗಿ ಬಾಳುವುದು ಶಕ್ಯನಿಲ್ಲ.'' ಇದು ಕಲಿಹೃದಯದಲ್ಲಿ ಪರಮಾತ್ಮನ ವಿಷಯಕವಾಗಿದ್ದ ಕಲ್ಮಷದ ಒಂದು ಕಣ ಮಾತ್ರ.

ಆಗದಿದ್ದವರ ಬಗ್ಗೆ ಅಪಪ್ರಚಾರ ಮಾಡಿ, ಹಗೆತನ ತೀರಿಸಿಕೊಳ್ಳುವ ಕೀಳ್ತರದ ಲಕ್ಷಣಗಳ ಆದರ್ಶನೇ ಕಲಿ..ತಾನೇ ಪರಮಾತ್ಮನೆಂದು ಹೇಳಿಕೊಳ್ಳುವಷ್ಟು ಇಷ್ಟೇ ಅಲ್ಲದೆ, ಪ್ರತಿಮಾನವನೂ ತಾನೇ ಪರಮಾತ್ಮನೆಂದು ಹೇಳಿಕೊಳ್ಳುವಂತೆ ಪ್ರೇರಣೆಮಾಡಿ ಪರಮಾತ್ಮನ ಅಸ್ತಿತ್ವವನ್ನೇ ಅಳಿಸಿಬಿಡುವಂತೆ ಮಾಡುವುದರಲ್ಲಿ ಪಾ ಪ್ರಯತ್ನಶೀಲ. ಭೇದನೀತಿಯಲ್ಲಿ ಪ್ರವೀಣನಾದ ಕಲಿಯು, ತನ್ನದೇ ಆದ ಮಾಯಾಶಕ್ತಿಯ ಪ್ರಭಾವದಿಂದ, ಅಸಾವಧ ಸಿಬ್ಬಂದಿಯ ದುರ್ಗವನ್ನು ಶತ್ರು ಪ್ರವೇಶಿಸುವಂತೆ, ಪರಮಾತ್ಮನ ಮಾಹಾತ್ಮ್ಯ-ಜ್ಞಾನ ವಿಷಯಕ ದೃಢತೆಯಲ್ಲಿ ಕಿಂಚಿತ್ ನ್ಯೂನತೆಯಿದ್ದ ದೇವತೆಗಳ ಮನಸ್ಸಿನಲ್ಲಿ ಕಿಂಚಿತ್ಕಾಲವಾದರೂ ಪ್ರವೇಶಿಸಿ, ಪರಮಾತ್ಮನನ್ನೇ ಪ್ರತಿಭಟಿಸಹಚ್ಚಿ, ಮೋಜು ನೋಡುವ ಮತ್ಸರಿ! ಆದರೆ ಜ್ಞಾನ ಭಕ್ತಿ-ವೈರಾಗ್ಯವ ಅಖಂಡ ಜ್ಯೋತಿ ಸರ್ವತೋ ಮುಖವಾಗಿ ಬೆಳಗುತ್ತಿರುವ ಮರುತ್ತ (ವಾಯು) ದುರ್ಗವನ್ನು ಮಾತ್ರ ಪ್ರವೇಶಿಸಲು ಎಂದಿಗೂ ಕಲಿಗೆ ಸಾಧ್ಯವಾಗಿಲ್ಲ. ಈ ದುರ್ಗಮವಾದ ಕೋಟೆಯೊಂದನ್ನು ಉಧ್ವಸ್ತ ಮಾಡಿಬಿಟ್ಟರೆ, ಪರಮಾತ್ಮನ ಸಾಮ್ರಾಜ್ಯ ತನ್ನದಾಗುವುದೆಂಬ ಮಹತ್ತ್ವಾಕಾಂಕ್ಷೆಯನ್ನು ತಾಳಿದ ಕಲಿಯು, ತನ್ನ ಯುದ್ಧ ಸನ್ನಾಹದ ಕೌಶಲವನ್ನೆಲ್ಲ ಉಪಯೋಗಿಸಿ, ಆ ಕಾಲದ (ಮಹಾಭಾರತ ಕಾಲದ) ಬಲಿಷ್ಠ ರಾಜ್ಯಗಳ ಸಿಂಹಾಸನಗಳಲ್ಲಿ ತನ್ನ ಬಲಸ್ಥೆ ಬಂಟಿರಿಸುವಂತೆ ಒಳಗಿಂದೊಳಗೇ ವ್ಯವಸ್ಥೆ ಮಾಡಿದ.

ಈ ರಾಜರುಗಳ ಪ್ರಭಾವಕ್ಕೊಳಗಾದ ರಾಜ್ಯದ ಧಾರ್ಮಿಕ ಸತ್ತೆಯನ್ನು ಹಸ್ತಗತಮಾಡಿಕೊಂಡು, ಪರಮಾತ್ಮನ ಅಸ್ತಿತ್ವಕ್ಕೆ ಪ್ರಮಾಣಭೂತವಾದ ಶ್ರುತಿ, ಸ್ಮೃತಿ ಹಾಗೂ ಇವುಗಳ ಆಧಾರದ ಮೇಲೆ ರಚಿತವಾದ ಅನೋಘತತ್ತ್ವಗಳನ್ನೊಳಗೊಂಡ ಪಾರಮಾರ್ಥಿಕ ವಿಚಾರಗಳನ್ನೇ ತಲೆ ಕೆಳಗಾಗುವಂತೆ ಮಾಡಿದರೆ, ದೇವತೆಗಳನ್ನು ಕೆಣಕಿದಂತಾಗಿ ಪ್ರತಿಭಟಿಸಬಂದ ದೇವತೆಗಳನ್ನು ಹಣ್ಣುಮಾಡಲು ಸಾಧ್ಯವಾಗುವುದೆಂದು ಕಲಿಯ ಎಣಿಕೆ.

ಕಾಲಮಾಹಾತ್ಮ್ಯದಿಂದ ದ್ವಾಪರಯುಗದ ಅಂತ್ಯಭಾಗದಲ್ಲಿ, ನಾಲ್ಕರಲ್ಲಿ ಎರಡು ಪಾದ ಧರ್ಮ ನಶಿಸಿಹೋಗಿ) ನಿಸಃತ್ವವಾಗಿತ್ತು. ನಿಯಮಿತಕಾಲಕ್ಕೆ ಮೊದಲೇ ಇನ್ನೊಂದು ಪಾದದ ಮೇಲೆ ಕಲಿಯ ಕರಾಳ ಕಬಾಕ್ಷ ಬಿತ್ತು. ಕೃತ,ತ್ರೇತಾ ಹಾಗೂ ದ್ವಾಪರದ..... ದೀರ್ಘಕಾಲದಲ್ಲಿ ಮುಂಬರುವ ತನ್ನ ಸ್ವಾಮಿತ್ವದ ಯುಗಾರಂಭವನ್ನು ಆತುರದಿಂದ ನಿರೀಕ್ಷಿಸುತ್ತ ಕೈಕಟ್ಟಿಕೊಂಡು ಕುಳಿತ ಕಲಿಗೆ, ಸೈರಣೆ ಮೀರಿತು. ಈಗ ಪಾತಾಳಲೋಕದಲ್ಲಿದ್ದ ತನ್ನ ಅನುಯಾಯಿಗಳಿಗೆ ಆಜ್ಞೆಯಾದ ಕೂಡಲೇ ಭೂಲೋಕದಲ್ಲಿ ಅವತರಿಸಬೇಕೆಂದು ಸಂದೇಶ ಕಳಿಸಿ, ದೇವತೆಗಳ ಚಲನವಲನವನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಲಿದ್ದ.

ಅಸುರಾಧಿಪತಿಯ ಈ ಚಟುವಟಿಕೆಯನ್ನು ತಿಳಿದ ದೇವತೆಗಳೂ ಭೂಲೋಕದಲ್ಲಿ ಒಬ್ಬೊಬ್ಬರಾಗಿ ಕಾಣಿಸಿಕೊಳ್ಳಹತ್ತಿದರು.

ಭರತವಂಶದ ಸಾಮ್ರಾಜ್ಯ ಸಿಂಹಾಸನದಲ್ಲಿ ಪ್ರತೀಪರಾಜ ರಾಜ್ಯವಾಳುತ್ತಿದ್ದ. 'ನಾವಿಷ್ಣುಃಪೃಥಿವೀಪತಿಃ' ಎಂಬ ಉಕ್ತಿ ಇದ್ದರೂ ಇಲ್ಲಿಯ ವರೆಗೆ ಸಾಕ್ಷಾತ್ ದೇವಾಂಶರಾರೂ ಸಿಂಹಾಸನಸ್ಥ ರಾಜರಿರಲಿಲ್ಲ. ಆದರೆ ಈಗ ಪ್ರತೀಪರಾಜನಲ್ಲಿ ಹುಟ್ಟಿದ ಮೂವರಲ್ಲಿ ೧) ಬಾಲ್ಹೀಕ—ಪ್ರಲ್ಹಾದರಾಜನ ಅಂಶ ೨) ಶಂತನು-ವರುಣಾಂಶ. ಇವರ ನಿಕಟ ಆಪ್ತಬಂಧು ಆಚಾರ್ಯರೇ ಮೊದಲಾದವರು ದೇವಾಂಶ ಸಂಭೂತರೇ. ಶಂತನುರಾಜನ ಜ್ಯೇಷ್ಠಪುತ್ರ ದೇವವ್ರತ-ಅಷ್ಟ ವಸುಗಳ ಅಂಶ. ಇವನೇ ಸಿಂಹಾಸನದ ಉತ್ತರಾಧಿಕಾರತ್ಯಾಗಮಾಡಿ ಭೀಷ್ಮನೆಂಬ ಹೆಸರಿನಿಂದ**'ಕುರುಕುಲ ಪಿತಾಮಹ'**ನೆಂದು ಪ್ರಖ್ಯಾತನಾದ. ಕುರು-ಪಾಂಡವರಿಗೆ ವಿದ್ಯಾಗುರುಗಳಾದ ಕೃಪಾಚಾರ್ಯರು ವಿಕಾದಶ ರುದ್ರಗಣದಲ್ಲಿ ವಿಷ್ಕಂಭನೆಂಬ ರುದ್ರಾಂಶರು, ಹಾಗೆಯೇ ಅಸ್ತ್ರವಿದ್ಯಾ ಗುರುಗಳಾದ ದ್ರೋಣಾಚಾರ್ಯರು, ದೇವಗುರು ಬೃಹಸ್ಪತ್ಯಾಚಾರ್ಯರ ಅಂಶಸಂಭೂತರು. ಅವರ ಮಕ್ಕಳಾದ ಅಶ್ವತ್ಥಾಮಾಚಾರ್ಯರು, ಸಾಕ್ಷಾತ್ ಕೈಲಾಸಾಧಿಪತಿ ರುದ್ರದೇವರ ಅಂಶದವರು ಪಂಚಪಾಂಡವರ ಪತ್ನಿ ದ್ರೌಪದಿಯ ತಂದೆ ದ್ರುಪದರಾಜ (ಪಾಂಚಾಲದೇಶದ ರಾಜ) ಹೂ ಹೂ ನಾಮಕ ಗಂಧರ್ವ. ಮತ್ಸ್ಯದೇಶದ ವಿರಾಟ ಹಾ ಹಾ ನಾಮಕ ಗಂಧರ್ವಾಂಶ. ಪಾಂಡವರ ತಾಯಿಯಾದ ಕುಂತೀದೇವಿಯ ಸಾಕುತಂದೆ, ಕೂರ್ಮನಾಮಕ ಮರುವಂಶ. ಮದ್ರದೇಶಾಧಿಪತಿಯಾದ ಶಲ್ಯರಾಜ, ಪ್ರಲ್ಹಾದರಾಜನ ತಮ್ಮ ಸಲ್ಹಾದ.

ಶಂತನುಪುತ್ರ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಜನಿಸಿದ ಧೃತರಾಷ್ಟ್ರ, ವ.ರುದಂಶಯುಕ್ತ ಗಂಧರ್ವ. ಪಾಂಡುರಾಜ ಮರುವಂಶ ಪರಾವಹ. ವಿದುರ ಯಮಧರ್ಮ.

ಈ ರೀತಿಯಾಗಿ ಅವರವರ ಜನ್ಮವೃತ್ತಾಂತವರ್ಣನೆಯಲ್ಲಿ ಆ-ಆ ದೇವತಾಂಶರೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ಅಂಶಾವತರಣ, ಭಾವೀ ಭೂಭಾರ ಹರಣದ ಪೂರ್ವಯೋಜನೆ.

ಪ್ರತಿಕಕ್ಷಿಗಳಾದ ಮಹಾ-ಮಹಾ ಅಸುರರೂ ಭೂಮಿಗಿಳಿದು ಬಂದು ಮಹತ್ತ್ವದ ಸ್ಥಾನಗಳನ್ನಾಕ್ರಮಿಸಿದ ರೀತಿ ವಿಲಕ್ಷಣವೂ ವಿಸ್ಮಯಕಾರಕವೂ ಆಗಿದೆ.

ಮಗಧದೇಶದ ಸಿಂಹಾಸನವನ್ನಲಂಕರಿಸಿದ್ದ ರಾಜ, ರಾಜಾ ಬೃಹದ್ರಥ. ಪರಮ ಧಾರ್ಮಿಕ, ಪ್ರಜಾವತ್ಸಲ. ಆದರೆ ಮುಪ್ಪು ಸಮೀಪಿಸುತ್ತ ಬಂದರೂ ಮಕ್ಕಳ ಚಿಂತೆ ಮಾತ್ರ ಇನ್ನೂ ದೂರವಾಗಿರಲಿಲ್ಲ. ದೈವಯೋಗದಿಂದ ಚಂಡಕೌಶಿಕನೆಂಬ ಮುನಿಯ ಆಗಮನ ವಾಯಿತು ರಾಜನಲ್ಲಿಗೆ. ಶ್ರದ್ಧಾ-ಭಕ್ತಿಯಿಂದ ರಾಜದಂಪತಿಗಳು

ಮಾಡಿದ ಸೇವೆಗೆ ಸುಪ್ರೀತರಾದ ಮುನಿಗಳು, ಅಭಿಮಂತ್ರಿಸಿದ ಫಲ ಹೊಂದನ್ನು ರಾಜನಿಗೆ ಕೊಟ್ಟು, 'ಅದರ ಸೇವನೆಯಿಂದ ಒಬ್ಬ ಪ್ರಚಂಡ ಪ್ರತಾಪಶಾಲಿ ಪುತ್ರನನ್ನು ಪಡೆಯುವೆ' ಎಂದು ಆಶೀರ್ವದಿಸಿದರು. ಬೃಹದ್ರಥರಾಜನಿಗೆ ಬಹು ಸಂತೋಷವಾಯಿತು. ವಿಚಾರಾಂತ್ಯದಲ್ಲಿ ನಿಗಿಲೂ ಆಯಿತು. ರಾಜನಿಗೆ ಇಬ್ಬರು ರಾಣಿಯರು, ಏಕನಿಷ್ಠೆಯಿಂದ ಇಬ್ಬರೂ ಸೇವೆ ಮಾಡಿದರು. ಮುನಿಗಳ ಪ್ರಸಾದ ಒಂದೇ ಫಲ. ರಾಜನಿಗಾದರೋ ಉಭಯರಾಣಿಯರಲ್ಲಿ ಅಷ್ಟೇ ಪ್ರೇಮ. ಭೇದ-ಭಾವವಿರಲಿಲ್ಲ. ಪಕ್ಷಪಾತ ಮಾಡಲಾರದ ಅರಸು ಮುನಿಗಳಿತ್ತ ಪ್ರಸಾದದ ಫಲವನ್ನು ಸರಿಯಾಗಿ ಎರಡು ಹೋಳುಮಾಡಿ, ಇಬ್ಬರಿಗೂ ಕೊಟ್ಟು ತೃಪ್ತಿಯಾಗುವಂತೆ ಮಾಡಿದ. ಇಬ್ಬರೂ ಗರ್ಭಿಣಿಯರಾದರು. ರಾಜ-ರಾಣಿಯರ ಸಂತೋಷಕ್ಕೆ ಪಾರವಿಲ್ಲ. ದಿನತುಂಬಿ ಏಕಕಾಲಕ್ಕೆ ಜನನವೂ ಆಯಿತು.

ಆದರೆ ಇಬ್ಬರ ಬಸುರಿನಿಂದ ಬಂದದ್ದು ಒಂದೊಂದು ಕೂಸಲ್ಲ-ಒಂದೇ ಕೂಸಿನ ದೇಹವ ಸರಿಯಾದ ಎರಡು ಬೇರೆ ಬೇರೆ ತುಣುಕುಗಳು—ಒಂದರಲ್ಲಿ ಬಲಭಾಗದ ಅವಯವ; ಇನ್ನೊಂದರಲ್ಲಿ ಎಡಭಾಗದ ಅವಯವಗಳು. ಹೆತ್ತ ತಿಂಗಳು ಹೊತ್ತ ಬಸುರಿನಿಂದ ಬಂದ ಮುತ್ತಿನಂತಹ ಮುದ್ದು ಕೂಸಿನ ಮುಖವನ್ನು ನೋಡುವುದರ ಬದಲು, ವಿಚಿತ್ರ ನಿದ್ರೂಪ ದೇಹದ ಎರಡು ತುಣುಕುಗಳನ್ನು ಹೊರಗೆಸೆದು ಬಿಡಲು ಹೇಳಿದರು.

ಮಧ್ಯರಾತ್ರಿಯ ಸಮಯ. ದಾಸಿ ಎಸೆದ ತುಣುಕುಗಳು, ಇದರ ನಿರೀಕ್ಷಣೆಯಲ್ಲಿಯೇ ಕುಳಿತ ಜರಾರಾಕ್ಷಸಿಯ ಕೈಯಲ್ಲಿ ಬಿದ್ದುವು. ಅವಳ ಹಸ್ತಸ್ಪರ್ಶಮಾತ್ರದಿಂದ ಒಂದಕ್ಕೊಂದು ಸರಿಯಾಗಿ ಹೊಂದಿಕೊಂಡು ಅಂದವಾದ ಒಂದು ಕೂಸಾಯಿತು. ಆಗಲೇ ಅಸುರ ವಿಪ್ರಚಿತ್ತಿ ಅದರಲ್ಲಿ ಸೇರಿಕೊಂಡದ್ದರಿಂದ ಜೀವನ ತುಂಬಿ, ಜೀವ್ಯರಿಸಿ ಅಳಲೂ ಹತ್ತಿತು. ಕೇಳಿದವರಿಗೆ ಆಶ್ಚರ್ಯವಾಯಿತು. ಓಡಿಹೋಗಿ ರಾಣಿಯವರಿಗೆ ತಿಳಿಸಿದರು. ಅನಂದದ ಭರದಲ್ಲಿ ಅರಮನೆಯೇ ಅಲ್ಲಿ ನೆರೆಯಿತು. ಜರಾರಾಕ್ಷಸಿಗೆ ಸತ್ಕಾರವೂ ಆಯಿತು. ಅವಳ ಉಪಕಾರಸ್ಮರಣೆಗಾಗಿ ಈಕೂಸಿಗೆ ಆಗಲೇ ಜರಾಸಂಧನೆಂದು ನಾಮಕರಣ ಮಾಡಿದ್ದಾಯಿತು. ಇದು ಜರಾಸಂಧನ ಜನ್ಮ ವೃತ್ತಾಂತ ಅಸುರಾಗ್ರೇಸರ ವಿಪ್ರಚಿತ್ತಿ ಜರಾಸಂಧ ರೂಪದಿಂದ ಮಗಧರಾಜ್ಯದ ಒಡೆಯನಾದ.

ಚತುರ್ಮುಖ ಬ್ರಹ್ಮನಸ್ಸೇ ನುಂಗಲು ಹವಣಿಸಿ, ಮಹಾವಿಷ್ಣುವಿನಿಂದ ಹತರಾದ ಮಧು-ಕೈಟಭರೆಂಬ ದೈತ್ಯರ ಜೋಡಿಯು, ಈಗ ಹಂಸ-ಡಿಭಿಕರಾಗಿ ಹುಟ್ಟಿ, ಜರಾಸಂಧನ ಪ್ರಖ್ಯಾತ ಸಾಮಂತ ಸೇನಾಪತಿಗಳಾದರು.

ವಿಪ್ರಚಿತ್ತಿಗಿಂತಲೂ, ಪ್ರಬಲ ದೈತ್ಯ ಕಾಲನೇಮಿ. ಇವನು ಮಧುರಾಪುರಿಯ ಉಗ್ರಸೇನನ ಸಿಂಹಾಸನಕ್ಕೆ ಬಾಧ್ಯನಾದ ಮಾರ್ಗ, ಅತೀವಹೇಯ ದ್ರುಮಿಲನೆಂಬ ಗಂಧರ್ವನ ದುರ್ವ್ಯಾಪಾರದ ಮೂರ್ಖಭಕ್ತಿ ಪಡೆದು, ಈ ದೈತ್ಯ ಧರಣಿಗಿಳಿದು ಬಂದ.

ಅಕಸ್ಮಾತ್ ಒಮ್ಮಿಂದೊಮ್ಮೆ, ಗಂಧರ್ವ ದ್ರುಮಿಲನ ಕಣ್ಣಿಗೆ ಉಗ್ರಸೇನನ ರಾಣಿ ಕಾಣಿಸಿಕೊಂಡಳು. ಕಾಮುಕನಾದ ದ್ರುಮಿಲ, ತನ್ನ ಸಹಜ ಗಂಧರ್ವ ಮಾಯಾವಿದ್ಯಾಬಲದಿಂದ, ಉಗ್ರಸೇನನಂತೆ ರೂಪತಾಳಿ ಕಾಮದ ಹಸಿವನ್ನು ತೃಪ್ತಿಪಡಿಸಿಕೊಳ್ಳುತ್ತಿರುವಾಗ, ಅವನ ದ್ವಾರಾ ರಾಣಿಯ ಗರ್ಭಸೇರಿದ ಕಾಲನೇಮಿ ಈ ಅನೈತಿಕ ಸಂಬಂಧದಿಂದ ಹುಟ್ಟಿದ ಕೂಸೇ ಕಂಸನೆಂಬ ಹೆಸರಿನಿಂದ ಪ್ರಬಲನಾಗಿ, ಭೋಜರಾಜ್ಯ ಸಿಂಹಾಸನವನ್ನೇರಿದ; ಜರಾಸಂಧನ ಅಳಿಯನೂ ಆದ. ಕ್ರೌರ್ಯದಲ್ಲಿ ಅವನಿಗಿಂತಲೂ ಮಿಗಿಲು ಎನಿಸಿಕೊಂಡ.

ಚೇದಿ-ಕರೂಶಾಧಿಪರಾದ ಶಿಶುಪಾಲ-ದಂತವಕ್ರರು, ಪೂರ್ವಜನ್ಮದಲ್ಲಿ ರಾವಣ-ಕುಂಭಕರ್ಣರೆಂಬ ದೈತ್ಯರೆಂದು ಪ್ರಸಿದ್ಧವೇ ಇದೆ.

ಸೌಭವೆಂಬ ಹೆಸರಿನ ಅಜೇಯ ವಿಮಾನವನ್ನು ಪಡೆದ ಸಾಲ್ವ, ಕರ್ಮದೇವತೆಯಾದ ಬಲಿಯನ್ನಾವರಿಸಿದ ಬಬ್ರುಹ್ಯ ದೈತ್ಯ ಬಲಿಯೇ.

ಈ ರೀತಿಯಾಗಿ ಒಂದೇ ಪಕ್ಕದ ಹಕ್ಕಿಗಳು ಒಂದೆಡೆ ಕೂಡಿದುವು. ಭರತಖಂಡದ ಬಲಾಢ್ಯ ರಾಜ್ಯಸಿಂಹಾಸನಗಳಲ್ಲಿ ರಾಜರಾಗಿ, ಅಸುರಾಧಿಪತಿಯ ಅದೇಶದಂತೆ ಕೂಡಿದ ಇವರು, ಪ್ರಚಲಿತ ರಾಜಕೀಯ ಪರಿಭಾಷೆಯಲ್ಲಿ ಹೇಳುವಂತೆ ದೇವತೆಗಳ ವಿರುದ್ಧ ಶೀತಲ ಯುದ್ಧವನ್ನೆ ಸಾರಿದರೆಂದು ಹೇಳಬಹುದು. ಎಂದರೆ ದೇವತೆಗಳಿಗೆ ಅಪ್ಯಾಯಮಾನವಾದ ಧರ್ಮವೃಕ್ಷದ ಮೂಲ ಬೇರನ್ನೇ ಸಡಿಲಿಸಹತ್ತಿದರು.

ಸರ್ವ ಧರ್ಮಗಳಿಗೂ ಆಧಾರವಾದ ರಾಜಧರ್ಮವನ್ನು ಉಲ್ಲಂಘಿಸಿ ಸರ್ವವಿಧದಿಂದಲೂ ಲೋಕಕಂಟಕರಾದ ಈ ಧರ್ಮದ್ರೋಹಿಗಳನ್ನು ದಂಡಿಸಿ ಧರ್ಮ ಸಂಸ್ಥಾಪನಾ ಕಾರ್ಯದಲ್ಲಿ—ಸಮರ್ಥರಾದ ದೇವತೆಗಳೈವರಿಗೆ—ಯಮಧರ್ಮ, ವಾಯು, ಇಂದ್ರ, ಅಶ್ವಿನೀ ಕುಮಾರರಿಗೆ—ಸಮ್ರಾಟ ಶಂತನುರಾಜನ ವಂಶದಲ್ಲಿ ಅವತರಿಸಲು ಆಜ್ಞಾಪಿಸಿ, ತಾನು ಚತುರ್ಮುಖ ಬ್ರಹ್ಮನ ಅಪೇಕ್ಷೆಯಂತೆ ಯಾದವ ವಂಶಜ ವಸುದೇವ ದೇವಕಿಯರಲ್ಲಿ ಅವತರಿಸುವುದಾಗಿ ಅಪ್ಪಣೆಯಿತ್ತ ಪರಮಾತ್ಮ. ನಿಜ ಭಕ್ತರ ಉದ್ಧಾರಕ್ಕಾಗಿ ಅನಂತರೂಪದಿಂದ ಅವತಾರ ತಾಳುವ ಭಗವಂತನ ಕ್ರೀಡಾವಿಶೇಷವನ್ನು ತಿಳಿದವರಾರು ? ಈ ಹಿಂದೆ ಅಯೋಧ್ಯೆಯ ರಾಜಪುತ್ರನಾಗಿ ಅವತರಿಸಿದ್ದರೂ, ಅವನಿಯ ಭಾರವಸ್ಸಿಳುಹಲು ವನ ವನ ತಿರುಗಿದ ಹದಿನಾಲ್ಕು ವರುಷ !! ಪ್ರಕೃತದಲ್ಲಿ ರಾಜರ ವಂಶದಲ್ಲಿ ಜನಿಸದೇ, ಸಾಮಾನ್ಯ ಗೋಜೀವೀ ಕ್ಷತ್ರಿಯ ವಂಶದಲ್ಲಿ ಜನಿಸಿದರೂ, ರಾಜಕೀಯ ಚದುರಂಗದಾಟವಾಡುತ್ತ ರಾಜಕಾರಣ ಧುರಂಧರನೆನಿಸಿ, ಭೂಭಾರಹರಣಾವತಾರಯುಕ್ತದಲ್ಲಿ ಯಜಮಾನನಾಗಿ, ಧರ್ಮದ್ರೋಹೀ ದುರಾತ್ಮರನ್ನು ದಂಡಿಸಿ ಧರ್ಮಸಂಸ್ಥಾಪನೆಯ ಮಹತ್ಕಾರ್ಯದಿಂದ ಸಾಧು-ಸಜ್ಜನರ ಸಂರಕ್ಷಣೆಯ ಸಂಕಲ್ಪ ಏಟ್ಟುಕೊಂಡಿದ್ದ ಪರಮಾತ್ಮ.

ಇದು ಜಯನಾಮಕ ಇತಿಹಾಸದ ಹಿನ್ನೆಲೆ.

ನಿನ್ನ ಧ್ಯಾನವೆಯೆನ್ನ ಬಾಳಗಾನ !

ಶ್ರೀ. ಮಾಧವ, ಬಾಯಾರು (ದ. ಕ.)

ಕನ್ನಾಡವುದಯವದು ಸಂಭ್ರಮಮೊಳಾಗಿರಲು
ಎನ್ನ ಕಂಗಳಿಗಾಗಲಿಲ್ಲ ಬೆಳಗು !
ಎನ್ನಣ್ಣ ತಮ್ಮದಿರು ಜಮ್ಮನಿಗೆ ಸಂತಸದಿ
ಪಣಿಬಸುಡಿಸಲು ಎನ್ನ ಕನಸು ನುಗ್ಗು ! ॥೧॥

ತಾಯೆ, ನಿನ್ನಯ ಬಸಿರಿನಿಂದ ಹೊರಬಂದುದಕೆ
ಕಾಯವಿದು ನಿನಗೆಂದು ಬಗೆದಿದ್ದಿಹೆ !
ಆಯತ್ತವಾಗಿ ಸಾವನಕ ನಿನ್ನಯ ಸೇವೆ-
ಗೈತರಲು ನಾನೆಂದೆ ಮುಂಬರಿದಿಹೆ ! ॥೨॥

ಎನ್ನ ಹುಟ್ಟದು ಕನ್ನಡದ ಕೆಂಪುನುನ್ನೆನಲಿ
ಎನ್ನ ದೇಹವು ಬೆಳಕ ಬೀರಿದುದು ಇಲ್ಲೇ—
ಎನ್ನ ದೇಹವದಿದುವೆ ಎನಗಿದಷ್ಟೈಶ್ವರ್ಯ
ಎನ್ನ ಗೇಯವು ಕನ್ನಡಮ್ಮನಲ್ಲೇ ! ॥೩॥

ಆಸೆಯಿಂದೆನ್ನ ಮನ ಜಾತಕದ ತೆರ ತಾನು
ಹೊಸರಾಜ್ಯದುದಯನನೆ ನೋಡುತಿತ್ತು ;
ಬಿಸಜವದು ಸಲಿಲಮುಘ್ನದಿ ರಾಜಿಸುತೆ ರಾ-
ಜಿಸುವೆ ನೀನೆಂದು ಹಂಬಲಿಸುತಿತ್ತು ॥೪॥

ಅರೆ! ಇದೇನಾಯ್ತು ? ಆಗುವುದಾಯ್ತು ಬಿದಿಯಂತೆ !
ಹೊರಟು ಹೊರಹೋದೆ ನೀನೆನ್ನ ಬಿಟ್ಟು !
ಮರೆಯಲೊಲ್ಲೆನು ನಿನ್ನ-ಉಸಿರಿರುವ ತನಕವೂ
ಮರೆಯಾಗೆ ಮನ್ಮನದಿ-ಪ್ರೇಗೆ ನತ್ತು ! ॥೫॥

ಮಾರಿಗೌತಣವಿತ್ತು ಕಷ್ಟಪಂ ಪರಿಹರಿಸಿ
ಕುರಿಯೊಂದ ಬಲಿಯಾಯೆ ಸಂತಸವಲಿ
ಊರಜನರೆಲ್ಲ ಕಿಕ್ಕಿರಿದು ನೋಡುತಲಿರಲು
ಮರಿಕುರಿಯ ಸಂತಾಪವೇನೆನ್ನಲಿ ! ॥೬॥

ಬಿಂದುಸಾರನು ಅಚಿಯನೆತ್ತಿ ಮರಿಯನ್ನಿರಿಯ-
ಲೆಂದು ಹೊರಡಲು ಅವನ ತಡೆಯಲಿಂದು,
ಬಂದಿಲ್ಲ ಬುದ್ಧ-ಬರಲೆಲ್ಲಿಹನು ? ಅವತಾರ-
ವಂದೆ ಕೊನೆಗೊಳಿಸಿಹನು-ಏನು ಮುಂದು ? ॥೭॥

ಕನ್ನಡಮ್ಮನೆ ಜನುಮ-ಜನುಮಕೂ, ಎಂದಿಗೂ
ನಿನ್ನುದರನೇ ಎನಗದಿರಲಿ ತಾನ !
ಕನ್ನಾಡ ನುಡಿನೆಲ್ಲಿ. ನೀನದೆಲ್ಲಿದ್ದರೂ,
ನಿನ್ನ ಜಾನವೆಯೆನ್ನ ಬಾಳಗಾನ ! ॥೮॥

ಸಂಜೆಯಾಗಿತ್ತು

ಶ್ರೀ. ಈಶ್ವರ ಪೆರಡಾಲ, ಹೊಸದಿಲ್ಲಿ.

೧

ಗುಡ್ಡವಂಚಿನ ತೊರೆಯು ಮೆಲುಮೆಲನೆ ಹರಿದಿತ್ತು
ಸದ್ದುಮಂದಿರದಿಂದೆ ಬಲು ದೂರ ತೇಲಿತ್ತು
ಗದ್ದೆಯಾ ಜೆಲುನೆಲ್ಲು ಬೆಳೆದುಂಬಿ ಬಾಗಿತ್ತು
ಉದ್ದುದ್ದ ಬೆಳೆದ ಮರಸಾಲು ತಲೆದೂಗಿತ್ತು-
ಆಗ ಸಂಜೆಯಾಗಿತ್ತು !

೨

ಪಡುವಣದ ಬಾಂದಳದಿ ಹೊಂಬಣ್ಣ ತುಂಬಿತ್ತು
ಬಿಡಿಯಾಗಿ ಮೋಡಗಳು ಅಂಚಿನಲಿ ಹೊಂಚಿತ್ತು
ತಡೆಯಿಲ್ಲದಂತೆ ತಂಗಾಳಿ ಬೀಸುತಲಿತ್ತು
ನುಡಿಗೆ ಬಾರದ ಭಾವವೆನ್ನ ಮನಪಡೆದಿತ್ತು-
ಆಗ ಸಂಜೆಯಾಗಿತ್ತು !

೩

ಹೊತ್ತು ಇಳಿಯುತಲಿತ್ತು, ಕತ್ತಲೇರುತಲಿತ್ತು
ಗೊತ್ತು-ಗುರಿಯಿಲ್ಲದಲೆ ಮನವೆನ್ನದಲೆದಿತ್ತು
ಎತ್ತಲೂ ನೀರವತೆ ಮೈಜಾಚಿದಂತಿತ್ತು
ಚಿತ್ತರಿಸಲರಿಯದಾ ಮತ್ತು ಕವಿದಂತಿತ್ತು-
ಆಗ ಸಂಜೆಯಾಗಿತ್ತು !

೪

ಬಯಲಿಂದ ಬಾಸನಕ ತಿಳಿಮಂಜು ತೂಗಿತ್ತು
ತಿರೆಯಿಂದ ಸುರಲೋಕದೆಡೆ ದಾರಿ ತೆರೆದಿತ್ತು—
ಅಳಲೆಂದಲೆನ್ನೆದೆಯು ಬಿರಿದೊಡೆಯುವಂತಿತ್ತು
ಒಡಲಿಂದ ನೈರಾಶ್ಯದುಸಿರು ಬಸಿಯುತಲಿತ್ತು-
ಆಗ ಸಂಜೆಯಾಗಿತ್ತು !

೫

ಜೀವನದ ದಾರಿಯೆನ್ನದೆ ಕೊನೆಯು ಸಾರಿತ್ತು
ಜೀವನವು ಬರುತಲೇ ಮುಪ್ಪು ಬಳಿಸೇರಿತ್ತು
ಹೃದಯವಾಗಸದಲ್ಲಿ ಚಿಲುಗನಸಿನಾ ಹೊತ್ತು
ಉದಯಿಸುತೆ ಮರುಚಣದ ಅಸ್ತಮಿಸಲೆಳಸಿತ್ತು
ಆಗ ಸಂಜೆಯಾಗಿತ್ತು !

★ ಮಾತೃಪ್ರೇಮ ★

(ಸಣ್ಣ ಕಥೆ)

ಶ್ರೀಮತಿ ವೈದೇಹಿ ರಾವ್ ಮತ್ತೂರು, ಶಿವಮೊಗ್ಗ

ಹೆಣ್ಣಿನ ಹೃದಯ ಲೋಕವಿಲಕ್ಷಣವಾದುದು. ಹೆಣ್ಣು ಎಂತಹ ತ್ಯಾಗಕ್ಕೂ ಸಿದ್ಧವಾಗುವುದು. ಒಂದೆಡೆ ನಿವೇದಿಸಿದ ಪ್ರೀತಿ-ಪ್ರೇಮಗಳಿಗಾಗಿ ರೀಟಾ ಕೈಹಿಡಿದ ಪತಿಯನ್ನೂ, ಹೊಟ್ಟೆಯ ಕರುಳಾದ ಮೇರಿಯನ್ನೂ ಬಿಟ್ಟು ಹೊರಟುದು ಏತಕ್ಕಾಗಿ ?

ಇಂದು ಆರ್ನೆಸ್ಟನ ಮೂರನೆಯ ವರ್ಷದ ಹುಟ್ಟಿದ ಹಬ್ಬ. ರೀಟಾಳ ಮನೆಯು ಅತಿಥಿಗಳಿಂದ ತುಂಬಿಹೋಗಿತ್ತು. ಬಂದವರು ಆರ್ನೆಸ್ಟಗೆ ಉಡುಗೊರೆ ಕೊಡುವುದಿರಲಿ; ರೀಟಾ ಎಲ್ಲಾ ಮಕ್ಕಳಿಗೂ ಹಣ್ಣಿನ ಜೊತೆಗೆ ಚಿತ್ರವಿಚಿತ್ರವಾದ ಆಟಿಗೆಗಳನ್ನು ಕೊಡುತ್ತಿದ್ದಳು. ಅವಳಿಗೆ ಕೊಟ್ಟಷ್ಟೂ ತಣಿಯದು ಮನಸ್ಸು. ಆರ್ನೆಸ್ಟನಂತೂ ಅತೀ ಸುಂದರವಾಗಿ ಕಾಣಿಸುತ್ತಿದ್ದ. ಅವನ ಉಡಿಗೆ-ತೊಡಿಗೆಗಳಿಗೆ, ಗುಂಗುರು ಕೂದಲಿನ ಮುಖದಿಂದ ಕಾಂತಿಯು ಇಳಿದಿದೆಯೋ ಎನ್ನುವಂತೆ ತೋರುತ್ತಿತ್ತು. ಎಲ್ಲರೂ ಹೋದಮೇಲೆ, ರೀಟಾ ಮಗನನ್ನೆತ್ತಿಕೊಂಡು ಮುದ್ದಿಟ್ಟು ಕೇಳಿದಳು: " ಆಯಾಸವಾಯಿತೇ ಮಗು?"

ತಾಯಿಯ ಹೆಗಲಿನ ಮೇಲೆ ಮುಖವನ್ನಿಟ್ಟು ಆರ್ನೆಸ್ಟ ಹೇಳಿದ: "ಇಲ್ಲ; ಅಪ್ಪ ಯಾವಾಗ ಬರುವರು ಅಮ್ಮ?"

" ಈಗ ಬರುವರು ಮಗು; ಅಷ್ಟು ಹೊತ್ತಿಗೆ ನೀನು ಊಟ ಮಾಡಿಬಿಡು ಆರ್ನೆಸ್ಟ. ಇಲ್ಲದಿದ್ದರೆ ನಿದ್ದೆಗಣ್ಣಾದ ಮೇಲೆ ನೀನು ಸರಿಯಾಗಿ ಊಟಮಾಡುವುದಿಲ್ಲ!"

" ಉಹುಂ, ನಾನು ಅಪ್ಪನ ಜೊತೆಯಲ್ಲಿ ಊಟಮಾಡುತ್ತೇನೆ. ಅಪ್ಪನಿಗೆ ತೋರಿಸದೇ ನಾನು ನನ್ನ ಬಟ್ಟೆಯನ್ನು ಬಿಚ್ಚುವುದಿಲ್ಲ."

ಹೆನ್ರಿ ಬರುವ ಹೊತ್ತಿಗೆ ಆರ್ನೆಸ್ಟ, ತಾಯಿಯ ತೊಡೆಯ ಮೇಲೆ ಮಲಗಿಕೊಂಡು, ಅವಳು ಹೇಳುತ್ತಿದ್ದ ಒಂದು ಪುಟ್ಟ ಕಥೆಯನ್ನು ಕೇಳುವುದರಲ್ಲಿ ತಲ್ಲೀನನಾಗಿದ್ದ. ತಂದೆಯು ಬಂದಕೂಡಲೆ, ತಂದೆಯ ಬಳಿಗೆ ಓಡಿಹೋದ.

ಮಗನನ್ನು ಎತ್ತಿಕೊಂಡು ಹೆನ್ರಿ ಹೆಂಡತಿಗೆ ಹೇಳಿದ: "ಇಂದೆಷ್ಟು ಚೆನ್ನಾಗಿ ಕಾಣಿಸುತ್ತಾನೆ ನನ್ನ ಆರ್ನೆಸ್ಟ. ನಿಜವಾಗಿಯೂ ಈ ಬಟ್ಟೆಯು ಮಗುವಿಗೆ ಬಹಳ ಒಪ್ಪುತ್ತದೆ."

ರೀಟಾ ಹೆಮ್ಮೆ – ಅಭಿಮಾನಗಳಿಂದ ಮಗನನ್ನು ನೋಡುತ್ತಿದ್ದವಳು ಗಂಡನಿಗೆ ಹೇಳಿದಳು: " ಬೇಗ ಊಟಕ್ಕೆ ಏಳಿ; ಮಗುವಿಗೆ ನಿದ್ದೆ ಬಂದುಬಿಡುತ್ತದೆ. "

ಊಟ ಮಾಡುವಾಗ, ಅಂದು ಯಾರ್ಯಾರು ಬಂದಿದ್ದರು-ಎನ್ನುವುದನ್ನು ರೀಟಾ ಹೆನ್ರಿಗೆ ಹೇಳುತ್ತಿದ್ದಳು. ಆರ್ನೆಸ್ಟನನ್ನು ಎಲ್ಲರೂ ಹೀಗೆ ಹೊಗಳಿದರು, ಕೆಲವರು ಹೀಗೆ ಅಸೂಯೆಯಿಂದ ನೋಡಿದರು, ಎನ್ನುವುದನ್ನೂ ಹೇಳಲು ಮರೆಯಲಿಲ್ಲ. ಹೆಂಡತಿಯು ಮಾತನ್ನು ಕೇಳುತ್ತಿದ್ದ ಹೆನ್ರಿಗೆ ಊಟವೇ ರುಚಿಸದಾಯಿತು. ಯಾವುದಕ್ಕೂ ಒಂದು ಮಿತಿಯಿರಬೇಕು. ಮಗನ ವಿಷಯವನ್ನು ಹೇಳಲು ತೊಡಗಿದಳೆಂದರೆ ರೀಟಾಗೆ ಇನ್ನ್ಯಾವುದರ ಪರಿವೆಯೂ ಇರುತ್ತಿರಲಿಲ್ಲ. ಮೊದಲು, ತನ್ನ ಊಟದ ವಿಷಯದಲ್ಲಿ ಜಾಗರೂಕತೆಯಿಂದ ಇರುತ್ತಿದ್ದ ರೀಟಾ, ಮಗನ ಗುಣಗಾನದಲ್ಲಿ ಈಗೀಗ ತನ್ನನ್ನು ಪೂರ್ತಿಯಾಗಿ ಮರೆತಿದ್ದಾಳೆಂದೇ ಹೆನ್ರಿ ಭಾವಿಸಿದ. ಯಾವುದೋ ಒಂದು ಅವ್ಯಕ್ತವಾದ ಅಸೂಯೆಯ ಛಾಯೆ ಅವನ ಮನದಲ್ಲಿ ಸುಳಿಯಿತು.

೨

ರೀಟಾ ಆರ್ನೆಸ್ಟನನ್ನು ಕರೆತಂದು ಆರು ತಿಂಗಳಾಗಿತ್ತು ಅಷ್ಟೆ! ಅವಳು ಮಗನನ್ನು ಎತ್ತಿಕೊಂಡು ಹೊರಟರೆ, ಯಾರಿಗೆ ತಾನೇ ಅವನು ಅವಳ ಹೊಟ್ಟೆಯಲ್ಲಿ ಹುಟ್ಟಿಲ್ಲವೆಂದು ಹೇಳಲಾಗುತ್ತಿತ್ತು ? ಎಷ್ಟು ಜನ ತಾಯಿಯರು ಇವಳ ಹಾಗೆ ತಾಯ್ತನವ ಹೆಮ್ಮೆಪಡುತ್ತಿದ್ದರು? ಮಗುವಿಗೆ ತಾನು 'ಅಮ್ಮ' ಅಲ್ಲವೆಂದು ತಿಳಿಯದೇ ಇರುವಷ್ಟು ಮಗು ಚಿಕ್ಕದಾಗಿರಬೇಕೆಂದು ಇವಳ ಇಷ್ಟವಾಗಿತ್ತು. ಆರ್ನೆಸ್ಟನಿಗೆ ಬಂಧುಗಳಾರೂ ಇರಲಿಲ್ಲ. ಇಂತಹ ಚಿಕ್ಕ, ಸುಂದರವಾದ, ಬಂಧುಗಳಾರೂ ಇರದ ಮಗುವನ್ನು ಹುಡುಕಲು ಅವಳು ಬಹಳ ಕಷ್ಟಪಟ್ಟಿದ್ದಳು. ಇದಕ್ಕಾಗಿ ಅನಾಥಾಲಯಕ್ಕೆ ಸಾವಿರ ರೂಪಾಯಿಗಳ ತನಕ ಕೊಟ್ಟುದಲ್ಲದೆ, ತಾನು ಸಾಯುವತನಕ ತಾಯಿಯಾಗಿಯೇ ಸಾಕುತ್ತೇನೆಂದು ಬರೆದುಕೊಟ್ಟಿದ್ದಳು.

ರೀಟಾಳಿಗೆ ಮದುವೆಯಾಗಿ ಆರುವರ್ಷಗಳ ಮೇಲಾಗಿತ್ತು. ಅನೇಕ ರೀತಿಯ ಔಷಧಿ-ಪಥ್ಯಗಳಾದ ಮೇಲೆ, ಅವಳು ತನಗೆ ಮುಕ್ತಗುವ ಅವ್ಯಶ್ಯವಿಲ್ಲವೆಂದು ಮಾಡಿಕೊಂಡಿದ್ದಳು. ಅದೊಂದು ಕೊರತೆಯ ಏನಾ, ಅವಳಿಗೆ ಮತ್ತೆ ಯಾವ ಕಷ್ಟವೂ ಇರಲಿಲ್ಲ. ಹೆನ್ರಿ ಹೆಂಡತಿಯನ್ನು ಬಹಳ ಪ್ರೀತಿಸುತ್ತಿದ್ದ. ಅವಳು ಬೇಸರ ಕಳೆಯಲು ಮನೆಗೆ ಹತ್ತಿರವಲ್ಲಿಯೇ ಒಂದು ಟೈಪಿಸ್ಟ ಕೆಲಸಕ್ಕೆ ಸೇರಿದ್ದಳು. ಈಗ ಒಂದು ವರ್ಷದ ಕೆಳಗೆ ಹೆನ್ರಿ ಇವಳ ಕಷ್ಟವನ್ನು ನೋಡಲಾರದೆ ಒಂದು ನಾಯಿಮರಿಯನ್ನು ತಂದಿದ್ದ. ಅದೂ ಬೇಸರವಾಗಿ, ರೀಟಾ ತನ್ನ ತೌರುಮನೆಗೆ ಹೋದಾಗ, ಅಲ್ಲಿಯ ಅನಾಥಾಲಯದಿಂದ ಆರ್ನೆಸ್ಟನನ್ನು ಕರೆತಂದಿದ್ದಳು.

ಆರ್ನೆಸ್ಟನ ಹುಟ್ಟಿದ ಹಬ್ಬದ ಸಂತೋಷದ ಗುಂಗಿನಲ್ಲಿಯೇ ಇದ್ದ ರೀಟಾಗೆ, ಎರಡು ದಿನಗಳನಂತರ ಇದ್ದಕ್ಕಿದ್ದಂತೆ ಒಂದು ಅನಿಷ್ಟಿತ ಸಂಶಯವು ತಲೆದೋರಿ ಗಾಬರಿಯಾಯಿತು. ಅದು ನಿಜವಾಗದೇ

ಇರಲಿ-ಎಂದು ಅವಳು ಮನಸಾರೆ ಬಯಸಿದಳು. ಆದರೆ ಅವಳು ಡಾಕ್ಟರಿಗೆ ತೋರಿಸಿದಮೇಲೆ, ತಾನು ಗರ್ಭಿಣಿ ಎನ್ನುವುದು ತಿಳಿಯಿತು.

ಅವಳು ಮನೆಗೆ ಬಂದು ಸುಮ್ಮನೇ ಯೋಚಿಸುತ್ತಾ ಕುಳಿತುಬಿಟ್ಟಳು. ಇಂದು, ಇಷ್ಟು ದಿನಗಳ ಮೇಲೆ, ತನಗೆ ಇಂತಹ ಅವಸ್ಥೆಯು ಒದಗಬೇಕಾಗಿತ್ತೇ ಎಂದು ದುಃಖಿಸಿದಳು. ಇಲ್ಲಿಯ ವರೆಗೆ-ಮಕ್ಕಳಾಗದೇ ಇದ್ದುದಕ್ಕೆ ಎಷ್ಟು ಕೊರಗಿದ್ದಳೋ, ಅದಕ್ಕೆ ನೂರು ಪಾಲು ಹೆಚ್ಚಾಗಿ ಈಗ ಕೊರಗತೊಡಗಿದಳು ಆಷ್ಟು ವರ್ಷಗಳಿಂದ ಹಂಬಲಿಸಿದ ಫಲವು, ಇಂತಹ ಸುಂದರವಾದ ಪ್ರೇಮಪೂರ್ಣ ಮಗನನ್ನು ಪಡೆದ ಮೇಲೆ ಕೈಗೂಡುವಂತಾಯಿತೇ ? ಎಂದು ಕೊರಗಿದಳು. ಅವಳಿಗೆ, ತನ್ನ ವಿಷಯಕ್ಕೆ ಯಾವ ಭಯವೂ ಇರಲಿಲ್ಲ. ತಾನು, ಮಗುವಿಗೆ ನಿಜವಾದ ಅಮ್ಮನೇ ಆಗಿದ್ದಳು. ಆದರೆ, ತನ್ನಂತೆ ಹೆಸ್ರಿ ತಂದೆಯಾಗಿದ್ದನೇ ? ಇದು ಅವಳಿಗೆ ಸಮಸ್ಯೆಯ ವಿಷಯವಾಗಿತ್ತು. ಅವನು ಮಗನಿಗಾಗಿ ನೂರಾರು ವಿಧದ ಆಟದ ಸಾಮಾನುಗಳನ್ನು ತಂದಿದ್ದ. ಪ್ರತಿದಿನ ಕೆಲಸದಿಂದ ಬಂದಕೂಡಲೆ ಅರ್ನೆಸ್ಟನನ್ನು ಎತ್ತಿಕೊಳ್ಳದೆಯಿದ್ದರೆ ಅವನಿಂದ ಆಗುತ್ತಿರಲಿಲ್ಲ. ಆದರೂ ರೀಟಾಗೆ ಗಂಡನ ಮೇಲೆ ಪೂರ್ಣ ಭರವಸೆಯಿರಲಿಲ್ಲ. ತನ್ನ ಮೇಲಿನ ಪ್ರೇಮಕ್ಕಾಗಿ ಅವನು ಎಂತಹ ತ್ಯಾಗವನ್ನಾದರೂ ಮಾಡುತ್ತಾನೆ-ಎನ್ನುವುದು ಅವಳಿಗೆ ತಿಳಿದಿತ್ತು. ಆದರೂ ಇಂದಿನ ಅವನ ಪ್ರೀತಿಯು ಹೀಗೆಯೇ ಉಳಿಯಲಾರದು; ಮುಂದೆ, ತನಗೆ ಮಗುವಾದ ಮೇಲೆ ಪಕ್ಷಪಾತಿಯಾಗಿ, ತನ್ನ ಮುದ್ದು ಅರ್ನೆಸ್ಟನನ್ನು ಸವತಿ ಮಗನಂತೆ ಕಾಣಬಹುದು: ಇದೇನೂ ಹೆಸ್ರಿಯ ಸ್ವಭಾವಕ್ಕೆ ಆಶ್ಚರ್ಯಪಡತಕ್ಕ ವಿಷಯವಲ್ಲ ಎನ್ನುವುದನ್ನೇ ಬಹಳ ಹೊತ್ತು ಯೋಚಿಸುತ್ತಿದ್ದಳು.

ಹೆಸ್ರಿಗೆ ವಿಷಯವು ತಿಳಿಯುತ್ತಲೇ ಸಂತೋಷಾತಿರೇಕದಿಂದ ಕುಣಿದಾಡಿದ. ಕೊನೆಗೆ ಹೆಂಡತಿಗೆ ಹೇಳಿದ "ನೀನು ಬಹಳ ಅವಸರಪಟ್ಟು ರೀಟಾ; ಇನ್ನೊಂದೆರಡು ವರ್ಷ ನೋಡಿದ್ದರೆ ಏನಾಗುತ್ತಿತ್ತು ?

ರೀಟಾ ಸ್ತಬ್ಧಳಾಗಿ ಗಂಡನನ್ನು ನೋಡುತ್ತಿದ್ದಳು. ಮೊದಲ ದಿನವೇ ಅವನ ಬಾಯಿಂದ ಬಂದ ಈ ಅನುಚಿತ ಮಾತಿಗೆ ಉತ್ತರವನ್ನೇನು ಕೊಡುವುದು ? ಅವನು ತನ್ನನ್ನು ಹಿಂಸಿಸುತ್ತಿರುವಂತೆ ತೋರಿತು. ಹೀಗೆಯೇ ಸ್ವಲ್ಪಸ್ವಲ್ಪವಾಗಿ ತನ್ನನ್ನು ಕೊಲ್ಲುವನೆಂದು ಅವಳಿಗೆ ಎನ್ನಿಸಿತು.

ಅರ್ನೆಸ್ಟ್ ಓಡಿಬಂದು ಅಮ್ಮನ ಕೈಹಿಡಿದು ಹೇಳಿದ: "ಅಮ್ಮಾ ಹಸಿವಾಗುತ್ತಿದೆ" ತಂದೆಯ ಕಡೆಗೆ ತಿರುಗಿ ಕೇಳಿದ: "ಅಪ್ಪಾ ನನಗೊಂದು ಜೆಂಡು ಬೇಕು"

ರೀಟಾ ಇಷ್ಟು ಹೊತ್ತೂ ಸುಮ್ಮನೇ ಕುಳಿತಿದ್ದವಳು, ಅರ್ನೆಸ್ಟ್ ಬಂದೊಡನೆಯೇ ಅವನನ್ನು ಎತ್ತಿಕೊಂಡು ಆಳತೊಡಗಿದಳು. ಇದಕ್ಕಿಂತ ಹೆಚ್ಚಿಗೆ ಅವಳಿಂದ ಏನೂ ಮಾಡಲಾಗಲಿಲ್ಲ.

ರೀಟಾಳ ಹೆರಿಗೆಯು ಆಸ್ಪತ್ರೆಯಲ್ಲಿ ಆಯಿತು. ಮಗು ಹೆಣ್ಣು. ತಾಯಿಯಂತೆ ಕಪ್ಪಾಗಿತ್ತು. ಹೇಸ್ರಿಯ ಓಲಾಟವಂತೂ ಹೇಳತೀರದಷ್ಟಾಯಿತು. ನಾಲ್ಕು ದಿನಗಳು ಕಳೆದು, ಸ್ವಲ್ಪ ಸುಧಾರಿಸಿಕೊಂಡ ಮೇಲೆ, ರೀಟಾ ಗಂಡ ಬಂದಾಗ ಕೇಳಿದಳು. "ಅರ್ನೆಸ್ಟ್ ಹೇಗಿದ್ದಾನೆ."

ಹೆಸ್ರಿ ಮುಖವನ್ನು ಸಿಂಡರಿಸಿ ಹೇಳಿದನು. "ಅವನಿಗೇನು ? ನೀನೂ ಇಲ್ಲ ಎಂದು, ಮನೆಯ ತುಂಬಾ ಹೆಣ್ಣುಗಳನ್ನು ತಂದು ಹಾಕಿದ್ದೇನೆ. ತಿಂದುಕೊಂಡು ಸುಖವಾಗಿ ಇದ್ದಾನೆ."

"ಒಂದು ಸಲ ಅವನನ್ನು ಕರೆದುಕೊಂಡು ಬನ್ನಿ; ನನಗೆ ನೋಡಬೇಕೆನಿಸಿದೆ."

ಮೂರನೆಯ ದಿನ ಹೆಸ್ರಿ ಒಬ್ಬನೇ ಬಂದುದನ್ನು ನೋಡಿ ರೀಟಾ ಕೇಳಿದಳು: "ಮಗುವನ್ನೇಕೆ ಬಿಟ್ಟು ಬಂದಿರಿ ?"

ಹೆಸ್ರಿ ಧೋರಣೆಯಿಂದ ಹೇಳಿದ: "ಅವನು ಆಡಿಕೊಳ್ಳಲು ಹೋಗಿದ್ದ."

ರೀಟಾ ಏನೊಂದು ಉತ್ತರವನ್ನೂ ಕೊಡದೆ ಗೋಡೆಯ ಕಡೆಗೆ ಮುಖವನ್ನು ಮಾಡಿ ಮಲಗಿದಳು. ಹೆಸ್ರಿ ಬಹಳ ಹೊತ್ತು ಮಾತನಾಡುತ್ತಾ ಕುಳಿತಿದ್ದ. ರೀಟಾ ಮಾತನ್ನೂ ಆಡಲಿಲ್ಲ; ಗಂಡನ ಕಡೆ ತಿರುಗಲೂ ಇಲ್ಲ.

ಮತ್ತೆ ಎರಡು ದಿನ ಹೆಸ್ರಿ ಆಸ್ಪತ್ರೆಯ ಕಡೆ ಸುಳಿಯಲಿಲ್ಲ. ಅರ್ನೆಸ್ಟನನ್ನು ಕರೆದುಕೊಂಡು ಹೋಗಲು ಅವನಿಗೆ ಇಚ್ಛೆಯಿಲ್ಲ. ತಾನೊಬ್ಬನೇ ಹೋಗಲು ಹೆದರಿಕೆ. ಈಗೀಗ ಹೆಂಡತಿಯನ್ನು ಕಂಡರೆ ಅವನು ಒಳಗೊಳಗೇ ಹೆದರುತ್ತಿದ್ದ. ಮೂರನೆಯ ದಿನ ಮನಸ್ಸು ತಡೆಯದೇ ಮಗುವನ್ನು ನೋಡಲು, ಅರ್ನೆಸ್ಟ್‌ಗೆ ಒಳ್ಳೆಯ ಬಟ್ಟೆಯನ್ನು ಹಾಕಿ ಕರೆದುಕೊಂಡು ಹೊರಟ. ದಾರಿಯುದ್ದಕ್ಕೂ ಮಗನ ಹತ್ತಿರ, ಅವನ ಪುಟ್ಟ ತಂಗಿಯ ವಿಚಾರವಾಗಿ ಮಾತನಾಡುತ್ತಿದ್ದ. ಆಸ್ಪತ್ರೆಯ ಬಳಿಗೆ ಬಂದೊಡನೆಯೇ ಹೆಸ್ರಿ ಮಗನಿಗೆ ಹೇಳಿದ: "ನೀನು ಒಳಕ್ಕೆ ಹೋಗು ಮಗು; ನಾನೀಗಲೇ ಬಂದುಬಿಡುವೆ" ಎಂದು ಹೇಳಿ, ಒಬ್ಬ ದಾದಿಯೊಡನೆ ರೀಟಾಳ ಬಳಿಗೆ ಅರ್ನೆಸ್ಟನನ್ನು ಬಿಡಲು ಹೇಳಿ ಹೊರಟುಹೋದ. ಅವನಿಗೇನು ಅಂತಹ ಅಗತ್ಯದ ಕೆಲಸವಿಲ್ಲದಿದ್ದರೂ, ತಾಯಿ-ಮಗನ ಪ್ರೀತಿಯ ಮಿಲನವನ್ನು ನೋಡಿ ಸಹಿಸುವುದು ಅವನಿಂದ ಆಗದ ಮಾತಾಗಿತ್ತು.

ಅರ್ನೆಸ್ಟ್ ರೂಮಿನ ಬಾಗಿಲ ಬಳಿ ನಿಂತು ತಾಯಿಯನ್ನು ನೋಡಿದ. ಏಕೋ ಏನೋ, ಅವನಿಗೆ ತಾಯಿಯ ಹತ್ತಿರ ಹೋಗಲು ಹೆದರಿಕೆಯಾಯಿತು. ರೀಟಾ ಎರಡು ಕೈಗಳನ್ನೂ ಚಾಚಿ ಕರೆದಳು. "ಬಾ, ಮಗು!"

ಅರ್ನೆಸ್ಟ್ ಹತ್ತಿರಹೋಗಿ ತಾಯಿಯ ಎದೆಯ ಮೇಲೆ ತಲೆಯಿಟ್ಟು ಅಳತೊಡಗಿದ. "ಅಮ್ಮಾ ನಾನು ಇಲ್ಲಿಯೇ ಇರುತ್ತೇನೆ. ಅಪ್ಪ ಮನೆಯಲ್ಲಿ ನನ್ನನ್ನು ಹೊಡೆಯುತ್ತಾರೆ."

ರೀಟಾ, ಮಗನ ತಲೆಯನ್ನು ಸವರುತ್ತಿದ್ದವಳು, ಅವನನ್ನು ಸಮಾಧಾನಪಡಿಸಲಾಗದೇ ತಾನೂ ಅಳುತ್ತಿದ್ದಳು. ಇದುವರೆಗೆ ಅವಳು ಅರ್ನೆಸ್ಟನನ್ನು ಯಾರಿಗೂ ಮುಟ್ಟಗೊಡಿಸಿರಲಿಲ್ಲ. ಇಂದು, ತಾನು ಇಲ್ಲದೇ ಇರುವಾಗ, ಅಸಹಾಯನಾದ ಮಗನನ್ನು ತನಗೆ ತಿಳಿಯದ ಹಾಗೆ ತನ್ನ ಗಂಡ ಹೊಡೆದಿರುವುದನ್ನು ಕೇಳಿ, ಅವಳ ಎದೆಗೆ ಶೂಲವಿಟ್ಟಂತಾಯಿತು.

ಹೆನ್ರಿ ಬರುವ ಹೊತ್ತಿಗೆ ಮಗನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ನಗುತ್ತಾ ಮಾತನಾಡುತ್ತಿದ್ದಳು. ಅವನು ಬಂದ ಕೂಡಲೆ ಮಗನಿಗೆ ಕೇಳಿದ: 'ತಂಗಿ ಹೇಗಿದ್ದಾಳೆ ಮಗು ?'

ಅರ್ನೆಸ್ಟ್ ಉತ್ಸಾಹದಿಂದ ಹೇಳಿದ: "ಬಹಳ ಮುದ್ದಾಗಿದ್ದಾಳೆ. ಮನೆಗೆ ಹೋದಮೇಲೆ ನನಗೆ ಎತ್ತಿಕೊಳ್ಳಲು ಕೊಡುತ್ತೀನೆಂದು ಅಮ್ಮ ಹೇಳಿದ್ದಾಳೆ. ನನ್ನ ಬಣ್ಣದ ರೈಲನ್ನು ನಾನು ತಂಗಿಗೆ ಕೊಟ್ಟುಬಿಡುತ್ತೀನೆ. ನಾನೀಗ ದೊಡ್ಡವನಾಗಿದ್ದೀನೆ. ಸ್ಕೂಲಿಗೆ ಸೇರಿದಮೇಲೆ ನನಗೆ ಆಟದ ಸಾಮಾನುಗಳೇತಕ್ಕೆ ? ಅಲ್ಲವೇ ಅಮ್ಮಾ ?"

ರೀಟಾ ನಕ್ಕು ಹೇಳಿದಳು: "ನಿನ್ನ ತಂಗಿ ಸ್ವಲ್ಪ ದೊಡ್ಡವಳಾಗಲಿ; ಎಲ್ಲವನ್ನೂ ಕೊಡುವೆಯಂತೆ!"

ಆಮೇಲೆ ಹೆನ್ರಿ, ಹೆಂಡತಿಯೊಡನೆ ಯಾವುದೋ ಮಾತನಾಡುತ್ತಿದ್ದ. ರೀಟಾ ಮಾತ್ರ ಮಗುವಿಗೆ ಹೊಡೆದ ವಿಷಯವನ್ನು ಕೇಳಲಿಲ್ಲ. ಕೇಳಿದರೆ, ಏಕೆ ಹೇಳಿದೆಯೆಂದು ಮಗನನ್ನು ಮತ್ತೆ ಶಿಕ್ಷಿಸಿದರೆ?- ಎಂಬ ಭಯದಿಂದ ಆ ಸುದ್ದಿಯನ್ನೇ ಎತ್ತಲಿಲ್ಲ.

ಮನೆಗೆ ಹೊರಡುವಾಗ ಮಗನನ್ನು ಮುದ್ದಿಟ್ಟು ಹೇಳಿದಳು: "ಅಷ್ಟನಿಗೆ ತೊಂದರೆ ಕೊಡಕೂಡದು ಮಗು, ನಾಸಿನ್ನು ಮೂರು ನಾಲ್ಕು ದಿನಗಳಲ್ಲಿ ಬಂದುಬಿಡುತ್ತೀನೆ."

೪

ಮೇರಿಗೆ ನಾಲ್ಕು ತಿಂಗಳಾಗುವ ತನಕ ರೀಟಾ ಕೆಲಸಕ್ಕೆ ಹೋಗಲಿಲ್ಲ. ಆಮೇಲೆ ಮೇರಿಯನ್ನು ನೋಡಿಕೊಳ್ಳಲು ಒಬ್ಬ ದಾದಿಯನ್ನು ಗೊತ್ತುಮಾಡಿ, ಕೆಲಸಕ್ಕೆ ಹೋಗಹತ್ತಿದಳು. ಅರ್ನೆಸ್ಟನನ್ನು ಸ್ಕೂಲಿಗೆ ಸೇರಿಸಿದಳು. ರೀಟಾಳ ಶಿಕ್ಷಣದಿಂದಲೂ, ತನ್ನ ಅತಿಬುದ್ಧಿಯಿಂದಲೂ ಅರ್ನೆಸ್ಟ್,, ಮೊದಲನೆಯ ಕ್ಲಾಸಿನಲ್ಲೇ ಎಲ್ಲರಿಗಿಂತಲೂ ಮೊದಲಿನವನಾಗಿ ಬಂದ.

ರಜಾದಲ್ಲಿ ಒಂದು ದಿನ ಅರ್ನೆಸ್ಟ್ ಮೇರಿಯನ್ನು ತೂಗುತ್ತಿದ್ದ. ರೀಟಾ ಅಡಿಗೆಯ ಕೆಲಸದಲ್ಲಿ ತೊಡಗಿದ್ದಳು. ಹೆನ್ರಿ, ಹೊರಗೆ ಹೋಗಿದ್ದವನು ಮನೆಗೆ ಬರುತ್ತಲೇ ಮಗನನ್ನು ಗದರಿಸಿಕೊಂಡ: "ಮಗುವನ್ನೇಕೆ ಅಳಿಸುತ್ತೀದ್ದೀಯ ?"

ಅರ್ನೆಸ್ಟ್ ಹೆದರಿ ಹುದುಗಿದ ದನಿಯಿಂದ ಹೇಳಿದ: "ನಾನು ತೂಗುತ್ತಿದ್ದೇನೆ; ಆದರೂ ಅಳುತ್ತಿದ್ದಾಳೆ."

ಹೆನ್ರಿ ಮಗನನ್ನು ಬೈಯಲು ಕಾರಣವು ಸಿಕ್ಕದೇ ಇನ್ನೂ ಕೋಪಗೊಂಡ. ಸಿಟ್ಟಿನಿಂದ ಮಗನ ಕೆನ್ನೆಗೆ ಒಂದೇಟು ಕೊಟ್ಟು ಹೇಳಿದ: " ನೀನೇನೋ ಮಾಡಿದ್ದೀಯೆ, ಇಲ್ಲದೇಯಿದ್ದರೆ ಮಗು ಇಷ್ಟು ಅಳುತ್ತಿರಲಿಲ್ಲ."

ಅರ್ನೆಸ್ಟ್ ಅಳುವ ಶಬ್ದವನ್ನು ಕೇಳುತ್ತಲೇ ಅಡಿಗೆಮನೆಯಿಂದ ರೀಟಾ ಓಡಿಬಂದಳು. ಗಂಡನನ್ನು ನೋಡುತ್ತಲೇ ಅವಳಿಗೆಲ್ಲವೂ ಅರ್ಥವಾಯಿತು. ಒಂದು ಕ್ಷಣ ತಡೆದು ಮಗನನ್ನು ಹೊರಕ್ಕೆ ಆಡಿಕೊಳ್ಳಲು ಕಳುಹಿಸಿ, ಗಂಡನಿಗೆ ಹೇಳಿದಳು: "ನಿಮಗೆ ನಾಚಿಕೆಯಾಗುವುದಿಲ್ಲವೇ ? ಅವನನ್ನು ಹೊಡೆದಿದ್ದೀರಲ್ಲ!"

ಹೆನ್ರಿ ತಡವರಿಸುತ್ತಾ ಹೇಳಿದ: "ಅವನು ಮೇರಿಗೆ ಪೆಟ್ಟುಮಾಡಿದ್ದಾನೆ "

" ಇದು ಎಷ್ಟು ನಿಜವೆಂಬುದು ನನಗೂ ತಿಳಿದಿದೆ. ನಿಮಗಿಂತ ಕೋಟಿಪಾಲು ಹೆಚ್ಚಾಗಿ ಅವನು ತನ್ನ ತಂಗಿಯನ್ನು ಪ್ರೀತಿಸುತ್ತಾನೆ."

ಹೆನ್ರಿ ಮಾತನಾಡದೇ ಅಳುತ್ತಿರುವ ಮೇರಿಯನ್ನು ಎತ್ತಿಕೊಳ್ಳಲು ಕೈಚಾಚಿದ.. ರೀಟಾ ಅವನನ್ನು ತಡೆದು ಹೇಳಿದಳು: " ಇಂದು ಇದು ನಿರ್ಣಯವಾಗಲೇ ಬೇಕು. ಇನ್ನು ಮೇಲೆ ಇಂತಹ ತೊಂದರೆಯನ್ನು ನನ್ನಿಂದ ಸಹಿಸಲಾಗುವುದಿಲ್ಲ. ಅರ್ನೆಸ್ಟನನ್ನು ನೀವು ಮೇರಿಯಂತೆ ತಿಳಿಯಬೇಬೇಕು; ಇಲ್ಲದೇಯಿದ್ದರೆ, ಇದಕ್ಕೆ ಮುಂದಿನ ಏರ್ಪಾಡನ್ನು ನಾನು ಮಾಡಿಕೊಳ್ಳಬೇಕಾಗುತ್ತದೆ."

" ಏನು ಏರ್ಪಾಡು ಮಾಡುವೆ ?"

" ಅರ್ನೆಸ್ಟನ ಹಿತಕ್ಕೋಸ್ಕರವಾಗಿಯಾದರೂ ನಾನು ಡೈವೋರ್ಸ್ ಮಾಡಬೇಕಾಗುತ್ತದೆ."

ಹೆನ್ರಿ ಹೇಳಿದ: "ಮದುವೆಯಾದಂದಿನಿಂದ ನಾನು ನಿನ್ನನ್ನು ಪ್ರಾಣದಂತೆ ಪ್ರೀತಿಸಿದೆ. ಈಗ ನಿನಗೆ ಯಾವುದೋ ಅನಾಥ ಮಗು ಹೆಚ್ಚಾಯಿತು. ನನ್ನನ್ನು ಬಿಡಬೇಕೆಂದಿರುವೆಯೋ? ಆಗಲಿ; ಆದರೆ ಮಾತ್ರ ನೆನಪಿಟ್ಟುಕೊ. ಮೇರಿಯನ್ನು ಮಾತ್ರ ನನ್ನಿಂದ ಕಿತ್ತುಕೊಳ್ಳಲಾರೆ. ಈಗ ಹೇಳು; ಅರ್ನೆಸ್ಟ್ ಬೇಕೋ, ಮೇರಿ ಬೇಕೋ ?"

ರೀಟಾ ದೃಢಳಾಗಿ ಹೇಳಿದಳು. " ಮೇರಿಯನ್ನು ನೀವೇ ಇಟ್ಟುಕೊಳ್ಳಿ! ನನ್ನ ಅರ್ನೆಸ್ಟ್ ನನಗಿರಲಿ; ನನ್ನ ಹೊರತು ಅವನನ್ನು ಪ್ರೀತಿಸುವವರು ಇನ್ನ್ಯಾರೂ ಇಲ್ಲ." " ಇದಕ್ಕಾಗಿ ಕೋರ್ಟು ವ್ಯವಹಾರ ಬೇಕಾಗಿಲ್ಲ. ನಾನು ನಿಮಗೇನೂ ತೊಂದರೆಯನ್ನು ಕೊಡುವುದಿಲ್ಲ. ನಿಮ್ಮಿಂದ ಏನನ್ನೂ ಬಯಸುವುದೂ ಇಲ್ಲ. ಜಾಗ್ರತೆ ನಾನು ಇಲ್ಲಿಂದ ಹೊರಟುಹೋಗುತ್ತೇನೆ. ನನ್ನ ತವರೂರಿನಲ್ಲಿಯೇ ಕೆಲಸ ಮಾಡಿಕೊಂಡು ನನ್ನ ಮಗನ ಜೊತೆಯಲ್ಲಿರುತ್ತೇನೆ "

ಹೆನ್ರಿ ಎಲ್ಲವನ್ನೂ ನಿಶ್ಚಲನಾಗಿ ನಿಂತು ಕೇಳುತ್ತಿದ್ದ. ಕೊನೆಗೆ ನಿದಾನವಾಗಿ ಹೇಳಿದ: "ನೀನು ಸೊದಲೇ ಸಿದ್ಧತೆ ಮಾಡಿಕೊಂಡು, ಇಷ್ಟೆಲ್ಲಾ ನನ್ನ ಮೇಲೆ ಅಧಿಕಾರ ನಡೆಸುತ್ತಿದ್ದೆಯೆಂದು ತೋರುತ್ತದೆ!

[೩೬ನೇ ಪುಟದಿಂದ]

ಪ್ರಿನ್ಸಿಪಾಲ್ ಶ್ರೀಕೃಷ್ಣ ಗೋಪಾಲ, ಹುಲ್ಯಾಳಕರರು

ಶ್ರೀ. ಜಿ. ಎಸ್. ಮತಕರ *M. A. B. T.*, ಪುಣೆ.

ಕರ್ನಾಟಕವನ್ನು ಬಿಟ್ಟುಹೋಗಿ, ಹೊರನಾಡಿನಲ್ಲಿ ತಮ್ಮ ಬೆಳಕನ್ನು ಹರಡಿದ ಕನ್ನಡ ಶಾರದೋಪಾಸಕರು ಹಲವು ಜನರು. ಭಿನ್ನಭಿನ್ನ ಕರ್ನಾಟಕದಲ್ಲಿ ಅವರಿಗೆ ತಕ್ಕ ಕಾರ್ಯಕ್ಷೇತ್ರ ದೊರೆಯಲಿಲ್ಲ; ಇಂದು ವಿಕೀಕೃತ ಕರ್ನಾಟಕದಲ್ಲಿಯೂ ಅಂತಹವರಿಗೆ ಯೋಗ್ಯ ಅವಕಾಶ ದೊರೆಯುವಂತಿಲ್ಲ. ಶ್ರೀ. ಹುಲ್ಯಾಳಕರರಂತಹ ತೇಜಸ್ವೀ ಪುತ್ರರು ಎಷ್ಟು ಜನ ತಾಯಿನಾಡಿಗೆ ಎರವಾಗಿದ್ದಾರೋ! ಇನ್ನೆಷ್ಟು ಜನರು ಎರವಾಗಲಿರುವರೋ!

ಪುಣೆಯ ವಿಶ್ವವಿದ್ಯಾಲಯದ ಉಪಕುಲಗುರುಗಳಾದ ಡಾ. ಕರ್ವೆಯವರು ನಾಲ್ಕುವರೆ ತಿಂಗಳುಗಳವರೆಗೆ ವಿದೇಶಪರ್ಯಟನಕ್ಕೆ ಹೋಗಲಿರುವರು. ಅವರ ಸ್ಥಳದಲ್ಲಿ, ಸರ್ ಪರಶುರಾಮ ಭಾವು-ಕಾಲೇಜಿನ ಪ್ರಾಚಾರ್ಯರಾದ **ಶ್ರೀ ಎಸ್. ಜಿ. ಹುಲ್ಯಾಳಕರರು** ನೇಮಕಗೊಂಡಿರುವರು. ಶ್ರೀ. ಹುಲ್ಯಾಳಕರರು ಅಚ್ಚಕನ್ನಡಿಗರಿದ್ದು ಜನುಮಿಂಡಿಯ ಪ್ರಸಿದ್ಧ ಹುಲ್ಯಾಳಕರ ಮನೆತನದವರು. ಇವರ ತಂದೆಯವರಾದ ಶ್ರೀ ಗೋಪಾಲರಾವ್ ಹುಲ್ಯಾಳಕರರು **ಬಿ. ಎ. ಎಲ್‌ಎಲ್. ಬಿ.** ಯಾಗಿದ್ದು ಜನುಮಿಂಡಿಯ ಸಂಸ್ಥಾನದಲ್ಲಿ ನ್ಯಾಯಾಧೀಶರೆಂದು ಕೆಲಸವನ್ನು ಮಾಡುತ್ತಲಿದ್ದರು. ಒಂದೆರಡು ವರ್ಷಗಳ ವರೆಗೆ ಅವರು ರಾಮದುರ್ಗ ಸಂಸ್ಥಾನದ ದಿವಾಣರೆಂದೂ ಕೆಲಸವನ್ನು ಮಾಡಿರುವರು. ಗೋಖಾಳರಾಯರು ತಮ್ಮ ಅಂಸೆಯ ವರ್ಷಗಳಲ್ಲಿ ತೀರಿಕೊಂಡರು. ಆಗ ಶ್ರೀಕೃಷ್ಣ ಹುಲ್ಯಾಳಕರರು ಹನ್ನೆರಡು ವರ್ಷದವರಿದ್ದರು. ಆದುದರಿಂದ ಜನರ ಮುಂದಿನ ಶಿಕ್ಷಣ ಮೊದಲಾದುವುಗಳ ವ್ಯವಸ್ಥೆಯನ್ನು ಅವರ ಸೋದರಮಾವಂದಿರೇ ಮಾಡಿರುವರು

ಶ್ರೀ. ಹುಲ್ಯಾಳಕರರ ಜನ್ಮವು ೧೯೧೨ನೆಯ ಇಸ್ವಿಯ ಸಪ್ಟೆಂಬರ ತಿಂಗಳ ೩೦ನೆಯ ದಿನಾಂಕದಂದು ಆಗಿರುವುದು. ಮ್ಯಾಟ್ರಿಕಿನ ವರೆಗಿನ ಅವರ ಶಿಕ್ಷಣವು ಜನುಮಿಂಡಿಯ ಸರದಾರಾಮು ಭಾವು ಹಾಯಸ್ಕೂಲಿನಲ್ಲಿಯೇ ಆಯಿತು; ಮತ್ತು ವಿಶ್ವವಿದ್ಯಾಲಯದ ಶಿಕ್ಷಣವು ಪುಣೆಯ ಸರ್ ಪರಶುರಾಮು ಭಾವು ಕಾಲೇಜಿನಲ್ಲಿ ಆಯಿತು. ತತ್ತ್ವಜ್ಞಾನ ವಿಷಯವನ್ನು ತೆಗೆದುಕೊಂಡು, ಶ್ರೀ ಹುಲ್ಯಾಳಕರರು ೧೯೩೫ರಲ್ಲಿ ಬಿ. ಎ. (ಆನರ್ಸ್) ಪದವಿಯನ್ನು ಗಳಿಸಿದರು. ಆ ಮೇಲೆ ಅವರು ಕಾಯದೆಯ ಅಭ್ಯಾಸವನ್ನು ಕೆಲವು ದಿನಗಳ ವರೆಗೆ ಆರಂಭಿಸಿದರು. ಅವರ ಪ್ರವೃತ್ತಿಯು ವಕೀಲೀ ವ್ಯವಸಾಯಕ್ಕಿಂತ ಶೈಕ್ಷಣಿಕ ವಿಷಯದ ಕಡೆಗೆ ಹೆಚ್ಚು ಇದ್ದುದರಿಂದ,ಅವರು ತತ್ತ್ವಜ್ಞಾನ ವಿಷಯದಲ್ಲಿ ಉಚ್ಚ ಪದವಿಯನ್ನು ಗಳಿಸುವುದಕ್ಕೆ ೧೯೩೭ರಲ್ಲಿ ಲಂಡನ್ನಿಗೆ ತೆರಳಿದರು. ಲಂಡನ್ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಪಾಶ್ಚಾತ್ಯ ತತ್ತ್ವಜ್ಞಾನದ ಅಭ್ಯಾಸವನ್ನು ಮಾಡಿ, ೧೯೩೮ರಲ್ಲಿ *M. A* ಪದವಿಯನ್ನು ಬಹುಮಾನಪೂರ್ವಕ (*with distinction*) ಪಡೆದರು. ಅವರು ತಿರುಗಿ ಹಿಂದುಸ್ತಾನಕ್ಕೆ ೧೯೩೯ನೆಯ ಇಸವಿಯ ಜುಲೈ ತಿಂಗಳ ೧೫ನೆಯ ತಾರೀಖಿಗೆ ಬಂದರು.ಅವರನ್ನು ಸ್ವಾಗತಿಸುವುದಕ್ಕಾಗಿ ಮುಂಬಯಿಗೆ, ಪ್ರಾಧ್ಯಾಪಕ ಸೋನೋಪಂತ ದಾಂಡೇಕರರು ಹೋಗಿದ್ದರು. ಆಗ ಎಸ್. ಪಿ. ಕಾಲೇಜಿನಲ್ಲಿಯೇ ತತ್ತ್ವಜ್ಞಾನದ ಪ್ರಾಧ್ಯಾಪಕರಾಗಲು ಬಿನ್ನವಿಸಿಕೊಂಡರು. ಆದುದರಿಂದ ಶ್ರೀ ಹುಲ್ಯಾಳಕರರು ಶಿಕ್ಷಣಪ್ರಸಾರಕ ಮಂಡಳಿಯ ಎಸ್. ಪಿ. ಕಾಲೇಜಿನಲ್ಲಿ ತತ್ತ್ವಜ್ಞಾನದ ಪ್ರಾಧ್ಯಾಪಕರೆಂದು, ೧೯೩೯ನೆಯ ಇಸ್ವಿಯ ಆಗಸ್ಟ್ ತಿಂಗಳ ಒಂದನೆಯ ತಾರೀಖಿನಿಂದ ಕೆಲಸವನ್ನು ಮಾಡುತ್ತಿರುವರು. ಅಂದಿನಿಂದ ಅವರು ಪದವೀಪೂರ್ವದ ಪದವಿಯ ಮತ್ತು ಪದವ್ಯುತ್ತರ ವಿದ್ಯಾರ್ಥಿಗಳಿಗೆ ತತ್ತ್ವಜ್ಞಾನ ವಿಷಯವನ್ನು ಕಲಿಸುತ್ತ ಬಂದಿರುವರು. ೧೯೪೪ರಿಂದ ೧೯೫೮ರ ವರೆಗೆ ಶ್ರೀ. ಹುಲ್ಯಾಳಕರರು ಪುಣೆಯ ವಿಶ್ವವಿದ್ಯಾಲಯದ, ತತ್ತ್ವಜ್ಞಾನ ವಿಷಯದ ಪ್ರಮುಖ ಪ್ರಾಧ್ಯಾಪಕರೆಂದು ಕೆಲಸವನ್ನು ಮಾಡಿರುವರು. ಅಷ್ಟೇ ಅಲ್ಲದೆ ಅವರು, ಕೆಳಗೆ ಕಾಣಿಸಿದ ಐದು ಪಠ್ಯಪುಸ್ತಕಗಳನ್ನು ಇಂಗ್ಲೀಷ್ ಮತ್ತು ಮರಾಠೀ ಭಾಷೆಯಲ್ಲಿ ಬರೆದಿರುವರು.

೧) ಸಾಮಾಜಿಕ ಮನಸಶಾಸ್ತ್ರ (ನವಂಬರ್ ೧೯೫೦) ೨) *An Introduction to Deductive Logic, march-1952* ೩) *Outlines of social Psychology (1956)* ೪) *Text Book on Logic- Deductive and Inductive (Marathi)* ೫) *Text Book on Logic and Scintific Method (Marathi)*

ಇದಲ್ಲದೆ ಶ್ರೀ. ಹುಲ್ಯಾಳಕರರು ವಿವಿಧ ವಿಷಯಗಳ ಮೇಲೆ ಸಂಶೋಧನಾತ್ಮಕವಾದ ೧೬ ಲೇಖನಗಳನ್ನು ಬರೆದಿರುವರು.

ಶ್ರೀ ಹುಲ್ಯಾಳಕರರು ಪುಣೆಯ ಶಿಕ್ಷಣ ಪ್ರಸಾರಕ ಮಂಡಳಿಯ ಆಜೀವಸದಸ್ಯರಾಗಿದ್ದು ಈ ಮಂಡಳಿಯ ಕಾರ್ಯದರ್ಶಿಯೆಂದು ೧೯೪೬ರಿಂದ ೧೯೫೦ರ ವರೆಗೆ ಕೆಲಸವನ್ನು ಮಾಡಿರುವರು. ೧೯೫೦ರಿಂದ ಜನೆವರಿ ೧೯೬೦ರ ವರೆಗೆ ಶ್ರೀ. ಹುಲ್ಯಾಳಕರರು ಎಸ್.ಪಿ. ಕಾಲೇಜಿನ ಉಪಪ್ರಾಚಾರ್ಯರೆಂದು ಕೆಲಸಮಾಡಿ, ನಂತ್ರದ ೨ವರೆ ವರ್ಷಗಳಿಂದ ಆ ಕಾಲೇಜಿನ ಪ್ರಾಚಾರ್ಯರೆಂದು ಕೆಲಸವನ್ನು ಮಾಡುತ್ತಲಿರುವರು.

ಶ್ರೀ. ಹುಲ್ಯಾಳಕರರು ಎಷ್ಟೋ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಸದಸ್ಯರಿರುವರು. ಅವುಗಳಲ್ಲಿ ಕೆಳಗಿನವು ಪ್ರಮುಖವಾಗಿರುವುವು: ೧) ಜನತಾ ಶಿಕ್ಷಣಸಮಿತಿ, ಧಾರವಾಡ. ೨) ಭಾರತೀಯ ತತ್ತ್ವಜ್ಞಾನ ಕಾಂಗ್ರೆಸ್,ನ್ಯೂದಿಲ್ಲಿ.೩) ಬ್ರಿಟಿಶ್ ಇನ್‌ಸ್ಟ್ಯೂಟ್ ಆಫ್ ಫಿಲಾಸಫಿ, ಲಂಡನ್. ೪) ಮಾನಸ ಶಾಸ್ತ್ರೀಯ ಸಂಶೋಧನ ಸಂಸ್ಥೆ

(*Society for Psyclical Research*) ಮುಂಬಯಿ,೫) ಸಾಂಸ್ಕೃತಿಕ ಸಂಬಂಧದ ಭಾರತೀಯ ಸಂಸ್ಥೆ *Indian Council for cultural Relations*), ನ್ಯೂ ದಿಲ್ಲಿ ೬) ಅಂತರ ರಾಷ್ಟ್ರೀಯ ಬಂಧುತ್ವ ಸಂಸ್ಥೆ (ಹಿಂದೀ ವಿಭಾಗ) *International fellowship*) ಪುಣೆ, ೭) ಮಾಡರ್ನ್ ಎಜ್ಯುಕೇಶನ್ ಸೊಸಾಯಿಟಿ, ಪುಣೆ.

ಮುಂಬಯಿ ವಿಶ್ವವಿದ್ಯಾಲಯದ ಫೆಲೊ ಎಂದು ಶ್ರೀ. ಹುಲ್ಯಾಳಕರರು ೧೯೪೬ರಿಂದ ೧೯೫೧ರ ವರೆಗೆ ಇದ್ದರು. ಮತ್ತು ೧೯೫೧ರಿಂದ ಪುಣೆಯ ವಿಶ್ವವಿದ್ಯಾಲಯದ ಕೋರ್ಟಿನ ಸಭಾಸದರಿದ್ದು,೧೯೫೨ರಿಂದ ಕಾರ್ಯಕಾರೀಮಂಡಳದ (*Executive Council*) ಸಭಾಸದರಿಂದು ಕೆಲಸವನ್ನು ಮಾಡುತ್ತಲಿರುವರು. ಇಷ್ಟೇ ಅಲ್ಲದೆ ಮುಂಬಯಿ, ಪುಣೆ, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ತತ್ತ್ವಜ್ಞಾನ ವಿಷಯಕ ಅಭ್ಯಾಸಕ ಮಂಡಳದ (*Board*) ಸಭಾಸದರಿರುವರು.

ನಾಗಪೂರ ವಿಶ್ವವಿದ್ಯಾಲಯದ ಮುಖಾಂತರ ೧೯೫೫ರಲ್ಲಿ ನಾಗಪೂರದಲ್ಲಿ ಜರುಗಿದ, ಅಖಿಲ ಭಾರತೀಯ ತತ್ತ್ವಜ್ಞಾನ ಕಾಂಗ್ರೆಸಿನಲ್ಲಿಯ "ರಾಷ್ಟ್ರಗಳು ನಿಧರ್ಮ ಇರಬಹುದೋ ?" ಎಂಬ ವಿಷಯಕ ಪರಿಸಂವಾದದ ನಾಯಕರಾಗಿದ್ದರು. ೧೯೫೬ರಲ್ಲಿ ಅಣ್ಣಾಮಲಾಯ್ ನಗರದಲ್ಲಿ ಅಣ್ಣಾಮಲಯ ವಿಶ್ವವಿದ್ಯಾಲಯದ ಮುಖಾಂತರ ಜರುಗಿದ ಅಖಿಲಭಾರತೀಯ ತತ್ತ್ವಜ್ಞಾನ ಕಾಂಗ್ರೆಸ್ಸಿನ ೩೧ನೆಯ ಅಧಿವೇಶನದಲ್ಲಿ "ನೀತಿಶಾಸ್ತ್ರ ಮತ್ತು ಸಾಮಾಜಿಕ ತತ್ತ್ವಜ್ಞಾನ ವಿಭಾಗದ ಅಧ್ಯಕ್ಷರಾಗಿದ್ದರು. ೧೯೫೯ ಜುಲೈಯಲ್ಲಿ ಚಿಕಾಗೊ ವಿಶ್ವವಿದ್ಯಾಲಯದ ಪ್ರೊ. ಬ್ಲೂಮ್‌ಫೀಲ್ಡ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ "ಪರೀಕ್ಷೆಯ" ವಿಷಯಕ ಪರಿಸಂವಾದದಲ್ಲಿ ಶ್ರೀ. ಹುಲ್ಯಾಳಕರರು ಭಾಗವಹಿಸಿದ್ದರು. ೧೯೫೯ನೆಯ ಇಸವಿಯ ಜುಲೈ ತಿಂಗಳಿನಲ್ಲಿ ಹವಾಯಿ ವಿಶ್ವವಿದ್ಯಾಲಯದ ಮುಖಾಂತರ "ಹೊನಲೂಲು" ಎಂಬ ಪಟ್ಟಣದಲ್ಲಿ ಜರುಗಿದ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ, ತತ್ತ್ವಜ್ಞಾನಿಗಳ, ಮೂರನೆಯ ಅಧಿವೇಶನಕ್ಕೆ ಶ್ರೀ ಹುಲ್ಯಾಳಕರರು ಪ್ರತಿನಿಧಿ ಎಂದು ಹಾಜರ್ ಇದ್ದರು. ೧೯೫೯ರಲ್ಲಿ ಮೈಸೂರಿನಲ್ಲಿ ಜರುಗಿದ ಅಂತರ ರಾಷ್ಟ್ರೀಯ ತತ್ತ್ವಜ್ಞಾನ ಸಂಸ್ಥೆಯ (*Unesco*) ಅಧಿವೇಶನವಲ್ಲಿಯಾದರೂ ಪ್ರಮುಖನಾಪ ಭಾಗವನ್ನು ಸಹಿಸಿರುವರು.

೧೯೫೭-೫೮ರಲ್ಲಿ, ಅಮೇರಿಕೆಯ, ಯೆಲೆ (*Yele*) ಮತ್ತು ನ್ಯೂ ಹೆವನ್ (*New Haven*) ವಿಶ್ವವಿದ್ಯಾಲಯಗಳ ಭೆಟ್ಟಿಯ (*visiting*) ಸಂಶೋಧಕ ಪ್ರಾಧ್ಯಾಪಕರೆಂದು, ಅಮೇರಿಕೆಯಲ್ಲಿಯ ೩೪ ಸಂಸ್ಥಾನಗಳಲ್ಲಿ ಪ್ರವಾಸವನ್ನು ಮಾಡಿ, ತತ್ತ್ವಜ್ಞಾನ ವಿಷಯದ ಮೇಲೆ ಎಷ್ಟೋ ವ್ಯಾಖ್ಯಾನಗಳನ್ನು ಕೊಟ್ಟಿರುವರು. ಶ್ರೀ. ಹುಲ್ಯಾಳಕರರು ಜಗತ್ಪ್ರವಾಸಪನ್ನಾದರೂ ಮಾಡಿರುವರು.

[೩೭೩ನೇ ಪುಟದಿಂದ ಬಂದುದು.]

ಆಗಲಿ; ನಿನ್ನ ಇಷ್ಟ ಬಂದಹಾಗೆ ಮಾಡು. ಆದರೆ ಎಂದಾದರೂ ನಿನಗೆ ಕಷ್ಟಬಂದಾಗ ನನ್ನನ್ನು ಮರೆಯಬೇಡ."

ರೀಟಾ ಏನೋ ಹೇಳುವಷ್ಟರಲ್ಲಿ ಹೆನ್ರಿ ಹೊರಟುಹೋಗಿದ್ದ. ಅವಳು ಅಳುತ್ತಿರುವ ಮಗುವನ್ನು ಎತ್ತಿಕೊಂಡು ತಾನೂ ಅಳತೊಡಗಿದಳು.

೫

ರೀಟಾ ತವರಿಗೆ ಹೊರಡುವ ದಿನ ಬಂದಿತು. ಅವಳು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಾಗಿತ್ತು. ಬೆಳಗಿನಿಂದ ಎಷ್ಟು ಅತ್ತರೂ ಅವಳ ಕಣ್ಣೀರು ಮಾತ್ರ ಇಂಗಿರಲಿಲ್ಲ. ಅದು ಧಾರಾಕಾರವಾಗಿ ಸುರಿಯುತ್ತಲೇ ಇತ್ತು. ಅವಳು ಹಾಗೆಯೇ ಕೆಲಸ ಮಾಡುತ್ತಿದ್ದಳು. ಮೇರಿಯು ಬಟ್ಟೆಗಳನ್ನೆಲ್ಲಾ ಒಂದು ದೊಡ್ಡ ಟ್ರಂಕಿನಲ್ಲಿ ಮಡಿಸಿಟ್ಟಳು. ಬೀರುವಿನಲ್ಲಿ ಒಂದುಕಡೆ ಗ್ಲಾಸ್ಕೋ ಡಬ್ಬ, ಫ್ಲಾಸ್ಕ್ ಮತ್ತು ಗಾಜಿನ ಶೀಸೆಯನ್ನು ಇಟ್ಟಳು. ಇನ್ನೊಂದು ಕಡೆ, ಆರ್ನೆಸ್ಟನ ಬಟದ ಸಾಮಾನುಗಳನ್ನೆಲ್ಲಾ ಮೇರಿಗಾಗಿ ಜೋಡಿಸಿಟ್ಟಳು. ಇಂದು ದಾದಿಯನ್ನು ಬರಬೇಡನೆಂದು ಬೆಳಗ್ಗೆಯೇ ಹೇಳಿದ್ದಳು. ತಾನೇ ಮಗುವಿಗೆ ಹಾಲನ್ನು ಕುಡಿಸಿದಳು. ಮಗುವಿನ ಬಟ್ಟೆಯನ್ನು ತೆಗೆದು, ಶುಭ್ರವಾದ ಬಿಳಿಯ ಬಟ್ಟೆಯನ್ನು ತೊಡಿಸಿದಳು.

ಆರ್ನೆಸ್ಟ್ ಬಂದು ಹೇಳಿದ. "ಅಮ್ಮಾ ಗಾಡಿಯು ಬಂದಿತು. ಏಕೆ ಅಳುತ್ತಿದ್ದೀಯ ಅಮ್ಮ ?"

ರೀಟಾ ಕಣ್ಣೊರಸಿಕೊಂಡು ನಕ್ಕು ಹೇಳಿದಳು: "ನಿನ್ನ ತಂದೆಯನ್ನು ಕರೆ ಮಗು."

ಹೆನ್ರಿ ಬಂದ ಕೂಡಲೆ ಮೇರಿಯನ್ನು ಗಂಡನ ಕೈಗೆ ಕೊಟ್ಟು ತಲೆತಗ್ಗಿಸಿ ಹೇಳಿದಳು. "ನಾನಿನ್ನು ಹೊರಡುತ್ತೇನೆ."

ಹೆನ್ರಿ ಸುಮ್ಮನೆ ನಿಂತಿದ್ದ. ರೀಟಾ ಗಂಡನ ಕಡೆಗೆ ನೋಡದೇ ಹೇಳಿದಳು: "ಸಾಧ್ಯವಾದರೆ, ಮೇರಿಯ ಕ್ಷೇಮಕ್ಕೆ ಕಾಗದವನ್ನು ಬರೆಯುತ್ತಿರಿ."

ಇದಕ್ಕೂ ಹೆನ್ರಿ ಮಾತನಾಡಲಿಲ್ಲ. ರೀಟಾ ಮಗನನ್ನು ಕರೆದು ಹೇಳಿದಳು: "ನಿನ್ನ ತಂದೆಗೆ ಮುತ್ತುಕೊಟ್ಟು ಬೈ ಬೈ ಹೇಳು ಮಗು."

ಆರ್ನೆಸ್ಟ್ ತಂದೆಗೆ ಗುಡ್ ಬೈ ಹೇಳಿದ. ತಂಗಿಯನ್ನು ಮುದ್ದಿಸಿ, ತಾಯಿಯು ಜೊತೆಯಲ್ಲಿ ಗಾಡಿಯಲ್ಲಿ ಕುಳಿತನಂತರ ಕೇಳಿದ: "ಅಪ್ಪ ಏಕೆ ಮಾತನಾಡಲಿಲ್ಲ ಅಮ್ಮ ? ನಾವು ಮೇರಿಯನ್ನು ನೋಡಲು ಇನ್ನೆಷ್ಟು ದಿನಕ್ಕೆ ಬರುತ್ತೇವೆ ಅಮ್ಮ ?"

ರೀಟಾಳಿಗೆ ಮಗನ ಮಾತೊಂದೂ ಕೇಳಿಸುತ್ತಿರಲಿಲ್ಲ. ಹೆನ್ರಿ ಕೊನೆಯ ಸಲ ಬೀಳ್ಕೊಡಲು ಹೊರಕ್ಕೆ ಬರುತ್ತಾನೆಂದು ಮನೆಯ ಕಡೆಯೇ ನೋಡುತ್ತಿದ್ದಳು. ಆದರೆ ಗಾಡಿಯು ತಿರುವಿನಲ್ಲಿ ತಿರುಗುವ ತನಕವೂ ಗಂಡ ಬಾರದೇಯಿರುವುದನ್ನು ಕಂಡು, ನಿಟ್ಟುಸಿರು ಬಿಟ್ಟು ಆಕಾಶದ ಕಡೆ ನೋಡತೊಡಗಿದಳು. ●

ಉತ್ತರ ಕನ್ನಡ ಜಿಲ್ಲೆಯ ಭಾಷಾ ಚಿತ್ರಗಳು

ಲೇಖಕ: ೩

ಡಾ. ವ್ಹಿ. ಆರ್. ಉಮರ್ಜಿ, ಎಂ. ಎ, ಪಿ. ಎಚ್. ಡಿ. ಮುಂಡ್ಯ.

ಮಾತಿನ ಮೋಡಿ, ಮನೆಮನೆಯಲ್ಲಿಯೂ ಬದಲಾದುದು ನಮ್ಮ ನಾಡಿನಲ್ಲಿ ಕಾಣುತ್ತಲಿದೆ. ಇಂತಹ ಬದಲಾವಣೆಗೆ, ಸ್ವಲ್ಪ ಕಾಲದಲ್ಲಿಯೆ ತಮ್ಮ ಅಭಿಪ್ರಾಯವನ್ನು ಇನ್ನೊಬ್ಬರಿಗೆ ತಿಳುಹಬೇಕೆಂಬ ಸಹಜ ಪ್ರವೃತ್ತಿ ಕಾರಣವಾಗಿದೆ. ಶುದ್ಧ ಭಾಷೆಗೆ ಕಾಲ ಹೆಚ್ಚು ಬೇಕು; ವಿಕೃತ ಭಾಷೆಗೆ ಅದು ಬೇಕಿಲ್ಲ.

ಶೆಟ್ಟಿಗಳ ಮನೆಮಾತುಗಳು

ಅಲ್ಪ ಪರಿಚಯ–ಕರಾವಳಿ ಪ್ರದೇಶದಲ್ಲಿ ವಾಸಿಸುವ ಸಂಗಡಿಗಳಲ್ಲಿ ಬಹು ಚಿಕ್ಕದಾದರೂ ಪ್ರಭಾವಶಾಲಿ ಸಂಗಡ ಇವರದು. ಕರಾವಳಿಯ ಪಟ್ಟಣಗಳಲ್ಲಿ ಇವರನ್ನು ಕಾಣಬಹುದಾದರೂ, ಅಂಕೋಲೆಯೆ ಇವರು ವಾಸಿಸುವ ಮುಖ್ಯ ಕೇಂದ್ರ. ಕನ್ನಡವೇ ಇವರ ಮನೆಮಾತಾದರೂ, ಇವರು ವ್ಯಾಪಾರಿಗಳಾದ್ದರಿಂದ ಹಿಂದಿ, ಮರಾಠಿ, ಕೊಂಕಣಿ ಭಾಷೆಗಳನ್ನು ಸರಿಯಾಗಿ ಮಾತಾಡಬಲ್ಲರು. ಇವರು ಪಕ್ಕಾ ಕನ್ನಡಾಭಿಮಾನಿಗಳು. ಇವರನ್ನು ಕನ್ನಡ ವಾಣಿಗಳೆಂತಲೂ ಕರೆಯುವರು. ಎಲ್ಲ ಸಂಗಡಗಳ ಕೂಡ ಇವರ ಸಂಪರ್ಕ ಉಂಟು. ಸಂಸ್ಕೃತಿಯ ದೃಷ್ಟಿಯಿಂದ ಹವ್ಯಕರನಂತರ ಇವರ ಹೆಸರು ಕೇಳಿಬರುವುದು. ಇವರು ಮಧ್ಯಮ ವರ್ಗಕ್ಕೆ ಸೇರಿದವರು. ವ್ಯಾಪಾರವೇ ಇವರ ಜೀವನೋಪಾಯ.

ಅಂಕೋಲಾ ಶೆಟ್ಟಿಗಳ ಮಾತಿನ ಮಾದರಿ–ಅಂಕೋಲೆಯು ಕರಾವಳಿ ಪ್ರದೇಶದಲ್ಲಿ ಇದ್ದು, ಕನ್ನಡ ಸಂಸ್ಕೃತಿಯ ಕೇಂದ್ರವಾದ ಕುಮಟೆಯಿಂದ ೨೦ ಮೈಲುಗಳ ಮೇಲೆ ಇದೆ. ಅಂಕೋಲೆಯ ಶೆಟ್ಟಿಗಳ ಮನೆಮಾತಿನಲ್ಲಿ ಸೂರ್ಯ ಹಾಗೂ ಗಾಳಿ ಎಂಬ ಕಥೆಯು ಕೆಳಗಿನಂತಿದೆ.

೧. ಗಾಳಿ ಸೂರ್ಯ ಎಯ್ದೂಜನ ನ್ಹಾಂದ ಶಕ್ತಿ ಹೆಚ್ಚಿ.
೨. ನ್ಹಿಂದ ಶಕ್ತಿ ಹೆಚ್ಚಿ ಎಂದಿ ನಾಡ್ಯಾಡ್ತಿರು.
೩. ಆಗೊಬ್ಬಾ ಹಾದಿ ಮ್ಯಾನ್ ಹೋಗೊಂವಾ ಆ ಬದಿಗ್ಬಂದಾ. ಅಂವಾ
೪. ಗರಮು ಕಂಬ್ಳೀ ಮೈಮ್ಯಾನ್ ಹೊದ್ದಂಡಿದಾ.
೫. ಆ ಕುಂಬಿ ಯಾಕ್ಕೆಲ್ಲೆ ಇವಸ್ತೈಲಿ
೬. ಬಿಚ್ಕಂಡ ಹಾಕ್ತೆರೊ ಅಂನ್ಲೆ ಶಕ್ತಿ ಹೆಚ್ಚಿಂದಿ
೭. ತಿಳ್ಕೊಂಬೋದು ಹೇಂಗೆಂದಿ ಇವ್ರು ಮಾತಾಡ್ತಂದ್ರು
೮. ಮೊದ್ಲೆ ಗಾಳಿ ತಾಂದ್ ಶಕ್ತಿ-ಎಲ್ಲಾ
೯. ಬಿಟ್ಕಂಡೆ ಉಬ್ಬಾ; ಆದ್ರೆ ಅಂನ ಉಬ್ಬಹ್ಟೂ
೧೦. ಆ ದಾರಿ ಮ್ಯಾನ ಹೋಗಾಂವಾ ಮುತ್ತಿಟ್ಟ ಮುತ್ತಿಟ್ಟ ಗಟ್ಟಿ ನೂಡಿ ಮೈಮ್ಯಾನ್
೧೧. ಎಳ್ಕಂಡಾ ಆಪೈರ್ಯಗೆ ಗಾಳಿ
೧೨. ಯತ್ನಬಿಟ್ಟಿ. ಕಡೆಗೆ ಸೂರ್ಯ
೧೩. ಬಿಸ್ಲು ಬಿಡೊಕೆ ಸುರುಮಾಡ್ದಾ. ಬಿಸ್ಲಿಂದೆ ಹೊಡ್ತ್ಕ
೧೪. ಹಾದಿಮ್ಯಾನ್ ಹೋಗಾಂವಾ ಕಂಬಳಿ ತಾನೆ ಬಿಚ್ಚಾಕ್ದಾ.
೧೫. ಹಿಂಗೆ ತಾಂದ ಶಕ್ತಿಕಿಂತ ಸೂರ್ಯಂದ ಶಕ್ತೆ ಹೆಚ್ಚ್ಯ
೧೬. ಎಂದಿ ಗಾಳಿ ವೊಪ್ಪ್ಯಂಬೇಕಾಯ್ತು.

(ಈ ಕಥೆಯನ್ನು ಹೇಳಿದವನು ಲಕ್ಷ್ಮೀನಾರಾಯಣ ವೆಂಕಟರಮಣ ಶೆಟ್ಟಿ, ಅಂಕೋಲಾ– ತಾಲೂಕ ಅಂಕೋಲಾ)

ಪರಿಶೀಲನೆ– A. ಉಚ್ಚಾರಗಳ ವರ್ಗೀಕರಣ.

೧. **ಸ್ವರಗಳು:** ಕೆಳಗಿನ ಸ್ವರಗಳ ಅಂತರವನ್ನು ಶೆಟ್ಟಿಗಳ ಮಾತಿನಲ್ಲಿ ಕಾಣಬಹುದು. ಆಕಾರವು ಕೆಲವೆಡೆಯಲ್ಲ (ಸರ್ವನಾಮಗಳಲ್ಲಿ) "ಅ" ಕಾರವಾಗಿಯೂ "ಉ" ಕಾರವು ಕೆಲವೆಡೆಯಲ್ಲಿ "ಇ"ಕಾರವಾಗಿಯೂ ಎ ಕಾರವು "ಅ್ಯ"ಕಾರವಾಗಿಯೂ "ಓ" ಕಾರವು ಸಂಪೃತ "ಅ"ಕಾರವಾಗಿಯೂ ಕೆಲವೆಡೆ "ವೊ"ಕಾರವಾಗಿಯೂ ಕಾಣುವುದು.

ಅ> ಆ ಉದಾ:– ತನ್ನ> ತಾನ್ನ. ನನ್ನ> ನಾನ್ನ ಮುಂತಾದವು.

ಉ> ಇ ಉದಾ: ಎಂದು> ಎಂದಿ. ಬಿಟ್ಟುಕೊಂಡು> ಬಿಟ್ಕಂಡಿ

ಏ> ಅ್ಯ ಉದಾ: ಮೈಮೇಲೆ> ಮೈಮ್ಯಾನ್.

ಒ> ಅ ಉದಾ: ಹೊತ್ತುಕೊಂಡಿದ್ದನು> ಹೊದ್ದಂಡಿದ. ಬಿಟ್ಟುಕೊಂಡು> ಬಿಟ್ಕಂಡಿ.

ಒ> ವೊ ಉದಾ: ಒಪ್ಪಿಕೊಳ್ಳಬೇಕಾಯಿತು> ವೊಪ್ಪ್ಯಂಬೇಕಾಯ್ತು.

೨. **ವ್ಯಂಜನಗಳು:** ಸಾಮಾನ್ಯವಾಗಿ ವರ್ಗಪ್ರಥಮಾಕ್ಷರವು ತೃತೀಯವಾಗಿ ಪರಿಣಮಿಸುವುದು. ಉದಾ: ಹೊತ್ತುಕೊಂಡಿದ್ದ> ಹೊದ್ದಂಡಿದ. ಅನುಸ್ವಾರವು ಮುಂದೆ ಬರುವ ವ್ಯಂಜನದ ವರ್ಗ ಪಂಚಮವಾಗಿ ಪರಿಣಮಿಸುವುದು. ಉದಾ ಬಂದನು> ಬನ್ದ. ಲ ಕಾರವು ನ ಕಾರವಾಗಿ ಉಚ್ಚರಿಸಲ್ಪಡುವುದು. ಉದಾ: ಮೇಲೆ> ಮ್ಯಾನ್. ರ ಕಾರವು 'ಯ್' ಕಾರವಾಗುವುದು. ಉದಾ: ಎರಡು> ಎಯ್ದು.

೩. ದಂತತಾಲವ್ಯ ಚವರ್ಗ: ಚವರ್ಗವು ದಂತ ತಾಲವ್ಯವಾಗಿ ಉಚ್ಚರಿಸಲ್ಪಡುವುದು.

ತ್ ತ್
ಚ್> ಚ ಉದಾ: ಹೆಚ್ಚ್ಚಿ> ಹೆಚ್ಚಿ. ಜನ> ಜನ.

೪. ಶ. ಷ. ಸ ಕಾರಗಳ ಉಚ್ಚಾರ: ಸರಿಯಾದ ರೀತಿ ಉಚ್ಚಾರಣೆ
ಉದಾ: ಶ=ಶ ಶಕ್ತಿ=ಶಕ್ತಿ.
ಸ=ಸ ಸೂರ್ಯ=ಸೂರ್ಯ.

೫. ರ-ಲ-ಳ ಗಳ ಉಚ್ಚಾರಕ್ಕೂ ಸರಿಯಾದ ಗಮನವಿದೆ.
ರ=ರ ಯಾರು=ಯಾರ್, ಸೂರ್ಯ=ಸೂರ್ಯ
ಲ=ಲ ಕೈಯಲ್ಲಿ=ಕೈಲಿ
ಳ=ಳ ಕಂಬಳ=ಕಂಬ್ಳಿ

೬. ನ-ಣಗಳ ಉಚ್ಚಾರ. ನ-ಣಗಳಲ್ಲಿ ಉಚ್ಚಾರ ಭೇದವಿದೆ.
ನ=ನ ನನ್ನ=ನಾಂದ ನಿನ್ನ=ನಿಂದ.

೭. ಮಹಾಪ್ರಾಣಗಳು:- ಮಹಾಪ್ರಾಣಗಳೂ ಬಳಕೆಯಲ್ಲಿವೆ.
ಉದಾ: ಅಖ್ಖೆರಿಗೆ ಮುಂತಾದುವು.

೮. ಸಾನುನಾಸಿಕ ಉಚ್ಚಾರ: ಇವೆ. ಅವನು> ಅಂವಾ
ಅವನಿಗೆ=ಅಂವ್ಗೆ, ಹೋಗೊಂವಾ.

೯. ಸಂಧಿ: ಪದಗಳ ಹಾಗೂ ಪದಸಮುಚ್ಚಯಗಳಲ್ಲಿ ಸಂಕೋಚಿತ ಉಚ್ಚಾರ ಕಡಿಮೆ ಪ್ರಮಾಣದಲ್ಲಿ ಇರುತ್ತದೆ.
ಉದಾ: ಅವರು> ಅವ್ರು ತಪ್ಪು> ತಪ್ಪ್ರಿ. ಹೊತ್ತುಕೊಂಡಿದ್ದನು> ಹೊದ್ದ್ಕಂಡಿದಾ.

೧೦. ಹ್ರಸ್ವದೀರ್ಘಪ್ಲುತಗಳು: ಕೆಲವು ಸ್ವರಗಳನ್ನು ತ್ರಿಮಾತ್ರಿಕವಾಗಿ ಉಚ್ಚರಿಸುವುದುಂಟು. ಉದಾ: ರಾಽಽತ್ರಿಗೆ.

೧೧. ಆಘಾತಗಳು ಇವೆ. ಉದಾ: ನ್ನಾಂದ. ನ್ನಿಂದ. ಮಾತಿಟ್ಟ ಹೀಂಗೆ

೧೨. ವಿರಾಮ ಘಟಕಗಳು: ಪ್ರಮಾಣಬದ್ಧ ವಾಕ್ಯಗಳಲ್ಲಿಯಂತೆ.
ಉದಾ: ನ್ನಾಂದ ಶಕ್ತಿ ಹೆಚ್ಚ್ಚಿ | ನ್ನಿಂದ ಶಕ್ತಿ ಹೆಚ್ಚ್ಚಿ |
ಎಂದಿ ವಾದಾ ಮಾಡತ್ತಿರು ||
ಆಗೊಬ್ಬಾ | ಹಾದಿಮ್ಯಾನ್ | ಹೊಗಾಂವಾ | ಆ ಬದಿಗ್ಬಂದಾ |

೧೩. ಸ್ವರಗಳ ವಿರಳತೆ: ಕೆಟ್ಟಿಗಳ ಮಾತಿನಲ್ಲಿ ಸ್ವರಗಳ ವಿರಳತೆಗಳಿವೆ. ಗಾಳಿ ಸೂರ್ಯ ಎಯ್ದುಜನ ನ್ನಾಂದ ಶಕ್ತಿ ಹೆಚ್ಚ್ಚಿ ನೀಂದ ಶಕ್ತಿ ಹೆಚ್ಚ್ಚಿ ಎಂದಿ ವಾದ್ಮಾಡತ್ತಿರು.

೧೪. ಸ್ವರಗಳ ಅಲ್ಪಮಾತ್ರ ಹಾಗೂ ವ್ಯಂಜನಗಳ ಅಸ್ಪಷ್ಟ ಉಚ್ಚಾರ ಇವೆ.
ಉದಾ: ವಾದ್ಮಾಡತ್ತಿರು> ವಾದ್ಮಾಡ್ತಿರು. ಇದರಲ್ಲಿ 'ಉ' ಎಂಬ ಸ್ವರವೂ 'ಡ' ಎಂಬ ವ್ಯಂಜನವೂ ಅನುಕ್ರಮವಾಗಿ ಅಲ್ಪಮಾತ್ರೆಯಾಗಿ ಹಾಗೂ ಅಸ್ಪಷ್ಟವಾಗಿ ಉಚ್ಚರಿಸಲ್ಪಟ್ಟಿವೆ.

೧೫. ಶಬ್ದಗಳ ವರ್ಗೀಕರಣ: ಸಂಸ್ಕೃತ ಸೂರ್ಯ, ಶಕ್ತಿ, ವಾದ, ಯತ್ನ ಎಂಬ ಶಬ್ದಗಳು ಇಲ್ಲಿ ಕಂಡುಬಂದರೂ, ಕೆಲವು ಅಚ್ಚ ಕನ್ನಡ ಶಬ್ದಗಳೂ ಉಪಯೋಗಿಸಲ್ಪಟ್ಟಿವೆ. ಭೂತಕೃದ್ಧಾಚಕಗಳು ಇಕಾರಾಂತವಾಗಿವೆ.

ಎಂದು> ಎಂದಿ. ಕೊಂಡು> ಕೊಂಡಿ. ಅಲ್ಲದೆ ನ್ನಾಂದ, ತಾಂದ ನ್ನಿಂದ, ಫರಮ್ (ಬೆಚ್ಚಗಿನ) ಆಯೇರಿಗೆ (ಕಡೆಗೆ) ಎಂಬ ಶಬ್ದಗಳು ಗಮನಾರ್ಹವಾಗಿವೆ.

ಗೋಕರ್ಣ ಕೆಟ್ಟಿಗಳ ಮನೆ ಮಾತುಗಳು

ಗೋಕರ್ಣವು ಕೆಟ್ಟಿಗಳು ವಾಸಿಸುವ ಇನ್ನೊಂದು ಕೇಂದ್ರ. ಅದು ಕುಮುಠೆಯಿಂದ ೧೮ ಮೈಲುಗಳ ಮೇಲೆ ಇರುವುದು. ಅಲ್ಲಿ ಹೆಚ್ಚಿನ ವ್ಯಕರೂ ವಾಸಿಸುವರು. ಅದರಿಂದ ಗೋಕರ್ಣ ಕೆಟ್ಟಿಗಳ ಮಾತಿನಲ್ಲಿ ಹೆಚ್ಚು ಸುಸಂಸ್ಕೃತ ಶಬ್ದಗಳು ಇವೆ. ಅವರ ಮನೆಮಾತಿನಲ್ಲಿ ಸೂರ್ಯ ಹಾಗೂ ಗಾಳಿ ಎಂಬ ಕಥೆಯು ಕೆಳಗಿನಂತೆ ಇದೆ.

೧. ವಾಯು ಸೂರ್ಯ ಇಬ್ಬರೂ ನನ್ನ ಶಕ್ತಿ ಹೆಚ್ಚ್ಚೀ,
೨. ನಿನ್ನ ಶಕ್ತಿ ಹೆಚ್ಚ್ಚೀ ಎಂದ ವಾದ ಮಾಡ್ತಿದ್ರು.
೩. ಆಗೊಬ್ಬ ಪ್ರಯಾಣಿಕ ಆ ಕಡೆಗೆ ಬಂದ. ಅವ
೪. ಬೆಚ್ಚ್ಗೆ ಕಂಬ್ಳಿ ಮುಚ್ಕೊಂಡಿದ್ದ.
೫. ಆ ಕಂಬ್ಳಿಯನ್ನು ಯಾರ್ಕೊಡ್ದು ಅಂವ್ನ ಕೈಯ್ನಿ
೬. ಬಿಚ್ಚಿ ಹಾಕ್ಸೆತ್ತಾರೋ ಅಂವ್ನ ಶಕ್ತಿಯೇ ಹೆಚ್ಚು ಎಂದು
೭. ತಿಳಿಬೇಕು ಹೀಗೆಂದು ಅವ್ರು ಒಪ್ಪಂದ
೮. ಮಾಡ್ಕೊಂಡ್ರು. ನೊದ್ಲು ವಾಯುವು ತನ್ನ ಶಕ್ತಿಯನ್ನೆಲ್ಲ
೯. ಊದಿದ; ಅದ್ರೆ ಅಂವ ಊದಿದಷ್ಟೂ
೧೦. ಆ ಪ್ರಯಾಣಿಕ ಕಂಬ್ಳಿಯನ್ನು ಇನ್ನಿಷ್ಟು
೧೧. ಬಿಗಿಯಾಗಿ ಎಳೆದುಕೊಂಡ. ಕಡೆಗೆ
೧೨. ವಾಯು ಪ್ರಯತ್ನ ಕೈಬಿಟ್ಟ. ಆ ಮೇಲೆ ಸೂರ್ಯ
೧೩. ಕಿರಣಗಳನ್ನು ಬೀರುತ್ತಾ ಬಂದ. ಬಿಸಿಲಿನ ಜಳಕ್ಕೆ
೧೪. ಪ್ರಯಾಣಿಕ ಕಂಬ್ಳಿ ತಾನೇ ಬಿಚ್ಚಿಹಾಕಿದ.
೧೫. ಹೀಗಾಗಿ ತನ್ನ ಶಕ್ತಿಗಿಂತ ಸೂರ್ಯನ
೧೬. ಶಕ್ತಿಯೇ ಹೆಚ್ಚು ಎಂದು ವಾಯು ಒಪ್ಪಿಕೊಂಡ.

(ಕಥೆಯನ್ನು ಹೇಳಿದವನು: ನಾ. ಮುಂ. ಶೆಟ್ಟಿ, ಗೋಕರ್ಣ ತಾಲ್ಲೂಕು ಕುಮಟಾ)

ಮೇಲಿನ ಕಥೆಯಲ್ಲಿ ವಾಯು ಸೂರ್ಯ ಎಂಬ ಸಂಸ್ಕೃತ ಶಬ್ದಗಳಲ್ಲದೆ ಪ್ರಯಾಣಿಕ ಎಂಬ ಸಂಸ್ಕೃತ ಶಬ್ದವೂ ಉಪಯೋಗಿಸಲ್ಪಟ್ಟಿವೆ. ಉಳಿದ ವಾಕ್ಯಗಳು ಸ್ಪಷ್ಟವಾಗಿವೆ. ಅರ್ಥನಿವರಣೆಯ ಅವಶ್ಯಕತೆ ಇಲ್ಲ.

ಗುಡೇ ಅಂಗಡಿ ಶೆಟ್ಟಿಗಳ ಮನೆಮಾತುಗಳು

ಶೆಟ್ಟಿಗಳಲ್ಲಿ ಗಾಣಿಗ ಶೆಟ್ಟಿಗಳೆಂಬ ಒಂದು ಉಪ ಪಂಗಡವಿದೆ. ಗಾಣಿಗ ಶೆಟ್ಟಿಗಳ ಒಂದು ಪಂಗಡವು ಗುಡೇ ಅಂಗಡಿ ಎಂಬ ಗ್ರಾಮದಲ್ಲಿ ವಾಸಿಸುವುದು. ಅದರ ಮನೆಮಾತುಗಳನ್ನು ಸಂಗ್ರಹಿಸಿದೆ. ಈ ಗ್ರಾಮವು ಕುಮುಠೆಯಿಂದ ವಾಯವ್ಯಕ್ಕೆ ನಾಲ್ಕು ಮೈಲುಗಳ ಮೇಲೆ ಇದೆ.

೧. ವಾಯು ಸೂರ್ಯ ಇಬ್ರೂ ನನ್ ಶಕ್ತಿ ಹೆಚ್ಚಿ
೨. ನಿನ್ ಶಕ್ತಿ ಹೆಚ್ಚೋ ಎಂದು ವಾದಾ ಮಾಡ್ತಾ ಇದ್ರು.
೩. ಆಗೊಬ್ಬ ಪ್ರಯಾಣಿಕ-ಆ ಕಡೆ ಬಂದಾ. ಆವ
೪. ಬೆಚ್ಚಿ ಕಂಬಿ ಮುಚ್ಕೊಂಡಿದ್ದ.
೫. ಆ ಕಂಬಿಯ ಯಾರ್ ಅನ್ನ ಕೈಲಿ
೬. ಬಿಚ್ಚಿ ಹಾಕ್ಸತ್ತೋ ಅವನ ಶಕ್ತಿಯೇ ಹೆಚ್ಚು ಎಂದು
೭. ತೆಗಬೇಕು ಹೀಗೇಲಿ, ಅವ್ರು ಒಪ್ಪಂದ
೮. ಮಾಡ್ಕೊಂಡ್ರು. ಹೊದಲು ವಾಯು ತನ್ನ ಶಕ್ತಿಯೆಲ್ಲಾ
೯. ಹಾಕಿಊದಿದಾ; ಆದರೆ ಆವ ಊದಿದ ಹಾಂಗೆ
೧೦. ಆ ದಾರಿಕಾರ ಕಂಬ್ಳಿಯನ್ನು ಪುತ್ತಿಹ್ಹೂ
೧೧. ಬಿಗಿಯಾಗಿ ಮೈಬೇಲೆ ಎಳಕೊಂಡ. ಕಡೆಗೆ
೧೨. ವಾಯು ಪ್ರಯತ್ನವನ್ನು ಬಿಟ್ಟು ಬಿಟ್ಟ. ಆ ಮೇಲೆ ಸೂರ್ಯ
೧೩. ಕೆರಣ ಬಿಡತಾ ಬಂದಾ. ಬಿಸಿಲಿನ ಹೊಡೆತಕ್ಕೆ
೧೪. ದಾರಿಕಾರ ಕಂಬ್ಳಿಯನ್ನು ತಾನೇ ಬಚ್ಚ ಹಾಕ್ಬಿಟ್ಟ..
೧೫. ಹೀಗಾಗಿ ತನ್ನ ಶಕ್ತಿಗಿಂತ ಸೂರ್ಯನ
೧೬. ಶಕ್ತಿಯೇ ಹೆಚ್ಚು ಎಂದು ಒಪ್ಪಂಬೇಕಾಯ್ತು.

(ಕಥೆಯನ್ನು ಹೇಳಿದವನು ಗ. ಜ. ಶಿಟ್ಟಿ, ಗುಡೇಅಂಗಡಿ
ತಾಲೂಕು: ಕುಮಟಾ.)

ಇಲ್ಲಿಯೂ ವಾಯು, ಸೂರ್ಯ, ಪ್ರಯಾಣಿಕ ಎಂಬ ಸಂಸ್ಕೃತ ಶಬ್ದಗಳು ಉಪಯೋಗಿಸಲ್ಪಟ್ಟಿವೆ. ವಾಕ್ಯಗಳು ಸ್ಪಷ್ಟವಾಗಿವೆ. ಅರ್ಥ-ವಿವರಣೆಗಳು ಅವಶ್ಯಕತೆ ಇಲ್ಲ.

ವೈಶಿಷ್ಟ್ಯಗಳ ವರ್ಗೀಕರಣ:

ಸ್ಥಳಗತ ವೈಶಿಷ್ಟ್ಯಗಳು: ಅಂದ ಇಂಥ ಮುಂತಾದುವು.

ಸಂಪರ್ಕಜನ್ಯ : ಕೊಂಕಣಿ ಜನರ ಸಂಪರ್ಕದಿಂದ ಕೆನ್ನಡ ಶಬ್ದಗಳನ್ನು ಕೂಡ ಅಂಕೋಲೆಯ ಶಿಟ್ಟಿಗಳು ಕೊಂಕಣಿಯ ಶಬ್ದಗಳ ಹಾಗೆ ಉಚ್ಚರಿಸುವರು. ಉದಾ: ನ್ನಾಂದ್, ನ್ನೀಂದ, ಮಾತೀಟ, ಹೀಂಗೆ ಮುಂತಾದುವು. ಕೊಂಕಣಿ ಜನರು (ಸಾರಸ್ವತರು) ಹಾಡಿದ ಹಾಗೆ ಕೊಂಕಣಿ ಶಬ್ದಗಳನ್ನು ಉಚ್ಚರಿಸುವರು ಎಂಬುದನ್ನು ಇಲ್ಲಿ ಗಮನಿಸಬೇಕು.

ಪಂಗಡಗತ:

i "ಇ" ಪ್ರತ್ಯಯಾಂತ ಭೂತ ಕೃದ್ಪ್ರಯೋಗಗಳು:
ಉದಾ: ಎಂದಿ, ಕೊಂಡಿ, ಮುಂತಾದುವು.
ii "ಇ" ಪ್ರತ್ಯಯಾಂತ ಸಪ್ತಮೀ ರೂಪಗಳು: ಉದಾ: ಕೈಲಿ, ಕೈಯಲ್ಲಿ.
iii "ಕ" ಪ್ರತ್ಯಯಾಂತ ಚತುರ್ಥೀ ರೂಪಗಳು : ಉದಾ : ಬರೋಕ, ಹೋಗೋಕ;

ಶಿಟ್ಟಿಗಳ ಮಾತಿನ ವೈಶಿಷ್ಟ್ಯಗಳಿಂದ ಕೂಡಿದ ಒಂದು ಕಥೆ.

ಶಿಟ್ಟಿಗಳಲ್ಲಿ ಜನಪ್ರಿಯವಾದ ಒಂದು ಕಥೆಯನ್ನು ಹೇಳಿಸಿ ಸಂಗ್ರಹಿಸಲಾಗಿದೆ. ಅದು ಇಂತಿದೆ.

ಕಾಂತಕ್ಕ-ಗುಬ್ಬಕ್ಕ

ಒಂದೂರಲಿ ಕಾಂತಕ್ಕ ಗುಬ್ಬಕ್ಕ ಇದ್ದಿರು. ಹಾಳ್ಕೆ ಶೆಳುಕ ಹೋಗಿರು ಕಾಂತಕ್ಕ ಮುಳ್ಳಿಮ್ಯಾನ್ ಒಣಗಸ್ತು;ಗುಬ್ಬಕ್ಕ ಕಲ್ಲಮ್ಯಾನ ಒಣಗಸ್ತು. ಕಾಡಗೆ ದೊಡ್ಡ ಮಳೆ ಬಂತು. ಗುಬ್ಬಕ್ಕ ವಸ್ತ್ರ ತೆಕ್ಕಂಡಿ ಮನೆಗ ಒಡ್ತು ಕಾದಾ ಹಾಕಣ್ತ.ಕಾಂತಕ್ಕ ಆಚೇಗ ಫರ್ಕ ಇಚೆಗೆ ಫರ್ಕ ಮಾಡ್ತ. ಸಣ್ಣದು ಹರ್ಸದ ವಸ್ತ್ರ ತೆಕ್ಕಂಡಿ. ಗುಬ್ಬಕ್ಕ ಇದ್ದಲಿ ಹೊಯ್ತು ಗುಬ್ಬಕ್ಕ, ಗುಬ್ಬಕ್ಕ ಮಾತ್ರ ಕತ್ತೆಗೆ ಆಂತು, ನಾಂವ ಗಂಡಗೆ ಮೀಸ್ಕಂಡಿ ಉದ್ವತೆ ಆಂದಿ ಗುಬ್ಬಕ್ಕ ಹೇಳ್ತು. ಮಾತ ಮಾತ್ರ ಕಾತ್ತೆಗೆ ಆಂದಿ ಕಾಂತಕ್ಕ ಹೆಳ್ತು. ಗುಬ್ಬಕ್ಕ ತಾಂದ ಗಂಡಗೆ ಮನಗಸಕಂಡಿ ಕಾತ್ತೆಗಿತು.ಗುಬ್ಬಕ್ಕ ನಾ ಎಲ್ಲಿ ಮಲ್ಗಲಿ ಆಂತು ಒಲೆ ಸತೀಗ ಮನಿಕೊ ಆಂತು. ನಾ ಸುಟ್ಟು ಹೊಸ್ತೆ ಆಂತು. ತೊಟ್ಲಲಿ ಮನಿಕೊ ಮೂರ ಮೊಟ್ಟೆ ಇಕ್ಕೆ. ತಿಂಬೆಡಾ—ಅಂದಿ ಕಾಂತಕ್ಕಾಗ ಹೇಳ್ತು. ರಾತ್ರಿಗೆ ಕಾಂತಕ್ಕ ಕಾಟ ಕಾಟಮ್ಮಾ ಮಾಡ್ತು.ಗುಬ್ಬಕ್ಕ ಅದೇನ ತಿಂಬೆ ಎಂದ ಕೇಳ್ತು. ಏನಿಲ್ಲ ನಾಂದ ಗಂಡ ತೊಂಟಕೆ ಹೋಗಿ ಮೂರ ಆಡ್ಕೆ ತಂದಿದಾ ತಿಂದೆ ಆಂತು. ಬೆಳ್ಳಾಗ ಎದ್ದಿ ಗುಬ್ಬಕ ತೊಟ್ಲು ನೋಡ್ತಿ. ಮೊಟ್ಟೆ ಇಲ್ಲಾ. ಮೊಟ್ಟೆ ಯಾರ ತಿಂದ್ರೆ ಎಂದಿ ಗುಬ್ಬಕ್ಕ ಕೇಳ್ತು. ನಾ ತಿಂದ್ಲಾ ನಾಂಗುತ್ತೇ ಇಲ್ಲಾ ಅಂದಿ ಕಾಂತಕ್ಕ ಹೇಳ್ತು. ಗುಬ್ಬಕ್ಕಗೆ ಶಿಟ್ಟಿಂತು. ಬೆಂಕಿ ಕೆಂಡ ತಾಂಡ್ತು ಕಾಂತಕ್ಕನ ಬಾಯ್ಲು ಸಕ್ಕೆ ಹಾಕ್ತೆ ಎಂದ್ಬೇಳಿ ಬಿಸಿ, ಬಿಸಿ, ಕೆಂಡ ಬಾಯ್ಲ ಹೊತಾಕ ಬಿಡ್ತು.

ಕಾಂತಕ್ಕ ಗೊಳ್, ಗೊಳ್, ಮಾಡ್ತಿ ಹೆಳ್ಳದಲ್ ಬಾಯಜ್ಜ್ಟ ಬಾಂವೆಲ್ ಬಾಯಜ್ಜ್ಟ ಕಾಡೆಗ ಸತ್ತೋಯ್ತು. ಸುಳ್ಳು ಹೇಳ್ದ್ರೆ ಹೀಂಗಾಗ್ತಿ.

(ಕಥೆಯನ್ನು ಹೇಳಿದವನು: ಲ. ಮಂ. ಶಿಟ್ಟಿ ಅಂಕೋಲಾ
ತಾಲೂಕ: ಅಂಕೋಲಾ.)

ಕಠಿಣ ಶಬ್ದಗಳ ಅರ್ಥ: ಕತ್ತೆಗೆ-ಕದ ತೆಗೆ.ಸತೀಗ=ಸವೀಸ ಇಕ್ಕೆ=ಇಟ್ಟಿದ್ದೇನೆ. ನೊಡ್ತಿ=ನೋಡುತ್ತಾಳೆ. ತಿಂದ್ರೆ=ತಿಂದರು. ಬಾಯಜ್ಜ್ಟ=ಮುಳುಗಿ.
ಉಳಿದ ಶಬ್ದಗಳು ಸರಳವಾಗಿವೆ. ಅವುಗಳ ಅರ್ಥವನ್ನು ಕೊಡು. ವಮು ಅನವಶ್ಯ.

ಜಯಂತಿ
ಮಾಸ ಪತ್ರಿಕೆಗೆ
ಇಂದೇ
ಚಂದಾದಾರರಾಗಿರಿ

ವ್ರತ ಕಥಾ

[ಸಣ್ಣ ಕಥೆ]

ಲೇ. 'ಅಶ್ವತ್ಥ' ಬನಾರಸ

ದೈವಪ್ರಕೋಪವೆಂದು ತಿಳಿಯಲಾಗುವ ಮಹಾಯುದ್ಧ, ಕ್ಷಾಮ, ಡಾಮರ ಮೊದಲಾದ ಉಪದ್ರವಗಳು, ದೇಶದಲ್ಲಿ ಹಲವರ ಬಾಳನ್ನು ಹುಡಿಗೂಡಿಸಿದರೆ, ಕೆಲವರ ಬಾಳನ್ನು ವೈಭವದ ಶಿಖರಕ್ಕೆ ಏರಿಸುವುವು. ಧನಕೋಟಿ ಶೆಟ್ಟಿಯವರೂ ಹಾಗೆ ವೈಭವಶಿಖರವಲ್ಲಿ ಕುಳಿತವರು!

— 'ಅಥ ಪೂಜಾ ವಿಧಿಃ' —

'ಆಗಮಾರ್ಥಂತು ದೇವಾನಾಂ.....ಇತಿ ಘಂಟಾನಾದಂ ಕೃತ್ವಾ....ಸಕಲ ಮನೋಭೀಷ್ಟ ಫಲ ಸಿಧ್ಯರ್ಥಂ ಶ್ರೀಸತ್ಯನಾರಾಯಣ ವ್ರತ....'

ಸುಬ್ಬಾಭಟ್ಟರು ಬೆಳ್ಳಿಯ ಗಂಟೆಯನ್ನು ಬಾರಿಸಿದರು; 'ಸ್ವರ್ಗಧಾಮ'ದ ಸರ್ವಾಲಂಕೃತ ವಿಶಾಲ ಹಜಾರದಲ್ಲಿ, ಕಿಕ್ಕಿರಿದು ನೆರೆದಿದ್ದ ಭಕ್ತವೃಂದವು ಸ್ತಬ್ಧವಾಯಿತು; ದಿವ್ಯ ವಸ್ತ್ರಾಭರಣ ಭೂಷಿತರಾದ ವ್ರತಸ್ಥ ಶ್ರೀ ಧನಕೋಟಿಯವರು ಪೂಜಾವಿಧಿಯಲ್ಲಿ ತಲ್ಲೀನರಾದರು.

ಒಳಗೆ ಸ್ಥಳನಿಲ್ಲದಿದ್ದು ಸತ್ಯನಾರಾಯಣನೂ—ನನ್ನ ಸ್ನೇಹಿತನಾನೂ ಕೈಸಾಲೆಯಲ್ಲೇ ಕುಳಿತು, ಕಿಟಕಿಯ ಮೂಲಕ ವ್ರತವೈಭವವನ್ನು ನೋಡುತ್ತಿದ್ದೆವು. 'ಮಂಟಪದ ಮಧ್ಯೆ ಕಲಶ ಸ್ಥಾಪನಸ್ಥಲೇ ತಂಡುಲಂ ಸ್ಥಾಪಯೇತ್ | ತದುಪರಿ....ತದಂತರಾಳ ಪಂಚ ಫಲ ಸ್ವರ್ಣ-ರಂಜಿತ-ವಿಷ್ಣು ಪ್ರತಿಮಂ ಗೋಧೂಮಧಾನ್ಯಂ ನಿಧಾಯ....'

ಪೂಜೆಯ ಜಗಲಿಯು ಮಧ್ಯದಲ್ಲಿ ಬೆಳ್ಳಿಯ ತಗಡಿನ ಮಂಟಪ, ಚಿನ್ನದ ಮುಲಾಮಿನ ತೋರಣದಿಂದ ಶೋಭಿಸುತ್ತಿತ್ತು. ಮಂತ್ರದಂತೆಯೇ ಮಹಾಕಳಶ ಸ್ಥಾಪನೆ. 'ಅಸು ನೀತೇತಿ ಮಂತ್ರೇಣ ಘ್ರಾಣಪ್ರತಿಷ್ಠಾಪನಂ |....ಅಥ ದ್ವಾರಪಾಲಕ ಪೂಜಾ ...'

ಪೂಜೆ ನಡೆಯುತ್ತಿತ್ತು.

ಭಟ್ಟರ ನಿರಂತರ ಮಂತ್ರಪಠಣ, ಧನಕೋಟಿಯವರ ಪತ್ರ-ಪುಷ್ಪಾರ್ಪಣ.

ತಟ್ಟನೆ ನನ್ನ ಗಮನ ಹಜಾರದಿಂದ ಬೀದಿಯ ಬಾಗಿಲಿಗೆ ಹೋಯಿತು. ಹೊರಕಲು ಅಂಗಿಯ ಹುಡುಗ ಅಲ್ಲಿ ಹಾಕಿದ್ದ ಪತ್ರಿಕೆಯನ್ನು, ಸತ್ಯನಾರಾಯಣ ತೆಗೆದುಕೊಂಡು ಬಂದು ಕುಳಿತ. ನಾನೂ ಅವನ ಭುಜದ ಮೇಲಿನಿಂದ ನೋಡಿದೆ.

'ವಿಜಯಾ ನಾಜಿಸೇನೆ ಫ್ರಾನ್ಸ್‌ಗೆ ನುಗ್ಗಿತು!'

ದೊಡ್ಡ ತಲೆಬರಹ.

'ಹಿಟ್ಲರ್‌ನ ಯಾಂತ್ರಿಕ ಮಹಾಸೇನಾಸಮೂಹ ಅಸಂಖ್ಯಾತ ಬಾಂಬರ್‌ಗಳ ಛತ್ರಿಯ ಕೆಳಗೆ ಅತಿ ರಭಸದಿಂದ ತಡೆಬಡೆಯಿಲ್ಲದೆ ನಡೆದೆಡೆಯೆಲ್ಲ ಸರ್ವನಾಶವನ್ನುಂಟುಮಾಡುತ್ತ, ಪ್ಯಾಗಿನೋ ಸಾಲನ್ನು ಬಳಸಿಕೊಂಡು, ಫ್ರಾನ್ಸ್‌ನ್ನು ಆಕ್ರಮಿಸುತ್ತಿದೆ. ಅಲ್ಲಿಯ ಜನರಲ್ಲಿ ಹಾಹಾಕಾರವೆದ್ದಿದೆ. ಮನೆ-ಮಠ, ಆಸ್ತಿ-ಪಾಸ್ತಿಗಳು ಧ್ವಂಸವಾಗಿ, ತಂದೆ ತಾಯಿ, ಬಂಧು ಬಳಗ, ಮಕ್ಕಳು ಮರಿಗಳು ಅಳಿದು, ಲಕ್ಷಾಂತರ ನಿರಾಶ್ರಿತರು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದಾರೆ. ಸ್ಥಿತಿ ಭೀಕರವಾಗಿದೆ; ಕರುಣಾಜನಕವಾಗಿದೆ....'

ಮತ್ತೆ ಗಂಟೆಯ ಶಬ್ದ! ಬೆಚ್ಚಿ, ನನ್ನ ಗಮನವನ್ನು ಪೂಜೆಯಿಂದ ತೆಗೆದ ಅಪರಾಧಕ್ಕಾಗಿ ಕೆನ್ನೆಗೆ ಬಡಿದುಕೊಂಡೆ.

ಪೂಜೆ ನಡೆಯುತ್ತಿತ್ತು.

'ಇತಿ ಸಂಚಾಮೃತಸ್ನಾನಂ....ಆಪೋಹಿಷ್ಠಾ....ಓಂ ಸಹಸ್ರ ಶೀರ್ಷಾ ಪುರುಷಃ....ರುದ್ರೋದಕಸ್ನಾನಂ....ಇದಂ ವಸ್ತ್ರಾಣಿ.... ಇತಿ ಯಜ್ಞೋಪವೀತಂ... ಇತಿ ಗಂಧಂ....ಮಲ್ಲಿಕಾದಿ ಸುಗಂಧೀನಿ ಮಾಲತ್ಯಾದೀನಿ ನೈಸರ್ಗಿಕೋ....ಪುಷ್ಪಾಣಿ ಪ್ರತಿಗೃಹ್ಯತಾಂ....ಇತಿ ಅಕ್ಷತಾಂ ...ಹರಿದ್ರಾ ಕುಂಕುಮ ಮಾಂಗಲ್ಯದ್ರವ್ಯಾಣಿ...ಸಮರ್ಪಯಾಮಿ....ಅಥಾಂಗ ಪೂಜಾ....'

ಪತ್ರಿಕೆಯ ಹಾಳೆ ತಿರುವಿದ ಶಬ್ದ. ಸತ್ಯನಾರಾಯಣ ನಾಲ್ಕನೆಯ ಪುಟವನ್ನು ನೋಡುತ್ತಿದ್ದ. 'ರಾಟರ್‌ಡಂ ನಗರ ಪುಡಿ ಪುಡಿಯಾದ ಪ್ರಕರಣದ ಹೆಚ್ಚು ವಿವರಗಳು....ನಗರದ ನಾಶಕ್ಕೆ ಬೆಲ್ಜಿಯಂ ದೇಶ ನಾಜೀಸೈನ್ಯವನ್ನು ಪ್ರತಿಭಟಿಸಿದ್ದೇ ಮುಖ್ಯಕಾರಣವೆಂದು ಊಹಿಸಲಾಗಿದೆ....ಊರಿನಲ್ಲಿ ಯಾವ ಕಟ್ಟಡಗಳೂ ನಿಂತಿಲ್ಲ; ಬರಿ ಕಲ್ಲು ಇಟ್ಟಿಗೆ ಮಣ್ಣುಗಳ ಗುಡ್ಡೆಗಳಾಗಿವೆ. ಈಗ ಇರುವುದು ನಗರವಲ್ಲ; ಅದರ ಗೋರಿ....ಜನರು ಹಾಸಿಗೆಗಳಲ್ಲೇ, ಊಟದ ಮೇಜಿನ ಮುಂದೇ....ಹೀಗೆ ಇದ್ದಿದ್ದಂತೆಯೆ ಹತರಾಗಿದ್ದಾರೆ—ಈ ಮರಣ ದಾಳಿ ಅಷ್ಟು ಅನಿರೀಕ್ಷಿತ, ಭಯಂಕರ....ಕಳೆದುಳಿದವರ ಗೋಳನ್ನಂತೂ ಹೇಳುವಂತಿಲ್ಲ....ಹೃದಯವಿದ್ರಾವಕವಾದ ವೈಶ್ಯ ಸನ್ನಿವೇಶ....ಸಣ್ಣ ಸಹಾಯ ಬೆಲ್ಜಿಯಂ, ಈ ರಣಘೋರಿ ಜರ್ಮನಿಗೆ ಶರಣುಹೋದುದರಲ್ಲಿ ಆಶ್ಚರ್ಯವೇನಿಲ್ಲ; ಇನ್ನೇನನ್ನು ಮಾಡೀತು ಪಾಪ!....'

'ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ....' ಗಂಟೆ!

ಓಹೋ, ಪೂಜೆ ನಡೆಯುತ್ತಿತ್ತು ! ಮತ್ತೆ ಅಪರಾಧ ಮಾಡಿದೆ !....ಈ ಸತ್ಯ ನಾರಾಯಣನೇನೋ ಹಾಯಾಗಿ ಪತ್ರಿಕೆಯನ್ನೋದುತ್ತಿದ್ದ.

'ಸಾಜ್ಯಂತ್ರಿಪರ್ತಿ ಸಂಯುಕ್ತಂ....ಇತಿ ದೀಪಂ' ....ಘೃತ ಪಕ್ವ ಹವಿಷ್ಯಾನ್ನಂ ಪಾಯಸಂಚಶರ್ಕರಂ। ನಾನಾವಿಧಂಚ ನೈವೇದ್ಯಂ ಹೇ ಸ್ವಾಮಿನ್ ಪ್ರತಿಗೃಹ್ಯತಾಂ। ಸರ್ವಪಾಪಹರಂ ನಾನಾ ಫಲ ಸುಪಕ್ವಿತಂ। ಮಯಾಹೃತಾನಿ ಭಕ್ತ್ಯಾನಿ....ಇತಿ ಸಮಸ್ತ ಫಲಂ ಸಮರ್ಪಯಾಮಿ....ಹಸ್ತ ಪ್ರಕ್ಷಾಳನಂ, ಪಾದ ಪ್ರಕ್ಷಾಳನಂಚ....ಆಚಮನೀಯಂಚ....ಲವಂಗ ಕರ್ಪೂರ ಸಂಯುಕ್ತಂ ತಾಂಬೂಲಂ ಸುರಪೂಜಿತಂ....ಸುವರ್ಣಪುಷ್ಪೇತಿ ದಕ್ಷಿಣಾಂ....ಇತಿ ನೀರಾಜನಂ....ಇತಿ ಪ್ರದಕ್ಷಿಣಾಂ'

ಧನಕೋಟಿಯವರು ಸಾಂಗತವಾಗಿ ಎಲ್ಲವನ್ನೂ ನಡೆಸಿದರು. ಜಗಲಿಯ ಮೇಲಿದ್ದ ತುಂಬಿದ ಬೆಳ್ಳಿತಟ್ಟೆಗಳಲ್ಲಿ ಯಾವುದಕ್ಕೂ ಕೊರತೆಯಿರಲಿಲ್ಲ; ಧನಕೋಟಿಯವರ ಭಕ್ತಿ-ಉತ್ಸಾಹಗಳು ಮೇರೆಗಾಣದುವು.

'ರಾಜಾಧಿರಾಜಾಯ....'

ಮಹಾ ಮಂಗಳಾರತಿಯಾಯಿತು; ಭಟ್ಟನು ಅದನ್ನು ತಂದು ನಮ್ಮ ಕಡೆಗೂ ಹಿಡಿದರು, ಕಣ್ಣಿಗೆ ಒತ್ತಿಕೊಂಡೆವು. ಪುಷ್ಪಾಕ್ಷತೆಯು ವಿನಿಯೋಗವಾಯಿತು.

'ಇತಿ ಮಂತ್ರ ಪುಷ್ಪಂ....'

ಪುಷ್ಪಾಕ್ಷತೆಯನ್ನು ಸಮರ್ಪಿಸಿ, ಇವ್ವಲ್ಲೀ ಸುತ್ತಿ ನಮಸ್ಕರಿಸಿ ಕಥಾಶ್ರವಣಕ್ಕೆ ಕುಳಿತೆವು.

— 'ಅಥ ಕಥಾ' —

"ಸತ್ರಿಕೇಲಿ ಬರೆದಿದೆ, ನಿತ್ಯರಾಷ್ಟ್ರಗಳ ಸಿದ್ಧತೆ ಏನೇನೂ ಇಲ್ಲವಂತೆ; ಕಾಲ ಬಹಳ ಬೇಕಂತೆ; ಅಂದರೆ ಯುದ್ಧ ಬಹಳ. ದೀರ್ಘವಾಗಬಹುದಂತೆ. ಇನ್ನೂ ಎಲ್ಲೆಲ್ಲಿಗೆ ಬೇಕಾದರೂ ಹರಡಬಹುದು ಅನ್ನೋ ಹಾಗಿದೆಯಂತೆ... ಹುಂ....ಪದಾರ್ಥಗಳ ಬೆಲೆ ಸುರುಸುರುಬತ್ತಿಯ ಹಾಗೆ ಏರುತ್ತಿದೆ, ಪಪಸ-ಧಾನ್ಯದ ಸಾಗಾಣಿಕೆ ನಿಲ್ಲುತ್ತ ಬಂದಿದೆ. ಅಲ್ಲಲ್ಲಿ ಬೆಳೆದ ಪದಾರ್ಥಗಳೂ ಬೇಗ ಬೇಗ ಮರೆಯಾಗ ತೊಡಗಿವೆ. ಎಲ್ಲೆಲ್ಲೂ ಅಭಾವ ತೋರುತ್ತಿದೆ. ಕ್ಷಾಮಡಾಮರದ ಸೂಚನೆ ಸ್ಪಷ್ಟವಾಗಿದೆ. ನೋವು ಸಾವುಗಳು ಸನ್ನಿಹಿತವಾಗಿವೆ. ಸರಕಾರದೋರು ಹೆಚ್ಚು ಎಚ್ಚರಿಕೆ ವಹಿಸಬೇಕು ಅಂತ ಏನೇನೋ ಬಹಳ ವರದಿ ಬಂದಿದೆ...." ಪೂಚಿಗೂ ಕಥೆಗೂ ಮಧ್ಯದ ಅಂತರದಲ್ಲಿ ಸತ್ಯನಾರಾಯಣ ಹೇಳುತ್ತಿದ್ದ.

'ಒಂದಾನೊಂದು ಸಮಯದಲ್ಲಿ ನೈಮಿಶಾರಣ್ಯದಲ್ಲಿರುವಂಥಾ.... ಶೌನಕಾದಿ ಸಮಸ್ತ ಋಷಿಗಳು ಪುರಾಣ ಹೇಳುವಂಥಾ ಯಾವ ಸೂತ ಪುರಾಣೀಕರ ಸನ್ನಿಧಿಕ್ಕೆ ಬರುವಂಥಾವರಾಗಿ ಪ್ರಶ್ನೆಮಾಡುವಂಥಾವರಾದರು....'

"ಹಂ! ಕಥೆ ಪ್ರಾರಂಭವಾಯ್ತು. ನಿನ್ನದನ್ನು ಸಾಕುಮಾಡು ಮಹಾರಾಯಾ !" ಸತ್ಯನಾರಾಯಣನನ್ನು ಬಾಯಿ ಮುಚ್ಚಿಸಿ ಕಥಾಶ್ರವಣಕ್ಕಿಳಿದೆ.

'ಭಗವಂತನಾದ ವಿಷ್ಣುವು ಹೇಳುತ್ತಾನೆ, ಎಲೈ ನಾರದರೆ, ಸ್ವರ್ಗ ಮತ್ತು ಮರ್ತ್ಯ ಈ ಲೋಕಂಗಳಲ್ಲಿ ಮಹಾಪುಣ್ಯಕರವಾಗಿಯೂ, ದುರ್ಲಭವಾಗಿಯೂ ಇರುವಂಥಾ ಒಂದಾನೊಂದು ವ್ರತವಿರುತ್ತದೆ. ಪರಂತು ಅದನ್ನು ನಾನು ಈ ಪ್ರಸ್ತುತದಲ್ಲಿ ನಿನ್ನ ಪ್ರೀತಿಗೋಸ್ಕರವೇ ಪ್ರಸಿದ್ಧಿ ಮಾಡುತ್ತೇನೆ. ಅದು ಯಂಥಾದ್ದೆಂದರೆ ಸತ್ಯನಾರಾಯಣ ದೇವತಾ ವ್ರತ. ಉತ್ತಮ ವಿಧಾನದಿಂದ ಮಾಡಿದಂಥಾವರಾದರೆ, ಮನುಷ್ಯರುಗಳು ಈ ಲೋಕದಲ್ಲಿ ಅಖಂಡ ಸುಖವನ್ನನುಭವಿಸಿದವರಾಗಿ, ಪರಲೋಕದಲ್ಲಿಯೂ ಕೂಡ ಮೋಕ್ಷ ಸುಖವನ್ನು ಹೊಂದುವಂಥಾವರಾಗುತ್ತಾರೆ....ಎಲೈ ಮುನಿಯೇ, ಈ ವ್ರತವು ದುಃಖ-ಶೋಕಾದಿಗಳನ್ನು ನಾಶಮಾಡುವಂಥಾದ್ದು, ಧನ-ಧಾನ್ಯಾದಿಗಳನ್ನು ವೃದ್ಧಿಪಡಿಸುವಂಥಾದ್ದು. ಇದೇ ಪ್ರಕಾರವೇ ಸೌಭಾಗ್ಯ ಸಂಪತ್ತು ಮೊದಲಾದ್ದನ್ನು ಕೊಡುವಂಥಾದ್ದೂ ಮತ್ತು ಸಮಸ್ತ ಕಾರ್ಯವನ್ನು ದಿಗ್ವಿಜಯ ಮಾಡತಕ್ಕಂಥಾದ್ದಾಗಿದೆ. ಮನುಷ್ಯನು ಶ್ರದ್ಧಾ-ಭಕ್ತಿಯುಕ್ತನಾಗಿ ಸಾಯಾಂಸ್ಕ ಪ್ರದೋಷಕಾಲದಲ್ಲಿ ಸತ್ಯನಾರಾಯಣ ದೇವರ ಪೂಜೆಯನ್ನು ಮಾಡಬೇಕು. ಭಕ್ತಿಯುಕ್ತರಾಗಿ ಉತ್ತಮವಾದಂಥಾ ಭಕ್ಷ್ಯಗಳನ್ನು ಮಾಡಿ, ನಾರಾಯಣನಿಗೋಸ್ಕರ ಸಮರ್ಪಣೆಯನ್ನು ಮಾಡಬೇಕು; ಅದು ಹ್ಯಾಗೆಂದರೆ, ಪಕ್ವವಾದ ಕದಳೀಫಲ, ಘೃತ ಕ್ಷೀರ, ಶರ್ಕರ ಗೋಧೂಪು ಸಿಷ್ಟ ಮೊದಲಾದವೆರೆ ತಂಡುಲದಲ್ಲಿ ರವೆ ತೆಗೆದುಕೊಳ್ಳಬೇಕು, ಶರ್ಕರ ಅಥವಾ ಗುಡ ಇವುಗಳಿಂದಲಾದರೂ ಸಕಲ ಭಕ್ಷ್ಯವನ್ನು ಪ್ರತ್ಯೇಕವಾಗಿ ಮಾಡಿ ಈಶ್ವರಾರ್ಪಣ ಮಾಡಬೇಕು....ಎಂಬುದಾಗಿ ಭಗವಂತನು ನಾರದಮುನಿಗೆ ಅನುಗ್ರಹ ಮಾಡಿದನೆಂಬಲ್ಲಿಗೆ ಶ್ರೀ ಸ್ಕಂದ ಪುರಾಣೋಕ್ತವಾದ ರೇವಾಖಂಡದೋಳ್ ಸತ್ಯನಾರಾಯಣ ವ್ರತಕಥೆಯ ಪ್ರಥಮೋಧ್ಯಾಯವು ಸಮಾಪ್ತವಾದುದು.'

"ಇಗೋ, ಇಲ್ಲಿ ನೋಡು !" ಸತ್ಯನಾರಾಯಣ ನನ್ನ ಭುಜವನ್ನು ಜಗ್ಗಿ ಗಮನವನ್ನೆಳೆದ.

'ಹಸಿವಿನಿಂದ ಸಾವು !' ಎಂದು ಸಣ್ಣ ತಲೆಬರಹ. ಕೆಳಗಿನ ಪಂಕ್ತಿಗಳ ಮೇಲೆ ಕಣ್ಣು ಹೊರಳಿತು.

'....ವ್ಯಾಪಾರಸ್ಥರ ಲಾಭಕೋರತನ ಮತ್ತು ಅಸಾಮಾಜಿಕ ವರ್ತನೆಯ ಪರಿಣಾಮವಾಗಿ,ನೈಸೂರು ಡಿಸ್ಟ್ರಿಕ್ಟ್‌ನಲ್ಲಿ ತೀವ್ರ ಆಹಾರ ಅಭಾವ ಉಂಟಾಗಿ,ಜನರು ಹಸಿವಿನಿಂದ ಸಾಯುತ್ತಿದ್ದಾರೆಂದು ಸುದ್ದಿ ಬಂದಿದೆ....ಸರಕಾರದವರು ಅಗತ್ಯವಾದ ಆಹಾರ ಪದಾರ್ಥಗಳ ಸಾಗಾಣಿಕೆ, ಶೇಖರಣೆ, ಹಂಚಿಕೆ ಇವುಗಳ ಬಗ್ಗೆ ಕೂಡಲೇ ಮುಂಜಾಗ್ರತೆಯನ್ನು ವಹಿಸದಿದ್ದರೆ, ದೇಶದಲ್ಲಿ ಪರಿಸ್ಥಿತಿಯು ಬಹಳ ಹದಗೆಟ್ಟು ಕೈಮೀರಿ ಹೋಗಬಹುದೆಂಬ ಭಯವು ತಲೆದೋರಿದೆ....' "ಎಲೈ ನಾರದರೆ...." ಕಥೆ ನಡೆಯುತ್ತಿತ್ತು. ಸತ್ಯನಾರಾಯಣನ ಕಡೆಗೆ ತಲೆಯಾತಿಸಿ, ಕಥಾಶ್ರವಣಕ್ಕೆ ತಿರುಗಿದೆ.

"ಪೂರ್ವದಲ್ಲಿ ಯಾರು ಯಾರು ಈ ವ್ರತವನ್ನು ಮಾಡಿದ್ದಾರೋ ಆ ಇತಿಹಾಸವನ್ನು ನಿನಗೆ ಹೇಳುವಂಥಾವರಾಗುತ್ತೇವೆ. ರಮ್ಯಕ ನಾಮಕನಾದ ಅತಿ ದರಿದ್ರನಾದ ಒಬ್ಬಾನೊಬ್ಬ ಬ್ರಾಹ್ಮಣನು; ಕಾಶೀ ಪಟ್ಟಣದಲ್ಲಿ ಇರುವಂಥಾವನಾಗಿದ್ದನು.... ?

ಈ ಕಥೆ ನನಗೆ ತಿಳಿದಿರಲಿಲ್ಲವೆ? ಭಟ್ಟರ ಓದಿಗಿಂತ ಮುಂದಾಗಿಯೇ ನನ್ನ ಮನಸ್ಸು ಪರಿಸುತ್ತಿತ್ತು. ಭಗವಂತ ವೃದ್ಧ ಬ್ರಾಹ್ಮಣ ರೂಪದಲ್ಲಿ ಕಾಣಿಸಿಕೊಂಡು, ಬಡಬ್ರಾಹ್ಮಣನ ದುಃಖವನ್ನು ವಿಚಾರಿಸಿ, ದಾರಿದ್ರ್ಯನಾಶಕರವಾದ ವ್ರತದ ವಿಧಾನವನ್ನೆಲ್ಲ ಉಪದೇಶಿಸಿ ಅದೃಶ್ಯವಾದದ್ದು. ತದನಂತರದಲ್ಲಿ ಬಡಬ್ರಾಹ್ಮಣನು ವ್ರತಮಾಡುವುದಾಗಿ ಸಂಕಲ್ಪನುಡಿ ಬಿಕ್ಷಾಟನೆಗೆ ಹೊರಟಾಗ,ಬಹಳ ದ್ರವ್ಯ ದೊರೆಕಿದುದು. ಅವನು ಯಥಾವತ್ತಾದ ಪ್ರತಾಚರಣೆಮಾಡಿ ಸರ್ವ ದುಃಖದಿಂದ ಮುಕ್ತನಾಗಿ, ಸಕಲ ಸಂಪತ್ತಿನಿಂದ ಬಾಳಿ ಮೋಕ್ಷವನ್ನೂ ಹೊಂದಿದುದು.

ಅನಂತರ ಕಾಷ್ಟದವನ ಕಥೆ. ಮೇಲಿನ ಬ್ರಾಹ್ಮಣ ಪ್ರತಿ ತಿಂಗಳಲ್ಲಿ ವ್ರತವನ್ನಾಚರಿಸುತ್ತಿದ್ದಾಗ, ಒಂದಾನೊಂದು ಸಮಯದಲ್ಲಿ ತೃಷೆಯಿಂದ ಪೀಡಿತನಾದ ಕಾಷ್ಟದವನು ಹೊರೆಯಿಳಿಸಿ ವ್ರತವನ್ನು ಕಂಡು ವಿವರವನ್ನೆಲ್ಲ ತಿಳಿದುಕೊಂಡು, ಮಾರನೆಯ ದಿನ ಸಂಕಲ್ಪ ಮಾಡಿಕೊಂಡು ಹೊರಟು; ಕಾಷ್ಟಕ್ಕೆ 'ದ್ವಿಗುಣವಾದ' ಧನವನ್ನು ಪಡೆದು, ಆದೆ ದ್ರವ್ಯದಿಂದ 'ಪಕ್ವವಾದ ಕದಳೀ ಫಲ ಘೃತ ಶರ್ಕರ ಕ್ಷೀರ ಗೋಧೂಮ ಪಿಷ್ಟ— ಈ ಸಕಲ ಪದಾರ್ಥವನ್ನು ಒಂದೂ ಕಾಲು ಸೇರು ಪ್ರಕಾರ ತೆಗೆದುಕೊಂಡವನಾಗಿ, ಮನೆಗೆ ಬರುವಂಥಾವನಾಗಿ, ಅನಂತರದಲ್ಲಿ ಬಂಧು ಮೊದಲಾದವರನ್ನು ಕರೆಸಿಕೊಂಡು ಯಥಾವಿಧಿಪ್ರಕಾರವಾಗಿ ವ್ರತವನ್ನು ಮಾಡಿ ವ್ರತ ಪ್ರಭಾವದಿಂದ ಧನ ಧಾನ್ಯ ಪುತ್ರ ಮಿತ್ರರಿಂದ ಕೂಡಿಕೊಂಡು ಅತಿ ಸಂತೋಷದಿಂದ ಈ ಲೋಕದಲ್ಲಿ ಇದ್ದನಾಗಿ, ಅಂತ್ಯಕಾಲದಲ್ಲಿ ಸತ್ಯ ಲೋಕವನ್ನು ಕುರಿತು ವಿಮಾನ ಸಂಪನ್ನನಾದನ—ಎಂಬುದಾಗಿ ಸೂತರು ಶೌನಕಾದಿ ಋಷಿಗಳನ್ನು ಕುರಿತು ಹೇಳಿದೆಂಬಲ್ಲಿಗೆ ಶ್ರೀ ಶ್ರೀ ಸತ್ಯನಾರಾಯಣ ಕಥೆಯ ಎರಡನೆಯ ಅಧ್ಯಾಯವು ಪರಿಸಮಾಪ್ತಿಯಾದುದು.'

ಇಷ್ಟು ಹೊತ್ತಿಗೆ ಭಟ್ಟರು ಸ್ವಲ್ಪ ತಡೆದು ಉಸಿರೆಳೆದು ಸುಧಾರಿಸಿಕೊಂಡರು, ಕೊಂಚ ಹಾಲನ್ನು ಕುಡಿದು ಗಂಟಲನ್ನು ಸರಿಪಡಿಸಿಕೊಂಡರು.

'ಈ ಸುದ್ದಿ ಓದು. ಕಥೆ ನಿಂತಿದೆಯಲ್ಲ.' ಈ ವರೆಗೆ ಎರಡು ಬಾರಿ ನನ್ನ ಗಮನವನ್ನು ಸೆಳೆಯಲು ಯತ್ನಿಸಿ ವಿಫಲನಾಗಿದ್ದ ಸತ್ಯನಾರಾಯಣ, ಪತ್ರಿಕೆಯನ್ನು ನನ್ನ ಮುಂದೆಯೇ ಹಿಡಿದ.

'ಪೋಲೀಸರ ಗುಂಡಿನೇಟಿನಿಂದ ಮೂವರ ಮರಣ' ಎಂದಿತ್ತು ಶಿರೋನಾಮೆ. ಮುಂದೆ ಓದಿದೆ. 'ಹಸಿವಿನಿಂದ ಕಂಗೆಟ್ಟವರೆಂದು ಹೇಳಿಕೊಂಡ ಪುಂಡುಜನರ ಗುಂಪೊಂದು ಮಂಡಿಗಳಿಗೆ ನುಗ್ಗಿ ಧಾನ್ಯದ ಮೂಟೆಗಳನ್ನು ಹೊರಗೆ ಎಳೆದು ಹಾಕಿದರು. ದೊಡ್ಡ ಗುಂಪು ಸೇರಿ ದವಸವನ್ನು ಕೊಂಡೊಯ್ದರು. ಕೂಡಲೇ ಪೋಲೀಸು ಅಧಿಕಾರಿಗಳು ಸ್ಥಳಕ್ಕೆ ಬಂದು,ಲಾಠೀಪ್ರಹಾರ ಮಾಡಿದರೂ ಗುಂಪನ್ನು ಚದರಿಸಲಾರದಿದ್ದಾಗ, ಅವರಿಗೂ ಜನರಿಗೂ ಕೈ ಕೈ ಹತ್ತಿ ಪರಿಸ್ಥಿತಿಯು ಕೈಮೀರಿತು. ಯತ್ನವಿಲ್ಲದೆ ಹತ್ತು ರೌಂಡ್ ಗೋಳಿಬಾರ್ ಮಾಡಲಾಯಿತು. ಇದರ ಪರಿಣಾಮವಾಗಿ ಇಬ್ಬರು ಹೆಂಗುಸರೂ ಒಬ್ಬ ಸಣ್ಣ ಹುಡುಗನು ಸತ್ತರೆಂದೂ ಅನೇಕರಿಗೆ ಗಾಯವಾಯಿತೆಂದೂ, ಆಸ್ಪತ್ರೆಗೆ ಸಾಗಿಸಲ್ಪಟ್ಟವರ ಪೈಕಿ ನಾಲ್ಕು ಜನರ ಸ್ಥಿತಿ ಚಿಂತಾಜನಕವಾಗಿದೆಯೆಂದೂ ವರದಿಯಾಗಿದೆ....'

ಓಹೋ, ಕಥೆ ಸಾಗುತ್ತಿತ್ತು! ಹೌದು, ಆವೈಶ್ಯ ಬಂದದ್ದು 'ನದೀತೀರದಲ್ಲಿ ಉಲ್ಕಾಮುಖ ಎಂಬ ನಾಮವುಳ್ಳ ರಾಜನು ರಾಜಪತ್ನಿಯಾದ ಭದ್ರಶೀಲಾ ಎಂಬ ಸ್ತ್ರೀಯೊಂದಿಗೆ ಪುತ್ರಾಪೇಕ್ಷಿತನಾಗಿ' ಸತ್ಯನಾರಾಯಣ ವ್ರತವನ್ನು ಮಾಡುತ್ತಿದ್ದಲ್ಲಿಗೆ. "ಹೇ ರಾಜನ್, ಭಕ್ತಿಯುಕ್ತ ಅಂತಃಕರಣದಿಂದ ತಾವು ಏನನ್ನು ಮಾಡುತ್ತಿದ್ದೀರಿ?" ಎಂದು ಕೇಳಿ, "ಹೇ ರಾಜನ್, ನನಗೆ ಈ ವ್ರತವನ್ನು ವಿಸ್ತಾರವಾಗಿ ಹೇಳಿರಿ, ನಾನೂ ಮಾಡುತ್ತೇನೆ, ಕಾರಣವೇನೆಂದರೆ ನನಗೂ ಸಂತತಿಯಿಲ್ಲ." ಎಂದು ಸಮಸ್ತ ವಿಧಿಯನ್ನು ಶ್ರವಣಮಾಡಿ ಬಂದು ತನ್ನ ಧರ್ಮಪತ್ನಿಯಾದ ಲೀಲಾವತೀ ನಾಮಕ ಸ್ತ್ರೀಯನ್ನು ಕುರಿತು ಹೇಳಿದವನಾದನು, ಮತ್ತು "ನನಗೆ ಸಂತತಿ ಯಾವಾಗ ಆಗುವುದೋ ಆಗ ಸತ್ಯನಾರಾಯಣ ವ್ರತವನ್ನು ಮಾಡುತ್ತೇನೆ" ಎಂದು ಹೇಳುವಂಥಾವನಾದನು. ಒಂದಾನೊಂದು ದಿನ ಆ ಪತಿವ್ರತೆ ಧರ್ಮಪರಾಯಣಳಾಗಿ ಜನಪಯುಕ್ತಳಾಗಿ ಅಂತಃಪುರದಲ್ಲಿ ಸತ್ಯನಾರಾಯಣನ ಕೃಪೆಯಿಂದ ಗರ್ಭಿಣಿಯಾದಳು."

ನಂತರ ಕನ್ಯಾರತ್ನ ಜನನ, ಅವಳು ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ಪಾದಿಯಲ್ಲಿ ಅಭಿವೃದ್ಧಿ ಹೊಂದುವಂಥಾವಳಾದಳು. ಆ ಕನ್ಯಾರತ್ನಕ್ಕೆ ಕಲಾವತಿಯೆಂಬ ನಾಮಕರಣವನ್ನು ಮಾಡಿದರು.

'ನಂತರ ಲೀಲಾವತಿಯು ತನ್ನ ಪತಿಯ ಸಮೀಪವನ್ನೈದಿ ಆತನನ್ನು ಕುರಿತು ಸುಧುರ ವಾಕ್ಯಗಳಿಂದ ಮಾತನಾಡುವಂಥಾವಳಾದಳು. "ಎಲೈ ಪ್ರಾಣಕ್ಕಾಂತ, ಪೂರ್ವದಲ್ಲಿ ತಾವು ಪ್ರಾರ್ಥನೆ ಮಾಡಿ ಇರುವಂಥಾ ವ್ರತವನ್ನು ಆದ್ಯಾಪಿ ಯಾತಕ್ಕೆ ಮಾಡುವುದಿಲ್ಲ" ಎಂದು ಕೇಳಿದಳು. ಹೀಗೆ ಕೇಳಿದಂಥ ಸ್ತ್ರೀ ವಚನವನ್ನು ತಿಳಿದವನಾಗಿ ಅವನು ಸಮಾಧಾನಪೂರ್ವಕ ಮಾತನಾಡುತ್ತಾನೆ. "ಎಲೈ ಪ್ರಿಯೆ, ಈ ಕನ್ಯಾವಿವಾಹ ಕಾಲದಲ್ಲಿ ನಾನು ಸತ್ಯನಾರಾಯಣ ವ್ರತವನ್ನು ಮಾಡುತ್ತೇನೆ.

ಕಲಾವತಿಯು ವಿವಾಹಕಾಲದಲ್ಲೂ ವ್ರತಾಚರಣೆಯನ್ನು ವೈಶ್ಯ ಮರೆತದ್ದು, ಸತ್ಯನಾರಾಯಣ ಕುಪಿತನಾಗಿ ಶಪಿಸಿದ್ದು, ಮಾವ ಅಳಿಯ ಇಬ್ಬರೂ ವ್ಯಾಪಾರಕ್ಕಾಗಿ ಸಿಂಧೂ ನದೀತೀರವೆಲ್ಲೆಲ್ಲವೆ ರತ್ನ ಪಾನರತ್ನಸಾರ ನಗರಕ್ಕೆ ಹೋಗಿದ್ದು, ಅಲ್ಲಿ ಕಳ್ಳರು ಚಂದ್ರಕೇತು ರಾಜನ ದ್ರವ್ಯವನ್ನು ಅಪಹರಿಸಿಕೊಂಡು ಬರುವಾಗ, ಕ್ರೂರ ರಾಜದೂತರು ಬೆನ್ನಟ್ಟಿ ಬರಲಾಗಿ ಜೆದರಿ ದ್ರವ್ಯವನ್ನು ಈ ವೈಶ್ಯರ ಬಳಿ ಬಿಟ್ಟು ತಪ್ಪಿಸಿಕೊಂಡದ್ದು, ರಾಜದೂತರು ಇವರಿಬ್ಬರನ್ನೂ ಎಳೆದೊಯ್ದದ್ದು, ರಾಜಾಜ್ಞೆಯ ಪ್ರಕಾರ ಕ್ರೂರ ಕಾರಾಗೃಹವಾಸ ವ್ಯಾಪ್ತಿ

ಯಾದದ್ದು ಮತ್ತು ರಾಜನು ಇವರ ದ್ರವ್ಯವೆಲ್ಲ ತೆಗೆದುಕೊಂಡದ್ದು, ಇತ್ತ ವೈಶ್ಯನ ಸ್ವಂತ ಮನೆಗೂ ಕಳ್ಳರು ನುಗ್ಗಿ ಸೂರಿಮಾಡಿದ್ದು, ಲೀಲಾವತಿ-ಕಲಾವತಿಯರಿಗೆ ದಾರಿದ್ರ್ಯ, ದುಃಖ, ವ್ಯಾಧಿಗಳು ಪ್ರಾಪ್ತವಾಗಿ ಹಸಿವು-ತೃಷೆಯಿಂದ ಪೀಡಿತರಾಗಿ ಮನೆ ಮನೆಗೆ ಭಿಕ್ಷಕ್ಕೆ ಹೋಗುವಂಥಾವರಾದದ್ದು, ಬಿಕ್ಷಾಟನದ ಸಮಯದಲ್ಲಿ ಕಲಾವತಿ ಒಬ್ಬ ಬ್ರಾಹ್ಮಣನ ಮನೆಗೆ ಹೋದಾಗ-ಸತ್ಯನಾರಾಯಣ ವ್ರತ ನಡೆಯುತ್ತಿದ್ದು ಅಲ್ಲಿಯೇ ಕುಳಿತು ಕಥಾಶ್ರವಣ, ಪ್ರಸಾದಭಕ್ಷಣ ಮಾಡಿ ಬಂದು ಲೀಲಾವತಿಗೆ ಹೇಳಿದ್ದು, ಪತಿವ್ರತೆಯಾದ ಆ ವೈಶ್ಯ ಸ್ತ್ರೀ ತನ್ನ ಪತಿಯೂ ಮಿಳಿಯನೂ ಜಾಗ್ರತೆಯಿಂದ ಸ್ವಕೀಯವಾದ ಮನೆಯನ್ನು ಕುರಿತು ತಲುಪಲು ಸಂಕಲ್ಪಮಾಡಿ ಸತ್ಯನಾರಾಯಣ ವ್ರತವನ್ನು ವಿಧಿವತ್ತಾಗಿ ಆಚರಿಸಿದುದು, ಆನಾಗ ಸತ್ಯನಾರಾಯಣನು ಸಂತುಷ್ಟನಾಗಿ ಚಂದ್ರಕೇತುವಿನ ಸ್ವಪ್ನದಲ್ಲಿ ಕಾಣಿಸಿಕೊಂಡು ವೈಶ್ಯರನ್ನು ಬಿಡುಗಡೆ ಮಾಡಿ ದ್ರವ್ಯವನ್ನು ಹಿಂತಿರಿಗಿಸಬೇಕೆಂದೂ ಹಾಗೆ ಮಾಡದಿದ್ದಲ್ಲಿ ರಾಜನ ಸಕಲೈಶ್ವರ್ಯವನ್ನೂ ನಾಶಗೊಳಿಸುವುದಾಗಿ ಹೆದರಿಸಿ ಅಂತರ್ಧಾನವಾದದ್ದು, ಚಂದ್ರಕೇತು ರಾಜನು ಈ ಆಜ್ಞೆ-ತಿರಸಾವಹಿಸಿ ಅವರಿಗೆ ಮಂಗಳಸ್ನಾನ ಮುಂತಾಗಿ ಮಾಡಿಸಿ, ವಸ್ತ್ರಾಭರಣ ಅಲಂಕಾರಾದಿಗಳಿಂದ ಸಂತುಷ್ಟರನ್ನಾಗಿಸಿ, ತನ್ನ ಅಗ್ರಭಾಗದಲ್ಲೇ ಕುಳ್ಳಿರಿಕೊಂಡು ಸಂತೋಷಪಡಿಸಿ, ತೆಗೆದುಕೊಂಡ ದ್ರವ್ಯವನ್ನು ದ್ವಿಗುಣವಾಗಿ ಹಿಂತಿರಿಗಿಸಿ ಬೀಳ್ಕೊಂಡದ್ದು-ಇದೆಲ್ಲವನ್ನೂ ಕೇಳುವಲ್ಲಿಗೆ ಸ್ಕಂದಪುರಾಣೋಕ್ತ ರೇವಾಖಂಡದಲ್ಲಿ ಸತ್ಯನಾರಾಯಣ ಕಥೆಯ ತೃತೀಯಾಧ್ಯಾಯವು ಸಮಾಪ್ತವಾದುದು.

ಈಗ ಭಟ್ಟರು ಇನ್ನೊಂದು ಬಟ್ಟಲು ಹಾಲನ್ನು ಕುಡಿದರು. "ಪೇಟೆ ಧಾರಣಿ ಪುಟ ನೋಡಿದೆಯಾ?" ಸತ್ಯನಾರಾಯಣ ತಿವಿದು ಏಳನೆಯ ಪುಟವನ್ನು ಮುಂದೆ ಜಾಜಿದ. ಭಕ್ತಿಸಾಗರದಲ್ಲಿ ಮುಳುಗಿದ್ದವನು ಮೇಲೆದ್ದೆ. 'ಅಕ್ಕಿಯ ಬೆಲೆ ಅಂತರಿಕ್ಷಕ್ಕೇರುತ್ತಿದೆ. ಯುದ್ಧಕಾಲವೆ ಶೇಖರಣೆಯೇ ಕಾರಣ. ಇತರ ಪದಾರ್ಥಗಳೂ ಅಕ್ಕಿಯನ್ನೇ ಅನುಸರಿಸುವುದು ಖಂಡಿತ. ತಿಪಟೂರಿನಲ್ಲಿ ಕೊಬ್ಬರಿ ಗಿಟುಕಿನ ಬೆಲೆ ಅಗಲೇ ಒಂದಕ್ಕೆರಡಾಗಿದೆ. ಸಕ್ಕರೆಯಂತೂ ಸಿಕ್ಕುವಂತೆಯೇ ಇಲ್ಲ...." ಎಂದು ಓದುತ್ತಿದ್ದೆ.

"ಭತ್ತದ ದಾಸ್ತಾನು ಮಾಡಿದೋರು ಬದುಕಿಹೋದರು. ಚಿನ್ನದ ಮನೆ ಕಟ್ಟಿಸಿಕೋಬಹುದು.." ಸತ್ಯನಾರಾಯಣ ಹೇಳುತ್ತಿದ್ದ.

'....ಮಧು ನಾಮಕನಾದ ವೈಶ್ಯನು ಅಳಿಯ ಸಮೇತನಾಗಿ ಹಡಗಿನಲ್ಲಿ ಹೊರಟು ಸ್ವಂತ ಪಟ್ಟಣಕ್ಕೆ...."

ಆರೆರೆ, ಕಡೆಯ ಅಧ್ಯಾಯ! ಕೊಂಚ ಕಥಾಭಾಗವನ್ನು ಕೇಳಲೇ ಇಲ್ಲವಲ್ಲ! ನನ್ನ ಅಪ್ರಜ್ಞೆ ಭಯ ಬೇಸರಗಳನ್ನು ತಂದಿತು. ತಿಳಿದಿದ್ದ ಭಾಗವನ್ನು ಮನಸ್ಸಿನಲ್ಲಿಯೇ ಮತ್ತೆ ಪರಿಸಿಕೊಂಡೆ. ಶ್ರೀ. ಸತ್ಯನಾರಾಯಣ ಪ್ರಭು ಯತಿವೇಷದಿಂದ ವೈಶ್ಯನನ್ನು ಪರೀಕ್ಷಿಸುವುದಕ್ಕಾಗಿ ಹಡಗಿನಲ್ಲಿ ಏನಿದೆಯೆಂದು ಕೇಳಿದುದು, ದ್ರವ್ಯಾಂಧನಾದ ವೈಶ್ಯ ಯತಿಯಲ್ಲಿ ಸಂಶಯವನ್ನು ಹೊಂದಿ ಹಡಗಿನಲ್ಲಿ ಎಲೆಬಳ್ಳಿಗಳು ಇರುವುದಾಗಿ ಹೇಳಿದ್ದು, ಸ್ವಾಮಿಯು "ಎಲೈ ಅಪ್ಪಾ, ಈ ನಿನ್ನ ವಾಕ್ಯವೇ ಸತ್ಯವಾಗಲಿ" ಎಂದ ಕೂಡಲೇ ಹಾಗೇ ಆದದ್ದು, ಇದನ್ನು ಕಂಡ ವೈಶ್ಯನ ಮೂರ್ಛೆ, ಗೋಳು, ಪ್ರಭು ಯತಿವೇಶವನ್ನು ಕಳೆದು "ಎಲೈ ದುರ್ಬುದ್ಧನೆ, ನೀನು ನನ್ನ ಪೂಜಾನಿಷಯದಲ್ಲಿ ಬಹಿರ್ಮುಖನಾದ್ದರಿಂದ ನನ್ನ ಆಜ್ಞೆಯಿಂದಲೇ ವಡವಡನೆ ದುಃಖ ಪ್ರಾಪ್ತವಾಯಿತು" ಎಂದು ಎಚ್ಚರಿಸಿದುದು, ವೈಶ್ಯನು ಅಪರಾಧವನ್ನು ಒಪ್ಪಿಕೊಂಡು ದೇವರನ್ನು ಸ್ತುತಿಸೈದು," ಪೂರ್ವದಲ್ಲಿ ನನಗೆ ಯಾವ ದ್ರವ್ಯವಿತ್ತೊ ಅದು ಯಾವತ್ತು ನನಗೆ ಪ್ರಾಪ್ತವಾಗಬೇಕು, ನಾನು ಶರಣಾಗಿದ್ದೇನೆ, ಸಂರಕ್ಷಣೆ ಮಾಡಬೇಕು" ಎಂದು ಮಾಡಿದ ಭಾಷಣದಿಂದ ಸಂತುಷ್ಟನಾಗಿ-ಈಪ್ಸಿತ ವರವನ್ನು ಕೊಟ್ಟು ಅದೃಶ್ಯನಾದುದು, ಭಕ್ತನು ವ್ರತವನ್ನಾಚರಿಸಿ ಅಳಿಯನೊಂದಿಗೆ ತನ್ನ ಸ್ವಂತ ಪಟ್ಟಣವಾದ ರತ್ನಪುರಿಗೆ ಹಿಂದಿರುಗಿದುದು, ಅಲ್ಲಿ ಸತ್ಯನಾರಾಯಣ ವ್ರತವನ್ನಾಚರಿಸುತ್ತಿದ್ದ ಕಲಾವತಿ ಪತಿಯ ಆಗಮನವನ್ನು ಕೇಳಿ ಪ್ರಸಾದ ಸ್ವೀಕಾರ ಮಾಡದೆಯೇ ಹಡಗಿನ ಬಳಿಗೆ ಬರಲಾಗಿ, ಕುಪಿತನಾದ ಸತ್ಯನಾರಾಯಣನು ಹಡಗನ್ನೂ ಕಲಾವತಿಯ ಪತಿಯನ್ನೂ ಮುಳುಗಿಸಿದ್ದು, ತಾಯಿ ಮಗಳ ರೋದನ, ತದನಂತರ ವಡದ ಮೇಲಿದ್ದ ವೈಶ್ಯನು ವ್ರತವನ್ನು ಮತ್ತೆ ಮಾಡುವ ಮನೋರಥವನ್ನು ಪ್ರಕಟಪಡಿಸಿದ್ದು, ಕೂಡಲೇ ಆದ ಆಕಾಶವಾಣಿ, "ಎಲೈ ವೈಶ್ಯಾ, ನಿನ್ನ ಮಗಳು ನನ್ನ ಪ್ರಸಾದ ತ್ಯಾಗಮಾಡಿ ತನ್ನ ಪತಿಯನ್ನು ನೋಡುವುದಕ್ಕೆ ಬರುವಂಥಾವಳಾದಳು. ಅದರಿಂದಲೇ ಹೀಗಾಯಿತು. ಇದಕ್ಕೋಸ್ಕರ ಮನೆಗೆ ಹೋಗಿ ಸ್ವಲ್ಪವಾದರೂ ಪ್ರಸಾದ ಭಕ್ಷಣೆಮಾಡಿ ಪುನಃ ಬಂದವಳಾದರೆ, ಈ ಕನ್ನಿಕೆಯು ತನ್ನ ಪತಿಯ ಸಮೀಪವನ್ನೈದುವಳು. ಇದರಲ್ಲಿ ಸಂಶಯವಿಲ್ಲ" ಎಂದು ಹೇಳಿದ್ದು, ಅದೇ ಪ್ರಕಾರ ಕಲಾವತಿಯು ಮಾಡಲಾಗಿ ಪತಿಯೂ ಹಡಗೂ ದೃಷ್ಟಿಗೋಚರವಾದದ್ದು, ಎಲ್ಲರಿಗೂ ಸಂತೋಷವಾದದ್ದು, ಆಥ ಏವ ಮಧುನಾಮಕನಾದ ವೈಶ್ಯನು ಯಥಾವಿಧಿಯಾಗಿ ಸತ್ಯನಾರಾಯಣ ದೇವರ ಪೂಜೆಯಂ ಮಾಡಿ ಬಂಧುವರ್ಗ ಧನ ಸಹಿತ ಸ್ವಗೃಹಕ್ಕೆ ತೆರಳಿದ್ದು, ಮತ್ತು ಪ್ರತಿಮಾಸದಲ್ಲೂ, ಪೌರ್ಣಮಿ, ಸಂಕ್ರಾಂತಿ ಈ ಸರ್ವಕಾಲಗಳಲ್ಲೂ ವಿಧಿಯುಕ್ತವಾಗಿ ಸತ್ಯನಾರಾಯಣ ಪೂಜೆಯಂ ಮಾಡುರಂಥಾವನಾಗಿ ಈ ಮರ್ತ್ಯಲೋಕದಲ್ಲಿ ಸರ್ವಸುಖವನ್ನೂ ಅನುಭವಿಸಿ, ಅಂತ್ಯಕಾಲದಲ್ಲಿ ಸತ್ಯಲೋಕವನ್ನೈದಿದಂಥಾವನಾದದ್ದು-ಇಲ್ಲಿಗೆ 'ಸ್ಕಂದ ಪುರಾಣೋಕ್ತ ರೇವಾಖಂಡವಲ್ಲಿ ಸತ್ಯನಾರಾಯಣ ವ್ರತಕಥೆಯೋಳ್ ಪ್ರಾಕೃತ ತಾತ್ಪರ್ಯವಲ್ಲಿ ಚತುರ್ಥಾಧ್ಯಾಯ ಸಮಾಪ್ತಃ

ಐದನೆಯ ಅಧ್ಯಾಯ ಅಂಗಧ್ವಜ ರಾಜನ ಕಥೆ ಬೇಗನೇ ಮುಗಿಯಿತು. ಅನಂತ ಸತ್ಯನಾರಾಯಣ ವ್ರತ ಪ್ರಸಾದಗಳ ಬಗ್ಗೆ ಅಲಕ್ಷ್ಯ ತೋರಿಸಿ ಪಡಬಾರದ ಕಷ್ಟಪಟ್ಟು ತಿದ್ದಿಕೊಂಡು ಭಯಭಕ್ತಿಗಳಿಂದ ವ್ರತಾಚರಣೆ ಮಾಡುತ್ತ ಸಮಸ್ತಸುಖವನ್ನೂ ಮುಕ್ತಿಯನ್ನೂ ಪಡೆವನೆಂದು ಹೇಳಬೇಕಾಗಿಲ್ಲ.

ವ್ರತದ ಮಹಿಮೆಯ ವರ್ಣನೆಯೊಂದಿಗೆ ಸತ್ಯನಾರಾಯಣ ವ್ರತ ಕಥೆ ಸಂಪೂರ್ಣವಾದೊಡನೆ, ಭಕ್ತವೃಂದ ಆಕಳಿಸಿ ಮೈಮುರಿದು ಗುಜುಗುಜುಗುಟ್ಟಿತು. ಬೆಳ್ಳಿಯ ತಟ್ಟೆಗಳಲ್ಲಿ ತುಂಬಿದ್ದ ಪ್ರಸಾದವನ್ನು

ಹತ್ತು ಜನರು ಹೆಂಚಿದಾಗ, ತಟ್ಟೆ ತಟ್ಟೆಯ ಬಳಿಯಲ್ಲೂ ಗೊಂಚಲು ಗೊಂಚಲಾಗಿ ಕೈಗಳು ಅತುರದಿಂದ ಏಳುತ್ತಿದ್ದವು-ಕೊಂಚ ಗಲಭೆಯೇ ಆಯಿತು. ಭಕ್ತಾದಿಗಳು ಪ್ರಸಾದನ್ನು ಭಯ-ಭಕ್ತಿಗಳಿಂದ ಬಾಯಿಗೆ ಹಾಕಿಕೊಂಡರು, ಬೀದಿಯ ಬಾಗಿಲಿಗೆ ಹೊರಟರು. ಹಜಾರ ಬೇಗನೇ ಬರಿದಾಯಿತೆನ್ನಬೇಕು.

ಪ್ರಸಾದವನ್ನು ಅಚ್ಚುಕಟ್ಟಾಗಿಯೇ ತಿನ್ನುತ್ತ ಸತ್ಯನಾರಾಯಣ ಇನ್ನೂ ಪತ್ರಿಕೆಯನ್ನು ಓದುತ್ತಿದ್ದ.

" ಈ ಮುಖಿಂಡನ ಹೇಳಿಕೆ ನೋಡು. ಇವನೇನಾದರೂ ಅಧಿಕಾರಕ್ಕೆ ಬಂದರೇ ! " ಸತ್ಯನಾರಾಯಣ ಕಡೆಯ ಪುಟವನ್ನು ಮೇಲು ಮಾಡಿ ನನಗೇ ಕೊಟ್ಟುಬಿಟ್ಟ.

' ಕಳ್ಳ ವ್ಯಾಪಾರಿಗಳಿಗೆ ಚಾವಟಿ ಏಟು ! ' ಎಂದು ಮೇಲು ಬರಹವನ್ನು ಓದಿದೆ. ' ಯುದ್ಧದ ಈ ದಿನಗಳಲ್ಲಿ ಸ್ವಂತ ಲಾಭದ ದೃಷ್ಟಿಯಿಂದ ಸಮಾಜ ಶತ್ರುಗಳಾಗಿ ನಡೆದುಕೊಳ್ಳುವ ವರ್ತಕರನ್ನು ಬಯಲಿಗೆಳೆದು, ನಾಲ್ಕು ಬೀದಿ ಕೂಡುವೆಡೆಯಲ್ಲಿ ನಿಲ್ಲಿಸಿ ಜನ ಸಮ್ಮುಖದಲ್ಲಿ.... '

" ಓಹೋ, ಬಂದಿದ್ರಾ- ಹ್ಞ ಹ್ಞ ! " ಧನಕೋಟಿಯವರ ಧ್ವನಿಯನ್ನು ಕೇಳಿ ನಾನು ದಿಗ್ಗನೆದ್ದು ನಮಸ್ಕರಿಸಿದೆ. ಸತ್ಯನಾರಾಯಣ ಕುಳಿತಂತೆಯೇ ತಲೆಯಾಡಿಸಿದ.

" ಎಲ್ಲೋ ಕಾಣಲಿಲ್ಲ ಅಂದುಕೋತಾ ಇದ್ದೆ.... ಇಲ್ಲೇ ಕೂತು ಬಿಟ್ರಾ ? " ಧನಕೋಟಿಯವರು. ಮುಂದುವರಿಸಿದರು.

" ಬಹಳ ಜನ ..." ನಾನು ವಿವರಿಸಿದೆ.

" ಹೌದು ಹೌದು.... ಬಹಳ ಬಂಧು ಬಳಗ ಸ್ನೇಹಿತರು, ಪುರಪ್ರಮುಖರು....ಹೀಗೇ ಎಲ್ಲರನ್ನೂ ಕೂಡಿಕೊಂಡೇ ವ್ರತ ಮಾಡಬೇಕು ಅಂತ ಇರೋದು...."

" ನಿಜ, ಕಥೇಲಿ ಹಾಗೇ ಹೇಳುತ್ತಲ್ಲ ! "

" ಎಲ್ಲ ಸಾಂಗವಾಗಿ ಚಾಚೂ ತಪ್ಪದೆ ನಡೀತೋ-ನೀವು ಕಂಡ ಹಾಗೆ ? "

"ಅಯ್ಯೋ ಕೇಳಬೇಕೆ, ತಮ್ಮ ಮನೆಯ ವಿಚರಣೆ ಅಂದ ಮೇಲೆ? ದಿವ್ಯವಾಗಿತ್ತು-ದಿವ್ಯ !....ಅಂಥಾ ವಿಜೃಂಭಣೆ ! ದೇವರು ಸುಸ್ತೀತನಾಗಿರಬೇಕು."

" ಹ್ಞ ! ಹ್ಞ ! ....ಏನೋ ಯಥಾನುಶಕ್ತಿ. ಅವನೇ ಕೊಟ್ಟದ್ದು ಎಲ್ಲ."

" ಸತ್ಯವಾದ ಮಾತು ! "

" ಈಗ ಅವನು ಕಷ್ಟದಿಂದ ಪಾರು ಮಾಡಿದ್ದಕ್ಕೆ ಇದೆಲ್ಲವೂ ಸ್ವಲ್ಪವೇ....ಏನೋ ಹರಕೆ ಸಲ್ಲಿಸಿದೆ ಅಂತ ಅಷ್ಟೆ ! ಅಸ್ನಿ."

"ಹಾಗೇ? ಅದೇನು ಸ್ವಾಮಿ ತಮ್ಮಂಥೋರಿಗೆ ಅಂಥ ಕಷ್ಟ?.... ಸತ್ಯನಾರಾಯಣ ದೇವರಿಗೆ ಹರಕೆ ಹಾಕಿಕೊಳ್ಳೋ ಅಂಥಾದ್ದು ? " ಸತ್ಯನಾರಾಯಣ ಮೊದಲನೇ ಬಾರಿಗೆ ಮಾತನಾಡಿದ.

" ಓಹೋ, ಮುಳುಗೇ ಹೋಗಿದ್ದೆ ಸ್ವಾಮೀ-ಕೆಲವು ತಿಂಗಳ ಕೆಳಗೆ—ಅಂದ್ರೆ ಅಂಥಾ ನಷ್ಟವಾಗೋಹಾಗಿತ್ತು."

" ಆಶ್ಚರ್ಯ ! ಎಂಥಾ ಲೆಕ್ಕಾಚಾರಸ್ತರು ನೀವು ! " ಸತ್ಯನಾರಾಯಣ ಅವರಿಂದ ವಿವರವನ್ನು ಎಳೆಯುವಂತೆ ಹೇಳಿದ.

" ಹೂಂ. ಅದರೂ ಮೋಸ ಹೋಗ್ತೀವಲ್ಲ- ಹಾಗೇ ಆಗಿತ್ತು. ಅನ್ನಿಸಿತ್ತು.....ಏನೋ ಭಾರಿ ಲೆಕ್ಕಾಚಾರ ಹಾಕಿ, ಪ್ರಪಂಚದ ಪರಿಸ್ಥಿತಿ ಕೆಡ್ತಾ ಇದೆ; ಯುದ್ಧ ಆಗೇ ಆಗುತ್ತೆ ಅಂತ ನಿಶ್ಚಯ ಮಾಡಿಕೊಂಡು, ಎಲ್ಲೆಲ್ಲೂ ಏಜೆಂಟರುಗಳನ್ನು ಕಳಿಸಿ ಅಕ್ಕಿದಾಸ್ತಾನ ಮಾಡಿದರೆ, ಆ ಮೂನಿಕ್ ಒಪ್ಪಂದ ಆಗಿ ನನ್ನ ಲೆಕ್ಕವೇ ತಲೆ ಕೆಳಗಾಯಿತು. ತಕ್ಷಣವೇ ಮೂಟೆಗೆ ಐದು ರೂಪಾಯಿ ಬಿದ್ದು ಹೋಯ್ತು. ಇನ್ನೂ ಬೆಲೆ ಇಳಿಯೋ ತರಹವೇ ಕಾಣ್ತಾ ಇತ್ತು.... ಸುಮ್ಮನೆ ಕೈ ಕೈ ಹಿಸಿಕೆಕೊಳ್ಳೋಹಾಗಾಯ್ತು. ಹೋಗ್ಲಿ ಅತ್ತ ಕೊಟ್ಟುಬಿಡೋಣ ಅಂದ್ರೆ, ಎರಡೆರಡೂವರೆ ಲಕ್ಷ ರೂಪಾಯಿ ಕೈಕಚ್ಚೋ ಮಾತು. ಬೇಡ, ಇರಲಿ ಅಂದ್ರೆ ಮುಂದೆ ಹೇಗೋ ಏನೋ.... ನೋಡಿ, ಎಂಥಾ ಸಂಕಟದ ಸಂದರ್ಭ ! "

" ಹೌದು, ಭಾರಿ ನಷ್ಟವ ಸಂಭವ- ತಾವೇನು ಕೆಟ್ಟು ಹೋಗದೇ ಇದ್ದರೂ," ನಾನೂ ಒಪ್ಪಿದೆ.

" ಆಗ, ಅಷ್ಟಾ, ಈ ಮಹಾನಷ್ಟದಿಂದ ಪಾರು ಮಾಡಿದರೆ ನಿನ್ನ ವ್ರತಾನ ವೈಭವದಿಂದ ಮಾಡ್ತೀನಿ ' ಅಂತ ಹೇಳಿಕೊಂಡೆ..... ಅಂತೂ ಕಡೆಗೆ ಬಡವನ ಮೇಲೆ ಕರುಣೆಯಿಟ್ಟು ಆ ಭಗವಂತ- ಶ್ರೀ ಸತ್ಯನಾರಾಯಣ ಕಣ್ಣು ಬಿಟ್ಟ....ಭಕ್ತವತ್ಸಲನಲ್ಲವೆ ?...."

" ಈಗ, ಈ ಯುದ್ಧದ ಕಾಲದಲ್ಲಿ, ಅದು ಅಕ್ಕಿ ಮೂಟೆಯಲ್ಲ, ಚಿನ್ನದ ಮೂಟೆ ಸ್ವಾಮಿ ! ಪೇಟೆ ಧಾರಣೇನ ಈಗ ತಾನೆ ನೋಡ್ತಾ ಇದ್ದೆವು." ಅವರಿಗೆ ನಾನು ಇನ್ನಷ್ಟು ಉತ್ಸಾಹವನ್ನುಂಟುಮಾಡಿದೆ.

" ನಾನು ಬಲ್ಲೆ. ಹ್ಞ.... ಇನ್ನೂ ಈಗಲೇ ಎಲ್ಲಿ ಮುಗೀತು ಈ ಏರಿಕೆಯ ಕತೆ. ನೋಡ್ತಾ ಇರಿ !.... ಹ ಹ್ಹಾ ! " ಧನಕೋಟಿಯವರು ಕಿವಿಯಿಂದ ಕಿವಿಯವರೆಗೂ ಬಾಯಿ ತೆರೆದು, ಎಲ್ಲ ಹಲ್ಲೂ ಕಿರಿದು ಜೊಜ್ಜು ಕುಣಿಯುವಂತೆ ಗಟ್ಟಿಯಾಗಿ ನಕ್ಕರು.

" ಹೋಗಿ ಬರ್ತೀನಿ, ಸ್ವಾಮಿ ! " ಸತ್ಯನಾರಾಯಣ ಆತುರದಿಂದ ಸ್ವಲ್ಪ ಒರಟಾಗಿಯೇ ಹೇಳಿದ.ಅದು ನನಗೆ ಚೆನ್ನಾಗಿ ಕಾಣಲಿಲ್ಲ.

" ಹುಂ, ಹುಂ, ಹೋಗಿ ಬನ್ನಿ ! ಬಹಳ ಹೊತ್ತಾಯ್ತು. ತಾವೆಲ್ಲ ಬಂದು ಈ ಪುಣ್ಯದಲ್ಲಿ ಭಾಗಿಗಳಾದದ್ದು ಬಹಳ ಸಂತೋಷ ! ನಮಸ್ಕಾರ ! ನಮಸ್ಕಾರ ! "

" ಅಷ್ಟಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಬಹಳ ಧನ್ಯವಾದಗಳು ! ನಮಸ್ಕಾರ ! " ನಾನು ಹೇಳುತ್ತ, ಆಗಲೇ ಮೆಟ್ಟಿಲನ್ನಿಳಿಯುತ್ತಿದ್ದ ಸತ್ಯನಾರಾಯಣನನ್ನು ಕೂಡಿಕೊಂಡೆ. " ಅದು ಯಾಕೋ, ಅಷ್ಟು ಅವಸರದಿಂದ ಹೊರಟುಬಿಟ್ಟ ? ಅವರು, ದೊಡ್ಡ ಮನುಷ್ಯರು, ಏನಂದುಕೊಂಡರೋ ಕಾಣೆ " ನಾನು ಆಕ್ಷೇಪಿಸಿದೆ.

" ಯಾಕೆ ಅಂತ ಕೇಳ್ತೀಯಾ ?.... ಸ್ವಲ್ಪ ತಾಳು. ಹೊಟ್ಟೆ ತೊಳಸ್ತಾ ಇದೆ.... ಬಂದು ಬಿಟ್ಟೆ." ಸತ್ಯನಾರಾಯಣ ಎದೆಯನ್ನು ಒತ್ತಿಹಿಡಿದು, ಹತ್ತಿರದ ಬೀದಿನಲ್ಲಿಯ ಬಳಿಗೆ ಹೋಗಿ ಬಂದ. " ಆ ಸಜ್ಜಿಗೆ ನನಗೆ ದಕ್ಕಲಿಲ್ಲ." ಎಂದು ತಿಳಿಸಿದ. ●

● ನಾಡ ಬಿಡುಗಡೆಯೊಂದಿಗೆ ●

●ೀ. ವಸಂತ ಕುಷ್ಟಗಿ, ಎಂ. ಎ. ಬೀದರ.

◆

ಕೇಳಿ ಕೂಗಿತು ಬೆಳಗು ಮೂಡಿತು
ನಾಡನಾಡಿಯು ಜೀವ ಪಡೆಯಿತು
ತನ್ನತನವನು ಉಳಿಸಿಕೊಳ್ಳುತ,
ಬೇರೆ ನಾಡಿನ ಗೆಲ್ಲನಡೆಯನು
ನೋಡಿ ಹಿಗ್ಗುತ, ತಾನು ಅಂತೆಯೆ
ಬಿಚ್ಚು ಹೃದಯದಿ ನಡೆಯ ಕಲಿಯಿತು
ನಾಡ ಬಿಡುಗಡೆಯೊಂದಿಗೆ..... ॥೧॥

ಬಗೆಯು ಚಿಗುರಿತು ಗೈಮೆಡೊರೆಯಿತು
ಕಲೆಯು ಕುದುರಿತು ಬೆಳಕು ಕಂಡಿತು
ಹೊನ್ನಮಳೆಯದೊ ತಾನು ಬರಲಿದೆ,
ಲಲಿತಕಲೆಗಳ ಮಧುರ ಭಾವದ,
ಕಂಪು ಬೀರುತ ಹೊತ್ತು ಹೆಮ್ಮೆಯ
ಹಳೆಯ ಕನಸದು ನನಸುಗೊಂಡಿದೆ
ನಾಡಬಿಡುಗಡೆಯೊಂದಿಗೆ..... ॥೨॥

ನಮ್ಮ ಬಡವನ ದೈನಲಿಪಿಯದು
"ಭಾಗ್ಯಬರುವುದು ದೈವ ತೆರೆವುದು"
ಎಂದು ಒರೆಯಿತು ಸುಮ್ಮಿಹಾಡಿತು
ಯಂತ್ರ ರಾಕ್ಷಸ ದೇವನಾಯಿತು
ಬರಡು ನೋಡವು ಜೂರಿ ಸರಿಯಿತು
ಕ್ಷೇನು ಬರೆಯಲು ನಾಡು ಹೊರಟಿತು
ನಾಡ ಬಿಡುಗಡೆಯೊಂದಿಗೆ..... ॥೩॥

ಅನ್ನಬ್ರಹ್ಮನ ಗರ್ಭಗುಡಿಯಲಿ
ಶಂಖನಾದವು ನಿನದಗೈದಿತು—
ಬಡವ ಬಲ್ಲಿದರೆಂಬ ಭೇದವು
ಬುದ್ಧಿಹೇಳಿತು ತನ್ನ ಕಾಲಿಗೆ;
ಮೂಡಿಬಂದಿತು,—
''ಕೂಡಿ ದುಡಿಯುವ ಕೂಡಿ ಉಣ್ಣುವ ಕಾಲವು''
ನಾಡ ಬಿಡುಗಡೆಯೊಂದಿಗೆ..... ॥೪॥

ತೂತುಚೀಲವು ಗಟ್ಟಿಯಾಗಿದೆ
ತುತ್ತು ಅದರೂ ತೃಪ್ತಿತಂದಿದೆ
ಚಿಂದಿ ಅಂಗಿಯು ಮಾಯವಾಗಿದೆ
ಅರ್ಧವಿದ್ದರೂ ಮಾನ ಉಳಿದಿದೆ
ಸಣ್ಣ ಗುಡಿಸಿಲು ಹಿರಿಯ ಹೃದಯವು
ಚಿಕ್ಕ 'ನಜರು' ದೊರವಾಗಿದೆ
ನಾಡ ಬಿಡುಗಡೆಯೊಂದಿಗೆ..... ॥೫॥

ನುರಿತ ಕೆಲಸವು ಜೀವ ಪಡೆದಿದೆ
ಬಡಿಗ ಬಡವನ ಬಲವ ಬೆಳಸಿದೆ
ಮಣ್ಣು ಮಣ್ಣಿನ ನಾಡಿಸುಡಿತದಿ—
ಕುಂಭಕಾರನ ಬಾಳುಹಾಡದು
ಹಿಗ್ಗಿ ಹಾಡಿದೆ, ಆಟವಾಡಿದೆ
ಜಿಂಕೆಯಂತೆಯೆ ನಲಿದು ಕುಣಿದಿವೆ
ನಾಡ ಬಿಡುಗಡೆಯೊಂದಿಗೆ..... ॥೬॥

ಉಕ್ಕು ನಕ್ಕಿತು ಲೋಹ ಕುಣಿದಿತು
ನಿತ್ಯ ತೃಪ್ತನು ನಿತ್ಯಯೋಗಿಯು
ನಂಬಿ ಬಂದಿಹ ಕಲೆಯಕಾರನು
ಹುಲ್ಲು ಮೆದೆಯದು ಕಾಲುಕಸವೆ ?
ರಸವು ರಸನೇ-ಚೀಲಚಾಪಿಯು ಪರ್ಸುಗಳಲಿ
ಮೆದೆಯಗಾರನ ಬಾಳಹದವದು ಕ್ಷೇಮವೆಂದಿದೆ
ನಾಡ ಬಿಡುಗಡೆಯೊಂದಿದೆ..... ॥೭॥

ಕೈಯ ಮುಗ್ಗದ ಮೊಗ್ಗೆ ಅರಳಿತು
ಬಿಡಿಸಿ ನಿಂತಿತು ಬಣ್ಣ ಬಣ್ಣದ
ಕಣ್ಣು ಕಣ್ಣಿನ ದುಂಡುಪಕಳೆಯು;
ಸೆಳೆದುಕೊಂಡಿತು ಪ್ರಾಕುನಾರಿಯ—
ನೀತಿ ಕಲಿಸಿತು ದಟ್ಟಿಯುಡಿಸಿತು
ಬಟ್ಟೆಯಾಯಿತು ಕಲೆಯು ಗೆದ್ದಿತು
ನಾಡ ಬಿಡುಗಡೆಯೊಂದಿಗೆ..... ॥೮॥

ಎಲ್ಲ ಕಲೆಗಳು ಕುಕಿಲುವೊಂದಿವೆ.
ರೆಕ್ಕೆ ಬಿಚ್ಚುತ ಮುದದಿ ಮೆರೆದಿವೆ
ಕಲ್ಲುಕುಟಿಗನು, ಚರ್ಮಕಾರನು,
ರಂಗುಗಾರನು, ಚಿತ್ರಕಾರನು;—
ಎಲ್ಲ ಕಾರರು ಬೆಳಕುಕಂಡರು
ನಾಡಗುಡಿಯನು, ಕಲೆಯಗುಡಿಯನು ಹಾರಿಸಿ
ನಾಡ ಬಿಡುಗಡೆಯೊಂದಿಗೆ..... ॥೯॥

ಕೋಳಿ ಕೂಗಿತು ಬೆಳಗು ಮೂಡಿತು
ನಾಡ ನಾಡಿಯು ಜೀವ ಪಡೆಯಿತು
ತನ್ನತನವನು ಉಳಿಸಿಕೊಳ್ಳುತ,
ಬೇರೆ ನಾಡಿನ ಗೆಲ್ಲನಡೆಯನು
ನೋಡಿ ಹಿಗ್ಗುತ, ತಾನು ಅಂತೆಯೆ—
ಬಿಚ್ಚು ಹೃದಯದಿ ನಡೆಯ ಕಲಿಯಿತು
ನಾಡ ಬಿಡುಗಡೆಯೊಂದಿಗೆ..... ॥೧೦॥

ಆಸೆ, ನಿರಾಸೆ

(ಲಲಿತ ಪ್ರಬಂಧ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ.

ಮಾನವ ಜೀವನದಲ್ಲಿ ಆಶೆ-ನಿರಾಶೆಗಳಿಗೆರಡಕ್ಕೂ ಎಡೆಯಿದೆ. ಆಶೆ ಮಾನವನಲ್ಲಿ ಚೈತನ್ಯಶಕ್ತಿಯನ್ನು ಹುಟ್ಟಿಸುವಂತಹದು; ನಿರಾಶೆ ತಾತ್ಕಾಲಿಕವಾಗಿ ಮಾನವನನ್ನು ನಿಷ್ಕ್ರಿಯಗೊಳಿಸುವುದಾದರೂ, ಹೊಸದೊಂದು ಆಶೆಯ ಕೂಸಿಗದು ತಾಯಿಯಾಗಿರುವುದು.

ಕ್ಷಣಕ್ಷಣಕ್ಕೂ ವ್ಯಕ್ತಿಯಲ್ಲಿ ಆಸೆ ಸ್ಫುರಿಸದಿದ್ದರೆ ಇಂದಿನ ರಭಸದ ಯಾಂತ್ರಿಕಯುಗದಲ್ಲಿ ಅವನ ಏಳ್ಗೆಯೇ ಸಾಧಿಸದೆಂಬುದು ಅನುಭವದ ಮಾನದಿಂದ ಸತ್ಯಸಂಗತಿ. ದೈವವಾದಿಯಾಗಿ ಬದುಕುವ ಆಸೆ ತೊರೆದವನಂತೂ ಜೀವನ್ಮೃತ. ಅಣುರೇಣು ತೃಣಕಾಷ್ಠಗಳಲ್ಲಿ ಕೂಡ ಆಶಾಂಕುರ ಗೋಚರಿಸುವುದೆಂದು, ಬದುಕುವ ಹೋರಾಟ ಅತ್ಯುಜ್ವಲವಿರುವುದೆಂದು ವಿಜ್ಞಾನಿಗಳು ಪ್ರಮಾಣಪೂರ್ವಕವಾಗಿ ಮಂಡಿಸುತ್ತಿರುವಾಗ, ಮಾನವನ ಮಾತೇಕೆ? ಅವನು ಹೇಳಿಕೇಳಿ ಬುದ್ಧಿಜೀವಿ, ಶ್ರೇಷ್ಠಜೀವಿ— ಈ ಸೃಷ್ಟಿವ್ಯಾಪಾರದಲ್ಲಿ! "ಅಂಗಂ ಗಲಿತಂ ಪಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಂ" ಎಂಬ ಶ್ರೀಶಂಕರ ಭಗವತ್ಪಾದರ ನುಡಿಯಂತೆ, ಆಶಾಬಂಧವು ಮಾನವನ ಕೈಬಿಡದು ಸಾಮಾನ್ಯರಂತೂ ತಿಳಿಯದೆಯೇ ಆದರೆ ದಾಸರಾಗಿರುವರು. ದೊಡ್ಡವರು ತಮ್ಮ ಸಂಸ್ಕಾರಬಲದಿಂದ ಹೇಗೋ ಆಶಾತೀತರಾಗಿ ಬದುಕಲು ನಿತ್ಯವೂ ಹೋರಾಡುತ್ತಿರುವರು. ಆಶೆ ಇಂತು ಜೀವನದುದ್ದಕ್ಕೂ ಅನಿವಾರ್ಯವಾಗಿ ಪರಿಣಮಿಸುವುದೆನಿಸಿದರೂ ನಿರಾಶೆಗೆ ನಿಕಟವರ್ತಿಯಾಗಿದೆಯೆಂಬುದು ಕೂಲಂಕಷವಾಗಿ ವಿಚಾರಿಸುವಾಗ ಹೊಳೆಯುವುದಲ್ಲವೆ? ಕರುಣೆ, ಶೃಂಗಾರ, ವೀರ ಒಂದೆ ಪರಿಸರದಲ್ಲಿ ಸಾಮಾನ್ಯವಾಗಿ ಕಾಣುವಂತೆ, ಆಶೆ-ನಿರಾಶೆಗಳದೂ ಗತಿ. ಆದರೆ ಅವುಗಳ ಮೊಗ ಮಾತ್ರ ವಿರುದ್ಧದಿಸೆಗಳಲ್ಲೆಂಬುದು ಮನಸೀಯ ನುಡಿ—ವಿನೋದ ವಿರಸಗಳ ಸರಣಿಯಲ್ಲಿ ಅಷ್ಟೆ!

ಇರಲಿ. ಆಸೆಯ ಅತಿವ್ಯಾಪಕತೆಯ ನಿದರ್ಶನ ಅರಸಲು ನಾವು ಬಹುದೂರ ಕ್ರಮಿಸುವುದಗತ್ಯವಿಲ್ಲ. ಜಾಗತಿಕ ಮಹಾಕಾವ್ಯಗಳನ್ನು ಸ್ಥೂಲವಾಗಿ ಅವಲೋಕಿಸಿದರೆ ಸಾಕು. ಮಹಾಭಾರತವನ್ನೇ ಅವಲೋಕಿಸುವಾ. ದುರ್ಯೋಧನನಿಗೆ ಗದಾಯುದ್ಧದಲ್ಲಿ ಸೋಲೊದಗಿತು. ಸಹೋದರರು ನಾಮಶೇಷರಾದರು. ಸುಖದುಃಖಗಳಲ್ಲಿ ಅವನಿಗುಪದೇಶಿಸುವ ಶಕುನಿ, ಸ್ವಹಿತವನ್ನಲಕ್ಷಿಸಿ ಜೀವನವನ್ನೇ ಒಡೆಯನಿಗಾಗಿ ಮುಡುಪಾಗಿಸಿದ ಕರ್ಣ-ಯಾವಾಗಲೋ ಕೈಜೆಲ್ಲಿ ಕುಳಿತಿದ್ದರು. ಇಂತಹ ವಿಪನ್ನಾವಸ್ಥೆಯಲ್ಲಿಯೂ ಅಶ್ವತ್ಥಾಮ, ದುರ್ಯೋಧನನಲ್ಲಿ ಆಶಾಂಕುರ ಹುಟ್ಟಿಸಲು ಹೆಣಗಿದ. ಅಮಾನುಷ ಕಾರ್ಯ ಕೈಕೊಂಡ. ಮರಣೋನ್ಮುಖನಾದ ಅವನಿಗೆ ಸ್ವಲ್ಪಾಂಶದಲ್ಲಿಯಾದರೂ ಸಮಾಧಾನವಾಗಲೆಂದು, ಉಪಪಾಂಡವರನ್ನು ಸಂಹರಿಸಿ ಅವರ ಶಿರಸ್ಸು ತಂದು ತೋರಿಸಿದ. ಎಲ್ಲ ಕಳೆದುಕೊಂಡರೂ ಕೊನೆಯ ಗಳಿಗೆಯಲ್ಲಿಯಾದರೂ ಉನ್ಮಾದ ಅಡಿ ಇಟ್ಟೇತೆಂದು ಹಂಬಲಿಸುವ ದುರ್ಯೋಧನನ ಆಶೆ ಬಲವತ್ತರವಾದ.ದೆಂದೇ ಹೇಳಬೇಕು.

ಆಂಗ್ಲ ಕವಿಪ್ರವರ ಮಿಲ್ಟನ್‌ನ ಮಹಾಕಾವ್ಯನಾಯಕ ಸೇಟನ್‌ನನ್ನು ಹೀಗಯೇ ಎಡಕ್ಕೆ ಇಟ್ಟು ಬಲಕ್ಕೆ ತೆಗೆಯುವಂತೆನಿಸುವುದು. ಅವನಾದರೂ ಮಹಾಯೋಧ. ಬೇಲಿಯಲ್, ಮೊಲಾಕ್, ಬೀಲ್ಜೆಬಬ್, ಮ್ಯಾಮನ್ ಕೇವಲ ಸಾಮಾನ್ಯರೆ? ಒಬ್ಬನು ಜೀವದ ಹಂಗುದೊರೆದು ಸ್ವಾತಂತ್ರ್ಯಕ್ಕಾಗಿ ಕಾದುವವನಿದ್ದರೆ, ಇನ್ನೊಬ್ಬ ಒಳ್ಳೆವಾಗ್ಮಿ-ಸುಸಂಸ್ಕೃತ. ಬೇರೊಬ್ಬ ಶಕುನಿಯಂತೆ ಕಾರಸ್ಥಾನಿ, ತೀರ ವ್ಯವಹಾರಿ! ಇಂತಹ ಪರಿವಾರಕ್ಕೆ ಅಧಿದೇವನೆನಿಸಿದ ಸೇಟನ್ನನಿಗೂ ಸುಖಲೇಶವಿರಲಿಲ್ಲ. ಇಡೀ ತಂಡವೇ ಜ್ವಾಲಾಮಾಲೆಯಲ್ಲಿ ಸಿಕ್ಕು ತಲ್ಲಣಿಸಿಹೋಗಿತ್ತು-ನರಕದಲ್ಲಿ. ಆದರೂ ನಾಯಕ ಸೇಟನ್ನ ಧೃತಿಗುಂದಲಿಲ್ಲ. ಗೆಲ್ಲುವ ಗುಟ್ಟು ಈ ಹುಲಿಗೆ ಕರಗತವಾಗಿರದಿದ್ದರೂ ಆರಸೊತ್ತಿಗೆ ಕನಸಾಗಿ ಪರಿಣಮಿಸಿದ್ದರೂ, ಆಶಾಕಿರಣ ಮಾತ್ರ ಇನ್ನೂ ಕೈಕೊಟ್ಟಿರಲಿಲ್ಲ. ಅದೇ ಅವನ ಹಿರಿಸೊತ್ತು.

> "What though the field be lost?
> All is not lost; the unconquerable will,
> And study of revenge, immortal hate
> And courage never to submit or yield
> And what else is not to be overcome?"

ಎಂಬ ಅವನ ಉದ್ಗಾರ ನಿರಂತರ ಆಸೆಯ ಪ್ರತೀಕ, ಧೀರೋದಾತ್ತತೆಯ ಮಾದರಿ!

ಆಂಗ್ಲ ಚರಿತ್ರಕಾರ ಹರ್ಬರ್ಟ್ ಫಿಶರರು, ಫ್ರೆಂಚ್ ಮಹಾನೇತಾಜಿ ನೆಪೋಲಿಯನ್ನನಿಗೆ ಕೆಲವೊಂದು ದೃಷ್ಟಿಯಿಂದ ಅನ್ಯಾಯ ಬಗೆದಿದ್ದರೂ, ಅವನ ಸ್ವಭಾವವನ್ನು ನಿಚ್ಚಳವಾಗಿ ಮೂಡಿಸಿದ್ದಾರೆ. ಗುಣದೋಷಗಳನ್ನು ಕಲಾತ್ಮಕವಾಗಿ ವಿವೇಚಿಸಿರುವರು. ಹಲವೆಡೆಗಳಲ್ಲಿ ತರ್ಕ ಮೊಲಿ ಹೊಡೆದರೂ ಪಾತ್ರವಿವೇಚನೆ ಚಿತ್ರಮಯವಾಗಿದೆ. "ಸೃಷ್ಟಿಯು ಅದ್ಭುತಶಕ್ತಿ ಎನಿಸಿದ ಬಿರುಗಾಳಿಯಂತವ, ಒಳ್ಳೆ ವ್ಯವಹಾರ ಕುಶಲ. ಎಂತಹ ಆಪತ್ಕಾಲದಲ್ಲಿಯೂ ಕೈಕಾಲು

ಕಳೆದುಕೊಳ್ಳುವವನಲ್ಲ. ಗೃಹಸೌಖ್ಯಕ್ಕೆ ಎಷ್ಟೂ ಎರವಾಗಿರಲಿಲ್ಲ. ಒಳ್ಳೆ ನಿಸರ್ಗ ಪ್ರೇಮಿ, ಕಲಾವಿದ, ವಾಗ್ಮಿ ರಾಜಕಾರಣ ಪಟು" ಎಂದು ಮುಂತಾಗಿ ನೆಪೋಲಿಯನ್‌ನನ್ನು ತಕ್ಕಡಿಯಲ್ಲಿಟ್ಟು ತೂಗಿದ್ದರೂ ಅವನ ಸ್ವಭಾವ ಚಿತ್ರಿಸುವಾಗ—

" To the end he was the Corsair watchful against his enemies and scenting the faintest breath of treachery in the wind "

ಎಂದು ಉದ್ಗಾರ ತೆಗೆದಿರುವರು. ತನ್ನ ಭವ್ಯ ಆಶಾಮಂದಿರಗಳನ್ನು ನೆಲಕ್ಕುರುಳಿಸಿದ ವಾಟರ್ಲೂ ಯುದ್ಧವಾದೊಡನೆಯಂತೂ ನೆಪೋಲಿಯನ್ನನ ಪ್ರಜ್ಞೆ ಜಾಗೃತವಾಯಿತಂತೆ! ಮುತ್ತು ರತ್ನಗಳಿಂದ ಕೆಚ್ಚಿದ ಕೋಟನ್ನು ಅವನು ಯಾವಾಗಲೂ ಬಳಿಯಲ್ಲಿಟ್ಟುಕೊಂಡಿರುತ್ತಿದ್ದನಂತೆ! ವಿಪನ್ನಾವಸ್ಥೆಯಲ್ಲಿ ಸಹಾಯ ಹೇಗೆ ಒದಗೀತು ಎಂದು ಹೆದರಿಕೆ ಅವನನ್ನಾವರಿಸಿರಬಹುದೆ?–ಎಂದು ಭಿಶರರ ವಾದ. ಅಧಿಕಾರದ ತುತ್ತತುದಿಗೆ ಏರಿದಾಗಲೂ ನಾಳೀನಾದೀತು, ನಾನು ಭದ್ರವಾಗಿ ಉಳಿದೇನೆ?–ಎಂಬ ಚಿಂತೆ ಅವನನ್ನು ಬಾಧಿಸುತ್ತಿತ್ತಂತೆ! ಒಟ್ಟಿನಲ್ಲಿ ತಾನು ಮೊದಲು ಬದುಕಬೇಕೆಂಬ ಆಶೆ ನೆಪೋಲಿಯನ್‌ನಿಗೆ! ತಾನಿದ್ದರೆ ಜನತೆಯ ಸುಖಕ್ಕಾಗಿ ಹೆಣಗುವ ಹವ್ಯಾಸವೇನೊ!

ಕಾವ್ಯರಂಗಕ್ಕಡಿಯಿಟ್ಟಾಗ, ಅದರಲ್ಲಿಯೂ ನಿಸರ್ಗಕವಸಗಳನ್ನೋದುವಾಗ, ರಸಿಕನ ಮನಸ್ಸು ಸೂರೆಗೊಳ್ಳುವುದು. ಸ್ಕಾಯ್‌ಲಾರ್ಕ್ ಪಕ್ಷಿಯನ್ನುದ್ದೇಶಿಸಿ ವರ್ಡ್ಸ್‌ವರ್ತ್ ಕವಿ :

Etherial minstrel pilgrim of the sky
Dost thou despise the world where cares abound ?"

ಎಂದು ಕೇಳುವಾಗ, ಆ ಪುಟ್ಟ ಪಕ್ಷಿಯ ಹೃದಯ ಆಶೆಯಿಂದ ತುಂಬಿಹೋಗಿದೆ ಎನಿಸುವುದಿಲ್ಲವೆ? ಬೆಳಕಿನ ಪ್ರತೀಕವಾಗಿ, ನಾದಬ್ರಹ್ಮದಲ್ಲಿ ಸಂಸಾರವನ್ನು ಅಖಂಡವಾಗಿ ತೇಲಿಸಿದರೂ, ಮಧುಮಾಸದ ದೂತಿಯಾಗಿ ಪರಿಣಮಿಸಿದರೂ, ಭೂವ್ಯೋಮಗಳನ್ನು ಒಂದೆಡೆ ಪೋಣಿಸುವ ರೇತಿಮೆಯ ದಾರವಾದರೂ, ಆ ಪಕ್ಷಿ ಇರುಳು ತನ್ನ ಇನಿಯಳನ್ನು, ಚಿಕ್ಕ ಮರಿಗಳನ್ನು ಮರೆಯದಂತೆ! ಎಂತಹ ವಾತ್ಸಲ್ಯ! ಜಗಜ್ಯೋತಿ ಎನಿಸಿದರೂ ಆತ್ಮಹಿತವನ್ನು ಪೂರ್ಣ ಲಕ್ಷಿಸುವುದು ಪ್ರಮಾದ ಎಂಬ ಸತ್ಯದ ಸಿದ್ಧಾಂತವನ್ನು ಕವಿ ತನ್ನ ಕೌಶಲದಿಂದ ಹೊರಹೊಮ್ಮಿಸುವಾಗ ಅನುಷಂಗಿಕವಾಗಿ ಆಶೆಯ ಸ್ವರ್ಣರೂಪ ಯಾರಿಗೂ ಗೋಚರಿಸದುಂಟೆ?

ದೈನಂದಿನ ಜೀವನದಲ್ಲಿ ಕೂಡ ಆಶೆ ತನ್ನ ಸುಕುಮಾರಗರಿಗೆದರಿ ಹಾರಾಡುವುದುಂಟು. ಚಿಕ್ಕ ಮಗುವಿನ ದೃಷ್ಟಾಂತ ತೆಗೆದುಕೊಳ್ಳಿ. ತನ್ನ ಪ್ರಗತಿಯ ಮಾರ್ಗದಲ್ಲಿ ಅದು ಆಗೀಗ ಪ್ರಶಂಸೆ ಅಪೇಕ್ಷಿಸುವುದು. " ನನ್ನ ಅಕ್ಷರಗಳು ಹೇಗಿವೆ, ಸ್ವಭಾವ ಹೇಗಿದೆ,' ಉಡಿಗೆ ತೊಡಿಗೆ ಎಷ್ಟು ಅಂದ! " ಎಂದು ಕೇಳದಿದ್ದರೆ ಅದರ ಏಳ್ಗೆ ಕನಸು! ಆಸೆಯ ಅಸರಾವತಾರ ಎನಿಸಿದ ಮಹತ್ತ್ವಾಕಾಂಕ್ಷೆ ಸೆಡವು ಮಾಡಿಕೊಂಡು ಹೋದರಂತೂ ಶಿಕ್ಷಣರಂಗ ಅರಬಸ್ತಾನವಾಗುವಲ್ಲಿ ಸಂದೇಹವಿಲ್ಲ. "ಏನ್ರಿ ನಮ್ಮ ಹುಡುಗಾ ಧಡ್ಡ ಕ್ವಾನ್ಯಾ ಇದ್ದಾನ! ತ್ರಿಕಾಲದಾಗೂ ಎಸ್. ಎಸ್. ಸಿ ಪಾಸಾಗೊ ಆಶಾ ಇಲ್ಲ!" ಎಂದು ಉದ್ಗಾರ ತೆಗೆವ ತಂದೆ ಇದ್ದರೆ, ಆತನು ಸಮಾಜಕ್ಕೆ ಬಾಹಿರ. ಅದರ ಮೊದಲ ಶತ್ರು! ರಾಷ್ಟ್ರದ ಹಿತೈಷಿಯಂತೂ ಹೇಗೂ ಆಗಲಾರ: ಹತ್ತು ತಪ್ಪುಮಾಡಿದ ಮಾತ್ರಕ್ಕೆ ತಿರಸ್ಕರಿಸದೆ ಹನ್ನೊಂದನೆಯದನ್ನು ಮಾಡದಂತಹ ಸಂಸ್ಕಾರಮಯ ವಾತಾವರಣ ಮನೆಯಲ್ಲಿ ನಿರ್ಮಿಸುವವನೇ ನೈಜ ತಂದೆ. ಅಂತಹ ಆಶಾಬೀಜಗಳನ್ನೊಡುವ ತಾಯಿಯೇ ನೈಜ ತಾಯಿ.

ತಾತ್ಪ್ರತಿಕವಾಗಿ ಆಶೆಯ ಸಮೀಪದಲ್ಲಿಯೆ ಬೀಡುಬಿಟ್ಟಿರುವ ನಿರಾಶೆ ಹಲವರಿಗೆ ಸ್ಫೂರ್ತಿಯ ಆಗರ. ಹೊತ್ತು ಬಂದಂತೆ ಕೊಡೆ ಹಿಡಿದು ಪರಿಣಾಮದಲ್ಲಿ ಸಮಾಜದ ಹಿತ ಸಾಧಿಸುವ ಸಾಮಾಜಿಕ ಮುಂದಾಳುಗಳು ಆಶೆಯ ಮೇಲೆ ಯಾವಾಗಲೂ ಕೈ ಊರಿದರೆ ನಡೆಯದು. ತಾಳ್ಮೆಯೇ ಅವರು ಅಡಿಗಡಿಗೆ ಸಾಧಿಸಬೇಕಾದ ಸದ್ಗುಣ. ನಿರಾಶೆಯೇ ಅವರ ಅಧಿದೇವತೆ. ಚಳಿ ಬಿಸಿಲು ಮಳೆ ಗಾಳಿಗಳನ್ನವರು ನಿರುಕಿಸಿ ಉದ್ವಿಗ್ನರಾದರೆ, ರಾಷ್ಟ್ರದ ಆಧಾರಸ್ತಂಭ ಹೇಗಾದಾರು? ಸುಖದುಃಖಗಳನ್ನು ಬದಿಗಿರಿಸಿ, ದ್ವಂದ್ವಾತೀತರಾದ, ಜಗದ್ವ್ಯಾಪಾರದಲ್ಲಿ, ತತ್ಪರರಾಗಿರುವವರೇ ಮಹಾಪುರುಷರಲ್ಲವೆ? ನಿರಾಶಿನ್ನಿಮನೋ ಭಾವ ಎಂದು ಗೀತೆ ಉಪದೇಶಿಸುವುದು, ನಿರ್ವಾಣವೇ ಮಹತ್ತಾರಕ ಶಕ್ತಿ ಎಂದು ಗೌತಮ ಉಸುರುವುದು, ನಿರ್ಲಿಪ್ತತೆಯ ಏಳ್ಗೆಯೇ ಮೂಲ ಎಂದು ದಾಸರು ಶಿವಶರಣರು ಬೋಧಿಸುವುದು ಲೋಕಕಲ್ಯಾಣದ ದೃಷ್ಟಿಯಿಂದಲ್ಲವೆ? ಇದೀಗ ಆಸೆ-ನಿರಾಸೆಗಳ ಜಾಲ, ಇಂದ್ರಜಾಲ!

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಸೂರಾಟ ಮಾಡುವವರು.

ಸಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಹೋಮಿಯೋಪತಿ ಚಿಕಿತ್ಸಾಕ್ರಮದ ಮೂಲಕರ್ತೃ ಹಹ್ನಿಮಾನರು.

ಕುಮಾರಿ ಎಂ. ಕೆ. ಉಮಾದೇವಿ, ಕನಕಪುರ

ಜರ್ಮನಿಯ ಔಷಧವಿಜ್ಞಾನಿಯೊಬ್ಬ ಹೋಮಿಯೋಪತಿ ವೈದ್ಯಕಕ್ರಮವನ್ನು ಹುಡುಕಿ, ಅದುವರೆಗಿನ ಚಿಕಿತ್ಸಾಕ್ರಮದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿಬಿಟ್ಟ. ಆತನ ಪರಿಚಯ ಎಲ್ಲರಿಗೂ ಇರಬೇಕು !

ಇಂದು ಹೋಮಿಯೋಪತಿ ಚಿಕಿತ್ಸಾಕ್ರಮವೆಂದು ಪ್ರಸಿದ್ಧವಾಗಿರುವ ವೈದ್ಯಪದ್ಧತಿಯನ್ನು ರೂಪಿಸಿದ ಕೀರ್ತಿ ಹಹ್ನಿಮಾನರಿಗೆ ಸೇರಿದೆ.

ಹಹ್ನಿಮಾನರು ಜರ್ಮನಿಯ ಸಾಕ್ಸೋನಿ ಪ್ರಾಂತ್ಯದ ಮೆಸ್ಸೆನ್ ಎಂಬ ಪಟ್ಟಣದಲ್ಲಿ ೧೭೫೫ರ ಏಪ್ರಿಲ್ ೧೦ ರಂದು ಜನ್ಮತಾಳಿದರು. ಇವರ ಪೂರ್ಣ ಹೆಸರು ಕ್ರಿಶ್ಚಿಯನ್ ಫೆಡ್ರಿಕ್ ಸ್ಯಾಮ್ಯುಯಲ್ ಹಹ್ನಿಮಾನರೆಂದು. ತಂದೆಗೆ ಸಿಂಗಾಣಿ ಸಾಮಾನುಗಳ ಮೇಲೆ ಚಿತ್ರ ಬರೆಯುವುದೇ ಜೀವನಾಧಾರವಾದ ವೃತ್ತಿ. ಹಗಲೆಲ್ಲಾ ತಂದೆಗೆ ನೆರವಿತ್ತು, ರಾತ್ರಿ ಕಾಲದಲ್ಲಿ ಅಧ್ಯಯನ ಮಾಡುತ್ತಿದ್ದರು. ಅಷ್ಟು ಅನನುಕೂಲವಿದ್ದರೂ ಮಹಾಮೇಧಾವಿಯಾದ ಕಾರಣ ಒಂಬತ್ತು ಭಾಷೆಗಳನ್ನು ಕಲಿತರು. (ಗ್ರೀಕ್, ಹಿಬ್ರೂ, ಅರ್ಯಬಿಕ್, ಲ್ಯಾಟಿನ್, ಇಟಾಲಿಯನ್, ಸಿರಿಯನ್, ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್) ವೈದ್ಯಶಾಸ್ತ್ರ ಮತ್ತು ರಸಾಯನ ಶಾಸ್ತ್ರದಲ್ಲಿ ಪ್ರಾವೀಣ್ಯತೆಯನ್ನೂ ಗಳಿಸಿದರು.

ತನ್ನ ೨೪ನೆಯ ವಯಸ್ಸಿನಲ್ಲಿ ಎಂ. ಡಿ. ಡಿಗ್ರಿ ಪಡೆದು ಅಲೋಪತಿಕ್ ಚಿಕಿತ್ಸೆ ನಡೆಸಲು ಅರ್ಹತೆ ಹೊಂದಿದರು. ಹೆನ್ರಿಯೆಟ್ಟಾ ಕಚ್ಲರ್ ಎಂಬ ವಿದ್ಯಾವಂತೆಯಾದ ಜರ್ಮನ್ ತರುಣಿಯನ್ನು ಪ್ರೀತಿಸಿ, ೧೭೮೯ರಲ್ಲಿ ವಿವಾಹವಾದರು. ನಂತರ ಡ್ರೆಸ್‌ಡನ್ನಿನ ಆಸ್ಪತ್ರೆಯಲ್ಲಿ ಸೀನಿಯರ್ ಸರ್ಜನ್ ಆಗಿ ಸೇವೆಸಲ್ಲಿಸಿದರೂ, ನೌಕರಿ ಸರಿಬೀಳದೆ ರಾಜೀನಾಮೆಯಿತ್ತು ಲೈಪ್‌ಸಿಗ್ ಬಳಿಯ ಒಂದು ಹಳ್ಳಿಯಲ್ಲಿ ತಾವೇ ಸ್ವಂತವಾಗಿ ವೈದ್ಯಶಾಲೆಯನ್ನು ತೆರೆದರು.

ಶುಭದ್ರಜೀವನವೊಂದೇ ಹಹ್ನಿಮಾನರ ಬಾಳಗುರಿಯಾಗಿರಲಿಲ್ಲ. ಸತತ ಸತ್ಯಾನ್ವೇಷಣೆಯೇ ಅವರ ವೈಜ್ಞಾನಿಕ ಮನದ ಹವ್ಯಾಸವಾಗಿದ್ದಿತು. ಆಗ ಬಳಕೆಯಲ್ಲಿದ್ದ ಅಲೋಪತಿಕ್ ಔಷಧಗಳ ಅನಿರ್ದಿಷ್ಟ ಗುಣಸ್ವಭಾವಗಳಿಂದ ತುಂಬಾ ವ್ಯಾಕುಲಿತರಾದರು. ಅಂಧ ಸಂಪ್ರದಾಯಗಳನ್ನು ಕಣ್ಮುಚ್ಚಿಕೊಂಡು ಅನುಸರಿಸುವುದು ಅವರಿಗೆ ಸಾಧ್ಯವಿರಲಿಲ್ಲ. ತಮ್ಮ ಅಂತಃಸಾಕ್ಷಿಗೆ ಒಪ್ಪಿಗೆಯಾಗದ ಕೆಲಸ ಮಾಡಲು ಹೇಸಿ, ವೈದ್ಯವೃತ್ತಿಯನ್ನೇ ಬಿಟ್ಟು, ವಿಜ್ಞಾನದತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದರು.

ವೈಜ್ಞಾನಿಕ ಪುಸ್ತಕಗಳನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿ, ಬಂದ ಅಲ್ಪ ಉತ್ಪನ್ನದಿಂದಲೇ ಬಹಳ ಕಾರ್ಪಣ್ಯದ ಜೀವನ ನಡೆಸುತ್ತಿದ್ದರು.

ಆದರೂ ಸತ್ಯಾನ್ವೇಷಣೆಯ ಹಿರಿಯ ಆದರ್ಶವನ್ನು ಮುಂದಿಟ್ಟುಕೊಂಡು, ಎಲ್ಲ ಕಷ್ಟಕ್ಕೂ ಎಡೆಗೊಟ್ಟರು.

ಸಿಡುಬು, ಕಾಲರಾ, ಬೈಸಾಯಿಡ್ ಇತ್ಯಾದಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಇನಾಕ್ಯುಲೇಷನ್ ಮಾಡುವುದಿಲ್ಲವೇ? ಯಾವ ರೋಗಾಣುಗಳು ಕಾಯಿಲೆಯನ್ನು ಉತ್ಪತ್ತಿ ಮಾಡುವುವೋ, ಅವೇ ರೋಗಾಣುಗಳನ್ನು ಸಿಶ್ಚೀತಸಗೊಳಿಸಿ ಅಲ್ಪಪ್ರಮಾಣದಲ್ಲಿ ದೇಹದ ಮೇಲೆ ಪ್ರಯೋಗಿಸುವುದರಿಂದ, ಆ ರೋಗಗಳನ್ನು ನಿರೋಧಿಸಬಹುದು. ಇದೇ ತತ್ತ್ವ ಔಷಧೀ ಮೂಲಿಕೆಗಳಿಗೂ ಏಕೆ ಅನ್ವಯವಾಗಬಾರದೆಂದು ಹಹ್ನಿಮಾನ್ ಚಿಂತಿಸುತ್ತಿದ್ದರು.

ದೊಡ್ಡ ಪ್ರಮಾಣದಲ್ಲಿ ಯಾವುದಾದರೂ ಮೂಲಿಕೆಯನ್ನು ಸೇವಿಸಿದರೆ ಅದು ದೇಹದ ಮೇಲೆ ವಿಶಿಷ್ಟ ಪರಿಣಾಮವನ್ನು ಮಾಡುವುದು. ಅದೇ ಮೂಲಿಕೆಯನ್ನು ಅಲ್ಪಪ್ರಮಾಣದಲ್ಲಿ ಪ್ರಯೋಗಿಸಿ, ಅದೇ ವಿಶಿಷ್ಟ ಲಕ್ಷಣಗಳಿರುವ ಕಾಯಿಲೆಯನ್ನು ಗುಣಪಡಿಸುವುದು ಸಾಧ್ಯವಾಗಬೇಕೆಂದು ಹಹ್ನಿಮಾನರು ತರ್ಕಿಸಿದರು. ಆದರೆ ಅವರ ಊಹೆ ಇನ್ನೂ ಸಿದ್ಧಾಂತವಾಗಿರಲಿಲ್ಲ.

ಹಹ್ನಿಮಾನರು ಈ ಮಧ್ಯೆ ಒಂದು ಅಗ್ನಿಪರೀಕ್ಷೆಗೆ ಒಳಗಾದರು. ಅವರ ಪ್ರೀತಿಯ ಮಕ್ಕಳು ಕಾಯಿಲೆ ಬಿದ್ದರು. ಆಗೇನು ಮಾಡಬೇಕು? ಏನು ಚಿಕಿತ್ಸೆ ಕೊಡಬೇಕು? ಸುಡಿದಂತೆ ನಡೆವುದಾದರೆ ತಾವು ದೂಷಿಸುತ್ತಿದ್ದ ಅಲೋಪತಿಕ್ ಔಷಧಿಗಳನ್ನು ಕೊಡಬಾರದು. ರೋಗ ಗುಣವಾಗದೆ ಉಲ್ಬಣವಾಗಬಹುದು. ಯಾವ ಚಿಕಿತ್ಸೆಯನ್ನೂ ಕೊಡದೆ, ಮಕ್ಕಳ ನರಳಿಕೆ, ಸಂಕಟ ನೋಡುವುದೂ ಕಷ್ಟ. ಹಹ್ನಿಮಾನರು ದೇವರಲ್ಲಿ, ನಿಸರ್ಗನಿಯಮದಲ್ಲಿ ಅಚಲನಂಬಿಕೆಯಿಟ್ಟು, ಔಷಧಿ ಚಿಕಿತ್ಸೆಯನ್ನೇ ಕೊಡಲಿಲ್ಲ.

ದೇವರ ಸೃಷ್ಟಿಯಲ್ಲಿ ಗುಣಕೊಡುವ ಔಷಧೀಗಳು ಖಂಡಿತ ಇವೆಯೆಂದೂ, ಮಾನವರ ಎಲ್ಲ ರೋಗಗಳನ್ನೂ ಗುಣಪಡಿಸಲು ಸಾಧ್ಯವೆಂದೂ ಅದನ್ನು ಕಂಡುಕೊಳ್ಳುವುದು ಮಾನವಪ್ರಯತ್ನದಿಂದ ಸಾಧ್ಯವೆಂದೂ ಹಹ್ನಿಮಾನ್ ದೃಢವಾಗಿ ನಂಬಿದ್ದರು.

೧೭೯೦ರಲ್ಲಿ ಕಲ್ಲನ್‌ರ 'ಮೆಟೀರಿಯಾ ಮೆಡಿಕ'ವನ್ನು ಜರ್ಮನ್ ಭಾಷೆಗೆ ಅನುವಾದಿಸುವಾಗ ಸಿಂಕೋನಾ (ಕ್ವೈನೈನ್)ದ ಗುಣಸ್ವಭಾವದಲ್ಲಿ ಪರಸ್ಪರ ವಿರೋಧಾಭಾಸವಿರುವುದನ್ನು ಹಹ್ನಿಮಾನ್ ಗಮನಿ-

ಸಿದರು. ಸಿಂಕೋನಾ ಮಲೇರಿಯಾಕ್ಕೆ ರಾಮಬಾಣವೆಂಬುದು ಸರ್ವ ವೇದ್ಯವಷ್ಟೇ? ಆರೋಗ್ಯವಂತನಾದ ಮನುಷ್ಯ ಸಿಂಕೋನವನ್ನು ಸೇವಿಸಿದ್ದೇ ಆದರೆ, ಮಲೇರಿಯಾ (ಚಳಿಜ್ವರ)ದ ಲಕ್ಷಣಗಳು ಕಾಣಿಸಿ ಹತ್ತುತ್ತವೆ ಎಂದು ತರ್ಕಿಸಿದರು. ಪ್ರಯೋಗಾರ್ಥವಾಗಿ ತಾವೇ ಸಿಂಕೋನಾ ಸೇವಿಸಿದರು. ಅವರ ತರ್ಕ ನಿಜವಾಯಿತು. ಅನಂತರ ಇನ್ನೂ ಅನೇಕ ಮೂಲಿಕೆಗಳನ್ನು ತಮ್ಮ ದೇಹದ ಮೇಲೆ ಪ್ರಯೋಗಿಸಿಕೊಂಡು, ಅವುಗಳ ಗುಣ-ದೋಷಗಳನ್ನು ಕೂಲಂಕಷವಾಗಿ ಪಟ್ಟಿ ಮಾಡಿದರು.

೧೭೯೬ರಲ್ಲಿ, ಆಗಿನ ಪ್ರಸಿದ್ಧ ವೈದ್ಯಕೀಯ ಪತ್ರಿಕೆಯಾದ 'ಹೂಫಿಲ್ಯಾಂಡ್ ಜರ್ನಲ್'ನಲ್ಲಿ ತಮ್ಮ ಪ್ರಯೋಗಸಿದ್ಧಾಂತಗಳ ಬಗ್ಗೆ ಲೇಖನ ಬರೆದರು. ಇವರ ವೈಜ್ಞಾನಿಕ ನಿಲುವನ್ನು ಸತ್ಯ-ಪ್ರಿಯತೆಯನ್ನು ಮೆಚ್ಚಿಕೊಂಡವರು ಸ್ನೇಹಿತರಾದರು. ಸಂಪ್ರದಾಯ ವಿರೋಧವಾದ ಇವರ ರೀತಿನೀತಿಯನ್ನು ಪ್ರತಿಭಟಿಸಿ, ಹಲವು ವೃತ್ತಿ-ಬಾಂಧವರು ಶತ್ರುಗಳಾದರು.

ಹಹ್ನಿಮಾನರು ಸ್ತುತಿಗೆ ಹಿಗ್ಗಲಿಲ್ಲ; ನಿಂದೆಗೆ ಕುಗ್ಗಲಿಲ್ಲ. ಮಾನವರ ಮೇಲೆ ಪ್ರಯೋಗಿಸಲ್ಪಟ್ಟು ಗುಣ-ಸ್ವಭಾವಗಳು ನಿರ್ದಿಷ್ಟ-ವಾಗಿ ಪಟ್ಟಮಾಡಲ್ಪಟ್ಟಿದ್ದ ಇಪ್ಪತ್ತೇಳು ಮೂಲಿಕೆಗಳ ಬಗ್ಗೆ ' ಫ್ರಾಗ್ಮೆಂಟಾ ಡಿ ವೆರಿಬಸ್'– ಎಂಬ ಪುಸ್ತಕವನ್ನು ಲ್ಯಾಟಿನ್ ಭಾಷೆಯಲ್ಲಿ ಪ್ರಕಟಿಸಿದರು. ಇದೇ ಮೊದಲನೆಯ ಹೋಮಿಯೋಪತಿಕ್ ' ಮೆಟೀರಿಯಾ ಮೆಡಿಕ. ೧೮೧೦ರಲ್ಲಿ ಹೋಮಿಯೋಪತಿಕ್ ಚಿಕಿತ್ಸಾಕ್ರಮದ ಬೈಬಲ್ ಎನ್ನಬಹುದಾದ ' ಆರ್ಗನಾನ್ ' ಎಂಬ ಮಹಾ ಗ್ರಂಥವನ್ನು ಪ್ರಕಟಿಸಿದರು. ಅಲೋಪತಿಕ್ ಚಿಕಿತ್ಸಾಕ್ರಮದ ಲೋಪದೋಷ-ಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿ, ಹೋಮಿಯೋಪತಿಯ ಗುಣ ವಿಶೇಷವನ್ನು ಮನಮುಟ್ಟುವಂತೆ ಪ್ರತಿಪಾದಿಸಿದ್ದಾರೆ– ಈ ಗ್ರಂಥದಲ್ಲಿ.

ಲೆಪ್ಸಿಗ್ ಯೂನಿವರ್ಸಿಟಿಯಲ್ಲಿ ' ಹೋಮಿಯೋಪತಿ ' ಗೆ ಒಂದು ಸ್ಥಾನಕೊಟ್ಟು, ಆ ಸ್ಥಳಕ್ಕೆ ಹಹ್ನಿಮಾನರನ್ನು ನೇಮಿಸಿದರು. ೧೮೧೯ರಿಂದ ೧೮೩೫ರ ವರೆಗೆ ಹಹ್ನಿಮಾನರು ಆ ಸ್ಥಾನವನ್ನು ಲಂಕರಿಸಿ, ಕೀರ್ತಿ ಗಳಿಸಿದರು. ಆದರೆ ಇವರ ' (ವೃತ್ತಿಬಾಂಧವರಾಗಿದ್ದ) ಶತ್ರುಗಳು ತಮ್ಮ ವೃತ್ತಿಯ ಮೂಲಕ್ಕೇ ಧಕ್ಕೆ ತರುವರೆಂದು ಇವರನ್ನೂ ಇವರ ಚಿಕಿತ್ಸಾಪದ್ಧತಿಯನ್ನೂ ಉತ್ಕಟವಾಗಿ ದ್ವೇಷಿಸುತ್ತಾ, ಅಪಾದಿಸುತ್ತಾ, ಅಲ್ಲಿಂದ ಹಹ್ನಿಮಾನರನ್ನು ಹೊರಡಿಸಿದರು. ನಂತರ ಹಹ್ನಿಮಾನರು ಕೋಥನ್ ಎಂಬ ಚಿಕ್ಕ ಗ್ರಾಮದಲ್ಲಿ ನೆಲಸಿದರು. ಇಲ್ಲಿ ಅನಿರೀಕ್ಷಿತ ಅದೃಷ್ಟಕಾದಿತ್ತು. ಇಲ್ಲಿದ್ದಾಗ ಇವರ ಪ್ರತಿಭೆ ರಾಜವಂಶದವರ ಗಮನಕ್ಕೆ ಬಂದಿತು. ರಾಜವಂಶದವರು ಇವರಿಗೆ ತುಂಬಾ ಪುರಸ್ಕಾರ ಕೊಟ್ಟು, ರಾಜವೈದ್ಯನನ್ನಾಗಿ ನೇಮಿಸಿಕೊಂಡರು. ಹಹ್ನಿಮಾನರು ಅಪಾರ ಯಶಸ್ಸು, ಸಂತೃಪ್ತಿ ಗಳಿಸಿ ಹದಿನಾಲ್ಕು ವರ್ಷಗಳನ್ನು ಇಲ್ಲಿ ಸುಖವಾಗಿ ಕಳೆದರು. ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ ಬರೆದರು.

ಹೋಮಿಯೋಪತಿಕ್ ಚಿಕಿತ್ಸಾಕ್ರಮದಲ್ಲಿ ಬಹು ಅಲ್ಪ ಪ್ರಮಾಣದಲ್ಲಿ ಔಷಧಿಯನ್ನು ಕೊಡುತ್ತಾರೆ. ಇದು ವೈಜ್ಞಾನಿಕವಾಗಿ ಸಾಧುವಾಗಿದ್ದರೂ, ಅತ್ಯಲ್ಪಕಾಲದಲ್ಲಿ ಮಹತ್ತರ ಗುಣ ಕೊಡುವುದು ಗಮನಕ್ಕೆ ಬಂದಿದ್ದರೂ, ಇದು ಅಲೋಪತಿಕ್ ವೈದ್ಯರ ಅಪಹಾಸಕ್ಕೂ ವಿರೋಧಕ್ಕೂ ಮುಖ್ಯಕಾರಣವಾಗಿತ್ತು.

ಮೂಲಿಕೆಗಳನ್ನು ಹಾಗೆಯೇ ಉಪಯೋಗಿಸುವುದಕ್ಕಿಂತ, ಅವುಗಳನ್ನು ಶುದ್ಧೀಕರಿಸಿ ಭಟ್ಟಿಯಿಳಿಸಿ ಕೊಡುವುದು ಹೆಚ್ಚು ಗುಣಕರ ಎಂಬುದು ಅನುಭವವೇದ್ಯ. ಹಹ್ನಿಮಾನರು ಇನ್ನೂ ಒಂದು ಹೆಜ್ಜೆ ಮುಂದೆಹೋದರು. ಔಷದಿಗಳಲ್ಲಿನ ಪರಮಾಣುಶಕ್ತಿಯನ್ನು ಉದ್ದೀಪನಿಸಿಗೊಳಿಸಿದಲ್ಲಿ, ಅತ್ಯಲ್ಪ ಪ್ರಮಾಣದ ಔಷಧಿಯಿಂದ ಮಹತ್ತರ ಪ್ರಭಾವ ಪಾಗಿ, ರೋಗನಿರೋಧಕ ಶಕ್ತಿ ವರ್ಧಿಸುತ್ತದೆ. ಔಷಧಿಗಳ ಸುಪ್ತ ಶಕ್ತಿಯನ್ನು ಉದ್ದೀಪನಿಗೊಳಿಸುವ ಮಾರ್ಗವನ್ನು ಹಹ್ನಿಮಾನ್ ತೋರಿಸಿಕೊಟ್ಟರು. [ಕ್ವಿನೀನ್ ಹೆಚ್ಚಾಗಿ ಸೇವಿಸಿದರೆ ಮಲೇರಿಯಾ ಗುಣವಾದರೂ, ಕವಿಯೇ ಕೇಳಿದಂತಾಗಿ ಪಿತ್ತವಿಕಾರಗಳಾಗುವುದೂ ಉಂಟು. ಆದರೆ ಹೋಮಿಯೋಪತಿಕ್ ಔಷಧಿಗಳು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ, ಅವುಗಳು ಎಂದಿಗೂ ಅಲೋಪತಿಕ್ ಔಷಧಿಗಳಂತೆ ವಿಪರೀತ ಪರಿಣಾಮವನ್ನು ಮಾಡುವುದಿಲ್ಲ.] ೧೮೧೯ರಲ್ಲಿ, ಹಹ್ನಿಮಾನರು ಕೀರ್ತಿಶಿಖರಾರೋಢರಾಗಿ, ಸರ್ವರೀತಿಯಲ್ಲೂ ಸೌಖ್ಯವಾಗಿದ್ದಾಗ, ವಿಧಿ ಇನ್ನೊಂದು ಪೆಟ್ಟು ಕೊಟ್ಟಿತು—ಅವರ ಪತ್ನಿ ಕಾಲವಾದರು. ಸಂತರ ಅವರ ಅವನತಿ ಮೊದಲಾಯಿತು. ತಮ್ಮ ೮೦ ನೆಯ ವಯಸ್ಸಿನಲ್ಲಿ ಮತ್ತೆ ಮದುವೆಯಾದರು. ಅವರ ವಧು ನೋಡಲು ಮೆಲಾನಿ ಎನ್ನುವ ಫ್ರೆಂಚ್ ಮಹಿಳೆ. ಈಕೆ ಶ್ರೀಮಂತಿನಿ. ಕಲಾನಿಧಿ. ಕೋಥನ್-ನಲ್ಲಿ ಹಹ್ನಿಮಾನರು ಇದ್ದಾಗಿನಿಂದಲೂ ಈಕೆಗೆ ಪರಿಚಯವಿದ್ದು ಅವರ ಬಗ್ಗೆ ಅಪಾರ ಆದರಾಭಿಮಾನ ತಾಳಿದ್ದಳು.

ಈ ಮದುವೆಯಿಂದ ಹಹ್ನಿಮಾನರಿಗೆ ಸುಖಶಾಂತಿ ಸಿಕ್ಕಲಿಲ್ಲ. ಸಾಂಸಾರಿಕ ಕ್ಲೇಶಗಳು ಹೆಚ್ಚಿದುವು. ಈಕೆಯಿಂದಾಗಿ ತಂದೆ ಮಕ್ಕಳಲ್ಲಿ ವೈಮನಸ್ಸು ಬೆಳೆದು, ತಂದೆ ಮಕ್ಕಳು ವೈರಿಯಾದರು. ಹಹ್ನಿಮಾನರು ತಮಗಾಗಿ ಮೂವತ್ತುಸಾವಿರದ ಆಸ್ತಿ ಇಟ್ಟುಕೊಂಡು, ಎರಡು ಭವ್ಯ ಸೌಧಗಳನ್ನೂ ಒಂದು ಲಕ್ಷಕ್ಕೂ ಹೆಚ್ಚು ಮೌಲ್ಯದ ಆಸ್ತಿಯನ್ನೂ ತಮ್ಮ(ಮೊದಲ ಹೆಂಡತಿಯ)ಮಕ್ಕಳಿಗೆ ಬಿಟ್ಟುಕೊಟ್ಟರು.

೧೮೩೫ರ ಜುಲೈ ೨ರಂದು ಹಹ್ನಿಮಾನರು ಕಡೆಯುಸಿರೆಳೆದರು. ೧೮೮೩ರಲ್ಲಿ ಲೆಪ್ಸಿಗ್‌ನಲ್ಲಿ ಇವರ ಹಿತ್ತಾಳೆಯ ಪ್ರತಿಮೆಯನ್ನು ಗೌರವಾರ್ಥವಾಗಿ ಸ್ಥಾಪಿಸಿದರು.

ಹಹ್ನಿಮಾನರು ಕೀರ್ತಿಶೇಷರಾದರೂ ಸಹ ಅವರ ಸತ್ಯಾನ್ವೇಷಣೆಯ ಫಲವಾಗಿ ರೂಪುಗೊಂಡ ಚಿಕಿತ್ಸಾಪದ್ಧತಿ ಅಭಿವೃದ್ಧಿ ಹೊಂದುತ್ತಿದೆ ಭಾರತದಲ್ಲಿಯೂ ಸಹ ಈ ಚಿಕಿತ್ಸಾಕ್ರಮವನ್ನು ಬೋಧಿಸಲು ಪ್ರತ್ಯೇಕ ಕಾಲೇಜನ್ನು ಇತ್ತೀಚೆಗೆ ತೆರೆದಿದ್ದಾರೆ.ಬಡದೇಶವಾದ ಭಾರತದಲ್ಲಿ ಸುಲಭದ ಚಿಕಿತ್ಸಾಕ್ರಮವು ಅಗತ್ಯವೆಂದೂ, ಅದ ಕಾರಣ ಉಳಿದ ಚಿಕಿತ್ಸಾಪದ್ಧತಿಗಳಿಗೆ ಕೊಟ್ಟಿರುವಂತೆಯೇ ಯೋಗ್ಯ ಅವಕಾಶ ಯುಕ್ತ ಪ್ರೋತ್ಸಾಹಗಳನ್ನು ಈ ಪದ್ಧತಿಗೂ ಕೊಡಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಭದ್ರವಾದ ವೈಜ್ಞಾನಿಕ ಅಡಿಪಾಯದ ಮೇಲೆ, ಹೊಸ ಚಿಕಿತ್ಸಾಕ್ರಮವನ್ನು ರೂಪಿಸಿದ ಮಹಾನ್ ವಿಜ್ಞಾನಿ ಹಹ್ನಿಮಾನರನ್ನು ಹೋಮಿಯೋಪತಿಯ ಜನಕರೆಂದು ಕರೆಯುವುದು ಯೋಗ್ಯವಾಗಿಯೇ ಇದೆ.

ಪುಸ್ತಕ ವಿಮರ್ಶೆ :

ಯಾರು ಹೊಣೆ?

" ಯಾರು ಹೊಣೆ?" ಬಿ. ಆರ್. ಪಾಡಪ್ಪಿ ಅವರ ಎಂಟು ಕತೆಗಳನ್ನೊಳಗೊಂಡ ಸಂಕಲನ. " ನಾರದರ ಸೋಲು" ಎಂಬ ಹೊಸದೊಂದು ಕತೆ ಈ ದ್ವಿತೀಯ ಮುದ್ರಣದಲ್ಲಿ ಬಂದಿದೆ.

ಈ ಹೊಸ ಕತೆಯನ್ನೆ ಮೊದಲು ಅವಲೋಕಿಸುವಾಗ, ಅಲ್ಲಿಯ ವಸ್ತು ಪೌರಾಣಿಕವೆಂದು ಥಟ್ಟನೆ ಯಾರಿಗಾದರೂ ಹೊಳೆಯುವದುಂಟು. ನಾರದರಿಗೆ ಗರ್ವ ಬಂದಾಗಿನ ಸನ್ನಿವೇಶ, ಪುರಾಣ ಪುಣ್ಯ ಕತೆ ಆಗೊಮ್ಮೆ ಈಗೊಮ್ಮೆ ಕೇಳುವಂತಹರಿಗೆ ಹೊಸದಿರಲಿಕ್ಕಿಲ್ಲ. ಆದರೆ ಸಾಮಾನ್ಯ ಓದುಗನಿಗೆ ಇಂತಹ ವಸ್ತು ಹೊಸದೇ. ಭಕ್ತಶ್ರೇಷ್ಠ ಹನುಮಂತನ ಶ್ರದ್ಧೆಯ ಎದುರು, ನಾರದರಿಗೆ ತಮ್ಮ ಸ್ವರ್ಗೀಯ ಸಂಗೀತದ ಬಗೆಗೆ ಹೆಮ್ಮೆ ತಲೆದೋರಿ, ಕೊನೆಗೆ ಜಾಗೃತಾವಸ್ಥೆ ಬರುವುದು ಕತೆಗೆ ಯೋಗ್ಯ ವಿಷಯ.

'ನಾರದರ ಸೋಲು' ನಮ್ಮನ್ನು ಆದ್ಭುತರಮ್ಯ ಲೋಕಕ್ಕೆ ಕರದೊಯ್ದು ಲೋಲಾಡಿಸಿದರೆ, ಉಳಿದ ಕತೆಗಳೆಲ್ಲ ವಾಸ್ತವ ಪ್ರಪಂಚಕ್ಕೆ ನೇರವಾಗಿ ಸಂಬಂಧಪಟ್ಟವು ಇರುವುವು.

ಮೊದಲ ಕತೆ 'ಬೂಬೂನ ಬಾಳು' ಹರಟೆಯ ಛಾಯೆಯಲ್ಲಿ ಮುಂದುವರಿದು— ಜಾತಿಗೆ ಸುಶಿಕ್ಷಿತ ಸಮೂಹದಲ್ಲಿ ಸ್ಥಾನವಿಲ್ಲ ಎಂದು ಪ್ರತಿಪಾದಿಸುವುದು. ರತ್ನ ಯಾವ ಜಾತಿಯಲ್ಲಿದ್ದರೂ ರತ್ನವೆ. ಅದರ ಪ್ರತೀಕ ಬೂಬು.

" ನಿಂಗನ ನಂಬಿಗೆ " ಈ ದಿನಮಾನಗಳಲ್ಲಿ ಕ್ವಚಿತ್ತಾಗಿ ಕಣ್ಣಿಗೆ ಬೀಳುವ ಮಾನವತೆಗೆ ಮಾದರಿ. " ಉಳುವವನೆ ಒಡೆಯ " ಎಂಬ ಇಂದಿನ ತತ್ತ್ವಕ್ಕೆ ಮನ್ನಣೆ ಇರದ ಹಿಂದಿನ ಕಾಲದ ಸುಸ್ಥಿತಿಯ ಚಿತ್ರಣ ನಲ್ಲಿದೆ. ಸೌಹಾರ್ದ ಒಂದಿದ್ದರೆ ಒಡೆಯನೂ ಅಷ್ಟೆ ಒಕ್ಕಲಿಗನೂ ಅಷ್ಟೆ. ಯಾರು ಯಾರಿಗೆ ಯಾಕೆ ಸಹಾಯ ಮಾಡಬಾರದು ಕಷ್ಟ ಕಾಲದಲ್ಲಿ? ಎಂದು ಕೇಳುವುದು ಬಂಗಾರದಂತಹ ಮಾತು. ಇಂತಹ ವಿವೇಕದ ಅಭಾವದ ಮೂಲಕವೇ ಅಸಂತೋಷ ಹಳ್ಳಿಯಲ್ಲಿ ತಲೆದೋರಿದುದನ್ನು ಯಾರೂ ಒಪ್ಪಬಹುದು.

" ಗಂಗೆ ಅಳೆದ ಗಂಗಮ್ಮ " ಇಂದಿನ ತಲೆಮಾರಿನ ಸುಶಿಕ್ಷಿತರಿಗೆ(?) ಪವಾಡವೇ ಸೈ. ಹಳ್ಳಿಯ ಹಿತಕ್ಕಾಗಿ ಸಾಧ್ವಿ ಆತ್ಮಾರ್ಪಣೆ ಮಾಡಲು ಹಿಂಜರಿಯದುದು ಶಾಸನಕಾಲದ ಸಂಗತಿ.

" ಮೋಟರ ಮಹಮ್ಮದ " ಬಾಲ್ಯಾವಸ್ಥೆಯಲ್ಲಿ ಉಲುಕೋಚಿ ಆಗಿದ್ದರೇನಾಯಿತು? ಆಗೂ ಕಲೆಯ ಮೇಲೆ ಅವನಿಗೆ ನಿರ್ವ್ಯಾಜ ಪ್ರೇಮವಿತ್ತು. ಈಗ ಅದೆಲ್ಲ ಗಾಳಿಯ ಮಾತು. ಆದರೆ ಸಮಾಜದಲ್ಲಿ ಅವನೊಬ್ಬ ಹೊಣೆಗಾರ ಗಣ್ಯವ್ಯಕ್ತಿಯಾಗಿ ಪರಿಣಮಿಸಿದುದು ಕಾಲಕ್ರಮದಲ್ಲಿಯ ಪರಿವರ್ತನೆ.

" ಯಾರು ಹೊಣೆ ?", " ಮೌನವು ಮುದ್ದಿಗಾಗಿ ", "ಎರಡು ದೃಷ್ಟಿ "— ನಿತ್ಯ ಜೀವನದ ಪರಿಸರದಲ್ಲಿಯವು.

ಕಣ್ಣಕತೆಯ ಲಕ್ಷಣಗಳ (ನವ್ಯಕತೆ ಇದೀಗ ಆಡಿ ಇಟ್ಟಿದೆ) ಮಾನದಿಂದ ಸಾಂಪ್ರದಾಯಿಕವಾಗಿ ಪರ್ಯಾಲೋಚಿಸುವಾಗ ಇಲ್ಲಿಯ ಎರಡು ನೂರು ಕತೆಗಳು ಪೂರ್ಣವಾಗಿ ಒರೆಗಲ್ಲಿಗೆ ಹತ್ತಲಿಕ್ಕಿಲ್ಲ. ಉಳಿದೆಲ್ಲ ಕತೆಗಳು ನಿಃಸಂಶಯವಾಗಿ ಸಣ್ಣ ಕತೆಗಳೇ. ಆದರೆ ಪರಿಣಾಮದ ಉತ್ಕಟತೆಯ ಮಾನದಿಂದ ಇಲ್ಲಿಯ ಯಾವ ಕತೆಯೂ ಹಿಮ್ಮೆಡುವುದಿಲ್ಲವೆಂದು ಎದೆ ತಟ್ಟಿ ಹೇಳುವಂತಿದೆ. ಸ್ವಾರಸ್ಯಮಯ ವರ್ಣನೆ, ವ್ಯಂಗ್ಯದ ಮಿಂಚು ಎಲ್ಲ ಲಕ್ಷಣಗಳ ಗಲಭೆ ಕುಗ್ಗಿಸಿ ಬಿಡುವುವು. ಇನ್ನೂ ಸೂಕ್ಷ್ಮವಾಗಿ ವಿವೇಚಿಸುವಾಗ, 'ಮೋಟರ ಮಹಮ್ಮದ' 'ಬೂಬೂನ ಬಾಳು' ವ್ಯಕ್ತಿಚಿತ್ರಗಳೆಂದು ಹೇಳಿದರೂ ಏಕೆ ತಪ್ಪಾಗಬೇಕು? ಆತ್ಮೀಯತೆಯ ಹರಟೆಯೇ ಕತೆಯ ಓಟಕ್ಕೆ ಪೋಷಕವಾದರೆ, ಕತೆಯ ತಂತ್ರದ ಮಾತೆತ್ತುವ ಆವಶ್ಯಕತೆ ಸಹ ಎನಿಸದು. ಮುಖ್ಯವಾಗಿ ಕತೆಯ ರಂಗದಲ್ಲಿ ಶೈಲಿಯಲ್ಲಿ ಜಾದೂಗಾರಿಕೆ ಬೇಕು. ಅಂತಹ ಗುಣ, ಶೈಲಿ ಕಾವ್ಯದ ಮಟ್ಟಕ್ಕೇರಿದಾಗೆಲ್ಲ ಇಲ್ಲಿ ಕಂಡು ಬರುವುದು. ಜೊತೆಗೆ ಸಂಭಾಷಣೆಯ ನೈಖರಿ ಇಲ್ಲಿಯ ಕತೆಗಳಿಗೆ ಇನ್ನಿಷ್ಟು ವಾಸ್ತವತೆ ತರುವುದು.

ಕೊನೆಗೆ ಪ್ರಸ್ತುತ ಹೊತ್ತಿಗೆ ದ್ವಿತೀಯ ಮುದ್ರಣವೆಂದಾಗ, ಬಹಿರಂಗ ಸೌಂದರ್ಯವೂ ಕಣ್ಣುಕುಕ್ಕಿಸುವಾಗ ಲೋಕಪ್ರಿಯತೆಯ ಬೇರೆ ನಿದರ್ಶನಗಳೂ ಅನಾವಶ್ಯಕವೆನಿಸುವುದಿಲ್ಲವೆ ?

ಮುನ್ನುಡಿಕಾರರಾದ ಶ್ರೀ. ವ್ಹಿ. ಬಿ. ನಾಯಕ ಅವರು ಹಾರೈಸಿದಂತೆ, ಪ್ರಸ್ತುತ ಲೇಖಕರಿಂದ ಇನ್ನೂ ವಿಪುಲವಾಗಿ ಸಣ್ಣ ಕತೆಗಳು ಬರಲೆಂದು ನಮ್ಮ ಅಪೇಕ್ಷೆ.

—ಎಸ್ಸಿ, ಧಾರವಾಡ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡ ಮೇರೆಗೆ '**ಅಯಿದು ವರುಷದ ಹವಣಿಕೆ**' ಕವಿತೆಯನ್ನು ಕುರಿತು ಆರು ಜನರಿಂದಲೂ, '**ವಾರಸ್‌ದಾರ್**' ಏಕಾಂಕಿಕೆಯನ್ನು ಕುರಿತು ಆರು ಜನರಿಂದಲೂ ವಿಮರ್ಶೆಗಳು ಬಂದಿವೆ.

'**ಅಯಿದು ವರುಷದ ಹವಣಿಕೆ**'ಯ ವಿಮರ್ಶಕರು

೧. ಶ್ರೀ. ಗಂಗಾಧರಭಟ್ಟ ಎಂ. ನಿರ್ಜಾಲು. ೨. ಶ್ರೀ. ಕೆ. ಎಸ್. ಕುರುಬರ, ಸಾವಳಗಿ. ೩. ಶ್ರೀ. ಆಶ್ರಿತ, ಆಯುರ್ವೇದ ವಿದ್ಯಾಲಯ, ವಿಜಾಪುರ. ೪. ಶ್ರೀ. ಸೀತಾರಾಮ ಪಾಡಿ, ಟೀಚರ್, ಕಲ್ಲಕಟ್ಟ (ದ. ಕ.) ೫. ಶ್ರೀ. ಎ. ಆರ್. ಕುಲಕರ್ಣಿ, ಅಥಣಿ. ೬. ಕುಮಾರಿ ಸಿ. ಹೆಚ್. ಲಕ್ಷ್ಮಿ ಪಾಡಿ, ಮುಟ್ಟಿತ್ತೋಡಿ.

'**ವಾರಸ್‌ದಾರ್**' ಏಕಾಂಕದ ವಿಮರ್ಶಕರು

೧. ಶ್ರೀ ಎಂ. ವಿ. ಭಟ್ಟ, ಕನ್ನೆಪ್ಪಾಡಿ, ನೀರ್ಜಾಲು. ೨. ಶ್ರೀ ಸಿದ್ರಾಮಪ್ಪ ಹೆದ್ದೂರಶೆಟ್ಟಿ, ಹುಕ್ಕೇರಿ. ೩. ಶ್ರೀ. ವಸಂತಮಾಧವ ಹರಿಹರ, ಕೆಲ್ಲೆ—ಹುಬ್ಬಳ್ಳಿ. ೪. ಶ್ರೀ. ಎ. ಎಸ್. ಹಲಗೇರಿ, ಬೆಳಗಾಂವಿ. ೫. ಶ್ರೀ. ವೆಂ. ನಾ. ಪಾಟೀಲ, ಬೆಳಗಾಂವಿ. ೬. '**ರಂಗ**' ಮಾಳಮಡ್ಡಿ, ಧಾರವಾಡ.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರೇ ನೋಡಿ, ಹೀಗೆಂದು ತಮ್ಮ ನಿರ್ಣಯಾಭಿಪ್ರಾಯವನ್ನು ಹೇಳಿದ್ದಾರೆ. '**ಅಯಿದು ವರುಷದ ಹವಣಿಕೆ**' ಕವಿತೆಯ ವಿಮರ್ಶೆಗಳಲ್ಲಿ **ಶ್ರೀ. ಸೀತಾರಾಮ ಪಾಡಿ,** ಮತ್ತು **ಶ್ರೀ. ಎಂ. ಗಂಗಾಧರ ಭಟ್ಟ** ಇವರ ವಿಮರ್ಶೆಗಳು ಉತ್ಕೃಷ್ಟವಾಗಿವೆ. ಕುಮಾರಿ ಸಿ. ಎಚ್. ಲಕ್ಷ್ಮಿ, ಪಾಡಿ ಅವರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವು ಸಾಮಾನ್ಯವಾಗಿವೆ.

'ವಾರಸ್‌ದಾರ್' ಏಕಾಂಕಿಕೆಯ ವಿಮರ್ಶೆಗಳಲ್ಲಿ ಶ್ರೀ. '**ರಂಗ**' ಮಾಳಮಡ್ಡಿ ಮತ್ತು ಶ್ರೀ. ವೆಂ. ನಾ. ಪಾಟೀಲ, ಬೆಳಗಾಂವಿ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ವಸಂತಮಾಧವ ಹರಿಹರ, ಹುಬ್ಬಳ್ಳಿ ಮತ್ತು ಶ್ರೀ. ಎಂ. ವಿ. ಭಟ್ಟ, ಕನ್ನೆಪ್ಪಾಡಿ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವು ಸಾಮಾನ್ಯವಾಗಿವೆ.

ಕವಿತೆಯ ವಿಮರ್ಶಕರ ಸಂಖ್ಯೆಯು ಆಶಾದಾಯಕವಾಗಿರುವುದು ಸಂತೋಷದ ಸಂಗತಿ. ಅದುರಿಂದಲೇ ಮುಂದಿನ ತಿಂಗಳ ಮೇಲಾಟಕ್ಕಾಗಿಯೂ ಒಂದು ಕವನವನ್ನು ವಿಮರ್ಶೆಗೆ ಇರಿಸಬೇಕೆಂದು ಕುತೂಹಲ ಉಂಟಾಗಿದೆ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ '**ಪ್ರೀತಿಯ ಫಲ**' ಎಂಬ ಸಣ್ಣ ಕಥೆಯನ್ನಾಗಲಿ, '**ನಾಡ ಬಿಡುಗಡೆಯೊಂದಿಗೆ**' ಎಂಬ ಕವನವನ್ನಾಗಲಿ, ವಿಮರ್ಶಿಸಿ ಬರೆಹಗಳನ್ನು ಕಳುಹಬೇಕು.

—**ಸಂಪಾದಕ.**

ಅಯಿದು ವರುಷದ ಹವಣಿಕೆ

[ಕವಿತೆಯ ವಿಮರ್ಶೆ]

ಡಿ. ಸೀತಾರಾಮಭಟ್ಟ, ಪಾಡಿ—ಕಲ್ಲಕಟ್ಟ

ದಾಸ್ಯಶೃಂಖಲೆಯನ್ನು ಕಡಿದೊಗೆದು ಹೊರಬಂದು ಸ್ವಾತಂತ್ರ್ಯದ ಮುಂಬೆಳಗಿನಲ್ಲಿ ಮುನ್ನಡೆಯ ತೊಡಗಿದೆ ಭಾರತ! ಆದರೆ ಅದರ ಮಾರ್ಗವಿನ್ನೂ ಸುಗಮವಾಗಿಲ್ಲ. ಸುತ್ತಲೂ ತಲೆಯೆತ್ತಿ ನಿಂದಿರುವ ಹಲವಾರು ಭೀಕರ ಸಮಸ್ಯೆಗಳನ್ನೆದುರಿಸಿ ಅದು ಮುಂದೆ ಸಾಗಬೇಕಾಗಿದೆ. ಎಲ್ಲಿ ನೋಡಿದರಲ್ಲಿ ದಾರಿದ್ರ್ಯದೇವತೆಯು ತಾಂಡವ; ಅಜ್ಞಾನ, ಅವಿದ್ಯೆ, ರೋಗರುಜೆಗಳಿಂದ ನರಳುವ ಜನತೆಯ ಆರ್ತನಾದ! ವ್ಯವಸಾಯ, ಉದ್ದಿಮೆ, ವಾಣಿಜ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಪ್ರಗತಿಯಾಗದೆ ದೇಶವು ಏಳಿಗೆಯಾಗುವಂತಿಲ್ಲ—ಪರರಾಷ್ಟ್ರಗಳೆದುರು ತಲೆಯೆತ್ತ ನಿಲ್ಲುವಂತಿಲ್ಲ, ಬಂದಿರುವ ಕುತ್ತವನ್ನು ಹೋಗಲಾಡಿಸಿ ದೇಶದ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ, ನಮ್ಮ ರಾಷ್ಟ್ರನಾಯಕರು ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿರುತ್ತಾರೆ. ಇದೀಗ ಎರಡನೆಯ ಪಂಚವಾರ್ಷಿಕ ಯೋಜನೆಯು ಮುಗಿದು ಮೂರನೆಯ ಯೋಜನೆಗೆ ತೊಡಗಿದ್ದಾರೆ. ಇದೇ ವಸ್ತುವನ್ನು ಆಯ್ದುಕೊಂಡು 'ಅಯಿದು ವರುಷದ ಹವಣಿಕೆ' ಎಂಬ ಸರಳ ಸುಂದರ ಕವಿತೆಯನ್ನು ರಚಿಸಿದ್ದಾರೆ ಶ್ರೀ ಬೆಟಗೇರಿಯವರು.

'ನವಯುಗದ ನಲ್ಲಾಣಿಕೆ'ಯೆನಿಸಿದ 'ಅಯಿದು ವರುಷದ ಹವಣಿಕೆ'ಯ ಪಲ್ಲವಿಯನ್ನು ಹಾಡಿದನಂತರ, ಕವಿ ದಾಸ್ಯ ನಿಮೋಚನೆ ಹೊಂದಿನಿಂತ ಭಾರತದ ನಿಸ್ತೇಜಚಿತ್ರವನ್ನು ನಮ್ಮ ಮುಂದಿಡುತ್ತಾರೆ. 'ಬಹುಕಾಲದ ಬೇನೆಯಿಂದ ಒಡಲು ಬಡಕಲಾಗಿದೆ' ಎಂಬ ಚರಣ ಪರರಾಳ್ವಿಕೆಯಲ್ಲಿ ಸಹಿಸಿದ ದಾರುಣ ಕಷ್ಟನಷ್ಟಗಳ ಕಹಿನೆನಪನ್ನು ಮಾಡಿಕೊಡುತ್ತದೆ. ಶೋಷಣೆಯಿಂದಾಗಿ ಬಲ, ತೇಜಸ್ಸು, ಸತ್ತ್ವಗಳನ್ನೆಲ್ಲಾ ಕಳೆದುಕೊಂಡು ಬಡಕಲಾದ ಭಾರತದ ಚಿಕಿತ್ಸೆಗಾಗಿ ರಾಷ್ಟ್ರನಾಯಕರು ಈ ಪಂಚವಾರ್ಷಿಕ ಯೋಜನೆಯೆಂಬ ದಿವ್ಯೌಷಧವನ್ನು ಕಂಡುಹಿಡಿದಿದ್ದಾರೆ. ಜನತೆ ತನ್ನ ಸಹಕಾರವನ್ನಿತ್ತು ಇದನ್ನು ಸಫಲಗೊಳಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಭಾರತದ ಗತಕಾಲದ ಸ್ವರ್ಣಯುಗವನ್ನು ವರ್ತಮಾನ ಪರಿಸ್ಥಿತಿಯೊಂದಿಗೆ ಹೋಲಿಸಿ ನಿಟ್ಟುಸಿರು ಬಿಡುತ್ತಾರೆ. ಲೇಖಕರು ಮುಂದಿನ ಪದ್ಯದಲ್ಲಿ ಜಾತಿಮತಭೇದಗಳನ್ನು ಲೆಕ್ಕಿಸದೆ ವಿದೇಶೀಯರನ್ನೆಲ್ಲಾ ಸ್ವಾಗತಿಸಿ, 'ಉಣಿಸಿ ತಣಿಸಿದ' ಭಾರತಾಂಬೆಯಿಂದು ತನ್ನ ಮಕ್ಕಳ ಹೊಟ್ಟೆತುಂಬಿಸಲೆಂದು ಪರರ ಬಾಗಿಲಲ್ಲಿ ನಿಂತು ತಿರುಪೆಯೆತ್ತಬೇಕಾದರೆ ಇದೆಂತಹ ದುರ್ದೈವ? ಭಾರತಿಯು ಈ ಸ್ಥಿತಿಗಿಳಿಯುವಷ್ಟು ಬಡವಿಯಲ್ಲ. ಅವಳ ಗರ್ಭದಲ್ಲಿ ಅಪಾರ ಸಂಪತ್ತು ಹುದುಗಿದೆ. ಅದನ್ನು ಶೋಧಿಸಿ ಹೊರತೆಗೆಯುವ ಸಾಹಸಿಗಳು ಬೇಕು. ದೇಶದಾದ್ಯಂತ ಹರಿಯುವ ಸಣ್ಣ ದೊಡ್ಡ ನದಿಗಳಿಗೆ ಆಣೆಕಟ್ಟುಗಳನ್ನು ರಚಿಸಿ, ನೀರನ್ನು ವ್ಯವಸಾಯಕ್ಕುಪಯೋಗಿಸಿದರೆ ಕೂಳಿಗೆ ಕೊರತೆ ಬರಲಾರದು. ಅಲ್ಲದೆ ವಿದ್ಯುತ್ತನ್ನೂ ಪಡೆಯಬಹುದು. ಅನ್ಯರಾಷ್ಟ್ರಗಳೆದುರು ಭಾರತವೂ ತಲೆಯೆತ್ತಿ ನಿಲ್ಲಬೇಕಾದರೆ ಕಲ್ಲಿದ್ದಲು, ಕಬ್ಬಿಣ, ಚಿನ್ನ ಇತ್ಯಾದಿ ಖನಿಜಸಂಪತ್ತು ಇಂದು ಅಗತ್ಯ. ಅದು ಭಾರತದ ಒಡಲಿನಲ್ಲಿ ಹೇರಳವಿದೆ. ಅಗೆದು ತೆಗೆಯಲು 'ಹುರುಪಿನ ಹುದ್ದರಿಗಳು' ಬೇಕು ಅಷ್ಟೇ! ಪದ್ಯದ ಪ್ರತಿಯೊಂದು ಶಬ್ದದಲ್ಲಿಯೂ ಕವಿಯ ಆಶಾವಾದದ ನಾದ ಮಿಡಿದಿದೆ

ಭಾರತೀಯರು ಕುರಿಗಳಲ್ಲ. ಬಲ, ಚಲ, ತಿಳಿವು ಅವರಲ್ಲಿದೆ. ಜಾಡ್ಯದ ಮುಸುಕನ್ನು ಹರಿದೊಗೆದು ಎದ್ದೇಳಬೇಕಾಗಿದೆ. 'ಏಳಿರಿ, ಎದ್ದೇಳಿರಿ!....' 'ನಿಮ್ಮ ನಿಮ್ಮ ಕಜ್ಜಗಳನು ಮರ್ಮಪರಿತು ಮಾಡಿರಿ' ಎಂದು ಹಾಡಿ, ಜನತೆಗೆ ಕರ್ತವ್ಯ ನೂಡಲು ಕರೆಗೊಟ್ಟಿದ್ದಾರೆ ಲೇಖಕರು.

ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಅನ್ನಬಟ್ಟೆಗಳು ದೊರೆಯಬೇಕು; ಮಾರ್ಗಗಳ ನಿರ್ಮಾಣವಾಗಿ ಸಂಚಾರ ಮತ್ತು ಸಾರಿಗೆ-ಸೌಕರ್ಯ ಒದಗಬೇಕು; ನಡೆನುಡಿ ತಿದ್ದಿ ಉತ್ತಮ ಸಂಸ್ಕೃತಿಯನ್ನು ಬೆಳೆಸಲು ವಿದ್ಯೆಯ ಅವಶ್ಯಕತೆಯಿದೆ. ರೋಗಗಳ ನಿರ್ಮೂಲನವಾಗಿ ಆರೋಗ್ಯದಿಂದ ಪ್ರಜೆಗಳು ಜೀವಿಸುವಂತಾಗಬೇಕು. ಇಷ್ಟಾದರೆ ಸಾಕೆ? ಭಾರತೀಯರ ಹೃದಯದಲ್ಲಿ ಸೋದರಪ್ರೇಮ ಬೆಳೆಯಬೇಕು. ಜಾತಿಪಂಥಗಳನ್ನು ಬಿಟ್ಟು ನೀತಿ-ಸದಾಚಾರಗಳಿಂದ ಜನ್ಮತಳೆದ ಹೊಸ ಸಮಾಜ ನವಕಾಂತಿಯಿಂದ ಬೆಳಗಬೇಕು. ಹೀಗಾದರೆ ಮಾತ್ರವೇ ಸ್ವಾತಂತ್ರ್ಯ ಪಡೆದುದರಿಂದ ನಾವು ಹೆಮ್ಮೆಪಡಬಹುದು. ನಮ್ಮ ರಾಷ್ಟ್ರಧ್ವಜದ ಮಾನರಕ್ಷಣೆಯಾಗುವಂತಹ ಒಳ್ಳೆಯ ನಡೆನುಡಿ ನಮ್ಮದಾಗಬೇಕು.

ಪರದಾಸ್ಯವೊದರೆ ಮಾತ್ರ ಸಾಲದು, ಪರಾವಲಂಬನೆಯೂ ತೊಲಗಬೇಕು. ಅಂದರೇನೇ ಸ್ವಾತಂತ್ರ್ಯ ಪಡೆದುದು ಸಾರ್ಥಕವಾಗುವುದು. ಪ್ರತಿಯೊಬ್ಬನೂ ಉತ್ಸಾಹದಿಂದ ದೇಶದ ಏಳಿಗೆಗಾಗಿ ದುಡಿದು ನವಯುಗವನ್ನು ನಿರ್ಮಾಣ ಮಾಡಬೇಕು. ಆಗ ದೇಶವು ಧನ-ಧಾನ್ಯಗಳಿಂದ ತುಂಬಿ ಜನತೆ ಸುಖಸಂತೋಷಗಳಿಂದ ಬಾಳುವಂತಾಗುವುದು! ಅಂತಾಗಲೆಂಬುದೇ ಕವಿಯ ಆಶಯ. ಕವನದಲ್ಲಿ ಹೆಜ್ಜೆ ಹೆಜ್ಜೆಗೂ ಕವಿಯ ರಾಷ್ಟ್ರಪ್ರೇಮ ಎದ್ದುಕಾಣುತ್ತದೆ.

ಕವಿತೆಯ ಛಂದಸ್ಸಿನ ಬಗೆಗೆ ಹೇಳುವುದಿದ್ದರೆ — ಆಧುನಿಕ ರೀತಿಯ ಈ ಕವಿತೆ ತಾಳ-ಲಯಬದ್ಧವಾಗಿದ್ದು ಹಾಡಲು ಅನುಕೂಲವಾಗಿದೆಯೆನ್ನಬಹುದು. ತಿಳಿನೀರಿನಂತೆ ಹರಿದು ಬಂದ ಸರಳ ಶೈಲಿ ಮನೋಹರವಾಗಿದೆ. ಸುಂದರವಾದ ಅಚ್ಚಗನ್ನಡ ಪದಪುಂಜಗಳ ನಾದ, ಹಳ್ಳಿಯ ಮುಗುದೆಯ ಕಾಲ್ಗೆಜ್ಜೆಯ ಇನಿದನಿಯಂತೆ ಭಾಸವಾಗುತ್ತದೆ. 'ತನ್ನ ಹೆಸುಳಿಗಳ ಬರಿ ಬಸಿರ ತುಂಬಿಸಲೆಂದು ಅನ್ನಿಗರ ಮನೆಯೆದುರು ತಿರುಗುತಿಹಳು'; 'ಕರಿಯ ಬಲಕೆ ಹುಲಿಯ ಚಲಕೆ ಹಿರಿಯರುಹಿಗೆ ಪಾತ್ರರು'; 'ಪದದ ಗೆಜ್ಜೆ ಝಣ ಝುಣಿಸುತೆ ಬರುವುದು ಬಳಿ ಹರುಷ' ಇತ್ಯಾದಿ ಕೆಲವು ಚರಣಗಳನ್ನು ನೋಡಿದರೇ ಸಾಕು— ಶ್ರೀಯುತರ ಕವಿತಾಚಾತುರ್ಯವನ್ನು ಸುಲಭವಾಗಿ

ತಿಳಿಯ ಬಹುದು. ಎರಡನೇ ಪದ್ಯದಲ್ಲಿ 'ಹೊನ್ನಿನಾ ಹೊಗೆಯ?'* ಎಂಬುದಕ್ಕೆ ಬದಲಾಗಿ 'ಹೊನ್ನಿನಾ ಹೊಗರ' ಎಂದಾಗಿದ್ದರೆ ಹೆಚ್ಚು ಸಮಂಜಸವಾಗುತ್ತಿತ್ತೆಂದು ನನಗೆನಿಸುತ್ತದೆ.

ಶಬ್ದಾಲಂಕಾರ ಹಾಗೂ ಅರ್ಥಾಲಂಕಾರಗಳನ್ನು ಇದರಲ್ಲಿ ಉಚಿತವರಿತು ಪ್ರಯೋಗಿಸಲಾಗಿದೆ. ಪ್ರಯತ್ನಪಟ್ಟು ಎಳೆದು ತಂದ ಹಾಗಿರದೆ ಸ್ವಾಭಾವಿಕವಾಗಿ ಇಳಿದುಬಂದಿವೆ. ಹೆಚ್ಚಾಗಿ ಅಂತ್ಯಪ್ರಾಸವೇ ಇದ್ದರೂ ಕೆಲವೆಡೆಯಲ್ಲಿ ದ್ವಿತೀಯಾಕ್ಷರ ಪ್ರಾಸವೂ ಸಹಜವಾಗಿ ಬಂದಿದೆ. ಭಾರತವನ್ನು ಸೂರಿಹೋಗಿರುವ ಸಿರಿಮನೆಗೆ ಹೋಲಿಸಿದುದು ಬಹಳ ಸಮಂಜಸವಾಗಿದೆ. ಹಾಗೆಯೇ ಪಾರತಂತ್ರ್ಯದುರುಳು ಮತ್ತು ರೋಗರಕ್ಕಸರ ದಂಡು ಎಂಬಲ್ಲಿಯ ರೂಪಕಾಲಂಕಾರಗಳೂ ಸುಂದರವಾಗಿವೆ

ಕವನದುದ್ದಕ್ಕೂ ಲೇಖಕರ ದೇಶಪ್ರೇಮದ ಭಾವಲಹರಿ ಮಿಡಿಯುತ್ತದೆ. ದೇಶಭುರೀಣರು ಕೈಗೊಂಡ ಈ ಯೋಜನೆ ಯಶಸ್ವಿಯಾಗುವಂತೆ ಜನರು ಸಂಪೂರ್ಣ ಸಹಕಾರವನ್ನಿತ್ತು ತಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿ ನೆರವೇರಿಸಬೇಕೆಂದು ಒತ್ತಿಹೇಳಿದ್ದಾರೆ ಲೇಖಕರು. ಒಟ್ಟಿನಲ್ಲಿ ಇದೊಂದು ಕಾಲೋಚಿತವಾದ ಒಳ್ಳೆಯ ಕವಿತೆಯೆನ್ನಲಡ್ಡಿಯಿಲ್ಲ. ●

ವಾರಸದಾರ್

[ಏಕಾಂಕ ನಾಟಕದ ವಿಮರ್ಶೆ]

'ರಂಗ' ಮಾಳಮಡ್ಡಿ, ಧಾರವಾಡ

'ಹಣವೆಂದರೆ ಹೆಣ ಬಾಯಿ ತೆರೆಯುತ್ತವೆ' ಎಂದ ಮೇಲೆ, ಪ್ರಸ್ತುತ ನಾಟಕದಲ್ಲಿ ಹಣವೇ ಎಲ್ಲವೆಂದು ತಿಳಿದ ಶಾಮರಾಯ—ಭೀಮರಾಯರಂಥವರು, ಹಣದ ದಾಹದಿಂದ ಬಡಿದಾಡಿ ಪರಸ್ಪರ ಜೀವ ತೆಗೆದುಕೊಳ್ಳಲು ಕೂಡ ಹಿಂಜರಿಯದಿದ್ದುದರಲ್ಲಿ ಏನು ಆಶ್ಚರ್ಯ!

ಪ್ರಸ್ತುತ ನಾಟಕದ ಉದ್ದಕ್ಕೂ ನಿವೃತ್ತ ಕಲೆಕ್ಟರರಾದ ದೊಡ್ಡರಾಯರು ಕಾಶಿಯಲ್ಲಿ ಮರಣಹೊಂದಿದ ಸುದ್ದಿ ತಿಳಿದು, ಅವರ ಆಸ್ತಿಯನ್ನು ಎತ್ತಿಹಾಕಲು ಅವರ ಸಂಬಂಧಿಕರಾದ ಶಾಮರಾಯ—ಭೀಮರಾಯರಲ್ಲಿ ನಾಯಿ ಬೆಕ್ಕುಗಳ ಕಜ್ಜಾಟ ನಡೆದಿದೆ. ಆದರೆ ದೊಡ್ಡ ರಾಯರ ಮನೆಯ ನಂಬಿಗಸ್ಥ ಆಳು ಮುಲ್ಲನಿಗೆ 'ದೊಡ್ಡ ರಾಯರ ಮನೆಗೆ ಹೆಗ್ಗಣ ಹತ್ತಿದಂತೆ ಹತ್ತಿನ' ಶಾಮರಾಯ-ಭೀಮರಾಯರನ್ನು ಹೇಗಾದರೂ ದೂರ ಮಾಡಿ, ಆಸ್ತಿಯನ್ನು ಕಾಪಾಡುವ ಚಿಂತೆ. ಅವರಿಬ್ಬರ ಗುದ್ದಾಟದಲ್ಲಿ ಅವನನ್ನು ಕೇಳುವವರು ಯಾರು? ಅದರಂತೆ ರಾಯರಮನೆಯ ಪುರೋಹಿತ ಕಲ್ಲಂಭಟ್ಟರು,ದೊಡ್ಡರಾಯರ ದೊಡ್ಡಗುಣಗಳನ್ನು ಸ್ಮರಿಸಿ,ಅವರ ಮನೆಯಲ್ಲಿ ನಡೆದ 'ವಾರಸ್‌ದಾರೀ' ಹೊಡೆದಾಟನನ್ನು ತಡೆಯಲು ಯತ್ನಿಸುತ್ತಾರೆ. 'ಬೋಗರ್ಗಲ್ಲ ಮೇಲೆ ಮಳೆಗರೆದಂತೆ' ಆ ಇಬ್ಬರೂ ಮೂರ್ಖರನ್ನು ಸಮಾಧಾನಗೊಳಿಸಲು ಸಾಧ್ಯವಾಗಿಬೇಕಾದರೂ ಹೇಗೆ? 'ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ' ಎಂಬ ಪರಿಸ್ಥಿತಿ ಒದಗುತ್ತದೆ. ಅದೇ ವೇಳೆಗೆ ಕೋರ್ಟಿನ ಬೇಲೀಫ್ ಫಕೀರಪ್ಪ ತಂದ ಸಮನಸ್ಸು ಏನೆಂದು ತಿಳಿಯದೆ, ಆ ಮೂರ್ಖರಿಬ್ಬರೂ ತಮ್ಮಿಬ್ಬರಲ್ಲಿಯೇ ತಾನು-ವಾರಸ್‌ದಾರ್, ತಾನು ವಾರಸ್‌ದಾರ್ ಎಂದು ಅದಕ್ಕೆ ಸಹಿ ಮಾಡಲು ಹಾತೊರೆಯುವರು; ಆದರೆ ಬೇಲಿಫನಿಂದ ಅದರಲ್ಲಿಯ ಸಂಗತಿಯನ್ನು ತಿಳಿದ ಮೇಲೆ, ಬಾಲ ಸುಟ್ಟ ಬೆಕ್ಕಿನಂತೆ ತಮ್ಮ ತಮ್ಮ ಹೊಣೆ ಹಾರಿಸಿಕೊಳ್ಳುತ್ತ ಅಲ್ಲಿಂದ ಪಾರಾಗಿ ಹೋಗಲು ಯತ್ನಿಸುತ್ತಾರೆ. ಅಷ್ಟರಲ್ಲಿ ಸ್ವರ್ಗಸ್ಥರೆಂದು ತಿಳಿಯಲ್ಪಟ್ಟಿದ್ದ ದೊಡ್ಡ ರಾಯರು ತಮ್ಮ ಗೆಳೆಯ ನ್ಯಾಯಾಧೀಶ ರಂಗರಾಯರೊಂದಿಗೆ ಅಲ್ಲಿಗೆ ಆಗಮಿಸಿ, ತಾವು ಆಡಿದ ನಾಟಕದ ನಿಜಸ್ಥಿತಿ ಅರುಹುತ್ತಾರೆ; ಮತ್ತು ತಮ್ಮ ಆಸ್ತಿಯನ್ನು ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ಒಂದು ವಿಶ್ವಸ್ತಮಂಡಲಕ್ಕೆ ಒಪ್ಪಿಸಿದುದನ್ನು ಬಹಿರಂಗಪಡಿಸುತ್ತಾರೆ. ಆಗ ಮುಲ್ಲ ಮತ್ತು ರಂಗಭಟ್ಟರಿಗೆ ಭಾರವಾದ ಒಂದು ಹೊರೆ ಇಳಿಸಿದಂತೆ ಭಾಸವಾಗಿ, ರಾಯರ ಔದಾರ್ಯವನ್ನು—ರಂಗರಾಯರಿಂದ ಹಿಡಿದು ಎಲ್ಲರೂ—ಹಾಡಿ ಹರಸುತ್ತಾರೆ. ದೊಡ್ಡ ರಾಯರು ಮರಳಿ ಜೀವಂತ ಬಂದುದರಿಂದ, ಶಾಮರಾಯ—ಭೀಮರಾಯರಿಗೆ ಹಣದಾಸೆಯ ತಮ್ಮ ಕ್ಷುಲ್ಲಕ ಮನಸ್ಸಿನ ಗುಟ್ಟು ರಟ್ಟಾಗಿ, ಅನಾಯಾಸ ಕೈಗೆ ಬರಬಹುದಾದಂತಹ ರಾಯರ ಆಸ್ತಿ ತಪ್ಪಿಹೋಯಿತಲ್ಲ—ಎಂದು ದುಃಖವಾದರೂ, ವಿಧಿಯಿಲ್ಲದೇ ತಮ್ಮ ದುರಾಶೆಗಾಗಿ ಪಶ್ಚಾತ್ತಾಪಪಡುತ್ತಾರೆ. ದೊಡ್ಡ ರಾಯರು ನಿಜವಾಗಿ ಪೂರ್ಣ ಮನಸ್ಸಿನಿಂದ ತೀರ್ಥಯಾತ್ರೆಗೆ ಹೊರಡುತ್ತಾರೆ.

ನಾಟಕದ ಮೂಲ ಉದ್ದೇಶ, ಮನುಷ್ಯನಲ್ಲಿ ಹಣವಿದ್ದಾಗ ಬೇಕಾದ ಸೇವೆ ಮಾಡಲು, ಗೆಳೆತನ ಸಾಧಿಸಲು ನಂಟರಿಷ್ಟರು ಹೊರಗಿನವರು ಯತ್ನಿಸುತ್ತಾರೆ. ಹಣದ ಮಾನದಿಂದ ಸಾಮಾನ್ಯವಾಗಿ ಈ ಜಗತ್ತಿನಲ್ಲಿ ಮನುಷ್ಯನ ಯೋಗ್ಯತೆ ಅಳೆಯಲ್ಪಡುತ್ತಿದೆ. ಹಣದಿಂದಲೇ ಸಮಾಜದಲ್ಲಿ ಸ್ಥಾನಮಾನ, ಘನತೆ, ಗೌರವ, ಆದರ-ಸತ್ಕಾರ ಎಲ್ಲ ದೊರೆಯುತ್ತವೆ. ಸರ್ವೇ ಗುಣಾಃ ಕಾಂಚನಂ ಆಶ್ರಯಂತಿ' ಎಂಬಂತೆ ಅವನಲ್ಲಿ ಎಲ್ಲ ಒಳ್ಳೆಯ ಗುಣಗಳು ಕಂಡು ಬರುತ್ತವೆ. ಆದರೆ ಹಣ ಹೋದ ಮರುದಿನದಿಂದ ಅವನ ಬಾಳು ಬೀದಿಯ ನಾಯಿಗಿಂತ ಕಡೆಯಾಗಲು ಬಹಳ ದಿನಗಳು ಬೇಕೆಲ್ಲ. ಹತ್ತಿರದ ನಂಟರಿಷ್ಟರು ಉಗುರಿನಲ್ಲಿಯ ಮಣ್ಣು ಸಿಡಿಸಲು ಕೂಡ ಸಿದ್ಧರಾಗುವುದಿಲ್ಲ. ಭೆಟ್ಟಿಯಾದರೆ ಮುಖ ಅತ್ತ ತಿರುಹುತ್ತ ತಮ್ಮಿಂದ ತಾವೇ ದೂರವಾಗುತ್ತಾರೆ. ಅದನ್ನೇ ಲೇಖಕರು ದೊಡ್ಡರಾಯರ 'ನನ್ನ ಆಸ್ತಿ ತಗೋಳ್ಳಿಕ್ಕೆ ಮಾತ್ರ ಅಷ್ಟೂ ಅವರು ವಾರಸದಾರ್ರು ಆದ್ರು.....ಸುಖಕ್ಕೂ ಆಗಬೇಕು, ದುಃಖಕ್ಕೂ ಆಗಬೇಕು' ಎಂಬ ಮಾತುಗಳಲ್ಲಿ ಉಸುರಿದ್ದಾರೆ. ಅದರಂತೆ ದೊಡ್ಡ ರಾಯರಂತಹ ಮಕ್ಕಳಿಲ್ಲದ ಜನ, ತಮ್ಮ ಆಸ್ತಿಯನ್ನು ಯಾವ ರೀತಿಯಾಗಿ ಸದ್ವಿನಿಯೋಗ ಮಾಡಬೇಕೆಂಬುದನ್ನೂ ಮಾರ್ಮಿಕವಾಗಿ ಸೂಚಿಸಿದ್ದಾರೆ.

ಪಾತ್ರಗಳಲ್ಲಿ ಮುಖ್ಯನಾಗಿ ದೊಡ್ಡರಾಯರ ತಮ್ಮನಾದ ಶಾಮರಾಯ ನಿವೃತ್ತ ಮಾಮಲೇದಾರ್ರು, ಅವರ ಹೆಂಡತಿಯ ತಮ್ಮ

*ವೇಶದ ಸಂಪರ್ಕ ಸೂಚಕವಾಗಿ 'ಬಂಗಾರದ ಹೊಗೆ ಹಾಯುತ್ತಿತ್ತು' ಎಂಬ ಪಡೆನುಡಿ ರೂಢಿಯಲ್ಲಿದೆ. ಸಂ. ಜ.

ಭೀಮರಾಯ—ನಿವೃತ್ತ ಫೌಜದಾರ! ನಾಟಕದ ಮೊದಲಿನಿಂದ ಕೊನೆಯ ವರೆಗೆ ಓದುಗರ ದೃಷ್ಟಿಯಿಂದ ಇವರಿಬ್ಬರೂ ಮರೆಯಾಗುವುದಿಲ್ಲ. ಇವರಿಬ್ಬರೂ ದೊಡ್ಡ ರಾಯರ ಆಸ್ತಿಯನ್ನು ಕಬಳಿಸುವಲ್ಲಿ, ಪರಸ್ಪರ ಕಣ್ಣು ತಪ್ಪಿಸಿ ಸಾಧ್ಯವಿದ್ದಷ್ಟು ಮೊದಲೇ ರಾಯರ ಮನೆಯ ಸಾಮಾನುಗಳನ್ನು ತಮ್ಮ ಮನೆಗೆ ಸಾಗಿಸುವಲ್ಲಿ ತೋರುವ ಗಡಿಬಿಡಿ, ಜಾಣ್ಮೆ ಮೋಜಿನದಾಗಿದೆ. 'ಸುಡುವ ಮನೆಯ ಗಳ ಹಿರಿದುಕೊಂಡಷ್ಟೇ ಬಂತು' ಎಂಬ ಬುದ್ಧಿ ಅವರಿಬ್ಬರದು. ಮೇಲಾಗಿ ನಿವೃತ್ತಿಪೂರ್ವದ ಹುದ್ದೆಗಳ ಕಾರ್ಯವನ್ನು ಮರೆಯಿಸಬೇಕೆಂಬ ಹಂಬಲದವರು. ಹಿಂದಕ್ಕೆ ಸರಕಾರೀ ನೌಕರಿಯಲ್ಲಿ ಉನ್ನತ ಸ್ಥಾನದಲ್ಲಿ ಇದ್ದವರಾದರೂ ಹಣಕ್ಕಾಗಿ ಬಾಯಿಬಿಡುವ ಅವರಿಬ್ಬರೂ ಹಳ್ಳಿಯ ಹುಂಬರಂತೆ, ರಾಯರ ಆಸ್ತಿಯ ವಾರಸ್‌ದಾರಿಕೆಗಾಗಿ ಪರಸ್ಪರ ಕೊಲೆಮಾಡಲು ಹೇಸುವುದಿಲ್ಲ. ಸಣ್ಣ ಮನುಷ್ಯನನ್ನು ಎಷ್ಟೇ ದೊಡ್ಡ ಸ್ಥಾನದಲ್ಲಿ ಕುಳ್ಳಿರಿಸಿದರೂ, ಅವನ ಮನಸ್ಸು ಅಷ್ಟೇ ಉಳಿಯುತ್ತದೆಯಿನಾ ಅವನಲ್ಲಿ ಉದಾರ ಗುಣ ಬೆಳೆಯುವುದಿಲ್ಲವೆಂಬುವನ್ನು ನಾವು ಇದರಿಂದ ಕಂಡುಕೊಳ್ಳಬಹುದು. ಬರಿ ವಿದ್ಯೆಯಿಂದ, ಸ್ಥಾನ-ಮಾನಗಳಿಂದ, ಒಳ್ಳೆಯ ಸಂಸ್ಕಾರ-ಸಂಸ್ಕೃತಿಗಳನ್ನು ಯಾವನೊಬ್ಬ ಮನುಷ್ಯನಲ್ಲಿ ಕಾಣುವುದು ಅಪರೂಪ. ಅದಕ್ಕೆ ಶ್ಯಾಮರಾಯ ಭೀಮರಾಯರಂಥವರೇ ಸಾಕ್ಷಿ. ಮತ್ತು ಹಣದ ದಾಹದಿಂದ ಮನುಷ್ಯ ಅದಕ್ಕಾಗಿ ತನ್ನ ಸ್ಥಾನಮಾನ, ಬಂಧು-ಬಳಗ, ಹೆತ್ತ ಕರುಳಿನ ಸಂಬಂಧ ಇವುಗಳನ್ನು ಕೂಡಾ ಗಾಳಿಗೆ ತೂರಿಬಿಡುತ್ತಾನೆ. ಅದರಲ್ಲಿಯೂ ಅನಾಯಾಸವಾಗಿ ಕೈಸೇರಬಹುದಾದ ಸಂಪತ್ತಿದ್ದರೆ ಅವನು ಎಲ್ಲಿಲ್ಲದ ವಾರಸ್‌ದಾರಿಕೆಯನ್ನು ಹಚ್ಚಿಕೊಂಡು, ಅದನ್ನು ಎತ್ತಿಹಾಕಲು ಏನು ಮಾಡುವುದಕ್ಕೂ ಹೇಸುವುದಿಲ್ಲ. ಅದಕ್ಕಾಗಿ ಅವನು ಆಡುವ ನಾಟಕ ಅಮೋಘವಾದುದು. ಅವನು ಸುರಿಸುವ ಮೊಸಳೆಯ ಕಣ್ಣೀರು ಯಾರನ್ನೂ ನಂಬಿಸಿ ಮೋಸಪಡಿಸುವಂತಹದು. ಅದೇ ದೊಡ್ಡ ರಾಯರ ಆಸ್ತಿಯನ್ನು ದೋಚುವುದರಲ್ಲಿ ವಿಫಲರಾಗಿ ಮೈಮೇಲೆ ಬರುವ ಪ್ರಸಂಗ ಒದಗಿದ ಕೂಡಲೇ, ಅವರಿಬ್ಬರೂ ತಾವೇ ಅಲ್ಲಿಂದ ಕಾಲ್ದೆಗೆಯುತ್ತಾರೆ. ಕಡೆಗೆ ದೊಡ್ಡರಾಯರು ತಮ್ಮ ಕೊನೆಯ ಇಚ್ಛೆಯನ್ನು ತಿಳಿಸಿ, ಅವರ ಆಶೆಗೆ ತಣ್ಣೀರೆರಚಿದುದರಿಂದ, ಅವರು 'ಅನಾಯಾಸವಾಗಿ ದಕ್ಕಬಹುದಾದ ಆಸ್ತಿ ತಪ್ಪಿಹೋಯಿತಲ್ಲ' ಎಂದು ಮನದಲ್ಲಿಯೇ ಹಳಹಳಿಸಿದರೂ, ತಮ್ಮ ಹುಂಬತನದಿಂದ ಆದ ಹಾನಿಗೆ ಅವರಿಬ್ಬರೂ ಪಶ್ಚಾತ್ತಾಪ ಪಡುವುದರಲ್ಲಿ ಆಶ್ಚರ್ಯವೇನಿಲ್ಲ.

ಇನ್ನು ದೊಡ್ಡರಾಯರ ಮನೆಯ ಸೇವಕ ಮಲ್ಲ, ರಾಯರ ಉಪ್ಪುಂಡು ಬೆಳೆದವ. ನಂಬಿಗಸ್ಥ ಆಳು. ರಾಯರು ನಿಧನಹೊಂದಿದರು; ಇನ್ನೇನು ತನ್ನ ಅಗತ್ಯವೆಂದು ಹೊಣೆಹಾರಿಸಿಕೊಂಡು ಮನೆಗೆಲಸ ಬಿಟ್ಟು ಓಡಿ ಹೋಗುವ ವ್ಯಕ್ತಿಯಲ್ಲ ಅತ. ರಾಯರ ಮನೆಯಲ್ಲಿ ಬೆಳೆವ ಹೊಕ್ಕಂತಿದ್ದ ಶಾಮರಾಯ-ಭೀಮರಾಯರನ್ನು ಕಂಡರೆ ಅವನ ಮೈ ಉರಿಯುತ್ತದೆ. ಆದರೆ ಏಕಾಕಿಯಾಗಿ ಆ ದಾಂಡಿಗರ ವಿರುದ್ಧ ಅವನೇನು ಮಾಡಬಲ್ಲ ? ಅವರಿಬ್ಬರ ಕಾದಾಟದಲ್ಲಿ ಅವನ ಸ್ಥಿತಿ ತ್ರಿಶಂಕು ಸ್ವರ್ಗದಂತೆ ಆಗಿದೆ. 'ಗಂಡ-ಹೆಂಡಿರ ಜಗಳದಲ್ಲಿ ಕೂಸು ನುಗ್ಗಾಯಿತು' ಎಂಬಂತೆ, ಶಾಮರಾಯ-ಭೀಮರಾಯ ಇಬ್ಬರೂ ಅವನ ಮೇಲೆ ಅಧಿಕಾರ ಚಲಾಯಿಸಲು ಇಚ್ಛಿಸುತ್ತಿರುವುದರಿಂದ, ಅವನಿಗೆ ಯಾರ ಮಾತು ಕೇಳಬೇಕೆಂಬುದು ತಿಳಿಯದೇ, ಅವನು ದಿಕ್ಕೆಡುತ್ತಾನೆ. ಒಂದು ಹಂತದಲ್ಲಿ ಕಲ್ಲಂಭಟ್ಟರು ಶಾಮರಾಯ-ಭೀಮರಾಯರ ಬಡಿದಾಟದ ನೇಪಥ್ಯದಲ್ಲಿ ಬರದಿದ್ದರೆ, ಅವನ ಸ್ಥಿತಿ ಏನಾಗುತ್ತಿತ್ತೋ ದೇವರೇ ಬಲ್ಲ! ಅವನು ಯಾವ ರೀತಿಯಿಂದ ಮಾತನಾಡಿದರೂ ಆ ಇರ್ವರೂ ಮೂರ್ಖರು ಅವನನ್ನು ಪಾರಾಗಲು ಬಿಡುವವರಲ್ಲ. ಹೀಗೆ ನಾಟಕದ ಉದ್ದಕ್ಕೂ ಮುಲ್ಲ ಓದುಗರ ಸಹಾನುಭೂತಿಗೆ ಪಾತ್ರನಾಗಿದ್ದಾನೆ. ಅವನಿಗೆ ದೊಡ್ಡರಾಯರಲ್ಲಿ ಎಲ್ಲಿಲ್ಲದ ಅಭಿಮಾನವಿದೆ. ಅದಕ್ಕೆ ಬೇಲೀಫ್ ದೊಡ್ಡ ರಾಯರನ್ನು ಸಾಲ ಮಾಡಿದ ಬಗ್ಗೆ ಹಳಿಯುವುದನ್ನು ಕಂಡು, ಅವನಿಗೆ ಸಹಜ ಕೋಪ ಬರುತ್ತದೆ. 'ಏ ಬೇಲೀಫಾ, ನಮ್ಮ ದೊಡ್ಡರಾಯರ ಸಂಬಂಧದಲ್ಲಿ.... ಮಾತನಾಡಿದರ ಪಾಡಾಗಾಕಿಲ್ಲ' ಎಂಬ ಮಾತುಗಳಲ್ಲಿ, ಅವರ ಬಗ್ಗೆ ಇದ್ದ ತನ್ನ ಅಭಿಮಾನವನ್ನು ಪ್ರಕಟಿಸುತ್ತಾನೆ. ನಾಟಕದ ಕೊನೆಯಲ್ಲಿ ದೊಡ್ಡ ರಾಯರು ಮರಳಿ ಬಂದದ್ದನ್ನು ಕಂಡು, ದೆವ್ವವೆಂದು ತಾನು ಕರೆದದ್ದಕ್ಕೆ ಕ್ಷಮೆಯೇ ಕೇಳಲು ಅವರ ಕಾಲು ಬೀಳುವುದು ಅವನ ಸಹಜ ಹಳ್ಳಿಯ ಹುಂಬತನವನ್ನು ತೋರ್ಪಡಿದರೂ, ಅವನ ಸರಳ ಮುಗ್ಧ ಹೃದಯಕ್ಕೆ ನಾವು ಮಾರುಹೋಗಲೇ ಬೇಕಾಗುತ್ತದೆ.

ಪ್ರಸ್ತುತ ನಾಟಕದಲ್ಲಿ ಕಲ್ಲಂಭಟ್ಟರ ಪಾತ್ರ ಗೌರವಪೂರ್ಣವಾಗಿದೆ. ಅವರೊಂದು ವೈದಿಕವೃತ್ತಿ ಸಮಾಜದ ಆದರ್ಶ ವ್ಯಕ್ತಿ. ಮನೆಯ ಯಜಮಾನ ದೊಡ್ಡ ರಾಯರು ಹೋದರು.... ಇನ್ನೇನು ನನಗೆ ಅಲ್ಲಿ ದೊರೆಯುವುದೆಂಬ ಸಾಮಾನ್ಯ ವೈದಿಕರ ಭಾವನೆ ಅವರಲ್ಲಿಲ್ಲ. ದೊಡ್ಡ ರಾಯರ ಮರಣದ ಸುದ್ದಿ ಬಂದಾಗ, ಅವರು ಊರಲ್ಲಿ ಇರದಿದ್ದರೂ, ಈಗ ರಾಯರ ಮನೆಯ ಆಸ್ತಿ ಪರರ ಕೈಗೆ ಸಿಕ್ಕು ದಿಕ್ಕಾಪಾಲು ಆಗುವುದನ್ನು ತಡೆಯಲು ಭಟ್ಟರು ಯತ್ನಿಸುತ್ತಾರೆ. ಅವರು ರಾಯರ ಮನೆಯ ಅನ್ನದ ಋಣ ಮರೆತಿಲ್ಲ. ಅದಕ್ಕೆ ಸೆರೆಗುಡುಕರ ಬಡಿದಾಟ ಬಿಡಿಸಲು ಹೊರಟ ಸ್ಥಿತಿ. ಅವರಿದಾದರೂ, ಶಾಮರಾಯ ಭೀಮರಾಯ ಶಾಂತರಾಗಿ ಒಪ್ಪಂದಕ್ಕೆ ಬಂದು, ಮನೆಯ ಸ್ಥಿತಿ ಸರಿಯಾಗಿ ನೆಲೆಗೊಳ್ಳುವ ವರೆಗೆ ಧರಣಿ ಕೂಡ್ರಲೂ ಹಿಂಜರಿಯುವುದಿಲ್ಲ. ಆದುದರಿಂದಲೇ ದೊಡ್ಡರಾಯರಿಂದ ಹಿಡಿದು ಎಲ್ಲರಲ್ಲಿಯೂ ಅವರ ಬಗ್ಗೆ ಆದರವಿದೆ. ಅವರು ಅದಕ್ಕೆ ನಿಜವಾಗಿ ಅರ್ಹರು ಎಂಬುದನ್ನು ಶಾಮರಾಯ-ಭೀಮರಾಯ ಬಡಿದಾಟ ಬಿಡಿಸುವಲ್ಲಿ ಲೇಖಕರು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಇನ್ನು ದೊಡ್ಡರಾಯರು, ರಂಗರಾಯರು ಮತ್ತು ಬೇಲೀಫ ಫಕೀರಪ್ಪ ಸಮಯೋಚಿತವಾಗಿ ಬಂದಿದ್ದಾರೆ. ಆದರೆ ದೊಡ್ಡರಾಯರು ತಮ್ಮ ಖಾಸಗೀ ವ್ಯವಹಾರಕ್ಕಾಗಿ ಸರಕಾರೀ ನೌಕರಿಯಲ್ಲಿರುವ ನ್ಯಾಯಾಧೀಶ ರಂಗರಾಯರನ್ನು,-ಪೊಟ್ಟ ಸಮನ್ಸು ಜಾರಿಮಾಡಲು ಬೇಲಿಫ್ ಫಕೀರಪ್ಪನನ್ನು-ಉಪಯೋಗಿಸಿಕೊಂಡದ್ದು ಅಷ್ಟು ಸೈಜವೆನಿಸುವುದಿಲ್ಲ. ಯಾಕೆಂದರೆ ಒಂದು ಕಾಲಕ್ಕೆ ನಾವುಲೇದಾರ್

[ಕವರನ ಮೂರನೆಯ ಪುಟಕ್ಕೆ]

ಸಾದರ ಸ್ವೀಕಾರ

೯೦ ಅದರ್ಶ (ಕಥಾಸಂಕಲನ) ಲೇಖಕರು ಶ್ರೀಮಾನ್ ಸಗರ ಕೃಷ್ಣಾಚಾರ್ಯ ಎಂ. ಎ., ಬಿ. ಇಡಿ. ಗುಲ್‌ಬರ್ಗಾ, ಪ್ರಕಾಶಕರು—ಸಾರ್ವಜನಿಕ ಸಾಹಿತ್ಯಮಂದಿರ, ರಂಗಂಪೇಟೆ (ಸುರಪುರ). ಕ್ರೌ. ಅ. ೬೦ ಪುಟಗಳು; ಬೆಲೆ ೦೦.೫೦.

೯೧ ಅಮೃತಬಿಂದು (ಕವನ ಸಂಗ್ರಹ) ಲೇಖಕರು ಶ್ರೀ. 'ಇಂದಿರೇಶ'. ಪ್ರಕಾಶಕರು ಶ್ರೀ ವೇಣುಗೋಪಾಲ ವಾಚನಾಲಯ, ಶಹಪೂರ (ಡಿ. ಗುಲಬುರ್ಗಾ). ಕ್ರೂ. ಕ್ಯಾ. ಅ. ೪೨ ಪುಟಗಳು. ಬೆಲೆ ೦೦.೫೦.

೯೨ ಭಾವಪ್ರಕಾಶ (ಕಥಾಸಂಕಲನ) ಲೇಖಕರು ಶ್ರೀ. ಟಿ.ಜಿ. ಸತ್ಯಮೂರ್ತಿ ಮತ್ತು ಶ್ರೀ. ಎನ್. ನಾರಾಯಣ ಬಲ್ಲಾಳ ಅವರು. ಪ್ರಕಾಶಕರು ಶ್ರೀ. ರಾಳೆಯೇಂದ್ರ ಪ್ರಕಾಶನ, ಉಡುಪಿ. ಕ್ರೌ. ಅ ೪೮ ಪುಟಗಳು. ಬೆಲೆ ೦೦.೫೦.

೯೩ ನಿತ್ಯಾನಂದ ದರ್ಶನ (ಕನ್ನಡದ ಹೊಸ ಮಾಸಪತ್ರಿಕೆ) ಸಂಪಾದಕರು ಶ್ರೀ. ಗುರುನಾಥ ಕುಲಕರ್ಣಿ ಎಂ. ಎ. ಮುಂಬಯಿ. ಪ್ರಕಾಶಕರು ಬಿ. ಎಸ್. ರಾವ್, ನ್ಯಾಶನಲ್ ಪ್ರಿಂಟರ್ಸ್ ಮತ್ತು ಅಡ್ವರ್ಟೈಜರ್ಸ್, ಈನಾಜಿ ಸ್ಟ್ರೀಟ್, ಬಾಂದೆ—. ಕ್ರೌ. ೧೮ ಪುಟಗಳು. ವಾರ್ಷಿಕ ಚಂದಾ ೫ ರೂಪಾಯಿಗಳು ಬಿಡಿ ಸಂಚಿಕೆಗೆ ೦೦.೬೨.

ಮುಂಬಯಿಯಲ್ಲಿ ವಾಸಿಸುತ್ತಿರುವ ಶ್ರೀ ಸಾಮಿ ನಿತ್ಯಾನಂದ ಅವರ ಅನುಯಾಯಿಗಳ ಸಂಸ್ಥೆಯ ಆಶ್ರಯದಲ್ಲಿ ಈ ಪತ್ರಿಕೆ ಪ್ರಾರಂಭವಾಗಿದೆ. ಮೊದಲನೆಯ ಸಂಚಿಕೆಯು ಆಂತರಂಗ-ಬಹಿರಂಗಗಳೆರಡರಿಂದಲೂ ಚೆನ್ನಾಗಿದೆ. ಮುಂಬಯಿಯಲ್ಲಿ ಹೊರಟಿರುವ ಈ ಪತ್ರಿಕೆ ಬಹುಕಾಲ ಬಾಳಿ, ಕನ್ನಡಿಗರ ಮನಸ್ಸು, ಬುದ್ಧಿ, ಹೃದಯಗಳಿಗೆ ಮುಕ್ತವಾದ ಆಹಾರವನ್ನು ಒದಗಿಸುತ್ತಿರಲಿ.

೯೪ ಪಂಚಾಮೃತ (ಸಂಚಯಿತ ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಪಂಢರೀನಾಥಾಚಾರ್ಯ ಗಲಗಲಿ, ಗದಗ. ಡೈಜೆಸ್ಟ್ ಅಳತೆಯ ೧೩೮ ಪುಟಗಳು. ಬಿಡಿ ಸಂಚಿಕೆಗೆ ೫೦ ನಯೇ ಪೈಸೇ.

ಇದೇ ಎಪ್ರಿಲ್ ತಿಂಗಳಿಂದ ಹೊರಟ ಈ ಸಂಚಯಿತ ಮಾಸಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲಿ ಚಿತ್ತವನ್ನು ಆಕರ್ಷಿಸುವಂತಹ, ಹೊಸ ವಿಷಯಗಳನ್ನು ತಿಳುಹಿ ಬಹುಶ್ರುತತ್ವವನ್ನು ಹೆಚ್ಚಿಸುವಂತಹ ವಿವಿಧಲೇಖನಗಳು, ಚಿತ್ರಗಳೊಂದಿಗೆ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿರುವ 'ಡೈಜೆಸ್ಟ್' ಅಂತಹ ಪತ್ರಿಕೆಯನ್ನು ಕನ್ನಡವಾಚಕರಿಗೆ ಒದವಿಸುವುದೇ ಈ ಪತ್ರಿಕೆಯ ಉದ್ದೇಶವಾಗಿದೆ. ಇದೇ ಉದ್ದೇಶದಿಂದಲೇ ಈ ಮೊದಲೇ ಹೊರಟು ಕಾರ್ಯ ಮಾಡುತ್ತಿರುವ 'ಪುಸ್ತಕ ಪ್ರಪಂಚ' 'ಕಸ್ತೂರಿ' ಇವು ಜನಪ್ರೀತಿಗೆ ಪಾತ್ರವಾಗಿವೆ. ಅವುಗಳಂತೆಯೆ ಈ 'ಪಂಚಾಮೃತವೂ ಜನತೆಗೆ ಸುಧಾರಸವನ್ನಿಸುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀಮಾನ್ ಪಂಢರೀನಾಥಾಚಾರ್ಯರಂತಹ ಭಾರತೀಯ ಸರಂಪರಾ ಸಂಸ್ಕೃತಿಯ ಪಂಡಿತರಿಂದ ಹೊರಟ ಈ ಪತ್ರಿಕೆ, ತನ್ನದೊಂದು ವೈಶಿಷ್ಟ್ಯವನ್ನು ಪೋಷಿಸುವುದೆಂದು ನಮ್ಮ ವಿಶ್ವಾಸ.

[೪೯ನೆಯ ಪುಟದಿಂದ ಬಂದುದು.]

ಫೌಜದಾರ ಮುಂ. ಉನ್ನತ ಸರಕಾರೀ ನೌಕರಿ ಮಾಡಿದಂತಹ ಶಾಮರಾಯ ಭೀಮರಾಯರು, ಸಮನ್ಸು ನೋಡದೇ ಹಳ್ಳಿಯ ಹುಂಬರಂತೆ ಅದಕ್ಕೆ ಸಹಿಮಾಡಲು ಹಾತೊರೆಯುವುದು ವಾಸ್ತವವೆನಿಸುವುದಿಲ್ಲ. ದೊಡ್ಡರಾಯರು ಓದುಗರ ಗೌರವಕ್ಕೆ ಪಾತ್ರರಾಗುವುದು ತಮ್ಮ ಅಸ್ತಿಯ ಸದ್ವಿನಿಯೋಗದಿಂದ; ಅಲ್ಲದೇ, ಅವರ ಪಾತ್ರದ ಚಿತ್ರಣದಿಂದಲ್ಲ. ಅವರು ಮಕ್ಕಳಿಲ್ಲದ ಜನ ತಮ್ಮ ಆಸ್ತಿಯನ್ನು ಹೇಗೆ ಸದ್ವಿನಿಯೋಗಿಸಬೇಕೆಂಬುದಕ್ಕೆ ಪಾಠಹಾಕಿ ಕೊಟ್ಟಿದ್ದಾರೆ. ದೊಡ್ಡರಾಯರ ನಾಟಕಕ್ಕೆ ಮುಖ್ಯ ಆಧಾರನಾದ ಬೇಲೀಫ್ ಫಕೀರಪ್ಪ ಮಾತ್ರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದ್ದಾನೆ. ಅವನು ಒಂದು ವೇಳೆ ಜೊಟ್ಟೆ ಸಮನ್ಸನ್ನು ತಂದಿದ್ದರೆ, ಶಾಮರಾಯ ಭೀಮರಾಯರಲ್ಲಿ ಹೊಡೆದಾಟ ಬಡಿದಾಟವಾಗಿ ನಿಜವಾಗಿ ಕೋರ್ಟ್ ಕಟ್ಟೆ ಹತ್ತುವ ಪ್ರಸಂಗ ಬರುತ್ತಿತ್ತು. ಆದರೆ ಬೇಲೀಫ್ ಫಕೀರಪ್ಪ ಎಲ್ಲರಿಗೂ ನಂಬಿಗೆ ಎನಿಸುವಂತೆ ದೊಡ್ಡರಾಯರು ಸಾಲ ಮಾಡಿದ ಪ್ರಸಂಗವನ್ನು ವಿವರಿಸುತ್ತಾನೆ. ಅವರಿಂದ ಶಾಮರಾಯ ಭೀಮರಾಯರಲ್ಲಿಯ ವಾರಸದಾರಿಕೆಯ ಗುಟ್ಟು ಬಯಲಾಗುತ್ತದೆ. ಅವನು ತಂದ ಕಾಗದಕ್ಕೆ ಅವರಿಬ್ಬರೂ ತಾವು ವಾರಸದಾರರೆಂದು ಸಹಿ ಮಾಡಲು ಮುಗಿಬೀಳುವುದನ್ನು ಕಂಡು 'ಒಬ್ಬರಕಿಂತಾ ಇಬ್ಬರೂ ಲೇಸು....ಕಬೂಲ್ ಅದಮ್ಯಾಲ ಪಾಡು ಆತ್ಯ ಬಿಡ್ರಿ!' ಎಂಬ ಅವನ ನುಡಿಯಲ್ಲಿ ಸಹಜಹಾಸ್ಯ ಹೊರಹೊಮ್ಮಿದೆ. 'ಇದೇನಪ್ಪ ಮತ್ತ ?....ಹುಡುಗಾಟಕೇ ನಡಿಸಿದಿರಲ್ಲಾ ನೀವು ?' ಎಂಬ ಮಾತುಗಳಲ್ಲಿ ಸರಕಾರೀ ನೌಕರನ ಸಹಜ ದರ್ಪ ತೋರಿಸಿದ್ದಾನೆ. ಹೀಗೆ ಚುಟುಕಾದ ಪಾತ್ರದಲ್ಲಿಯಾದರೂ ಬೇಲೀಫ್ ಫಕೀರಪ್ಪ ಓದುಗರ ಮನ ಸೆಳೆಯುತ್ತಾನೆ.

ಶೈಲಿಯ ದೃಷ್ಟಿಯಿಂದ ಲೇಖಕರು ಶಾಮರಾಯ-ಭೀಮರಾಯರಲ್ಲಿಯ ಮಾತಿನ ಖಡಖಡಾಟ, ವಸ್ತುನಿಷ್ಠಯೋಗಿಸುವ ಗ್ರಾಮ್ಯ ಭಾಷೆ, ಕಲ್ಲಂಭಟ್ಟರು ಶಾಮರಾಯ-ಭೀಮರಾಯರಲ್ಲಿಯ ವಾರಸ್ದಾರಿಕೆಯ ಕಲಹವನ್ನು ಶಾಂತಗೊಳಿಸಲು ಯತ್ನಿಸುವ ರೀತಿ, ಜೊಟ್ಟೆ ಸಮನ್ಸು ಜಾರಿಮಾಡಲು ಬಂದ ಪ್ರಕರಣ, ದೊಡ್ಡರಾಯರ ಕೊನೆಯ ಇಚ್ಛೆಯ ಪ್ರಕಟನೆಯ ಸಂದರ್ಭ ಮುಂತಾದುವುಗಳನ್ನು-ನಾಟಕದ ಮೊದಲಿನಿಂದ ಕೊನೆಯ ವರೆಗೆ-ಒಳ್ಳೇ ಮಾರ್ಮಿಕವಾಗಿ ಚಿತ್ರಿಸಿ, ಕೊನೆಯ ವರೆಗೆ ಓದುಗರಲ್ಲಿ ಆತುರತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಅಲ್ಲಲ್ಲಿ ಅವರು ಉಪಯೋಗಿಸಿದ ನಾಣ್ನುಡಿಗಳು ಊಟದಲ್ಲಿಯ ಉಪ್ಪಿನಕಾಯಿಯಂತೆ ನಾಟಕದ ಸವಿಯನ್ನು ಹೆಚ್ಚಿಸಿವೆ. ನಾಟಕದ ಕಥೆಯ ವೇಗ ಎಲ್ಲಿಯೂ ಕುಂಠಿತವಾಗಿಲ್ಲ. ಹಾಸ್ಯಯುತವಾದ ಶೈಲಿಯ ಮೂಲಕ ಬೇಸರ ತರಿಸುವಂತಹ ಸಂದರ್ಭಗಳೇ ಇಲ್ಲ. ಹೀಗೆ ಸರ್ವವಿಧದಿಂದಲೂ ಯಶಸ್ವಿಯಾಗಿ, ಅವರು ಓದುಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರ ಈ ಕೃತಿ ನಿಜವಾಗಿ ಕನ್ನಡ-ಸಾಹಿತ್ಯ ದೇವಿಯ ಆಡಿದಾವರೆಗಳಲ್ಲಿ ಅರ್ಪಿಸಿದ ಒಂದು ಸುಂದರವಾದ ಪುಷ್ಪವೆಂದು ನಿರ್ವಿವಾದವಾಗಿ ಹೇಳಬಹುದು. ●

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬಿಡಗಿಸೊಂದಿಗೆ ಇದೀಗ ಬಳಿಕ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇನೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇನೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೫೫ ವರ್ಷಗಳಾದರೂ, ವಾಚಕರಿಗೆ ಹೊಸ-ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೩ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂಡ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿಗೀತ ಸಂಕಲನ)
ಕ್ರೌ. ಅ. ೭೨ ಪುಟ ● **ಬೆಲೆ : ೧.೨೫**

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.



ಗದ್ದುಗೆಯೇರುತ್ತಿರುವ ಬುದ್ಧಿ

❋

ಅಯ್ಯಾ, ಬುದ್ಧಿಗೇ ರಾಜ್ಯವ ಕಟ್ಟುವ ಕಟ್ಟಬೇಕೆಂಬ ಒದ್ದಾಟ ಸಾಗಿದೆ ಕಾಣಾ, ಲೋಕದ ತುಂಬ! ಬುದ್ಧಿಯು ಬೆಂಬಲಿಗರಲ್ಲಿ ಸಮಾಜಶಾಂತಿಗೆ ಬೇಕಾದ ಸಮತೆ ನೆಲೆಗೊಂಡೀತೇನಯ್ಯಾ! ನಿತ್ಯಜನನದ ನಿತ್ಯಮರಣದ ಪರಂಪರೆ ಸಾಗಿರುವ ಈ ಸೃಷ್ಟಿಯಲ್ಲಿ, ಬುದ್ಧಿಶಕ್ತಿಯ ವಿಜಯಮತೆಯೇ ಜಾಳಿ ಬೆಳೆಯುತ್ತಿದೆ ಕಾಣಾ!

§ § § §

ಇಂದು ಹುಟ್ಟಿದ ಪಸುಗೂದಿನಗೂ, ಮುಪ್ಪಡಸಿದ ಮೆದುಳಿಲಿಗೂ ಬುದ್ಧಿಯ ಬಲನೆಲ್ಲಿಯದಣ್ಣಾ ? ಪೈ ಬೆಳೆದ ಸೂಕ್ಷ್ಮಜೀವಿಗಳಲ್ಲಿಯೂ ಬುದ್ಧಿ ಒಂದೆ ತೂಕದಲಿ ಇದ್ದೀತೇನಣ್ಣಾ ? ಬುದ್ಧಿಯ ಈ ತಾರತಮ್ಯಸ್ಥಿತಿ, ಸ್ಪರ್ಧೆ–ಪುಕ್ಸರಂಗಳನೇ ಬೆಳಸೀತಲ್ಲದೆ, ಸಮತೆಯನ್ನೆಂತು ಸಮಾಜಕ್ಕೆ ಒದಗಿಸೀತಣ್ಣಾ !

§ § § §

ಅಯ್ಯಾ, ಬುದ್ಧಿಗೇ ಬಲ್ಗದ್ದುಗೆ ಮೊರೆತರೆ, ಬಲುಬುದ್ಧಿಯವರು ಹುಲು-ಬುದ್ಧಿಯವರನ್ನು, ಕ್ರಿಮಿಗಳಂತೆ ಕಂಡಾರು ತಂದೆ! ಹದ್ದುಗಳು ಹೆಣವನ್ನು ಹರಿದುತಿಂದಂತೆ, ಬುದ್ಧಿಬಲಿಗಳು ಕಿರುಬುದ್ಧಿಗರನ್ನು ಕಿತ್ತು ಕಿತ್ತು ತಿಂದಾರು ಕಾಣಾ! ಲೋಕದ ಭೋಗ-ಭಾಗ್ಯಗಳೆಲ್ಲ ಬುದ್ಧಿಯ ಭಕುತಂಗೇ ಬಲಿಯಾ-ವಾವು ನೋಡಾ!

§ § § §

ಬುದ್ಧಿಯನೇ ಗದ್ದುಗೆಗೇರಿಸುವುದು ಮಾನವನೀತ!.....ಭಾವನೆಯನೇ ಕಾವಲಿಸ್ಸಾಗಿ ಮಾಡುವುದು ನಿರ್ಜರನೀತ!.... ಅಯ್ಯಾ ಭಾವನೆಯನ್ನು ಗದ್ದುಗೆಗೇರಿಸಿ ಬುದ್ಧಿಯನು ಮಂತ್ರಿಣಿಯನ್ನಾಗಿ ನೂಡುವುದು ಸೂನಪ-ನೀತಿಯೆಂಮೊರೆಯುವನಯ್ಯಾ ನಮ್ಮ ನೀತಿಜ್ಞ ಕಾಲರಾಯ!

—ಸಾಮಾಜಿಕ.

JAYANTI

ಈ ಸಂಚಿಕೆಯಲ್ಲಿ

ಇಪ್ಪತ್ತ್ಮೂರು ವರ್ಷಗಳು ಮುಗಿದುವು. (ಸಂಪಾದಕೀಯ)

ಸಂಪಾದಕರು ೩೯೭

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು.)

' ಕಾಲಭೈರವ ' ೩೯೯

ಕ್ಷಮಾ (ಸಣ್ಣ ಕಥೆ)

ಶ್ರೀ. ' ಸುಜಯ ' ಸೀನಿಯರ್ ಎಂ. ಎ. ಧಾರವಾಡ ೪೦೧

ಡಾಕ್ಟರ್ ಅಲೆಕ್ಸಿ ಕಾರಿಲ್ (ವಿಜ್ಞಾನಿಯೊಬ್ಬನ ಪರಿಚಯ)

ಶ್ರೀ. ಟಿ. ಆರ್. ನಾಡಗೀರ ಬಿ. ಎಸ್. ಸಿ. (ಟೆಕ್.) ಕುಂದಗೋಳ ೪೦೭

ರವೀಂದ್ರರ ನೂರು ಕವಿತೆಗಳು (ಅನುವಾದ)

ಶ್ರೀ. ಚೆನ್ನವೀರ ಕಣವಿ ಎಂ. ಎ. ಧಾರವಾಡ ೪೧೦

ಆರೋಹಣ (ಪೌರಾಣಿಕ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೪೧೧

ಕಾಳಿದಾಸನ ಸುಭಾಷಿತಗಳು. (ರಘುವಂಶ)

ಶ್ರೀ. ಎ. ಶಂಕರ ಕೆದಿಲಾಯ ಎಂ. ಎ. ಮದ್ರಾಸು ೪೧೪

ಬುದ್ಧ ಸಂದೇಶ

ಶ್ರೀ ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೧೭

ಡಾ. ರಂ. ಶ್ರೀ. ಮುಗಳಿ (ವ್ಯಕ್ತಿಪರಿಚಯ)

ಶ್ರೀ. ಅನಂತರಾವ ಕೆ. ಭೋಸಗೆ, ಸೇಡಬಾಳ ... ೪೧೯

ಮುಚ್ಚಂಜೆಯ ಮೆಲುಕು (ಸಣ್ಣ ಕಥೆ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ., ಬಿ. ಟಿ,
ಧಾರವಾಡ ೪೨೧

ತುಂಬಿ (ಕವನ)

ಶ್ರೀ. ಎ. ಫ್ಬಿ. ಸದರಜೋಸಿ ಬಿ. ಎ. (ಆನರ್ಸ್) ಚಿಕ್ಕೋಡಿ ೪೨೭

ಕವಿ ರವೀಂದ್ರ (ಕವನ)

' ವನವಿಹಾರಿ ' ೪೨೪

ಸಾಹಿತ್ಯ ನಿರ್ಮಿತಿಯ ಶಿಕ್ಷಣರಂಗ

ಶ್ರೀ. ' ರಂಗ ' ಮಾಳಮಡ್ಡಿ ಮತ್ತು
ಶ್ರೀ. ಎಂ. ಗಂಗಾಧರ ಭಟ್ಟ, ನೀರ್ಚಾಲು ೪೨೯

ಸಾದರಸ್ವೀಕಾರ (ಕವರಿನ ೩ ನೆಯ ಪುಟ)

ಜಯಂತಿ

ಸಂಪುಟ ೨೩] ಸಂಚಿಕೆ ೦೬]

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

○

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣರರ್ಮ

○

ಸಂಚಿಕೆ ಪ್ರತಿ ತಿಂಗಳ
ಹೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

○

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

○

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಇಪ್ಪತ್ತು ಮೂರು ವರ್ಷ ಮುಗಿದುವು

ಇದೀಗ ಜಯಂತಿಯ ೨೩ನೆಯ ವರ್ಷ ಪೂರ್ಣವಾಯಿತೆಂದು ಸಮಾಧಾನದ ಉಸಿರ್ಗರೆಯುತ್ತಲೆ ಹೇಳಬೇಕಾಗಿದೆ. ಪ್ರತಿವರ್ಷವೂ ವರ್ಷಪ್ರಾರಂಭಯಾವುದೋ ದೂರದ ಆಶೆಯಿಂದ ಆಗುತ್ತದೆ. ಒಂದರಹಿಂದೊಂದು ತಿಂಗಳುಗಳು ನಷ್ಟವನ್ನೇ ಹೊತ್ತುಕೊಂಡು ಬರತೊಡಗಿದಾಗ ಮುತ್ತಿಕೊಳ್ಳುತ್ತಿರುವ ನಿರಾಶೆ, ವರ್ಷವ ಕೊನೆಯಾಪೊಡನೆ ಜಯಂತಿಯನ್ನು ಮುಂದುವರಿಸಬಾರದೆಂಬ ನಿರ್ಣಯದ ಬೆನ್ನನ್ನು ಹಚ್ಚುತ್ತದೆ. ಈಗಲೂ ಎಂದಿನಂತಹದೇ ಪರಿಸ್ಥಿತಿ. ಕಳೆದ ವರ್ಷ ಒದಗಿದ ಆರ್ಥಿಕನಷ್ಟವನ್ನು ನೋಡಿದವರಿಗೆ, ಈ ವರ್ಷ ಜಯಂತಿಯನ್ನು ಮುಂದುವರಿಸಲು ಸಂಕಲ್ಪಿಸಿದುದು ವಿಲಕ್ಷಣ ವ್ಯವಹಾರವೆಂದು ತೋರದಿರದು. ಜಯಂತಿ ಹುಟ್ಟಿದಂದಿನಿಂದಲೂ ಇಂತಹ ವಿಲಕ್ಷಣ ವ್ಯವಹಾರದಲ್ಲಿಯೆ ನಡೆದುಬಂದಿದೆ. ಇನ್ನೂ ಎಷ್ಟು ಕಾಲ ಹಾಗೆಯೆ ಮುಂದುವರಿಯಬಲ್ಲುದು ಸಾಧ್ಯವಾಗುವುದು ?

ಸದ್ಯದ ಕಾಲ ನಮ್ಮ ಜನತೆಯ ವಾಚನಾಭಿರುಚಿಯು ದಿಕ್ಕನ್ನೇ ಬದಲಿಸಿಬಿಟ್ಟಿದೆ. ನಿಯಮ. ಸಂಯಮಗಳಿಗೆ ಆಧೀನವಾಗಿ ನಡೆಯಬೇಕೆನ್ನುವ ಸಾಂಸ್ಕೃತಿಕ ಸಾಹಿತ್ಯಕ್ಕೆ ಬಹುಜನ ಪಾಚಕ ಪ್ರಸಂಚದಲ್ಲಿ ಬೆಲೆಯೇ ದೊರೆಯುವಂತಿಲ್ಲ. ಜಯಂತಿ ಕಾಲವಿರೋಧಿಯಾಗಿ ನಿಂತು, ತನ್ನ ಗುರಿಯನ್ನು ಸಾಧಿಸಬೇಕೆಂದು ಹೃತ್ಪೂರ್ವಕವಾಗಿ ಹೆಣಗುತ್ತಲಿದೆ. ಅದರ ಗುರಿ ಒಳ್ಳೆಯದಾಗಿ ಇರುವುದೆಂಬುದನ್ನು ಮನಗಂಡಿಕೊಂಡ ಕೆಲವೆ ಜನ ಸಹೃದಯರು ಜಯಂತಿಯನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ. ಅವರ ಇಂತಹವರ ಸಂಖ್ಯೆ ತೀರ ಪರಿಮಿತವಾಗಿ ಇದ್ದುದರಿಂದ, ಮಿತಿಮೀರಿದ ಜೀವನವೆಚ್ಚವ ಈ-ಕಾಲದಲ್ಲಿ ಇವರಿಂದ ದೊರೆಯುವ ಪರಿಮಿತ ಪ್ರಮಾಣದ ಆರ್ಥಿಕ ಸಹಕಾರ, ಜಯಂತಿಯ ಜೀವನಕ್ಕೆ ಸಾಲುತ್ತಿಲ್ಲ.

ಸದಭಿರುಚಿಯನ್ನು ಬೆಳೆಸುವ ಕಾರ್ಯಕ್ಕಾಗಿ ತಾನು ಬದುಕಲೇಬೇಕೆಂದು ಬಯಸುವ ಜಯಂತಿ, ತನ್ನನ್ನು ಬದುಕಿಸಬೇಕೆಂದು ಕನ್ನಡ ಜನತೆಯೆದುರು ಅನೇಕಸಲ ಮೊರೆಯಿಟ್ಟಿದೆ. ಆ ಮೊರೆಯನ್ನು ಕಿವಿಗೆ ಹಾಕಿಕೊಂಡ ಮಹನೀಯರು, ಆಗಾಗ ಅಲ್ಪ ಸ್ವಲ್ಪ ಆರ್ಥಿಕ ಸಹಾಯವನ್ನು ಕೊಟ್ಟುದೂ ಉಂಟು. ಅದರಿಂದ ಜಯಂತಿಯ ನಷ್ಟದ ಪ್ರಮಾಣ ಸ್ವಲ್ಪ ಕಡಮೆಯಾದುದೂ ಉಂಟು. ಈಗಲೂ ಜಯಂತಿ ತನ್ನ ಅಭಿಮಾನಿಗಳಲ್ಲಿ ಧನಸಹಾಯವನ್ನು ಕೋರುತ್ತಲೇ ಇದೆ—ಕೋರಲೇ ಬೇಕಾಗಿದೆ. ಇಂತಹ ದಾತೃಗಳು ದೊರೆತಾರೆಂಬ ಜಯಂತಿಯ ಆಶೆಯೆ, ಅದನ್ನು ತಳನೆಯ ವರ್ಷದತ್ತ ನೂಕುತ್ತಲಿದೆ.

೨೩ನೆಯ ವರ್ಷದಲ್ಲಿಯ ಒಂದು ವಿಶೇಷಸಂಗತಿಯೆಂದರೆ, ಜಯಂತಿ ಹೊಸಬರ ಬಳಿ ಪೈಗಡದ ಹಣ ತಂದು ಹಳೆಯ ಸಾಲದ ಹೊರೆಯನ್ನು ಇಳುಹಿಕೊಂಡಿದೆ. ಇದರಿಂದ ತೆರಬೇಕಾದ ಬಡ್ಡಿಯ ಹೊಣೆ ತಗ್ಗಿದೆಯಾದರೂ ಕೈಗಡ ಕೊಟ್ಟ ಅಭಿಮಾನಿಗಳಿಗೆ, ಅವರ ಹಣವನ್ನು ಅವರಿಗೆ ಸರಿಯಾಗಿ ತಲ್ಪಿಸಬೇಕಾದ ಹೊಣೆ ಜಯಂತಿಯ ತಲೆಯ ಮೇಲೆ ಇದ್ದೇ ಇದೆ. ಜಯಂತಿಯ ಅಭಿಮಾನಿಗಳಲ್ಲಿಯ ಹೆಚ್ಚು ಸಂಖ್ಯೆಯ ಜನರು, ಸ್ವಲ್ಪ ಔದಾರ್ಯ ದೃಷ್ಟಿಯಿಂದ ನೋಡಿದರೆ, ಜಯಂತಿ ತನ್ನ ಈಗಿನ ಕೈಗಡದ ಭಾರದಿಂದಲೂ ಮುಕ್ತವಾದೀತು. ಹಾಗೆ ಅದರೆ, ಅದರ ಕಾರ್ಯೋತ್ಸಾಹ ಹೆಚ್ಚಿ ಜೀವಿತಕ್ಕೆ ಭದ್ರತೆಯುಂಟಾದೀತು.

ಜಯಂತಿ ಅದರ ಸಂಚಾಲಕರಿಗೆ ಒಂದು ಕಾಸನ್ನೂ ಕೊಡುವ ಅಗತ್ಯವಿಲ್ಲ; ಅಂತಹ ಆಶೆಯೂ ಅವರಿಗಿಲ್ಲ. ಅದು ತಾನು ಪುಷ್ಟವಾಗಿ ಬೆಳೆದು ತನ್ನ ಶಕ್ತಿಯಿಂದಲೇ ತಾನು ಮುಂದುವರಿದರೆ ಸಾಕು. ಪ್ರತಿವರ್ಷವೂ ಆಗುವ ನಷ್ಟ ತುಂಬಬೇಕಾದರೆ, ಇನ್ನಿಷ್ಟು ಚಂದಾದಾರರ ಸಂಖ್ಯೆ ಬೆಳೆಯಬೇಕು. ಈಗಿರುವ ನಮ್ಮ ಚಂದಾದಾರರು ಪ್ರತಿಯೊಬ್ಬರೂ ಒಬ್ಬೊಬ್ಬರಂತೆ ಹೊಸ

ಚಂದಾದಾರರನ್ನು ಕೂಡಿಸಿ ಕೊಟ್ಟರೆ, ಜಯಂತಿಗೊಂದು ದೊಡ್ಡ ಅನುಕೂಲತೆಯನ್ನು ಕಲ್ಪಿಸಿಕೊಟ್ಟಂತಾಗುವುದು. ಇದರಿಂದ ಹೆಚ್ಚು ಹಣ ದೊರೆತರೆ, ಜಯಂತಿಯ ಸೌಂದರ್ಯವನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗಬಹುದು.

ಈಗ ಹಳ್ಳಿ-ಹಳ್ಳಿಗಳಲ್ಲಿಯೂ ವಾಚನಮಂದಿರಗಳು ತಲೆಯೆತ್ತುತ್ತಲಿವೆ. ಎಲ್ಲ ವಾಚನಮಂದಿರಗಳೂ ಜಯಂತಿಯನ್ನು ಬರಮಾಡಿಕೊಂಡರೆ, ಜಯಂತಿಯ ಆರ್ಥಿಕಚಿಂತೆ ಬಹುಮಟ್ಟಿಗೆ ಕಡಿಮೆಯಾದೀತು; ಆದರೆ ಆ ವಾಚನಮಂದಿರಗಳು, ಪತ್ರಿಕೆಗಳ ಹೊರಮಿಂಚಿಗೆ ಮರುಳಾಗದೆ, ಅಂತರಂಗದ ಗುಣಗಳನ್ನು ತಿಳಿದುಕೊಳ್ಳುವ ವಿವೇಕವನ್ನು ತೋರಿಸಬೇಕಿಷ್ಟೆ!

ಕನ್ನಡಿಗರ ಆಡಳಿತವನ್ನೊಳಗೊಂಡ ಸರಕಾರ ಬಂದ ಮೇಲೆ ಜಯಂತಿಯಂತಹ ಸಂಸ್ಕೃತಿ ಪ್ರಸಾರಕ ಮಾಸಪತ್ರಿಕೆಗಳಿಗೆ ಒಳ್ಳೆಯ ಕಾಲ ಬರಬಹುದೆಂದು ಭಾವಿಸಿದ್ದೆವು. ಆದರೆ ನಮ್ಮ ಸರಕಾರ ಜಯಂತಿಯ ವಿಷಯದಲ್ಲಿ ತೋರಿಸಿದ ಅನಾಸಕ್ತಿ-ಅಸಡ್ಡೆಗಳು, ನಮ್ಮ ಭಾವನೆಯನ್ನು ಭಾವನೆಯನ್ನೆ ಆಗಿಸಿಬಿಟ್ಟವು. ಜಯಂತಿಗೆ ನೆರವನ್ನು ಕೊಡಬೇಕೆಂದರೆ, ಸರಕಾರ ಅನೇಕ ಕೈಗಳಿಂದ ಕೊಡಬಹುದು. ಆದರೆ, ಅದೇಕೋ ಏನೋ--ಜಯಂತಿಯ ಕಾರ್ಯದ ಕಡೆಗೆ ನಮ್ಮ ಸರಕಾರ ದೃಷ್ಟಿಯನ್ನೇ ಹಾಕಲೊಲ್ಲದಾಗಿದೆ.

ಇನ್ನೊಂದು ಮಾತೆಂದರೆ, ಬಹುಸಂಖ್ಯಾಕ ಕನ್ನಡಿಗರಿಂದ ಕೂಡಿದ ಹಳೆಯ ಮೈಸೂರು ಪ್ರದೇಶದ ಜನರು, ಹೊಸ ಮೈಸೂರು ಪ್ರದೇಶದವರ ಎಂತಹ ಒಳ್ಳೆಯ ಗುಣಗಳನ್ನೂ ಪುರಸ್ಕರಿಸದೆ ಉದಾಸೀನರಾಗಿ ಇರುವರು. ಅವರ ಈ ಪರಕೀಯ ಭಾವನೆಯೂ ಜಯಂತಿಯ ಬೆಳೆವಣಿಗೆಗೆ ದೊಡ್ಡ ತಡೆಯನ್ನು ಉಂಟುಮಾಡಿದೆ. ಹತ್ತು ಲಕ್ಷದಷ್ಟು ಜನಸಂಖ್ಯೆಯುಳ್ಳ ರಾಜಧಾನಿ ನಗರದಲ್ಲಿಯೂ, ೧೦ ಜನ ಕೂಡ ಜಯಂತಿಗೆ ಚಂದಾದಾರರು ದೊರೆಯದಿರುವುದು, ನಮ್ಮ ಸುಸಂಸ್ಕೃತ ಜನತೆಗೆ ಒಳ್ಳೆಯ ಹೆಸರನ್ನು ಒದಗಿಸೀತೆ?

ಇಂತಹ ವಿರೋಧ ಪರಿಸ್ಥಿತಿಯಲ್ಲಿಯೂ ಜಯಂತಿ ತನ್ನ ೨೩ನೆಯ ವರ್ಷವನ್ನು ಮುಗಿಸಿತು. ಆರ್ಥಿಕಸಂಕಟದಲ್ಲಿ ಸಿಕ್ಕಿ ಸಾಕಷ್ಟು ಒದ್ದಾಡುತ್ತಲಿದ್ದರೂ, ಜಯಂತಿಯ ಸಂಚಿಕೆಗಳು ಸಮಯಕ್ಕೆ ಸರಿಯಾಗಿ ಪ್ರಕಟವಾಗಿ ವಾಚಕರ ಕೈಸೇರಿದುವು. ಬಹಿರಂಗದಲ್ಲಿ ಹೆಚ್ಚಿನ ಸೌಂದರ್ಯಾಕರ್ಷಣೆ ಕಂಡುಬಾರದೆ ಹೋದರೂ, ಜಯಂತಿ ತನ್ನ ಅಂತರಂಗದ ಸೌಂದರ್ಯದಲ್ಲಿ ಸಾಕಷ್ಟು ಸಿರಿಸಂತಿಕೆಯನ್ನು ಹೆಚ್ಚಿಸಿ ತೋರಿಸಿದೆ. ಪೆಟ್ಟು ಬಿದ ನಾಲ್ಕುವರೆನೂರು ಪುಟಗಳನ್ನು ಜಯಂತಿ ತನ್ನ ವಾಚಕರಿಗೆ ಸಲ್ಲಿಸಿದೆಯಲ್ಲದೆ, ಪ್ರತಿಯೊಂದು ಪುಟದಲ್ಲಿಯ ವಿಷಯವೂ ವಾಚಕರ ಆದರಕ್ಕೆ ಪಾತ್ರವಾಗುವಂತೆ ಜಾಗೃತಿಯನ್ನು ವಹಿಸಲಾಗಿದೆ.

ಈ ವರ್ಷದ ಸಂಪುಟದಲ್ಲಿ ಬಂದ ಸಣ್ಣಕಥೆಗಳು ನಾಡಿನ ಸಣ್ಣಕಥೆಗಳ ಸಾಹಿತ್ಯದ ಸಂಪತ್ತಿಗೆ ಸಂಪರ್ಧಕವೆನಿಸುವಂತಿವೆಯಲ್ಲದೆ, ಸಣ್ಣಕಥೆಯ ನೂತನ ಲೇಖನತಂತ್ರಗಳಿಗೆ ಮಾದರಿಯೆನಿಸುವಂತಹವಾಗಿವೆ. ಸಣ್ಣಕಥೆಗಳನ್ನು ಬರೆಯಬೇಕೆಂದಾಶಿಸುವ ಹೊಸ ಲೇಖಕರಿಗೆ ಒಂದೊಂದು ಕಥೆಯೂ ಮಾರ್ಗದರ್ಶನ ಮಾಡುವಂತಹ ರಚನಾಸಾಮರ್ಥ್ಯದಿಂದ ಕೂಡಿದಂತಹವನಾಗಿವೆ.

ನವ್ಯಮಾರ್ಗದ ಕವನ, ನವ್ಯಮಾರ್ಗದ ಕವನ ಎರಡಕ್ಕೂ ಜಯಂತಿ ಅವಕಾಶಕೊಡುತ್ತ ಬಂದಿದೆ ಸಾಹಿತ್ಯತಂತ್ರದ ಯಾವ ನೂತನ ಪ್ರಯೋಗಕ್ಕೂ ಜಯಂತಿ ತನ್ನ ಸ್ವಾಗತವನ್ನೆ ನೀಡುವುದು. ಆದರೆ, ಆ ಪ್ರಯೋಗ ತತ್ತ್ವ-ಸತ್ತ್ವಗಳಿಂದ ಕೂಡಿದುದಾಗಿ ಇರಬೇಕೆಂದು ಅದು ಬಯಸುವುದು.

ಈ ವರ್ಷ ಪ್ರಕಟವಾದ ರೂಪಕಸಾಹಿತ್ಯಭಾಗಗಳಲ್ಲಿ, ಸಾಮಾಜಿಕವಸ್ತುವನ್ನು ಒಳಗೊಂಡುವು ಕೆಲವು ಇವೆ. ಪೌರಾಣಿಕ, ಐತಿಹಾಸಿಕ ವಸ್ತುಗಳನ್ನು ಒಳಗೊಂಡುವೂ ಕೆಲವು ಇವೆ; ಇವೆಲ್ಲವೂ ಅಧಿಕಾರಿಗಳಾದ ಲೇಖಕರ ನಿರ್ಮಿತಿಗಳಿದ್ದು, ಬಹುಜನ ವಾಚಕರ ಪ್ರಶಂಸೆಗೆ ಪಾತ್ರವಾಗಿವೆ.

ಅನೇಕ ವ್ಯಕ್ತಿಪರಿಚಯಗಳೂ ಬಂದಿವೆ. ಜ್ಞಾನ ವಿಜ್ಞಾನ ಪರಿಚಯಾತ್ಮಕ ಪ್ರಬಂಧಗಳು ಬಂದಿವೆ. ಪುಸ್ತಕವಿಮರ್ಶೆಗಳು ಪ್ರಕಟವಾಗಿವೆ. 'ಸಂಪಾದಕೀಯ' 'ನಾಡನುಡಿ' 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ' ಮೊದಲಾದ ಶಾಶ್ವತ ವಿಭಾಗಗಳು, ತಮ್ಮ ನಿರ್ದಿಷ್ಟ ಗುಣದಿಂದ ತುಂಬ ಜನಪ್ರೀತಿಯನ್ನು ಗಳಿಸಿವೆ

ಕೈತುಂಬ ಹಣಕೊಟ್ಟರೂ ದೊರೆಯಲಾರದಂತಹ ಅನೇಕ ಲೇಖನಗಳನ್ನು, ಕೇವಲ ಜಯಂತಿಯ ವಿಷಯಕವಾದ ಪ್ರೀತಿಯ ಮೂಲಕ, ನಮ್ಮ ಲೇಖಕ ವರ್ಗ—ನಿಷ್ಕಾಮಬುದ್ಧಿಯಿಂದ ನಮಗೆ ಒದಗಿಸಿಕೊಟ್ಟಿದೆ. ಅದಕ್ಕಾಗಿ ನಮ್ಮ ಲೇಖಕ ಮಹನೀಯರಿಗೆಲ್ಲ, ಆತ್ಮೀಯ ಭಾವದ ಅಭಿನಂದನೆಗಳನ್ನಲ್ಲದೆ ನಾವು ಇನ್ನೇನನ್ನು ಕೊಡಬಲ್ಲೆವು? ಅದರಂತೆಯೆ ಜಯಂತಿಯ ಮೇಲಿನ ಮಮತೆಯ ಕಾರಣದಿಂದಲೇ ಚಾಪೀರಾತುಗಳಿಂದ ನೆರವಿತ್ತ ಧಾರವಾಡದ ಶ್ರೀ. ಬಿ. ಜೆ. ಮುನ್ಶಿಗಿಯವರು, ನಂಜನಗೂಡಿನ ಪದ್ಮೋದ್ಯ ಶಾಲೆಯ ಸಂಚಾಲಕರು—ಇವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ಧಾರವಾಡದ ಲಲಿತ ಮುದ್ರಣಾಲಯದ ಸಂಚಾಲಕರಾದ ಶ್ರೀಮಾನ್ ಬಸವರಾಜ ಹೊರಡಿಯವರು, ಸಹಾನುಭೂತಿ ಸಹಕಾರಿಗಳನ್ನಿತ್ತು, ಜಯಂತಿಯ ಸಮಯಸಿಷ್ಠತೆಯನ್ನು ನಿಷ್ಠೆಯಿಂದಲೇ ಸಂರಕ್ಷಿಸಿಕೊಟ್ಟುದಕ್ಕಾಗಿ, ಅವರಿಗೆ ನಮ್ಮ ಹೃತ್‌ಪೂರ್ವಕ ಧನ್ಯವಾದಗಳು.

ಚಂದಾದಾರರಾಗಿ ಧನಸಹಾಯಕರಾಗಿ ನೆರವಿತ್ತ ಸಹೃದಯ ಕನ್ನಡಿಗರಿಗೆ, ಹಳೆಯ ವರ್ಷದ ನೆರವಿಗಾಗಿ ತುಂಬಿದೆದೆಯ ಪ್ರೀತಿಯನ್ನು ಸಲ್ಲಿಸಿ, ಹೊಸ ವರ್ಷದಲ್ಲಿಯೂ ಅವರ ಔದಾರ್ಯವನ್ನು ವಿಶ್ವಾಸದಿಂದ ನೋಡುತ್ತಿದ್ದೇವೆ.

ಜಯಂತಿಯ ಜೀವನವನ್ನು ಭದ್ರ, ಶುಭ, ಮಂಗಲಗಳಿಂದ ತುಂಬುವ ಭಾರ ಕನ್ನಡ ಜನತೆಯ ಮೇಲಿದೆಯೆಂದು ನಮ್ಮ ನಂಬುಗೆ ನಮ್ಮ ನಂಬುಗೆ ನಿಜವಾಗಿ, ಜಯಂತಿ ಬಲಶಾಲಿಯಾಗಿ ಬದುಕಿ ನಾಡಿಗಾಗಿ ದುಡಿಯಲಿ!

—ಸಂಪಾದಕರು

ನಾಡನಡೆ

ಜಗತ್ಕವಿ ರವೀಂದ್ರನಾಥರ ಶತಮಾನ ಸಮಾರಂಭ

ಮಾನ್ಯ ಕವಿಯೊಬ್ಬನನ್ನು ಪಡೆದ ರಾಷ್ಟ್ರವು, ಕವಿಯೊಂದಿಗೆ ತನ್ನ ಗೌರವವನ್ನೂ ಮೆರೆಯಿಸಿಕೊಳ್ಳುವುದು. ಇಲ್ಲಾನೆಯ ಇಪ್ಪ ವಿಯ ಸಮಯವೆಂದರೆ, ಭಾರತವು ಪಾರತಂತ್ರ್ಯದ ಕಾರಿರುಳಿನಲ್ಲಿ ಕಂಗೆಟ್ಟು ಬಿದ್ದಿದ್ದ ಕಾಲ. ಪುನಃಸ್ವಾತಂತ್ರ್ಯದ ಕನಸುಗಳನ್ನು ಕೂಡ ನಮ್ಮ ಜನ ಕಾಣದಂತಹ ಕಾಲ. ಭಾರತವು ಒಂದೆಂಬ ರಾಷ್ಟ್ರೀಯ ಭಾವನೆಗೆ ಅವಕಾಶವೇ ಇಲ್ಲದ ಕಾಲ. ಸುಶಿಕ್ಷಿತರು ಕೂಡ 'ಬ್ರಿಟಿಷರು ದೇವದೂತರಾಗಿ ತಮ್ಮನ್ನು ಉದ್ಧರಿಸಲು ಬಂದಿರುವರು!' ಎಂಬ ತಿಳಿವಳಿಕೆಯನ್ನು ಇರಿಸಿಕೊಂಡ ಕಗ್ಗತ್ತಲೆಯ ಕಾಲ.

ಇಂತಹ ಬರುಗಾಲದಲ್ಲಿ, ಭಾರತದ ಭಾಗ್ಯವಿಧಾತ—ಅದರ ಶುಭಭವಿಷ್ಯಕ್ಕಾಗಿ, ವಂಗದೇಶದಲ್ಲಿ ಒಂದು ದಿವ್ಯಜೀವವನ್ನು ಕಳುಹಿದ. ಲೋಕನಿಲಕ್ಷಣವಾದ ಜೀವನದು. ಬೆಳೆ-ಬೆಳೆಯ ತ್ರಿರುವಾಗಲೇ ಬೆಳಕಿನ ಪುಂಜವಾಗಲು ತೊಡಗಿತು ಅದೇ ಬಾಲರವೀಂದ್ರರ ರೂಪವಾಗಿ ಪರಿಣಮಿಸಿತು.

ವಿಶೇಷೀಯ ಧರ್ಮ-ಸಂಸ್ಕೃತಿಗಳು ಮೊತ್ತವೊಂದಲು ತಮ್ಮ ಪ್ರಭಾವಕ್ಕೆ ಒಳಗಾಗಿಸಿಕೊಂಡುದೆಂದರೆ ವಂಗದೇಶವನ್ನು ಬಲುಮೆಯಾಡಳಿತದ ನವಾಬರ ಪೀಡೆಯಿಂದ ತನ್ನುನ್ನು ಪಾರುಮಾಡಿ, ಸಮಾಧಾನ ಜೀವನವನ್ನು ಒದಗಿಸಿಕೊಟ್ಟವರು ಬ್ರಿಟಿಷರೇ-ಎಂದು, ಅಂದು ಭಾವುಕರಾದ ಬಂಗಾಲಿಗಳು ಭಾವಿಸಿದರು; ಅವರಿಗೆ ತೋರಿಸಬೇಕಾದ ಕೃತಜ್ಞತಾಭಾವನದಲ್ಲಿ, ಸ್ವಧರ್ಮ-ಸ್ವದೇಶಗಳ ಮಹಾಮಹಿಮೆಯನ್ನೇ ಮರೆತು ನಡೆಯತೊಡಗಿದರು.

ಬ್ರಿಟಿಷರು ಒದಗಿಸಿಕೊಟ್ಟ ಸಮಾಧಾನ ಜೀವನದಲ್ಲಿ, ಎಂತಹ ಘೋರವಿಷ ಹರಡಿದೆಯೆಂಬುದರ ಅರಿವು ಅಲ್ಲಿ-ಸ್ವಲ್ಪದಿನಗಳಲ್ಲಿಯೇ ಜಾಗೃತವಾಯಿತು. ಆ ವಿಷದ ಉಗ್ರತೆಯ ಪ್ರತಿಕಾರಕ್ಕೆಂದೇ ಅಲ್ಲಿ ಅನೇಕ ಬಗೆಯ ಚಟುವಟಿಕೆಗಳು ಎದ್ದಿರಬಹುದು. ಶ್ರೀರಾಮಕೃಷ್ಣ ಪರಮಹಂಸರು ಅಧ್ಯಾತ್ಮಿಕರೀತಿಯಲ್ಲಿ ಸಾಗಿ ವಂಗಜನತೆಯನ್ನು ಎಚ್ಚರಿಸಿದರು. ಈಶ್ವರಚಂದ್ರ ವಿದ್ಯಾಸಾಗರ, ಕೇಶವ ಚಂದ್ರಸೇನ; ರಾಜಾರಾಮು ಮೋಹನರಾಯ, ಮಹರ್ಷಿ ದೇವೇಂದ್ರನಾಥ ಠಾಕೂರ ಮೊದಲಾದವರು ಶಿಕ್ಷಣ, ಸಾಮಾಜಿಕಸುಧಾರಣೆ, ಸಮಾಜ ಸಂಘಟನೆ ಮೊದಲಾದ ಕಾರ್ಯಗಳಿಂದ ಬಿದ್ದ ಜನರನ್ನು ಎಬ್ಬಿಸತೊಡಗಿದರು. ಇವರೆಲ್ಲರ ಇಚ್ಛಾಶಕ್ತಿಯ ಪರಿಣಾಮಫಲವೆನ್ನುವಂತೆ, ಗುರುದೇವ ರವೀಂದ್ರನಾಥರು, ಸುಂಜುಲವಾಣಿಯ ಕವಿಕೋಗಿಲೆಯಾಗಿ ಜನಿಸಿ, ವಂಗೀಯರ ಬುದ್ಧಿ-ಮನಗಳನ್ನಷ್ಟೇ ಅಲ್ಲದೆ, ಸಂಪೂರ್ಣ ಭಾರತದ ಜನತೆಯ ಬುದ್ಧಿ-ಮನಗಳನ್ನೇ ಎಚ್ಚರಿಸಿ ಕಾರ್ಯಪ್ರವೃತ್ತವನ್ನಾಗಿ ಮಾಡಿದರು. ಅವರ ದಿವ್ಯಸಂದೇಶದ ಸಫಲ-ನೂರುವರ್ಷಗಳಲ್ಲಿ-ಭಾರತವನ್ನು ಪರಾಧೀನತೆಯ ಪಾರ ಬಂಧದಿಂದ ಬಿಡಿಸಿತು; ಸ್ವಾತಂತ್ರ್ಯದ ಸತ್ಪಥದಲ್ಲಿ ನಡೆಯಿಸತೊಡಗಿತು.

ಕವಿ ರವೀಂದ್ರರ ವಿಲಕ್ಷಣ ವ್ಯಕ್ತಿತ್ವ

ಕವಿಗಳೆಂದು ದೆಚ್ಚಿನ ಪ್ರಸಿದ್ಧಿಯನ್ನು ಪಡೆದಿದ್ದರೂ, ರವೀಂದ್ರನಾಥರು, ಸಾಹಿತ್ಯ ಪ್ರಪಂಚದ ವಿವಿಧಕ್ಷೇತ್ರಗಳಲ್ಲಿ ಕೃಷಿಮಾಡಿ, ಅಮೃತಮಯ ಕೃತಿಫಲಗಳನ್ನು ಪಡೆದಿರುವರು. ನಟರೂ, ಚಿತ್ರಕಾರರೂ, ಸಂಗೀತಕಲಾಭಿಜ್ಞರೂ ಇದ್ದಂತೆ, ಭಾರತದ ಪುರಾತನ ಸಂಸ್ಕೃತಿಯ ಪೂರ್ಣಾಭ್ಯಾಸಿಗಳೂ ದರ್ಶನವಿಶಾರದರೂ ಆಗಿದ್ದರು. ಒಳ್ಳೆಯ ವಿಮರ್ಶಕರು, ಒಳ್ಳೆಯ ನಾಗ್ಮೆಗಳು ಇದ್ದಂತೆ, ಒಳ್ಳೆಯ ಸಮಾಜಸಂಘಟನಾತಜ್ಞರೂ ಆಗಿದ್ದರು. ಶ್ರೀರವೀಂದ್ರನಾಥರು ಭಾವುಕರಾದ ದೇಶಭಕ್ತರೂ ಹೌದು; ಜ್ಞಾನಾವಶಾಲಿಗಳಾದ ದೇಶಭಕ್ತರೂ ಹೌದು. ಇವೆಲ್ಲವುಗಳನ್ನು ಮೀರಿ ಮಾನವತೆಯ ಉಪಾಸನೆ, ವಿಶ್ವಧರ್ಮದ ಆದರ್ಶಬೋಧನೆಗಳಿಂದ, ಪ್ರಪಂಚದ ಕಣ್ಣುಗಳನ್ನು ಸ್ವದೇಶವಾದ ಭಾರತದ ಕಡೆಗೆ ತಿರುಗಿಸಿದವರು. ಎಂತಲೇ ಇವರು ವಿಶ್ವದ ಕವಿಗಳೆಂಬ ಮನ್ನಣೆಗೆ ಪಾತ್ರರಾದರು.

ಶ್ರೀರವೀಂದ್ರನಾಥರು ಮಾನವತೆ, ವಿಶ್ವಧರ್ಮಗಳ ಪ್ರವಾದಿಗಳಾಗಿ ಕಾರ್ಯಸಾಧಿಸಿದರೂ, ಇವರು ತಮ್ಮ ಮಾತೃಭೂಮಿಯಾದ ಬಂಗಾಲ, ಮಾತೃಭಾಷೆಯಾದ ಬಂಗಾಲಿ-ಇವುಗಳ ಪ್ರೀತಿ ಅಭಿಮಾನಗಳು ಸಣ್ಣತನದವೆಂದು ತಿಳಿಯಲಿಲ್ಲ. ತಮ್ಮ ನಾಡುನುಡಿಗಳ ಅಭ್ಯುದಯಕ್ಕಾಗಿ ಜೀವಭಾವದಿಂದ ಕೊನೆಯವರೆಗೂ ಮಿಡಿದು, ವಂಗವಾಸಿಗಳೆಲ್ಲರ ಹೃದಯಸೀಮೆಯಲ್ಲಿ ಸ್ಥಾನವನ್ನು ಸಂಪಾದಿಸಿದರು ಭಾರತ ಸರಸ್ವತಿಯ ಭಾಷೆಯಾದ ಸಂಸ್ಕೃತದ ಸಾಹಿತ್ಯರಾಶಿಯನ್ನು-ವೇದೋಪನಿಷತ್ತುಗಳಿಂದ ಕಾವ್ಯ-ನಾಟಕಗಳ ವರೆಗೆ ಕೂಲಂಕಷವಾಗಿ ಅಭ್ಯಾಸ ಮಾಡಿದವರು ಇಂಗ್ಲಿಷ್-ಸಾಹಿತ್ಯದ ಇವರ ತಜ್ಞತೆಯನ್ನು ಕಂಡು, ನಿಷ್ಣಾತರಾದ-ಆ-ಭಾಷೆಯ—ಪಂಡಿತರೆನಿಸಿಕೊಂಡವರೂ ಬೆರಗುವಟ್ಟಿದ್ದಾರೆ.

ಶ್ರೀರವೀಂದ್ರನಾಥ ಠಾಕೂರರ ಸಾಹಿತ್ಯರಚನೆಯೆಲ್ಲ ಮೊದಲು ಮಾತೃಭಾಷೆಯಾದ ಬಂಗಾಲಿಯಲ್ಲಿ. ಇಂಗ್ಲಿಷಿನಲ್ಲಿ ಪ್ರಕಟವಾದುದೆಲ್ಲ ಅದರ ತರ್ಜುಮೆ ಮಾತ್ರ. ಶ್ರೀರವೀಂದ್ರರ ಅನೇಕ ಕೃತಿಗಳು ಜಗತ್ತಿನ ಹಲವಾರು ಪ್ರಮುಖಭಾಷೆಗಳಲ್ಲಿ ಪ್ರಕಟವಾಗಿ, ತಮ್ಮ ಮಹಿಮೆಯನ್ನು ಮೆರೆಯಿಸಿರುವುವು. ಜಗತ್ತಿನ ಅನೇಕ ರಾಷ್ಟ್ರಗಳ ರಂಗಭೂಮಿಗಳ ಮೇಲೆ ಇವರ ನಾಟಕಗಳು ನಲಿದಾಡಿರುವುವು.

ಈ ಮಹರ್ಷಿಯು ಭಾರತದಲ್ಲಿ ಪ್ರಾರಂಭಿಸಿದ 'ವಿಶ್ವಭಾರತಿ' ವಿದ್ಯಾಸಂಸ್ಥೆ, ಪ್ರಪಂಚದ ಎಲ್ಲ ಭಾಗದ ವಿದ್ಯಾಭಿಮಾನಿಗಳನ್ನೂ ಭಾರತಕ್ಕೆ ಬರಮಾಡಿಕೊಂಡು, ಭಾರತೀಯ ಸಂಸ್ಕೃತಿಯ ಮಹತ್ತೆಯನ್ನು ಅವರಿಗೆ ಮನವರಿಕೆಮಾಡಿಕೊಟ್ಟಿತು.

ಶ್ರೀರವೀಂದ್ರರು ತಮ್ಮ 'ಸಾರ್ವಭೌಮತ್ವ್ಯವೈಶಿಷ್ಟ್ಯದ ಕಾರಣದಿಂದ ಜಗದ್ವ್ಯಾಪ್ತ ವಿಭೂತಿಗಳೆನಿಸಿದ್ದಾರೆ. ಎಂತಲೇ ಅವರ ಜನ್ಮಶತಮಾನೋತ್ಸವವು, 'ಪೂರ್ವ-ಪಶ್ಚಿಮ ಭೂಖಂಡಗಳೆರಡರಲ್ಲಿಯೂ

ಜರುಗುತ್ತಲಿದೆ. ಭಾರತವಂತೂ ಆ ಕವಿಯ ಜನ್ಮಕ್ಷೇತ್ರ-ಕರ್ಮ-ಕ್ಷೇತ್ರ-ಆದರ್ಶಸಿದ್ಧಿಯ ಸ್ಥಾನ. ಅಥವಾನಿಕ ಭಾರತದ ಮಹರ್ಷಿಯಾತ. ಎಂದಮೇಲೆ, ಭಾರತೀಯರು ತಮ್ಮ ಋಷಿಯ ಋಣವನ್ನು ಸ್ಮರಿಸಬೇಕಾದುದು ಅವರ ಕರ್ತವ್ಯ. ಸರಕಾರವೂ ಜನತೆಯೂ ಸೇರಿ, ಭಾರತದಲ್ಲಿ ರವೀಂದ್ರ ಕವೀಂದ್ರರ ಜನ್ಮೋತ್ಸವ ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಶಿವಪೂಜೆಯಲ್ಲಿ ಎದ್ದ ಕರಡಿಗಳು !

ಈ ಸಮಾರಂಭದ ಸಂತಸದ ಸಮಯದಲ್ಲಿಯೂ, ಭಾರತದ ಸ್ವಾತಂತ್ರ್ಯ ಜೀವನದ ಮೇಲೆ ಕೊಡಲಿಯೇಟನ್ನು ಹಾಕುವಂತಹ ಹಲವು ಅನಿಷ್ಟ ಘಟನೆಗಳು— ಶ್ರೀ ರವೀಂದ್ರರು ವಿಶ್ವಧರ್ಮವನ್ನು ಸಾರಿದ ರಾಷ್ಟ್ರದಲ್ಲಿಯೇ— ಒಂದರ ಹಿಂದೊಂದರಂತೆ ಜರುಗುತ್ತಲಿವೆ. ಈ ದುರ್ವಿಧಿಯ ಕೈಚಳಕಕ್ಕಾಗಿ, ಭಾರತದ ಉತ್ಸಾಹಮೂರ್ತಿ ನಾಯಕರಾದ ಪಂಡಿತ ಜವಾಹರಲಾಲರೂ ಚೀನತ್ತು-ರೋಸಿಕೊಂಡು, ಎಂದೂ ಆಡದಂತಹ ನಿರಾಶೆಯ ಮಾತುಗಳನ್ನು ಆಡುತ್ತಲಿದ್ದಾರೆ.

ಇತಿಹಾಸಕಾಲದಲ್ಲಿ ನಮ್ಮ ಜಾತಿ, ಧರ್ಮ, ಭಾಷೆ, ದೇಶ ಇವುಗಳಿಗಾಗಿ ನಡೆಯುತ್ತಿದ್ದ ಸ್ವಯೂಥಕಲಹವೇ ಭಾರತ ರಾಷ್ಟ್ರವನ್ನು ಪಾರತಂತ್ರ್ಯಸಂಕದಲ್ಲಿ ನೂಕಿತು. ಬ್ರಿಟಿಷರು ಆ ಕಲಹಸಸಿಗಳಿಗೆ ನೀರೆರೆಯುತ್ತಲೇ ನೂರೈವತ್ತು ವರ್ಷಕಾಲ ನಮ್ಮ ಜನರ ತಲೆಯನ್ನು ತುಳಿದರು. ಬ್ರಿಟಿಷರ ರಾಜ್ಯಸೂತ್ರದ ಕಷ್ಟದ ಕಾಹಿನಿಂದ ಎಚ್ಚತ್ತ ಜನತೆ ತಮ್ಮ ಅಜ್ಞಾನವನ್ನು ಅರಿತುಕೊಂಡರು; ಸ್ವಯೂಥ ಕಲಹವನ್ನು ಬಿಟ್ಟು, ಸ್ವದೇಶಬಂಧುತ್ವದ ಅಗತ್ಯವನ್ನು ಕಂಡುಹಿಡಿದು, ಅದರಂತೆ ರಾಷ್ಟ್ರದ ಜನಶಕ್ತಿಯನ್ನು ಸಂಘಟಿಸಿದರು. ಅದರ ಬಲದಿಂದ, ಪರಕೀಯರಾದ ಬ್ರಿಟಿಷರನ್ನು ದೇಶದಿಂದ ಓಡಿಸಿ, ಸ್ವಾತಂತ್ರ್ಯ-ಸ್ವರಾಜ್ಯಗಳನ್ನು ಸಂಪಾದಿಸಿದರು

ಇಂದಿನ ಅಧಿಕಾರದುರಾಶೆಯು ದುರ್ವಿಷವು, ಮರಳಿ ಜಾತಿ, ಧರ್ಮ, ದೇಶ, ಭಾಷೆಗಳ ಹೆಸರಿನಿಂದ ಸ್ವಯೂಥ ಕಲಹಕ್ಕೆ ಪ್ರಚೋದನೆ ಕೊಡುತ್ತಲಿದೆ. ಈ ವಿಷದ ಬೇನೆ ಇಂದು, ಪಂಜಾಬ-ಅಸಾಮುಗಳಲ್ಲಿ ದುರ್ಧರ ಪರಿಣಾಮವನ್ನು ಉಂಟುಮಾಡಿದೆ. ಭಾರತದ ಪ್ರಜೆಗಳ ಸಂರಕ್ಷಣೆಗಾಗಿ ಇರುವ ಸರಕಾರದ ಪೋಲೀಸರು, ಭಾರತೀಯ ಪ್ರಜೆಗಳ ಮೇಲೆಯೆ ಸಿಡಿಗುಂಡನ್ನು ಹಾರಿಸುವಂತಹ ಅನಿಷ್ಟ ಘಟನೆಗಳು ನಡೆದಿವೆ

ರಸಿಯಾ-ಅಮೇರಿಕೆಗಳ ರಾಜಕೀಯ ಸ್ಪರ್ಧೆ ಜಗತ್ತಿನ ಮಿಕ್ಕ ಪ್ರದೇಶಗಳಿಗೆಲ್ಲ ಮಾರಕವಾಗಿ ಪರಿಣಮಿಸುತ್ತಿದ್ದಂತೆ, ಭಾರತದಲ್ಲಿಯ ಕಾಂಗ್ರೆಸ್ಸಿಗ-ಕಮ್ಯೂನಿಷ್ಟರ ಸ್ಪರ್ಧೆಯು, ಭಾರತದ ಶಾಂತಿಜೀವನಕ್ಕೆ ಮಾರಕ-ಸಂದರ್ಭಗಳನ್ನು ತಂದು ಒದಗಿಸುತ್ತಲಿದೆ. ಇಷ್ಟೇ ಅಲ್ಲ; ಅಧಿಕಾರಲೋಭದಿಂದ ತತ್ತ್ವಚ್ಯುತರಾದ ಅನೇಕ ಜನ ಕಾಂಗ್ರೆಸ್ಸಿಗರೂ ಒಳಜಗಳಗಳನ್ನು ಹೂಡಿ, ಆಳುವವರ ವಿಘಾಯಕ ಕಾರ್ಯಗಳಿಗೆಲ್ಲ ಅಡ್ಡಬರಲು ತೊಡಗಿದ್ದಾರೆ. ಬೇರೆ ಬೇರೆ ಪ್ರಾಂತ ಪ್ರದೇಶಗಳಲ್ಲಿ ನಡೆದಿರುವ ಅಸಂತುಷ್ಟಿಯ ಚಟುವಟಿಕೆಗಳನ್ನು ನೋಡಿದರೆ, ಅವುಗಳಲ್ಲಿ ಕಾಂಗ್ರೆಸ್ಸಿಗರೆನಿಸಿಕೊಳ್ಳುತ್ತಿರುವ ಕೆಲವು ಜನ ಮಹಾಶಯರೂ ಇರುವರೆಂಬುದು ದುರ್ದೈವದ ಸಂಗತಿಯಾಗಿದೆ. ರಾಷ್ಟ್ರದ ಕಲ್ಯಾಣದ ಉದ್ದೇಶವನ್ನಿರಿಸಿಕೊಂಡು, ನಿಸ್ವಾರ್ಥ ಭಾವದಿಂದ ನಿನ್ದೆ-ನೀರಡಿಕೆಗಳ ಪರವೆಯಿಲ್ಲದೆ, ಪ್ರಾಮಾಣಿಕವಾಗಿ ದುಡಿಯುತ್ತಿರುವ ನಮ್ಮ ನಾಯಕಮಣಿಗಳನ್ನು ಕಂಗೆಡಿಸುವ ಮಾತಿದು. ವ್ಯಕ್ತಿ-ವ್ಯಕ್ತಿಗಳ ಸ್ವಾರ್ಥಪೂರಿತವಾದ ಚಟುವಟಿಕೆಗಳು ಭಾರತದ ಪ್ರತಿಯೊಂದು ರಾಜ್ಯದಲ್ಲಿಯೂ ಒಂದಿಲ್ಲೊಂದು ರೀತಿಯ ಅಸಂತುಷ್ಟಿಯನ್ನು ಹೆಚ್ಚಿಸುತ್ತಲಿವೆ. ಇಂತಹ ಪ್ರಜೆಗಳಿಂದಲೇ ತುಂಬಿದ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕು ಹೇಗೆ ?

ದೇಶದ ನಾಯಕಮಣಿಯ ಮೇಲೆ ಎತ್ತಿದ ಶಸ್ತ್ರ

ನಮ್ಮ ಕಾಂಗ್ರೆಸಿನ ಅಧ್ಯಕ್ಷರಾದ ನಾನ್ಯ ಸಂಜೀವರೆಡ್ಡಿಯವರು, ಸ್ವಾಗತಸಮಾರಂಭದ ಕಾಲದಲ್ಲಿಯೇ, ತಲೆತಿರುಕ ತರುಣನೊಬ್ಬನ ಕೈಗತ್ತಿಯೇಟಿಗೆ ಗುರಿಯಾಗುತ್ತಿದ್ದರು. ಹತ್ತಿರವಿದ್ದವರ ಎಚ್ಚರಿಕೆಯ ಕಣ್ಣು ಅವರ ಬಾಳನ್ನು ಉಳುಹಿದುವು. ಇದಕ್ಕೆ ಕಾರಣವೆಂದರೆ ಸಿಲ್‌ಚಾರದಲ್ಲಿ ಬಂಗಾಲೀ ಭಾಷಾ ಚಳವಳಿಗಾರರ ಮೇಲೆ, ಅಲ್ಲಿಯ ಪೋಲೀಸರು ಎಸಗಿಸಿದ ಅತ್ಯಾಚಾರ.

ಪೊಲೀಸರು ಗುಂಡುಹಾರಿಸುವವರೆಗೆ ಪ್ರಸಂಗ ಬರಬೇಕಾದರೆ, ಆ ಭಾಷಾ ಚಳವಳಿಗಾರರ ಉಗ್ರಪ್ರತಿರೋಧವೂ ಅಂತಹ ಪ್ರಸಂಗಕ್ಕೆ ಕಾರಣವಾಗಿರಬಹುದು. ಆದರೆ ಸಾವು ಎಂಬುದು, ಮನುಷ್ಯನನ್ನು ಸದಸದ್ವಿವೇಕಬುದ್ಧಿಯಿಂದ ದೂರಕ್ಕೊಯ್ಯದು, ಅವನನ್ನು ಭಾವನೆಯು ವಶಕ್ಕೆ ಒಪ್ಪಿಸಿಬಿಡುತ್ತದೆ. ಆದ ಅನ್ಯಾಯದ ವಿಚಾರಣೆಯನ್ನು ನಡೆಯಿಸುವುದಕ್ಕೆ, ತಮ್ಮದೇ ಆದ ಸರಕಾರವಿರುವಾಗ, ವ್ಯಕ್ತಿಗಳು ಆದರ ಪ್ರತಿಕಾರಕಾರ್ಯವನ್ನು ತಾವೆ ಕೈಕೊಳ್ಳುವುದು, ವಿವೇಕಿಯಾದ ಮನಸ್ಸಿಗೆ ವಿಹಿತವೆನಿಸೀತೆ ? ಆದಕ್ಕಾಗಿ ಸೇಡನ್ನು ತೀರಿಸಲೆಂದು, ನಿಷ್ಠಾಪಿಯಾದ ಪ್ರಜಾನಾಯಕನ ಮೇಲೆ, ಪಾಮರನೊಬ್ಬನ ಅಭಿಯೋಗವೇ ? ದ್ವೇಷ-ಮತ್ಸರಗಳು ಆ ವಿಧ್ವಂಸಕ ತರುಣನ ಕಾರ್ಯವನ್ನು ಎತ್ತಿಹಿಡಿಯುತ್ತಿರಬಹುದು; ಆದರೆ ರಾಷ್ಟ್ರದ ಶುಭಭವಿಷ್ಯವನ್ನು ಕುರಿತು ವಿಚಾರಮಾಡುವ ನಿಧಾಯಕವೃತ್ತಿಯವರು, ಆ ತರುಣ ಕಿಡಿಗೇಡಿತನವನ್ನು ಎಂದೂ ಪುರಸ್ಕರಿಸಲಾರರು.

ಎಲ್ಲ ರೀತಿಯಿಂದಲೂ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವ ಭಾರತೀಯರು, ಇಂತಹ ಆಂತರಿಕ ಕಲಹಗಳಿಂದ ರಾಷ್ಟ್ರದ ಶಕ್ತಿಪಾತವನ್ನು ಮಾಡಿದರೆ, ಭಾರತಕ್ಕೆ ಅಂಧಕಾರ ಮುಸುಕುವುದರಲ್ಲಿ ಸಂದೇಹವೇ ಇಲ್ಲ.

"ಕ್ಷಮಾ"

[ಒಂದು ಸಣ್ಣಕಥೆ]

ಬರೆದವರು: 'ಸುಜಯ' ಸೀನಿಯರ್ ಎಂ. ಎ. ಧಾರವಾಡ.

ಮನುಷ್ಯನ ಮನಸ್ಸಿನ ರೀತಿ ವಿಕ್ಷಿಪ್ತವಾದುದು. ಇಂದು ಅತ್ಯಂತ ಪ್ರೀತಿಯಿಂದ ಕಂಡವರನ್ನು, ಒಂದು ದಿನ ಅತ್ಯಂತ ದ್ವೇಷದಿಂದ ಕಾಣಬಹುದು! ಈ ಪ್ರೀತಿ-ದ್ವೇಷಗಳ ಸ್ಥಾನಪಲ್ಲಟವು, ಕೌಟುಂಬಿಕ ಇಲ್ಲವೆ ಸಾಮಾಜಿಕಜೀವನದಲ್ಲಿ ಒಂದು ರೌದ್ರಕ್ರಾಂತಿಯನ್ನೇ ಎಬ್ಬಿಸುವುದು!

ಕ್ಷಮಾ, ನಿನಗೆ ಒಂದಲ್ಲ, ಹತ್ತಲ್ಲ, ನೂರಲ್ಲ, ಸಾವಿರಾರು ಸಾರಿ ಹೇಳಿದ್ದೇನೆ. ನೀನು ಹೆದ್ದು ಮೀರಿಬಿಟ್ಟಿ. ತುಟಿ ಮೀರಿದ ಹಲ್ಲಿನಂತಾದೆ. ನೀನೇನಾದರೂ ನಾಳೆ ಮನೆಬಿಟ್ಟು ಆಚೆಗೆ ಕಾಲಿಟ್ಟರೆ-ಖಂಡಿತ ಹೊಸ್ತಿಲು ತುಳಸೋಲ್ಲ ಮತ್ತೆ! ಇದು ಖಂಡಿತ. ಖಂಡಿತಾ-ಖಂಡಿತ!" ಎಂದ ನರಸಿಂಹ. ನಿಜವಾಗಿಯೂ ಅವನು ಉಗ್ರನಾರಸಿಂಹನೇ ಆಗಿದ್ದ. ಕ್ಷಮಾಳಿಗೆ ಇಂತಹ ಕಟು ಅನುಭವಗಳೇನೂ ಹೊಸವಲ್ಲ. ಒಂದೂವರೆ ವರ್ಷದಿಂದ ಅವಳ ಹೊಟ್ಟೆ ತುಂಬುತ್ತಿದ್ದುದೇ ಇಂತಹವುಗಳಿಂದ.

'ಅಮ್ಮಾ' ಎಂದು ಒತ್ತಿ ಬಂದ ದುಃಖದ ಆವೇಶದಲ್ಲಿಯೆ ತನ್ನ ರೂಮಿನ ಕದಗಳನ್ನೊತ್ತಿ ಒಳಬಂದಳು ಕ್ಷಮಾ. ಎದುರಿಗೆ ಗೋಡೆಯ ಮೇಲೆ ತಾನು ನಿತ್ಯವೂ ಪೂಜಿಸುತ್ತಿದ್ದ 'ಅಪ್ಪ-ಅಮ್ಮನ' ಪಟಗಳೂ ಕೂಡ ಅತೀವ ವೇದನೆಯನ್ನು ಅನುಭವಿಸುತ್ತಿದ್ದಂತೆ ಕಾಣಿಸಿದುವು. ಆ ಪಟಗಳೇ ಕ್ಷಮಾಳ ಸರ್ವಸ್ವ. ರೂಮಿನ ಕದವಿಕ್ಕಿ ಬಂದು, ಆ ಪಟಗಳನ್ನೇ ದಿಟ್ಟಿಸುತ್ತಾ ಕುಳಿತಳು ತನ್ನ ಹಾಸಿಗೆಯ ಮೇಲೆ. ದುಃಖದ ಆವೇಗ ಅತಿಯಾಯಿತು.—"ಏನಮ್ಮಾ, ನೀನೇ ಹೇಳಮ್ಮಾ! ಯಾಕಮ್ಮಾ ಅಣ್ಣ ನನ್ನ ಮೇಲೆ ಹೀಗೆ ಉರಿದು ಬೀಳಬೇಕು? ಹೇಗಿದ್ದವನು ಹೇಗಾದನಮ್ಮಾ—

ಏಕಮ್ಮಾ ನಿನಗೇ ತಿಳಿಯದೇ? ನಾನಿನ್ನೂ ಆಗ ಪುಟ್ಟಹುಡುಗಿ. 'ಕುದುರೆ ಆಟವಾಡಿಸುತ್ತೇನೆ' ಎಂದು ಅಣ್ಣ, ನನ್ನನ್ನು ಬೆನ್ನ ಮೇಲೆ ಕೂರಿಸಿಕೊಂಡು, ತಾನು ಕೈಯೂರಿಕೊಂಡು ಕುದುರೆಯಂತೆ ಮನೆಯಲ್ಲೆಲ್ಲಾ ಓಡಾಡುತ್ತಿರಲಿಲ್ಲವೆ? ನಾನು ಅಣ್ಣನ ತಲೆಗೂದಲನ್ನು ಹಿಡಿದು 'ಹೆ-ಹೇ ಕುದುರೇ ನಡೆ! ಜೋರಾಗಿ ನಡೆ!' ಎಂದು ಅವನ ಕೂದಲು ಕಿತ್ತುಬರುವ ಹಾಗೆ ಎಳೆದಾಗ, ಸಿಟ್ಟು ಬಂದು ಅಣ್ಣ ನನ್ನನ್ನು ಕೆಳಕ್ಕೆ ಎತ್ತಿಹಾಕಲಿಲ್ಲವೆ? ನನಗೆ ಪೆಟ್ಟು ಬಿದ್ದು ಹಣೆ ಬುರ್ ಎಂದು ಊದಿಕೊಳ್ಳಲಿಲ್ಲವೆ? ಆಗ ನೀನು ಬಂದು ಅವನನ್ನು ಬೈದಾಗ ಅವನ ಮುಖ ಹೇಗಾಗಿತ್ತಮ್ಮಾ! ಹೋಗಲಿ, ಎಷ್ಟು ಬಾರಿ ನಾನು ನನ್ನ ಪುಟ್ಟ ಪುಟ್ಟ ಕೈಗಳಿಂದ ಅಣ್ಣನ ಕೆನ್ನೆಗೆ ಹೊಡೆದಿಲ್ಲ- ಅವನ ಕೆಂಪಾದ ಮುಖವನ್ನು ಕಂಡು ಕಿಲಕಿಲನೆ ನಕ್ಕಿಲ್ಲ! ನಾನು ನಕ್ಕುದನ್ನು ಕಂಡು 'ಹಾ ತುಂಟೆ' ಎಂದು ನನ್ನನ್ನಪ್ಪಿ, ಅದೆಷ್ಟು ಅವನು ಮುದ್ದಿಸಿಲ್ಲ! ಅದೆಷ್ಟು ಮುದ್ದುಕೊಟ್ಟಿಲ್ಲ!

ಅಣ್ಣನದು B. A. ಪಾಸಾದಾಗ! ಆಗ ನಾನಿನ್ನೂ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ಅಣ್ಣ ಕಂಪೌಂಡಿನಾಚೆಯಿಂದಲೇ:—

"ಕ್ಷಮಾ" ಎಂದು ಹರ್ಷೋದ್ವೇಗದಿಂದ ಕೂಗಿದ.

"ಅಣ್ಣಾ" ಎಂದು ನಾನೂ ಓಡಿ ಅವನನ್ನಪ್ಪಬೇಕೆಂದು ಧಾವಿಸಿದೆ. ಕಂಪೌಂಡಿನ ಒಳಗೆ ಕಲ್ಲೆಡಹಿ ಬಿದ್ದುಬಿಟ್ಟೆ. ಅದೇ ನೋವಿನಲ್ಲಿ ನನಗೆ ೨-೩ ದಿನ ವೈಯೂ ಬೆಚ್ಚಗಾಯ್ತು. ಅಣ್ಣ ಅನ್ನ-ನೀರು ಬಿಟ್ಟು ನನ್ನ ಹಾಸಿಗೆಯ ಬಳಿಯೇ ಕುಳಿತಿರಲಿಲ್ಲವೆ?

'ಕ್ಷಮಾ, ಕ್ಷಮಾ, ಈಗ ಹೇಗಿದೆ?'

'ನಿನ್ನೆಗಿನ್ನಷ್ಟು ಇಂದು ಸ್ವಲ್ಪ ಉತ್ತಮವಲ್ಲವೆ?'

'ನೋಡು ಕ್ಷಮಾ, ಇದೊಂದೆ ಒಂದು ಗುಟುಕು ಔಷಧಿ!'

'ಇದೊಂದೆ ಒಂದು ತೊಳೆ ಕಿತ್ತಳೆ ಹಣ್ಣು'

'ನಿನಗೆ ಬೇಗ ಗುಣವಾಗಲಿ. ಚೆನ್ನಾಗಿರುವ ಸಿನೆಮಾ ಬಂದಿದೆ. ಕರೆದುಕೊಂಡು ಹೋಗುತ್ತೇನೆ!' ಎಂದು ಎಷ್ಟು ತಳ್ಳಂಕಗೊಂಡಿಲ್ಲ!

'ಥೂ! ಎಷ್ಟು ಹೆಂಗರುಳೋ, ನಿನ್ನದು ನರಸಿಂಹಾ! ಅವಳಿಗೇನಾಗಿದೆ ಸುಮ್ಮನಿರೋ; ಬಾರೋ ಒಂದು ಶುತ್ತು ಅನ್ನತಿಂದು ಎಲ್ಲಿಯಾದರೂ ಹೋಗಿ ಸ್ವಲ್ಪ ತಿರುಗಾಡಿಕೊಂಡು ಬಾರೊ!' ಎಂದು ಅಪ್ಪ ಎಷ್ಟು ಬಾರಿ ಹೇಳಲಿಲ್ಲ ಅಣ್ಣನಿಗೆ!

ಅತ್ತಿಗೆ! ಮಂಜುಳಾ ಮನೆಗೆ ಬಂದ ಮೇಲೂ, ಅಣ್ಣ ನನ್ನ ಬೆನ್ನಹಿಂದೆಯೇ ನನ್ನ ಜಡೆ ಹಿಡಿದೇ 'ಕ್ಷಮಾ-ಕ್ಷಮಾ? ಎಂದು ಓಡಾಡುತ್ತಿರಲಿಲ್ಲವೆ? ಅವನ್ನು ಕಂಡು ಅಪ್ಪ,:

'ನರಸಿಂಹಾ, ನೀನೂ ಒಂದು ಸೀರೆ ಉಟ್ಟುಕೊಂಡು ಅವಳ ಜೊತೆಯಲ್ಲೆ ಕಾಲೇಜಿಗೂ ಹೋಗೋ' ಎಂದು ನಗೆಯಾಡಿದಾಗ, ಅತ್ತಿಗೆಯೂ ನಗೆಯಾಡಲಿಲ್ಲವೆ?

ಅಣ್ಣ ಕೆಲಸಕ್ಕೆ ಸೇರಿದ ಮೇಲೆ!

'ನೋಡು ಕ್ಷಮಾ, ನಿನ್ನ ಕಾಲೇಜ್ ಗೆಳತಿಯರೆಲ್ಲಾ ನಿನ್ನ ಮುತ್ತಿ 'ಇದನ್ನೆಲ್ಲಿ ಕೊಂಡುಕೊಂಡೆ? ಇದಕ್ಕೆಷ್ಟು ಕೊಟ್ಟೆ? ಇಂತಹದು ಇನ್ನೂ ಉಂಟೆ?'—ಎಂದು ಕೇಳುತ್ತಿರಬೇಕು. ನಿಮ್ಮ ಕಾಲೇಜ್ ಡೇ ನಾಟಕದಲ್ಲಿ ಇದನ್ನೇ ನೀನು ಉಟ್ಟುಕೊಳ್ಳಬೇಕು?' ಎಂದು ಮೊದಲ ತಿಂಗಳ ಸಂಬಳ ನೂರೈವತ್ತು ರೂಪಾಯಿಗಳನ್ನೂ ಒಂದೇ ಸೀರೆಗೆ ತೆರಲಿಲ್ಲವೆ? ಏಕಮ್ಮಾ, ಆಗ ನೀನೇ ಅಣ್ಣನನ್ನು 'ಏನೋ ನರಸಿಂಹಾ, ಹೊಟ್ಟೆಯಲ್ಲಿ ಹೊತ್ತು, ಹೆತ್ತು ಸಾಕಿ ಸಲಹಿದವಳಿಗಿಂತಲೂ ಬೆನ್ನಲ್ಲಿ ಬಿದ್ದವಳೇ ನಿನಗೆ ಹೆಚ್ಚಾದಳೇನೋ' ಎಂದು ನಗೆಯಾಡಲಿಲ್ಲವೆ?

'ನರಸಿಂಹಾ, ಕ್ಷಮಾ ಹೇಗೂ ಇಂಟರ್ ಮುಗಿಸಿದಳು. ಅವಳನ್ನು ಕಾಲೇಜಿಗೆ ಹೋಗುವುದು ಬೇಡ. ವಯಸ್ಸೂ ಆಗಿದೆ, ಒಂದು ಹುಲ್ಲಿರುವ ಗೋಂದಿಗೆಗೆ ಕಟ್ಟಿ, ಅಕೆ ಸುಖವಾಗಿರೋದನ್ನು ನೋಡಿ ಕಾಲ ಕಳೆಯೋಣಪ್ಪಾ!' ಎಂದ ನಿನ್ನನ್ನೇ ಅಣ್ಣ, ಧಿಕ್ಕರಿಸಿ ಮಾತನಾಡಲಿಲ್ಲವೇ ಅಪ್ಪಾ! "B. A. ಮುಗಿಯುವವರೆಗೂ ಅವಳ ಮದುವೆಯ ವಿಷಯ ಎತ್ತಿದರೆ ನಾನು ಮನೆಬಿಟ್ಟು ಹೋಗ್ತೇನೆ. ಇನ್ನೂ ಆಡಿಕೊಂಡಿರೋ ಹುಡುಗಿಗೆ ಮದುವೆನೂಡಿ ಬಿಡ್ತಾರಂತೆ ಮದುವೇನ!" ಎಂದು ನಿನಗೂ ಬೆದರಿಕೆ ಹಾಕಲಿಲ್ಲವೇನಮ್ಮಾ.

ಆದರೆ?

ನಾನು B. A. ಗೆ ಕಾಲಿಟ್ಟೆ. ನೀವಿಬ್ಬರೂ ಲೈಲ್ಸ್ ದುರಂತಕ್ಕೀಡಾಗಿ ಸ್ವರ್ಗಕ್ಕೆ ಕಾಲಿಟ್ಟರಿ. ನಮ್ಮಿಬ್ಬರನ್ನೂ ಅನಾಥರನ್ನಾಗಿ ಮಾಡಿದಿರಿ. ಓ ಎಂದು ಒಂದೇ ಸಮನೆ ಒರಲುತ್ತಿದ್ದ ನನ್ನನ್ನು ಅಣ್ಣ, "ಕ್ಷಮಾ, ನೀನು ಸುಮ್ಮನಿರು ಕ್ಷಮಾ. ನೀನು ಹೀಗೆ ಅಳುತ್ತಾ ಕೂತರೆ ನನ್ನ ಹೃದಯ ಕಿತ್ತುಬರುತ್ತದೆ. ನೀನೇನಾದರೂ ಇನ್ನು ಅತ್ತರೆ ನಾನು ಮನೆಬಿಟ್ಟು ಎಲ್ಲಿಗಾದರೂ ಓಡಿಹೋಗುತ್ತೇನೆ. ನಿನ್ನ ಅಳುಮೋರೆಯನ್ನು ನೋಡಲಾರೆ! ನೀನು ಯಾವಾಗೂ ನಗುನಗುತ್ತಾ ಇರಬೇಕು. ನನ್ನ ಒಡಲಲ್ಲಿ ಉಸಿರಿರುವ ವರೆಗೂ ನೀನು ಮಾತ್ರ ನಗುನಗತ್ತಲೇ ಇರಬೇಕು." ಎಂದು ಅಣ್ಣ ಕಣ್ಣೀರಕೋಡಿ ಹರಿಸಲಿಲ್ಲವೆ?

ಅಣ್ಣನೇನೋ ಹಾಗೆಯೆ ಇದ್ದನಮ್ಮಾ! ಆದರೆ? ನನ್ನ ದುರದೃಷ್ಟ. ಆ ವಿಧಿಗೂ ನಮ್ಮನ್ನು ಕಂಡು ಹೊಟ್ಟೆಕಿಚ್ಚು! ನನ್ನ ಜೀವನದ ಗತಿಯೇ ನಿಧಾನವಾಗಿ ಬದಲಾಗಲಾರಂಭಿಸಿತು. ದಿನಕ್ಕೆ ಸಾವಿರಾರು ಬಾರಿ 'ಕ್ಷಮಾ ಕ್ಷಮಾ' ಎನ್ನುತ್ತಿದ್ದ ಅಣ್ಣ, ದಿನಗಳೆದಂತೆ ಐನೂರಕ್ಕೆ ಇಳಿದ, ನೂರಕ್ಕೆ ಇಳಿದ; ಐದಕ್ಕೆ ಇಳಿದ, ಒಂದಕ್ಕೆ ಇಳಿದ; ಇಂದು ಅದೂ ಇಲ್ಲ. ಆಗ ಒಂದು ದಿನ ಕಾಲೇಜಿಗೆ ತಪ್ಪಿಸಿಕೊಂಡರೆ, ಅನ್ನ ನೀರು ಬಿಟ್ಟು ಆಗ್ರಹ ಮಾಡುತ್ತಿದ್ದ ಅಣ್ಣ ಈಗ ಅನ್ನ-ನೀರು ಹಾಕದೆ ನನ್ನನ್ನು ಕಾಲೇಜಿಗೆ ತಪ್ಪಿಸುತ್ತಿದ್ದಾನೆ! ನನ್ನ ಪ್ರೋಗ್ರೆಸ್ ಬಗ್ಗೆ ತಾನೇ ನಮ್ಮ ಮಹಿಳಾ ಕಾಲೇಜಿಗೆ ಹೋಗಿ ವಿಚಾರಿಸಿಕೊಂಡು ಬರುತ್ತಿದ್ದ ಅಣ್ಣ ಅತ್ತ ಕಾಲಿಡದಾದ. ಪ್ರತಿತಿಂಗಳ ಟ್ಯೂಷನ್ ಫೀಯನ್ನು ಕೇಳದೆಯೆ ಕೊಡುತ್ತಿದ್ದವನು, ಈಗ ಅದೆಷ್ಟು ರಂಪ ಮಾಡುತ್ತಾನೆ! ನನ್ನ ಬಟ್ಟೆಗಳು ಹೊಲಸಾಗಿದ್ದರೆ ಅದೆಷ್ಟು ಹಾರಾಡುತ್ತಿದ್ದನಮ್ಮಾ! ಆದರೆ ಈಗ? ಉಟ್ಟುಕೊಳ್ಳಲು ಒಂದು ಹೊಲಸು ಸೀರೆಯಿಲ್ಲದಿದ್ದರೂ, ಅದನ್ನೂ ಕಂಡರೂ, ಒಂದು ಸೀರೆ ತಂದುಕೊಡಬೇಕಾದರೆ ಅದೆಷ್ಟು ಹಿಂಸೆಯೋ ಅತನಿಗೆ!

ಹೌದಮ್ಮಾ, ಹೌದು!

ಅಕ್ಕರೆಯ ಅತ್ತಿಗೆಯೇ ಅಣ್ಣನ ಕೆವಿ ಹಿಂಡಿದಳು. ನೀವು ನಮ್ಮನ್ನಗಲಿದ ಹೊಸತು, ಒಂದು ದಿನ ಕಾಲೇಜಿನಲ್ಲಿ ನಿನ್ನಿಬ್ಬರ ಜ್ಞಾಪಕ ಬಂತು. ಬರುವಾಗ ದಾರಿಯಲ್ಲಿ ಪಾರ್ಕಿನಲ್ಲಿ ಕುಳಿತು, ಸೂರ್ಯ ಮುಳುಗುವವರೆಗೂ ಅತ್ತೆ. ಮನೆಗೆ ಬರುವುದು ಸ್ವಲ್ಪ ತಡವಾಯ್ತು. ಬಾಗಿಲಿಗೆ ಬರುತ್ತಿದ್ದ ಹಾಗೆಯೆ ಅತ್ತಿಗೆಯ ಆರ್ಭಟ ಅಡಿಗೆಮನೆಯಲ್ಲಿ ಹೆದ್ದು ನೀರಿದ್ದುದು ಕೇಳಿಸಿತು. ಪದ್ದುಮೂಡಿ ನನ್ನ ರೂಮನ್ನು ಸೇರಿದೆ. ಅಣ್ಣ-ಅತ್ತಿಗೆಯರ ಮಾತುಗಳು ಸ್ಪಷ್ಟವಾಗಿಯೇ ಕೇಳುತ್ತಿದ್ದುವು. "ವಯಸ್ಸಿಗೆ ಬಂದ ಹುಡುಗಿಯನ್ನು ಇನ್ನೂ ಎಳೆಯ ಮಗುವಿನಂತೆ ಬೆನ್ನಿಗೆ ಕಟ್ಟಿಕೊಂಡು ಮೆರೆಸುತ್ತಾರೆ. ಮಾತೆತ್ತಿದರೆ ಸಾಕು. 'ನನ್ನ ಕ್ಷಮಾ, ನನ್ನ ಕ್ಷಮಾ!'.... ಕೈಹಿಡಿದ ಹೆಂಡತಿ ಎಂದರೆ ಕಸದ ಸಮಾನ. ಹೊಟ್ಟೆಯಲ್ಲಿ ಹುಟ್ಟಿದ ಮಗನೆಂದರೆ ಸವತಿಯ ಮಗನ ಹಾಗೆ!" ಅತ್ತಿಗೆ ಅಣ್ಣನನ್ನು ಆಕ್ಷೇಪಿಸಿದಳು.

"ಹೌದು ಕಣೇ, ಎಲ್ಲಾ ಕ್ಷಮಾನ ಸೌಭಾಗ್ಯ! ಮನೆಗೆ ಮಹಾಲಕ್ಷ್ಮಿ ಅವಳು. ಅಪ್ಪ ಹೇಳ್ತಿದ್ದು— 'ಕ್ಷಮಾ ಹುಟ್ಟಿದ್ದು ಅಮೃತಘಳಿಗೆಗೆ. ಪತ್ತು ವರ್ಷದಿಂದ ಬಗೆಹರಿಯದೆ ಉಳಿದಿದ್ದ ಹೊಲದ ಕೇಸು, ಇವಳು ಹುಟ್ಟಿದ ವರ್ಷ ನಮ್ಮಂತೆ ಆಯಿತು!' ಎಂದು ಅಭಿಮಾನದಿಂದ ಹೇಳಿಕೊಂಡ ಅಣ್ಣ.

'ಹೌದು! ಎಲ್ಲ ಅವಳ ಸೌಭಾಗ್ಯವೆ!'

'ಹೌದು, ಹೌದು. ನನ್ನದು ಬಿ. ಎ. ಪಾಸಾದದ್ದು, ನನಗೆ ಕೆಲಸ ಸಿಕ್ಕಿದ್ದು, ಹತ್ತು ಜನಗಳಲ್ಲಿ ಒಳ್ಳೆಯ ಹೆಸರು ಬಂದಿರುವುದು ಎಲ್ಲ, ಅವಳ ಅಕ್ಕರೆಯ ಹೃದಯದ ಆಕಾಂಕ್ಷೆಯ ಫಲ!' 'ಹೌದು, ಅದಕ್ಕೆ ನಿಮ್ಮ ತಂದೆ-ತಾಯಿ ಅಕಾಲಮೃತ್ಯುವಿಗೆ ತುತ್ತಾದುದು— ನನ್ನ ಪೈ ಇಳಿದದ್ದು— ಎಲ್ಲ ಆ ಮಹಾಲಕ್ಷ್ಮಿಯ ಕರಾಮ್ಷ!"

ಇದನ್ನು ಕೇಳಿ ನಿಜವಾಗಿಯೂ ಹೃದಯವೇ ಬಾಯಿಗೆ ಬಂದಂತಾಯಿತಮ್ಮ.

'ಲೇ, ಅವಳ ಬಗ್ಗೆ ಚಕಾರ ಶಬ್ದ ಎತ್ತುವ ಅಧಿಕಾರ ನಿನಗಿಲ್ಲ. ಹಾಗೇನಾದರೂ ಮಾಡಿದರೆ, ನಾನೂ, ನನ್ನ ಕ್ಷಮಾ, ನನ್ನ ಪುಟ್ಟ ಸೇರಿ, ನಿನ್ನನ್ನು ತವರಿಗೆ ಕಳುಹಿಬಿಡುತ್ತೇವೆ. ಹುಷಾರ್'

'ವಯಸ್ಸಿಗೆ ಬಂದಿರುವ ಹುಡುಗಿಗೆ ಒಂದು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸೋದು ಬಿಟ್ಟು, ಇನ್ನೂ ಓದಿಸುತ್ತಾರಂತೆ ಕಾಲೇಜಿಗೆ ಹೋಗಿ ಅವೇನು ಒಂದು ವಿದ್ಯೆ ಕಲಿತುಕೊಂಡು ಬರುತ್ತವೆಯೆ?'

'ನನ್ನ ತಂಗಿಯ ಬಗ್ಗೆ ನನಗೆ ನಂಬಿಕೆ ಉಂಟು. ನಾನು ಅಂದ್ರೆ ಸಾಕು ಪ್ರಾಣ ಬಿಡ್ತಾಳೆ. ನನ್ನ ಮರ್ಯಾದೆ ಕಾಪಾಡೋ ಚೈತನ್ಯ

ಬುದ್ಧಿ ಅವಳಿಗಿದೆ. ನೀನೂ-ನಾನೂ ಅವಳಿಗೆ ಬುದ್ಧಿ ಹೇಳಬೇಕಾದ್ದು ಅನವಶ್ಯ.'

'ಯಾರು ಬೇಡಾಂದ್ರೂ, ಬೆನ್ನಿಗೆ ಕಟ್ಟಕೊಂಡೇ ಓಡಾಡಿ! ಮನೆಯಲ್ಲಿ ನೀವೇ ಇರಿ. ನಾನು ನನ್ನ ತವರಿಗೆ ಹೋಗ್ತೀನೆ.'

'ತೊಲಗಿ ಹೋಗು. ಅಪ್ಪನಿಗೆ ಹೇಳಿದೆ: ಈ ಚಂಡಿಗೆ ನಾನು ತಾಳಿ ಕಟ್ಟೋಲ್ಲ—ಎಂದು. ಅಮ್ಮನೂ ಬೇಡಾಂದು. ಆದರೆ ಕ್ಷಸೂ! ಅವಳಿಂದ ಅಲ್ಲಸೇನೇ ನೀನು ಇಲ್ಲಿ ಕಾಲಿಟ್ಟದ್ದು?' ಹೆಂಗುಸರು ಅಂದರೆ ಏನಣ್ಣಾ, ಮಯಣ ಇದ್ದ ಹಾಗೆ. ಗಂಡುಸು ಹೇಗೆ ಬೇಕಾದರೂ, ಅವರನ್ನು ತಿದ್ದಿಕೊಳ್ಳಬಹುದು. ಮುಂಜುಳಾನ್ನೇ ನೀನು ಮದುವೆಯಾಗಬೇಕಣ್ಣಾ!' ಎಂದು ಹಟ ಹಿಡಿದದ್ದಕ್ಕೆ ನೀನು ನನಗೆ ಗಂಟುಬಿದ್ದೆ. ಸದ್ಯ ನೀನು ತೊಲಗಿದರೆ ಒಂದು ಪೀಡೆ ಕಳೆಯಿತು. ಹಾಳಾಗಿ ಹೋಗು. ಹೂಂ, ತೊಲಗು ಚಂಡಿ!'

ಎಂದು ಅಣ್ಣ ಅತ್ತಿಗೆಯ ಕೂದಲು ಹಿಡಿದು ಅಡಿಗೆಯ ಮನೆಯಿಂದ ಎಳೆದುಕೊಂಡು ನನ್ನ ರೂಮಿನ ಬಾಗಿಲ ಬಳಿ ಬಂದ. ನಾನೂ ಬಾಗಿಲಿಗೆ ಬಂದೆ. ಅಣ್ಣ ನನ್ನ ಮುಖ ನೋಡಿ ಅತ್ತಿಗೆಯನ್ನು ಬಿಟ್ಟ. ಅವನ ಕಣ್ಣಿಂದ ಎರಡು ಹನಿ ನೀರು ತೊಟ್ಟಿಕ್ಕಿತು. ಅಲ್ಲಿ ನಿಲ್ಲದೆ ಆಚೆಗೆ ಹೋದ. ಅತ್ತಿಗೆ ಒಳಕ್ಕೆ ಹೋದಳು.

ಅಂದು ರಾತ್ರಿ ಮನೆಯಲ್ಲಿ ಶ್ಮಶಾನಗಂಭೀರ! ರಾತ್ರಿ ಎಂಟು ಗಂಟೆಯಾದರೂ ಅಣ್ಣ ಬಂದಿರಲಿಲ್ಲ. ಅತ್ತಿಗೆ ಅಡುಗೆಮನೆಯನ್ನು ಬಿಟ್ಟಿರಲಿಲ್ಲ. ಪುಟ್ಟ ರಾಮು ಎದ್ದು ಓ ಎಂದು ಒಂದೇ ಸವನೆ ಅಳಲಾರಂಭಿಸಿದ. ನಾನು ಧಾವಿಸಿ ಬಂದೆ. ಒಳಗಿನಿಂದ ಅತ್ತಿಗೆಯೂ ಓಡಿ ಬಂದಳು. ತೊಟ್ಟಿಲಲ್ಲಿದ್ದ ಅವನನ್ನು ಎತ್ತಿಕೊಳ್ಳಲು ನಾನು ಕೈಚಾಚಿದೆ.

" ಚಾಂಡಾಲಿ, ಬಿಡು, ನನ್ನ ಮಗುವನ್ನು ಮುಟ್ಟಬೇಡ! ಗಂಡ-ಹೆಂಡತಿಯರಿಗೆ ತಂದುಹಾಕಿದೆ .... ನೀನೇನು ಸುಖವಾಗಿ ಬಾಳಿಯಾ, ಅವರ ಹಾಲಿನಂತಹ ಮನಸ್ಸಿಗೂ ಹುಳಿ ಹಿಂಡಿದೆ, ಹಾಳುರಂಡೆ!" ಎಂದಳು ಅತ್ತಿಗೆ. ಅಷ್ಟರಲ್ಲಿ ಬಾಗಿಲಿಗೆ ಬಂದ ಅಣ್ಣ ಕೊನೆಯ ಮಾತನ್ನು ಕೇಳಿದವನೆ, 'ಯಾರನ್ನೇ ಹಾಳು ರಂಡೆ ಎಂದದ್ದು?' ಎಂದು ಅತ್ತಿಗೆಯ ಮೇಲೆ ಕೈ ಎತ್ತಿದ. ಕಂಕುಳಲ್ಲಿದ್ದ ಮಗುವಿಗೆ ಏಟು ಬಿದ್ದೀತು—ಎಂದು, ನಾನು ಅಡ್ಡ ಬಂದೆ. ಕಪಾಳಕ್ಕೆ ಏಟುಬಿತ್ತು. ಅಣ್ಣನ ಆ ಬಲವಾದ ಏಟೂ ನನಗೆ ಹಿತವಾಗಿಯೇ ಇತ್ತಮ್ಮಾ! ಸದ್ಯ ಮಗು-ಅತ್ತಿಗೆ ಪಾರಾದರಲ್ಲಾ—ಎಂದು ತೃಪ್ತಿಯ ನಿಟ್ಟುಸಿರನ್ನು ಬಿಟ್ಟೆ. ಅತ್ತಿಗೆ ಒಳಕ್ಕೆ ಹೋದಳು. ನಾನು ನನ್ನ ರೂಮಿನ ಕಡೆ ಹೊರಟೆ. ಅಣ್ಣ ನನ್ನನ್ನೇ ಹಿಂಬಾಲಿಸಿದ. ಅವನ ಕಣ್ಣುಗಳಲ್ಲಿ ನೀರು ತುಂಬಿತ್ತು. ಒತ್ತಿ ಬಂದಿದ್ದ ದುಃಖವನ್ನು ತಡೆಯಲಾರದೆ ಅಣ್ಣನೇ—

" ಕ್ಷಮಾ, ನೀನು ಕಟ್ಟಿದ ಮಾಯೆ ನಿನ್ನನ್ನೇ ಹೇಗೆ ಕಾಡುತ್ತಿದೆ ನೋಡಿದೆಯಾ " ಎಂದ.

ಆ ದುಃಖದಲ್ಲೆ ಸ್ವಲ್ಪ ಸಮಾಧಾನ ತಂದುಕೊಂಡು 'ನಿನಗೆ ವಯಸ್ಸು ಬಂದರೂ ಬುದ್ಧಿ ಬರಲಿಲ್ಲ. ಅಲ್ಲಣ್ಣಾ ಸುಮ್ಮನೆ, ಕ್ಷಮಾ-ಕ್ಷಮಾ ಎಂದು ಒದ್ದಾಡುತ್ತಿ! ನಿನ್ನ ಹೆಂಡ್ತಿ, ನಿನ್ನ ಮಕ್ಕಳು, ನಿನಗೆ ಏನೂ ಅಲ್ಲವೆ? ನಾನೆಷ್ಟು ದಿವಸ ನಿನ್ನ ಮನೆಯಲ್ಲಿರುತ್ತೇನಣ್ಣಾ ಎನ್ನಬೇಕಾದರೆ ನನಗೆ ಸಾಕಾಗಿ ಹೋಯಿತಮ್ಮಾ!

ಅಣ್ಣ ಎಡೂ ಹನಿ ಕಣ್ಣೀರು ಹಾಕಿದ. ನನ್ನ ಮೇಲಿನ ಅಕ್ಕ-' ರೆಯ ಕೊನೆಯ ಬಿಂದುಗಳನ್ಮಾ ಅವು. ನೆನ್ನ ಜನ್ಮದಲ್ಲಿಯ ಸುಖದ ಕೊನೆಯ ದಿನವಮ್ಮಾ ಅದು. ಅಷ್ಟಕ್ಕೆ ತೀರಿತು ನನ್ನ ಪೂರ್ವಾರ್ಜಿತ ಪುಣ್ಯ. ಅಂದಿನಿಂದ ನೋಡಮ್ಮಾ, ಅಣ್ಣನಿಂದ ದೂರನಿರಲು ನಾನೇ ಪ್ರಯತ್ನಿಸಿದೆ. ಪ್ರಸಂಗ ಬಿದ್ದಾಗ ಒಂದೇ ಮಾತಿನಲ್ಲಿ ನನ್ನ ವ್ಯವಹಾರವನ್ನೆಲ್ಲಾ ಮುಗಿಸಿಕೊಳ್ಳುತ್ತಿದ್ದೆ.

ಹೆಣ್ಣೆನದು ಅಪೇನು ಶಕ್ತಿಯಮ್ಮಾ! ಎರಡನ್ನು ಒಂದೂ ಮಾಡಬಲ್ಲಳು; ಒಂದನ್ನು ಎರಡೂ ಮಾಡಬಲ್ಲಳು! ಅತ್ತಿಗೆ ನನ್ನ ಪಾಲಿಗೆ ಎರಡನೆಯದರ ದೀಕ್ಷೆ ವಹಿಸಿಕೊಂಡಳು. ದಿನಗಳೆದಂತೆ ಅಮ್ಮಾ— ಆ ಮಗುವನ್ನೂ ನನ್ನಿಂದ ದೂರವಿರಿಸಿದಳಮ್ಮಾ. ಅಣ್ಣ ನನ್ನೂ, ಆ ರಾಮುವನ್ನೂ, ತಾನು ಉತ್ತರಧ್ರುವಕ್ಕೊಯ್ದು, ನನ್ನನ್ನು ದಕ್ಷಿಣಧ್ರುವಕ್ಕೆ ದೂಡಿದಳಮ್ಮಾ, ಆ ಅಕ್ಕರೆಯ ಅತ್ತಿಗೆ! ಮನೆಯೇ ನನಗೆ ನರಕವಾಯ್ತು. ಏನಾದರೂ ಮಾಡಿ ಬಿ. ಎ. ಮುಗಿಸಿ ನನ್ನ ಕಾಲಮೇಲೆ ನಾನು ನಿಂತುಕೊಳ್ಳಬೇಕು' ಎಂಬ ಒಂದೇ ಒಂದು ತಂತು ನನ್ನನ್ನೂ ಪ್ರಾಣವನ್ನೂ ಬೆಸೆದಿತ್ತು.

ಂ ಂ ಂ ಂ

ನಾಳೆ!
ನಾಳೆ!!
ನಾಳೆ!!!

ನಾನೇನು ಮಾಡಲಮ್ಮಾ? ಆ ಕುತ್ತಿನಿಂದ ಹೇಗೆ ಪಾರಾಗಲಮ್ಮಾ? ಹೌದು ಅಣ್ಣನಿಗೆ ವಿರೋಧವಾಗಿ ನಡೆದುಕೊಳ್ಳಬೇಕೆಂಬ ಇಚ್ಛೆ ನನಗಿತ್ತೆ! ಪ್ರಿನ್ಸಿಪಾಲ್ ಸುಂದರಮ್ಮನವರೆ ಬಲವಂತ. ಅವರೆ ಮುಂದೆ ನಮ್ಮ ಮನೆಯ ಹಗರಣವನ್ನು ಹರವಿಡುವುದೆಂತಮ್ಮಾ? ಹಾಗೆಂದೇ ಅವರ ಮಾತನ್ನು ನೀರಲಾರದೆ, ನಾಟಕದಲ್ಲಿ ಅಭಿನಯಿಸಲು ಒಪ್ಪಿಕೊಂಡೆ. ನಾಳೆಯೇ ನಮ್ಮ ಕಾಲೇಜಿನ ವಾರ್ಷಿಕೋತ್ಸವ! ನಾಳೆಯೇ ನಮ್ಮ ನಾಟಕ!

ನಾಟಕ ಎಂದರೆ ಜ್ಞಾಪಕ ಬರುತ್ತದೆಯಮ್ಮಾ!

ಆಗ—ನಾನು ಇಂಟರ್‌ನಲ್ಲಿ ಓದುತ್ತಿದ್ದೆ. ನಮ್ಮ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭ, ನಾಟಕದೊಂದಿಗೆ ಮುಕ್ತಾಯವಾದದ್ದು ರಾತ್ರಿ ೧೦ ಗಂಟೆಗೆ. ಸ್ವಯಂ ಪ್ರಿನ್ಸಿಪಾಲ್ ಸುಂದರಮ್ಮನವರೇ ತಮ್ಮ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಬಂದು, ನನ್ನ ಬರವಿಗಾಗಿ ಕಾಯುತ್ತಿದ್ದ, ನಿನ್ನನ್ನೂ ಅಪ್ಪನನ್ನೂ ಉದ್ದೇಶಿಸಿ:

'ಕ್ಷಮಿಸಿ! ನಾಟಕದಿಂದ ಸ್ವಲ್ಪ ತಡವಾಯ್ತು. ಒಬ್ಬಳನ್ನೇ ಕಳುಹುವುದು ಹೇಗೆ ಎಂದು, ನಾನೇ ಕರೆದುಕೊಂಡು ಬಂದೆ. ನಿಮ್ಮ ಮಗಳ ಅಭಿನಯವನ್ನು ಎಲ್ಲರೂ ಮೆಚ್ಚಿದರು. ಮುಖ್ಯ ಅತಿಥಿಗಳಂತೂ ಮಾರುಹೋದರು. ಆಕೆಗೇ ನಾಟಕದಲ್ಲಿ ಪ್ರಥಮಬಹುಮಾನ!'

ಎಂದು, ಸಣ್ಣ ಸೀಲ್ಡೊಂದನ್ನು ಕೊಟ್ಟು ಹೋಗಲಿಲ್ಲವೇನಮ್ಮಾ, ಅಂದೇ ರಾತ್ರಿ ೧೧ ಗಂಟೆ ರೈಲಿಗೆ ಬಂದ ಅಣ್ಣ, ವಿಷಯ ಕೇಳಿ ಎಷ್ಟು ಸಂತೋಷಪಟ್ಟ! ಪಾಪ ತಾನು B. A. ಪಾಸಾದಾಗಲೂ ಅಣ್ಣ ಅಷ್ಟು ಸಂತೋಷಪಟ್ಟಿದ್ದನೋ ಇಲ್ಲವೊ! ಬೆಳಗ್ಗೆ ಪೇಪರಿನಲ್ಲಿ ಬಂದಿದ್ದ ನನ್ನ ಫೋಟೋವನ್ನು ಕತ್ತರಿಸಿಟ್ಟುಕೊಂಡು, ಎಷ್ಟು ಜನ ಗೆಳೆಯರಿಗೆ ತೋರಿಸಿ, ತೋರಿಸಿ, ನನ್ನನ್ನು ಲೇವಡಿ ಮಾಡಿರಲಿಲ್ಲ! ಎಂದೋ ಪ್ರಿ. ಸುಂದರಮ್ಮನವರು ಅಣ್ಣನಿಗೆ ಸಿಕ್ಕಿ, 'ಅಂತಹ ತಂಗಿಯನ್ನು ಪಡೆಯಲು ನೀವೆಷ್ಟು ಪುಣ್ಯ ಮಾಡಿದ್ದೀರೋ ನರಸಿಂಹನ್' ಎಂದಿದ್ದರಂತೆ. ಮನೆಗೆ ಬಂದು ಅದನ್ನೇ ಹೇಳಿಕೊಂಡು:

'ನೋಡು ಕ್ಷಮಾ, ಹೀಗೆ ಸಂತೋಷಪಡೋ ಅಣ್ಣ ಸಿಕ್ಕಬೇಕಾದ್ರೆ ನೀನೆಷ್ಟು ಪುಣ್ಯಮಾಡಿದ್ಯೊ! ಅದನ್ನು ಕೇಳುವವರು ಯಾರೂ ಇಲ್ಲ!' ಎಂದು ನನ್ನ ಕಿವಿ ಹಿಂಡಲಿಲ್ಲವೇನಮ್ಮಾ! ಆಗ ನೀನೇ:

'ನರಸಿಂಹ, ಏನೋ, ಇಷ್ಟು ದೊಡ್ಡವನಾದ್ರೂ ಅವಳ ಕಿವಿ ಹಿಂಡ್ತಿಯಾ?' ಎಂದಾಗ, ನಾನು ಅವನನ್ನು ಗೇಲಿಮಾಡುತ್ತಾ, "ಅತ್ತಿಗೆ ಅಣ್ಣಯ್ಯನ ಕಿವಿ ಹಿಂಡ್ತಾಳೆ; ಅಣ್ಣಯ್ಯ ನನ್ನ ಕಿವಿ ಹಿಂಡ್ತಾನೆ" ಎಂದಾಗ, ಆತ ನನ್ನನ್ನು ಹೊಡೆಯಲಿಕ್ಕೆ ಬಂದಿರಲಿಲ್ಲವೇನಮ್ಮಾ?

'ಮನೆ ಬಿಟ್ಟು ಹೊರಕ್ಕೆ ಕಾಲಿಡಕೂಡದು' ಎಂದಿದ್ದಾನಲ್ಲ. ಏನು ಮಾಡಲಿ? ನನ್ನಿಂದ ನಾಟಕ ನಿಂತುಹೋದರೆ, ಸುಂದರಮ್ಮನವರು ಏನೆಂದುಕೊಳ್ಳರು? ಅಲ್ಲದೆ,

'ನಾಳೆ ದೊಡ್ಡ ಅತಿಥಿಗಳು ಬರ್ತಾರೆ, ಚೆನ್ನಾಗಿ ಅಭಿನಯಿಸಬೇಕು ಕ್ಷಮಾ' ಎಂದಿದ್ದಾರಲ್ಲ! ನಾಳೆ ಭಾನುವಾರ, ಅಣ್ಣ ಮನೆಯಲ್ಲೆ ಇರುತ್ತಾನೆ. ಏನು ಮಾಡಲಮ್ಮಾ? ಮಾತಾಡಮ್ಮಾ-ಅಮ್ಮಾ-ಅಮ್ಮಾ....ಅಮ್ಮಾ....

ಂ ಂ ಂ ಂ

"ಇನ್ನೂ ಸೂರ್ಯ ಹುಟ್ಟಿಲಿಲ್ಲವೇನೋ! ಎಂಟು ಗಂಟೆಯಾಗಿದೆ, ಇನ್ನೂ ಬಿದ್ದುಕೊಂಡಿದಾಳೆ ಮಹಾರಾಣಿ!" ಅತ್ತಿಗೆ ಹಾಡಿದ ಸುಪ್ರಭಾತ ಕ್ಷಮಾಳ ಎದೆಯನ್ನು ಇರಿದೆಬ್ಬಿಸಿತು. ಯಾಂತ್ರಿಕವಾಗಿ ಎಲ್ಲ ಕೆಲಸಗಳನ್ನೂ ಮಾಡಿ ಮುಗಿಸಿದಳು. ನರಸಿಂಹನ ಮುಖ ಜ್ವಾಲಾಮುಖಿಯಂತಿತ್ತು.

ಊಟನಾಯ್ತು. ನರಸಿಂಹ ಮಧ್ಯಾಹ್ನದ ನಿದ್ದೆಯನ್ನನುಗಿಸಿ, ಆಕಳಿಸುತ್ತಾ ಹಾಸಿಗೆಯ ಮೇಲೆ ಕುಳಿತಿದ್ದ. ಮಂಜುಳಾ ಒಳಗೆ ಏನೋ ಮಾಡುತ್ತಿದ್ದಳು. ಮಗು ರಾಮು ಸುಖವಾಗಿ ನಿದ್ರಿಸುತ್ತಿದ್ದ. ಮಧ್ಯಾಹ್ನದ ನಿದ್ದೆ ಮುಗಿಸಿ ಟೀ ಕುಡಿಯುವ ಪದ್ಧತಿ ನರಸಿಂಹನದು. ಗಂಡ ಎದ್ದುದನ್ನು ಗಮನಿಸಿರಲಿಲ್ಲ ನುಂಜುಳಾ. ಅಣ್ಣ ಇನ್ನು 'ನಾರಸಿಂಹ' ನಾದಾನೆಂದು, ಕ್ಷಮಾನೇ ಟೀ ಹಿಡಿದು ಬಂದಳು. ಟೇಬಲ್ ಮೇಲೆ ಟೀ ಕಪ್ ಇಟ್ಟು ಅಲ್ಲಿಯೇ ನಿಂತಳು. ೨-೩ ನಿಮಿಷಗಳು ಕಳೆದುವು. ನರಸಿಂಹ ಟೀಯನ್ನು ಮುಟ್ಟಲಿಲ್ಲ. ಇನ್ನು ಆರಿ-ಹೋಗಿದೆ-ಎಂದು ಎಲ್ಲಿ ಸ್ಮರಣೆತ್ತಿಯಾನೋ ಎಂದು:

"ಆರಿ ಹೋಗುತ್ತದಣ್ಣ ಟೀ!" ಎಂದಳು ಕ್ಷಮಾ.

"ನನಗೆ ತಿಳಿಯುತ್ತದೆ" ಮುಖ ತಿರುಗಿಸದೆಯೇ ಉತ್ತರಿಸಿದ ನರಸಿಂಹ. ಹೃದಯದಲ್ಲಿ ತುಂಬಿದ್ದ ನಂಜೇ ಹೊರಬಂದಂತಿತ್ತು ಅವನ ದನಿಯಲ್ಲಿ. ಏನು ಹೇಳಬೇಕೋ ತಿಳಿಯದೆ ಸುಮ್ಮನೆ ನಿಂತಿದ್ದಳು ಕ್ಷಮಾ.

"ಹೋಗಿನ್ನು" ದರ್ಪದಿಂದ ನುಡಿದ ನರಸಿಂಹ.

"ಅಣ್ಣಾ...." ತನ್ನ ಕರ್ತವ್ಯವನ್ನು ನೆನೆದು ಅಪ್ಪಣೆಯನ್ನು ಕೇಳಲು ಬಾಯ್ದೆರೆದಳು ಕ್ಷಮಾ.

"ಮತ್ತೊಮ್ಮೆ ಆ ಹೆಸರಿಂದ ಕರೆದೀಯೆ" ಗರ್ಜಿಸಿದ ನರಸಿಂಹ.

"ಏಕಣ್ಣಾ...."

"ಮತ್ತೆ...." ಎಂದು ಎದ್ದು ನಿಂತ.

ಮುಂದೆ ಏನಾಗುತ್ತದೆ ಎಂಬುದು ಕ್ಷಮಾಳಿಗೆ ಗೊತ್ತು, ಅದಕ್ಕೆ ತಯಾರಾಗಿಯೆ ಇದ್ದಳು. ಅದೃಷ್ಟ! ಯಾರೋ ಬಾಗಿಲನ್ನು ತಟ್ಟಿದರು. ಧಾವಿಸಿ ಬಾಗಿಲನ್ನು ತೆರೆದಳು ಕ್ಷಮಾ. ಎದುರಿಗೆ ಪ್ರಿನ್ಸಿಪಾಲ್ ಸುಂದರಂ!

'ಬನ್ನಿ, ಬನ್ನಿ' ಕಣ್ಣೊರಿಸಿಕೊಳ್ಳುತ್ತಾ ಕರೆದಳು ಕ್ಷಮಾ.

'ಬರಬೇಕು, ಬಹಳ ದಿನಗಳಿಗೆ ಬಂದಂತಾಯ್ತು' ನರಸಿಂಹನೂ ದನಿಗೂಡಿಸಿದ. 'ವಿಷಕುಂಭಂ ಪಯೋ ಮುಖಂ' ಎಂಬಂತಿತ್ತು ಅವನ ಸ್ಥಿತಿ.

'ಏನು ಕ್ಷಮಾ ನಾಲ್ಕು ಗಂಟೆಗೆ ನಮ್ಮ ಮನೆಗೆ ಬರುತ್ತೇನೆಂದು ಹೇಳಿದ್ದವಳು, ನಾಲ್ಕೂವರೆಯಾದರೂ ಬರಬಾರದೆ?' ಲಘುವಾಗಿ, ಪ್ರೇಮಪೂರ್ಣವಾಗಿ ಆಕ್ಷೇಪಿಸಿದರು ಸುಂದರಮ್ಮ.

'ಇಲ್ಲ.... ಇದೇ ಈಗ.... ಹೊರಟಿದ್ದಳು....' ಎಂದ ನರಸಿಂಹನ ದನಿಯಲ್ಲಿ, ಕ್ಷಮಾ ಏನೆಂದು ಬಾಯಿಬಿಟ್ಟಾಳೋ ಎಂಬ ಕಾತರ ತುಂಬಿತ್ತು. ಆದಷ್ಟು ಬೇಗ, ಕ್ಷಮಾಳನ್ನು ಅಲ್ಲಿಂದ ತೊಲಗಿಸಲು:

'ಹೋಗು ಕ್ಷಮಾ, ಪ್ರಿನ್ಸಿಪಾಲರಿಗೆ ಟೀ ತಂದು ಕೊಡು' ಎಂದ. ಕ್ಷಮಾ ಆರಿದ ಟೀಯನ್ನೆತ್ತಿಕೊಂಡು ಒಳಕ್ಕೆ ಹೋದಳು.

'ಅಯ್ಯೋ, ಬೇಡಿ ನರಸಿಂಹನ್! ಇದೇ ಈಗ ಮುಗಿಸಿಕೊಂಡೇ ಬಂದೆ.' ಸ್ವಾಭಾವಿಕವಾಗಿ ನುಡಿದರು ಸುಂದರಮ್ಮ.

'ಇರಲಿ, ಬಡವರ ಮನೆಯ ಅಲ್ಪ ಆತಿಥ್ಯ' ವ್ಯಂಗ್ಯವಾದರೂ ಔಪಚಾರಿಕರೀತಿಯಿಂದ ನುಡಿದ ನರಸಿಂಹ.

ಅಷ್ಟರಲ್ಲಿ, ಎರಡು ಕಪ್‌ಗಳಲ್ಲಿ ಟೀ ತಂದಿಟ್ಟು ಒಳಕ್ಕೆ ಹೋದಳು ಕ್ಷಮಾ.

'ಸ್ವೀಕರಿಸಬೇಕು' ಉಪಚಾರ ಹೇಳಿದ ನರಸಿಂಹ.

"ತಗೊಳ್ಳಿ ನೀವು" ಎಂದು ಟೀಯನ್ನೆತ್ತಿಕೊಂಡು, ಒಂದು ಸಾರಿ ಚಪ್ಪರಿಸಿ,

"ಕ್ಷಮಾಳನ್ನು ನನ್ನ ಕಾರಿನಲ್ಲಿಯೇ ಕರೆದುಕೊಂಡು ಹೋಗುತ್ತೇನೆ. ಜೊತೆಗಿದ್ದರೆ ನನಗೆಷ್ಟೋ ಧೈರ್ಯ! ಅವಳದೇ ಇಂದಿನ

ನಾಟಕದಲ್ಲಿ ಪ್ರಮುಖ ಪಾತ್ರ." ಸ್ವಾಭಾವಿಕವಾಗಿ ಕೇಳಿದರು ಸುಂದರಮ್ಮ.

ನರಸಿಂಹನಿಗೆ ಪೇಚಾಟಕ್ಕೆಟ್ಟುಕೊಂಡಿತು. 'ಬೇಡಿ' ಎನ್ನಲೆ? ಏಕೆಂದು ಕೇಳಿದರೆ! ಆ ನೇಲೆ ಕರೆದುಕೊಂಡು ಬರುತ್ತೇನೆಂದರೆ — 'ಈಗಲೇ ಬನ್ನಿ ಹೋಗೋಣ' ಎಂದರೆ? ಅಂತೂ ಎದ್ದುಹೋಗೋ ಮಾತು ಬಿದ್ದುಹೋಗಲಿ—ಎಂದು :

"ಆಮೇಲೆ ಬರುತ್ತಾಳೆ, ತಾವು ನಡೆಯಿರಿ." ಎಂದ.

"ಆಮೇಲೇನು, ಈಮೇಲೇನು? ಹೇಗೂ ಬಂದಿದ್ದೀನೆ. ಜೊತೆಯಲ್ಲೇ ಕರೆದುಕೊಂಡು ಹೋಗುತ್ತೇನೆ" ಎಂದರು ಸುಂದರಮ್ಮ ಟೇ ಕಪ್ ಕೆಳಗಿಡುತ್ತ.

ನರಸಿಂಹ 'ಹೂ' ಅನ್ನದೆ ವಿಧಿಯೇ ಇಲ್ಲವಾಯ್ತು.

'ಕ್ಷಮಾ' ಎಂದು ತಾನೇ ಕೂಗಿದ.

'ಎನಣ್ಣಾ' ಎಂದು ಬಂಧಳು ಕ್ಷಮಾ.

ಕ್ಷಮಾ ಅಣ್ಣನ ಮುಖ ನೋಡಿದಳು.

'ಹೂಂ, ಬೇಗ ಹೋಗಮ್ಮಾ, ಪ್ರಿನ್ಸಿಪಾಲರಿಗೆ, ಪಾಪ ಎಷ್ಟು ಕೆಲಸಗಳೋ!' ಎಂದು ಉಗುಳುನುಂಗಿದ ನರಸಿಂಹ.ಇದೆಲ್ಲಾ ಕ್ಷಮಾ–ಹೂಡಿರುವ ನಾಟಕ — ಎಂಬ ಭಾಪನೆ ಅವನ ಮನದಲ್ಲಿ ಮೂಡದೆ ಹೋಗಲಿಲ್ಲ. ಕ್ಷಮಾ ಒಳಗೆ ಹೋದಳು.

'ಸಾಯಂಕಾಲ ಆರುಗಂಟಿಗೆ ನಮ್ಮ ಫಂಕ್ಷನ್‌ಗೆ ಬನ್ನಿ ನರಸಿಂಹನ್— ನೀವೂ-ನಿಮ್ಮ ಶ್ರೀಮತಿಯವರೂ!' ಅಕ್ಕರೆಯಿಂದ ಆಹ್ವಾನಿಸಿದರು ಸುಂದರಮ್ಮ.

'ಅಯ್ಯೋ ನಮಗೆಲ್ಲಿ ಬಿಡುವುಂಟು! ಹೆಸರಿಗೆ ವಾರಕ್ಕೊಂದು ಭಾನುವಾರ. ಹೊರಗೆ ತಲೆ ಇಡಲೂ ಬಿಡುವಿರುವುದಿಲ್ಲ. ಇದ್ದುದರಲ್ಲಿ ಬಿಡುವು ಮಾಡಿಕೊಂಡು ಬರೋಣ ಎಂದರೆ, ಇಂದೇ ಆರು ಗಂಟೆಗೆ ನನ್ನ ಸ್ನೇಹಿತನೊಬ್ಬ ಬರ್ತೀನಿ– ಎಂದಿದ್ದಾನೆ. ಏನು ಮಾಡಲಿ ನೀವೇ ಹೇಳಿ.'

ಅಷ್ಟರಲ್ಲಿ ಕ್ಷಮಾ ಕೈಯಲ್ಲೊಂದು ಚೀಲ ಹಿಡಿದು ಬಂದಳು.

'ನೋಡಿ, ನಾಟಕ ಎಂಟು ಗಂಟೆಗೆ, ಆ ವೇಳೆಗಾದರೂ ನೀವೂ, ನಿಮ್ಮ ಸ್ನೇಹಿತರೂ ಇಬ್ಬರೂ ಬನ್ನಿ. ಬೇಕಾದರೆ ಕಾರ್ ಕಳುಹಿಸುತ್ತೇನೆ' ಇನ್ನೊನ್ಮೆ ಕರೆದರು ಸುಂದರಮ್ಮ.

'ನೋಡೋಣ.'

'ನಮಸ್ತೆ, ನಾನಿನ್ನು ಬರ್ತೇನೆ.'

'ಬರ್ತೇನಣ್ಣಾ.'

ಕಾರು ಕಣ್ಮರೆಯಾಗುವವರೆಗೂ ಬಾಗಿಲಲ್ಲೇ ನಿಂತು ನೋಡಿದ ನರಸಿಂಹ. ತಡೆಹಿಡಿದಿದ್ದ ಕೋಪ ಒಮ್ಮೆಲೆ ಉಕ್ಕಿ ಬಂತು. 'ಬರಲಿ, ರಾತ್ರಿ ಮನೆಗೆ' ಎಂದು ಬಂದಿದ್ದ ಕೋಪವನ್ನು ಕದಗಳ ಮೇಲೆ ತೋರಿಸಿದ.

* * * *

ಕಾರ್ ಹಾರನ್ ಶಬ್ದ ಕೇಳಿ ಕದ ತೆರೆದಾಗ ' ರಾತ್ರಿಯ ೧೦ ಗಂಟೆ. ಬಂದಿರುವವರು ಯಾರು—ಎಂಬುದು ನರಸಿಂಹನಿಗೆ ಗೊತ್ತು.

'ಸ್ವಲ್ಪ ನೇಳೆಯಾಯ್ತು ಕ್ಷಮಿಸಬೇಕು ನರಸಿಂಹನ್!' ಎಂದರು ಸುಂದರಮ್ಮ. ಕ್ಷಮಾ ಸುಂದರಮ್ಮನವರ ಹಿಂದೆ ನಿಂತಿದ್ದಳು.

'ಪರವಾ ಇಲ್ಲ' ಒರಟಾಗಿಯೇ ಉತ್ತರಿಸಿದ ನರಸಿಂಹ.

'ನಾನು ಬರ್ತೇನೆ. ಮತ್ತೆ ಹೋಗಿ ನಮ್ಮ ಗೆಸ್ಟ್‌ನ ಭೆಟ್ಟಿಯಾಗಬೇಕಾಗಿದೆ. ನಮಸ್ತೆ ನರಸಿಂಹನ್, ನಮಸ್ತೆ ಕ್ಷಮಾ!' ಎಂದು ಅವಸರದಿಂದ ಕಾರಿನತ್ತ ಧಾವಿಸಿದರು. ಸುಂದರಮ್ಮನವರ ಕಾರು ಕಣ್ಮರೆಯಾಗುವವರೆಗೂ ನಿಂತಿದ್ದು, ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಬಾಗಿಲ ಕಡೆ ಹೊರಳಿದಳು ಕ್ಷಮಾ. ನರಸಿಂಹ, ಕೋಪದಿಂದ ಶತಪಥ ತುಳಿಯುತ್ತಿದ್ದ ಒಳಗೆ. ಕ್ಷಮಾಳ ಎದೆ ಧಸ್ ಎಂದಿತು. ಆದರೂ ಧೈರ್ಯ ತಂದುಕೊಂಡು ಹೊಸ್ತಿಲಿಗೆ ಕಾಲಿಟ್ಟಳು. "ತೊಲಗಾಚೆ!" ಎಂದು ಒತ್ತಿಬಂದ ಕೋಪದಲ್ಲಿ ಝಾಡಿಸಿ ನೂಕಿದ ನರಸಿಂಹ.

'ಆಯ್ಯೋ' ಎನ್ನುತ್ತ ಚೀರಿ ಬಿದ್ದುಬಿಟ್ಟಳು ಕ್ಷಮಾ. ಚೀರಿದ್ದನ್ನು ಕೇಳಿ, ಅಂಗಡಿಯ ಬಾಗಿಲನ್ನು ಹಾಕಿಕೊಂಡು ಹೋಗುತ್ತಿದ್ದ ನಾಲ್ಕಾರು ಜನರು ಧಾವಿಸಿದರು.

ಕ್ಷಮಾಳ ತಲೆಗೆ ಪೆಟ್ಟುಬಿದ್ದು ರಕ್ತ ಬಂದಿತ್ತು. ಮೈಮೇಲೆ ಪ್ರಜ್ಞೆ ಇರಲಿಲ್ಲ. ಯಾರೋ ಎಲ್ಲಿಂದಲೊ ಒಂದು ಟ್ಯಾಕ್ಸಿ ತಂದರು. ಕ್ಷಮಾಳನ್ನೆತ್ತಿ ಟ್ಯಾಕ್ಸಿಯಲ್ಲಿ ಹಾಕಿದರು. ಅನ್ಯರು ತನ್ನ ತಂಗಿಗಾಗಿ ಅಷ್ಟು ಆಸಕ್ತಿ ತೋರುವುದನ್ನು ಕಂಡು ನರಸಿಂಹನಿಗೆ ನಾಚಿಕೆಯಾಯ್ತು. ಬಾಗಿಲಲ್ಲಿ ಬಂದು ನಿಂತಿದ್ದ ಹೆಂಡತಿಗೆ ಏನೋ ಹೇಳಿ, ಬಂದು ಟ್ಯಾಕ್ಸಿಯಲ್ಲಿ ಕುಳಿತ. ಟ್ಯಾಕ್ಸಿ ಆಸ್ಪತ್ರೆಯ ದಾರಿಯನ್ನು ಹಿಡಿಯಿತು.

ಬ್ಯಾಂಡೇಜ್ ಮಾಡಿ ಹಾಸಿಗೆಯ ಮೇಲೆ ಮಲಗಿಸಿದ್ದ ಕ್ಷಮಾಳನ್ನು ಕಂಡು ನರಸಿಂಹನ ಎದೆ ಕರಗಿತು. ಮೊದಲಿನ ಅಕ್ಕರೆ ಉಕ್ಕಿ ಬಂತು.

"ನಾನಿಲ್ಲೇ ಮಲಗಲೇ ಡಾಕ್ಟ್ರೆ?" ಎಂದು ಕಾತರನಾಗಿ ಕೇಳಿದ. "ಏನೂ ಅವಶ್ಯವಿಲ್ಲ, ಬೆಳಗ್ಗೆ ಬನ್ನಿ. ಪೇಷಂಟ್‌ಗೆ ಏನೂ ಅಂತಹ ಅಪಾಯವಾಗಿಲ್ಲ!" ಎಂದು ಆಶ್ವಾಸನೆ ನೀಡಿದರು ಡಾಕ್ಟ್ರು. ತಲೆಗೆ ಸುತ್ತಿದ್ದ ಬ್ಯಾಂಡೇಜ್‌ನೇಲೆ ಬೆರಳಾಡಿಸಿ ಮನೆಯ ದಾರಿ ಹಿಡಿದ ನರಸಿಂಹ.

ಕ್ಷಮಾಳಿಗೆ ಎಚ್ಚರವಾದಾಗ ರಾತ್ರಿಯ ೨ ಗಂಟೆ. ತಲೆಯ ಬ್ಯಾಂಡೇಜನ್ನು ಒಮ್ಮೆ ನೇವರಿಸಿಕೊಂಡು ಸುತ್ತ ನೋಡಿದಳು. ವಾರ್ಡಿನಲ್ಲಿ ಎಲ್ಲರೂ ಗೊರಕೆಹೊಡೆಯುತ್ತಿದ್ದರು. ಪಕ್ಕದಲ್ಲಿದ್ದ ಸ್ಟೂಲ್ ನೋಡಿದಳು. ಅದೇ ತಾನೆ ಡ್ಯೂಟಿನರ್ಸ್ ಬಂದು ಟೆಂಪರೇಚರ್ ಗುರುತಿಸಿ, ಟೆಂಪರೇಚರ್ ಷೀಟನ್ನೂ ಪೆನ್ನನ್ನೂ ಅಲ್ಲಿಯೆ ಬಿಟ್ಟು ಹೋಗಿದ್ದಳು. ಪೆನ್ನು ಮತ್ತು ಕಾಗದವನ್ನು ಕಂಡ ಕ್ಷಮಾಳಿಗೆ ಏನೋ ಯೋಚನೆ ಹೊಳೆಯಿತು. ಹಾಗೆ ಯಾರಾದರೂ

ಬರುತ್ತಿದ್ದಾರೆಯೇ–ಎಂದು ಅಲಿಸಿದಳು. ಪಕ್ಕದ ವಾರ್ಡಿನಲ್ಲಿ ನರ್ಸ್, ಯಾರೋ ಪೇಷಂಟ್ ಜೊತೆಯಲ್ಲಿ ಮಾತನಾಡುತ್ತಿದ್ದುದು ಕೇಳಿಸಿತು. ಸ್ವಲ್ಪ ಹೊತ್ತು ಹಾಗೇ ಅಲಿಸಿದಳು. ರೊಚ್ಚಿಗೆದ್ದ ರೋಗಿಯನ್ನು ನರ್ಸ್ ಸಾಂತ್ವನಗೊಳಿಸುತ್ತಲೇ ಇದ್ದಳು. 'ಸರಿ!' ಎಂದು ಯೋಚಿಸಿದ ಕ್ಷಮಾ, ಟೆಂಪರೇಚರ್ ಷೀಟಿನಲ್ಲಿ ಏನೋ ಎರಡು ಸಾಲು ಗೀಚಿದಳು. ಅದನ್ನು ಮಡಿಚಿ, ಸ್ಟೂಲಿನ ಮೇಲಿಟ್ಟು, ಅದರ ಮೇಲೆ ಪೆನ್ನಿಟ್ಟಳು. ಮತ್ತೊಮ್ಮೆ ಸುತ್ತಲೂ ನೋಡಿದಳು. ಎಲ್ಲರೂ ಗಾಢನಿದ್ರೆಯಲ್ಲಿದ್ದರು. ನರ್ಸ್ ಹೇಳುತ್ತಿದ್ದ ಸಮಾಧಾನದ ನುಡಿಗಳು ಕೇಳಿಸುತ್ತಲೇ ಇದ್ದುವು.

ಮಂಚವನ್ನಿಳಿದು ವಾರ್ಡಿನ ಬಾಗಿಲ ಬಳಿ ಬಂದಳು. ಆದೇ ತಾನೆ ಹೊರಕ್ಕೆ ಹೋಗಿದ್ದ ನರ್ಸ್ ಕದಕೆರೆದೇ ಹೋಗಿದ್ದಳು. ವಾರ್ಡಿನ ಮುಂದೆಯೇ ಆಸ್ಪತ್ರೆಯ ಒಳ ಅಂಗಳ. ಸುತ್ತಲೂ ಮತ್ತೊಮ್ಮೆ ನೋಡಿ, ಹತ್ತು ಹೆಜ್ಜೆ ಮುಂದಿಟ್ಟು, ಹೊರಕ್ಕೆ ಹೋಗುವ ಬಾಗಿಲನ್ನು ಹುಡುಕಿದಳು. ತಲೆಯ ಮೇಲೊಂದು ವಿದ್ಯುದ್ದೀಪವನ್ನು ಹೊತ್ತಿದ್ದ ಹೊರಬಾಗಿಲು ಮುವ್ವತ್ತು ಹೆಜ್ಜೆ ದೂರದಲ್ಲಿತ್ತು. ಬೇಗ ಬೇಗ ಆ ಬಾಗಿಲನ್ನು ಸಮೀಪಿಸಿದಳು ಕ್ಷಮಾ. ಅಗಳಿ ಹಾಕಿತ್ತು. ಮತ್ತೊಮ್ಮೆ ಸುತ್ತನೋಡಿ, ನಿಧಾನವಾಗಿ ಅಗಳಿ ತೆಗೆದಳು. ಕದಗಳನ್ನು ತೆರೆದು ಹೊರಕ್ಕೆ ಬಂದು, ಸಫಲತೆಯ ಉಸಿರನ್ನು ಬಿಟ್ಟಳು. ಮುಂದೆ? ತನಗೆ ಬೇಕಾಗಿರುವುದು ಎಲ್ಲಿದೆ ಎಂಬುದು ಅವಳಿಗೆ ಗೊತ್ತಿತ್ತು. ಪ್ರತಿದಿನ ಕಾಲೇಜಿಗೆ ಹೋಗುವಾಗ, ಆಸ್ಪತ್ರೆಯ ಕಂಪೌಂಡಿನ ಮಗ್ಗುಲಲ್ಲಿಯೇ ಸ್ವಲ್ಪದೂರ ಹಾದು ಹೋಗಬೇಕಿತ್ತು. ಹಾಗೆ ಹೋಗುವಾಗ, ಪ್ರತಿದಿನವೂ ಆಕೆಯ ಗಮನಸೆಳೆಯುತ್ತಿದ್ದುದು 'ಗೊಡಕ್–ಗೊಡಕ್' ಎಂದು ಶಬ್ದ ಮಾಡುತ್ತಿದ್ದ ನೀರೆತ್ತುವ ಯಂತ್ರ.

ವಿಶಾಲವಾದ ಭಾವಿಯ ಕಟ್ಟೆಯನ್ನೇರಿ ಸುತ್ತಲೂ ಒಮ್ಮೆ ನೋಡಿದಳು. ಎಲ್ಲವೂ ನಿಶ್ಶಬ್ದದಲ್ಲಿ ಲೀನವಾಗಿತ್ತು. ಬಾವಿಯ ಒಳಕ್ಕೊಮ್ಮೆ ಬಗ್ಗಿ ನೋಡಿದಳು. 'ಬೇಗ ಬಾ' ಎಂಬಂತೆ ಕಪ್ಪೆಯೊಂದು ಒಟಗುಟ್ಟಿತು. ತಾನು ಬಿಟ್ಟುಹೋಗಲಿರುವ ವಿಶ್ವಸಮಸ್ತವನ್ನೂ ಒಮ್ಮೆ ನೋಡಿ, ನಿಟ್ಟುಸಿರು ಬಿಟ್ಟು, 'ಇದೋ ಅಮ್ಮಾ, ನಾನೂ ಬಂದೆ' ಎಂದು ಹಾರಿದಳು.

'ಘುಡುಂ' ಎಂಬ ಶಬ್ದ ಕೇಳಿ, ಪಂಪ್‌ಹೌಸಿನಲ್ಲಿ ಮಲಗಿದ್ದ ಫೋರಮನ್, ಎದ್ದು ಕಣ್ಣುಜ್ಜುತ್ತಾ ಹೊರಬಂದು, ಕೈಯಲ್ಲಿದ್ದ ಟಾರ್ಚನ್ನು ಸುತ್ತಲೂ ಹಾಕಿದ. ಏನೂ ಕಾಣಲಿಲ್ಲ. ಬಾವಿಯ ಬಳಿ ಬಂದು ಬಾವಿಯ ಒಳಕ್ಕೆ ಹಾಕಿದ. ನೀರು ಅಲೆಯಲೆಯಾಗಿ ಡಡವನ್ನು ಅಪ್ಪುತ್ತಿತ್ತು. ಗುಳು–ಗುಳು ಎಂಬ ಶಬ್ದ ಕೇಳುತ್ತಿತ್ತು. ಏನೋ ಬೆಳ್ಳಗಿರುವ ವಸ್ತು ಒಮ್ಮೆ ಕಾಣಿಸಿಕೊಂಡಿತು; ಮತ್ತೆ ಮೇಲಕ್ಕೆ ಬರಲಿಲ್ಲ.

'ಓ!' ಎಂದು ಒರಲಿದ. ನಾಲ್ಕಾರು ಜನರು ಧಾವಿಸಿ ಬಂದರು. ಡ್ಯೂಟಿಯ ಮೇಲಿದ್ದ ಡಾಕ್ಟರು, ನರ್ಸ್ ಓಡಿ ಬಂದರು. ಫೋರಮನ್ ಅವರಿಗೆ ತಾನು ಕಂಡದ್ದನ್ನೂ ಕೇಳಿದ್ದನ್ನೂ ತಿಳಿಸಿದ. ನರ್ಸ್‌ಗೆ ಏನೋ ಸಂಶಯ ಬಂತು. 'ಜಸ್ಟ್ ಎ ಮಿನಿಟ್ ಡಾಕ್ಟರ್!' ಎಂದು ಓಡಿಬಂದು ನೋಡಿದಳು. ಅವಳ ಸಂಶಯ ನಿಜವಾಗಿತ್ತು.

ವಿಷಯ ತಿಳಿದು ನರಸಿಂಹ ಬರುವ ವೇಳೆಗಾಗಲೇ ಬೆಳಗಿನ ನಾಲ್ಕೂವರೆ ಗಂಟೆಯಾಗಿತ್ತು. ಕ್ಷಮಾಳ ಶವದೊಂದಿಗೆ ಚೀಟಿಯೊಂದನ್ನು ನರಸಿಂಹನಿಗೆ ಒಪ್ಪಿಸಿದರು ಅಧಿಕಾರಿಗಳು; ನಡುಗುವ ಕೈಯಿಂದ ಬಿಚ್ಚಿದ ಚೀಟಿಯನ್ನು ನೀರು ತುಂಬಿದ ಕಣ್ಣುಗಳಿಂದ ನೋಡಿ, ಕರಗಿದ್ದ ಹೃದಯ ಓದಿಕೊಂಡಿತು:–

"ಅಣ್ಣಾ,

ಇನ್ನಾದರೂ ನಿನ್ನ ಮನಸ್ಸಿನಲ್ಲಿ, ಮನೆಯಲ್ಲಿ ಶಾಂತಿ ನೆಲಸೀತೆಂದು ಭಾವಿಸಿದ್ದೇನೆ. ನಾನೇನಾದರೂ ತಪ್ಪುಮಾಡಿದ್ದರೆ ಕ್ಷಮಿಸಣ್ಣಾ–ಅಣ್ಣಾ.....

ನಿನ್ನೊಲವಿನ ತಂಗಿ,
"ಕ್ಷಮಾ"

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಜಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮೂರಾಟ ಮಾಡುವವರು.

ಸಂಬುಗೆಯ ಮಾಲು! ಶ್ರಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ್ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಡಾಕ್ಟರ್ ಅಲೆಕ್ಸಿ ಕಾರೆಲ್

(ವಿಜ್ಞಾನಿಯೊಬ್ಬನ ಪರಿಚಯ)

ಶೀ. ಬಿ. ಆರ್. ನಾಡಗೀರ ಬಿ. ಎಸ್‌ಸಿ. (ಟೆಕ್) ಕುಂದಗೋಳ.

ಡಾಕ್ಟರ್ ಕಾರೆಲ್, ಅವರು ವೈಜ್ಞಾನಿಕ ನೋಬೆಲ್ ಪಾರಿತೋಷಕವನ್ನು ಪಡೆದ ವಿಜ್ಞಾನ ಮಹರ್ಷಿಗಳು. ಈ ಸಂಶೋಧಕರ ಸಂಶೋಧನೆ ವೈದ್ಯಕಪ್ರಪಂಚದಲ್ಲಿ ಅತ್ಯದ್ಭುತವಾದ ಮಾನವಕಲ್ಯಾಣದ ಕಾರ್ಯಗಳನ್ನು ಮಾಡಿದೆ; ಅನೇಕ ಜೀವಗಳನ್ನು ಮೃತ್ಯುವಿನ ಬಾಯಿಂದ ಉಳಿಸಿದೆ.

ಸುಮಾರು ೨೫ ವರುಷಗಳ ಹಿಂದೆ ಪಿಶ್ವದ ವಿಖ್ಯಾತ ವಿಜ್ಞಾನಿಗಳು, ಪ್ರಸಿದ್ಧ ವಿದ್ವಾಂಸರ ಮಾಲಿಕೆಯೊಂದನ್ನು ರಚಿಸಿದರು. ಆ ಮಾಲಿಕೆಗೆ ಸೇರುವ ಸೌಭಾಗ್ಯ ಕೇವಲ ೧೨ ಜನ ಮಹಾಮಹಿಮರಿಗಿತ್ತು. ಈ ಮಾಲಿಕೆಗೆ ಮುಕುಟಮಣಿಯಾಗುವ ಮಹಾಭಾಗ್ಯ ಡಾಕ್ಟರ್ ಕಾರೆಲ್ಲರಿಗಿತ್ತು. ವೈದ್ಯಕೆಯ ವಿಜ್ಞಾನದಲ್ಲಿ ಇವರನ್ನು ಸರಿಗಟ್ಟುವವರು ದುರ್ಮಿಳರೆಂದೇ ಹೇಳಬೇಕು.

ಡಾಕ್ಟರ ಕಾರೆಲ್ಲ ಮೂಲತಃ ಅಮೇರಿಕನ್ನರಲ್ಲ; ವಲಸೆ ಬಂದವರು. ಇವರು ೧೮೭೩ ರಲ್ಲಿ ಫ್ರಾನ್ಸಿನಲ್ಲಿಯ ಬಾಯನ್ನ್ಸ್‌ನಲ್ಲಿ ಜನಿಸಿದರು. ೧೭ ವರುಷಗಳಿಗೆ ಲಾಯನ್ಸ್ ವಿಶ್ವವಿದ್ಯಾಲಯದ L. B. ಪದವಿಯನ್ನು ಪಡೆದು ಮೂರನೆಯ ವರುಷವೇ Sc. B. ಯನ್ನು ಪಡೆದರು. ೧೯೦೦ ರಲ್ಲಿ ಅದೇ ವಿಶ್ವವಿದ್ಯಾಲಯದಿಂದ M. D. ಪದವೀಧರರಾದರು. ಅನಂತರ ಕೋಲಂಬಿಯಾ, ಟ್ರಾನ್ ಮತ್ತು ಪ್ರಿನ್ಸ್‌ಟನ್-ವಿಶ್ವಪ್ರಸಿದ್ಧ ವಿದ್ಯಾಲಯಗಳಿಂದ Sc. B. ಪದವಿಯನ್ನು ಪಡೆದರು.

ಮಾನವಕುಲಕ್ಕೆ ಡಾ. ಕಾರೆಲ್ಲರಷ್ಟು ಉಪಕಾರ ಮಾಡಿದವರು ತೀರ ಕಡಮೆ ಎಂದು ಹೇಳಲಾಗಿದೆ. ಅವರ ಅಪೂರ್ವ ಸಂಶೋಧನೆಗಳ ಆಧಾರಸ್ತಂಭಗಳೆಂದರೆ— ಅಸದೃಶ ವಿಚಾರಶಕ್ತಿ, ತಾಳ್ಮೆ ಹಾಗು ನೈಪುಣ್ಯ. ಮಾನವವರ್ಗಕ್ಕೆ ವರದಾನವಾಗಿ ಪರಿಣಮಿಸಿದ ಮಹಾ ಶೋಧನೆಗಳ ಜನ್ಮಸ್ಥಳ, ಪ್ರಸಿದ್ಧವಾದ ರಾಕಫೆಲ್ಲರ ಪ್ರಯೋಗಶಾಲೆಗಳು. ರಾಕಫೆಲ್ಲರ ಸಂಸ್ಥೆಯೊಂದಿಗೆ ಡಾ. ಕಾರೆಲ್ಲರಿಗೆ ಸಂಪರ್ಕ ಬಂದುದು ೧೯೦೬ ರಲ್ಲಿ. ಕೊಡುಗೈದೊರೆಯಿಂದ ನಡೆಸಲಾಗುತ್ತಿರುವ ಈ ಮಹಾಸಂಸ್ಥೆ, ಡಾ. ಕಾರೆಲ್ಲರು ಕೇಳಿದ ಸಹಾಯ ನೀಡಲು ಕಟಿಬದ್ಧವಾಗಿತ್ತು. ಈ ಸಹಾಯಕ್ಕೆ ಪ್ರತಿಯಾಗಿ ಡಾ. ಕಾರೆಲ್ಲರು ಉಪಕಾರವನ್ನು—ಆ ಸಂಸ್ಥೆಗೆ ಮಾತ್ರವಲ್ಲದೆ—ಜಗತ್ತಿಗೇ ಮಾಡಿದರು. ಮಹಾಸಂಶೋಧನೆಗಳ ಶ್ರೇಯಸ್ಸು ವೈಯಕ್ತಿಕವಾಗಿ ಕಾರೆಲ್ಲರಿಗಿದೆಯಾದರೂ, ಆ ಸಂಸ್ಥೆಗೂ ಇದೆ ಎನ್ನಬೇಕು.

ಕಾರೆಲ್ಲರನ್ನು ಕಂಡೊಡನೆ, ಇವರಲ್ಲಿಯ ಅಸಮ ಕರ್ತೃತ್ವ ಶಕ್ತಿಯನ್ನು ಗುರುತಿಸಬಹುದು. ನೋಡಲು ವಾಮನ ಮೂರ್ತಿ; ಆದರೆ ಜಡಗಿಸಿಕೊಂಡ ಸುಪ್ತಚೇತನ ? .... ಈ ಗಾತ್ರ—ಶಕ್ತಿ ಹಾಗೂ ಸಾಮರ್ಥ್ಯದ ಸಂಕೇತ. ಪ್ರಕಾಶಮಾನವಾದ ಮುಖಕ್ಕೆ ತಾಮ್ರದ ತಲೆ. ಅತಿ ವಿಚಾರದಿಂದಾಗಿ ಕೂದಲು ಬಹುಬೇಗ ಕಾಣಿಯಾದುವೇನೋ ! ಸೂಕ್ಷ್ಮತೆಯ ಸಂಕೇತದಂತಿರುವ ನೇರವಾದ, ತೆಳ್ಳನೆಯ ಮೂಗು. ಇನ್ನು ಕಣ್ಣುಗಳೋ ಕಾಂತಿಯ ಆಗರ. ಈ ಕಂಗಳದೂ ಒಂದು ವೈಶಿಷ್ಟ್ಯ. ಒಂದು ಕಣ್ಣು ನೀರಳೆಯು ಬಣ್ಣದಿದ್ದರೆ, ಇನ್ನೊಂದು ಕಂದು ಬಣ್ಣವನ್ನು ಪಡೆದಿದೆ. ಗಂಭೀರ ಸ್ವಭಾವ. ಬಾಯಿದ್ದರೆಯುವುದು ಅನಿವಾರ್ಯವಾಗಿ ಮಾತ್ರ. ಕೈಗಳೋ—ಡಾಕ್ಟರರ ಕೈಗಳು, ರೇಶಿಮೆಯಷ್ಟು ನಯನಾಜುಕು. ಈ ಕೈಗಳ ಚರ್ಮಧೃತಿ ಬಣ್ಣಿಸುವಂತಿಲ್ಲ. ಮೊದಲನೆಯ ಮಹಾಯುದ್ಧದ ಕಾಲಕ್ಕೆ ಇವರ ಕೈಚಳಕವನ್ನು ಹಾಗೂ ಕೈಗುಣವನ್ನು ಪ್ರಾನ್ಸಿನ ಜನತೆ ಹೀಗೆ ಕೊಂಡಾಡಿದ್ದಾರೆ:—'ಇಂತಹ ಚುರುಕುಕೈಗಳು ಪ್ರಾನ್ಸಿನಲ್ಲಿಷ್ಟೇ ಏಕೆ, ವಿಶ್ವದಲ್ಲಿಯೇ ಇಲ್ಲವೆಂದು ನಮಗೆ ಭರವಸೆಯಾಗಿದೆ. ಶಸ್ತ್ರಕ್ರಿಯೆ ಮಾಡುವುದರಲ್ಲಿ ಅವರದೇ ಆದ ಪರಿಪೂರ್ಣ ವಿಧಾನವಿರುತ್ತಿತ್ತು. ವೈದ್ಯಕೀಯ ವೃತ್ತಿಗೇ ಡಾ. ಕಾರೆಲ್ಲ ಅಂಟಿಕೊಂಡಿದ್ದರೆ, ಹೊನ್ನಿನ ಹೊಳೆ ಹರಿಯುಬಹುದಾಗಿತ್ತು. ಆದರೆ ವಿಜ್ಞಾನಜಗತ್ತು ಮಾತ್ರ ಬಡವಾಗುತ್ತಿತ್ತು !'

ಇವರ ಪ್ರಸಿದ್ಧ ಸಂಶೋಧನೆಗಳು ಇಂತಿವೆ.

೧) ಕೋಶಸಮೂಹಗಳ ಕೃತ್ರಿಮ ವೃದ್ಧಿ.

೨) ವಿವಿಧಾಂಗಗಳ ಕಸೆಮಾಡುವ ಕ್ರಮ.

೩) ರಕ್ತನಾಳಗಳನ್ನು ಹೊಲಿಯುವ ಬಗೆ.

೪) ಆಂತರಿಕ ಗಾಯಗಳನ್ನು ಕ್ರಿಮಿನಾರಕಗಳಿಂದ ತೊಳೆಯುವ ವಿಧಾನ.

ಯಾವುದೇ ವಸ್ತುವನ್ನು ಸೇವಿಸಿದಾಗ, ಅದರ ಪರಿಣಾಮ ವಿವಿಧಾಂಗಗಳ ಮೇಲೆ ಹೇಗೆ ಆಗುವುದು—ಎಂಬುದನ್ನು ಕಂಡುಕೊಳ್ಳುವುದು ಕಷ್ಟಸಾಧ್ಯವಾಗಿತ್ತು ಆಗ. ಈ ಮೊದಲು ಕೃತ್ರಿಮ ಕೋಶಸಮೂಹಗಳನ್ನು ನಿರ್ಮಿಸುವ ಪ್ರಯತ್ನ ಮಾಡಲಾಗಿತ್ತು; ಈ ಕೃತ್ರಿಮಕೋಶಸಮೂಹ ಸಜೀವ ಕೋಶಸಮೂಹದಂತೆಯೇ

ವರ್ತಿಸುವುದು ಅತ್ಯವಶ್ಯ. ಡಾ. ಲೋಬರು ಈ ಕುರಿತು ಅಭ್ಯಾಸ ಕೈಕೊಂಡವರಲ್ಲಿ ಪ್ರಪ್ರಥಮರು. ಇವರ ಹಾದಿಯಲ್ಲಿಯೆ ಮುನ್ನಡೆದವರು ಡಾ. ಹ್ಯಾರಿಸನ್ನರು. ಇವರ ವಿಧಾನಗಳನ್ನು ಪರಿಪೂರ್ಣಗೊಳಿಸಿದವರು ಡಾ. ಕಾರೆಲ್. ಈ ಕಾರ್ಯದಲ್ಲಿ ಡಾ. ಬರೋಜರ ಸಕ್ರಿಯ ಸಹಾಯ ಕಾರೆಲ್ಲರಿಗೆ ದೊರೆಯಿತು. ಈ ವಿಧಾನದ ಸಂಪೂರ್ಣಶ್ರೇಯಸ್ಸನ್ನು ಡಾ. ಕಾರೆಲ್ ನಿರಾಕರಿಸಿದ ವಿಷಯ ಗಮನಾರ್ಹವಾಗಿದೆ. ಏಕೆಂದರೆ:—ವೈಜ್ಞಾನಿಕಪ್ರಗತಿಗೆ ಯಾವ ವ್ಯಕ್ತಿಯೂ ಪೂರ್ಣತಃ ಕಾರಣನಲ್ಲ. ಅನೇಕ ಜನರ ಶ್ರಮ, ಪ್ರಯತ್ನಗಳ ಫಲವಾಗಿ ಪರಿಪೂರ್ಣತೆ ಲಭಿಸುತ್ತದೆ. ಈ ಸೂಕ್ತದಲ್ಲಿ ಸಂಪೂರ್ಣ ವಿಶ್ವಾಸ ಕಾರೆಲ್ಲರಿಗಿತ್ತು.

ಕ್ರಿಯಾಶೀಲ ವಿವಿಧಾಂಗಗಳ—ಹೃದಯ, ಹೊಟ್ಟೆ, ಯಕೃತ್ತು, ಕರುಳು, ವೃಕ್ಕ—ಗಳ ಕೋಶಸಮೂಹದ ತುಣುಕೊಂದನ್ನು ಹೊರದೆಗೆದು, ಆ ತುಣುಕು ಬಾಹ್ಯವಾತಾವರಣದಲ್ಲಿ ಸಜೀವಕೋಶ ಸಮೂಹಗಳಂತೆಯೇ ವರ್ಧಿಸುವ ಬಗೆಯನ್ನು ಇವರು ಕಂಡುಕೊಂಡರು. ದೇಹದ ಹೊರಗೆ ಕೃತ್ರಿಮವಾಗಿ ಕೋಶವೃದ್ಧಿಯನ್ನು ನಿರ್ಮಿಸಲು ಬರುವಂತಿದ್ದರೆ, ದೇಹದ ಒಳಗೂ ಹಾಗೆಯೇ ನಿರ್ಮಿಸುವುದು ಶಕ್ಯವೆಂಬುದಕ್ಕೆ ಅವರ ವಿಧಾನ ಭರವಸೆ ಇತ್ತಿತು. ದೇಹದ ಯಾವುದೇ ಕೋಶಸಮೂಹದ ಅಂಗ ಕ್ರಿಯಾಶೀಲವಿರದಿದ್ದರೆ, ಅದರ ಕಾರಣ ಆ ಅಂಗದ ಕೋಶಸಮೂಹಗಳು. ಅಂತಹ ಅಂಗಕ್ಕೆ ಬಾಹ್ಯ ಕೋಶಸಮೂಹದೊಂದಿಗೆ ಸಂಪರ್ಕವೇರ್ಪಡಿಸಿದರೆ, ಆ ವಿಶಿಷ್ಟ ಅಂಗವು ಮೊದಲಿನಂತೆ ಕ್ರಿಯಾಶೀಲವಾಗಲೇಬೇಕೆಂಬ ಬಲವಾದ ನಂಬಿಕೆಯುಂಟಾಯಿತು. ದೇಹದಿಂದ ಬೇರ್ಪಡಿಸಿದ ಹೃದಯ ಸ್ಪಂದಿಸುವುದು, ಬೇರ್ಪಡಿಸಿದ ಹೊಟ್ಟೆ ಪಚನಕ್ರಿಯೆ ನಡೆಸುವುದು ಸವಾಡವಲ್ಲವೆ? ಕೋಳಿಯ ಹೃದಯದ ತುಣುಕು ೧೫೦ ದಿನಗಳವರೆಗೆ ಕ್ರಿಯಾಶೀಲವಿತ್ತೆಂಬುದನ್ನು ಪ್ರಾತ್ಯಕ್ಷಿಕವಾಗಿ ತೋರಿಸಿದರು ಕಾರೆಲ್. ಗಾಯ ಮಾಯುವಾಗಲು, ಮುರಿದ ಎಲುವು ಹೊಂದಿಕೊಳ್ಳಲು, ಆ ಆ ಭಾಗಗಳ ಕೋಶಸಮೂಹಗಳು ಕ್ರಿಯಾಶೀಲವಿರುವುದವಶ್ಯ. ತೀವ್ರ ಗುಣವಾಗಲು, ಕೋಶ ನಿರ್ಮಾಣ ಹೆಚ್ಚು ಸಂಖ್ಯೆಯಲ್ಲಿ ಆಗುವುದು. ಆಗವು ಈ ತೀವ್ರತೆ ಸಾಧಿಸಲು ಕೃತ್ರಿಮ ಕೋಶವೃದ್ಧಿಯಾಗಲೇಬೇಕು. ಇಂತಹ ಸವಾಡವನ್ನು ಕಾರೆಲ್ ಸಾಧಿಸಿದರೂ, ವಿನಯ ಅವರನ್ನು ವಂಚಿಸಿಲ್ಲ. 'ನನ್ನೀ ಪ್ರಯೋಗಗಳು, ಕಾಣದುದನ್ನು ಕಂಡುಕೊಳ್ಳಲು ಮಾರ್ಗದರ್ಶನ ಮಾತ್ರ ಮಾಡಬಲ್ಲವು. ಈ ಮಾರ್ಗದರ್ಶನದಿಂದ ಮಾನವಕುಟುಂಬ ನಿರೋಗಿಯಾದರೆ ನನಗೆ ತುಂಬ ಸಂತೋಷ!' ಎಂದು ಉದ್ಗರಿಸಿದ್ದಾರೆ ಇವರು.

ರಕ್ತದಾನದ ಬಗೆಯನ್ನು ಕಂಡುಹಿಡಿದವರೇ ಕಾರೆಲ್ಲರು. ಈ ವಿಧಾನ ಕಂಡುಹಿಡಿದ ಕತೆ ಇಂತಿದೆ:— ಅದೊಂದು ದಿನ ಒಬ್ಬ ತಂದೆ ಪ್ರಲಾಪಿಸುತ್ತಾ ಡಾ॥ ಕಾರೆಲ್ಲರ ಬಳಿಗೆ ಧಾವಿಸಿದೆ. ಅವನ ಪುಟ್ಟ ಮಗುವಿಗೆ ತೀವ್ರವಾಗಿ ರಕ್ತಸ್ರಾವ ನಡೆದಿತ್ತು. ಆ ಮಗುವನ್ನು ಸಾವಿನ ದವಡೆಯಿಂದ ಕಸ್ತುಕೊಳ್ಳಲು ಡಾ॥ ಕಾರೆಲ್ಲರನ್ನು ಪ್ರಾರ್ಥಿಸಿದ. ಹಾಗೆ ನೋಡಿದರೆ ಕಾರೆಲ್ಲರು ವೈದ್ಯವೃತ್ತಿಯಲ್ಲಿರಲಿಲ್ಲ. ಆದರೂ ಆ ತಂದೆಯನ್ನು ಇವರು ಹಿಂಬಾಲಿಸಿದರು. ಮಗುವನ್ನು ಸೂಕ್ಷ್ಮವಾಗಿ ಅವಲೋಕಿಸಿದರು. ಆ ಪುಟ್ಟ ಮಗುವಿನ ಮುಖ ರಕ್ತಸ್ರಾವದಿಂದಾಗಿ ಬಿಳಚಿಕೊಂಡಿತ್ತು. ಇನ್ನೇನು, ಕೆಲ ಕ್ಷಣಗಳಲ್ಲಿಯೇ ಮರಣ ನಿರೀಕ್ಷಿಸಬಹುದಾದ ವಿಲಕ್ಷಣ ಲಕ್ಷಣ. ಈ ಮಗು ಇನ್ನು ಕೇವಲ ೨೦ ನಿಮಿಷ ಮಾತ್ರ ಜೀವಧಾರಣೆ ಮಾಡಿದರೆ, ಇದನ್ನು ಬದುಕಿಸಬಲ್ಲೆನೆಂದು ಅವರ ಅಂತರಾತ್ಮ ನುಡಿಯಿತು. ಆ ಮಗುವಿನ ಸುತ್ತ ಕಾತರದ ಕಣ್ಣುಗಳನ್ನು ಕಂಡರು. ಮರುಕ್ಷಣವೇ ಕಾರೆಲ್ಲರು ಆ ಮಗುವಿನ ತಂದೆಗೆ ಮಗುವಿನ ಪಕ್ಕದಲ್ಲಿ ಮಲಗಲು ಹೇಳಿದರು. ಆ ತಂದೆಯ ತೋಳಿನ ಧಮನಿಗೆ ಆ ಮಗುವಿನ ಕಾಲಿನಲ್ಲಿಯ ರಕ್ತನಾಳದೊಂದಿಗೆ ಸಂಪರ್ಕವೇರ್ಪಡಿಸಿದರು; ಕ್ಷಣಾರ್ಧದಲ್ಲಿಯೇ ತಂದೆಯ ರಕ್ತ ಮಗುವಿನಲ್ಲಿ ಸೇರತೊಡಗಿತು. ಆಶ್ಚರ್ಯ! ಸುತ್ತಣವರ ಕೈ ಬೆರಳುಗಳು ಅವರ ತಲೆಗಳ ಮೇಲೆ ಧಾವಿಸಿದುವು. ಡಾಕ್ಟರ್ ಕಾರೆಲ್ ನೆಟ್ಟ ದೃಷ್ಟಿಯಿಂದ ಮಗುವನ್ನೇ ನಿರೀಕ್ಷಿಸಿದರು. ಅಲ್ಪಾವಧಿಯಲ್ಲಿಯೇ ಆ ಮಗು ಚೇತರಿಸಿಕೊಂಡಿತು.

'ಅಹಾ! ದೇವರು ದೊಡ್ಡವನು!' ಎಂದು ಎಲ್ಲರ ಬಾಯಿಂದ ಉದ್ಗಾರ ಹೊರಟಿತು ಈ ಮೊದಲು ಸಾವಿನೊಂದಿಗೆ ಸೆಣಸಾಡಿ, ವಿಜಯಿಯಾಗಿದ್ದ ಮಗು, ಅವನ ಮಗ್ಗುಲಲ್ಲಿಯೇ ರಕ್ತಸ್ರಾವದಿಂದಾಗಿ ಕೆಲಮಟ್ಟಿಗೆ ನಿಃಶಕ್ತನಾದ ತಂದೆ— ಇವರನ್ನು ಸಜಲನೇತ್ರಗಳಿಂದ ನೋಡಿದನು. ಈ ಸವಾಡಕ್ಕೆ ಕಾರಣಪುರುಷರಾದ ಕಾರೆಲ್ಲರನ್ನು ಕಂಡ ಜನರುಗಳಲ್ಲಿ ದೈನ್ಯತೆ ಇತ್ತು. ಎಂತಹ ಅಪೂರ್ವ ಪ್ರಯೋಗವಿದು? ಇಂದೂ ಈ ವಿಧಾನವನ್ನು ಅನುಕರಿಸಲಾಗುತ್ತಿದೆ. ನಗರ–ನಗರಗಳಲ್ಲಿ ರಕ್ತದಾನಪೂಡಲು ಸಶಕ್ತರಿಗೆ ಕೇಳಿಕೊಳ್ಳಲಾಗುತ್ತಿದೆ. ಸಂಗ್ರಹಿಸಿದ ರಕ್ತವು ಯುಕ್ತಕಾಲದಲ್ಲಿ ಉಪಯೋಗಿಸಲ್ಪಡುತ್ತಿದೆ.

೧೯೧೪ರಲ್ಲಿ ಮೊದಲನೆಯ ಮಹಾಯುದ್ಧ ತಲೆದೋರಿದಾಗ, ಮಾತೃಭೂಮಿಗೆ ಸೇವೆಸಲ್ಲಿಸಲು ಕಾರೆಲ್ ಕಟಿಬದ್ಧರಾದರು. ಮೇಜರ್ ಎಂದು ನಿಯಾಮಕರಾಗಿ, ಸೈನಿಕರ ಸುಶ್ರೂಷೆಯನ್ನು ಹೊತ್ತುಕೊಂಡರು. ಇವರೀ ಸೇವೆಯಲ್ಲಿ ಶಬ್ದಶಃ ಸಹಕರಿಸಿದವಳು ಶ್ರೀಮತಿ ಕಾರೆಲ್.

ಯುದ್ಧಕಾಲದಲ್ಲಿ ಅಸಂಖ್ಯ ಸೈನಿಕರು ಗಾಯಹೊಂದುತ್ತಿದ್ದರು. ಗಾಯಗಳು ಶೀಘ್ರವಾಗಿ ಮಾಯುವುದು ಅಗತ್ಯವಿತ್ತು. ಈ ಗಾಯಗಳು ಗುಣವಾಗುವ ಬಗೆ ಎಂತು?—ಎಂಬುದೇ ಕಾರೆಲ್ಲರಿಗೆ ಸಮಸ್ಯೆಯಾಗಿತ್ತು. ಸೋಂಕಿನ ಮೂಲವನ್ನೇ ಪೆಟ್ಟುಬೇಕೆಂದು ಕಾರೆಲ್ ಬಯಸಿದರು. ಹಾಗೆ ಮಾಡುವಾಗ, ಹೊರಗಿನಿಂದ ರೋಗಾಣುಗಳ ಸಂಪರ್ಕ ಬಾರದಂತೆ ರಕ್ಷಣೆವಹಿಸುವುದು ಅವಶ್ಯ. ಕೇವಲ ಗಾಯಕ್ಕೆ ಲೇಪನ ಮಾತ್ರ ಮಾಡುವುದರಿಂದ ಸಂಪೂರ್ಣ ಗುಣ ಕಾಣಬರದು. ಗಾಯಗೊಂಡ ಸ್ಥಳವನ್ನು ಕ್ರಿಮಿನಿರೋಧ ದ್ರವ ವ್ಯಾಪಿಸುವುದು ಅವಶ್ಯವಿದೆ. ಹೀಗೆ ಮಾಡುವುದರಿಂದ ಸೋಂಕುಕಾರಕ ಕ್ರಿಮಿಗಳ

ನಾಶ ಮಾಡಲು ಬರುವುದು. ಗಾಯಗೊಂಡ ಕೋಶಗಳಿಗೆಲ್ಲ ಈ ಕ್ರಿಮಿನಿರೋಧಕದೊಂದಿಗೆ ಮಜ್ಜನವಾದರೇನೇ ರೋಗಾಣುಗಳು ನಾಶ ಹೊಂದುವುದಲ್ಲದೇ ರೋಗಾಣುಗಳ ವೃದ್ಧಿಯೂ ತಡೆಯುವುದು. ಇಷ್ಟಾದ ಮೇಲೆ ಗಾಯ ಮಾಯುವುದು ಸಹಜವೆ. ಇದನ್ನು ಸಾಧಿಸಲು ಅವಶ್ಯವಾದುವುಗಳೆಂದರೆ— ೧) ಪರಿಣಾಮಕಾರೀ ಕ್ರಿಮಿ ನಿರೋಧಕ. ೨) ಈ ನಿರೋಧಕದ ಸೇಚನೆಯ ಕ್ರಮ.

ಪರಿಣಾಮಕಾರೀ ಕ್ರಿಮಿ ನಿರೋಧಕವನ್ನು ಡಾಕಿನ್ನನು ತಯಾರಿಸಿದನು. ಸಿಂಚನೆಗಾಗಿ ಉಪಯುಕ್ತ ಸಲಕರಣೆಗಳನ್ನು ಕಾರೆಲ್ಲರೇ ನಿಯೋಜಿಸಿದರು. ಈ ಪ್ರಯೋಗದಲ್ಲಿ ಕಾರೆಲ್ಲರಿಗೆ ಯಶಸ್ಸು ದೊರೆಯಿತು. ಅವರೀ ವಿಧಾನ ಅವರ ಶುಭನಾಮವನ್ನೇ ಹೊತ್ತುಕೊಂಡಿದೆ. ಈ ವಿಧಾನವಿಂದಾಗಿ ಗಾಯಗೊಂಡ ಅಸಂಖ್ಯಾತ ಸೈನಿಕರು ಬಹುಬೇಗ ಗುಣಮುಖರಾಗಿ ಕಾರೆಲ್ಲರನ್ನು ಹರಸುತ್ತ ಕಾರ್ಯೋನ್ಮುಖರಾದರು ಈ ಮೊದಲು ಗಾಯಗೊಂಡ ಸೈನಿಕರಲ್ಲಿ ಬಹುಜನ ಅಂಗವಿಕಲತೆಯನ್ನಾಗಲಿ, ಹೆಚ್ಚೀಕೆ ಸಾವನ್ನೇ ಅನೇಕ ಸಂದರ್ಭಗಳಲ್ಲಿ ಅಪ್ಪಬೇಕಾಗುತ್ತಿತ್ತು. ೧೯೧೨ರಲ್ಲಿ ಶ್ರೀಮತಿ ಕಾರೆಲ್ ಅಭಿಮಾನದ ಸಂಭ್ರಮದ ಉದ್ಗಾರ ತೆಗೆದರು: "ನಮ್ಮ ಆಸ್ಪತ್ರೆಯಲ್ಲಿ ಯುದ್ಧದಲ್ಲಾದ ಗಾಯಗಳಿಂದ ಮರಣಹೊಂದಿದವರೇ ಇಲ್ಲ. ಯಾರೂ ಅಂಗಹೀನರಾಗಿಲ್ಲ!" ಈ ಉದ್ಗಾರ ಹದಿನಾರಾಣೆ ಸತ್ಯ. ಇದರ ಬಗ್ಗೆ ಅಭಿಮಾನತಾಳಿದುದರಲ್ಲಿ ಆಶ್ಚರ್ಯವೇನಿಲ್ಲ. ಈ ವಿಧಾನವನ್ನು ಡಾ. ಕಾರೆಲ್ ಮತ್ತು ಡಾಕಿನ್ನರು ನ್ಯೂಯಾರ್ಕ್ ನಗರದಲ್ಲಿಯ ರಾಕ್‌ಫೆಲ್ಲರ ಸಭಾಗೃಹದಲ್ಲಿ ಸೇರಿದ ಯುಕ್ತ ಮತ್ತು ಮಿತ್ರರಾಷ್ಟ್ರಗಳ ಡಾಕ್ಟರರೆದುರು ವಿವರಿಸಿದರು. ಇವರೀ ಸೇವೆಗಾಗಿ ಫ್ರಾನ್ಸ್ ಮತ್ತು ಮಿತ್ರರಾಷ್ಟ್ರಗಳು ಗೌರವವನ್ನಿತ್ತಿವೆ. ಇದನ್ನು ಮನಗಂಡ ಫ್ರೆಂಚ್ ಸರಕಾರವು ಕಾರೆಲ್ಲರನ್ನು ಸಾರ್ವಜನಿಕ ಆರೋಗ್ಯ ಮಂಡಲಕ್ಕೆ ನಿಯಮಿಸಿಕೊಂಡಿತು.

೧೯೧೨ರಲ್ಲಿ ಕಾರೆಲ್ಲರಿಗೆ ಅತ್ಯಮೌಲ್ಯವಾದ ನೋಬೆಲ್ ಪಾರಿತೋಷಕ ದೊರೆಯಿತು. ಈ ಬಹುಮಾನ ದೊರೆತುದು ಅವರು ಕಂಡುಹಿಡಿದ ರಕ್ತನಾಳಗಳನ್ನು ಹೊಲಿಯುವ ಕ್ರಮಕ್ಕೆ ಹಾಗೂ ವಿವಿಧಾಂಗಗಳ ಕಸಿ ಮಾಡುವ ಕ್ರಮಕ್ಕೆ. ನೋಬೆಲ್ ಪಾರಿತೋಷಕ ಪಡೆದವರಲ್ಲಿ ಅಮೇರಿಕೆಯಲ್ಲಿ ಆಗ ಇವರು ಮೂರನೆಯವರು, ಅಮೇರಿಕೆಯ ಡಾಕ್ಟರರಲ್ಲಿ ಈ ಬಹುಮಾನಕ್ಕೆ ಪಾತ್ರರಾದವರಲ್ಲಿ ಇವರೇ ಪ್ರಪ್ರಥಮರು.

ಇವರು ಶ್ರೀಮತಿ ಕಾರೆಲ್ಲರನ್ನು ಪಡೆದುದು ೧೯೧೩ರಲ್ಲಿ. ಫ್ರಾನ್ಸಿನ ಸುಪ್ರಸಿದ್ಧ ಶಸ್ತ್ರಚಿಕಿತ್ಸಾತಜ್ಞರಾದ ಟಫಾಯರರ ಪ್ರಯೋಗ ಶಾಲೆಯಲ್ಲಿ ಈಕೆ ಕೆಲಸ ಮಾಡುತ್ತಿದ್ದರು; ಮುಂದೆ ಪಾಕ್ಟೆಸ್ ಡ-ಲಾ-ಮೇರಿಯವರನ್ನು ಈಕೆ ಮದುವೆಯಾದರು. ಅವರ ಮರಣಾನಂತರ ಈಕೆ ಮತ್ತೆ ಪ್ಯಾರಿಸ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಕಾರೆಲ್ಲರಿಗೆ ಇಲ್ಲಿಯೆ ಈಕೆಯ ಪರಿಚಯ ಹುಟ್ಟಿಸಿದುದು. ಕಾಲಾನುಕ್ರಮದಲ್ಲಿ ಪರಿಚಯ ಘನಿಷ್ಠವಾಗಿ ಪ್ರೇಮದಲ್ಲಿ ಮಾರ್ಪಟ್ಟು, ಸಹಧರ್ಮಿಣಿಯಾದರು. ರಾಕ್‌ಫೆಲರ್ ಸಂಸ್ಥೆಯ ಪ್ರಯೋಗಶಾಲೆಗಳಲ್ಲಿ ೩೦ ವರುಷ ಕಾಲ ಸೇವೆಸಲ್ಲಿಸಿ, ೧೯೩೯ರಲ್ಲಿ ಡಾ. ಕಾರೆಲ್ಲರು ಮಾತೃಭೂಮಿಗೆ ಮರಳಿದರು. ರಾಷ್ಟ್ರಕ್ಕೆ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುವ ಮಹೋದ್ದೇಶವನ್ನಿಟ್ಟುಕೊಂಡರು. ನಿವೃತ್ತಿಯ ನಂತರ ಕೃತ್ರಿಮ ಹೃದಯದ ಅಭ್ಯಾಸ ಕೈಕೊಂಡರು. ೧೯೩೫ರಲ್ಲಿ ಅಪೂರ್ವವಾದ, ಅನೋಘವಾದ ಬುದ್ಧಿಯ ಆಗರವಾದ *Man the unknown* (ಅವ್ಯಕ್ತ ಮಾನವ) ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಕೃತಿ ಬಹುಬೇಗ ಜನಪ್ರಿಯವಾಗಿ ಪುನರ್ಮುದ್ರಣಗಳನ್ನು ಪಡೆಯಿತು; ಪಡೆಯುತ್ತಲಿದೆ. ಈ ಗ್ರಂಥ ಇವರಿಗೆ ಅಜರಾಮರ ಪಟ್ಟವನ್ನಿಟ್ಟಿದೆ. ಈ ಗ್ರಂಥದಲ್ಲಿ ಇವರ ಧೀಮಂತಿಕೆಯನ್ನೂ, ವಿಜ್ಞಾನಿಯ ವಿಚಾರಗಳ ಒಳನೋಟವನ್ನೂ ನಾವು ಕಾಣಬಹುದು.

ಡಾಕ್ಟರ್ ಕಾರೆಲ್ಲರ ಪ್ರಯೋಗಗಳನ್ನು ಕುರಿತು ಹಾಗು ಅವರ ವ್ಯಕ್ತಿತ್ವವನ್ನು ಕುರಿತು ಇಂತು ಉದ್ಗಾರ ತೆಗೆಯಲಾಗಿದೆ: 'ಇವರಲ್ಲಿ ಫ್ರೆಂಚರಲ್ಲಿ ಕಾಣುವ ಕೆಚ್ಚಿದೆ. ಅಮೇರಿಕನ್ನರಲ್ಲಿರುವ ಉತ್ಸಾಹವಿದೆ. ಆದರೆ ಇವರಿಬ್ಬರಲ್ಲಿಯೂ ದುರ್ಮಿಳವಾದ ಸೌಜನ್ಯಮಾತ್ರ ಇವರಲ್ಲಿಯೇ ಇದೆ. ವಿಜ್ಞಾನ, ವಿಜ್ಞಾನಿ, ಶಿಕ್ಷಣ, ಸಮಾಜ, ಮಾನವತೆ, ಹೆಣ್ಣು-ಗಂಡು, ಧರ್ಮಪ್ರವೃತ್ತಿ, ಸಂತಾನನಿಯಮನ ಇವೇ ಮೊದಲಾದ ವಿಷಯಗಳ ಕುರಿತು ಇವರು ಗಹನವಾದ ಅಭ್ಯಾಸ ಕೈಕೊಂಡು, ಮೌಲಿಕ ಅಭಿಪ್ರಾಯಗಳನ್ನಿತ್ತು ಅಲ್ಲಲ್ಲಿ ಸೂಕ್ತ ಸಲಹೆಗಳನ್ನಿತ್ತಿದ್ದಾರೆ.

— ಕರ್ನಾಟಕದಲ್ಲಿಯೇ —

ಅತ್ಯುತ್ತಮವೆನಿಸಿದ

ಏಕೈಕ ಮಾಸಪತ್ರಿಕೆ

"ಜಯಂತಿ"

ತಪ್ಪದೇ ಓದಿರಿ.

ರವೀಂದ್ರರ ಮೂರು ಕವಿತೆಗಳು

ಅನುವಾದ : ಶೀ. ಚೆನ್ನವೀರ ಕಣವಿ ಎಂ. ಎ., ಧಾರವಾಡ

೧. ಮೋಡಗಳು

ಬಾನು ತನ್ನನವರತ ನೀಲಿಮೆಯ ದಿಟ್ಟಿಸುತ
ಕನಸುಗಳ ಕಾಣುತಿಹುದು;
ಮೋಡಗಳು ನಾವದರೆ ವಿಪರೀತ ಹುಚ್ಚುಗಳು
ನಮಗಿಲ್ಲ ಮನೆಯಾವುದು.

ನಿತ್ಯತೆಯ ಮುಕುಟದಲಿ ನಕ್ಷತ್ರ ಹೊಳೆಯುತಿವೆ
ಸ್ಥಿರ-ಲಿಖಿತ ರೂಪವಿಹುದು;
ನಮ್ಮದೋ ಬರಿ ಸೀಸಕಡ್ಡಿ ಬರೆದಂತಿಹುದು
ಮರುಚಣದಿ ಅಳಿಸಬಹುದು.

ವಾಯುರಂಗದಿ ಬಂದು ಮದ್ದಲೆಯ ಬಡಿಯುವುದು
ನಗೆಮಿಂಚನೆಸೆವ ಸಾತ್ರ—
ಅಲ್ಲದೆಯೆ, ನಮ್ಮ ನಗೆ ಮಳೆಸುರಿಸುವುದು ಸತ್ಯ
ಹುಡುಗಾಟವಲ್ಲ ಗುಡುಗು.

ಈಗಲೂ ಪ್ರತಿಫಲಕೆ ಕಾಲಪುರುಷನ ಕೂಡ
ಹಳ್ಳು ಸಾಧಿಸುತಿಲ್ಲ ನಾವು;
ಜೀವ ತುಂಬಿದ ಉಸಿರಿ ಊದಿಬಿಡುವುದು ದೂರ
ಹೆಸರೊಂದನೀವ ಮೊದಲೆ.

೨. ಯಾರವನು ?

ಯಾರವನು ಒಬ್ಬಂಟಿ ಎಚ್ಚರಿರುವವನು
ಮಲಗಿ ನಿದ್ರಿಸುತಿರುವ ಈ ಪೃಥ್ವಿಯಲ್ಲಿ,

ನಿಶ್ಶಬ್ದ ಎಲೆಗಳಲಿ ತೂಕಡಿಪ ಗಾಳಿಯಲ್ಲಿ ?
ಮೌನ ಮಲಗಿದ ಹಕ್ಕಿಗೂಡಿನಲ್ಲಿ

ಹೂವು ಮೊಗ್ಗುಗಳೆದೆಯ ಗುಪ್ತಕೇಂದ್ರದಲಿ ?
ಯಾರವನು ಏಕಾಕಿ ಎಚ್ಚರಿರುವವನು ?

ಇರುಳನೆದೆಯನು ತುಡಿಯುತಿರುವ ತಾರಾಗಣದಿ
ನನ್ನ ಇರವಿನ ನೋವಿನಾಳದಲ್ಲಿ
ಯಾರವನು ಒಬ್ಬಂಟಿ ಎಚ್ಚರಿರುವವನು ?

೩. ನೂರು ವರುಷಗಳನಂತರ

ನೂರು ವರುಷಗಳನಂತರ ನನ್ನ ಕವಿತೆಗಳ-
ನೋದುತಿಹ ಓದುಗನೆ ನೀನು ಯಾರು ?
ಈ ವಸಂತದ ವಿಪುಲ ವೈಭವದ ಸಿರಿಯಿಂದ
ಕಳುಹಲಾರೆನು ಹೊನ್ನಿನೆಳೆಯೊಂದನು.
ನಿನ್ನ ಬಾಗಿಲುಗಳನು ತೆರೆದು ನೋಡು:
ಅರಳಿರುವ ನಿನ್ನ ಹೂದೋಟದಲಿ ಸಂಚಯಿಸು
ನೂರು ವರುಷದ ಮೊದಲು ಮರೆಯಾದ ಹೂವುಗಳ
ನರುಗಂಪು ನೆನಹುಗಳನು–
ಆ ಹಿಂದೆ, ವಸಂತದೊಂದು ಮುಂಜಾವದಲಿ ಹಾಡಿ
ನೂರು ವರುಷಗಳಾಚೆ ಚಿಮ್ಮಿಸಿದ ಹರ್ಷಧ್ವನಿಯ
ಜೀವಂತ ಸಂತಸವ ನೀನನುಭವಿಸಬಹುದು.

★ ಆರೋಹಣ ★

[ಪೌರಾಣಿಕ ರೂಪಕ]

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

— ದೃಶ್ಯ ೩ —

[ದೇವಯಾನಿಯ ಅಂತಃಪುರ. ದಿವ್ಯಾಭರಣಭೂಷಿತಳಾಗಿ ಮುಖವು ಧರಿಸಿ, ದಿವ್ಯಾಸನದ ಮೇಲೆ ಕುಳಿತು ಚಿಂತಾಸಕ್ತಳಾಗಿದ್ದಾಳೆ ದೇವಯಾನಿ. ಅತ್ಯುತ್ಸಾಹದಿಂದ ಪತ್ರವೊಂದನ್ನು ತಂದ ಶಾಲಿನಿ, ದೇವಯಾನಿಯ ದುಗುಡ ತುಂಬಿದ ಮುಖ ನೋಡಿ ಚಕಿತಳಾಗುವಳು.]

ಶಾಲಿನಿ : (ಕಳವಳದಿಂದ ದೇವಯಾನಿಯ ಭುಜದ ಮೇಲೆ ಕೈಯಿಟ್ಟು) ಏನಾಯಿತು ಸಖಿ? ಏಕೆ ಈ ದುಗುಡ? ಸಕಲ ಸೌಭಾಗ್ಯವೂ ನಿನ್ನ ಕಾಲಡಿಯಲ್ಲಿರಲು ಏಕೀ ಚಿಂತೆ? ಇಲ್ಲಿ ನೋಡು, ವೃಷಪರ್ವ ಮಹಾರಾಜರಿಂದ ಪತ್ರ ಬಂದಿದೆ: ನಿನ್ನನ್ನೂ ನಿನ್ನ ಮುದ್ದು ಕಂದರನ್ನೂ ನೋಡಬೇಕೆಂದು ಬಹಳ ಹಂಬಲವಾಗಿದೆಯಂತೆ. ನಿನ್ನೆಲ್ಲರನ್ನೂ ಕರೆದುಕೊಂಡು ಬಂದು, ನಾಲ್ಕು ದಿನವಾದರೂ ಇದ್ದು ಹೋಗುವಂತೆ ನಿನ್ನ ಪತಿಗೆ ಪತ್ರ ಬರೆದಿದ್ದಾರೆ.

ದೇವ : (ಉತ್ಸುಕಳಾಗಿ) ಹೌದೇನು? ತಂದೆಯವರನ್ನು ನೋಡಬೇಕೆಂದು ನನ್ನ ಮನಸ್ಸು ಬಹಳ ಕಾತರಗೊಂಡಿದೆ. ಯದುವಿಗೆ ಯುವರಾಜಪಟ್ಟ ಕಟ್ಟುವ ನೇಳೆಗೆ ತಂದೆಯನ್ನು ಕರೆಸಿಕೊಳ್ಳುವುದೆಂದಿದ್ದೆ. ಯದು-ತುರ್ವಸು-ಮಾಲಿನಿಯರು ಸದಾ ತಾತನ ವಿಷಯ ಕೇಳುತ್ತಿರುವರು. ಇದೇನೋ ಒಳ್ಳೆಯ ಅವಕಾಶವೇ; ಆದರೆ ಆರ್ಯಪುತ್ರ ಏನೆನ್ನುವರೋ! [ಮತ್ತೆ ಚಿಂತಾಮಗ್ನಳಾಗಿ] ಈಚೆಗೇಕೋ ಅವರ ವರ್ತನೆಯೇ ಬದಲಿಸಿದೆ. ಅನ್ಯಮನಸ್ಕತೆ, ಅಸಹನೆ, ದುಗುಡ, ಶೀಘ್ರಕೋಪಗಳ ಹುತ್ತವಾಗಿದೆ ಅವರ ಮನಸ್ಸು. ನನ್ನ ಮನನೋಯುವ ಅಹಿತಕಾರ್ಯವನ್ನು ಕನಸಿನಲ್ಲೂ ನೆನೆಯದಿದ್ದವರು, ಈಗ ನನ್ನ ಮನೋಭಾವನೆಗೆ ಲಕ್ಷ್ಯವನ್ನೇ ಕೊಡುವುದಿಲ್ಲ. ಶಾಲಿನಿ, ನನಗಂತೂ ಈ ಬದಲಾವಣೆಗೆ ಕಾರಣ ಹೊಳೆಯದು. ನೀನಾದರೂ ಊಹಿಸಬಲ್ಲೆಯಾ?

ಶಾಲಿನಿ : [ಸಂತಯಿಸುತ್ತ] ಸಖಿ, ಸದಾ ವಸಂತಋತುವೇ ಇದ್ದೀತೆ? ಋತುಬದಲಾವಣೆಯಂತೆ ನಡೆವಳಿಕೆಯಲ್ಲೂ ವ್ಯತ್ಯಾಸವಾಗುವುದು ಸಹಜ; ಅಲ್ಲದೆ ಮಹಾರಾಜರಿಗೆ ರಾಜ್ಯಾಡಳಿತದ ನೂರೆಂಟು ಚಿಂತೆಗಳು. ಅದುವರಿಂದ ಅವರ ಮನಸ್ಸು ಪ್ರಕ್ಷುಬ್ಧವಾಗಿ ನಿನ್ನನ್ನು ನಿರ್ಲಕ್ಷ್ಯಿಸಿರಬಹುದು.

ದೇವ : [ಒಪ್ಪದೆ] ಇಲ್ಲ, ಇಲ್ಲ; ಇನ್ನೂ ಅಳವಾದ ಕಾರಣ ವಿರಬೇಕು. ಒಮ್ಮೆ ತಂದೆಯದರನ್ನು ಕಂಡು ಅವರೊಡನೆ ಈ ವಿಷಯ ಹೇಳಿಕೊಳ್ಳಬೇಕೆಂದಿದ್ದೆ; ಆದರೆ ನಾನು ಹೋಗಲು ಆರ್ಯಪುತ್ರ ಅನುಮತಿಸದಿದ್ದರೆ, ನನ್ನ ಮಾತಿಗೆ ಬೆಲೆಯಿಲ್ಲದಾಗುವುದೆಂದು ಕೇಳದಿದ್ದೆ.

ಶಾಲಿನಿ : ಪ್ರಭುಗಳಲ್ಲಿ ಯಾವ ದೋಷಕಂಡಿರುವೆ, ದೇವಯಾನಿ? ಅನ್ಯವನಿತಾಸಕ್ತರಾಗಿರುವರೆಂಬ ಸಂಶಯವಿದೆಯೇನು?

ದೇವ : ಹಾಗೇನಿಲ್ಲ. ಆರ್ಯಪುತ್ರ ಅನ್ಯವನಿತಾಸಕ್ತನಾದ ದಿನ ನನ್ನೆದೆಯೇ ಬಿರಿಯುವುದು. ನಮ್ಮ ಸಂಸಾರ, ಬಿಸಿಹಾಲಿಗೆ ಹೆಸಿಹುಳಿ ಹಿಂಡಿದಂತಾಗಿ ಒಡೆದುಹೋಗುವುದು. ಆರ್ಯಪುತ್ರ ನನ್ನ ತಂದೆಗೆ ವಚನಕೊಟ್ಟಿರುವುದು ನಿನಗೆ ತಿಳಿಯದೇನು? ಆರ್ಯಪುತ್ರ ಎಂದೂ ವಚನಭ್ರಷ್ಟರಾಗಲಾರರು. [ಗುಟ್ಟು ಹೇಳುವವಳಂತೆ] ನಿನ್ನಲ್ಲೇಕೆ ಮುಚ್ಚುವರೆ ಸಖಿ! ಆರ್ಯಪುತ್ರ ಮದ್ಯಪಾನಾಸಕ್ತರಾಗಿದ್ದಾರೆ. ಮೊದಲು ಮಿತಿಯಲ್ಲಿದ್ದ ಪಾನ ಈಗ ಅತಿಯಾಗಿದೆ. ನನ್ನೆದುರಿಗೆ ಎಂದೂ ಅವರು ಪಾನಮಾಡುತ್ತಿರಲಿಲ್ಲ; ಈಗ ನಿರ್ಲಕ್ಷ್ಯದಿಂದ ನನ್ನೆದುರೇ ಮತ್ತೇರುವಷ್ಟು ಕುಡಿಯುತ್ತಾರೆ. [ದುಃಖದಿಂದ ತಲೆ ಗಟ್ಟಿಸಿಕೊಂಡು] ಸಖಿ, ಮೊನ್ನೆಯ ಆ ಅಪಮಾನವನ್ನು ಹೇಗೆ ಮರೆಯಲಿ.... ಹೇಗೆ ಮರೆಯಲಿ? [ಬಿಕ್ಕುವಳು].

ಶಾಲಿನಿ : [ಕಳವಳದಿಂದ] ಏನಾಯಿತು ಸಖಿ? ನನ್ನೊಡನೆಯೂ ಹೇಳಬಾರದೇ? ಒಳಗೆ ಅಡಗಿಸಿಟ್ಟ ದುಃಖದ ಒತ್ತಡ ಬಹು ಹೆಚ್ಚು. ಹೇಳು, ಸಖಿ!

ದೇವ : (ನಿಡುಸುಯ್ದು) ಹಾಯ್, ಯಾವ ಶುಭದ ಸುದ್ದಿಯೆಂದು ಹೇಳಲಿ, ಸಖಿ! ಸತಿ ಪತ್ನೈಷಿಣಿಯಂತೆ; ಮದ್ಯಪಾನ ನಿಷಿದ್ದವೆಂದು ನಾನು ಮೊದಲಿನಿಂದ ಹೇಳುತ್ತಿದ್ದೆ. ಮೊದಲು ನನ್ನೆದುರು ಎಂದೂ ಮದ್ಯಪಾನ ಮಾಡುತ್ತಿರಲಿಲ್ಲ. ತುರ್ವಸು ಹುಟ್ಟಿದಪಂತರ ನನ್ನೆದುರೇ ಮದ್ಯಪಾನಕ್ಕಾರಂಭಿಸಿದರು. ನಾನು ಮದ್ಯಪಾನದಿಂದಾಗುವ ಅನಾಹುತಗಳನ್ನು ಒತ್ತಿ ಒತ್ತಿ ಹೇಳುತ್ತಲಿದ್ದೆ. ಮೊನ್ನೆ ಮೊನ್ನೆ..... (ಬಿಕ್ಕುತ್ತಾ) ಹೇಗೆ ಹೇಳಲಿ ಸಖಿ?— ನನಗೂ ಬಲಾತ್ಕಾರವಾಗಿ ಮದಿರೆಯನ್ನು ಕುಡಿಸಿದರು. ಎಷ್ಟು ಬೇಡವೆಂದರೂ ನಿರೋಧಿಸಿದರೂ ಕೇಳದೆ, ಪಶುಬಲವನ್ನುಪಯೋಗಿಸಿ ಕುಡಿಸಿದರು. ಆವರ ಅಟ್ಟಹಾಸದ ನಗು ಇನ್ನೂ ನನ್ನ ಕಿವಿಗಳಲ್ಲಿ ಮೊರೆಯುತ್ತಿದೆ! ಸತಿಯು ಪತಿಯ ಛಾಯೆಯಂತಿರಬೇಕೆಂದೂ, ನನ್ನ ಶ್ರೇಷ್ಠತೆಯ ಭಾವನೆಯನ್ನು ಅಳಿಸಿಹಾಕಿದೆನೆಂದೂ ವಿಕಟಾಟ್ಟಹಾಸಗೈದರು. ಸಖಿ, ಈ ಅಪಮಾನವನ್ನು ಹೇಗೆ ಸಹಿಸಲಿ? ಹೀಗೆ ಮಾಡಬಹುದೇ? ಸತಿ ಕೇವಲ ಜೀವಂತವಿಗ್ರಹವೇ? ಪತಿಯ ಪತನ ತಡೆಗಟ್ಟುವುದು ಸತಿಯ ಕರ್ತವ್ಯವಲ್ಲವೇ? ಹಾಯ್, ನನ್ನೆದೆಯ ಬೇಗೆ ಮಾತಿಗೆ ನಿಲುಕದೆ, ಸಖಿ. (ನಿಡುಸುಯ್ಯುವಳು).

ಶಾಲಿನಿ: ಛೇ, ಛೇ, ಪಟ್ಟಮಹಿಷಿಯಾಗಿ ಭಾವೀ ಚಕ್ರವರ್ತಿಯ ಮಾತೆಯಾದ ನಿನಗೆ ಇದು ಸಲ್ಲದ ಅಪಮಾನ! ವ್ಯಸನಾಧೀನನಾದ ರಾಜ ಬಹುಬೇಗ ಭ್ರಷ್ಟನಾಗುತ್ತಾನೆ; ಪತಿತನಾಗುತ್ತಾನೆ ಗುರುಗಳ—ನುಂತ್ರಿಗಳ— ಹಿತವಾದವೂ ಮಹಾರಾಜರಿಗೆ ನಾಟುವಂತಿಲ್ಲವೇ?

ದೇವ: ಮಹಾರಾಜರ ಸ್ವಭಾವವೇ ಬದಲಿಸಿದೆ ಸಖಿ. ದರ್ಪ, ಅವಿನಯ, ಅಸಹನೆಗಳಿಂದ ಸದಾ ಮುಖಗಂಟಿಕ್ಕಿರುವರು. ಹಾಯ್ ನನ್ನ ದುರ್ವಿಧಿ! ಅಪಮಾನಕ್ಕೆ ಅಂತ್ಯವಾಗಲಿಲ್ಲ, ಸಖಿ! ಅಭ್ಯಾಸವಿಲ್ಲದೆ ಮದಿರಾಪಾನ ಮಾಡಿದಾಗ, ನಾನು ಏನೇನೋ ಪ್ರಲಾಪಿಸಿದೆನಂತೆ. ಮದಿರೆಯ ನೆನಪಿನೊಡನೆ ಕಚ ನನ್ನ ತಂದೆಯ ಒಡಲಹೊಕ್ಕು ಬಂದ ಘಟನೆ ಹೆಣೆದುಕೊಂಡಿದೆ. ಅರ್ಧ ಪ್ರಜ್ಞಾವಸ್ಥೆಯಲ್ಲಿ ಕಚನ ಬಗ್ಗೆ ವಿಲಪಿಸಿದೆನಂತೆ ನಾನು. ಪೂರ್ಣ ಪ್ರಜ್ಞೆ ತಿಳಿದಾಗ, ಆರ್ಯಪುತ್ರ ಇರಲಿಲ್ಲ. ಮರುದಿನ ಕಚನ ಪ್ರಕರಣದ ಬಗೆಗೆ ಹಂಗಿಸಿ ಭಂಗಿಸಿದರು. ನಾನು ಸತ್ಯವನ್ನು ತಿಳಿಸಿ, ತಂದೆಯವರನ್ನು ಬೇಕಾದಲ್ಲಿ ವಿಚಾರಿಸಿಕೊಳ್ಳಿರಿ—ಎಂದೆ. ಆ ಮಾತು ಕಿವಿಗೆ ಬೀಳದವರಂತೆ ಹಂಗಿಸಿ ಹೋದವರು, ಮತ್ತೆ ಇತ್ತ ಬಂದು ಮುಖ ತೋರಿಸಿಲ್ಲ.

ಶಾಲಿನಿ: ಈಗ ಪತ್ರ ಬಂದಿರುವುದರಿಂದ, ಮಹಾರಾಜರು ಇತ್ತಲೇ ಬರಬಹುದು. ಈ ಸಣ್ಣಪುಟ್ಟ ವಿಷಯಗಳಿಗೆಲ್ಲಾ ಹೆಚ್ಚು ಮಹತ್ತ್ವ ಕೊಡಬಾರದು. ಪ್ರಣಯದ ರಸಪಾಕಕ್ಕೆ ಕೋಪ ಕಲಹಗಳು ಮಸಾಲೆಯಂತೆ ರಂಜಕ! ಪ್ರಭುಗಳು ಬಹುಕಾಲ ನಿನ್ನ ಮೇಲೆ ಒಟ್ಟಾಗಿರಲಾರರು. ಪ್ರಭುಗಳಿಗೆ ನಿನ್ನನ್ನು ಕಂಡರೆ ಪ್ರಾಣ; ಪರದಾರಾ ಸೋದರರು! ಗುರುಕೃಪೆಯಿಂದ ಅವರ ವ್ಯಸನ ದೂರವಾಗಿ ಎಲ್ಲವೂ ಶುಭವಾಗುವುದು. ಚಿಂತೆ ಬಿಡು ಸಖಿ!

ದೇವ: ಹಾಗಾದರೆ ಸಾಕು! ನಾನಿಚ್ಛಿಸಿದಂತೆ ಆರ್ಯಪುತ್ರನ ಅನ್ಯಭಿಚಾರೀ ಪ್ರೇಮ ನನ್ನದಾಗಿದೆ. ಇತರ ಅರಸು ಅರಸಿಯರ ರೀತಿಯ ಕುಕ್ಕುಟಪ್ರೇಮವಲ್ಲ ನಮ್ಮದು. ಚಕ್ರವಾಕಗಳಂತೆ ನಿತ್ಯ ಪ್ರೇಮ ನಮ್ಮದು! ಆ ಭಾಗದಲ್ಲಿ ಮಹಾ ಪುಣ್ಯವತಿ ನಾನು!

ಶಾಲಿನಿ: ಅದೋ, ಪ್ರಭುಗಳು ಬಂದೇ ಬಿಟ್ಟರು. ಎಲ್ಲಿ, ಗೆಲುವಾಗಿ ಸ್ವಾಗತ ನೀಡು! (ಶಾಲಿನಿ ಅತ್ತ ಹೋಗುವಳು. ಯಯಾತಿಯ ಪ್ರವೇಶ–ಗಂಭೀರಭಾವದಿಂದ ಬರುವನು. ದೇವಯಾನಿ ಕುಳಿತುಕೊಳ್ಳಲು ಆಸನವನ್ನು ಮುಂದಿಡುವಳು.)

ಯಯಾತಿ: ವೃಷಪರ್ವ ಮಹಾರಾಜನಿಂದ ಬಂದ ಪತ್ರ ನೋಡಿದೆಯಾ? ನನಗಂತೂ ರಾಜಕಾರಣದಿಂದ ಎಲ್ಲಿಗೆ ಹೋಗಲೂ ಶಕ್ಯವಿಲ್ಲ; ನೀನು ಮಕ್ಕಳೊಂದಿಗೆ ಹೋಗಿ, ಎಲ್ಲರನ್ನೂ ನೋಡಿಕೊಂಡು ಸಾಲ್ಕಾರು ದಿನ ಇದ್ದು ಬಾ.

ದೇವ: (ವಿನೀತಳಾಗಿ ಹಣ್ಣುಗಳನ್ನು ಮುಂದಿಟ್ಟು) ದಣಿವಾರಿಸಿಕೊಳ್ಳಿ. ನೀವು ಹೀಗೆ ಕಾರ್ಯಮಗ್ನರಾಗಿರುವಾಗ ನಾನಲ್ಲಿಗೆ ಹೋಗಲು ಮನಸ್ಸಾಗದು. ನೀವು ಸಂಗಡ ಬರುವಂತಿದ್ದರೆ ಮಾತ್ರ ಹೊರಡುತ್ತೇನೆ. ನೀವೊಬ್ಬರಿದ್ದರೆ ನನ್ನ ಪ್ರಪಂಚ ತುಂಬಿರುತ್ತದೆ. ನಿಮ್ಮನ್ನು ಬಿಟ್ಟು ನಾನೆಲ್ಲಿಗೆ ಹೋದರೂ ನನ್ನ ಮನ ಇಲ್ಲೇ ಸಿಲುಕಿದ್ದು, ನನಗೆ ಹಿತವಿಲ್ಲದೆ ಹೋಗುತ್ತದೆ.

ಯಯಾತಿ: ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದೀಯಾ, ದೇವಿ!

ದೇವ: (ಕಾತರಳಾಗಿ) ನನ್ನನ್ನು ಒತ್ತಾಯ ಮಾಡಬೇಡಿ, ಆರ್ಯಪುತ್ರ! ನಿಮ್ಮನ್ನಗಲಿ ಬೇರೆಡೆಗೆ ಹೋಗಲು ಒಂದು ದಿನದ ಮಟ್ಟಿಗೂ ನಾನೊಪ್ಪಲಾರೆ. ಈಗ ತಾನೇ ಶಾಲಿನಿಯೊಡನೆ ಹೇಳುತ್ತಿದ್ದೆ. ನಾನು ಮಹಾಪುಣ್ಯವತಿಯೆಂದು. ನಿಮ್ಮ ಪ್ರೇಮ ನನ್ನದಾಗಿದೆ. ರಾಜ್ಯ-ಸಾಮ್ರಾಜ್ಯಗಳಿಗೆ ಬಿಲಿಕೊಡುವವಳಲ್ಲ ನಾನು—ನಿಮ್ಮ ಪ್ರೇಮಸಾಮ್ರಾಜ್ಯ ಮಾತ್ರ ನನ್ನದಾಗಿದ್ದರೆ ಸಾಕು! ನಮ್ಮದು ಚಕ್ರವಾಕಗಳ ಸಂಸಾರ; ಕುಕ್ಕುಟ ಸಂಸಾರವಲ್ಲ—ಎಂದು ಶಾಲಿನಿಗೆ ಹೇಳಿದೆ. ನೀವು ಬಂದರೆ ಮಾತ್ರ ನಾನು ಹೊರಡುವೆ; ಇಲ್ಲದಿದ್ದರೆ ಯದುನಿಗೆ ಯುವರಾಜ್ಯಾಭಿಷೇಕವಾದ ಮೇಲೆ ಹೋಗಿಬರುವ!

ಯಯಾತಿ: (ಅಸಂತುಷ್ಟನಾಗಿ ಶತಪಥ ತಿರುಗುವನು.) (ಸ್ವಗತ) ಹಾಯ್, ದೇವಯಾನಿಯನ್ನು ಅತ್ತಸಾಗಹಾಕಿ, ಚಕ್ರವಾಕಗಳಂತೆ ನಿಶ್ಚಿಂತೆಯಿಂದಿರುವ ಎಂದರೆ, ಅದಕ್ಕೂ ಸಾಧ್ಯವಿಲ್ಲವಲ್ಲಾ! ಓ ನನ್ನ ಹೃದಯದ ಚಕೋರಿ, ದುರ್ಮುಖ್ಯಾ, ಪ್ರೇಮದೇವತೆಯೇ. ಅಯ್ಯೋ, ಈ ದೇವಯಾನಿಯ ಹಾವಭಾವ, ನಡೆ-ನುಡಿಗಳೆಲ್ಲ ಅಹಿತವಾಗಿ, ಅಸಹನೀಯವಾಗಿವೆ. ಇವಳ ಮಾತುಕತೆ ಕಿವಿಗೆ ಶೂಲವಾಗಿದೆ. ಇನ್ನೊಂದು ಕ್ಷಣವೂ ಇಲ್ಲಿ ನಿಲ್ಲಲಾರೆ. ಪ್ರಿಯರಮಣಿ, ನೀನಿರುವ ಸ್ವರ್ಗಧಾಮ ಬಿಟ್ಟು ಈ ನರಕದಲ್ಲಿ ಇನ್ನು ಕ್ಷಣವೂ ನಿಲ್ಲಲಾರೆ. ಅಹಾ, ನಿನ್ನ ರೂಪು, ಮಧುರಾಲಾಪ, ಆ ಮುಗ್ಧತೆ....ಅಹಾ. (ಹೊರಡುವನು.)

ದೇವ: [ಚಕಿತಳಾಗಿ] ಆರ್ಯಪುತ್ರ, ಹೊರಟೇಬಿಟ್ಟರಾ? ಹಣ್ಣು-ಹಾಲುಗಳನ್ನೂ ತೆಗೆದುಕೊಳ್ಳಲಿಲ್ಲಪಲ್ಲಾ! (ನಿರಾಶಳಾಗಿ) ಹಾಯ್, ಆರ್ಯಪುತ್ರ ದುಗುಡದಿಂದ ಹೋಗಿಯೇ ಬಿಟ್ಟರಲ್ಲಾ! ನನ್ನ ಹೃತ್ಪೂರ್ವಕ ಒಲವನ್ನು ತೋರಹೋದರೆ, ಆರ್ಯಪುತ್ರ ಅಸಂತುಷ್ಟರಾದರಲ್ಲಾ! ಎಂತಹ ಮಂದಭಾಗಿನಿ ನಾನು! [ಕಣ್ಣೀರು ತುಂಬಿಕೊಂಡು ಬಿಳ್ಕುವಳು.]

ಶಾಲಿನಿ: (ಪ್ರವೇಶಿಸಿ) ಇದೇನು ಸಖಿ? ಪಟ್ಟ ಮಹಿಷಿಯಾದ ನೀನು ಕಣ್ಣೀರಿಟ್ಟರೆ ದೇಶದ ಶ್ರೀಯೋಲಕ್ಷ್ಮಿಯೇ ಕಣ್ಣೀರಿಟ್ಟಂತೆ. ಅಳಬೇಡ ಸಖಿ!

ದೇವ: ಪಟ್ಟ ಮಹಿಷಿಯಾಗಿ ಅಳುತ್ತಿಲ್ಲ ಶಾಲಿನಿ! ನಿರ್ಲಕ್ಷ್ಯಿಸಲ್ಪಟ್ಟ ಪತ್ನಿಯಂತೆ ಅಳುತ್ತಿದ್ದೇನೆ!

ಶಾಲಿನಿ: (ಹಾಸ್ಯದಿಂದ) ಓ, ಹಾಗೋ? ನಿನ್ನ ಎದೆಯಾಳವನ್ನು ನೋಡಬಲ್ಲೆ; ಸರಿ, ನೀನು ಅಳುತ್ತಿರುವುದು ಸವತಿ ಮಾತ್ಸರ್ಯದಿಂದ!

ದೇವ: ಏನೆಂದೆ ಸಖಿ? ನನಗೆ ಸವತಿಯೇ? ಏನು ನಿನ್ನ ಮಾತು?

ಶಾಲಿನಿ : ಹಾಂ! ಅಷ್ಟು ಸಿಟ್ಟಾಗದಿರು, ಸಖಿ. ಪಟ್ಟಮಹಿಷಿಯ ಸವತಿ ಭೂವನಿತೆ! ರಾಜನ ಪ್ರಥಮ ಪ್ರಣಯಿನಿ ಭೂವನಿತೆ. ಅವಳ ಮೇಲೆ ಹೆಚ್ಚು ಗಮನವಿಟ್ಟು ನಿನ್ನನ್ನು ನಿರ್ಲಕ್ಷ್ಯಿಸುತ್ತಿರುವರೆಂದಲ್ಲವೇ ನಿನ್ನ ದೂರು?

ದೇವ : (ಸ್ಮಿತಳಾಗಿ) ಅಬ್ಬಾ, ಸವತಿಯ ಮಾತೆತ್ತಿ ಎಷ್ಟು ಬೇಗ ನನ್ನ ಹೃದಯವನ್ನು ಅಲ್ಲೋಲ-ಕಲ್ಲೋಲಗೊಳಿಸಿದೆ! ನಿಜ, ಮಂತ್ರಾಲೋಚನೆ, ರಾಜ್ಯಭಾರಗಳತ್ತ ಆಸಕ್ತಿಯಿಲ್ಲದೆ, ಸಂಸಾರ ಸುಖಸಾಮ್ರಾಜ್ಯದಲ್ಲಿ ಲೋಲಳಾದೆ. ಒಲುಮೆಯ ಜೀವನವೇ ಅಪೈಶ್ವರ್ಯವೆಂದು ಭಾವಿಸಿದೆ. ಹಾಗೆ ಮಾಡಿದ್ದು ತಪ್ಪೇನೋ ಎನ್ನಿಸುತ್ತಿದೆ, ಈಗ ಆರ್ಯಪುತ್ರನ ಎಲ್ಲ ಕಾರ್ಯದಲ್ಲೂ ಸಮಪಾಲನ್ನು ಹಂಚಿಕೊಳ್ಳಬೇಕಾಗಿತ್ತೇನೋ! ಆದರೆ, ರಾಜನೀತಿಯನ್ನು ಅಪಾರ್ಥ ಮಾಡಿಕೊಂಡು ಅನಾಹುತ ಮಾಡಿದ ಶರ್ಮಿಷ್ಠೆಯ ಉದಾಹರಣೆ ಎದುರಿಗೇ ಇದ್ದಿತಲ್ಲಾ-ಅದಕಾರಣ ರಾಜನೀತಿಯ ಬಗ್ಗೆ ಅನಾಸಕ್ತಳಾದೆ.

ಶಾಲಿನಿ : ಸಖಿ, ಶರ್ಮಿಷ್ಠೆಯ ಬಗ್ಗೆ ಆಶ್ಚರ್ಯಿಯ ಸುದ್ದಿ ಕೇಳಿದೆ. ರಾಜಕುಮಾರರು ನಿನ್ನೆ ಹೇಳಿದರು:- ಶರ್ಮಿಷ್ಠೆಗೆ ಶೂರರಾದ ಮೂರು ಜನ ಮಕ್ಕಳಿರುವರಂತೆ. ನಿನ್ನೆ ರಾಜಕುಮಾರರು ಬೇಟೆಯಾಡಲು ಹೋದಾಗ, ಅವರೂ ಜೊತೆಯಾದರಂತೆ ಅವರ ಶೌರ್ಯ ಪರಾಕ್ರಮ ಕಂಡು ಮೆಚ್ಚಿ ವಿಚಾರಿಸಿದಾಗ, ಶರ್ಮಿಷ್ಠಾದಾಸಿಯ ಮಕ್ಕಳೆಂದು ಹೇಳಿದರಂತೆ.

ದೇವ : ಆಶ್ಚರ್ಯ! ಪುರುಷ ಪ್ರವೇಶನಿಲ್ಲದ ಅಂತಃಪುರೋದ್ಯಾನದಲ್ಲಿರುವ ಅವಳು ಹೇಗೆ ಪುತ್ರವತಿಯಾದಳು? ಇಷ್ಟು ಕಾಲ ನಮಗೇಕೆ ಯಾರೂ ಈ ಸುದ್ದಿ ತಿಳಿಸಲಿಲ್ಲ?

ಶಾಲಿನಿ : ಶರ್ಮಿಷ್ಠೆಯ ಬಗ್ಗೆ ನಾವು ವಿಚಾರಿಸಿದ್ದುಂಟೇ? ಅಸಕ್ತಿವ್ಯಕ್ತಪಡಿಸದಿರುವಾಗ ವಿಷಯವನ್ನಾರು ಹೇಳುತ್ತಾರೆ? ಅದೂ ಅರಮನೆಯ ದಾಸಿಯರಿಗೂ ಅವಳಿಗೂ ಸಂಪರ್ಕವೇ ಇಲ್ಲ. ಅನ್ನ-ಪಾನವನ್ನೊಯ್ಯುವ ಆ ದಾಸಿಯೊಬ್ಬಳಿಗೆ ವಿಷಯ ತಿಳಿದಿರಬೇಕು. ಅವಳೂ ಏಕೋ ಹೇಳಿಲ್ಲ!

ದೇವ : ಇರಲಿರಲಿ, ನಾನೇ ಸ್ವತಃ ಹೋಗಿ ವಿಚಾರಿಸುವ. ಶರ್ಮಿಷ್ಠೆಯ ಬಗ್ಗೆ ನನಗೆ ಸಿಟ್ಟೇನಿಲ್ಲ. ನನ್ನ ಸುಖದಲ್ಲಿ ಅವಳನ್ನು ಮರೆತೇ ಇದ್ದೆ. ಹೆಣ್ತನದ ಹಿರಿಯಾಶೆಯನ್ನು ತನ್ನದೇ ಆದ ಮಾರ್ಗದಿಂದ ಪೂರಯಿಸಿಕೊಂಡಿದ್ದಾಳೆ. ಆದರೆ ಅಂತಃಪುರೋದ್ಯಾನದಲ್ಲಿ ಇಂತಹ ಅಧರ್ಮ ನಡೆಯಬಾರದು. ಪುರುಷಪ್ರವೇಶವಿಲ್ಲದೆಡೆಯೆಂಬ ಪ್ರಸಿದ್ಧಿಗೇ ಊನ ಬಂದಿರುವುದಲ್ಲವೇ? ಅವಳನ್ನೇ ಕೇಳಿ ನಿಜ ತಿಳಿಯುವ, ನಡೆ!

ಶಾಲಿನಿ : ಹೌದೇ, ಅದೇ ಸರಿ. ಅವಳನ್ನು ನಾವು ಕಂಡು, ಅವಳ ಪ್ರಿಯಕರನ ರಹಸ್ಯವನ್ನು ಭೇದಿಸುವ!

[ಇಬ್ಬರೂ ಹೊರಡುವರು. ತೆರೆ ಬೀಳುವುದು.]

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ಸಂಜಸಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ.

(ಕನ್ನಡ ಸೀನು ಬಿಟ್ಟು)

ಯುನೈಟೆಡ್ ಕಸ್ಟರ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಕಾಳಿದಾಸನ ಸುಭಾಷಿತಗಳು

(ರಘುವಂಶ)

ಶ್ರೀ. ಎ. ಶಂಕರ ಕೆದಿಲಾಯ ಎಂ. ಎ. ಮದ್ರಾಸು ವಿಶ್ವವಿದ್ಯಾನಿಲಯ.

ಕಾಳಿದಾಸನ ಯಾವ ಕೃತಿಯಲ್ಲೇ ನೋಡಿರಿ; ಅದರಲ್ಲಿ ಅವನ ಅದರ್ಶ ಮಾನವನೀತಿ ಕಂಡುಬರುವುದು. ನಮ್ಮ ಇಂದಿನ ಸಾವಾಜಿಕರೂ ಶಾಸನಕಾರರೂ, ಅವನ ನೀತಿ-ನಿಯಮಗಳನ್ನು ಅನುಷ್ಠಾನಕ್ಕೆ ತಂದುಕೊಂಡರೆ, ವರ್ತಮಾನಕಾಲವೂ ಸಮತೆ-ಸೌಖ್ಯಗಳ ಆಗರವಾಗುವುದರಲ್ಲಿ ಸಂದೇಹವಿಲ್ಲ !

೧ ' ವಾಗರ್ಥಾವಿವ ಸಂಪೃಕ್ತೌ ವಾಗರ್ಥ ಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ' ॥ ೧-೧

ವಾಗರ್ಥಗಳ ಸರಿಯಾದ ಜ್ಞಾನಕ್ಕಾಗಿ, **ವಾಗರ್ಥಗಳಂತೆ ಯಾವಾಗಲೂ ಒಡನೆರೆದುಕೊಂಡಿರುವ** ಜಗತ್ತಿನ ತಾಯ್ತಂದೆಗಳಾದ ಪಾರ್ವತೀ-ಪರಮೇಶ್ವರರನ್ನು ವಂದಿಸುವೆನು

೨ ' ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ ।
ಪ್ರಾಂಶು ಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ ' ॥
೧-೨

ಕವಿಯ ಯಶಸ್ಸನ್ನು ಬಯಸುವ ಮಂದಬುದ್ಧಿಯವನು, ಉನ್ನತನಾದವನಿಗೆ ಮಾತ್ರ ಎಟಕುವ ಫಲಕ್ಕೆ ಆಶಿಸಿ, ಲೋಭದಿಂದ ಕೈಗಳನ್ನೆತ್ತಿದ ಕುಳ್ಳನಂತೆ, ನಾನು ಅಪಹಾಸ್ಯಕ್ಕೆ ಎಡೆಯಾಗಿರುವೆನು.

೩ 'ತ್ಯಾಗಾಯ ಸಂಭೃತಾರ್ಥಾನಾಂ ಸತ್ಯಾಯ ಮಿತಭಾಷಿಣಾಂ ।
ಯಶಸೇ ವಿಜಿಗೀಷೂಣಾಂ ಪ್ರಜಾಯೈ ಗೃಹಮೇಧಿನಾಂ' ॥
೧-೭

(ರಘುಕುಲದ ಅರಸರು) ತ್ಯಾಗಕ್ಕೆಂದು ಸಂಪತ್ತನ್ನು ಗಳಿಸಿದರು. ಸತ್ಯವನ್ನು ಕಾಪಾಡಲು ಮಿತಭಾಷಿಗಳಾದರು. ಯಶಸ್ಸನ್ನು ಪಡೆಯಲು ಜಯವನ್ನಿಚ್ಛಿಸಿದರು. ಸಂತಾನವನ್ನು ಪಡೆಯಲು ಗೃಹಸ್ಥರಾದರು.

೪ 'ಶೈಶವೇಭ್ಯಸ್ತ ವಿದ್ಯಾನಾಂ ಯೌವನೇ ವಿಷಯೈಷಿಣಾಂ
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಂ'
೧-೮

ಬಾಲ್ಯದಲ್ಲಿ ವಿದ್ಯೆಯನ್ನು ಗಳಿಸಿದರು. ಯೌವನದಲ್ಲಿ ವಿಷಯಸುಖಗಳಿಗೆ ಮನಮಾಡಿದರು. ಮುಪ್ಪಿನಲ್ಲಿ ಮುನಿವೃತ್ತಿಯನ್ನನುಸರಿಸಿದರು. ಅಂತ್ಯದಲ್ಲಿ ಯೋಗದಲ್ಲಿ ಸ್ಥಿತರಾಗಿ ತನುವನ್ನು ತ್ಯಜಿಸಿದರು.

೫ ' ಆಕಾರ ಸದೃಶಪ್ರಜ್ಞಃ ಪ್ರಜ್ಞಯಾ ಸದೃಶಾಗಮಃ
ಆಗಮೈಃ ಸದೃಶಾರಂಭ ಆರಂಭ ಸದೃಶೋದಯಃ ' ॥ ೧-೧೫.

ಆಕಾರಕ್ಕೆ ಒಪ್ಪುವ ಬುದ್ಧಿಯೂ, ಬುದ್ಧಿಗೆ ಅನುಗುಣವಾದ ಆಗಮಜ್ಞತೆಯೂ, ಆಗಮಜ್ಞತೆಗೆ ಸದೃಶವಾದ ಆರಂಭವೂ, ಆರಂಭಕ್ಕೆ ಸರಿಸಮವಾದ ಫಲಸಿದ್ಧಿಯೂ (ಅತನಲ್ಲಿತ್ತು.)

೬ 'ಪ್ರಜಾನಾಮೇವ ಭೂತ್ಯರ್ಥಂ ಸತಾಭ್ಯೋ ಬಲಿಮಗ್ರಹೀತ್ ।
ಸಹಸ್ರಗುಣಮುತ್ಸೃಷ್ಟು ಮಾದತ್ತೇ ಹಿ ರಸಂ ರವಿಃ' ॥ ೧-೧೮.

ಪ್ರಜೆಗಳ ಏಳಿಗೆಗಾಗಿಯೇ (ಅವನು) ಕಾಣಿಕೆಯನ್ನು ತೆಗೆದುಕೊಂಡನು. ಸಾವಿರ ಪಾಲು ಹೆಚ್ಚು ಕೊಡಲೆಂದೇ ಸೂರ್ಯನು ನೀರನ್ನು ಹೀರುವನು.

೭ ' ಸ್ಥಿತ್ಯೈ ದಂಡಯತೋ ದಂಡ್ಯಾನ್ಪರಿಣೇತುಃ ಪ್ರಸೂತಯೇ ।
ಅಸ್ಯಾರ್ಥಕಾಮೌ ತಸ್ಯಾಸ್ತಾಂ ಧರ್ಮ ಏವ ಮನೀಷಿಣಃ ॥ '
೧-೨೫.

ಸ್ಥಿತಿಗಾಗಿ ಅಪರಾಧಿಗಳನ್ನು ಶಿಕ್ಷಿಸಿದನು. ಸಂತಾನಕ್ಕಾಗಿ ವಿವಾಹವಾದನು. ಜ್ಞಾನಿಯು ಅರ್ಥ-ಕಾಮುಗಳೂ ಕೂಡ ಧರ್ಮವನ್ನೆ ಸಾಧಿಸುವುವು.

೮ ' ದ್ವೇಷ್ಯೋಪಿ ಸಮ್ಮತಃ ಶಿಷ್ಟಸ್ತಸ್ಯಾರ್ತಸ್ಯ ಯಥೌಷಧಂ ।
ತ್ಯಾಜ್ಯೋ ದುಷ್ಟಃ ಪ್ರಿಯೋಸ್ಯಾಸೀದಂಗುಲೀವೋರಗಕ್ಷತಾ' ॥
೧-೩೮.

ಔಷಧವು ರೋಗಿಗೆ ಹೇಗೆಯೋ ಅಂತೆಯೇ ಶಿಷ್ಟನಾದವನು ಅಪ್ರಿಯನಾಗಿದ್ದರೂ ಅತನಿಗೆ ಸಮ್ಮತನಾಗಿದ್ದನು. ದುಷ್ಟನು ಪ್ರಿಯನಾಗಿದ್ದರೂ ಹಾವು ಕಚ್ಚಿದ ಬೆರಳಿನಂತೆ ಅತನು ತ್ಯಾಜ್ಯನಾಗಿದ್ದನು.

೯ 'ಪ್ರತಿಬಧ್ನಾತಿ ಶ್ರೇಯಃ ಪೂಜ್ಯಪೂಜಾವ್ಯತಿಕ್ರಮಃ' ೧-೬೯.

ಪೂಜ್ಯರ ಪೂಜನದಲ್ಲಿ ವ್ಯತಿಕ್ರಮವನ್ನು ತೋರುವುದು ಆತ್ಮಶ್ರೇಯಸ್ಸಿಗೆ ಪ್ರತಿಬಂಧಕವು.

೧೦ ' ಪದಂ ಹಿ ಸರ್ವತ್ರ ಗುಣೈರ್ನಿಧೀಯತೇ ' ೩-೬೨.
ಸರ್ವತ್ರವೂ ಗುಣವು ಮನ್ನಣೆಯನ್ನು ಪಡೆಯುವುದು.

೧೧ ' ಯಥಾ ಪ್ರಹ್ಲಾದನಾಚ್ಚಂದ್ರಃ ಪ್ರತಾಪಾತ್ತಪನೋ ಯಥಾ
ತಥೈವ ಸೋಭೂದನ್ವರ್ಥೋ ರಾಜಾ ಪ್ರಕೃತಿರಂಜನಾತ್ ' ೪-೧೨.

ಆಹ್ಲಾದಪಡಿಸುವುದರಿಂದ ಚಂದ್ರನು ಹೇಗೋ, ಪ್ರತಾಪದಿಂದ ಸೂರ್ಯನು ಹೇಗೋ, ಹಾಗೆಯೇ ಪ್ರಕೃತಿರಂಜನೆಯಿಂದ ರಾಜನು ಅನ್ವರ್ಥನಾಮನೆನಿಸಿದನು..

೧೨ ' ಪ್ರಣಿಪಾತ ಪ್ರತೀಕಾರಃ ಸಂರಂಭೋ ಹಿ ಮಹಾತ್ಮನಾಂ ' ೪-೬೪.

ಮಹಾತ್ಮರ ಕೋಪವು ಶತ್ರುವಿನ ನಮನ ಮಾತ್ರದಿಂದ ಶಾಂತವಾಗುವುದು.

೧೩ ' ಆದಾನಂ ಹಿ ವಿಸರ್ಗಾಯ ಸತಾಂ ವಾರಿಮುಚಾಮಿವ ' ೪-೮೬.

ಸಜ್ಜನರ ಸಂಪಾದನೆಯು ವಾರಿದ (ಮೋಡ) ಗಳಂತೆ ವಿತರಣೆಗಾಗಿಯೇ ಇರುವುದು.

೧೪ ' ಪರ್ಯಾಯ ಪೀತಸ್ಯ ಸುರೈರ್ಹಿಮಾಂಶೋಃ ಕಲಾಕ್ಷಯಃ
ಶ್ಲಾಘ್ಯತರೋಹಿ ವೃದ್ಧೇಃ ' ೫-೧೬.

ದೇವತೆಗಳು ಪರ್ಯಾಯದಿಂದ ಅಮೃತಪಾನ ಮಾಡಿದುದರಿಂದ ಆದ ಚಂದ್ರನ ಕಲಾಕ್ಷಯವು, ಆತನ ವೃದ್ಧಿಗಿಂತ ಶ್ಲಾಘ್ಯತರವಾಗಿದೆ.

೧೫ ....'ಭಿನ್ನರುಚಿರ್ಹಿ ಲೋಕಃ' ೬-೩೦.
ಲೋಕವು ಭಿನ್ನರುಚಿಯುಳ್ಳದು.

೧೬ 'ಗತೇಯಮಾತ್ಮಪ್ರತಿರೂಪತೇವ **ಮನೋಹಿ ಜನ್ಮಾಂತರ ಸಂಗತಿಜ್ಞಂ.** ೭-೧೫

ಜನ್ಮಾಂತರದ ಸಂಗತಿಯನ್ನು ಮನವು ತಿಳಿದಿದೆ.

೧೭ 'ಧೂಮೋ ನಿವರ್ತ್ಯೇತ ಸಮೀರಣೇನ ಯತಸ್ತು ಕಕ್ಷಸ್ಥತ ಏವ ವಹ್ನಿಂ' ೭-೫೫.

ಹೊಗೆಯು ಗಾಳಿಯಿಂದ ಓಡಿಸಲ್ಪಡುತ್ತದೆ; ಆದರೆ ಬೆಂಕಿಯು ಗರಿಕೆಹುಲ್ಲಿದ್ದಲ್ಲಿಯೇ ಉರಿಯುತ್ತದೆ.

೧೮ 'ಪ್ರತಿಕಾರ ವಿಧಾನಮಾಯುಷಃ ಸತಿ ಶೇಷೇ ಹಿ ಫಲಾಯ ಕಲ್ಪತೇ' ೮-೪೦.

ಆಯುಶ್ಶೇಷವಿದ್ದರೆ ಮಾತ್ರ ಪ್ರತಿಕಾರಸಾಧನಗಳು ಫಲಿಸುವುವು.

೧೯ 'ಅಭಿತಪ್ತಮಯೋಪಿ ಮಾರ್ದವಂ ಭಜತೇ ಕೈವ ಕಥಾ ಶರೀರಿಷು.' ೮-೪೩.

ಕಾಯಿಸಲು ಕಬ್ಬಿಣವೂ ಮೃದುವಾಗುವುದಿಂದ ಮೇಲೆ, ಮಾನವರ ಕುರಿತು ಹೇಳುವುದೇನು?

೨೦ 'ವಿಷಮಪ್ಯಮೃತಂ ಕ್ವಚಿದ್ಭವೇದಮೃತಂ ವಾ ವಿಷಮೀಶ್ವರೇಚ್ಛಯಾ' ೮-೪೬.

ಈಶ್ವರೇಚ್ಛೆಯಿಂದ ಅಮೃತವು ವಿಷವಾಗುವುದು; ವಿಷವೂ ಅಮೃತವಾಗುವುದು.

೨೧ 'ಪತಿಮೇತ್ಯಾ ಹಿ ನೃಪಾಃ ಕಲತ್ರಿಣಃ' ೮-೪೩.

ಭೂಮಿಯು ಅರಸರ ನಿಜವಾದ ಹೆಂಡತಿಯು.

೨೨ 'ಅಪಥೇ ಪದಮರ್ಪಯಂತಿ ಹಿ ಶ್ರುತವಂತೋಪಿ ರಜೋನಿಮೀಲಿತಾಃ' ೯-೭೪,

ಶ್ರುತವಂತರೂ ಕೂಡ, ರಜೋಮಿಲಿತರಾದಾಗ ದುರ್ಮಾರ್ಗದಲ್ಲಿ ಅಡಿಯಿಡುವರು.

೨೩ 'ಕೃಷ್ಯಾಂ ದಹನ್ನಪಿ ಖಲು ಕ್ಷಿತಿಮೀನೇದ್ಧೋ ಬೀಜಪ್ರರೋಹ ಜನನೀಂ ಜ್ವಲನಃ ಕರೋತಿ' ೯-೮೦.

ಇಂಧನದಿಂದ ಉರಿದೇಳುವ ಬೆಂಕಿಯು ಕೃಷಿಯ ಹೊಲವನ್ನು ಸುಟ್ಟರೂ, ಬೀಜಗಳ ಮೊಳಕೆಗೆ ಅನುಕೂಲವನ್ನು ಕಲ್ಪಿಸುವುದು.

೨೪ 'ಜನಯಿತ್ರೀಂ ಅಲಂಚಕ್ರೇ **ಯಃ ಪ್ರಶ್ರಯ ಇವ ಶ್ರಿಯಂ'** ೧೦-೭೦:

ವಿನಯವು ಐಶ್ವರ್ಯವನ್ನು ಅಲಂಕರಿಸುವಂತೆ ತನಯನು ತಾಯಿಯನ್ನು ಅಲಂಕರಿಸಿದನು.

೨೫ 'ಸಮ್ಯಗಾರಾಧಿತಾ ವಿದ್ಯಾ ಪ್ರಬೋಧವಿನಯಾವಿವ' ೧೦-೭೧

ಚೆನ್ನಾಗಿ ಕಲಿತ ವಿದ್ಯೆಯು ತತ್ತ್ವಜ್ಞಾನ ಇಂದ್ರಿಯಜಯಗಳನ್ನು ಉಂಟುಮಾಡುವುದು.

೨೬ 'ತೇಜಸಾಂ ಹಿ ನ ವಯಃ ಸಮೀಕ್ಷತೇ' ೧೧-೧.
ತೇಜಸ್ವಿಗಳಲ್ಲಿ ವಯಸ್ಸನ್ನು ಗಣಿಸುವುದಿಲ್ಲ.

೨೭ 'ಸದ್ಯ ಏವ ಸುಕೃತಾಂ ಹಿ ಪಶ್ಯತೇ ಕಲ್ಪವೃಕ್ಷ ಫಲಧರ್ಮಿ ಕಾಂಕ್ಷಿತಂ' ೧೧-೫೮.

ಸುಕೃತಿಗಳ ಕಾಂಕ್ಷೆಗಳು ಕಲ್ಪವೃಕ್ಷಫಲದಂತೆ ಒಡನೆಯೇ ಫಲವನ್ನು ಪಡೆಯುವುವು.

೨೮ 'ಕೇವಲೋಪಿ ಸುಭಗೋ ನವಾಂಬುದಃ ಕಿಂ ಪುನಸ್ತ್ರಿದಶ ಚಾಪಲಾಂಛಿತಃ' ೧೧-೬೦

ಹೊಸ ಮುಗಿಲು ಸದಾ ರಮಣೀಯವೇ. ಅದರಲ್ಲಿಯೂ ಅದು ಕಾಮನಬಿಲ್ಲಿನಿಂದ ಒಡಗೂಡಲು ಅದರ ಚೆಂದವನ್ನೆಸ್ಪು ಬಣ್ಣಿಸಲಿ!

೨೯ 'ನಿರ್ಜಿತೇಷು ತರಸಾ ತರಸ್ವಿನಾಂ ಶತ್ರುಷು ಪ್ರಣತಿರೇವ ಕೀರ್ತಯೇ' ೧೧-೮೯.

ಶಕ್ತಿಯಿಂದ ಜಿತರಾದ ವೈರಿಗಳಲ್ಲಿ, ವೀರರು ನಮ್ರತೆಯನ್ನು ತೋರುವುದು ಅವರ ಕೀರ್ತಿಗೆ ಕಾರಣ.

೩೦ 'ಅತ್ಯಾರೂಢೋ ಹಿ ನಾರೀಣಾಮಕಾಲಜ್ಞೋ ಮನೋಭವಃ' ೧೨–೩೩.

ಸ್ತ್ರೀಯರ ಮನೋಭವವು ಅತಿಯಾಗಿ ವರ್ಧಿಸಿದರೆ, ಅದು ಕಾಲವನ್ನು ತಿಳಿಯದು.

೩೧ 'ಕಾಲೇ ಖಲು ಸಮಾರಬ್ಧಾಃ ಫಲಂ ಬಧ್ನಂತಿ ನೀತಯಃ ೧೩-೬೯
ಸಕಾಲದಲ್ಲಿ ಕೈಕೊಂಡ ನೀತಿಗಳು ಸತ್ಫಲವನ್ನು ಪಡೆಯುವುವು.

೩೨ **'ಅಪಿ ಸ್ವದೇಹಾತ್ಕಿಮುತೇಂದ್ರಿಯಾರ್ಥಾ ದೃಶೋಧ-
ನಾನಾಂ ಹೀ ಯಶೋಗರಿಯಃ'** ೧೪–೩೪.

ಯಶೋಧನರ ದೃಷ್ಟಿಯಲ್ಲಿ ಅವರ ದೇಹಕ್ಕಿಂತಲೂ ಯಶಸ್ಸೇ ಹೆಚ್ಚಿನದಾಗಿರಲು, ಅವರಿಗೆ ಇತರ ಇಂದ್ರಿಯಸುಖಗಳಿಂದಲೇನು ?

೩೩ 'ಪ್ರತ್ಯಗ್ರಹೀದಗ್ರಜ ಶಾಸನಂ **ತದಾಜ್ಞಾ ಗುರೂಣಾಂ ಹ್ಯವಿ-
ಚಾರಣೇಯಾ** ೧೪–೪೬.

ಗುರುಗಳ ಆಜ್ಞೆಯು ಪ್ರಶ್ನಿಸತಕ್ಕುದಲ್ಲ.

೩೪ 'ತ್ರಾಣಾಭಾವಾ ಹಿ ಶಾಪಾಸ್ತ್ರಾಃ ಕುರ್ವಂತಿ ತಪಸೋ ವ್ಯಯಂ' ೧೫–೩

ಶಾಪವೇ ಅಸ್ತ್ರವಾಗಿರುವ ತಪೋಧನರು, ರಕ್ಷಕರಿಲ್ಲದಾಗ ಮಾತ್ರ ತಮ್ಮ ತಪಸ್ಸನ್ನು ವ್ಯಯಗೊಳಿಸುವರು.

೩೫ 'ಧರ್ಮಸಂರಕ್ಷಣಾರ್ಥೈವ ಪ್ರವೃತ್ತಿರ್ಭುವಿ ಶಾರ್ಙ್ಗಿಣಃ' ೧೫–೪

ಧರ್ಮರಕ್ಷಣೆಗಾಗಿಯೇ ವಿಷ್ಣುವು ಭೂಮಿಯಲ್ಲಿ ಅವತಾರವೆತ್ತಿರುವುದು.

೩೬ 'ಆಪವಾದ ಇವೋತ್ಸರ್ಗಂ ವ್ಯಾವರ್ತಯಿತುಮೀಶ್ವರಃ' ೧೫–೭

ಸಾಮಾನ್ಯ ನಿಯಮವನ್ನು ಒಂದು ಅಪವಾದವು ಉರುಳಿಸುವುದು.

೩೭ 'ರುರೋಧ **ಸಂಮುಖೀನೋ ಹಿ ಜಯೋ ರಂಧ್ರಪ್ರಹಾರಿಣಾಂ**' ೧೫–೧೭

ವೈರಿಯು ಮರ್ಮವನ್ನರಿತು ಹೊಡೆಯುವವರಿಗೆ ಜಯವು ಸಮ್ಮುಖದಲ್ಲಿಯೇ ಇದೆ.

೩೮ 'ಪ್ರಹ್ವೇಷ್ವನಿರ್ಬಂಧರುಷೋ ಹಿ ಸಂತಃ' ೧೬–೮೦
ಸಜ್ಜನರಿಗೆ ನಮ್ರರಾದವರಲ್ಲಿ ಅನಿಯತವಾದ ಕೋಪವಪ್ಪೇ.

೩೯ 'ಪಶ್ಚಿಮಾದ್ಯಾಮಿನೀಯಾಮಾತ್ಪ್ರಸಾದಮಿವ ಚೇತನಾ' ೧೭–೧.

ರಾತ್ರಿಯ ಕಡೆಯ ಯಾಮದಲ್ಲಿ ಚೇತನವು ನಿರ್ಮಲತೆಯನ್ನು ಪಡೆಯುವುದು

೪೦ **'ವಯೋರೂಪ ವಿಭೂತೀನಾಮೇಕೈಕಂ ಮದಕಾರಣಂ
ತಾನಿ ತಸ್ಮಿನ್ನಸಮ್ಭಾನಿ ನ ತಸ್ಯೋತ್ಸಿಸಿಚೇ ಮನಃ'** ೧೭–೪೩

ವಯಸ್ಸು, ರೂಪ, ವಿಭವ ಇವುಗಳಲ್ಲಿ ಒಂದೊಂದೂ ಮದಕ್ಕೆ ಕಾರಣವಾಗಿರುವುದು. ಅವೆಲ್ಲವೂ ಆತನಲ್ಲಿದ್ದರೂ ಆತನ ಮನಸ್ಸು ಅಹಂಭಾವವನ್ನು ಪಡೆಯಲಿಲ್ಲ.

೪೧ 'ಕಾತರ್ಯಂ ಕೇವಲಾನೀತಿಃ ಶೌರ್ಯಂ ಶ್ವಾಪದ ಚೇಷ್ಟಿತಂ' ೧೭–೪೭

ಶೌರ್ಯವಿಲ್ಲದ ಬರಿಯ ನಯವು ಹೇಡಿತನವು, ನಯವಿಲ್ಲದ ಬರಿಯ ಶೌರ್ಯವು ಪಶುಚೇಷ್ಟೆಯು.

೪೨ 'ದೃಷ್ಟದೋಷಮಪಿ ತನ್ನ ಸೋತ್ಯಜತ್
ಸಂಘವಸ್ತು ಭಿಷಜಾಮನಾಶ್ರವಃ
**ಸ್ಯಾದುಭಿಷ್ಟು ವಿಷಯೈರ್ಹೃತಸ್ಯತೋ
ದುಃಖಮಿಂದ್ರಿಯಗಣೋ ನಿವಾರ್ಯತೇ'** ೧೯–೪೯.

ಪ್ರಿಯವಾದ ವಿಷಯಸುಖಗಳಿಂದ ಹೃತವಾದ ಇಂದ್ರಿಯಗಣಗಳನ್ನು ನಿವಾರಿಸುವುದು ಕಷ್ಟಕರವು.

ಜಯಂತಿ
ಮಾಸ ಪತ್ರಿಕೆಗೆ
ಇಂದೇ
ಚಂದಾದಾರರಾಗಿರಿ

ಬುದ್ಧ ಸಂದೇಶ

ಡಾ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್

ಧರ್ಮದರ್ಶನ ಮುಖದಿ ಭವಕೆ ಅಭಯವನೊರೆದ
ತ್ಯಾಗಯೋಗದ ಸಿರಿಗೆ ನೆಲೆಯಾದ ಭಾರತದಿ
ದೇವಲೀಲೆಯ ತಾಣ-ಧವಲಗಿರಿ ಪರಿಸರದ
ತೆಂಕಣದ ಗಡಿಯೊಳಿಹ ನೇಪಾಲ ಜನಪದದಿ
ಭವತಾಪಹಾರಕ ನಿರಂಜನೆಯು ತಡಿಯಲ್ಲಿ
ಅಕ್ಷಯ್ಯ ಶಾಂತಿಸುಖ ಸೂಸುವೆಡೆಯಲ್ಲಿ—
ಮೂಡಿದನು ಭಾರತದ ಪೌರ್ಣಿಮೆಯ ಚಂದ್ರ,
ಮೂಡಣದ ಧರ್ಮಗುರು ನವಮಾನವೇಂದ್ರ.

ಮೂಸೆಯಲಿ ಮಿನುಗೆದ್ದ ಅಚ್ಚ ಕಡಪರದಂತೆ
ಬಿಸಿಲುಂಡು ಹಣ್ಣಾದ ತಿರಸದ ಮಾವಂತೆ
ಕೆನೆವಾಲಿನಲಿ ಕಡೆದ ಸವಿಬೆಣ್ಣೆಯಂತೆ
ತಿಳಗೊಳದಿ ಕಂಗೊಳಿಪ ತಾವರೆಯು ಸಿರಿಯಂತೆ
ಭವ್ಯದೇವಾಲಯದ ದಿವ್ಯಗೋಪುರವಂತೆ
ಬೆಳಗಿದನು ಕಾರುಣ್ಯಪರಿಪೂರ್ಣ ಚಂದ್ರ
ಮನುಕುಲದ ಭಾಗ್ಯಶ್ರೀ ಗೌತಮಮುನೀಂದ್ರ.

ಕಾರುಣ್ಯಸುಧೆ ಸುರಿದ ಭವದ ಭಾಗ್ಯದ ಚಂದ್ರ
ಜೀವದಯೆ ಮೈವೆತ್ತ ಮನುಧರ್ಮ ಸಾಂದ್ರ
ರಾಹುಸೋಂಕದ ಪ್ರೇಮ ಪೂರ್ಣಿಮೆಯ ಚಂದ್ರ
ಭವತಾಪ ಹಾರಕ— ಗೌತಮಮುನೀಂದ್ರ.

ತಂದೆ ಶುದ್ಧೋದನನ ಕಣ್ಣ ಬೆಳಕಾಗಿ
ತಾಯಿ ಮಾಯೆಯ ಮನುತೆಯಾ ಬೊಂಬೆಯಾಗಿ
ಸತಿವರೆಯಶೋಧರೆಯ ಪ್ರೀತಿವಲ್ಲಭನಾಗಿ
ಶಾಕ್ಯಕುಲ ವಿಭುವಾಗಿ, ಪ್ರಜಾಹೃದಯಪ್ರಭುವಾಗಿ
ಅರಮನೆಯ ಐಸಿರಿಯ ಸೊಗದ ಸಿರಿಮಡಲಲ್ಲಿ
ಬಿಸಿಲು, ಚಳಿ, ಮಳೆಗಾಳಿ ಸೋಂಕದಿರವಲ್ಲಿ
ಜರಾ-ರೋಗ-ಮರಣಗಳು ಸುಳಿಯದಿರುವಲ್ಲಿ
ಅಖಂಡ ಐಹಿಕ ಸುಖದ ತುಂಬುಸುಳಿಯಲ್ಲಿ
ಮೃದುಲತೆಯ ಸುನುದಂತೆ ಬೆಳೆದು ಬಂದನು ಕುವರ.

ವೇದನಿದ್ಯಾಸಿಪುಣ, ಬಿಲ್‌ಬಿಜ್ಜೆಯಲಿ ಚಾಣ,
ರಾಜಸುಖೋಪಭೋಗೈಕನಿರತ
ತನ್ನಂತೆ ಎಲ್ಲರೂ ಸುಖಿಗಳೆಂದು ಭಾವಿಸಿದನಾತ—
ಪ್ರಜರ ಜೀವನದಿ ಕಂಡುದೋ ಎಲ್ಲವೂ ವಿಪರೀತ-
ಒಂದೆಡೆಗೆ ಅಖಂಡ ಐಹಿಕ ಭೋಗಪರತೆ;
ಇನ್ನೊಂದೆಡೆಗೆ ಜರಾರೋಗರುಜಿನದಲಿ ನರಳುತಿಹ ನರತೆ.

ಕಾಯಸತ್ತ್ವವನೆಲ್ಲ ಹಿಂಡಿ ಹಿಪ್ಪೆಗೊಳಿಸುವ ಮುಪ್ಪು
ಪರಿಪರಿಯ ಭಾಧೆಗಳ ಬಿತ್ತುತಿಹ ರೋಗವಿಪತ್ತು
ಹೊತ್ತನರಿಯದೆ ಬಾಳಿನೆಳಬಳ್ಳಿಗೆರಗುವ ಮಿಳ್ತು-
ಮುಕ್ತುದಿಯ ಕುಲುಮೆಯಲಿ ಕುದಿದು ಬೆಂಡಾದವರ
ವಿಷಮ ವಿಧಿ, ವಿಷಮ ಸ್ಥಿತಿ, ವಿಷಮ ಗತಿಗಳ
ಕಠಿಣ ಕಾಲ್ತುಳಿತಕ್ಕೆ ಸಿಲುಕಿ ಹಣ್ಣಾದವರ
ಬಾಳ ಬಲ್‌ಬಟ್ಟೆಯಲಿ ಸನೆದು ಸಣ್ಣಾದವರ
ದುಃಖದಾರುಣತೆ, ದುರ್ಮಾನಗಳ ಕಂಡು
ಮಲಗಿದನು ಸಿದ್ಧಾರ್ಥ ನೊಂದ ಮನದವನಾಗಿ.

ಅರಮನೆಯ ಐಸಿರಿಗೆ, ವಿಷಯಸುಖಭೋಗಕ್ಕೆ
ಸ್ವಾರ್ಥಸುಖಲಾಲಸೆಗೆ, ಲೋಕಸ್ಥಿತಿ ವಂಚನೆಗೆ
ಹೇಸಿದನು ಸಿದ್ಧಾರ್ಥ ವಿರಕ್ತಮಾನಸನಾಗಿ.
ಕಾಲ್ಪಿಡಿಪ ಅರಮನೆಯ ಭೋಗಭಾಗ್ಯವ ತೊರೆದು
ಕೈಹಿಡಿದ ಮಡದಿ ಮಕ್ಕಳ ಮೋಹಜಾಲವ ಹರಿದು
ಕಗ್ಗಾಡಿನಲಿ ನಡೆದು, ವನವನವನಂಡೆಲೆದು
ಕಂಡವರ ಕೇಳಿದನು ಭವಭವಾಂತರ ದುಃಖವಿನೋಚನೆಯ ಗುರಿಯ.

ಬಾಳ ಬಲ್‌ದುಗುಡಗಳ ಅತಿವಮಯ ತಾಂಡವಕೆ
ಭವದ ಬೆನ್ನಲಿ ಬಂದ ಕಠೋರ ಕರ್ಮಚಕ್ರವ ಹತಿಗೆ
ಗಾಸಿಗೊಂಡಿಹ ಜನರ ದುಗುಡಕ್ಕೆ, ದೈನ್ಯಕ್ಕೆ
ತಲ್ಲಣಿಸಿ, ತತ್ತರಿಸಿ, ಬೋಧಿವೃಕ್ಷದ ತಣ್ಣೆಳಲನಾಪರಿಸಿ
ಮೌನಿಯಾದನು ಬುದ್ಧ ಧ್ಯಾನಮಾನಸನಾಗಿ.

ಶಮಿಯಾಗಿ, ಸಂಯಮಿಯಾಗಿ, ಮಾನವಪ್ರೇಮಿಯಾಗಿ
ಮಹಾಕಾರುಣಿಕ ಧ್ಯಾನಯೋಗದೊಳಿರಲು
ಮನದ ಕತ್ತಲೆ ಹರಿದು, ಬೆಳಗಿದುದು ನಿರ್ಮಲಜ್ಞಾನದ ಜ್ಯೋತಿ.

ಕಂಗಳಲಿ ಮಾನವಪ್ರೇಮದ ಶುಭಗಳುಂದರ ಕಾಂತಿ ಹೊಗರಾಡಿ
ಅಧರದಲಿ ಅನುಕಂಪ ಹರಿದಾಡಿ, ಹೃದಯದಲಿ ಕಾರುಣ್ಯ ತುಳುಕಾಡಿ
ಚಿತ್ತದಲಿ ಭವದ ಉದಾರ ಉದ್ಧಾರ ದರ್ಶನ ಮೂಡಿ
ಜ್ಞಾನದೀಪ್ತಿಗೆ ತೆರೆದ ಕರ್ತವ್ಯಪಥವನು ಕಂಡು
ತನುಮನದ ಶುದ್ಧಿಯಲಿ ಶೀಲಸಿದ್ಧಿಯ ಪಡೆದು
ಶ್ರುತಿತರ್ಕ ಯುಕ್ತಿಯಲಿ ಪ್ರಜ್ಞೆಯನು ಬೆಳೆದು
ಪುದುಬಾಳ್ಕೆಗಾಗುವ ಅಷ್ಟಾಂಗ ಮಾರ್ಗವನು
ಬೋಧಿಸಿದ ಸಿದ್ಧಾರ್ಥ ಭವತ್ರಸ್ತ ಮನುಕುಲಕೆ.

"ನಲ್‌ಕಾಣ್ಕೆ, ನಲ್‌ಕಜ್ಜ, ನಲ್‌ಬಗೆ, ನಲ್‌ನೆನಹು
ನಲ್‌ನುಡಿ, ನಲ್ ನಡತೆ, ನಲ್‌ಗುರಿ, ನಲ್‌ಬಾಳು"
ಇವೇ ಮನುಕುಲೋದ್ಧಾರಕ ಮಾನವ ವರೇಣ್ಯ
ಮಹಾಕಾರುಣಿಕ ಬುದ್ಧ ಬೋಧಿಸಿದ ಜೀವನದ ಸಂದೇಶ.
ಅವಿದ್ಯೆಯಂಧಕಾರವನುಳಿದು ಎದ್ದವನ ಸುಜ್ಞಾನ ಸಂದೇಶ
ಭವರೋಗ ಬಾಧೆಗಳ ಗೆದ್ದವನ ಕಾರುಣ್ಯ ಸಂದೇಶ
ಜೀವ ನಾಯಕನಾಗಿ ಭವನ ಉದ್ಧರಿಸಿಹನ ಭವ್ಯಸಂದೇಶ.

ವಿಷಯಸಂಗ ವಿದೂರನಾದರೂ ವಿಷಯ ಪೀಡಿತರ ಕೈವಾರಿ
ಪರಮವಿರಾಗಿಯಾದರೂ ದೀನಜನ ಅನುರಾಗಿ
ಶ್ರೀಬುದ್ಧ ಪ್ರವರ್ತಿಸಿದ ಧರ್ಮಚಕ್ರವು
ಸನ್ಮತಿಯ, ಸದ್‌ಗತಿಯನಿತ್ತು ಪೊರೆಯಲಿ ಜಗವ.
ಶಬ್ದವಾದ ಶುದ್ಧ ತಾರ್ಕಿಕರು ಬುದ್ಧತತ್ತ್ವವ ಹೀಗಳೆದರೇನು!
ಫಲಕೆ ಬೀಜವೇ ಮೂಲವೆಂದು, ಅದನು ಹೆಕ್ಕಿ ಹಿಸುಕಿದೊಡೆ
ಸಿಕ್ಕುವುವೆ ರಸ-ರುಚಿಗಳಲ್ಲಿ ?

ತ್ಯಾಗರರಿನಿಗೆಟುಕದಧ್ಯಾತ್ಮವೇಕೆ ?
ನಿಜಶಾಂತಿಗಾಗದಿಹ ಆಜ್ಯ ಆಹುತಿಯೇಕೆ ?
ಜ್ಞಾನದೀಪ್ತಿಗೆ ತೆರೆದ ಕರ್ತವ್ಯಪಥವೇ ಸಾಕು
ಮಾನವನ ಮುಕ್ತಿ ಸಾಧನಕೆ.

ಮಾನವನ ದುಃಖ ವಿಮೋಚನೆಗೆ, ಮಾನವನ ಚರಿತೆ
ದಯಾಪರತೆ, ಭೂತದಯೆ ಅನುಕಂಪ, ಮರುಕ
ಅನುರಾಗಗಳೆ ಸಿದ್ಧಿಸಾಧನಗಳೆಂದು ಸಾರಿರುವ
ಸೌಗತರ ಸಿದ್ಧಾಂತ ಸದ್‌ಗತಿಯ ತೋರಿಸಲಿ.

ಬಾಳಬರಿ ಉಡಿಯಲ್ಲಿ ಕಾರುಣ್ಯಸಿರಿ ಸುರಿದ ಶೂನ್ಯವಾದವೆ ಮೇಲು
ಬಾಳ ಬಲ್‌ಬಟ್ಟೆಯಲಿ ಬಂದ ಬನ್ನವ ತೊಡೆದ ಕ್ಷಣಿಕವಾದವೆ ಮಿಗಿಲು
ವಿಕಲಾತ್ಮರಲಿ ಸಕಲಭೂತದಯೆ ಬೋಧಿಸಿದ ನೈರಾತ್ಮ್ಯವಾದವೆ ಮೇಲು
ನರನ ಕ್ರುತುಶಕ್ತಿಯನು ಸುಕೃತದಲಿ ರೂಪಿಸಿದ ನಿರೀಶ್ವರ ವಾದವೆ ಮಿಗಿಲು.

ವಾದಕ್ಕೆ ಪ್ರತಿವಾದ, ತರ್ಕಕೆ ವಿತರ್ಕಗಳ
ಹೂಡಿ ಹೊಡೆದಾಡುವುದು ಶಾಸ್ತ್ರಪ್ರಸಕ್ತಿ,
ಮರುಕಕ್ಕೆ, ದೈನ್ಯಕ್ಕೆ, ಬಾಳ ಬಲ್‌ದುಗುಡಕ್ಕೆ
ಮಿಡಿಯುವುದು ಮಾನವನ ಅಂತಃಕರಣ ಪ್ರವೃತ್ತಿ.
ವಿಜ್ಞಾನವಾದದಿ ಎದ್ದ ಕಾಳ್ಗಿಚ್ಚಿನಲಿ ಸಿಲುಕಿ
ನರನ ಬಾಳುವೆ ಬೂದಿಯಾಗದಿರಲಿ!
ಸುಜ್ಞಾನದಾಗಸದಿ ಬೆಳಗುತಿಹ ಯೋಗಿವರ
ಬುದ್ಧದೇವನ ಕರುಣೆ ಕಾಯ್ದು ಬರಲಿ!

ಆನಂದಕಂದ

ವ್ಯಕ್ತಿತ್ವ ಮತ್ತು ಕೃತಿಪರಿಚಯಾತ್ಮಕ ಸಾಹಿತ್ಯಗ್ರಂಥ

ಇದರಲ್ಲಿ 'ಆನಂದಕಂದ' (ಬೆಟಗೇರಿ ಕೃಷ್ಣಶರ್ಮ)ರ ಜೀವನ ಮತ್ತು ಸಾಹಿತ್ಯಕೃತಿಗಳನ್ನು
ಕುರಿತು ಬರೆದ ಬೇರೆ ಬೇರೆ ಸುಪ್ರಸಿದ್ಧ ಲೇಖಕರ ಲೇಖನಗಳಿರುವುವು. ಆನಂದಕಂದರ ಕವನ, ಸಣ್ಣಕಥೆ,
ಕಾದಂಬರಿ, ಪತ್ರಿಕಾಸಂಪಾದನೆ, ಬಾನುಲಿರೂಪಕ, ಸಂಸ್ಕೃತಿ ಸಂಶೋಧನೆ
ಇವುಗಳ ಹತ್ತಿರದ ಪರಿಚಯವನ್ನು ಪಡೆಯಬೇಕೆನ್ನುವವರು ಈ ಗ್ರಂಥವನ್ನು ಓದಲೇಬೇಕು.

— ಆನಂದಕಂದರ ಭಾವಾಚಿತ್ರಗಳೆರಡರ ಪಡಿಯಚ್ಚೂ ಇದರಲ್ಲಿವೆ. —

ಕ್ರಾ. ಅ. ೧೧೦ ಪುಟಗಳು × ಲಿಬಿ ೧ ರೂ. ೫೦ ನ. ಪೈ

ಬೇಕಾದವರು ಕೂಡಲೆ ಬರೆದು ತರಿಸಿಕೊಳ್ಳಬೇಕು

'ಜಯಂತಿ' ಕಾರ್ಯಾಲಯ, ಧಾರವಾಡ.

ಡಾ. ರಂ. ಶ್ರೀ. ಮುಗಳಿ

ಶ್ರೀ. ಅನಂತರಾವ ಕೆ. ಘೋಸಗೆ, ಸೇಡಬಾಳ

ಡಾ. ಮುಗಳಿ ರಂಗನಾಥರಾಯರು ತಮ್ಮ ಯಶಸ್ವೀ ಸಾಹಿತ್ಯನಿರ್ಮಿತಿಯಿಂದಲೂ ಸ್ವಾಧ್ಯಾಪನ ಕಾರ್ಯದಿಂದಲೂ ಕರ್ನಾಟಕ,— ಮಹಾರಾಷ್ಟ್ರಗಳಲ್ಲಿ ಬಹುಜನರಿಗೆ ಸುಪರಿಚಿತರು. ಇವರ ಕಾರ್ಯತಪಸ್ಸಿಗೆ ತಕ್ಕ ಫಲಗಳು ಮತ್ತೆ ಮತ್ತೆ ದೊರೆಯುತ್ತಿವೆ.

ಸುಡುಬೇಸಗೆಯ ದಿನಗಳು; ಅಲ್ಲಲ್ಲಿ ಮಧ್ಯಾಹ್ನದ ಎರಡು ಗಂಟೆಯ ಸಮಯವಾಗಿರಬಹುದು. ಸೆಕೆಯ ತಾಪ ಸಹಿಸಲಸಾಧ್ಯವಾಗಿತ್ತು. ಅಂತಹ ವೇಳೆಯಲ್ಲಿ ಆ ಬಂಗ್ಲೆಯ ಹೊರಬಾಗಿಲ ಬಳಿಯಲ್ಲಿದ್ದ ಕರೆಗಂಟೆಯ ನೆತ್ತಿಯನ್ನು ಕುಕ್ಕಿದೆವು. ಕೂಡಲೆ ಒಳಗಿನಿಂದ ಬಂದ ವಿದ್ಯಾರ್ಥಿ ಹೇಳಿದನು : "ಅವರು ಮನೆಯಲ್ಲಿಲ್ಲ. ಲಾಯಬ್ರರಿಯ ಕಡೆಗೆ ಹೋಗಿದ್ದಾರೆ."

"ಇಂತಹ ಉರಿಬಿಸಿಲಿನಲ್ಲಿ ಅಲ್ಲಿ ಏನು ಮಾಡುತಾರೋ? ಏನೋ!" ಸಂಗಡ ಇದ್ದ ನನ್ನ ಸ್ನೇಹಿತ ಗುಣುಗುಟ್ಟಿದ. ಇಬ್ಬರೂ ಉಸಿರ್ಗರೆದು ಬೆವರುಜ್ಜಿಕೊಂಡೊಮ್ಮೆ ಅಲ್ಲಿಂದ ಮೌನವಾಗಿಯೇ ಕಾಲೇಜಿನ ಗ್ರಂಥಾಲಯದ ಕೋಣೆಯೊಂದನ್ನು ಹೊಕ್ಕೆವು. ಸಂಕೋಚ, ಅಪರಿಚಿತತನದ ಭಯ-ಭೀತಿಗಳಿಂದ ಕುಗ್ಗಿಹೋದ ನಾವು ಅಲ್ಲಿ ತಡವರಿಸುತ್ತ ನಿಂತೆವು.

ತೆಳುವಾದ ದೇಹ; ನಿಂಬೆಹಣ್ಣಿನ ಬಣ್ಣ; ದುಂಡನೆಯ ಮುಖ; ಹೊಳೆಯುವ ನೇತ್ರ ಮಂಡಲಗಳಲ್ಲಿ ಸೃಷ್ಟಿಯನ್ನು ನೋಡುವ ಕವಿದೃಷ್ಟಿ ಅಡಗಿತ್ತು. ವಿಶಾಲವಾದ ಹಣೆ ಜ್ಞಾನ,—ಪ್ರತಿಭೆಗಳಿಗೆ ಆಗರವಾಗಿತ್ತು. ಕುಡಿಮೀಸೆಗಳ ಬೆಡಗಂತೂ ಬೇರೆಯೆ. ತಿಳುವಾದ ಧೋತರವೊಂದನ್ನುಟ್ಟುಕೊಂಡು, ಸ್ಥಿತಪ್ರಜ್ಞರಾಗಿ ಸಾಹಿತ್ಯೋಪಾಸನೆಯಲ್ಲಿ ಮೈಮರೆತಿದ್ದರು ಆ ಸಾಧಕರು.

ಹೋದ ನಾವು ಕ್ಷಣಹೊತ್ತು ಹಾಗೆಯೇ ನಿಂತೆವು ಅವರೇನೂ ಆ ಸಮಾಧಿಸ್ಥಿತಿಯನ್ನು ಬಿಟ್ಟು ಕದಲುವಂತೆ ಕಾಣಲಿಲ್ಲ. ಆಗ ಹುಸಿ ಕೆಮ್ಮು ಕೆಮ್ಮಿ, ನಾನೇ ಅವರ ದೃಷ್ಟಿಯನ್ನು ಹೊರಳಿಸಿದೆ. ಅನಂತರ ನಮಸ್ಕರಿಸಿ, ನಮ್ಮ ವಿಜ್ಞಾಪನೆಯನ್ನು ಅವರ ಮುಂದಿಟ್ಟೆವು.

"ಈಗ ಕೈತುಂಬ ಕೆಲಸವಿದೆ. ಬೇರೆ ಎಲ್ಲಿಯೂ ಹೋಗುವುದಾಗುವುದಿಲ್ಲ."

ಎಂದು ಮುಗುಳುನಗೆ ಸೂಸುತ್ತ ಹೇಳಿದರು ಶ್ರೀ. ಮುಗಳಿಯವರು. ನಮ್ಮ ಮುಖ ಕಪ್ಪಿಟ್ಟವು. ನನ್ನ ಸ್ನೇಹಿತನಂತೂ ತೀರ ನಿರಾಶನಾದಂತಾಗಿ, ನನ್ನನ್ನೇ ನೋಡತೊಡಗಿದ. ನಾನು ಅಳುಕುತ್ತ ಮತ್ತೊಮ್ಮೆ ಬಿನ್ನವಿಸಿದೆ:

"ಇದೇ ನಮ್ಮ ಆರಂಭದ ಉತ್ಸವ. ಹಳ್ಳಿಯಲ್ಲಿ ಮಹಾಪುರುಷರ ಜಯಂತಿಯ ಉತ್ಸವಗಳನ್ನು ಆಚರಿಸುವ ಬಗ್ಗೆ ಸರಿಯಾದ ಮಾರ್ಗವನ್ನು ತಮ್ಮಂಥವರೇ ನಮಗೆ ತೋರಿಸಬೇಕು."

"ಹೌದು. ಇದು ಪ್ರತಿಯೊರ್ವ ಸುಶಿಕ್ಷಿತನೂ ಮಾಡುವ ಕರ್ತವ್ಯವಾಗಿದೆ. ಆ-ದ-ರೆ-!"

"ಗಡಿನಾಡಿನ ಕನ್ನಡ ಜನ, ತಮ್ಮ ಮಾತುಗಳನ್ನು ಕೇಳಲು ಉತ್ಸುಕರಾಗಿದ್ದಾರೆ. ತಾವು ಬಡಿದಿದ್ದರೆ ಯಾವಯಾವ್ದನ್ನೋ ಶಾಹಿರ್ ಪವಾಡಗಳನ್ನೋ; ಉಜ್ಜ್ ರಾಜಕಾರಣಿಗಳ ಭಾಷಣಗಳನ್ನೋ ಏರ್ಪಡಿಸುವುದರಿಂದ ಜನತೆಗೆ, ಕನ್ನಡ ನಾಡಿನ ಬಗ್ಗೆ ತಪ್ಪು ಕಲ್ಪನೆಯುಂಟಾಗುವ ಸಂಭವವಿದೆ."

"ಆ್ಞ"

ವಿಸ್ಮಯಗೊಂಡು ಕೇಳಿದರು. ಪ್ರೊ. ರಂ. ಶ್ರೀ. ಮುಗಳಿಯವರು. ನಮ್ಮ ಮೌನವೇ ಅವರಿಗೆ ಉತ್ತರವಾಯಿತು. ಅವರ ನರನರಗಳಲ್ಲಿ ಕನ್ನಡ, ಕನ್ನಡ ಸಂಸ್ಕೃತಿ, ಕನ್ನಡ ನಾಡಿನ ರಕ್ತ ತೀವ್ರ ಗತಿಯಿಂದ ಹರಿಯಹತ್ತಿತು. ಕೂಡಲೇ ಉತ್ಸಾಹದಿಂದ ಮಾತು ಉಕ್ಕಿಬಂತು:—

"ಬಹಳ ಸಂತೋಷ!"

ಕೃತಜ್ಞತಾಭಾವದಿಂದ ನುತ್ತೊಮ್ಮೆ ವಂದಿಸಿದೆ.

"ಮತ್ತೆ ಯಾರು ಬರುತ್ತಾರೆ?"

"ಶ್ರೀ. ಖಿಜರ್ ಅಣ್ಣಾರಾಯರಿಗೆ ಆಮಂತ್ರಣ ಕೊಟ್ಟು ಬಂದಿದ್ದೇವೆ. ಅವರು ಒಪ್ಪಿಕೊಂಡಿದ್ದಾರೆ; ತಾವೂ ಬರಬಹುದೆಂದು ಬಲವಾಗಿ ನಂಬಿದ್ದಾರೆ."

"ಓ್ಞ ಹೋ. ಚೆನ್ನಾಯಿತು."

ನಾವು ಗೆಲುವ್ಳಳವರಾಗಿ ಅವರಿಂದ ಅಪ್ಪಣೆಪಡೆದು ಮರಳಿದೆವು. ದಾರಿಯಲ್ಲಿ ನನ್ನ ಸ್ನೇಹಿತ ಕೇಳಿದ "ನೀನೇನು ಮಾಟ ಮಾಡಿದಿರಿ? ಇಲ್ಲಸೆಂದವರು ಕೊನೆಯ ಮಾತನ್ನು ಕೇಳಿ ಒಮ್ಮೆಲೇ ಒಪ್ಪಿಕೊಂಡರಲ್ಲ!" "ಯಾರ ಮಾಟಕ್ಕೂ ಮೀರಿಸಲಸಾಧ್ಯವಾಗುವ ಜೀವನವಲ್ಲವದು! ಕನ್ನಡವನ್ನೇ ಸ್ವಾಣ ಮಾಡಿಕೊಂಡು ಕನ್ನಡವನ್ನು ಭಕ್ತರಾಗಿ ಅಕೆಯ ಸೇವೆಗಾಗಿ ತ್ರಿಕರಣವನ್ನೂ ಧಾರೆಯೆರೆಯಲು ಸಿದ್ಧರಾದ ಸಾಧನಾಜೀವಿಗಳವು!" ಎಂದು ಹೇಳಿ ಮಾತು ಮುಗಿಸಿದೆನೂ, ಆ ವ್ಯಕ್ತಿತ್ವದ ಪ್ರಭೆ ನಮ್ಮ ಹೃದಯದಲ್ಲಿ ಉಚ್ಚಳಿಯುವೆ ಮೂಡಿತು.

ಈ ಪ್ರಸಂಗ ನಡೆದದ್ದು ಇಂದಿಗೆ ಸುಮಾರು ಹತ್ತು ವರ್ಷಗಳ ಪೂರ್ವದಲ್ಲಿ. ಆಗ ನಾನು ಜೂಗುಳ ಕನ್ನಡಶಾಲೆಯಲ್ಲಿ ಶಿಕ್ಷಕನಾಗಿದ್ದೆ. ಅಲ್ಲಿಯ ತರುಣರನ್ನು ಕಟ್ಟಿಕೊಂಡು 'ಶಿವಜಯಂತಿ'

ಉತ್ಸವವನ್ನು ಯಥಾರ್ಥ ರೀತಿಯಲ್ಲಿ ನೆರವೇರಿಸುವ ಹಂಬಲದಿಂದಲೇ ನಾವು ಈ ಅತಿಥಿಗಳನ್ನು ಹುಡುಕಿಕೊಂಡು ಹೋದದ್ದು.

ಅಂದಿನಿಂದ ಮಾನ್ಯ ಮುಗಳಿಯವರನ್ನು ಸನಿಹದಿಂದ ಕಾಣುವ ಸಂದರ್ಭಗಳೆಷ್ಟೋ ನನಗೆ ಲಭಿಸಿವೆ. ಅವರ ಹಲವಾರು ಕೃತಿಗಳನ್ನು ಓದಿ ತಿಳಿದುಕೊಳ್ಳಲೂ ಯತ್ನಿಸಿರುವೆ. ಇದರಿಂದ ನಾನೊಂದು ಖಂಡಿತ ಅಭಿಪ್ರಾಯಕ್ಕೆ ಬಂದಿದ್ದೇನೆ: ಅವರ ವ್ಯಕ್ತಿಜೀವನದ ಪ್ರತಿಬಿಂಬವೇ ಕವಿವಾಣಿಯಾಗಿ ಹರಿದಿದೆಯೆನ್ನಬೇಕು. ಅಥವಾ ಕವಿವಾಣಿಯೇ ನಿತ್ಯಜೀವನದ ಉಸಿರಾಗಿದೆಯೆನ್ನಬೇಕು. ಹೀಗೆ ಸಾಹಿತ್ಯಿಕನ ಕೃತಿ-ಜೀವನಗಳು ಒಂದಕ್ಕೊಂದು ಪಾಸುಪೊಕ್ಕಾಗಿ ಹೆಣೆದಿವೆ ಸಾಧನಾ ಜೀವಿಗಳಾದ ಮುಗಳಿಯವರಲ್ಲಿ. 'ಕವಿಯಾದವ ಋಷಿಯಾಗಬೇಕು.' ಎನ್ನುವ ನುಡಿ ಕವಿ ಮುಗಳಿಯವರನ್ನು ಬಿಟ್ಟು ದೂರ ಸರಿದಿಲ್ಲ. ರಸ-ಋಷಿಯಾಗಿ, ಅಧ್ಯಾತ್ಮಜೀವಿಗಳಾಗಿ ಬಾಳನ್ನು ಹಸನುಗೊಳಿಸಿ-ಕೊಳ್ಳುತ್ತಿದ್ದಾರೆ. ಮಹರ್ಷಿ ಅರವಿಂದರನ್ನು, ಆ ಮಹಾನುಭಾವರ ತತ್ತ್ವಪ್ರಣಾಲಿಯನ್ನು ತಮ್ಮ ಹೃದಯಪೀಠದಲ್ಲಿಟ್ಟು ಪೂಜಿಸುತ್ತಾರೆ ಈ ಭಕ್ತ ರಂಗನಾಥರು. ಬೆಳಗಿನ ಜಾವಕ್ಕೆ ಒಮ್ಮೆ ಕೋಳಿ ಕೂಗುವು-ದನ್ನೇ ನೋಡಿತೀತು; ಆದರೆ ಈ ಉಪಾಸಕರಿಗೆ ಪಾಂಡೀಚೇರಿಯ-ಶ್ರೀಅರವಿಂದಾಶ್ರಮದ ದರ್ಶನ ಪಡೆಯದೆ ವರ್ಷ ಕಳೆಯದು.

ಕರ್ನಾಟಕದ ಹಿರಿಯರೊಬ್ಬರು, ಶ್ರೀ. ಮುಗಳಿಯವರು ಕನ್ನಡ ನಾಡಿನ ದಿಕ್ಪಾಲಕರೆಂದು ಸಂಬೋಧಿಸಿದುದರಲ್ಲಿ ಅತಿಶಯೋಕ್ತಿ-ಯೇನೂ ಇಲ್ಲ. ಉತ್ತರ ಕರ್ನಾಟಕದ ಸೀಮೆಗೆ ಕಣ್ಣಿನಂತಿರುವ ಈ ಕವಿಗಳು ಆದರ್ಶಗುರುಗಳೂ ಆಗಿದ್ದಾರೆ. ಕನ್ನಡೇತರ ಪ್ರದೇಶದ ಅಧೀನದ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರೂ, ಇವರಿಂದ ಪಾಠ ಹೇಳಿಸಿಕೊಳ್ಳಲು ಕನ್ನಡ ನಾಡಿನ ದಕ್ಷಿಣತುದಿಯ ವಿದ್ಯಾರ್ಥಿಗಳೂ ಧಾವಿಸಿ ಬರುತ್ತಾರೆ.

ಸ್ವಾಭಿಮಾನದ ಜೊತೆಗೆ ಸಮತಾಭಾವವೂ ಮುಗಳಿಯವರ ಹುಟ್ಟುಗುಣವಾಗಿದೆಯೆನ್ನಬೇಕು. ಎಂತಲೇ ಕನ್ನಡಿಗರ ಜನಮನ-ವನ್ನು ಗೆದ್ದಷ್ಟೇ ಮರಾಠಿಗರ ಹೃದಯವನ್ನೂ ಸೂರೆಗೊಂಡಿದ್ದಾರೆ. ಕನ್ನಡ ಸಾಹಿತ್ಯಿಕರೊಬ್ಬರು ಕನ್ನಡೇತರ ವಿಶ್ವವಿದ್ಯಾನಿಲಯದ ಡಾಕ್ಟ-ರೇಟ್‌ನಂತಹ ಅತ್ಯುಚ್ಚ ಪದವಿಯನ್ನು ಪಡೆದುದರಲ್ಲಿ ತುಂಬ ಔಚಿ-ತ್ಯವಿದೆ. ಡಾ. ಮುಗಳಿಯವರಿಗೆ ಇಂತಹ ಗೌರವ ದೊರೆತದ್ದು ಕನ್ನಡಿಗರಿಗೆ ನಿಜವಾಗಿಯೂ ಹೆಮ್ಮೆಯ ವಿಷಯವಾಗಿದೆ.

ಕನ್ನಡ ಸಾಹಿತ್ಯಾಕಾಶದಲ್ಲಿ ರಂ. ಶ್ರೀ. ಮುಗಳಿಯವರು ಪ್ರಕಾಶಮಾನವಾದ ಹಿರಿಯ ತಾರೆಯಾಗಿ ಹೊಳೆಯುತ್ತಿದ್ದಾರೆ. ಅವರಿಗೊಂದು ನಿಶ್ಚಿತ ಸ್ಥಾನವಿದೆ. ಸಾಹಿತ್ಯದ ವಿವಿಧ ಮುಖಗಳ-ಲ್ಲಿಯೂ ಕೃಷಿಸಂಡಿತರಂತೆ ಮುಗಳಿಯವರು ಕೃಷಿ ಮಾಡಿದ್ದಾರೆ. ಅವರು ಬರೆದ ಕಾದಂಬರಿಗಳಾದ 'ಚಾಳುರಿ', 'ಕಾರಣ ಪುರುಷ', 'ಅನ್ನ'ಗಳಲ್ಲಿ ಒಂದು ಹೊಸ ಪ್ರತಿಭೆ ಕಾಣುವಂತಿದೆ. ನಾಟಕಗಳನ್ನು ರಚಿಸುವುದರಲ್ಲಿಯಂತೂ ಅವರು ಎತ್ತಿದ ಕೈ. ಇದನ್ನು ಸಾರ್ಥಕ ಮಾಡಿಕೊಳ್ಳಲೆಂದೋ ಏನೋ, 'ಸಾಮುಧಾರಿ' 'ವಿಜಯ ಸಾಮ್ರಾಜ್ಯ' 'ಎತ್ತಿದ ಕೈ'ಗಳಂತಹ ಅತ್ಯುತ್ತಮ ನಾಟಕಗಳನ್ನು ಕನ್ನಡಕ್ಕೆ ನೀಡಿದ್ದಾರೆ. 'ಕನಸಿನ ಕೆಳದಿ' ಎಂಬ ಕಥಾಸಂಗ್ರಹವು ಭಾವಚೇತನ, ಪ್ರತಿಭೆ, ಸಂಸ್ಕಾರಗಳಿಂದ ಕೂಡಿ, ನಮಗೆ ಉತ್ತಮ ಮಾದರಿಯ ಕಥೆಗಳನ್ನು ನೀಡುವಂತಿದೆ.

ಕವಿಗಳಾದ 'ರಸಿಕರಂಗ'ರು ಕೋಮಲಕಂಠವನ್ನು ಪಡೆದಿ-ದ್ದಾರೆ. ಭಾವಜೀವಿಗಳಾಗಿ, ರಾಗ - ತಾಳಗಳಿಗನುಗುಣವಾಗಿ, ಮಧುರಸ್ವರದಿಂದ ಹಾಡುವ ಇವರು, ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡುತ್ತಾರೆ. ವಿಶ್ವಜೀವನದ ಚಿರಂತನಸತ್ಯವನ್ನು ಕವಿ ರತ್ನ-ವಾಣಿಯಿಂದ ಉಸುರುತ್ತಾನೆ ಎನ್ನಲು ಪ್ರತ್ಯಕ್ಷ ದೃಷ್ಟಾಂತವಾಗಿ ಮುಗಳಿಯವರ 'ಬಾಸಿಗ' ಕವನಸಂಗ್ರಹವನ್ನು ನಾವು ನೋಡ-ಬೇಕು. ಇನ್ನುಳಿದ ಸಂಗ್ರಹಗಳಾದ 'ಓಂ ಶಾಂತಿಃ' 'ಅಪಾರ ಕರುಣೆ' ಗಳಲ್ಲಿ ವ್ಯಕ್ತಿಗತ ಅನುಭವ, ಭಾವನಾಪ್ರಿಯತೆ, ಆಕಾಂಕ್ಷೆ-ಗಳು ಕಾವ್ಯಕನ್ನಡಿಯಲ್ಲಿ ಸಾಕಾರವಾಗಿ ಪ್ರತಿಫಲಿಸುವಂತಿವೆ.

'ಕವಿಯಾದವರು ವಿಮರ್ಶಕರಾಗಬಲ್ಲರೇ ?' ಎಂಬ ಶಂಕೆ-ಯನ್ನು ಮುಗಳಿಯವರ ಮಟ್ಟಿಗಾದರೂ ದೂರವಿರಿಸುವುದು ಒಳ್ಳೆದು. ಸಾಹಿತ್ಯದ ವಿವಿಧಮುಖಗಳ ಪರಿಶೋಧನೆಯ ಒರೆಗಲ್ಲಿನಂತಿರುವ 'ಸಾಹಿತ್ಯೋಪಾಸನೆ' ವಿಮರ್ಶಾಗ್ರಂಥವು ಚಿಕ್ಕ ಕನ್ನಡಿಯಂತಿದ್ದರೆ, 'ಕನ್ನಡ ಸಾಹಿತ್ಯ ಚರಿತ್ರೆ'ಯೆಂಬ ಬೃಹದ್ಗ್ರಂಥವು ನಮ್ಮ ಸಾಹಿ-ತ್ಯದ ನಿಲುಗನ್ನಡಿಯಾಗಿದೆ ಈ ಅಮೌಲ್ಯ ಕೃತಿಗೆ ನಮ್ಮ ಕೇಂದ್ರ ಸರಕಾರವು ಶ್ರೇಷ್ಠ ಬಹುಮಾನವನ್ನಿತ್ತು ಗೌರವಿಸಿದ್ದುದರಲ್ಲಿ, ಆ ಕೃತಿಯ ಘನತೆ ನಮಗೆ ಕಂಡು ಬರುವಂತಿದೆ.

ಶ್ರೇಷ್ಠ ಸಾಹಿತಿಗಳಾದ ಮುಗಳಿಯವರು ಆದರ್ಶ ಪ್ರೊಫೆಸರ-ರಾದ ಮುಗಳಿಯವರು, ಚತುರ ಆಡಳಿತಗಾರರೂ ಆಗಿದ್ದಾರೆ. ಈ ಬಗೆಯ ಶ್ರೀವಿಧಸತ್ತ್ವವನ್ನು ಗುರುತಿಸಿಯೇ ಈಗ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ಮಾಡಿದ್ದಾರೆ ಸಂಚಾಲಕ ವರ್ಗದವರು. ಇದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ರಂ. ಶ್ರೀ. ಮುಗಳಿಯವರದು ಪ್ರಭಾವಬೀರುವ ವ್ಯಕ್ತಿತ್ವ; ಮಾತು ಬೆಣ್ಣೆಯಂತೆ ಮೃದುವಾದರೂ ಸ್ಥಿರತೆ ಹೆಚ್ಚು. ಜಾಣ ವೈದ್ಯ ಕಹಿಯಾದ ಔಷಧವನ್ನು ಸಕ್ಕರೆಯಲ್ಲಿ ಸೇರಿಸಿಕೊಡುವಂತೆ, ವಿವೇಕ-ಯುಕ್ತ ನುಡಿಗಳನ್ನು ಹೇಳುತ್ತಾರೆ. ಸ್ವಭಾವ ಸ್ಫಟಿಕದಂತೆ ಶುಭ್ರ—ನಿರ್ಮಲ. ಅದರಲ್ಲಿ ಯಾವ ಕಲೆಗಳೂ ಇಲ್ಲ. ಒಳ ಹೊರಗೂ ಒಂದೇ. ಸಿಟ್ಟೆಂಬುದಂತೂ ಅವರ ಸನಿಹಕ್ಕೆ ಹಾಯದು. ಅವರು ಆದರ್ಶ ಜೀವನಿಗಳಿದ್ದಂತೆ ದೇವರು ಅವರಿಗೆ ಆದರ್ಶ ಪರಿವಾರವನ್ನೂ ನೀಡಿ-ದ್ದಾನೆ. ಶ್ರೀಯುತರ ಪತ್ನಿಯವರು ಆದರ್ಶಗೃಹಿಣಿಯರಾಗಿದ್ದಾರೆ. ಈ ಅನ್ಯೋನ್ಯ ದಂಪತಿಗಳ ಎರಡು ಕಣ್ಣುಗಳಂತಿರುವ ನಜ್ಜಿನ ಪರಿ-ಮಳ, ಅನಂದರು ಪುತ್ರಿ-ಪುತ್ರರಾಗಿ ಬಾಳ ನಂದನವನದಲ್ಲಿ ಪೂರ್ಣ ಬೆಳುದಿಂಗಳನ್ನು ಚೆಲ್ಲಿದ್ದಾರೆ.

ಶಿಕ್ಷಣತಜ್ಞರೂ, ಮೇಧಾವಿಗಳೂ ನುರಿತ ಆಡಳಿತಗಾರರೂ ಆದ ಡಾ. ಮುಗಳಿಯವರ ನೇತೃತ್ವದಲ್ಲಿ, ಕಾಲೇಜು ಉತ್ತರೋತ್ತರ-ವಾಗಿ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ●

ಮುಚ್ಚಂಜೆಯ ಮೆಲುಕು

(ಸಣ್ಣಕಥೆ*)

ಶ್ರೀ ಗೋವರ್ಧನಾಚಾರ್ಯ ಗಲಗಲಿ, ಎಂ. ಎ. ಬಿ. ಟಿ., ಧಾರವಾಡ

ಮಾನವನ, ಅದರಲ್ಲಿಯೂ ಮಾನಿನಿಯ ಮನದ ಆಶೆ-ಅಭಿಲಾಷೆಗಳು ಬೇರೆಯವರಿಗೆ ಗೊತ್ತಾಗುವುದು ಸಾಧ್ಯವೇ ಇಲ್ಲ. ಸಂಧ್ಯೆಯಂತಹರ ಮನದ ಅಸ್ಪಷ್ಟ ಆಶೆಗಳು ಸ್ವತಃ ತಮಗೇ ಗೊತ್ತಾಗುವುದಿಲ್ಲ. ಅದುದರಿಂದಲೇ ಹತ್ತಿಕ್ಕಿದ ಅವರ ಆಶೆ-ಅಭಿಲಾಷೆಗಳು, ಅವರ ಜೀವನನಾಟಕವನ್ನು ದುರಂತವಾಗಿಸುವುವು.

ನಾವೆಲ್ಲ ಅಂದು ಇದೇ ಭವ್ಯಭವನದಲ್ಲಿ ಸಮ್ಮಿಲಿತರಾಗಿದ್ದೆವು. ಅದೇಕೆ, ನನಗೆ ಇನ್ನೂ ನೆನಪಿದೆ, 'ರಿಕಾರ್ಡ್ ಸೆಕ್ಶನ್' ಎಂದು ಕರೆಯಲ್ಪಡುವ ಇದೇ ಈ ಕೋಣೆಯಲ್ಲಿಯೇ ನಾವು ಕಲೆತಿದ್ದೆವು. ನಾವೆಂದರೆ ನಾವು ಐವರು—ರೇಣುಕಾ, ಸುಜಾತಾ, ಅಪರ್ಣಾ, ಗೌರಿ ಮತ್ತು ನಾನು ! ಆಗ ಒಬ್ಬರದು ಮತ್ತೊಬ್ಬರಿಗೆ ಪರಿಚಯವಿರಲಿಲ್ಲ.

ಸುಜಾತೆಯು ಈಗ ಮತ್ತೊಂದು ಆಫೀಸಿನಲ್ಲಿ ಕೆಲಸ ಮಾಡಲು ತೊಡಗಿದ್ದಾಳೆ. ಗೌರಿಯು ಈ ಆಫೀಸನ್ನು ತೊರೆದಳು; ಆದರೆ ತೊರೆದುದು ಬೇರೊಂದು ಕಚೇರಿಯಲ್ಲಿ ಕೆಲಸ ಮಾಡಲಿಕ್ಕಲ್ಲ; ಮುದುನೆಯಾಗಿ, ಧೃಷ್ಟ ಪುಷ್ಟ ಮಗುವನ್ನು ಹೆತ್ತು, ಈಗವಳು ಒಂದು ಸುಖಸಂತೋಷದ ಆಗರವಾದ ಕುಟುಂಬದ ಯಜಮಾನತಿಯಾಗಿದ್ದಾಳೆ.

ನನಗೆ ಇನ್ನೂ ನೆನಪಿದೆ: ಹೇಗೆ ಅಂದು, ಆ ಮೊದಲ ದಿನ, ನಾನು ನೇಮಣೂಕಿಯ ಹುಕುಮನ್ನು ಬೆವೆತ ಕೈಯಲ್ಲಿ ಹಿಡಿದು ಕೊಂಡು, ದಿಙ್ಮೂಢಳಾಗಿ, ಈ ಕಚೇರಿಯ ಗೇಟಿನ ಬದಿಗೆ ನಿಂತಿದ್ದೆ. ಹೊರಬದಿಯಿಂದ ಈ ಕಟ್ಟಡವನ್ನು ನಾನು ಎಷ್ಟೋ ಸಲ ಕಂಡಿದ್ದರೂ ಒಳಗೆ ಕುರ್ಚಿಯ ಮೇಲೆ ಕುಳಿತವರು, ಅತ್ತಿಂದಿತ್ತ ಓಡಾಡುವವರು, ಆಗ ಬೇರೊಂದು ಲೋಕದ ಮನುಷ್ಯರಂತೇ ಕಂಡರು. ಯಾವುದೋ ಒಂದು ರಹಸ್ಯಲೋಕದಲ್ಲಿ ಕಾಲಿಟ್ಟಿದ್ದೇನೆ—ಎಂದು ಭಾಸವಾಯಿತು. ಯಾರನ್ನೂ ಮಾತನಾಡಿಸುವ ಧೈರ್ಯ ನನಗಾಗಲಿಲ್ಲ. ಕೊನೆಗೆ ಒಬ್ಬನು ನನ್ನ ಅವಸ್ಥೆಯನ್ನು ನೋಡಿ, ಕನಿಕರಬಟ್ಟು ಮಾರ್ಗದರ್ಶನ ತೋರಿಸಿದನು. ನನಗೆ ಸಂತೋಷವಾಯಿತು; ಆತ್ಮವಿಶ್ವಾಸವೂ ಹುಟ್ಟಿತು. ಅವನು ಹೇಳಿದಂತೆ ಮುಂದೆ ಸಾಗಿ ಲಿಫ್ಟಿನೆಡೆಗೆ ಬಂದೆ. ಪುನಃ ಅನುಮಾನಕ್ಕೆಡೆಯಿಟ್ಟಿತು "ಸಾಲಾಗಿ ಕ್ಯೂದಲ್ಲಿ ನಿಂತ ಆ ಪುರುಷರ ಜೊತೆಗೆ ನಾನೂ ಈ 'ಲಿಫ್ಟ್'ನ್ನು ಉಪಯೋಗಿಸಬಹುದೋ ? ಛೆ ! ಅಂ ರೂಪಾಯಿಗಳ ಪ್ರಾರಂಭಿಕ ವೇತನದ ಮೇಲೆ ಇದೇ ನೇಮಣೂಕಿ ಪಡೆದ ಸ್ತ್ರೀನೌಕರಳಿಗೆ ಲಿಫ್ಟ್ ಉಪಯೋಗಿಸುವ ಅಧಿಕಾರವಿರಲಿಕ್ಕಿಲ್ಲ !" ಎಂದು ನಿರ್ಧರಿಸಿ, ಸಾವಕಾಶವಾಗಿ ಪಾವಟಿಗೆಗಳನ್ನು ಹತ್ತಲು ಮೊದಲು ಮಾಡಿದೆ. ಮೂರನೆಯ ಅಂತಸ್ತನ್ನು ತಲುಪಿ, ಅಲ್ಲಿಯು ಅಪಂಖ್ಯ ಕೋಣೆಗಳನ್ನು ಕಂಡು, ಪುನಃ ಗೊಂದಲದಲ್ಲಿ ಬಿದ್ದೆ. ಒಮ್ಮೆ ಇತ್ತ ಹೊಂಟೆ, ಇತ್ತ ನಡೆದೆ; ಬಲಕ್ಕೆ ಹೊರಳಿದೆ, ಎಡಕ್ಕೆ ತಿರುಗಿದೆ; ಆದರೆ 'ರಿಕಾರ್ಡ್ ಸೆಕ್ಶನ್' ಎಂದರೆ ಯಾವುದು ?' ಎಂಬುದನ್ನು ಮಾತ್ರ ಪತ್ತೆ ಹಚ್ಚುವುದು ನನ್ನಿಂದಾಗಲಿಲ್ಲ. ಕೊನೆಗೆ ಏನು ಮಾಡಬೇಕೆಂಬುದು ತಿಳಿಯದೆ, ಪುನಃಪುನಃ ರಿಸ್ಟ್‌ವಾಚಿನ ಕಡೆಗೆ ನೋಡುತ್ತ ನಿಂತೆ. ಪಗಡಿಯು ಪಟ್ಟಂತೆ ಸಾಲು ಸಾಲಾಗಿ ಕೋಣೆಗಳು ಕಂಡುವು. ಪ್ರತಿಯೊಂದರ ಬಾಗಿಲ ಬಳಿ ಸೀಪಾಯರು ಕುಳಿತಿದ್ದರು. ಅವರಲ್ಲಿ ಯಾರನ್ನೂ ಮಾತನಾಡಿಸುವ ಮನಸ್ಸಾಗಲಿಲ್ಲ. ಆದರೆ ಅವರೊಳಗೊಬ್ಬನು, ನನ್ನ ಮುಖದ ಮೇಲಿನ ಚಿಂತಾರೇಷೆಯನ್ನು ಕಂಡು, ಮಾತನಾಡಿಸಿ ಮಾರ್ಗದರ್ಶನ ಮಾಡಿದನು. ಅವನನ್ನು ಹಿಂಬಾಲಿಸಿ, ಕೊನೆಗೊಮ್ಮೆ ಈ ರಿಕಾರ್ಡ್ ಸೆಕ್ಶನ್ನಿಗೆ ಬಂದು ದೀರ್ಘ ನಿರ್ವಾಸವಿಟ್ಟೆನು. ಸುತ್ತಲೆಲ್ಲ ಮೇಜುಗಳು, ಮೇಜುಗಳ ಮೇಲೆ ಹಳೆಯ ರೆಕಾರ್ಡುಗಳು, ಹಳೆಯ ರೆಕಾರ್ಡುಗಳ ಮೇಲೆ ಹೊಸ ರೆಕಾರ್ಡುಗಳು; ಮೇಜುಗಳ ಹಿಂದೆ ಕಪಾಟುಗಳು. ಕಪಾಟುಗಳಲ್ಲಿಯೂ ರೆಕಾರ್ಡುಗಳು. ಇವುಗಳ ಹಿಂದೆ ಗೋಡೆಗೆ ಸಾಲಾಗಿ ರ್ಯಾಕುಗಳು, ಅವೂ ಕೂಡ ಫೈಲು-ರೆಕಾರ್ಡುಗಳಿಂದ ತುಂಬಿದ್ದುವು. ಎಲ್ಲಿ ನೋಡಿದಲ್ಲಿ ಧೂಳು! ಧೂಳಿ, ಧೂಳಿ, ಧೂಳಿ !

ಇವನ್ನೆಲ್ಲ ನನಗೆ ಕಂಡು ಜುಗುಪ್ಸೆಯಾಯಿತು. ಆದರೂ, ಸತ್ಯ ನುಡಿಯಬೇಕೆಂದರೆ, ಈ ಸನ್ನಿವೇಶವು ನನ್ನಲ್ಲಿ ಕಾತ್ಸಾರ ಹುಟ್ಟಿಸಲಿಲ್ಲ. ಈ ಸಕ್ಕನಿನಲ್ಲಿ ಒಬ್ಬ ಕಾರಕೂನನಾಗಿ ಕೆಲಸ ಮಾಡುವುದು! ಈ ವಿಚಾರವೆ ನಾವೀನ್ಯವೇ ರೋಮಾಂಚಕಾರಿಯಾಗಿತ್ತು. ಮರುಕ್ಷಣವೇ ಆಫೀಸಿನ ಡೆಸ್ಪ್ಯಾಟ್ ಚೀಫ್‌ನ ಕೋಣೆಯ ಎದುರು ಹೋಗಿ ನಿಂತೆ. ಮತ್ತೊಂದು ಸಮಸ್ಯೆ ಮೈದೋರಿತು: ಅವನೊಡನೆ ಇಂಗ್ಲೀಷಿನಲ್ಲಿ ಮಾತನಾಡಬೇಕೊ, ದೇಶಭಾಷೆಯಲ್ಲಿಯೋ ? ಈ ಪ್ರಶ್ನೆಯು

ಪುಟ ೧೧

*ಬಂಗಾಲೀ ಕಥೆಯೊಂದರ ಅನುವಾದ. ಲೇ—

ನನ್ನನ್ನು ಕಳೆದೆರಡು ದಿನಗಳಿಂದ ಕಾಡುತ್ತಿತ್ತು. ತಂದೆಯ ಅಭಿಪ್ರಾಯ ಇಂಗ್ಲಿಷಿನಲ್ಲಿಯೆ ಮಾತನಾಡಬೇಕೆಂದಿದ್ದರೆ, ಕಕ್ಕನು ಮಾತೃಭಾಷೆಯೇ ಒಳಿತೆಂದು ತೀರ್ಮಾನಿಸಿದ್ದನು. ನಿರ್ಣಯವನ್ನು ಮಾಡುವುದರೊಳಗೇ ಸೀಪಾಯಿಯು ಬಾಗಿಲ ತೆರೆದು, ನನ್ನನ್ನು ಕೋಣೆಯೊಳಗೆ ಕರೆದೊಯ್ದನು.

ಸ್ವತಃ ಆ ಅಧಿಕಾರಿಯೇ ದೇಶಭಾಷೆಯಲ್ಲಿ ಮಾತನ್ನು ಆಡಿ ನನ್ನ ಸಂಕಟವನ್ನು ಪರಿಹಾರ ಮಾಡಿದನು; ಕೂಡಲೇ ಈ ಸೆಕ್ಯನ್ನಿನ ಮುಖ್ಯಾಧಿಕಾರಿಗೆ ನನ್ನ ಪರಿಚಯಮಾಡಿಕೊಟ್ಟನು. ಅಲ್ಲಿಯೇ ನಿಂತಿದ್ದ ಸದಾನಂದಬಾಬು ಎಂಬ ಒಬ್ಬ ಹಿರಿಯ ಕಾರಕೂನನು ನನ್ನನ್ನು ನನ್ನ ಸ್ಥಳಕ್ಕೆ ಕರೆದೊಯ್ದನು. ಅಂದಿನಿಂದ ಇದು ನನ್ನದೇ ಆಗಿದೆ. ಈ ಕಚೇರಿಯಲ್ಲಿ ಆ ಮೊದಲ ದಿನವನ್ನು ಅದೆಂತಹ ಸಂಕಟದಲ್ಲಿ ಕಳೆದೆ ಎಂಬುದಿನ್ನಿಲ್ಲಿ ಹೇಳುವುದೇ ಬೇಡ. ಸದಾನಂದಬಾಬುವಿನ ಸಹಾಯವೊಂದಿರದಿದ್ದರೆ. ಪುನಃ ನಾನು ಈ ಕಚೇರಿಯಲ್ಲಿ ಕಾಲನ್ನೇ ಇಡುತ್ತಿರಲಿಲ್ಲ.

ತಲೆತುಂಬ ನರೆಗೂದಲು; ಹೊಲಸು ಅಂಗಿ; ಹೊಳಪುಹೋದ ರೋಲ್ಡ್‌ಗೋಲ್ಡಿನ ಕನ್ನಡಕ; ಯಾವಾಗಲೂ ತಂಬಾಕು ತಿನ್ನುವ ಬಾಯಿ– ಇಷ್ಟು ಹೇಳಿದರೆ ಸಾಕು, ಸದಾನಂದಬಾಬುವಿನ ಸಂಪೂರ್ಣ ಚಿತ್ರ ಕೊಟ್ಟಂತಾಗುವುದು. ಅವನು ನನ್ನೊಡನೆ ಸಂಭಾಷಣೆ ಪ್ರಾರಂಭಿಸಿದನು. ಅವನ ಧ್ವನಿಯಲ್ಲಿ ಪ್ರಾಮಾಣಿಕತೆಯಿತ್ತು. ಗಡ್ಡ ಬೆಳೆದ ಗದ್ದದ ಮೇಲೆ ಆಗಾಗ ಆತ ಕೈಯಾಡಿಸುತ್ತಿದ್ದನು. ಅವನನ್ನು ನೋಡಿದ ಕೂಡಲೇ ನನಗೆ ನಗೆ ಬಂದಿತು; ಆದರೆ ಅದನ್ನು ಹತ್ತಿಕ್ಕಿ ಮಾತನಾಡಲುತೊಡಗಿದೆ.

" ಪ್ರಾರಂಭದ ಕೆಲವು ದಿನ ಸ್ವಲ್ಪ ತಡೆ; ಹಾಗೂ ವಿಶ್ರಾಂತಿ ತೆಗೆದುಕೋ, ಮಿಸ್ ರಾಯ್! ಒಮ್ಮೆ ಕಾಗದ-ಪತ್ರಗಳೊಂದಿಗೆ ಕೆಲಸ ಪ್ರಾರಂಭಿಸಿದೆಯೆಂದರೆ, ತೀರಿತು; ಆ ಮೇಲೆ ನಿನಗೆ ವಿರಾಮ ವೆಂಬುದೇ ದೊರೆಯಲಿಕ್ಕಿಲ್ಲ" ಎಂದು ಅವನು ನುಡಿದನು. ಪ್ರತ್ಯುತ್ತರವಾಗಿ ನಾನು ಮಂದಹಾಸ ಬೀರಿದೆ. ಆ ದಿನ ಏನೂ ಕೆಲಸವಿಲ್ಲದೇ ಕಳೆಯಿತು.

ಅದೇ ದಿನವೇ ರೇಣುಕಾ, ಅಪರ್ಣಾ, ಸುಜಾತಾ, ಹಾಗೂ ಗೌರಿ ಇವರೂ ಈ ಕಚೇರಿಯಲ್ಲಿ ತಮ್ಮ ಜೀವನದ ಹೊಸ ಅಧ್ಯಾಯವನ್ನು ಪ್ರಾರಂಭಿಸಿದ್ದರು. ಔಪಚಾರಿಕವಾಗಿ ಪರಸ್ಪರ ಪರಿಚಯಕರಣದ ಹೊರತು ಆ ದಿನ ಹೆಚ್ಚಿಗೇನೂ ನಾವು ಮಾತನಾಡಲಿಲ್ಲ. ಇಲ್ಲಿಯ ಇತರ ಪುರುಷ ಸಹಕಾರ್ಯಕರ್ತರ ಬಗೆಗೆ ಹೇಳಬೇಕೆಂದರೆ, ನಾನು ಒಬ್ಬರ ಮುಖವನ್ನೂ ಕದ್ದು ಕೂಡ ನೋಡಲಿಲ್ಲ. ಗೌರಿ ಮಾತ್ರ ಹಾಗಲ್ಲ! ಅವಳು ನನ್ನಂತೆ ನಾಚುಗುಳಿ ಇರಲಿಲ್ಲ. ಸ್ವಲ್ಪ ದಿನಗಳಲ್ಲಿಯೇ, ಕೆಲವರೊಂದಿಗೆ ಅವಳು ಗೆಳೆತನ ಬೆಳೆಸಿದಳು. ನಮ್ಮ ಐವರಲ್ಲಿ ಮಿಕ್ಕವರಾರಿಗಿಂತಲೂ, ಅವಳೊಡನೆ ಆ ಜನ ಹೆಚ್ಚು ಮಾತನಾಡುತ್ತಿದ್ದರು. ಇದು ಸ್ವಾಭಾವಿಕವೇ! ಯಾಕೆಂದರೆ, ನಮಗಿಂತ ಅವಳು ಸ್ವಲ್ಪ ಭಿನ್ನಪ್ರಕೃತಿಯವಳು! ಮುಖವು ಸುಂದರ, ಆಕಾರವು ಆಕರ್ಷಕ. ಹೊಸ ಹೊಸ ವಸ್ತ್ರಾಭರಣಗಳನ್ನೂ ಧರಿಸುತ್ತಿದ್ದಳು. ಪ್ರಸಂಗ ಬಂದಾಗ ಮುಕ್ತಕಂಠದಿಂದ ಮಾತನಾಡುತ್ತಿದ್ದಳು.

ಮರುದಿನ ನಾನು ಕಚೇರಿಗೆ ಸರಿಯಾದ ಸಮಯಕ್ಕೆ ಹಾಜರಾದೆ. ಡ್ರಾಯರಿನಿಂದ ಸೀಸ್‌ಪೇನ್ಸಿಲ್, ಟಾಕು, ಪಿನ್‌ಕುಶನ್, ಪೇಪರ್‌ವೇಟ್, ಮೊದಲಾದುವನ್ನು ಹೊರಗೆಗೆದು, ಮೇಜಿನ ಮೇಲೆ ವ್ಯವಸ್ಥಿತವಾಗಿ ಇಟ್ಟುಕೊಂಡೆ. ಇದ್ದುದಿದ್ದಹಾಗೆ ನನಗೆ ನೀರಡಿಕೆಯಾಯಿತು. ಉಳಿದವರು ಸೀಪಾಯಿ ರಾಧಾನಾಥನನ್ನು ಕರೆದು ನೀರು ತರಲು ಹೇಳಿದರು. ನನಗೆ ಮಾತ್ರ ಸಂಕೋಚವೆನಿಸಿತು. ನನಗೂ ಇಷ್ಟು ನೀರು ತರಿಸಿಕೊಡಬೇಕೆಂದು ಸದಾನಂದಬಾಬುವಿಗೆ ಮೆಲ್ಲಗೆ ಉಸುರಿದೆ. ತನಗಾಗಿ ಅವನು ಒಂದು ಗ್ಲಾಸ್ ನೀರು ತರಿಸಿಕೊಂಡಿದ್ದನು; ಅದನ್ನೇ ನನ್ನ ಕಡೆಗೆ ಸರಿಸಿದನು. ಒಂದೇ ಗುಟುಕಿಗೆ ಅದನ್ನೆಲ್ಲ ಬರಿದು ಮಾಡಿದೆ. "ನನಗೇನಾದರೂ ಕೆಲಸ ಕೊಡಿರಿ" ಎಂದು ಕೇಳಿದೆ. ನನ್ನೆಡೆಗೆ ನೋಡಿ ಬಾಬು ಮುಗುಳುನಗೆ ನಕ್ಕನು. ಕೆಲವು ಫೈಲುಗಳನ್ನು ನನಗೆ ಕೊಟ್ಟು "ಇವುಗಳ ಮೇಲಷ್ಟು ಸದ್ಯಕ್ಕೆ ಕಣ್ಣು ಹಾಯಿಸು" ಎಂದು ಹೇಳಿದನು.

ಈ ನಡುವಯಸ್ಸಿನ ಸದ್ಗೃಹಸ್ಥನ ಮಾತು–ಕಥೆ, ರೀತಿ-ನೀತಿಗಳೆಲ್ಲ ವಾತ್ಸಲ್ಯಪೂರ್ಣವಾಗಿದ್ದುವು ಈ ಕಚೇರಿಯಲ್ಲಿ ಹೆಣ್ಣುಮಕ್ಕಳನ್ನು ನೇಮಿಸಿಕೊಳ್ಳುವುದರ ವಿರುದ್ಧ ಅಭಿಪ್ರಾಯವುಳ್ಳವರಲ್ಲಿ ಇವನೂ ಒಬ್ಬನಿದ್ದನೆಂದು, ಆ ಮೇಲೆ ಕೇಳಿ ನನಗೆ ಆಶ್ಚರ್ಯವಾಯಿತು.

ಂ ಂ ಂ ಂ

ಸಾವಕಾಶವಾಗಿ ಅವನು ನನಗೆ ಸುಲಭವೆನಿಸುವ ಮಾಮೂಲೀ ಕೆಲಸಗಳನ್ನು ಕೊಡಹತ್ತಿದನು. ದಿನಗಳೆದಂತೆ ಎಲ್ಲ ಜೊತೆಯ ಕಾರಕೂನರೊಂದಿಗೆ ಪರಿಚಯ ಮಾಡಿಕೊಂಡೆ ಆದರೆ, ನಾನು ಸದಾನಂದ ಬಾಬು ಹಾಗೂ ವಿನೋದೀ ಚಕ್ರವರ್ತಿ ಇವರಿಬ್ಬರೊಂದಿಗೇ ಹೆಚ್ಚು ಮುಕ್ತಮನಸ್ಸಿನಿಂದ ಮಾತನಾಡುತ್ತಿದ್ದೆ. ಚಕ್ರವರ್ತಿ ಬಾಬು ಸ್ವಲ್ಪೇ ದಿನಗಳಲ್ಲಿ ನಿವೃತ್ತನಾಗತಕ್ಕವನಿದ್ದನು. " ಈ ಆಫೀಸಿಗೆ ನೀವು ಬರತಕ್ಕವರೇ ಇವ್ವರಿ, ಕೆಲವು ವರ್ಷ ಮೊದಲೇ ಏಕೆ ಬರಲಿಲ್ಲ? " ಎಂದು ಚಕ್ರವರ್ತಿಯು ನುಡಿದು ಗಟ್ಟಿಯಾಗಿ ನಗುತ್ತಿದ್ದನು. ನಾನು ರೇಣುಕಾ, ಸುಜಾತಾ, ಅಪರ್ಣಾ ಎಲ್ಲರೂ ನಗುತ್ತಿದ್ದೆವು. ಆದರೆ ಗೌರಿಯು ಮಾತ್ರ ಕಟುವಾಗಿ ಪ್ರತ್ಯುತ್ತರ ಕೊಡುತ್ತಿದ್ದಳು.

ನಮ್ಮ ಐವರದೊಂದು ಪ್ರತ್ಯೇಕ ಕೂಟವಾಗಲಿಕ್ಕೇನು ತಡವಾಗಲಿಲ್ಲ. ಸದಾ ಉಲ್ಲಸಿತ ಚಿತ್ತವೃತ್ತಿಯ ಗೌರಿಯು ನಮ್ಮ ಕಂಪನಿಯ ಜೀವಾಳ. ಮಧ್ಯಾಂತರದ ಬಿಡುವಿನ ಅವಧಿಯಲ್ಲಿ, ಉಪಾಹಾರಕ್ಕಾಗಿ ನಾವು ಸಮೀಪದ ಮುದ್ರಾಸೀ ಹಾಟೇಲಿಗೆ ಹೋಗುತ್ತಿದ್ದೆವು. ಅಲ್ಲಿಯ ಅಗ್ಗವಾದ ಆದರೂ ರುಚಿಕರವಾದ ಖಾದ್ಯಗಳು, ನಮ್ಮಲ್ಲಿ ಅವಿರತವಾದ ಹರಟೆಯನ್ನು ಪ್ರೇರಿಸುತ್ತಿದ್ದುವು. ಯಾವಾಗಲೂ ಚರ್ಚೆಯ ವಿಷಯ ನಮ್ಮಲ್ಲಿಯೇ ಯಾರಾದರೊಬ್ಬರಾಗುತ್ತಿದ್ದರು. ನಮ್ಮ ಪ್ರತಿಯೊಂದು ಚಲನವಲನವೂ ಗಂಭೀರ ಹಾಗೂ ಎಷ್ಟೋ ಸಲ ಹಾಸ್ಯಮಯ ಟೀಕೆಗೆ ಗುರಿಯಾಗುತ್ತಿತ್ತು. ಆ ಹೋಟೇಲಿನ ಬಗೆಗೂ,

ಪರಸ್ಪರರ ಬಗೆಗೂ ನನುಗೆ ಗಾಢವಾದ ಪ್ರೇಮ ಬೆಳೆದಿತ್ತು. ಈ ಸಹವಾಸ ಒಂದು ದಿನದ ಮಟ್ಟಿಗೆ ತಪ್ಪಿತೆಂದರೂ ನಮಗೆ ಹೇಗೋ ಎನಿಸುತ್ತಿತ್ತು,

ಗೌರಿಯು ಡಿಪ್ಯೂಟಿ ಚೀಫ್‌ನ ವಿಶೇಷ ಮನ್ನಣೆಗೆ ಪಾತ್ರಳಾಗಿದ್ದು, ಅವನು ಅವಳನ್ನು ಮೇಲಿಂದ ಮೇಲೆ ತನ್ನ ಕೋಣೆಗೆ ಕರೆಸಿಕೊಳ್ಳುತ್ತಿದ್ದುದೂ, ನಮ್ಮ ಅವೇಕ್ಷಣೆಗೆ ಬಾರದೆ ಇರಲಿಲ್ಲ. ಹಾಗೆ ನೋಡಿದರೆ, ನಮ್ಮ ತೀಕ್ಷ್ಣ ಕಟಾಕ್ಷದಿಂದ ಯಾವುದೂ ಪಾರಾಗುತ್ತಿರಲಿಲ್ಲ. ಈ ಆಫೀಸಿಗೆ ಹಾಜರಾಗುವ ಮೊದಲೇ ರೇಣುಕೆಯ ಲಗ್ನವಾಗಿತ್ತು. ಎರಡನೆಯವರ ಬಗೆಗೆ ಅವಳ ಚಿಕಿತ್ಸೆ ಮಿಗಿಲಾವದ್ದು. ಎಲ್ಲರ ಒಳಹೊರಗನ್ನೂ ಅವಳು ಬಲ್ಲಳು. 'ಡಿಪ್ಯೂಟಿ ಚೀಫ್‌ನು ಮೂರು ಮಕ್ಕಳ ತಂದೆ' ಎಂದು ಒಂದು ದಿನ ಮಾಹಿತಿಯನ್ನು ತಂದಳು. "ಒಳ್ಳೆಯದು, ಗೌರಿಗೆ ಇತ್ತ ಗಂಡ ಇತ್ತ ಸವತಿ ಕೂಡಿಯೇ ಲಭಿಸುತ್ತಾರೆ ಎಂತಂತಾಯಿತು" ಎಂದು ನಕ್ಕಳು.

" ಆದರೆ, ಗೌರಿಯ ಬಗೆಗಷ್ಟೇ ನೀನೇಕೆ ತಲೆ ಕೆಡಿಸಿಕೊಳ್ಳುತ್ತೀರಿ ? " ಅಪರ್ಣೆಯು ನಡುವೆ ಬಾಯಿಹಾಕಿದಳು. " ಸದಾನಂದ-ಬಾಬುವಿನೊಂದಿಗೆ ಇಲ್ಲಿ ಸಂಧ್ಯೆಯೂ ಇರುವಳಲ್ಲ ! "

ಈ ಮಾತು ನನಗೇನೂ ಆನಂದವನ್ನುಂಟುಮಾಡಲಿಲ್ಲ. ನಾನು ತಲೆ ತಗ್ಗಿಸಿದೆ. ಮಿಕ್ಕವರು ಕಿಲಕಿಲ ನಗಹತ್ತಿದರು. ಇದಕ್ಕೆ ಕಾರಣವೂ ಇಲ್ಲದಿರಲಿಲ್ಲ.

ಒಳ್ಳೆಯದು, ಆ ಬಡಪ್ರಾಣಿಯನ್ನೇಕೆ ಇವರ ನಡುವೆ ತರಬೇಕು? ನನ್ನನ್ನು ಚೇಷ್ಟೆಗೆ ಗುರಿಮಾಡಬೇಕೆಂದಿದ್ದರೆ, ತರುಣ ಅಭಿಲಾಷನಿದ್ದನಲ್ಲ ! ಕೆಲವು ದಿನಗಳಿಂದ ಅವನು ನನ್ನೊಡನೆ ಸಹವಾಸ-ಸಂಭಾಷಣೆಗಳಿಗಾಗಿ ಹೆಣಗುತ್ತಿದ್ದನು. ಆದರೆ ನಾನು ಮಾತ್ರ ಅದನ್ನು ತಪ್ಪಿಸುತ್ತಿದ್ದೆ. ಆದರೂ, ಎಷ್ಟೋ ಸಲ ನಾನಿಬ್ಬರೂ ಮಾತನಾಡುತ್ತಿರುವುದನ್ನು ಅವರು ಕಂಡೇಬೇಕು. ಸದಾನಂದನು ಸಾದಾ ಮನುಷ್ಯನು, ನನ್ನ ತಂದೆಯ ಸಂಬಳ, ನಮ್ಮ ಅಣ್ಣನ ಆರೋಗ್ಯ, ಅಕ್ಕನ ಶಿಶುವಿನ ಮುದ್ದುಮಗ, ಇವು ಅವನ ಸಂಭಾಷಣೆಯ ವಿಷಯಗಳು. ಸ್ವಲ್ಪ ಕೂಡ ಅವನು ಮರ್ಯಾದೆ ಮೀರುತ್ತಿರಲಿಲ್ಲ. ಆದರೆ, ನನ್ನ ಸಹಚಾರಿಣಿಯರ - ಈ ಚೇಷ್ಟೆಯ ಮೂಲಕ, ಸದಾನಂದಬಾಬುವು ಏನೇ ಆಡಿದರೂ ನನಗೆ ಒಮ್ಮೊಮ್ಮೆ ಸಿಟ್ಟು ಬರುತ್ತಿತ್ತು. ಮತ್ತು ಅದೇ—ಅಭಿಲಾಷನ ಸಹವಾಸವನ್ನು ಹೆಚ್ಚು ಹೆಚ್ಚು ಬಯಸುವಂತೆ ಮಾಡಿತು.

* * *

ಅಭಿಲಾಷನು ಒಳ್ಳೆ ಸುಂದರ ತರುಣನಾಗಿದ್ದನು. ಹೀಗೆಂದಾಕ್ಷಣಕ್ಕೆ, ನನಗೆ ಅವನ ಬಗೆಗೆ ಆಕರ್ಷಣೆ ಇತ್ತು ಎಂದು ತಿಳಿಯಕೂಡದು. ಆದರೂ, ಅನೇಕ ಸಲ, ಅವನ ಖುರ್ಚಿಯದ್ದೆಡೆ ಹೋಗಿ, ಸುಮ್ಮನೆ ಅವನೊಡನೆ ಮಾತನಾಡಿ ಬರುತ್ತಿದ್ದೆ. ಒಮ್ಮೊಮ್ಮೆ ಮಧ್ಯಾಹ್ನದ ಉಪಾಹಾರವನ್ನೂ ನಾವಿಬ್ಬರೇ ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತಿದ್ದೆವು. ಆಗ ಅದೇ ಆ ಮದ್ರಾಸೀ ಹೊಟೇಲಿನಲ್ಲಿ, ರೇಣುಕಾ ಸೊದಲಾದವರನ್ನು ದಾಟಿ, ಮೂಲೆಯಲ್ಲಿಯ ಮೇಜಿನ ಎದುರುಬದುರು ಇಬ್ಬರೇ ಕುಳಿತು, ಮೆಲುದನಿಯಲ್ಲಿ ಮಾತನಾಡುತ್ತ ಕೂಡುತ್ತಿದ್ದೆವು. ಇದೆಲ್ಲ ನನ್ನ ಮಟ್ಟಿಗೆ ಕೇವಲ ಒಂದು ನಟನೆಯಾಗಿತ್ತು. ಅದರ ಉದ್ದೇಶ ನನ್ನ ಗೆಳತಿಯರನ್ನು ದಂಗುಬಡಿಸುವುದು !

ಇದರ ಪರಿಣಾಮ ನಾನು ಅಪೇಕ್ಷಿಸಿದಂತೆಯೇ ಆಯಿತು. ಈಗ ಅವರು ನನ್ನನ್ನು ಅಭಿಲಾಷನೊಂದಿಗೆ ತಳುಕು ಹಾಕಿ ಚರ್ಚಿಸಹತ್ತಿದರು. ಪಾಪ ! ಸದಾನಂದನನ್ನು ಅವನಷ್ಟಕ್ಕೇ ಬಿಟ್ಟರು. " ಅಭಿನಂದನೆಗಳು ಸಂಧ್ಯಾ ! ಒಳ್ಳೇ ದೊಡ್ಡ ಮೀನನ್ನೇ ಗಾಳಕ್ಕೆ ಹಾಕಿದೆಯಲ್ಲ ! " ಎಂದು ಒಂದು ದಿನ ರೇಣುಕೆ ಆಚ್ಚರಿಯ ದನಿಯಲ್ಲಿ ಉದ್ಗಾರ ತೆಗೆದಳು: " ನಿಜವಾಗಿ ದೊಡ್ಡ ಬಲಿ ! ಆದರೆ ದಾರವನ್ನು ಜಗ್ಗಲು ಇದು ತಕ್ಕ ಸಮಯ ! "

ಇದರಿಂದ ನನಗೆ ಮೊದಲು ಮೊದಲು ಸಂತೋಷವಾಯಿತು. ಆದರೆ ಸ್ವಲ್ಪ ಹೆದರಿಕೆಗೂ ಕಾರಣವಾಯಿತು. ತೋರಿಕೆ ಏನೇ ಇದ್ದರೂ, ಸದಾನಂದನನ್ನು ನಾನು ಹೇಗೆ ಒಳಗೊಳಗೇ ತಿರಸ್ಕರಿಸುತ್ತಿದ್ದಿಲ್ಲವೊ, ಆದರಂತೆ ಅಭಿಲಾಷನನ್ನು ಪ್ರೀತಿಸುತ್ತಿರಲೂ ಇಲ್ಲ. ಆದರೆ ಅವನ ಸಹವಾಸ ನನಗೆ ಸೇರುತ್ತಿತ್ತು. ಉಲ್ಲಸಿತ ವೃತ್ತಿಯ, ಹಾಸ್ಯಪ್ರಿಯ ಅಭಿಲಾಷನು, ಎಲ್ಲರೊಡನೆಯೂ ಸಲೀಲವಾಗಿ ಬೆರೆತು ಹೋಗುತ್ತಿದ್ದನು. ಅವನ ವಿನೋದೋಕ್ತಿಗಳು ಹಾಸ್ಯಬುದ್ಬುದಗಳನ್ನು ಎಬ್ಬಿಸುತ್ತಿದ್ದುವು.

ಆದರೆ, ಇತ್ತಿತ್ತಲಾಗಿ ನನ್ನೊಡನೆ ಅಭಿಲಾಷನ ಮಾತಿನಲ್ಲಿ ಶ್ಲೇಷಾರ್ಥವೂ ನೋಟದಲ್ಲಿ ವಿಶೇಷಾರ್ಥವೂ ಕಂಡುಬರಹತ್ತಿತು. ಹೂಡಿದ ಹಂಚಿಕೆ ನನ್ನ ಮೇಲೆಯೇ ಹೂಡಲುವ ಲಕ್ಷಣ ಕಂಡಿತು. ಇವನು ನನ್ನ ಸಲಿಗೆಯ ಪ್ರಯೋಜನ ಪಡೆದುಕೊಂಡನೇನೋ! ಹೀಗಾಗದಿರಲೆಂದು ನಾನೀಗ ಅವನ ಮುಖಚರ್ಯೆಯ ಬಗೆಗೆ ಚೇಷ್ಟೆ ಮಾಡಹತ್ತಿದೆ.

" ಇತ್ತಿತ್ತಲಾಗಿ ನಿನ್ನ ನೆತ್ತಿಯ ಮೇಲಿನ ಕೂದಲು ಹಾರಹತ್ತಿವೆಯಲ್ಲ! " ಎಂದು ಒಮ್ಮೆ ನಾನು ನುಡಿದೆ: " ನೀನೀಗ ಲಗ್ನ ಮಾಡಿಕೊಳ್ಳಲು ಸಮಯ! ಹಿಂದುಗಡೆ ಕನ್ಯೆಯನ್ನು ಹುಡುಕುವುದು ಕಠಿಣವಾದೀತು."

ಆದರೆ ಇಷ್ಟು ಸುಲಭವಾಗಿ ಅಭಿಲಾಷನ ಬಾಯಿ ಬಂದು ಮಾಡುವುದು ಸಾಧ್ಯವಿರಲಿಲ್ಲ. ಅವನೆಂದ: " ಚಿಂತೆಬೇಡ, ಸಂಧ್ಯಾ ! ನಮ್ಮ ಬಂಗಾಲದಲ್ಲಿ ಬೇಕಾದಾಗ ನನಗೆ ಕನ್ಯೆ ದೊರೆಯುವುದೆಂದು ಭರವಸೆಯಿದೆ; ಆದರೆ ನಿನಗಾಗಿ ಪ್ರೇವಣೆನಿಸುವುದು."

" ಏಕೆ ? "

" ನಿನ್ನ ಕೂದಲೂ ನರೆಯುತ್ತಿರುವುದಲ್ಲ ! ನೀನಿನ್ನೂ ಅವಿವಾಹಿತಳೇ ! "

ಅವನೆಂದುದರಲ್ಲಿಯೂ ತಥ್ಯಾಂಶವಿತ್ತು; ಆದರೂ ನನಗದು ಸರಿ ಬರಲಿಲ್ಲ. ಬರೀ ನಕ್ಕುಬಿಡಲು ಪ್ರಯತ್ನಿಸಿದೆ: " ನೀನೇಕೆ

ನನಗೆ ಸಹಾಯ ಮಾಡಬಾರದು ? " ಎಟುಕಿನಲ್ಲಿ ಬರಲಿ, ಏಟು ಕೊಡೋಣ— ಎಂದು ಅಮಿಷ ಒಡ್ಡಿದೆ.

" ಅವನಿಗೆಷ್ಟು ಸಂಬಳವಿರಬೇಕೆಂದು ನಿನ್ನ ಬಯಕೆ ? "

" ಕನಿಷ್ಠ ತಿಂಗಳಿಗೆ ನಾಲ್ಕು ನೂರು." (ಅಭಿಲಾಷನಿಗೆ ಕೇವಲ ೧೫೦ ರೂ. ಎಂಬುದು ನನಗೆ ಗೊತ್ತು).

ಏನೂ ಆಘಾತವಾಗದಂತೆ ನಟಿಸಿ ಅವನೆಂದನು: " ಒಳ್ಳೆಯದು, ಹಾಗಾದರೆ, ಸದಾನಂದ ಬಾಬುವನ್ನು ವಿಚಾರಿಸುವೆ; ಅವನ ವೇತನ, ನಿನಗೆ ಗೊತ್ತಿರಬಹುದು! ನಿನ್ನ ಕನಿಷ್ಠ ಅಪೇಕ್ಷೆಗಿಂತ ೫೦ ರೂಪಾಯಿ ಹೆಚ್ಚಿಗಿರುವುದು." (ಕಟುಕ! *Unchivalrous!*).

" ನೀನು ಇಷ್ಟೊಂದು— ನನ್ನ ಬಗೆಗೆ ಆಸ್ಥೆವಹಿಸುವುದು ಬೇಡ " ಎಂದು ಸಿಟ್ಟಿನಿಂದಲೇ ಉತ್ತರಿಸಿದೆ.

" ಹಾಗಾದರೆ, ಸ್ವಲ್ಪ ತಾಳು ಮಿಸ್ ರಾಯ್! ಅವನಷ್ಟು ವಯಸ್ಸಿಗೆ ನನ್ನ ವೇತನವೂ ನಾಲ್ಕು ನೂರಾಗುವುದು. ಅಲ್ಲಿಯವರೆಗೆ ತಡೆಯಲಾರೆಯಾ ?" ಎಂದವನು ಜೊಳ್ಳೆಂದು ನಕ್ಕು ಬಿಟ್ಟ. ನಾನು ನಿರುತ್ತರಳಾದೆ. ಆದರೆ ಇದರಿಂದ ನನ್ನ ಮನದ ಮೇಲಿನ ಒಂದು ದೊಡ್ಡ ಭಾರವಿಳಿದಂತಾಯಿತು. ಅಭಿಲಾಷನು ನನ್ನ ಮೇಲೆ ಯಾವ ಹೊಂಚನ್ನೂ ಹಾಕಿಲ್ಲ— ಎಂಬುದು ನನಗೆ ನಿಶ್ಚಿತವಾಯಿತು. ಹಾಗಿದ್ದರೆ, ಈ ಪ್ರಸಂಗದಲ್ಲಿ ಇಷ್ಟು ಹೆಗುರಾಗಿ ವರ್ತಿಸುತ್ತಿರಲಿಲ್ಲ.

೦ ೦ ೦ ೦

ಇದೇ ರೀತಿ ದಿನಗಳು ಕಳೆದುವು; ದಿನಗಳು ವಾರಗಳಾದುವು. ವಾರಗಳು ಒಟ್ಟುಗೂಡಿ ತಿಂಗಳಾಯಿತು. ತಿಂಗಳುಗಳು ಒಟ್ಟು ಸೇರಿ ವರುಷಗಳಾದುವು. ಈ ಮಧ್ಯಾಂತರದಲ್ಲಿ, ಕಚೇರಿಯಲ್ಲಿ ಎಲ್ಲದರೊಂದಿಗೂ, ಎಲ್ಲರೊಡನೆಯೂ ಹೊಂದಿಕೊಂಡು ಹೋಗ ಹತ್ತಿದೆ. ನಮ್ಮ ವಿಭಾಗದಲ್ಲಿ, ರಾಯ, ಹಜಾರಾ, ಮಲ್ಲಿಕ ಮತ್ತು ಇನ್ನಿತರರೊಡನೆ ಮಾತನಾಡಲು ಪ್ರಾರಂಭಿಸಿದೆ. ಎಂದು ಮತ್ತು ಹೇಗೆ ಎಂಬುದು ನನಗೆ ನೆನಪಿಲ್ಲ. ಎಂದಿನಿಂದ ಕೆಲಸದ ಒತ್ತಡವು ಹೆಚ್ಚಾಯಿತು, ನನ್ನ ಡೆಸ್ಕಿನ ಮೇಲೆ ಹಳೆಯ ದಫ್ತರುಗಳ ಮೇಲೆ ಹೊಸ ದಫ್ತರುಗಳು ಬಂದು ಕುಳಿತುವು; ಇದೂ ನನಗೆ ಸ್ಮರಣೆಯಲ್ಲಿಲ್ಲ. "ಹತ್ತರಿಂದ-ಐದು-ಗಂಟೆ ಲೆಕ್ಕಣಿಕೆ-ಮಸಿ-ಕಾಗದ!" ಈ ತರದ ಕಚೇರಿಯ ಕೆಲಸದಲ್ಲಿಯ ನನ್ನ ಆಸ್ಥೆಯು ಕಡಿಮೆಯಾಯಿತು. ಹೌದು, ಕೆಲಸದ ವೇಳೆಯಲ್ಲಿ ಪರಟಿ ಕೊಚ್ಚುವುದರಿಂದ ನನಗೂ ಇತರರಂತೆ ಒಂದು ಅವರ್ಣನೀಯ ಆನಂದವಾಗುತ್ತಿತ್ತು. ನಮ್ಮ ನಿತ್ಯದ ಅವಹೇಲನಾತ್ಮಕ ಟೀಕೆಗೆ ಡೆಪ್ಯೂಟಿ ಚೀಫ್‌ನು ಗುರಿಯಾಗುತ್ತಿದ್ದನು. ಒಮ್ಮೆಲೇ ಸದಾನಂದ ಬಾಬುವಿನ ಕಡೆಗೆ ನಮ್ಮಲ್ಲಿ ಒಬ್ಬನು ಕಣ್ಣು ಹೊರಳಿಸಿ ನುಡಿಯುತ್ತಿದ್ದನು: 'ಓ, ಈ ಮುದಿ ಮೂರ್ಖ! ಇವನೇಕೆ ನಿವೃತ್ತನಾಗಲೊಲ್ಲನೋ!"

'ಏನಾದರೂ, ನಾನೊಬ್ಬ ಹೆಂಗುಸು' ಎಂಬ ಅರಿವೇ ನನಗೆ ಇಲ್ಲದಂತಾಯಿತು. ಬಹುತರ ಅವರ್ಣಾ ಮತ್ತು ಇತರರ ಅವಸ್ಥೆಯು ಹೀಗೆಯೆ ಆಗಿರಬೇಕು. ಗುಂಪಾಗಿ ಚಹದ ಅಂಗಡಿಗೆ ತೆರಳಿದಾಗಷ್ಟೇ 'ನಾವು ಇತರರಿಂದ ಭಿನ್ನರು!' ಎಂಬ ಭಾವನೆ ನಮಗೆ ಆಗುತ್ತಿತ್ತು. ಆದರೆ, ಈ ತರದ ಸಮ್ಮಿಲನವು ಈಗ ನಿತ್ಯದ ಕ್ರಮವಾಗಿ ಉಳಿದಿರಲಿಲ್ಲ. ಸಾಧಾರಣವಾಗಿ ನಾನು ಅಭಿಲಾಷನೊಂದಿಗೇ ಫಲಾಹಾರಕ್ಕೆ ಹೋಗುತ್ತಿದ್ದೆ. ಉಳಿದ ನಾಲ್ವರೂ ಒಟ್ಟಾಗಿ ಹೋಗುವುದು ವಿರಳವಾಗಿತ್ತು. ಆಫೀಸು ಬಂದಾದನಂತರ, ಬಸ್ ನಿಲ್ದಾಣದಲ್ಲಿಯೂ ನಾವು ಕಲೆಯುತ್ತಿರಲಿಲ್ಲ. ಸತ್ಯ ಸಂಗತಿಯೆಂದರೆ, ಪರಸ್ಪರರ ಸಹವಾಸ ನನಗೆ ಇತ್ತಿತ್ತಲಾಗಿ ರುಚಿಸದಂತಾಗಿತ್ತು. ಆದರೆ ಸಂಬಂಧ ಸಂಪೂರ್ಣ ಕಡಿದುಕೊಳ್ಳುವುದು ಹೇಗೆ ಸಾಧ್ಯ? ಒಮ್ಮೊಮ್ಮೆ ಕಲೆಯುತ್ತಿದ್ದೆವು.

ಇಂತಹದೊಂದು ಪ್ರಸಂಗದಲ್ಲಿ ಆಶ್ಚರ್ಯಕರ ಸುದ್ದಿಯೊಂದನ್ನು ಕೇಳಿದೆ. ಸ್ಥಳವು ಅದೇ ಆ ಮದ್ರಾಸೀ ಹೋಟೇಲು. ನಾಲ್ಕು ಕಪ್ಪು ಕಾಫೀ ತರಲು ಹೇಳುತ್ತಿರುವಾಗಲೇ ರೇಣುಕೆಯು ಪ್ರವೇಶಿಸಿ ನುಡಿದಳು :

" ಈ ವರ್ಷದ ಸುದ್ದಿ ನಿಮಗೆ ಗೊತ್ತಿಲ್ಲವೆ?"

" ಇಲ್ಲ. ಏನದು ? ದಯವಿಟ್ಟು ಹೇಳು"

ರೇಣುಕೆಯು ಗೌರಿಯ ಕಡೆಗೆ ದೃಷ್ಟಿಕ್ಷೇಪ ಮಾಡಿದಳು. ಅವಳಾದರೂ ಸ್ವಲ್ಪ ನಾಚಿದಳು. ಆದರೆ ನಿಸ್ಸಂಶಯವಾಗಿ ಹರ್ಷಿತಳಾದಳು.

"ಶೀಘ್ರವೇ ಗೌರಿಯು ಲಗ್ನ ಮಾಡಿಕೊಳ್ಳಲಿಳು"

"ಎಂದು? ಯಾರೊಂದಿಗೆ?" ನಾವೆಲ್ಲ ಕೂಡಿಯೇ ಕೂಗಿದೆವು.

"ಈ ಗೌರಿ, ಬಲು ಪಕ್ಕಾ ಆಸಾಮಿ?" ಎಂದು ಜೆಲುದನಿಯಲ್ಲಿ ರೇಣುಕೆ ಮುಂದುವರಿಸಿದಳು; "ಇಷ್ಟು ದಿನಗಳಾದರೂ, ನಮಗೆ ಸ್ವಲ್ಪ ಕೂಡ ಪತ್ತೆ ಹತ್ತಗೊಡಲಿಲ್ಲ"

ಆಗ ನಡೆದ ವೃತ್ತಾಂತವೆಲ್ಲ ವಿದಿತವಾಯಿತು. ಅದೊಂದು ರೋಮಾಂಚಕಾರೀ ಪ್ರಣಯಕಲಾಪವೇ ಆಗಿತ್ತು. ಆ ಗೃಹಸ್ಥನೊಬ್ಬ ಕಣ್ಣಿನ ಡಾಕ್ಟರು! ಒಳ್ಳೇ ರೂಪಸಂಪನ್ನ! ಒಮ್ಮೆ ಚಿಕಿತ್ಸೆಗಾಗಿ ಗೌರಿಯು ಅವನೆಡೆಗೆ ಹೋಗಿದ್ದಳು. ಪರಿಚಯ, ಪುನಃ ಪುನಃ ಸಂದರ್ಶನ, ಪ್ರಣಯ, ಕೊನೆಗೆ ಪರಿಣಯ! ಹೀಗೆ ಮೆಲ್ಲಗೆ ವಿಕಾಸ ಹೊಂದಿತ್ತು.

ಒಂದು ಸಣ್ಣ ಪಾರ್ಟಿಯಿಂದ ಆ ಪ್ರಸಂಗವನ್ನು ನಾವು ನೆರವೇರಿಸಿದೆವು. ಎಲ್ಲ ತರದ ತಿನಿಸುಗಳನ್ನೂ ತರಿಸಿದೆವು:—ಮಸಾಲೆಯ ದೋಸೆ, ಭಜಿ, ಗುಲಾಬ್‌ಜಾಮೂನು, ಪುರಿ-ಭಾಸುಂದಿ! ಬಿಲ್ಲನ್ನು ಗೌರಿಯೇ ಕೊಟ್ಟಳು ಅವಳನ್ನು ಪೀಡಿಸಿಯೇ ಪೀಡಿಸಿದೆವು. ಅವಳು ನಾಚಿದಳು, ಮುಂದಹಾಸ ಬೀರಿದಳು. ಮತ್ತು ಅತ್ಯಂತ ಸುಮಧುರೆಯಾಗಿ ಕಂಡಳು,

ಕಚೇರಿಯ ಗಡಿಯಾರ ಐದು ಗಂಟೆ ಬಾರಿಸಿತು. ಎಲ್ಲರೂ ಒಟ್ಟಾಗಿ ಬಸ್ ನಿಲ್ದಾಣಕ್ಕೆ ಬಂದು ನಿಂತೆವು. ಒಮ್ಮೆಲೇ ನಾನು ಶೂನ್ಯ ಮನಸ್ಕಳಾದೆ. ಸಂಸಾರವೆಲ್ಲ ನಿಸ್ಸಾರವಾಗಿ ತೋರಿತು. ನಾನು ನೂರಾ

ಆರು ರೂಪಾಯಿಯ ಮೂಲ ವೇತನದ ಕಾರಕೂನಳಷ್ಟೇ ಆಗಿರಲಿಲ್ಲ. ನಾನೂ ಒಬ್ಬ ಹೆಂಗುಸೂ ಇರುವೆ-ಎಂಬುದರ ಅರಿವು ನನಗಾಯಿತು. (ಹೌದು ಈ ಮೂರು ನಾಲ್ಕು ವರ್ಷಗಳಲ್ಲಿ ನನ್ನ ಸಂಬಳ ೩೬ ರೂಪಾಯಿಗಳಿಂದ ಹೆಚ್ಚಾಗಿದ್ದಿತು. ಆದರೆ ಸರೆಗೂದಲುಗಳು ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಬೆಳೆದಿದ್ದುವು. ಅವನ್ನು ನಾನು ಕಿತ್ತಿ ತಾಕುತ್ತಿದ್ದೆ. ಆದರೆ ನನಗರಿಯದಂತೆ ಅವು ನನ್ನ ತಲೆಯಲ್ಲಿ ಅಲ್ಲದೆ ಮನಸ್ಸಿನಲ್ಲಿಯೂ-ತಮ್ಮ ಬೇರನ್ನು ಬಿಟ್ಟಿದ್ದುವು.)

ಇದೇ ಕಾರಣದಿಂದಲೇ ನನಗಂದು ಅಷ್ಟು ತೀವ್ರ ವೇದನೆಯಾಯಿತು. ಗೌರಿ ನಮ್ಮನ್ನು ಹಿಂದೆ ಹಾಕಿದಳು. ಅವಳಿಗಾಗಿ ನನ್ನಲ್ಲಿ ಅಸೂಯೆ ಹುಟ್ಟಿತು— ಎಂದಲ್ಲ; ಆಥವಾ ನೀರಸ ಭವಿಷ್ಯವೇ ನನಗಾಗಿ ಕಾದಿದೆ— ಎಂಬ ವಿಚಾರದಿಂದಲೂ ಅಲ್ಲ; ಇತ್ತಿತ್ತಲಾಗಿ ನಾನು ಒಂದರ ಹಿಂದೊಂದು ಪ್ರಮಾದ ಮಾಡುತ್ತಿರುವೆನಷ್ಟೇ— ಎಂಬ ಸಂಶಯ ಬಾಧಿಸಿತು. ಅಭಿಲಾಷನು ನನ್ನ ಬಗೆಗೆ ತಪ್ಪುಕಲ್ಪನೆ ಮಾಡಿಕೊಂಡಿರುವನೆಂದು ನಾನು ಹೆದರಿರುವೆನೊ? ಹೌದು, ಅದೇ ನನ್ನ ಸಂಶಯ! ಈ ಹೆದರಿಕೆಗೆ ಕಾರಣವೂ ಇಲ್ಲದಿರಲಿಲ್ಲ. ಈ ಸಂಶಯ ಹೆದರಿಕೆಗಳಿಗಿಂತ ಭಿನ್ನವಾದುದೇನಾದರೂ ಸಂಭವಿಸಬೇಕೆಂದು ನನ್ನ ಬಯಕೆಯುತ್ತೋ? ಒಂದು ವೇಳೆ ಅಭಿಲಾಷನ, ನಿಜವಾಗಿ, ತಪ್ಪು ಗ್ರಹಿಕೆ ಮಾಡಿಕೊಂಡಿದ್ದರೆಯೆ ನಾನು ಸುಖಿಯಾಗಬಹುದಿತ್ತು.

೦ ೦ ೦ ೦

ನಾನು ಮ್ಯಾಟ್ರಿಕ್ ಪಾಸಾಗಿ, ಕಾಲೇಜನ್ನು ಪ್ರವೇಶಿಸಲು ಬಯಸುತ್ತಿದ್ದಾಗ ತಾಯಿಯೇ ತೀವ್ರ ಆಕ್ಷೇಪ ತೆಗೆದುಕೊಂಡಿದ್ದಳು. ಅವಳು 'ಹೂಂ' ಎನ್ನಬೇಕಾದರೆ, ಎರಡು ದಿನ ವಾದಿಸಬೇಕಾಯಿತು. ಬಿ ಎ. ಆದ ಕೂಡಲೇ ನೌಕರಿ ಹಿಡಿಯಬೇಕೆಂದಾಗ, ತಂದೆ ಆಕ್ಷೇಪಿಸಿದನು. ನನ್ನ ಲಗ್ನ ಮಾಡಿಬಿಡಬೇಕೆಂದು ಶಕ್ತಿಮೀರಿ ಪ್ರಯತ್ನಿಸಿದನು. ಸಾಧ್ಯವಾಗಲಿಲ್ಲ. ನಾಲ್ಕು ವರುಷ ಕಳೆದುವು. ಏನು ಮಾಡಬೇಕೆಂಬುದು ನನಗೂ ತೋಚಲಿಲ್ಲ. ಆಪ್ತೇಷ್ಟರು ಮನೆಗೆ ಬಂದು ನನ್ನ ಬಗೆಗೆ ಪೃಚ್ಛಾಪೃಚ್ಛ ಮಾಡುತ್ತಿರುವುದು ನನಗೆ ಸರಿ ಬರಲಿಲ್ಲ. ಕಾಲಚಕ್ರವು ನನ್ನ ಪಟ್ಟಿಗೆ ಅರ್ಥಶೂನ್ಯವಾಗಿ ಉರುಳ ತೊಡಗಿತು.

ಒಂದು ದಿನ ಗೌಪ್ಯವಾಗಿ ಈ ಸ್ಥಳಕ್ಕೆ ಅರ್ಜಿ ಹಾಕಿದೆ. ನೇಮಣೂಕೆಯ ಹುಕುಮು ಕೈಸೇರಿತು. ತಂದೆಗೆ ಇದರಿಂದ ಅಸಮಾಧಾನವಾಗಲಿಲ್ಲ. " ಒಳತೇ ಆಯಿತು. ಏನೂ ಮಾಡದೆ, ಸುಮ್ಮನೆ ವ್ಯರ್ಥ ಕಾಲ ಕಳೆಯುವುದಕ್ಕಿಂತ ಇದು ಒಳ್ಳೆಯದು!" ಎಂದನವನು. ನನಗೆ ಆಶ್ಚರ್ಯವಾಯಿತು. " ಹೆಂಗುಸರು ಕಚೇರಿಗೆ ಹೋಗಿ ಕೆಲಸ ಮಾಡುವುದರಲ್ಲಿ ಯಾವ ದೋಷವೂ ಇಲ್ಲ." ಎಂದು ತಾಯಿಯೂ ಸ್ನೇಹಳಾಗಿಯೇ ನುಡಿದಳು.

ಈ ಅದ್ಭುತಘಟನೆ ಹೇಗೆ ಸಂಭವಿಸಿತು? ಅವರ ಅಪ್ಪು ಮುಡವಂತಿಕೆಯ ದೃಷ್ಟಿಕೋನ, ಎಂದು ಮತ್ತು ಹೇಗೆ ಬದಲಿಸಿತು?— ಎಂಬುದನ್ನು ನಾನು ಅರಿಯದಾದೆ. ಇದರ ಬಗೆಗೆ ಹೆಚ್ಚು ವಿಚಾರಿಸಲೂ ಇಲ್ಲ. ಹೀಗೆ ಮೂರು ನಾಲ್ಕು ವರುಷ ಆಫೀಸಿನಲ್ಲಿ ಕೆಲಸ ಮಾಡಿದನಂತರ, ನಾನೊಬ್ಬ ಹೆಂಗುಸು ಎಂಬುದನ್ನು ಮನೆಯಲ್ಲಿ ಎಲ್ಲರೂ ಹೇಗೆ ಮರೆತರು-ಎಂಬುದನ್ನೂ ನಾನು ಲಕ್ಷ್ಯಿಸಲಿಲ್ಲ. ಹೌದು, ನಾನೊಬ್ಬ ಗಳಿಕೆಯ ಆಳು— ಎಂದಿಷ್ಟೇ ಎಲ್ಲರೂ ನನ್ನೆಡೆಗೆ ನೋಡುತ್ತಿದ್ದರು. ಈಗ ಮನೆಗೆ ಬರುತ್ತಿದ್ದ ಆಪ್ತೇಷ್ಟರೂ ತಪ್ಪಿ ಕೂಡ ನನ್ನ ಮದುವೆಯ ಮಾತನ್ನು ಎತ್ತುತ್ತಿರಲಿಲ್ಲ.

ಅಂದು ಗೌರಿಯು ಮದುವೆಯ ಪಾರ್ಟಿ ಕೊಟ್ಟ ಮರುದಿನ, ಅಪರ್ಣಾ ಮತ್ತು ಸುಜಾತಾ ಇವರನ್ನು ನೋಡಿ ನನಗೆ ಆಘಾತವಾಯಿತು. ಇಬ್ಬರೂ ನಿಸ್ತೇಜ-ನಿರುತ್ಸಾಹಿಗಳಾಗಿ ಕಂಡರು. ಇಬ್ಬರ ಮುಖದ ಪೇಲವಿಯೂ ವಯಸ್ಸಿನ ಪರಿಣಾಮ ಒಡೆದು ಕಾಣುತ್ತಿತ್ತು. ಅವೇ ನನಗೆ ಕನ್ನಡಿಯಾದುವು. ಅವರ ಮುಖದಲ್ಲಿಯೇ ನನ್ನ ಪ್ರತಿಬಿಂಬವನ್ನೂ ಕಂಡೆ. ಆ ದಿನ ಸರಿಯಾಗಿ ಕೆಲಸ ಮಾಡುವುದಕ್ಕೇ ಸಾಧ್ಯವಾಗಲಿಲ್ಲ. ಸದಾನಂದ ಬಾಬುವಿನೊಂದಿಗೆ ಬಹಳ ಅಸಭ್ಯರೀತಿಯಿಂದ ನಡೆದುಕೊಂಡೆ. ಸೀಪಾಯಿ ರಾಧಾನಾಥನ ಮೇಲೆ ವಿನಾಕಾರಣ ಸಿಟ್ಟಿಗೆದ್ದೆ. ಅಭಿಲಾಷನ ಹತ್ತಿರಿದ್ದ ಒಂದು ಫೈಲು ನನಗೆ ಬೇಕಾಗಿತ್ತು; ಆದರೆ ಅವನನ್ನು ಮಾತನಾಡಿಸುವ ಮನಸ್ಸಾಗಲಿಲ್ಲ ನನಗೆ.

ಮಧ್ಯಾಂತರ ಬಿಡುವಿನ ಗಂಟೆಗೆ ಸ್ವಲ್ಪ ಮೊದಲು ಅಭಿಲಾಷನು ನನ್ನ ಖುರ್ಚಿಯ ಹಿಂದೆ ಬಂದು ನಿಂತಿದ್ದನ್ನು ನೋಡಿ ಚಕಿತಳಾದೆ. ಉದ್ವಿಗ್ನಳಾದೆ. " ಚಹದ ವೇಳೆಯಾಯಿತು. ನಡೆ, ಹೋಗೋಣ!" ಎಂದನವ.....ಶಾಂತ ಚಿತ್ತದಿಂದ. ನನ್ನ ಉದ್ವಿಗ್ನತೆ ಮಿಗಿಲಾಯಿತು. " ನಿನ್ನಷ್ಟಕ್ಕೆ ನೀನು ಹೋಗು, ನಾನೊಲ್ಲೆ." ಎಂದು ಸಿಟ್ಟುರಳಾಗಿ ನುಡಿಯಬೇಕೆಂದಿದ್ದೆ; ಆದರೆ, " ರೇಣುಕೆ ನನ್ನ ಸಲುವಾಗಿ ದಾರಿ ಕಾಯುತ್ತಿರುವಳು " ಎಂದು ಗುಣುಗುಟ್ಟಿದೆ.

" ಒಂದು ಮಹತ್ತ್ವದ ವಿಷಯದ ಬಗೆಗೆ ಮಾತನಾಡಬೇಕಾಗಿದೆ ಬರುವೆಯಾ ?" ಎಂದು ಅವನು ಹಟತೊಟ್ಟ.

ನಿಸ್ಸಹಾಯಳಾದೆ. ಅವನ ಮನದಲ್ಲಿರುವುದಾದರೂ ಏನು? ಆ ಮಹತ್ತ್ವದ ವಿಷಯವೆಂದರೆ ಯಾವುದು? ಹೃದಯಾಂತರಾಳದಲ್ಲಿ ರಹಸ್ಯವಾಗಿ ನಾನು ಬಯಸುತ್ತಿದ್ದ ಆ ವಿಷಯವೇ ಆಗಿರಬಹುದೆ? ಛೆ, ಛೆ, ಅದೆಂದೂ ಸಾಧ್ಯವಿಲ್ಲ. ಇತ್ತಿತ್ತಲಾಗಿ ಅಭಿಲಾಷನು ಅನುರಾಗ ದೃಷ್ಟಿಯಿಂದ ನನ್ನನ್ನು ನೋಡುವುದನ್ನು ಬಿಟ್ಟಿರುವನೆಂದೇ ನಾನು ನಿಶ್ಚಯಿಸಿದ್ದೆ. ಹೀಗಿದ್ದೂ ಈ ಹುಚ್ಚು ವಿಚಾರಗಳೇಕೆ ನನ್ನ ಮಿದುಳಲ್ಲಿ ತಲೆಯೆತ್ತಿದವೆ? ಕೆಲವು ನಿಮಿಷ ನನ್ನೊಂದಿಗೆ ಹರಟಿಯನ್ನಷ್ಟೇ ಅವನು ಬಯಸುತ್ತಿರಬಹುದು. ಇಷ್ಟೇ, ಇದಕ್ಕಿಂತ ಹೆಚ್ಚಿಗೇನೂ ಇರಲಾರದು.

೦ ೦ ೦ ೦

ಆ ಮದ್ರಾಸೀ ಹೋಟೇಲಿನ ಸಣ್ಣ ಕೋಣೆಯೊಳಗೆ ಅವನನ್ನು ಹಿಂಬಾಲಿಸಿದೆ. ಅಭಿಲಾಷನು ಕಾಫಿ ತರಲು ಹೇಳಿದ. ಕೂಡಲೇ

ಮಾಣಿ ಟ್ರೇನಲ್ಲಿ ತಂದಿಟ್ಟ. ಅಭಿಲಾಷನು ಕೆಳಗೆ ಮೋರೆ ಮಾಡಿ ಕಪ್ಪಿನಲ್ಲಿ ಚಮಚೆಯನ್ನು ತಿರುವಿಯೇ ತಿರುವಿದ. ನಾನು ಸಾನಕಾಶ ನನ್ನ ಕಪ್ಪನ್ನು ಬರಿದು ಮಾಡಿದೆ. ಆದರೆ ಅಭಿಲಾಷನ ಚಮಚೆ ಹಾಗೇ ತಿರುಗುತ್ತ ಇದೆ. ಎಷ್ಟು ವೇಳೆ ಹೀಗೆಯೇ ನಡೆಯಿತೊ ಹೇಳಲಾರೆ. ಇಬ್ಬರ ನಡುವೆ ಒಂದು ಶಬ್ದ ಕೂಡ ದಾಟಲಿಲ್ಲ. ಅನಂತರ ಒನ್ಮೆಲೇ ಅಭಿಲಾಷ ನುಡಿದ:

"ಈ ಕಚೇರಿಯ ಕೆಲಸ ನಿಜವಾಗಿ ನಿನ್ನ ಮನಸ್ಸಿಗೆ ಬಂದಿರುವುದೋ?"

"ಇಲ್ಲ!" ನನ್ನ ಉತ್ತರ ಸತ್ಯವಾಗಿತ್ತು.

"ಇದನ್ನು ಬಿಟ್ಟು ಎಲ್ಲ ಸಾಮಾನ್ಯ ಹೆಂಗುಸರಂತೆ ಬಾಳಬೇಕೆಂದು ನಿನಗೆನಿಸವುದಿಲ್ಲವೆ?"

ಅವನ ಧ್ವನಿಯಲ್ಲಿ ಆವೇಗದ ಕಂಪನವಿತ್ತು. ನಾನು ನಕ್ಕು ಬಿಟ್ಟೆ. "ಈ ದಶೆಗೆ ಬಂದನಂತರ, ಬೇರೆ ಮಾರ್ಗವಿದೆ ಎಂದು ನನಗೆನಿಸುವುದಿಲ್ಲ" ಇದರ ಬಗೆಗೆ ಹಗುರಾಗಿಯೇ ಮಾತನಾಡಲು ಪ್ರಯತ್ನಿಸಿದೆ ಆದರೆ ಅಭಿಲಾಷ ಗಂಭೀರನಾಗಿದ್ದ. ನಡುಗುತ್ತಿರುವ ಬೆರಳುಗಳಲ್ಲಿ ಇನ್ನೂ ಚಮಚೆ ಹಿಡಿದುಕೊಂಡು, ಕೆಳನನಿಯಲ್ಲಿ ಉಸುರಿದ: "ನೀನು ಬಯಸಿದರೆ, ನಾನು ಸಿದ್ಧನಿದ್ದೇನೆ....."

ಅವನು ವಾಕ್ಯ ಮುಗಿಸುವ ಮೊದಲೇ ನಾನು ಎದ್ದುನಿಂತೆ. ಕ್ತದ ಒತ್ತಡದಿಂದ ಮುಖವು ಬಿಸಿಯಾಯಿತು. ಮಾತು ಹೊರಡಲಿಲ್ಲ.

"ಚೆನ್ನಾಗಿ ವಿಚಾರ ಮಾಡು, ಸಂಧ್ಯಾ! ನಾಳೆ ಈ ಹೊತ್ತಿಗೆ ನಿನ್ನಿಂದ ಯಾವುದಾದರೂ ಒಂದು ಉತ್ತರವನ್ನು ಅಪೇಕ್ಷಿಸುವೆ" ಂದು ನುಡಿದ.

ನಾನೂ ಒಂದು ಶಬ್ದ ಕೂಡ ಉಚ್ಚರಿಸಲಿಲ್ಲ. ನನ್ನ ಸರ್ವಾಂಗವೂ ಡುಗುತ್ತಿತ್ತು. ಮನಸ್ಸು ವಿಚಿತ್ರ ಗೊಂದಲಕ್ಕೀಡಾಯಿತು. ನನ್ನ ಾವನೆಗಳೇನು ಎಂಬುದು ನನಗೇ ತಿಳಿಯಲಿಲ್ಲ. ಹರ್ಷನಿರ್ಭರಳಾದೆ. ೂತೆಗೆ ಅಧೀರತೆಯೂ ತಲೆದೋರಿತು. ಅಸ್ಥಿರಚಿತ್ತಳಾಗಿಯೇ ಜೇರಿಗೆ ಮರಳಿದೆ. ಕೆಲವೇ ಶಬ್ದಗಳು! ಆದರೆ ಮನದ ಮೊದಲಿನ ತಿಗೂ ಈಗಿನದಕ್ಕೂ ಅದೆಂತಹ ಅದ್ಭುತ ಅಂತರ! ಆ ದಿನ ಧ್ಯಾಹ್ನ ನನ್ನಿಂದ ಕೆಲಸವೇ ಸಾಗಲಿಲ್ಲ. ಕೋಣೆಯಲ್ಲಿ ಯಾರ ಡೆಗೂ ನೋಡಲಿಲ್ಲ. ಐದು ಹೊಡೆಯುತ್ತಲೇ ಖುರ್ಚಿಯಿಂದೆದ್ದು, ಸ್ ನಿಲ್ದಾಣಕ್ಕೆ ನಡೆದೆ. ಗಡ ಗಡ ಸಪ್ಪಳ ಮಾಡುತ್ತ ಬಂದ ದಲಿನ ಬಸ್ಸನ್ನೇ ಏರಿ ಮನೆಗೆ ಮರಳಿದೆ ಅಂದಿನಂತಹ ರಾತ್ರಿಯನ್ನು ನಾನು ಎಂದೂ ಕಳೆದಿರಲಿಕ್ಕಿಲ್ಲ. ಎವೆಗೆ ಎನೆ ತಾಗಲಿಲ್ಲ. ಲ್ಲಾಸವು ಸಾವಕಾಶವಾಗಿ ಮಾಯವಾಯಿತು. ಅದರ ಸ್ಥಳದಲ್ಲಿ, ಂದು ಭೀತಿ–ಅನಿರ್ವಚನೀಯ ಭೀತಿ–ಬಂದು ನಿಂತಿತು.

ಗೌರಿಯ ಬಗೆಗೆ ನನಗೆ ಅಸೂಯೆಯಾಗಿತ್ತೆ? ಪ್ರತ್ಯೇಕವಾದ ನ್ನದೊಂದು ಮನೆ, ಮಕ್ಕಳು, ಇದರ ಬಗೆಗೆ ಅಭಿಲಾಷೆಯಿತ್ತೆ? ಕೊನೆಗೊಮ್ಮೆ ಈ ಹೊಲಸು ಧೂಳಿಯಿಂದೊಡಗೂಡಿದ ಕಚೇರಿಯ ಕೋಣೆಗೆ ಕೊನೆಯ ಪ್ರಣಾಮ ಮಾಡಲು ಬಯಸಿರಲಿಲ್ಲವೆ? ನನ್ನ ಅಂತರಾಳದ ಅಸ್ಪಷ್ಟ ಬಯಕೆ ಕೊನೆಗೊಮ್ಮೆ ರೂಪು ತಾಳಿ ಸತ್ಯಸೃಷ್ಟಿಗಿಳಿಯುತ್ತಿರುವಾಗಲೇ, ನನ್ನ ಮನಸ್ಸು ಗೊಂದಲಕ್ಕೀಡಾಯಿತು. ಅಭಿಲಾಷನಿಗೆ ನಾನೇನು ಉತ್ತರ ಕೊಡಬೇಕು? ಅವನ ಪ್ರಾರ್ಥನೆಯನ್ನು ಸ್ವೀಕರಿಸಬೇಕೋ, ಅಥವಾ ನಿರಾಕರಿಸಬೇಕೋ? ಈ ಪ್ರಶ್ನೆಯನ್ನು ಸಿಶೆಯ ನೀರವದಲ್ಲಿ ನೂರುಸಲ ಕೇಳಿದೆ. ರಾತ್ರಿ ಜಾರಿತೇ ಹೊರತು, ನಾನು ಯಾವ ನಿರ್ಧಾರಕ್ಕೂ ಬರಲಿಲ್ಲ.

ಪುನಃ ಕಚೇರಿ! ಯಾಂತ್ರಿಕವಾಗಿ ಡ್ರಾಅರ್ ಎಳೆದು, ಪೇಪರ್ ವೇಟ್, ಕಾಗದ, ಗುಂಡುಸೂಜಿ, ಟಾಕು ಇವನ್ನೆಲ್ಲ ಹೊರದೆಗೆದೆ. ನಿತ್ಯದಂತೆ ಒಂದು ಗ್ಲಾಸ್ ನೀರು ತರಲು ಅಜ್ಞಾಪಿಸಿದೆ ಅದನ್ನು ಬರಿದು ಮಾಡಿ, ಉಳಿದೆರಡು ಹೆಸಿಗಳನ್ನು ಅರ್ಧ ಒಣಗಿದ ಮಸಿ ದೌತಿಯಲ್ಲಿ ಹಾಕಿ, ಆಸ್ಥೆಯಿಂದ ಕೆಲಸವನ್ನು ಪ್ರಾರಂಭಿಸಿದೆ.

ಹೌದು. ಈಗ ನನ್ನ ಮನಸ್ಸು ಸ್ಥಿಮಿತಕ್ಕೆ ಬಂದಿತು. ನಾನೊಂದು ನಿರ್ಧಾರವನ್ನು ತಲುಪಿದೆ. ಅಭಿಲಾಷನಿಗೆ ಕೊಡಬೇಕಾದ ಉತ್ತರರೂಪುಗೊಂಡಿತು. ಮುಖ ತಗ್ಗಿಸುವುದು, ಒಂದೇ ಒಂದು ಮಂದಹಾಸ—ಇಷ್ಟೇ ಸಾಕು. ಈ ಬೃಹತ್ ಸಮಸ್ಯೆ ಬಗೆಹರಿದುಹೋಗುವುದು ಹೀಗೆ ನಿರ್ಮಾನಿಸಿದ ಮೇಲೆ, ಮನದ ಮೇಲಿನ ಭಾರ ಇಳಿದಂತಾಯಿತು. ಬಹಳ ಕಾಲದ ಸಿಡುಕಿನ ನಂತರ ಸದಾನಂದ ನೊಡನೆ ಮತ್ತೆ ಮಾತಿಗೆ ಪ್ರಾರಂಭಿಸಿದೆ. ಎಂದಿನಂತೆ ಅವನ ಸ್ವರದಲ್ಲಿ ಆತ್ಮೀಯತೆ ಕನಿಕರ ಇದ್ದುವು. "ಬರೀ ಎರಡು ತಿಂಗಳು; ಅನಂತರ ನಾನು ನಿವೃತ್ತನಾಗುವೆ" ಎಂದಬನು, ವಿಷಾದಮಿಶ್ರಿತ ಧ್ವನಿಯಲ್ಲಿ ಹೇಳಿದನು. ಆಪರ್ಣಾ, ರೇಣುಕಾ, ಸುಜಾತಾ ನಾನಿದ್ದಲ್ಲಿ ಬಂದರು; ಅವರೊಂದಿಗೆ ಕೆಲಹೊತ್ತು ಮುಕ್ತಮನದಿಂದ ಹರಟಿಕೊಚ್ಚಿದೆ. ರೇಣುಕೆ ಪುತ್ತೊಂದು ಸುದ್ದಿಯನ್ನು ತಂದಿದ್ದಳು. ಸುಜಾತೆಯು ನಮ್ಮನ್ನು ತೊರೆಯುವವಳಿದ್ದಳು. ಏ. ಜಿ. ಆಫೀಸಿನಲ್ಲಿ ಅವಳಿಗೆ ಹೆಚ್ಚಿನ ಸ್ಥಾನವನ್ನು ಕೊಡಮಾಡಿದ್ದರು.

ಡಿಪಾರ್ಟ್‌ಮೆಂಟಲ್ ಪರೀಕ್ಷೆಗೆ ಕೂಡಬೇಕೆಂದು ರೇಣುಕೆಯು ನನಗೆ ಸಲಹೆಯಿತ್ತಳು. "ಹೀಗೆ ನೀನು ಎಷ್ಟು ದಿನ ಕೆಳಗಿನ ಸ್ಥಾನದಲ್ಲಿ ಕೊಳೆಯತಕ್ಕವಳು?" ನಾನು ಉತ್ತರಿಸಲಿಲ್ಲ. ವಿನುಲನು ಆ ಪರೀಕ್ಷೆಗೆ ಕೂಡತಕ್ಕವನಿರುವುದಾಗಿ ಹೇಳಿದನು. ಬರೀ ಗೋಣು ಅಲ್ಲಾಡಿಸಿದೆ ರಾಯ, ಮತ್ತು ಹಜಾರಾ ಕೇಳಿದರು: "ಇನ್ನು ಗೌರಿಯು ಹೊರಟು ಹೋಗುವಳೆಂದ ಮೇಲೆ, ನಮ್ಮ ಕಚೇರಿಯ ನಾಟ್ಯಮಂಡಳಿಯಲ್ಲಿ ನಾಯಿಕೆಯ ಪಾತ್ರ ವಹಿಸಲು ಯಾರೂ ಉಳಿಯದಂತಾಯಿತು. ಸಂಧ್ಯಾ, ನೀವು ಆ ಕೊರತೆಯನ್ನು ಏಕೆ ನೀಗಿಸಬಾರದು?"

ನಾನು ಯಾವ ಉತ್ತರವನ್ನೂ ಕೊಡಲಿಲ್ಲ. ನನ್ನ ಮನಸ್ಸು ಅಭಿಲಾಷನ ಕೂಡ ಆಗತಕ್ಕ ಮಾತುಕತೆಗಾಗಿ ಉತ್ಕಂಠಿತವಾಗಿತ್ತು. ಮಿಕ್ಕ ವಿಷಯಗಳೆಲ್ಲ ಗಮನಕೊಡದಷ್ಟು ತೀರ ಕ್ಷುಲ್ಲಕವೆನಿಸಿದುವು. ಕೊನೆಗೊಮ್ಮೆ ಮಧ್ಯದ ಬಿಡುವಿನ ವೇಳೆ ಬಂದಿತು. ಸದ್ದಿಲ್ಲದೆ

ರೂ ಹೋಟೇಲನ್ನು ಕುರಿತು ತೆರಳಿದೆವು. ಈ ಸಲ ಕಾಫಿಗೆ ನಾನೇ ಕುಮು ಕೊಟ್ಟೆ. ಟ್ರೇನಲ್ಲಿ ಕಸ್ಟುಗಳು ಬಂದುವು. ಮಾತನಾಡದೆ ಪ್ಪಲ್ಪ ವೇಳೆ ಸುಮ್ಮನೇ ಕುಳಿತೆವು.

ಅನಂತರ ನಾನೇ ಪ್ರಾರಂಭ ಮಾಡಿದೆ: "ಅದು ಆಗದು, ಲಾಷ, ಸಾಧ್ಯವಿಲ್ಲ. ನಾನು ವಿಷಾದಿಸುತ್ತೇನೆ. ಆದರೆ ನಾವಿ-ೂ ಒಳ್ಳೇ ಗೆಳೆಯರಾಗಿದ್ದೇವೆ. ಹೀಗೆಯೇ ಮುಂದೆ ಸಾಗು-ು....." ವಾಕ್ಯವನ್ನು ಪೂರ್ಣ ಮಾಡುವುದು ನನ್ನಿಂದಾಗಲಿಲ್ಲ. ತವಲ್ಲಿ ಮಾಂಸದ ಮುದ್ದೆ ಅಡ್ಡ ಬಂದಿತು.

ಹೇಗೋ ನನ್ನ ಕಾಫೀ ಕುಡಿದು ಮುಗಿಸಿದೆ. ಮತ್ತೊಂದು ಪ್ಪ ಹಾಗೆಯೆ ಹಸ್ತಸ್ಪರ್ಶನಾಗದೆ ತಣ್ಣಗಾಗಿ ಉಳಿದಿತ್ತು.

ಂ ಂ ಂ ಂ

ಒಂದು ರೀತಿ ಮನದ ಮೇಲಿನ ದೊಡ್ಡ ಭಾರ ಇಳಿದಂತಾ-ತು. ಆ ದಿನ ನನ್ನ ಕಚೇರಿಯ ಕೆಲಸವನ್ನು ಎಂದಿಲ್ಲದ ಆಸ್ಥೆ-ಂದ ನಿರ್ವಹಿಸಿದೆ. ಪಫ್ತರುಗಳು ನಿಜವಾಗಿ ಇದ್ದಷ್ಟು ನೀರಸ ತೋರಲಿಲ್ಲ. ಅವುಗಳ ಮೇಲಿನ ಧೂಳಿ ಕೂಡ ಆಕರ್ಷಕವೆನಿಸಿತು. ವಿನುಲನಿಗೆ ಡಿಪಾರ್ಟ್‌ಮೆಂಟಲ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ತಂದುಕೊಡಲು ವಿನಂತಿಸಿದೆ. ನಾಟಕದಲ್ಲಿ ಸ್ತ್ರೀ ಪಾತ್ರ ವಹಿಸಲು ಸಿದ್ಧಳಿರುವುದಾಗಿಯೂ, ರಿಹರ್ಸಲ್ ಬೇಗನೆ ಪ್ರಾರಂಭಿಸಬೇಕೆಂದೂ ರಾಯು, ಪಜಾರೇ ಅವರಿಗೆ ಹೇಳಿದೆ.

ಕೆಲವು ದಿನಗಳ ನಂತರ ನನ್ನ ಮನಸ್ಸಿಗೇ ಪ್ರಶ್ನೆ ಕೇಳಿದೆ: ಲಗ್ನ ನನಗೆ ನಿಜವಾಗಿ ಬೇಡವಾಗಿದೆಯೆ? ಅಥವಾ ಈ ಕಚೇರಿ, ಈ ರಿಕಾರ್ಡ್ ಸೆಕ್ಷನ್, ಈ ದಸ್ತರು, ಈ ಧೂಳಿ, ಇಲ್ಲಿಯ ಯಂತ್ರಪಶ್ಯ ಮನುಷ್ಯರು ಇವರೆಲ್ಲರನ್ನು ಅಗಲಲಾರದಷ್ಟು ಆತ್ಮೀಯತೆ ನನ್ನಲ್ಲಿ ಉಂಟಾಗಿದೆಯೋ? ಯಾವ ಉತ್ತರವೂ ದೊರೆಯಲಿಲ್ಲ. ವರ್ಷಗಳು ಕಳೆದು ಹೋದುವು, ಇನ್ನೂ ಸತ್ಯವನ್ನು ಹುಡುಕುತ್ತಿದ್ದೇನೆ. ಆದರೆ ಒಂದು ಮಾತನ್ನು ಮಾತ್ರ ಒಪ್ಪಲೇಬೇಕು. ಮೊನ್ನೆ ಗೌರಿಯ ಮುದ್ದುಮಗುವನ್ನು ಕಂಡೆ, ತುಂಟತನದ ಮೂರ್ತಿಯೇ ಆಗಿದ್ದ. ನವನು. ತಡೆಯುವುದಾಗಲಿಲ್ಲ. ಬಿಕ್ಕಿ ಬಿಕ್ಕಿ ಅಳುವಂತಾಯಿತು. ದಿನವಿಡೀ ಅಸ್ವಸ್ಥಳಾಗಿದ್ದೆ. ಹೀಗೇಕಾಯಿತೋ ತಿಳಿಯಲಿಲ್ಲ. ●

ತುಂಬಿ!

ಶ್ರೀ. ಎ. ವ್ಹಿ. ಪದರಜೋಸಿ, ಬಿ. ಎ. (ಆನರ್ಸ್) ಚಿಕ್ಕೋಡಿ.

ಒಂದೆ ಹೂವಲಿ ನೀನು ಮೈಮನೆಯಜೇಡ
ತುಂಬಿ ಹಾಡುತ್ತಲೇ, ಸಂಚಾರಿಯಾಗು!
ಅನಿತೊಂದು ಅಲರುಗಳು ನಿನಗಾಗಿ ಕಾದಿರಲು
ಒಂದೆಡೆಗೆ ಕುಳಿತಿರದೆ ಮುಂದೆ ಸಾಗು!

ಗುಲಾಬಿ ಅರಳಿಹುದು ಚೆಲುವೆ ಅರಳಿದೊಲು—
ಮುಳ್ಳಿದ್ದರೂ ಭ್ರಮರ, ನಿನ್ನ ಕರೆಯೆ!
ಪಕಳೆಗಳ ಕೆಂಪಾದ ಹಾಸಿಗೆಯ ಹಾಸಿ
ಕುಸುಮಗಳು ಕಾದಿಹವು ನಿನ್ನ ಬೆರೆಯೆ!

ಮಲ್ಲಿಗೆಯ ಮೊಗ್ಗೆಗಳು ಮೋಡಿ ಮಾಡಿ
ನಿನ್ನನಾಮಂತ್ರಿಸಲು ಸೊಗವಾಗಿ ನಕ್ಕು!
ಎಂದಿನಿಂದೆಲೊ ಮಧುರ ಗಂಧವೆಂದು
ನಿನ್ನ ನೆನೆಯುತ್ತಲಿವೆ ಒಮ್ಮೆ ಬಿಕ್ಕು!

ಎಲರು ನಿನಗಿಹನೆಂದು ಕಂಪೇರಿಮೊತ
ಹೂವ ಪರಿಮಳ ಹರಿದು ತರುತಲಿರಲು!
ನಿನಗಾಗಿ ಇನಿತೆಲ್ಲ ಸಿದ್ಧತೆಯು ಸಾಗಿರಲು
ಒಂದೆಡೆಗೆ ಕಣ್ಮುಚ್ಚಿ ಕುಳಿತರೇನ್ ಬರಲು?

ತುಂಬಿಯೊಲು ನಂಬಿಹುತ ಚಲಿಸುತ್ತಲಿರು ಕವಿಯೆ
ಜಗದ ನವ ನವ ಪದರು ಬಿಡಿಸಿ ಹೊಕ್ಕು!
ಜಡದಿ ಬಂಧನವಿಹುದು ಚಲಿಸೆ ನಂದನ ಬಹುದು
ಎಂದಿನಿಂದರಿಯದಲೆ ಭುವಿ ನರಳೆ ಸಿಕ್ಕು!

"ಕವಿ ರವೀಂದ್ರ"

ಲೇ: "ವನವಿಹಾರಿ"

ಜಗವೆಲ್ಲ ಮೊಳಗುತಿದೆ
ಏನೆಂಥ ಧ್ವನಿಯು?
ಜನಮನವ ಚೇತರಿಪ
ಜೇನಂಥ ಹನಿಯು ॥
ಎಳತೆಂಗು ಸವಿಯಲ್ಲಿ
ಹಳಹೊನ್ನು ಮೆರುಗಿನಲಿ
ಬೆಳಗುವಾ ರವಿಯಾಗಿ
ಬಳಸಿದನು ಜಗವೆಲ್ಲ.
ಮೊಳಗುತಿದೆ ಮುರುಧ್ವನಿಯು,
ಇಳೆಗೆ ಸ್ವಾದದ ಹನಿಯು.
ಎಳೆಮೋಡ ಮಳೆಯಾಗಿ
ಹೊಳೆಹರಿದು ನೆಲೆನಿಂತ ನೀರಲೆಯು,
ಉಗನುವೆಲ್ಲಿದೆಯೆಂದು
ಕಾತರತೆ ಕೂಡಿ
ಸುಗಮ-ಸೌಂದರ್ಯವನು
ನೀನಿಂತು ನೋಡಿ ॥
ಅಲ್ಲಿಹುಟ್ಟಿತು ನಾದ,
ನಲ್ಲಿನೀಡುವ ನೋದ,
ಸೊಲ್ಲಾಗಿ ಸವಿಯಾಗಿ
ಮೆಲ್ಲುವಾ ಸುಖಸ್ವಾದ
ಹುಲ್ಲುಹಸಿರಾದಂತೆ
ನೆಲ್ಲು ಕಸು ಕೊಡುವಂತೆ
ಮಲ್ಲಿಗೆಯು ಮಧುವಾಗಿ
ಎಲ್ಲೆಲ್ಲು ಕಂಪಿನಾ ಕಂತೆ
ಓ ಆದುವೆ ಕವಿಕೊಟ್ಟ
ರಸಭಟ್ಟೆ ಕಾಣಿಕೆಯು
ಆ ವಿಧುಮೂರ್ತಿ ಮನುಜರೊಳು
ಮಿರುಗುವಾ ಮಾಣಿಕವು ॥
ಭಾವ ಬೆಳಕಿನ ಚಂಡು
ಜೀವಲೇಸನು ಉಂಡು
ಸಾವನತೆ ಶ್ರುತಿಯಾಗಿ
ಧಾನಿಸಿದ ನೆಲೆಕಂಡು

ರವೀಂದ್ರ ಕವಿಯಾದ
ಕವಿ ರವೀಂದ್ರನು ಅದು.
ಭುವಿಯೆಲ್ಲ ಬೆಳಕಾಗಿ
ನವತೇಜ ಕಂಡಳಿದ.
ಭವ ಅಳಿದು ಉಳಿಸಿದನು
ಮಧುರ ಭಾವಗಳ—
ಕವನವೇ ಕೈವಲ್ಯ
ಪಳಗಿಸಿದ ಭೋಗಗಳ ॥
ಭಾರತದಿ ಹುಟ್ಟಿದನು
ನೇರುವಿಗೆ ಮುಟ್ಟಿದನು
ಕೀರುತಿಯ ಕವಿಯಾಗಿ
ಮೀರಿನುದ ಕೊಟ್ಟಿಹನು.
ದಾರಿ ಸೊಬಗಿನ ಮಜಲು
ಸೀರಿ ಸಂಭ್ರಮ ಹಗಲು
ಕೋರಿದಂದದಿ ಬಾಗಿ
ಸೂರೆ ಕವನದ ಹೊನಲು
ಆ ಹೊನಲ ತೇಜವೇ
ಕಲೆಗೊಂದು ತಾಣ,
ಆ ಹೊನಲ ಸೆಲೆಯಲ್ಲಿ
ಕವನ ಮೂಡಿತು ಕಾಣ ॥
ಏನು ಕಣ್ಣಿನ ಕಾಂತಿ
ಬಾನು ಭುವಿಗೂ ಶಾಂತಿ
ಕಾನಂತೆ ಹುಲುಸಾಗಿ
ಜನಿಸಿ ಬಾಡಿಯೆ ಭ್ರಾಂತಿ.
ಹೊನಲು ಹೊಮ್ಮಿದ ರೂಪ
ತನುವು ನೀಡಿದ ಚಾಪ
ಅನುರಾಗ ತಾನಾಗಿ
ಮನವ ಬೆಳಗುವ ದೀಪ

ಜಗವೆಲ್ಲ ಮೊಳಗುತಿದೆ ಏನೆಂಥಧ್ವನಿಯು ?
ಜನಮನವ ಚೇತರಿಪ ಜೇನಂಥ ಹನಿಯು !

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಿಗೆಲ್ಲ ಬಿಡುವಿನ ದಿನಗಳಿವು. ಅದರ ಪೂರ್ಣಪರಿಣಾಮ ಈ ಸಲದ ಶಿಕ್ಷಣರಂಗದ ಮೇಲಾಟದ ಮೇಲೆ ಆದಂತೆ ಕಾಣುತ್ತಿದೆ. ಕಳೆದ ಸಂಚಿಕೆಯಲ್ಲಿ ಕೇಳಿಕೊಂಡಂತೆ, "ಪ್ರೀತಿಯ ಫಲ" ಕಥೆಯ ವಿಮರ್ಶೆ ಇಬ್ಬರಿಂದ ಮಾತ್ರ ಬಂದಿವೆ. ಅದರಂತೆಯೆ "ನಾಡಬಿಡುಗಡೆಯೊಂದಿಗೆ" ಕವಿತೆಯ ವಿಮರ್ಶೆ ಕೂಡ ಎರಡೇ ಬಂದಿವೆ.

'ಪ್ರೀತಿಯ ಫಲ' ಕಥೆಯ ವಿಮರ್ಶಕರು :

೧ ಶ್ರೀ. ಕೆ. ಮುಂಡುನಾಥರಾವ್, ನುಂಗಂಬಾಕಂ—ಮದ್ರಾಸು. ೨ ಶ್ರೀ. 'ರಂಗ' ಮಾಳಮಡ್ಡಿ, ಧಾರವಾಡ.

'ನಾಡ ಬಿಡುಗಡೆಯೊಂದಿಗೆ' ಕವನದ ವಿಮರ್ಶಕರು :

೧ ಶ್ರೀ. ಎಂ. ಗಂಗಾಧರಭಟ್ಟ, ನೀರ್ಚಾಲ್ (ದ. ಕ.) ೨ ಶ್ರೀ. ಬಡಾಶೇಷ ರಾಘವೇಂದ್ರ, ಸುರಪುರ (ಗುಲ್ಬರ್ಗಾ).

ಸಂಪಾದಕ ಸಮಿತಿಯವರೇ ಎಲ್ಲ ವಿಮರ್ಶೆಗಳನ್ನು ನಿರೀಕ್ಷಿಸಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ :

..... ಈ ಸಲದ ವಿಮರ್ಶಕರ ಅಲ್ಪಸಂಖ್ಯೆ ನಮ್ಮ ಕೆಲಸದ ಭಾರವನ್ನು ಕಡಮೆ ಮಾಡಿದೆಯಾದರೂ, ಇದರಿಂದ ನನಗೆ ಸಮಾಧಾನವೇನೂ ಆಗಿಲ್ಲ. ಮುಂದಿನ ತಿಂಗಳಲ್ಲಾದರೂ ಹೆಚ್ಚು ಜನ ವಿಮರ್ಶಕರು ಸೇರಿ, ನಮ್ಮ ಕೆಲಸದ ಹೊರೆಯನ್ನು ಹೆಚ್ಚಿಸಿ ಸಮಾಧಾನಗೊಳಿಸುವರೆಂದು ಹಾರೈಸುತ್ತೆನೆ.

'ಪ್ರೀತಿಯ ಫಲ' ಕಥೆಯ ಎರಡು ವಿಮರ್ಶೆಗಳಲ್ಲಿ **ಶ್ರೀ. 'ರಂಗ' ಮಾಳಮಡ್ಡಿ** ಅವರ ವಿಮರ್ಶೆ ಚೆನ್ನಾಗಿದೆ. ಇನ್ನೊಂದು ತೀರ ಸಾಮಾನ್ಯ.

'ನಾಡಬಿಡುಗಡೆಯೊಂದಿಗೆ' ಕವನದ ಎರಡೂ ವಿಮರ್ಶೆಗಳೂ ಚೆನ್ನಾಗಿದ್ದು, ಶ್ರೀ. ಗಂಗಾಧರ ಭಟ್ಟ, ನೀರ್ಚಾಲ್ ಅವರ ವಿಮರ್ಶೆ ಹೆಚ್ಚು ಗುಣಾಂಶವನ್ನು ಹೊಂದಿದೆ.....

ಮುಂದಿನ ಸಲದ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ "ಕ್ಷಮಾ" ಎಂಬ ಸ್ವತಂತ್ರ ಕಥೆಯನ್ನಾಗಲಿ, "**ಮುಚ್ಚಂಡಿಯ ಮೆಲುಕು**" ಎಂಬ ಅನುವಾದಿತ ಕಥೆಯನ್ನಾಗಲಿ— ವಿಮರ್ಶೆಗೆ ತೆಗೆದುಕೊಳ್ಳಬೇಕು.

—ಸಂಪಾದಕರು

ಪ್ರೀತಿಯ ಫಲ

(ಸಣ್ಣ ಕಥೆಯ ವಿಮರ್ಶೆ)

ಶ್ರೀ 'ರಂಗ' ಮಾಳಮಡ್ಡಿ, ಧಾರವಾಡ.

ಪ್ರಸ್ತುತ ಕಥೆ ಮಣ್ಣಿನ ಜೀವಿಯೊಂದರ ಕರುಣೆಯ ಬಾಳಿನ ಮನೋವೇಧಕ ಚಿತ್ರಣ. ಅದರ ದೃದಯಾಂತರಾಳದಲ್ಲಿ ಅಡಗಿದ್ದ ಹಾಲ್ಚೀನಿನಂತಹ ಪ್ರೀತಿಯ ನೆಲೆ, ವ್ಯಾವಹಾರಿಕ ದೃಷ್ಟಿಯ ಜನರ ಕಣ್ಣಿಗೆ ಬೀಳದೆ, ಕಾಡು ಹೂವಿನಂತೆ ಅನಾಘ್ರಾತವಾಗಿ ಅದು ಬಾಳಿನುದ್ದಕ್ಕೂ ದುಃಖದ ಬೇಗೆಯಲ್ಲಿಯೇ ಬೆಂದು, ಒಂದು ದಿನ ಈ ಬಾಳಿನಿಂದ ಮರೆಯಾಯಿತು.

ಶಿವಪ್ಪ, ವೃದ್ಧಾಪ್ಯ ಆವರಿಸಿದ್ದರೂ, ಎತ್ತ ನೋಡಿದತ್ತೆಲ್ಲ ನಿರಾಶೆಯ ಛಾಯೆಯೇ ಆವನನ್ನು ಮುತ್ತಿದ್ದವೊ, ತನ್ನ ಅಸಹಾಯಕತೆಯನ್ನು ನೆನೆಯುತ್ತ— ಹಸಿರಿನಿಂದ ಮುರಿಯುವ—ತನ್ನ ಹೊಲವನ್ನು ನೋಡುವ ತವಕದಿಂದ ಬಂದ. ಅವನ ದೇಹಕ್ಕೆ ಮುಪ್ಪು ಆಡಸಿದಂತೆ ಮನಸ್ಸಿಗೂ ಮುಪ್ಪು ಆವರಿಸಿತ್ತು. ಹೊಲದಲ್ಲಿಯ ಹಸಿರ ನೋಡುವುದರಲ್ಲಿ ಮಗ್ನನಾದ ಅವನ ಮನಸ್ಸು ಅರಿಯದೆಯೆ ಗತಜೀವನದ ನೆನಪಿನ ಎಳೆಗಳನ್ನು ಬಿಡಿಸುತ್ತಿತ್ತು. ಇಂದಿನ ಕರುಳು ಕೊರೆಯುವ ಅವನ ಅಸಹಾಯಕ ಜೀವನವೆಲ್ಲಿ; ಅಂದಿನ ಯೌವನದ ತುಂಬುಜೀವನವೆಲ್ಲಿ ? ಅದೊಂದು ಕ್ಷಣಿಕ ಸ್ವಪ್ನದಂತೆ ನಿಂಚಿ ಮಾಯವಾಗಿತ್ತು. ಮಣ್ಣಿನ ಜೀವಿಯಾದ ಅವನಿಗೆ ಭೂಮಿತಾಯಿಯ ಸೇವೆಯೆಂದರೆ ಹೆತ್ತ ತಾಯಿಯ ಸೇವೆ ಮಾಡಿದಷ್ಟು ಆನಂದ. ಅವಳನ್ನು ದುರ್ಲಕ್ಷಿಸುವುದೆಂದರೆ ನಿಜವಾಗಿ ಹೆತ್ತತಾಯಿಯನ್ನೇ

ಹೀಗಳೆದಂತೆ ಎಂದು ಆತ ತಿಳಿದಿದ್ದ. ಅವರಂತೆ ಮಣ್ಣಿನ ಮಕ್ಕಳಾದ ತನ್ನ ಕೂಲಿಯಾಳುಗಳೆಂದರೂ ಅವನಿಗೆ ಜೀವ. ತಾನು ಪ್ರೀತಿಯ ತಂದೆಯ ಕೊನೆಯ ಆಸೆಯನ್ನು ಪೂರ್ತಿಗೊಳಿಸುವಲ್ಲಿ, ಇದ್ದು ಬಿದ್ದು ದನ್ನೆಲ್ಲ ಹಾಕಿ ನಲ್ಕೆಯ ಹೆಂಡತಿ–ಮಗನೊಂದಿಗೆ ಕೂಡಿ ರಟ್ಟೆ ಮುರಿದು ದುಡಿದು, ತನ್ನ ಹೊಲವನ್ನು ನಂದನವನವನ್ನಾಗಿ ಪರಿವರ್ತಿಸಿದ ಆ ದಿನಗಳು, ಅವನಲ್ಲಿ ಕ್ಷಣಕಾಲ ರೋಮಹರ್ಷವನ್ನುಂಟುಮಾಡಿದುವು ಆದರೆ ಅದೊಂದು ಕಾಲ. ಈಗಿನ ಪರಿಸ್ಥಿತಿಯಲ್ಲಿ ಹಣ್ಣೆಲೆ ಯಾವಾಗ ಉದುರುವುದೆಂಬುದರ ನೇಮವಿಲ್ಲ. ಚಿಕ್ಕ ವಯಸ್ಸಿನ ಆ ಭೀಮ-ಪ್ರಾಯನಾದ ಮಗ ಬಸಪ್ಪ, ಅವನ ನಿಜ ಹೃದಯವನ್ನು ತಿಳಿದೊಂದೇ ವ್ಯಕ್ತಿ. ಅವನ ಹೆಂಡತಿ ಅಕಸ್ಮಿಕವಾಗಿ ಅವನಿಂದ ಇನ್ನಿಲ್ಲದಾದ ಮೇಲೆ, ಅವನಿಗೆ ಬಾಳೇ ಬೇಡವೆನಿಸಿತು. ಅದು ಕಲ್ಪಿಸಲಾಗದಷ್ಟು ಬರಿಯ-ದಾಗಿತ್ತು. ಬುದ್ಧಿ ವಿಭ್ರಮೆಗೊಂಡು ಮನಸ್ಸು ಏನೇನೊ ಚಿಂತಿಸಿತು; ಆದರೆ ಬೆಳಕು ಕಾಣಲಿಲ್ಲ. ಶಿವಪ್ಪ ಬಂಗಾರದಂತಹ ತನ್ನ ಭೂಮಿ-ಯನ್ನೂ ದುರ್ಲಕ್ಷಿಸಿದ. ಅವನಿಗೆ ಬಾಳಿನಲ್ಲಿ ಯಾವ ಆಶೆಯೂ ಉಳಿದಿರಲಿಲ್ಲ. ಅದಕ್ಕೆ ಮುಂದಿನ ಆಲೋಚನೆ ಇಲ್ಲದೇ, ನೆರೆಯ ಜೀವಿ ಕಲ್ಲನಿಗೆ ತನ್ನ ಭೂಮಿಯನ್ನು ಧಯೆಪಾಲಿಸಿದ. ಆದರೆ ನಿರಾ-ಯಾಸವಾಗಿ—ಯಾವ ಬೆಲೆ ತೆರದೇ—ಬಂಗಾರದಂತಹ ಭೂಮಿ-ಯನ್ನು ಗಿಟ್ಟಿಸಿದ ಕಲ್ಲ, ಭಂಡ ರಾಜಕೀಯ ಮುಖಂಡರ ಮಾತಿಗೆ ಮರುಳಾಗಿ, ಉಪ್ಪುಂಡಲ್ಲಿ ಎರಡು ಬಗೆದ. ಹಾಲೆರೆದು ಜೋಪಾನ ಮಾಡಿದ ನಾಗರಹಾವಿನಂತೆ ವರ್ತಿಸಿದ. ಹೊಲ ಹಿಡಿಯುವ ಮುಂದಿನ ಶಿವಪ್ಪನಲ್ಲಿಯ ಪ್ರೀತಿ, ಆದರ, ಗೌರವಗಳು ಮಾಯವಾಗಿ, ವ್ಯಾವ-ಹಾರಿಕ ದೃಷ್ಟಿ ಅವನಲ್ಲಿ ಜಾಗೃತವಾಗಿತ್ತು. ಅಂತೇ ಕಲ್ಲನ ಸಂಗದಲ್ಲಿ ತನ್ನ ಬಾಳ ದುಃಖವನ್ನು ಕ್ಷಣಕಾಲ ಮರೆಯಲು ಯತ್ನಿಸಿದ ಶಿವಪ್ಪ-ನಿಗೆ, ಅವ್ಯವೆಂದು ತಿಳಿದದ್ದು ವಿಷವಾಗಿತ್ತು. ದುರುಳ ವಿಧಿಯ ಕೈವಾಡದಿಂದ ಅವನ ಸುಖದ ಜೀವನಕನಸು–ಕನಸಾಗಿಯೇ ಉಳಿ-ಯಿತು. ಅವನ ಮನ ಹಸಿದಿತ್ತು. ಆದರೆ ಹೆಗಲು ದೀಪಟಗೆ ಹಿಡಿ-ದಿರುವ ಕುರುಡರಿಗೆ ಅವ 'ಜೀನ, ಮನಮುರುಕ, ಪರದೇಶಿ' ಯಾಗಿಯೇ ಜೀವಿಸಿದ. ಅವನಿಗೆ ತಾನು ಮಾಡಿದ ತಪ್ಪೇ ತಿಳಿಯ-ಲಿಲ್ಲ. ದಿಕ್ಕುಗಾಣದ ಪರದೇಶಿಯಾಗಿ ತನ್ನ ಹೊಲ, ತನ್ನ ಮನೆ, ತನ್ನ ಹೆಂಡತಿ, ಮಗ ಎಂಬ ಕೊರಗಿನಲ್ಲಿಯೇ, ಒಂದು ದಿನ ಜೀವನದ ಕೊನೆಯುಸಿರನ್ನೆಳೆದ. ಆದರೆ ಯಾರಿಗಾಗಿ ಯಾರು ಅಳಬೇಕು? ಅವನಿಗಾಗಿ ಊರಲ್ಲಿ ಯಾರೂ ಮರುಗಲಿಲ್ಲ. ದುಃಖಿಸಲಲ್ಲ. ತಮ್ಮ ಮನಸ್ಸಿಗೆ ಬಂದಂತೆ ಆಡಿಕೊಂಡರು–ಅಷ್ಟೇ. ಎಲ್ಲರಿಂದ ತಿರಸ್ಕೃತನಾದ ಆವ ಎಂದೋ ಮೃತನಾಗಿದ್ದ; ಇಂದು ಮಾತ್ರ ದೇಹದಿಂದ ಪ್ರಾಣ-ಪಕ್ಷಿ ಹಾರಿಹೋಗಿತ್ತು.

ಶಿವಪ್ಪನ ಜೀವನ ಮೊದಲಿನಿಂದಲೂ ದುಃಖದ ಒರತೆಯಿಂದಲೇ ತುಂಬಿದೆ. ತಂದೆಯ ಕಾಲದಲ್ಲಿ ಬಡತನದ ಬೇಗೆಯಲ್ಲಿ ಬೆಂದ ಅವ, ತನ್ನದೆಂಬ ಹೊಲ ಕೊಂಡುಕೊಳ್ಳುವಲ್ಲಿ, ಹೆರವರಿಂದ ಬೇಸರಿನಿಸಿ-ಕೊಂಡರೂ ಚಿಂತೆಯಿಲ್ಲದೆ ತನ್ನ ಇದ್ದು ಬಿದ್ದುದನ್ನೆಲ್ಲ ಆದಕ್ಕಾಗಿ ಹಾಕಿದ್ದ. ಹೊಲದ ಹಸಿರನ್ನು ನೋಡುವುದರಲ್ಲಿಯೇ ಹಸಿವು-ನೀರಡಿಕೆ ಮರೆತ. ಅನುಕೂಲೆಯಾದ ಹೆಂಡತಿ— ಒಲುಮೆಯ ಮಗನೊಂದಿಗೆ ಅವ ಆದಕ್ಕಾಗಿ ಬೆವರು ಸುರಿಸಿದ. ಆದರೆ ಅಕಾಲಿಕವಾಗಿ ಹೆಂಡತಿ-ಯನ್ನೂ ಮಗನನ್ನೂ ಕಳೆದುಕೊಂಡಮೇಲೆ, ಅವನ ಹಾಲಿನಂತಹ ಸಂಸಾರ ಒಡೆದುಹೋಗಿತ್ತು. ಸುಖ ಜೀವನದ ಬೆಳಕು ಮೂಡು-ಶ್ತಲೇ ಮರೆಯಾಗಿತ್ತು. ಒಂದರ ಮೇಲೊಂದು ಸಾವುಗಳು, ಗಾಯದ ಮೇಲೆ ಬರೆ ಎಳೆದಂತೆ ಆಗಿದ್ದುವು. ಅವ ವಿಧಿಯ ಮೇಲೆ ಹಲ್ಲು ಕಡಿದ. ಆದರೆ ವಿಧಿ ಅವನ ಬಾಳಿನಲ್ಲಿ ಆಗಲೇ ತಾಂಡವನಾಟ್ಯವಾಡಿತ್ತು. ದುಃಖದ ಆವೇಗದಿಂದ ಶಿವಪ್ಪನ ಮನಸ್ಸು ಕದಡಿಹೋಗಿತ್ತು. ರುಕ್ಷತೆ ಭೈರವನೃತ್ಯ ನಡೆಸಿತ್ತು. ಆದರೂ ನೀರಿನಲ್ಲಿ ಮುಳುಗುತ್ತಿರುವ ಮನುಷ್ಯ ಕೈಗೆ ಸಿಕ್ಕ ವಸ್ತುವನ್ನೇ ಆಧಾರಕ್ಕಾಗಿ ತಬ್ಬಿಕೊಳ್ಳುವಂತೆ, ಶಿವಪ್ಪ ತನ್ನ ನೆರೆಯ ಜೀವಿ ಕಲ್ಲನ ಹುಂಗದಲ್ಲಿ ಕೊಂಚ ನೆಮ್ಮದಿ ಕಾಣ-ಬಯಸಿದ; ಆದರೆ ಅಲ್ಲಿಯೂ ವಿಧಿ ಅವನಿಗಾಗಿ ವಿಷದ ಬಟ್ಟಲನ್ನೇ ಕಾದಿರಿಸಿತ್ತು. ನಂಬಿದ ಕಲ್ಲ ಅವನಿಗೆ ದ್ರೋಹ ಬಗೆದಿದ್ದ. ಅವನನ್ನೇ 'ಮನೆಮುರುಕ' ಎಂದು ದೂಷಿಸಿದ್ದ. ಕಳವು ಮಾಡಿದ ಮನುಷ್ಯನೇ 'ಕಳ್ಳ, ಕಳ್ಳ' ಎಂದು ಕೂಗಿಕೊಂಡಂತೆ! ತನ್ನಿಂದಲೇ ಶಿವಪ್ಪನ ಬಾಳೂನೆ ಮುರಿದು ಮೂರಾಬಟ್ಟೆಯಾಗಲಿರುವುದನ್ನು ಅರಿಯದೇ, ಕಲ್ಲನ ತಿರಸ್ಕೃತವಾದ ನಡತೆಯಿಂದ, ಹೇಯವಾದ ದೂಷಣೆಯಿಂದ— ಅವನಿಗೆ ತನ್ನ ಮೇಲೆ ಬಾನ ಸಿಡಿಲು ಎರಗಿದಂತಾಯಿತು. ಅವ ನಿಂತಲ್ಲಿಯೇ ಕುಸಿದ. ಕೆಲವೇ ದಿನಗಳಲ್ಲಿ ತನ್ನ ಗತಿಸಿದ ಬಾಳಿನ ಹೆಂಬಲಿಕೆಯಲ್ಲಿಯೇ ಕೊರಗಿ ಪರದೇಶಿಯಾಗಿ ಮಡಿದ. ಅವನಿಗೆ ಸಾವು ನಿಜವಾಗಿ ಬಾಳಿನ ಜಂಜಡದಿಂದ ಚಿರಶಾಂತಿಯನ್ನೇ ದಯ-ಪಾಲಿಸಿತ್ತು. ಕೊನೆಯ ವರೆಗೂ ಅವನ ಹೃದಯಾಂತರಾಳದ ಔದಾರ್ಯ, ನಿರಂತರಪ್ರೀತಿ ಇವುಗಳ ಅರಿವಾಗದೆ, ಜನ ಅವನನ್ನು 'ಜೀನ, ಮನೆಮುರುಕ, ಪರದೇಶಿ' ಎಂದು ತಿರಸ್ಕಾರ ದೃಷ್ಟಿ-ಯಲ್ಲಿಯೇ ನೋಡಿತು. ಆದರೆ ತನ್ನಷ್ಟಕ್ಕೇ ತಾನಿದ್ದ ಶಿವಪ್ಪ ಯಾರಿಗೂ ಕೆಡುಕು ಮಾಡಿದ ಸಂಗತಿಗಳು ಕಂಡುಬರುವುದಿಲ್ಲ. ಬಡತನದಲ್ಲಿದ್ದ ಅವ ಸ್ವಂತ ಪರಿಶ್ರಮದಿಂದ ತನ್ನದೆಂಬ ಭೂಮಿಯನ್ನು ಕೊಂಡು ನಂದನವನವನ್ನಾಗಿ ಮಾಡಿದ್ದನ್ನು ಕಂಡು, ಅವನ ಮೇಲ್ಮೆಗಾಗಿ ಮತ್ಸರದಿಂದ ಜನ ಬಾಯಿಗೆ ಬಂದದ್ದನ್ನು ಆಡಿ, ತನ್ನ ಬಾಯಿತಿಂಡಿ ತೀರಿಸಿಕೊಂಡಿತು ಅಷ್ಟೇ. ಆದರೂ ಸಾವು ಜೀವನ್ಮೃತನಂತಿದ್ದ ಅವನ ತಿರಸ್ಕೃತ ಬಾಳಿಗೆ ಮುಕ್ತಿಯನ್ನೊದಗಿಸಿತ್ತು.

ಲೇಖಕರು ನಿಜವಾಗಿ ಶಿವಪ್ಪನ ಪಾತ್ರದಲ್ಲಿ ಜೀವಕಳೆ ತುಂಬಿ-ದ್ದಾರೆ. ಕಥೆಯ ಸ್ವಾರಂಭದಿಂದ ಕೊನೆಯವರೆಗೂ ಅವನ ಕರು-ಣೆಯ ಬಾಳಿನ ಚಿತ್ರ ಹೃದಯ ಮಿಡಿಯುವಂತೆ ಮೂಡಿದೆ. ಅವನು ಬಾಳಿನ ನಂಜನ್ನು ಸವಿಯಲು ಮಾತ್ರ ಹುಟ್ಟಿದಂತಿದೆ. ಅವನ ಜೀವನದಲ್ಲಿ ಸಂತೋಷದ ಘಟನೆಗಳೇ ಅತಿ ನಿರಳವೆನ್ನಬಹುದು. ವಿಧಿಯ ವೈಚಿತ್ರ್ಯದಿಂದ ಅವನು ಹಾಲೆಂದು ನಂಬಿದ್ದು ವಿಷವಾಗಿ, ಅವ ಆದರಿಂದ ದಹದಹಿಸಿಹೋದ. ಕಳ್ಳ ಕೂಲಿಯಾಳಿನಲ್ಲಿಯೂ ಅವನು ತೋರುವ ಔದಾರ್ಯ, ಕೈಲಾಸವಾಸಿಯಾದ ತನ್ನ ಹೆಂಡತಿಗೆ 'ಹೊಲಾ, ಹೊಲಾ ಅಂತ ಬಡಕೊಂಡೆವು.... ನಾನು ನಿನ್ನ ಕಡೆ

ಬರತೇನಿ' ಎಂದು ಬಾಳನ ದುಗುಡವನ್ನು ತೋಡಿಕೊಳ್ಳುವಲ್ಲಿ ಮತ್ತು ಕಲ್ಲನಿಗೆ ತನ್ನ ಹೊಲ ದಯಪಾಲಿಸುವಲ್ಲಿ 'ನಾ ಹೊಲಾ ದೊಕ್ಕಾ ಗಳಿಸೋದ್ಕ ಬೆಳಿಸಲಿಲ್ಲಾ..... ಯಾತಕಪ್ಪಾ ಅದು?' ಮುಂ ಪನ್ನಿವೇಶಗಳಲ್ಲಿ ಶಿವಪ್ಪನ ನಿಜ ಹೃದಯದ ಚಿತ್ರ ಒಡಮೂಡಿದೆ. ಅವುಗಳಲ್ಲಿ ಅವನ ಜೀವನದರ್ಶನವನ್ನೇ ಕಾಣಬಹುದು.

ಕಲ್ಲ ಶಿವಪ್ಪನ ರೈತ. ಶಿವಪ್ಪನ ಬಂಗಾರದಂತಹ ಭೂಮಿಯನ್ನು ದೋಚುವಾಗ 'ನಿನ್ನ ಹೂವಿನ್ಯಾಗ ಇಟ್ಟಾಂಗ ಇಡತೇನಿ.... ದೇವರ್ಹಂಗ ನೀ ಕುಂತರ ಸಾಕು' ಎನ್ನುವ ಕಲ್ಲನಲ್ಲಿಯ ಶಿವಪ್ಪನ ಬಗೆಗಿನ ಆದರದ ಪವಿನುಡಿ, ಸ್ವಾರ್ಥಪರರಾದ ಭಂಡ ರಾಜಕೀಯ ಮುಖಂಡರ ಮರುಳುಮಾತಿಗೆ ಬಲಿಯಾಗಿ 'ನಿನ್ನ ಹೊಲಾನ?... .... ಹ್ಯಾಂಗೂ ಇನ್ನ ಮುಂದ ನಾವs ಮಾಲಕರು ಆಗಾವ್ರು ಅದೇವು' ಎಂದು ಬಿಡಲಾಗಿದೆ. ಅಜ್ಞಾನದ ಅಂಧಕಾರದಲ್ಲಿ ಮುಳುಗಿದ ಆತ, ತನ್ನ ದ್ರೋಹದಿಂದ ಶಿವಪ್ಪನ ದುಃಖಿತ ಹೃದಯಕ್ಕೆ ಎಂಥ ಆಘಾತವಾದೀತು— ಎಂದು ಚಿಂತಿಸಲಿಲ್ಲ. ವ್ಯಾವಹಾರಿಕದೃಷ್ಟಿಯಂ ಕಲ್ಲ ಅವನ ಹೊಲವನ್ನೇ ನುಂಗಿ ನೀರು ಕುಡಿಯಲು ಹವಣಿಸಿದ್ದ. ತಾನೇ ಅವನನ್ನು 'ನಿನ್ನ ಸುಕಾ ದುಕ್ಕಾ ತಗೊಂಡು ನಾ ಏನ ಮಾಡ್ಲಿ?.... ನನ್ನ ಪುನೀ ಮುರೀತು' ಎಂದು ಜೀಗಳೆದು, ತನ್ನ ನಾಲಗೆಯ ಹೊಲಸನ್ನು ತೋಡಿಕೊಂಡಿದ್ದಾನೆ. ಅಬ್ಬಾ! ಅವನ ಕೃತಘ್ನತೆಗೆ ಮೇರೆಯೆ ಇಲ್ಲ. ಪ್ರಾಣಿಗಳಂತಹವು ಮನುಷ್ಯ ಮಾಡಿದ ಉಪಕಾರವನ್ನು ಸ್ಮರಿಸುತ್ತವೆ; ಎಂದಮೇಲೆ, ಮನುಷ್ಯ ಪಶುಗಳಿಗಿಂತ ಕೀಳಾಗಬೇಕೆ? ಮನುಷ್ಯತ್ವದ ಪರವೆಯಾದರೂ ಬೇಡವೆ? ಕಲ್ಲನಂತಹ ರೈತರಿಗೇನು ಈಗಿನ ಕಾಲದಲ್ಲಿ ಕೊರತೆಯಿಲ್ಲ. ಅವನ ದುಷ್ಟ ಜೀತನದ ಚಿತ್ರ ನೈಜವಾಗಿ ಒಡಮೂಡಿದೆ. ಅದರಿಂದ ಇತರರಾದರೂ ತಮ್ಮನ್ನು ತಿದ್ದಿಕೊಳ್ಳಬಹುದು.

ಕಥೆಯಲ್ಲಿ ಕೆಲವೇ ಪಾತ್ರಗಳಿದ್ದರೂ ಲೇಖಕರು ತಮ್ಮದೇ ಆದ ಶೈಲಿಯಲ್ಲಿ ಓದುಗರ ಮನ ಸೆಳೆದಿದ್ದಾರೆ. ಕಥೆಯ ಮೊದಲಿನಿಂದ ಕೊನೆಯ ವರೆಗೆ, ಉದ್ದಕ್ಕೂ ಹೇರಳವಾದ ದುಃಖದ ಪನ್ನಿವೇಶಗಳೇ ತುಂಬಿಬರುವುದರಿಂದ, ಕಥೆ ಓದಿ ಮುಗಿಸಿದ ಮೇಲೆ ಓದುಗರ ಮನಸ್ಸಿನಲ್ಲಿ ಅಶಾಂತಿಯೇ ತುಂಬಿರುವುದು. ಶಿವಪ್ಪನ ಕರುಣಾಜನಕ ಜೀವನಕ್ಕಾಗಿ ಹೃದಯ ಕಳವಳ ಪಡದೆ ಇರದು. ಆದರೂ ಕಥೆಯಲ್ಲಿ ಜೀವನಾಡಿಗಳಂತೆ ಪಸರಿಸುವ 'ಕೂಗಳತೆ ದೂರದಲ್ಲಿದ್ದ ಹೊಲಕ್ಕೆ ಹೋಗಲು ಶಿವಪ್ಪನಿಗೆ ಹತ್ತಾರು ಮೈಲುಗಳ ನಡೆವಷ್ಟು ದಣಿವಾಗಿತ್ತು', 'ಹಣ್ಣೆಲೆ ಯಾವಾಗ ಉದುರುವುದೆಂಬುದೇನು?' 'ಗತ ಜೀವನ ನೆನೆಯುತ್ತಿದ್ದಂತೆ ಆತನ ಮನಸ್ಸಿನ ಕುಡಿಕೆಗೆ ತೂತು ಬಿದ್ದು ವಿಚಾರಗಳು ಸೋರಿಹೋದುವು', 'ಊರ ಜನ ಶಿವಪ್ಪನನ್ನು ಕೊಳಕು ಅತ್ತಿಯ ಹಣ್ಣಿನಂತೆ ಕಾಣುತ್ತಿದ್ದರು', 'ಶಿವಪ್ಪನಿಗೆ ಕಲ್ಲನ ಮುದಿ ಎತ್ತುಗಳಷ್ಟೂ ಬೆಲೆ ಇರಲಿಲ್ಲ', 'ತನ್ನ ಹೊಲವನ್ನು ಸಾಗುಮಾಡುವಲ್ಲಿ ಅಲ್ಲಿಂದ ಕಲ್ಲು ಹೊತ್ತು ಅವನ ತಲೆ ಬೋಳಾಗಿತ್ತು' ಎಂಬ ಅನೇಕ ವಾಕ್ಯಗಳು, ಕಥೆಗೆ ವಿಶಿಷ್ಟವಾದ ಪೆರುಗನ್ನು ತಂದುಕೊಟ್ಟಿವೆ. ಕಥೆಯ ಓಟ ಸಾವಧಾನವಾಗಿ ಸಾಗಿದರೂ, ಎಲ್ಲಿಯೂ ಬೇಸರ ಬಾರದೇ ಹೃದಯಂಗಮವಾದ ಗ್ರಾಮ್ಯಭಾಷೆಯಿಂದ ಒಡಗೂಡಿ, ಕೊನೆಯ ವರೆಗೂ ಓದುಗನಲ್ಲಿ ಆತುರತೆ ಉಳಿಯುವುದು. ಆದರೆ ಪಕ್ಕಾನ್ನ ದೂಟದಲ್ಲಿಯೂ ಕಲ್ಲುಗಳಂತೆ 'ಜೀಸಬಡಕ, ಜೀನಬುಕುಕ' ಎಂಬ ಅಪಹಜ ಪ್ರಯೋಗಗಳು, ಶಿವಪ್ಪನ ಬಗ್ಗೆ ಏಕಕಾಲಕ್ಕೇ ಕೂಲಿಯಾಳಿನಲ್ಲಿ 'ಜೀವ, ಮನೆಮುರುಕ, ಪರದೇಶಿ' ಎಂಬ ದ್ವೇಷ-ಸಹಾನುಭೂತಿಪರವಾದ ಪರಸ್ಪರ ವಿರೋಧೀ ಭಾವನೆಗಳು ಕಂಡುಬರುವುದು, ಚಿಕ್ಕವಯಸ್ಸಿನಲ್ಲಿಯೇ ಮಗ ತನ್ನ ಕಣ್ಣೆದುರು ಸತ್ತದ್ದಕ್ಕಾಗಿ ಶಿವಪ್ಪನಿಗೆ ಮಗುವನ್ನು ಹಿಡಿದು ಥಳಿಸುವಷ್ಟು ಸಿಟ್ಟು ಬರುವುದು. ಮತ್ತು 'ಕಲ್ಲನ ಹೊಲದಲ್ಲಿ ಹೆಸರು ಕುಣಿಯುತ್ತಿದ್ದರೆ ಶಿವಪ್ಪನ ಅಸಹಾಯ ಮನಸ್ಸು ಮಾತ್ರ ಕುದಿಯುತ್ತಿತ್ತು' ಎಂಬ ಸಂದಿಗ್ಧ ವಿರೋಧಾಭಾಸ ವಾಕ್ಯಗಳು—ಬಂದಿವೆ. ಕಥೆಯ ಉದ್ದಕ್ಕೂ ಶಿವಪ್ಪನನ್ನು ಜನ ತಿರಸ್ಕಾರ ದೃಷ್ಟಿಯಿಂದ ನೋಡಿದುದಕ್ಕೆ, ಅವನು ಯಾವ ಕೆಟ್ಟ ಕೃತಿಯನ್ನೆಸಗಿದುದೂ ಕಂಡುಬರುವುದಿಲ್ಲ. ಆದರೆ ಬಾಳನ ದುಃಖದ ಬೇಗುದಿಯಲ್ಲಿಯೇ ಬೆಂದು ಹೊಟ್ಟೆಬೇನೆಯಿಂದ ಜೀವನದ ಕೊನೆಯುಸಿರನ್ನೆಳೆದ ಎಂಬುದು ಮಾತ್ರ ಕಂಡುಬರುವುದು. ಬಹುಸಂಖ್ಯೆಯ ಉತ್ತಮ ಅಂಶಗಳಿಂದ ಕಥೆ ಮನೋಜ್ಞವಾಗಿದೆ.

ಕಥೆಯ ಮೂಲ ಉದ್ದೇಶ, ಹೊಲಸಾಗುವಳಿ ಕಾಯದೆಯಿಂದ 'ಊಳುವವನದೇ ಭೂಮಿ' ಎಂಬ ದೇಶವಾಣಿಗೆ ವಿಪರೀತ ಬಣ್ಣ ಕೊಟ್ಟು, ತಮ್ಮ ಸ್ವಾರ್ಥಕ್ಕಾಗಿ ಭಂಡ ರಾಜಕೀಯ ಮುಖಂಡರು ಕಲ್ಲನಂತಹ ಅಜ್ಞಾನಿ ಅಪಕ್ವ ಹೃದಯಿಗಳನ್ನು ಮರುಳುಮಾಡಿ ಶಿವಪ್ಪನಂತಹ ಉದಾರ ಪರಿಪಕ್ವ ಹೃದಯಿಗಳ ಎದೆಯ ಮೇಲೆ ಹೇಗೆ ಕಲ್ಲು ಒಡೆಯಲೂ ಹೇಸದುದಿಲ್ಲವೆಂಬುದರ ಚಿತ್ರ; ಆದರಂತೆ 'ರೈತರ ಅಜ್ಞಾನಕ್ಕೆ, ಬಡತನಕ್ಕೆ ಹೊಲಹೊಡೆಯುವೇ ಕಾರಣರು' ಎಂಬ ವಿಪಂಗತ ನುಡಿಗಳಿಂದ ಹೇಗೆ ತಂದೆ-ಮಕ್ಕಳಂತಿದ್ದ ಭೂಮಿಹೊಡೆಯ ರೈತರಲ್ಲಿ ದ್ವೇಷದ ಬೀಜವನ್ನು ಬಿತ್ತುತ್ತಿದ್ದಾರೆ—ಇದರಿಂದಾಗುವ ಘೋರ ಪರಿಣಾಮವನ್ನಾರಿಯದೆ! ಎಂಬ ಚಿತ್ರ ಹೃದಯಸ್ಪರ್ಶಿಯಾಗಿದೆ. ಆದಕ್ಕಾಗಿ ಪ್ರತಿಯೊಬ್ಬನ ಹೃದಯ ಮಿಡಿಯದೆ ಇರದು.

ಶಿವಪ್ಪ ತನ್ನ ಭೂಮಿ, ಎಳ್ಳಮಕ್ಕಳು, ಹೆಂಡತಿ, ಮಗ ಕಡೆಗೆ ಕಲ್ಲ, ಎಲ್ಲರನ್ನೂ ಸಹೃದಯ ಭಾವದಿಂದ ಪ್ರೀತಿಸಿದ. ಅವರಿಗಾಗಿ ಪ್ರೀತಿಯ ಹೊಳೆಯನ್ನೇ ಹರಿಸಿದ. ಆದರೆ ಎಲ್ಲರಿಂದಲೂ ವಂಚಿತನಾದ. ವಿಧಿಯ ಕರಾಳ ಕೈಪೆಯಿಂದ ಇವನ ಪ್ರೀತಿಗೆ ದೊರೆತ ಪುರಸ್ಕಾರ 'ಅವಮಾನ, ಅಪವಾದ, ತಿರಸ್ಕಾರ, ದುಃಖ, ಕೊನೆಗೆ ಸಾವು!' ಆದುದರಿಂದ ಪ್ರಸ್ತುತ ಕಥೆಯ ತಲೆಬರಹ ನಿಜವಾಗಿ ಯೋಗ್ಯವಾಗಿದೆ. ಪ್ರಸ್ತುತ ಲೇಖಕರ ಈ ರೀತಿಯ ಮುಂಬರುವ ಮನೋವೈಜ್ಞಾನಿಕ ಕಥೆಗಳೂ ಸಾಹಿತ್ಯದಾಗಸದಲ್ಲಿ ಹೊಳೆಯುವ ನವತಾರೆಗಳಂತೆ ಶೋಭಿಸುವುದರಲ್ಲಿ ಸಂಶಯವಿಲ್ಲ.

ನಾಡ ಬಿಡುಗಡೆಯೊಂದಿಗೆ

(ಕವಿತೆಯ ವಿಮರ್ಶೆ)

ಶ್ರೀ. ಎಂ. ಗಂಗಾಧರ ಭಟ್ಟ, ನೀರ್ಚಾಲು.

ಭಾರತವು ಅನ್ಯರಾಳ್ವಿಕೆಯಿಂದ ಬಿಡುಗಡೆಗೊಂಡುದರ ಪುರುಷಾರ್ಥವೇನಾಯಿತು? ಅದು ಕಷ್ಟಗಳನ್ನು ನೀಗಿಸಿ ಸುಖಸಾಮ್ರಾಜ್ಯದಲ್ಲಿ ಮೆರೆಯುತ್ತಿದೆಯೆ? ಅಥವಾ ಇನ್ನೂ ಕೂಳಿಲ್ಲದೆ ನರಳುತ್ತಿದೆಯೆ? ಎಂಬ ಪ್ರಶ್ನೆಗಳು ಪ್ರತಿಯೊಬ್ಬ ಭಾರತೀಯನ ಮನಃಪಟಲದಲ್ಲಿ ಗುಂಯ್‌ಗುಟ್ಟುತ್ತಿರುವ ಬಿಡಿಸಲಾರದ ಸಮಸ್ಯೆಗಳು! ನಾವು ಸ್ವತಂತ್ರರಾದರೂ ಗಾಂಧೀಜಿಯವರು ಅಂದು ಕನಸಿನಲ್ಲಿ ಕಟ್ಟಿದ "ರಾಮರಾಜ್ಯ"ವನ್ನು ನನಸನ್ನಾಗಿ ಮಾಡಲು ಸಮರ್ಥರಾಗಿದ್ದೇವೆಯೆ? ಇಲ್ಲ. ದಾಸ್ಯಶೃಂಖಲೆಯನ್ನು ನಾವು ಕಡಿದೊಗೆದರೂ ದಾರಿದ್ರ್ಯ ಮತ್ತು ಅಧಿಕಾರವ್ಯಾಮೋಹಗಳೆಂಬೆರಡು ಶೃಂಖಲೆಗಳನ್ನು ಕಿತ್ತೊಗೆಯಲು ಇನ್ನೂ ಸಮರ್ಥರಾಗಿಲ್ಲ ಆದರೆ ಕೇವಲ ಸ್ವಾತಂತ್ರ್ಯವನ್ನು ಪಡೆದ 'ವೀರ'ರೆಂದು ನಮ್ಮ ಎದೆಯನ್ನು ನಾವೇ ತಟ್ಟಿಕೊಂಡು ಕರ್ತವ್ಯಶೂನ್ಯರಾಗಿ ಮೆರೆಯುವುದಲ್ಲ! ಈ ಕವಿತೆಯನ್ನು ನೋಡಿದರೆ ನಾವು ಮಾಡಿದ ಕಾರ್ಯಕ್ಕಾಗಿ ಹೊಗಳಿಕೊಳ್ಳುವ ಮಾತುಗಳೇ ಹೆಚ್ಚಾಗಿವೆ. ಭಾರತದ ಇಂದಿನ ಪರಿಸ್ಥಿತಿಯ ವರ್ಣನೆ ಇದ್ದರೂ ಅದು ಜನಮನಕ್ಕೆ ನಾಟಿ ಅವರನ್ನು ಕೆರಳಿಸುವಂತಹ ಚಾತುರ್ಯವಿಲ್ಲ. "ಕವಿತೆಯಲ್ಲಿ ಭಾರತ ಸ್ವತಂತ್ರಗೊಂಡು ಏನು ಸಾಧಿಸಿತು?" ಎಂಬ ಪ್ರಶ್ನೆಗೆ ಉತ್ತರವಿದೆ. ಈ ಕವಿತೆಯನ್ನೋದುವಾಗ ವಾಚಕನಿಗೆ "ಭಾರತವು ಸಕಲ ವಿಧದಲ್ಲೂ ಮುಂದುವರಿದಿದೆ. ಇನ್ನೂ ಸಾಧಿಸಬೇಕಾದ್ದೇನೂ ಇಲ್ಲ" ಎಂಬ ಭಾವನೆ ತಲೆದೋರದಿರದು. "ಇದ್ದುದರಲ್ಲೇ ತೃಪ್ತಿ" ಪಡುವ ಸ್ವಭಾವದವರು ನಾವಲ್ಲ.

ಕವಿತೆಯ ಪ್ರಾರಂಭವು ಮಾತ್ರ ಮನೋಹರವಾಗಿದೆ. "ಬೇರೆ ನಾಡಿನ ಗೆಲ್ಲ ನಡೆಯನು ನೋಡಿ ಹಿಗ್ಗುತ, ತಾನು ಅಂತೆಯೆ ಬಿಚ್ಚು ಹೃದಯದಿ ನಡೆಯ ಕಲಿಯಿತು" ಎಂಬುದು ಭಾರತಕ್ಕೆ ಒಪ್ಪುವ ಮಾತು. ಅದರಲ್ಲೂ 'ಬಿಚ್ಚು ಹೃದಯದಿ ಎಂಬುದು ಭಾರತೀಯರ ಸಂಸ್ಕೃತಿಯನ್ನು ಸೂಚಿಸುತ್ತದೆ.

ಮುಂದೆ ನಾಲ್ಕು ಮತ್ತು ಐದನೆಯ ಪದ್ಯಗಳಲ್ಲಿ ಆಹಾರದ ವಿಷಯವಾಗಿ—"ಕೂಡಿ ದುಡಿಯುವ ಕೂಡಿ ಉಣ್ಣುವ ಕಾಲವು ಬಂದಿದೆ" ಎಂದ. ಸಮತಾವಾದ ಉಚಿತವಾಗಿದೆ. ಆದರಲ್ಲಿ ವಾಸ್ತವಿಕತೆ ಇದೆ. ಆದರೆ ಮುಂದೆ

"ತೂತುಚೀಲವು ಗಟ್ಟಿಯಾಗಿದೆ
ತುತ್ತು ಅನರೂ ತೃಪ್ತಿ ತಂದಿದೆ
ಚಿಂದಿ ಅಂಗಿಯು ಮಾಯವಾಗಿದೆ
ಅರ್ಧವಿದ್ದರೂ ಮಾನ ಉಳಿದಿದೆ"

ಎಂಬ ಗೆರೆಗಳನ್ನೋದುವಾಗ, ನನಗೇನೋ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಏಕೆಂದರೆ ಭಾರತೀಯನ ತೂತುಚೀಲ ಇಂದು ಎಲ್ಲಿ ಗಟ್ಟಿಯಾಗಿದೆ? ಅದು ತೂತು ಬಿದ್ದೇ ಇದೆ. ತುತ್ತು ಅನ್ನ ತಿಂದು ತೃಪ್ತಿಪಡುವವರೆಷ್ಟು ಜನ? ಚಿಂದಿ ಅಂಗಿ ಮಾಯವಾಗಿದೆ ಎನ್ನುವುದು ಶುದ್ಧ ತಪ್ಪು! ದಾರಿದ್ರ್ಯ ದೇವತೆಯು ನಮ್ಮ ಹಳ್ಳಿಗಾಡಿನಲ್ಲಿ ತಾಂಡವವಾಡುತ್ತಿರುವಾಗ, ಹೊಟ್ಟೆ ಗಟ್ಟಿಯಾಗದಿರುವಾಗ, ಚಿಂದಿ ಅಂಗಿಗೂ ಗತಿ ಇಲ್ಲದಾಗ, ಲೇಖಕರು ಈ ರೀತಿ ಬರೆದುದು ಯಾವ ಆಧಾರದಿಂದಲೋ ಏನೋ! ಇದು ಸಮಂಜಸವಾಗಿ ಕಾಣಲಾರದು.

ಮುಂದೆ ನೋಡಿದರೂ ಕೆಲ ವಾಕ್ಯಗಳು ಅತಿಶಯೋಕ್ತಿಗಳೇ ಸರಿ. ಕುಂಭಕಾರರು ಹಿಗ್ಗುವ ಕಾಲ ಇದಂತೆ; ನಿಜವೆ? ಎಲ್ಲೆಲ್ಲೂ ಲೋಹದ ಜಂಯ್ಗುಟವೇರುವಾಗ-ಲೋಹವ ಪಾತ್ರೆಗಳೇ ಬಳಕೆಗೆ ಬರುತ್ತಿರುವಾಗ, ಹಳ್ಳಿಯ ಬಡಪಾಯಿ ಕುಂಭಕಾರನು ಕೂಳಿಗೆ ಗತಿ ಇಲ್ಲದಾದಾನೇ ಹೊರತು ಹಿಗ್ಗುವ-ಕುಣಿಯುವ ಕಾಲ ಬಾರದು.

ಮುಂದಿನ ಪದ್ಯಗಳಾದರೂ ಒಂದು ಮಟ್ಟಿಗೆ ಚೆನ್ನಾಗಿವೆ.

"ಕೈಯುಮಗ್ಗದ ನೊಗ್ಗೆ ಅರಳಿತು" ಎಂದರೂ ಇಂದು ಮಿಲ್ ಬಟ್ಟೆಗಳೇ ಜನರ ಮನಸ್ಸನ್ನಾಕರ್ಷಿಸುತ್ತಿರುವುದು ಸರ್ವವಿಧಿತ. ಆದ್ದರಿಂದ ಕೈಮಗ್ಗದ ಒಟ್ಟಿಗೆ ಮನ್ನಣೆ-ಬೇಡಿಕೆ ಎಲ್ಲಿ ಬಂತು?

ಇರುವುದರಲ್ಲಿ ಸಮಂಜಸವಾಗಿ ತೋರುವ ಪದ್ಯಗಳೆಂದರೆ—ಒಂದು ಮೊದಲನೆಯದು, ಇನ್ನೊಂದು ಅಂತ್ಯದ್ದು. ಅಂತ್ಯದ ಪದ್ಯವು ಉತ್ತಮವಾಗಿದೆ ಎನ್ನಬಹುದು. ಸರಕಾರವು ಕಲೆಗಳಿಗೆ ಪ್ರೋತ್ಸಾಹವೀಯುತ್ತಿದೆ. ಅದರ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿದೆ. ಆದ್ದರಿಂದ ಭಾರತೀಯರು ದೇಶ-ವಿದೇಶಗಳಲ್ಲಿ ಕೀರ್ತಿಗಳಿಸಿದ್ದಾರೆ.

ನನ್ನ ಮಟ್ಟಿಗೆ ಈ ಕವಿತೆಯಲ್ಲಿ ಅತಿಶಯೋಕ್ತಿಗೆ ಅಸದೆ ಇತ್ತುದು ಹೆಚ್ಚಾಗಿದೆ. ಒಂದೆರಡೆಡೆ ಸೇರಿಸಿದ ಉತ್ತಮ ಮಾತುಗಳನ್ನು ಹೊಗಳಲೇಬೇಕು. ಇಂದು ನಾಡಿನ ಕುರಿತು ಅದೂ ಭಾರತದ ಏಳಿಗೆಯ ಕುರಿತು ಬರೆಯುವ ಕವಿತೆಗಳು ಈ ರೀತಿ ಇರಬೇಕಾದುದಲ್ಲ. ಭಾರತದ ಪ್ರಜೆಯು ಈ ರೀತಿ ತನ್ನ ಪೌರುಷವನ್ನು ಹೊಗಳಿಕೊಳ್ಳುವ ಕಾಲವಿನ್ನೂ ಬಂದಿಲ್ಲ. ನಾನು ಮೊದಲೇ ಹೇಳಿದಂತೆ, ಈ ಕವಿತೆಯಿಂದ ಓದುಗ ಸ್ಫೂರ್ತಿ ಪಡೆಯುವುದಿಲ್ಲ. ಮನಕೆರಳಿಸುವ ಶಕ್ತಿ ಇದರಲ್ಲಿಲ್ಲ. ಕವಿತೆಯ ಉದ್ದೇಶ ಅಂದಂದಿನ ಆಗುಹೋಗುಗಳಲ್ಲಿರುವ ಲೋಪದೋಷಗಳನ್ನೆತ್ತಿ, ಸತ್‌ವೃತ್ತಿಯೊಡನೆ ಅದನ್ನು ಬೆರೆಸಿ ಜನರಿಗೀಯುವುದು. ಆಗ ಜನ-ಮನ ಆಕರ್ಷಿತವಾಗುತ್ತದೆ. ಆಗ ಕವಿತೆಯು ಆದರ್ಶವನ್ನು ಸಾಧಿಸಿದಂತಾಗುವುದು. ಕೇವಲ ಒಳ್ಳೆಯ ಕೆಲಸಗಳನ್ನೇ ಹೊಗಳಿದೆ, ಜನರಿಗೆ ಇದ್ದುದರಲ್ಲೇ ತೃಪ್ತಿಪಡುವ ಭಾವನೆ ತಲೆದೋರುವುದು. ಹಾಗಾಗಗೊಡಬಾರದು. ಇದು ಲೇಖಕನ ಕರ್ತವ್ಯ.

ಕವಿತೆ ಓದಲು ಚೆನ್ನಾಗಿದೆ; ಪದಜೋಡಣೆಯೂ ಮನೋಹರವಾಗಿದೆ. ಕವಿತೆಯ ಶಿರೋನಾಮೆಯೂ ಸರಿಯಾಗಿಯೇ ಇದೆ. ಕಡೆಯದಾಗಿ ಹೇಳುವುದಿದ್ದರೆ ಅತಿಶಯೋಕ್ತಿಯೊಂದನ್ನು ಬಿಟ್ಟರೆ ಕವಿತೆ ಚೆನ್ನಾಗಿದೆ. ಆದರೂ ಲೇಖಕರು ಬೇಸರಪಡಬೇಕಾದ ಸಂಗತಿಯಿಲ್ಲ ಲೇಖಕರು ಉತ್ತಮ ಕವಿಗಳು ಹೌದು. ಪದಜೋಡಣೆ, ಕವಿತೆಯ ಓಟ ಇದಕ್ಕೆ ಸಾಕ್ಷಿ ಲೇಖಕರು ಇದಕಿಂತಲೂ ಉತ್ತಮವಾದ—ಜನಮನವನ್ನು ಸೂರೆಗೊಂಡು ಅವರನ್ನು ಸತ್ಪಥಕ್ಕೊಯ್ಯುವ— ಸ್ಫೂರ್ತಿದಾಯಕ ಕವಿತೆಗಳನ್ನು ಬರೆದು ಕನ್ನಡಿಗರಿಗೀಯಲಿ ಎಂದು ಹಾರೈಸುವೆ. ❋

ಸಾದರ ಸ್ವೀಕಾರ

೯೫ ಈ ಬುವಿ, ಈ ಬಾಳು (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಹಾ. ವೆಂ. ರಾಮಸ್ವಾಮಿಯವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೪ನೆಯ ವರ್ಷದ ೩ನೆಯ ಕಿರಣ. ಕ್ರೌ. ಅ. ೧೫೮ ಪುಟಗಳು. ಬೆಲೆ ೧.೫೦

೯೬ ಕರಿಚರ್ಮ (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಸೇವ ಸಮಿರಾಜಮುಲ್ಲ ಎಂ. ಎ., ಬಿ. ಎಲ್. ಅವರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ, ೧೪ನೆಯ ವರ್ಷದ ೪ನೆಯ ಕಿರಣ. ಕ್ರೌ. ಅ. ೨೯೬ ಪುಟಗಳು. ಬೆಲೆ ೨.೫೦.

೯೭ ವಾಣಿಜ್ಯ ಮತ್ತು ತೆರಿಗೆ (ತ್ರೈಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ಎಚ್. ಆರ್. ನಿಂಕಟರಾಮಯ್ಯ ಜಿ. ಡಿ. ಎ-ಅದಾಯಕರ ಮತ್ತು ಮಾರಾಟಕರ ವಕೀಲರು, ಕೊಪ್ಪಳ. ಪ್ರಕಾಶಕರು ಶ್ರೀಗಣಪತಿ ವಾಣಿಜ್ಯ ವಿದ್ಯಾಲಯ, ಕೊಪ್ಪಳ (ರಾಯಚೂರು). ಡೆ. ೧ಥ ೨೬ ಪುಟಗಳು ವಾರ್ಷಿಕ ಚಂದಾ ಹರೂ. ಬಿಡಿ ಸಂಚಿಕೆಗೆ ೧.೫೦.

ಭಾರತ ಸರಕಾರದ ರಾಷ್ಟ್ರೀಯ ಆರ್ಥಿಕ ಸ್ವಾತಂತ್ರ್ಯದ ಹೊಸ ಹೊಸ ಯೋಜನೆಗಳ ಮೂಲಕ, ವ್ಯಾಪಾರಿಗಳು, ಗಿರಾಕಿಗಳು, ಸಿರಿವಂತರು, ಸಾಮಾನ್ಯರು, ಹೊಲದೊಡೆಯರು, ಒಕ್ಕಲಿಗರು— ಎಲ್ಲರೂ ಒಂದಿಲ್ಲೊಂದು ಬಗೆಯ ಕರ-ತೆರಿಗೆಗಳ ಭಾರವನ್ನು ಹೊರಬೇಕಾಗಿದೆ. ಆದುದರಿಂದ ಎಲ್ಲ ಜನರಿಗೂ ಕರ-ತೆರಿಗೆಗಳ ಕಾಯಿದೆ-ಕಾನೂನುಗಳ ತಿಳಿವಳಿಕೆಯಿರಬೇಕಾದುದು ತುಂಬ ಅಗತ್ಯ. ಅಂತಹ ತಿಳಿವಳಿಕೆಯನ್ನು ಹರಡುವ ಉದ್ದೇಶದಿಂದ, ಅಭ್ಯಾಸಪೂರ್ಣವಾದ ಲೇಖನಗಳನ್ನು ಒಡಗೊಂಡು ಬೆಳಕಿಗೆ ಬಂದಿರುವ ಈ ಸಿಯತಕಾಲಿಕವು, ಬಹುಕಾಲ ಬದುಕಿ ಜನಹಿತಕ್ಕೆಂದು ದುಡಿಯುತ್ತಿರಲಿ !

೯೮ ಜಗತ್ತನ್ನೇ ಮಾರ್ಪಡಿಸಿದ ಹನ್ನೆರಡು ಹೊಸ ನಿರ್ಮಾಣಗಳು (ಸಚಿತ್ರ ಪ್ರಚಾರ ಪುಸ್ತಕ) ಅಮೇರಿಕದ ನಾಗರಿಕತೆಯನ್ನು ತಿಳುಹಲು ಹೊರಟ ೨ನೆಯ ಪ್ರಕಟಣೆ. ರೊ. ೧ಥ ೪೬ ಪುಟಗಳು. ಭಾರತದೇಶದಲ್ಲಿರು ಅಮೇರಿಕದ ವಿದೇಶಕಾರ್ಯಾಲಯದಿಂದ ಪ್ರಕಟವಾಗಿದೆ (ನ್ಯೂ ದಿಲ್ಲಿ).

೯೯ ನಮ್ಮ ಹಕ್ಕಿಗಳು (ಸಚಿತ್ರ— ಪರಿಚಯಾತ್ಮಕ ಪುಸ್ತಕ). ಮೂಲ ಹಿಂದೀ ಲೇಖಕರು ಶ್ರೀ. ರಾಜೇಶ್ವರ ಪ್ರಸಾದ ನಾರಾಯಣ ಸಿಂಹ ಅವರ ಪುಸ್ತಕದ ಕನ್ನಡ ಭಾಷಾಂತರ. ಪ್ರಕಾಶಕರು : ಭಾರತ ಸರಕಾರದ ಸಮಾಚಾರ ಮತ್ತು ಪ್ರಕಾಶನ ಸಚಿವಾಲಯ, ನ್ಯೂ ದಿಲ್ಲಿ. ಫೂ. ೧ಥ ೪೪ ಪುಟಗಳು ಚಿತ್ರಪುಟಗಳು ಬೇರೆ. ಬೆಲೆ ೨.೫೦.

ಭಾರತದಲ್ಲಿಯ ಹಕ್ಕಿಗಳನ್ನು ಪರಿಚಯ ಮಾಡಿಕೊಡಲು ಹೊರಟ ಗ್ರಂಥಮಾಲೆಯ ೧ನೆಯ ಕುಸುಮವಿದು. ಇದರಲ್ಲಿ ಬೇರೆ ಬೇರೆ ೨೧ ಬಗೆಯ ಹಕ್ಕಿಗಳನ್ನು ಕುರಿತ ನಿವರವಾದ ಪರಿಚಯ ಲೇಖನಗಳು, ಸುಂದರವಾದ ಚಿತ್ರಗಳೊಂದಿಗೆ ಪ್ರಕಟವಾಗಿವೆ. ಬೇರೆ ಬೇರೆ ಹಕ್ಕಿಗಳ ಜೀವನವೂ ಸ್ವಭಾವ, ಸಂತಾನನಿರ್ಮಿತಿಯ ವಿಷಯಗಳೂ ವಾಚಕರನ್ನು ಕುತೂಹಲಗೊಳಿಸುವಂತಿವೆ. ಮನೆಯಲ್ಲಿಯ ಮಕ್ಕಳಿಗೆ ಲೋಕಪರಿಚಯ ಮಾಡಿಕೊಡಬೇಕೆಂದು ಬಯಸುವ ಪಾಲಕರೆಲ್ಲರೂ ಈ ಪುಸ್ತಕವನ್ನು ತರಿಸಿ ಮನೆಯಲ್ಲಿ ಇರಿಸಬೇಕು. ನಮ್ಮ ನಾಡಿನ ವಾಚನಾಲಯ, ಪುಸ್ತಕ ಭಾಂಡಾರಗಳಲ್ಲಿ ಈ ಪುಸ್ತಕವು ಇರಲೇಬೇಕಾದುದು. ಬಳಸಿದ ಬೆಲೆಬಾಳುವ ಕಾಗದ, ಸುಂದರ ಮುದ್ರಣ, ಚಿತ್ರಮಯತೆ ಇವುಗಳನ್ನು ನೋಡಿದರೆ, ಇದಕ್ಕೆ ಇರಿಸಿದ ಬೆಲೆ ಹೆಚ್ಚಿಂದೇನೂ ಎನಿಸಲಾರದು.

೧೦೦ ರಾಷ್ಟ್ರಮತ (ವಾರಪತ್ರಿಕೆಯ ವಾರ್ಷಿಕ ವಿಶೇಷಾಂಕ) ಸಂಪಾದಕರು ಶ್ರೀಮಾನ್ ಕಡೆಂಗೊಂಡ್ಲು ಶಂಕರಭಟ್ಟರು, ರಾಷ್ಟ್ರಮತ ಆಫೀಸ್, ಮಂಗಳೂರು—೨. ಡೆ. ೫೧೪ ಪುಟಗಳು. ಬೆಲೆ ೧.೦೦.

ಈ ಸಂಚಿಕೆಯ ಸಂಪಾದನಾ ಕಾರ್ಯದಲ್ಲಿ ವಿದ್ವಾನ್ ಸೇಡಿಯಾವು ಕೃಷ್ಣಭಟ್ಟರೂ ಭಾಗಿಗಳಾಗಿದ್ದಾರೆ. ಸಾಹಿತ್ಯ ಸಂಸ್ಕೃತಿಗಳ ವಿಷಯಕವಾದ ಅಭ್ಯಾಸಪೂರ್ಣ ಲೇಖನಗಳು ಇದರಲ್ಲಿ ಪ್ರಕಟವಾಗಿದೆ. ಶ್ರೀಮಾನ್ ಕುಕ್ಕಿಲ ಕೃಷ್ಣಭಟ್ಟ ಅವರ 'ಎಕ್ಕಲಗಾಣ' ಎಂಬ ಸಂಸ್ಕೃತಿ ಸಂಶೋಧನಾತ್ಮಕ ಲೇಖನವು ತುಂಬ ಚೆನ್ನಾಗಿದ್ದು ಲೇಖಕರ ಬಹುಶ್ರುತಪ್ರತಿಭೆಗೆ ಸಾಕ್ಷಿಯೆನಿಸುವಂತಿದೆ. ಇಂತಹದೊಂದು ಒಳ್ಳೆಯ ಸಂಪುಟವನ್ನು ವಾಚಕರಿಗೆ ಒದಗಿಸಿಕೊಟ್ಟ ಸಂಪಾದಕರು ಅಭಿನಂದನಾರ್ಹರು.

೧೦೧ ನೈವೇದ್ಯ (ಶ್ರೀ. ನಿ. ಪ್ರ. ಸ್ವ. ಮೃತ್ಯುಂಜಯ ಸ್ವಾಮಿಗಳವರಿಗೆ ಸಲ್ಲಿಸಿದ ಭಕ್ತಿ ಸಂಪುಟ). ಸಂಪಾದಕರು ಶ್ರೀಮಾನ್ ಜೆನ್ನವೀರ ಕಣವಿ ಎಂ ಎ ಮತ್ತು ಡಾ. ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ. ಅವರು. ಪ್ರಕಾಶಕರು ಶ್ರೀಮಾನ್ ಎಸ್. ಜಿ. ಸಾಲಿ ಬಿ. ಎ , ಅಧ್ಯಕ್ಷ ಕಾರ್ಯಕಾರಿ ಸಮಿತಿ, ಶ್ರೀಜಗದ್ಗುರು ಮುರಘಾ ರಾಜೇಂದ್ರ ಪ್ರಸಾದನಿಲಯದ ಹಿಂದಿನ ವಿದ್ಯಾರ್ಥಿಗಳ ಸಂಘ, ಶ್ರೀ ಮುರಘಾ ಮಂದಿರ, ಮೃತ್ಯುಂಜಯ ನಗರ, ಧಾರವಾಡ. ಡೆ. ಅ. ೩೦೦ ಪುಟಗಳು. ಬೆಲೆ ೪.೦೦.

೧೦೨ ಸಿಲ್ವರ್ ಜ್ಯುಬಿಲಿ ಬ್ರೋಚರ್, ಲಿಂಗರಾಜ ಕಾಲೇಜು, ಬೆಳಗಾಂವಿ. (ಪ್ರಸಿದ್ಧ ಶಿಕ್ಷಣ ಸಂಸ್ಥೆಯ ಚಿತ್ರಮಯ ಪರಿಚಯ ಪುಸ್ತಕ— ಇಂಗ್ಲಿಷಿನಲ್ಲಿ). ಪ್ರಕಾರಕರು ಶ್ರೀಮಾನ್ ಜಿ. ರುದ್ರಪ್ಪನವರು— ಲಿಂಗರಾಜ ಕಾಲೇಜಿನ ರಜತಮಹೋತ್ಸವ ಸಮಿತಿಯ ಪರವಾಗಿ. ಕ್ರೌ. ೧ಥ ೧೬ ಪುಟಗಳು.

೨೫ ವರ್ಷಗಳಲ್ಲಿ ಈ ಸಂಸ್ಥೆ ಶ್ರಮಿಸಿದ ಪ್ರಗತಿಪಥವು, ನಾಡಿಗರಲ್ಲಿ ಹೆಮ್ಮೆಯನ್ನು ಹುಟ್ಟಿಸುವಂತಿದೆ.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ–ಬಂಧನಗಳ ಬೆಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ-ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರಾ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರಾ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರಾ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿಗೀತ ಸಂಕಲನ)
ಕ್ರಾ. ಅ. ೬೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

END

END

END

END

END